ಆದಿಲಶಾಹಿ ಸಾಹಿತ್ಯ ಸಂಪುಟ : ೧

ಮುಹಮ್ಮದ ಕಾಸೀಮ ಫರಿಶ್ತಾ ವಿರಚಿತ

ತಾರೀಖ-ಎ-ಫರಿಶ್ತಾ : ಭಾಗ-೧

ವಚನಪಿತಾಮಹ ಡಾ|| ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧

ಮುಹಮ್ಮದ ಕಾಸೀಮ ಫರಿಶ್ತಾ
ವಿರಚಿತ

ತಾರೀಖ-ಎ-ಫರಿಶ್ತಾ

(ಭಾಗ-೧)

ಆದಿಲಶಾಹಿ ಸಾಹಿತ್ಯ ಸಂಪುಟ : ೧

ಮುಹಮ್ಮದ ಕಾಸೀಮ ಫರಿಶ್ತಾ

ವಿರಚಿತ

ತಾರೀಖ-ಎ-ಫರಿಶ್ತಾ

(ಭಾಗ-೧)

ಅನುವಾದಕರು

ಬಿ. ಜಯಾಚಾರ್ಯ

ಶ್ರೀಮತಿ ಬಾನು ಮುಷ್ತಾಕ್

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

Taarikh-e-Farishta (Part-1) : Persian work by Md. Kasim Farishta
Kannada translation by B. Jayacharya, Baanu Mushtaq.

Published by : **Dr. P.G.Halakatti Research Centre,**
B.L.D.E. Association, Bijapur, Karnataka

Edition : **2014**

Pages : **xxiv + 530 = 554**

Copies : **1000**

Price : **Rs. 300.00**

Typeset : **Dr. P. G. Halakatti Research Centre,** Bijapur

Printed : **Print Point,** Bengaluru. Mob : 97390 67359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ತಾರೀಖ–ಎ–ಫರಿಶ್ತಾ (ಭಾಗ–೧) : ಮುಹಮ್ಮದ ಕಾಸೀಮ ಫರಿಶ್ತಾ ವಿರಚಿತ ಪರ್ಶಿಯನ್ ಕೃತಿ.
ಅನುವಾದಕರು : ಬಿ. ಜಯಾಚಾರ್ಯ, ಬಾನು ಮುಷ್ತಾಕ್

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

ಹಕ್ಕುಗಳು : ಪ್ರಕಾಶಕರು

ಆವೃತ್ತಿ : ಪ್ರಥಮ ೨೦೧೪

ಪುಟಗಳು : xxiv + ೫೩೦ = ೫೫೪

ಪ್ರತಿಗಳು : ೧೦೦೦

ಬೆಲೆ : ರೂ. ೩೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿಜಾಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು. ಮೊ : ೯೭೩೯೦ ೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

*ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ಬಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ಬಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ೮ ಜನ ಬಾದಶಹರು ಆಳಿದರು. ಈ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಭಾರತೀಯ ಮುಸಲ್ಮಾನರ ಚರಿತ್ರೆಯಾಗಿರುವ 'ತಾರೀಖೆ ಫರಿಶ್ತಾ' [ಪರ್ಶಿಯನ್] ಕೃತಿಯ ಕರ್ತೃ ಮುಹಮ್ಮದ್ ಕಾಸಿಮ ಫರಿಶ್ತಾ, ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ.ಶ.೧೫೮೦–೧೬೨೭)ನ ಅಸ್ಥಾನದಲ್ಲಿದ್ದುಕೊಂಡು ಈ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖನಿ–ಉರ್ದು ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಆದಿಲಶಾಹಿಗಳ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖನಿ–ಉರ್ದು

ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸುವ ಪ್ರಯತ್ನವಾಗಿದೆ 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೆಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನೂ ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ್ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ.ಎಚ್.ಜಿ.ದಡ್ಡಿ– ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಇದಕ್ಕೆ ಅನುಮತಿ ನೀಡಿತು.

ದಿನಾಂಕ ೧೨–೩–೨೦೧೩ರಂದು ನಡೆದ ಸಮಿತಿಯ ಪ್ರಥಮ ಸಭೆಯಲ್ಲಿ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಈ ಯೋಜನೆಯ ನಿರ್ದೇಶಕರಾಗಿರಬೇಕೆಂದು, ಸಂಶೋಧನಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಮತ್ತು ಕಾಯದರ್ಶಿ ಡಾ. ಎಂ.ಎಸ್.ಮದಭಾವಿ ಅವರು ಸಮಿತಿಯ ಪದನಿಮಿತ್ತ ಸದಸ್ಯರಾಗಬೇಕೆಂದು ನಿರ್ಣಯಿಸಲಾಯಿತು.

ದಿನಾಂಕ ೧೫–೬–೨೦೧೩ರಂದು ನಡೆದ ಸಮಿತಿಯ ಎರಡನೆಯ ಸಭೆಯಲ್ಲಿ ಪರ್ಶಿಯನ್, ಅರೇಬಿಕ್, ದಖನಿ–ಉರ್ದು ಭಾಷೆಗಳಲ್ಲಿ ವಿದ್ವಾಂಸರಾದ ಮೌಲಾನಾ ಮಹಬೂಬುರ್ ರಹಮಾನ ಮದನಿ ಅವರನ್ನು ವಿಶೇಷ ಆಮಂತ್ರಿತ ಸದಸ್ಯರೆಂದು ತೀರ್ಮಾನಿಸಲಾಯಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಹೀಗೆ ಗುರುತಿಸಲಾಯಿತು.

೧. **ಮುಹಮ್ಮದ ಕಾಸಿಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೧೯], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ದಖನಿ].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ಬಿಜಾಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶಿಮ ಘುಜೂನಿ**: ಘುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿರತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತೊಹಫತುಲ್ ಮುಜಾಹಿದೀನ [ಅರೇಬಿಕ್]. ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ:** ಅಹವಾಲೆ ಸಲಾತೀನ ಬಿಜಾಪುರ[ಪರ್ಶಿಯನ್]. ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ** : ತಾರೀಖೆ ಹಫ್ತಕುರ್ಸೀ [ಪರ್ಶಿಯನ್]. ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ** : ಕಿತಾಬೆ ನವರಸ [ದಖನಿ]. ಪ್ರಕಟವಾಗಿದೆ.

೧೫. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ರೌಜತುಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್].
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

೧೬. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ಬಸಾತೀನೆ ಸಲಾತೀನ [ಪರ್ಶಿಯನ್]. ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿಖಾನ** : ಗುಲದಸ್ತಾ ಎ ಬಿಜಾಪುರ [ದಖನಿ]. ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ** : ಶಾಹಿಪತ್ ಇ ಹುದಾ [ಪರ್ಶಿಯನ್]. ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು** : ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ಬಿಜಾಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖನಿ]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿರತುಲ್ ಮುಲೂಕ [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಫ್ತಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ಬಿಜಾಪುರ [ದಖನಿ]

೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ಬಿಜಾಪುರ.

೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.

೪. ಡಾ. ಅಬ್ದುಲ್ ಹಮೀದ, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ಬಿಜಾಪುರ

೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.

೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.

೮. ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ಬಿಜಾಪುರ

೧೨. ಡಾ. ಆರ್.ಕೆ. ಕುಲಕರ್ಣಿ, ಬಿಜಾಪುರ

ಇವರ ಸಹಕಾರದಿಂದ ಮೊದಲ ಹಂತವಾಗಿ ೬ ಅನುವಾದ ಸಂಪುಟಗಳು ಈಗ ಪ್ರಕಟವಾಗುತ್ತಿವೆ.

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ಬಿಜಾಪುರ [ದಖನಿ], ತಾರೀಖೆ ಹಪ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

ಹೀಗೆ ೬ ಸಂಪುಟಗಳಲ್ಲಿ ಸುಮಾರು ನಾಲ್ಕು ಸಾವಿರ ಪುಟಗಳ ಸಾಹಿತ್ಯ ಈಗ ಪ್ರಕಟವಾಗುತ್ತಿದ್ದು, ಉಳಿದವುಗಳ ಅನುವಾದಕಾರ್ಯ ಹಾಗೂ ಹಸ್ತಪ್ರತಿಗಳ ಶೋಧಕಾರ್ಯ ಮುನ್ನಡೆದಿದೆ. ಈ ೬ ಸಂಪುಟಗಳನ್ನು ಅನುವಾದಿಸಿದ ಎಲ್ಲ ಅನುವಾದಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಬಿಜಾಪುರ ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ರಿತ್ವಿಕ್ ರಂಜನ್ ಪಾಂಡೆ ಅವರನ್ನು, ಈ ಯೋಜನೆಯ ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ, ಬಿ.ಎಲ್.ಡಿ.ಇ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಎಂ.ಎಸ್.ಮದಭಾವಿ ಹಾಗೂ ಪ್ರಸ್ತುತ ಸಂಪುಟವನ್ನು ಪರಿಶೀಲಿಸಿದ ಶ್ರೀ ರಂಜಾನ್ ದರ್ಗಾ ಅವರ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ. ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

'ತಾರೀಖ-ಎ-ಫರಿಶ್ತಾ', 'ಗುಲ್ಶನ್-ಎ-ಇಬ್ರಾಹಿಮಿ', 'ನವರಸನಾಮಾ' ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುವ ಈ ಇತಿಹಾಸ ಗ್ರಂಥವನ್ನು ಬರೆದವನು, ಮುಲ್ಲಾ ಮುಹಮ್ಮದ ಕಾಸೀಮ ಹಿಂದುಶಾಹ ಫರಿಶ್ತಾ. ಫರಿಶ್ತಾ ಎಂಬುದು ಅವನ ಕಾವ್ಯನಾಮ, ಹಿಂದುಶಾಹ ಎಂದರೇನು? ಎಂಬುದು ಸ್ಪಷ್ಟವಾಗಿ ಗುರುತಿಸಲಾಗಿಲ್ಲ. ಅವನು ಕಾಸ್ಪಿಯನ್ ಸಮುದ್ರ ತೀರದ ಅಸ್ತರಾಬಾದನಲ್ಲಿ ಕ್ರಿ. ಶ. ಸು. ೧೫೭೦ರಲ್ಲಿ ಹುಟ್ಟಿದನೆಂದು ಹೇಳಲಾಗುತ್ತದೆ. ತಂದೆಯ ಹೆಸರು ಗುಲಾಮ್ ಅಲಿ ಹಿಂದುಶಾಹ. ಅವನ ಹಿನ್ನೆಲೆಯ ಬಗ್ಗೆ ಚೆನ್ನಾಗಿ ಗೊತ್ತಿಲ್ಲ. ತನ್ನ ತಂದೆ ಪ್ರಸಿದ್ಧ ಕವಿಯಾಗಿದ್ದನೆಂದು ಫರಿಶ್ತಾನೇ ಒಂದೆಡೆ ಹೇಳಿದ್ದಾನೆ. ಅವನು ತನ್ನ ದೇಶವನ್ನು ಬಿಟ್ಟು ಮಗನೊಂದಿಗೆ ಭಾರತಕ್ಕೆ ಬಂದು, ಅಹಮದನಗರದ ಮುರ್ತುಜಾ ನಿಜಾಮಶಾಹನ ಆಸ್ಥಾನದಲ್ಲಿದ್ದನು. ರಾಜಕುಮಾರ ಮೀರಾನ್ ಹುಸೇನನಿಗೆ ಪಾಠ ಹೇಳುತ್ತಿದ್ದನು. ಚಿಕ್ಕ ಫರಿಶ್ತಾ ಅಲ್ಲಿಯ ರಾಜಪುತ್ರರೊಂದಿಗೆ ಬೆಳೆದನು.

ಫರಿಶ್ತಾ ಚಿಕ್ಕವನಿದ್ದಾಗಲೇ ತಂದೆಯನ್ನು ಕಳೆದುಕೊಂಡನು. ಏಕಾಂಗಿಯಾದ ಅವನು ಎಳವೆಯಲ್ಲಿಯೇ ನಿಜಾಮನ ಆಸ್ಥಾನದಲ್ಲಿ ಅಧಿಕಾರ ಪಡೆದುಕೊಳ್ಳುವಲ್ಲಿ ಸಮರ್ಥನಾದನು. ಆತನು ಕೆಲವು ದಿನಗಳ ವರೆಗೆ ಮುರ್ತುಜಾ ನಿಜಾಮಶಾಹನ ರಹಸ್ಯ ಸಲಹೆಗಾರನಾದನಲ್ಲದೆ, ಗುಪ್ತಚಾರ ದಳದ ಹಾಗೂ ಅಂಗರಕ್ಷಕರ ಮುಖ್ಯಸ್ಥನೂ ಆಗಿದ್ದನು. ರಾಜಕುಮಾರ ಮೀರಾನ್ ಹುಸೇನನ ಕೊಲೆಯಾದ ನಂತರ ಫರಿಶ್ತಾ ಅಹಮದನಗರವನ್ನು ಬಿಟ್ಟು ಕ್ರಿ.ಶ.ಸು. ೧೫೮೯ರಲ್ಲಿ ಬಿಜಾಪುರಕ್ಕೆ ಬಂದನು. ಬಿಜಾಪುರದಲ್ಲಿ ಅದು ಎರಡನೆಯ ಇಬ್ರಾಹಿಮ ಆದಿಲಶಹನ ಕಾಲವಾಗಿತ್ತು. ಇಬ್ರಾಹಿಮನು ಚಿಕ್ಕವನಾಗಿದ್ದುದರಿಂದ ದಿಲಾವರಖಾನನು ಆಡಳಿತ ನಡೆಸುತ್ತಿದ್ದನು.

ಬಾದಶಹನ ಸಮವಯಸ್ಕನಾಗಿದ್ದ ಫರಿಶ್ತಾನನ್ನು ಆಸ್ಥಾನದಲಿಟ್ಟುಕೊಂಡು ದಿಲಾವರಖಾನನು ಇಬ್ರಾಹಿಮನಿಗೆ ಪರಿಚಯಿಸಿದನು. ಶಾಹದುರ್ಗ ಯುದ್ಧದಲ್ಲಿ ಬಿಜಾಪುರದ ಪರವಾಗಿ ಫರಿಶ್ತಾ ಹೋರಾಡಿದನು. ಅನಂತರದ ದಿನಗಳಲ್ಲಿ ಅಲ್ಲಿಯೇ ದಿಲಾವರಖಾನನನ್ನು ಆಡಳಿತದಿಂದ ಕಿತ್ತೊಗೆದಾಗ ಫರಿಶ್ತಾ ಸೇನಾಪತಿ ಜಮಾಲಖಾನನ ಕೈಯಲ್ಲಿ ಸೆರೆಸಿಕ್ಕು, ಅಹಮದನಗರದ ಜೈಲಿನಲ್ಲಿರಬೇಕಾಯಿತು. ತುಸು ದಿನಗಳಲ್ಲಿ ಅಲ್ಲಿಂದ ಹೇಗೋ ಪಾರಾಗಿ ಶಿರಾಜದ ಇನಾಯತಖಾನನ ಮುಖಾಂತರ ಕ್ರಿ.ಶ. ಸು. ೧೫೯೩ರಲ್ಲಿ ಮತ್ತೆ ಇಬ್ರಾಹಿಮನ ಆಸ್ಥಾನಕ್ಕೆ ಬಂದನು.

ಫರಿಶ್ತಾ ಬರೆದ ಮೊದಲ ಪುಸ್ತಕ 'ಇಖ್ತಿಯಾರಾತೆ ಕಾಸಿಮಿ' [ಕಾಸೀಮನ ಸಂಗ್ರಹ] ಎಂಬ ವೈದ್ಯಕೀಯ ಗ್ರಂಥವೆಂದು ಹೇಳಲಾಗುತ್ತದೆ. ಆದುದರಿಂದ ಅವನು ಮೂಲತಃ ವೈದ್ಯಕೀಯ ವಿಷಯದಲ್ಲಿ ಪರಿಣತನಾದ ಒಬ್ಬ ವೈದ್ಯನಾಗಿರಬೇಕು. ಅದರೊಂದಿಗೆ ಅವನು ರಾಜ್ಯದ ರಾಜಕೀಯದಲ್ಲೂ ತೊಡಗಿಸಿಕೊಂಡಿದ್ದನು. ಜೊತೆಗೆ ದೇಶದಲ್ಲಿಯ ರಾಜಕೀಯದ ಆಗುಹೋಗುಗಳಲ್ಲೂ ಆಸಕ್ತಿ ವಹಿಸುತ್ತಿದ್ದನು.

ಎರಡನೆಯ ಇಬ್ರಾಹಿಮ ಆದಿಲಶಹನು ಸ್ವತಃ ವಿದ್ವಾಂಸನಿದ್ದನು. ಮತ್ತು ವಿದ್ವಾಂಸರನ್ನು ಗುರುತಿಸುತ್ತಿದ್ದನು. ಫರಿಶ್ತಾನ ಯೋಗ್ಯತೆಯ ಬಗ್ಗೆ ಗೊತ್ತಾದಾಗ ಅವನನ್ನು ಕರೆದು, 'ರೈದತ್-ಅಲ್-ಸಫಾ' ಎಂಬ ಇತಿಹಾಸ ಗ್ರಂಥವನ್ನು ಕೊಟ್ಟು, "ಭಾರತದಲ್ಲಿಯ ಮುಸ್ಲಿಮರ ಇತಿಹಾಸವನ್ನು ಈ ವರೆಗೆ ಯಾರೂ ಚೆನ್ನಾಗಿ ಬರೆದಿಲ್ಲವೆಂದು" ಹೇಳಿದನು. ನಿಜಾಮುದ್ದೀನನು ಬರೆದಿರುವ ಇದು ತುಂಬ ಸಂಕ್ಷಿಪ್ತವಾಗಿದೆ. ಇದರಲ್ಲಿ ದಕ್ಷಿಣ ಭಾರತದ ಮುಸ್ಲಿಮರ ಇತಿಹಾಸವು ತಪ್ಪುಗಳಿಂದ ಕೂಡಿದೆ -ಎಂದು ಹೇಳಿದನು. ಆದ್ದರಿಂದ ಭಾರತದಲ್ಲಿ ಮುಸ್ಲಿಮರು ಬಂದು ರಾಜ್ಯ ಸ್ಥಾಪನೆಮಾಡಿದಂದಿನಿಂದ ಇಂದಿನ ವರೆಗಿನ ಅವರ ಚರಿತ್ರೆಯನ್ನು ಬರೆಯಲು ಆದೇಶಿಸಿದನು. ಭಾರತದಲ್ಲಿ ಮೊಟ್ಟ ಮೊದಲು ಕಾಲಿಟ್ಟ ಮುಸ್ಲಿಮನಿಂದ ಹಿಡಿದು ಇಂದಿನ ವರೆಗಿನ [ತನ್ನ ಕಾಲದ ವರೆಗಿನ] ಚರಿತ್ರೆಯನ್ನು ಅದರಲ್ಲಿ ದಾಖಲಿಸಲು ಹೇಳಿದನು. ಅದರಲ್ಲಿ ದಕ್ಷಿಣ ಭಾರತದ ಮುಸ್ಲಿಮರ ಸವಿವರ ಚರಿತ್ರೆ ಬರಬೇಕೆಂದೂ ಅಲ್ಲಿಯ ಚರಿತ್ರೆಗೆ ಆಧಾರಗಳಿರಬೇಕೆಂದೂ ನಡೆದ ಘಟನೆಗಳನ್ನು ಯಥಾವತ್ತಾಗಿ ಚಿತ್ರಸಬೇಕಲ್ಲದೆ ವರ್ಣನೆಗಳಿಂದ ಅದು ಮುಕ್ತವಾಗಿರಬೇಕೆಂದೂ ಆದೇಶಿಸಿದನು. ಅದರಂತೆ ಫರಿಶ್ತಾ ಚರಿತ್ರೆಯನ್ನು ಬರೆಯಲು ಪ್ರಾರಂಭಿಸಿದನು.

ಈ ಮಧ್ಯ ಆತನು ಕ್ರಿ.ಶ. ೧೫೯೪ರಲ್ಲಿ ರಾಜಕುಮಾರ ಡ್ಯಾನಿಯಲ್ ಮಿರ್ಜಾನ ಮದುವೆಯ ನಿಶ್ಚಯಕಾರ್ಯಕ್ಕೆ ವಧು ಬೇಗಂ ಸುಲ್ತಾನಾಳನ್ನು ಬಿಜಾಪುರದಿಂದ ಅಹ್ಮದನಗರದ ವರೆಗೆ ಕರೆದುಕೊಂಡು ಹೋದನು. ಮುಂಗಿ ಪೈಠಣದಲ್ಲಿ ಜರುಗಿದ ನಿಶ್ಚಯದಲ್ಲೂ ಅವನು ಭಾಗವಹಿಸಿದ್ದನು. ಬಳಿಕ ಬುರ್ಹಾಣಪುರದ ವರೆಗೂ ಅವಳೊಂದಿಗೆ ಹೋಗಿದ್ದನು. ಕ್ರಿ.ಶ. ೧೬೦೪ರಲ್ಲಿ ಮೊಗಲ ಬಾದಶಹ ಜಹಾಂಗೀರನ

ಆಸ್ಥಾನಕ್ಕೂ ಬಿಜಾಪುರದ ಪರವಾಗಿ ಹೋಗಿದ್ದನು, ಲಾಹೋರದ ಹತ್ತಿರ ಜಹಾಂಗೀರನನ್ನು ಕಂಡಿದ್ದನು.

ಫರಿಶ್ತಾ, ಕ್ರಿ.ಶ. ೧೬೧೨ರ ವರೆಗೆ ಇತಿಹಾಸ ಬರೆದಿದ್ದರೂ ಬಿಜಾಪುರ ಇತಿಹಾಸದ ಘಟನೆಗಳ ವಿವರ ಮಾತ್ರ ಕ್ರಿ.ಶ. ೧೫೯೬ರ ವರೆಗೆ ಬಂದಿದೆ. ಫರಿಶ್ತಾ ಕ್ರಿ.ಶ. ೧೬೧೨ರಲ್ಲಿ ಸತ್ತಿರಬಹುದೆಂದು, ಅವನ ಗ್ರಂಥವನ್ನು ಇಂಗ್ಲಿಷ್‌ಗೆ ಅನುವಾದಿಸಿದ ಕ್ಯಾಪ್ಟನ್ ಬ್ರಿಗ್ಸ ಊಹಿಸಿದ್ದಾನೆ. ಇನ್ನೊಬ್ಬ ವಿದ್ವಾಂಸ ಎಂ.ಜಿ.ಮೊಹಲ್ ಎಂಬವನು ಫರಿಶ್ತಾ ಕ್ರಿ.ಶ. ೧೬೨೩ರ ಮೊದಲು ಸತ್ತಿರಲಿಕ್ಕಿಲ್ಲ ಎನ್ನುತ್ತಾನೆ.

ಪ್ರಾರಂಭದಲ್ಲಿ ಫರಿಶ್ತಾ, ತನ್ನ ಗ್ರಂಥಕ್ಕೆ 'ಗುಲ್ಶನ್-ಎ-ಇಬ್ರಾಹಿಮಿ' ಎಂಬ ಹೆಸರನ್ನಿಟ್ಟಿದ್ದನು. ಅನಂತರ ಕೆಲವು ಬದಲಾವಣೆಗಳನ್ನು ಮಾಡಿ ಅದಕ್ಕೆ 'ನವರಸ ನಾಮಾ' ಎಂದು ಕರೆದನು. ಮೊದಲನೆಯದು ತನ್ನ ಆಶ್ರಯದಾತ ಎರಡನೆಯ ಇಬ್ರಾಹೀಮನ ಹೆಸರಿನಲ್ಲಿದ್ದರೆ, ಅನಂತರದ್ದು ಇಬ್ರಾಹೀಮನ ಪ್ರಿಯವಿಷಯವಾದ 'ನವರಸ'ಗಳಿಗೆ ಸಂಬಂಧಿಸಿದ್ದಾಗಿದೆ. ಆದರೆ ಫರಿಶ್ತಾನ ಈ ಕೃತಿಯನ್ನು 'ತಾರೀಖ-ಎ-ಫರಿಶ್ತಾ' ಎಂದೇ ವಿಶ್ವದಾದ್ಯಂತ ಗುರುತಿಸಲಾಗಿದೆ. ಈ ಗ್ರಂಥದ ಮೊದಲ ಪ್ರತಿಯನ್ನು ಕ್ರಿ.ಶ.೧೬೦೬ರಲ್ಲಿ ತನ್ನ ಆಶ್ರಯದಾತ ಎರಡನೆಯ ಇಬ್ರಾಹಿಮನಿಗೆ ಸಮರ್ಪಿಸಿದನಾದರೂ, ಸಾಯುವ ವರೆಗೆ ಆತನು ತನ್ನ ಗ್ರಂಥವನ್ನು ತಿದ್ದುತ್ತಲೇ ಇದ್ದನೆಂದು ಹೇಳಲಾಗುತ್ತದೆ.

'ತಾರೀಖ-ಎ-ಫರಿಶ್ತಾ' ಗ್ರಂಥವು ಪ್ರಸ್ತಾವನೆ ಹಾಗೂ ಸಮಾರೋಪಗಳನ್ನಲ್ಲದೆ ೧೨ ಅಧ್ಯಾಯಗಳನ್ನೊಳಗೊಂಡಿದೆ. ಭಾರತೀಯರ ಹಿಂದೂ ಭಾವನೆಗಳನ್ನು, ಚರಿತ್ರೆ ಪುರಾಣಗಳನ್ನು ಉಲ್ಲೇಖಿಸುತ್ತ, ಭಾರತದಲ್ಲಿ ಮುಸ್ಲಿಮರ ಆಗಮನದ ವಿವರಗಳೊಂದಿಗೆ ತನ್ನ ಇತಿಹಾಸವನ್ನು ಪ್ರಾರಂಭಿಸುತ್ತಾನೆ. ತಾನು ಬರೆಯುತ್ತಿರುವ ಈ ಚರಿತ್ರೆಗೆ ಉಪಲಬ್ಧವಿದ್ದ ಸುಮಾರು ೨೫ ವಿವಿಧ ಇತಿಹಾಸ ಗ್ರಂಥಗಳನ್ನು ಆಕರವಾಗಿ ಬಳಸಿಕೊಂಡಿದ್ದೇನೆಂದು ಆತನೇ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾನೆ. ಭಾರತದಲ್ಲಿಯ ಮುಸ್ಲೀಮರ ಚರಿತ್ರೆಯಾದ ಇದರಲ್ಲಿ ಚಿಕ್ಕ ಪುಟ್ಟ ಸಂಸ್ಥಾನಗಳ ಯಾವ ವಿವರಗಳನ್ನೂ ಅವನು ಬಿಟ್ಟಿಲ್ಲ. ಅವುಗಳಲ್ಲಿ ಕೆಲವನ್ನು ವಿವರವಾಗಿ ವರ್ಣಿಸಿದ್ದಾನೆ.

ಮಧ್ಯಯುಗೀನ ದಕ್ಷಿಣ ಭಾರತ ಇತಿಹಾಸವನ್ನು, ಅದರಲ್ಲಿಯೂ ಬಿಜಾಪುರದಲ್ಲಿ ನಡೆದ ಪ್ರತಿಯೊಂದು ಘಟನೆಗಳನ್ನು ಅವನು ದಾಖಲಿಸಿದ್ದಾನೆ. ಯೂಸುಫ ಆದಿಲಶಾಹ, ಇಸ್ಮಾಯಿಲ್, ಮಲ್ಲೂ, ಮೊದಲ ಇಬ್ರಾಹೀಮ, ಮೊದಲ ಅಲಿ, ಹಾಗೂ ಎರಡನೆಯ ಇಬ್ರಾಹೀಮ ಆದಿಲಶಹನ ಕಾಲದಲ್ಲಿ ಜರುಗಿದ ತಪಶೀಲನ್ನು ವಿವರವಾಗಿ ಕೊಟ್ಟಿದ್ದಾನೆ. ವರುಷಗಳನ್ನು ನಮೂದಿಸುವಾಗ ಅಲ್ಲಲ್ಲಿ ತುಸು ಹಿಂದು ಮುಂದಾಗಿರಬಹುದಾದರೂ, ಬಿಜಾಪುರದ ಆದಿಲಶಾಹಿಗಳ ಪ್ರಾರಂಭದ ಇತಿಹಾಸವನ್ನು ಫರಿಶ್ತಾನಷ್ಟು ಖಚಿತವಾಗಿ ಯಾರೂ ಹೇಳಿಲ್ಲ. ಅವನು ಬಿಜಾಪುರ ಮತ್ತು ಅಹ್ಮದನಗರ ಆಸ್ಥಾನಗಳಲ್ಲಿ

ಇದ್ದವನಾದ್ದರಿಂದ ಮತ್ತು ಮೊಗಲ ಸಾಮ್ರಾಟ ಜಹಾಂಗೀರನನ್ನು ಮುಖತಃ ಕಂಡವನಾದ್ದರಿಂದ ಕ್ರಿ. ಶ. ೧೫೭೦ರಿಂದ ೧೬೧೨ರ ವರೆಗೆ ದಾಖಲಿಸಿದ ಘಟನೆಗಳನ್ನು ಆತ ಕಣ್ಣಾರೆ ಕಂಡವನಾಗಿದ್ದಾನೆ.

ಫರಿಶ್ತಾನೇ ಹೇಳಿಕೊಂಡಿರುವಂತೆ ಅವನ ಗ್ರಂಥದ ಭಾಷೆ ಸರಳ ಹಾಗೂ ವರ್ಣನಾರಹಿತ ಪರ್ಶಿಯನ್ ಭಾಷೆ ಆಗಿದೆ. ಅದು ಪೂರ್ವಗ್ರಹದೋಷ ಹಾಗೂ ಪಕ್ಷಪಾತದಿಂದ ಮುಕ್ತವಾಗಿದೆ ಎಂದಿದ್ದಾನೆ. ಆತ ತನ್ನ ಆಶ್ರಯದಾತನ್ನು ಕೂಡ ಅತಿರಂಜಿತವಾಗಿ ಬಣ್ಣಿಸುವುದಿಲ್ಲ. ಅಷ್ಟೇ ಅಲ್ಲ, ಆತನ ಕುರಿತಾಗಿ ಬರುವ ಕೆಲವು ಅಸಂತೋಷಕರ ಘಟನೆಗಳನ್ನು ಕೂಡ ಬರೆದಿದ್ದಾನೆ. ತಾನು ಮುಸ್ಲಿಮನಾಗಿದ್ದರೂ ಇತರ ಮತಗಳನ್ನು ಕುರಿತು ಹೇಳುವಾಗ ಉಳಿದ ಮುಸ್ಲಿಮ ಇತಿಹಾಸಕಾರರಿಗಿಂತ ಸಂಯಮದಿಂದ ವರ್ತಿಸಿದ್ದಾನೆ. ತನ್ನ ಹಿಂದಿನವರ ಇತಿಹಾಸ ಗ್ರಂಥಗಳಿಂದ ಘಟನೆಗಳನ್ನು ಹೆಕ್ಕಿ ತೆಗೆವಲ್ಲಿಯೂ ಅಪರೂಪದ ಜಾಣ್ಮೆಯನ್ನು ತೋರಿದ್ದಾನೆ, ಪ್ರಮುಖ ಘಟನೆಗಳನ್ನು ದಾಖಲಿಸಿದ್ದಾನೆ.

ಪ್ರಸ್ತುತ ಅನುವಾದ

'ತಾರೀಖಿ–ಎ–ಫರಿಶ್ತಾ' ಇತಿಹಾಸ ಗ್ರಂಥವನ್ನು ಅನುವಾದಿಸಲು ಕೈಗೆತ್ತಿಗೊಂಡಾಗ ನಮ್ಮ ಎದುರಿಗೆ ೩ ಪ್ರತಿಗಳು ಇದ್ದುವು. ೧. ಸಾಲಾರಜಂಗ ವಸ್ತುಸಂಗ್ರಹಾಲಯದ ಪರ್ಶಿಯನ್ ಹಸ್ತಪ್ರತಿ ೨. ಕ್ರಿ ಶ. ೧೮೨೯ರಲ್ಲಿ ಕ್ಯಾಪ್ಟನ್ ಬ್ರಿಗ್ಸ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿ ಪುನರ್ಮುದ್ರಣಗೊಂಡ ಎರಡು ಸಂಪುಟಗಳು, ೩. ಅಬ್ದುಲ್ ಹೈ ಖ್ವಾಜಾ ಅವರಿಂದ ಉರ್ದು ಭಾಷೆಗೆ ಅನುವಾದಗೊಂಡು ಉತ್ತರಪ್ರದೇಶದ ಬಂಡಾದಿಂದ ಪ್ರಕಟವಾದ ಎರಡು ಬೃಹತ್ ಸಂಪುಟಗಳು. ಇವುಗಳಲ್ಲಿ ಸಹಜ ಮತ್ತು ಶೀಘ್ರವಾಗಿ ಕನ್ನಡಕ್ಕೆ ಅನುವಾದಗೊಳ್ಳಬಹುದಾದ ಪ್ರತಿಗಳೆಂದರೆ ಇಂಗ್ಲಿಷ್‌ನ ಎರಡು ಸಂಪುಟಗಳು. ಕ್ಯಾಪ್ಟನ್ ಬ್ರಿಗ್ಸ್‌ನ ಅನುವಾದವೇನೋ ಸರಿಯಾಗಿದೆ. ಆದರೆ ಅವನು ಅಲ್ಲಲ್ಲಿ ಬಿಟ್ಟಿದ್ದಾನೆಂಬ ದೂರು ಇದೆ. ಹೀಗಾಗಿ ಇದನ್ನು ಬಿಟ್ಟು ಸಾಲಾರಜಂಗ ವಸ್ತುಸಂಗ್ರಹಾಲಯದ ಹಸ್ತಪ್ರತಿಯಿಂದಲೇ ಅನುವಾದಿಸಬೇಕೆಂದು ಯೋಚಿಸಿದಾಗ, ಸುಮಾರು ೨೦೦೦ ಪುಟಗಳಷ್ಟು ಬೃಹತ್ತಾದ, ಅದರಲ್ಲಿಯೂ ಪರ್ಶಿಯನ್ ಭಾಷೆಯ ಈ ಹಸ್ತಪ್ರತಿಯನ್ನು ಸಕಾಲದಲ್ಲಿ ಕನ್ನಡಕ್ಕೆ ಅನುವಾದ ಮಾಡಿಕೊಡುವವರು ಸಿಗುವುದು ಕಷ್ಟವೆನಿಸಿತು. ಹೀಗಾಗಿ ಉರ್ದು ಭಾಷೆಯಿಂದ ಅನುವಾದಿಸಲು ವಿದ್ವಾಂಸರು ದೊರೆತ ಕಾರಣ ಅಬ್ದುಲ್ ಹೈ ಖ್ವಾಜಾ ಅವರ ಉರ್ದು ಅನುವಾದವನ್ನು ಆಯ್ಕೆ ಮಾಡಿಕೊಂಡೆವು. ನಾಡಿನ ಸುಮಾರು ಒಂಬತ್ತು ಜನ ವಿದ್ವಾಂಸರಿಗೆ ಈ ಕೆಲಸವನ್ನು ಹೀಗೆ ಹಂಚಿ ಕೊಡಲಾಯಿತು:

ಸಂಪುಟ ೧. ಶ್ರೀ ಬಿ ಜಯಾಚಾರ್ಯ. ನ್ಯಾಯವಾದಿಗಳು, ಯಾದಗಿರಿ ಮತ್ತು ಶ್ರೀಮತಿ ಬಾನು ಮುಷ್ತಾಕ್. ನ್ಯಾಯವಾದಿಗಳು, ಹಾಸನ.

ಸಂಪುಟ ೨. ಡಾ. ಅಬ್ದುಲ್ ಹಮೀದ, ತಿಪಟೂರು ಮತ್ತು ಶ್ರೀ ಎಂ.ಎನ್. ನದಾಫ, ಬಿಜಾಪುರ.

ಸಂಪುಟ ೩. ಪ್ರೊ. ವಸಂತ ಕುಷ್ಟಗಿ, ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ ಮತ್ತು ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ.

ಸಂಪುಟ ೪. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ ಮತ್ತು ಡಾ. ರಘೋತ್ತಮರಾವ ದೇಸಾಯಿ, ಐಎಫ್‌ಎಸ್ [ನಿವೃತ್ತ], ಬೆಂಗಳೂರು.

ಇವರಿಂದ ಅನುವಾದವಾಗಿ ಬಂದ ಹಸ್ತಪ್ರತಿಗಳನ್ನು ಮೊದಲು ಇಂಗ್ಲಿಷ್ ಅನುವಾದದೊಂದಿಗೆ, ಅನಂತರ ಪರ್ಶಿಯನ್ ಹಸ್ತಪ್ರತಿಯೊಂದಿಗೆ ತುಲನೆ ಮಾಡಿ ಕೊನೆಗೆ ಮೇಲಿನಂತೆ ೪ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಹೀಗೆ ೯ ಜನರಿಂದ ಬಂದ ಹಸ್ತಪ್ರತಿಗಳಲ್ಲಿ ಭಾಷೆಯ ದೃಷ್ಟಿಯಿಂದ ಕೆಲವನ್ನು ಪರಿಷ್ಕರಿಸುವ ಅಗತ್ಯ ಕಂಡುಬಂದಿತು. ಈ ಕೆಲಸದಲ್ಲಿ, ಡಾ. ಎಂ.ಎಸ್.ಮದಭಾವಿ, ಬಿಜಾಪುರ, ಡಾ. ಎಸ್.ಕೆ. ಕೊಪ್ಪ, ಇಂಡಿ ಮತ್ತು ಶ್ರೀಮತಿ ರತ್ನಾ ಮಣ್ಣೂರ, ಗುಲ್ಬರ್ಗಾ ಅವರು ತುಂಬ ಸಹಾಯ ಮಾಡಿದರು. ಕನ್ನಡ ಅನುವಾದವನ್ನು ಪರ್ಶಿಯನ್ ಹಸ್ತಪ್ರತಿಯೊಂದಿಗೆ ಪರಿಶೀಲಿಸಿದವರು ಮೌಲಾನಾ ಮಹಿಬೂಬುರ್ ರಹಮಾನ ಮದನಿ. ಹೀಗೆ ಸಿದ್ಧವಾದ ನಾಲ್ಕೂ ಸಂಪುಟಗಳನ್ನು ಮುದ್ರಣಕ್ಕೆ ಯೋಗ್ಯವಾಗುವಂತೆ ಪರಿಷ್ಕರಿಸಿದವರು ಶ್ರೀ ರಂಜಾನ್ ದರ್ಗಾ. ಹೀಗೆ ನೆರವಾದ ಮೇಲಿನ ಎಲ್ಲ ವಿದ್ವಾಂಸರಿಗೆ ಕೃತಜ್ಞತೆಗಳು.

ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ಮಾಡಿದ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ, ಸಹಕಾರ ನೀಡಿದ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು.

■

*

ಪರಿವಿಡಿ

*

ಕೆಲವು ಮಾತುಗಳು

ಅಲ್ಲಾಹ ಹಾಗೂ ಆತನ ಪ್ರವಾದಿಯ ನಾಮಸ್ಮರಣೆ

ಅಲ್ಲಾಹನ ಪ್ರಾರ್ಥನೆ ಮತ್ತು ಆತನ ಪ್ರವಾದಿ ರಸೂಲನ ಸ್ತುತಿಯ ನಂತರ, ದೇವರ ಈ ದಾಸನನ್ನು ಮುಹಮ್ಮದ್ ಕಾಸಿಮ ಹಿಂದುಶಹಾ ಇಸ್ತರಾಬಾದಿ ಎನ್ನುತ್ತಾರೆ ಮತ್ತು ಈ ಸೇವಕನು 'ಫರಿಶ್ತಾ' ಎನ್ನುವ ಕಾವ್ಯನಾಮದಿಂದ ಖ್ಯಾತನಾಗಿದ್ದಾನೆ. ಪ್ರಪಂಚದ ಸುಜೀವಿಗಳ ಸೇವೆಯಲ್ಲಿ ಪದಗಳ ನಿಜಾರ್ಥವನ್ನು ಹಾಗೂ ಅವುಗಳ ಗುಣಾವಗುಣಗಳನ್ನು ಪರೀಕ್ಷಿಸಬಲ್ಲ ಜನರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಈ ಅಲ್ಪನು ಅಹ್ಮದನಗರದಲ್ಲಿದ್ದ ದಿನಗಳಲ್ಲಿ ಈತನ ಕಿವಿಯಲ್ಲಿ ಆಗಾಗ ಅಗಮ್ಯವಾದ ಧ್ವನಿಯೊಂದು ಕೇಳಿಬರುತ್ತಿತ್ತು –

'ಜಗತ್ತಿನ ಬಣ್ಣ ಬಣ್ಣದ ಚಿತ್ರಣ ಚಿತ್ರಿಸುವ ಪರಮಾತ್ಮನಿಂದ ನಿರ್ಣಯಿತವಾದ ಹಾಗೂ ಸತ್ಯಾನ್ವೇಷಣೆಯ ವಿಷಯಗಳನ್ನು ಅಭಿನಂದಿಸುವುದು ಮತ್ತು ಅವರ ಗುಣಗಾನವನ್ನು ಮಾಡುವುದು ಪರಮಾತ್ಮನ ಸ್ತುತಿಗೆ ಸಮವಾದಂತೆಯೇ ಸರಿ, ಇದು ನಿನ್ನ ಕರ್ತವ್ಯವಾಗಿದೆ, ಈ ಗ್ರಂಥವು ಹಿಂದುಸ್ತಾನದ ಮುಸಲ್ಮಾನ್ ರಾಜರುಗಳ ಪರಿಸ್ಥಿತಿ ಮತ್ತು ಅಲ್ಲಾಹನಭಕ್ತರ ವರ್ಣನೆಯಾಗಿರಲಿ, ಏಕೆಂದರೆ ಹಿಂದುಸ್ತಾನದ ಬಾಹ್ಯ ಮತ್ತು ಆಂತರಿಕ ಆಡಳಿತವು ಇಬ್ಬಗೆಯ ವೈಭವಯುತ ಭಾವವನ್ನು ಅವಲಂಬಿಸಿದೆ ಹಾಗೂ ಮುಂದೆಯೂ ಅವಲಂಬಿಸಿರುತ್ತದೆ.'

ಹಿಂದುಸ್ತಾನದ ಉನ್ನತ ಸ್ಥಾನ ಪಡೆದ ರಾಜರುಗಳ ಪರಿಸ್ಥಿತಿಯ ಬಗ್ಗೆ ಬರೆಯಲಾದ ಚರಿತ್ರೆಯ ಪುಸ್ತಕವು ನನಗೆ ಸೂಕ್ತ ಸಮಯದಲ್ಲಿ ದೊರೆಯಲಿಲ್ಲ. ಅದರಿಂದಾಗಿ ಈ ಕೆಲಸವನ್ನು ಪೂರ್ಣಗೊಳಿಸುವಲ್ಲಿ ಅಲ್ಪ ವಿಳಂಬವಾಗಿದೆ. ಹಿಜರಿ ಶಕೆ ೯೯೭ರಲ್ಲಿ ನಾನು ಅಹ್ಮದನಗರ ರಾಜಧಾನಿಯನ್ನು ಅಂತಿಮವಾಗಿ ತ್ಯಜಿಸಿ ಬಿಜಾಪುರಕ್ಕೆ ಬಂದೆನು ಮತ್ತು ಇಲ್ಲಿ ಉದಾರಿಯಾದ ದಕ್ಕನ್ ಪ್ರಾಂತದ ಒಡೆಯನ ಸೇವೆಯಲ್ಲಿ ಹಾಜರಾದೆನು.

ಅವರ ವ್ಯಕ್ತಿತ್ವದಲ್ಲಿ ಸತ್ಯಾಂಶವನ್ನು ಕಂಡುಹಿಡಿಯುವ ಆಸಕ್ತಿ ಹಾಗೂ ಉತ್ಕಟವಾದ ಬಯಕೆ ತುಂಬಿ ತುಳುಕುತ್ತಿತ್ತು. ಅವರ ಅಧ್ಯಯನದಲ್ಲಿ ಇತಿಹಾಸದ ಪುಸ್ತಕಗಳೂ ಇರುತ್ತಿದ್ದವು. ಈ ಉನ್ನತ ದರ್ಜೆಯ ಉದಾರಿಯು ತನ್ನ ಪರಂಪರಾಗತ ನಡತೆಯಾದ ವಾತ್ಸಲ್ಯಯುಕ್ತ ಅಂತಃಕರಣವನ್ನು ನನ್ನ ಮೇಲೆ ತೋರಿದನು, ಬಗೆಬಗೆಯ ಇನಾಮುಗಳನ್ನು ಕೊಟ್ಟು ಉಪಕೃತನಾಗಿ ಮಾಡಿದನು ಹಾಗೂ 'ನಮ್ಮ ರಾಜ್ಯಾಡಳಿತದಲ್ಲಿ ನಡೆದ ಘಟನೆಗಳು ಮತ್ತು ಹಿಂದುಸ್ತಾನದ ಇತರ ರಾಜರ ಕೃತಿಗಳನ್ನು ಲೇಖನದಲ್ಲಿ ತರತಕ್ಕದ್ದು. ವಿಚಾರದ ನದಿಯಲ್ಲಿ ಮುಳುಗುಹಾಕುವ ತಜ್ಞನಂತೆ, ಅಲ್ಲಿ ಮಿಣುಗುವ ಮುತ್ತು ರತ್ನಗಳನ್ನು ಹೊರತೆಗೆದು ಸುಂದರವಾದ ಹಾರವನ್ನು ತಯಾರಿಸು. ನಿನ್ನ ವ್ಯಕ್ತಿತ್ವವನ್ನು ಒಬ್ಬ ತೋಟಗಾರನಂತೆ ರೂಪಿಸಿಕೊಂಡು, ರಾಜಾಶ್ರಯದ ಉಪವನವನ್ನು ಸೃಷ್ಟಿಸಿ ಅದರಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟುವಂತೆ ಮಾಡು, ರಾಜನ ಉದಾರದೇಣಿಗೆಗಳ ಭಾರದಡಿಯಲ್ಲಿ ನಡೆಯುವ ನಿನ್ನ ಸೃಷ್ಟಿಕ್ರಿಯೆಯಲ್ಲಿ ಒಂದು ಸುಂದರವಾದ ಅರಮನೆಯನ್ನು ಸೃಷ್ಟಿಸು. ಆ ಅರಮನೆಯಲ್ಲಿ ಗತವೈಭವದ ಸವಿನೆನಪುಗಳುಳಿದು, ಅತಾರಿದ್‌ಗ್ರಹದಂತೆ ಒಂದು ಸುಸಜ್ಜಿತವಾದ ಮಳಿಗೆಯನ್ನು ತೆಗೆ, ಅದರಲ್ಲಿಯ ಸರಕುಗಳನ್ನು ಖರೀದಿಸಲು ಕೇವಲ ಶುದ್ಧಾತ್ಮರೇ ಬರಲಿ, ಹಜ್ರತ್ ಸುಲೇಮಾನ್‌ನಂತೆ ಒಂದು ಭವ್ಯ ಭೋಜನದ ವ್ಯವಸ್ಥೆಮಾಡು, ಅದರಲ್ಲಿಯ ಪದಾರ್ಥಗಳನ್ನು ತಿನ್ನಲು ಸ್ವರ್ಗದ ಹಕ್ಕಿಗಳು ಕೂಡಾ ಬರಬೇಕು. ಇದು ನಿನ್ನ ಕರ್ತವ್ಯ ಮತ್ತು ಕೃತಜ್ಞತೆಯನ್ನು ಸೂಚಿಸುವ ವಿಧಾನ.'ಎಂದು ಆಜ್ಞೆ ಮಾಡಿದನು.

ಈ ರೀತಿ ಬಾದಶಹನು ಉದಾರ ಅಂತಃಕರಣವನ್ನು ವ್ಯಕ್ತಪಡಿಸಿದಾಗ ಆತನ ಅನುಗ್ರಹದಿಂದ ಉಪಕೃತನನ್ನಾಗಿಸಿದಾಗ ಕರ್ತ್ಯವ್ಯ ಪಾಲನೆಯ ಭಾರದಲ್ಲಿ, ನನ್ನ ಕರ್ತ್ಯವ್ಯವನ್ನು ಪೂರ್ಣಗೊಳಿಸಲು ಸಿದ್ಧನಾದೆ ಮತ್ತು 'ನನ್ನ ಭಾಷೆರಹಿತ ನಾಲಗೆಯ ಮೇಲೆ ದೈವಿಕ ಸಂತೃಪ್ತಿ ದೊರೆತಿರುವುದರಿಂದ ಮತ್ತು ನನ್ನ ಸಂಭಾಷಣೆಯು ಬಾದಶಾಹನ ಸಂಭಾಷಣೆಯೊಂದಿಗೆ ಬೆರೆತಿರುವುದರಿಂದ, ಕಲೀಮ್‌ನಂತೆ ಮಹೋನ್ನತ ಗೌರವದ ಬಾವುಟವನ್ನು ಪರಮಾತ್ಮನ ಪರಮಾನುಗ್ರಹದಿಂದ ಮತ್ತು ಬಾದಶಹರ ಸಹಾಯದಿಂದ ಸೌಂದರ್ಯದ ಮಾರುಕಟ್ಟೆಯಲ್ಲಿ ಒಬ್ಬ ಅತ್ಯಂತ ಸುಂದರನನ್ನು ತಂದು ಅವನನ್ನು ಕಂಡು ಈಗಿನ ಜುಲೇಖಾಗಳು ಇವನೇ ದ್ವಿತೀಯ ಯುಸುಫ್‌ನೆಂದು ಕೂಗಿಕೊಳ್ಳಲಿ, ಅಥವಾ ಒಬ್ಬ ಜುಲೇಖಾಳಂತೆ ಸುಂದರಳಾದ ವಧುವನ್ನು ಬಿಜಾಪುರದ ಸಿಂಹಾಸನದಲ್ಲಿ ಕುಳ್ಳಿರಿಸಲು ಪ್ರಪಂಚವು ಯುಸುಫ್ ಕನಾನ್‌ನಂತೆ ಅವಳ ಸೇವೆಗಾಗಿ ಸಿದ್ಧರಾಗಲೆಂದು ಹಾರೈಸುವಲ್ಲಿ ಯಾವ ಆಶ್ಚರ್ಯವಿದೆ?' ಎಂದು ಅರಿಕೆ ಮಾಡಿಕೊಂಡೆನು.

ಸ್ವರ್ಗದ ಉದ್ಯಾನವದಂಥದ್ದನ್ನು ನಾನು ಇಲ್ಲಿ
ತರಬೇಕೆಂದಿರುವೆ. ಅದನ್ನು ನೋಡಿದರೆ ಸ್ವರ್ಗದ ತೋಟ

ಮರೆತು ಹೋಗುತ್ತದೆ. ಸುಂದರ ಶಬ್ದಗಳಿಂದ ಈ ತೋಟ
ವನ್ನು ಅಲಂಕರಿಸುವೆ. ಅದು ಎಂದೂ ಬಾಡುವುದಿಲ್ಲ.

ಈ ಸಂಭಾಷಣೆಯ ನಂತರ ನಾನು ಹಿಂದುಸ್ತಾನದ ಇತಿಹಾಸದ ಕುರಿತು ಪುಸ್ತಕಗಳನ್ನು ಸಂಗ್ರಹಿಸುವ ಪ್ರಯತ್ನವನ್ನು ಪ್ರಾರಂಭಿಸಿದೆನು ಮತ್ತು ಪ್ರತಿಯೊಂದು ಸ್ಥಳದ ಹಾಗೂ ದೇಶದ ಐತಿಹಾಸಿಕ ಪುಸ್ತಕಗಳ ನಮೂನೆಗಳನ್ನು ಒಟ್ಟುಗೂಡಿಸಿದೆನು. ಆದರೆ ಇವುಗಳಲ್ಲಿ ಹಿಂದುಸ್ತಾನದ ರಾಜರುಗಳ ಪರಿಪೂರ್ಣ ಸ್ಥಿತಿಗತಿಗಳ ಮತ್ತು ಅವರ ಕಾಲಾವಧಿಯ ಪರಿಪೂರ್ಣ ಘಟನೆಗಳನ್ನು ಬರೆದ ಪುಸ್ತಕವು ಕಂಡುಬರಲಿಲ್ಲ. ಈ ರೀತಿ ಕಲೆಹಾಕಿದ ಎಲ್ಲಾ ಪುಸ್ತಕಗಳಲ್ಲಿ ಉತ್ತಮವಾದ ಮಾದರಿಯು 'ನಿಜಾಮುದ್ದೀನ್ ಅಹ್ಮದ್ ಬಕ್ಷಿಯ ಇತಿಹಾಸ'. ಆದರೆ ಹಿಂದುಸ್ತಾನದ ಬಹಳಷ್ಟು ಸ್ಥಿತಿಗತಿಗಳ ಬಗ್ಗೆ ನನಗೆ ಸ್ವತಃ ಇದ್ದ ಮಾಹಿತಿಯ ನಿರೂಪಣೆ ಅದರಲ್ಲಿರಲಿಲ್ಲ. ಈ ಪರಿಸ್ಥಿತಿಯನ್ನು ಕಂಡು ನನ್ನ ಬರವಣಿಗೆಯ ಆಸಕ್ತಿಯು ಇನ್ನೂ ಉತ್ಕಟವಾಯಿತು. ನಾನು ವಿಶ್ವಾಸಕ್ಕೆ ಅರ್ಹವಾದ ಈ ಲಿಖಿತ ಪುಸ್ತಕಗಳನ್ನು ಕಾಲದ ದೃಷ್ಟಿ, ಆಸಕ್ತಿಯಿಂದ ಅಭ್ಯಸಿಸಿದೆನು ಮತ್ತು ಇವುಗಳಲ್ಲಿ ಅಡಗಿದ, ಹರಡಿದ ಖಜಾನೆಯ ಮುತ್ತುರತ್ನಗಳನ್ನು ಒಂದು ವಿಶಿಷ್ಟ ಕ್ರಮದಲ್ಲಿ ಜೋಡಿಸಿ ದಾರದಲ್ಲಿ ಪೋಣಿಸಿದೆನು. ನನ್ನ ಪರಿಶ್ರಮವು ಈ ಪುಸ್ತಕ 'ಗುಲ್‌ಶನೇ ಇಬ್ರಾಹಿಮಿ' ರೂಪದಲ್ಲಿ ತಮ್ಮ ಎದುರಿಗೆ ಇದೆ.

ನಾನು ಈ ಪುಸ್ತಕದಲ್ಲಿ ಭೂಮಿಯ ಮೇಲೆ ಸಂಶೋಧಿಸಿ ಉತ್ಪತ್ತಿಯಾದ ಮತ್ತು ಅದರ ಬಾಹುಗಳು ನಿಜವಾಗಿ ಸತ್ಯದ ಮುಸುಕಿನಿಂದ ಸಿಂಗರಿಸಲ್ಪಟ್ಟಿದೆ. ಹಿಜರಿಶಕೆ ೧೧೧೫ರಲ್ಲಿ – ಆಂತರಿಕ ನ್ಯಾಯಲಯದಲ್ಲಿ, ಶ್ರೇಷ್ಠ ಸೈನಿಕ, ರಾಜ್ಯಾಭರಣಗಳ ಆಗರ, ಪರಿವಾರವೃದ್ಧಕ, ದೇಶ ಸಂರಕ್ಷಕ, ಗುಣಾವಗುಣಗಳನ್ನು ವಿಶ್ಲೇಷಿಸುವ, ಸೋಲನ್ನರಿಯದ, ಜಗತ್ತನ್ನು ಆಳುವ ರಾಜನ ಹೆಸರಿನಲ್ಲಿ ಬರೆದು ಆತನ ಗೌರವಾನ್ವಿತ ಅರಮನೆಯಲ್ಲಿ ಕಾಣಿಕೆಯ ರೂಪದಲ್ಲಿ ಅರ್ಪಿಸಿದೆನು. ಮೇಧಾವಿಗಳು ಹಾಗೂ ತಜ್ಞರಿಂದ ರಚಿತವಾದ ಉತ್ತಮ ದರ್ಜೆಯ ಲೇಖನಗಳನ್ನು ತಮ್ಮ ಸ್ಮಾರಕವಾಗಿಟ್ಟು ಈ ಪ್ರಪಂಚವನ್ನು ತೊರೆದವರ ಗೌರವಾನ್ವಿತ ಲೇಖನಗಳೊಂದಿಗೆ ನನ್ನಂತಹ ಅಲ್ಪನಿಂದ ಲಿಖಿತಗೊಂಡುದನ್ನು ಹೋಲಿಕೆಯಾಗಿ ಅವುಗಳೊಂದಿಗೆ ತೋರುವುದು ನನಗೆ ಸಮಂಜಸವೆನ್ನಿಸುವುದಿಲ್ಲ. ಏಕೆಂದರೆ, ಹೀಗೆ ಮಾಡುವುದು ಅವರ ಲೇಖನಗಳಿಗೆ ಅಗೌರವ ತೋರಿದ ಸಮಾನವಾಗುತ್ತದೆ. ಅದಕ್ಕಾಗಿ ನಾನು ಈ ಬಗ್ಗೆ ಮೌನವಹಿಸುವುದೇ ಲೇಸು. ಆದರೆ ವಿಮರ್ಶಕರು ಮತ್ತು ವಿಷಯ ಗ್ರಾಹಕರು ಸರಿಯಾಗಿಯೇ ತಿಳಿದುಕೊಂಡಿರುತ್ತಾರೆ ಎಂದು ಧೈರ್ಯದಿಂದ ಅವಶ್ಯವಾಗಿ ಹೇಳುತ್ತೇನೆ. ಈ ಪುಸ್ತಕ ಮತ್ತು ಗುಣಾತ್ಮಕ ಲೇಖಕನಗಳ ಮಧ್ಯೆ ಇರುವ ಸಂಬಂಧವು ಕಾಬಾ ಮತ್ತು ಪವಿತ್ರ ಬೈತುಲ್ ಮೊಖದಸ್ ಮಧ್ಯೆ ಇದ್ದಂತೆ.

ನನ್ನ ಈ ಸರಳ ರೂಪದ ನಿರಾಭರಣ ಸುಂದರಿಯು, ರಾತ್ರಿಯಲ್ಲಿ ಮೌಲಿಕವಾಗಿ

ಬೆಳಗುವ ದೀಪದಂತೆ, ಶಬ್ದ ಸೌಂದರ್ಯಗಳಿಂದ ಮುಕ್ತವಾಗಿದೆ. ಆದರೂ ಮಹಾರಾಜನ ಮನಸ್ಸನ್ನು ಆಕರ್ಷಿಸಿ, ಸ್ವೀಕೃತಗೊಂಡು ಚೊಕ್ಕವಾದ ನಾಣ್ಯವಾಗುವುದೆಂದು ನನಗೆ ಭರವಸೆ ಇದೆ.

ಪುಸ್ತಕಗಳ ಹೆಸರಿನ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ. ಈ ಪುಸ್ತಕಗಳ ಅಧ್ಯಯನದ ನಂತರ ನನ್ನ ಪುಸ್ತಕವು ರಚಿತವಾಗಿದೆ.

೧) ತರಜುಮಾ ಯಮನಯಿ ಝಿನ್ ಅಲಾ ಅಖಬಾರ್

೨) ತಾಜುಲ್ ಮುಲಾಸಿರ್

೩) ತಬಖಾಬನಾಸರಿ

೪) ಮುಲ್ ಹ ಖಾತ್ ಶೇಖ ಅಯಿನುದ್ದೀನ್ ಬಿಜಾಪುರಿ

೫) ತಾರೀಖೆ ಫಿರೋಝು ಶಾಹಿ

೬) ವಾಖಿಯಾತ್ ಬಾಬರಿ

೭) ವಾಖಿಯಾತ್ ಹುಮಾಯೂನಿ

೮) ತಾರೀಖ ಬನಾಯೇ ಗೀತಿ

೯) ಬೆಹಮನ್ ನಾಮಾ ಮನ್ ಝೂಂ ಶೇಖ ಆಝುರೀ

೧೦) ಶೀರಾಜ ಇಲ್ ತ ವಾರೀಖ ಬೆಹಮನಿ ತಾಲೀಫ ಮುಲ್ಲಾ ಮೊಹ್ಮದ್ ಲಾರಿ

೧೧) ತಾರೀಖೆ ಮುಬಾರಕ ಶಾಹಿ

೧೨) ತಹಫಾ ಅಸ್ಲಾತೀನ್ ಬೆಹಮನಿ ತಾಲೀಫ ಮುಲ್ಲಾ ದಾವೂದ್ ಬೀದರಿ

೧೩) ತಾರೀಖೆ ಅಲ್ ಫೀ

೧೪) ತಾರೀಖೆ ಉಸ್ತಾದಿ ಮುಲ್ಲಾ ಅಹ್ಮೆತ ತನವಿ

೧೫) ರೋಸ್ತಾ ಅಲ್ ಸಫಾ

೧೬) ಜೆಬುಲ್ ಅಸಿರ್

೧೭) ತಾರೀಖ ಹಾಜಿ ಮೊಹ್ಮದ್ ಖಂದಾರಿ

೧೮) ತಬಖಾತ ಮೆಹ್ಮೂದ್ ಶಾಹೀ ಬುಜುರ್ಗ (ಮಂಧ್ವಿ)

೧೯) ತಾರೀಖೆ ಮೆಹ್ಮೂದ್ ಶಾಹೀ ಖರ್ದ (ಮಂಧ್ವಿ)

೨೦) ತಾರೀಖೆ ನಿಜಾಮುದ್ದೀನ್ ಅಹಮದ್ ಬಕ್ಷಿ

೨೧) ತಾರೀಖೆ ಬಂಗಲಾ

೨೨) ತಾರೀಖೆ ಸಿಂದ

೨೩) ತಾರೀಖೆ ಕಶ್ಮಿರ್

೨೪) ನಸನತಾ ಅಲ್ ಫವಾಮದ್ ಅಲ್ಫೌ

೨೫) ನಸನಹಾ ಮುನಿರ್ ಅಲ್ ಮಜಾಲಿಸ್

೨೬) ನಸನಹಾ ಖಲಬಿ ಮತ್ತು

೨೭) ನಸನಹಾ ಖಬುರಲ್ಲಾರ್ ಫಯನ್ ಶೇಖ ಜಮಾಲೀ ಷಾಯರ್.

ಈ ಪುಸ್ತಕವು ಈ ಕೆಳಗೆ ಸೂಚಿಸಿದ ಪ್ರಕರಣಗಳನ್ನು ಒಳಗೊಂಡಿದೆ.

೧) ಲಾಹೋರಿನ ರಾಜರು

೨) ದಿಲ್ಲಿಯ ರಾಜರು

೩) ದಖ್ಖನ್ನಿನ ರಾಜರು

೪) ಗುಜರಾತಿನ ರಾಜರು

೫) ಮಾಳವಾದ ರಾಜರು

೬) ಖಾನ್‌ದೇಶದ ರಾಜರು

೭) ಮುಲ್ತಾನಿನ ರಾಜರು

೮) ಸಿಂಧದ ರಾಜರು

೯) ಕಾಶ್ಮೀರದ ರಾಜರು

೧೦) ಮಲಬಾರದ ಸಾಮಂತರು

೧೧) ಬಂಗ್ಲಾ ರಾಜರು ಮತ್ತು

೧೨) ಭಾರತದ ಹಿರಿಯರು

■

*

ಪೀಠಿಕೆ

ಹಿಂದುಸ್ತಾನದ ಜನರ ಮೂಲ ತಾತ್ವಿಕ ನಂಬಿಕೆಗಳು :

ಮಹಾಭಾರತವು ಹಿಂದು ಜನರ ದೃಢೀಕೃತ ಗ್ರಂಥವಾಗಿದ್ದು, ಈ ಕಾಲದಲ್ಲಿ ಇದಕ್ಕಿಂತಲೂ ಹೆಚ್ಚಿನ ಗೌರವಾನ್ವಿತ ಗ್ರಂಥ ಇನ್ನೊಂದಿಲ್ಲ. ಅಕ್ಬರ್ ಚಕ್ರವರ್ತಿಯ ಕಾಲದಲ್ಲಿ ಶೇಖ ಮುಬಾರಕನ ಪುತ್ರ ಅಬುಲ್-ಫಝುಲ್-ಫೈಝಿಯು ಈ ಗ್ರಂಥವನ್ನು ಫಾರಸಿ ಭಾಷೆಗೆ ಅನುವಾದಿಸಿದ್ದನು. ಈ ಗ್ರಂಥದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಶ್ಲೋಕಗಳು ಇವೆ. ಹಿಂದೂ ಜನರ ಮೂಲ ತತ್ತ್ವಗಳ ನಂಬಿಕೆ ಬಗ್ಗೆ ಅರಿತುಕೊಳ್ಳಲು ಈ ಗ್ರಂಥದ ಸಾರಾಂಶವನ್ನು ಇಲ್ಲಿ ನಿರೂಪಿಸಲಾಗಿದೆ. ಏಕೆಂದರೆ, ಪರಿಪೂರ್ಣ ಇತಿಹಾಸದ ಮಾಹಿತಿ ಪಡೆಯಲು ಬಯಸುವವರೆಲ್ಲರಿಗೂ ಆರಂಭದಿಂದ ಕೊನೆಯವರೆಗೂ ನಿಜವಾದ ಸತ್ಯತೆಯ ಅರಿವಾಗಲಿ ಎಂಬುದು ನಮ್ಮ ಆಶಯ.

ಸೂಫಿಗಳಾಗಲಿ, ತತ್ತ್ವಜ್ಞಾನಿಗಳಾಗಲಿ ಅಥವಾ ತತ್ತ್ವಾನ್ವೇಷಿಗಳಾಗಲಿ ಪ್ರತಿಯೊಬ್ಬ ವ್ಯಕ್ತಿಗೆ ಜಗತ್ತಿನ ಬಗ್ಗೆ ಭಿನ್ನ ಭಿನ್ನವಾದ ವಿಚಾರವಿರುತ್ತದೆ. ಒಂದು ಗುಂಪಿನ ಮತವು ಇನ್ನೊಬ್ಬರಿಂದ ಭಿನ್ನವಾಗಿರುತ್ತದೆ. ಮಹಾಭಾರತದಲ್ಲಿ ಈ ರೀತಿಯಾಗಿ ೧೩ ವಿವಿಧ ಸಲಹಾಕಾರರ ಉಲ್ಲೇಖವಿದೆ, ಆದರೆ ಸೂಕ್ಷ್ಮ ದೃಷ್ಟಿವುಳ್ಳವರಿಗೆ ಇವರಲ್ಲಿ ಜಗತ್ತಿನ ಉತ್ಪತ್ತಿಯ ಬಗ್ಗೆ ಯಾವ ಸಲಹೆಯು, ಪ್ರೌಢ ದೃಷ್ಟಿಯುಳ್ಳವರಿಗೆ ಸಂತೃಪ್ತಿ ನೀಡುವ ಸಲಹಾಕಾರನು ಸಿಗಲಿಲ್ಲ. ಹಿಂದು ಜನರ ಮೂಲ ತತ್ತ್ವಗಳ (ಇಸ್ಲಾಮಿ ಮೂಲ ತತ್ತ್ವಗಳಿಗೆ ವಿರುದ್ಧವಿರುವ) ಈ ಚಿತ್ರ ವಿಚಿತ್ರವಾದ ಪ್ರಪಂಚವು ನಾಲ್ಕು ಯುಗಗಳ ಕಾಲಚಕ್ರದಲ್ಲಿ ತಿರುಗುತ್ತದೆ, ಅವುಗಳು ಈ ಕೆಳಗಿನಂತಿವೆ.

೧) ಸತ್ಯ ಯುಗ

೨) ತ್ರೇತಾ ಯುಗ

೩) ದ್ವಾಪರ ಯುಗ ಮತ್ತು

೪) ಕಲಿ ಯುಗ.

'ಕಲಿ ಯುಗ'ದ ಮುಕ್ತಾಯದ ನಂತರ ಮೊದಲನೆಯ ಯುಗ, ಅಂದರೆ 'ಸತ್ಯ ಯುಗ' ಮತ್ತೆ ಹೊಸದಾಗಿ ಆರಂಭವಾಗುತ್ತದೆ ಮತ್ತು ಇದೇ ರೀತಿ ಒಂದಾದ ನಂತರ ಮತ್ತೊಂದು ಯುಗ (ಕಾಲಗತಿ) ಉರುಳುತ್ತಲೇ ಇರುತ್ತವೆ. ಜಗತ್ತಿನ ಆರಂಭದ ಮತ್ತು ಅಂತ್ಯದ ಬಗ್ಗೆ ಇದರಲ್ಲಿ ಯಾವ ಮಾಹಿತಿಯೂ ದೊರೆಯುವುದಿಲ್ಲ.

ನಾನು ಒಂದು ಪವಿತ್ರ ಗ್ರಂಥದಲ್ಲಿ ಓದಿದೆ, ಒಂದು ಸಾರಿ ಒಬ್ಬ ವ್ಯಕ್ತಿ ಹಜ್ರರತ್–ಅಲಿ–ಅಲೇ ಸಲಾಮನು 'ನನ್ನ ವಿಶ್ವಾಸಾರ್ಹ ಆದಮ್–ಅಲೇ–ಸಲಾಮ, ಮೂರು ಸಹಸ್ರ ವರ್ಷಗಳ ಹಿಂದೆ ಜಗತ್ತಿನಲ್ಲಿ ಯಾರಿದ್ದರು?' ಎಂದು ಪ್ರಶ್ನಿಸಿದನು. ಅವರು ಉತ್ತರವಾಗಿ ಹೇಳಿದರು 'ಆದಮ್'. ಆ ವ್ಯಕ್ತಿಯು ಮೂರು ಸಲ ತನ್ನ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳಿದನು, ಮತ್ತು ಹಜ್ರತ್–ಅಲಿ ಇವರು ಮೂರು ಸಾರಿಯು ಅದೇ ಉತ್ತರವನ್ನು ನೀಡಿದರು. ಆ ವ್ಯಕ್ತಿಯು ಆಶ್ಚರ್ಯಚಕಿತನಾಗಿ ಮೌನ ತಾಳಿದನು. ಹಜ್ರತ್–ಅಲಿಯು ಆ ವ್ಯಕ್ತಿಯು ಆಶ್ಚರ್ಯದಿಂದ ಮೌನ ತಾಳಿದುದನ್ನು ಕಂಡು ನುಡಿದರು 'ನೀನು ಮೂರು ಸಹಸ್ರ ಬಾರಿ ನನಗೆ ಈ ಪ್ರಶ್ನೆ ಮಾಡಿದರೂ ಪ್ರತಿ ಸಾರಿ ನಾನು ಇದೇ ಉತ್ತರವನ್ನು ಕೊಡುತ್ತಿದ್ದೆ'.– ಈ ಸಂಭಾಷಣೆಯಿಂದ ಜಗತ್ತಿನ ಉತ್ಪತ್ತಿಯ ಬಗ್ಗೆ ಅಲ್ಪ ಮಾಹಿತಿ ದೊರೆಯುತ್ತದೆ, ಆದರೆ ಹಿಂದು ಜನರ ಕಾಲಗತಿಯನ್ನು ವಿಭಜಿಸಿದ ಮೂಲ ತತ್ವವು ಎಲ್ಲ ರೀತಿಯಿಂದಲೂ ತಲೆ ಬುಡವಿಲ್ಲದ ಕಥೆಯಾಗಿದೆ.

ಕೆಲವು ಹಳೆಯ ಬ್ರಾಹ್ಮಣ ವಿದ್ವಾಂಸರುಗಳ ವಿವಿಧ ನಿಯಮಿತ ನಿಲುವುಗಳಿಂದ, ಜಗತ್ತಿಗೆ ಒಂದು ಅಂತಿಮ ದಿನವಿದೆ ಎಂಬ ಅಭಿಪ್ರಾಯವು ಪುಷ್ಟಿಪಡೆಯುತ್ತದೆ ಮತ್ತು ಪ್ರಳಯವು ಅವಶ್ಯಕವಾಗಿ ಆಗತಕ್ಕದ್ದೆ. ಆದರೆ ನಂತರದ ಹಿಂದೂ ವಿದ್ವಾಂಸರ ನೀತಿ ನಿಲುವುಗಳನ್ನು ಅರ್ಥೈಯಿಸುವುದು ವಿರುದ್ಧವಾಗಿದೆ ಅಂದರೆ ಇವರ ವಿಚಾರದಲ್ಲಿ 'ಕಾಲಚಕ್ರ' ವಿಭಜನೆಯು ಅದೇ ಪುರಾತನ ಮೂಲ ತತ್ತ್ವವಾಗಿದೆ.

ಅದೇನೆ ಇರಲಿ, ಸತ್ಯ ಯುಗದ ಕಾಲವು ೧೭,೨೮,೦೦೦ ವರ್ಷವೆಂದು ಹೇಳಲಾಗುತ್ತದೆ. ಈ ಯುಗದಲ್ಲಿ ಮನುಷ್ಯರ ನಡೆನುಡಿಗಳು ಶುದ್ಧವಾಗಿರುತ್ತದೆಯೆಂದು ತಿಳಿಯಲಾಗುತ್ತದೆ. ಈ ಯುಗದಲ್ಲಿ ಒಬ್ಬ ಮನುಷ್ಯನು ಯಾವ ರೀತಿಯವನೇ ಇದ್ದರೂ, ಅವನು ಸನ್ಮಾರ್ಗವನ್ನು ಬಿಟ್ಟು ಅತ್ತ–ಇತ್ತ ಹೋಗಲಾರ ಮತ್ತು ಆ ವ್ಯಕ್ತಿಯ ಎಲ್ಲಾ ಕರ್ಮಗಳು ಪರಮಾತ್ಮನ ಅಧೀನವಾಗಿರುತ್ತವೆ ಮತ್ತು ಮನುಷ್ಯರ ಜೀವನಾವಧಿಯು ಒಂದು ಲಕ್ಷ ವರ್ಷಗಳೆಂದು ಸಹ ಹೇಳಲಾಗುತ್ತದೆ. ಆದರೆ ಈ ತತ್ವದ ಮತ್ತು ಆಯುಷ್ಯದ ಸತ್ಯಾಂಶವೇನೆಂಬುದು ಕೇವಲ ಪರಮಾತ್ಮನಿಗೆ ಗೊತ್ತು.

ಎರಡನೆಯ ಯುಗ, ಅಂದರೆ 'ತ್ರೇತಾ ಯುಗ'. ಇದರ ಅವಧಿಯು ೧೨,೯೬,೦೦೦ ವರ್ಷವೆಂದು ಹೇಳಲಾಗುತ್ತದೆ. ಈ ಯುಗದಲ್ಲಿ ಜನರ ಒಟ್ಟು ಜನಸಂಖ್ಯೆಯ ೩/೪ನೇ ಅಂಶ ಸದಾಚಾರ ಸಂಪನ್ನರಾಗಿದ್ದು ಪರಮಾತ್ಮನ ಇಚ್ಛಾಧೀನರಾಗಿರುತ್ತಾರೆ. ಮನುಷ್ಯರ ಜೀವಾವಧಿಯು ತ್ರೇತಾಯುಗದಲ್ಲಿ ೧೦,೦೦೦ ವರ್ಷವೆಂದು ಹೇಳಲಾಗುತ್ತದೆ.

ಮೂರನೆಯ ಯುಗ 'ದ್ವಾಪರ ಯುಗ'. ಈ ಯುಗದ ಅವಧಿಯು ೮,೬೪,೦೦೦ ವರ್ಷವೆಂದು ಹೇಳಲಾಗುತ್ತದೆ. ಈ ಯುಗದಲ್ಲಿ ಜನರ ಒಟ್ಟು ಸಂಖ್ಯೆಯಲ್ಲಿ ಅರ್ಧಾಂಶವು ಸದಾಚಾರ ಸಂಪನ್ನರಾಗಿ ಮತ್ತು ಸತ್ಯವನ್ನೇ ನುಡಿಯುತ್ತಾರೆ. ಮನುಷ್ಯನ ಜೀವಾವಧಿಯು ೧೦೦೦ ವರ್ಷವೆಂದು ಹೇಳಲಾಗುತ್ತದೆ. ಹಜ್ರತ್ ಆದಮ್ ಹಾಗೂ ನೂಹ್ ಮತ್ತು ಇತರ ನಬೀಗಳು ಅಲಿಹಮ್ ಇಸ್ಲಾ ಮ್ ಇವರುಗಳ ವಯಸ್ಸು ಸುಮಾರು ೧೦೦೦ ವರ್ಷವೆಂದು ತಿಳಿಯಲಾಗಿದ್ದು ಹಿಂದೂ ಜನ ಇದನ್ನು ಒಪ್ಪುತ್ತಾರೆ, ಮತ್ತು ಇವರ ನಬೀಗಳು ಅಲೀಮೇ ಇಸ್ಲಾಮ್ 'ದ್ವಾಪರಯುಗ'ದ ಕಾಲಮಾನವನ್ನು ಪಡೆಯಲಾಗಿದ್ದು ಇವರ ವಯಸ್ಸಿನಲ್ಲಿ ಅಷ್ಟೇ ಅವಧಿಯಾಗಿರುತ್ತದೆ.

ನಾಲ್ಕನೆಯ ಯುಗ 'ಕಲಿ ಯುಗ'. ಈ ಯುಗದ ಅವಧಿಯು ೪,೩೨,೦೦೦ ವರ್ಷವೆಂದು ಹೇಳಲಾಗುತ್ತದೆ. ಈ ಯುಗದಲ್ಲಿ ಜನಸಂಖ್ಯೆಯ ೩ನೆಯ ಭಾಗವು ಸನ್ಮಾರ್ಗ ಪ್ರವರ್ತಕರಾಗಿರುವುದಿಲ್ಲ, ಜನರು ಸರಿಯಾದ ಮಾರ್ಗವನ್ನು ತೊರೆದು ಬಿಡುತ್ತಾರೆ ಮತ್ತು ಈ ಯುಗದ ಮನುಷ್ಯ ಜೀವನದ ಕಾಲಾವಧಿಯು ೧೦೦ವರ್ಷ ಇರುತ್ತದೆ. ಈ ನಾಲ್ಕು ಯುಗಗಳ ಕಾಲಚಕ್ರದ ಅವಧಿಯು ಹಿಂದೂ ಜನರ ಮೂಲ ತತ್ವಗಳ ನಂಬಿಕೆ ಪ್ರಕಾರವಿದೆ.

ಸತ್ಯಯುಗ = ತ್ರೇತಾಯುಗ + ಕಲಿಯುಗ; ತ್ರೇತಾಯುಗ = ದ್ವಾಪರಯುಗ + ಕಲಿಯುಗ; ದ್ವಾಪರಯುಗ = ಎರಡು ಕಲಿಯುಗ + ೮,೬೪,೦೦೦ ವರ್ಷ; ಕಲಿಯುಗ = ೪,೩೨,೦೦೦ ವರ್ಷ

ಈಗಿನ ಕಾಲದಲ್ಲಿ ಎಲ್ಲ–ಹಜ್ರತ್‌ರ ಹಿಜರಿ ಶಕೆಯ ೧೦೧೫ (ಕ್ರಿ.ಶ. ೧೬೧೫) ವರ್ಷಗಳು ಆಗಿದೆ. ಹಿಂದುಗಳ ಮೂಲ ವಿಶ್ವಾಸದ ಪ್ರಕಾರ ಇದು 'ಕಲಿ ಯುಗ'. ಇದಕ್ಕೆ ಈಗಾಗಲೇ ೪,೦೦೦ ವರ್ಷಗಳು ಸಂದಿವೆ. ಮನುಷ್ಯನ ಈ ಆಶ್ಚರ್ಯಕರ ತಿಳಿವಳಿಕೆಗೆ ಏನು ಹೇಳಬೇಕು?

ಈ ಮೂಲಭೂತ ತತ್ವದ ನಂಬಿಕೆ ಮೇಲೆ ಸಮಗ್ರ ಹಿಂದುಗಳ ಐಕ್ಯಮತ್ಯವಿದೆ. ಪರಮಾತ್ಮನು ಎಲ್ಲಕ್ಕಿಂತಲೂ ಮೊದಲು ಪಂಚ ಮಹಾಭೂತಗಳನ್ನು ಸೃಷ್ಟಿಸಿದನು. ಮೊದಲನೆಯದಾಗಿ 'ಭೂಮಿ', ಎರಡನೆಯದು 'ಅಗ್ನಿ', ಮೂರನೆಯದು 'ಜಲ', ನಾಲ್ಕನೆಯದು 'ವಾಯು' ಮತ್ತು ಐದನೆಯದು 'ಆಕಾಶ'. ಇವುಗಳ ನಂತರ 'ಬ್ರಹ್ಮ'

ಎಂಬ ಹೆಸರಿನ ಪ್ರಜ್ಞಾವಂತ ಮನುಷ್ಯನನ್ನು ಹುಟ್ಟಿಸಿದನು ಮತ್ತು ಆತನಿಗೆ ಜಗತ್ತಿನ ಸೃಷ್ಟಿಯ ಕಾರಣನನ್ನಾಗಿ ಮಾಡಿದನು. ಸಾಮಾನ್ಯ ಜನರು 'ಆಸ್ಮಾನ್' ಎಂದರೆ 'ಆಕಾಶ' ಎಂದು ತಿಳಿಯುತ್ತಾರೆ. ಆದರೆ ವಿಶೇಷ ಹಿಂದುಗಳು ಈ ಮೂಲಭೂತ ತತ್ವವನ್ನು ಒಪ್ಪುವುದಿಲ್ಲ. ಜ್ಞಾನಿಗಳು ಆಕಾಶದಿಂದ ಬರುವ ವ್ಯಕ್ತಿಗಳನ್ನು ನಂಬಲಾರರು ಮತ್ತು ಯಾವುದು ವಾಯುವಿನ ಮೇಲ್ಭಾಗದಲ್ಲಿ ಕಂಡು ಬರುತ್ತದೆಯೋ ಅದಕ್ಕೆ ಕಾಲ್ಪನಿಕವಾಗಿ ಆಸ್ಮಾನ್ ಎನ್ನಲಾಗುತ್ತದೆ. ಆಕಾಶದಲ್ಲಿ ಕಂಡುಬರುವ ನಕ್ಷತ್ರಗಳ ಸತ್ಯಾಂಶವೇನೆಂದರೆ ಇವರು ಪುರಾತನ ಪಿತೃಗಳು, ಅವರು ಪರಮಾತ್ಮನನ್ನು ನಿಜವಾಗಿ ಪೂಜಿಸಿ ಅದರ ಪ್ರತಿಫಲವಾಗಿ ಬೆಳಗುವ ಅಂಗವನ್ನು ಪಡೆದಿದ್ದಾರೆ ಮತ್ತು ಇವರ ಗುಣಗಳು ಪರಮಾತ್ಮನ ಗುಣಗಳಾಗಿವೆ. ಈ ಪ್ರಜ್ವಲಿತ ದೇಹಿಗಳು ತಮ್ಮ ಇಚ್ಛೆಯಂತೆ ಆಕಾಶದಲ್ಲಿ ಹಾರಾಡುತ್ತಾರೆ. ಈ ಹಿರಿಯರಲ್ಲಿ ಉತ್ತಮವಾದ ಪ್ರಜ್ವಲಿತ ದೇಹವುಳ್ಳವರು ಹೆಚ್ಚಿನ ಸ್ಥಾನವನ್ನು ಪಡೆದು ಅತ್ಯಂತ ಮೇಲ್ಭಾಗದಲ್ಲಿರುತ್ತಾರೆ. ಹಿರಿದಾದ ನಕ್ಷತ್ರಗಳು ಭೂಮಿಯತ್ತ ಹಿಂತಿರುಗಲು ಇಚ್ಛಿಸುವುದಿಲ್ಲ, ಆದರೆ ಚಿಕ್ಕ ಪುಟ್ಟ ನಕ್ಷತ್ರಗಳ ರೂಪವನ್ನು ಧರಿಸಿದವರು ವಾಯುಮಂಡಲದ ಉನ್ನತ ಸ್ಥಾನದಲ್ಲಿ ಮೇಲ್ಭಾಗದಲ್ಲಿರದೆ, ತಮ್ಮ ಅರ್ಚನೆ ಹಾಗೂ ಆರಾಧನೆ ಪ್ರಕಾರ ಸ್ಥಾನ ಪಡೆದಿರುತ್ತಾರೆ ಹಾಗೂ ಈ ಪ್ರಜ್ವಲಿತ ದೇಹಿಗಳು ಭೂಮಿಯ ಮೇಲೆ ಪುನಃ ಮರಳಿ ಬರುತ್ತಾರೆ. ಇದೆಲ್ಲದರಿಂದ ತಿಳಿದು ಬರುವುದೇನೆಂದರೆ ಹಿಂದೂಗಳ ನಂಬಿಕೆಯ ಪ್ರಕಾರ ಭೂತವಾದ ಆಕಾಶವೆಂದರೆ ಆಸ್ಮಾನ್ ಅಲ್ಲ, ಬೇರೆ ಮತ್ತೇನೋ ಇದೆ, ಆ ಬಗ್ಗೆ ಇಲ್ಲಿ ವಿವರಿಸುವುದು ಬಹಳ ಸುದೀರ್ಘವಾಗುತ್ತದೆ.

ಮಾನವಕುಲದ ವಿಭಜನೆ : ಬ್ರಹ್ಮನು ಭಗವಂತನ ಆದೇಶದಂತೆ ಮನುಷ್ಯರನ್ನು ನಿರ್ಮಿಸಿದನು, ಮತ್ತು ಅವರನ್ನು ನಾಲ್ಕು ಪಂಗಡಗಳಲ್ಲಿ (ವರ್ಣ) ವಿಭಜಿಸಿದನು. ಮೊದಲನೆಯ ಪಂಗಡ 'ಬ್ರಾಹ್ಮಣ', ಎರಡನೆಯದು 'ಕ್ಷತ್ರಿಯ', ಮೂರನೆಯದು 'ವೈಶ್ಯ' ಮತ್ತು ನಾಲ್ಕನೆಯದು 'ಶೂದ್ರ'. ಬ್ರಾಹ್ಮಣರಿಗೆ ಭಗವದಾರಾಧನೆ, ಧಾರ್ಮಿಕ ವಿಧಿಗಳ ಮೇಲ್ವಿಚಾರಣೆ, ಪರಮಾತ್ಮನ ನಿಯಮಗಳ ರಕ್ಷಣೆಯ ಹೊಣೆಯನ್ನು ಒಪ್ಪಿಸಲಾಯಿತು, ಅವರನ್ನು ಜಗತ್ತಿನ ಆಧ್ಯಾತ್ಮಿಕ ಪಂಡಿತರನ್ನಾಗಿ ನಿಯಮಿಸಿದನು. ಎರಡನೆಯ ಪಂಗಡ ಅಂದರೆ ಕ್ಷತ್ರಿಯರಿಗೆ ಜಗತ್ತನ್ನಾಳುವ ರಾಜಕಾರಣ ಹಾಗೂ ಆಡಳಿತದ ಸೂತ್ರವನ್ನು ಒಪ್ಪಿಸಿದನು. ಮೂರನೆಯ ಪಂಗಡವಾದ ವೈಶ್ಯರಿಗೆ ಒಕ್ಕಲುತನ ಹಾಗೂ ಪಶುಪಾಲನೆ ಪೋಷಣೆ ಮತ್ತು ಇನ್ನಿತರ ಕಾರ್ಯಗಳನ್ನು ಒಪ್ಪಿಸಿದನು. ನಾಲ್ಕನೆಯ ಪಂಗಡವಾದ ಶೂದ್ರರಿಗೆ, ಮೇಲೆ ವಿವರಿಸಲಾದ ಪಂಗಡದವರ ಸೇವಕರನ್ನಾಗಿ ನಿಯಮಿಸಿದನು.

ಜಗತ್ತು ಮತ್ತು ಅದರ ಹಿಂದಿರುವ ಸೂಕ್ಷ್ಮ ದೃಷ್ಟಿಯ ಪ್ರಯೋಜನಕ್ಕಾಗಿ 'ಬ್ರಹ್ಮ'

ನು ಒಂದು ಗ್ರಂಥವನ್ನು ಬರೆದನು. ಅದಕ್ಕೆ 'ವೇದ' ಎನ್ನುತ್ತಾರೆ. ಈ ಗ್ರಂಥದಲ್ಲಿ ಬ್ರಹ್ಮನು ತನ್ನ ಬುದ್ಧಿಶಕ್ತಿ ಮತ್ತು ಅವತರಣಿಕೆಗಳ ಸಹಾಯದಿಂದ ವಿಧಿ-ವಿಧಾನಗಳ ನಿಯಮಗಳನ್ನು ಮಾಡಿದನು. ಈ ನಿಯಮಗಳನ್ನು ಅನುಸರಿಸುವುದರಿಂದ ಮನುಷ್ಯನು ಜಗತ್ತಿನ ಪ್ರತಿಯೊಂದು ವಸ್ತುವಿನೊಂದಿಗೆ ಸಂಬಂಧವಿಟ್ಟುಕೊಂಡಿದ್ದರೂ ಪರಮಾತ್ಮನನ್ನು ಮರೆಯಲು ಅಸಾಧ್ಯ. ಏಕೆಂದರೆ ಪ್ರತಿಯೊಂದು ಪದಾರ್ಥದಲ್ಲಿ ಪರಮಾತ್ಮನ ಬೆಳಕು ಕಂಡುಬರುತ್ತದೆ ಹಾಗೂ ಈ ವಿಧದ ನಿಯಮಗಳು ಮನುಕುಲದ ಪ್ರತಿಯೊಂದು ಪಂಗಡ ಹಾಗೂ ಜನಾಂಗದ ವಿಷಯಗಳ ಬಗ್ಗೆ ಸಮರ್ಪಕವಾಗಿ ಹೇಳಲಾಗಿದೆ. ಈ ಎಲ್ಲಾ ಕಟ್ಟಳೆ ಹಾಗೂ ನಿಯಮಗಳ ಪೂರ್ಣ ವಿವರವು ವೇದಗಳಲ್ಲಿ ಬರೆಯಲಾಗಿದೆ. ಬ್ರಹ್ಮನು ಈ ಗ್ರಂಥಕ್ಕೆ ಭಗವಂತನ ನುಡಿ ಎಂದು ಪ್ರಚುರ ಪಡಿಸಿದನು, ಏಕೆಂದರೆ ಮನುಷ್ಯರು ಈ ಗ್ರಂಥದ ಪಾಠಗಳನ್ನು ಆಚರಣೆಯಲ್ಲಿ ತಂದು ಯಾವ ಜನರು ಮುಂದೆ ಇದ್ದಾರೋ ಅವರು ತಮ್ಮ ಸ್ಥಾನದಿಂದ ಮುಂದೆ ನಡೆಯದೆ ಮತ್ತು ಯಾರು ಹಿಂದೆ ಇದ್ದಾರೋ ಅವರು ತಮ್ಮ ಸ್ವಸ್ಥಾನ ಬಿಡದೆ ಇರಬೇಕು (ಅಂದರೆ ಯಾವ ಕಾರ್ಯಗಳನ್ನು ಯಾರಿಗೆ ಒಪ್ಪಿಸಲಾಗಿದೆಯೋ ಅವರು ಅವುಗಳನ್ನು ನಿರ್ವಹಿಸಬೇಕು). ಹೀಗೆ ಎಲ್ಲರೂ ಸರಿಯಾದ ಮಾರ್ಗದಲ್ಲಿ ನಡೆದು 'ವೇದ'ಗಳಿಂದ ಪ್ರಯೋಜನ ಪಡೆದು ಅವುಗಳನ್ನು ಅನುಸರಿಸಬೇಕು. ವೇದಗಳ ಶ್ಲೋಕಗಳ ಸಂಖ್ಯೆ ಒಂದು ಲಕ್ಷ ಇದೆ. ಒಂದು ಶ್ಲೋಕವು ನಾಲ್ಕು 'ಚರಣ'ಗಳಿಂದ ಕೂಡಿರುತ್ತವೆ ಮತ್ತು ಒಂದು 'ಚರಣ'ವು ೨೬ ಅಕ್ಷರಗಳಿಂದ ಕೂಡಿದ್ದು, ಒಂದು ಅಕ್ಷರ ಹೆಚ್ಚು, ಒಂದು ಅಕ್ಷರ ಕಡಮೆ ಇರಬಾರದು. 'ಅಕ್ಷರ' ಒಂದು ಇಲ್ಲವೆ ಎರಡು ಮಾತ್ರೆಗಳನ್ನೊಳಗೊಂಡಿರುತ್ತದೆ, ಎರಡು ಮಾತ್ರೆಯ ಅಕ್ಷರದಲ್ಲಿ ಎರಡನೆಯದು ಒಂದನೆಯದರಲ್ಲಿ ಸೇರಹೋಗುತ್ತದೆ.

ಹಿಂದುಸ್ತಾನದ ಬುದ್ಧಿವಂತ ಹಾಗೂ ಮೇಧಾವಿಗಳು ಈ ವಿಷಯದ ಬಗ್ಗೆ ಒಮ್ಮತ ವ್ಯಕ್ತಪಡಿಸುತ್ತಾರೆ. ವೇದದಂತಹ ವಿಚಿತ್ರ ಗ್ರಂಥವನ್ನು ಬರೆದ ಬ್ರಹ್ಮನು ಒಂದು ನೂರು ವರ್ಷ ಆಯುಷ್ಯ ಪಡೆದಿದ್ದಾನೆ. ಆದರೆ ಬ್ರಹ್ಮನ ದಿನವು ಈಗಿನ ದಿನಮಾನದ ನೂರು ವರ್ಷಕ್ಕೆ ಸಮವಲ್ಲ. ಬ್ರಹ್ಮನ ಆಯುಷ್ಯದ ಪ್ರತಿ ವರ್ಷವು ಮೂರು ನೂರಾ ಅರವತ್ತು ದಿನದಿಂದ ಕೂಡಿರುವುದು ಸತ್ಯವೆಂದು ತಿಳಿಯಲಾಗಿದೆ. ಆದರೆ ಯಾವ ಕಾಲಾವಧಿಯಲ್ಲಿ ಬ್ರಹ್ಮನು ಇದ್ದನೋ ಆ ಕಾಲಾವಧಿಯ ದಿನವು ಈಗಿನ ೪,೦೦೦ ವರ್ಷಗಳ ಸಮನಾಗಿದೆ ಮತ್ತು ಆ ಕಾಲಾವಧಿಯ ಪ್ರತಿ ರಾತ್ರಿಯು ಅಷ್ಟೇ ದೊಡ್ಡದಾಗಿರುತ್ತದೆ. ಹಿಂದುಸ್ತಾನದ ಪಂಡಿತರು ಈ ವಿಚಾರವನ್ನು ಒಪ್ಪಿ ಆರಂಭದಿಂದಲೂ ಇಂದಿನವರೆಗೆ ಎಷ್ಟೋ ಸಹಸ್ರ 'ಬ್ರಹ್ಮ' ಹುಟ್ಟಿದರು ಮತ್ತು ಪರಮಾತ್ಮನ ಆದೇಶದಂತೆ ದೃಷ್ಟಿಗೆ ಕಾಣದಾದರು ಎಂದು ನಂಬುತ್ತಾರೆ. ನಾನು ಕೆಲವು ಬ್ರಾಹ್ಮಣರ ಪಂಗಡದಿಂದ ಕೇಳಿ ತಿಳಿದುದೇನೆಂದರೆ ಈಗಿನ ಕಾಲಾವಧಿಯಲ್ಲಿ ಇರುವ ಬ್ರಹ್ಮನ

ಕ್ರಮ ಸಂಖ್ಯೆಯು ೧೦೦೧ ಇದೆ. ಆತನ ವಯಸ್ಸು ೫೦ ವರ್ಷ ಮತ್ತು ಅರ್ಧ ದಿನ ಕಳೆದು ಹೋಗಿದ್ದು ಉಳಿದ ಅರ್ಧ ದಿನವು ಆರಂಭವಾಗಿದೆ.

ಕೌರವ ಮತ್ತು ಪಾಂಡವರ ಸ್ಥಿತಿ

ಹಿಂದುಸ್ತಾನದ ಇತಿಹಾಸಕಾರರ ಹೇಳಿಕೆಯಂತೆ 'ದ್ವಾಪರಯುಗ'ದ ಅರ್ಧದ ಕೊನೆಯಲ್ಲಿ ಹಸ್ತಿನಾಪುರದಲ್ಲಿ ಒಬ್ಬ ರಾಜನಿದ್ದನು. ಆತನು ಜಾತಿಯಿಂದ ಕ್ಷತ್ರಿಯನಾಗಿದ್ದು, ಆತನ ಹೆಸರು 'ಭರತ'. ಆತನ ಸಂತತಿ ಏಳು ತಲೆಮಾರುಗಳವರೆಗೆ ರಾಜ್ಯಭಾರ ನಡೆಸಿತು. ಎಂಟನೆಯ ಸಂತತಿಯಾಗಿ ಈ ಪರಿವಾರದಲ್ಲಿ ಒಬ್ಬ ಬಾಲಕ ಜನಿಸಿದನು, ಆತನು ದೊಡ್ಡವನಾದ ನಂತರ ರಾಜಾ ಕೌರವನೆಂದು ಖ್ಯಾತಿ ಪಡೆದನು. ಹಿಂದುಸ್ತಾನದ ಖ್ಯಾತಿ ಪಡೆದ ಪಟ್ಟಣವು ಕೋರ್ ಖೇತ (ಥಾನಸೀರ್) ಎಂದಿದ್ದು ಅದೇ ರಾಜನ ಹೆಸರಿನಿಂದಲೇ ಸ್ಥಾಪನೆಗೊಂಡು ಜನವಸತಿ ಪಡೆದಿತ್ತು. ಆತನ ಸಂತಾನವು ಕೌರವರ ಹೆಸರಿನಿಂದ ಖ್ಯಾತಿ ಪಡೆಯಿತು. ರಾಜನ ಆರನೆಯ ಸಂತತಿಯಲ್ಲಿ ಒಬ್ಬ ಬಾಲಕನು ಜನಿಸಿದನು. ಆತನ ಹೆಸರು ಚರ್ತುಭುಜ. ಆತನು ಉತ್ತಮ ಸ್ಥಾನಮಾನ ಪಡೆದ ರಾಜನಾಗಿದ್ದನು. ಚತುರ್ಭುಜನಿಗೆ ಇಬ್ಬರು ಮಕ್ಕಳು ಹುಟ್ಟಿದರು. ಒಬ್ಬನ ಹೆಸರು ಧೃತರಾಷ್ಟ್ರ, ಇನ್ನೊಬ್ಬ ಹೆಸರು ಪಾಂಡು. ಧೃತರಾಷ್ಟ್ರನು ಹಿರಿಯ ಮಗನಾಗಿದ್ದು, ತಂದೆಯ ಸ್ಥಾನಮಾನ ಪಡೆಯುವ ಹಕ್ಕುದಾರನಾಗಿದ್ದನು. ಆದರೆ ಧೃತರಾಷ್ಟ್ರನು ಕುರುಡನಾದುದರಿಂದ ರಾಜ್ಯಭಾರದ ಹೊಣೆ ನಿರ್ವಹಿಸಲಾಗಲಿಲ್ಲ. ಅದಕ್ಕಾಗಿ ಚರ್ತುಭುಜನ ನಂತರ ಆತನ ರಾಜ್ಯಕ್ಕೆ ಕಿರಿಯ ಮಗ ಪಾಂಡುವಿಗೆ, ರಾಜ್ಯಭಾರದ ಹೊಣೆಯು ಬಹಳ ವೈಭವದಿಂದ ದೊರೆಯಿತು. ಆತನ ಸಂತಾನವನ್ನು ಪಾಂಡವರೆಂದು ಕರೆಯಲಾಯಿತು. ಪಾಂಡು ರಾಜನಿಗೆ ಐದು ಜನ ಮಕ್ಕಳು. ಅವರ ಹೆಸರು ಯುಧಿಷ್ಠರ, ಭೀಮಸೇನ, ಅರ್ಜುನ, ನಕುಲ ಮತ್ತು ಸಹದೇವ. ಮೊದಲು ಹೆಸರಿಸಿದ ಮೂರು ಮಕ್ಕಳಿಗೆ ತಾಯಿ ರಾಣಿ ಕುಂತಿ, ಕೊನೆಯ ಎರಡು ಮಕ್ಕಳು ರಾಣಿ–ಮಾದ್ರಿಗೆ ಹುಟ್ಟಿದರು. ಧೃತರಾಷ್ಟ್ರನಿಗೆ ೧೦೧ ಜನ ಮಕ್ಕಳಿದ್ದರು. ಇವರಲ್ಲಿ ನೂರು ಮಕ್ಕಳು ಕಂಧ್ಹಾರ ರಾಜನ ಮಗಳಾದ ಕಂದ್ಹಾರಿ (ಗಾಂಧಾರಿ)ಗೆ ಹುಟ್ಟಿದರು. ಇವರಲ್ಲಿ ದೊಡ್ಡವನ ಹೆಸರು ದುರ್ಯೋಧನ, ಈತನ ಮಗ ಯುಯುತ್ಸು, ಈತನು ಒಬ್ಬ ವ್ಯಾಪಾರಿ ಮಗಳಿಗೆ ಹುಟ್ಟಿದವನಾಗಿದ್ದನು. ಧೃತರಾಷ್ಟ್ರನ ೧೦೧ ಮಕ್ಕಳು ಕೌರವರೆಂದು ಖ್ಯಾತಿ ಪಡೆದರು.

ಪಾಂಡು ರಾಜನು ಮರಣ ಹೊಂದಿದ ನಂತರ ರಾಜ್ಯಭಾರವು ಧೃತರಾಷ್ಟ್ರನ ಕೈಸೇರಿತು. ನಿಜವಾಗಿ ಆ ಹೊಣೆಯು ಧೃತರಾಷ್ಟ್ರನದೇ ಆಗಿತ್ತು. ಧೃತರಾಷ್ಟ್ರನು ಕುರುಡನಾದ ಕಾರಣ, ರಾಜ್ಯವನ್ನು ಶತ್ರುಗಳಿಂದ ರಕ್ಷಿಸುವುದಕ್ಕಾಗಿ ಹಾಗೂ ವಿರೋಧಿಗಳು ತಲೆ ಎತ್ತದಂತೆ ಮಾಡಿ ರಾಜ್ಯವನ್ನು ಭಯರಹಿತವಾಗಿ ಕಾಪಾಡುವುದಕ್ಕಾಗಿ, ಆತನ

ಹಿರಿಯ ಮಗ ದುರ್ಯೋಧನನು ತಂದೆಯ ಹೆಸರಿನಲ್ಲಿ ರಾಜ್ಯಭಾರದ ಹೊಣೆ ಹೊತ್ತನು. ಆದರೆ, ದುರ್ಯೋಧನನು ಪಾಂಡವರ ಬಗ್ಗೆ ಚಿಂತಿತನಾಗಿದ್ದ. ಏಕೆಂದರೆ ಅವರು ಸಹ ರಾಜ್ಯದ ವಾರಸುದಾರರಾಗಿದ್ದರು. ಅವರನ್ನು ನಿರ್ನಾಮ ಮಾಡುವ ಯೋಜನೆಗಳ ಬಗ್ಗೆ ಚಿಂತಿಸುತ್ತಿದ್ದನು. ಧೃತರಾಷ್ಟ್ರನು ಪಾಂಡವರ ಬೇಡಿಕೆ ಮತ್ತು ವೈಷಮ್ಯದ ಬಗ್ಗೆ ತಿಳಿದು ಅರಮನೆ ಬಿಟ್ಟು ಪಟ್ಟಣದಿಂದ ಹೊರಟು ಹೋಗಲು ಅವರಿಗೆ ಆದೇಶಿಸಿದನು. ಪಾಂಡವರು ದೂರವಿದ್ದರೆ ಯುದ್ಧಾಗ್ನಿಯು ಜ್ವಲಂತವಾಗದೆಂಬ ಉದ್ದೇಶ ಧೃತರಾಷ್ಟ್ರನಿಗಿತ್ತು. ಧೃತರಾಷ್ಟ್ರನ ಈ ಆದೇಶ ಪಾಲನೆಯಾಗಿ, ಪಾಂಡವರಿಗಾಗಿ ಮನೆ ಕಟ್ಟುವ ಕಾರ್ಯ ಆರಂಭವಾದ ನಂತರ, ದುರ್ಯೋಧನನು ಕಟ್ಟಡ ನಿರ್ಮಿಸುವವರಿಗೆ ಮನೆಯನ್ನು ಕೆಂಪು ಅರಗಿನಿಂದ ಕಟ್ಟಲು ರಹಸ್ಯವಾಗಿ ಸೂಚನೆ ನೀಡಿದನು. ಒಂದು ಬೆಂಕಿಕಿಡಿಯು ತಗಲಿದರೆ ಅಗ್ನಿಯು ಭುಗಿಲೆದ್ದು ಶತ್ರುಗಳು ಬದುಕದೆ ನಿರ್ನಾಮವಾಗುವ ಯೋಜನೆ ಮಾಡಿದನು.

ಪಾಂಡುವರಿಗೆ ಈ ಕುತಂತ್ರದ ಬಗ್ಗೆ ಮಾಹಿತಿ ದೊರೆತು, ಅವರು ಆ ಮನೆಯಲ್ಲಿ ಬಹಳ ಜಾಗರೂಕತೆಯಿಂದ ಇದ್ದರು. ಒಂದು ರಾತ್ರಿ ಸಮಯ ಸಾಧಿಸಿ, ಸ್ವತಃ ಪಾಂಡವರೇ ಅರಮನೆಗೆ ಬೆಂಕಿ ಹಚ್ಚಿ, ತಮ್ಮ ತಾಯಿಯೊಂದಿಗೆ ಅರಮನೆಯಿಂದ ಹೊರಬಿದ್ದು ಅರಣ್ಯದೆಡೆಗೆ ನಡೆದರು.

ಭೀಲ ಎಂಬ ಒಬ್ಬ ಸ್ತ್ರೀಗೆ ಆಕೆಯ ಐದು ಮಕ್ಕಳೊಂದಿಗೆ ಸಮಯ ಸಾಧಿಸಿ ಮನೆಗೆ ಬೆಂಕಿಯನ್ನು ಹಚ್ಚುವ ಕೆಲಸವನ್ನು ದುರ್ಯೋಧನನು ಮಾಡಿಸಿದನು. ಕಾರಣಾಂತರದಿಂದ ಅವಳು ಆಗ ಮನೆಯಲ್ಲಿರಲಿಲ್ಲ ಈ ರೀತಿ ಆಕೆಯ ಐದು ಮಕ್ಕಳು ಸುಟ್ಟು ಬೂದಿಯಾಗಿದ್ದರು.

ದುರ್ಯೋಧನನ ಗುಪ್ತಚಾರರು ಆಕೆಯ ಐದು ಮಕ್ಕಳು ಅಗ್ನಿಯಲ್ಲಿ ಸುಟ್ಟು ಹೋದುದನ್ನು ನೋಡಿ ಪಾಂಡವರು ತಾಯಿಯೊಂದಿಗೆ ಸತ್ತು ಹೋದರೆಂದು ತಿಳಿದು ಈ ವಿಷಯವನ್ನು ದುರ್ಯೋಧನನಿಗೂ ತಿಳಿಸಿ ಶತ್ರುಗಳು ನಾಶವಾದರೆಂದು ಹೇಳಿದರು. ದುರ್ಯೋಧನನು ವಿಷಯ ತಿಳಿದು ಬಹಳ ಸಂತೋಷ ಪಟ್ಟನು ಮತ್ತು ಶತ್ರುಗಳ ಕಾಟದಿಂದ ಸುರಕ್ಷಿತವಾದೆನೆಂದು ಭಾವಿಸಿದನು. ಈ ಘಟನೆಯನ್ನು ಮಹಾಭಾರತದಲ್ಲಿ ಬರೆಯಲಾಗಿದೆ. ಪಾಂಡವರು ತಮ್ಮ ವೇಷ ಮತ್ತು ಹೆಸರುಗಳನ್ನು ಬದಲಾಯಿಸಿ ಅರಣ್ಯದಿಂದ ಪಟ್ಟಣದ ಕಡೆಗೆ ಬಂದರು ಮತ್ತು *ಕಂಪಲಾ* (ಈ ಸ್ಥಳವು ಹಿಂದುಸ್ತಾನದ ಫರ್ಖಾಬಾದ್ ಜಿಲ್ಲಾ ತಹಸೀಲ್ ನಲ್ಲಿದ್ದು ಅದರ ಹೆಸರು ಈಗ ಕಂಪಲ ಎಂದು ಇದೆ)ಗೆ ಬಂದು ನೆಲೆಸಿದರು ಮತ್ತು ಅಲ್ಲಿಯ ರಾಜನ ಮಗಳಾದ ದ್ರೌಪದಿಯೊಂದಿಗೆ ಎಲ್ಲ ಸೋದರರು ಮದುವೆಯಾದರು. ಅಂದರೆ ಐದು ಜನರು ದ್ರೌಪದಿಯ ಪತಿಗಳಾದರು. ಈ ಜಂಟಿ ಮದುವೆಯು ಪರಸ್ಪರ ಪ್ರೀತಿ ಮತ್ತು

ವಿಶ್ವಾಸದಿಂದ ಜರುಗಿತ್ತು. ದ್ರೌಪದಿಯೊಡನೆ ಸಹೋದರರು ೭೨, ೭೨ ದಿನದಂತೆ ಇರುವ ನಿಯಮವಿಟ್ಟುಕೊಂಡಿದ್ದರು. ಈ ತರಹದ ಮದುವೆಯು ಹಿಂದುಸ್ತಾನದ ಕಾನೂನಿನ ಪ್ರಕಾರ ಸೂಕ್ತವಾಗಿರದ ಕಾರಣ ಬಹಳಷ್ಟು ಹಿಂದು ವಿದ್ವಾಂಸರು ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಪಾಂಡವರ ಅದೃಷ್ಟದಲ್ಲಿ ಜನಮನ್ನಣೆ ಇತ್ತು ಆದ ಕಾರಣ ಇವರ ಪ್ರಗತಿ ಮತ್ತು ಸ್ಥಾನಮಾನ ಬೆಳೆಯಿತು. ಈ ವಿಷಯ ತಿಳಿದು ದುರ್ಯೋಧನನು ಸತ್ಯಾಂಶವನ್ನು ತಿಳಿಯಲು ನಿಯುಕ್ತಿಸಿದ ಗೂಢಾಚಾರ ಜನರು ಕೊನೆಗೂ ಸತ್ಯವನ್ನು ಅರಿತುಕೊಂಡರು. ಪಾಂಡವರು ಸುಟ್ಟುಹೋದರೆಂಬ ಸಮಾಚಾರವು ನಿಜವಾಗದೆ ಅವರು ಜೀವಂತವಾಗಿ ಉಳಿದರು. ಈಗ ಕೌರವರು ಮತ್ತೊಂದು ಸಂಚು ರಚಿಸಿ ತಮ್ಮ ಚಿಕ್ಕಪ್ಪನ ಅಣ್ಣ-ತಮ್ಮಂದಿರೊಂದಿಗೆ ಸಂಬಂಧ ಸುಧಾರಿಸಲು ಪ್ರಯತ್ನಿಸಿ ಪ್ರೇಮದ ಹಸ್ತವನ್ನು ನೀಡಿದರು. ಅವರಿಗೆ ಹಸ್ತಿನಾಪರಕ್ಕೆ ಬರಲು ಆಹ್ವಾನಿಸಿದರು. ಪಾಂಡವರು ಇವರ ಆಹ್ವಾನವನ್ನು ಸ್ವೀಕರಿಸಿ ಹಸ್ತಿನಾಪುರಕ್ಕೆ ಬಂದರು. ಅವರನ್ನು ದುರ್ಯೋಧನನು ಅತ್ಯಂತ ವೈಭವದಿಂದ ಸ್ವಾಗತಿಸಿದನು. ಇಬ್ಬರ ಮಧ್ಯೆ ರಾಜ್ಯದ ವಿಭಜನೆಯ ಬಗ್ಗೆ ತೀರ್ಮಾನವಾಯಿತು. ಇಂದು ಹಳೆಯ ದಿಲ್ಲಿಯೆಂದು ಪ್ರತೀತಿ ಪಡೆದ ಸ್ಥಳ ಇಂದ್ರಪ್ರಸ್ಥವನ್ನು ಅರ್ಧ ರಾಜ್ಯದೊಂದಿಗೆ ಪಾಂಡವರಿಗೆ ಕೊಡುವುದು ಮತ್ತು ಹಸ್ತಿನಾಪುರ ಮತ್ತು ಉಳಿದ ಅರ್ಧ ರಾಜ್ಯವನ್ನು ಕೌರವರ ಸ್ವಾಧೀನಕ್ಕೆ ಕೊಡುವುದಾಗಿ ತೀರ್ಮಾನಿಸಲಾಯಿತು. ಈ ವ್ಯವಸ್ಥೆಯ ನಂತರ ರಾಜ್ಯದ ಅಧಿಕಾರಿಗಳು ಪಾಂಡವರ ಉದಾತ್ತ ಗುಣಗಳನ್ನು ಕಂಡು ಅವರ ಪ್ರಭುತ್ವವನ್ನು ಸ್ವೀಕರಿಸಿದರು. ಇದರಿಂದ ಕೌರವರು ಬಹಿರಂಗವಾಗಿ ಸುಮ್ಮನಾದರು, ಆದರೆ ಅಂತರಂಗದಲ್ಲಿ ಪಾಂಡವರನ್ನು ನಾಶಮಾಡುವ ಯೋಜನೆ ಮಾಡುತ್ತಿದ್ದರು.

ರಾಜಸೂಯ ಯಜ್ಞ:

ಈ ಮಧ್ಯೆ ಪಾಂಡವ ಹಿರಿಯ ಪುತ್ರನಾದ ಯುಧಿಷ್ಠಿರನು ಧೈರ್ಯಮಾಡಿ ರಾಜಸೂಯ ಯಾಗವನ್ನು ನೆರವೇರಿಸಲು ಸಂಕಲ್ಪ ಮಾಡಿದನು. ಈ ಯಜ್ಞದಲ್ಲಿ ಯಜ್ಞಕುಂಡವನ್ನು ನಿರ್ಮಿಸಿ ಅದರಲ್ಲಿ ವಿಧವಿಧದ ಹಣ್ಣು ಹಂಪಲುಗಳು ಹಾಗೂ ಧನ-ಧಾನ್ಯಗಳನ್ನು ಹಾಕಲಾಗುತ್ತದೆ, ದಾನ ಧರ್ಮವನ್ನು ಮಾಡಿ ಪರಮಾತ್ಮನ ಅನುಗ್ರಹ ಪಡೆಯಲು ಪ್ರಯತ್ನಿಸಲಾಗುತ್ತದೆ. ಈ ಯಜ್ಞದ ಮೂಲ ವೈಶಿಷ್ಟ್ಯವೇನೆಂದರೆ ಪ್ರಪಂಚದ ಸಕಲ ರಾಜರು ಯಜ್ಞಕರ್ತನ ಅಧೀನರಾಗಿ ಇರಬೇಕು ಮತ್ತು ಈ ಯಜ್ಞಕ್ಕೆ ಸಂಬಂಧ ಪಟ್ಟ ಎಲ್ಲಾ ವಿಧಾಯಕ ಕರ್ಮಗಳನ್ನು ಯಜ್ಞ ಮಾಡುವ ಅರಸನು ತಮ್ಮ ಕೈಯಾರೆ ಮಾಡತಕ್ಕದ್ದು. ಇದನ್ನು ಪೂರ್ಣಗೊಳಿಸಲು ಯುಧಿಷ್ಠಿರನು ತನ್ನ ನಾಲ್ಕು ತಮ್ಮಂದಿರನ್ನು ಸಮಗ್ರ ಪ್ರಪಂಚದ ಅರಸರನ್ನು ಗೆಲ್ಲಲು ಕಳುಹಿಸಿದನು.

ಪರಮಾತ್ಮನ ಅನುಗ್ರಹವು ಪಾಂಡವರ ಮೇಲೆ ಇದ್ದ ಕಾರಣ ಪಾಂಡವರು ಕನಸು ನನಸಾಯಿತು. ನಾಲ್ಕು ಜನ ಸಹೋದರರು ಪರಮಾತ್ಮನ ಅನುಗ್ರಹದ ಕೃಪೆಯಿಂದ ಸಮಗ್ರ ಪ್ರಪಂಚದ ರಾಜರನ್ನು ಗೆದ್ದರು ಮತ್ತು ಅವರೆಲ್ಲರೂ ಇವರ ಅಧೀನತೆಯನ್ನು ಸ್ವೀಕರಿಸಿದರು. ಅವರಲ್ಲಿ, ಖತಾ, ರೂಂ, ಹಬೀಷ, ಅರಬ್, ಅಜಮ್, ತುರ್ಕಿಸ್ಥಾನ ಮತ್ತು ಮಾವರ-ಉಲ್ಜ (ಮಹಾಭಾರತದಲ್ಲಿ ಈ ದೇಶಗಳ ಹೆಸರುಗಳು ಎಲ್ಲೂ ಬಂದಿಲ್ಲಾ. ಖ್ಯಾತಿ ಪಡೆದ ಸತ್ಯಾನ್ವೇಷಿಯಾದ ಬರ್ಗಸನ ವಿಚಾರದಲ್ಲಿ ಈ ಹೆಸರುಗಳು ಮುಸಲ್ಮಾನರ ಆಡಳಿತಾವಧಿಯಲ್ಲಿ ರೂಢಿಗತವಾಗಿ ಸೇರಿಲ್ಪಟ್ಟಿವೆ.) ಮತ್ತಿತರ ಅತಿ ಪ್ರಖ್ಯಾತ ರಾಜರು ಕಪ್ಪ-ಕಾಣಿಕೆಗಳನ್ನು ಅರ್ಪಿಸಲು ಇಂದ್ರಪ್ರಸ್ಥಕ್ಕೆ ಬಂದರು. ರಾಜಸೂಯ ಯಾಗವನ್ನು ಅತಿ ವೈಭವ ಹಾಗೂ ವಿಜೃಂಭಣೆಯಿಂದ ನೆರವೇರಿಸಲಾಯಿತು.

ದುರ್ಯೋಧನನು ಪಾಂಡವರ ಉನ್ನತಿ, ಶ್ರೀಮಂತಿಕೆ ಮತ್ತು ಪ್ರಭಾವಗಳನ್ನು ಕಂಡು ಮನಸ್ಸಿನಲ್ಲಿಯೇ ಅಸೂಯೆ ಪಟ್ಟನು. ತನ್ನ ರಾಜ್ಯವನ್ನು ಸಹ ವಿಸ್ತರಿಸುವ ವಿಚಾರ ಮಾಡುತ್ತಿದ್ದನು ಮತ್ತು ಆಗಾಗ ಅವರನ್ನು ನಿರ್ನಾಮ ಮಾಡುವ ಯೋಜನೆಗಳನ್ನು ಮನಸ್ಸಿನಲ್ಲಿಯೇ ಮೆಲಕುಹಾಕಿದನು. ಈ ಬಗ್ಗೆ ತರತರದ ವಿಚಾರಗಳನ್ನು ಮಾಡುತ್ತ ಕುತಂತ್ರಿ ಹಾಗೂ ಕುಹಕಿಗಳ ಸಲಹೆಯನ್ನು ಪಡೆಯಲು ಆರಂಭಿಸಿದನು. ಆ ಕಾಲದಲ್ಲಿ ಜೂಜಾಟವು ಸಾಮಾನ್ಯವಾಗಿತ್ತು. ಚಾಣಾಕ್ಷರಾದ ಆಸ್ಥಾನದ ಸಭಿಕರು ದುರ್ಯೋಧನನಿಗೆ ಜೂಜಾಟದಲ್ಲಿ ಕೌರವರ ಅದೃಷ್ಟವನ್ನು ಬದಲಿಸಲು ಸೂಚಿಸಿ, ವಿಶಿಷ್ಟವಾದ ಪಗಡೆ ಆಟವಾಡಲು ಪ್ರೇರೇಪಿಸಿದರು. ಈ ಉದ್ದೇಶಕ್ಕಾಗಿ ಪಂದ್ಯದಲ್ಲಿ, ಪ್ರತಿ ಎದುರಾಳಿ ಆಟಗಾರರ ವಿರುದ್ಧ ಬೀಳುವಂತೆ ವಿಶಿಷ್ಟವಾದ ಪಗಡೆಗಳನ್ನು ತಯಾರಿಸಲಾಯಿತು. ದುರ್ಯೋಧನನಿಗೆ ಈ ಸಲಹೆಯು ಸಂತೋಷ ತಂದಿತು. ಈ ತರಹದ ವಿಶಿಷ್ಟ ಪಗಡೆಗಳಿಂದ ಯುಧಿಷ್ಠಿರ ಮತ್ತು ಆತನ ಸಹೋದರರೊಂದಿಗೆ ಪಗಡೆಯಾಡಲು ನಿಶ್ಚಯಿಸಿದನು. ಈ ಎಲ್ಲಾ ಸಿದ್ಧತೆಗಳ ನಂತರ, ಅತಿ ವಿನಯದಿಂದ ಯುಧಿಷ್ಠಿರ ಹಾಗೂ ಸಹೋದರರನ್ನು ಹಸ್ತಿನಾಪುರಕ್ಕೆ ಬರುವಂತೆ ಆಹ್ವಾನಿಸಿದನು.

ಸತ್ಯವಂತನಾದ ರಾಜ ಯುಧಿಷ್ಠಿರನು ಇದರ ಹಿಂದಿರುವ ಕಪಟವನ್ನರಿಯದೆ ಹಸ್ತಿನಾಪುರಕ್ಕೆ ಬಂದ ನಂತರ ದುರ್ಯೋಧನನು ಗೌರವದ ರಾಜ್ಯೋಚಿತ ಸ್ವಾಗತವನ್ನು ಕೋರಿ ಬಿಡುವಿನ ಸಮಯದಲ್ಲಿ ಕಾಲಹರಣ ಮಾಡಲು ಜೂಜಾಡಲು ಕರೆದನು. ಪಾಂಡವರಿಗೆ ದುರ್ಯೋಧನನ ಕುತಂತ್ರದ ಅರಿವಿರಲಿಲ್ಲ. ಅವರು ಹಿಂದೆ ಮುಂದೆ ಯೋಚಿಸದೆ ಜೂಜಾಡಲು ಸಿದ್ಧರಾದರು. ದುರ್ಯೋಧನನು ತನ್ನ ವಿಶಿಷ್ಟವಾದ ಪಗಡೆ ಕಾಯಿಗಳನ್ನು ತೆಗೆದು, ಪಗಡೆಯಾಟವನ್ನು ಆಡಲಾರಂಭಿಸಿದನು. ಎರಡು, ನಾಲ್ಕು ಬಾರಿ ಕವಡೆ ಹಾಕುವುದರಲ್ಲಿಯೇ ದುರ್ಯೋಧನನು ಪಾಂಡವರ ಸಮಸ್ತ

ರಾಜ್ಯ ಹಾಗೂ ಆಸ್ತಿ–ಪಾಸ್ತಿಗಳ ಒಡೆಯನಾಗಿಬಿಟ್ಟನು. ಇಷ್ಟಕ್ಕೆ ಸುಮ್ಮನಿರದೆ ದುರ್ಯೋಧನನು ಪಂದ್ಯವನ್ನೊಡ್ಡಿ ಒಂದು ವೇಳೆ ಪಾಂಡವರು ಗೆದ್ದುದಾದರೆ ಸೋತಿದ್ದ ಸರ್ವಸ್ವ ರಾಜ್ಯ ಮತ್ತು ಆಸ್ತಿ–ಪಾಸ್ತಿ ಹಿಂತಿರುಗಿಸುವುದಾಗಿ ಹೇಳಿದನು. ಸೋತರೆ, ನಗರವನ್ನು ಬಿಟ್ಟು ಹನ್ನೆರಡು ವರ್ಷಗಳ ಕಾಲ ಅರಣ್ಯದ ಕಡೆಗೆ ಹೋಗತಕ್ಕದ್ದು ಮತ್ತು ಅರಣ್ಯದಲ್ಲಿ ವನ್ಯ ಮೃಗಗಳೊಂದಿಗೆ ವಾಸಿಸತಕ್ಕದ್ದು, ನಗರ ತೊರೆದ ಅವಧಿಯು ಮುಗಿದನಂತರ ಮರಳಿ ಬಂದು ಅಲ್ಲಿ ಅಜ್ಞಾತವಾಸವನ್ನು (ಅವರು ಯಾರೆಂಬುದು ಯಾರಿಗೂ ತಿಳಿಯದಂತೆ ಇರುವುದು) ಕಳೆಯತಕ್ಕದ್ದು. ಒಂದು ವೇಳೆ ಈ ರಹಸ್ಯವು ಬಯಲಾದಲ್ಲಿ ಪುನಃ ಹನ್ನೆರಡು ವರ್ಷ ವನವಾಸ ಅನುಭವಿಸತಕ್ಕದ್ದು.

ದುರದೃಷ್ಟವಶಾತ್ ಪಾಂಡವರು ಕೊನೆಯ ಆಟವನ್ನು ಸಹ ಸೋತರು. ಷರತ್ತಿನ ಪ್ರಕಾರ ನಗರವನ್ನು ತೊರೆದು ಹನ್ನೆರಡು ವರ್ಷ ವನವಾಸದಲ್ಲಿ ಕಳೆದರು.

ವನವಾಸದ ಹನ್ನೆರಡು ವರ್ಷ ಪೂರ್ತಿಯಾದ ಮೇಲೆ ಪಾಂಡವರು ದಕ್ಷಿಣ ಪ್ರಾಂತದ ಹತ್ತಿರ ಬಲಭಾಗದಲ್ಲಿ ಬಂದಿದ್ದು ಅಜ್ಞಾತರಾಗಿ ವಾಸ ಮಾಡಲಾರಂಭಿಸಿದರು. ದುರ್ಯೋಧನನು ಅವರನ್ನು ಹುಡುಕುವ ಪ್ರಯತ್ನ ಮಾಡಿದನು. ಆದರೆ ಎಲ್ಲಿಯೂ ಅವರ ಇರುವಿಕೆಯ ಮಾಹಿತಿ ದೊರಕಲಿಲ್ಲ. ಪಾಂಡವರು ಷರತ್ತಿನ ಪ್ರಕಾರ ಒಂದು ವರ್ಷ ಅಜ್ಞಾತವಾಸದಲ್ಲಿಯೇ ಕಳೆದರು. ನಗರವನ್ನು ತೊರೆದ ಮೇಲೆ ಷರತ್ತುಗಳೆಲ್ಲ ಪೂರ್ಣಗೊಂಡ ನಂತರ ಪಾಂಡವರು ಶ್ರೀಕೃಷ್ಣನನ್ನು ತಮ್ಮ ದೂತನನ್ನಾಗಿ ದುರ್ಯೋಧನನ ಸಭೆಗೆ ಕಳುಹಿಸಿದರು ಮತ್ತು ತಮ್ಮ ರಾಜ್ಯವನ್ನು ಮರಳಿಸುವಂತೆ ಕೋರಿದರು. ಆದರೆ ದುರ್ಯೋಧನನು ಈ ಬೇಡಿಕೆಯನ್ನು ತಳ್ಳಿಹಾಕಿದನು. ಇದರ ಪರಿಣಾಮವಾಗಿ ಪರಸ್ಪರ ಯುದ್ಧಮಾಡಲು ನಿರ್ಧರಿಸಲಾಯಿತು. ಎರಡು ಸೈನ್ಯಗಳು ಯುದ್ಧದ ಸಕಲ ಸನ್ನಾಹದೊಂದಿಗೆ ತಾನಸೀರದ ಹತ್ತಿರ ಕುರುಕ್ಷೇತ್ರ ಮೈದಾನದಲ್ಲಿ ಎದುರು – ಬದುರಾಗಿ ಸೈನ್ಯಗಳನ್ನು ನಿಲ್ಲಿಸಿ ಘನಘೋರ ಯುದ್ಧಾರಂಭವಾಯಿತು. ಕಲಿಯುಗದ ಆರಂಭದ ಅವಧಿಯಲ್ಲಿ ಎರಡು ಕಡೆಯ ಸೈನಿಕರು ಧೈರ್ಯ ಹಾಗೂ ಸಾಹಸದಿಂದ ಒಬ್ಬರ ಮೇಲೊಬ್ಬರು ಎರಗಿದರು. ಈ ಯುದ್ಧವು ೧೮ ದಿನಗಳ ಕಾಲ ಮುಂದುವರಿಯಿತು. ಎರಡು ಸೈನ್ಯಗಳಲ್ಲಿ ಹತರಾದವರು ಯಾರು ಹಾಗೂ ಗಾಯಾಳು ಯಾರು ಎನ್ನುವುದನ್ನು ಕಂಡುಹಿಡಿಯುವುದು ಕಷ್ಟವಾಯಿತು. ಕುತಂತ್ರ ಹಾಗೂ ವಿದ್ರೋಹದ ಕಾರ್ಯವು ಸದಾ ಅಪಮಾನ ಹಾಗೂ ಅವಹೇಳನದಲ್ಲಿ ಕೊನೆಗೊಳ್ಳುತ್ತದೆ. ಈ ಯುದ್ಧವು ದುರ್ಯೋಧನನ ಸೋಲಿನಿಂದ ಮುಗಿದು ಅವನ ಸೈನ್ಯವು ನಿರ್ನಾಮವಾಯಿತು. ಹಿಂದುಗಳ ನಂಬಿಕೆಯ ಪ್ರಕಾರ ಈ ಯುದ್ಧದಲ್ಲಿ ಕೌರವರ ಪರವಾಗಿ ಹನ್ನೊಂದು ಅಕ್ಷೋಹಿಣಿ ಸೈನ್ಯ ಹಾಗೂ ಪಾಂಡವರ ಪರವಾಗಿ ಏಳು ಅಕ್ಷೋಹಿಣಿ ಸೈನ್ಯ ಭಾಗವಹಿಸಿದ್ದವು. ಹಿಂದುಸ್ತಾನದ ಜನರ ಹೇಳಿಕೆಯಂತೆ, ಒಂದು 'ಅಕ್ಷೋಹಿಣಿ'ಯಲ್ಲಿ ಇಪ್ಪತ್ತೊಂದು

ಸಾವಿರದ ಆರು ನೂರಾ ಎಪ್ಪತ್ತೆರಡು (೨೧,೬೭೨) ಆನೆ ಸವಾರರು, ಅರವತ್ತೈದು ಸಹಸ್ರ ಹದನಾಲ್ಕು ನೂರು ಒಂಟೆ (೬೫,೧೪೦೦) ಸವಾರರು, ಒಂದು ಲಕ್ಷ ಒಂಬತ್ತು ಸಾವಿರದ ನಾಲ್ಕುನೂರಾ ಐವತ್ತು (೧,೦೯,೪೫೦) ಕುದುರೆ ಸವಾರರು ಮತ್ತು ಕಾಲಾಳುಗಳು ಇರುತ್ತಾರೆ. ಈ ಯುದ್ಧದಲ್ಲಿ ಅತ್ಯಂತ ಆಶ್ಚರ್ಯಕರವಾದ ವಿಷಯವೇನೆಂದರೆ, ಇಂತಹ ಬೃಹತ್ ಸಂಖ್ಯೆಯ ಸೈನಿಕರಲ್ಲಿ ಕೇವಲ ಹನ್ನೆರಡು ಜನ ಮಾತ್ರ ಬದುಕಿ ಉಳಿದದ್ದು. ಕೌರವರ ಸೈನ್ಯದಲ್ಲಿ ಬದುಕಿ ಉಳಿದವರು ನಾಲ್ಕು ಜನ, ಅವರುಗಳ ಹೆಸರು ೧) ಇಬ್ಬರಿಗೂ ಶಿಕ್ಷಕ ಮತ್ತು ಒಳ್ಳೆಯ ಲೇಖಕ 'ಕೃಪಾಚಾರ್ಯ' ೨) ಕೃಪಾಚಾರ್ಯರಂತೆ ಇಬ್ಬರಿಗೂ ಶಿಕ್ಷಕಮೇಧಾವಿ ದ್ರೋಣರ ಮಗ 'ಅಶ್ವತ್ಥಾಮ', ೩) ಯಾದವ ಪರಿವಾರದೊಂದಿಗೆ ಸಂಬಂಧಿತ 'ಕೃತವರ್ಮ' ಎಂಬ ವ್ಯಕ್ತಿ, ೪) ದುರ್ಯೋಧನನ ತಂದೆಯ 'ಸಂಜಯ' ನೆಂಬ ಹೆಸರಿನ ಸಾರಥಿ. ಪಾಂಡವರ ಸೈನ್ಯದಲ್ಲಿ ಎಂಟು ಜನರು ಉಳಿದಿದ್ದರು. ಐದು ಜನ ಪಾಂಡವರು, 'ಸನಕ' ನೆಂಬ ಹೆಸರಿನ ಯಾದವ ಪರಿವಾರದ ವ್ಯಕ್ತಿ, ದುರ್ಯೋಧನನ ಮಲ-ಸಹೋದರ 'ಯುಯುತ್ಸು', ಮತ್ತು ಎಂಟನೆಯವನು 'ಶ್ರೀಕೃಷ್ಣ'. ಈತನು ಅತ್ಯಂತ ಪ್ರಖ್ಯಾತಿ ಪಡೆದು ಸ್ತುತಿಸಲ್ಪಡುತ್ತಾನೆ.

ಇದ್ದಕ್ಕಿದ್ದಂತೆ ಇಲ್ಲಿ ಶ್ರೀಕೃಷ್ಣ ಹೆಸರು ಬಂದಿದೆ, ಅದಕ್ಕಾಗಿ ಓದುಗರ ಮಾಹಿತಿಗಾಗಿ ಆತನ ಬಗ್ಗೆ ಸ್ವಲ್ಪ ವಿವರಿಸುವುದು ಸೂಕ್ತವಾಗುತ್ತದೆ.

"ಶ್ರೀ ಕೃಷ್ಣ"

ಹಿಂದುಸ್ತಾನದ ನಿವಾಸಿಗಳಲ್ಲಿ ಒಮ್ಮತವಿದ್ದ ವಿಷಯವೇನೆಂದರೆ ಶ್ರೀ ಕೃಷ್ಣನು ಮಥುರಾ ನಗರದಲ್ಲಿ ಹುಟ್ಟಿದನು. ಶ್ರೀಕೃಷ್ಣನ ಬಗ್ಗೆ ಜನರಲ್ಲಿ ಬಗೆ ಬಗೆಯ ನಂಬಿಕೆಗಳಿವೆ: ಕೆಲವು ಜನ ಈತನನ್ನು ಪ್ರಪಂಚದ ರಾಜಕಾರಣಿಗಳೆಲ್ಲರಲ್ಲಿ ಶ್ರೇಷ್ಠನೆಂದು ತಿಳಿಯುತ್ತಾರೆ. ಕೆಲವರು ಈತನನ್ನು ದೇವದೂತನೆಂದು ತಿಳಿಯುತ್ತಾರೆ. ಇನ್ನೂ ಕೆಲವರು ಈತನನ್ನು ಅವತಾರ ಪುರುಷ ಪರಮಾತ್ಮನೆಂದು ಆರಾಧಿಸುತ್ತಾರೆ. ಶ್ರೀ ಕೃಷ್ಣನ ಪಾಲನೆ-ಪೋಷಣೆಯ ಬಗ್ಗೆ ಕಥೆಯಿದ್ದುದೇನೆಂದರೆ, ಮಥುರಾ ಪಟ್ಟಣದ ರಾಜ ಕಂಸನಿಗೆ ಜ್ಯೋತಿಷಿಗಳು ಕೃಷ್ಣನ ಕೈಯಿಂದಲೇ ಸಾವಿಗೀಡಾಗುವೆ ಎಂದು ಹೇಳಿದುದನ್ನು ಕೇಳಿದ ಕಾರಣ ಈ ಬಾಲಕ ಹುಟ್ಟಿದ ಕೂಡಲೇ ಕೊಂದನು ಆದೇಶಿಸಿದನು. ಆದರೆ ಕೃಷ್ಣನು ಉಳಿದುಕೊಂಡನು. ಜನಿಸಿದಾಗಿನಿಂದ ಹನ್ನೊಂದು ವರ್ಷದವರೆಗೆ ನಂದ ಎಂಬ ವ್ಯಕ್ತಿಯ ಮನೆಯಲ್ಲಿ ಶ್ರೀಕೃಷ್ಣನ ಲಾಲನೆ-ಪಾಲನೆಯಾಯಿತು. ಅಂತಿಮವಾಗಿ ರಾಜ ಕಂಸನನ್ನು ಸಮಯ ಸಾಧಿಸಿ ಕೊಂದನು. ಆತನ ತಂದೆ ಉಗ್ರಸೇನನಿಗೆ ಪಟ್ಟಾಭಿಷೇಕ ಮಾಡಿದರು. ಉಗ್ರಸೇನನ ಆಡಳಿತವು ಕೇವಲ ಹೆಸರಿಗೆ ಮಾತ್ರ ಇದ್ದು ವಾಸ್ತವವಾಗಿ ಎಲ್ಲ ಅಧಿಕಾರವು ಶ್ರೀ ಕೃಷ್ಣನ ಕೈಯಲ್ಲಿಯೇ ಇತ್ತು. ಶ್ರೀ ಕೃಷ್ಣನು ತನ್ನ

೩೨ ವರ್ಷ ಆಯುಷ್ಯವನ್ನು ಅತಿ ಸಂತಸ ಹಾಗೂ ಸೌಖ್ಯದಲ್ಲಿ ಕಳೆದನು. ಇವುಗಳ ಬಗ್ಗೆ ಚಿತ್ರ ವಿಚಿತ್ರವಾದ ಕಥೆಗಳು ಜನರಲ್ಲಿ ಪ್ರಖ್ಯಾತವಾಗಿವೆ. ಸುಖ ಸಂತಸದ ದಿನಗಳು ಮುಗಿದ ನಂತರ ಎಲ್ಲ ಅರಸರಂತೆ ಕೃಷ್ಣನಿಗೆ ಕೂಡಾ ತೊಂದರೆ ಕೊಡುವ ಮನಸ್ಸಾಯಿತು.

ಬಿಹಾರ ಮತ್ತು ಪಾಟ್ನಾದ ರಾಜ ಜರಾಸಿಂಹನು ಒಂದು ಕಡೆಯಿಂದ ಮಥುರಾದ ಮೇಲೆ ದಾಳಿ ಮಾಡಿದನು. ಇನ್ನೊಂದು ಕಡೆಯಿಂದ *ಮ್ಲೇಂಛ* (ಮ್ಲೇಂಛರೆಂದರೆ ಹಿಂದೂ ಧರ್ಮದಲ್ಲಿ ಸೇರದೆ ಇದ್ದ ಜನಾಂಗ) ರಾಜ ಕಾಲಿಯೋನನು ದಾಳಿ ಮಾಡಿದನು. ಕಾಲಿಯೋನ ರಾಜನು ಅರಬರ ಅಧೀನನಾಗಿದ್ದನು (ಒಲ್ಲಾ ಅಲಮ್ ಬಿಲ್ ಸವಾಬ). ಕೃಷ್ಣನು ಈ ಇಬ್ಬರು ರಾಜರ ದಾಳಿಯಿಂದ ಪಾರಾಗಿ ಮಥುರಾದಿಂದ ದೂರ ಅಹ್ಮದಾಬಾದ ಗುಜರಾತದತ್ತ ದ್ವಾರಕಾಕ್ಕೆ ಹೋದನು. ಅದು ಸುಮಾರು ನಾಲ್ಕು ಮೈಲುಗಳ ಅಂತರದಲ್ಲಿ ಶೋರ ನದಿಯ ತಟದಲ್ಲಿದೆ. ದ್ವಾರಕಾದ ಕೋಟೆಯಲ್ಲಿ ಆಶ್ರಯ ಪಡೆದನು. ಶ್ರೀ ಕೃಷ್ಣನು ೭೮ ವರ್ಷ ದ್ವಾರಕಾದ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಕಳೆದನು ಮತ್ತು ೧೨೫ ವರ್ಷ ಜೀವಿಸಿದ ನಂತರ ಪ್ರಪಂಚವನ್ನು ತೊರೆದನು. ಬಹಳಷ್ಟು ಜನರ ಭಾವನೆಯಂತೆ ಶ್ರೀ ಕೃಷ್ಣನು ಮೃತನಾಗಲಿಲ್ಲ, ಆತನು ಜೀವಂತವಿದ್ದು ಅಜ್ಞಾತನಾಗಿ ಸದಾ ಜೀವಿಸಿರುತ್ತಾನೆ.

ರಾಣಿ ಗಾಂಧಾರಿಯ ಶಾಪ

ರಾಣಿ ಗಾಂಧಾರಿಯು ಹೆರಿಗೆಯ ಕಾಲ ಸಮೀಪಿಸಿದಂತೆ, ಪುತ್ರನ ಜನನವಾದಾಗ ಆತನ ತಂದೆ ಧೃತರಾಷ್ಟ್ರ ಅಂಧನಾದ ಕಾರಣ ನೋಡಲು ಸಾಧ್ಯವಾಗುತ್ತಿರಲಿಲ್ಲ. ಪತಿ ಧೃತರಾಷ್ಟ್ರನಂತೆ ತಾನು ಕೂಡ ಪುತ್ರನನ್ನು ನೋಡಕೂಡದೆಂದು ಯೋಚಿಸಿದಳು. ಅದೇ ವಿಚಾರದಂತೆ ಪುತ್ರ ದುರ್ಯೋಧನನ ಜನನವಾದೊಡನೆ ಗಾಂಧಾರಿಯು ತನ್ನ ಕಣ್ಣುಗಳನ್ನು ಬಟ್ಟೆಯಿಂದ ಮುಚ್ಚಿಕೊಂಡಳು ಮತ್ತು ಮಗುವನ್ನು ನೋಡಲಿಲ್ಲ. ತನ್ನ ಮಗನ ದೇಹದ ಮೇಲೆ ದೃಷ್ಟಿ ಹರಿಸಲಿಲ್ಲ. ಅವನು ಬೆಳೆದು ತರುಣಾವಸ್ಥೆಯಲ್ಲಿ ರಾಜ್ಯಭಾರವನ್ನು ವಹಿಸಿಕೊಂಡನಂತರ, ಶತ್ರುಗಳನ್ನು ಯುದ್ಧಭೂಮಿಯಿಂದ ಗೆದ್ದು ಬಂದರೂ ಕೂಡ ಮಗನನ್ನು ನೋಡದೆ ಇದ್ದಳು. ಪಾಂಡವರೊಡನೆ ಯುದ್ಧ ಮಾಡಬೇಕೆಂಬ ತೀರ್ಮಾನವಾದ ನಂತರ ಮತ್ತು ಕೆಡುಗಾಲ ಸಮೀಪಿಸಿದಾಗ ಒಂದು ದಿನ ದುರ್ಯೋಧನನ್ನು ಕರೆದು ಗಾಂಧಾರಿಯು. 'ಮಾತೆಯ ದೃಷ್ಟಿಯು ತನ್ನ ಸಂತತಿಯನ್ನು ಆಪತ್ತಿನಿಂದ ಮತ್ತು ಅನ್ಯರ ಕೆಂಗಣ್ಣಿನಿಂದ ರಕ್ಷಿಸಿ ಅವನನ್ನು ಭಯಗ್ರಸ್ತನಾಗದಂತೆ ಕಾಪಾಡುತ್ತದೆ. ನಾಳೆ ಯುದ್ಧವು ಆರಂಭವಾದರೆ ನಿನ್ನ ದೇಹಕ್ಕೆ ಯಾವದೇ ರೀತಿಯ ಹಾನಿಯಾಗದಂತೆ ಇರಲು ನೀನು ನಗ್ನನಾಗಿ ನನ್ನ ಎದುರಿಗೆ ಬಂದರೆ ನಾನು ನಿನ್ನ ದೇಹದ ಮೇಲೆ ನನ್ನ ದೃಷ್ಟಿಯನ್ನು ಬೀರುವೆನು' ಎಂದು ಹೇಳಿದಳು.

ದುರ್ಯೋಧನನು ತಾಯಿಯ ಸಮ್ಮುಖದಲ್ಲಿ ನಗ್ನನಾಗಿ ಹೇಗೆ ಬರಬೇಕೆಂದು ಕೇಳಿದನು. ತಾಯಿ ಉತ್ತರಿಸಿದಳು– 'ಕಂದಾ, ಈ ಕಾಲದಲ್ಲಿ ಬುದ್ಧಿವಂತಿಕೆ, ಸತ್ಯಾಚರಣೆ, ಮುಂದಾಲೋಚನೆ ಹಾಗೂ ಹಿರಿತನದಲ್ಲಿ ಪಾಂಡವರ ಸಮಾನ ಬೇರೆ ಯಾರೂ ಇಲ್ಲ. ನೀನು ಅವರಲ್ಲಿಗೆ ಹೋಗಿ ಇದರ ವಿಧಾನವನ್ನು ತಿಳಿದುಕೋ'. ದುರ್ಯೋಧನನು ತಾಯಿಯ ಹೇಳಿಕೆಯಂತೆ ಪಾಂಡವರನ್ನು ಸಮೀಪಿಸಿ ಅವರಿಗೆ ತನ್ನ ಆಗಮನದ ಉದ್ದೇಶವನ್ನು ಹೇಳಿದನು. ಪಾಂಡವರು ದುರ್ಯೋಧನನ್ನು ಶತ್ರು ಎಂದು ಭಾವಿಸಿದರೂ ಸತ್ಯ ಮತ್ತು ನೀತಿವಂತರಾಗಿದ್ದು ಮತ್ತು ತಾಳ್ಮೆಯ ದೃಷ್ಟಿಯನ್ನು ಹೊಂದಿದ್ದುದರಿಂದ–'ನಿಸರ್ಗದ ನಿಯಮದಲ್ಲಿ ಸಂತತಿಯು ನಗ್ನವಾಗಿಯೇ ಹುಟ್ಟುತ್ತದೆ. ಮಾತಾ ಪಿತೃಗಳ ದೃಷ್ಟಿ ಮಗುವಿನ ಮೇಲೆ ನಗ್ನ ಪರಿಸ್ಥಿತಿಯಲ್ಲಿ ಬೀಳುತ್ತದೆ. ನಿನ್ನ ತಾಯಿಯು ಇದುವರೆಗೂ ನಿನ್ನನ್ನೂ ನೋಡಿಯೇ ಇಲ್ಲ, ಕಾರಣ ನೀನು ನಗ್ನನಾಗಿಯೇ ಆಕೆಯ ಎದುರಿಗೆ ಹೋಗು. ಏಕೆಂದರೆ ನಿನ್ನ ಈಗಿನ ಪರಿಸ್ಥಿತಿ ಹುಟ್ಟಿದ ದಿನದಂತೆಯೇ ಇದೆ. ತಾಯಿಯ ಮಾತನ್ನು ಪಾಲಿಸುವುದು ನಿನ್ನ ಕರ್ತವ್ಯ. ಅದರಂತೆ ನೀನು ನಗ್ನನಾಗಿಯೇ ಆಕೆಯ ಎದುರಿಗೆ ಹೋಗು, ಆಕೆ ನಿನ್ನ ದೇಹದ ಮೇಲೆ ತನ್ನ ಪವಿತ್ರ ದೃಷ್ಟಿಯನ್ನು ಬೀರುವುದರಿಂದ ನಿನ್ನನ್ನು ಸಕಲ ಹಾನಿಯಿಂದ ರಕ್ಷಿಸುವುದು' ಎಂದು ಸಲಹೆ ನೀಡಿದರು.

ದುರ್ಯೋಧನನು ಈ ಉತ್ತಮ ಸಲಹೆಯನ್ನು ಪಡೆದು ತನ್ನ ಸೈನ್ಯದ ಕಡೆಗೆ ನಡೆದನು. ಮಾರ್ಗ ಮಧ್ಯದಲ್ಲಿ ಶ್ರೀ ಕೃಷ್ಣನ ಭೇಟಿಯಾಯಿತು, 'ಏಕಾಂಗಿಯಾಗಿ ಶತ್ರುಗಳ ಸೈನ್ಯದ ಮಧ್ಯೆ ಬರುವುದು ಉಚಿತವಲ್ಲ, ಆದರೂ ನೀನೇಕೆ ಬಂದೆ?' ಎಂದು ಕೇಳಿದನು. ಇದಕ್ಕೆ ಉತ್ತರವಾಗಿ ದುರ್ಯೋಧನನು ಎಲ್ಲ ವಿಷಯವನ್ನು ನಿರೂಪಿಸಿದನು. ಅದನ್ನು ಕೇಳಿ ಶ್ರೀ ಕೃಷ್ಣನು 'ಪಾಂಡವರು ನಿನಗೆ ಕೊಟ್ಟ ಸಲಹೆ ಸೂಕ್ತವಾಗಿದೆ. ಆದರೆ ಗುಪ್ತಾಂಗವನ್ನು ಮರೆಮಾಚಲು ಉದ್ದನೆಯ ಹಾರ ಕತ್ತಲ್ಲಿ ಧರಿಸಿ, ನಗ್ನವಾಗಿ ತಾಯಿಯ ಮುಂದೆ ಹೋಗು' ಎಂದು ಹೇಳಿದನು. ದುರ್ಯೋಧನನಿಗೆ ಕೃಷ್ಣನ ಸಲಹೆಯು ಇಷ್ಟವಾಯಿತು. ಅದರಂತೆ ಅವನು ಅದನ್ನು ಪಾಲಿಸಿ, ತಾಯಿಯ ಮುಂದೆ ಹೋಗಿ, 'ಮಾತೋಶ್ರೀ ನಾನು ಹಾಜರಾಗಿದ್ದೇನೆ. ಕಣ್ಣುಗಳನ್ನು ತೆರೆಯಿರಿ ಮತ್ತು ನನ್ನನ್ನು ನೋಡಿರಿ,' ಎಂದು ಹೇಳಿದನು. ದುರ್ಯೋಧನನು ಪಾಂಡವರನ್ನು ಸಂಧಿಸಿ ಒಳ್ಳೆಯ ಸಲಹೆಯನ್ನು ಪಡೆದುಕೊಂಡು ಬಂದಿರಬಹುದೆಂದು ಯೋಚಿಸಿ ಗಾಂಧಾರಿಯು ಕಣ್ಣುಗಳನ್ನು ತೆರೆದಳು. ಆಕೆಯ ದೃಷ್ಟಿಯು ದುರ್ಯೋಧನನ ಕೊರಳಲ್ಲಿದ್ದ ಹಾರದ ಮೇಲೆ ಬಿದ್ದು, ಚೀರಿ ಮೂರ್ಛೆಹೋದಳು. ಮರಳಿ ಜ್ಞಾನ ಬಂದಕೂಡಲೇ ಬಿಕ್ಕಿ ಬಿಕ್ಕಿ ಅಳಲಾರಂಭಿಸಿ, 'ಈ ಹಾರವನ್ನು ಹಾಕಿಕೊಂಡು ಬರುವ ಸಲಹೆ ಪಾಂಡವರು ಕೊಟ್ಟರೆ?' ಎಂದು ಕೇಳಿದಳು. ದುರ್ಯೋಧನನು 'ಪಾಂಡವರು ಈ ಸಲಹೆ ಕೊಡಲಿಲ್ಲ, ಆದರೆ ಶ್ರೀ

ಕೃಷ್ಣನು ದಾರಿಯಲ್ಲಿ ಕಂಡನು, ಆತನ ಸಲಹೆಯ ಮೇರೆಗೆ ನಾನು ಹಾರವನ್ನು ಧರಿಸಿದೆನು.' ಇದನ್ನು ಕೇಳಿ ಗಾಂಧಾರಿಯು ಎರಡು ಕೈಗಳನ್ನು ಎತ್ತಿ ನೊಂದ ಹೃದಯದಿಂದ ಶ್ರೀ ಕೃಷ್ಣನನ್ನು ಶಪಿಸಿದಳು. ಮತ್ತು ಮಗನಿಗೆ 'ಮಗನೆ, ನನ್ನ ಕಣ್ಣಿನ ದೃಷ್ಟಿಗೆ ಮರೆಯಾದ ನಿನ್ನ ಶರೀರದ ಭಾಗವು ಶತ್ರುಗಳು ಹೊಡೆತದಿಂದ ಗಾಯಗೊಂಡು ನಿನ್ನ ಮೃತ್ಯುವಿಗೆ ಕಾರಣವಾಗುವುದು.' ಎಂದು ಹೇಳಿದಳು. ಅದರಂತೆಯೇ ದುರ್ಯೋಧನ ಮೃತಪಟ್ಟನು.

ಸಂಕ್ಷಿಪ್ತದಲ್ಲಿ ಹೇಳುವುದಾದರೆ ಕೌರವರ ಪರಿವಾರವು ನಿರ್ನಾಮವಾಗಿ ದುರ್ಯೋಧನನ ಮರಣದ ನಂತರ ಯುಧಿಷ್ಠಿರನು ಹಿಂದುಸ್ತಾನದ ಅರಸನಾದನು ಮತ್ತು ಜಗತ್ತಿನ ಎಲ್ಲಾ ರಾಜರುಗಳು ಈತನ ಅಧೀನ ರಾಜರಾಗಿದ್ದರು. 'ಮಹಾಭಾರತ' ಯುದ್ಧದ ನಂತರ ೩೨ ವರ್ಷಗಳವರೆಗೆ ಯುಧಿಷ್ಠರನು ರಾಜ್ಯವಾಳಿದನು. ಯುಧಿಷ್ಠಿರನನ್ನು ಇಹಲೋಕವು ತ್ಯಜಿಸುವ ಮುನ್ನ, ಇಹಲೋಕದ ಅನಿತ್ಯತ್ವದ ಸತ್ಯಾಂಶವನ್ನು ಅರಿತು, ಜಗತ್ತನ್ನು ತೊರೆದನು. ತನ್ನ ನಾಲ್ವರು ಸಹೋದರರೊಂದಿಗೆ ಉಳಿದ ಜೀವನಾವಧಿಯನ್ನು ಗೋಚರಿಸದಂತೆ ಕಳೆದರು ಮತ್ತು ಇದೇ ಪರಿಸ್ಥಿತಿಯಲ್ಲಿ ಅನಿತ್ಯವಾದ ಲೋಕವನ್ನು ತೊರೆದರು. ಕೌರವರು, ಪಾಂಡವರು ಇಬ್ಬರು ಕೂಡಿ ಒಟ್ಟು ೭೬ ವರ್ಷ ರಾಜ್ಯವನ್ನಾಳಿದರು. ದುರ್ಯೋಧನು ೧೩ ವರ್ಷ ರಾಜ್ಯವನ್ನಾಳಿದನು. ಮಹಾಭಾರತದ ನಂತರ ಯುಧಿಷ್ಠಿರನು ೩೦ ವರ್ಷಗಳ ಕಾಲ ರಾಜ್ಯವನ್ನಾಳಿದನು. ಈ ಲೇಖದ ಪ್ರಕಾರ ಈ ಚಿಕ್ಕಪ್ಪನ ಮಕ್ಕಳು ರಾಜ್ಯಭಾರ ಮಾಡಿದ ಒಟ್ಟು ಅವಧಿ ೧೨೩ವರ್ಷವಾಗುತ್ತದೆ.

ಆಶ್ಚರ್ಯ! ಈ ರೀತಿಯ ವಿಚಿತ್ರ ಕಥೆ ಹಿಂದುಸ್ತಾನವಲ್ಲದೇ ಜಗತ್ತಿನ ಬೇರೆ ಇತಿಹಾಸದಲ್ಲಿ ಬಹುಶಃ ದೊರೆಯಲಾರದು.

ಮಹಾಭಾರತ:

ಪುರಾತನ ಪರಂಪರೆಯನ್ನು ಉಲ್ಲೇಖಿಸುವವರ ಪ್ರಕಾರ, ಪಾಂಡವರ ಪರಿವಾರದಲ್ಲಿ ಕೆಲವು ಕಾಲದ ನಂತರ ಅರ್ಜುನನ ಮೂರನೆಯ ಸಂತತಿಯಲ್ಲಿ ಒಬ್ಬ ಬಾಲಕ ಜನಿಸಿದನು. ಈ ಬಾಲಕನು ಸದ್ಗುಣಿಯಾಗಿದ್ದನು. ಸಿಂಹಾಸನಾರೂಢನಾದ ನಂತರ ತನ್ನ ಸದ್ಗುಣಗಳಿಂದ ಪ್ರಜೆಗಳ ಪ್ರೀತಿಗೆ ಪಾತ್ರನಾದನು. ಈತನು ನ್ಯಾಯಬದ್ಧವಾಗಿ ರಾಜ್ಯವನ್ನಾಳಿದನು. ಈತನು ಗತ, ವರ್ತಮಾನ ಹಾಗೂ ಭವಿಷ್ಯ ಕಾಲದಲ್ಲಿಯೂ ಸಹ ಜನರೊಪ್ಪುವಂತೆ ಪರಮಾತ್ಮನ ಆಶಯವನ್ನು ಅನುಕರಿಸಲು ಪ್ರಯತ್ನಿಸಿದನು. ಒಂದು ದಿನ ಈ ರಾಜನ ಮನಸ್ಸಿನಲ್ಲಿ ಒಂದು ವಿಚಾರ ಹೊಳೆಯಿತು. ನಮ್ಮ ಹಿರಿಯರ ಮಧ್ಯ ಯುದ್ಧವಾಗಲು ಮುಖ್ಯ ಕಾರಣವಾವುದು? ಮತ್ತು ಇವರ ವೈಭವದ ಸುಖಿ ಸಾಮ್ರಾಜ್ಯದ ಮುಖ್ಯವಾದ ಸತ್ಯಾಂಶವೇನು? ಈ ವಿಚಾರದೊಂದಿಗೆ

ಈತನು ಪ್ರಖ್ಯಾತಿ ಪಡೆದ, ಪಂಡಿತನಾದ. ಭೀಷ್ಮನಿಂದ ಸತ್ಯವಾದ ಮುಖ್ಯ ವಿಷಯ ತಿಳಿಯುವ ಇಚ್ಛೆಯನ್ನು ಮಾಡಿದನು. ಭೀಷ್ಮನು ಉತ್ತರಿಸಿದನು, 'ನನ್ನ ಗುರು ವ್ಯಾಸನು ಸ್ವತಃ ಈ ಯುದ್ಧ ಕಾಲದಲ್ಲಿ ಇದ್ದನು. ಮತ್ತು ಆತನಿಗೆ ಸಂಪೂರ್ಣ ಸತ್ಯಾಂಶವೂ ತಿಳಿದಿದೆ. ಕಾರಣ ನೀನು ಆತನನ್ನು ವಿಚಾರಿಸು'. ರಾಜನು ವ್ಯಾಸನಿಗೆ ರಾಜೋಚಿತವಾದ ಆಭರಣಾದಿಗಳನ್ನು ಕಾಣಿಕೆಯಾಗಿ ಸಲ್ಲಿಸಿ, ತನ್ನ ಇಚ್ಛೆಯನ್ನು ಆತನಿಗೆ ಪ್ರಕಟಿಸಿದನು. ವ್ಯಾಸನು ವಯಸ್ಸಾಗಿದ್ದುದರಿಂದ ಹಾಗೂ ತಪಾರಾಧನೆಯಲ್ಲಿ ಮಗ್ನನಾಗಿದ್ದರಿಂದ ಎಷ್ಟೋ ವರ್ಷಗಳ ಹಿಂದೆ ಗತಿಸಿಹೋದ ಘನಘೋರ ಯುದ್ಧ ಘಟನೆಯನ್ನು ವಿವರವಾಗಿ ಹೇಳಲು ಸಾಧ್ಯವಾಗದು, ಆದರೆ ಅಲ್ಲಲ್ಲಿ ಗತಿಸಿದ ಘಟನೆಗಳನ್ನು ಬರೆಯುತ್ತಲಿದ್ದೇನೆ ಮತ್ತು ಇದರ ಮಧ್ಯ ಉಪದೇಶಗಳನ್ನು ಬೋಧಿಸಿ ಗ್ರಂಥವನ್ನು ಬರೆದಿದ್ದೇನೆ. ಇದಕ್ಕೆ ಮಹಾಭಾರತವೆಂದು ಹೆಸರಿಸಿದ್ದೇನೆ. ಈ ಗ್ರಂಥಕ್ಕೆ ಈ ಹೆಸರು ಬರಲು ಕಾರಣವೇನೆಂದರೆ, 'ಮಹಾ' ಎಂದರೆ 'ದೊಡ್ಡ, ಹಿರಿಯ' ಇದ್ದು ಮತ್ತು 'ಭಾರತ' ಎಂದರೆ 'ಯುದ್ಧ ಅಥವಾ ಕಾಳಗ' ಎಂದು ಅರ್ಥವಾಗುತ್ತದೆ. ಭಾರತ ಪದವು ಯುದ್ಧದ ಅರ್ಥದಲ್ಲಿ ಉಪಯೋಗವಾಗಲಿಲ್ಲ, ಮೇಲ್ನೋಟಕ್ಕೆ ಈ ಗ್ರಂಥವನ್ನು ಹೆಸರಿಸಿದ ಕಾರಣ ಇದರಲ್ಲಿ ಮಹಾರಾಜ ಭರತನ ಸಂತತಿಯು ಉಲ್ಲೇಖಿಸಲ್ಪಟ್ಟಿದೆ, ಅದಕ್ಕಾಗಿ ಈ ಗ್ರಂಥವು ಹೆಸರಿಸಲ್ಪಟ್ಟಿದೆ. 'ಭರತ' ಪದವು ಅತಿ ಹೆಚ್ಚು ಬಳಕೆಯಲ್ಲಿ ಇದ್ದುದರಿಂದ 'ಭಾರತ'ವಾಗಿದೆ.

ಹಿಂದುಸ್ತಾನದ ಜನರು ವ್ಯಾಸರನ್ನು ಅತ್ಯಂತ ಪವಿತ್ರ, ಗುಣವಂತ ಮತ್ತು ಸರ್ವಜ್ಞರೆಂದು ಭಾವಿಸುತ್ತಾರೆ. ಅವರು ನಂಬಿಕೆಯಂತೆ ವ್ಯಾಸರು ಇನ್ನೂ ಜೀವಂತವಾಗಿಯೇ ಇದ್ದಾರೆ. ಕೆಲವು ಹಿಂದೂ ಶಾಸ್ತ್ರಜ್ಞರ ಪ್ರಕಾರ ಪ್ರತಿ 'ಯುಗ' ದಲ್ಲಿಯೂ ಮನುಷ್ಯರೊಳಗಿಂದ ಒಬ್ಬ ವ್ಯಕ್ತಿ ಹುಟ್ಟಿಕೊಂಡು ಜನಾಂಗಕ್ಕೆ ನೈತಿಕ ಉಪದೇಶವನ್ನು ನೀಡಿ ಅವರಲ್ಲಿ ಶೀಲ ಸಂಪನ್ನತೆಯನ್ನು ಹುಟ್ಟಿಸುತ್ತಾನೆಂದು ಸತ್ಯವಾಗಿ ನಂಬುತ್ತಾರೆ. ಈ ರೀತಿಯ ವ್ಯಕ್ತಿಗೆ 'ವ್ಯಾಸ' ಎನ್ನುತ್ತಾರೆ. ಇನ್ನೂ ಕೆಲವು ಜನರ ವಿಶ್ವಾಸವೇನೆಂದರೆ, 'ವ್ಯಾಸ' ಹೆಸರನ್ನು ಪಡೆದವನು ಕಾಲದ ಪರಂಪರೆಯ ಪರಿಪಾಠದ ಪ್ರಕಾರ ವಿವಿಧ ರೂಪಗಳಲ್ಲಿ ಮತ್ತು ಭಿನ್ನ ಭಿನ್ನವಾದ ವಸ್ತ್ರಾಂತರದಲ್ಲಿ ಸಾಮಾನ್ಯ ಜನರ ಕಣ್ಣಿಗೆ ಕಾಣಿಸುತ್ತಾರೆ. ಅದೇನೆ ಇರಲಿ ಈ ಮೇಧಾವಿ ಹಾಗೂ ಜ್ಞಾನಿ ವ್ಯಾಸನು ಬ್ರಹ್ಮನಿಗೆ ಉಪದೇಶಿಸಲಾದ ಭಗವದ್ವಾಣಿಯೇ 'ವೇದ'. ವೇದದ ಗ್ರಂಥ ವಿಸ್ತಾರ ಮತ್ತು ವಿವರಣೆಯನ್ನೊಳಗೊಂಡು ನಾಲ್ಕು ಗ್ರಂಥ ಭಾಗಗಳಲ್ಲಿ ವಿಂಗಡಿಸಲಾಗಿದೆ. ಅವುಗಳ ಹೆಸರು ಹೀಗಿವೆ – ೧) ಋಗ್‌ವೇದ; ೨) ಯಜುರ್‌ವೇದ; ೩) ಸಾಮವೇದ ಮತ್ತು ೪) ಅಥರ್ವವೇದ. ವೇದಗಳ ಈ ರೀತಿ ವಿಸ್ತಾರದ ವಿಭಜನೆ ಮಾಡಿದ ವ್ಯಾಸ ಪದದ ನಿಜವಾದ ಅರ್ಥ ವಿಶದೀಕರಣ ಮತ್ತು ಪರಿಹಾರ ಸೂಚಕ ಇರುತ್ತದೆ. ಈತನ ನಿಜವಾದ ಹೆಸರು 'ದ್ವೈಪಾಯನ'. ಈತನು ಎರಡು ನದಿಗಳ ಮಧ್ಯದ

ದ್ವೀಪದಲ್ಲಿ ಹುಟ್ಟಿದನು. ಈ ವ್ಯಕ್ತಿಯ ಹುಟ್ಟಿನ ಬಗ್ಗೆ ವಿಚಿತ್ರವಾದ ಕಥೆಗಳನ್ನು ಹೇಳಲಾಗುತ್ತವೆ. ಅದರ ವರ್ಣನೆಯಿಂದ ಗ್ರಂಥ ವಿಸ್ತಾರವಾಗುವುದರಿಂದ ಅದನ್ನಿಲ್ಲಿ ಉಲ್ಲೇಖಿಸುವುದು ಯೋಗ್ಯವೆನಿಸದು. ವ್ಯಾಸನು ಈ ಗ್ರಂಥದಲ್ಲಿ ೬೦ ಲಕ್ಷ ಶ್ಲೋಕಗಳನ್ನು ರಚಿಸಿದನು. ಥಾನೇಸೀರದ ಹತ್ತಿರ ಸರಸ್ವತಿಯ ನದಿಯ ತಟದಲ್ಲಿ ಈ ಗ್ರಂಥವು ಮುಕ್ತಾಯಗೊಂಡಿತು. ಈ ಸ್ಥಳದಲ್ಲಿ ಗ್ರಂಥ ಮುಕ್ತಾಯದ ನಂತರ ಒಂದು ದಿವ್ಯವಾದ ಸಭೆಯನ್ನು ಏರ್ಪಡಿಸಿ ವ್ಯಾಸನು ಜನಸಾಮಾನ್ಯರಿಗೆ ತನ್ನ ಜ್ಞಾನಭಂಡಾರವನ್ನು ಮತ್ತು ವಿಧವಿಧವಾದ ಕಾಣಿಕೆಗಳನ್ನು ಹಂಚಿದನು. ವ್ಯಾಸನು ೬೦ ಲಕ್ಷ ಶ್ಲೋಕಗಳನ್ನು ಹೀಗೆ ವಿಭಜಿಸಿದನು, ೩೦ ಲಕ್ಷ ಶ್ಲೋಕಗಳು ಪವಿತ್ರ ದೇವತೆಗಳ ಸಂಬಂಧಿಸಿವೆ. ೧೫ ಲಕ್ಷ ಶ್ಲೋಕಗಳು ಅವರಿಗಿಂತಲೂ ಕೆಳಗಿನ ಸತ್ರಲೋಕದಲ್ಲಿರುವವರಿಗೆ ಸಂಬಂಧಿಸಿವೆ. ೧೪ ಲಕ್ಷ ಶ್ಲೋಕಗಳು ದೈತ್ಯ, ರಾಕ್ಷಸ ಮತ್ತು ಗಂಧರ್ವ ಮುಂತಾದವರಿಗೆ ಸಂಬಂಧವಿರುತ್ತವೆ. ಉಳಿದ ಒಂದು ಲಕ್ಷ ಶ್ಲೋಕಗಳು ಮನುಕುಲಕ್ಕೆ ಸಂಬಂಧಿಸಿವೆ.

ಈ ಗ್ರಂಥವು 'ಪರ್ವ'ಗಳಲ್ಲಿ ವಿಭಜನೆಗೊಂಡು ಪ್ರತಿಯೊಬ್ಬ ಬುದ್ಧಿವಂತನಿಗೆ ಪ್ರಯೋಜನವಾಗುವಂತೆ ಪ್ರಯತ್ನಿಸಲಾಗಿದೆ. ಒಂದು ಲಕ್ಷ ಶ್ಲೋಕಗಳು ಇವತ್ತಿನವರೆಗೂ ರಕ್ಷಿಸಲಾಗಿದ್ದು ಇವುಗಳ ಸಮೂಹಕ್ಕೆ ಮಹಾಭಾರತ ಎನ್ನಲಾಗುತ್ತಿದೆ. ಇದರ ಶ್ಲೋಕಗಳನ್ನು ವಿಂಗಡಿಸಿ ೨೪ ಸಾವಿರ ಶ್ಲೋಕಗಳಲ್ಲಿ ಕೌರವ, ಪಾಂಡವರ ಯುದ್ಧದ ವಿವರವನ್ನು ನಿರೂಪಿಸಲಾಗಿದೆ ಮತ್ತು ಉಳಿದ ಶ್ಲೋಕಗಳು ಜ್ಞಾನ ವಿತರಣೆ, ಉಪದೇಶ ಮತ್ತು ಉಳಿದ ಕಥಾನಕಗಳಿಂದ ಕೂಡಿವೆ. ಪರಂಪರೆಯಲ್ಲಿ ವಿಸ್ತಾರದಿಂದ ಗತ ವೈಭವದ ಜೀವನದ ಘಟನೆಗಳನ್ನು ಉಲ್ಲೇಖಿಸಲಾಗಿದೆ. ಬ್ರಾಹ್ಮಣರು ಈ ಪರಂಪರೆಯ ಬಗ್ಗೆ ವಿಶ್ವಾಸವಿಡುತ್ತಾರೆ. ಪ್ರತಿ ಯುಗದಲ್ಲಿ ಒಬ್ಬ ಪ್ರವಾದಿಯು ಹುಟ್ಟುತ್ತಾನೆ ಮತ್ತು ಮನುಷ್ಯರ ಜೀವನದಲ್ಲಿ ಸುಧಾರಣೆ ತರಲು ಒಂದು ಗ್ರಂಥವನ್ನು ರಚಿಸುತ್ತಾನೆ. ಇಷ್ಟು ಸುದೀರ್ಘ ಕಾಲ ಗತಿಸಿದ ನಂತರವೂ ಆ ಎಲ್ಲ ಗ್ರಂಥಗಳು ಇಂದಿನವರೆಗೂ ಸುರಕ್ಷಿತವಾಗಿವೆ. ಕಥಾ, ಖತೀನ್ ಮತ್ತು ಚೀನದ ಮುಸಲ್ಮಾನೇತರ ಜನಾಂಗದಂತೆ ಹಿಂದುಸ್ತಾನದ ಮುಸಲ್ಮಾನೇತರರು ಸಹ ಹೇಳುವುದೇನೆಂದರೆ, 'ನೂಹ' ಹಾಗೂ ಚಂಡಮಾರುತದ ಹಡಗಿನ ಬಗ್ಗೆ ಒಪ್ಪುವುದಿಲ್ಲ. ಕೆಲವು ಹಿಂದುಗಳಲ್ಲಿ ಎರಡು ಕುಲಗಳಾದ ಬ್ರಾಹ್ಮಣರು ಮತ್ತು ಕ್ಷತ್ರಿಯರು ಮೊದಲಿನಿಂದಲೂ ಇರುವುದರ ಬಗ್ಗೆ ನಂಬಿಕೆ ಇದೆ, ಉಳಿದ ಕುಲಗಳು (ವೈಶ್ಯ ಮತ್ತು ಶೂದ್ರ) ಮೂರನೆಯ ದ್ವಾಪರ ಯುಗದ ಕೊನೆಯಲ್ಲಿ ಮತ್ತು ನಾಲ್ಕನೆಯ ಕಲಿಯುಗದ ಆರಂಭದಲ್ಲಿ ಹುಟ್ಟಿದರು. ಅಂತೆಯೇ ರಾಜಪುತ್ರರೂ ಆರಂಭದಲ್ಲಿರಲಿಲ್ಲ, ಆನಂತರ ಜನಿಸಿದರು. ಪ್ರಖ್ಯಾತ ಕ್ಷತ್ರಿಯ ರಾಜ ವಿಕ್ರಮಾದಿತ್ಯನು ಮೃತನಾದನಂತರ (ಈ ಗ್ರಂಥದ ಲೇಖನಗಿಂತಲೂ ೧೦೦೬ ವರ್ಷಗಳಾಗುತ್ತವೆ.) ರಜಪೂತ ಕುಲದ ಜನಾಂಗದ ಕೈಯಲ್ಲಿ ರಾಜ್ಯಭಾರ ಬಂದಿತು.- ಒಂದು ಪರಂಪರೆಯಿಂದ ರಾಜಾ 'ಸೂರಜ್'ನ (ಇವನ ಬಗ್ಗೆ ಮುಂದೆ ಹೇಳಲಾಗುವುದು.)

ಸಂತಾನಕ್ಕೆ ರಜಪೂತ ಎನ್ನುತ್ತಾರೆ. ಹಿಂದುಸ್ತಾನದ ಜನರ ನಂಬಿಕೆಯಂತೆ ಜಗತ್ತಿನ ಸೃಷ್ಟಿಯು ಮನುಷ್ಯರಿಂದ ಆರಂಭವಾಗಿದ್ದು ಮುಂದೆಯೂ ಇದೇ ರೀತಿ ನಡೆಯುತ್ತಲೇ ಇರುತ್ತದೆ ಮತ್ತು ಸದಾ ಇದೇ ರೀತಿಯಾಗಿರುತ್ತದೆ, ಆದರೆ ಕೆಲವು ಬುದ್ಧಿವಂತರು ಜಗತ್ತಿನ ಸೃಷ್ಟಿಯ ಆರಂಭದಿಂದ ಇದುವರೆಗೆ ೮ ಲಕ್ಷ ವರ್ಷಗಳ ದೀರ್ಘಾವಧಿ ಗತಿಸಿದೆ ಎಂದು ಹೇಳುತ್ತಾರೆ, ಅದರಲ್ಲಿ ಬಹುತೇಕವಾಗಿ ಸಹಸ್ರಾರು 'ಆದಮರು' ಜಗತ್ತಿನಲ್ಲಿ ಬಂದು ಕಾಣೆಯಾಗಿದ್ದಾರೆ ಮತ್ತು ಪಿಶಾಚಿಗಳ ಉಲ್ಲೇಖವು ಖುರಾನಿನಲ್ಲಿಯೂ ಇದೆ. ಆದರೆ ಇವು 'ಖಾಕಿ' (ಮಾನವ)ಗಳಲ್ಲ. ಇವರಲ್ಲಿ ಕೆಲವರು 'ಬಾದನೀಹದ್' (ವಾಯುವಿನಿಂದ ಹುಟ್ಟಿದವರು) ಮತ್ತೆ ಕೆಲವರು 'ಆತೀಷ ನೀಹದ್' (ಅಗ್ನಿಯಿಂದ ಹುಟ್ಟಿದವರು) ಇದ್ದರು.

ನಿಸರ್ಗದ ನಿಯಮದಲ್ಲಿ ಆರಂಭದ ದಿನದಿಂದಲೂ ಪರಮಾತ್ಮನ ಆದೇಶದ ಉಲ್ಲಂಘನೆಯಾದಾಗ ಅವರ ವಿರುದ್ಧ ಪರಮಾತ್ಮನು ತೀವ್ರವಾಗಿ ಪ್ರತಿಕ್ರಿಯಿಸುತ್ತಾನೆ ಮತ್ತು ಅವರನ್ನು ಅಂತಿಮವಾಗಿ ನಿರ್ನಾಮ ಮಾಡುತ್ತಾನೆ. ಅವರ ಸ್ಥಳದಲ್ಲಿ ಎರಡನೆಯ ಜನಾಂಗವನ್ನು ಹುಟ್ಟಿಸುತ್ತಾನೆ. ಪ್ರತಿಯೊಂದು ಜನಾಂಗವು 'ಖಾಕಿ ನೀಹಾದ್' (ಮಣ್ಣಿನಿಂದ ಹುಟ್ಟಿದವರು) ಇರುವ ಅಗತ್ಯವಿಲ್ಲ, ಆದರೆ ಹಿಂದು ಜನಾಂಗವು ಮಣ್ಣಿನಿಂದ ಹುಟ್ಟಿದವರೆಂದು ಭಾವಿಸುತ್ತಾರೆ ಮತ್ತು ಪ್ರತಿಯೊಬ್ಬ ವ್ಯಕ್ತಿಯನ್ನು ಮಣ್ಣಿನ ಮಕ್ಕಳೆಂದು ತಿಳಿಯುತ್ತಾರೆ. ಆದರೆ ಈ ವಿಚಾರವೂ ಸರಿಯಲ್ಲ. ಸ್ವಯಂ ಹಿಂದುಗಳಲ್ಲಿ ಈ ರೀತಿಯ ಕೆಲವು ರೂಢಿಗಳು ಇದ್ದು. ಗತಕಾಲದಲ್ಲಿ ಜನರ ವ್ಯಕ್ತಿತ್ವ ಅವರ ವಯೋಮಿತಿ ಹಾಗೂ ಅವರ ಕರ್ಮಗಳು (ರಾಮ ಮತ್ತು ಲಕ್ಷಣರಿಂದ ಸಂಬಂಧಿತವಾದವು) ಯಾವ ದೃಷ್ಟಿಯಿಂದಲೂ, ನೈಸರ್ಗಿಕವಾಗಲಿ ಅಥವಾ ಮಾನವನ ನಿಸರ್ಗ ಸಂಬಂಧಿಯಾಗಿರುವುದಿಲ್ಲ. ಎಲ್ಲಕ್ಕೂ ಮೊದಲು ಇದೆಲ್ಲವು ಕೇವಲ ಶಬ್ದ ಮತ್ತು ಅಕ್ಷರ ರೂಪದಲ್ಲಿದ್ದು ವೈಚಾರಿಕ ತಕ್ಕಡಿಯಲ್ಲಿ ತೂಗಿದಾಗ ಸತ್ಯವೆನಿಸದು. ಒಂದು ವೇಳೆ ಇದು ನಿಜವಾಗಿದ್ದರೆ ವಾಯು ಪುತ್ರರು ಮತ್ತು ಅಗ್ನಿ ಪುತ್ರರು ಇವರೊಂದಿಗೆ ಸಂಬಂಧವಿರುತ್ತದೆ.

ಮುಸಲ್ಮಾನರ ನಂಬಿಕೆ

ಮುಸಲ್ಮಾನರಾದ ನಮ್ಮ ನಂಬಿಕೆ ಏನೆಂದರೆ 'ಹಜ್ರತ್ ಆದಮ್' ಮೂಲ ಪುರುಷನು. ಹಜರತ್ ಆದಮನಿಗಿಂತಲೂ ಮೊದಲು ಜಗತ್ತಿನಲ್ಲಿ ಯಾವ ಮನುಷ್ಯನು ಭೂಮಿ ಪುತ್ರನಾಗಿ ಹುಟ್ಟಿರಲಿಲ್ಲಾ. ಆ ಕಾಲದಿಂದ ಇದುವರೆಗೆ ೭೦೦೦ ವರ್ಷಗಳ ದೀರ್ಘ ಕಾಲವು ಕಳೆದಿರುತ್ತದೆ. ಜಗತ್ತಿನ ಸೃಷ್ಟಿಯ ಕಾಲಾವಧಿಯು ಲಕ್ಷಗಳ ವರ್ಷವೆಂದು ಹೇಳುವುದು ನಮಗೆ ಸರಿ ಎನಿಸದು. ನಮ್ಮ ಸಂಶೋಧನೆಯ ಪ್ರಕಾರ ಹಿಂದುಸ್ತಾನವು ಸಹ ಪ್ರಪಂಚದ ಎರಡನೆಯ ಭಾಗಗಳಂತೆ 'ಹಜ್ರತ್ ಆದಮ್'ನ ಸಂತಾನದವರು

ವಾಸಿಸಿದ ಸ್ಥಳ. ಇವುಗಳ ವಿಶದವಾದ ವಿಷಯವೇನೆಂದರೆ, 'ಹಜ್ರತ್ ನುಹ್ ಅಲೇಸಲಾಮ್'ರ ಚಂಡಮಾರುತದ ಪ್ರಕ್ರಿಯೆಯ ನಂತರ ಅವರ ಮೂರು ಜನ ಮಕ್ಕಳಾದ, ಸಿಯಾಮ್, ಯಾಫ್‌ಸ್ ಮತ್ತು ಹಾಮ್ ಇವರಿಗೆ ಒಕ್ಕಲುತನ ಮತ್ತು ಇತರ ವೃತ್ತಿಗಳನ್ನು ಕೈಗೊಳ್ಳುವಂತೆ ಆದೇಶಿಸಿ ಜಗತ್ತಿನ ವಿವಿಧ ಭಾಗಗಳಿಗೆ ಕಳುಹಿಸಿದರು.

ಹಜ್ರತ್ ನೂಹ್ ಇವರ ದೊಡ್ಡ ಮಗ ಸಿಯಾಮ್ ಅವರ ಉತ್ತರಾಧಿಕಾರಿಯಾಗಿದ್ದನು. ಈತನ ಸಂತತಿಯ ಸಂಖ್ಯೆ ೯೯. ಇವರಲ್ಲಿ, ಅರ್‌ಷದ್, ಅಫ್ ಖಷದ್, ಕಯೇ, ನೂರ್, ಯೂದ್, ಅರಮ್, ಖಬ್ತ್, ಆದ್ ಮತ್ತು ಖಹತಾನ್ ಪ್ರಸಿದ್ಧರಾಗಿದ್ದಾರೆ. ಅರಬ್ ದೇಶದ ಸಮಗ್ರ ಬುಡಕಟ್ಟು ಜನಾಂಗ ಇವರ ವಂಶಜರಾಗಿರುತ್ತಾರೆ. ಹಜ್ರತ್ ಹೂದ್, ಸಾಲ್ಹೇ ಮತ್ತು ಇಬ್ರಾಹೀಂ ಅಲೇಹೀಮ್ ಅಲೇ ಸಲಾಮು ತಮ್ಮ ಸಂತತಿ ನಸಬ್, ಅರ್‌ಫಕ್‌ಷದಕ್ ಕಳುಹುತ್ತಾರೆ. ಅರ್‌ಫಕ್‌ಷದಕ್‌ನ ಎರಡನೇಯ ಮಗ ಕಮ್ಯರಸ್ ಶಾಹಾನ್ ಅಜ್ಜಮ್‌ನ ಹಿರಿಯ ವಾರಸುದಾರ. ಕಮ್ಯರಸ್‌ನಿಗೆ ಆರು ಮಕ್ಕಳಿದ್ದರು, ಸಿಯಾಮಕ್, ಅರಾಖ್, ಫಾರೀಸ್, ಶಾಮ್, ತೂರ್ ಮತ್ತು ದಂಗಾನ್. ಹಿರಿಯ ಮಗ ಸಿಯಾಮಕನು ತಂದೆಯ ಉತ್ತರಾಧಿಕಾರಿಯಾದನು ಮತ್ತು ಉಳಿದ ಮಕ್ಕಳು ಯಾವ ಭಾಗಗಳಿಗೆ ಹೋದರೋ ಅವು ಅವರ ಹೆಸರುಗಳಿಗೆ ಸಂಬಂಧಿಸಿದ್ದು ಅಲ್ಲಿ ಅವರ ಸಂತಾನಗಳು ವಾಸಿಸುತ್ತಿವೆ. ಕೆಲವರ ಅಭಿಪ್ರಾಯದಂತೆ ಹಜ್ರತ್ ನೂಹ್ ಅಲೇ ಸಲಾಮ್‌ನಿಗೆ ಅಜ್ಜಮ್ ಎಂಬ ಪುತ್ರನಿದ್ದನು. ಅಜ್ಜಮ್ ದೇಶದ ನಿವಾಸಿಗಳೆಲ್ಲ ಈತನ ಸಂತಾನವಾಗಿತ್ತು. ಸೀಯಾಮಕ್‌ನ ಹಿರಿಯ ಮಗ ಹೋಶಿಂಗ್. ಜಗತ್ತಿನ ಎಲ್ಲಾ ರಾಜರು 'ಎಝ್ದ್ ಜರದ್'ನ ವರೆಗೆ ಇವರ ಸಂತಾನ.

'ಹಜ್ರತ್ ನೂಹ'ನ ಮೂರನೆಯ (ಎರಡನೆಯದಾಗತಕ್ಕದ್ದು) ಮಗ 'ಯಾಫಸ್' ತನ್ನ ತಂದೆಯ ಆದೇಶದಂತೆ ಪೂರ್ವ ಹಾಗೂ ಉತ್ತರದ ಕಡೆ ಹೋಗಿ ಅಲ್ಲಿಯೇ ವಸತಿ ಹೂಡಿದನು. ಈತನಿಗೆ ಬಹಳ ಮಕ್ಕಳು ಹುಟ್ಟಿದರು, ಅವರಲ್ಲಿ ವಿಶೇಷ ಪ್ರಖ್ಯಾತನಾದವನು ತುರ್ಕ್. ತುರ್ಕೀಸ್ಥಾನದ ಎಲ್ಲಾ ಬಣಗಳು, ಅಂದರೆ ಮೊಗಲ್, ಅಜ್‌ಬಕ್, ತುರ್ಕಮಾನಿ, ಇರಾನ್ ಹಾಗೂ ರೂಮಾದ ತುರ್ಕಮಾನಿಯ ಸಂತತಿಗಳಲ್ಲಿವೆ.

'ಹಜ್ರತ್ ನೂಹ'ನ ಮೂರನೆಯ ಮಗ 'ಹಾಮ್' ತನ್ನ ತಂದೆಯ ಆದೇಶದ ಪ್ರಕಾರ ಜಗತ್ತಿನ ದಕ್ಷಿಣ ಭಾಗದ ಕಡೆ ಹೋಗಿ ಅಲ್ಲಿ ವಾಸಿಸಿದನು. ಹಾಮ್‌ಗೆ ಆರು ಮಕ್ಕಳಿದ್ದರು. ಅವರ ಹೆಸರುಗಳು ೧) ಹಿಂದ್, ೨) ಸಿಂದ್, ೩) ಜಷ್, ೪) ಅಫ್‌ರಂಜ, ೫) ಹರ್‌ಮಜ್ ಮತ್ತು ೬) ಬೂಯಾ. ಈ ಮಕ್ಕಳು ಪ್ರತಿಯೊಬ್ಬರು ತಮ್ಮ ತಮ್ಮ ಹೆಸರಿನ ಪಟ್ಟಣ ನಿರ್ಮಿಸಿ ಅಲ್ಲಿ ವಾಸಿಸತೊಡಗಿದರು. ಹಾಮ್‌ನ

ಮಗ ಹಿಂದ್ ವಿಶೇಷ ಖ್ಯಾತಿ ಪಡೆದನು. ಈತನು ಹಿಂದುಸ್ತಾನವನ್ನು ವಾಸಸ್ಥಳವಾಗಿಸಿ ಅದನ್ನು ಜನನಿಬಿಡವಾಗಿಸಿದುದಲ್ಲದೆ ಸಮೃದ್ಧಿಯುತವಾಗಿ ಮಾಡಿದನು. ಈತನ ಎರಡನೆಯ ಮಗ ಸಿಂದ್‌ನು ಸಿಂದ ಪ್ರಾಂತದಲ್ಲಿ ವಸತಿ ಮಾಡಿದನು ಮತ್ತು ತಹತ್ ಮತ್ತು ಮುಲ್ತಾನ್‌ಗಳಿಗೆ ತನ್ನ ಮಕ್ಕಳ ಹೆಸರಿನಲ್ಲಿ ಜನವಸತಿ ಬೆಳೆಸಿದನು. 'ಹಿಂದ್'ನಿಗೆ ನಾಲ್ಕು ಜನ ಮಕ್ಕಳು ಹುಟ್ಟಿದರು. ಅವರ ಹೆಸರು ೧) ಪೂರಬ್, ೨) ಬಂಗ್, ೩) ದಕ್ಕನ್ ಮತ್ತು ೪) ನೆಹರ್‌ವಾಲ್. ಇವುಗಳೆಲ್ಲವು ಈಗ ಅವರ ಹೆಸರಿನಿಂದಲೇ ಪ್ರಖ್ಯಾತಿ ಪಡೆದಿವೆ ಮತ್ತು ಇವರಿಂದಲೇ ಅವು ಜನನಿಬಿಡವಾಗಿವೆ. 'ಹಿಂದ್'ನ ಮಗ 'ದಕ್ಕನ್'ನ ಮನೆಯಲ್ಲಿ ಮೂರು ಮಕ್ಕಳು ಜನಿಸಿದರು. ಒಬ್ಬನ ಹೆಸರು ಮರಹಟ್, ಎರಡನೆಯವನು ಕನ್ನಡ, ಮೂರನೇಯವನು ತೆಲಂಗ್ ಎಂದಿತ್ತು. ದಕ್ಕನ್‌ನು ತನ್ನ ಮೂರು ಮಕ್ಕಳಿಗೆ ತನ್ನ ರಾಜ್ಯದ ಮೂರು ಸಮಭಾಗ ಮಾಡಿ ಕೊಟ್ಟನು. ಇಂದಿನ ದಿನಗಳಲ್ಲಿ ಇವರ ಹೆಸರುಗಳಿಂದ ಖ್ಯಾತಿ ಪಡೆದ ಜನಾಂಗವು ಈ ಮೂರು ಜನರ ಸಂತತಿಗಳಲ್ಲಿವೆ. ಹಿಂದ್‌ನ ಮಗ ನೆಹರ್‌ವಾಲ್‌ನಿಗೆ ಮೂರು ಜನ ಮಕ್ಕಳು ಇದ್ದರು. ಅವರ ಹೆಸರು ೧) ಭರೂಜ್, ೨) ಕನ್‌ಬಾಜ್ ಮತ್ತು ೩) ಮಾಲ್‌ರಾಜ್. ಇವರ ಹೆಸರಿನಲ್ಲಿ ಮೂರು ಪಟ್ಟಣಗಳು ನಿರ್ಮಿತಗೊಂಡು ಅವುಗಳಲ್ಲಿ ಇವರ ಸಂತತಿಗೆ ಸಂಬಂಧಿಸಿದವರು ವಾಸಿಸುತ್ತಿದ್ದಾರೆ. ಹಿಂದ್‌ನ ಮೂರನೆಯ ಮಗ ಬಂಗ್‌ನ ಮನೆತನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂತಾನವು ವೃದ್ಧಿಸಿತು. ಇವರು ಬಂಗ್ಲಾದಲ್ಲಿ ವಾಸಿಸಿದರು. ನಾಲ್ಕನೆಯ ಮಗ ಪೂರಬ್‌ನಲ್ಲಿ, ಹಿಂದ್‌ನ ಹಿರಿಯ ಮಗನಿಗೆ ೪೨ ಮಕ್ಕಳು ಹುಟ್ಟಿದರು ಮತ್ತು ಅಲ್ಪ ಕಾಲಾವಧಿಯಲ್ಲಿ ಇವರ ಸಂತತಿ ಎಷ್ಟೊಂದು ಬೆಳೆಯಿತೆಂದರೆ ಅವರನ್ನು ನಿಯಂತ್ರಿಸಲು 'ಕಿಶನ್' ಹೆಸರಿನ ಒಬ್ಬ ವ್ಯಕ್ತಿಯನ್ನು ತಮ್ಮ ಮುಖ್ಯಸ್ಥನನ್ನಾಗಿಸಿ ಆತನ ಅಧೀನತೆಯನ್ನು ಸ್ವೀಕರಿಸಿದರು.

ಕಿಶನ್‌ನ ರಾಜ್ಯ

ಹಿಂದುಸ್ತಾನದಲ್ಲಿ ಮೊದಲನೆಯ ಬಾರಿಗೆ ರಾಜ್ಯವನ್ನು ಸ್ಥಾಪಿಸಿದವನು ಕಿಶನ್. ಈ ಕಿಶನ್ ಹೆಸರುವಾಸಿಯಾದ ಶ್ರೀ ಕೃಷ್ಣನಲ್ಲ, ಆತನು ಬೇರೆ ವ್ಯಕ್ತಿಯಾಗಿದ್ದನು. ಹಿಂದುಸ್ತಾನದ ಜನರು ಆತನ ಧೈರ್ಯ, ಸಾಹಸಗಳಿಗಾಗಿ ತಮ್ಮ ಒಡೆಯನನ್ನಾಗಿ ನಿಯಮಿಸಿದರು. ಈತನ ಶರೀರವು ಬಹಳ ಭಾರಿಯಾಗಿತ್ತು. ಆತನ ಭಾರವನ್ನು ಕುದುರೆಗೂ ತಾಳಲಾಗುತ್ತಿರಲಿಲ್ಲ. ಅದಕ್ಕಾಗಿ ಆತನು ಕಾಡಾನೆಗಳನ್ನು ತಂದು ಅದರ ಮೇಲೆ ಸವಾರಿ ಮಾಡಲು ಸಲಹೆ ಮಾಡಿದನು. ರಾಜ ಕಿಶನ್‌ನ ಕಾಲದಲ್ಲಿ ಹಿಂದ್‌ನ ಮಗ ಭಂಗನ ಸಂತಾನದಲ್ಲಿ ಒಬ್ಬ ಮೇಧಾವಿ ಮತ್ತು ಬುದ್ಧಿವಂತ ಬ್ರಾಹ್ಮಣನು ಹುಟ್ಟಿದನು. ಆತನನ್ನು ಕಿಶನ್ ತನ್ನ ಪ್ರಧಾನಿಯಾಗಿ ಮಾಡಿದನು. ಹಿಂದುಸ್ತಾನದ ಕೆಲವು ಕೈಗಾರಿಕೆಗಳು ಬ್ರಾಹ್ಮಣನ ಸಲಹೆಯ ಮೇರೆಗೆ ಆರಂಭವಾದವು. ಓದಿ ಬರೆಯುವ ಪರಿಪಾಠವು ಈ ಬುದ್ಧಿವಂತ ಬ್ರಾಹ್ಮಣನ ವಿಚಾರದ ಫಲವೆಂದು

ಕೆಲವು ಜನರು ಹೇಳುತ್ತಾರೆ. ಹಿಂದುಸ್ತಾನದಲ್ಲಿ ಸ್ಥಾಪನೆಯಾದ ಮೊದಲನೆಯ ಪಟ್ಟಣವು 'ಅವಧ'. ಕಿಶನ್‌ನಿಗೆ ೪೦೦ ವರ್ಷ ಆಯುಷ್ಯವಿತ್ತು. ಈ ರಾಜನು ರಾಜಾ ತಹಮೂರನಂತೆ ಪ್ರಭಾವಿತನಾಗಿದ್ದನು. ಈತನ ಅವಧಿಯಲ್ಲಿ ಸುಮಾರು ೨೦೦೦ ಗ್ರಾಮಗಳು ಮತ್ತು ಕಸಬೆಗಳು ಜನವಸತಿಯಿಂದ ಬೆಳೆದವು. ಕಿಶನ್‌ನಿಗೆ ೩೭ ಜನ ಮಕ್ಕಳಿದ್ದರು. ಇವರಲ್ಲಿ ದೊಡ್ಡವನ ಹೆಸರು 'ಮಹಾರಾಜ' ಎಂದಿತ್ತು. ಮಹಾರಾಜನು ತಂದೆಯ ನಂತರ ರಾಜ್ಯಾರೂಢನಾದನು.

ಮಹಾರಾಜನ ಆಡಳಿತ

ತನ್ನ ತಂದೆ ಕಿಶನ್‌ನ ನಂತರ ಮಹಾರಾಜನು ತನ್ನ ಪ್ರಜೆಗಳ ಮತ್ತು ಸಹೋದರ ಬಂಧುಗಳ ಸಲಹೆ ಮೇರೆಗೆ ಆಡಳಿತವನ್ನು ಕೈಗೆತ್ತಿಕೊಂಡನು ಮತ್ತು ತನ್ನ ರಾಜ್ಯವನ್ನು ಸುಭದ್ರವಾಗಿಸಲು ಮತ್ತು ದಕ್ಷ ಆಡಳಿತವನ್ನು ನಡೆಸಲು ತನ್ನ ತಂದೆಗಿಂತಲೂ ಹೆಚ್ಚು ಪರಿಶ್ರಮ ಮಾಡಿದನು. ತನ್ನ ಪ್ರಜೆಗಳನ್ನು ವಿವಿಧ ಭಾಗಗಳಲ್ಲಿ ವಿಂಗಡಿಸಿದನು. ಹಿಂದನ ಮಗ ಪೂರಬನ ಸಂತಾನವನ್ನು, ಆಡಳಿತ ಮತ್ತು ರಾಜಕೀಯ ಕಾರ್ಯಗಳಿಗಾಗಿ ಆಯ್ಕೆ ಮಾಡಿದನು. ಬ್ರಾಹ್ಮಣನ ಸಂತಾನದವರಿಗೆ ಮಂತ್ರಿ ಪದವಿ ಮತ್ತು ಜ್ಯೋತಿಷ್ಯ, ಆರಾಧನೆಗಳ ಮುಖ್ಯ ಕಾರ್ಯಗಳನ್ನು ವಹಿಸಿದನು. ಪ್ರಜೆಗಳ ಒಂದು ಗುಂಪನ್ನು ಒಕ್ಕಲುತನಕ್ಕಾಗಿ ನಿಯಮಿಸಿದನು ಮತ್ತು ಇನ್ನೊಂದು ಗುಂಪಿಗೆ ವ್ಯಾಪಾರ ನಡೆಸಲು ಆಜ್ಞಾಪಿಸಿದನು. ಮಹಾರಾಜನು ಒಕ್ಕಲುತನದ ಅಭಿವೃದ್ಧಿಗಾಗಿ ಹೆಚ್ಚಿನ ಗಮನ ಹರಿಸಿದನು. ಇದರ ಫಲವಾಗಿ ಹಿಂದುಸ್ತಾನದ ದೂರ ದೂರಗಳಲ್ಲಿರುವ ಸ್ಥಳಗಳಲ್ಲಿಯೂ ಜನವಸತಿ ಹೆಚ್ಚುತ್ತ ಹೋಯಿತು. ಈತನು ಬಿಹಾರ ಪಟ್ಟಣವನ್ನು ಜನನಿಬಿಡವಾಗಿ ಮಾಡಿದನು. ದೂರ ದೂರದ ಸ್ಥಳಗಳಿಂದ ಜ್ಞಾನಿಗಳನ್ನು ಕರೆಯಿಸಿ ಈ ಪಟ್ಟಣದಲ್ಲಿ ವಾಸಿಸುವಂತೆ ಮಾಡಿದನು. ಪಟ್ಟಣದಲ್ಲಿ ಸಾಕಷ್ಟು ಶಿಕ್ಷಣ ಮತ್ತು ಆರಾಧನೆಯ ಕೇಂದ್ರಗಳನ್ನು ಮಾಡಿದನು. ರಾಜ್ಯದ ಆಡಳಿತದ ಆದಾಯದಿಂದ ಆರಾಧನಾ ಕೇಂದ್ರಗಳ ಉಪಯೋಗಕ್ಕಾಗಿ ನಿಗದಿ ಮಾಡಿದನು. ಈ ಎಲ್ಲಾ ಪ್ರಗತಿಪರ ಯೋಜನೆಗಳ ಫಲವಾಗಿ, ಸನ್ಯಾಸಿ, ಜೋಗಿ ಮತ್ತು ಬ್ರಾಹ್ಮಣ ಜನಾಂಗದ ಜನರು ಪಾಠ ಪ್ರವಚನಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸಿದರು. ಮಹಾರಾಜನು ೭೦೦ ವರ್ಷ ಹಿಂದುಸ್ತಾನದಲ್ಲಿ ರಾಜ್ಯವಾಳಿದನು. ಈತನ ರಾಜ್ಯಾಡಳಿತದ ಅವಧಿಯಲ್ಲಿ ಹಿಂದುಸ್ತಾನದ ಪರಿಸ್ಥಿತಿಯು ಸಂಪೂರ್ಣವಾಗಿ ಪರಿವರ್ತನೆಯಾಯಿತು. ಈ ರಾಜನು ಹಿಂದುಸ್ತಾನದ 'ಜಮ್‌ಷೀದ್' ಮತ್ತು 'ಫರೀದೂನ್'ನಂತಿದ್ದನು. ಆಡಳಿತಾತ್ಮಕ ಕಾರ್ಯಗಳಿಗಾಗಿ ಹಾಗೂ ಸ್ಥಿರವಾದ ಆಡಳಿತಕ್ಕಾಗಿ ಮತ್ತು ಪ್ರಜೆಗಳ ಹಾಗೂ ಸೈನಿಕರ ಕಲ್ಯಾಣಕ್ಕಾಗಿ ಹಲವಾರು ನಿಯಮಗಳನ್ನು ವಿಧಿಸಿದನು. ಅವುಗಳಲ್ಲಿ ಕೆಲವು ಇಂದಿನವರೆಗೂ ಜಾರಿಯಲ್ಲಿವೆ. ಈತನು ಇರಾನ್‌ದ ರಾಜರೊಂದಿಗೆ ಸದಾ ಪ್ರೀತಿ ಹಾಗೂ ವಿಶ್ವಾಸದಿಂದ ವ್ಯವಹರಿಸಿದನು. ಆದರೆ ಕೆಲವು ದಿನಗಳ ನಂತರ ಈತನ

ಸಹೋದರನ ಮಗನು ಅಸಮಾಧಾನ ಪಟ್ಟು ಫರೀದೂನ್‌ನ ಹತ್ತಿರ ಹೋದನು ಮತ್ತು ತನ್ನ ಚಿಕ್ಕಪ್ಪನ ವಿರುದ್ಧ ಸಹಾಯ ಕೋರಿದನು.

ಫರೀದೂನ್‌ನು ಒಂದು ದೊಡ್ಡ ಸೈನ್ಯದೊಂದಿಗೆ ಗುರು ಶೇಷಬ್-ಬಿನ್-ಇತ್ರಾದೂನ ಸಹಾಯಕ್ಕಾಗಿ ಕಳುಹಿಸಿದನು. ಗುರು ಶೆಷಬ್‌ನು ಹಿಂದುಸ್ತಾನಕ್ಕೆ ಬಂದ ಮೇಲೆ ಆತನ ಸೈನ್ಯವು ಜನನಿಬಿಡವಾದ ಪಟ್ಟಣಗಳನ್ನು ಹಾಳುಮಾಡಿತು ಮತ್ತು ದರೋಡೆ, ಲೂಟಿ ಇತ್ಯಾದಿಗಳ ಕೃತ್ಯವು ಹತ್ತು ದಿನಗಳವರೆಗೆ ನಡೆದವು. ಮಹಾರಾಜನು ಈ ಪರಿಸ್ಥಿತಿಯನ್ನು ಕಂಡು ತನ್ನ ರಾಜ್ಯದ ಒಂದು ಭಾಗವನ್ನು ತನ್ನ ಸಹೋದರನಿಗೆ ಕೊಟ್ಟು ಒಪ್ಪಂದ ಮಾಡಿಕೊಂಡನು. ಮತ್ತೆ ಕೆಲವು ಉತ್ತಮವಾದ ಬೆಲೆಬಾಳುವ ಪದಾರ್ಥಗಳನ್ನು ಫರೀದೂನ್‌ನ ಸೇವೆಯಲ್ಲಿ ಕಾಣಿಕೆಯಾಗಿ ಕಳುಹಿಸಿಕೊಟ್ಟನು. ಮಹಾರಾಜನ ಅಂತಿಮ ದಿನಗಳಲ್ಲಿ 'ಸಿಂಹಳಿ ದ್ವೀಪ' ಮತ್ತು ಕರ್ನಾಟಕದ ಜಮೀನದಾರರು ಪರಸ್ಪರ ಒಂದೆಡೆ ಸೇರಿ ಸಂಪೂರ್ಣ ಶಕ್ತಿಯಿಂದ ಆತನ ಸೈನ್ಯವನ್ನು ಎದುರಿಸಿದರು. ಇಬ್ಬರಲ್ಲಿ ಘನಘೋರ ಯುದ್ಧವಾಯಿತು. ಮಹಾರಾಜನ ಮಗನು ಈ ಯುದ್ಧದಲ್ಲಿ ಮೃತನಾದನು. ಶಿವರಾಯ ಮತ್ತು ಮಹಾರಾಜನ ಉಳಿದ ಸೈನ್ಯವು ಹತಾಶೆ ಮತ್ತು ಗಾಯಗೊಂಡು ತಮ್ಮ ತಮ್ಮ ಸಾಮಾನುಗಳನ್ನು ಹಾಗೂ ಆನೆ, ಕುದುರೆಗಳನ್ನು ರಣಾಂಗಣದಲ್ಲಿ ಬಿಟ್ಟು ಓಡಿದರು. ಮಹಾರಾಜನಿಗೆ ಈ ಸುದ್ದಿ ತಿಳಿದೊಡನೆ, ಗಾಯಗೊಂಡ ಬುಸುಗುಟ್ಟುವ ಸರ್ಪದಂತೆ ಕೋಪಗೊಂಡನು. ಕಾರಣವೇನೆಂದರೆ, ದಖನಿನ ಸಾಮಾನ್ಯ ಜಮೀನದಾರರು ಮಾಡಿದ ಇಂತಹ ವಿನಾಶ ಮತ್ತು ವಿದ್ರೋಹವನ್ನು ತೆಲಂಗ, ಪೇಗೂ ಮತ್ತು ಮಲೇಬಾರನಂತಹ ಅತಿ ದೂರವಿರುವ ಪ್ರಾಂತದ ಜಮೀನದಾರರು ಕೂಡ ಯಾವಾಗಲೂ ಮಾಡಿರಲಿಲ್ಲ. ಮಹಾರಾಜನು ಈ ಸೋಲಿನ ಪ್ರತೀಕಾರವನ್ನು ಕೈಗೊಳ್ಳಲು ಧೃಡ ಸಂಕಲ್ಪ ಮಾಡಿದನು. ಆ ಕಾಲದಲ್ಲಿ ಇರಾನಿನ ರಾಜನ ಆದೇಶದ ಮೇರೆಗೆ ಇರಾನಿ ಸರದಾರ ಸಾಮ್-ಬಿನ್-ನರಿಮಾನ್ ಹಿಂದುಸ್ತಾನವನ್ನು ಗೆಲ್ಲಲು ಪಂಜಾಬಿನ ಗಡಿಯ ವರೆಗೆ ಬಂದಿದ್ದನು ಮತ್ತು ಮಹಾರಾಜನ ಸೈನ್ಯದ ಮುಖ್ಯ ಸೈನ್ಯಾಧಿಕಾರಿಯಾದ ಮಾಲ್‌ಚಂದನು ಉಳಿದ ಸೈನ್ಯದೊಂದಿಗೆ ಆತನನ್ನು ಎದುರಿಸಲು ಹೋಗಿದ್ದನು. ಅದಕ್ಕಾಗಿ ಮಾಲ್‌ಚಂದನು ಸರದಾರ ಸಾಮ್‌ನೊಂದಿಗೆ ಒಪ್ಪಂದ ಮಾಡಿಕೊಂಡು ಮರಳಿ ಬರುವವರೆಗೆ ನಿರೀಕ್ಷಿಸಬೇಕಾಯಿತು. ಮಾಲ್‌ಚಂದನು ತನ್ನ ತಜ್ಞ ಸಂಧಾನಕಾರರ ಮೂಲಕ ಹಣ ಮತ್ತು ಆಭರಣಗಳೊಂದಿಗೆ ಪಂಜಾಬ ಪ್ರಾಂತವನ್ನು ಸಾಮ್‌ನ ಸ್ವಾಧೀನಕ್ಕೊಪ್ಪಿಸಿದನು. ಕೆಲವು ಜನರ ಅಭಿಪ್ರಾಯವೇನೆಂದರೆ ಫರೀದೂನ್‌ನ ಅವಧಿಯಿಂದಲೂ ಪಂಜಾಬ ಪ್ರಾಂತವು ಇರಾನಿನ ಬಾದಶಾಹರ ಸ್ವಾಧೀನದಲ್ಲಿತ್ತು ಮತ್ತು ಗುರು ಶೇಷಬ್‌ನ ಸಂತಾನ ಅಂದರೆ ರುಸ್ತೂಂನ ಹಿರಿಯರು ಪಂಜಾಬ, ಕಾಬುಲ್, ಜಾಬುಲ್, ಸಿಂಧ ಮತ್ತು *ನಿಮರೋಜ್* (ಪಶ್ಚಿಮ ಅಫಘಾನಿಸ್ಥಾನದ

ಮತ್ತು ಈಗಿನ ಖರಾಸ್ಥಾನದ ಕೆಲವು ಪ್ರಾಂತಗಳ ಹೆಸರು ಜಾಬುಲ್ ಅಥವಾ ಜಾಬುಲಿಸ್ಥಾನ ಇತ್ತು. ಇದರ ದಕ್ಷಿಣ ಪ್ರಾಂತವೂ ಅದರ ಬಹುತೇಕ ಭಾಗವೂ ಈಗ ಸಿಸ್ಥಾನದಲ್ಲಿ ಸೇರಿಕೊಂಡು ನಿಮರೋಜ್ ಎನ್ನಿಸುತ್ತದೆ.) ಪ್ರದೇಶಗಳ ಮೇಲೆ ಜಾಗೀರದಾರರ ರೂಪದಲ್ಲಿ ಒಡೆತನ ಪಡೆದಿದ್ದರು.

ಸೈನ್ಯದ ಮುಖ್ಯಾಧಿಕಾರಿಯಾಗಿದ್ದ ಮಾಲ್‌ಚಂದನು ಬಹಳ ಧೈರ್ಯವಂತ ನಾಗಿದ್ದನು. ಆತನ ಹೆಸರಿನಿಂದ ಮಾಳವಾ ದೇಶವು ಇಂದಿಗೂ ಪ್ರಖ್ಯಾತಿ ಪಡೆದಿದೆ. ಗುರು ಶೇಷಬ್‌ನೊಂದಿಗೆ ಒಪ್ಪಂದವಾದ ನಂತರ ಮರಳಿ ಮಹಾರಾಜನ ಹತ್ತಿರ ಬಂದ ನಂತರ ಈತನಿಗೆ ದಕ್ಕನ ಕಡೆ ಹೋಗಲು ಆದೇಶಿಸಲಾಯಿತು. ಈತನು ಬಹಳ ವೈಭವದಿಂದ ಹಾಗೂ ಸಾತತ್ಯದಿಂದ ಕೂಡಲೆ ದಕ್ಕನಿನ ಕಡೆ ಹೊರಟು ನಿಂತನು. ಶತ್ರುಗಳು ಈತನ ಬರುವಿಕೆಯ ಸುದ್ದಿ ತಿಳಿದು ಕಂಗಾಲಾಗಿ ಮನ ಬಂದಂತೆ ದಿಕ್ಕೆಟ್ಟು ಓಡಿದರು. ಮಾಲ್‌ಚಂದನು ಬಂಡುಕೋರರ ಗುಂಪನ್ನು ಖಡ್ಗದಿಂದ ಕೊಂದು ಹೇಳ ಹೆಸರಿಲ್ಲದಂತೆ ನಿರ್ನಾಮ ಮಾಡಿದನು. ಈತನು ಅಲ್ಲಲ್ಲಿ ಚೌಕಿಗಳನ್ನು ಸ್ಥಾಪಿಸಿದ ನಂತರ ಮರಳಿದನು. ಮರಳುವಾಗ ಗ್ವಾಲಿಯರ ಮತ್ತು ಬಿಯಾನೆಗಳ ಕೋಟೆಗಳನ್ನು ನಿರ್ಮಿಸಿದನು. ರಾಗ-ಜ್ಞಾನಗಳಿಂದ ಪ್ರಖ್ಯಾತಿ ಪಡೆದ ಸಂಗೀತವನ್ನು ದಕ್ಕನ ಮತ್ತು ತೆಲಂಗಾಣದಿಂದ ತಂದು ಹಿಂದುಸ್ತಾನದಲ್ಲಿ ಪಸರಿಸಿದನು. ಮಾಲ್‌ಚಂದನು ಹೆಚ್ಚಿನ ಸಮಯವನ್ನು ಗ್ವಾಲಿಯರನಲ್ಲಿ ಕಳೆದನು. ಮಾಲಚಂದನೊಂದಿಗೆ ಬಂದ ಸಕಲ ಸಂಗೀತಗಾರರು, ಖ್ಯಾತ ಕಲಾವಿದರು ಗ್ವಾಲಿಯರನಲ್ಲಿಯೇ ಉಳಿದುಕೊಂಡರು. ಹೀಗಾಗಿ ಗ್ವಾಲಿಯರ ಪಟ್ಟಣವು ಸಂಗೀತಕ್ಕಾಗಿ ಬಹಳ ಪ್ರಸಿದ್ಧವಾಗಿದೆ.

ಕೇಶವರಾಜನ ಆಡಳಿತ

ಮಹಾರಾಜನು ೭೦೦ ವರ್ಷದ ಆಯಸ್ಸು ಪಡೆದಿದ್ದನು. ಈತನಿಗೆ ೧೪ ಜನ ಮಕ್ಕಳಿದ್ದರು. ಇವರಲ್ಲಿ ಹಿರಿಯನಾದ ಕೇಶವರಾಜನು ತನ್ನ ತಂದೆಯ ವಾರಸುದಾರನಾದನು. ಕೇಶವರಾಜನು ತನ್ನ ಆಡಳಿತದಲ್ಲಿ ತನ್ನ ಸಹೋದರರಿಗೆ ರಾಜ್ಯದ ಒಂದೊಂದು ಭಾಗಕ್ಕೆ ಕಳುಹಿಸಿದನು ಮತ್ತು ಸ್ವತಃ ತಾನು ಕಾಲ್ಜಿಯಿಂದ ಗೊಂದ್ವಾರಾ (ಗೊಂದ್ವಾರಾ ಹಿಂದುಸ್ತಾನದ ಮಧ್ಯಭಾಗ)ಗೆ ಬಂದನು ಮತ್ತು ದಕ್ಕನನಿಂದ ಸಿಂಹಳ ದ್ವೀಪ (ಲಂಕಾ)ವರೆಗೆ ಪ್ರಯಾಣ ಮಾಡಿದನು. ಈ ಪ್ರಯಾಣದಲ್ಲಿ ವಿದ್ರೋಹಿ ಮತ್ತು ಕಜಕಲಾ ರಾಜರಿಂದ ಕಪ್ಪ-ಕಾಣಿಕೆಗಳನ್ನು ಪಡೆದನು ಮತ್ತು ತನ್ನ ಪ್ರಜೆಗಳ ಪರಿಪೂರ್ಣ ಕಲ್ಯಾಣವನ್ನು ಮಾಡಲು ಪ್ರಯತ್ನಿಸಿದನು. ಈ ಪ್ರಯಾಣದಿಂದ ಮರಳಿ ಬಂದ ನಂತರ, ದಕ್ಕನಿನ ಜಮೀನದಾರರು ಒಟ್ಟಾಗಿ ವಿದ್ರೋಹ ಮಾಡಿದರು. ಇವರ ಶಕ್ತಿ ಸಾಮರ್ಥ್ಯವು ದಿನದಿನಕ್ಕೆ ಬೆಳೆಯುತ್ತಾ ಹೋಯಿತು. ಇವರ ಧೈರ್ಯ

ಮತ್ತು ಸಾಹಸ ಎಷ್ಟೊಂದು ಬೆಳೆಯಿತೆಂದರೆ ಕೇಶವರಾಜನೊಂದಿಗೆ ಕಾದಾಡಲು ಸಿದ್ಧರಾದರು. ಕೇಶವರಾಜನು ವಿದ್ರೋಹಿಗಳನ್ನು ಎದುರಿಸಲು ಶಕ್ತನಾಗಿರದಿದ್ದರಿಂದ ಅನಿವಾರ್ಯವಾಗಿ ಇವರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ನಂತರ ಆತನು ತನ್ನ ಆಡಳಿತ ಕೇಂದ್ರಕ್ಕೆ ಮರಳಿದನು. ಮಹಾರಾಜನು ಬೆಲೆಬಾಳುವ ಕಾಣಿಕೆಗಳೊಂದಿಗೆ ಒಂದು ಪತ್ರವನ್ನು ಇರಾನಿನ 'ಮನ್ನೂಚರ್'ನ ಸೇವೆಯಲ್ಲಿ ಕಳುಹಿಸಿ ಆತನಿಂದ ಸಹಾಯವನ್ನು ಕೋರಿದನು. ಈ ಪತ್ರದ ಉತ್ತರವಾಗಿ ಮನ್ನೂಚರ್‌ನು ಒಂದು ದೊಡ್ಡ ಸೈನ್ಯವನ್ನು ಸಾಮ್-ಬಿನ್-ನರಿಮಾನ್‌ನ ನೇತೃತ್ವದಲ್ಲಿ ಹಿಂದುಸ್ತಾನದತ್ತ ಕಳುಹಿದನು. ಕೇಶವರಾಜನು ಜಲಂಧರಕ್ಕೆ ಹೋಗಿ ಈ ಸೈನ್ಯವನ್ನು ಸ್ವಾಗತಿಸಿ, ಅದ್ದೂರಿಯಾದ ಆತಿಥ್ಯವನ್ನು ನೀಡಿದನು ಮತ್ತು ಈ ಸೈನ್ಯದೊಂದಿಗೆ ದಕ್ಕನಿನ ಕಡೆ ಹೊರಟುನಿಂತನು. ದಕ್ಕನಿನ ಜಮೀದಾರರು ಈ ಪ್ರಬಲ ಸೈನ್ಯದ ಬರುವಿಕೆಯ ಸುದ್ದಿ ತಿಳಿದು ಕಂಗಾಲಾಗಿ ಅಲ್ಲಲ್ಲಿ ಚೆದರಿ ಹೋದರು. ಈ ರೀತಿ ದಕ್ಕನ ಪ್ರಾಂತವು ಮರಳಿ ಕೇಶವರಾಜನ ಸ್ವಾಧೀನಕ್ಕೆ ಬಂದಿತು. ಈ ಗೆಲುವಿನ ನಂತರ ಕೇಶವರಾಜನು ಸಾಮ್-ಬಿನ್-ನರಿಮಾನ್‌ಗೆ ಆದರದಿಂದ ಸೇವೆ ಸಲ್ಲಿಸಿ ಆತನನ್ನು ಬಿಡಲು ಪಂಜಾಬಿನ ಗಡಿಯವರೆಗೆ ಹೋದನು ಮತ್ತು ಮನ್ನೂಚರ್ ಇರಾನ ರಾಜನಿಗಾಗಿ ಬಹಳಷ್ಟು ಉಡುಗೊರೆಗಳನ್ನು ಮತ್ತು ಬಹುಮಾನವನ್ನು ಕಾಣಿಕೆಯಾಗಿ ಕಳುಹಿದನು. ಇದರ ನಂತರ ಕೇಶವರಾಜನು ತನ್ನ ಆಡಳಿತ ಕೇಂದ್ರವಾದ 'ಅವಧ'ಗೆ ಬಂದು ತನ್ನ ಆಯುಷ್ಯದ ಕೊನೆಯವರೆಗೆ ಅಲ್ಲೇ ಉಳಿದನು. ಹಿಂದುಸ್ತಾನದ ಜನಸಮೂಹವನ್ನು ತನ್ನ ನ್ಯಾಯಯುತ ಆಡಳಿತದಿಂದ ಸಂತುಷ್ಟರನ್ನಾಗಿಸಿದ್ದನು. ಈತನು ೨೨೦ ವರ್ಷ ರಾಜ್ಯವಾಳಿದನು. ಈತನ ಮರಣದ ನಂತರ ಈತನ ಮಗ 'ಮೂನಿರಾಯ್' ಸಿಂಹಾಸನಾರೂಢನಾದನು.

ಮೂನಿರಾಯನ ಆಡಳಿತ:

ಮೂನಿರಾಯನಿಗೆ ಹಿಂದುಸ್ತಾನದ ಜ್ಞಾನ ಗ್ರಂಥಗಳು ಮತ್ತು ಶಾಸ್ತ್ರಗಳು ಇತ್ಯಾದಿಗಳ ಬಗ್ಗೆ ಬಹಳ ಆಸಕ್ತಿ ಇತ್ತು. ಮೂನಿರಾಯನು ಮೇಧಾವಿಗಳನ್ನು ಹಾಗೂ ಬುದ್ಧಿವಂತರನ್ನು ಪ್ರೀತಿಯಿಂದ ಕಾಣುತ್ತಿದ್ದನು. ಬೌದ್ಧಿಕ ಜ್ಞಾನವಿಲ್ಲದ ವೃತ್ತಿಗಳಾದ ಕುದುರೆ ಸವಾರಿ ಮತ್ತು ಸೈನಿಕ ವಿದ್ಯೆಗಳನ್ನು ತ್ಯಜಿಸಿ ಬಿಟ್ಟಿದ್ದನು. ಹೆಚ್ಚಿನ ಸಮಯವನ್ನು ಜ್ಞಾನಿಗಳ ಸಹವಾಸದಲ್ಲಿ ಕಳೆಯುತ್ತಿದ್ದನು. ಅವಶ್ಯಕತೆ ಇದ್ದವರಿಗೆ, ಫಕೀರರಿಗೆ ಹಾಗೂ ಭಿಕ್ಷುಕರ ನೆರವಿಗೆ ಸಾಕಷ್ಟು ಹಣವನ್ನು ವ್ಯಯಿಸುತ್ತಿದ್ದನು. ಬಿಹಾರಕ್ಕೆ ಹೋದನಂತರ ಇನ್ನೂ ಹೆಚ್ಚು ದಾನವನ್ನು ಮಾಡಿದನು. ಈ ರಾಜನ ಅವಧಿಯಲ್ಲಿ ಮೂನಿರ ಹೆಸರಿನ ಪಟ್ಟಣವು ನಿರ್ಮಾಣವಾಗಿ ಜನವಸತಿಯಿಂದ ತುಂಬಿತು. ಈ ರಾಜನು ಅಗೌರವಯುತವಾದ ಕೃತಿಯನ್ನು ಮಾಡಿದನು. ಸಾಮ್-ಬಿನ್-ನರಿಮಾನ್ ಈತನ ಮರಣದ ನಂತರ ಮನ್ನೂ ಚಹರ್ ಶಾಹ ಇರಾನನ ರಾಜ್ಯವು ಶಕ್ತಿಹೀನವಾಯಿತು.

ಇರಾನನಿನ ರಾಜರುಗಳ ಪುರಾತನ ಶತ್ರು ಅಫ್ರಾದ್ ಸೀಯಾಬ್ ಈ ಅವಕಾಶದಿಂದ ಲಾಭ ಪಡೆದು ಇರಾನನಿನ ಮೇಲೆ ದಾಳಿ ಮಾಡಿ ಅದನ್ನು ಸ್ವಾಧೀನ ಪಡೆಸಿಕೊಂಡನು. ಆಗ ಮೂನಿರಾಯ್‌ನ ಉಪಕಾರಗಳನ್ನು ಸ್ಮರಿಸದೆ ಪಂಜಾಬಿನ ಮೇಲೆ ದಾಳಿ ಮಾಡಿದನು ಹಾಗೂ ಅದನ್ನು ಝೂಲ್-ಬಿನ್-ಸಾಮನ ಅಧಿಕಾರಿಗಳ ಒಡೆತನವನ್ನು ತೆಗೆದು ತನ್ನ ಸ್ವಾಧೀನ ಮಾಡಿಕೊಂಡನು ಮತ್ತು ಜಲಂಧರವನ್ನು ಕೇಂದ್ರಾಡಳಿತವನ್ನಾಗಿ ಮಾಡಿದನು ಮತ್ತು ಅಫ್ರಾಸೀಯಾಬ್‌ನ ಸೇವೆಯಲ್ಲಿ ನಾದಿರ್-ತಹಾಲೀಫ್‌ನೊಂದಿಗೆ ತನ್ನ ರಾಜದೂತನನ್ನು ಕಳುಹಿಸಿ ತಾನು ಆತನ ಸ್ನೇಹಿತನೆಂದು ವ್ಯಕ್ತಗೊಳಿಸಿದನು. ಈ ಕಾಲದಿಂದ ಆರಂಭಿಸಿ ಕರ್‌ಕೇ ಖಬಾದನ ಅವಧಿಯವರೆಗೆ ಪಂಜಾಬವು ಹಿಂದುಸ್ತಾನದ ರಾಜರುಗಳ ಸ್ವಾಧೀನದಲ್ಲಿತ್ತು. ಆದರೆ ಪ್ರಸಿದ್ಧ ರುಸ್ತೂಂ ಪಹಲ್ವಾನ್‌ನು ತನ್ನ ತಂದೆ ತಾತನ ಮನ್-ಸಬ್ ಸರದಾರಿಯ ಮೇಲೆ ಪಂಜಾಬಿಗೆ ಬಂದು, ಪಂಜಾಬನ್ನು ಸ್ವಾಧೀನ ಪಡೆದುಕೊಳ್ಳಲು ಹಿಂದುಸ್ತಾನದ ಮೇಲೆ ದಾಳಿ ಮಾಡಿದ ಮೇಲೆ. ಮೂನಿರಾಯನಿಗೆ ರುಸ್ತೂಂನನ್ನು ಎದುರಿಸಲಾಗಲಿಲ್ಲ, ತಿರಹಟ್ ಅರಣ್ಯದ ಕಡೆಗೆ ಓಡಿಹೋದನು. ರುಸ್ತೂಂನು ಪಂಜಾಬ, ಸಿಂಧ ಮತ್ತು ಮೂಲ್ತಾನ ಇವುಗಳನ್ನು ಗೆದ್ದುಕೊಂಡು ತರಹಟ್ ಕಡೆಗೆ ಹೋಗಲು ನಿರ್ಧರಿಸಿದಾಗ ಮೂನಿರಾಯ್ *(ಸೂನ್ ಹೆಸರಿನ ನದಿಯ ಬಲಭಾಗದ ತಟಪ್ರಾಂತವು ಅದು ಈಗ ಬುಗ್ಗಲ್-ಖಂಡ್ ಮತ್ತು ಚೋಟೆ ನಾಗಪೂರನಲ್ಲಿ ಕೂಡಿದೆ.) ಚಾಡಖಂಡ ಮತ್ತು ಕೊಂಡವಾಡೆಯ ಅರಣ್ಯದ ಕಡೆ ಹೊರಟು ಹೋದನು. ಇದಾದ ನಂತರ ಈತನು ಸುಖ ಸಂತೋಷದ ದಿನಗಳನ್ನು ಕಾಣಲಿಲ್ಲ, ಇದೇ ಕಾಲದಲ್ಲಿ ಅತೀವ ಮಾನಸಿಕ ನೋವಿನಿಂದ ಇಹಲೋಕವನ್ನು ತೊರೆದನು. ಮೂನಿರಾಯನ ರಾಜ್ಯಾಡಳಿತದ ಅವಧಿಯು ೫೩೭ ವರ್ಷವೆಂದು ಹೇಳುತ್ತಾರೆ. ಅಗಾಧ!

ರಾಜಾ ಸೂರಜ್:

ಮೂನಿರಾಯನ ಸಾವಿನ ಸಮಾಚಾರ ರುಸ್ತೂಂನು ಕೇಳಿದ ನಂತರ ಆತನ ಸಂತತಿಗೆ ರಾಜ್ಯಾಭಾರದ ಹೊಣೆಗಾರಿಕೆಯನ್ನು ಒಪ್ಪಿಸುವುದು ಯೋಗ್ಯವಲ್ಲವೆಂದು ಹೇಳಲಾಗುತ್ತದೆ. ಏಕೆಂದರೆ ಮೂನಿರಾಯನ ದ್ರೋಹ ಮತ್ತು ದುಷ್ಟಾಡಳಿತ ಆತನ ಕಣ್ಣೆದುರಿಗೆ ಇತ್ತು. ಇದೇ ವಿಚಾರದಲ್ಲಿ ಈತನು ತನ್ನ ಸೇವೆಯಲ್ಲಿ ಇದ್ದ ಹಿಂದುಸ್ತಾನದ ಸರದಾರರಲ್ಲಿ, ಸೂರಜ ಎಂಬ ವ್ಯಕ್ತಿಯನ್ನು ಈ ಕೆಲಸಕ್ಕಾಗಿ ನಿಯುಕ್ತಿ ಮಾಡಿ ಹಿಂದುಸ್ತಾನದ ರಾಜ್ಯಭಾರವನ್ನು ಈತನಿಗೆ ಒಪ್ಪಿಸಿ ತಾನು ಸ್ವತಃ ಇರಾನಿಗೆ ಮರಳಿದನು. ಸೂರಜನು ಹಿಂದುಸ್ತಾನದಲ್ಲಿ ತನ್ನ ರಾಜ್ಯವನ್ನು ದಕ್ಷ ಹಾಗೂ ಶಕ್ತಿಯುತವನ್ನಾಗಿ ಮಾಡಿದನು. ತನ್ನ ರಾಜ್ಯದಲ್ಲಿ ಗೌರವಯುತವಾದ ಆಡಳಿತವನ್ನು ಸ್ಥಾಪಿಸಿದನು. ಬಂಗ್ಲಾದ ನದಿಯಿಂದ ಆರಂಭಿಸಿ ದಖನನಿನ ಗಡಿಯುವರೆಗೆ ಸೂರಜನ ಆಡಳಿತಾಧಿಕಾರವು ವ್ಯಾಪಿಸಿದ್ದು, ಆತನ ಸಾಮಂತರು ಸರ್ಕಾರವನ್ನು ನಡೆಸುತ್ತಿದ್ದರು.

ರಾಜಾ ಸೂರಜ ತನ್ನ ರಾಜ್ಯಾವಧಿಯಲ್ಲಿ ಒಕ್ಕಲುತನಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಿ ಪ್ರಗತಿ ಸಾಧಿಸಿದನು ಮತ್ತು ಹಳ್ಳಿಗಳ ವಸತಿಗಳ ಕಡೆಗೆ ಹೆಚ್ಚಿನ ಗಮನಕೊಟ್ಟನು.

ಜಾರಖಂಡ ಅರಣ್ಯದಲ್ಲಿದ್ದ ಜಾದು ಇತ್ಯಾದಿಗಳಲ್ಲಿ ತಜ್ಞನಾಗಿದ್ದ ಒಬ್ಬ ಬ್ರಾಹ್ಮಣನು ರಾಜಾ ಸೂರಜನ ಆಸ್ಥಾನಕ್ಕೆ ಬಂದನು. ಅಲ್ಪ ಸಮಯದಲ್ಲಿಯೇ ಈತನು ರಾಜನ ದೃಷ್ಟಿಗೆ ಬೀಳುವಂತಾದನು. ಈತನು ರಾಜನಿಗೆ ಮೂರ್ತಿಪೂಜೆಯ ಶಿಕ್ಷಣವನ್ನು ಉಪದೇಶಿಸಿದನು.

ಹಿಂದುಸ್ತಾನದಲ್ಲಿ ಮೂರ್ತಿಪೂಜೆ :

ಹಜ್ರತ್–ನೂಹ–ಅಲೇ–ಸಲಾಮ ಇವರ ಮೊಮ್ಮಗ ಹಿಂದನು ತನ್ನ ಹಿರಿಯರು ಪರಮಾತ್ಮನ ಆರಾಧನೆ ಮತ್ತು ಸೇವೆ ಮಾಡುತ್ತಿದ್ದರೆಂದು ತಿಳಿದು ಮತ್ತು ನೋಡಿ ಅವನು ಸ್ವತಃ ಅದೇ ಹಾದಿಯಲ್ಲಿ ನಡೆದನು. ಈತನ ಸಂತಾನವೂ ಹಲವಾರು ಪೀಳಿಗೆಗಳವರೆಗೆ ಇದೇ ರೀತಿಯನ್ನು ಮುಂದುವರೆಸಿದರು. ಮಹಾರಾಜನ ಕಾಲದಲ್ಲಿ ಇರಾನ್‌ನಿಂದ ಒಬ್ಬ ವ್ಯಕ್ತಿ ಹಿಂದುಸ್ತಾನಕ್ಕೆ ಬಂದು ಇಲ್ಲಿಯ ಜನರಿಗೆ ಸೂರ್ಯನ ಆರಾಧನೆ ಮಾಡುವ ಶಿಕ್ಷಣ ನೀಡಿದನು. ಇದಕ್ಕೆ ಬಹಳ ಪ್ರಚಾರ ದೊರೆತು ಎಲ್ಲರ ಮನೆಗಳಲ್ಲಿ ಅಗ್ನಿಯನ್ನು ಪೂಜಿಸಲಾರಂಭಿಸಿದರು. ಮೂರ್ತಿ ಪೂಜೆಯ ಪರಿಪಾಠ ಆರಂಭವಾದ ನಂತರ. ಇದು ಎಲ್ಲಕ್ಕಿಂತಲೂ ಹೆಚ್ಚು ಪ್ರಗತಿಪರವೆನ್ನಿಸಿ ಸ್ವೀಕೃತವಾಯಿತು. ಮೂರ್ತಿ ಪೂಜೆ ಸ್ವೀಕೃತವಾಗಲು ಕಾರಣವೇನೆಂದರೆ, ರಾಜಾ ಸೂರಜನ ಆಸ್ಥಾನಕ್ಕೆ ಬಂದಿದ್ದ ಬ್ರಾಹ್ಮಣನು, ರಾಜನಿಗೆ ಈ ವಿಷಯದಲ್ಲಿ ನಿಷ್ಠೆ ಹುಟ್ಟಿಸಿದ ಮತ್ತು ಆತನು ತನ್ನ ಹಿರಿಯರ ಬೆಳ್ಳಿ, ಬಂಗಾರಗಳ ಮೂರ್ತಿಗಳನ್ನು ಮಾಡಿ ಅವುಗಳನ್ನು ಪೂಜಿಸುವ ಆಚರಣೆಯನ್ನು ತೋರಿಸಿಕೊಟ್ಟನು, ಈ ರೀತಿಯ ವಿಶ್ವಾಸ ಹಾಗೂ ನಂಬಿಕೆಯನ್ನು ಜನರು ಎಷ್ಟರಮಟ್ಟಿಗೆ ಸ್ವೀಕರಿಸಿದರೆಂದರೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ಹಿರಿಯರ ಮೂರ್ತಿಗಳನ್ನು ಮಾಡಿ ಪೂಜಿಸಲಾರಂಭಿಸಿದರು. ಸ್ವತಃ ಸೂರಜ ರಾಜನು ಸಹ ಗಂಗಾನದಿಯ ದಡದಲ್ಲಿ ಕನೋಜ್ ಪಟ್ಟಣವನ್ನು ಸ್ಥಾಪಿಸಿ ಅಲ್ಲಿ ಮೂರ್ತಿ ಪೂಜೆಯನ್ನು ಆರಂಭಿಸಿದ. ಆತನ ಪ್ರಜೆಗಳು ಸಹ ಆತನಂತೆ ಅನುಯಾಯಿಗಳಾಗಿ ಅದೇ ರೀತಿ ತಮ್ಮ ಹಿರಿಯರ ಪೂಜೆಯನ್ನು ಮಾಡವುದರಲ್ಲಿ ಮಗ್ನರಾದರು. ಇದರ ಫಲವಾಗಿ ಹಿಂದುಸ್ತಾನದಲ್ಲಿ ಮೂರ್ತಿ ಪೂಜಕರ ೯೦ ವಿವಿಧ ಗುಂಪುಗಳು ಹುಟ್ಟಿಕೊಂಡವು. ರಾಜಾ ಸೂರಜನು ಕನೋಜ್ ಪಟ್ಟಣವನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಹೀಗಾಗಿ ಅದರ ಜನವಸತಿಯು ಹೆಚ್ಚಿತು. ಅದು ಬೆಳೆದು ೨೫ ಹರದಾರಿಯುವರೆಗೆ (೭೫ ಮೈಲು) ಹಬ್ಬಿಕೊಂಡಿತು. ರಾಜಾ ಸೂರಜನ ಆಡಳಿತಾವಧಿಯು ೨೫೦ ವರ್ಷ. ಈ ಅವಧಿಯ ನಂತರ ಆತನು ಮೃತಪಟ್ಟನು. ಈ ರಾಜನು ಇರಾನಿನ ಅರಸನಾದ ಕೈಖಬಾದನ ಅಧೀನನಾಗಿದ್ದು ಪ್ರತಿ ವರ್ಷ

ಆತನಿಗೆ ಕಪ್ಪ ಕೊಡುತ್ತಿದ್ದನು ಮತ್ತು ಸದಾ ರುಸ್ತೂಂನ ಉಪಕಾರವನ್ನು ಸ್ಮರಿಸುತ್ತಿದ್ದನು. ಆತನ ಬಗ್ಗೆ ಒಳ್ಳೆಯ ಅಭಿಪ್ರಾಯವಿದ್ದುದರಿಂದ ತನ್ನ ಸಹೋದರನ ಮಗಳನ್ನು ರುಸ್ತೂಂನಿಗೆ ಕೊಟ್ಟು ಮದುವೆ ಮಾಡಿದನು. ರಾಜನು ಪ್ರತಿ ವರ್ಷ ಇರಾನನಿನ ಬಾದಶಹನಿಗೆ ಕಪ್ಪಕೊಡುವುದರ ಜೊತೆ ಜೊತೆಗೆ ರುಸ್ತೂಂನಿಗೂ ಸಹ ಕಾಣಿಕೆಗಳನ್ನು ಕಳುಹಿಸುತ್ತಿದ್ದನು. ಈ ರಾಜನಿಗೆ ೩೫ ಜನ ಮಕ್ಕಳು ಜನಿಸಿದರು. ಅವರಲ್ಲಿ ಹಿರಿಯ ಪುತ್ರನು 'ಲಹರಾಜ', ಆತನು ಸೂರಜ ರಾಜನ ಉತ್ತರಾಧಿಕಾರಿಯಾದನು.

ಲಹರಾಜನ ಆಡಳಿತ:

ಲಹರಾಜನು ಅಧಿಕಾರ ವಹಿಸಿಕೊಂಡನಂತರ ತನ್ನ ಹೆಸರಿನ ಪಟ್ಟಣ 'ಲಹರಾಜ' ಸ್ಥಾಪಿಸಿದನು. ಈತನು ತನ್ನ ಜೀವನದ ಹೆಚ್ಚಿನ ಸಮಯವನ್ನು ಸಂಗೀತದಲ್ಲಿ ಆಸಕ್ತಿ ತೋರುವುದರಲ್ಲಿ ಕಳೆದನು.

ಈತನ ತಂದೆ ಎಂದರೆ ಸೂರಜ ರಾಜನು ತನ್ನ ಅಧಿಕಾರಾವಧಿಯಲ್ಲಿ ಬನಾರಸ ಪಟ್ಟಣಕ್ಕೆ ಅಡಿಗಲ್ಲು ಹಾಕಿದನು. ಆದರೆ ಆತನು ಅದನ್ನು ತನ್ನ ಜೀವಮಾನದಲ್ಲಿ ಪೂರ್ಣಗೊಳಿಸಲಾಗಲಿಲ್ಲ. ಆದರೆ ಲಹರಾಜನು ಈ ಪಟ್ಟಣವನ್ನು ನಿರ್ಮಿಸುವುದಕ್ಕಾಗಿ ಪೂರ್ಣ ಪ್ರಯತ್ನ ಮಾಡಿದನು. ಈತನು ತನ್ನ ಸಹೋದರರೊಂದಿಗೆ ಪ್ರೀತಿಯಿಂದ ವರ್ತಿಸುತ್ತಿದ್ದನು. ಅವರಿಗೆ ಅವರ ಅಂತಸ್ತಿಗೆ ತಕ್ಕಂತೆ ಸೂಕ್ತ ಜಹಗೀರುಗಳನ್ನು ನೀಡಿ ಅವರನ್ನು ಸದಾ ಸಂತುಷ್ಟವಾಗಿ ಇರಿಸಿದನು. ಕೆಲವು ಜನರ ಅಭಿಪ್ರಾಯದಂತೆ ಈ ರಾಜನು ತನ್ನ ತಂದೆಯ ಸಂತಾನಕ್ಕೆ 'ರಾಜಪೂತ' ಎಂದು ಹೆಸರಿಸಿ ಬೇರೆಯವರನ್ನು ಭಿನ್ನ ಭಿನ್ನವಾಗಿ ಹೆಸರಿಸಿದನು. ಆದರೆ ಈ ಎಲ್ಲಾ ಸದ್ಗುಣಗಳು ಇದ್ದರೂ ಈತನು ತನ್ನ ಆಡಳಿತ ಮತ್ತು ರಾಜ್ಯವನ್ನು ನಡೆಸುವ ನಿಯಮಗಳಲ್ಲಿ ಪರಿವರ್ತನೆ ಮಾಡಿದನು. ಅದರಿಂದಾಗಿ ಹಿಂದುಸ್ತಾನದ ಆಡಳಿತದಲ್ಲಿ ಬಹಳಷ್ಟು ಕೊರತೆಗಳು ಉಂಟಾದವು. ಪ್ರತಿಯೊಬ್ಬರು ಆಡಳಿತವನ್ನು ತಮ್ಮ ಕೈಗೆತ್ತಿಕೊಳ್ಳವ ಕನಸನ್ನು ಕಾಣಲಾರಂಭಿಸಿದರು. ಇಂತಹ ಜನರಲ್ಲಿ 'ಕೇದಾರ' ಎಂಬ ಒಬ್ಬ ಬ್ರಾಹ್ಮಣನಿದ್ದನು. ಈತನು *ಸವಾಮಿಕ್ (ಸವಾಮಿಕ್ ಅರಣ್ಯದ ಬಗ್ಗೆ ನಿಜವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ. ಕೆಲವು ಇತಿಹಾಸಕಾರರ ಅಭಿಪ್ರಾಯದ ಪ್ರಕಾರ ಇದು ಹಿಮಾಲಯದ ದಕ್ಷಿಣದ ಪಂಗಡವಾಗಿದೆ.) ಅರಣ್ಯದಿಂದ ವಿದ್ರೋಹ ಮಾಡಿ ಲಹರಾಜನ ಮೇಲೆ ದಾಳಿ ಮಾಡಿದನು. ಅದರ ಪರಿಣಾಮವಾಗಿ ಲಹರಾಜನಿಗೆ ಪರಾಜಯವಾಗಿ ಹಿಂದುಸ್ತಾನದ ಆಡಳಿತವು ಕೇದಾರನ ಕೈಸೇರಿತು. ಲಹರಾಜನು ೨೬ ವರ್ಷದವರೆಗೆ ರಾಜ್ಯಭಾರ ನಡೆಸಿದನೆಂದು ಹೇಳಲಾಗುತ್ತದೆ.

ಕೇದಾರ ಬ್ರಾಹ್ಮಣನ ಆಡಳಿತ:

ಕೇದಾರನು ಸಿಂಹಾಸನಾರೂಢನಾದ ನಂತರ ಆತನು ಆಡಳಿತ ಮತ್ತು ರಾಜ್ಯ

ಸೂತ್ರವನ್ನು ಪೂರ್ಣವಾಗಿ ಬಲ್ಲವನೆಂದು ಹೇಳಲಾಗುತ್ತದೆ. ಅದಕ್ಕೆಂದೇ ಈತನ ಹೆಸರು ಹಿಂದುಸ್ತಾನದ ಪ್ರಖ್ಯಾತವಾದ ಉನ್ನತ ರಾಜರುಗಳಲ್ಲಿ ಸೇರಿಸಲಾಗಿದೆ. ಇರಾನಿನ ಪ್ರಖ್ಯಾತ ರಾಜರುಗಳಾದ 'ಕೈಖುಸ್ರೋ' ಮತ್ತು 'ಕೈಕಾವಸ್' ಇವರನ್ನು ಸಂತುಷ್ಟವಾಗಿಟ್ಟಿದ್ದನು. ಇವರ ಸೇವೆಯಲ್ಲಿ ಬಹಳಷ್ಟು ಕಾಣಿಕೆಗಳನ್ನು ಕಳುಹಿಸುತ್ತಿದ್ದನು ಮತ್ತು ಅವರ ಅಧೀನನಾಗಿದ್ದನು. ಈತನು ಕಾಲೀಂಜರ್ ಕೋಟೆ ಕಟ್ಟಿಸಿ ಪೂರ್ಣಗೊಳಿಸಿದನು. ಈತನ ಅವಧಿಯಲ್ಲಿ ಶಂಕಲ್ ಹೆಸರಿನ ಒಬ್ಬ ವಿದ್ರೋಹಿಯು ಕೊಚ್ ಬಿಕಾರನಿಂದ ಹೊರಟು ರಾಜ್ಯದ ಮೇಲೆ ದಾಳಿ ಮಾಡಿದನು ಮತ್ತು ಬಂಗಾಲ ಹಾಗೂ ಬಿಹಾರ ಗೆದ್ದು ಪ್ರಬಲವಾದ ಸೈನ್ಯವನ್ನು ಕಟ್ಟಿ ಈತನು ಕೇದಾರನೊಂದಿಗೆ ಯುದ್ಧಗಳನ್ನು ಮಾಡಿದನು. ಅಂತಿಮವಾಗಿ ಈ ಯುದ್ಧಗಳ ಪರಿಣಾಮವಾಗಿ ಕೇದಾರನಿಗೆ ಸೋಲಾಯಿತು. ಶಂಕಲ್‌ನು ಗೆದ್ದನು. ಈ ರೀತಿಯಾಗಿ ಶಂಕಲ್‌ನು ಹಿಂದುಸ್ತಾನದ ರಾಜನಾದನು. ಕೇದಾರನ ರಾಜ್ಯಾವಧಿಯು ೧೯ ವರ್ಷವಿತ್ತು.

ಶಂಕಲ್‌ನ ಆಡಳಿತ:

ಶಂಕಲ್‌ನು ರಾಜ್ಯಾಡಳಿತವನ್ನು ಕೈಗೆತ್ತಿಕೊಂಡು ವಿಜೃಂಭಣೆಯಿಂದ ತನ್ನ ದರ್ಪವನ್ನು ಪ್ರಕಟಿಸಿದನು. ಈಗ ಗೂರ ಹೆಸರಿನಿಂದ ಪ್ರಸಿದ್ಧಿ ಪಡೆದ ಲಖನೌ ಪಟ್ಟಣವನ್ನು ಸ್ಥಾಪಿಸಿದನು. ಈ ಪಟ್ಟಣವು ಎರಡು ಸಹಸ್ರ ವರ್ಷಗಳವರೆಗೆ ಬಂಗಾಲ ಪ್ರಾಂತದ ಕೇಂದ್ರಾಡಳಿತವಾಗಿತ್ತು. ಆದರೆ ತೈಮೂರಿಯಾ ರಾಜರ ಅವಧಿಯಲ್ಲಿ ಹಾಳಾಯಿತು. ಇದರ ಬದಲಾಗಿ ತಾಂಡಾ ಇದನ್ನು ಅಧಿಕಾರಿಗಳು ತಮ್ಮ ವಸತಿಯನ್ನಾಗಿ ಮಾಡಿದರು. ಶಂಕಲ್‌ನು ಒಂದು ದೊಡ್ಡ ಸೈನ್ಯವನ್ನು ಕಟ್ಟಿದನು. ಈ ಸೈನ್ಯದಲ್ಲಿ ೪೦೦೦ ಆನೆಗಳು, ಒಂದು ಲಕ್ಷ ಅಶ್ವ ಸವಾರರು ಮತ್ತು ೪ ಲಕ್ಷ ಕಾಲ್ದಳದ ಸೈನಿಕರಿದ್ದರು. ಇದರಿಂದಾಗಿ ಈತನು ಗರ್ವದ ಅಮಲಿನಿಂದ ದುರಹಂಕಾರಿಯಾದನು. ಈತನ ರಾಜ್ಯಾವಧಿಯಲ್ಲಿ ಅಫ್ರಾಸಿಯಾಬ್‌ನು ತನ್ನ ರಾಜದೂತನನ್ನು ಕಪ್ಪ ಪಡೆಯಲು ಹಿಂದುಸ್ತಾನಕ್ಕೆ ಕಳುಹಿಸಿದಾಗ ಶಂಕಲ್‌ನು ಆತನನ್ನು ಹೀಯಾಳಿಸಿ, ಅಗೌರವದಿಂದ ಮರಳಿ ಕಳುಹಿದನು.

ಅಫ್ರಾಸಿಯಾಬ್‌ನಿಗೆ ಶಂಕಲ್‌ನ ಈ ವರ್ತನೆಯ ಮಾಹಿತಿ ದೊರೆತ ನಂತರ ಆತನು ಬಹಳ ಕೋಪಗೊಂಡು ತನ್ನ ಸೈನ್ಯದ ಮುಖ್ಯಾಧಿಕಾರಿಯಾದ 'ಪೈರಾನ್‌ವಲಿಯಾ' ಈತನನ್ನು ೫೦ ಸಾವಿರ ರಕ್ತಹೀರುವ ತುರ್ಕ ಸೈನಿಕರೊಂದಿಗೆ ಹಿಂದುಸ್ತಾನದಡೆಗೆ ಕಳುಹಿಸಿದನು. ಶಂಕಲ್‌ನು ಸಹ ಎದೆಗುಂದಲಿಲ್ಲ ಮತ್ತು ದೊಡ್ಡ ಸೈನ್ಯವನ್ನು ತನ್ನ ಜೊತೆಗೆ ತೆಗೆದುಕೊಂಡು ಪೀರಾನ್-ವಲಿಯಾನನ್ನು ಎದುರಿಸಲು ಹೊರಟು ನಿಂತನು. ಬಂಗಾಲದ ಗಡಿಯ ಹತ್ತಿರ ಕೋಚ್‌ನ ಅರಣ್ಯದಲ್ಲಿ ಎರಡು

ಸೈನ್ಯಗಳು ಎದುರಾದವು ಮತ್ತು ಯುದ್ಧವು ಆರಂಭವಾಯಿತು. ಯುದ್ಧವು ಎರಡು ದಿನ, ಎರಡು ರಾತ್ರಿಯವರೆಗೆ ನಿರಂತರವಾಗಿ ನಡೆಯಿತು. ಇದರಲ್ಲಿ ತುರ್ಕಿ ಸೈನಿಕರು ವೀರಾವೇಶದಿಂದ ಮತ್ತು ಧೈರ್ಯ ಸಾಹಸದಿಂದ ಶತ್ರುಗಳನ್ನು ಎದುರಿಸಿ ೫೦ ಸಾವಿರ ಶತ್ರುಗಳನ್ನು ನಿರ್ನಾಮ ಮಾಡಿದರು. ಆದರೆ ಶತ್ರುಗಳ ಸಂಖ್ಯೆ ಹೆಚ್ಚಾಗಿದ್ದ ಕಾರಣ ನಷ್ಟ ಅನುಭವಿಸಬೇಕಾಯಿತು ಮತ್ತು ಇವರ ೧೩ ಸಹಸ್ರ ಜನ ಸೈನಿಕರು ಮೃತಪಟ್ಟರು. ಅಂತಿಮವಾಗಿ ತುರ್ಕಿ ಸೈನಿಕರ ಸ್ಥಿತಿ ಕೆಡಲಾರಂಭಿಸಿತು. ಮೂರನೆಯ ದಿನ ಅನಿವಾರ್ಯವಾಗಿ ಯುದ್ಧದಿಂದ ವಿಮುಖರಾಗಲಾರಂಭಿಸಿದರು. ತುರ್ಕಿಗಳ ದೇಶವು ಬಹಳ ದೂರವಿದ್ದು ಶತ್ರುಗಳ ಮೇಲ್‌ಗೈಯಾಯಿತು. ಅದಕ್ಕಾಗಿ ತುರ್ಕಿ ಸೈನಿಕರು ಓಡಿಹೋಗಿ ಒಂದು ಸುರಕ್ಷಿತವಾದ ಸ್ಥಾನದಲ್ಲಿ ಮುಖ ಮರೆಸಿಕೊಂಡರು. 'ಪೀರಾನ್-ವಲಿಯ' ತನ್ನ ಸಹಚರರ ಅಭಿಪ್ರಾಯದಂತೆ ಒಂದು ಪತ್ರದಲ್ಲಿ ಈ ವಿಷಯವನ್ನು ಸಂಪೂರ್ಣವಾಗಿ ನಿರೂಪಿಸಿ ಅಫ್ರಾಸಿಯಾಬ್‌ನಿಗೆ ಕಳುಹಿಸಿದನು. ಹಗಲು-ಇರುಳು ಶತ್ರುಗಳ ದಾಳಿಯಿಂದ ತನ್ನ ರಕ್ಷಣೆಯನ್ನು ಕದ್ದು-ಮುಚ್ಚಿ ಮಾಡತೊಡಗಿದನು. ಹಿಂದು ಸೈನಿಕರನ್ನು ತುರ್ಕಿ ಸೈನ್ಯವು ನಾಲ್ಕು ಕಡೆಯಿಂದಲೂ ಸುತ್ತುವರೆದು ದಾಳಿ ಮಾಡುತ್ತಿತ್ತು. ಬಿಲ್ಲು ಬಾಣಗಳಿಂದ ಅವರನ್ನು ನಿಸ್ಸತ್ವ ಮಾಡುತ್ತಿದ್ದರು, ಆದರೂ ಕೊನೆಗೆ ಈ ಯುದ್ಧದ ಪರಿಣಾಮ ಏನಾಗುವದೋ ಎಂದು ಮತ್ತೆ ಮತ್ತೆ ಚಿಂತಾಕ್ರಾಂತನಾಗುತ್ತಿದ್ದನು.

ಈ ಕಾಲದಲ್ಲಿ ಅಫ್ರಾಸಿಯಾಬ್ ಕಂಕವರಸ್ ಪಟ್ಟಣದಲ್ಲಿ ವಾಸಿಸಿದ್ದನು ಎಂದು ಹೇಳಲಾಗುತ್ತದೆ. ಅದು ಖತಾ ಮತ್ತು ಖತೀನ ಇವುಗಳ ನಡುವೆ ಇದ್ದು, ಖಾನ ಬಾಲಿಗ್ ಒಂದು ತಿಂಗಳ ಪಯಣದಿಂದ ತಲುಪ ಬಹುದಾಗಿತ್ತು. ಅಫ್ರಾಸಿಯಾಬ್‌ನು 'ಪೀರಾನ್-ವಲಿಯಾ'ನ ಪರಿಸ್ಥಿತಿಯ ಬಗ್ಗೆ ತಿಳಿದಾಗ ಒಂದು ಲಕ್ಷ ತುರ್ಕಿ ಸವಾರರನ್ನು ಒಟ್ಟುಗೂಡಿಸಿ, ಹಿಂದುಸ್ತಾನದ ಕಡೆಗೆ ಹೊರಟು ನಿಂತನು. ಅತ್ಯಂತ ವೇಗವಾಗಿ ಪ್ರಯಾಣ ಮಾಡಿ, ಹಿಂದುಸ್ತಾನದಲ್ಲಿ ಶಂಕಲ್‌ನು ಎಲ್ಲಾ ರಾಜರುಗಳನ್ನು 'ಪೀರಾನ್-ವಲಿಯಾ'ನನ್ನು ಎದುರಿಸಲು ನಿಲ್ಲಿಸಿದಾಗ ಬಂದನು. ಎಲ್ಲ ಕಡೆಯಿಂದಲು ತುರ್ಕಿ ಸೈನ್ಯದ ಮುಖ್ಯಾಧಿಕಾರಿಯನ್ನು ಸುತ್ತುವರೆದು ಆಶ್ರಯ ಪಡೆಯದಂತೆ ಎಲ್ಲಾ ದಾರಿಗಳನ್ನು ಮುಚ್ಚಿಬಿಟ್ಟಿದ್ದರು. ಅಫ್ರಾಸಿಯಾಬ್‌ನು ಇಲ್ಲಿ ಬಂದ ಕೂಡಲೆ ಶತ್ರುಗಳ ಮೇಲೆ ಘೋರವಾದ ಹಲ್ಲೆ ಮಾಡಿದನು. ಈ ದಾಳಿಯ ಪರಿಣಾಮದಲ್ಲಿ ಹಿಂದುಗಳ ಕೈಯಲ್ಲಿದ್ದ ಖಡ್ಗಗಳು ಮತ್ತು ದೇಹದಲ್ಲಿದ್ದ ಹೃದಯವು ಕೆಲಸಕ್ಕೆ ಬರಲಿಲ್ಲ. ಅಫ್ರಾಸಿಯಾಬನ ಸೈನ್ಯವು ಆಕಾಶದಲ್ಲಿಯ ನಕ್ಷತ್ರಗಳಂತೆ ಹರಡಿ, ಹಿಂದು ಸೈನಿಕರು ತಮ್ಮ ಸಮಸ್ತ ಆಯುಧಗಳನ್ನು ಮತ್ತು ಇತರ ಯುದ್ಧ ಸಾಮಗ್ರಿಯನ್ನು ಯುದ್ಧ ಭೂಮಿಯಲ್ಲಿ ಬಿಟ್ಟು ಓಡಿದರು. ಪೀರಾನ್-ವಲಿಯಾನು ತನ್ನನ್ನು ಆವರಿಸಿದ್ದ ಈ ಆತಂಕದಿಂದ ಮುಕ್ತನಾಗಿ ತನ್ನ ಒಡೆಯ ಅಫ್ರಾಸಿಯಾಬ್‌ನ ಸೇವೆಯಲ್ಲಿ ಹಾಜರಾದನು.

ಅಫ್ರಾಸಿಯಾಬ್‌ನು ಆತನನ್ನು ಜೊತೆಯಲ್ಲಿ ಕರೆದುಕೊಂಡು ಪರಾರಿಯಾಗುತ್ತಿದ್ದ ಶತ್ರುಗಳ ಬೆನ್ನಟ್ಟಿದನು. ಮಾರ್ಗದಲ್ಲಿ ಕಂಡ ಜನರನ್ನು ಕೊಲ್ಲುತ್ತ ಹೊರಟನು. ಶಂಕಲ್‌ನು ಓಡುತ್ತಾ ಬಂಗಾಲ ದೇಶಕ್ಕೆ ಬಂದನು. ಅಲ್ಲಿ ಲಖ್ನೌತಿಯಲ್ಲಿ ಆಶ್ರಯ ಪಡೆದನು. ಆದರೆ ಇಲ್ಲಿಯೂ ಕೂಡ ತುರ್ಕಿಗಳು ಆತನನ್ನು ಬೆನ್ನಟ್ಟುವುದನ್ನು ಬಿಡಲಿಲ್ಲ. ತನ್ನ ಜೀವವನ್ನು ಉಳಿಸಿಕೊಳ್ಳಲು ಶಂಕಲ್ ಲಖ್ನೌತಿಯಲ್ಲಿ ಕೇವಲ ಒಂದು ದಿನ ಉಳಿದು ಕೋಹಿಸ್ಥಾನದ ಅರಣ್ಯ, *ತಿರಹಟ್(ಈ ಹೆಸರಿನ ಪ್ರಾಂತವು ಬಂಗಾಲದ ಎರಡು ಜಿಲ್ಲೆಗಳಾದ ಮುಜ್‌ಫರ್‌ಪೂರ ಮತ್ತು ಬಂಗಲಾಗಳಲ್ಲಿ ವಿಭಜನೆಗೊಂಡಿದ್ದು, ಈಗ ಅದರ ಹೆಸರು ತಿರಹಟ್ ಮುರ್ಜ ಎಂದಿಲ್ಲ) ಕಡೆ ಓಡಿಹೋದನು. ತುರ್ಕಿಗಳು ಬಂಗಾಲವನ್ನು ಲೂಟಿಮಾಡಿದುದಲ್ಲದೆ ಜನರ ಮೇಲೆ ಹಲ್ಲೆ ಮಾಡಿ ಜನವಸತಿಯನ್ನು ನಿರ್ನಾಮ ಮಾಡಿದರು. ಇಷ್ಟಾದರೂ ಕೂಡ ಅಫ್ರಾಸಿಯಾಬ್‌ನು ಆತನನ್ನು ಬೆನ್ನಟ್ಟುವುದನ್ನು ಬಿಡಲಿಲ್ಲ. ಇದರಿಂದ ಅನಿವಾರ್ಯವಾಗಿ ಶಂಕಲ್‌ನು ಅತ್ಯಂತ ಚಾಣಾಕ್ಷ ದೂತರನ್ನು ಅಫ್ರಾಸಿಯಾಬ್‌ನ ಬಳಿ ಕಳುಹಿಸಿ ತನ್ನನ್ನು ಕ್ಷಮಿಸಲು ಕೋರಿದನು ಮತ್ತು ಶರಣಾಗತನಾಗುವ ಇಚ್ಛೆ ವ್ಯಕ್ತಪಡಿಸಿದನು. ಅಫ್ರಾಸಿಯಾಬ್‌ನು ಈತನ ಕೋರಿಕೆ ಮನ್ನಿಸಿದನು. ಶಂಕಲ್‌ನು ಖಡ್ಗ ಮತ್ತು ಪ್ರೇತವಸ್ತ್ರ ಸುತ್ತಿಕೊಂಡು ಆತನ ಸೇವೆಯಲ್ಲಿ ಹಾಜರಾದನು ಮತ್ತು ತನ್ನನ್ನು ಅಫ್ರಾಸಿಯಾಬ್‌ನು ಜೊತೆಯಲ್ಲಿ ತೂರಾನ್ (ತುರ್ಕಿಸ್ಥಾನ)ಗೆ ಕರೆದುಕೊಂಡು ಹೋಗಲು ಪ್ರಾರ್ಥಿಸಿದನು. ಹಿಂದುಸ್ತಾನದ ರಾಜ್ಯವನ್ನು ಅಫ್ರಾಸಿಯಾಬ್‌ನು ಶಂಕಲ್‌ನ ಮಗ 'ಬರ್ಥಟ್'ನಿಗೆ ಒಪ್ಪಿಸಿದನು. ಶಂಕಲ್‌ನು ಉಳಿದ ಜೀವಾವಧಿಯನ್ನು ಅಫ್ರಾಸಿಯಾಬನ ಸೇವೆಯಲ್ಲಿ ಕಳೆದನು. ಹಮಾವರಾನ್ ಯುದ್ಧದಲ್ಲಿ ರುಸ್ತುಂನಿಂದ ಹತನಾದನು. ಶಂಕಲ್‌ನು ಹಿಂದುಸ್ತಾನದಲ್ಲಿ ೬೪ ವರ್ಷ ರಾಜ್ಯವಾಳಿದನು.

ಬರ್ಥಟ್‌ನ ಆಡಳಿತ

ಶಂಕಲ್‌ನ ಮಗ ಬರ್ಥಟ್ ಭಗವಂತನ ಆರಾಧಕ, ಸನ್ನಡತೆ ಮತ್ತು ಉದಾರ ಗುಣದವನಾಗಿದ್ದನು. ಈತನ ರಾಜ್ಯವು ಘಡಿಯಿಂದ ಮಾಲ್ವೆವರೆಗೆ ಹಬ್ಬಿತ್ತು. ಬರ್ಥಟ್‌ನು ತನ್ನ ರಾಜ್ಯದ ಆದಾಯವನ್ನು ಮೂರು ಭಾಗವನ್ನಾಗಿ ವಿಂಗಡಿಸುತ್ತಿದ್ದನು. ಒಂದು ಭಾಗವನ್ನು ಬಡವರು ಮತ್ತು ಫಕೀರರಿಗೆ ದಾನ ಮಾಡುತ್ತಿದ್ದನು, ಒಂದು ಭಾಗ ಸೈನ್ಯ ಹಾಗೂ ಪಶುಗಳ ಮೇಲೆ ವ್ಯಯಿಸುತ್ತಿದ್ದನು. ಈ ವಿಭಜನೆಯ ಕಾರಣದಿಂದ ಸೈನ್ಯದ ಸಂಖ್ಯೆಯು ಕಡಿಮೆಯಾಯಿತು. ಮಾಳವಾದ ರಾಜನು ಬರ್ಥಟ್‌ನ ಅಧೀನದಲ್ಲಿದ್ದು ಕಪ್ಪ ಕೊಡುತ್ತಿದ್ದವನು ವಿದ್ರೋಹಿಯಾಗಿ ಗ್ವಾಲಿಯರ್‌ನ ಕೋಟೆಯನ್ನು ಆತನ ಅಧಿಕಾರಿಗಳಿಂದ ಕಸಿದುಕೊಂಡು ತನ್ನ ಸ್ವಾಧೀನ ಮಾಡಿಕೊಂಡನು. ರಹತಾಸ್ ಕೋಟೆಯನ್ನು ನಿರ್ಮಿಸಿದನು. ಬರ್ಥಟ್ ರಾಜನು ರಹತಾಸ್‌ನಲ್ಲಿ ಒಂದು ಬೃಹತ್ ದೇವಾಲಯವನ್ನು ನಿರ್ಮಿಸಿ ದೇವತಾರಾಧನೆಯಲ್ಲಿ ನಿರತನಾದನು. ಬರ್ಥಟ್‌ನು

೮೧ ವರ್ಷ ರಾಜ್ಯವಾಳಿ ಮೃತನಾದನು. ಬರ್ಧಟ್‌ನಿಗೆ ಸಂತಾನವಿಲ್ಲದ ಕಾರಣ ಆತನ ಮರಣಾನಂತರ ರಾಜಧಾನಿಯಾದ ಕನೋಜ್‌ನ ಸುತ್ತ-ಮುತ್ತ ಅರಾಜಕತೆಯ ಅವಧಿಯು ಆರಂಭವಾಯಿತು. ಕಚ್ವಾಹ ಜನಾಂಗದ ಮಹಾರಾಜ ಎಂಬ ವ್ಯಕ್ತಿ ಮಾರವಾಡದಿಂದ ಹೊರಟು ಕನೋಜ್‌ನ ಮೇಲೆ ಅಧಿಕಾರ ಸ್ಥಾಪಿಸಿ ಹಿಂದುಸ್ತಾನದ ರಾಜನಾದನು.

ಮಹಾರಾಜ ಕಚ್ವಾಹನ ಆಡಳಿತ:

ಮಹಾರಾಜನು ರಾಜ್ಯದ ಆಡಳಿತವನ್ನು ಕೈಗೆತ್ತಿಕೊಂಡ ಮೇಲೆ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದನು. ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡ ಮೇಲೆ, ನಹರವಾಲಾ (ಗುಜರಾತ) ನಾಡಿನ ಮೇಲೆ ದಾಳಿ ಮಾಡಿದನು. ಅಲ್ಲಿಯ ಪ್ರಭಾವಿ ಜಮೀನದಾರರಿಂದ ಜಮೀನುಗಳನ್ನು ಕಸಿದು ತನ್ನ ಸ್ವಾಧೀನಪಡಿಸಿಕೊಂಡು ಮಹಾರಾಜನು ಮರಳಿದನು. ಈತನು ೪೦ ವರ್ಷ ರಾಜ್ಯವಾಳಿ ಮೃತಪಟ್ಟನು. ಮಹಾರಾಜನು ಗಷತಾಸಬನ ಅಧೀನನಾಗಿದ್ದು ಪ್ರತಿ ವರ್ಷ ಆತನಿಗೆ ಕಪ್ಪ-ಕಾಣಿಕೆ ಇತ್ಯಾದಿಗಳನ್ನು ಕಳುಹಿಸುತ್ತಿದ್ದನು.

ಕೇದರಾಜನ ಆಡಳಿತ:

ಮಹಾರಾಜನ ಮರಣಾನಂತರ ಆತನ ಮೃತ್ಯು ಪತ್ರದಂತೆ ಈತನ ಸಹೋದರನ ಮಗನಾದ 'ಕೇದರಾಜ' ಸಿಂಹಾಸನಾರೂಢನಾದನು. ಈತನ ಕಾಲದಲ್ಲಿ ರುಸ್ತುಮನು ನಿಧನನಾದನು, ಕೆಲವು ಕಾಲದವರೆಗೆ ಪಂಜಾಬಿನಲ್ಲಿ ಪ್ರಬಲ ರಾಜನಿರಲಿಲ್ಲ, ಇದನ್ನು ತಿಳಿದ ಕೇದರಾಜನು ಪಂಜಾಬಿನ ಮೇಲೆ ದಾಳಿ ಮಾಡಿ ತನ್ನ ಸ್ವಾಧೀನಪಡಿಸಿಕೊಂಡನು. ಹಿಂದುಸ್ತಾನದ ಪುರಾತನ ಪಟ್ಟಣಗಳಲ್ಲೊಂದಾದ ಭೀರಾ ಪಟ್ಟಣದಲ್ಲಿ ಜಮ್ಮು ಕೋಟೆಯನ್ನು ಕಟ್ಟಿಸಿದನು. ಖುಖ್ರು ಜನಾಂಗಕ್ಕೆ ಸಂಬಂಧಿಸಿದ ತನ್ನ ಒಬ್ಬ ಸಂಬಂಧಿಕ 'ವಾಕವರ್ಗ'ನು ರಾಜ್ಯವಾಳಲು ಅರ್ಹನಾಗಿದ್ದನು, ಆತನನ್ನು ಅಲ್ಲಿಯ ಆಡಳಿತಾಧಿಕಾರಿಯಾಗಿ ನಿಯಮಿಸಿದನು. ಅಲ್ಲಿಂದ ಇಲ್ಲಿಯವರೆಗೆ ಈ ಕೋಟೆಯು ಅದೇ ಜನಾಂಗದ ಸ್ವಾಧೀನದಲ್ಲಿತ್ತು. ಕೆಲ ಕಾಲದ ನಂತರ ಪಂಜಾಬಿನ ಜಮೀನದಾರರ ಎರಡು ಬಣಗಳಾದ 'ಖುಖರ್' ಮತ್ತು 'ಚೌಬಿಯಾ' ಇವರು 'ಕಾನೂಲ್' ಮತ್ತು 'ಕಂಧಾರ' ಮಧ್ಯದ ಅರಣ್ಯ ಪ್ರಾಂತ್ಯವನ್ನು ಮತ್ತು ಅರಣ್ಯ (ಭಾಗದ) ನಿವಾಸಿಗಳ ಏಕತೆಯಿಂದ ಒಂದು ದೊಡ್ಡ ಸೈನ್ಯವನ್ನು ಕಟ್ಟಿ ಕೇದರಾಜನ ಮೇಲೆ ದಾಳಿ ಮಾಡಿದ. ಕೇದರಾಜನು ಅನಿವಾರ್ಯವಾಗಿ ಈ ಪ್ರಾಂತವನ್ನು ಜಮೀನದಾರರರಿಗೆ ಒಪ್ಪಿಸಿದನು. ಆಗಿನಿಂದ ಈ ಜನಾಂಗವು ವಿವಿಧ ಸರದಾರರ ಆಧೀನದಲ್ಲಿದ್ದ ಪಂಜಾಬಿನ ಅರಣ್ಯ ಪ್ರದೇಶದಲ್ಲಿ ವಾಸಿಸಿದರು. ಈ ಜನಾಂಗಕ್ಕೆ ಈಗ 'ಅಫ್‌ಘಾನ'ರು ಎಂದು ಕರೆಯಲಾಗುತ್ತದೆ. ಕೇದರಾಜನು ೪೩ ವರ್ಷ ರಾಜ್ಯವಾಳಿ ತನ್ನ ಕರ್ತ್ಯವ್ಯವನ್ನು ಸೂಕ್ತವಾಗಿ ನಿರ್ವಹಿಸಿ ಮೃತಪಟ್ಟನು.

ಜಯಚಂದನ ಆಡಳಿತ:

ಜಯಚಂದನು ಕೇದರಾಜನ ಮುಖ್ಯ ಸೈನ್ಯಾಧಿಕಾರಿಯಾಗಿದ್ದನು. ಕೇದರಾಜನು ಮೃತಪಟ್ಟನಂತರ ಜಯಚಂದನು ಅಧಿಕಾರವನ್ನು ಪಡೆದು ರಾಜ್ಯದ ಮೇಲೆ ಸ್ವಾಧೀನ ಸ್ಥಾಪಿಸಿ, ತಾನೇ ಸ್ವತಃ ರಾಜನಾಗಿಬಿಟ್ಟನು.. ಈತನ ಆಡಳಿತಾವಧಿಯಲ್ಲಿ ಭೀಕರ ಕ್ಷಾಮವು ತಲೆದೋರಿತು, ರಾಜ ಪರಿವಾರದೊಡನೆ ಸಂಬಂಧವಿರದ ಕಾರಣ ಭಗವದ್ಭಕ್ತರನ್ನು ನಿರ್ಲಕ್ಷಿಸಿ 'ಬಯಾನಾ' ಪಟ್ಟಣದಲ್ಲಿ ಸುಖಲೋಲುಪತೆಯಲ್ಲಿ ಸಂತುಷ್ಟನಾಗಿ ಕಾಲಕಳೆಯತೊಡಗಿದನು. ಪರಮಾತ್ಮನು ಸೃಷ್ಟಿಸಿದ ಜನಸಾಮಾನ್ಯರು ಮೃತಪಟ್ಟರು, ಸೈನ್ಯ ಮತ್ತು ಪ್ರಜೆಗಳು ಹಾನಿಗೊಳಗಾಗಿ ಬಹಳಷ್ಟು ಹಳ್ಳಿಗಳು ಹಾಳಾದವು. ಇದಾದ ನಂತರವೂ ಜಯಚಂದನು ರಾಜ್ಯದ ಆಡಳಿತ ಮತ್ತು ಪ್ರಜೆಗಳತ್ತ ಗಮನ ಹರಿಸದೇ ಕಡೆಗಾಣಿಸಿದ ಕಾರಣ ಒಂದು ಕಾಲಾವಧಿಯವರೆಗೆ ಹಿಂದುಸ್ತಾನವು ತನ್ನ ಸುಸ್ಥಿತಿಗೆ ಬರಲಾಗಲಿಲ್ಲ. ಸಮಸ್ತ ದೇಶದ ಮೇಲೆ ನಿರಾಶೆಯ ಕಾರ್ಮೋಡವು ಕವಿಯಿತು. ಜಯಚಂದನು ೬೦ ವರ್ಷ ರಾಜ್ಯವಾಳಿ ಮೃತಪಟ್ಟನು. ಈತನು 'ಬೆಹಮನ್' ಹಾಗೂ 'ದಾರಬ್' ಇವರ ಸಮಕಾಲೀನನಾಗಿದ್ದನು ಮತ್ತು ಈ ಅರಸರಿಗೆ ಕಾಣಿಕೆಯನ್ನು ಕಳುಹಿಸುತ್ತಿದ್ದನು. ಜಯಚಂದನು ಮೃತನಾದಾಗ ಆತನ ಪುತ್ರನು ಇನ್ನೂ ಅಪ್ರಾಪ್ತ ಬಾಲಕನಾಗಿದ್ದನು. ರಾಜ್ಯದ ಆಡಳಿತ ನಿರ್ವಹಿಸಲು ಅರ್ಹನಾಗಿರಲಿಲ್ಲ. ಆದುದರಿಂದ ಜಯಚಂದನ ಪತ್ನಿ, ಅಪ್ರಾಪ್ತ ಬಾಲಕನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಸ್ವತಃ ತಾನು ರಾಜ್ಯಭಾರವನ್ನು ನಡೆಸುತ್ತಿದ್ದಳು. ಕೆಲವು ಕಾಲದ ನಂತರ ಜಯಚಂದನ ಸಹೋದರ 'ದಹಲು' ರಾಜ್ಯದ ಸರದಾರ ಮತ್ತು ಶ್ರೀಮಂತ ಅಧಿಕಾರಿಗಳ ಒಮ್ಮತದಿಂದ ಈ ಬಾಲಕನನ್ನು ಸಿಂಹಾಸನದಿಂದ ಇಳಿಸಿ ರಾಜ್ಯಭಾರ ನಡೆಸಿದನು.

ದಹಲು ರಾಜನ ಆಡಳಿತ:

ದಹಲು ರಾಜನು ಅತ್ಯಂತ ಧೈರ್ಯಶಾಲಿ ಹಾಗೂ ಶೂರನಾಗಿದ್ದನು. ತನ್ನ ರಾಜ್ಯದ ಜನರೊಂದಿಗೆ ಪ್ರೀತಿಯಿಂದ ವ್ಯವಹರಿಸುತ್ತಿದ್ದನು ಮತ್ತು ಸದಾ ಅವರನ್ನು ಸಂತುಷ್ಟರನ್ನಾಗಿರಿಸಲು ಪ್ರಯತ್ನಿಸುತ್ತಿದ್ದನು. ಪ್ರಜೆಗಳು ಸಂತೋಷದಿಂದ ಇರಲು ಪಟ್ಟಣಗಳನ್ನು ನಿರ್ಮಿಸಿದನು. ದಹಲು ರಾಜನ ೪೦ ವರ್ಷದ ಆಡಳಿತ ಮುಗಿದ ನಂತರ ಕಮಾಯುನ್ ರಾಜರುಗಳ ಒಬ್ಬ ಸಂಬಂಧಿಕ ಘೋರ *(ಘೋರ ಎಂದರೆ ಖ್ಯಾತಿ ಪಡೆದ ರಾಜ ಪೋರಸ್‌ನಾಗಿದ್ದು ಈತನು ಸಿಕಂದರ್‌ನ ಜೊತೆ ಯುದ್ಧಮಾಡಿದ್ದನು.) ಎಂಬ ವ್ಯಕ್ತಿ ದಹಲು ರಾಜನ ವಿರುದ್ಧ ವಿದ್ರೋಹ ಮಾಡಿದನು. ಮೊದಲು ಘೋರನು ಕಮಾಯುನ್ ಮೇಲೆ ಸ್ವಾಧೀನ ಪಡೆದು ನಂತರ ಕನೋಜ್ ಕೋಟೆಯ ಮೇಲೆ ದಾಳಿ ಮಾಡಿದನು. ಅಲ್ಲಿ ರಾಜಾ ದಹಲು ಜೊತೆಗೆ ಘನ ಘೋರ ಯುದ್ಧವಾಯಿತು. ಆ ಯುದ್ಧದಲ್ಲಿ ದಹಲು ಬಂದಿಯಾದನು. ಆತನನ್ನು ಘೋರನು ರೆಹತಾಸ್ ಕೋಟೆಯಲ್ಲಿ ಬಂದಿಯಾಗಿರಿಸಿದನು.

ರಾಜಾ ಘೋರನ ಆಡಳಿತ:

ಘೋರನು ರಾಜಾ ದಹಲುನನ್ನು ರೆಹತಾಸ್ ಕೋಟೆಯಲ್ಲಿ ಬಂದಿಯಾಗಿರಿಸಿದ ನಂತರ ಬಂಗಾಲದ ಮೇಲೆ ಸ್ವಾಧೀನ ಸಾಧಿಸಿ ಸಮುದ್ರದವರೆಗೆ ಸಂಪೂರ್ಣ ಪ್ರಾಂತವನ್ನು ಗೆದ್ದು ತನ್ನ ವಶಪಡಿಸಿಕೊಂಡು ಹಿಂದುಸ್ತಾನದ ಅತ್ಯಂತ ಪ್ರಬಲ ರಾಜನಾಗಿಬಿಟ್ಟನು. ಇತಿಹಾಸಕಾರರೆಲ್ಲ ಘೋರನಿಗಿಂತಲೂ ಪ್ರಬಲ ಅರಸ ಹಿಂದುಸ್ತಾನದಲ್ಲಿ ಹುಟ್ಟಲಿಲ್ಲವೆಂದು ಒಮ್ಮತದಿಂದ ಒಪ್ಪುತ್ತಾರೆ. ಘೋರನು ಹಿಂದಿನ ಹಿಂದುಸ್ತಾನದ ರಾಜರುಗಳಂತೆ ಇರಾನಿನ ರಾಜರಿಗೆ ಕಪ್ಪ–ಕಾಣಿಕೆಗಳನ್ನು ಕೊಡುವುದನ್ನು ನಿಲ್ಲಿಸಿದನು. ಈ ಕಾರಣದಿಂದ ಘೋರನ ರಾಜ್ಯದ ಮೇಲೆ ಸಿಕಂದರನು ದಾಳಿ ಮಾಡಿದನು. ಘೋರನು ಈ ದಾಳಿಯನ್ನು ಅಲಕ್ಷಿಸಿ ಒಂದು ಪ್ರಬಲ ಸೈನ್ಯವನ್ನು ಒಗ್ಗೂಡಿಸಿ ಹಿಂದುಸ್ತಾನದ ಗಡಿಭಾಗದಲ್ಲಿ ಸಿಕಂದರನನ್ನು ಎದುರಿಸಿದನು. ಉಭಯಪಕ್ಷದವರಲ್ಲಿ ಘನ ಘೋರ ಯುದ್ಧವು ನಡೆದು, ಘೋರನು ಈ ಯುದ್ಧದಲ್ಲಿ ಮೃತನಾದನು. ಘೋರನು ೭೩ ವರ್ಷ ರಾಜ್ಯವಾಳಿದನು.

ಪ್ರಪಂಚದಲ್ಲಿ ಘಟಿಸುವ ಎಲ್ಲ ಘಟನಾವಳಿಗಳ ಬಗ್ಗೆ ಮಾಹಿತಿ ಪಡೆದ ಜನರು ಗಮನಿಸಬೇಕಾದ ಅಂಶವೇನೆಂದರೆ, ಮೇಲೆ ವಿವರಿಸಿದ ಘಟನಾವಳಿಗಳ ಜೊತೆಯಲ್ಲಿ ಹಿಂದುಸ್ತಾನದಲ್ಲಿ ಇನ್ನೂ ಕೆಲವು ಪ್ರಖ್ಯಾತ ರಾಜರುಗಳು ಈ ಕಾಲದಲ್ಲಿ ಗತಿಸಿಹೋದರು. ಉದಾಹರಣೆಗೆ ಗುಲ್–ಚಂದ ಈತನು 'ಗುಲಬರ್ಗಾ' ಪಟ್ಟಣವನ್ನು ಸ್ಥಾಪಿಸಿದನು. ರಾಜಾ ಮರಚ್–ಚಂದನ ಹೆಸರಿನಿಂದ ಮಿರಜ್ ಎಂಬ ಗ್ರಾಮವು ಇವತ್ತಿಗೂ ಜನನಿಬಿಡವಾಗಿದೆ. ಬಜೆ–ಚಂದನು ಬಿಜಾಪುರವನ್ನು ಸ್ಥಾಪಿಸಿ, ಸಂಪೂರ್ಣ ದಕ್ಕನಿನ ರಾಜಧಾನಿಯನ್ನಾಗಿ ಮಾಡಿದನು, ಇತ್ಯಾದಿ ಇತ್ಯಾದಿ... ಎಲ್ಲಾ ರಾಜರುಗಳ ಹೆಸರಿನ ಪಟ್ಟಿಮಾಡುವುದು ಸುದೀರ್ಘವಾದ ಬರವಣಿಗೆಯಾಗುತ್ತದೆ.

ಸಿಕಂದರನು ಹಿಂದುಸ್ತಾನದ ಮೇಲೆ ದಾಳಿ ಮಾಡಿದಾಗ 'ಬೀದರ' ಕೋಟೆಯನ್ನು ಕಟ್ಟಿಸಿದ ಜನಾಂಗದ ಖೊಂರಾಜ ಬೀದರನು ಸಿಕಂದರನ ದಾಳಿಯಲ್ಲಿ ಪೋರಸನ ಮರಣಕ್ಕಾಗಿ ಬಹಳ ವ್ಯಥೆಪಟ್ಟನು. ದಖನನಿನ ಎಲ್ಲಾ ಜನಾಂಗ ಮತ್ತು ಪಂಗಡಗಳು ಶೌರ್ಯ, ಧೈರ್ಯಕ್ಕಾಗಿ ಪ್ರಖ್ಯಾತಿ ಪಡೆದಿವೆ. ಈತನಿಗೆ ತನ್ನ ಸುರಕ್ಷತೆಯ ಚಿಂತೆಯಾಯಿತು. ತನ್ನಲ್ಲಿದ್ದ ಸಾಕಷ್ಟು ಹಣ, ಆಭರಣ, ಆನೆ, ಕುದುರೆಗಳು ಮುಂತಾದವುಗಳನ್ನು ತನ್ನ ಮಗನೊಂದಿಗೆ ಸಿಕಂದರನ ಸೇವೆಯಲ್ಲಿ ಕಳುಹಿಸಿ ಕೊಟ್ಟನು. ಸಿಕಂದರನು ತನ್ನ ರಾಜ್ಯದ ಮೇಲೆ ದಾಳಿ ಮಾಡಕೂಡದು ಮತ್ತು ತನ್ನನ್ನೂ ಇದ್ದ ಪರಿಸ್ಥಿತಿಯಲ್ಲಿ ಬಿಟ್ಟು ಇರಾನಿಗೆ ಮರುಳುವಂತೆ ಕೋರಿಕೊಂಡನು, ಸಿಕಂದರನು ರಾಜನ ಕೋರಿಕೆಯಂತೆ ದಾಳಿ ಮಾಡದೆ ಮರಳಿ ಇರಾನಿಗೆ ಹೋಗಿಬಿಟ್ಟನು.

ರಾಜಾ ಸೇನಸಾರ ಚಂದನ ಆಡಳಿತ:

ಫೋರನ ಮರಣಾನಂತರ ಮತ್ತು ಸಿಕಂದರನು ಇರಾನಿಗೆ ಹಿಂತಿರುಗಿ ಹೋದ ನಂತರ, ಸೇನಸಾರ ಚಂದ ಎಂಬ ಒಬ್ಬ ವ್ಯಕ್ತಿ ಹಿಂದುಸ್ತಾನದ ಆಡಳಿತವನ್ನು ತನ್ನ ಕೈಗೆತ್ತಿಕೊಂಡು ಕೆಲವೇ ಸಮಯದಲ್ಲಿ ಹಿಂದುಸ್ತಾನದಲ್ಲಿ ಸ್ಥಾಯಿ ಮತ್ತು ಸದೃಢ ಆಡಳಿತವನ್ನು ಸ್ಥಾಪಿಸಿದನು. ಈ ರಾಜನು ಪೋರಸನಿಗಾದ ಪರಿಸ್ಥಿತಿಯನ್ನು ತನ್ನ ಕಣ್ಣಿಂದ ನೋಡಿದ ಕಾರಣ, ಪ್ರತಿ ವರ್ಷ ಅವನು ಕಪ್ಪದ ರೂಪದಲ್ಲಿ ಕೇಳುವುದಕ್ಕಿಂತ ಮೊದಲೇ ಇರಾನ ಶಹಾ 'ಗೊದರಜ'ಗೆ ಕಾಣಿಕೆ ಕಳುಹಿಸುತ್ತಿದ್ದನು. ಸೇನಸಾರನ ಆಳ್ವಿಕೆಯ ೭೦ ವರ್ಷ ಅವಧಿ ಮುಗಿದನಂತರ 'ಜೊನಾ' ಹೆಸರಿನ ವ್ಯಕ್ತಿ ವಿದ್ರೋಹ ಮಾಡಿ ರಾಜ್ಯವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು.

ರಾಜಾ ಜೋನಾನ ಆಡಳಿತ:

ಕೆಲವು ಜನರ ಅಭಿಪ್ರಾಯದ ಪ್ರಕಾರ, 'ಜೋನಾ' ರಾಜನು, ರಾಜಾ ಕಾಫೂರ್‌ನ ಸಹೋದರನಿದ್ದನು. ಅವನು ಸಿಂಹಾಸನಾರೂಢನಾದ ಕೂಡಲೇ ತನ್ನ ಸದ್ಗುಣ ಮತ್ತು ಶೀಲ ಸಂಪನ್ನತ್ವದಿಂದ ರಾಜ್ಯದ ಜನರನ್ನು ಸಂತುಷ್ಟಗೊಳಿಸಲು ಪ್ರಯತ್ನಿಸಿದ. ಗಂಗಾ ಮತ್ತು ಯಮುನಾ ನದಿಗಳ ತೀರದಲ್ಲಿ ಬಹಳ ಗ್ರಾಮಗಳನ್ನು ಸ್ಥಾಪಿಸಿದನು ಮತ್ತು ನ್ಯಾಯಯುತವಾಗಿ ಆಳಿದನು. ರಾಜಾ ಜೋನನ ಸಮಕಾಲೀನ ಇರಾನಿನ ಬಾದಶಹನಾದ 'ಅರ್ದಶರ್ ಬಾಬಾಕಾ'ನು ಹಿಂದುಸ್ತಾನವನ್ನು ಗೆಲ್ಲುವ ಉದ್ದೇಶದಿಂದ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹಿಂದುಸ್ತಾನದ ಗಡಿಯವರೆಗೆ ಬಂದು ಬಿಟ್ಟಾಗ, ರಾಜಾ ಜೋನನಿಗೆ ಅತೀವ ತಳಮಳವಾಯಿತು. ಅದಕ್ಕಾಗಿ ಆತನು 'ಅರ್ದಶರ್ ಬಾಬಾಕಾ'ನ ಸೇವೆಯಲ್ಲಿ ಸ್ವತಃ ಹಾಜರಾಗಿ ಸಾಕಷ್ಟು ಹಣ ಮತ್ತು ಆಭರಣಗಳಲ್ಲದೇ ಆನೆಗಳನ್ನು ಆತನಿಗೆ ಕಾಣಿಕೆಯಾಗಿ ನೀಡಿದನು . ಈ ಕಾರಣದಿಂದ ಅರ್ದಶೆರ್ ದಾಳಿ ಮಾಡದೆ ಮರಳಿ ಹೋದನು. ಆತನು ಮರಳಿ ಹೋದನಂತರ ಜೋನ ತಿರುಗಿ ಕನೋಜಗೆ ಬಂದು ಕೆಲ ಕಾಲದವರೆಗೆ ಸುಖವಾಗಿದ್ದು ರಾಜ್ಯವಾಳಿದನು. ಈ ಘಟನೆಯ ೯೦ ವರ್ಷದ ನಂತರ ಈತನು ಮರಣ ಹೊಂದಿದನು. ಜೋನನಿಗೆ ೨೨ ಮಕ್ಕಳಿದ್ದರು. ಅವರಲ್ಲಿ ಹಿರಿಯ ಮಗನ ಹೆಸರು 'ಕೃಪಾನ ಚಂದ' ಇದ್ದು ತಂದೆಯ ನಿಧನಾನಂತರ ರಾಜ್ಯದ ಉತ್ತರಾಧಿಕಾರಿಯಾದನು.

ರಾಜಾ ಕೃಪಾನ ಚಂದನ ಆಡಳಿತ:

ಕೃಪಾನ ಚಂದನು ನಿರ್ದಯಿ ಮತ್ತು ಕ್ರೂರಿ ರಾಜನಾಗಿದ್ದನು. ಸಣ್ಣ ಸಣ್ಣ ತಪ್ಪುಗಳ ಕಾರಣಕ್ಕಾಗಿ ಜನರನ್ನು ಕೊಲ್ಲಿಸುತ್ತಿದ್ದನು. ಸಾಮಾನ್ಯ ಜನರ ಮೇಲೆ ವಿಧ ವಿಧವಾದ ಆರೋಪಗಳನ್ನು ಹೊರೆಸಿ ಅವರ ಸ್ವತ್ತನ್ನು ಕಬಳಿಸುತ್ತಿದ್ದನು. ರಾಜ್ಯದ ಜನರೊಂದಿಗೆ ಬಲವಂತವಾಗಿ ಹಣವನ್ನು ವಸೂಲಿ ಮಾಡುತ್ತಿದ್ದನು. ಈ ದಬ್ಬಾಳಿಕೆಯ

ಫಲವಾಗಿ ಜನರು ರಾಜ್ಯಧಾನಿಯನ್ನು ಬಿಟ್ಟು ಬೇರೆ ಬೇರೆ ಪ್ರಾಂತಗಳಿಗೆ ಹೊರಟರು. ಈ ರೀತಿ ಹಿಂದುಸ್ತಾನದ ಆಡಳಿತವೂ ಕ್ಷೀಣಗೊಂಡಿತು. ಖನ್ನೋಜಿನ ಸಾಮೂಹಿಕ ಶಕ್ತಿಯು ಕುಂದಿ, ಸೈನ್ಯದ ಸಂಖ್ಯೆ ಕಡಿಮೆಯಾಗಿ ಏಕಾಂಗಿಯಾದನು. ರಾಜ್ಯದಲ್ಲಿ ಹಿಂದಿನ ವೈಭವ ಉಳಿಯಲಿಲ್ಲ. ಹಿಂದುಸ್ತಾನದಲ್ಲಿ ಅರಾಜಕತೆಯ ಕಾಲಾವಧಿಯು ಆರಂಭವಾಗಿ ಸುತ್ತ-ಮುತ್ತಲಿನ ರಾಜರುಗಳೆಲ್ಲಾ ಬಂಡೆದ್ದು ಸ್ವತಂತ್ರರಾದರು. ಈ ರೀತಿ ವಿದ್ರೋಹಿ ಮತ್ತು ಸ್ವತಂತ್ರ ರಾಜರುಗಳು ಶ್ರೇಷ್ಠರಾಗಿ ಪ್ರಬಲರಾದುದರಿಂದ ಅವರ ಬಗ್ಗೆ ಇತಿಹಾಸದಲ್ಲಿ ಬರೆಯುವುದು ಅವಶ್ಯಕವೆನಿಸಿದೆ. ಇಲ್ಲಿ ಕೇವಲ ಖನ್ನೋಜ್ ಮತ್ತು ಹಿಂದುಸ್ತಾನದ ರಾಜರುಗಳ ಬಗ್ಗೆ ಮಾತ್ರ ಉಲ್ಲೇಖಿಸಿ ಉಳಿದುದನ್ನು ಬಿಡಲು ಸಾಧ್ಯವಿಲ್ಲ, ಅನ್ಯ ರಾಜರುಗಳ ಬಗ್ಗೆಯೂ ಉಲ್ಲೇಖಿಸಲಾಗಿದೆ. ಈ ಕೆಳಗೆ ಮಾಳವಾದ ರಾಜಾ ವಿಕ್ರಮಾದಿತ್ಯನ ಸ್ಥಿತಿ-ಗತಿಯನ್ನು ನಿರೂಪಿಸಲಾಗುತ್ತಿದೆ.

ರಾಜಾ ವಿಕ್ರಮಾದಿತ್ಯನ ಆಡಳಿತ:

ವಿಕ್ರಮಾದಿತ್ಯ ರಾಜನ ಸಂಬಂಧವು ಸಂಪೂರ್ಣ ರಾಷ್ಟ್ರದೊಂದಿಗೆ ಇತ್ತು. ಆತನು ಸ್ವಾಭಾವಿಕವಾಗಿಯೇ ಸದ್ಗುಣಿಯಾಗಿದ್ದನು. ರೂಢಿಯಿಂದ ತಿಳಿದು ಬರುವುದೇನೆಂದರೆ ಹಿಂದು ಜನಾಂಗದಲ್ಲಿ ವಿಕ್ರಮಾದಿತ್ಯನು ಕಥೆಯಂತೆ ಪ್ರಸಿದ್ಧನು. ವಿಕ್ರಮಾದಿತ್ಯನು ಯುವಾವಸ್ಥೆಯ ಆರಂಭದಿಂದಲೇ ಕೆಲವು ವರ್ಷಗಳವರೆಗೆ ಫಕೀರನಂತೆ ವೇಷ-ಭೂಷಣಗಳನ್ನು ತೊಟ್ಟುಕೊಂಡು ಅವರ ಗುಂಪಿನಲ್ಲಿ ಸೇರಿಕೊಂಡು ಅಲ್ಲಲ್ಲಿಯ ರಾಜಕೀಯ ಸ್ಥಿತಿಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದನು. ವಿಕ್ರಮಾದಿತ್ಯನ ವಯಸ್ಸು ೫೦ ವರ್ಷವಾದಾಗ, ಆತನು ಜನರ ನೇತೃತ್ವ ವಹಿಸಿ, ಶೌರ್ಯ, ಸಾಹಸದ ಮೈದಾನದಲ್ಲಿ ಕಾಲಿರಿಸಿದನು. ಬಹುಶಃ ಫಕೀರನು ಬಹು ದೊಡ್ಡ ರಾಜನಾಗಿ ಪರಮಾತ್ಮನ ಸೇವಕರನ್ನು ಕ್ರೂರಿ ರಾಜರುಗಳ ಕಪಿಮುಷ್ಠಿಯಿಂದ ಸ್ವತಂತ್ರರನ್ನಾಗಿ ಮಾಡಲಿ ಎಂಬುವುದು ಪರಮಾತ್ಮನ ಇಚ್ಛೆಯಾಗಿರಬಹುದು. ಈ ಕಾರಣದಿಂದಾಗಿ, ವಿಕ್ರಮಾದಿತ್ಯನು ಬಹಳ ಪ್ರಗತಿ ಸಾಧಿಸಿದನು. ಕೇವಲ ಅಲ್ಪಾವಧಿಯಲ್ಲಿ 'ನೆಹ್ರವಾಲಾ' ಮತ್ತು 'ಮಾಳವಾ' ಪ್ರದೇಶಗಳು ಈತನ ಸ್ವಾಧೀನದಲ್ಲಿ ಬಂದವು. ವಿಕ್ರಮಾದಿತ್ಯನು ರಾಜ್ಯಾಡಳಿತ ಕೈಗೆತ್ತುಕೊಂಡ ಮೇಲೆ ಜಗತ್ತಿನಲ್ಲಿ ನ್ಯಾಯಯುತವಾದ ಆಡಳಿತವು ಎಲ್ಲಡೆ ಹರಡಿತು. ವಿಕ್ರಮಾದಿತ್ಯನು ತನ್ನ ಔದಾರ್ಯದ ನೆರಳಿನಲ್ಲಿ ಪ್ರತಿ ಪಟ್ಟಣದ ನಿವಾಸಿಯನ್ನು ಸೇರಿಸಿಕೊಂಡನು. ಕ್ರೂರ ಮತ್ತು ನಿರ್ದಯಿ ರಾಜರುಗಳು ಹೇಳ ಹೆಸರಿಲ್ಲದಂತಾದರು. ವಿಕ್ರಮಾದಿತ್ಯನ ಸ್ಥಾನ-ಮಾನವು ಜಗತ್ತಿನ ಸಾಮಾನ್ಯ ಜನರಂತೆ ಇರದೆ ಅತ್ಯಂತ ಶ್ರೇಷ್ಠವಾಗಿದ್ದಿತೆಂದು ಹಿಂದು ಜನರು ನಂಬುತ್ತಿದ್ದರು. ಈತನ ವಿಶಾಲ ಹೃದಯ ಮತ್ತು ನಿಸ್ಪೃಹತೆಯ ಬಗ್ಗೆ ಹೇಳುವುದಾದರೆ ಮನಸ್ಸಿನಲ್ಲಿ ಬಂದ ಮಾತುಗಳು ಪರಿಶುದ್ಧವಾಗಿ ವ್ಯಕ್ತವಾಗುತ್ತಿದ್ದವು. ಪ್ರತಿ ರಾತ್ರಿ ರಾಜ್ಯದಲ್ಲಿ ನಡೆಯುವ ಒಳ್ಳೆಯ ಮತ್ತು ಕೆಟ್ಟ ಘಟನೆಗಳು ಎಲ್ಲವೂ ಮಾರನೆಯ ದಿನ ರಾಜನಿಗೆ ತಿಳಿದು ಬಿಡುತ್ತಿದ್ದವು.

ತಾನು ರಾಜನಾಗಿದ್ದರೂ ತನ್ನ ಪ್ರಜೆಗಳೊಂದಿಗೆ ಭ್ರಾತೃತ್ವದಿಂದ ವ್ಯವಹರಿಸುತ್ತಿದ್ದನು. ಈತನ ಮನೆಯ ಶ್ರೀಮಂತಿಕೆ ಎಂದರೆ, ಒಂದು ಮಣ್ಣಿನ ಹರಿವಾಣ ಹಾಗೂ ಒಂದು ಚಾಪೆ ಆಗಿದ್ದವು. ವಿಕ್ರಮಾದಿತ್ಯನು ಉಜ್ಜಯನಿಯನ್ನು ಸ್ಥಾಪಿಸಿ 'ಧಾರ' ಕೋಟೆಯನ್ನು ಕಟ್ಟಿಸಿ ತನ್ನ ವಾಸಸ್ಥಾನವಾಗಿಸಿಕೊಂಡನು. ಉಜ್ಜಯನಿಯ ಪ್ರಸಿದ್ಧ ಮಹಾಕಾಲ ದೇವಾಲಯವನ್ನು ವಿಕ್ರಮಾದಿತ್ಯನು ಕಟ್ಟಿಸಿದನು. ಜೋಗಿಗಳಿಗೆ ಹಾಗೂ ಬ್ರಾಹ್ಮಣರಿಗೆ ಪಿಂಚಣಿ ಬರುವಂತೆ ನಿಗದಿ ಮಾಡಿದನು. ಅವರೆಲ್ಲ ಈ ದೇವಾಲಯದಲ್ಲಿ ಇದ್ದು ಆರಾಧನೆ ಮಾಡುತ್ತಿದ್ದರು. ಈತನು ತನ್ನ ಹೆಚ್ಚಿನ ಸಮಯವನ್ನು ತನ್ನ ಪ್ರಜೆಗಳ ಸ್ಥಿತಿ–ಗತಿಗಳನ್ನು ತಿಳಿಯಲು ಹಾಗೂ ಭಗವಂತನ ಆರಾಧನೆಯಲ್ಲಿ ಕಳೆಯುತ್ತಿದ್ದನು. ಹಿಂದುಸ್ತಾನದ ಜನರು ವಿಕ್ರಮಾದಿತ್ಯ ರಾಜನ ಬಗ್ಗೆ ಸದ್ಭಾವನೆ ಇಟ್ಟುಕೊಂಡಿದ್ದರು. ರಾಜಾ ವಿಕ್ರಮಾದಿತ್ಯನ ಹೆಸರಿನಲ್ಲಿ ಆಶ್ಚರ್ಯಕರ ಕಥೆಗಳನ್ನು ಹೇಳಲಾಗುತ್ತದೆ. ಹಿಂದುಗಳ ವರ್ಷ, ತಿಂಗಳುಗಳ ಆರಂಭವು ವಿಕ್ರಮಾದಿತ್ಯ ರಾಜನು ಮೃತಪಟ್ಟ ದಿನ ಮತ್ತು ತಿಂಗಳಿಂದ ಆರಂಭವಾಗುತ್ತದೆ. ಈ ಗ್ರಂಥ ಬರೆಯುವ ಕಾಲದಲ್ಲಿ 'ಹಜ್ರತ್–ನಬೋಯಿ' ಇವರ ೧೦೧೫ ವರ್ಷ ಇದ್ದು, ವಿಕ್ರಮಾದಿತ್ಯನ ಶಕೆ ಆರಂಭದ ೧೬೬೩ ವರ್ಷಗಳು ಕಳೆದಿರುತ್ತವೆ. ವಿಕ್ರಮಾದಿತ್ಯ ರಾಜನು ಇರಾನಿನ 'ಬಾದಶಹ ಅರ್ದಷೆರ್'ನ ಸಮಕಾಲೀನನಾಗಿದ್ದನು. ಕೆಲವು ಜನರ ಹೇಳಿಕೆಯಂತೆ ಈತನ ಹಾಗೂ 'ಶಾಪುರ'ನ ಕಾಲ ಒಂದೇ ಇತ್ತು. ವಿಕ್ರಮಾದಿತ್ಯನ ಕೊನೆಯ ದಿನಗಳಲ್ಲಿ 'ಸಾಲಬಯಿನ್' ಎಂಬ ಜಮೀನದಾರನು ದಾಳಿ ಮಾಡಿದನು. ನರ್ಮದಾ ನದಿಯ ತಟದಲ್ಲಿ ಉಭಯ ಸೈನ್ಯಗಳ ಮಧ್ಯೆ ಘೋರವಾದ ಯುದ್ಧ ನಡೆದು, ಸಾಲಬಯಿನನು ಗೆದ್ದನು ಮತ್ತು ವಿಕ್ರಮಾದಿತ್ಯನು ಹತನಾದನು.

ಸಾಲಬಯಿನ ರಾಜ್ಯಾಡಳಿತದ ಬಗ್ಗೆ ರೂಢಿಯಲ್ಲಿ ಬಹಳಷ್ಟು ಹೇಳಿಕೆಗಳಿವೆ. ಅವುಗಳಿಗೆ ಐತಿಹಾಸಿಕ ದೃಷ್ಟಿಯಲ್ಲಿ ಹೆಚ್ಚು ಮಹತ್ವವಿರದ ಕಾರಣ ಅವುಗಳನ್ನಿಲ್ಲಿ ಉಲೇಖಿಸಿಲ್ಲ. ವಿಕ್ರಮಾದಿತ್ಯನ ಮರಣಾನಂತರ ಒಂದು ಕಾಲಾವಧಿಯವರೆಗೆ ಮಾಳವ ಪ್ರಾಂತವು ಅವನತಿಯ ಸ್ಥಿತಿಯಲ್ಲಿ ಇದ್ದು, ನಂತರದಲ್ಲಿ ನ್ಯಾಯಪ್ರೇಮಿ ಮತ್ತು ಉದಾರಿಯಾದ ಯಾವ ರಾಜನು ಆಳಲಿಲ್ಲ. ಮುಂದೆ ರಾಜಾ ಭೋಜನು ಆಳ್ವಿಕೆಯನ್ನು ತನ್ನ ಕೈಗೆ ತೆಗೆದುಕೊಂಡನು.

ಭೋಜ ರಾಜನ ಆಡಳಿತ:

ಭೋಜ ರಾಜನು ಪೂರ್ಣ ರಾಷ್ಟ್ರಕ್ಕೆ ಸಂಬಂಧಿಸಿದ್ದನು. ಈತನು ನ್ಯಾಯಪ್ರಿಯ ಹಾಗೂ ಉದಾರಿಯಾಗಿದ್ದು, ಪ್ರತಿಯೊಂದು ವಿಧದಿಂದ ವಿಕ್ರಮಾದಿತ್ಯನನ್ನು ಅನುಕರಿಸಿದನು. ರಾತ್ರಿಯಲ್ಲಿ ವೇಷ ಬದಲಾಯಿಸಿ ಅಲೆದಾಡುತ್ತಿದ್ದನು, ಅವಶ್ಯಕತೆ ಇದ್ದವರ, ಫಕೀರರು ಮತ್ತಿತರ ಜನರ ಸ್ಥಿತಿ–ಗತಿಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದನು.

ತನ್ನ ಪ್ರಜೆಗಳನ್ನು ಸಂತುಷ್ಟರನ್ನಾಗಿ ಇಡಲು ನಿರಂತರವಾಗಿ ಪ್ರಯತ್ನಿಸುತ್ತಿದ್ದನು. ಕಹರಖೊ, ವಿಜಯನಗರ ಮತ್ತು ನಹಡಿಯಾ, ಈ ಮೂರು ಸ್ಥಳಗಳು ಭೋಜ ರಾಜನ ಅವಧಿಯಲ್ಲಿ ನಿರ್ಮಾಣವಾದವು. ಭೋಜರಾಜನು ಸ್ತ್ರೀಲೋಲನಾಗಿದ್ದು ಪ್ರತಿ ವರ್ಷ ಎರಡು ಬಾರಿ ಅದ್ದೂರಿಯಾದ ಸಂತೋಷಕೂಟಗಳನ್ನು ಏರ್ಪಡಿಸುತ್ತಿದ್ದನು. ಅದರಲ್ಲಿ ಹಿಂದುಸ್ತಾನದ ಪ್ರತಿಯೊಂದು ಭಾಗದಿಂದ ನಾಟ್ಯ ಹಾಗೂ ಸರೋದ ವಾದನ ತಜ್ಞರು ಭಾಗವಹಿಸುತ್ತಿದ್ದರು. ಈ ಸಭೆಯು ೪೦ ದಿನಗಳ ಕಾಲ ನಡೆಯುತ್ತಿತ್ತು. ಈ ಸಭೆಯಲ್ಲಿ ಕೇವಲ ನೃತ್ಯ ಹಾಗೂ ಗಾಯನವಲ್ಲದೆ ಬೇರೆ ಯಾವ ಕಾರ್ಯಗಳು ನಡೆಯುತ್ತಿರಲಿಲ್ಲ. ಬೀಳ್ಕೊಡುವ ಸಮಯದಲ್ಲಿ ಪ್ರತಿಯೊಬ್ಬರಿಗೆ ಪ್ರೀತಿಯಿಂದ ಬೆಲೆಬಾಳುವ ವಸ್ತ್ರಗೆಳನ್ನು ಹಾಗೂ ಹತ್ತು ಸುವರ್ಣದ ಪಾತ್ರೆಗಳನ್ನು ಕೊಡಲಾಗುತ್ತಿತ್ತು. ಭೋಜರಾಜನು ೫೦ ವರ್ಷ ರಾಜ್ಯವಾಳಿ ಮೃತನಾದನು.

ವಾಸುದೇವ ರಾಜನ ಆಳ್ವಿಕೆ:

ಭೋಜ ರಾಜನ ಕಾಲದಲ್ಲಿ ವಾಸುದೇವನೆಂಬ ವ್ಯಕ್ತಿ ಇದ್ದು, 'ಕನೋಜ'ದ ರಾಜನಾಗಿಬಿಟ್ಟನು. ಬಿಹಾರವು ಬಂಗಾಲಿನಂತೆ ಕನೋಜದಿಂದ ಬೇರೆಯಾಗಿತ್ತು, ವಾಸುದೇವನು ಅದನ್ನು ಪುನಃ ತನ್ನ ವಶಕ್ಕೆ ತೆಗೆದುಕೊಂಡನು. ತನ್ನ ದರ್ಪದ ಆಡಳಿತವನ್ನು ಅಲ್ಲಿ ಮಾಡತೊಡಗಿದನು. ವಾಸುದೇವನ ಆಳ್ವಿಕೆಯ ಕಾಲದಲ್ಲಿ 'ಬೆಹರಾಮ ಗೋರ' ಒಬ್ಬ ವ್ಯಾಪಾರಿಯ ವೇಷದಲ್ಲಿ ಹಿಂದುಸ್ತಾನಕ್ಕೆ ಬಂದಿದ್ದ ಎಂದು ಹೇಳಲಾಗುತ್ತದೆ. ಬೆಹರಾಮ ಗೋರನು ಹಿಂದುಸ್ತಾನಕ್ಕೆ ಬಂದ ಹಾಗೂ ಹಿಂದುಸ್ತಾನದಲ್ಲಿ ಆತನನ್ನು ಗುರುತಿಸಿದುದಕ್ಕೆ ಒಂದು ಕಥೆಯನ್ನು ಹೇಳಲಾಗುತ್ತದೆ. ಆತನು ಹಿಂದುಸ್ತಾನದಲ್ಲಿದ್ದಾಗ, ಒಂದು ಕಾಡಾನೆಯು ಕನೋಜಿಗೆ ಇದ್ದಕ್ಕಿದ್ದಂತೆ ನುಗ್ಗಿ ಬಂದಿತು. ಮದವೇರಿದ ಈ ಆನೆಯು ಜನರ ಪ್ರಾಣವನ್ನು ತೆಗೆಯದ ಒಂದು ದಿನವೂ ಇರಲಿಲ್ಲ. ವಾಸುದೇವ ರಾಜನು ಎಷ್ಟೋ ಸಾರಿ ಈ ಕಾಡಾನೆಯನ್ನು ಕೊಲ್ಲುವ ಪ್ರಯತ್ನ ಮಾಡಿದನು, ಆದರೆ ಪ್ರತಿ ಸಲವೂ ಅಸಫಲನಾಗಿದ್ದನು. ಬೆಹರಾಮನು ಕನೋಜದಲ್ಲಿ ಪ್ರವೇಶಿಸಿದ ದಿನ ಮದವೇರಿದ ಆನೆಯು ಪಟ್ಟಣದ ಗಡಿಯವರೆಗೆ ಬಂದಿತ್ತು ಹಾಗೂ ಪಟ್ಟಣದಲ್ಲಿ ಕೂಗಾಟದ ಗಲಾಟೆಯಾಗುತ್ತಿತ್ತು. ರಾಜನು ಪಟ್ಟಣದ ಎಲ್ಲಾ ಬಾಗಿಲುಗಳನ್ನು ಮುಚ್ಚಲು ಆದೇಶಿಸಿದನು. ಈ ಸಮಾಚಾರವು ಬೆಹರಾಮ ಗೋರನಿಗೆ ತಿಳಿದೊಡನೆ ಆತನೊಬ್ಬನೇ ಮದವೇರಿದ ಕಾಡಾನೆಯ ಮುಂದೆ ಬಂದು ನಿಂತನು, ಆತನು ಬಿಟ್ಟ ಒಂದೇ ಬಾಣದಿಂದ ಕ್ರೂರ ಆನೆಯು ಸತ್ತು ಹೋಯಿತು. ಪಟ್ಟಣದ ಜನರು ಈ ಘಟನೆಯನ್ನು ನೋಡಲು ಏಕತ್ರರಾಗಿದ್ದರು. ಈ ವಿಷಯ ತಿಳಿದ ತಕ್ಷಣ ಎಲ್ಲರೂ ಏಕ ಕಂಠದಿಂದ ಕೂಗಿ ಆತನ ಉಪಕಾರವನ್ನು ಸ್ಮರಿಸಿದರು, ಹಾಗೂ ಪ್ರೀತಿ ಮತ್ತು ವಿಶ್ವಾಸದಿಂದ ಬೆಹರಾಮ ಗೋರನ ಅಡಿಗೆರಗಿದರು. ಈ ವಿಷಯವು ರಾಜಾ ವಾಸುದೇವನಿಗೆ ತಿಳಿದಾಗ ಆತನು ಬೆಹರಾಮ ಗೋರನನ್ನು

ಬರಹೇಳಿದನು. ಬೆಹರಾಮ ಗೋರನು ರಾಜನ ಕರೆಗೆ ಓಗೊಟ್ಟು ಆತನ ಎದುರಿಗೆ ಬಂದನು. ರಾಜನ ಒಬ್ಬ ಅಧಿಕಾರಿಯು ಈತನನ್ನು ಗುರುತಿಸಿದ. ಏಕೆಂದರೆ ಒಂದು ವರ್ಷದ ಹಿಂದೆ ಈ ಅಧಿಕಾರಿಯು ಕಪ್ಪವನ್ನರ್ಪಿಸಲು ಇರಾನಿಗೆ ಹೋದಾಗ ಅಲ್ಲಿ ಈತನನ್ನು ಕಂಡಿದ್ದ. ಅಧಿಕಾರಿಯು ರಾಜನಿಗೆ ಈ ವಿಷಯವನ್ನು ತಿಳಿಸಿದನು. ಅದನ್ನು ತಿಳಿದ ಕೂಡಲೇ ಬೆಹರಾಮನ ಮುಂದೆ ಸೇವಕನಂತೆ ಹಾಜರಾಗಿ, ತನ್ನ ಮಗಳನ್ನು ವಿವಾಹ ಮಾಡಿ ಕೊಟ್ಟನು, ಅಲ್ಲದೇ ಬಹಳಷ್ಟು ಹಣ ಮತ್ತು ಆಭರಣಗಳನ್ನು ಕೊಟ್ಟು ಅವರನ್ನು ಕಳುಹಿಸಿದನು. ವಾಸುದೇವನು ಬದುಕಿರುವವರೆಗೆ ಬೆಹರಾಮ ಗೋರನಿಗೆ ಪ್ರತಿ ವರ್ಷ ಕಪ್ಪ ಕಾಣಿಕೆಯನ್ನು ಕಳುಹಿಸುತ್ತಿದ್ದನು. ವಾಸುದೇವನು ೭೦ ವರ್ಷ ರಾಜ್ಯವಾಳಿ ಮೃತಪಟ್ಟನು. ಪ್ರಖ್ಯಾತ ಪಟ್ಟಣವಾದ 'ಕಾಲಪಿ'ಯನ್ನು ಈತನೇ ಸ್ಥಾಪಿಸಿದನು. ಈತನು ತನ್ನ ಹಿಂದೆ ೩೨ ಮಕ್ಕಳನ್ನು ಬಿಟ್ಟು ನಿಧನನಾದನು. ಅವರು ರಾಜ್ಯದ ಆಡಳಿತವನ್ನು ಕೈಗೆತ್ತಿಕೊಳ್ಳಲು ಸತತವಾಗಿ ೧೦ ವರ್ಷ ಕಾದಾಡಿದರು. ಕೊನೆಯಲ್ಲಿ ವಾಸುದೇವನ ಮುಖ್ಯ ಸೈನ್ಯಾಧಿಕಾರಿ ಈ ಸಹೋದರರ ಪರಸ್ಪರ ಕಾದಾಟದಿಂದ ಲಾಭ ಪಡೆದು, ಸೈನ್ಯದ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ಮಾಡಿ, ಏಕಭಿಪ್ರಾಯ ಪಡೆದು, ಕನೋಜನ್ನು ಸ್ವಾಧೀನ ಪಡಿಸಿಕೊಂಡು ಒಬ್ಬ ಶ್ರೇಷ್ಠ ರಾಜನಾಗಿಬಿಟ್ಟನು.

ರಾಜಾ ರಾಮದೇವ ರಜಪೂತನ ಆಡಳಿತ:

ರಾಮದೇವ ರಾಜನಿಗೆ ರಾಠೋಡ ಜನಾಂಗದೊಂದಿಗೆ ಸಂಬಂಧವಿತ್ತು. ಆತನು ಬಹಳ ಶೂರ ಹಾಗೂ ಪರಾಕ್ರಮಿಯಲ್ಲದೆ, ಚಾಣಾಕ್ಷನೂ ಆಗಿದ್ದನು. ಮೊತ್ತಮೊದಲು ವಿದ್ರೋಹಕ್ಕಾಗಿ ತಲೆ ಎತ್ತಿದ ಜನರ ಕಿರುಕುಳಗಳನ್ನು ತೊಡೆದು ಹಾಕಿ ಅವರನ್ನು ತನ್ನ ಅಧೀನರನ್ನಾಗಿಸಿ ಕೊಂಡನು. ನಂತರ ಒಂದು ಸಶಕ್ತ ಸೈನ್ಯವನ್ನು ಒಗ್ಗೂಡಿಸಿ ಮಾರ್ವಾಡದ ಮೇಲೆ ದಾಳಿ ಮಾಡಿ, ಅದನ್ನು ಗೆದ್ದು ತನ್ನ ಸ್ವಾಧೀನಕ್ಕೆ ತಂದುಕೊಂಡನು. ಅಲ್ಲಿ ಸ್ಥಳೀಯರಾದ ಕಚ್ವಾಹ ಜನಾಂಗದವರನ್ನು ತೆಗೆದು ಹಾಕಿ ತನ್ನ ಜನಾಂಗದವರಾದ ರಾಠೋಡ ಜನಾಂಗದವರ ವಾಸಕ್ಕೆ ಅನುವು ಮಾಡಿಕೊಟ್ಟನು. ಅಂದಿನಿಂದ ರಾಠೋಡರು ಮಾರ್ವಾಡದಲ್ಲಿ ವಾಸಿಸತೊಡಗಿದರು. ರಾಜಾ ರಾಮದೇವನು ಸ್ವತಃ ಕಚ್ವಾಹ ಜನಾಂಗದವರನ್ನು ರಹತಾಸ್ ಕೋಟೆಯ ಸಮೀಪದಲ್ಲಿ ವಸತಿ ಮಾಡಲು ಹೇಳಿದನು. ಈ ಜನಾಂಗದ ಸರದಾರರ ಹೆಣ್ಣು ಮಕ್ಕಳನ್ನು ತನ್ನ ಸೇವೆಗೆ ತಂದುಕೊಂಡನು. ಅವರನ್ನು ತನ್ನ ರಾಜಮಹಲನಲ್ಲಿ ಸೇರಿಸಿಕೊಂಡನು. ಇದಾದ ನಂತರ ಲಖನೌತಿ ಮೇಲೆ ದಾಳಿ ಮಾಡಿ ಅದನ್ನು ತನ್ನ ಸ್ವಾಧೀನಪಡಿಸಿಕೊಂಡು, ತನ್ನ ಸಹೋದರನ ಮಗನಿಗೆ ಅಲ್ಲಿಯ ರಾಜ್ಯವನ್ನು ಒಪ್ಪಿಸಿದನು.

ಇದೇ ರೀತಿ ಹೇರಳ ಹಣವನ್ನು ಸಂಗ್ರಹಿಸಿ ಮೂರು ವರ್ಷದನಂತರ ತನ್ನ ರಾಜ್ಯಧಾನಿಯಾದ ಕನೋಜಗೆ ಮರಳಿ ಬಂದನು. ಎರಡು ವರ್ಷಗಳ ನಂತರ

ಮಾಳವಾದ ಮೇಲೆ ದಾಳಿ ಮಾಡಿ ಅದನ್ನು ಗೆದ್ದು ಅಲ್ಲಿ ಹಲವಾರು ಹೊಸ ಗ್ರಾಮಗಳನ್ನು ನಿರ್ಮಿಸಿದನು. 'ಫೀರೋರ' ಪ್ರದೇಶವು ಗ್ವಾಲಿಯರನ ಸಮೀಪವಿದ್ದು, ರಾಮದೇವ ರಾಜನು ಫೀರೋರ ಕೋಟೆಯನ್ನು ಭದ್ರಪಡಿಸಿ ರಾಠೋಢ ಜನಾಂಗದ ಒಬ್ಬ ಸರದಾರನನ್ನು ಅಲ್ಲಿ ಮುಖ್ಯಸ್ಥನಾಗಿ ನಿಯಮಿಸಿದನು. ಇದಾದ ನಂತರ ರಾಮದೇವನು ವಿಜಯನಗರದ ರಾಜ ಶಿವರಾಯನ ಮಗಳನ್ನು ಮದುವೆಯಾಗ ಬಯಸಿದನು. ಶಿವರಾಯನು ಆ ಕಾಲದಲ್ಲಿ ದಕ್ಕನ ಪ್ರಾಂತವನ್ನು ಆಳುತಿದ್ದನು. ರಾಜಾ ರಾಮದೇವನ ರಾಜ್ಯದ ವಿಸ್ತೀರ್ಣ, ವೈಭವ ಮತ್ತು ಶ್ರೀಮಂತಿಕೆಯನ್ನು ಕಂಡು ಶಿವರಾಯನು ತನ್ನ ಮಗಳನ್ನು ಸಾಕಷ್ಟು ಬೆಲೆಬಾಳುವ ಆಭರಣಗಳನ್ನು ಕೊಟ್ಟು ರಾಮದೇವನ ಮನೆಗೆ ಕಳುಹಿಸಿದನು. ರಾಮದೇವನು ಗೊಂದವಾಡೆಯಲ್ಲಿ ಎರಡು ವರ್ಷ ವಾಸ ಮಾಡಿ ಅಲ್ಲಿಯ ವಿದ್ರೋಹಿ ಜಮೀನದಾರರನ್ನು ಸದೆ ಬಡೆದು ಕನೋಜಿಗೆ ಹಿಂದಿರುಗಿದನು. ಮುಂದೆ ಏಳು ವರ್ಷದವರೆಗೆ ಸುಖ ಸಂತೋಷದಲ್ಲಿ ಕಳೆದನು. 'ಸವಾಲಕ' ಅರಣ್ಯದ ಕಡೆಗೆ ಹೋಗಿ ಅಲ್ಲಿಯ ರಾಜರನ್ನು ತನ್ನ ಅಧೀನರನ್ನಾಗಿ ಮಾಡಿಕೊಂಡನು. ಆದರೆ ರಾಜಾ ಕಮಾಯುನನು ರಾಮದೇವನ ಅಧೀನದಲ್ಲಿರುವದನ್ನು ನಿರಾಕರಿಸಿದನು. ಈ ರಾಜನು ಆ ನಾಡಿನ ಎಲ್ಲಕ್ಕಿಂತಲೂ ಶ್ರೇಷ್ಠ ಆಡಳಿತಗಾರನಾಗಿದ್ದನು. ಆ ನಾಡಿನ ಆಡಳಿತವನ್ನು ಕಮಾಯುನನ ಪರಿವಾರದವರು ಎರಡು ಸಾವಿರ ವರ್ಷಗಳಿಂದ ಸತತವಾಗಿ ನಡೆಸಿಕೊಂಡಿದ್ದರು. ರಾಜಾ ಕಮಾಯುನನು ರಾಜಾ ರಾಮದೇವನನ್ನು ಎದುರಿಸಲು ಸಿದ್ಧನಾದನು. ಇಬ್ಬರ ಸೈನ್ಯಗಳ ಮಧ್ಯೆ ಬೆಳಗಿನಿಂದ ಸಂಜೆಯವರೆಗೆ ಸಮರವು ನಡೆಯುತ್ತಲೇ ಇತ್ತು. ಉಭಯಪಕ್ಷದ ಸೈನ್ಯದಲ್ಲಿದ್ದ ಶೂರ ಸೈನಿಕರು ಮೃತಪಟ್ಟರು. ಇದರಿಂದಾಗಿ ಅವರ ಮನೆತನಗಳು ನಾಶವಾದವು. ಅಂತಿಮವಾಗಿ ರಾಮದೇವನ ಸೈನ್ಯವು ಶತ್ರುಗಳನ್ನು ಸೋಲಿಸಿತು. ರಾಜಾ ಕಮಾಯುನನು ಎಣಿಕೆಗೆ ಬಾರದಷ್ಟು ಯುದ್ಧ ಸಾಮಗ್ರಿ ಹಾಗೂ ಆನೆಗಳನ್ನು ರಣಭೂಮಿಯಲ್ಲಿ ಬಿಟ್ಟು ಗುಡ್ಡಗಾಡಿನಲ್ಲಿ ಅಡಗಿಕೊಂಡನು. ಸವಾಲಿಕ್ ಅರಣ್ಯದಲ್ಲಿ ಸೈನ್ಯಾಚರಣೆ ಮುಗಿಸಿದನಂತರ, ರಾಜಾ ರಾಮದೇವನು ನಗರಕೋಟ ಅರಣ್ಯದ ಕಡೆಗೆ ತಿರುಗಿದನು. ಅಲ್ಲಿಯ ಗ್ರಾಮ ಹಾಗೂ ಪಟ್ಟಣಗಳನ್ನು ಗೆದ್ದು ಸಾಕಷ್ಟು ಹಣವನ್ನು ಬಾಚಿಕೊಂಡು 'ಹನಕೋಟ ಪಂಡಿ'ಗೆ ಬಂದನು. ಇಲ್ಲಿಂದ ಮುಂದೆ ಹೋಗಲಿಲ್ಲ, ಏಕೆಂದರೆ ದುರ್ಗಾ ಮಂದಿರವು ಈತನ ಎದುರಾಯಿತು. ಅದೇ ಸ್ಥಳದಲ್ಲಿ ಉಳಿದುಕೊಂಡು ಒಬ್ಬ ರಾಜದೂತನನ್ನು ಹನಕೋಟ ಪಂಡಿಯ ರಾಜನ ಹತ್ತಿರ ಹೋಗಿ ರಾಜನನ್ನು ಸಂಧಿಸಿ ಬರಲು ಹೇಳಿಕಳುಹಿದನು. ರಾಜಾ ರಾಮದೇವನ ಹತ್ತಿರ ಬರಲು ಹಿಂದೇಟು ಹಾಕಿದನ್ನು ಕಂಡು, ಬ್ರಾಹ್ಮಣರು ಈ ವಿಷಯದಲ್ಲಿ ಮುಂದೆ ಬಂದು, ರಾಮದೇವನು ದೇವಾಲಯಕ್ಕೆ ಅರ್ಚನೆಗಾಗಿ ಬರತಕ್ಕದ್ದು ಮತ್ತು ಹನಕೋಟ ಪಂಡಿ ರಾಜನು ಈತನನ್ನು ಅಲ್ಲಿಯೇ ಭೇಟಿಯಾಗಬೇಕೆಂದು ನಿರ್ಧರಿಸಿದರು. ರಾಜಾ ರಾಮದೇವನು ಈ ನಿರ್ಣಯವನ್ನು

ಒಪ್ಪಿ, ದೇವಾಲಯಕ್ಕೆ ಬಂದು ಹನಕೋಟ ಪಂಡಿ ರಾಜನನ್ನು ಭೇಟಿಮಾಡಿದನು. ರಾಜಾ ರಾಮದೇವನು ದೇವಾಲಯದಲ್ಲಿ ಆಭರಣಗಳನ್ನು ನೀಡಿ ಅಲ್ಲಿಯ ಸಿಬ್ಬಂದಿವರ್ಗಕ್ಕೆ ಸಾಕಷ್ಟು ಬಹುಮಾನಗಳನ್ನು ಕೊಟ್ಟು ಸಿರಿವಂತರನ್ನಾಗಿ ಮಾಡಿದನು.

ಇದಲ್ಲದೆ ರಾಜಾ ನಗರಕೋಟನ ಮಗಳೊಂದಿಗೆ ತನ್ನ ಮಗನ ವಿವಾಹ ಮಾಡಿದನು. ಅನಂತರ ರಾಮದೇವನು ಜಮ್ಮು ಕೋಟೆಯ ಕಡೆಗೆ ಹೋದನು. ಜಮ್ಮು ರಾಜನು ತನ್ನ ರಾಜವೈಭವ, ಕೋಟೆಯ ಭದ್ರತೆ, ರಸ್ತೆಗಳಲ್ಲಿಯ ಆತಂಕ, ದಟ್ಟಾರಣ್ಯ ಹಾಗೂ ಉಗ್ರಾಣದಲ್ಲಿಯ ಧಾನ್ಯ ಸಂಗ್ರಹಗಳ ಬಗ್ಗೆ ವಿಚಾರಿಸಿ ರಾಮದೇವನ ಬರುವಿಕೆಗೆ ಮಹತ್ವ ಕೊಡದೆ ಆತನನ್ನು ಎದುರಿಸಲು ಸಿದ್ಧನಾದ. ಆದರೆ ದುರ್ದೈವದಿಂದ ರಾಮದೇವನನ್ನು ಎದುರಿಸಲಾಗದೆ ರಣಾಂಗಣದಿಂದ ಓಡಿಹೋದನು. ರಾಮದೇವನು ತನ್ನ ಸೈನ್ಯದ ಒಂದು ಭಾಗವನ್ನು ರಾಜನನ್ನು ಹಿಮ್ಮೆಟ್ಟಿಸಲು ಕಳುಹಿಸಿದನು ಮತ್ತು ಸ್ವಯಂ ಜಮ್ಮು ಕೋಟೆಯನ್ನು ಮುತ್ತಿ ಅಲ್ಪ ಸಮಯದಲ್ಲಿ ಅದನ್ನು ಗೆದ್ದು, ಬಹಳ ಸೈನಿಕರನ್ನು ಬಂದಿಯಾಗಿಸಿದನು. ಅಮೂಲ್ಯವಾದ ವಸ್ತುಗಳನ್ನು ವಶಪಡಿಸಿಕೊಂಡನು. ಅನಿವಾರ್ಯವಾಗಿ, ಜಮ್ಮು ರಾಜನು ಅತಿ ವಿನಮ್ರತೆಯಿಂದ ರಾಮದೇವನ ಎದುರು ಹಾಜರಾಗಿ ತನ್ನ ತಪ್ಪನ್ನು ಕ್ಷಮಿಸಲು ಕೋರಿದನು. ರಾಮದೇವನು ಆತನನ್ನು ಕ್ಷಮಿಸಿ ಆತನ ಮಗಳೊಂದಿಗೆ ತನ್ನ ಎರಡನೆಯ ಮಗನ ಮದುವೆ ಮಾಡಿ ಅಲ್ಲಿಂದ ಹೊರಟು ನಿಂತನು. 'ಭತ' *(ಇದು ಝೀಲಮ್ ನದಿಯನ್ನು ಸೂಚಿಸುತ್ತದೆ.) ನದಿಯ ತಟದಿಂದಾಗಿ ಯಾವುದು ಕಶ್ಮೀರನಿಂದ ಪಂಜಾಬ ಕಡೆಗೆ ಹರಿದು ಹೋದತ್ತದೆಯೋ, ಬೆಂಗಾಲೀಯ ಈ ಗಡಿ ಪ್ರದೇಶದ ಸ್ಥಾನದವರೆಗೆ 'ಶೋರ' ನದಿ ತಟದ 'ಸಾವಲಕ' (ಈ ಅರಣ್ಯವು ಹಿಮಾಲಯದ ದಕ್ಷಿಣ ಗುಡ್ಡಗಾಡುನ್ನು ಸೂಚಿಸುತ್ತದೆ.) ಸರಣಿಯು ಕೊನೆಗೊಳ್ಳವ ಪ್ರದೇಶದಲ್ಲಿ ಪ್ರಯಾಣ ಮಾಡಿ ನಿಸರ್ಗದ ಅದ್ಭುತ ರಮ್ಯತೆಯನ್ನು ಸವಿಯುತ್ತ, ಅಲ್ಲಿಯ ವಿವಿಧ ಭಾಗದಲ್ಲಿರುವ ಐದು ಜನ ರಾಜರ ಆಡಳಿತವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಅವರನ್ನು ತನ್ನ ಅಧೀನರನ್ನಾಗಿ ಮಾಡಿ ಅಗಣಿತ ಚಿನ್ನಾಭರಣ ಇತ್ಯಾದಿ ಸಾಮಗ್ರಗಳೊಂದಿಗೆ, ಆನೆ, ಕುದುರೆಗಳನ್ನು ತೆಗೆದುಕೊಂಡು ಮರಳಿ ಕನೋಜ್‌ಗೆ ಬಂದನು. ಕನೋಜ್‌ಗೆ ಬರುತ್ತಲೇ ಅಲ್ಲಿ ಒಂದು ಸಂತಸದ ಸಮಾರಂಭವನ್ನು ಆಯೋಜಿಸಿ ತನ್ನ ಸೈನ್ಯದ ವೇತನ ಹತ್ತು ಪಟ್ಟು ಇರುವುದನ್ನು ಇಪ್ಪತ್ತು ಪಟ್ಟು ಹೆಚ್ಚಿಸಿದನು. ಕನೋಜಿದ ಶೂರ ಸೈನಿಕರನ್ನು ಶ್ರೀಮಂತರನ್ನಾಗಿಸಿದನು. ನಿರಾಯಾಸವಾಗಿ ಕೈಗೆ ಬಂದ ಬೆಲೆಬಾಳುವ ಸಾಮಗ್ರಿಗಳನ್ನು ಪ್ರಜೆಗಳಲ್ಲಿ ಹಂಚಿದನು. ಸುಖ, ಸಂತೋಷದಿಂದ ರಾಜಧಾನಿಯಲ್ಲಿದ್ದು ಆಡಳಿತವನ್ನು ಮುಂದುವರೆಸಿದನು. ನಂತರ ಯಾರ ಮೇಲೂ ಯುದ್ಧ ಮಾಡಲಿಲ್ಲ.

ರಾಮದೇವನು ೫೪ ವರ್ಷ ರಾಜ್ಯವಾಳಿ ಅನಿತ್ಯವಾದ ಇಹಲೋಕವನ್ನು ತ್ಯಜಿಸಿದನು. ರಾಜಾ ರಾಮದೇವನಷ್ಟು ವೈಭವಯುತ ರಾಜನನ್ನು ನೋಡಲಿಲ್ಲ ಎಂದು

ಇತಿಹಾಸಕಾರರು ಒಮ್ಮತದಿಂದ ಒಪ್ಪುತ್ತಾರೆ. ರಾಮದೇವನು ಇರಾನಿನ ಶಹಾ ಕೈಖಬಾದ್‌ದ ಮಗ ಎರಡನೆಯ ಫಿರೋಜ್‌ಶಾಹನ ಸಮಕಾಲೀನನಾಗಿದ್ದನು, ಪ್ರತಿ ವರ್ಷ ಈತನಿಗೆ ಕಪ್ಪ ಕಾಣಿಕೆ ಹಾಗೂ ಇತರ ಬೆಲೆಬಾಳುವ ಸಾಮಗ್ರಿಗಳನ್ನು ಕಳುಹಿಸಿ ತನ್ನ ಅಧೀನತ್ವದಲ್ಲಿ ಯಾವ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದನು.

ಪ್ರತಾಪಚಂದ ಸೈಸೋದಿಯಾನ ಆಡಳಿತ:

ರಾಜಾ ರಾಮದೇವನ ಮರಣದ ನಂತರ ರಾಜ್ಯವನ್ನು ಪಡೆದುಕೊಳ್ಳಲು ಆತನ ಮಕ್ಕಳಲ್ಲಿ ಕಲಹ ಉಂಟಾಯಿತು. ಈ ಕಲಹವು ಯುದ್ಧವಾಗುವಷ್ಟು ಮುಂದುವರೆಯಿತು. ಪರಸ್ಪರ ಯುದ್ಧದ ಪರಿಣಾಮವಾಗಿ ಕನೋಜ್‌ದ ರಾಜ್ಯವು ಸಂಪೂರ್ಣ ನಿರ್ನಾಮವಾಗಿ ರಾಮದೇವನ ವೈಭವದ ಭಂಡಾರವು ಇದರಲ್ಲಿ ವ್ಯಯವಾಯಿತು. ರಾಮದೇವನ ಮಕ್ಕಳ ಪರಸ್ಪರ ಕಾದಾಟದ ಪ್ರಯೋಜನವನ್ನು ರಾಮದೇವನ ಸೈನ್ಯದ ಮುಖ್ಯಾಧಿಕಾರಿಯಾದ ಪ್ರತಾಪಚಂದನು ಪಡೆದುಕೊಂಡು ಯಾವುದೇ ಪರಿಶ್ರಮವಿಲ್ಲದೆ ರಾಜ್ಯವನ್ನು ತನ್ನ ಸ್ವಾಧೀನ ಪಡೆಸಿಕೊಂಡನು.

ಕನೋಜ್ ವಶಪಡಿಸಿಕೊಂಡ ಮೇಲೆ ಪ್ರತಾಪಚಂದನು ಮೊದಲು ರಾಮದೇವನ ಮಕ್ಕಳತ್ತ ಗಮನಹರಿಸಿ, ಅವರ ಸಂಪೂರ್ಣ ಪರಿವಾರವನ್ನು ನಾಶಮಾಡಿದನು. ಇದಾದ ನಂತರ ವಿವಿಧ ಪ್ರಾಂತದಲ್ಲಿ ಇದ್ದ ಸುತ್ತಮುತ್ತಲಿನ ಜಮೀನದಾರರನ್ನು ನಾಶಮಾಡಿ ತಾನೊಬ್ಬನೇ ಮಹಾರಾಜನಾಗಿ ಬಿಟ್ಟನು.

ಈ ಎಲ್ಲಾ ಕೃತ್ಯಗಳ ಪರಿಣಾಮವಾಗಿ ಆತನಲ್ಲಿ ದರ್ಪ ಮತ್ತು ಗರ್ವದ ಮದವೇರಿತು. ಈ ಮದದ ಅಮಲಿನಲ್ಲಿ ಇರಾನಿನ ಅರಸನಿಗೆ ಕಪ್ಪ ಕೊಡುವುದು ತನ್ನ ಗೌರವಕ್ಕೆ ವಿರೋಧವೆಂದು ತಿಳಿದನು, ಹಿಂದುಸ್ತಾನಕ್ಕೆ ಕಪ್ಪ-ಕಾಣಿಕೆಯನ್ನು ಪಡೆಯಲು ಬಂದ ಇರಾನಿನ ರಾಜದೂತ ನೌಷೇರ್ವಾನನ್ನು ಬರಿಗೈಯಿಂದ ತಿರುಗಿಹೋಗುವಂತೆ ಮಾಡಿದನು. ಇದಕ್ಕೆ ಉತ್ತರವಾಗಿ ಪ್ರತಾಪಚಂದನ ವಿದ್ರೋಹವನ್ನಡಗಿಸಲು ಇರಾನಿನ ಸೈನ್ಯವು ಪಂಜಾಬ ಹಾಗೂ ಮುಲ್ತಾನ್‌ವರೆಗೆ ಬಂದು ನಿಂತಾಗ ಅದರ ವೈಶಾಲ್ಯವನ್ನು ಕಂಡು ಪ್ರತಾಪಚಂದ ಕ್ಷಮೆಯಾಚಿಸಿದನು ಮತ್ತು ತನ್ನ ಈ ಕೃತ್ಯಕ್ಕಾಗಿ ವಿಷಾದಿಸಿದನು. ಎಣಿಕೆಗೆ ಬಾರದಷ್ಟು ಹಣವನ್ನು ಕಳುಹಿಸಿ ಇರಾನಿನ ಸೈನ್ಯವು ಲೂಟಿ ಇತ್ಯಾದಿ ದುಷ್ಕೃತ್ಯಗಳನ್ನು ಕೈಗೊಳ್ಳದಂತೆ ಮಾಡಿದನು. ತಾನು ಬದುಕಿರುವವರೆಗೆ ಇರಾನಿನ ಅರಸನಿಗೆ ಕಪ್ಪ-ಕಾಣಿಕೆ ಸಲ್ಲಿಸುತ್ತಿದ್ದನು.

ಪ್ರತಾಪ ಚಂದನ ಮರಣಾನಂತರ ಸುತ್ತ-ಮುತ್ತಲಿನ ಚಿಕ್ಕ - ಪುಟ್ಟ ರಾಜರು ಸ್ವತಂತ್ರರಾದರು. ಇದರ ಪರಿಣಾಮವಾಗಿ ಆತನ ಮಕ್ಕಳ ಅಧೀನದಲ್ಲಿ ರಾಜ್ಯದ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿತು. ಈತನ ವಾರಸುದಾರರು 'ರಾಣಾ' ಎನ್ನುವ ಕಾವ್ಯನಾಮದಿಂದ ಪ್ರಸಿದ್ಧರಾದರು. ಹಿಂದಿ ಭಾಷೆಯಲ್ಲಿ 'ರಾಣಾ' ಎಂದರೆ ಚಿಕ್ಕವ

ಮತ್ತು ಅಶಕ್ತ ರಾಜ ಎಂದು ಅರ್ಥೈಸಲಾಗುತ್ತದೆ. ಈ ಇತಿಹಾಸವನ್ನು ಬರೆಯುವ ಕಾಲದಲ್ಲಿ ಇವರ ಪರಿವಾರದ ಆಳ್ವಿಕೆಯು 'ಕೋಮಲ ಹರಿ' ಅರಣ್ಯದ ಸುತ್ತ-ಮುತ್ತಲಿನ ಪ್ರಾಂತದ ರಾಜರುಗಳು ರಾಣಾ ಕಾವ್ಯನಾಮದಿಂದ ಪ್ರಸಿದ್ಧಿ ಹೊಂದಿದ್ದರು. 'ಚಿತ್ತೋಡ' ಹಾಗೂ 'ಖಡಸೂರ' ಇತ್ಯಾದಿಗಳು ಇವರ ಆಳ್ವಿಕೆಯಲ್ಲಿ ಉಳಿಯಲಿಲ್ಲ ಮತ್ತು ಅವುಗಳು 'ತೈಮೋರಿಯಾ' ಪರಿವಾರದ ಸ್ವಾಧೀನದಲ್ಲಿದ್ದವು.

ಆನಂದ ದೇವ ರಾಜಪೂತನ ಆಡಳಿತ:

ಈ ರಾಜನಿಗೆ ೨೦ ಜನಾಂಗಗಳೊಂದಿಗೆ ಸಂಬಂಧವಿದ್ದಿತು. ರಾಜಾ ಪ್ರತಾಪನ ಮರಣಾಂತರ ಈ ರಾಜನು ಮಾಲ್ವಿಯಿಂದ ತಲೆ ಎತ್ತಿದನು ಹಾಗೂ ಇದರ ಸುತ್ತ-ಮುತ್ತಲಿನ ಪ್ರಾಂತಗಳನ್ನು ಸ್ವಾಧೀನ ಪಡಿಸಿಕೊಂಡನು. ಈತನು ಸುದೈವಿಯಾದುದರಿಂದ ಈತನ ರಾಜ್ಯವು ವಿಸ್ತರಿಸಿತು. ಮಾಳವಾ, ನೆಹ್ರವಾಲಾ, ಮರ್ಹಟ್, ದಕ್ಕನ್ ಮತ್ತು ಬಿಹಾರ ಪ್ರಾಂತಗಳು ಕೈಸೇರಿದವು. ರಾಮಗಡ, ಮಾಹೋ ಮತ್ತು ಮಾಂಡು ಕೋಟೆಗಳನ್ನು ಆನಂದದೇವನು ಕಟ್ಟಿಸಿದನು. ಈ ರಾಜನು ಇರಾನಿನ ಶಾಹ ಖುಸ್ರೋ ಪರ್ವೇಜ್‌ನ ಸಮಕಾಲೀನನಿದ್ದು ೧೬ ವರ್ಷ ರಾಜ್ಯವಾಳಿ ನಂತರ ಮೃತಪಟ್ಟನು.

ಮಾಲ್ದೇವನ ಆಡಳಿತ:

ಇದೇ ಕಾಲದಲ್ಲಿ 'ಮಾಲ್ದೇವ' ಎಂಬ ಹಿಂದು, ಎರಡು ನದಿಗಳ ಮಧ್ಯದಿಂದ ಪ್ರಕಟವಾದನು. ಒಂದು 'ಕೇಶರ ಜಮಾ' ಸೈನ್ಯ ಮಾಡಿ ದಿಲ್ಲಿಯನ್ನು ರಾಜಾ ಪ್ರತಾಪನ ಮಕ್ಕಳಿಂದ ಕಸಿದುಕೊಂಡನು, ನಂತರ ಕನೋಜಿನ ಮೇಲೆ ಆಕ್ರಮಣ ಮಾಡಿ ಇದನ್ನು ಸಹ ತನ್ನ ಸ್ವಾಧೀನದಲ್ಲಿ ತೆಗೆದುಕೊಂಡನು. ಮಾಲ್ದೇವನ ರಾಜ್ಯಾಡಳಿತದ ಅವಧಿಯಲ್ಲಿ ಕನೋಜಿನ ಜನವಸತಿಯು ಎಷ್ಟೊಂದು ಅಗಾಧವಾಗಿ ಬೆಳೆದಿತ್ತೆಂದರೆ ಮದುವೆ ಸಾಮಗ್ರಿಗಳನ್ನು ಮಾರಾಟ ಮಾಡುವವರ ಮೂವತ್ತು ಸಾವಿರ ಅಂಗಡಿಗಳು ಇದ್ದವು. ಅಲ್ಲದೆ ನರ್ತಕಿಯರ ಮತ್ತು ಸರೋದ ವಾದಕರ ಅರವತ್ತು ಸಾವಿರ ಮನೆತನಗಳಿದ್ದವೆಂದು ಹೇಳಲಾಗುತ್ತದೆ. ಇದರಿಂದ ಕನೋಜಿನ ಜನವಸತಿ ಎಷ್ಟಿತ್ತೆಂದು ಊಹಿಸಬಹುದು. ಮಾಲ್ದೇವನು ೪೨ ವರ್ಷ ರಾಜ್ಯವಾಳಿದ ನಂತರ ಮೃತಪಟ್ಟನು.

ಮಾಲ್ದೇವನಿಗೆ ಸಂತಾನವಿರದ ಕಾರಣ ಈತನ ಮರಣಾನಂತರ ಎಲ್ಲ ಕಡೆಯಲ್ಲಿ ಅರಾಜಕತೆಯ ಕಾಲವು ಆರಂಭವಾಯಿತು. ಮಾಲ್ದೇವನ ನಿಧನಾನಂತರದಿಂದ ಇಸ್ಲಾಮಿನ ಸೂರ್ಯನು ಉದಯವಾಗುವವರೆಗೆ ಉಲ್ಲೇಖನೀಯವಾದ, ಯೋಗ್ಯ, ಅರ್ಹ, ವಿಶಾಲ ರಾಜ್ಯ ಹೊಂದಿದ ಯಾವ ರಾಜನೂ ಆಡಳಿತ ಮಾಡಲಿಲ್ಲ. ಸುಲ್ತಾನ 'ಮೆಹಮೂದ್ ಘೋರಿ' ಹಿಂದುಸ್ತಾನದ ಮೇಲೆ ದಾಳಿ ಮಾಡಿದ ಕಾಲದಲ್ಲಿ ಹಲವಾರು ರಾಜ್ಯಗಳು ಸ್ಥಾಪಿತಗೊಂಡಿದ್ದವು. ಕನೋಜ್‌ನಲ್ಲಿ ರಾಜಾ 'ಕೋರ', ಮೀರತ್‌ನಲ್ಲಿ ರಾಜಾ 'ಧರ್ಮದತ್ತ', ನಹಾವನ್‌ದಲ್ಲಿ ರಾಜಾ 'ಗುಲ ಚಂದ',

ಲಾಹೋರಿನಲ್ಲಿ ರಾಜಾ 'ಜೈಪಾಲ' ಮತ್ತು ಕಾಲಂಜರದಲ್ಲಿ ರಾಜಾ 'ಬೆಹರಾನ'ರ ಆಡಳಿತಗಳಿದ್ದವು. ಇದೇ ರೀತಿಯಾಗಿ ಮಾಳವಾ, ಅಜಮೀರ, ಗುಜರಾತ ಹಾಗೂ ಗ್ವಾಲಿಯರನಲ್ಲಿ ಕೂಡಾ ಬೇರೆ ಬೇರೆ ರಾಜ್ಯಗಳು ಸ್ಥಾಪಿತಗೊಂಡಿದ್ದವು. ಇದರಿಂದಾಗಿ ಚಿಕ್ಕ ಪುಟ್ಟ ರಾಜ್ಯಗಳ ಬಗ್ಗೆ ಉಲ್ಲೇಖ ಮಾಡಿಲ್ಲ. ಇಸ್ಲಾಮಿನ ರಾಜರುಗಳ ಸ್ಥಿತಿ-ಗತಿಗಳನ್ನು ನಿರೂಪಿಸಲಾಗಿದೆ, ಅವುಗಳೇ ಈ ಗ್ರಂಥದ ನೈಜ ವಿಷಯವಾಗಿವೆ.

■

*

ಅಲ್ಲಾಹನ ನಾಮ ಸ್ಮರಿಸಿ

ಹಿಂದುಸ್ತಾನದಲ್ಲಿ ಮುಸಲ್ಮಾನರ ಆಗಮನ:

ಹಿಂದುಸ್ತಾನದಲ್ಲಿ ಪಾದಾರ್ಪಣೆ ಮಾಡಿ ಹಿಂದುಸ್ತಾನದ ಜನರೊಂದಿಗೆ ಯುದ್ಧಗಳನ್ನು ಮಾಡಿದ ಪ್ರಥಮ ಮುಸಲ್ಮಾನನು 'ಮೊಹಲಿಬ್-ಬಿನ್(ತಂದೆ)-ಅಬಿಸಫ್ರಾ'ನಾಗಿದ್ದನು. ಈತನ ಅಪ್ರಕಟಿತ ಕೃತಿಗಳ ವಿವರವಾದ ನಿರೂಪಣೆ ಈ ಕೆಳಗೆ ಕೊಡಲಾಗಿದೆ.

'ನಬೂಯಿ ಹಿಜರತ್'ದ ೨೮ ವರ್ಷ 'ಅಮೀರ್-ಉಲ್-ಮೊಮೀನ್' ಹಜ್ರತ್-ಉಸ್ಮಾನ್ ಗನಿ ರಜಿ ಅಲ್ಲಾಹು ಅನ್‌ಹು ಈತನ 'ಖಿಲಾಫತ್'ನ (ಆಡಳಿತ) ಅವಧಿಯಲ್ಲಿ ಬಸ್ರಾದ ರಾಜ್ಯಪಾಲನಾದ 'ಅಬ್ದುಲ್ಲಾ-ಬಿನ್-ಆಮೀರ್'ನು ಪರ್ಸಿಯಾ ಮೆಲೆ ದಾಳಿ ಮಾಡಿದನು. ಅಲ್ಲಿಯ ಜನರಲ್ಲಿ, ಅಮೀರ-ಉಲ್-ಮೊಮೀನ್ ಹಜ್ರತ್-ಉಮರ್-ಫಾರುಖನ ನಿಧನದ ನಂತರದ ಅವಧಿಯಲ್ಲಿ ಅರಾಜಕತೆ ಇತ್ತು. ಅವರನ್ನು ಗೆದ್ದು ಮರಳಿ ಬಸ್ರೇಗೆ ಬಂದನು. ಹಿಜರತ್‌ನ ೩೦ನೆಯ ವರ್ಷ 'ಅಮೀರ್-ಉಲ್-ಮೊಮೀನ್' ಹಜ್ರತ್-ಉಸ್ಮಾನ್ ಗನಿ ಈತನು ವಲಿದ್-ಬಿನ್-ಉತ್‌ಬಾ ಖುಫಾದ ರಾಜ್ಯಪಾಲನ ಕುಡುಕನಾಗಿದ್ದರಿಂದ ಪಟ್ಟದಸ್ಥಾನದಿಂದ ಇಳಿಸಿ, ಆತನ ಜಾಗದಲ್ಲಿ ಸಯೀದ್ ಬಿನ್ ಆಸ್‌ಗೆ ನಿಯುಕ್ತ ಮಾಡಿದನು. ಸಯ್ಯದ್ ಅದೇ ವರ್ಷ ತುರುಬಸ್ಥಾನದ ಕಡೆ ಗಮನಕೊಟ್ಟನು. ಹಜರತ್-ಇಮಾಮ್-ಹಸನ್ ಹಾಗೂ ಇಮಾಮ್-ಹುಸೇನ-ಅಲೈಹಿಮಸ್ ಸಲಾಂ ಕೂಡ ಈತನ ಜೊತೆಗೆ ಯುದ್ಧದಲ್ಲಿ ಜೊತೆಗೂಡಿದ್ದನು. ಇಸ್ತ್ರಾಬಾದಿನ ರಾಜಧಾನಿಯಾದ ಜುರ್ಜಾನ್‌ಅನ್ನು ಇಮಾಮ್ ಹೈಸನ್ನೈಲ್ ಅಲೈಹಿಮಸ್ ಸಲಾಮರ ಪಾದಕಮಲಗಳಿಂದ ಗೆದ್ದುಕೊಂಡನು. ಅಲ್ಲಿಯ ಜನರು ಎರಡು ಲಕ್ಷ ದೀನಾರ ಪ್ರತಿ ವರ್ಷ ಕೊಡಲು ಒಪ್ಪಿ ಜೇರಜಾನಿನ ಜನರನ್ನು ಇಸ್ಲಾಮ ತಂದುಕೊಂಡು ಅವರೊಂದಿಗೆ ಸಂತೋಷವಾಗಿ ಜೀವನ ಸಾಗಿಸಿದರು.

ಪೈಗಂಬರರ ಹಿಜ್ರತ್‌ನ ೩೧ನೆಯ ವರ್ಷ ಹಜ್ರತ್-ಉಸ್ಮಾನ ಗನಿಯು ಅಬ್ದುಲ್ಲಾ-

ಬಿನ್-ಆಮೀರನಿಗೆ ಖುರಾಸಾನ್ ಗೆಲ್ಲಲು ಆದೇಶಿಸಿದನು. ಅಬ್ದುಲ್ಲಾ ಒಂದು ಸಶಕ್ತವಾದ ಸೈನ್ಯವನ್ನು ತನ್ನೊಡನೆ ತೆಗೆದುಕೊಂಡು ಕಿರ್ಮಾನ್ ರಸ್ತೆಯ ಮೂಲಕ ಖರಸ್ಥಾನದ ಕಡೆ ಹೊರಟರು. ಈ ಸೈನ್ಯದ ಮುಖ್ಯಸ್ಥ ಹನೀಫ್-ಬಿನ್-ಖೈಸ್ ಆಗಿದ್ದನು. ಇಸ್ಲಾಮಿನ ಪ್ರಬಲವಾದ ಶೂರ ಸೈನ್ಯವು ಸೀಸ್ತಾನ್ *(ಈ ಪ್ರಾಂತವು ಇರಾನಿ ಮುಕ್ರಾನ್ ಮತ್ತು ಕುರಾಸಾನ್ ಮಧ್ಯದಲ್ಲಿ ಇದ್ದು ಅದಕ್ಕೆ 'ಕೋಹಿಸ್ತಾನ' ಎಂದು ಕರೆಯುತ್ತಾರೆ.) ಕಹೆಸ್ತಾನ್ ಮತ್ತು ನೇಶಾಪುರನ್ನು ಗೆದ್ದು ಆ ಜನರನ್ನು ತನ್ನ ಗುಲಾಮರನ್ನಾಗಿಸಿಕೊಂಡು ತೂಸ್‌ಗೆ ಮುಟ್ಟಿದನು. ಇಲ್ಲಿಯ ಜನರು ಇಸ್ಲಾಮಿನ ಒಡೆತನವನ್ನು ಸ್ವೀಕರಿಸಿದರು ಮತ್ತು ಮುಸಲ್ಮಾನರ ಸೈನ್ಯವು ಸರಖಸ್, ಹೀರಾತ್, ಬಾದಗೈಸ್, ಗರ್ಜಸ್ತಾನ್, ಮರ್ವ, ತಾಲಿಖಾನ ಮತ್ತು ಬಲಖ್ ಇವುಗಳನ್ನು ಇಸ್ಲಾಮಿ ರಾಜ್ಯದಲ್ಲಿ ಸೇರಿಸಿಕೊಂಡನು. ಏಕೆಂದರೆ ಅಬ್ದುಲ್ಲಾ-ಬಿನ್-ಆಮಿರನಿಗೆ ಕೇವಲ ಅಲ್ಪ ಕಾಲದಲ್ಲಿ ಸಂಪೂರ್ಣವಾಗಿ ಗೆಲವು ಸಾಧಿಸಿತ್ತು. ಅದಕ್ಕಾಗಿ ಅವನು ಖೈಸ್‌ಬಿನ್ ಹಾಶಾಮನನ್ನು ಕುರಾಸಾನ್ ಪ್ರಾಂತ್ಯಕ್ಕೆ, ಹನೀಫ್ ಬಿನ್ ಖೈಸನನ್ನು ಮರ್ವ, ತಾಲಿಬಾನ್ ಹಾಗೂ ನೇಶಾಪುರ ಪ್ರಾಂತಗಳಿಗೆ ಮತ್ತು ಖಾಲಿದ್ ಬಿನ್ ಅಬ್ದುಲ್ಲಾಹನನ್ನು ಹಿರಾತ್, ಗೌರ್ ಮತ್ತು ಗರ್ಜಸ್ತಾನ್ ಪ್ರಾಂತಗಳಿಗೆ ರಾಜ್ಯಪಾಲರನ್ನಾಗಿ ನೇಮಿಸಿ ಸ್ವತಃ ತಾನು ಹಜ್ಜನ ಸಾಮಾನುಗಳನ್ನು ಸಜ್ಜುಗೊಳಿಸಿ ಕಾಬಾ ಕಡೆಗೆ ಹೊರಟುಹೋದನು. ನಬೂಯಿ ಹಿಜ್ರತಿನ ೩೨ನೆಯ ವರ್ಷ ಹಜ್ರತ್-ಉಸ್ಮಾನನ ಆದೇಶದ ಮೇರೆಗೆ ಅಬ್ದುಲ್ಲಾ-ಬಿನ್-ಆಮಿರ್ ಬಲ್ಗನ್ನು ಗೆಲ್ಲಲು ಹೊರಟು ನಿಂತನು, ಆದರೆ ಅನೇಕ ವಿರೋಧ ಕಾರಣಗಳಿಂದ ಆಮಿರನ ಸೈನ್ಯ ಮತ್ತು ಮುಸಲ್ಮಾನ ಸೈನ್ಯ ಈ ಯುದ್ಧದಲ್ಲಿ ಹುತಾತ್ಮರಾದರು ಹಾಗೂ ಉಳಿದ ಸೈನ್ಯವು ದಿಕ್ಕೆಟ್ಟು ಓಡಿತು. ಈ ಮುಸಲ್ಮಾನ ಸೈನಿಕರು ಜುರ್ಜಾನ್ *(ಬೈರೆ ಖರ್ಜನ ದಕ್ಷಿಣ-ಪೂರ್ವ ಪ್ರಾಂತದ ಹೆಸರಿತ್ತು, ಅದನ್ನು ಈಗ ಅಸ್ತ್ರಾಬಾದ ಎಂದು ಕರೆಯಲಾಗುತ್ತದೆ.) ಮತ್ತು ಜೇಲನ *(ಜೀಲಾನ ಅಥವಾ ಗೇಲಾನ, ಜುರ್ಜಾನ್‌ಗೆ ಹತ್ತಿದ ಪ್ರಾಂತ) ಇದರಲ್ಲಿ ಬಂದು ಮುಖಮರೆಸಿಕೊಂಡರು. ಅದೇ ವರ್ಷ ಅಬ್ದುಲ್ಲಾ-ಬಿನ್-ಆಮಿರನು ಹರಮೈನ್ ಎ ಶರೀಫೈನ್ (ಮಕ್ಕಾ ಮತ್ತು ಮದೀನಾ ಯಾತ್ರೆ)ಗೆ ಹೊರಟು ನಿಂತನು. ಖಾರೂನ್ ಎಂಬ ಇರಾನಿ ಸರದಾರನು, ಖುರಾಸಾನ್ ಈಗ ಇಸ್ಲಾಮಿ ಶೂರರಿಂದ ಖಾಲಿಯಾದ, ಕಾರಣ ತಬಸ್, ಹರಾತ್, ಬಾದಗೀಸ್, ಕಹೆಸ್ತಾನ್ ಮತ್ತು ಗೌರ ಪ್ರದೇಶಗಳಿಂದ ೪೦ ಸಾವಿರ ಸೈನಿಕರ ಒಂದು ಪ್ರಬಲ ಸೈನ್ಯವನ್ನು ಒಗ್ಗೂಡಿಸಿ ಮುಸಲ್ಮಾನರ ಮೇಲೆ ದಾಳಿ ಮಾಡಿದನು. ಅಬ್ದುಲ್ಲಾ-ಬಿನ್-ಹಾಜಿಮ್‌ನು ಹನೀಫ-ಬಿನ್-ಖೈಸನ ಜೊತೆಯಲ್ಲಿ ನೇಶಾಪುರದಲ್ಲಿದ್ದನು. ಆತ ೪೦ ಸಾವಿರ ಸೈನಿಕರ ಸಹಾಯದಿಂದ ಅಲ್ಲಿಯ ವಿದ್ರೋಹಿಗಳನ್ನು ಸೋಲಿಸಿದ ಈ ಕಾರಣದಿಂದ ಆತನನ್ನು ಖುರಾಸಾನಿನ ರಾಜ್ಯಪಾಲರನ್ನಾಗಿ ನೇಮಿಸಲಾಯಿತು.

ಹಿಜರಿ ಶಕೆ ೪೪ರಲ್ಲಿ ಆಮೀರ ಮಾವಿಯಾನು ಜೀಯದ್-ಬಿನ್-ಅಬಯ್ಯಾ

ನನ್ನು ಬಸ್ರಾ, ಖರಸ್ಥಾನ ಮತ್ತು ಸೇಸ್ಥಾನನ ರಾಜನನ್ನಾಗಿ ನಿಯುಕ್ತಿ ಮಾಡಲಾಯಿತು. ಅದೇ ವರ್ಷ ಜೇಯಾದನ ಆದೇಶದ ಮೇರೆಗೆ ಅಬ್ದುಲ್ ರೆಹಮಾನ್-ಬಿನ್-ರಬಿಯಾನು ಕಾಬುಲ್‌ನನ್ನು ಗೆದ್ದನು ಮತ್ತು ಅಲ್ಲಿಯ ಜನರನ್ನು ಮುಸಲ್ಮಾನರನ್ನಾಗಿ ಮಾಡಿದನು. ಕಾಬುಲ್ ಗೆದ್ದ ಕೆಲವೇ ಸಮಯದಲ್ಲಿ ಒಬ್ಬ ಖ್ಯಾತ ಅರಬಿನ ಅಮೀರ ಮೊಹಲೀಬ್-ಬಿನ್-ಅಬಿ ಸಫ್ರಾ ಮರೂನ ರಸ್ತೆಯಿಂದ ಕಾಬುಲ್ ಹಾಗೂ ಝಾಬಿಲ್ ಬಂದು ಹಿಂದುಸ್ತಾನವನ್ನು ಸೇರಿ ಅವರು ಜಿಹಾದ್ ಮಾಡಿ ೧೦ ಅಥವಾ ೧೨ ಸಾವಿರ ಹೆಂಗಸರನ್ನು ಗುಲಾಮರನ್ನಾಗಿ ಮಾಡಿಕೊಂಡರು. ಇವರಲ್ಲಿ ಕೆಲವರು ತೌಹೀದ್ ಮತ್ತು ಆಂ ಹಜ್ರತ್‌ನ ನಬೂತನ್ನು ಒಪ್ಪಿಕೊಂಡು ಮುಸಲ್ಮಾನರಾದರು.

ಹಿಜರಿ ಶಕೆ ೫೩ರಲ್ಲಿ 'ಜೇಯಾದ್-ಬಿನ್-ಅಬಯ್ಯಾ'ನ ಬೆರಳಿಗೆ ಪ್ರಾಣಘಾತುಕ ಕುರುಹು ಹುಟ್ಟಿಕೊಂಡಿತು, ಇದರಿಂದ ಆತನು ಮೃತನಾದನು. ಮಾವಿಯದ ಅಮೀರನು ಈತನ ಮಗ ಅಬ್ದುಲ್ಲಾನಿಗೆ ಖೊಫಾದ ರಾಜನನ್ನಾಗಿ ನಿಯುಕ್ತ ಮಾಡಿದನು. ಕೆಲ ಸಮಯದ ನಂತರ ಅಬ್ದುಲ್ಲಾನು ಹಜ್ಜಿಗೆ ಪ್ರಯಾಣ ಬೆಳೆಸುವ ಸಂಕಲ್ಪಮಾಡಿ ದೇಶದ ಬಹಳಷ್ಟು ಪಟ್ಟಣಗಳನ್ನು ಗೆದ್ದು ಮರಳಿ ಬಂದನು. ಈ ಗೆಲುವಿನ ಫಲವಾಗಿ ಈತನಿಗೆ ಬಸ್ರಾದ ರಾಜ್ಯವು ಸಿಕ್ಕಿತ್ತು. ಆದರೆ ಈತನು 'ಅಸ್ಮಂ-ಬಿನ್-ಜರಾಯಾ'ನನ್ನು ತನ್ನ ಪರವಾಗಿ ಖರಿಸ್ಥಾನನಿನ ಅಧೀನ ರಾಜನನ್ನಾಗಿ ನಿಯುಕ್ತಿ ಮಾಡಿದನು ಮತ್ತು ತಾನು ಖೊಫೆಯಲ್ಲಿಯೇ ವಸತಿ ಮಾಡಿದನು.

೫೦ನೆಯ ಹಿಜರಿಯಲ್ಲಿ ಖರಸ್ಥಾನದ ರಾಜ್ಯಾಡಳಿತವು 'ಹಜ್ರತ್-ಅಮೀರ-ಮಾವಿಯಾ'ನು 'ಸಯದ್-ಬಿನ್-ಉಸ್ಮಾನ ಗನಿ' ಆತನಿಗೆ ಒಪ್ಪಿಸಿದನು. ೬೩ನೆಯ ಹಿಜರಿಯಲ್ಲಿ 'ಎಸ್‌ದೈಯಿನ್-ಮಾವಿಯಾ'ನು 'ಮುಸಲ್ಮಿ-ಬಿನ್-ಜಿಯಾದ'ನನ್ನು ಕೊಸಿಸ್ಥಾನ ಹಾಗೂ ಖರಸ್ಥಾನಿನ ಅಧೀನ ರಾಜರನ್ನಾಗಿ ನಿಯುಕ್ತಿಸಿದನು. 'ಎಜೀದ'ನು ಮಸಲ್ಮೀಮನ ಜೊತೆಯಲ್ಲಿ ಕಳುಹಿಸಿದ್ದ ಜನರಲ್ಲಿ ಒಬ್ಬ 'ಮೊಹಲಿಬ್-ಬಿನ್-ಅಬಿಸಫ್ರಾ'ನು ಕೂಡ ಇದ್ದನು. ಮಸಲ್ಮೀಮನು ತನ್ನ ತಮ್ಮನಾದ ಎಸ್ದನಿಗೆ ಕೊಸಿಸ್ಥಾನದ ರಾಜ್ಯವನ್ನು ಒಪ್ಪಿಸಿದನು. ಕಾಬುಲನ ರಾಜನು ವಿದ್ರೋಹ ಮಾಡಿ ಮಸಲ್ಮಾನರ ರಾಜನಾದ 'ಅಬು-ಅಬ್ದುಲ್ ಅಲಾ-ಬಿನ್-ಜಿಯಾದ'ನನ್ನು ಬಂಧಿಸಿದ ಮಾಡಿದ ವಿಷಯ 'ಎಸ್ದ-ಬಿನ್-ಜಿಯಾದ'ನಿಗೆ ತಿಳಿದಾಗ ಒಂದು ಪ್ರಬಲ ಸೈನ್ಯವನ್ನು ಸಂಘಟಿಸಿ ಕಾಬೂಲ ರಾಜನ ಜೊತೆಗೆ ಯುದ್ಧ ಮಾಡಿದನು. ಅದೊಂದು ಘನಘೋರ ಯುದ್ಧವಾಯಿತು. ಇದರಲ್ಲಿ 'ಎಸ್ದ'ನಿಗೆ ಸೋಲಾಯಿತು ಮತ್ತು ಈತನ ಸೈನ್ಯದ ಬಹು ಭಾಗವು ಹತವಾಯಿತು.

ಈ ಸ್ಥಿತಿ-ಗತಿಗಳ ಬಗ್ಗೆ ಮುಸ್ಲಿಂ-ಬಿನ್-ಜಿಯಾದನಿಗೆ ತಿಳಿದಾಗ, 'ತಲ್‌ಹತುತ್ ತಲ್‌ಹಾತ್' ಹೆಸರಿನಿಂದ ಖ್ಯಾತನಾದ ತಲ್ಹಾ-ಬಿನ್-ಅಬ್ದುಲ್ಲಾ-ಬಿನ್-ಹನೀಫನನ್ನು ಕಾಬುಲಗೆ ಕಳುಹಿಸಿದನು. ಕಾಬುಲ ತಲುಪಿದ ನಂತರ ತಲ್ಹಾನು ೫ ಲಕ್ಷ

ದಿರಹಮಗಳನ್ನು ಕೊಟ್ಟು ಅಬು-ಅಬ್ದುಲ್ಲಾನನ್ನು ಕಾಬುಲ ಶಹಾನ ಬಂಧನದಿಂದ ಬಿಡುಗಡೆ ಮಾಡಿಸಿದನು. ನಂತರ ಮಸಲ್ಮೀಮನು ಸೀಸ್ಥಾನದ ರಾಜ್ಯದ ಆಡಳಿತವನ್ನು ತಲ್ಹಾನಿಗೆ ಒಪ್ಪಿಸಿದನು ಮತ್ತು ಗೌರ್ ಹಾಗೂ ಬಾದಗೀಸ್‌ನ ಜನರನ್ನು ಒಳಗೊಂಡ ಸೈನ್ಯವನ್ನು ಒಗ್ಗೂಡಿಸಿ ಕಾಬುಲಿಗೆ ಕಳುಹಿಸಿದನು ಮತ್ತು ಕಾಬುಲ ಜನರನ್ನು ಬಲವಂತವಾಗಿ ತನ್ನ ಆಧೀನರನ್ನಾಗಿ ಮಾಡಿಕೊಂಡನು. ಕೆಲವು ಜನ ಹಜ್ರತ್-ಖಾಲೀದ್-ರಜಿಅಲ್ಲಾಹು ಅನ್‌ಹುನ ಸಂತಾನ ಮತ್ತು ಕೆಲವರು ಅಬುಜಹಲ್ ಸಂತಾನವೆಂದು ಹೇಳುವ ಖಾಲಿದ್ ಬಿನ್-ಅಬ್ದುಲ್ಲಾರನ್ನು ಕಾಬುಲಿನ ರಾಜ್ಯಪಾಲರನ್ನಾಗಿ ನಿಯಮಿಸಿದನು.

ಖಾಲಿದ್-ಬಿನ್-ಅಬ್ದುಲ್ಲಾ ಕಾಬುಲನ ಆಡಳಿತವನ್ನು ತ್ಯಜಿಸಿದ ಮೇಲೆ ಇರಾಕ್ ಮತ್ತು ಅರಬ ಕಡೆ ಹಿಂದಿರುಗಿ ಹೋಗುವುದು ಉಚಿತವೆಂದು ತಿಳಿದನು. ಹೊಸ ರಾಜನ ಭಯದಿಂದ ಕಾಬೂಲನಲ್ಲಿರುವುದು ಕಠಿಣವಾಗಿತ್ತು, ಅದಕ್ಕಾಗಿ ಈತನು ತನ್ನ ಮಕ್ಕಳ ಹಾಗೂ ಇತರ ಅರಬಿ ಸಂತಾನದವರ ಸಮೇತ ಕಾಬೂಲ ರಾಜನ ಮಾರ್ಗದರ್ಶನದಲ್ಲಿ ಸುಲೇಮಾನ ಬೆಟ್ಟದ ಮೇಲೆ ಬಿಡಾರ ಹೂಡಿದನು. ಅದು ಮುಲ್ತಾನ ಹಾಗೂ ಪೇಶಾವರದ ಮಧ್ಯದಲ್ಲಿದೆ. ಇಸಲ್ಮಾ ಮತವನ್ನು ಸ್ವೀಕರಿಸಿದ ಒಬ್ಬ ಸಜ್ಜನ ಅಫಘಾನಿಯೊಂದಿಗೆ ಖಾಲೀದನು ತನ್ನ ಮಗಳ ಮದುವೆ ಮಾಡಿದನು. ಈ ಮಗಳಿಗೆ ಹಲವಾರು ಮಕ್ಕಳಾದವು. ಆ ಮಕ್ಕಳಲ್ಲಿ ಲೋದಿ ಮತ್ತು ಸೂರ ಎಂಬ ಇಬ್ಬರು ಮಕ್ಕಳು ಬಹಳ ಪ್ರಖ್ಯಾತಿ ಪಡೆದು ಶ್ರೇಷ್ಠರೆನಿಸಿದರು. ಅಫಘಾನಿ ಜನಾಂಗದಲ್ಲಿ ಎರಡು ಹೆಸರುವಾಸಿಯಾದ ಮನೆತನಗಳೆಂದರೆ 'ಲೋದಿ' ಮತ್ತು 'ಸೂರಿ'. ಈ ಮನೆತನಗಳು ಇಬ್ಬರು ಸಹೋದರರ ಸಂತಾನಗಳಾಗಿದ್ದವು.

ಅಫಘಾನ :

ಗೌರವಾನ್ವಿತ ಲೇಖಕಕರೊಬ್ಬರು ಬರೆದ 'ಮತಲಾ-ಅಲಾ-ನವಾರ' ಎಂಬ ಪುಸ್ತಕವನ್ನು ನಾನು ಬೆಹರಾನಪುರ ಖಾನದೇಶದಲ್ಲಿ ಓದಿದ್ದೆ . ಅದರಲ್ಲಿ ಅಫಘಾನರು ನಿಜವಾಗಿ ಖಿಬತಿ ಫಿರೇನಿಯವರಿದ್ದಾರೆ ಎಂದು ಬರೆಯಲಾಗಿದೆ. ಹಜ್ರತ ಮೂಸಾ ಅಲೈಹಿ ಸಲಾಮನು 'ಫಿರೇನಿ'ನ ಮೇಲೆ ವಿಜಯ ಪಡೆದ ಕಾಲದಲ್ಲಿ ಬಹಳಷ್ಟು ಜನರು ಖತುಬಿ ಖಿಬತಿ ಪಂಥದ ಜನರು ಫಿರಾನಿನ ಧರ್ಮವನ್ನು ಬಿಟ್ಟು ಮೂಸಾ ಪೈಗಂಬರರ ಧರ್ಮ ಸ್ವೀಕರಿಸಿದರು. ಆದರೆ ಈ ಖಿಬತಿಗಳ ಒಂದು ಗುಂಪು ವಿಧವಿಧವಾದ ಸಂಕಟಗಳಿಗೆ ಒಳಗಾದರೂ ಈ ಧರ್ಮವನ್ನು ಸ್ವೀಕರಿಸಲಿಲ್ಲಾ ಮತ್ತು ಫಿರೌನ ದೈವಿ ಸಂಬಂಧದಲ್ಲಿ ಆತನ ದೇವತ್ವದ ಅಧಿಕಾರಿಯೆಂದು ನಂಬಿ ಅಲ್ಲಿಯೇ ಧೃಢವಾಗಿ ಉಳಿದರು. ಇದರ ಫಲವಾಗಿ ಅವರು ತಮ್ಮ ಜನ್ಮಸ್ಥಳವನ್ನು ಬಿಡಬೇಕಾಗಿ, ಹಿಂದುಸ್ತಾನಕ್ಕೆ ಬಂದು ಸುಲೇಮಾನ ಬೆಟ್ಟದ ಮೇಲೆ ನೆಲೆಸಿದರು.

ಈ ಗುಂಪಿನಿಂದ ಬೇರೆ ಗುಂಪಿನ ಜನಾಂಗಗಳು ಹಲವಾರು ಹುಟ್ಟಿಕೊಂಡರೂ ಅವು ಅಫಘಾನ ಹೆಸರಿನಿಂದ ಪ್ರಖ್ಯಾತಿ ಪಡೆದವು. 'ಇಬ್ರಾಹ'ನು ಕಾಬಾ (ಖಾನಾ ಕಾಬಾ) ಮೇಲೆ ದಾಳಿ ಮಾಡಿದಾಗ ಕಾಬಾದ ಶತ್ರುಗಳು ಸಮೀಪ ಹಾಗೂ ದೂರದಿಂದ ಬಂದು ಇಬ್ರಾಹನ ಸುತ್ತ-ಮುತ್ತ ಸೇರಿದ್ದರು, ಅವರು ಕೂಡ ಇವರೊಂದಿಗೆ ಸೇರಿಕೊಂಡು ಕಾಬಾದ ಮೇಲೆ ದಾಳಿ ಮಾಡಿದರು. ಆ ಜನರಲ್ಲಿ ಅಫಘಾನರು ಕೂಡ ಸೇರಿದ್ದರು. ಅವರು ಸಕಾಲದಲ್ಲಿ ಇಬ್ರಾಹನೊಂದಿಗೆ ಸಹಕರಿಸಿದರು. ಈ ಜನರು ಮಕ್ಕಾ ತಲುಪಿದಾಗ ಅಲ್ಲಾಹನು ವಿಶಿಷ್ಟ ಕ್ಷಾಮವು ಆವರಿಸುವಂತೆ ಮಾಡಿದನು. ಅವರೆಲ್ಲರೂ ಮರಣಹೊಂದಿದರು. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಮುಸಲ್ಮಾನ ಅಫಗಾನರು ಒಕ್ಕಲುತನ ಹಾಗೂ ಆರ್ಥಿಕ ಬೆಳವಣಿಗೆ ಕಡೆ ಗಮನ ಕೊಟ್ಟು ಕುದುರೆಗಳು, ಹಸುಗಳು, ಕುರಿಗಳು ಇತ್ಯಾದಿಗಳ ಒಡೆಯರಾಗಿಬಿಟ್ಟರು. ಆ ಅಫಘಾನರು ಈ ಮುಸಲ್ಮಾರ ಜೊತೆ ಸೇರಿ 'ಮಹ್ಮದ್-ಬಿನ್-ಖಾಸಿಮ' ಜೊತೆಯಲ್ಲಿ ಹಿಂದುಸ್ತಾನಕ್ಕೆ ಬಂದಿದ್ದರು ಮತ್ತು ಸ್ನೇಹಪರವಾದ ಸಂಸ್ಕಾರ ಸಂಪ್ರದಾಯಗಳನ್ನು ಹುಟ್ಟುಹಾಕಿದರು. ಈ ಜನರ ಸಂತತಿ ವೃದ್ಧಿಸಿ ಹರಡತೊಡಗಿದಾಗ, ಇವರು ಕ್ರಿ.ಶ. ೧೪೩ನೆಯ ಇಸವಿಯಲ್ಲಿ ಕೊಹಿಸ್ಥಾನದ ಪ್ರಾಂತದಿಂದ ಹೊರಟು ಹಿಂದುಸ್ತಾನದ ಬೇರೆ ಬೇರೆ ಪಟ್ಟಣಗಳಲ್ಲಿ, ಕವ್ರಾಜ, ಪೇಶಾವರ ಮತ್ತು ಶಣ್ಣುರಾನ ಇತ್ಯಾದಿಗಳನ್ನು ವಶಪಡಿಸಿಕೊಂಡರು. ಲಾಹೋರಿನ ರಾಜನಾದ ರಾಜಾ ಅಜಮೀರನ ಸಂಬಂಧಿಕನು ಈ ಅಫಘಾನ ಜನಾಂಗದ ಗುಂಪನ್ನು ಬದಿಗೊತ್ತಲು ತನ್ನ ಒಬ್ಬ ಅಧಿಕಾರಿ 'ಕೋಮ್ವಾ'ನನ್ನು ಸಾವಿರಾರು ಸವಾರರೊಂದಿಗೆ ಅವರು ತಲೆ ಎತ್ತದಂತೆ ಮಾಡಲು ಕಳುಹಿಸಿ ಕೊಟ್ಟನು. ಅಫಘಾನರು ಈ ಸೈನ್ಯದ ವಿರುದ್ಧ ಹೋರಾಡಿ ಬಹಳಷ್ಟು ಹಿಂದೂ ಸವಾರರನ್ನು ಕೊಲೆಮಾಡಿ ಇವರ ಸೈನ್ಯವನ್ನು ಸೋಲಿಸಿದರು. ಈ ಘಟನೆಯ ನಂತರ ಲಾಹೋರಿನ ರಾಜನು ಅಫಘಾನರನ್ನು ಹತ್ತಿಕ್ಕಲು ತನ್ನ ಸಹೋದರನ ಮಗನೊಡನೆ ಎರಡು ಸಾವಿರ ಅಶ್ವ ಸವಾರರು ಮತ್ತು ಐದು ಸಾವಿರ ಕಾಲ್ದಳದ ಸೈನಿಕರನ್ನು ಕಳುಹಿಸಿ ಕೊಟ್ಟನು. ಈ ಸಾರಿ ಖಲೀಜ್, ಘೋರ ಹಾಗೂ ಕಾಬೂಲಿನ ಮುಸಲ್ಮಾನರು ಅಫಘಾನರ ಸಹಾಯ ಮಾಡುವುದು ಕಷ್ಟಕರವೆಂದು ತಿಳಿದು ನಾಲ್ಕು ಸಾವಿರ ಸೈನಿಕರ ಒಂದು ಸೈನ್ಯದ ಪಡೆಯನ್ನು ಒಗ್ಗೂಡಿಸಿ ಅವರ ನೆರವಿಗೆ ಕಳುಹಿಸಿದನು. ಈ ಸಹಾಯದಿಂದ ಅಫಘಾನರಿಗೆ ಸಾಕಷ್ಟು ಬಲ ದೊರೆತು ಕೊಲೆ, ಸುಲಿಗೆಗಳಲ್ಲಿ ನಿರತರಾದರು. ಹಿಂದುಸ್ತಾನದ ಜನರೊಂದಿಗೆ ಐದು ತಿಂಗಳಲ್ಲಿ ೧೭ ಯುದ್ಧಗಳನ್ನು ಮಾಡಿದರು ಮತ್ತು ಬಹಳ ದಾಳಿಗಳಲ್ಲಿ ಗೆದ್ದರು. ಯುದ್ಧ ನಡೆಯುವ ಕಾಲದಲ್ಲಿ ಚಳಿಗಾಲವು ಆರಂಭವಾಗಿ ಹಿಂದುಸ್ತಾನದ ಜನರನ್ನು ನಮ್ರ ಹಾಗೂ ಅಸಹಾಯಕರನ್ನಾಗಿ ಮಾಡಿತು. ಅವರು ಯುದ್ಧವನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಮರುಳಿಹೋದರು. ಚಳಿಗಾಲ ಮುಗಿದೊಡನೆ, ಲಾಹೋರಿನ ರಾಜನು ಒಂದು ಹೊಸ ಸದೃಢ ಸೈನ್ಯದೊಂದಿಗೆ ದಾಳಿಮಾಡಿದನು. ಈ ಸಾರಿಯೂ ಕಾಬೂಲ್ ಹಾಗೂ ಖಲೀಜ್‌ನ ಜನರು

ಅಫಘಾನರಿಗೆ ಸಹಾಯ ಮಾಡಿದರು ಮತ್ತು ಕರ್ಮಾಜ ಹಾಗೂ ಪೇಶಾವರದ ಮಧ್ಯೆ ಉಭಯ ಸೈನ್ಯಗಳು ಎದುರಾದವು. ಹಿಂದುಸ್ತಾನದ ಜನರು ಅಫಘಾನರ ಮೇಲೆ ಮೇಲುಗೈ ಪಡೆದು ಅವರನ್ನು ಗುಡ್ಡಗಾಡು ಪ್ರದೇಶದಲ್ಲಿ ಓಡಿಸಿದರು.

ಕೆಲವು ಸಾರಿ ಅಫಘಾನರು ತಮ್ಮ ಬಿಲ್ಲು-ಬಾಣಗಳ ಮಳೆ ಸುರಿಸಿ ಹಿಂದುಸ್ತಾನದ ಜನರನ್ನು ಸೋಲಿಸಿ ಅವರನ್ನು ಡೇರೆ ಹಾಗೂ ಅವಿತಿರುವ ಸ್ಥಳಗಳಿಂದ ಹೊರತೆಗೆಯುತ್ತಿದ್ದರು. ಮಳೆಗಾಲ ಬಂದಾಗ ನೀಲಾಬ *(ನೀಲಾಬ ಎಂದರೆ ಮರಾವು ನದಿ ಅಥವಾ ಅಟಕ್ ಅಥವಾ ಸಿಂಧ ಇದೆ) ನದಿಯು ಉಕ್ಕಿ ಹರಿಯುವುದನ್ನು ನೋಡಿ ಯುದ್ಧದ ಪರಿಣಾಮದ ಕಡೆ ಗಮನಹರಿಸದೇ ತಮ್ಮ ದೇಶದ ಕಡೆಗೆ ಹಿಂದಿರುಗಿದರು. ಇದರಂತೆ ಕಾಬುಲ ಹಾಗೂ ಖಲೀಜ್‌ನ ಮುಸಲ್ಮಾನರು ತಮ್ಮ ಹುಟ್ಟೂರುಗಳ ಕಡೆ ಹೊರಟುಹೋದರು. ಕಾಬುಲ ಹಾಗೂ ಖಲೀಜನ ಜನರನ್ನು ಸ್ವಂತ ಹುಟ್ಟೂರಿನ ಕೋಹಿಸ್ಥಾನದ ಮುಸಲ್ಮಾನರ ಮೇಲೆ ಏನಾಯಿತು ಎಂದು ಕೇಳಿದರೆ, ಅವರಿರುವ ದೇಶಕ್ಕೆ ಕೋಹಿಸ್ಥಾನ ಎಂದು ಕರೆಯದೆ ಅಫಘಾನಿಸ್ಥಾನ ಎಂದು ಕರೆಯಲು ಹೇಳಲಾಯಿತು, ಏಕೆಂದರೆ ಈಗ ಅಲ್ಲಿ ಅಫಘಾನ ಹಾಗೂ ಗೌನ ಅಂದರೆ ಗಲಾಟೆ ಹಾಗೂ ದೂರುಗಳನ್ನು ಬಿಟ್ಟು ಬೇರೆ ಏನನ್ನೂ ಕೇಳಲಾಗದು. ಇದರಿಂದ ತಿಳಿದು ಬರುವುದೇನೆಂದರೆ, ಇದೇ ಕಾರಣದಿಂದ ಕೋಹಿಸ್ಥಾನದ ಮುಸಲ್ಮಾನರಿಗೆ ಅಫಘಾನರು ಮತ್ತು ಇವರು ಹುಟ್ಟಿದ ಸ್ಥಾನವನ್ನು ಅಫಘಾನಿಸ್ಥಾನವೆಂದು ಕರೆಯಲಾಯಿತು, ಆದರೆ ಹಿಂದುಸ್ತಾನದ ಜನರು ಕೋಹಿಸ್ಥಾನಿ ಮುಸಲ್ಮಾನರಿಗೆ ಪಠಾಣ ಎಂದು ಕರೆಯುತ್ತಾರೆ. ಹೀಗೆ ಏಕೆ ಕರೆಯುತ್ತಾರೆಂದು ತಿಳಿಯದು, ಆದರೆ ಇಸ್ಲಾಮಿ ರಾಜರ ಅವಧಿಯಲ್ಲಿ ಮೊದಲ ಬಾರಿಗೆ ಬಂದ ಜನರು ಪಟ್ನಾ ನಿವಾಸಿಗಳಾದ ಕಾರಣ ಅವರನ್ನು ಪಠಾಣರೆಂದು ಕರೆಯಲು ಕಾರಣವಿರಬಹುದು. ಅದಕ್ಕಾಗಿ ಹಿಂದುಸ್ತಾನದ ಜನರು ಇವರನ್ನು ಪಠಾಣ ಎಂದು ಕರೆಯಲಾರಂಭಿಸಿದರು. (ಒಲ್ಲಾಅಲಮ್-ಬಿಲ್ ಸವಾಬ್)

ಈ ಕಾಲದಲ್ಲಿ ಹಿಂದೂ, ಖಕ್ರೂನ್ ಹಾಗೂ ಲಾಹೋರಿನ ರಾಜರ ಮಧ್ಯೆ ಸ್ನೇಹದ ಬದಲಾಗಿ ವೈಷಮ್ಯ ಹುಟ್ಟಿತು, ಇದರಿಂದಾಗಿ ಖಕ್ಕರ್ ಜನಾಂಗದವರಿಗೆ ಅಫಘಾನ ಜನಾಂಗದೊಂದಿಗೆ ಸ್ನೇಹ ಬೆಳೆದು ಐಕ್ಯತೆ ಹುಟ್ಟಿತು. ಇದರಿಂದಾಗಿ ಲಾಹೋರಿನ ರಾಜನೂ ಅಫಘಾನರೊಂದಿಗೆ ಯುದ್ಧಮಾಡಲಿಲ್ಲ ಹಾಗೂ ಅವರೊಂದಿಗೆ ಒಪ್ಪಂದ ಮಾಡಿಕೊಂಡು ಮಲ್ಗಾನಿನ ಕೆಲವು ಗ್ರಾಮಗಳನ್ನು ಅವರಿಗೆ ಕೊಟ್ಟನು. ಖಲೀಜಿ ಜನರು ಅಫಘಾನರಿಗೆ ಸಹಾಯ ಮಾಡಲು ಇದೇ ಅರಣ್ಯದಲ್ಲಿ ವಾಸಮಾಡಿದ್ದರೂ ಅಫಘಾನರಂತೆ ಒಂದು ಶರತ್ತಿನ ಮೇಲೆ ಅಂದರೆ ಅಫಘಾನರೊಂದಿಗೆ ಸೇರಿ ಮುಸಲ್ಮಾನರ ವಿರುದ್ಧ ಗಡಿಯ ಸಂರಕ್ಷಣೆ ಮಾಡುವುದು. ಅಫಘಾನರು ಪೇಶಾವರದ ಕೋಹಿಸ್ಥಾನದಲ್ಲಿ ಒಂದು ಗೆರೆ ಎಳೆದು ಅದಕ್ಕೆ 'ಖೈಬರ್'

ಎಂದು ಹೆಸರಿಸಿದರು ಮತ್ತು 'ರವೂ'ನ ಪ್ರಾಂತದ ಮೇಲೆ ಸಂಪೂರ್ಣ ಸ್ವಾಧೀನ ಪಡಿಸಿಕೊಂಡು, 'ಆಲ ಸಾಮಾನಿ'ನ ಆಳ್ವಿಕೆಯ ಅವಧಿಯಲ್ಲಿ ಸಾಮಾನಿ ಸೈನ್ಯಕ್ಕೂ ಸಹ ಅವರು ಲಾಹೋರನ್ನು ಮುಟ್ಟಲು ಬಿಡಲಿಲ್ಲ. ಇದಕ್ಕಾಗಿ ಸಾಮಾನಿ ಸೈನ್ಯವೂ ಕೊಲೆ, ಸುಲಿಗೆಯನ್ನು ಕೊನೆವರೆಗೂ ಸತತವಾಗಿ ಸಿಂಧ ಹಾಗೂ ಭಾತನಾದಲ್ಲೆ *(ಭಾತನಾ 'ಇದರ ಅಸಲು' ಹೆಸರು 'ಭಾಟಿಯಾ' ಇರಲು ಸಾಧ್ಯ. ಈ ಹೆಸರಿನ ಒಂದು ಸ್ಥಾನವು ಮುಲ್ತಾನಿನ ಸಮೀಪವಿತ್ತು.) ಇತ್ತು. ರವೂ ಜನಾಂಗದಿಂದ ರಕ್ಷಿತವಾದ ಆ ಅರಣ್ಯದ ಸರಣಿಯು ಯಾವುದೊ ಉದ್ದದಲ್ಲಿ ಬಜುರ *('ಬಜುರ' ಚಿತ್ರಾಲ್ ಹಾಗೂ ಕಾಬುಲ ನದಿಗಳ ಮಧ್ಯದ ಪ್ರಾಂತ ಸೂಚಿಸಲಾಗಿದೆ. ಬಜುರಿನಿಂದ ಸೇವಿ *(ಸೇವಿ ಎಂದರೆ ಖೀಲಾತನ ಪ್ರಾಂತವು ಆಗುತ್ತದೆ. ಸೇವಿಯವರೆಗೆ ಯಾವುದು ಬಕ್ಕರ ಪ್ರಾಂತ ಮತ್ತು ಅಡ್ಡಳತೆಯಲ್ಲಿ ಹುಸ್ನೇ ಅಬ್ದಲನಿಂದ ಕಾಬುಲವರೆಗೆ ಪಸರಿಸಿದ ಪ್ರಾಂತವು. ಯಾವಾಗ ಘಝುನಿ ರಾಜ್ಯವು ಅಲ್-ಪಸ್ತಗೀನ್ ಕೈಗೆ ಬಂತೊ ಆಗ ಈತನು ಬಹಳಷ್ಟು ಸಾರಿ ಮೂಲ್‌ಗಾನ *(ಅಫಘಾನಿಸ್ಥಾನದ ಪೂರ್ವ ಜಿಲ್ಲೆ ಪೇಶಾವರ ಸಮೀಪ ಪಾಕಿಸ್ತಾನದ ಗಡಿಯವರೆಗೆ ಹಬ್ಬಿದೆಯೊ ಇದರ ಹೆಸರು ಮಲ್‌ಗಾನ ಎಂದಿತ್ತು) ಹಾಗೂ ಮುಲ್ತಾನನಲ್ಲಿ ಸುಲಿಗೆ ಮಾಡಿ ಅಲ್ಲಿಯ ಹೆಂಗಸರನ್ನು ಮತ್ತು ಗುಲಾಮರನ್ನು ಬಂಧಿಸಿದರು. ಅಫಘಾನಿ ಜನರು ಅಲಪ್ತಗೀನ್‌ನಿಂದ ಉಳಿಗಾಲವಿಲ್ಲವೆಂದು ತಿಳಿದು ಅವರು ರಾಜಾ ಜೈಪಾಲನೊಂದಿಗೆ ಅಲಪ್ತಗೀನ್‌ನನ್ನು ಎದುರಿಸಲು ಸಹಾಯ ಮಾಡಲು ಕೋರಿದರು. ಜೈಪಾಲನು ಈ ಕುರಿತು ಚಿಂತನೆ ಮಾಡಿದರು.

ಹಿಂದುಸ್ತಾನದ ಸೈನ್ಯವು ಕೊರೆಯುವ ಚಳಿಯಿಂದಾಗಿ ಗಡಿ ಪ್ರದೇಶಗಳಲ್ಲಿ ಯಾವಾಗಲೂ ಇರಲು ಸಾಧ್ಯವಿಲ್ಲ, ಈ ವಿಷಯವನ್ನು ಭಾತ್ನಾದ ರಾಜನೊಂದಿಗೆ ಚರ್ಚಿಸಿ ಸಲಹೆ ಪಡೆದನು. ಆತನ ಸಲಹೆಯ ಮೇರೆಗೆ ಅಫಘಾನರಲ್ಲಿ ಯೋಗ್ಯ, ಪ್ರಾಮಾಣಿಕ ಹಾಗೂ ವಿಶ್ವಾಸಾರ್ಹ ವ್ಯಕ್ತಿ, 'ಶೇಖ ಹಮೀದ್'ನನ್ನು ಆ ಪ್ರದೇಶದ ಮುಖ್ಯಸ್ಥನನ್ನಾಗಿ ನಿಯೋಜಿಸಲಾಯಿತು. ಶೇಖ ಹಮೀದ್‌ನು ಮುಲ್ಗಾನ್ ಮತ್ತು ಮುಲ್ತಾನ್ ಎರಡನ್ನೂ ತನ್ನ ವಶಕ್ಕೆ ತೆಗೆದುಕೊಂಡನು ಹಾಗೂ ಎರಡೂ ಪ್ರದೇಶಗಳಲ್ಲಿ ತನ್ನ ಆಧೀನನಾದ ಅಧಿಕಾರಿಯನ್ನು ನಾಯಬನನ್ನಾಗಿ ನಿಯಮಿಸಿದನು. ಇದೇ ಕಾಲದಿಂದ ಅಫಘಾನ ದೇಶದಲ್ಲಿ ರಾಜ್ಯಾಡಳಿತವು ಆರಂಭವಾಯಿತು.

ಅಲಪ್ತಗೀನ್‌ನ ಮರಣದ ನಂತರ ಸುಬಕ್ತಗೀನ್ ಆತನ ವಾರಸುದಾರನಾದನು. ಶೇಖ ಹಮೀದನು ಸುಬಕ್ತಗೀನ್‌ನನ್ನು ವಿರೋಧಿಸುವುದು ಸೂಕ್ತವೆಂದು ತಿಳಿಯಲಿಲ್ಲ. ಒಂದು ಸಂದೇಶ ಕಳುಹಿ, ಮುಸಲ್ಮಾನ ಮತದ ಇಸ್ಲಾಮಿ ಅನುಯಾಯಿಗಳು ಒಬ್ಬರೆ ಆದ ಕಾರಣ ಅದಕ್ಕಾಗಿ ಬಾದಶಾಹನು ಈ ಜನರನ್ನು (ಅಂದರೆ ಅಫಘಾನ ಜನರನ್ನು) ತಮ್ಮವರೆಂದು ತಿಳಿಯತಕ್ಕದ್ದು. ಯಾವಾಗಲಾದರೂ ಮುಸಲ್ಮಾನರ

ಸೈನ್ಯವು ಹಿಂದುಸ್ತಾನದ ಮೇಲೆ ದಾಳಿ ಮಾಡಿದಲ್ಲಿ ಈತನ ಸೈನ್ಯವು (ಅಂದರೆ ಸಬಸ್ತಗೀನ್‌ನ) ಯಾವ ತರಹದ ಅಡ್ಡಿ ಆತಂಕಗಳನ್ನು ಮಾಡಕೂಡದು ಹಾಗೂ ಈ ಜನಾಂಗದವರಿಗೆ ಯಾವ ರೀತಿಯಿಂದಲೂ ಹಾಗೂ ಯಾರೂ ಹಾನಿ ಮಾಡಕೂಡದು. ಸಬಸ್ತಗೀನ್‌ನು ಸಹ ವ್ಯೂಹ ಸಮಯದ ದೃಷ್ಟಿಯಿಂದ ಶೇಖ ಅಹ್ಮದ್‌ನ ವಿನಂತಿಯನ್ನು ಸ್ವೀಕರಿಸಿದನು. ರಾಜಾ ಜೈಪಾಲನನ್ನು ಸೋಲಿಸಿದ ಮೇಲೆ ಅಫಘಾನಿ ಜನರನ್ನು ಬಹಳ ಗೌರವದಿಂದ ಸ್ವಾಗತ ಮಾಡಿ, ಮುಲ್ತಾನದ ಬಹಳಷ್ಟು ಭಾಗಗಳನ್ನು ಅವರಿಗೆ ಕೊಡಲಾಯಿತು. ಆದರೆ, ಸಬಸ್ತಗೀನ್‌ನ ಮಗ ಸುಲ್ತಾನ್ ಮಹಮದನು ತನ್ನ ತಂದೆಯ ತದ್ವಿರುದ್ಧ ವ್ಯವಹರಿಸಿದನು. ಈತನು ಯಾವಾಗಲೂ ಅಫಘಾನ ಜನರನ್ನು ತಲೆ ಎತ್ತದಂತೆ ಅಧೀನರನ್ನಾಗಿ ಮಾಡಿಕೊಂಡನು. ಇವರಲ್ಲಿ ಯಾರು ವಿದ್ರೋಹಿಗಳಿದ್ದರೋ ಅವರನ್ನು ವಧಿಸಿದನು ಮತ್ತು ಯಾರು ಅಧೀನರಾಗಿದ್ದರೊ ಅವರನ್ನು ತನ್ನ ಸೇವಕರನ್ನಾಗಿ ಮಾಡಿಕೊಂಡನು.

■

*

ಅಧ್ಯಾಯ - ೧

ಲಾಹೋರ್ ಸುಲ್ತಾನರ ವಿವರ

ಇವರನ್ನು 'ಸಲ್ಹಾತೀನೇ ಘಜನವೀಯಾ' (ಘಜನವೀ ಸುಲ್ತಾನರು) ಸಹ ಕರೆಯಲಾಗುತ್ತದೆ.

ಅಮೀರ ನಾಸಿರುದ್ದೀನ್ ಸಬಸ್ತಗೀನ್

ಅಮೀರ ನಾಸಿರುದ್ದೀನನ ಗೆಲವುಗಳ ಉಕ್ಕೇರಿದ ನದಿಯು ಸಿಂಧಕ್ಕಿಂತಲೂ ಮುಂದೆ ಹೋಗಲಿಲ್ಲ ಹಾಗೂ ಈತನ ಆಳ್ವಿಕೆಯು ಪಂಜಾಬವರೆಗೆ ತಲುಪಲಿಲ್ಲ, ಆದರೂ ಕೆಲವು ಇತಿಹಾಸಕಾರರು ಈತನನ್ನು ಲಾಹೋರಿನ ರಾಜರುಗಳ ಪಟ್ಟಿಯಲ್ಲಿ ಸೇರಿಸಿದ್ದಾರೆ.

ಅಲಪ್ತಗೀನ್‌ನ ವಸ್ತುಸ್ಥಿತಿ

ಎಲ್ಲಾ ಇತಿಹಾಸಕಾರರು ಸುಬಕ್ತಗೀನ್‌ನು ಮೂಲತಃ ತುರ್ಕ್ ಮೂಲದ ಅಲಪ್ತಗೀನ್‌ನ ಗುಲಾಮನಾಗಿದ್ದನು ಎಂದು ಹೇಳುತ್ತಾರೆ. ಸಾವಾನಿಯ ರಾಜ್ಯಾವಧಿಯಲ್ಲಿ ಅಲಪ್ತಗೀನ್ ಖುರಾಸಾನಿನ ಆಡಳಿತಗಾರನಾಗಿ ನೇಮಕಗೊಂಡಿದ್ದನು. ಕೆಲವೇ ಸಮಯದಲ್ಲಿ ಈತನು ತನ್ನ ಆಳ್ವಿಕೆಯನ್ನು ಎಲ್ಲ ರೀತಿಯಿಂದ ಧೃಡವಾಗಿಸಿದನು ಮತ್ತು ಅದನ್ನೂ ಸಂಪೂರ್ಣವಾಗಿ ತನ್ನ ಪ್ರಭಾವದಲ್ಲಿರಿಸಿದನು. ಅಬ್ದುಲ್-ಮುಲ್ಕ್ ಮೃತಪಟ್ಟಾಗ, ಬುಖಾರಾದ ಅಮೀರರು ಅಲ್-ಪಸ್ತಗೀನ್‌ನ ಬಳಿ ಒಬ್ಬ ಪ್ರತಿನಿಧಿಯನ್ನು ಕಳುಹಿಸಿ 'ಅಲ್-ಸಾಮಾನಿ'ನಲ್ಲಿ ಈಗ ಯಾವ ವ್ಯಕ್ತಿ ಆಳಲು ಯೋಗ್ಯನಿದ್ದಾನೆ? ಎಂದು ಕೇಳಿದರು. ಅಲಪ್ತಗೀನ್‌ನು ಉತ್ತರವಾಗಿ ಮಸೂರ್-ಬಿನ್-ಅಬ್ದುಲ್ ಮಲೀಕ್ ಇನ್ನೂ ತರುಣನಾಗಿದ್ದು, ಈ ಕೆಲಸಕ್ಕಾಗಿ ಈತನ ಚಿಕ್ಕಪ್ಪನಿಗಿಂತಲೂ ಹೆಚ್ಚು ಯೋಗ್ಯ ಬೇರೆ ಯಾರೂ ಇಲ್ಲವೆಂದು ಉತ್ತರಿಸಿದನು. ಆದರೆ, ಪ್ರತಿನಿಧಿಯು ಅಲ್-ಪಸ್ತಗೀನ್‌ನ

ಉತ್ತರವನ್ನು ಪಡೆದುಕೊಂಡು ಹಿಂದಿರುಗುವ ಮೊದಲೇ ರಾಜ್ಯದ ಅಮೀರರು ಏಕಭಿಪ್ರಾಯದಿಂದ ಮನ್-ಸೂರನನ್ನು ಸಿಂಹಾಸನಾರೂಢನನ್ನಾಗಿಸಿದರು.

ಮನ್-ಸೂರನು ರಾಜ್ಯದ ಆಡಳಿತ ಸೂತ್ರವನ್ನು ಕೈಗೆತ್ತಿಕೊಂಡ ಕೂಡಲೇ ಅಲಪ್ತಗೀನ್‌ನನ್ನು ಬಖಾರಾಕ್ಕೆ ಬರುವಂತೆ ಹೇಳಿದನು, ಅಲಪ್ತಗೀನ್‌ನು ಭಯಗ್ರಸ್ತನಾದನು. ಏಕೆಂದರೆ ಮನ್-ಸೂರನು ಆಳರಸನಾಗಲು ಯೋಗ್ಯನಲ್ಲವೆಂದು ಸಲಹೆ ನೀಡಿದ್ದನು. ಆದರೆ, ಆತನ ಎದುರುಗಡೆ ತಲೆ ತಗ್ಗಿಸುವ ಬದಲು ಮನ್-ಸೂರನ ಅಧೀನ ವರ್ತುಲದಿಂದ ಹೊರಬಿದ್ದನು, ಮತ್ತು ವಿದ್ರೋಹವನ್ನು ಘೋಷಿಸಿದನು. ೧೩೫೧ನೆಯ ಇಸವಿಯಲ್ಲಿ ಈತನು ತನ್ನ ಗುಲಾಮರಾಗಿದ್ದ ಮೂರು ಸಾವಿರ ಸವಾರರನ್ನು ಜೊತೆಗೆ ಕರೆದುಕೊಂಡು ಖುರಾಸಾನದಿಂದ ಘಜನಿ ಕಡೆಗೆ ಹೊರಟನು ಮತ್ತು ಘಜನಿಯನ್ನು ಗೆದ್ದು ತನ್ನ ರಾಜ್ಯವನ್ನು ಸಶಕ್ತವಾಗಿ ಸ್ಥಾಪಿಸಿದನು. ಮನ್-ಸೂರನು ಖುರಾಸಾನ ಆಡಳಿತದ ಮುಖಂಡತ್ವದ ಸ್ಥಾನವು ಖಾಲಿಯಿದೆ ಎಂದರಿತಾಗ ಅಲ್ಲಿಯ ರಾಜ್ಯಾಡಳಿತವನ್ನು 'ಅಬುಲ್-ಹಸನ್-ಮೊಹ್ಮದ್-ಬಿನ್-ಇಬ್ರಾಹೀಂ ಹಜುರಿ'ಗೆ ಒಪ್ಪಿಸಿದನು. ಅದಲ್ಲದೆ ೨-೩ ಸಾರಿ ಅಲ್-ಪಸ್ತಗೀನ್‌ನನ್ನು ಎದುರಿಸಲು ತನ್ನ ಸೈನ್ಯವನ್ನು ಕಳುಹಿದನು. ಆದರೆ ಪ್ರತಿ ಸಾರಿಯು ಅಲ್-ಪಸ್ತಗೀನು ಗೆಲವು ಸಾಧಿಸಿ ಮನ್-ಸೂರನ ಸೈನ್ಯವು ಸೋತು ವೈರಿಗಳನ್ನು ಎದುರಿಸದೆ ಹಿಮ್ಮೆಟ್ಟಿತು.

'ಮೃತ ಅಹ್ಮದ್-ಅಬ್ದುಲ್ಲಾ'ನ ಹೇಳಿಕೆಯ ಪ್ರಕಾರ ಅಲ್-ಪಸ್ತಗೀನ್‌ನು ೧೫ ವರ್ಷ ಧೈರ್ಯದಿಂದ, ಪ್ರಜಾಪ್ರಭಾವಿಯಾಗಿ ಆಳಿದನು. ಈ ಕಾಲದಲ್ಲಿ ಈತನ ಸೈನ್ಯದ ಮುಖಸ್ಥನಾದ ಸಬಸ್ತಗೀನ್‌ನು ಹಿಂದೂ ಜನರೊಂದಿಗೆ 'ಜೀಹಾದ್' ಮಾಡಿದನು ಮತ್ತು ಪ್ರತಿ ಸಾರಿ ಅವರನ್ನು ಎದುರಿಸಿದಾಗ ಗೆಲುವನ್ನು ಸಾಧಿಸಿದನು. ಹಿಜರಿ ಶಕೆ ೩೬೫ ರಲ್ಲಿ ಅಲ್-ಪಸ್ತಗೀನ್‌ನು ಮೃತನಾದನು ಮತ್ತು ಆತನ ಮಗನು ಅಬೂವಾಯಿಸಾಹಾಖನು ಸಬಸ್ತಗೀನನ ಜೊತೆಗೆ ತೆರಳಿದನು.

ಅಮೀರ ಮನ್-ಸೂರನು ಘಜನಿಯ ಆಡಳಿತವನ್ನು ಅಬೂ-ಇಸಾಖಗೆ ಒಪ್ಪಿಸಿದರೂ ರಾಜ್ಯದ ಆಳಿಕೆಯ ಮಹತ್ವಪೂರ್ಣ ಕೆಲಸಗಳನ್ನು ಸಬಸ್ತಗೀನನ ಸಲಹೆಯ ಮೇರೆಗೆ ನಡೆಯುತ್ತಿದ್ದವು. (ಅಂದರೆ ವಾಸ್ತವವಾಗಿ ಆಡಳಿತ ಸೂತ್ರವು ಆತನ ಕೈಯಲ್ಲಿತ್ತು.)

ಕೆಲ ಸಮಯದಲ್ಲಿ ಅಬೂ-ಇಸಾಖ ಮೃತನಾದನು. ಗಝ್ನೈನನ ಅಮೀರರು ಮತ್ತು ರಾಜ್ಯದ ಮುಖ್ಯಾಧಿಕಾರಿಗಳು ಸಬಸ್ತಗೀನನ ಮುಖದ ಮೇಲೆ ಗೆಲುವಿನ ಹಾಗೂ ಸ್ವೀಕೃತ ಸಂಕೇತಗಳನ್ನು ಕಂಡು ೩೬೬ನೆಯ ಹಿಜರಿಯಲ್ಲಿ ಆತನನ್ನು ಮುಂದಿನ ಬಾದಶಹನೆಂದು ಒಪ್ಪಿಕೊಂಡರು ಮತ್ತು ಅಲ್-ಪಸ್ತಗೀನ್‌ನ ಮಗಳು (ಅಬೂ-ಇಸಾಖನ ಸಹೋದರಿ) ಇವಳೊಂದಿಗೆ ಮದುವೆ ಮಾಡಿದರು. ಅಲ್-

ಪಸ್ತಗೀನ್‌ನು, ತನ್ನ ರಾಜ್ಯಾವಧಿಯಲ್ಲಿ ನ್ಯಾಯಯುತ ಹಾಗೂ ದಕ್ಷ ಆಡಳಿತಕ್ಕೆ ಬೆಂಬಲ ನೀಡುವುದರಲ್ಲಿ ಭಾಗಿಯಾದನು, ಅಲ್ಲದೆ ದಬ್ಬಾಳಿಕೆ ಹಾಗೂ ಬಲವಂತಕ್ಕೆ ಹತ್ತಿಕ್ಕಲು ಹಿಂದೆ-ಮುಂದೆ ನೋಡಲಿಲ್ಲಾ. ಅಮೀರರು ಮತ್ತು ಗೌರವಾನ್ವಿತ ರಾಜ್ಯದ ಅಧಿಕಾರಿಗಳಿಗೆ ವಿವಿಧ ಕಾಣಿಕೆಗಳನ್ನು ಅನುಗ್ರಹಿಸಿ ಅವರ ಹೃದಯದಲ್ಲಿ ತನ್ನ ಬಗ್ಗೆ ಪ್ರೇಮ ಹಾಗೂ ಗೌರವದ ಪ್ರಭಾವವನ್ನು ಬೆಳೆಸಿಕೊಂಡನು.

ಸುಬುಕ್ತಗೀನ್‌ನ ಪ್ರಾಥಮಿಕ ಪರಿಸ್ಥಿತಿ

ಪ್ರಖ್ಯಾತ ಇತಿಹಾಸಕಾರನಾದ 'ಜೂಜಜಾನಿ' ಯು ತನ್ನ ಪುಸ್ತಕ 'ಮಿನ್ಹಾಜ ಅಲ್-ಸೀರಾಜ್'ಯಲ್ಲಿ ಸುಬಕ್ತಗೀನ್‌ನ ಪ್ರಾಥಮಿಕ ಪರಿಸ್ಥಿತಿಯ ಬಗ್ಗೆ ಈ ರೀತಿಯಾಗಿ ಬರೆದಿದ್ದಾನೆ. - ನಸೀರ್-ಹಾಜಿ ಎಂಬ ಒಬ್ಬ ವ್ಯಾಪಾರಿಯು, ಸಬಸ್ತಗೀನ್‌ನನ್ನು ತುರ್ಕಿಸ್ಥಾನದಿಂದ ಬುಖಾರಾಕ್ಕೆ ತಂದು, ಅಲಪ್ತಗೀನ್‌ನನಿಗೆ ಮಾರಿದನು. ಅಲ್-ಪಸ್ತಗೀನ್‌ನು ಆತನ ಮುಖಚರ್ಯೆಯ ಮೇಲೆ ವಿದ್ವತ್ತಿನ ಚಿಹ್ನೆಗಳನ್ನು ಕಂಡು ತನ್ನ ವಿಶಿಷ್ಟ ಜನರ ವಲಯದಲ್ಲಿ ಸೇರಿಸಿಕೊಂಡನು. ಇತಿಹಾಸಕಾರ ಜೂಜ್-ಜಾನಿ ಸುಬುಕ್ತಗೀನ್‌ನ ಬಗೆಗೆ ಬರೆದುದುದೇನೆಂದರೆ ಈತನು ಇರಾನಿನ ಬಾದಶಹಾನಾದ 'ಎಜುಜರು' ವಂಶಕ್ಕೆ ಸಂಬಂಧವಿದ್ದು, ಅದರ ವಿವರವಾದ ನಿರೂಪಣೆ ಕೆಳಗೆ ಕೊಡಲಾಗಿದೆ.

ಹಜ್ರತ್ ಉಸ್ಮಾನ ಇವರ ಖೀಲಾಫತ್ ಅವಧಿಯಲ್ಲಿ ಎಜುಜರುನನ್ನು ಮರೂ ದೇಶದ ಐಸಾ ಸ್ಥಾನದಲ್ಲಿ ಕೊಲ್ಲಲಾಯಿತು. ಆತನ ಅಧೀನದಲ್ಲಿರುವವರು ಹಾಗೂ ಆತನ ಸಂತಾನ ಅಲ್ಲಿಂದ ಹೊರಟು ತುರ್ಕಿಸ್ಥಾನದ ಕಡೆ ಓಡಿಹೋದರು. ತುರ್ಕಿಸ್ಥಾನ ತಲುಪಿದ ಮೇಲೆ ಅವರು ತುರ್ಕಿ ಜನಾಂಗದೊಂದಿಗೆ ಸೇರಿಕೊಂಡು ಸ್ನೇಹ ಬೆಳಸಿ, ಆ ಜನಾಂಗದೊಂದಿಗೆ ಮದುವೆ ಇತ್ಯಾದಿಗಳ ಸಂಸ್ಕಾರ ಪದ್ಧತಿಗಳನ್ನು ಆರಂಭಿಸಿದರು. ಇದರ ಪರಿಣಾಮವಾಗಿ ಎರಡು ಮೂರು ಪೀಳಿಗೆಗಳ ನಂತರ 'ಅರ್ಧ ತುರ್ಕ' ಹಾಗೂ 'ಅಸಲ ತುರ್ಕ' ಎಂದು ಖ್ಯಾತಿಪಡೆದರು. ಸಬಸ್ತಗೀನ್‌ನ ವಂಶಾವಳಿಯು ಈ ರೀತಿ ಇದೆ. ಸಬಸ್ತಗೀನ್-ಬಿನ್-ಜೂಖಾನ್-ಬಿನ್-ಖರಾ-ಅಲ್-ಹುಕುಮ್-ಬಿನ್-ಖಜಲ್-ಇರ್‌ಸಾನ್-ಬಿನ್-ಖರಾನಾಮಾನ್-ಬಿನ್-ಫೇರೋಜ್-ಬಿನ್-ಎಜುಜರು.

ಸುಬಕ್ತಗೀನ್‌ನ ಆಡಳಿತಾವಧಿ

ಸುಬಕ್ತಗೀನ್‌ನು ರಾಜ್ಯಾಡಳಿತವನ್ನು ಕೈಗೆತ್ತಿಕೊಂಡಾಗ 'ಬಸ್ತ'ನ *(ಖರಾಸ್ಥಾನಿನ ಪೂರ್ವ ಭಾಗದ ಒಂದು ಪಟ್ಟಣ)ಕೋಟೆಯುನ್ನು ತಫಾ ಎಂಬ ವ್ಯಕ್ತಿ ವಶಪಡಿಸಿಕೊಂಡನು. ಆದರೆ ಈ ವ್ಯಕ್ತಿ ಫಾತೋರ್ ಎಂಬ ಶತ್ರುವಿನ ಮೇಲೆ ಆಕ್ರಮಣ ಮಾಡಿ ಈ ಕೋಟೆಯಿಂದ ಓಡಿಸಿದ. ತಫಾನು ಅಮೀರ ಸಬಸ್ತಗೀನ್‌ನಿಗೆ,

ಒಂದು ವೇಳೆ ಶತ್ರುಗಳನ್ನೆದುರಿಸಿವಾಗ ನನ್ನ ಸಹಾಯವನ್ನು ಅಪೇಕ್ಷಿಸಿದಲ್ಲಿ ನಾನು ಕೋಟೆಯ ಮೇಲೆ ಸ್ವಾಧೀನ ಪಡೆಯುವುದರಲ್ಲಿ ಗೆಲುವನ್ನು ಸಾಧಿಸಿದರೆ ಜೀವನಪರ್ಯಂತ ಸೇವಕರಂತೆ ಹಾಗೂ ಕಪ್ಪ ಕೊಡುವವರಂತೆ ಅಧೀನವಲಯದಿಂದ ಹೊರಗೆ ಕಾಲಿಡಲಾರೆ, ಎಂದು ಪತ್ರದ ಮೂಲಕ ವಿನಂತಿಸಿಕೊಂಡನು. ಅಮೀರನು ಮನವಿಯನ್ನು ಸ್ವೀಕರಿಸಿದನು. 'ಪಾತೊರ'ನ ಮೇಲೆ ಆಕ್ರಮಣ ಮಾಡಿ ಆತನನ್ನು ಸೋಲಿಸಿ ತಫಾನಿಗೆ ಮರಳಿ ರಾಜ್ಯಾಡಳಿತವನ್ನು ಕೊಡಿಸಿದನು. ಆದರೆ, ತಫಾನು ಉಪಕಾರ ಸ್ಮರಣೆ ಮಾಡದೆ, ತಾನು ಕೊಟ್ಟ ವಚನಗಳನ್ನು ಪರಿಪಾಲಿಸುವುದರಲ್ಲಿ ಹಿಂದೆ-ಮುಂದೆ ನೋಡುವುದನ್ನು ಕಂಡನು. ಸಬಕ್ತಗೀನ್‌ನು ತಫಾನ ಪ್ರತಿಯೊಂದು ಮಾತು ಮತ್ತು ಕೃತಿಯಲ್ಲಿ ಮೋಸವನ್ನು ಕಾಣುತ್ತಿದ್ದನು. ಒಂದು ದಿನ ಇಬ್ಬರು ಪರಸ್ಪರ ಭೇಟಿಯಾಗಿ ಬೇಟೆಯಾಡುವ ಸ್ಥಳದಲ್ಲಿ ತಫಾನೊಂದಿಗೆ ಇಂತಹ ವಿಷಯದ ಬಗ್ಗೆ ಗಮನ ಸೆಳೆದು ತಫಾನು ವಚನಕೊಟ್ಟಂತೆ ನಡೆಯುತ್ತಿಲ್ಲವೆಂದು ಹೇಳಿದನು, ತಫಾನು ಇದಕ್ಕೆ ಉತ್ತರವಾಗಿ ಅಗೌರವದ ನುಡಿಗಳನ್ನು ನುಡಿದು ಖಡ್ಗವನ್ನು ತೆಗೆದು ಸುಬಕ್ತಗೀನ್‌ನ ಕೈಗೆ ಗಾಯಗೊಳಿಸಿದನು. ಅಮೀರನು ತನ್ನ ಗಾಯಗೊಂಡ ಕೈಯಿಂದಲೇ ಆತನ ಮೇಲೆ ಖಡ್ಗದಿಂದ ಹೊಡೆದನು ಮತ್ತು ಮರು ಹೊಡೆತದಲ್ಲಿ ಈ ದುಷ್ಟ ಹಾಗೂ ಮೋಸಗಾರನನ್ನು ಅಂತಿಮವಾಗಿ ಮುಗಿಸಬೇಕೆಂದಿದ್ದನು. ಸುಬಕ್ತಗೀನ್ ಹಾಗೂ ತಫಾರ ಸೈನ್ಯಗಳು ಒಬ್ಬರಮೇಲೊಬ್ಬರು ಆಕ್ರಮಿಸಿದಾಗ ತಫಾನು ಈ ಗಲಾಟೆಯಲ್ಲಿ ತನ್ನ ಜೀವವನ್ನುಳಿಸಿಕೊಳ್ಳಲು ಸಮಯ ಸಾಧಿಸಿ ಕರ್ಮಾಚ ಕಡೆಗೆ ಓಡಿಹೋದನು. ಈ ವಿದ್ರೋಹಿಯು ಓಡಿಹೋದನಂತರ ಕೋಟೆಯು ಅಮೀರ ಸುಬಕ್ತಗೀನ್‌ನ ಕೈಸೇರಿತು. ಈ ಕೋಟೆಯು ಹಸ್ತಗತವಾಗುವದರಿಂದ ಸುಬಕ್ತಗೀನ್‌ನಿಗೆ ಬಹಳಷ್ಟು ಲಾಭವಾಯಿತು. ಅದರಲ್ಲಿ ಒಂದು ಲಾಭವೆಂದರೆ ಈತನು ಅಬೂ-ಅಲ್-ಫತಾಫಾನೊಂದಿಗೆ ಭೇಟಿಯಾಯಿತು. ಅಬೂ-ಅಲ್-ಫತಾಫಾನು ವೈವಿಧ್ಯಮಯ ಕಲೆಗಾರನಾಗಿದ್ದನು. ವಿಶೇಷವಾಗಿ ಗದ್ಯ ಲೇಖನದ ಕಲೆಯಲ್ಲಿ, ತನಗೆ ತಾನೇ ಉಪಮೆಯಾಗಿದ್ದನು. ಅಮೀರ ಸುಬಕ್ತಗೀನ್‌ನು ತಫಾನ ವಿನಂತಿಯ ಮೇರೆಗೆ ನಂತರ ಬಸ್ತನಲ್ಲಿ ತಲೆಮರೆಸಿಕೊಂಡಿದ್ದನು. ಅಮೀರ ಸುಬಕ್ತಗೀನ್‌ನಿಗೆ ಈತನ ವಿದ್ವತ್‌ಪೂರ್ಣ ವ್ಯಕ್ತಿತ್ವದ ಅರಿವಾದೊಡನೆ, ಈ ಮೇಧಾವಿ ಹಾಗೂ ಪ್ರವೀಣ ಕಲೆಗಾರನಿಗೆ ಆತನ ಯೋಗ್ಯತೆಗೆ ಅನುಗುಣವಾಗಿ ಸ್ಥಾನ-ಮಾನಗಳನ್ನು ನೀಡಿ ಅನುಗ್ರಹಿಸಿದನಲ್ಲದೆ ವಿಧವಿಧವಾದ ಕಾಣಿಕೆ ಹಾಗೂ ಬಹುಮಾನಗಳೊಂದಿಗೆ ಸಂತುಷ್ಟನನ್ನಾಗಿ ಮಾಡಿದನು. ಈತನನ್ನು ಬರಹಗಾರನಾಗಿ ನಿಯಮಿಸಿದನು. ಅಬೂ-ಅಲ್-ನೂತ್‌ಫಾ ಸುಲ್ತಾನ್ ಮಹಮೂದನ ಆರಂಭಿಕ ಕಾಲದವರೆಗೆ ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದನು. ನಂತರ ಸುಲ್ತಾನನೊಂದಿಗೆ ನಡೆದ ಒಂದು ನುಡಿಯ ಬೇಸರದಿಂದ ಈ ಹುದ್ದೆ ತ್ಯಜಿಸಿ ತುರ್ಕಿಸ್ಥಾನಕ್ಕೆ ಹೋದನು.

ಖಸ್ತಾರ ಮೇಲೆ ಆಕ್ರಮಣ

ಅಮೀರ ಸಬಸ್ತಗೀನ್‌ನಿಗೆ ಬಸ್ತಿನ ಕಾರ್ಯಾಚರಣೆಯಿಂದ ಬಿಡುವು ದೊರೆತಾಗ ಆತನು ಖಸ್ತಾರ *(ಬಲೂಚಿಸ್ಥಾನದ ಒಂದು ಸ್ಥಳ, ಈಗ 'ಖಝೂವರ' ಹೆಸರಿನಿಂದ ಖ್ಯಾತಿ ಪಡೆದಿದೆ.) ದೆಡೆಗೆ ತೆರಳಿದನು. ಅಲ್ಲಿ ತಲುಪಿದನಂತರ ಬುಖಾರಾದ ರಾಜನನ್ನು ಬಂದಿಯನ್ನಾಗಿಸಿದನು ಮತ್ತು ಆತನನ್ನು ತನ್ನ ಅಧೀನನ್ನಾಗಿ ಮಾಡಿಕೊಂಡು ಆತನಿಗೆ ಖಸ್ತಾರ ಪ್ರಾಂತವನ್ನು ಜಹಗೀರು ಕೊಟ್ಟನು. ಬುಖಾರಾದ ಗೆಲುವಿನ ನಂತರ ಸಬಸ್ತಗೀನ್‌ನು ಹಿಂದುಸ್ತಾನದ ಜನರೊಂದಿಗೆ ಜೇಹಾದ್ ಮಾಡಲು ಧೃಢ ನಿಶ್ಚಯ ಮಾಡಿ ಹಿಜರಿ ಶಕೆ ೩೭೭ರ ಕೊನೆಯಲ್ಲಿ ಹಿಂದುಸ್ತಾನಕ್ಕೆ ಹೋಗಿ ಕರಚಂದ ಕೋಟೆಯನ್ನು ಗೆದ್ದನು. ಕೆಲವು ಸ್ಥಳಗಳಲ್ಲಿ ಮಸೀದಿಗಳನ್ನು ನಿರ್ಮಿಸಿದನು. ಅಲ್ಲದೆ ಪರಿಶ್ರಮವಿಲ್ಲದೆ ದೊರೆತ ನಗನಾಣ್ಯಗಳೊಂದಿಗೆ ಸಕಲ ಸಂಗಡಿಗರೊಂದಿಗೆ ಮರಳಿ ಘಜನಿಗೆ ಬಂದನು.

ಜೈಪಾಲನೊಂದಿಗೆ ಯುದ್ಧ

ಇಸ್ತಬಾಲ ರಾಜನ ಮಗ, ಜೈಪಾಲನು ಬ್ರಾಹ್ಮಣ ಜನಾಂಗದವನಾಗಿದ್ದನು, ಜೈಪಾಲನ ರಾಜ್ಯವು ಸರ್-ಹಿಂದ ರಾಜ್ಯದಿಂದ ಮುಲ್ತಾನದವರೆಗೆ ಮತ್ತು ಕಾಶ್ಮೀರದಿಂದ ಮುಲ್ತಾನದವರೆಗೆ ವಿಸ್ತಾರವಾಗಿತ್ತು. ಮುಸಲ್ಮಾನರ ಬೆಳೆಯುತ್ತಿರುವ ಶಕ್ತಿಯನ್ನು ನಿಗ್ರಹಿಸಲು ಭಟಿಂಡಾ ಕೋಟೆಯಲ್ಲಿ ವಾಸಿಸುತ್ತಿದ್ದನು. ಈ ರಾಜನಿಗೆ ಮುಸಲ್ಮಾನರ ಆಕ್ರಮಣದಿಂದ ರಾಜ್ಯವನ್ನು ಸ್ವಾಧೀನ ಪಡೆಸಿಕೊಳ್ಳುವ ಉದ್ದೇಶವು ವ್ಯಕ್ತವಾದಾಗ ಈತನು ದಿಗ್ಭ್ರಾಂತನಾಗಿ ವಿದೇಶಿ ಆಕ್ರಮಣಕಾರರ ದಾಳಿಯನ್ನು ತಡೆಗಟ್ಟಲು ನಿರ್ಧರಿಸಿ, ಪೈಕರ ಬೆಟ್ಟದ ಆನೆಗಳು ಮತ್ತು ಶೂರ ಸಿಪಾಯಿಗಳ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಮುಸಲ್ಮಾನರ ರಾಜ್ಯದ ಕಡೆಗೆ ನಡೆದನು. ಇದಕ್ಕೆ ಪ್ರತಿಯಾಗಿ ಅಮೀರ ಸುಬಕ್ತಗೀನ್‌ನು ತನ್ನ ಸೈನ್ಯ ಸಿದ್ಧಪಡಿಸಿ ಅವರನ್ನು ಎದುರಿಸಲು ಗಝ್ನೈಯಿನ್ ಕಡೆ ಹೊರಟನು. ಮುಲ್ತಾನಿನ ಗಡಿಯಲ್ಲಿ ಇಬ್ಬರೂ ರಾಜರು ಎದರುಬದುರಾದರು ಮತ್ತು ಯುದ್ಧವು ನಿರಂತರವಾಗಿ ಬಹಳ ದಿನಗಳವರೆಗೆ ನಡೆಯಿತು. ಈ ಯುದ್ಧದಲ್ಲಿ ಸುಲ್ತಾನ್ ಮುಹಮೂದ್‌ನು ವಯಸ್ಸಿನಿಂದ ಚಿಕ್ಕವನಾದರೂ ಉಪಮೆಗೆ ಮೀರಿದ ಧೈರ್ಯ ಹಾಗೂ ಶೌರ್ಯವನ್ನು ಮೆರೆದನು. ಈ ಯುದ್ಧವು ಕೆಲವು ದಿನಗಳವರೆಗೆ ನಡೆದು ಅದರಲ್ಲಿ ಸೋಲು-ಗೆಲವುಗಳ ವ್ಯತ್ಯಾಸ ತಿಳಿಯುವುದು ಕಷ್ಟವಾಯಿತು.

ಒಂದು ದಿನ, ಸೈನ್ಯದ ಒಂದು ತಂಡವು ಸುಲ್ತಾನ ಮಹಮದನನ್ನು ಸಂಧಿಸಿ, ರಾಜಾ ಜೈಪಾಲನ ಸೈನ್ಯವಿರುವ ಸ್ಥಳದ ಹತ್ತಿರದಲ್ಲಿಯೇ ಒಂದು ನೀರಿನ ಬುಗ್ಗೆಯಿದ್ದು, ಅದರಲ್ಲಿ ಸ್ವಲ್ಪ ಹೊಲಸನ್ನು ಹಾಕಿದರೆ, ದೊಡ್ಡ ದೊಡ್ಡ ಅಲೆಗಳು ಎದ್ದು, ಮೋಡಗಳು ಕವಿದು, ಗುಡುಗು, ಮಿಂಚುಗಳಿಂದ ಕೂಡಿದ ಚಂಡಮಾರುತ ಬೀಸುತ್ತದೆ ಎಂದು

ಹೇಳಿದರು. ಇದನ್ನು ಕೇಳಿದ ಸುಲ್ತಾನ್ ಮಹಮದನು ಆ ನೀರಿನ ಬುಗ್ಗೆಯಲ್ಲಿ ಹೊಲಸನ್ನು ಹಾಕಲು ಆದೇಶಿಸಿದನು. ಸುಲ್ತಾನನ ಆಜ್ಞೆಯನ್ನು ಕೂಡಲೆ ಪರಿಪಾಲಿಸಲಾಯಿತು. ನೀರಿನ ಬುಗ್ಗೆಯಲ್ಲಿ ಹೊಲಸನ್ನು ಹಾಕಿದ ಕೂಡಲೆ ಆಕಾಶದಲ್ಲಿ ಮೊಡಗಳು ಕವಿದು, ಗುಡುಗು ಮಿಂಚು ಆರಂಭವಾಗಿ ಯುದ್ಧ ಭೂಮಿಯಲ್ಲಿ ವಿಚಿತ್ರವಾದ ಪರಿಸ್ಥಿತಿ ನಿರ್ಮಾಣವಾಯಿತು. ಸೈನ್ಯದ ಕುದುರೆಗಳು ಹಾಗೂ ಇತರ ಪಶುಗಳು ಗಾಳಿಯ ಅತಿಯಾದ ಚಳಿಯಿಂದ ಮೃತಪಟ್ಟವು. ಸೈನಿಕರ ಶರೀರಗಳು ಚಳಿಯಿಂದ ಮರಗಟ್ಟಿ ಅಂಗಾಂಗಗಳು ಚಲಿಸದಂತಾದವು. ಈ ಪರಿಸ್ಥಿತಿಯಲ್ಲಿ ಜೈಪಾಲನ ಸೈನ್ಯದಲ್ಲಿ ಶೋಕದ ವಾತಾವರಣ ಆವರಿಸಿತು.

ರಾಜ ಜೈಪಾಲನು ಈ ನೈಸರ್ಗಿಕ ವಿಪತ್ತಿನಿಂದ ಉಳಿದುಕೊಳ್ಳವ ದಾರಿ ಕಾಣದಂತಾಗಿ, ತನ್ನ ವಿಶ್ವಾಸಾರ್ಹ ಮತ್ತು ಬುದ್ಧಿವಂತ ಜನರನ್ನು ದೂತರಾಗಿ ಅಮೀರ ಸಬಸ್ತಗೀನ್‌ನ ಹತ್ತಿರ ಕಳುಹಿದನು. ಅವರ ಮೂಲಕ ಸಂಧಾನ ಕೋರಿದನು. ಅಮೀರ ಸಬಸ್ತಗೀನ್ ಈಗ ಯುದ್ಧ ನಿಲ್ಲಿಸಿದಲ್ಲಿ ಜೈಪಾಲನು ತನ್ನ ರಾಜ್ಯದಲ್ಲಿ ಸಬಸ್ತಗೀನ್ ನ ಆದೇಶವನ್ನು ಜಾರಿಯಲ್ಲಿ ತರುವನಲ್ಲದೆ ಪೈಕರ ಕಾಡಾನೆಗಳನ್ನು ಹಾಗೂ ಕೆಲವು ಬೆಲೆಬಾಳುವ ಕಾಣಿಕೆಗಳನ್ನು ನೀಡಿ ಪ್ರತಿ ವರ್ಷ ಕಪ್ಪವನ್ನು ತಪ್ಪದೇ ಕೊಡುವನು ಎಂಬ ಒಪ್ಪಂದದ ಷರತ್ತುಗಳನ್ನು ವಿಧಿಸಲಾಗಿತ್ತು. ಅಮೀರ ಸಬಸ್ತಗೀನ್‌ನು ಮಾನವೀಯ ದೃಷ್ಟಿ ಹಾಗೂ ಕರುಣೆಯಿಂದ ಒಪ್ಪಂದದ ಷರತ್ತುಗಳೊಂದಿಗೆ ಕೋರಿಕೆಯನ್ನು ಮನ್ನಿಸ ಬಯಸಿದನು. ಆದರೆ ಸುಲ್ತಾನ ಮಹಮದನು ವಿರೋಧಿಸಿದನು. ಇದರಿಂದಾಗಿ ಒಪ್ಪಂದ ಮಾಡಿಕೊಳ್ಳವುದರಲ್ಲಿ ಸ್ವಲ್ಪ ತಡೆಯಾಯಿತು.

ಅದಕ್ಕಾಗಿ ಜೈಪಾಲನು ಒಬ್ಬ ಮೇಧಾವಿ ಪ್ರತಿನಿಧಿಯನ್ನು ಸುಲ್ತಾನ ಮಹಮದನ ಸನ್ನಿಧಿಗೆ ಕಳುಹಿಸಿದನು. ಈ ಪ್ರತಿನಿಧಿಯು ರಾಜನಿಗೆ ಸಂದೇಶವನ್ನು ನೀಡಿದುದೇನೆಂದರೆ, 'ನೀವು ಹಿಂದುಸ್ತಾನದ ಜನರ, ಅದರಲ್ಲೂ ವಿಶೇಷವಾಗಿ ರಾಜಪೂತರ ಅಶಿಕ್ಷೆ ಮತ್ತು ಅಸೂಯೆಯ ಸತ್ಯಾಂಶದ ಬಗ್ಗೆ ಸಂಪೂರ್ಣ ತಿಳುವಳಿಕೆ ಪಡೆದಿಲ್ಲ. ಈ ಜನರ ಅಶಿಕ್ಷತೆ ಹಾಗೂ ಅಲಕ್ಷ್ಯವು ಎಲ್ಲಿಯವರೆಗಿದೆ ಎಂದರೆ, ಇವರ ಮೇಲೆ ಯಾವುದಾದರೂ ವಿಪತ್ತು ಬಂದೆರಗಿದಾಗ, ಪಾರಾಗಲು ಬೇರೆ ಯಾವ ಮಾರ್ಗ ದೊರೆಯದಾದಾಗ ಇವರು ಅನಿವಾರ್ಯವಾಗಿ ತಮ್ಮ ಸಮಸ್ತ ಪದಾರ್ಥಗಳನ್ನು ಮತ್ತು ಬೆಲೆಬಾಳುವ ಸಾಮಾನುಗಳನ್ನು ಉದಾಸೀನದಿಂದ ಅಗ್ನಿಗೆ ಸಮರ್ಪಿಸುತ್ತಾರೆ. ಈ ಕೃತಿಯಿಂದ ಪರಲೋಕದಲ್ಲಿ ತಮಗೆ ಸದ್ಗತಿ ದೊರೆಯುವುದೆಂದು ಭಾವಿಸುತ್ತಾರೆ. ಆದರೆ ಇದಕ್ಕೂ ಮೀರಿದ ಆಪತ್ತಿನಿಂದ ಪಾರಾಗಲು ಯಾವ ಮಾರ್ಗವೂ ಕಂಡುಬರದಿದ್ದಲ್ಲಿ, ಪುರಾತನ ರೂಢಿಯಂತೆ ತಮ್ಮ ಹೆಣ್ಣು ಮಕ್ಕಳು ಮತ್ತು ಇತರರನ್ನು ಸಹ ಅಗ್ನಿಗೆ ಅರ್ಪಿಸುತ್ತಾರೆ, ಇವರ ಹತ್ತಿರ ಪ್ರಾಪಂಚಿಕ ಪದಾರ್ಥ ಯಾವುದೂ ಉಳಿದಿಲ್ಲವೆಂದು ಕಂಡನಂತರ ತಮ್ಮನ್ನೂ ಸಹ ನಿರ್ನಾಮ ಮಾಡಿಕೊಂಡು, ಕೇವಲ

ಭೂಮಿಯನ್ನು ಬಿಟ್ಟು ತಮ್ಮ ಹೆಸರು ಉಳಿಯದಂತೆ ಮಾಡುತ್ತಾರೆ. ಈಗ ಇವರ ವಿಪತ್ತು ಆ ಮಟ್ಟವನ್ನು ತಲುಪಿದೆ. ಸಂಪ್ರದಾಯದ ಪ್ರಕಾರ ಕ್ರಮ ಕೈಗೊಳ್ಳುವಂತಾಗಿದೆ, ಇವರ ಸರ್ವನಾಶವನ್ನು ನೀವು ಬಯಸುವುದಾದರೆ ಹಾಗೆಯೇ ಆಗಲಿ. ಇಲ್ಲವಾದಲ್ಲಿ ನೀವು ಒಪ್ಪಂದ ಮಾಡಿಕೊಂಡು ನಮ್ಮೆಲ್ಲರನ್ನೂ ಉಪಕೃತರನ್ನಾಗಿ ಮಾಡಿ.' ಸುಲ್ತಾನ ಮಹಮದನು ಈ ಮಾತುಗಳನ್ನು ಕೇಳಿ, ಹಿಂದು ಜನರ ಸತ್ಯ ಹೇಳಿಕೆಯನ್ನು ಅನುಮಾನಿಸದೆ, ಷರತ್ತುಬದ್ಧವಾದ ಒಪ್ಪಂದ ಮಾಡಿಕೊಂಡನು. ರಾಜಾ ಜೈಪಾಲನು ೧ ಲಕ್ಷ ದರಮ, ೫೦ ಆನೆಗಳನ್ನು ಕಾಣಿಕೆಯಾಗಿ ಅರ್ಪಿಸಿದನು. ಜೈಪಾಲನು ತನ್ನ ರಾಜ್ಯದ ಒಬ್ಬ ಗೌರವಾನ್ವಿತ ಸದಸ್ಯನಾದ 'ದೌಲತ'ನನ್ನು ಕಾಣಿಕೆಗಳನ್ನು ಕೊಡುವವರೆಗೆ ಸಬಸ್ತಗೀನ್‌ನ ಹತ್ತಿರ ಒತ್ತೆಯಾಳಾಗಿ ಇರಿಸಿದನು ಹಾಗೂ ಮುಸಲ್ಮಾನರ ಒಂದು ಗುಂಪನ್ನು ತನ್ನ ಜೊತೆಯಲ್ಲಿ ಲಾಹೋರಿಗೆ ಕರೆತಂದನು ಮತ್ತು ಷರತ್ತಿನ ಪ್ರಕಾರ ದರಮ ಮತ್ತು ಆನೆಗಳನ್ನು ಅವರಿಗೆ ಒಪ್ಪಿಸಿದನು. ಲಾಹೋರಿಗೆ ಬಂದನಂತರ ಜೈಪಾಲನು ಕೊಟ್ಟ ಮಾತಿನ ವಿರುದ್ಧ ಮುಸಲ್ಮಾನರನ್ನು ಬಂದಿಯಾಗಿಸಿ, ಸಬಸ್ತಗೀನ್‌ನು ನನ್ನ ಸರದಾರನಾದ ದೌಲತನನ್ನು ಮರಳಿ ಕಳುಹಿಸುವವರೆಗೆ ಮುಸಲ್ಮಾನರನ್ನು ಬಂದಿಗಳನ್ನಾಗಿಯೆ ಇಡುವೆನು, ಎಂದು ಹೇಳಿ ಕಳುಹಿಸಿದನು.

ಆ ಕಾಲದಲ್ಲಿ ಹಿಂದೂ ರಾಜರು ತಮ್ಮ ಆಸ್ಥಾನದಲ್ಲಿ, ಪಂಡಿತರು ಮತ್ತು ಬ್ರಾಹ್ಮಣರನ್ನು ತಮ್ಮ ಬಲಭಾಗದಲ್ಲಿ, ಕ್ಷತ್ರಿಯರನ್ನು ಮತ್ತು ಸೈನ್ಯಾಧಿಕಾರಿಗಳನ್ನು ತಮ್ಮ ಎಡಭಾಗದಲ್ಲಿ ಕೂಡಿಸುವ ಸಂಪ್ರದಾಯವಿತ್ತು, ಒಂದು ಮಹತ್ವದ ವಿಷಯವನ್ನು ಚರ್ಚಿಸಬೇಕಾದ ಸಂದರ್ಭದಲ್ಲಿ ಆಸ್ಥಾನದ ಸದಸ್ಯರು ರಾಜರಿಗೆ ತಮ್ಮ ಸಲಹೆಗಳನ್ನು ನೀಡುತ್ತಿದ್ದರೆಂದು ಇತಿಹಾಸಕಾರರು ಬರೆಯುತ್ತಾರೆ. ಈ ವಿಷಯದ ಬಗ್ಗೆ ವಿಚಾರ ವಿನಿಮಯ ಮಾಡುವಾಗ ಆಸ್ಥಾನದ ಸದಸ್ಯರು ಅರಸನ ಸಲಹೆ ತಪ್ಪೆಂದು ಮತ್ತು ಈ ಕೃತಿಯು ಬಹಳ ಅಸಮಂಜಸವಾಗಿದ್ದುದೆಂದು, ಎಡ-ಬಲದ ಕಡೆ ಕುಳಿತಿರುವವರೆಲ್ಲಾ ಒಕ್ಕೊರಲಿನಿಂದ ಹೇಳಿದರು, ಅವರೆಲ್ಲರೂ ಇಂತಹ ಶಕ್ತಿಯುತ ವೈರಿಯೊಂದಿಗೆ ಷರತ್ತಿಗೆ ವಿರುದ್ಧ ವ್ಯವಹರಿಸುವುದು ತೀರಾ ತಪ್ಪೆಂದು ಮತ್ತು ಇದರ ಪರಿಣಾಮವಾಗಿ ರಾಜ್ಯದ ಮೇಲೆ ವಿಪತ್ತು ಸಂಭವಿಸಿ ಜಗತ್ತಿನಲ್ಲಿ ನಮ್ಮ ರಾಜ್ಯ ಮತ್ತು ಜನರು ನಿರ್ನಾಮವಾಗಬಹುದು, ಅದಕ್ಕಾಗಿ ನಮ್ಮ ಬೇಡಿಕೆ ಏನೆಂದರೆ ನಾವು ತುರ್ಕ ಅಂದರೆ ಅಮೀರ ಸಬಸ್ತಗೀನ್‌ನ ಬಗ್ಗೆ ಸಾಮಾನ್ಯ ಜನರ ಹೃದಯದಲ್ಲಿ ಭಯವುಂಟಾಗಿರುವುದರಿಂದ, ಕೊಟ್ಟ ಮಾತು ತಪ್ಪಿ ಯುದ್ಧ ಮಾಡಕೂಡದು ಮತ್ತು ಜನಸಾಮಾನ್ಯರ ಶಾಂತಿಯನ್ನು ಕಾಪಾಡುವದಕ್ಕಾಗಿ ಯಾವ ವಿಧದ ಅನುಮಾನ ಹಾಗೂ ಹಟಮಾಡದೆ ಸಬಸ್ತಗೀನ್‌ನಿಗೆ ಸಲ್ಲಿಸಬೇಕಾದ ಹಣವನ್ನು ಸಲ್ಲಿಸಬೇಕು ಎಂದು ಕೇಳಿಕೊಂಡರು. ಜೈಪಾಲನ ದುರ್ದಿನಗಳು ಸಮೀಪಿಸಿದ ಕಾರಣ ಆಸ್ಥಾನದ ಸದಸ್ಯರ ಸಲಹೆ ಹಾಗೂ ಪ್ರಾರ್ಥನೆ ಸ್ವೀಕರಿಸಲು ಯೋಗ್ಯವಲ್ಲವೆಂದು ತಿಳಿದು ತನ್ನ ಹಟ ಸಾಧಿಸಿದನು.

ಜೈಪಾಲನ ಪರಾಭವ

ಅಮೀರ ಸಬಸ್ತಗೀನ್‌ನಿಗೆ ಈ ಸಮಾಚಾರ ತಿಳಿದಾಗ ಜೈಪಾಲನು ಮಾತು ತಪ್ಪಿದುದಕ್ಕೆ ಅತೀವ ಕೋಪಗೊಂಡು ಒಂದು ದೊಡ್ಡ ಸೈನ್ಯ ತೆಗೆದುಕೊಂಡು ಜೈಪಾಲನ ಕೃತ್ಯವನ್ನು ದಂಡಿಸಲು ಹಿಂದುಸ್ತಾನದ ಕಡೆ ಹೊರಟನು. ಜೈಪಾಲನು ಸಹ ಹಿಂದುಸ್ತಾನದ ಅನ್ಯ ಅರಸರ ಸಹಾಯದಿಂದ ಒಂದು ವಿಶಾಲವಾದ ಸೈನ್ಯವನ್ನು ಒಟ್ಟುಗೂಡಿಸಿ ಸಬಸ್ತಗೀನ್‌ನನ್ನು ವಿರೋಧವಾಗಿ ಎದುರಿಸಲು ಹೊರಟನು. ಇತಿಹಾಸಕಾರರ ಹೇಳಿಕೆ ಏನೆಂದರೆ, ತಮ್ಮ ತಮ್ಮ ರಾಜ್ಯಗಳು ವೈರಿಗಳಿಂದ ಸುರಕ್ಷಿತವಾಗಿ ಉಳಿಯುವವು ಎಂಬ ಸ್ವಾರ್ಥದಿಂದ, ಹಿಂದುಸ್ತಾನದ ಸಕಲ ರಾಜರು ಜೈಪಾಲನಿಗೆ ಸಹಾಯ ಮಾಡಲು ಸಿದ್ಧರಾದರು. ಅದರಲ್ಲೂ ವಿಶೇಷವಾಗಿ ದೆಹಲಿ, ಕಾಲೀಂಜರ, ಕನ್ನೋಜ್ ಮತ್ತು ಅಮೀರರ ರಾಜರು ತುಂಬು ಹೃದಯದಿಂದ ಹಾಗೂ ತಮ್ಮ ಸಮಸ್ತ ತನು–ಮನ–ಧನದಿಂದ ಜೈಪಾಲನ ಸಹಾಯ ಮಾಡಿದರು. ಈ ರೀತಿಯಾಗಿ ಜೈಪಾಲನು ಒಂದು ಲಕ್ಷ ಅಶ್ವಸವಾರರು ಹಾಗೂ ಎಣಿಸಲಾಗದಷ್ಟು ಸೈನ್ಯದ ಪಡೆಯನ್ನು ಜೊತೆಗೂಡಿಸಿಕೊಂಡು ಸಬಸ್ತಗೀನ್‌ನ ವಿರೋಧ ಮಾಡಲು ಸಿದ್ಧನಾದನು.

ಅಮೀರ ಸಬಸ್ತಗೀನ್‌ನು ಒಂದು ಬೆಟ್ಟದ ಮೇಲೆ ಹತ್ತಿ ಜೈಪಾಲನ ಸೈನ್ಯವನ್ನು ಮತ್ತು ಅದರ ಶಕ್ತಿಯ ಅಂದಾಜು ಮಾಡಲಾಗಿ ಜೈಪಾಲನ ಸೈನ್ಯವು ವಿಶಿಷ್ಟ ನದಿ (ಝುಖಾರ)ಯಂತೆ ಇದ್ದು ಅದರಲ್ಲಿ ಸೈನಿಕರನ್ನು ಶಕ್ತಿಯಿಂದ ಗೆಲ್ಲಲು ಸಾಧ್ಯವಿಲ್ಲವೆಂದು ಬಗೆದು ತನ್ನ ಸೈನಿಕರ ಸರದಾರರಿಗೆ, ಪ್ರತಿಯೊಬ್ಬರ ಹೃದಯದಲ್ಲಿ ಜೆಹಾದನ ಪುಣ್ಯದ ಫಲದ ಬಗ್ಗೆ ತಿಳಿವಳಿಕೆ ನೀಡಿದನು. ಸಬಸ್ತಗೀನ್‌ನು ಯುಕ್ತಿಯೊಂದಿಗೆ ವ್ಯವಹರಿಸಿ ಐದುನೂರು ಸವಾರರ ಗುಂಪುಗಳನ್ನು ಬೇರೆ ಬೇರೆ ಮಾಡಿ, ಒಬ್ಬರ ನಂತರ ಇನ್ನೊಬ್ಬರು ಯುದ್ಧಮಾಡಿದಲ್ಲಿ, ಮೊದಲನೆಯ ಗುಂಪು ಯುದ್ಧದಲ್ಲಿ ಆಯಾಸಗೊಂಡಲ್ಲಿ, ಎರಡನೆಯ ಗುಂಪು ಮುಂದಾಗಿ ರಣರಂಗದಲ್ಲಿ ಹೋಗುವ ಯೋಜನೆಯನ್ನು ಮಾಡಿದನು. ಅದರಂತೆ ಅನುಕರಣೆ ಮಾಡಿ ಮುಸಲ್ಮಾನರ ಸೈನ್ಯವು ಬಾದಶಾಹನ ಆದೇಶದಂತೆ ಯುದ್ಧವನ್ನು ಆರಂಭಿಸಿದರು. ಈ ಯುದ್ಧದಲ್ಲಿ ಅವರ ಯುಕ್ತಿಯ ಫಲವಾಗಿ ಅವರು ಎಷ್ಟರ ಮಟ್ಟಿಗೆ ಗೆಲವು ಸಾಧಿಸಿದರೆಂದರೆ ವೈರಿಗಳ ಸೈನ್ಯದಲ್ಲಿ ಕೋಲಾಹಲವುಂಟಾಯಿತು. ಮುಸಲ್ಮಾನರು ವೈರಿಗಳ ಸೈನ್ಯವು ಧೃತಿಗೆಟ್ಟುದನ್ನು ಕಂಡು ಎಲ್ಲರೂ ಸೇರಿ ಏಕಕಾಲಕ್ಕೆ ಆಕ್ರಮಣ ಮಾಡಿದರು ಮತ್ತು ಬಹಳಷ್ಟು ಹಿಂದುಗಳನ್ನು ನಿರ್ನಾಮ ಮಾಡಿದರು. ಇದರಿಂದಾಗಿ ಹಿಂದುಗಳ ಸೈನ್ಯವು ದಿಕ್ಕೆಟ್ಟು ಓಡಲಾರಂಭಿಸಿತು, ಅವರನ್ನು ಮುಸಲ್ಮಾನರು ನೈಲಾಬ ನದಿಯ ತೀರದವರೆಗೆ ಹಿಮ್ಮೆಟ್ಟಿದರು ಮತ್ತು ಅತ್ಯಧಿಕ ಪ್ರಮಾಣದಲ್ಲಿ ಕೊಲೆ, ಸುಲಿಗೆ ಮಾಡಿದರು. ಈ ಯುದ್ಧದಲ್ಲಿ ಪರಿಶ್ರಮವಿಲ್ಲದೆ ಕರಗತವಾದ ಹಣ ಮತ್ತು ಆಭರಣಗಳೊಂದಿಗೆ ಲುಗಮಾನ ಹಾಗೂ ಪೇಶಾವರ ಪ್ರಾಂತಗಳು ನೈಲಾಬ ನದಿಯವರೆಗೆ ಮುಸಲ್ಮಾನರ

ಕೈಸೇರಿದವು. ಗೆದ್ದ ಪ್ರಾಂತಗಳ ಮೇಲೆ ಮುಸಲ್ಮಾನರ ನಿಯಮಗಳು ಜಾರಿಯಲ್ಲಿ ಬಂದು ಅಮೀರ ನಾಸಿರುದ್ದೀನ್‌ನ ಹೆಸರು ಮತ್ತು ಮುಖಚಿತ್ರವುಳ್ಳ ನಾಣ್ಯಗಳನ್ನು ಜಾರಿಗೆ ತಂದನು.

ಈ ಗೆಲುವಿನ ನಂತರ ಅಮೀರ ನಾಸಿರುದ್ದೀನ್‌ನು ತನ್ನ ಒಬ್ಬ ಸರದಾರನಿಗೆ ಎರಡು ಸಾವಿರ ಅಶ್ವ ಸವಾರರನ್ನು ಕೊಟ್ಟು ಪೇಶಾವರವನ್ನು ಬಿಟ್ಟನು ಮತ್ತು ಈ ಪ್ರಾಂತದ ಸುತ್ತ-ಮುತ್ತಲಿನ ಅಫಗಾನಿ ಹಾಗೂ ಖಿಲ್ಜಿ ಅರಣ್ಯವಾಸಿಗಳನ್ನು ಅಧೀನರನ್ನಾಗಿ ಮಾಡಿಕೊಂಡು ಮರಳಿ ಗಝನಿಗೆ ಬಂದನು.

ಅಮೀರ ನೂಹನೊಂದಿಗೆ ಭೇಟಿ

ಇದೇ ಕಾಲದಲ್ಲಿ 'ಅಮೀರ ನೂಹ ಸಾಮನಿ'ಯು, 'ಸಬಸ್ತಗೀನ್'ನ ಹತ್ತಿರ 'ಅಬೂನಸರ್ ಫಾರ್‌ಸೀ'ಯನ್ನು, 'ಫಾಖ'ನ *(ಬುಖಾರಾದ ರಾಜನು) ಅಗೌರವಯುತ ಕಾರ್ಯಗಳನ್ನು ಹೇಳಿ ಆತನಿಂದ ಸಹಕಾರ ಪಡೆಯುವ ಉದ್ದೇಶದಿಂದ ಕಳುಹಿಸಿದನು. ಸಬಸ್ತಗೀನ್ ಆಲ ಸಾಮಾನಿನ ಕಥೆಯನ್ನು ಕೇಳಿ ತನ್ನ ಗೌರವಕ್ಕೆ ಧಕ್ಕೆ ಬರುವುದೆಂದು ಮನನೊಂದು ಅದೇ ಪರಿಸ್ಥಿತಿಯಲ್ಲಿ ಕೂಡಲೆ ಮಾರ್ವಾ ಅಲ್ ನೇಹರ್ ಕಡೆ ಹೊರಟು ಹೋದನು. ಅಮೀರ ನೂಹನು ಸರಖಸ್ ಸ್ಥಳದವರೆಗೆ ಸುಬಕ್ತಗೀನ್‌ನ ಸ್ವಾಗತಕ್ಕಾಗಿ ಬಂದನು. ಈ ಭೇಟಿಗಿಂತಲೂ ಮೊದಲು ಸುಬಕ್ತಗೀನ್‌ನಿಗೆ ಬರಹೇಳಿದ್ದನು, ಸುಬಕ್ತಗೀನ್‌ನಿಗೆ ವಯಸ್ಸಾದ ಕಾರಣ ಅಶಕ್ತನಾಗಿದ್ದು ತಾನು ಕುದುರೆಯಿಂದ ಇಳಿದು ಅಮೀರ ನೂಹನ ರಿಕಾಬಿಗೆ ಮುತ್ತು ನೀಡುವ ಸೇವೆ ಸಾಧ್ಯವಾಗದುದ್ದಕ್ಕೆ ಕ್ಷಮಿಸಬೇಕು ಅಮೀರ ನೂಹನು ಈ ಮಾತಿಗೆ ಒಪ್ಪಿಕೊಂಡಿದ್ದನು. ಇಬ್ಬರೂ ಎದುರಾದರು ಸುಬಕ್ತಗೀನ್ ಅಮೀರ್‌ನೂಹನ ಮುಖಚರ್ಯೆಯ ಮೇಲೆ ದೃಷ್ಟಿ ಹಾಯಿಸಿ, ಅಲ್ಲಿ ರಾಜಕೀಯ ತೇಜಸ್ಸನ್ನು ಕಂಡು ಅನಿವಾರ್ಯವಾಗಿ ಕುದುರೆಯಿಂದ ಕೂಡಲೆ ಇಳಿದು ಅಮೀರ ನೂಹನ ರಿಕಾಬಿಗೆ ಮುತ್ತು ಕೊಟ್ಟನು. ಅಮೀರ ನೂಹನು ಅತಿ ಸಂತೋಷದಿಂದ ಮತ್ತು ಗೌರವದಿಂದ ಸಬಸ್ತಗೀನ್‌ನನ್ನು ಅಪ್ಪಿಕೊಂಡನು. ಇವರಿಬ್ಬರ ಭೇಟಿಯನ್ನು ನೋಡುತ್ತಿರುವವರೆಲ್ಲರೂ ಬಹಳ ಸಂತೋಷಪಟ್ಟರು ಮತ್ತು ಇವರ ಮೇಲೆ ಸಂತೋಷದ ವಿಶೇಷ ಪ್ರಭಾವವು ಉಂಟಾಯಿತು. ಇಬ್ಬರಿಗೂ ಇದೊಂದು ಸಂತೋಷದ ಹಾಗೂ ಆಸಕ್ತಿಯುತ ಭೇಟಿಯಾಗಿದ್ದಿತು. ಸಂಕ್ಷಿಪ್ತದಲ್ಲಿ ಹೇಳುವುದಾದರೆ ಪರಸ್ಪರ ಗೌರವಾನ್ವಿತ ಔಪಚಾರಿಕ ಮಾತುಗಳು ಮುಗಿದನಂತರ,ಮುಖ್ಯವಾದ ವಿಷಯವಾದ ರಾಜ್ಯದ ಆಡಳಿತವನ್ನು ಕುರಿತು ಮಾತುಕತೆಯಾಯಿತು ಮತ್ತು ವೈರಿಗಳ ವಿರೋಧದ ಯೋಜನೆಗಳ ಬಗ್ಗೆ ಸಲಹೆ, ಸೂಚನೆಗಳು ನಡೆದವು. ಕೊನೆಯಲ್ಲಿ ಸಬಸ್ತಗೀನ್‌ನು ಮರಳಿ ಘಜನಿಗೆ ಹೋಗಿ ಒಂದು ದೊಡ್ಡ ಸೈನ್ಯವನ್ನು ಒಟ್ಟುಗೂಡಿಸಬೇಕು. ಇದಾದ ನಂತರ ಅಮೀರ ನೂಹನು ಸಬಸ್ತಗೀನ್ ಹಾಗೂ ಆತನ ಸಂತಾನಕ್ಕೆ ಹಾಗು ಸಂಬಂಧಿತರಿಗೆ ಬಗೆ ಬಗೆಯ ಬೆಲೆಬಾಳುವ ವಸ್ತುಗಳನ್ನು ಬಹುಮಾನವಾಗಿ

ಕೊಟ್ಟು ಕಳುಹಿದನು ಮತ್ತು ಸ್ವತಃ ತಾನು ಆಕ್ರಮಣದ ಉದ್ದೇಶದಿಂದ ಬುಖಾರಾದ ಕಡೆ ತೆರಳಿದನು.

ಅಬು-ಅಲಿ ಹಜೂರಿಯ ಸಂಕಟ

ಈ ಎಲ್ಲಾ ವಿಷಯಗಳ ಸಮಾಚಾರ ತಿಳಿದು ಅಬು-ಅಲ್ ಹಜೂರಿ ತನ್ನಲ್ಲಿ ಫಾಯಖನಿಗೆ ಶರಣಾಗಿಸಿಕೊಂಡಿದ್ದನೊ ಅತಿಯಾದ ಮಾನಸಿಕ ನೋವಿಗೀಡಾದನು. ತನ್ನ ಅಮೀರರು ಹಾಗೂ ಪ್ರಧಾನಿಗಳೊಂದಿಗೆ ಚರ್ಚಿಸಿ ಒಂದು ವೇಳೆ ವಿಪತ್ತು ಬಂದೊದಗಿದರೆ ಯಾವ ನಾಡಿನ ರಾಜರನ್ನು ಸಹಾಯಕ್ಕಾಗಿ ಕೋರಬೇಕೆಂದು ಸಲಹೆ ಕೇಳಲು 'ಫಕರುದ್ದೌಲಾ ದೈಲಮಿ' ಇವರನ್ನು ಭೇಟಿಯಾದನು ಮತ್ತು ಅವರ ಸ್ನೇಹದ ಮೇಲೆ ವಿಶ್ವಾಸ ಮಾಡಲೇ ಬೇಕು. 'ಬೂ-ಅಲಿ-ಹಜೂರಿ' ಈತನು 'ಜಾಫರ ಝುವ ಅಲ್ ಖರೀನ್' ಈತನನ್ನು ಜುರಜಾನದ ಪ್ರತಿನಿಧಿಯನ್ನಾಗಿ ನೇಮಕ ಮಾಡಿದನು ಮತ್ತು ಖುರಾಸಾನ ಹಾಗು ತುರ್ಕಿಸ್ಥಾನದ ಬೆಲೆಬಾಳುವ ವಸ್ತುಗಳನ್ನು ಫಖರ ಅಲ್-ದೌಲಾನ ಮತ್ತು ಎಲಿಮಿ ಇವರಿಗೆ ಈತನ ಪ್ರತಿನಿಧಿತ್ವದ ಬಗ್ಗೆ ಅವುಗಳನ್ನು ಬಹುಮಾನವಾಗಿ ಸಲ್ಲಿಸಿ, ಅವರೊಂದಿಗೆ ಸ್ನೇಹವನ್ನು ಬೆಳಸಿ ಆದಾನ-ಪ್ರದಾನಗಳನ್ನು ಆರಂಭಿಸಿದನು. ಈ ಮಧ್ಯ ಅಮೀರ ಸಬಸ್ತಗೀನ್‌ನು ಸೈನ್ಯದೊಂದಿಗೆ 'ಬಲಿಗ'ಗೆ ಬಂದನು ಮತ್ತು ಅಮೀರ ನೂಹನು ಸಹ ಬುಖಾರಾದಿಂದ ಹೊರಟು ಈತನೊಂದಿಗೆ ಅಲ್ಲಿ ಬಂದು ಸೇರಿದನು. ಫಾಯಖ ಮತ್ತು ಅಬು ಅಲಿ ಹಜೂರಿ ಇವರಿಗೆ ಅವರ ಆಗಮನದ ಸಮಾಚಾರ ತಿಳಿದಾಗ, ಇವರು ಕೂಡಾ ವಿಶಾಲವಾದ ಸೈನ್ಯದೊಂದಿಗೆ ಅವರನ್ನು ಎದುರಿಸಲು ಹೊರಟರು. ಈ ಸೈನ್ಯದಲ್ಲಿ ದಾರಾ-ಬಿನ್-ಶಮ್ಸಲ್ ಮಾನಿ ಮತ್ತು ಖಾಬುಸ್-ಬಿನ್-ವಶಮಘರ ಕೂಡಾ ಇದ್ದರು. ಇವರು ಫಖರ ಅಲ್ ದೌಲಾನ ಪರವಾಗಿ ಈತನ ಸಹಾಯಕ್ಕಾಗಿ ಎರಡು ಸಾವಿರ ಕುದುರೆ ಸವಾರರೊಂದಿಗೆ ಬಂದಿದ್ದವರು ಇವರೊಂದಿಗೆ ಸೇರಿಕೊಂಡರು.

ಅಮೀರ ಅಬು ಅಲಿ ಹಜೂರಿಯೊಂದಿಗೆ ಯುದ್ಧ

ಅಮೀರ ಸಬಸ್ತಗೀನ್‌ನು ಒಂದು ವಿಶಾಲವಾದ ಯುದ್ಧ ಭೂಮಿಯನ್ನು ಆರಿಸಿಕೊಂಡನು ಮತ್ತು ಮೈಮಿಜ್ ಹಾಗೂ ಎಸ್-ರ್ಹಾ ಸೈನಿಕರನ್ನು ಒಗ್ಗೂಡಿಸಿ ಸ್ವತಃ ಅಮೀರ ನೂಹ ತನ್ನ ಮಗನಾದ ಸುಲ್ತಾನ ಮಹಮದನೊಂದಿಗೆ ಸೈನ್ಯಗಳ ಮಧ್ಯೆ ಬಂದು ನಿಂತನು. ಉಭಯಪಕ್ಷಗಳ ಸೈನ್ಯಗಳು ಎದಿರುಬದುರಾಗಿ ನಿಂತುಕೊಂಡಾಗ ಯುದ್ಧವು ಆರಂಭವಾಯಿತು. ಬು-ಅಲಿ ಹಜೂರಿಯೂ ಮೀನಾ ಹಾಗೂ ಎಸ್-ರ್ಹಾ ಅಮೀರ ನೂಹನ ಎರಡು ಸೈನ್ಯದ ಭಾಗಗಳನ್ನು ಸ್ವಾಧೀನ ಪಡೆಸಿಕೊಂಡನು. ಇದರಿಂದಾಗಿ ಅಮೀರ ನೂಹನ ಸೈನ್ಯವು ಸಮಯ ತೆಗೆಯಲಾರಂಭಿಸಿತು. ಯೋಜಿಸಿದ ಕೆಲಸವು ಕೆಡುವ ಮುನ್ನ ಇದಕ್ಕಿದ್ದಂತೆ ಬು

ಅಲಿ ಹಜೂರಿಯ ಸೈನ್ಯದ ಮಧ್ಯದಿಂದ ಹೊರಟು ದಾಳಿಮಾಡಿದನು. ಎರಡು ಸೈನ್ಯಗಳ ಮಧ್ಯೆ ಬಂದು ನಿಂತಾಗ ತನ್ನ ಸೈನಿಕರನ್ನು ಹಿಂದೆ ಇಟ್ಟುಕೊಂಡು ಅಮೀರ ನೂಹನ ಮುಂದೆ ಹಾಜರಾದನು ಮತ್ತು ಈತನ ಅಪ್ಪಣೆ ಪಡೆದು ಖುರಾಸಾನ ಸೈನ್ಯದ ವಿರುದ್ಧ ಯುದ್ಧ ಭೂಮಿಯಲ್ಲಿ ಬಂದನು. ಅನ್ಯ ಅಮೀರರು ಹಾಗೂ ಅಧಿಕಾರಿಗಳು ಈ ಸ್ಥಿತಿಯನ್ನು ಕಂಡಾಗ, 'ಇಬ್ನೇ ಖಾಬೂಸ' ಒಬ್ಬನೆ ದ್ರೋಹ ಮಾಡಿಲ್ಲ, ಆತನೊಂದಿಗೆ ಸೈನ್ಯದ ದೊಡ್ಡ ಭಾಗವು ಸಹ ಇದೆ ಎಂದು ಭಾವಿಸಿ ಬಹಳ ಸಂಕಟಕ್ಕೊಳಗಾಗಿ ಮನನೊಂದು ತಮ್ಮ ತಮ್ಮ ಸ್ಥಾನಗಳಲ್ಲಿ ನಿಂತಲ್ಲಿಯೇ ನಿಂತುಕೊಂಡರು. ಅಮೀರ ನಾಸಿರುದ್ದೀನ್‌ನನು ಶತ್ರುಗಳ ಸೈನ್ಯದ ಸಂಕಟವನ್ನು ಅರಿತಾಗ ತನ್ನ ಕೆಲವು ಶೂರ ಸಿಪಾಯಿಗಳ ಒಂದು ಭಾಗವನ್ನು ಜೊತೆಗೂಡಿಕೊಂಡು ಶತ್ರುಗಳ ಮೇಲೆ ದಾಳಿ ಮಾಡಿದನು. ಖುರಾಸಾನ ಸೈನಿಕರು ಈ ಘೋರ ದಾಳಿಯಲ್ಲಿ ಎದೆಗುಂದಿ ಓಡಿಹೋದರು. ಸುಲ್ತಾನ ಮಹಮದನು ಓಡಿ ಹೋಗುವವರನ್ನು ಹಿಮ್ಮೆಟ್ಟಿದನು. ಇವರಲ್ಲಿ ಕೆಲವರನ್ನು ಕೊಂದನು. ಉಳಿದವರನ್ನು ಖೈದಿಗಳನ್ನಾಗಿ ಬಂಧಿಸಿದನು. ಓಡಿ ಹೋಗುವ ದುರ್ದೈವಿಗಳೆಲ್ಲ ತಮ್ಮ ಆಳರಸನ ವಿರುದ್ಧ ದ್ರೋಹ ಮಾಡಿದರು, ಯುದ್ಧ ಸಲಕರಣೆಗಳನ್ನು ಹಾಗೂ ಅನ್ಯ ಸಾಮಗ್ರಿಗಳನ್ನು ಎಷ್ಟೊಂದು ಪ್ರಮಾಣದಲ್ಲಿ ಬಿಟ್ಟು ಓಡಿದ್ದರೆಂದರೆ, ಅದರಲ್ಲಿ ೧/೧೦ನೆಯ ಅಂಶವು ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಲು ಉಪಯೊಗಿಸಿದ್ದರೆ, ಕಾಲದ ಸಮಸ್ತ ವಿಪತ್ತುಗಳಿಂದ ಸದಾ ಸುರಕ್ಷಿತರಾಗಿರುತ್ತಿದ್ದರು.

ಫಾಖ ಮತ್ತು ಅಮೀರ ಬು ಅಲಿ ಹಜೂರಿ ನಿಶಾಪುರದ ಕಡೆ ಓಡಿಹೋದಾಗ ಅಮೀರ ನೂಹನು ಸಬಸ್ತಗೀನ್‌ನಿಗೆ 'ನಾಸೀರುದ್ದೀನ್' ಎಂಬ ಬಿರುದಾವಳಿ ನೀಡಿದನು. ಆತನ ಪುತ್ರನಾದ ಸುಲ್ತಾನ ಮಹಮದನಿಗೆ 'ಸಯಿಫಾ-ಲತ್ತ-ದೌಲಾ' ಬಿರುದಾವಳಿ ನೀಡಿ 'ಅಬು-ಅಲಿ ಹಜೂರಿ' ಬದಲಾಗಿ ಅಮಿರ-ಉಲ್-ಉಮ್ರಾ ಎಂದು ನಿಯುಕ್ತಿಸಿದನು ಮತ್ತು ಸ್ವತಃ ತಾನು ಗೆದ್ದು ತನ್ನ ಜನರೊಂದಿಗೆ ಬುಖಾರಾದ ಕಡೆ ಹೊರಟು ನಿಂತನು. ಅಮೀರ ನಾಸಿರುದ್ದೀನ್ ಮತ್ತು ಸುಲ್ತಾನ ಮಹಮದರು ಬಹಳ ಗೌರವಾನ್ವಿತ ವೈಭವದೊಂದಿಗೆ ನಶಾಪುರದ ಕಡೆಗೆ ಹೊರಟು ನಿಂತರೊ, ಆಗ ಫಾಯಖ ಮತ್ತು ಅಮೀರ ಅಲ್-ಬು-ಅಲಿ ಹಜೂರಿ ದಿಕ್ಕೆಟ್ಟು ಜಿರಜಾನ ಕಡೆ ಓಡಿಹೋದರು. ಫಖರ ಅಲ್ ದೌಲಾ ಹಾಗೂ ಎಲಿಮಿ ಇವರಲ್ಲಿ ಹೋಗಿ ಆಶ್ರಯ ಪಡೆದರು. ನಾಸಿರುದ್ದೀನನು ಘಜನಿ ಕಡೆಗೆ ಹೊರಟು ನಿಂತಾಗ, ಸುಲ್ತಾನ ಮಹಮದನು ನಶಾಪುರನಲ್ಲಿಯೇ ಉಳಿದುಕೊಂಡನು. ಈ ಸಮಯವು ಆಕ್ರಮಣ ಮಾಡಲು ಸರಿಯಾದ ಸಮಯವೆಂದು ಭಾವಿಸಿ ಅಬು ಅಲಿ ಹಜೂರಿ ಹಾಗೂ ಫಾಯಖ ಇಬ್ಬರೂ ಅಮೀರ ನೂಹ ಮತ್ತು ನಾಸಿರುದ್ದೀನನ ಕಡೆಯಿಂದ ಸುಲ್ತಾನ ಮಹಮದನಿಗೆ ನೆರವು ದೊರೆಯುವ ಮೊದಲೇ ಆತನ ಮೇಲೆ ದಾಳಿ ಮಾಡಿದರು. ಸುಲ್ತಾನ ಮಹಮದನಿಗೆ ಸೋಲಾಯಿತು. ಇವರಿಬ್ಬರೂ ಸಮಸ್ತ ಸಾಮಗ್ರಿಗಳನ್ನು ತಮ್ಮ ವಶಕ್ಕೆ

ತೆಗೆದುಕೊಂಡರು. ದಿಗ್ಭ್ರಾಂತಿ ಹುಟ್ಟಿಸುವ ಈ ವಿಷಾದದ ವಿಷಯವು ಅಮೀರ ನಾಸಿರುದ್ದೀನನಿಗೆ ತಿಳಿದೊಡನೆ ಆತನು ಕೂಡಲೆ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ನಶಾಪುರದ ಕಡೆ ಹೊರಟು ನಿಂತನು. 'ತೋಸ'ನ ಸಮೀಪ ಅಮೀರ ನಾಸೀರುದ್ದೀನ, ಫಾಯಖ ಹಾಗು ಅಮೀರ ಅಬು ಅಲಿ ಇವರು ಪರಸ್ಪರ ಎದುರಾದರು, ಎರಡೂ ಸೈನ್ಯಗಳ ಮಧ್ಯೆ ಯುದ್ಧವು ಆರಂಭವಾಯಿತು. ಇಬ್ಬರ ಕಾಳಗದಲ್ಲಿ ಶೌರ್ಯವು ಪ್ರಕಟವಾಗುವುದಕ್ಕಿಂತ ಮೊದಲೇ ಅಮೀರ ಅಬು ಅಲಿ ಹಜೂರಿ ಈತನ ಸೈನ್ಯದ ಹಿಂದೆ ಧೂಳು ಏಳುವುದು ಕಂಡಿತು. ಸ್ವಲ್ಪ ಸಮಯದ ನಂತರ ಸುಲ್ತಾನ ಮಹಮದನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬರುವುದನ್ನು ಎಲ್ಲರೂ ನೋಡಿದರು.

ಈಗ ಅಮೀರ ಅಲ್ ಬುಯಿ ಹಜೂರಿ ತನ್ನ ಸೈನ್ಯವನ್ನು ಎಡ ಮತ್ತು ಬಲ ಭಾಗದಲ್ಲಿ ವಿಂಗಡಿಸಿ ಫಾಯಖನ ಸೈನ್ಯದೊಂದಿಗೆ ಸೇರಿ ಅಮೀರ ನಾಸಿರುದ್ದೀನನ ಸೈನ್ಯದ ಮೇಲೆ ದಾಳಿ ಮಾಡಿದರು. ಅಮೀರ ನಾಸಿರುದ್ದೀನನು ಈ ದಾಳಿಯನ್ನು ಬಹಳ ಶೌರ್ಯ ಹಾಗು ಧೈರ್ಯದಿಂದ ಎದುರಿಸುತ್ತ ಯುದ್ಧ ಭೂಮಿಯಲ್ಲಿ ನಿಂತುಕೊಂಡನು. ಇಷ್ಟರಲ್ಲಿ ಸುಲ್ತಾನ ಮಹಮದನು ಸಿಂಹದಂತೆ ಘರ್ಜನೆ ಮಾಡುತ್ತಾ ಶತ್ರುಗಳ ಮೇಲೆ ಆಕ್ರಮಣ ಮಾಡಿದನು ಮತ್ತು ಅವರ ಸೈನ್ಯವನ್ನು ಸಂಪೂರ್ಣ ನಾಶ ಮಾಡಿದನು. ಅಮೀರ ಅಲ್ ಬೊಯಿ ಹಜೂರಿ ಹಾಗೂ ಫಾಯಕರು ತಮ್ಮ ಪ್ರಾಣವನ್ನು ಉಳಿಸಿಕೊಂಡು ಓಡಿಹೋಗಿ ಖರಸ್ಥಾನ ಹಾಗು ತೌಸ್‌ನ ಮಧ್ಯದಲ್ಲಿ ಇರುವ ಕೋಟೆಯಲ್ಲಿ ಹೋಗಿ ಅಡಗಿಕೊಂಡರು.

ಈ ಗೆಲುವಿನ ನಂತರ ಅಮೀರ ಸಬಸ್ತಗೀನ್‌ನು ಬಹಳ ಸುಖ ಹಾಗು ಸಂತೃಪ್ತಿಯಿಂದ ರಾಜ್ಯಭಾರ ನಡೆಸಿದನು ಮತ್ತು ೫೬ನೆಯ ವಯಸ್ಸಿನಲ್ಲಿ ತರ್‌ನೀದ ಎನ್ನುವ ಸ್ಥಳದಲ್ಲಿ ಶೈಬಾನ್ ಹಿಜರಿಶಕೆ ೩೮೭ ರಲ್ಲಿ ಮೃತನಾದನು. ಮೃತ ಶರೀರವನ್ನು ಒಂದು ಪೆಟ್ಟಿಗೆಯಲ್ಲಿ ಇಟ್ಟು ಅದನ್ನು ಘಜನಿಗೆ ತಂದು ಅಲ್ಲಿಯೇ ಅದನ್ನು ಭೂಗತ ಮಾಡಲಾಯಿತು. ಸಬಸ್ತಗೀನ್‌ನು ೨೦ ವರ್ಷ ರಾಜ್ಯಭಾರ ಮಾಡಿದನು. ಈತನ ಸಂತತಿಯಲ್ಲಿ ೧೪ ಜನರಿದ್ದು ಒಬ್ಬರ ನಂತರ ಇನ್ನೊಬ್ಬರು ರಾಜ ಸಿಂಹಾಸನದ ಮೇಲೆ ಕುಳಿತು ಆಳಿದರು ಹಾಗೂ ಲಾಹೋರ ಮತ್ತು ಇದರ ಸುತ್ತ-ಮುತ್ತಲಿನ ಪ್ರಾಂತವನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದರು. ಅಬು-ಅಲ್‌ಬಾಸ್-ಫಜಲ್ ಇಬ್ನೇ ಅಹ್ಮದ ಅಸ್ ಫರಾನಿ ಸುಬಕ್ತಗೀನನ ಪ್ರಧಾನಿಯಾಗಿದ್ದನು. ಆತನು ರಾಜ್ಯ ತಂತ್ರದ ಹಾಗೂ ಆಡಳಿತದ ಪದ್ಧತಿ, ನಾಗರಿಕರ ಬಗ್ಗೆ ಕಾಳಜಿ, ಸೈನ್ಯ ಸುಸಜ್ಜಿತಗೊಳಿಸುವಿಕೆ, ಹೀಗೆ ಎಲ್ಲ ವಿಷಯಗಳಲ್ಲಿ ಸಂಪೂರ್ಣ ಕೌಶಲ್ಯ ಪಡೆದಿದ್ದನು.

ಒಂದು ವಿಚಿತ್ರ ಘಟನೆ

'ಜಾಮೇ ಅಲ್ ಹಕಾಯಾತ್' ಪುಸ್ತಕದಲ್ಲಿ ಒಂದು ವಿಚಿತ್ರ ಘಟನೆಯನ್ನು

ಉಲ್ಲೇಖಿಸಲಾಗಿದೆ. ನೇಶಾಪುರನಲ್ಲಿ ಅಮೀರ ನಾಸೀರುದ್ದೀನ್ ಅಲಪ್ತಗೀನ್‌ನ ಸೇವೆಯಲ್ಲಿದ್ದಾಗ ಆತನ ಹತ್ತಿರ ಕೇವಲ ಒಂದು ಕುದುರೆ ಇತ್ತು. ಆತನು ದಿನವೆಲ್ಲಾ ಅದರ ಮೇಲೆ ಕುಳಿತುಕೊಂಡು ಅರಣ್ಯದಲ್ಲಿ ತಿರುಗಾಡಿ ಪಶುಗಳ ಬೇಟೆಯಾಡುತ್ತಿದ್ದನು. ಒಂದು ದಿನ ಒಂದು ಜಿಂಕೆ ತನ್ನ ಮರಿ ಜಿಂಕೆಯೊಂದಿಗೆ ಅರಣ್ಯದಲ್ಲಿ ಹುಲ್ಲು ತಿನ್ನುತ್ತಿತ್ತು. ಸುಬಕ್ತಗೀನ್ ಇದನ್ನು ನೋಡಿದ ಕೂಡಲೆ ಕುದುರೆಯನ್ನು ಓಡಿಸಿ ಜಿಂಕೆಯ ಮರಿಯನ್ನು ಹಿಡಿದುಕೊಂಡನು. ಅದರ ಕೈಕಾಲುಗಳನ್ನು ಕಟ್ಟಿ ಅದನ್ನು ತನ್ನ ಕುದುರೆಯ ಜೀನ್‌ಗೆ ಕಟ್ಟಿದನು ಮತ್ತು ಪಟ್ಟಣದ ಕಡೆಗೆ ಹೊರಟು ನಿಂತನು. ಸ್ವಲ್ಪ ದೂರ ಹೋದ ನಂತರ ತಿರುಗಿ ನೋಡಲಾಗಿ ಜಿಂಕೆಯು ಹಿಂದೆ ಹಿಂದೆ ಅಟ್ಟಿಕೊಂಡು ಬರುತ್ತಿತ್ತು. ಅದರ ಮುಖದ ಮೇಲೆ ದುಃಖ ಹಾಗು ಆಘಾತವು ವ್ಯಕ್ತವಾಗುತ್ತಿತ್ತು. ಇದನ್ನು ಕಂಡು ಮಾತುಬಾರದ ಪಶುವಿನ ಮೇಲೆ ಸುಬಕ್ತಗೀನ್‌ನಿಗೆ ಅಂತಃಕರಣ ಉಕ್ಕಿ ಜಿಂಕೆಯ ಮರಿಯನ್ನು ಬಿಟ್ಟು ಬಿಟ್ಟನು. ಇದನ್ನು ಕಂಡು ಜಿಂಕೆಯು ಬಹಳ ಸಂತೋಷದಿಂದ ಮರಿಯನ್ನು ಜೊತೆಗೆ ತೆಗೆದುಕೊಂಡು ಅರಣ್ಯದ ಕಡೆ ಹೊರಟು ಹೋಯಿತು. ಸ್ವಲ್ಪ ಸ್ವಲ್ಪ ದೂರ ಹೋಗುತ್ತಿದಂತೆ ತಿರುತಿರುಗಿ ಸುಬಕ್ತಗೀನ್‌ನನ್ನು ನೋಡುತ್ತಾ ತನ್ನ ಸಂತೋಷವನ್ನು ವ್ಯಕ್ತಗೊಳಿಸುವಂತಿತ್ತು.

ಈ ಘಟನೆ ನಡೆದ ದಿನದ ಅದೇ ರಾತ್ರಿ ಸುಬಕ್ತಗೀನ್‌ನ ಕನಸಿನಲ್ಲಿ 'ಮುಹಮ್ಮದ್' ಕಂಡನು. ಅವರು ಸ್ವಪ್ನದಲ್ಲಿ 'ಎಲೈ ನಾಸೀರುದ್ದೀನನೆ, ನೀನು ಒಂದು ಮಾತನಾಡದ ಪ್ರಾಣಿಯ ಮೇಲೆ ಅಂತಃಕರಣವನ್ನು ತೋರಿಸಿರುವಿ, ಅದಕ್ಕಾಗಿ ಪರಮಾತ್ಮನ ಸನ್ನಿಧಿಯಲ್ಲಿ ಅದು ಸ್ವೀಕಾರವಾಗಿದೆ. ನೀನು ಇದೇ ರೀತಿ ಮುಂದೆಯೂ ನಡೆದುಕೊಳ್ಳಬೇಕು, ಹಾಗೂ ಸದಾ ದಯಾಗುಣವನ್ನು ತೋರಿಸಬೇಕು, ಏಕೆಂದರೆ ಇದು ಇಹ ಮತ್ತು ಪರಗಳ ಸಂಪತ್ತು ಆಗಿದೆ.' ಎಂದು ಹೇಳಿದರು, ಈ ಘಟನೆಯನ್ನು 'ಮಾಸೀರೂಲ್ ಮುಲ್ಕ' ನಲ್ಲಿ ಬರೆಯಲಾಗಿದೆ. ಸುಲ್ತಾನ ಮಹಮದನು ತನ್ನ ಯೌವ್ವನದ ಆರಂಭದ ದಿನಗಳಲ್ಲಿ ಹಾಗು ತಂದೆಯ ಜೀವಮಾನದಲ್ಲಿ ಘಜನಿಯಲ್ಲಿ ಹಸಿರಿನಿಂದ ಕಂಗೊಳಿಸುವ ಸಮೃದ್ಧ ಉಪವನವನ್ನು ನಿರ್ಮಿಸಿದ್ದನು. ಈ ತೋಟದಲ್ಲಿ ಒಂದು ಉತ್ತಮವಾದ ಹಾಗು ವಿಶಾಲವಾದ ಮನೆಯನ್ನು ಕಟ್ಟಿಸಿದ್ದನು.

ಈ ತೋಟ ಮತ್ತು ಕಟ್ಟಡ ಪೂರ್ತಿಯಾದಾಗ ಒಂದು ವಿಶೇಷ ಸಮಾರಂಭವನ್ನು ಮಾಡಿ ತನ್ನ ತಂದೆ ಹಾಗೂ ರಾಜ್ಯದ ಅನ್ಯ ಅಧಿಕಾರಿಗಳನ್ನು ಆ ತೋಟಕ್ಕೆ ಆಹ್ವಾನಿಸಿದನು. ಅಮೀರ ನಾಸಿರುದ್ದೀನನು ಈ ತೋಟ ಹಾಗು ಕಟ್ಟಡವನ್ನು ನೋಡಿ ಸುಲ್ತಾನ ಮಹಮದನಿಗೆ, 'ಮಗನೆ, ಈ ತೋಟ ಹಾಗು ಕಟ್ಟಡವು ನೋಡಲು ಅತಿ ಸುಂದರವಾಗಿದ್ದು ಈ ತರಹದ ವಸ್ತುಗಳನ್ನು ನಿನ್ನ ನೌಕರರು ಸಹ ನಿರ್ಮಿಸಬಹುದು. ರಾಜರ ವೈಭವದ ಬೇಡಿಕೆ ಏನೆಂದರೆ, ಉದಾಹರಣೆಗೂ ಸಿಗದಂತಹ ಕಟ್ಟಡಕ್ಕೆ ಅಡಿಪಾಯ ಹಾಕಬೇಕು.' ಮಹಮದನು ಗೌರವದಿಂದ ಕೇಳಿದನು 'ಅದು ಯಾವ

ಕಟ್ಟಡ, ನೀವು ಯಾವುದರ ಬಗ್ಗೆ ಹೇಳುತ್ತಿದ್ದಿರಿ?' ಸಬಸ್ತಗೀನ್‌ನು ಉತ್ತರಿಸಿದನು 'ಈ ಕಟ್ಟಡವು ಬುದ್ಧಿವಂತರ ಹೃದಯದ ಭೂಮಿಯಲ್ಲಿ ನಿಮ್ಮ ಪ್ರೀತಿ ಹಾಗು ಅನುಗ್ರಹದ ಬೀಜಗಳನ್ನು ಬಿತ್ತಿ, ಅವು ಬೆಳೆದು ಅವುಗಳ ಫಲಗಳನ್ನು ತಿಂದರೆ ಇಹ ಮತ್ತು ಪರಗಳ ಗುಣದ ಸ್ವಾದವು ಸಿಕ್ಕು ನಿನ್ನ ಹೆಸರು ಪ್ರಳಯ ಕಾಲದವರೆಗೂ ಅಮರವಾಗಿರುತ್ತದೆ.'

ಸುಬಕ್ತಗೀನ್‌ನ ಮರಣ

'ತರಜುಮಾ ಎಮಿನಿ' (ಅಂದರೆ ಖ್ಯಾತಿ ಪಡೆದ ಎಮಿನಿ ಇತಿಹಾಸ) ಪುಸ್ತಕದಲ್ಲಿ ಈ ಘಟನೆಯನ್ನು ಉಲ್ಲೇಖಿಸಲಾಗಿದೆ. ಸುಬಕ್ತಗೀನ್‌ನು ತನ್ನ ಮರಣದ ಕೆಲವು ದಿನಗಳ ಮುನ್ನ ಒಂದು ದಿನ 'ಶೇಖ ಅಬುಲ್ ಫತಾ'ನೊಂದಿಗೆ ಮಾತನಾಡುವಾಗ 'ನಾವು ಮನುಷ್ಯರು ನಮಗೆ ಒದಗುವ ವಿಪತ್ತುಗಳು ಹಾಗೂ ರೋಗಗಳಿಂದ ಮುಕ್ತಿ ಪಡೆಯಲು ಯೋಜನೆಗಳನ್ನು ಮಾಡುತ್ತ ಅದರ ಬಗ್ಗೆ ಚಿಂತಿಸುತ್ತಿರುತ್ತೇವೆ. ಇದು ಹೇಗೆಂದರೆ, ಒಬ್ಬ ಕಟುಕನು ಆಡಿನ ಕೂದಲನ್ನು ಕತ್ತರಿಸಲು ಅದನ್ನು ಮೊದಲು ಭೂಮಿಯ ಮೇಲೆ ಹಾಕಿ ನಂತರ ಅದರ ಕೈಕಾಲುಗಳನ್ನು ಭದ್ರವಾಗಿ ಕಟ್ಟುತ್ತಾನೆ, ಆಗ ಆಡು ತನ್ನ ಮೇಲೆ ಒದಗಿದ ವಿಚಿತ್ರ ವಿಪತ್ತನ್ನು ಕಂಡು ಜೀವನದಿಂದ ನಿರಾಸೆಗೊಂಡು ಸಾಯಲು ಸಿದ್ಧವಾಗಿ ಬಿಡುತ್ತದೆ. ಕಟುಕನು ತನ್ನ ಕೆಲಸವನ್ನು ಮುಗಿಸಿ, ಅದನ್ನು ಬಿಟ್ಟು ಬಿಟ್ಟಾಗ, ಅದು ಸಂತೋಷದಿಂದ ಜಿಗಿದಾಡುತ್ತದೆ. ಎರಡನೆಯ ಬಾರಿ ಕಟುಕನು ಪುನಃ ಅದನ್ನು ಹಿಡಿದಾಗ ಅದು ಅನುಮಾನಕೊಳಗಾಗುತ್ತದೆ. ಭಯ ಹಾಗೂ ಆಸೆಗಳ ತಾಕಲಾಟದಲ್ಲಿರುತ್ತದೆ, ಅದರ ಕೂದಲನ್ನು ಕತ್ತರಿಸುವುದು ಮತ್ತು ಕೂಡಲೆ ಹಿಂದಿನಂತೆ ಈ ಬಾರಿಯು ತನ್ನನ್ನು ಬಿಡಲಾಗುತ್ತದೆಂದು ಆಶಿಸುತ್ತದೆ. ಕಟುಕನು ಅದರ ಕೂದಲನ್ನು ಕತ್ತರಿಸಿ ಮುಕ್ತ ಮಾಡಿದಾಗ ಅದು ಸಂತೋಷಗೊಳ್ಳುತ್ತದೆ, ವಿಪತ್ತಿನ ಭಾವನೆ ಮನಸ್ಸಿನಿಂದ ಹೋಗಿಬಿಡುತ್ತದೆ. ಮೂರನೆಯ ಸಲ ಕಟುಕನು ಇದರ ಕತ್ತನ್ನು ಕತ್ತರಿಸುವ ವಿಚಾರದಿಂದ ಭೂಮಿಯ ಮೇಲೆ ಹಾಕಿದಾಗ ಅದರ ಮನಸ್ಸಿನಲ್ಲಿ ಯಾವ ತರಹದ ಭಯವೂ ಇರುವುದಿಲ್ಲ. ಅದರ ವಿಚಾರವೇನೆಂದರೆ ಮೊದಲಿನ ಹಾಗೆ ಈ ಬಾರಿಯು ಕೂಡಾ ಸ್ವಲ್ಪ ಸಮಯದ ನಂತರ ತನಗೆ ಬಿಡುಗಡೆ ಸಿಗುತ್ತದೆ ಹಾಗೂ ಕೆಲವೇ ಕ್ಷಣಗಳಲ್ಲಿ ಅದು ಮುಕ್ತವಾಗುತ್ತದೆ. ಅದು ನಿರ್ಭಯದಿಂದ, ಚಿಂತೆಯಿಲ್ಲದ ಸ್ಥಿತಿಯಲ್ಲಿರುತ್ತದೆ, ಇದೇ ಸ್ಥಿತಿಯಲ್ಲಿ ಅದರ ಕತ್ತನ್ನು ಕತ್ತರಿಸಲಾಗುತ್ತದೆ ಮತ್ತೆ ಅದು ಪ್ರಪಂಚವನ್ನು ತೊರೆದುಬಿಡುತ್ತದೆ. ನಾವು ಮನುಷ್ಯರು ಯಾವಾಗಲೂ ವಿಧ ವಿಧವಾದ ವಿಪತ್ತುಗಳಿಗೆ ಮತ್ತು ಬಗೆ ಬಗೆಯ ರೋಗಗಳಿಗೆ ಒಳಗಾಗಿ ಪ್ರತಿ ದಿನ ಈ ವಿಪತ್ತು ಹಾಗೂ ರೋಗಗಳಿಂದ ಬಿಡುಗಡೆ ಹೊಂದುವ ಕುರಿತು ಚಿಂತಿಸಿ ಸಂತುಷ್ಟರಾಗುತ್ತೇವೆ. ಆದರೆ ಕೊನೆಯ ವಿಪತ್ತು ಮರಣದ ಸಂದೇಶವನ್ನು ಹೊತ್ತು ತರುತ್ತದೆ ಮತ್ತು ಇದರ

ಅರಿವಿಲ್ಲದೆ ಗುಂಗಿನಲ್ಲಿರುವಾಗ, ಮೃತ್ಯುವು ನಮ್ಮ ಕೊರಳಿಗೆ ಉರುಳು ಹಾಕಿ ಮೃತನನ್ನಾಗಿಸಿ ಈ ಜಗತ್ತಿನಿಂದ ತೆಗೆದುಕೊಂಡು ಹೋಗುತ್ತದೆ.' ಎಂದು ಹೇಳಿದನು. ಸಬಸ್ತಗೀನ್‌ನ ಈ ಮಾತುಗಳು ಆತನ ಮರಣ ಹೊಂದುವುದಕ್ಕಿಂತ ನಾಲ್ಕು ದಿನ ಮೊದಲು ಹೇಳಿದ್ದನೆಂದು ಇತಿಹಾಸಕಾರರು ಬರೆಯುತ್ತಾರೆ. (ವಲ್ಲಾ ಅಲಂ ಬಿಲ್ ಸವಾಬ್)

ಅಮೀರ ಇಸ್ಮಾಯಿಲ್-ಬಿನ್-ಅಮೀರ ನಾಸಿರುದ್ದೀನ್ ಸಬಸ್ತಗೀನ್

ಅಮೀರ ನಾಸಿರುದ್ದೀನ್ ಸಬಸ್ತಗೀನ್ ಇಹಲೋಕವನ್ನು ತ್ಯಜಿಸಿದಾಗ, ಸೈಫ-ಅಲ್-ದೌಲಾ ಸುಲ್ತಾನ ಮಹಮದನು ನಿಸಾಪುರದಲ್ಲಿದ್ದನು. ಅದಕ್ಕಾಗಿ ಆತನ ತಮ್ಮನಾದ ಅಮೀರ ಇಸ್ಮಾಯಿಲ್ ತನ್ನ ತಂದೆಯ ಆದೇಶದಂತೆ ಬಲ್ಗನಲ್ಲಿ ಆತನ ಉತ್ತರಾಧಿಕಾರಿಯಾದನು. ಅಮೀರ ಇಸ್ಮಾಯಿಲ್ ಜನರ ಹೃದಯಗಳಲ್ಲಿ ತನಗಾಗಿ ಪ್ರೀತಿ ಹುಟ್ಟಿಸಲು ಪ್ರಯತ್ನಿಸಿದನು. ತಂದೆಯು ಕೂಡಿಟ್ಟ ನಿಕ್ಷೇಪವನ್ನು ಸೈನಿಕರಲ್ಲಿ ಉದಾರ ಮನಸ್ಸಿನಿಂದ ಹಂಚಿದನು ಮತ್ತು ಸೈನಿಕರ ಮೋಜು, ಮಸ್ತಿಗಾಗಿ ಸಂಪೂರ್ಣ ವ್ಯವಸ್ಥೆ ಮಾಡಿದನು. ಆದರೆ ಈ ಎಲ್ಲಾ ಅನುಗ್ರಹ ಹಾಗು ಬಹುಮಾನಗಳನ್ನು ನೀಡಿದರೂ ಸೈನ್ಯದಲ್ಲಿ ಕೆಲವು ಸ್ವಾರ್ಥಿಗಳು ತಮ್ಮ ಬೇಡಿಕೆಗಳನ್ನು ದಿನದಿಂದ ದಿನಕ್ಕೆ ಹೆಚ್ಚಿಸುತ್ತ ಅಮೀರ ಇಸ್ಮಾಯಿಲ್‌ನ ಹತೋಟಿಯಲ್ಲಿ ಬರದಂತಾದರು. ಸುಲ್ತಾನ ಮಹಮದನಿಗೆ ನಿಶಾಪುರದಲ್ಲಿ ಈ ವಿಷಯದ ಬಗ್ಗೆ ಮಾಹಿತಿ ದೊರೆತು ತನ್ನ ತಮ್ಮನಿಗೆ ಈ ಬಗ್ಗೆ ಒಂದು ವಿಷಾದ ವ್ಯಕ್ತಪಡಿಸುವ ಪತ್ರವನ್ನು ಬರೆದನು. ಮಹಮದನು ಆ ಪತ್ರವನ್ನು 'ಅಬುಲ್-ಹಸನ್-ಹಮೊಯಿ' ಕೈಯಲ್ಲಿ ಕೊಟ್ಟು ಕಳುಹಿಸಿದನು ಹಾಗೂ ಆ ಪತ್ರದಲ್ಲಿ 'ನಮ್ಮ ಬೆನ್ನ ಹಿಂದಿದ್ದು ಧೈರ್ಯ ನೀಡುವ ತಂದೆ ಅಮೀರ ನಾಸಿರುದ್ದೀನ್ ಈಗ ಜಗತ್ತನ್ನು ತ್ಯಜಿಸಿದ್ದಾರೆ. ಅವರ ನಂತರ ನಿನಗಿಂತಲೂ ಹೆಚ್ಚಿನ ಪ್ರೀತಿಪಾತ್ರರು ನನಗೆ ಬೇರೆ ಯಾರೂ ಇಲ್ಲ. ನೀನು ನನ್ನ ಕಣ್ಣುಗಳಿದ್ದಂತೆ. ನಿನ್ನ ಇಚ್ಛೆಗಳನ್ನೆಲ್ಲ ಪೂರ್ಣಗೊಳಿಸಲು ಸಿದ್ಧನಿದ್ದೇನೆ. ಆದರೆ ರಾಜ್ಯದ ಸ್ಥಾಪನೆ, ಅಳ್ವಿಕೆ ಮತ್ತು ವ್ಯವಸ್ಥೆಗಳಿಗಾಗಿ ಹಿರಿಯವಯಸ್ಕ ಹಾಗೂ ಅನುಭವಿ ಇರಬೇಕಾದುದ್ದು ಅವಶ್ಯಕ. ಇದಲ್ಲದೆ, ವಿಷಯಗ್ರಹಿಸುವುದರಲ್ಲಿ ನಿಪುಣನಾಗಿರಬೇಕು. ಒಂದು ವೇಳೆ ನಿನ್ನಲ್ಲಿ ಈ ಗುಣಗಳಿದ್ದರೆ ನಿನಗಿಂತಲೂ ಹೆಚ್ಚು ಆಜ್ಞಾಧಾರಕನಾಗಲು ಇನ್ನೊಬ್ಬರಿಗೆ ಪ್ರಾಶಸ್ತ್ಯ ಕೊಡುವುದಿಲ್ಲ. ನಾನು ದೂರವಿದ್ದ ಕಾರಣ ರಾಜ್ಯದ ಸಂರಕ್ಷಣೆಗಾಗಿ ಸಮಯೋಚಿತ ಉಪಾಯವಾಗಿ ತಂದೆಯವರು ನಿನ್ನನ್ನು ಉತ್ತರಾಧಿಕಾರಿಯಾಗಿ ನಿಯಮಿಸಿರುವ ಕಾರಣ. ನೀನು ಒಳ್ಳೆಯದು ಹಾಗೂ ಕೆಟ್ಟದನ್ನು ಅರಿತುಕೊಂಡು ಈ ವಿಷಯವನ್ನು ಕುರಿತು ಚಿಂತಿಸು ಹಾಗು ನ್ಯಾಯವನ್ನು ಕೈಯಿಂದ ಜಾರಲು ಬಿಡಬೇಡ. ತಂದೆಯ ಆಸ್ತಿ-ಪಾಸ್ತಿಗಳನ್ನು ಶರೀಯತ್ ಪ್ರಕಾರ ವಿಭಜಿಸು. ನಮ್ಮ ರಾಜ್ಯದ ವೈಭವಾದಿಗಳ ಮೂಲ ಸೂತ್ರವು ಘಜನಿ ಇದ್ದ ಕಾರಣ ಅದನ್ನು ನನಗೆ

ಕೊಡು. ಏಕೆಂದರೆ, ಬಲೀಗ್ ಮತ್ತು ಖುರಸ್ಥಾನ ಎರಡನ್ನು ವೈರಿಗಳಿಂದ ಮುಕ್ತಗೊಳಿಸಿ ನಿನ್ನ ಸ್ವಾಧೀನಕ್ಕೆ ಕೊಡುವೆನು' ಎಂಬ ಸಂದೇಶ ಕಳುಹಿಸಿದ್ದನು. ಅಮೀರ ಇಸ್ಮಾಯಿಲನು ತನ್ನ ಅಣ್ಣನ ಸಂದೇಶವನ್ನು ಲಕ್ಷಿಸಿದೆ ವಿರೋಧಿಸಲು ಸಿದ್ಧನಾದನು. ಸುಲ್ತಾನ ಮಹಮದನು ತಾನು ನೀಡಿದ ಉಪದೇಶವು ಉಪಯುಕ್ತವಾಗದೆ ಇದ್ದುದನ್ನು ಕಂಡು ಗಾದೆಮಾತಿನ ಪ್ರಕಾರ ನಡೆದುಕೊಳ್ಳಲು ನಿರ್ಧರಿಸಿದನು. ಅಮೀರ ಇಸ್ಮಾಯಿಲನು ತನ್ನ ಸೈನ್ಯದೊಂದಿಗೆ ತನ್ನ ಚಿಕ್ಕಪ್ಪನಾದ 'ಮಫರೂಲ್-ಹಖ್' ಮತ್ತು ತನ್ನ ತಮ್ಮನಾದ 'ನಾಸಿರುದ್ದೀನ್'ನನ್ನು ಜೊತೆಗೆ ಕರೆದುಕೊಂಡು ನಶಾಪುರದಿಂದ ಘಜನಿಯ ಕಡೆಗೆ ಹೊರಟನು.

ಬಲ್ಗನಿಂದ ಮುಂದೆ ಹೋದನು. ಇಬ್ಬರ ಸೈನ್ಯಗಳು ಎದುರಾದಾಗ ಮಹಮದನು, ಅಮೀರ ಇಸ್ಮಾಯಿಲ್‌ನು ಯುದ್ಧಮಾಡದಂತೆ ಮತ್ತು ಇಬ್ಬರು ಸಹೋದರರಲ್ಲಿ ಒಪ್ಪಂದವಾಗುವಂತೆ ಕೊನೆಯ ಪ್ರಯತ್ನ ಮಾಡಿದನು. ಆದರೆ ಈ ಪ್ರಯತ್ನದಿಂದ ಯಾವ ಪ್ರಯೋಜನವಾಗಲಿಲ್ಲ, ಇಸ್ಮಾಯಿಲ್‌ನು ತನ್ನ ಹಟವನ್ನು ಬಿಡಲಿಲ್ಲ. ಸುಲ್ತಾನ ಮಹಮದನು ತನ್ನ ಸೈನ್ಯವನ್ನು ಯುದ್ಧದ ಸಿದ್ಧತೆಗಾಗಿ ಒಟ್ಟುಗೂಡಿಸಿದನು. ಇಸ್ಮಾಯಿಲ್‌ನು ಸಹ ತನ್ನ ಸರದಾರರೊಂದಿಗೆ ರಣರಂಗಕ್ಕೆ ಬಂದನು ಮತ್ತು ತನ್ನ ಸೈನ್ಯದ ಪ್ರತಿ ಭಾಗವನ್ನು ಪೂರ್ಣವಾಗಿ ಸಿದ್ಧಗೊಳಿಸಿದನು ಹಾಗೂ ಪೈಕರ ಅರಣ್ಯದ ಆನೆಗಳು ಜೊತೆಗಿದ್ದವು. ಇಬ್ಬರು ಸಹೋದರರ ಸೈನ್ಯಗಳಲ್ಲಿ ಯುದ್ಧವಾಯಿತು ಮತ್ತು ರಣರಂಗದಲ್ಲಿ ರಕ್ತದ ಕಾಲುವೆಗಳು ಹರಿದವು. ಕೊನೆಯಲ್ಲಿ ಸುಲ್ತಾನ ಮಹಮದನು ಸೈನ್ಯದ ಮಧ್ಯದಿಂದ ಎದ್ದು ಶತ್ರುವಿನ ಮೇಲೆ ಘೋರ ಆಕ್ರಮಣ ಮಾಡಿದನು. ಇದರಿಂದ ಎದುರಾಳಿಗೆ ಅತಿಯಾದ ನಷ್ಟವಾಯಿತು ಮತ್ತು ಸುಲ್ತಾನ ಇಸ್ಮಾಯಿಲ್‌ನ ಸೈನ್ಯವು ಓಡಿಹೋಗಿ ಘಜನಿ ಕೋಟೆಯಲ್ಲಿ ಆಶ್ರಯ ಪಡೆಯಿತು. ಸುಲ್ತಾನ ಮಹಮದನು ಈ ಜನರನ್ನು ಕೋಟೆಯಿಂದ ಹೊರತೆಗೆದು ರಾಜ್ಯದ ನಿಕ್ಷೇಪ ಇತ್ಯಾದಿಗಳನ್ನು ಸ್ವಾಧೀನ ಪಡಿಸಿಕೊಂಡನು ಮತ್ತು ಕೆಲವು ವಿಶ್ವಾಸಾರ್ಹರಾದ ಚಾಣಾಕ್ಷರನ್ನು ಅಲ್ಲಿಯ ಕಾರ್ಯಗಳಿಗಾಗಿ ನಿಯುಕ್ತಿ ಮಾಡಿ ಸ್ವತಃ ತಾನು ಬಲ್ಗ ಕಡೆ ಹೊರಟನು.

ಈ ಕಾಳಗ ನಡೆದ ಕೆಲವು ದಿನಗಳ ನಂತರ ಒಂದು ದಿನ ಅಮೀರ ಇಸ್ಮಾಯಿಲ್ ಹಾಗು ಸುಲ್ತಾನ ಮಹಮದ ತನ್ನ ಇಬ್ಬರು ಸಹೋದರರು ಜೊತೆಯಲ್ಲಿ ಕುಳಿತು ಲೋಕವಾರ್ತೆಗಳ ಕುರಿತು ಮಾತನಾಡುತ್ತಿರುವಾಗ ಸುಲ್ತಾನ ಮಹಮದನು ಕಾರಣಾಂತರದಿಂದ ಈ ಕಾಳಗದ ವಿಷಯದ ಬಗ್ಗೆ ಮಾತನಾಡುತ್ತ, ಇಸ್ಮಾಯಿಲ್‌ನನ್ನು ಕೇಳಿದನು, 'ಒಂದು ವೇಳೆ ಅದೃಷ್ಟವು ನಿನ್ನೊಂದಿಗಿದ್ದು ನೀನು ಗೆದ್ದುದಾದರೆ ನೀನು ನನ್ನೊಂದಿಗೆ ಯಾವ ರೀತಿಯಾಗಿ ವರ್ತಿಸುತ್ತಿದ್ದೆ?' ಇಸ್ಮಾಯಿಲ್‌ನು ಉತ್ತರಿಸಿದುದೇನೆಂದರೆ 'ನಾನು ಸುದೈವವಶಾತ್ ಗೆದ್ದ ಪಕ್ಷದಲ್ಲಿ ನಿನ್ನನ್ನು ಒಂದು

ಕೋಟೆಯಲ್ಲಿ ಬಂದಿಯಾಗಿಸುವ ಧೃಢನಿಶ್ಚಯ ಮಾಡುತ್ತಿದ್ದೆ, ಅಲ್ಲಿ ನಿನಗೆ ಸರ್ವ ರೀತಿಯ ಸುಖದ ಸಾಮಗ್ರಿಗಳನ್ನು ಪೂರೈಸುತ್ತಿದ್ದೆ.' ಸುಲ್ತಾನ ಮಹಮದನಿಗೆ ತನ್ನ ತಮ್ಮನ ಮನಸ್ಸಿನ ಮಾತು ತಿಳಿದಾಗ ಕಾಳಗದ ವಿಷಯವನ್ನು ನಿಲ್ಲಿಸಿ ಮೌನವಾದನು. ಕೆಲವು ದಿನಗಳ ನಂತರ ಸುಲ್ತಾನ ಮಹಮದನು ಅಮೀರ ಇಸ್ಮಾಯಿಲ್‌ನನ್ನು ಜರ್–ಜಾನದ ಕೋಟೆಯಲ್ಲಿ ಬಂದಿಯನ್ನಾಗಿರಿಸಿದನು ಮತ್ತು ಆತನಿಗೆ ಸುಖ ಸಂತೋಷದ ಸಮಗ್ರ ಸಾಮಗ್ರಿಗಳನ್ನು ಒದಗಿಸಿದನು. ಈ ರೀತಿಯಾಗಿ ಅಮೀರ ಇಸ್ಮಾಯಿಲ್ ತನ್ನ ಅಣ್ಣನೊಂದಿಗೆ ಹೇಗೆ ವರ್ತಿಸಬೇಕೆಂಬ ವಿಚಾರ ಮಾಡಿದ್ದನೊ ಅದು ಸ್ವತಃ ಆತನ ಮೇಲೆ ಜರುಗಿತು.

ಅಮೀನ–ಉಲ್–ಮಿಲ್ಲತ ಎಮಿನ್–ಅಲ್–ದೌಲಾ ಸುಲ್ತಾನ ಮೆಹಮೂದ್ ಗಝನವಿ

ಸುಲ್ತಾನ ಮಹಮದನ ವ್ಯಕ್ತಿತ್ವದಲ್ಲಿ ಇಹ ಮತ್ತು ಪರಕ್ಕೆ ಸಂಬಂಧಿಸಿದ ಸದ್ಗುಣಗಳಿದ್ದವೆಂದು ಎಲ್ಲ ಇತಿಹಾಸಕಾರರು ಒಪ್ಪುತ್ತಾರೆ ಮತ್ತು ಆತನು ಶೂರ, ವೀರ, ಉದಾರಿ ಮತ್ತು ನ್ಯಾಯಭೀರು ಆಗಿದ್ದು, ರಾಜ್ಯದ ಆಡಳಿತವನ್ನು ಧೃಢವಾಗಿಸಿ ಮತ್ತು ಯುದ್ಧದಲ್ಲಿ ಪಡೆದ ಗೆಲವುಗಳಿಂದಾಗಿ ದೇಶದ ಮೂಲೆ ಮೂಲೆಗಳಲ್ಲಿ ಪ್ರಸಿದ್ಧನಾಗಿದ್ದನು. ಈತನ ಯುದ್ಧಗಳ ನಿಜವಾದ ಕಾರಣ ಇಸ್ಲಾಮು. ಒತ್ತಾಯಪೂರ್ವಕವಾದರೂ ನ್ಯಾಯವನ್ನು ಹರಡುವುದು ಮತ್ತು ದಬ್ಬಾಳಿಕೆಗಳ ಅಡಿಪಾಯ ಕಿತ್ತೊಗೆಯಬೇಕೆನ್ನುವುದು ಸುಲ್ತಾನ ಮಹಮದನ ಉದ್ದೇಶವಾಗಿತ್ತು. ಈತನ ಧೈರ್ಯ ಹಾಗು ಶೌರ್ಯದ ಸಾತತ್ಯ ಸ್ಥಿತಿ ಹೇಗಿತ್ತೆಂದರೆ ಯುದ್ಧ ಭೂಮಿಯಲ್ಲಿ ಜಲಪ್ರಳಯದಂತೆ ಮುಂದಾಗಿ ಬರುತ್ತಿದ್ದ ಎರಿಳಿತಗಳ ಬಗ್ಗೆ ವಿಚಾರ ಮಾಡುತ್ತಲೇ ಇರಲಿಲ್ಲ. ಹತ್ತಿರ ಹಾಗು ದೂರದ ಸ್ಥಳದವರು ಸಹ ಸುಲ್ತಾನ ಮಹಮದನ ನ್ಯಾಯದ ಆಡಳಿತವನ್ನು, ನ್ಯಾಯಯುತ ಗುಣವನ್ನು ಹೊಗಳುತ್ತಿದ್ದರು. ಇಷ್ಟೆಲ್ಲಾ ಪ್ರಖ್ಯಾತಿ ಹಾಗು ಒಳ್ಳೆಯ ಅಭಿಪ್ರಾಯವಿದ್ದರೂ ಕೆಲವು ಇತಿಹಾಸಕಾರರು ಈತನನ್ನು ಲೋಭಿ ಹಾಗೂ ಜಿಪುಣನೆಂದು ನಿರೂಪಿಸಿದ್ದಾರೆ ಮತ್ತು ಇಷ್ಟೊಂದು ಸದ್ಗುಣ ಇದ್ದರೂ ಜಿಪುಣನೆಂಬ ಆರೋಪ ಮಾಡಲಾಯಿತು. ಆದರೆ, ವಿಖ್ಯಾತ ಇತಿಹಾಸಕಾರನಾದ ಮುಹಮ್ಮದ ಕಾಸೀಮ ಫರಿಶ್ತಾ ಅಭಿಪ್ರಾಯದಲ್ಲಿ ಈ ರೀತಿಯ ಉನ್ನತ ಮಟ್ಟದ ಹಾಗೂ ಶ್ರೇಷ್ಠ ರಾಜನಿಗೆ ಜಿಪುಣನೆಂದು ನಿರೂಪಿಸಿದ ಇತಿಹಾಸಕಾರರು ನ್ಯಾಯ ಮಾಡದೆ ಅಲಕ್ಷ್ಯ ಮಾಡಿದುದಕ್ಕೆ ಸಾಕ್ಷಿಯಾಗುತ್ತಾರೆ. ಈತನಿಗೆ ಹಣದ ಬಗ್ಗೆ ಪ್ರೀತಿ ಇದ್ದಿತೆಂಬುದು ಸತ್ಯ ಮತ್ತು ಸಾಧ್ಯವಾದಷ್ಟು ಹಣಸಂಗ್ರಹ ಮಾಡ ಬಯಸುತ್ತಿದ್ದನು. ಆದರೆ ಅದನ್ನು ವಿಶಾಲ ಹೃದಯದಿಂದ ವೆಚ್ಚ ಮಾಡಲೂ ಸಹ ಬರುತ್ತಿದ್ದು ಅದರಂತೆ ಖರ್ಚು ಮಾಡುತ್ತಿದ್ದನು.

ಫತೆ ಬಿಲಾದು ಪ್ರಾಂತಗಳು ಅಬು–ನಸರ್–ನಶಕಾತಿ ಮತ್ತು ಅಬು–ಅಲ್–ಫಜಲ್‌ನ ಗ್ರಂಥಗಳು ವಿಶ್ವಾಸಾರ್ಹವಾಗಿದ್ದು, ಈ ಗ್ರಂಥದಲ್ಲಿ, ಸುಲ್ತಾನ ಮಹಮದನ

ಆಸ್ಥಾನದಲ್ಲಿ ಕವಿಗಳು, ಮೇಧಾವಿಗಳು ಹಾಗೂ ಶೂರ, ವೀರರ ಸಂಖ್ಯೆಯಷ್ಟು, ಅನ್ಯ ರಾಜರ ಆಸ್ಥಾನದಲ್ಲಿ ಇರಲಿಲ್ಲವೆಂದು ಉಲ್ಲೇಖಿಸಲಾಗಿದೆ. ರಾಜನ ಅನುಗ್ರಹ ಹಾಗೂ ಬಹುಮಾನಾದಿಗಳು ಬುದ್ಧಿವಂತರನ್ನು ಹಾಗು ಮೇಧಾವಿಗಳನ್ನು ಏಕತ್ರ ಮಾಡುತ್ತವೆ ಎಂಬ ವಿಷಯವನ್ನು ತಿಳಿವಳಿಕೆಯುಳ್ಳವರು ಚೆನ್ನಾಗಿ ಬಲ್ಲರು. ಸುಲ್ತಾನ ಮಹಮದನು ಕಲಾವಿದರ ಸ್ನೇಹಿತನಾಗಿದ್ದು ಅವರಿಗೆ ಸಮೃದ್ಧವಾಗಿ ಕಾಣಿಕೆ ಮತ್ತು ಬಹುಮಾನಗಳನ್ನು ಕೊಡುತ್ತಿದ್ದನು. ನಿಗದಿತ ವೇತನವಲ್ಲದೆ ಪ್ರತಿ ವರ್ಷ ೪ ಲಕ್ಷ ಹೆಚ್ಚು ದರಮ್ ಇವರಲ್ಲಿ ಹಂಚುತ್ತಿದ್ದನು ಹಾಗು ನಾನಾ ರೀತಿಯಿಂದ ಅವರನ್ನು ಗೌರವಿಸಿ ಸಂತುಷ್ಟರನ್ನಾಗಿ ಮಾಡುತ್ತಿದ್ದನು. ಈ ಗುಣಗಳಿದ್ದರೂ ಸುಲ್ತಾನ ಮಹಮದನನ್ನು ಜಿಪುಣನೆಂದು ಹೇಳಲು ಎರಡು ಕಾರಣಗಳು ಕಂಡು ಬರುತ್ತವೆ. ಒಂದು ಫರ್ದೋಶಿ ತೌಸಿಯ ಕಥೆ, ಎರಡನೆಯದು ಸುಲ್ತಾನ ಮಹಮದ ತನ್ನ ಅಂತಿಮ ದಿನಗಳಲ್ಲಿ ಶ್ರೀಮಂತ ಪ್ರಜೆಗಳಿಂದ ಅವಶ್ಯಕತೆಯಿಲ್ಲದೆ ಹಣ ಬೇಡಿರುವುದು.

ರೂಪ ಹಾಗು ಗುಣಗಳು

ಇತಿಹಾಸಕಾರರ ಹೇಳಿಕೆ ಏನೆಂದರೆ, ಸುಲ್ತಾನ ಮಹಮದನ ರೂಪವು ಸುಂದರವಾಗಿರಲಿಲ್ಲ ಹಾಗೂ ಉತ್ತಮ ಅಂಗಸೌಷ್ಟವ ಇರಲಿಲ್ಲಾ. ಒಂದು ದಿನ ಈತನು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡನು. ಅದು ಲಕ್ಷಣವಾಗಿರದಿದ್ದ ಕಾರಣ ನೊಂದು ಬೇಸರಪಟ್ಟನು.

ತನ್ನ ಪ್ರಧಾನಿಯೊಂದಿಗೆ ಚರ್ಚಿಸುತ್ತಾ ಹೇಳಿದನು, 'ರಾಜರ ಮುಖವನ್ನು ನೋಡಿ ಪ್ರಜೆಗಳ ಕಣ್ಣಿನಲ್ಲಿ ಹೊಳಪು ಹುಟ್ಟುತ್ತದೆ. ಆದರೆ, ನನ್ನ ರೂಪವನ್ನು ನೋಡಿದವರಿಗೆ ತೊಂದರೆಯಾಗುತ್ತದೆ.' ಪ್ರಧಾನಿ ಉತ್ತರಿಸಿದನು 'ನಿಮ್ಮ ರೂಪವನ್ನು ಸಾವಿರ ಜನರಲ್ಲಿ ಒಬ್ಬನು ನೋಡಬಹುದು, ಆದರೆ ನಿಮ್ಮ ಗುಣಗಳಿಂದ ಎಲ್ಲರೂ ಪ್ರಭಾವಿತರಾಗಿದ್ದಾರೆ. ಗುಣಗಳಿಂದ ನೀವು ಶ್ರೇಷ್ಠರಾಗಿದ್ದರೆ, ಸದಾಕಾಲವೂ ಹಾಗೆಯೇ ಇದ್ದರೆ ಜನರಲ್ಲಿ ನಿಮ್ಮ ಬಗ್ಗೆ ಪ್ರೀತಿ, ಆದರ ಹುಟ್ಟುತ್ತವೆ.' ಮಹಮದನಿಗೆ ಪ್ರಧಾನಿಯ ಈ ಮಾತು ಬಹಳ ಪ್ರಿಯವಾಯಿತು ಮತ್ತು ಅದರಂತೆ ನಡೆದುಕೊಂಡನು. ಸುಲ್ತಾನ ಮಹಮದನು ತನ್ನಲ್ಲಿ ಎಷ್ಟೊಂದು ಶ್ರೇಷ್ಠ ಗುಣಗಳನ್ನು ಅಳವಡಿಸಿಕೊಂಡನೆಂದರೆ, ಇತರ ರಾಜರಿಗಿಂತ ಅಧಿಕವಾಗಿ ಪ್ರಜೆಗಳ ಪ್ರೀತಿ, ಆದರಗಳಿಗೆ ಪಾತ್ರನಾದನು.

ಜನನ

ಸುಲ್ತಾನನ ತಾಯಿಯು ಒಳ್ಳೆಯ 'ಜಾಬಿಲಿ'ಯ ಮಗಳಾಗಿದ್ದಳು. ಅದಕ್ಕಾಗಿ ಸುಲ್ತಾನ ಮಹಮದನನ್ನು ಜಾಬಿಲಿ ಎಂದು ಕೂಗುತ್ತಾರೆ. ಸುಲ್ತಾನ ಮಹಮದನು ಹಿಜರಿ ಶಕೆ ೩೫೭ರ ಆಶೂರಾ(ಮೊಹರಮ ತಿಂಗಳು)ದ ರಾತ್ರಿ ಹುಟ್ಟಿದನು. 'ಮೀನ್ಹಾಜ-ಅಲ್-ಸೀರಾಜ್' ಪುಸ್ತಕದಲ್ಲಿ ಜೂಜ ಜಾನಿಯು, ಸುಲ್ತಾನ ಮಹಮದನ ದೈವವು

ಸಾಹೇಬೇ ಮಿಲ್ಲತ್ ಅಸ್ಲಾಮಲಿಯಾ ಅಸ್ಲಾಮನಂತೆ ಉದಯೋನ್ಮುಖ ನಕ್ಷತ್ರವಾಗಿತ್ತು, ಎಂದು ಬರೆದಿದ್ದಾನೆ.

ಸುಲ್ತಾನ ಮಹಮದನ ಜನನಕ್ಕಿಂತ ಒಂದು ಘಳಿಗೆ ಮೊದಲು, ತಂದೆ ಸುಬಕ್ತಗೀನ್‌ನ ಕನಸಿನಲ್ಲಿ ಕಂಡಿದ್ದೇನೆಂದರೆ ತನ್ನ ಮನೆಯ ಒಲೆಯೊಳಗಿಂದ ಒಂದು ಮರ ಬೆಳೆದು ಎತ್ತರವಾಗಿ ಬೆಳೆದು ಪ್ರಪಂಚವೆಲ್ಲ ಅದರ ನೆರಳಿನಲ್ಲಿ ಬಂದು ಬಿಟ್ಟಿತು. ಸುಬಕ್ತಗೀನ್ ಕಣ್ತೆರೆದು ಕನಸಿನ ಬಗ್ಗೆ ಯೋಚಿಸುವಾಗ ಒಬ್ಬ ವ್ಯಕ್ತಿಯು ಬಂದು ಸುಲ್ತಾನ ಮಹಮದ ಜನಿಸಿದ ಶುಭ ಸಮಾಚಾರವನ್ನು ಹೇಳಿದನು. ಇದನ್ನು ಕೇಳಿ ಸಬಸ್ತಗೀನ್‌ನಿಗೆ ಅತ್ಯಂತ ಆನಂದವಾಯಿತು. ತನ್ನ ಕನಸಿನ ಆರಂಭ ಮತ್ತು ಅಂತ್ಯವು ಶುಭವಾಗಿದ್ದು, ಸಂತೋಷದಿಂದ ಆಶಾವಾದಿಯಾಗಿ ಆ ಮಗುವಿಗೆ ಮಹಮದ ಎಂದು ಹೆಸರಿಸಿದನು. ಆ ಬಾಲಕನು ಬೆಳೆದು ದೊಡ್ಡವನಾಗಿ ಒಬ್ಬ ಶ್ರೇಷ್ಠ ರಾಜನಾದನು ಮತ್ತು ಈತನ ರಾಜ್ಯವು ಎಷ್ಟೊಂದು ವಿಶಾಲವಾಗಿತ್ತೆಂದರೆ ಒಬ್ಬ ಮೇಧಾವಿಯು ಈತನ ನ್ಯಾಯದ ನೆರಳಿನಲ್ಲಿ ಸುಖ ಹಾಗು ಸಂತೋಷ ಪಡೆದನು. ಫಿರದೋಸಿಯು ತನ್ನ ಶಹಾನಾಮಾದಲ್ಲಿ ಈ ಕುರಿತು ಸೂಚಿಸಿದ್ದಾನೆ.

ಈ ಸಮಯದಲ್ಲಿ ಅಮೀರ ನಾಸಿರುದ್ದೀನ್ ಸಬಸ್ತಗೀನ್‌ನು ಸೌದುರಾ ನದಿಯ ತೀರದಲ್ಲಿದ್ದ ಹಿಂದೂಗಳ ಒಂದು ಪ್ರಖ್ಯಾತ ದೇವಾಲಯವನ್ನು ನಾಶ ಮಾಡಿದನು. ಅದೇ ರೀತಿ ಪರಮಾತ್ಮನ ಹಾಜರಿಯಲ್ಲಿ ಬಾಲಕ ಸುಲ್ತಾನ ಮಹಮದನ ಜನ್ಮಕ್ಕಾಗಿ ಧನ್ಯವಾದಗಳನ್ನರ್ಪಿಸಿದನು. ಇಸ್ಲಾಮಿ ಪೈಗಂಬರನ ದೈವದ ಸಮಾನವಾದ ತನ್ನ ಮಗನ ದೈವಬಲದಿಂದ ಮೂರ್ತಿ ಪೂಜಕರ ವಿರುದ್ಧ ಗೆಲುವನ್ನು ಸಾಧಿಸಿದನು.

ಆಡಳಿತದ ಆರಂಭದ ಸ್ಥಿತಿಗತಿಗಳು

ಮಹಮೂದಿ ಆಡಳಿತದ ಮೊದಲನೆಯ ವರ್ಷ ಸೀಸ್ಥಾನದಲ್ಲಿ ಒಂದು ಮರದಂತಿದ್ದ ಬಂಗಾರದ ಗಣಿ ಭೂಮಿಯಿಂದ ಉದ್ಭವಿಸಿತು. ಈ ಗಣಿಯನ್ನು ಎಷ್ಟು ಅಗೆದಷ್ಟೂ ಬಂಗಾರ ದೊರೆಯುತ್ತಿತ್ತು. ಈ ಗಣಿಯನ್ನು ಅಗೆದು ಅಗೆದು ಗಜ ಅಗಲವಾಯಿತು. ಈ ಚಿನ್ನದ ಗಣಿಯು ಕೆಲ ಕಾಲದ ವರೆಗೆ ಉಳಿದು ಸುಲ್ತಾನ ಮಹಮದನ ಕಾಲದಲ್ಲಿ ಒಂದು ಭೂಕಂಪವಾಗಿ ಅದು ನಶಿಸಿ ಹೋಯಿತು. ಸುಲ್ತಾನ ಮಹಮದ ತನ್ನ ಸಹೋದರ ಅಮೀರ ಇಸ್ಮಾಯಿಲ್‌ನೊಂದಿಗೆ ಯುದ್ಧದನಂತರ ವಿರಾಮದ ಸಮಯದಲ್ಲಿ ಬಲಖದ ಕಡೆ ಗಮನ ಹರಿಸಿದನು.

ಅಮೀರ ಮನ್-ಸೂರನು ಖರಾಸ್ಥಾನದ ಅಮೀರ ಅಲ್-ಮರಾಯಿಯ ಆಸ್ತಿ-ಪಾಸ್ತಿಯು ಮಹಮದ ಹಾಗೂ ಆತನ ತಂದೆಗೆ ಮುಕುಟಪ್ರಾಯವಾದ ಕಾಲದಲ್ಲಿ ಬಖ್ತೂನ ಜನರಿಗೆ ಒಪ್ಪಿಸಲಾದಾಗ ಸುಲ್ತಾನ ಮಹಮದನು ಈ ಸರಣಿಯಲ್ಲಿ ಒಬ್ಬ ವಿಶ್ವಾಸಿ ಅಮೀರನನ್ನು ಮನ್-ಸೂರನ ಹತ್ತಿರ ಬಖಾರಕ್ಕೆ ಕಳುಹಿಸಿದನು ಮತ್ತು

ಆಸ್ತಿ-ಪಾಸ್ತಿಯಿಂದ ದೂರ ಕಳುಹಿಸಿದುದಕ್ಕಾಗಿ ವಿಷಾದ ವ್ಯಕ್ತ ಪಡಿಸಿದ. ಅದಕ್ಕಾಗಿ ಮನ್-ಸೂರನು ಉತ್ತರಿಸಿದನು, 'ನಾನು ನಿಮಗೆ ಬಲ್ಗ, ತರಂದ ಹಾಗು ಹರಾತಿನ ಅಮೀರ-ಉಲ್-ಉಮ್ರಾ ಎಂದು ನಿಯುಕ್ತ ಮಾಡಿದೆನು. ಬಕ್ತೋಜನು ನಮ್ಮ ಪರಿವಾರದ ಹಳೆಯ ಹಿತೈಷಿ ಇದ್ದ ಕಾರಣ, ಕಾರಣವಿಲ್ಲದೆ ಈತನನ್ನು ಸ್ಥಾನದಿಂದ ಇಳಿಸುವುದು ಸೂಕ್ತವಲ್ಲ.'

ಸುಲ್ತಾನ ಮಹಮದನು ಅಬುಲ್-ಹಸನನಿಗೆ ಬಹುಮಾನ ಹಾಗೂ ಇತರ ವಸ್ತುಗಳೊಂದಿಗೆ ಅಮೀರ ಮನ್-ಸೂರನಿಗೆ, 'ಬಾದಶಹರ ದೂರ ದೃಷ್ಟಿಯಿಂದ ನಮ್ಮಲ್ಲಿದ್ದ ಪರಸ್ಪರ ಸ್ನೇಹ ಹಾಗೂ ವಿಶ್ವಾಸದ ತಳಹದಿಯು ಅಲಕ್ಷ್ಯದಿಂದ ದುರ್ಬಲಗೊಂಡಿದ್ದವು. ಅವು ನನ್ನ ತಂದೆಯ ಸೇವೆ ಗಮನಿಸಿ ಕಡೆಗಾಣಿಸಲಾಗದೆಂದು ನಾನು ಆಶಿಸುತ್ತೇನೆ ಹಾಗೂ ಜಗತ್ತಿನ ಯಾವ ಶಕ್ತಿಯೂ ನಮ್ಮಲ್ಲಿದ್ದ ಪರಸ್ಪರ ಪ್ರೀತಿ ಮತ್ತು ಶಕ್ತಿಯನ್ನು ಅಳಿಸಿ ರಾಜ್ಯದ ತಳಹದಿಯನ್ನು ನಿರ್ನಾಮ ಮಾಡಲು ಸಾಧ್ಯವಿಲ್ಲ.'ಎಂಬ ಸಂದೇಶ ಕಳುಹಿಸಿದನು ಅಬುಲ್-ಹಸನ ಹಮೂಯಿ ಬುಖಾರಾ ತಲುಪಿದಾಗ ಅಮೀರ ಮನ್-ಸೂರನು ತನ್ನ ಪ್ರಧಾನಿಯಾಗಲು ಆಸೆ ಹುಟ್ಟಿಸಿ, ತನ್ನಲ್ಲಿಯೇ ಉಳಿಸಿಕೊಂಡನು ಮತ್ತು ಸುಲ್ತಾನ ಮಹಮದನಿಗೆ ಯಾವ ಉತ್ತರವನ್ನು ಕೊಡಲಿಲ್ಲ. ಅದಕ್ಕಾಗಿ ಅನಿವಾರ್ಯವಾಗಿ ಈಗ ಸುಲ್ತಾನ ಮಹಮದ ನಿಶಾಪುರದ ಮೇಲೆ ದಾಳಿ ಮಾಡಿದನು. ಬಕ್ತೋಜನನಿಗೆ ಈ ದಾಳಿಯ ವಿಷಯ ತಿಳಿದಾಗ ಪಟ್ಟಣವನ್ನು ತ್ಯಜಿಸಿ ಓಡಿಹೋದನು. ಈ ವಿಷಯವನ್ನು ಒಂದು ಪತ್ರದ ಮೂಲಕ ಅಮೀರ ಮನ್-ಸೂರನಿಗೆ ತಿಳಿಸಿದನು. ಅಮೀರ ಮನ್-ಸೂರನು ವಿಷಯದ ಸತ್ಯತೆಯನ್ನು ಕಂಡು ಸೈನ್ಯವನ್ನು ಸಿದ್ಧಮಾಡಿಕೊಂಡು ಯೌವನದ ಗುಂಗಿನಲ್ಲಿ ಸುಲ್ತಾನ ಮಹಮದನನ್ನು ಎದುರಿಸಲು ನಶಾಪುರದ ಕಡೆ ಹೊರಟು ನಿಂತನು ಹಾಗೂ ಸರಖಸ್‌ನಲ್ಲಿ ಹೋಗಿ ವಾಸಮಾಡಿದನು.

ಸುಲ್ತಾನ ಮಹಮದನಿಗೆ ನಿಜವಾದ ಸ್ಥಿತಿಗತಿಗಳ ಸಂಪೂರ್ಣ ಅರಿವಾದಾಗ ಅಮೀರ ಮನ್-ಸೂರ ಈತನನ್ನು ಎದುರಿಸಲು ಯಾವ ರೀತಿಯಲ್ಲಿಯೂ ಸಾಧ್ಯವಿಲ್ಲ ಮತ್ತು ಉಪಕೃತನಾದುದನ್ನು ಅಲಕ್ಷಿಸಿದ ತಪ್ಪನ್ನು ಅಳಿಸಿಹಾಕುವುದು ಸೂಕ್ತವೆಂದು ತಿಳಿದು ನೇಶಾಪುರವನ್ನು ಬಿಟ್ಟು ಮರಗಾಬಗೆ ಹೋದನು. ಇದೇ ಕಾಲದಲ್ಲಿ ಬಕ್ತೋಜನ್‌ನು ಫಾಯಕನ ಸಲಹೆ ಮೇರೆಗೆ ವಿದ್ರೋಹ ಮಾಡಿದನು ಮತ್ತು ಅಮೀರ ಮನ್-ಸೂರನನ್ನು ಬಂದಿಯಾಗಿಸಿ ಆತನ ಕಣ್ಣುಗಳಲ್ಲಿ ಬೆಂಕಿಯಿಂದ ಕಾದ ಸಲಾಕೆಗಳಿಂದ ತಿವಿಸಿದನು. ಈತನ ಅಪ್ರಾಪ್ತ ತಮ್ಮನಾದ ಅಬ್ದುಲ್-ಮಲಕ್‌ನನ್ನು ಸಿಂಹಾಸನದ ಮೇಲೆ ಕೂಡಿಸಿದನು ಮತ್ತು ಸ್ವತಃ ಸುಲ್ತಾನ ಮಹಮದನ ಭಯದಿಂದ 'ಮರೋ'ಗೆ ಓಡಿಹೋದನು. ಈ ವಿಷಯ ಸುಲ್ತಾನ ಮಹಮದನಿಗೆ ತಿಳಿದಾಗ ಕೂಡಲೆ ಆತನನ್ನು ಹಿಮ್ಮೆಟ್ಟಿ 'ಮರೋ'ಗೆ ಹೋದನು. ಬಕ್ತೂನ್ ಮತ್ತು ಫಾಯಕ

ಇವರೊಂದಿಗೆ ಯುದ್ಧ ಮಾಡಿದನು. ಇವರಿಬ್ಬರು ದುರ್ದೈವಿಗಳು ಉಪಕಾರ ಸ್ಮರಣೆಯಿಲ್ಲದೆ ವಿದ್ರೋಹಿಗಳಾದ ಕಾರಣ ಅವರಿಗೆ ಶಿಕ್ಷೆ ಸಿಗಲೇ ಬೇಕಾಗಿತ್ತು. ಅದಕ್ಕಾಗಿ ಈ ಯುದ್ಧದಲ್ಲಿ ಅವರಿಗೆ ಸೋಲಾಯಿತು ಮತ್ತು ಸುಲ್ತಾನ ಮಹಮದನು ಗೆದ್ದು ಸಫಲನಾದನು. ಫಾಯಕನು ಅಮೀರ ಮನ್-ಸೂರನ ತಮ್ಮನಾದ ಅಬ್ದು ಮಕಲ್ ಜೊತೆಗೆ ಕರೆದುಕೊಂಡು ಬಖಾರಾದ ಕಡೆ ಓಡಿಹೋದನು ಮತ್ತು ಬಕ್ತೂಜನ್‌ನು ನಶಾಪುರದತ್ತ ಹೊರಟನು. ಕೆಲ ಕಾಲದ ನಂತರ ಬಕ್ತೂಜನ್‌ನು ಪುನಃ ಸುಲ್ತಾನ ಮಹಮದನೊಂದಿಗೆ ಯುದ್ಧ ಮಾಡಲು ನಿಶ್ಚಯಿಸಿ ಬಖಾರಾಕ್ಕೆ ಹೋಗಿ ಅಲ್ಲಿ ತನ್ನ ಚೆದರಿದ ಸೈನ್ಯವನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದನು. ಆದರೆ ಸೈನ್ಯವು ಏಕತ್ರವಾಗುವ ಮುನ್ನ ಈತನು ಮೃತಪಟ್ಟನು. ಫಾಯಕನ ಮರಣದ ನಂತರ ಕೂಡಲೆ ಬಾದಲ್ ಮೂಲ್ಕ ಖಾನ ಕಾಶಘರನಿಂದ ಬುಖಾರಾ ತಲುಪಿ, ಅಬ್ದುಲ್ ಮಲಕ್ಮತ್ತುನ ಹಿತೈಷಿಗಳನ್ನು ನಿರ್ನಾಮ ಮಾಡಿದನು. ಅಬ್ದುಲ್ ಮಲಕ್‌ನ ಜೊತೆಗೆ ನೂರಾ ಇಪ್ಪತ್ತೆಂಟು ವರ್ಷ ಆಳ್ವಿಕೆ ಮಾಡುತ್ತ ಬಂದಿದ್ದ ಅಲ್-ಸಾಮಾನ ಕೂಡಾ ಮೃತಪಟ್ಟನು.

ಪ್ರಶಸ್ತಿ ಹಾಗು ಗೌರವ

ಈ ಸಣ್ಣ ಪುಟ್ಟ ತೊಂದರೆಗಳನ್ನು ಪರಿಹರಿಸಿದ ನಂತರ ಸುಲ್ತಾನ ಮಹಮದನು ಶಾಂತತೆ ಹಾಗು ಸಂತೃಪ್ತತೆಯಿಂದ ರಾಜ್ಯವಾಳಿದನು. ಈತನ ವೈಭವ ಹಾಗೂ ಪರಾಕ್ರಮದ ಕೀರ್ತಿ ಪ್ರಪಂಚದಲ್ಲಿ ಹರಡಿದಾಗ ಬಗದಾದಿನ ಖಲಿಫಾ ಅಲ್-ಖಾದರ್-ಬಾಲ್ಲಾ ಅಬ್ಬಾಸಿ ಒಂದು ಬೆಲೆಬಾಳುವ ಉಡುಪನ್ನು ಮತ್ತು ಅಮೀನ್-ಉಲ್-ಮಿಲ್ಲತ್ ಹಾಗು ಎಮೀನ್-ಅಲ್-ದೌಲಾ ಪ್ರಶಸ್ತಿ ಪ್ರದಾನ ಮಾಡಿದನು. ಈ ತರಹದ ಉಡುಪು ಖಲಿಫಾನು ಮೊದಲು ಯಾರಿಗೂ ಕಳುಹಿಸಿರಲಿಲ್ಲ.

ಹಿಜರಿ ಶಕೆ ೩೯೦ರ ಜೀಖದಾ ತಿಂಗಳ ಕೊನೆಯಲ್ಲಿ ಸುಲ್ತಾನ ಮಹಮದ ಬಲ್ಗನಿಂದ ಹರಾತಗೆ ಬಂದು, ಅಲ್ಲಿಂದ ಸೀಸ್ಥಾನಕ್ಕೆ ಹೋದನು. ಇಲ್ಲಿಯ ರಾಜನಾದ ಖೈಫ-ಬಿನ್-ಅಹ್ಮದನನ್ನು ತನ್ನ ಆಧೀನನನ್ನಾಗಿ ಮಾಡಿಕೊಂಡು ಮರುಳಿ ಘಜನಿಗೆ ಬಂದನು. ಘಜನಿಗೆ ಬಂದ ನಂತರ ಮಹಮದನು ಹಿಂದುಸ್ತಾನದ ಕಡೆ ಗಮನ ಹರಿಸಿದನು ಮತ್ತು ಹಿಂದುಸ್ತಾನದ ಕೆಲವು ಕೋಟೆಗಳನ್ನು ಜಯಿಸಿ ತನ್ನ ರಾಜಧಾನಿಗೆ ಬಂದನು. ನ್ಯಾಯಯುತವಾದ ಆಡಳಿತ ನಡೆಸಿ ಪ್ರಜೆಗಳ ಮನ ಗೆದ್ದನು. ಐಲಕ್ ಖಾನನು ಮಾರ್‍ವಾ ಹಾಗು ಅಲ್-ಜಹರ ಪ್ರದೇಶಗಳನ್ನು ಅಲ್-ಸಾಮಾನಿನ ಸ್ವಾಧೀನದಿಂದ ಪಡೆದು ಸುಲ್ತಾನ ಮಹಮದನ ಸೇವೆಯಲ್ಲಿ ವಿಜಯಪತ್ರವನ್ನು ಕಳುಹಿಸಿ ಮತ್ತು ಖರಾಸ್ಥಾನ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡ ಶುಭವಾರ್ತೆ ತಿಳಿಸಿದನು. ಇದರ ಫಲವಾಗಿ ಐಲಕ್ ಖಾನ ಮತ್ತು ಸುಲ್ತಾನ ಮಹಮದರ ಮಧ್ಯೆ ಗಾಢವಾದ ಸ್ನೇಹ ಆರಂಭವಾಯಿತು. ಅದಕ್ಕೆ ಉತ್ತರವಾಗಿ ಆ ಕಾಲದ ಪ್ರಸಿದ್ಧ ಮೇಹದಸ್-ಅಬು-ಅಲ್-ತಲಿಬ ಸಹಲ್-ಬಿನ್-ಸುಲೇಮಾನ ಮಾಲೂಕೀಯನ್ನು

ರಾಜಪ್ರತಿನಿಧಿಯನ್ನಾಗಿ ಮಾಡಿ ಐಲಕ್ ಖಾನನ ಹತ್ತಿರ ಕಳುಹಿಸಿದನು. ಆತನ ಮಗಳೊಂದಿಗೆ ವಿವಾಹವಾಗಲು ಕೋರಿದನು. ಇದಲ್ಲದೆ, ಅತ್ಯಂತ ಬೆಲೆಬಾಳುವ ಅಮೂಲ್ಯವಾದ ವಜ್ರ- ವೈಡೂರ್ಯ, ಆಭರಣ, ಸುಗಂಧ ದ್ರವ್ಯ, ಹಿಂದುಸ್ತಾನದ ಖಡ್ಗಗಳು, ಪೈಕರ ಅರಣ್ಯದ ಆನೆಗಳು, ಕಣ್ಣು ಕೋರೈಸುವ ವಸ್ತುಗಳು ಮತ್ತು ಉತ್ತಮ ತಳಿಯ ಕುದುರೆಗಳು ಅಬುಲ್-ತಯ್ಯಬ್‌ನೊಂದಿಗೆ ಐಲಕ್ ಖಾನನಿಗಾಗಿ ಕಳುಹಿಸಿದನು. ಇಮಾಮ್-ಅಬುಲ್-ತಯ್ಯಬ್ ತುರ್ಕಿಸ್ಥಾನ ತಲುಪಿದಾಗ ಐಲಕ್ ಖಾನನ ಆದೇಶದ ಮೇರೆಗೆ ತುರ್ಕಿಗಳು ಬಹಳಷ್ಟು ಜನ ಇಸ್ಲಾಮ ಮತವನ್ನು ಸ್ವೀಕರಿಸಿದ್ದರು. ಇವರೆಲ್ಲರೂ ಸುಸಜ್ಜಿತರಾಗಿ ಗೌರವವನ್ನು ಸೂಚಿಸಿದರು. ಇಮಾಮ್ ಅಬುಲ್ ತಯ್ಯಬ್‌ನು ತನ್ನ ಕರ್ತ್ಯವ್ಯವು ಮುಗಿಯುವವರೆಗೆ ಅಲ್ಲಿಯೇ ವಾಸವಾಗಿದ್ದು ಐಲಕ್ ಖಾನನ ಮಗಳೊಂದಿಗೆ ಸುಲ್ತಾನ ಮಹಮದನ ನಿಖ್ಖಾ(ವಿವಾಹ)ದ ಮಾತುಕತೆ ಮುಗಿಸಿದ ನಂತರ ಅಬು-ಅಲ್-ತಯ್ಯಬ್, ತನ್ನ ಜೊತೆಗೆ ಐಲಕ್ ಖಾನನು ಕೊಟ್ಟ ಬೆಲೆಬಾಳುವ ಉಡುಗೊರೆಗಳು, ಚಿನ್ನ, ಬೆಳ್ಳಿ, ಸುಂದರ ಯುವತಿಯರು, ಗುಲಾಮರು ಮತ್ತಿತರ ಅತಿ ಬೆಲೆಬಾಳುವ ವಸ್ತುಗಳೊಂದಿಗೆ ಹಿಂದಿರುಗಿದನು. ಇವೆಲ್ಲವನ್ನು ಸುಲ್ತಾನನ ಮಹಮದನ ಸೇವೆಯಲ್ಲಿ ಅರ್ಪಿಸಿದನು. ಸುಲ್ತಾನ ಮಹಮದನು ಇಮಾಮ್ ಅಬುಲ್ ತಯ್ಯಬ್‌ನು ಸಲ್ಲಿಸಿದ ಸೇವೆಗಾಗಿ ನಾನಾ ಬಗೆಯ ಬಹುಮಾನಗಳನ್ನು ನೀಡಿದನು.

ಆಮೇಲೆ ಕೆಲ ಕಾಲದವರೆಗೆ ಸುಲ್ತಾನ ಮಹಮದ ಹಾಗು ಐಲಕ್ ಖಾನನ ಮಧ್ಯೆ ಐಕ್ಯತೆ ಹಾಗು ಆತ್ಮೀಯ ಸಂಬಂಧ ಉಂಟಾಯಿತು.

ಆದರೆ ಕಾಲಚಕ್ರದ ಗತಿಯಲ್ಲಿ, ಕಪಟಿಗಳ ಪ್ರಯತ್ನದಿಂದ ಇವರಿಬ್ಬರ ಆತ್ಮೀಯ ಸ್ನೇಹವು ಪ್ರಾಣಾಂತಿಕ ವೈರತ್ವಕ್ಕೆ ಬದಲಾಯಿತು.

■

*

ಹಿಂದುಸ್ತಾನದ ಮೇಲೆ ದಾಳಿಗಳು

ಜೈಪಾಲನೊಡನೆ ಯುದ್ಧ

ಸುಲ್ತಾನ ಮಹಮದನು ತನ್ನ ರಾಜ್ಯದ ಕರ್ತ್ಯವ್ಯಗಳನ್ನು ಪೂರೈಸಿದ ನಂತರ ಹಿಂದುಸ್ತಾನದ ಮೇಲೆ ಮತ್ತು ಮುಸಲ್ಮಾನರಲ್ಲದ ಜನರೊಂದಿಗೆ ದಾಳಿ ಮಾಡಲು ಮನಸ್ಸಿನಲ್ಲಿಯೇ ನಿರ್ಧರಿಸಿದ್ದನು. ತನ್ನ ಮನದಿಂಗಿತವನ್ನು ಕಾರ್ಯಗತಗೊಳಿಸಲು ಪ್ರತಿ ವರ್ಷ ಒಂದು ವಿಶಿಷ್ಟ ಕಾಲದಲ್ಲಿ ಹಿಂದುಗಳ ಜೊತೆಗೆ ಯುದ್ಧಮಾಡುವ ಧೃಢ ನಿರ್ಧಾರ ಮಾಡಿದನು. ಹಿಜರಿ ಶಕೆ ೩೬೧ರ ಶವಾಲ ತಿಂಗಳಲ್ಲಿ ೧೦ ಸಾವಿರ ಸೈನಿಕರೊಂದಿಗೆ ಘಜನಿಯಿಂದ ಪೇಶಾವರಗೆ ಬಂದನು. ರಾಜಾ ಜೈಪಾಲನು ಸಹ ೧೨ ಸಾವಿರ ಕುದುರೆಸವಾರರು, ೩೨ ಸಾವಿರ ಕಾಲ್ದಳದವರು, ೩೦೦ ಆನೆಗಳಿದ್ದ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಮಹಮದನನ್ನು ಎದುರಿಸಲು ಹೊರಟನು. ಹಿಜರಿ ಶಕೆ ೩೬೨ ಮೊಹರಂ ತಿಂಗಳ ೮ನೆಯ ದಿನ ಸೋಮವಾರ ಎರಡೂ ರಾಜ್ಯದ ಸೈನ್ಯಗಳು ಯುದ್ಧ ಮಾಡಿದವು. ಎರಡೂ ಸೈನ್ಯಗಳು ಧೈರ್ಯ ಹಾಗು ಶೌರ್ಯದಿಂದ ಕಾದಾಡಿದರು. ಅಂತಿಮವಾಗಿ ಸುಲ್ತಾನ ಮಹಮದನಿಗೆ ಜಯವಾಯಿತು. ಮುಸಲ್ಮಾನರು ಗೆದ್ದ ಕಾರಣ ಮಹಮದನು 'ಗಾಝಿ' ಎಂಬ ಹೆಸರಿನಿಂದ ಪ್ರಸಿದ್ಧನಾದನು. ರಾಜಾ ಜೈಪಾಲನ ೧೫ ಜನ ಮಕ್ಕಳು ಮತ್ತು ಸಂಬಂಧಿಕರು ಬಂದಿಯಾದರು. ಜೈಪಾಲನ ಸೈನ್ಯದ ೫ ಸಾವಿರ ಸೈನಿಕರು ಹತರಾದರು, ಉಳಿದ ಸೈನಿಕರು ದಿಕ್ಕೆಟ್ಟು ಓಡಿಹೋದರು. ಈ ಯುದ್ಧದಲ್ಲಿ ಸಾಕಷ್ಟು ವಸ್ತುಗಳು ಮಹಮದನ ಕೈಸೇರಿದವು. ಅನ್ಯ ವಸ್ತುಗಳೊಂದಿಗೆ ೧೬ ಕೈದಿಗಳ ಕೊರಳಲ್ಲಿದ್ದ ಹಾರಗಳನ್ನು ತೆಗೆದು ಮಹಮದನಿಗೆ ಅರ್ಪಿಸಲಾಯಿತು. ಪ್ರತಿಯೊಂದು ಹಾರದ ಬೆಲೆ ಸರಾಫರ ಹೇಳಿಕೆಯ ಪ್ರಕಾರ ಸುಮಾರು ೧ ಲಕ್ಷ ೮೦ ಸಾವಿರ ದಿನಾರ ಬೆಲೆಬಾಳುತ್ತಿತ್ತು. ಸುಲ್ತಾನ ಮಹಮದನು ಪೇಶಾವರನಿಂದ ಪೇಹಂದಾ ಕೋಟೆಗೆ ಹೋದನು ಮತ್ತು ಅದನ್ನು ಗೆದ್ದು ಇಸ್ಲಾಮಿ ರಾಜ್ಯದಲ್ಲಿ ಸೇರಿಸಿದನು. ವಸಂತ ಋತು ಆರಂಭವಾದಾಗ, ಸುಲ್ತಾನ ಮಹಮದನು

ರಾಜ ಜೈಪಾಲ ಮತ್ತು ಇತರ ಬಂದಿಗಳನ್ನು ತನ್ನ ಸೇವಕರನ್ನಾಗಿ ಮಾಡಿ ಬಂಧನದಿಂದ ತೆರವುಗೊಳಿಸಿದನು ಮತ್ತು ಬಂಡುಕೋರ ಅಫಘಾನ್ ಸರದಾರರನ್ನು ಕೊಲ್ಲಿಸಿದನು ಮತ್ತು ಕೆಲವು ಜನರನ್ನು ತನ್ನ ಗುಲಾಮರನ್ನಾಗಿಸಿ ಘಜನಿಗೆ ಮರಳಿದನು.

ಒಬ್ಬ ರಾಜನು ಎರಡು ಬಾರಿ ಮುಸಲ್ಮಾನರಿಂದ ಸೋಲನ್ನು ಅನುಭವಿಸಿ ಅಥವಾ ಅವರ ಬಂದಿಯಾದರೆ ಆತನು ಪುನಃ ರಾಜನಾಗಲಾರ ಮತ್ತು ಇಂತಹ ಪಾಪವನ್ನು ಕೇವಲ ಅಗ್ನಿ ಮಾತ್ರ ಶುದ್ಧಗೊಳಿಸಬಹುದು, ಇದು ಹಿಂದುಗಳ ನಂಬಿಕೆಯಾಗಿತ್ತು. ಜೈಪಾಲನು ಮಹಮದನಿಂದ ಎರಡು ಬಾರಿ ಸೋಲನ್ನು ಅನುಭವಿಸಿದ್ದನು. ಹಿಂದುಗಳ ಸಂಪ್ರದಾಯದಂತೆ ತನ್ನ ಮಗ 'ಆನಂದಪಾಲ'ನನ್ನು ಯುವರಾಜನನ್ನಾಗಿ ನಿಯಮಿಸಿ ಸ್ವತಃ ತನ್ನನ್ನು ಉರಿಯುವ ಅಗ್ನಿಗೆ ಸಮರ್ಪಣೆ ಮಾಡಿಕೊಂಡು ಆಹುತಿಯಾದನು.

ಭಾತನಾ ಗೆಲ್ಲುವಿಕೆ

ಹಿಜರಿ ಶಕೆ ೩೯೩ ರಲ್ಲಿ ಸುಲ್ತಾನ ಮಹಮದನು ಪುನಃ ಸೀಸ್ತಾನಕ್ಕೆ ಹೋದನು ಮತ್ತು ಈ ಸಾರಿ 'ಖೈಫ-ಬಿನ್-ಖೈಸ'ನನ್ನು ತನ್ನ ಜೊತೆಗೆ ಘಜನಿಗೆ ತಂದನು. ಇದಾದ ಕೆಲವು ಕಾಲದನಂತರ ಹಿಂದುಸ್ತಾನವನ್ನು ಗೆಲ್ಲಲು ಪುನಃ ನಿಶ್ಚಯಿಸಿದನು. ಅವನು ಹಿಜರಿ ಶಕೆ ೩೯೫ ರಲ್ಲಿ ಘಜನಿಯಿಂದ 'ಭಾತನಾಕ್ಕೆ' *(ಮುಲ್ತಾನಿನ ಹತ್ತಿರವಿರುವ ಒಂದು ಸ್ಥಾನ 'ಭಾಟಿಯಾ'. ಇದು ಒಬ್ಬ ಹಿಂದು ರಾಜನ ರಾಜಧಾನಿಯಾಗಿತ್ತು) ಹೊರಟನು. ಮುಲ್ತಾನ ಗಡಿಯಿಂದ ಹೊರಟು ಭಾತನಾದಲ್ಲಿ ವಾಸಮಾಡಿದನು. ಭಾತ್ನಾದ ಸುತ್ತ-ಮುತ್ತ ಇರುವ ಕೋಟೆಯು ಬಹಳಷ್ಟು ಎತ್ತರವಾಗಿದ್ದು ಭದ್ರವಾಗಿತ್ತು ಮತ್ತು ಇದರ ಸುತ್ತ-ಮುತ್ತ ಕಂದಕವಿತ್ತು. ಅದರ ಆಳವು ಗೊತ್ತಿರಲಿಲ್ಲ, ಈ ಕಂದಕದ ಮುಖವು ಬಹಳ ಅಗಲವಾಗಿತ್ತು. ಭಾತ್ನಾದ ರಾಜನ ಹೆಸರು ಬಜೆರಾವ್ ಎಂದಿತ್ತು, ಈತನಿಗೆ ತನ್ನ ಸೈನ್ಯ ಸಂಖ್ಯೆ, ಆನೆಗಳ ಶಕ್ತಿಯ ಮೇಲೆ ಬಹಳ ಅಭಿಮಾನವಿತ್ತು. ಈ ಅಭಿಮಾನದಿಂದ, ಸಬಸ್ತಗೀನ್‌ನ ಹಿಂದುಸ್ತಾನದ ನಾಯಬರಾಗಲಿ ಅಥವಾ ಜೈಪಾಲನ್ನಾಗಲಿ ಲಕ್ಷಿಸುತ್ತಿರಲಿಲ್ಲ. ಸುಲ್ತಾನ ಮಹಮದನು ಬಜೆರಾವ್‌ನ ಮೇಲೆ ಆಕ್ರಮಣ ಮಾಡಲು ಮುನ್ನುಗ್ಗಿದಾಗ ತನ್ನ ಸೈನ್ಯವನ್ನು ಮುಸಲ್ಮಾನರ ವಿರುದ್ಧ ನಿಲ್ಲಿಸಿದನು. ಇಬ್ಬರ ಮಧ್ಯೆ ಮೂರು ದಿನಗಳವರೆಗೆ ಯುದ್ಧವಾಯಿತು. ಒಬ್ಬರನ್ನೊಬ್ಬರು ಗೆಲ್ಲಲು ಪೂರ್ಣ ಪ್ರಯತ್ನ ಮಾಡಿದರು. ಆದರೆ, ಯಾವ ಪರಿಣಾಮವೂ ಆಗಲಿಲ್ಲ. ಆಮೇಲೆ ಮುಸಲ್ಮಾನರ ಸೈನ್ಯವು ರಣರಂಗದಿಂದ ಹಿಂದೆಗೆಯುವ ಸನ್ನಿವೇಶ ಒದಗಿತು ಮತ್ತು ಹಿಂದುಗಳಿಗೆ ಜಯವಾಗುವ ಸಂಭವ ಕಂಡು ಬಂದಿತು. ಸುಲ್ತಾನ ಮಹಮದನು ತನ್ನ ಸೈನ್ಯದಲ್ಲಿ ಡಂಗುರ ಸಾರಿ ಈ ದಿನ 'ಸುಲ್ತಾನಿ ಯುದ್ಧ' ಆಗುವುದು. ಪ್ರತಿಯೊಬ್ಬ ಸೈನಿಕನು, ತರುಣನಾಗಲಿ ಅಥವಾ ವೃದ್ಧನಾಗಲಿ ಪ್ರಾಣಾರ್ಪಣೆಗೆ ಸಿದ್ಧನಾಗತಕ್ಕದ್ದು ಮತ್ತು ಶತ್ರುಗಳ ಎದುರು

ರಣಾಂಗಣದಲ್ಲಿ ಬರಬೇಕು ಎಂದು ಆಜ್ಞೆ ಮಾಡಿದನು. ಬಜೆರಾಯನಿಗೆ ಮುಸಲ್ಮಾನರ ಪ್ರಾಣಾರ್ಪಣೆಯ ಸಮಾಚಾರ ತಿಳಿದಾಗ, ಆತನು ದೇವಸ್ಥಾನಕ್ಕೆ ಬಂದು ದೇವತೆಗಳ ಸಹಾಯ ಕೋರಿದನು ಮತ್ತು ತನ್ನ ಸೈನ್ಯಕ್ಕೆ ಸುಸಜ್ಜಿತರಾಗಲು ಆದೇಶಿಸಿದನು. ಆತನು ತನ್ನ ಸೈನ್ಯದೊಡನೆ ಬಹಳ ವೈಭವದಿಂದ ಪಟ್ಟಣದಿಂದ ಹೊರಟು ರಣಾಂಗಣಕ್ಕೆ ಬಂದನು. ಮುಸಲ್ಮಾನರು ಎಡಭಾಗ ಮತ್ತು ಬಲಭಾಗ, ಎರಡೂ ಕಡೆಯಿಂದ ಏಕ ಕಾಲಕ್ಕೆ ಹಿಂದುಗಳ ಮೇಲೆ ಆಕ್ರಮಣ ಮಾಡಿದರು. ಬೆಳಗಿನಿಂದ ಸಾಯಂಸಂಧ್ಯೆಯವರೆಗೆ ಧೈರ್ಯ ಹಾಗು ಶೌರ್ಯದಿಂದ ಹೋರಾಡಿದರು. ಈ ಯುದ್ಧದಲ್ಲಿ ಎಣಿಕೆಗೆ ಬಾರದಷ್ಟು ಸೈನಿಕರು ಮೃತಪಟ್ಟರು. ಆದರೆ, ರಣಭೂಮಿಯಿಂದ ಯಾರೂ ಹಿಂದೆ ಸರಿಯಲಿಲ್ಲ.

ಸುಲ್ತಾನ ಮಹಮದನು ದಿಗ್ಭ್ರಮೆಗೊಂಡು ಅಲ್ಲಾಹನನ್ನು ಗೆಲುವಿಗಾಗಿ ಪ್ರಾರ್ಥಿಸಿ ಹಜ್ರತ್ ಖತ್‌ಮುಲ್-ಉಮರ-ಸೈಲೀನ್‌ನ ಸಹಾಯ ಕೋರಿದನು.

ಸುಲ್ತಾನನು ತನ್ನ ಸೈನ್ಯದ ಮಧ್ಯದಿಂದ ಹಿಂದೂಗಳ ಸೈನ್ಯದ ಮಧ್ಯಭಾಗದ ಮೇಲೆ ದಾಳಿ ಮಾಡಿದನು. ಘೋರವಾದ ಈ ದಾಳಿಯಿಂದ ಹಿಂದುಗಳ ಸೈನ್ಯವು ಚೆದರಿಹೋಯಿತು ಮತ್ತು ರಣರಂಗದಿಂದ ಸೈನಿಕರು ಹಿಮ್ಮೆಟ್ಟಿದರು. ರಾಜಾ ಬಜೆರಾವ ತನ್ನ ಓಡುತ್ತಿರುವ ಸೈನ್ಯದೊಂದಿಗೆ ಕೋಟೆಯಲ್ಲಿ ಹೋಗಿ ತಲೆಮರೆಸಿಕೊಂಡನು. ಸುಲ್ತಾನ ಮಹಮದನು ಕೋಟೆಯನ್ನು ಮುತ್ತಿ, ಸೈನಿಕರಿಗೆ ಕಂದಕವನ್ನು ಹಾರಲು ಆದೇಶಿಸಿದನು. ಶತ್ರು ಸೈನಿಕರು ಕಂದಕವನ್ನು ಪಾರುಮಾಡತೊಡಗಿದನೆ, ಬಜೆರಾವನು ಶತ್ರುವಿನಿಂದ ಉಳಿಯುವುದು ಅಸಾಧ್ಯವೆಂದು ಮನಗಂಡು. ಸೈನ್ಯವನ್ನು ಸುಲ್ತಾನ ಮಹಮದನನ್ನು ಎದುರಿಸಲು ಬಿಟ್ಟು ತಾನು ಕೆಲವು ವಿಶೇಷ ಜೊತೆಗಾರರೊಂದಿಗೆ ಮಾನಸಿಕ ದುಸ್ಥಿತಿಯಲ್ಲಿ ಓಡಿಹೋದನು, ಸಿಂಧ ನದಿಯ ಸಮೀಪದ ಅರಣ್ಯದಲ್ಲಿ ತಲೆಮರೆಸಿಕೊಂಡನು. ಸುಲ್ತಾನ ಮಹಮದನಿಗೆ ಈ ವಿಷಯ ತಿಳಿದಾಗ ಮುಸಲ್ಮಾನರ ಸೈನ್ಯದ ಒಂದು ಭಾಗವನ್ನು ಬಜೆರಾವನನ್ನು ಹುಡುಕಲು ಕಳುಹಿಸಿದನು. ಈ ಶೂರ ಮುಸಲ್ಮಾನ ಸೈನಿಕರು ಬಹಳ ವೇಗದಿಂದ ಆತನನ್ನು ಹಿಮ್ಮೆಟ್ಟಿ ನಡೆದರು ಮತ್ತು ನಾಲ್ಕೂ ಕಡೆಯಿಂದ ಸುತ್ತುವರೆದರು. ಆ ಸಮಯದಲ್ಲಿ ಬಜೆರಾಯನಿಗೆ ಪ್ರಾಣಾರ್ಪಣೆ ಮಾಡುವುದನ್ನು ಬಿಟ್ಟು ಶತ್ರುಗಳಿಂದ ಉಳಿಯಲು ಬೇರೆ ಯಾವ ದಾರಿಯೂ ಕಾಣದೆ ತನ್ನ ಜಂಬೆಯಿಂದ ಹೊಡೆದುಕೊಂಡು ಪ್ರಾಣಬಿಟ್ಟನು. ಮುಸಲ್ಮಾನ ಸೈನಿಕರು ಆತನ ರುಂಡವನ್ನು ತೆಗೆದುಕೊಂಡು ಸುಲ್ತಾನ ಮಹಮದನ ಕಡೆ ಕಳುಹಿಸಿದರು ಹಾಗೂ ಆತನ ಜೊತೆಗಾರರನ್ನು ಕೊಂದು ಹಾಕಿದರು. ಈ ಗೆಲುವಿನಿಂದ ೨೮೦ ಆನೆಗಳು ಮುಸಲ್ಮಾನರ ಕೈಸೇರಿದವು. ಇದಲ್ಲದೆ, ಬಹಳಷ್ಟು ಬೆಲೆಬಾಳುವ ಅನ್ಯ ವಸ್ತುಗಳು ಮತ್ತು ಭಾತ್ನಾದ ಸಮಗ್ರ ಪ್ರಾಂತವು ಇಸ್ಲಾಮಿ ರಾಜ್ಯದ ಪ್ರಭುತ್ವದಲ್ಲಿ ಸೇರಿಸಲಾಯಿತು.

ಮುಲ್ತಾನಿನ ಮೇಲೆ ದಾಳಿ

ಈ ಕಾರ್ಯಾಚರಣೆ ಮುಗಿದನಂತರ ಮಹಮದ ಘಜನಿಗೆ ಮರಳಿ ಬಂದನು. ಹಿಜರಿ ಶಕೆ ೩೯೬ರಲ್ಲಿ ಪುನಃ ಮುಲ್ತಾನಿನ ಮೇಲೆ ದಾಳಿ ಮಾಡುಲು ನಿಶ್ಚಯಿಸಿ ಸೈನ್ಯವನ್ನು ಸಿದ್ಧವಿಡಲು ಆದೇಶಿಸಿದನು. ಮುಲ್ತಾನಿನ ಮರಣಹೊಂದಿದ ಅರಸನಾದ ಶೇಖ್-ಹಮೀದ-ಲೋಧಿ, ಮೃತ ಅಮೀರ ಸಬಸ್ತಗೀನ್‌ನ ಹಿತೈಷಿಯಾಗಿದ್ದನು, ರಾಜನ ಪ್ರಾಮಾಣಿಕನಾಗಿ ಸೇವೆಯಲ್ಲಿ ನಿರತನಾಗಿದ್ದನು. ಶೇಖ್ ಹಮೀದನ ನಂತರ ಆತನ ಮೊಮ್ಮಗ ಅಬುಲ್ ಫತಾ ಮುಲ್ತಾನದ ಅರಸನಾಗಿ ನಿಯುಕ್ತನಾದನು. ಕೆಲವು ಸಮಯದವರೆಗೆ ಅಬುಲ್ ಫತಾನು ತನ್ನ ಸದ್ಗುಣಗಳಿಂದ ಮಹಮದನ ಆಪ್ತವಲಯದಲ್ಲಿ ಸೇರಿಕೊಂಡನು, ನಂತರ ತನ್ನ ಅಧಿಕಾರ ಮತ್ತು ಮದದಿಂದ ವಿಮುಖನಾದನು. ಸುಲ್ತಾನ ಮಹಮದನು ಭಾತನಾವನ್ನು ಸುತ್ತುವರೆದಾಗ ಅಬುಲ್ ಫತಾನು ತನ್ನ ಸ್ವಾಮಿದ್ರೋಹದ ಸಾಕ್ಷಿ ಆರಂಭಿಸಿದನು. ಈತನಿಂದ ಬಹಳಷ್ಟು ಅಗೌರವಯುತವಾದ ಕೃತ್ಯಗಳು ನಡೆದು ಹೋದವು. ಅವುಗಳ ದೃಷ್ಟಿಯಿಂದ ಸುಲ್ತಾನ ಮಹಮದನು ಈತನಿಗೆ ಎಚ್ಚರ ನೀಡುವುದು ಸಮಂಜಸವೆಂದು ತಿಳಿದು ಆ ವರ್ಷ ಮಹಮದನು ಯುಕ್ತಿಯಿಂದ ಅಬುಲ್ ಫತಾಗೆ ಏನೂ ಹೇಳಲಿಲ್ಲ.

ಆದರೆ ಅದರ ಮುಂದಿನ ವರ್ಷ ಈತನ ದುಷ್ಕೃತ್ಯಗಳಿಗಾಗಿ ಶಿಕ್ಷೆ ವಿಧಿಸುವುದು ಯೋಗ್ಯವೆಂದು 'ಜಯಿನ್-ಅಲ್-ಅಕಬಾರ'ದ ರೂಢಿಯಂತೆ ಸುಲ್ತಾನ ಮಹಮದನು ಬೇರೊಂದು ವಿಶಿಷ್ಟ ಮಾರ್ಗದಿಂದ ಪ್ರಯಾಣಿಸಿ ಕೂಡಲೆ ಅಬುಲ್ ಫತಾನ ಮೇಲೆ ದಾಳಿ ಮಾಡಿದನು. ರಾಜಾ ಆನಂದಪಾಲನು ಮಾರ್ಗದಲ್ಲಿ ತಡೆಯೊಡ್ಡಿ, ಸುಲ್ತಾನ ಮಹಮದನ ಸಾಫಲ್ಯದಲ್ಲಿ ಅಡೆತಡೆ ಉಂಟುಮಾಡಿದನು. ಆದರೆ ಈತನು ಇಸ್ಲಾಮಿ ಸೈನಿಕರನ್ನು ಎದುರಿಸದೆ ಸೋತು ಕಾಶ್ಮೀರದ ಕಡೆ ಓಡಿಹೋದನು.

ಅಲ್ಫೀ ಇತಿಹಾಸಕಾರನು ಹೇಳಿಕೆಯಂತೆ, ಅಬುಲ್ ಫತಾನಿಗೆ ಮಹಮದನ ಬರುವಿಕೆಯ ಸಮಾಚಾರ ತಿಳಿದಾಗ ಭಯಭೀತನಾಗಿ ರಾಜಾ ಆನಂದಪಾಲನಿಗೆ ಮಹಮದನ ನಿರ್ಧಾರದ ಬಗ್ಗೆ ತಿಳಿಸಿ, ಆತನ ಸಹಾಯ ಕೋರಿದನು. ಆನಂದಪಾಲನು ಸಹ ಧೈರ್ಯದಿಂದ ಲಾಹೋರ ಮತ್ತು ಪೇಶಾವರ ತಲುಪಿ ತನ್ನ ಸೈನ್ಯಕ್ಕೆ ಇಸ್ಲಾಮಿ ಸೈನ್ಯವನ್ನು ತಡೆಯೊಡ್ಡಲು ಕಳುಹಿಸಿದನು. ಆನಂದಪಾಲನ ಈ ಕೃತಿಯಿಂದ ಸುಲ್ತಾನ ಮಹಮದನು ಕೋಪಗೊಂಡನು ಮತ್ತು ತನ್ನ ಸೈನ್ಯಕ್ಕೆ ಈ ವಿಪತ್ತನ್ನು ಎದುರಿಸಲು ಮತ್ತು ರಾಜ್ಯವನ್ನು ನಿರ್ನಾಮ ಮಾಡಲು ಆದೇಶಿಸಿದನು. ಸುಲ್ತಾನ ಮಹಮದನ ಸೈನಿಕರು ಆತನ ಆದೇಶವನ್ನು ಪರಿಪಾಲಿಸಿ ಶೌರ್ಯದಿಂದ ಆನಂದಪಾಲನನ್ನು ಎದುರಿಸಲು ಸಿದ್ಧರಾದರು ಮತ್ತು ಧೈರ್ಯ ಹಾಗು ಶೌರ್ಯದಿಂದ ಕಾದಾಡಿದರು. ಶತ್ರುಗಳ ಸೈನ್ಯವು ಶಕ್ತಿಹೀನವಾಗಿ ಚದುರಿಹೋಯಿತು. ಆನಂದಪಾಲನು ಈ ಸ್ಥಿತಿಯನ್ನು ಕಂಡು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಓಡಿಹೋದನು. ಸುಲ್ತಾನ

ಮಹಮದನು ತನ್ನ ಸೈನ್ಯದ ಒಂದು ಭಾಗವನ್ನು ಆತನನ್ನು ಹಿಮ್ಮೆಟ್ಟಲು ಕಳುಹಿಸಿದನು. ಇಸ್ಲಾಮಿ ಸೈನ್ಯವು ಆತನ ಬೆನ್ನಟ್ಟುತ್ತಾ ಚಿನಾಬ ನದಿಯ ತೀರದಲ್ಲಿರುವ ಸುದರಾ ಪ್ರಾಂತಕ್ಕೆ ತಲುಪಿದಾಗ ಆನಂದಪಾಲನ ಧೈರ್ಯವು ಕುಗ್ಗಿ ಹೋಯಿತು ಮತ್ತು ಮರಣದ ಭಯವು ಆವರಿಸಿ ಅದೇ ಭಯದಲ್ಲಿ ಕಾಶ್ಮೀರದ ಗುಡ್ಡಗಾಡು ಪ್ರದೇಶದಲ್ಲಿ ಅಡಗಿಕೊಂಡನು. ಸುಲ್ತಾನನು ಸಹ ಇನ್ನೂ ಹಿಮ್ಮೆಟ್ಟಿಸುವುದು ಸಮಂಜಸವಲ್ಲವೆಂದು ತಿಳಿದು ಮತ್ತು ಮುಲ್ತಾನನ್ನು ಗೆಲ್ಲುವ ಮುಖ್ಯ ಉದ್ದೇಶದಿಂದ ಪಹಂದಾ ಮಾರ್ಗವಾಗಿ ಮುಲ್ತಾನಿನ ಕಡೆ ಮುನ್ನುಗ್ಗಿದನು. ರಾಜಾ ಆನಂದಪಾಲನಂತಹ ಹಿಂದುಸ್ತಾನದ ಪ್ರಬಲ ಅರಸನು ಸಹ ಮಹಮದನನ್ನು ಎದುರಿಸಲು ಸಾಧ್ಯವಾಗದೆ ಇದ್ದುದನ್ನು ಕಂಡ ಅಬುಲ್ ಫತಾನು ಸ್ವರಕ್ಷಣೆಯಲ್ಲಿ ಕೋಟೆಯಲ್ಲಿ ಅಡಗಿಕೊಳ್ಳುವುದು ಸೂಕ್ತವೆಂದು ಅಡಗಿಕೊಂಡನು. ಇದಲ್ಲದೆ ಸುಲ್ತಾನ ಮಹಮದನ ಸೇವೆಯಲ್ಲಿ ತನ್ನೆಲ್ಲಾ ತಪ್ಪುಗಳನ್ನು ಕ್ಷಮಿಸಬೇಕೆಂದು ಕೋರಿ ಮನವಿ ಸಲ್ಲಿಸಿದನು ಹಾಗೂ ಪ್ರತಿ ವರ್ಷ ೧೦ ಸಾವಿರ ಆಶ್ರಫಿಗಳನ್ನು ಸುಲ್ತಾನನ ಸನ್ನಿಧಿಯಲ್ಲಿ ಸಲ್ಲಿಸುವ ಭರವಸೆ ನೀಡಿದನು. ಸುಲ್ತಾನನು ಅಬುಲ್ ಫತಾನ ಮನವಿಯನ್ನು ಮನ್ನಿಸಿ, ಸೈನ್ಯವು ಮುತ್ತಿಗೆ ಹಾಕಿದ ಎಂಟು ದಿನಗಳ ನಂತರ ಅಂತಿಮವಾಗಿ ಶರತ್ತುಗಳ ಮೇಲೆ ಒಪ್ಪಂದ ಮಾಡಿಕೊಂಡು ಹಿಂದಿರುಗಿ ಹೋಗಲು ನಿರ್ಧರಿಸಿದನು. ಸುಲ್ತಾನನು ಕುದುರೆಯ ಮೇಲೇರುವ ಮುನ್ನ ಹರಾತಿನ ಮುಖ್ಯಸ್ಥನಾದ 'ಅರಸಲಾನ್-ಜಾಜಿಬ' ವೇಗವಾಗಿ ಬರುವ ಧೂತನು ಸುಲ್ತಾನನ ಸೇವೆಯಲ್ಲಿ ಹಾಜರಾಗಿ, ಐಲಕ್‌ಖಾನನು ದಾಳಿ ಮಾಡಿ ಕೊಲೆ ಸುಲಿಗೆಗಳನ್ನು ಮಾಡುತ್ತಿರುವ ವಿಷಯವನ್ನು ತಿಳಿಸಿದನು. ಸುಲ್ತಾನನು ಈ ವಿಷಯ ತಿಳಿದ ಕೂಡಲೆ ತೀವ್ರಗತಿಯಿಂದ ತಘಂದಾದ ಎಲ್ಲಾ ಮಹತ್ವದ ಕಾರ್ಯಗಳನ್ನು ಸಖಿಪಾಲನಿಗೆ ಒಪ್ಪಿಸಿ ಸ್ವತಃ ತಾನು ಘಜನಿಯ ಕಡೆ ಹೊರಟು ನಿಂತನು. ಸಖಿಪಾಲನು ನಿಜವಾಗಿ ಒಬ್ಬ ಹಿಂದು ಅರಸನ ಮಗನಾಗಿದ್ದನು. ಈತನು ಪೇಶಾವರದಲ್ಲಿ ಅಬು-ಅಲಿ-ಹಜುರಿಯ ಕೈಯಲ್ಲಿ ಬಂದಿಯಾಗಿ ಮುಸಲ್ಮಾನನಾಗಿದ್ದನು ಮತ್ತು ಆತನು ಪಾಶಾ ಎಂಬ ಹೆಸರಿನಿಂದ ಖ್ಯಾತಿ ಪಡೆದನು.

ಐಲಕ್ ಖಾನನ ದಾಳಿಯ ವಿಚಾರ

ಐಲಕಖಾನನ ಮತ್ತು ಐಲಕಖಾನನ ದಾಳಿಯ ಕಥೆ ಕೆಲವು ವಾಕ್ಯಗಳಲ್ಲಿ ನಿರೂಪಿಸಲಾಗಿದೆ. ಇದಕ್ಕೂ ಮೊದಲು ಉಲ್ಲೇಖಿಸಿದುದೇನೆಂದರೆ, ಬಹಳ ಕಾಲದವರೆಗೆ ಸುಲ್ತಾನ ಮಹಮದ ಮತ್ತು ಐಲಕ ಖಾನರ ಮಧ್ಯೆ ಪ್ರೀತಿ ವಿಶ್ವಾಸದ ಸಂಬಂಧವು ಮಾವ ಮತ್ತು ಅಳಿಯರ ಸಂಬಂಧವಾಗಿದ್ದು ಬಂಧುರವಾಗಿತ್ತು. ಸುಲ್ತಾನ ಮಹಮದನು ಐಲಕಖಾನನ ಮಗಳನ್ನು ಮದುವೆಯಾಗಿದ್ದನು.

ಆದರೆ ಕೆಲವು ಕಾಲದ ನಂತರ ಪ್ರೀತಿ-ವಿಶ್ವಾಸವು, ದುಷ್ಟ ಜನರ ಹಾಗೂ ಮನಸ್ತಾಪ ಬೆಳೆಸುವವರ ಕೃತ್ಯಗಳಿಂದ ಶತ್ರುತ್ವದಲ್ಲಿ ಬದಲಾಯಿಸಿತು. ಇವರಿಬ್ಬರೂ

ಪರಸ್ಪರ ಪ್ರಾಣಾಂತಿಕ ಶತ್ರುಗಳಾದರು. ಇದರ ವಿವರವು ಈ ರೀತಿ ಇದೆ. ಸುಲ್ತಾನ ಮಹಮದನು ಮುಲ್ತಾನ ಕಡೆಗೆ ಹೊರಟು ನಿಂತಾಗ, ಖರಸ್ಥಾನದಿಂದ ಸೈನ್ಯದ ಒಂದು ದೊಡ್ಡ ಭಾಗವು ಈತನ ಜೊತೆಗೆ ಹೊರಟಿತು. ಆಗ ಐಲಕಖಾನನಿಗೆ ದುರಾಸೆ ವ್ಯಕ್ತಪಡಿಸುವ ಅವಕಾಶ ದೊರೆಯಿತು ಹಾಗೂ ಖರಾಸ್ಥಾನವನ್ನು ಗೆಲ್ಲಲು ನಿರ್ಧರಿಸಿದನು. ತನ್ನ ಸೈನ್ಯದ ಮುಖ್ಯಾಧಿಕಾರಿಯಾದ 'ಶೀಯಾಉಸ್ತಗೀನ್'ಗೆ ಒಂದು ದೊಡ್ಡ ಸೈನ್ಯವನ್ನು ಕೊಟ್ಟು ಖರಸ್ಥಾನವನ್ನು ಗೆಲ್ಲಲು ಕಳುಹಿಸಿದನು, ಮತ್ತು ಜಾಫರ ತಗೀನ್‌ನನ್ನು ಬಲಿಗನ ಕೊತ್ವಾಲ್‌ನನ್ನಾಗಿ ನಿಯಮಿಸಿದನು. ಫಿರಾತಿನ ಅರಸನಾದ ಇರಸಾಲನ್-ಜಾಜಿಬನಿಗೆ ಈ ಸಮಾಚಾರ ತಿಳಿದಾಗ, ರಾಜ್ಯದ ಅಧಿಕಾರಿಗಳು ಮತ್ತು ಸುಲ್ತಾನ ಮಹಮದನು ಬಹಳ ಕಾಲದವರೆಗೆ ಉಪಸ್ಥಿತನಿರದ ಕಾರಣ ಬಗೆ ಬಗೆಯ ಅನುಮಾನಗಳಲ್ಲಿ ಮುಳುಗಿಹೋದರು. ಅದಕ್ಕಾಗಿ ಅವರು ಐಲಕಖಾನನ ಆಡಳಿತವನ್ನು ಸ್ವೀಕರಿಸಿದರು. ಸುಲ್ತಾನ ಮಹಮದನು ಘಜನಿಗೆ ಹೋದನಂತರ ಒಂದು ಶಕ್ತಿಯುತ ಸೈನ್ಯವನ್ನು ಒಗ್ಗೂಡಿಸಿ ಬಲಿಗ ಕಡೆ ಕಳುಹಿಸಿದನು. ಜಾಫರ ತಗೀನ್, ಸುಲ್ತಾನ ಮಹಮದನ ಆಗಮನದ ಸಮಾಚಾರ ಕೇಳಿ ಓಡಿಹೋದನು ಮತ್ತು ತರ್-ಮಜೀನ್‌ಗೆ ಹೋಗಲು ಅರಸಲಾನ್-ಜಾಜಿಬನು ಸುಲ್ತಾನನ ಆದೇಶದ ಪ್ರಕಾರ ಶೀಯಾಉಸ್ತಗೀನ್‌ನ ಕಡೆ ಮುಂದೆ ಹೊರಟು ಹಿರಾತ ಮಾರ್ಗವಾಗಿ ಮಾರ್ವಾ, ಅಲ್-ಜಹೀರ ಕಡೆಗೆ ಹೊರಟನು. ಐಲಕಖಾನನು ಚೀನದ ಅರಸನಾದ ಖಾದರಖಾನನ ಸಹಾಯ ಕೋರಿದನು. ಖಾದರಖಾನ ೫೦ ಸಾವಿರ ಅಶ್ವಸವಾರರೊಂದಿಗೆ ಐಲಕಖಾನನ ನೆರವಿಗೆ ಬಂದನು. ಈ ಹೊಸ ಸಹಾಯದಿಂದ ಐಲಕಖಾನನಿಗೆ ಧೈರ್ಯ ಬಂದು ಆತನು ವೈಭವದಿಂದ ಜೈಹೂನ ನದಿಯನ್ನು ದಾಟಿ ಬಲಿಗನಿಂದ ನಾಲ್ಕು ಹರದಾರಿ ದೂರದಲ್ಲಿ ಸುಲ್ತಾನ ಮಹಮದನನ್ನು ಎದುರಿಸಲು ತಂಗಿದನು.

ಸುಲ್ತಾನ ಮಹಮದನು ತನ್ನ ಸೈನ್ಯವನ್ನು ಸುಸಜ್ಜಿತಗೊಳಸಿ, ಸೈನ್ಯದ ಮಧ್ಯದಲ್ಲಿ ತನ್ನ ಸಹೋದರನಾದ 'ಅಮೀರ ನಾಸೀರುದ್ದೀನ' ಜೀರಿಯಾನಾದ ರಾಜಾ ಹಾಗು ಲಘರ ಫರಿಯೂನ್ ಮತ್ತು ಅಬ್ದುಲ್ಲಾತಾಯಿ ಇವರಿಗೆ ನೇತೃತ್ವ ವಹಿಸಿದನು. ಸೈನ್ಯದ ಎಡಭಾಗವನ್ನು ಅಲ್ತವಾ ನಿತಾಶನ ಹಾಗೂ ಬಲಭಾಗವನ್ನು ಅರಸಲಾನ್-ಜಾಜಿಬ ಹಾಗೂ ಇತರ ಅಫಘಾನಿ ಸರದಾರರ ವಶಕ್ಕೆ ಕೊಟ್ಟನು. ಉಭಯಪಕ್ಷಗಳ ಸೈನ್ಯವು ಹೆಚ್ಚು ಕಾಯದೆ ಒಬ್ಬರ ಮೇಲೊಬ್ಬರು ಎರಗಿದರು ಮತ್ತು ಕುದುರೆಗಳ ಓಟದಿಂದ ಪರಿಸರವು ಸದ್ದುಗದ್ದಲದಿಂದ ತುಂಬಿತು. ರಣಾಂಗಣವು ಧೂಳು ಮುಸುಕಿ ಕಾದಾಟದ ಕಾರ್ಯವು ಭರದಿಂದ ನಡೆಯಿತು ಮತ್ತು ಖಡ್ಗಗಳ ಪರಸ್ಪರ ಉಪಯೋಗದಿಂದ ಬಹಳಷ್ಟು ಸೈನಿಕರು ಮೃತಪಟ್ಟು ರಕ್ತದ ಕಾಲುವೆ ಹರಿಯಲು ಪ್ರಾರಂಭವಾಯಿತು. ಐಲಕಖಾನನು ತನ್ನ ವಿಶೇಷ ಗುಲಾಮರ ತುಕಡಿಯೊಂದಿಗೆ ಮುಂದಾದನು ಹಾಗೂ ಶೌರ್ಯದಿಂದ ಕಾದಾಡಿದನು. ಸುಲ್ತಾನ ಮಹಮದನು ತುರ್ಕಿಗಳ ಶೌರ್ಯವನ್ನು

ಕಂಡಾಗ ತನ್ನ ಕುದುರೆ ಮೇಲಿಂದ ಕೆಳಗಿಳಿದು ಭೂಮಿಯ ಮೇಲೆ ಶಿರವಿರಿಸಿ ಖಾಜಿ ಅಲ್-ಹಜಾತನ ದರ್ಗಾದಲ್ಲಿ ತನ್ನ ವಿಜಯಕ್ಕಾಗಿ ಪ್ರಾರ್ಥಿಸಿದನು.

ಸುಲ್ತಾನನು ನಿಯೋಜಿಸಿದ ಸೈನ್ಯಾಧಿಕಾರಿಗಳು ಹಾಗೂ ಒಂದು ಪೈಕರ ಕಾಡಾನೆಯ ಮೇಲೆ ಸವಾರಿ ಮಾಡಿ ಪರಮಾತ್ಮನ ಅನುಗ್ರಹದಿಂದ ಶತ್ರುಗಳ ಸೈನ್ಯದ ಮೇಲೆ ಆಕ್ರಮಣ ಮಾಡಿದನು. ಅಲ್ಲಾಹನ ಅನುಗ್ರಹವು ಸುಲ್ತಾನ ಮಹಮದನ ಮೇಲಿದ್ದ ಕಾರಣ ಸುಲ್ತಾನನ ಆನೆಯು ಮೊದಲನೆಯ ಆಕ್ರಮಣದಲ್ಲಿಯೇ ಐಲಕಖಾನನ ಧ್ವಜ ಹಿಡಿದವನನ್ನು ಸೊಂಡಿಲಿನಿಂದ ಹಿಡಿದು ತಿರುಗಿಸಿ ಮೇಲೆ ಹಾರಿಸಿತು. ಇದಾದ ನಂತರ ತುರ್ಕಿಗಳ ಸೈನ್ಯದ ಕಡೆಗೆ ಮುಂದಾದನು ಮತ್ತು ಲೆಕ್ಕವಿಲ್ಲದಷ್ಟು ತುರ್ಕಿಗಳನ್ನು ಸಂಹರಿಸಿದನು. ಘಜನಿ ಸೈನ್ಯವು ತಮ್ಮ ಅರಸನು ಶೌರ್ಯ ಹಾಗು ಪರಾಕ್ರಮದಿಂದ ಶತ್ರುಗಳ ಮೇಲೆ ಆಕ್ರಮಣ ಮಾಡುವುದನ್ನು ಕಂಡಾಗ ಎಲ್ಲ ಸೈನಿಕರು ಏಕಕಾಲಕ್ಕೆ ವೈರಿಗಳ ಮೇಲೆ ದಾಳಿ ಮಾಡಿದರು. ಖಡ್ಗ ಹಾಗು ಬರ್ಚಿಗಳ ಮೊನೆಯಿಂದ ತುರ್ಕಿಗಳ ಎದೆ ಸೀಳಿದರು. ತುರ್ಕಿ ಸೈನಿಕರು ದಿಗ್ಭ್ರಾಂತರಾಗಿ ತಮ್ಮ ಸರದಾರರನ್ನು ಬಿಟ್ಟು ಓಡಿಹೋದರು. ಐಲಕಖಾನ ಹಾಗೂ ಚೀನದ ಅರಸ ಖದರಖಾನ ಬಹಳ ಕಷ್ಟದಿಂದ ತಮ್ಮ ಪ್ರಾಣವನ್ನು ಉಳಿಸಿಕೊಂಡು ವೇಗವಾಗಿ ಓಡಿ ಜೆಹೂನ ನದಿಯನ್ನು ದಾಟಿ ತಮ್ಮ ರಾಜ್ಯದ ಪ್ರಾಂತವನ್ನು ಸೇರಿಕೊಂಡರು.

ಒಂದು ಉಲ್ಲೇಖನೀಯ ಘಟನೆ

ಐಲಕಖಾನನನ್ನು ಸೋಲಿಸಿದನಂತರ ಸುಲ್ತಾನ ಮಹಮದನು ಆತನನ್ನು ಹಿಮ್ಮೆಟ್ಟಿ ಬಯಸಿದನು. ಆಗ ಚಳಿಗಾಲವಿತ್ತು ಮತ್ತು ಆ ಪ್ರಾಂತದಲ್ಲಿ ಬಹಳಷ್ಟು ಹಿಮಪಾತವಾಗುತ್ತಿತ್ತು. ಅದಕ್ಕಾಗಿ ಸೈನ್ಯಾಧಿಕಾರಿಗಳು ಸೈನ್ಯವು ಈ ಚಳಿಯನ್ನು ತಾಳಲಾಗದು ಎಂದು ಹೇಳಿದರು. ಆದರೆ ಸುಲ್ತಾನನು ಈ ಬಗ್ಗೆ ಒತ್ತಾಯ ಮಾಡಿದನು, ಆದ ಕಾರಣ ಸೈನ್ಯವು ಸಹ ನಾಲ್ಕು ದಿನ ಸುಲ್ತಾನನ ಆದೇಶವನ್ನು ಪರಿಪಾಲಿಸಿ ಅರಸನೊಂದಿಗೆ ಐಲಕಖಾನನನ್ನು ಹಿಮ್ಮೆಟ್ಟಲು ಹೊರಟು ನಿಂತಿತು. ಹೀಗೆ ಹೊರಟ ಮೂರನೆಯ ರಾತ್ರಿ ಅರಣ್ಯದಲ್ಲಿ ಅತಿಯಾದ ಹಿಮಪಾತವಾಯಿತು. ಅದು ಎಷ್ಟು ತೀವ್ರವಾಗಿತ್ತೆಂದರೆ, ಜನರ ಕೈಕಾಲುಗಳು ಮರಗಟ್ಟಿದವು. ಸುಲ್ತಾನ ಮಹಮದನಿಗೊಸ್ಕರ ಡೇರೆಯನ್ನು ಹಾಕಿ ಚಳಿಯ ಪ್ರಮಾಣ ಕಡಿಮೆ ಮಾಡಲು ಅಗ್ಗಿಷ್ಟಿಕೆಗಳನ್ನು ಉರಿಸಿದರು. ಅವುಗಳ ಸಂಖ್ಯೆ ಮತ್ತು ಅವುಗಳಿಂದ ಉತ್ಪನ್ನವಾದ ಶಕೆಯಿಂದ ಬಹಳಷ್ಟು ಜನ ತಮ್ಮ ಉಡುಪನ್ನು ತೆಗೆದುಹಾಕಿದರು. ಅಷ್ಟರಲ್ಲಿ ಒಬ್ಬ ಗುಲಾಮನು ಸುಲ್ತಾನ ಮಹಮದನ ಎದುರು ಬಂದು ಅತಿ ವಿನಮ್ರತೆಯಿಂದ ಹೇಳಿದನು, 'ಹೊರಗಡೆ ಹೋಗಿ ಚಳಿಗೆ ಏಕೆ : ಹೀಗೆ ಪ್ರಾಣ ತೆಗೆಯುವ ಪ್ರಯತ್ನ ಮಾಡುತ್ತಿರುವಿ, ನಾವು ಶಕೆಯನ್ನು ತಾಳಲಾರದೆ ಶರೀರದ ಮೇಲೆ ಇದ್ದ ಉಡುಪನ್ನು ಅನಿವಾರ್ಯವಾಗಿ ತೆಗೆದುಬಿಡುತ್ತಿದ್ದೇವೆ.' ಎಂದು ಹೇಳಿ ಆ ಗುಲಾಮನು ಕೂಡಲೆ ಡೇರೆಯಿಂದ

ಹೊರಹೋದನು ಮತ್ತು ಹಿಂದಿರುಗಿ ಬಂದು ಅತಿ ವಿನಯದಿಂದ ಹೇಳಿದನು, 'ನಾನು ಹುಜೂರರ ಆದೇಶವನ್ನು ಚಳಿಗೆ ತಿಳಿಸಿದ್ದೇನೆ. ಚಳಿಯು ಉತ್ತರಿಸಿದುದೇನೆಂದರೆ ಅರಸ ಮತ್ತು ಆತನ ಅಧಿಕಾರಿಗಳ ಮೇಲೆ ನನ್ನ ಪ್ರಭಾವವು ಆಗದಿದ್ದರೇನಂತೆ, ನಾನು ಸೈನಿಕರು ಮತ್ತು ಕೆಲಸಗಾರರನ್ನು ಈ ದಿನ ರಾತ್ರಿ ಎಷ್ಟೊಂದು ಆತಂಕ ಪಡಿಸುವೆನೆಂದರೆ ನಾಳೆ ಬೆಳಿಗ್ಗೆ ಅರಸ ಮತ್ತು ಆತನ ಸರದಾರರು ತಮ್ಮ ಕುದುರೆಗಳ ಸೇವೆಯನ್ನು ತಾವೇ ಸ್ವತಃ ತಮ್ಮ ಕೈಗಳಿಂದ ಮಾಡುವರು, ಅವರ ಬಗ್ಗೆ ನನಗೆ ಯಾವ ಆಕ್ಷೇಪವಿಲ್ಲ.' ಅರಸನು ಸರಳವಾಗಿ ಗುಲಾಮನಿಗೆ ಹೇಳಿದ ಮಾತು ಹಾಗೂ ಅದರ ಉತ್ತರವನ್ನು ಕೇಳಿ ಮನನೊಂದು ಹಿಂದಿರುಗಿ ಹೋಗಲು ನಿರ್ಧರಿಸಿದನು.

ಎಮಿನಿ ಇತಿಹಾಸದಲ್ಲಿ ಈ ಘಟನೆಯನ್ನು ಉಲ್ಲೇಖಿಸಲಾಗಿದೆ.

ಅಬಸಾರನ ಧರ್ಮಾಂತರ

ಅದೇ ರಾತ್ರಿಯ ಹಿಂದುಸ್ತಾನದಿಂದ ಬಂದ ಸಮಾಚಾರವೆಂದರೆ ಸಾರನು ಮರಳಿ ತನ್ನ ಧರ್ಮ ಸ್ವೀಕರಿಸಿ, ಅರಸನ ಕೆಲಸಗಾರರನ್ನು ಸಮಯ ಸಾಧಿಸಿ ಪಟ್ಟಣದಿಂದ ಹೊರಹಾಕಿದ್ದಾನೆ ಎಂಬುದು. ಈ ಸಮಾಚಾರ ತಿಳಿಯುತ್ತಲೇ ಮಹಮದನು ಹಿಂದುಸ್ತಾನಕ್ಕೆ ಹೋಗಲು ನಿರ್ಧರಿಸಿ, ಬೆಳಗಾಗುತ್ತಲೇ ಹಿಂದುಸ್ತಾನದ ಕಡೆ ಹೊರಟು ನಿಂತನು. ಸುಲ್ತಾನನು ಅಲ್ಲಲ್ಲಿ ತಂಗುತ್ತಾ ಹೋಗುತ್ತಿದ್ದನು. ಕೆಲವು ಜಹಗೀರುದಾರರನ್ನು ಶೀಘ್ರವಾಗಿ ಹೋಗಿ ಸಾರನನ್ನು ಹಿಡಿದು ರಾಜನ ಮುಂದೆ ಹಾಜರ ಪಡಿಸಲು ಆದೇಶಿಸಿ ಕಳುಹಿಸಿದನು. ಅವರು ಸಾರನನ್ನು ಬಂಧಿಸಿ ಸುಲ್ತಾನನ ಮುಂದೆ ಹಾಜರು ಪಡಿಸಿದರು ಸುಲ್ತಾನ ೪ ಲಕ್ಷ ದರಮಗಳನ್ನು ದಂಡದ ರೂಪದಲ್ಲಿ ವಿಧಿಸಿದನು. ಅವುಗಳನ್ನು ಖಜಾಂಚಿಗೆ ಒಪ್ಪಿಸಿದನು ಮತ್ತು ಸಾರನನ್ನು ಬಂದಿಯಾಗಿಸಿದನು. ಇದೇ ಸ್ಥಿತಿಯಲ್ಲಿ ಸಾರನು ಕಾರಾಗೃಹದಲ್ಲಿ ಮೃತನಾದನು. ಮಹಮದನು ಘಜನಿಗೆ ಹಿಂದಿರುಗಲು ಸಿದ್ಧನಾಗಿ ಪ್ರಯಾಣ ಮಾಡಿ ಅಲ್ಲಿಗೆ ಬಂದು ಕೆಲವು ದಿನಗಳನ್ನು ಶಾಂತಿ ಹಾಗು ವಿಶ್ರಾಮದಿಂದ ಕಳೆದನು.

ಆನಂದಪಾಲನೊಡನೆ ಯುದ್ಧ

ಮಹಮದನು ಮುಲ್ತಾನ ಗೆಲ್ಲಲು ನಿಶ್ಚಯಿಸಿದಾಗ, ರಾಜಾ ಆನಂದಪಾಲನು ಕೆಲವು ಅಗೌರವಯುತ ಕಾರ್ಯ ಮಾಡಿದ್ದನು. ಈ ಕೃತ್ಯಗಳ ಪ್ರತಿಯಾಗಿ ಕ್ರಮ ಕೈಗೊಳ್ಳಲು ಸುಲ್ತಾನ ಮಹಮದ ಹಿಜರಿ ಶಕೆ ೩೯೯ರಲ್ಲಿ ಒಂದು ಸಶಸ್ತ್ರ ಶಕ್ತಿಯುತ ಸೈನ್ಯ ಕಟ್ಟಿ ಹಿಂದುಸ್ತಾನದ ಮೇಲೆ ಆಕ್ರಮಣ ಮಾಡಿದನು. ಈ ವಿಷಯವನ್ನು ಕೇಳಿ ಅನಂದಪಾಲನು ದಿಗ್ಭ್ರಮೆಗೊಂಡು ಹಿಂದುಸ್ತಾನದ ಇತರ ಅರಸರ ಸಹಾಯ ಕೋರಿದನು. ಮುಸಲ್ಮಾನರ ವಿರುದ್ಧ ಹೋರಾಡುವುದು ಹಿಂದುಗಳು ತಮ್ಮ ಧರ್ಮ ಹಾಗೂ ಪರಂಪರೆಯ ಪ್ರಕಾರ ಅವರ ಉನ್ನತಿಗೆ ಕಾರಣವೆಂದು ತಿಳಿಯುತ್ತಿದ್ದರು.

ಉಜ್ಜಯಿನಿ, ಗ್ವಾಲಿಯರ್, ಕಾಲಿಂಜರ, ಕನೋಜ್, ದೆಹಲಿ ಮತ್ತು ಅಜಮೀರ ಮುಂತಾದ ಅರುಸರುಗಳಲ್ಲದೇ, ಇನ್ನಿತರ ಅರಸರೂ ಆನಂದಪಾಲನಿಗೆ ಸಹಾಯ ಮಾಡಿದರು.

ಸೈನ್ಯ ತುಕಡಿಗಳು ಪಂಜಾಬದ ಕಡೆ ಹೊರಟು ನಿಂತವು. ಅಮೀರ ಸಬಸ್ತಗೀನ್‌ನ ವಿರುದ್ಧ ಎಷ್ಟು ಸೈನ್ಯವು ಮೊದಲು ಸೇರಿತ್ತೊ ಅದಕ್ಕೂ ಹಲವು ಪಟ್ಟು ಅಧಿಕ ಸೈನ್ಯ ಈ ಸಾರಿ ಸಂಘಟಿತವಾಗಿತ್ತು. ಈ ಎಲ್ಲಾ ಸೈನ್ಯಗಳು ಆನಂದಪಾಲನ ಅಧೀನದಲ್ಲಿದ್ದು, ಸುಲ್ತಾನ ಮಹಮದನ ವಿರುದ್ಧ ಹೋರಾಡಲು ಹೊರಟು ನಿಂತವು. ಪೇಶಾವರದ ಅರಣ್ಯ ಪ್ರಾಂತದಲ್ಲಿ ಮಹಮದನ ಸೈನ್ಯವನ್ನು ಎದುರಿಸಿದರು. ಸುಮಾರು ೪೦ ದಿನಗಳ ಕಾಲ ಉಭಯಪಕ್ಷದ ಸೈನ್ಯಗಳು ಎದುರಾಗಿ ಡೇರೆಗಳನ್ನು ಹಾಕಿದ್ದರು. ಯಾರೂ ಯುದ್ಧ ಆರಂಭ ಮಾಡಲಿಲ್ಲ. ಹಿಂದುಗಳ ಸೈನ್ಯವು ದಿನದಿಂದ ದಿನಕ್ಕೆ ವೃದ್ಧಿಸುತ್ತಲೇ ಇತ್ತು, ನಾಲ್ಕೂ ಕಡೆಗಳಿಂದ ಹೊಸದಾಗಿ ಸಹಾಯ ಮತ್ತೆ ದೊರೆಯಲಾರಂಭಿಸಿತು. ಹಿಂದುಗಳು ಕೂಡಾ ಆನಂದಪಾಲನಿಗೆ ಸಹಾಯ ಮಾಡಲು ಬಂದು ಆತನನ್ನು ಸೇರಿಕೊಂಡರು. ಇವರು ದೊಡ್ಡ ಪ್ರಮಾಣದ ಪ್ರಳಯವನ್ನೇ ಹುಟ್ಟಿಸಿದರು. ಮುಸಲ್ಮಾನ ಶತ್ರುಗಳ ಆಕ್ರಮಣದಿಂದ ವಿಚಲಿತರಾದ ಹಿಂದುಗಳಿಗೆ, ಮುಸಲ್ಮಾನರ ವಿರುದ್ಧ ಹೋರಾಟದ ಪ್ರಯತ್ನ ಮುಂದುವರಿಸಲು ಮಹಿಳೆಯರು ತಮ್ಮ ಆಭರಣಗಳನ್ನು ಮಾರಿ ತಮ್ಮ ಪತಿಗಳಿಗೆ ಹಣ ಒದಗಿಸಿ, ಅಗತ್ಯ ಬಿದ್ದಾಗ ಉಪಯೋಗಿಸಲು ಕಳುಹಿಸಿದರು. ಚಿನ್ನಾಭರಣವಿಲ್ಲದ ಮಹಿಳೆಯರು ಚರಖಾದಿಂದ ನೂಲು ತೆಗೆದು, ಕೂಲಿಮಾಡಿ ತಮ್ಮ ಸಂಬಂಧಿಕರಿಗೆ ಮತ್ತು ಗಂಡಂದಿರಿಗೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದರು.

ಸುಲ್ತಾನ ಮಹಮದನಿಗೆ ಹಿಂದೂಗಳು ಈ ಸಾರಿ ಪ್ರಾಣವನ್ನು ಅರ್ಪಿಸುವ ವಿಷಯ ತಿಳಿಯಿತು. ಆಗ ಯುದ್ಧ ಆರಂಭಿಸಲು ಜಾಗರೂಕತೆ ವಹಿಸಿ ಹಿಂದೂಗಳಿಗೆ ಯಾವ ಕಡೆಯಿಂದಲೂ ಬರಲಾಗದಂತೆ ಎರಡು ಕಡೆಯಿಂದ ಕಂದಕವನ್ನು ಅಗೆಯಲು ತನ್ನ ಸೈನ್ಯಕ್ಕೆ ಆದೇಶಿಸಿದನು. ಆ ನಂತರ ಸುಲ್ತಾನ ಮಹಮದನು ಯುದ್ಧ ಆರಂಭಿಸಿದನು. ಸುಲ್ತಾನನ ಆದೇಶದಂತೆ ಒಂದು ಸಾವಿರ ಬಿಲ್ಲುಗಾರರು ಶತ್ರುಗಳ ಮೇಲೆ ಬಾಣಗಳಿಂದ ಆಕ್ರಮಣ ಆರಂಭಿಸಿದರು. ಈ ಯುದ್ಧತಂತ್ರ ದಿಂದ ಶತ್ರುಗಳ ಸೈನ್ಯವನ್ನು ತಮ್ಮ ಹತ್ತಿರಕ್ಕೆ ಬರುವಂತೆ ಮಾಡಿದರು. ಮುಸಲ್ಮಾನರ ಸೈನ್ಯವು ಅವರ ಎದುರಾಗಿ ಕಾದಾಡತೊಡಗಿದಾಗ ೩೦ ಸಾವಿರ ಖಕ್ಕರ ಸೈನಿಕರು ಬರಿಗಾಲಿನಿಂದ, ಶಿರಸ್ತ್ರಾಣವಿಲ್ಲದ ಬರಿಯತಲೆಗಳಿಂದ ಯುದ್ಧದ ಮಧ್ಯದಲ್ಲಿ ಎರಡೂ ಕಡೆಯಿಂದ ಕಂದಕವನ್ನು ದಾಟಿ ಮುಸಲ್ಮಾನರ ಸೈನ್ಯವನ್ನು ಪ್ರವೇಶಿಸಿದರು ಮತ್ತು ಮುಸಲ್ಮಾರನ ಸೈನ್ಯದ ಮೇಲೆ ಆಕ್ರಮಣ ಮಾಡಿ ತಮ್ಮ ಖಡ್ಗಗಳು ಹಾಗು ಬರ್ಚಿಗಳ ಸಹಾಯದಿಂದ ಸವಾರರನ್ನು ಮತ್ತು ಕುದುರೆಗಳನ್ನು ಕೊಲ್ಲಲಾರಂಭಿಸಿದರು. ಈ ಖಕ್ಕರ ಜನಾಂಗದವರು

೩ ಸಾವಿರ ಜನರನ್ನು ಕೊಂದರು ಮತ್ತು ಯುದ್ಧದಲ್ಲಿ ಅವರು ಪ್ರದರ್ಶಿಸಿದ ಧೈರ್ಯ ಹಾಗು ಪರಾಕ್ರಮದಿಂದ ಸುಲ್ತಾನ ಮಹಮದನು ವಿಚಲಿತನಾಗಿ ಆ ದಿನ ಯುದ್ಧವನ್ನು ನಿಲ್ಲಿಸಿ ತನ್ನ ಬಿಡಾರಕ್ಕೆ ಮರುಳಿ ಹೋಗುವದನ್ನು ನಿರ್ಧರಿಸಿದನು. ಇದ್ದಕ್ಕಿದಂತೆ ಆನಂದಪಾಲನ ಆನೆಯೂ ತೋಪಿನ ಸದ್ದಿನಿಂದ ವಿಚಲಿತವಾಗಿ ರಣಾಂಗಣವನ್ನು ಬಿಟ್ಟು ಓಡತೊಡಗಿತು. ಹಿಂದೂ ಸೈನಿಕರು ಮುಸಲ್ಮಾನರ ದಾಳಿಯಿಂದ ಹೆದರಿ, ಆನಂದಪಾಲನು ರಣಾಂಗಣದಿಂದ ಓಡಿಹೋದನೆಂದು ತಿಳಿದರು. ಎಲ್ಲರಿಗಿಂತಲೂ ಪ್ರಬಲನಾದ ಹಿಂದುಸ್ತಾನದ ರಾಜನ ಪರಿಸ್ಥಿತಿಯೇ ಈ ರೀತಿಯಾದುದನ್ನು ಕಂಡು ಹಿಂದೂ ಸೈನಿಕರು ಧೈರ್ಯಗುಂದಿದರು, ಅವರು ಕೂಡಾ ಓಡಿಹೋಗುವ ದಾರಿ ಹುಡುಕಲಾರಂಭಿಸಿದರು. ಹೀಗೆ ಓಡಿ ಹೋಗುವವರನ್ನು ಹಿಮ್ಮೆಟ್ಟಲಾಯಿತು. ಐದಾರು ಸಾವಿರ ಅರಬೀ ಕುದುರೆಸವಾರರ ಜೊತೆಗೂಡಿಸಿಕೊಂಡು ಅಬ್ದುಲ್ಲಾ ತಾಯಿ ಮತ್ತು ಎರಡು ಸಾವಿರ ತುರ್ಕಿ, ಅಫಘಾನಿ ಹಾಗು ಖಿಲ್ಜಿ ಶೂರರೊಂದಿಗೆ ಅರಸಲಾನ ಜಾಜಿಬನು ಎರಡು ದಿನ ಎರಡು ರಾತ್ರಿಯವರೆಗೆ ಓಡಿಹೋಗುವ ಹಿಂದೂ ಸೈನಿಕರನ್ನು ಹಿಮ್ಮೆಟ್ಟಿ ಎಂಟು ಸಾವಿರ ಶತ್ರುಗಳನ್ನು ಸಂಹರಿಸಿದರು. ೩೦ ಆನೆ ಹಾಗು ಬಹಳಷ್ಟು ಬೆಲೆಬಾಳುವ ವಸ್ತುಗಳನ್ನು ಲೂಟಿ ಮಾಡಿ ಸುಲ್ತಾನ ಮಹಮದನ ಎದುರಿನಲ್ಲಿಟ್ಟರು.

ನಗರಕೋಟ ಮೇಲೆ ದಾಳಿ

ಈ ಘೋರ ಯುದ್ಧದಲ್ಲಿ ವಿಜಯ ಪಡೆದ ನಂತರ ಸುಲ್ತಾನ ಮಹಮದನ ಉತ್ಸಾಹವು ಇನ್ನೂ ಹೆಚ್ಚಿ, ಇಸ್ಲಾಮ ಧರ್ಮವನ್ನು ಹರಡಲು ದೃಢ ನಿಶ್ಚಯಮಾಡಿದನು. ನಗರಕೋಟದ ಹಿಂದುಗಳ ಮೇಲೆ ದಾಳಿ ಮಾಡಿ ಅಲ್ಲಿಯ ದೇವಸ್ಥಾನಗಳನ್ನು ನಾಶಮಾಡಲು ಹೊರಟು ನಿಂತನು. ಆ ಕಾಲದಲ್ಲಿ ನಗರಕೋಟದ ಕೋಟೆಯು 'ಭೀಮಕೋಟೆ' ಎಂಬ ಹೆಸರಿನಿಂದ ಖ್ಯಾತಿ ಪಡೆದಿತ್ತು. ಸುಲ್ತಾನ ಮಹಮದನು ಅಲ್ಲಲ್ಲಿ ತಂಗುತ್ತಾ ಪ್ರಯಾಣ ಮಾಡಿ ನಗರಕೋಟ ತಲುಪಿ, ಕೋಟೆಗೆ ಮುತ್ತಿಗೆ ಹಾಕಿದನು. ಅದರ ಸುತ್ತ-ಮುತ್ತಲಿನ ಮುಸಲ್ಮಾನರಲ್ಲದ ನಿವಾಸಿಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಕೊಲೆಗೈದನು. ಈ ಕೋಟೆಯು ರಾಜಾ ಭೀಮನ ಕಾಲದಲ್ಲಿ ಒಂದು ಬೆಟ್ಟದ ತುದಿಯಲ್ಲಿ ನಿರ್ಮಿಸಲಾಗಿತ್ತು ಮತ್ತು ಹಿಂದುಗಳಿಗೆ ಈ ಕೋಟೆಯು 'ಮೂರ್ತಿಗಳ ಕೇಂದ್ರ'ವಾಗಿತ್ತು. ಸುತ್ತ-ಮುತ್ತಲಿನ ಎಲ್ಲ ರಾಜರು ಮತ್ತು ಅಧಿಕಾರಿಗಳು ಬೆಲೆಬಾಳುವ ವಸ್ತುಗಳನ್ನು ಸಮರ್ಪಿಸಲು ಈ ಕೋಟೆಗೆ ಕಳುಹಿಸುತ್ತಿದ್ದರು.

ಹೀಗೆ ಅಮೂಲ್ಯ ವಸ್ತುಗಳನ್ನು ಸಮರ್ಪಿಸುವದರಿಂದ ಪರಮಾತ್ಮನ ಅನುಗ್ರಹ ಪಡೆಯುತ್ತೇವೆಂದು ಹಿಂದುಗಳು ಭಾವಿಸುತ್ತಿದ್ದರು. ನಾಲ್ಕು ದಿಕ್ಕುಗಳಿಂದ ಸಂಪತ್ತು ಬಂದು ಈ ಕೋಟೆಯಲ್ಲಿ ಸೇರುತ್ತಿತ್ತು. ಇಲ್ಲಿ ಚಿನ್ನ, ಬೆಳ್ಳಿ, ಮುತ್ತು, ರತ್ನ ಇತ್ಯಾದಿಗಳ ದೊಡ್ಡ ಭಂಡಾರವಿತ್ತು. ಇಂತಹ ಅನರ್ಘ್ಯ ವಸ್ತುಗಳ ಭಂಡಾರವು ಯಾವ ಅರಸನ

ಬಳಿಯೂ ಇರಲಿಲ್ಲ. ಈ ಕೋಟೆಯಲ್ಲಿ ಶೂರ ಸೈನಿಕರು ಇರಲಿಲ್ಲ, ಅಲ್ಲಿ ಬ್ರಾಹ್ಮಣರು ಮತ್ತು ದೇವಾಲಯದ ಪೂಜಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದರು. ಸುಲ್ತಾನ ಮಹಮದನ ಸೈನ್ಯದ ಪ್ರತಾಪದಿಂದ ಅವರು ತೀರ ಧೃತಿಗೆಟ್ಟರು. ಇದರ ಪರಿಣಾಮವಾಗಿ ಕೋಟೆಯನ್ನು ಸುತ್ತುವರಿದ ಮೂರು ದಿನಗಳಲ್ಲಿ ಅಲ್ಲಿಯ ಜನರು ಕೋಟೆಯ ಬಾಗಿಲನ್ನು ತೆರೆದುಬಿಟ್ಟರು ಮತ್ತು ಸುಲ್ತಾನನ ಮುಂದೆ ಹಾಜರಾಗಿ ಪ್ರಾಣಭಿಕ್ಷೆಯನ್ನು ಬೇಡಿದರು. ಸುಲ್ತಾನನು ಇವರ ಕೋರಿಕೆಯನ್ನು ಮನ್ನಿಸಿ ತನ್ನ ಕೆಲವು ಆಪ್ತಜನರೊಂದಿಗೆ ಕೋಟೆ ಪ್ರವೇಶಿಸಿ, ಕೋಟೆಯಿಂದ ಸುಲ್ತಾನನು ಸಾಕಷ್ಟು ಸಂಪತ್ತನ್ನು ತನ್ನ ವಶಕ್ಕೆ ತೆಗೆದುಕೊಂಡನು. ೭ ಲಕ್ಷ ಅಶ್‌ರಫಿ, ೭೦೦ ಮಣ ಚಿನ್ನ ಮತ್ತು ಬೆಳ್ಳಿಯ ವಸ್ತುಗಳು, ೨೦೦ ಮಣ ಅಪ್ಪಟ ಬಂಗಾರ, ೨೦೦೦ ಮಣ ಅಪ್ಪಟ ಬೆಳ್ಳಿ ಮತ್ತು ೨೦ ಮಣ ವಿವಿಧವಾದ ಮುತ್ತು ರತ್ನಗಳನ್ನು ರಾಜಾ ಭೀಮನ ಕಾಲದಿಂದ ಈ ದೇವಾಯಲದಲ್ಲಿ ಸಂಗ್ರಹಿತವಾಗಿದ್ದವು. ಅವೆಲ್ಲವೂ ಸುಲ್ತಾನನ ವಶಕ್ಕೆ ಬಂದವು. ಈ ಸಂಪತ್ತನ್ನು ತನ್ನ ಜೊತೆಗೆ ತೆಗೆದುಕೊಂಡು ಸುಲ್ತಾನ ಮಹಮದನು ಮರಳಿ ಘಜನಿಗೆ ಹೊರಟನು.

ಹಿಜರಿಶಕೆ ೪೦೦ರಲ್ಲಿ ಮಹಮದನು ಘಜನಿ ಸೇರಿದನು. ಅಲ್ಲಿ ಆತನು ಪಟ್ಟಣದ ಹೊರಗೆ ಒಂದು ಅರಮನೆ ನಿರ್ಮಿಸಿದನು. ಅಲ್ಲಿ ನಗರಕೋಟದಿಂದ ತಂದ ಚಿನ್ನ ಮತ್ತು ಬೆಳ್ಳಿಯಿಂದ ಆಸನಗಳನ್ನು ನಿರ್ಮಿಸಿ, ಮತ್ತಿತರ ಸಮಗ್ರ ಅಮೂಲ್ಯ ವಸ್ತುಗಳಿಂದ ಅರಮನೆಯನ್ನು ಶೃಂಗರಿಸಿದನು. ಪ್ರಜೆಗಳು, ಗ್ರಾಮೀಣ ಹಾಗೂ ನಗರವಾಸಿಗಳು ಎಲ್ಲರೂ ಈ ವಸ್ತು ಪ್ರದರ್ಶನವನ್ನು ನೋಡಲು ಆಸಕ್ತಿ ಹಾಗೂ ಕುತೂಹಲದಿಂದ ಬರುತ್ತಿದ್ದರು. ಈ ಪ್ರದರ್ಶನವು ಮೂರು ದಿನಗಳವರೆಗೆ ನಡೆಯಿತು. ಸುಲ್ತಾನನು ಹಲವಾರು ಸಂತೋಷದ ಕೂಟಗಳನ್ನು ಏರ್ಪಡಿಸಿ ಸುಜನರಿಗೆ ಹಾಗು ಅರ್ಹರಾದ ಜನರಿಗೆ ಕಾಣಿಕೆ ಮತ್ತು ಬಹುಮಾನಗಳನ್ನು ಕೊಟ್ಟು ಶ್ರೀಮಂತರನ್ನಾಗಿಸಿದನು.

ಘೋರ ಮೇಲೆ ದಾಳಿ

ಸುಲ್ತಾನ ಮಹಮದನು ಹಿಜರಿ ಶಕೆ ೪೦೧ರಲ್ಲಿ ಘೋರ ಮೇಲೆ ದಾಳಿ ಮಾಡಿದನು. ಘೋರ ಅರಸನಾದ ಮೊಹಮ್ಮದ-ಬಿನ್-ಶುರಿ, ಸಹಸ್ರಾರು ಸವಾರರೊಂದಿಗೆ ಸುಲ್ತಾನನನ್ನು ಎದುರಿಸಲು ಹೊರಟು ನಿಂತನು. ಎರಡೂ ಸೈನ್ಯಗಳ ಮಧ್ಯೆ ಯುದ್ಧವು ಆರಂಭವಾಗಿ ಸೂರ್ಯೋದಯದಿಂದ ಮಧ್ಯಾಹ್ನ ೧೨ ಗಂಟೆಯವರೆಗೆ ಘನ ಘೋರ ಯುದ್ಧ ನಡೆದು ಘೋರಿಯು ಈ ಯುದ್ಧದಲ್ಲಿ ಶೌರ್ಯವನ್ನು ಪ್ರದರ್ಶಿಸಿದನು. ಅವರ ಶೌರ್ಯದ ಹೋರಾಟವನ್ನು ಸುಲ್ತಾನ ಮಹಮದನು ನೋಡಿದ ಮೇಲೆ, ತನ್ನ ಸೈನಿಕರಿಗೆ ಮೋಸದಿಂದ ಬಂದಿಯನ್ನಾಗಿ ಮಾಡಲು ಆದೇಶಿಸಿದನು. ಅದರಂತೆ ಆದೇಶ ಪಾಲಿಸಿದ ಸುಲ್ತಾನ ಮಹಮದನ ಸೈನಿಕರು ವೈರಿಗಳ ಸೈನ್ಯದ ಮುಂದಿನಿಂದ ಓಡಿದರು. ಘೋರಿಗಳು ಸುಲ್ತಾನನ ಸೈನಿಕರು ದಾಳಿ ತಾಳಲಾರದೆ ಓಡಿದರೆಂದು

ತಿಳಿದರು ಅವರು ಓಡುವ ಸೈನಿಕರನ್ನು ಹಿಮ್ಮೆಟ್ಟಿದರು ಮತ್ತು ತಾವು ಅಗೆದ ಕಂದಕವನ್ನು ದಾಟಿ ಓಡಿಹೋದರು.

ಘೋರಿಗಳ ಸೈನ್ಯವು ಯುದ್ಧದ ಮೈದಾನದಲ್ಲಿ ಬಂದು ನಿಂತಾಗ ಮಹಮದನು ತನ್ನ ಕುದುರೆಯ ಲಗಾಮನ್ನು ತಿರುಗಿಸಿ ಘೋರಿಗಳ ಮೇಲೆ ಘೋರವಾಗಿ ದಾಳಿ ಮಾಡಿದನು. ಇದರಿಂದ ಅವರ ಸೈನ್ಯದ ಬಹಳಷ್ಟು ಸೈನಿಕರು ಮರಣಹೊಂದಿದರು. ಸುಲ್ತಾನ ಮಹಮದನ ಸೈನ್ಯವು ಮೊಹಮದ್-ಬಿನ್-ಘೋರಿಯನ್ನು ಬಂದಿಯನ್ನಾಗಿಸಿ ರಾಜನ ಸನ್ನಿಧಿಯಲ್ಲಿ ಹಾಜರು ಪಡಿಸಿದರು. ಘೋರಿಯು ಈ ಅಪಮಾನವನ್ನು ಸಹಿಸದೆ ತನ್ನಲ್ಲಿದ್ದ ವಿಷದ ಹರಳನ್ನು ಸೇವಿಸಿ ಮಹಮದನ ಉಪಸ್ಥಿತಿಯಲ್ಲಿ ತನ್ನ ಪ್ರಾಣವನ್ನು ಅರ್ಪಿಸಿದನು.

ಘೋರಿಯ ಮರಣಾನಂತರ ಆ ದೇಶವು ಸುಲ್ತಾನ ಮಹಮದನ ಸ್ವಾಧೀನಕ್ಕೆ ಬಂದಿತು. 'ಎಮನಿ ಇತಿಹಾಸದಲ್ಲಿ' ಈ ಯುದ್ಧದ ಉಲ್ಲೇಖವಿದ್ದು ಘೋರಿ ಜನ ಮುಸಲ್ಮಾನರಾಗಿರಲಿಲ್ಲ. ಆದರೆ ಈ ಘಟನೆಯ ನಂತರ ಇಸ್ಲಾಮ ಮತವನ್ನು ಸ್ವೀಕರಿಸಿದರು. ಆದರೆ 'ತಬಖಾತನಾಸೀರಿ' ಮತ್ತು ಫಕೂರುದ್ದೀನ ಮುಬಾರಕ ಶಹಾ ಮತ್ತು ಇತರ ಇತಿಹಾಸಕಾರರು ಘೋರಿ ರಾಜಕೀಯದ ಬಗ್ಗೆ ಇತಿಹಾಸ ಬರೆದವರೆಲ್ಲ ಏಕಾಭಿಪ್ರಾಯದಿಂದ ಘೋರಿ ಜನರು ಖಲಿಫಾ ಹಜರತ್ ಅಲಿಯ ಅವಧಿಯಲ್ಲಿ ಮುಸಲ್ಮಾನರಾಗಿದ್ದರು ಮತ್ತು ನಬಿ ವುಮಯಾ ಇವರ ಕಾಲದಲ್ಲಿ ಸಮಸ್ತ ಇಸ್ಲಾಮಿ ದೇಶಗಳಲ್ಲಿ ಮತ್ತು ಹಜ್ರತ ಅಲಿಯ ಪರಿವಾರದಲ್ಲಿಯೂ ಉಲ್ಲೇಖ ಮಾಡುತ್ತಿದ್ದು, ಘೋರಿಗೆ ಅತ್ಯಂತ ಉನ್ನತ ಸ್ಥಾನ ನೀಡುತ್ತಿದ್ದುದರಿಂದ, ಪ್ರಪಂಚದ ಜನರು ಅಹೆಲಿಬಿಯತ್-ರಿಸಾಲತ ಇವರಲ್ಲಿ ಅಗೌರವ ಸೂಚಿಸಲು ಹಿಂದೇಟು ಹಾಕುತ್ತಿದ್ದರು.

ಮುಲ್ತಾನ ಮೇಲೆ ದಾಳಿ

ಸುಲ್ತಾನ ಮಹಮದನು ಅದೇ ವರ್ಷ ಘಝುನಿಯಿಂದ ಮುಲ್ತಾನಿಗೆ ಬಂದು ದೌರ್ಜನ್ಯದಿಂದ ಮುಲ್ತಾನನ್ನು ಗೆದ್ದನು ಹಾಗೂ ಅತಿ ಹೆಚ್ಚು ಸಂಖ್ಯೆಯಲ್ಲಿ ಖರಮತಿ ಮತ್ತು ಕಾಫಿರರನ್ನು ಸಂಹಾರಮಾಡಿ ಕೈ-ಕಾಲುಗಳನ್ನು ಕತ್ತರಿಸಿದರು. ದಾವೂದ-ಬಿನ್-ನಸೀರನನ್ನು ಬಂದಿಯಾಗಿಸಿ ತನ್ನ ಜೊತೆಗೆ ಘಜನಿಗೆ ಕರೆದೊಯ್ದು, ಅಲ್ಲಿ ಘೋರ ಕೋಟೆಯಲ್ಲಿ ಬಂದಿಯಾಗಿರಿಸಿದನು. ದಾವೂದನು ಅದೇ ಕೋಟೆಯಲ್ಲಿ ಮರಣಹೊಂದಿದನು.

ಥಾನೀಸರಿನ ಮೇಲೆ ದಾಳಿ

ಹಿಜರಿ ಶಕೆ ೪೦೨ರಲ್ಲಿ ಸುಲ್ತಾನ ಮಹಮದನ ಮನಸ್ಸಿನಲ್ಲಿ ಪುನಃ ಜಿಹಾದಿನ ಅಲೆ ಎದ್ದು ತಾನಸೀರನ ಮೇಲೆ ದಾಳಿ ಮಾಡಲು ಇಚ್ಛಿಸಿದನು. ಮುಸಲ್ಮಾನರಲ್ಲಿ ಕಾಬಾದ ಬಗ್ಗೆ ಗೌರವದ ಭಾವನೆ ಇರುವಂತೆ, ಹಿಂದುಗಳಲ್ಲಿ ತಾನಸೀರಿನ ಬಗ್ಗೆ

ನಂಬಿಕೆ ಇತ್ತೆಂದು ಮಹಮದನು ಕೇಳಿ ತಿಳಿದಿದ್ದನು. ತಾನಸೀರನಲ್ಲಿ ಒಂದು ದೊಡ್ಡ ದೇವಸ್ಥಾವವಿತ್ತು, ಅದರಲ್ಲಿ ದೊಡ್ಡ ದೊಡ್ಡ ಮೂರ್ತಿಗಳನ್ನು ಇಡಲಾಗಿದ್ದು, ಅವುಗಳಲ್ಲಿ ಅತ್ಯಂತ ದೊಡ್ಡ ಮೂರ್ತಿಯ ಹೆಸರು 'ಜಗಸೋಮ' ಎಂದಿತ್ತು. ಈ ಮೂರ್ತಿಯು ಜಗತ್ತಿನಲ್ಲಿ ಮನುಷ್ಯನು ಹುಟ್ಟುವಾಗ ಸ್ವಯಂ ಭೂ ಆಗಿ ಪ್ರಕಟವಾಗಿರುವುದಾಗಿ ಹಿಂದುಗಳು ನಂಬಿಕೆಯಾಗಿತ್ತು. ಸುಲ್ತಾನನಿಗೆ ಈ ಸಂಗತಿ ಸಹ ತಿಳಿದಿತ್ತು. ತಾನಸೀರ ಮೇಲೆ ದಾಳಿ ಮಾಡುವ ವಿಚಾರದಿಂದ ಮಹಮದನು ಪಂಜಾಬಿಗೆ ಬಂದಾಗ, ಸುಲ್ತಾನನು ರಾಜಾ ಆನಂದಪಾಲ ಮತ್ತು ಸುಲ್ತಾನ ಮಹಮದರ ಮಧ್ಯೆ ಆದ ಒಪ್ಪಂದದ ದೃಷ್ಟಿಯಿಂದ ಒಬ್ಬ ರಾಜದೂತನನ್ನು ಆನಂದಪಾಲನೆಡೆಗೆ ಕಳುಹಿಸಿದನು. ಆತನ ಮೂಲಕ, ತಾನು ತಾನಸೀರದ ಮೇಲೆ ದಾಳಿ ಮಾಡಲು ಉದ್ದೇಶಿಸಿರುವುದಾಗಿಯೂ, ಪಂಜಾಬಿನಿಂದ ತಾನಸೀರದವರೆಗೆ ಮಾರ್ಗ ಮಧ್ಯ ಬರುವ ಅಡೆತಡೆಗಳನ್ನು ದೂರ ಮಾಡಲು ವಿಶ್ವಾಸಾರ್ಹ ವ್ಯಕ್ತಿಗಳನ್ನು ಕಳುಹಿಸಲು ಹಾಗೂ ಆನಂದಪಾಲನ ಅಧಿಕಾರದಲ್ಲಿರುವ ಪ್ರದೇಶಗಳಲ್ಲಿ ತನ್ನ ಸೈನ್ಯವು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಲು ಸಂದೇಶವನ್ನು ಕಳುಹಿಸಿದನು.

ಆನಂದಪಾಲನು ಈ ಸಂದೇಶವನ್ನು ಪಡೆದ ಮೇಲೆ ರಾಜ್ಯವು ಕ್ಷೇಮವು ಪ್ರಥಮ ಆದ್ಯತೆಯೆಂದು ಬಗೆದು ಕೂಡಲೇ ಆತನ ಸ್ವಾಗತ ಸಿದ್ಧತೆಯನ್ನು ಮಾಡಿದನು. ತನ್ನ ದೇಶದ ವ್ಯಾಪಾರಸ್ಥರಿಗೆ ಮತ್ತು ಇತರರಿಗೆ, ಜೀವನೋಪಾಯಕ್ಕೆ ಅವಶ್ಯಕವಾದ ದವಸ–ಧಾನ್ಯಗಳನ್ನು ಸುಲ್ತಾನಿ ಸೈನ್ಯಕ್ಕೆ ತಲುಪಿಸುವ ವ್ಯವಸ್ಥೆ ಮಾಡಲು, ಸೈನ್ಯಕ್ಕೆ ಯಾವ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲು ಆದೇಶಿಸಿದನು. ಆನಂದಪಾಲನು ತನ್ನ ಸಹೋದರನೊಂದಿಗೆ ಎರಡು ಸಾವಿರ ಅಶ್ವಸವಾರರನ್ನು ಸುಲ್ತಾನ ಮಹಮೂದನ ಸೇವೆಗೆ ಪತ್ರದೊಂದಿಗೆ ಕಳುಹಿಸಿದನು. ಆ ಪತ್ರದ ಸಾರಾಂಶವು, 'ನಾನು ತಮ್ಮ ಆದೇಶವನ್ನು ಪರಿಪಾಲಿಸಲು ಎಲ್ಲ ರೀತಿಯಿಂದಲೂ ಸಿದ್ಧನಿದ್ದೇನೆ ಮತ್ತು ಸತ್ಯವಾಗಿಯೂ ನಿಮ್ಮ ಅಧೀನ ಅರಸನಾಗಿದ್ದೇನೆ, ಆದರೆ ಈ ಅನುಗ್ರಹ ಮತ್ತು ಪ್ರೀತಿಗೆ ಕಾರಣ ಹಾಗೂ ಉತ್ತಮ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಅರಿಕೆ ಮಾಡಿಕೊಳ್ಳುವ ಧೈರ್ಯ ಮಾಡುತ್ತಿರುವುದೇನೆಂದರೆ, ಥಾನೀಸರ ದೇವಸ್ಥಾನವು ಪಟ್ಟಣ ವಾಸಿಗಳ ಒಂದು ಮಹತ್ವವಾದ ಪೂಜಾ ಸ್ಥಳವಾಗಿದೆ, ಈಗಾಗಲೇ ನೀವು ನಿಮ್ಮ ಮತದ ಪ್ರಕಾರ ಮೂರ್ತಿಗಳನ್ನು ಧ್ವಂಸಮಾಡುವುದರ ಫಲವೇ ಪುಣ್ಯವೆಂದು ಬಗೆದು ನಗರಕೋಟ ಕೋಟೆಯಲ್ಲಿ ಮೂರ್ತಿಯನ್ನು ಧ್ವಂಸಮಾಡಿ ನಿಮ್ಮ ಉದ್ದೇಶವನ್ನು ಪೂರ್ಣಗೊಳಿಸಿದ್ದೀರಿ. ತಾನಸೀರದ ದೇವಸ್ಥಾನದ ಬಗ್ಗೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ತಮ್ಮ ಶಕ್ತಿಯಿಂದ ಈ ದೇವಸ್ಥಾನವನ್ನು ನಾಶಮಾಡಬೇಡಿ. ದೇವಸ್ಥಾನದ ಬದಲಾಗಿ ಬೇರೇನನ್ನಾದರೂ ಕೇಳುವ ವಿಚಾರವಿದ್ದರೆ, ಅದನ್ನು ಇಲ್ಲಿಯ ಪ್ರಜೆಗಳು ತಮ್ಮ ಕರ್ತವ್ಯವೆಂದು ಬಗೆದು ಪರಿಪಾಲಿಸುವರು. ತಾವೂ ತಮ್ಮ ದೇಶಕ್ಕೆ ಹಿಂದಿರುಗಬಹುದು. ವಿನಮ್ರಸೇವಕನ ಈ ವಿನಂತಿಯನ್ನು ಮನ್ನಿಸಿದರೆ

ಧನ್ಯವಾದಗಳನ್ನು ಸೂಚಿಸಲು ಪ್ರತಿ ವರ್ಷ ಐವತ್ತು ಆನೆ ಹಾಗು ಇನ್ನಿತರ ಬೆಲೆಬಾಳುವ ವಸ್ತುಗಳನ್ನು ತಮ್ಮ ಸನ್ನಿಧಾನಕ್ಕೆ ಕಳುಹಿಸುವೆನು.' ಎಂದಿತ್ತು.

ಸುಲ್ತಾನ ಮಹಮದನು ಈ ಪತ್ರಕ್ಕೆ ಪ್ರತ್ಯುತ್ತರವಾಗಿ, 'ಮುಸಲ್ಮಾನರಾದ ನಮ್ಮ ನಂಬಿಕೆ ಏನೆಂದರೆ ಜಗತ್ತಿನ ಎಲ್ಲಾ ಮತಗಳು ಇಸ್ಲಾಮ ಮತವನ್ನು ಹರಡುವ ಮತ್ತು ಮುಸ್ಲಿಮೇತರ ದೇವಾಲಯ ಮತ್ತು ಪೂಜಾಗ್ರಹಗಳನ್ನು ನಾಶ ಮಾಡುವವರಿಗೆ, ಮೇಲಿನ ಜಗತ್ತಿನಲ್ಲಿ ಪುಣ್ಯ ಬರುತ್ತದೆ. ಪ್ರಪಂಚದಲ್ಲಿ ಮೂರ್ತಿ ಪೂಜೆಯ ಪರಂಪರೆಯನ್ನು ಮುಕ್ತಾಯಗೊಳಿಸುವ ಉದ್ದೇಶವು ನಮ್ಮದಾಗಿದೆ. ಹೀಗಿರುವಾಗ ತಾನಸೀರನಂತಹ ಸ್ಥಳದಲ್ಲಿರುವ ಮೂರ್ತಿಗಳ ಕೇಂದ್ರಗಳನ್ನು ಅಲಕ್ಷ್ಯ ಮಾಡುವುದು ಹೇಗೆ ಸಾಧ್ಯ? ತಾನಸೀರನ್ನು ಗೆಲ್ಲುವ ಉದ್ದೇಶವನ್ನು ಏಕೆ ಮಾಡಬಾರದು?' ಎಂದು ಪ್ರಶ್ನಿಸಿದನು.

ಈ ವಿಷಯವು ದಿಲ್ಲಿಯ ಅರಸನಿಗೆ ತಿಳಿದೊಡನೆ ಆತನು ತನ್ನ ಸಮಸ್ತ ಶಕ್ತಿಯೊಂದಿಗೆ ಮುಸಲ್ಮಾನರ ವಿರುದ್ಧ ಹೋರಾಡಲು ಸಿದ್ಧನಾದನು. ದಿಲ್ಲಿಯ ಅರಸನು, 'ಸುಲ್ತಾನ ಮಹಮದನು ತನ್ನ ಸೈನ್ಯ ಸಹಿತವಾಗಿ ನನ್ನ ರಾಜ್ಯದ ಖ್ಯಾತ ದೇವಸ್ಥಾನವಾದ ತಾನಸೀರದ ಮೇಲೆ ದಾಳಿ ಮಾಡಲು ಬರುತ್ತಲಿದ್ದಾನೆ, ನಾವು ಅದಕ್ಕೂ ಮೊದಲು ನದಿಯಂತೆ ಉಕ್ಕೇರಿ ಬರುವ ಈ ವಿಪತ್ತನ್ನು ತಡೆಯುವ ಉಪಾಯವನ್ನು ಮಾಡದಿದ್ದಲ್ಲಿ, ಪ್ರತಿಯೊಬ್ಬ ಸಣ್ಣ ದೊಡ್ಡವನು ಪ್ರವಾಹದಂತೆ ಬರುವ ಈ ಸೈನ್ಯದಡಿಯಲ್ಲಿ ನಶಿಸಿಹೋಗುವರು. ನನ್ನ ಪ್ರಕಾರ ಈ ಸಮಯದಲ್ಲಿ ನಾವು ನೀವು ಪರಸ್ಪರ ಒಗ್ಗಟ್ಟಿನಿಂದ ಸುಲ್ತಾನ ಮಹಮದನ ವಿರೋಧ ಮಾಡುವುದು ಸಮಂಜಸವೆನ್ನಿಸುತ್ತದೆ.' ಎಂಬ ವಿಷಯವನ್ನು ಹಿಂದುಸ್ತಾನದ ಮೂಲೆ ಮೂಲೆಗೆ ಬಿತ್ತರಿಸಲಾಯಿತು. ಆದರೆ, ಎಲ್ಲಾ ಹಿಂದುಗಳು ಒಂದುಗೂಡಿ ಸುಲ್ತಾನ ಮಹಮದನ ವಿರುದ್ಧ ಹೋರಾಡುವುದಕ್ಕಿಂತ ಮೊದಲು ಸುಲ್ತಾನ ತಾನಸೀರಿಗೆ ಬಂದನು.

ಖಾಲಿಯಾದ ಪಟ್ಟಣವನ್ನು ಕಂಡು ಮುಸಲ್ಮಾನರು ಕೊಲೆ, ಸುಲಿಗೆಯನ್ನಾರಂಭಿಸಿದರು. ಮಹಮದನು ಎಲ್ಲಾ ಮೂರ್ತಿಗಳನ್ನು ಧ್ವಂಸ ಮಾಡಿದನು ಮತ್ತು ಎಲ್ಲ ಮೂರ್ತಿಗಳಲ್ಲಿ ಅತ್ಯಂತ ದೊಡ್ಡ ಮೂರ್ತಿಯಾದ 'ಜಗಸೋಮ' ಮೂರ್ತಿಯನ್ನು ಘಜನಿಗೆ ಕಳುಹಿಸಿಕೊಟ್ಟನು. ರಸ್ತೆಯ ಮೇಲೆ ನಡೆಯುವವರು ಅದರ ಮೇಲೆ ಕಾಲಿಟ್ಟು ನಡೆಯಲಿ ಎಂದು ಜಗಸೋಮ ಮೂರ್ತಿಯನ್ನು ದಾರಿಯಲ್ಲಿ ಹಾಕಲು ಹೇಳಿದನು. ಮಹಮೂದನಿಗೆ ತಾನಸೀರದ ದೇವಸ್ಥಾನದಿಂದ ನವರತ್ನಗಳಲ್ಲೊಂದಾದ ಕೆಂಪು ಹರಳಿನ ಮಾಣಿಕ್ಯದ ಒಂದು ತುಣುಕು ಸಿಕ್ಕಿತು. ಅದು ೪೫೦ 'ಮಶಗಾಲ್' ಇತ್ತು. ಇದುವರೆಗೂ ಈ ತರಹದ ಬೆಲೆಬಾಳುವ ಹರಳು, ಯಾರಿಗೂ ನೋಡಲು ಅಥವಾ ಕೇಳಲು ಸಿಗಲಿಲ್ಲವೆಂದು ಕಂದಹಾರದ ಇತಿಹಾಸಕಾರರು ಹೇಳುತ್ತಾರೆ.

ಈ ಗೆಲುವಿನ ನಂತರ ಮಹಮದನು ದೆಹಲಿಯನ್ನು ಗೆಲ್ಲವ ನಿಶ್ಚಯ ಮಾಡಿದಾಗ ಆತನ ಕೆಲವು ಅಮೀರರು ಮತ್ತು ವಜೀರರು, ಪಂಜಾಬ ಪ್ರದೇಶವು ಮುಸಲ್ಮಾನರ ವಶಕ್ಕೆ ಪಡೆದ ಮೇಲೆ ದೆಹಲಿಯನ್ನು ಗೆಲ್ಲಬಹುದು ಮತ್ತು ಆನಂದಪಾಲನ ಕಡೆಯಿಂದ ಯಾವ ತೊಂದರೆಯೂ ಇರದು, ಎಂಬ ಸಲಹೆಯನ್ನು ಕೊಟ್ಟರು. ಸುಲ್ತಾನ ಮಹಮದನು ಅವರ ಸಲಹೆ ಸ್ವೀಕರಿಸಿ, ದೆಹಲಿಯನ್ನು ಗೆಲ್ಲುವ ತನ್ನ ಇಚ್ಛೆಯನ್ನು ತೊರೆದು ಮರುಳಿ ಘಜನಿಗೆ ಬಂದನು. ತನ್ನೊಂದಿಗೆ ಸುಮಾರು ಎರಡು ಲಕ್ಷ ಹೆಣ್ಣಾಳುಗಳನ್ನು ಹಾಗೂ ಗುಲಾಮರನ್ನು ಜೊತೆಗೆ ಕರೆತಂದನು. ಆ ವರ್ಷ ಘಜನಿಯಲ್ಲಿ ಹಿಂದುಸ್ಥಾನಿ ಜನರ ಎಷ್ಟೊಂದು ಮುಖಗಳು ಕಾಣಿಸುತ್ತಿದ್ದವೆಂದರೆ ಘಜನಿ ಕೂಡಾ ಹಿಂದುಸ್ತಾನದ ಒಂದು ನಗರವೆಂದು ತಿಳಿಯಲಾಯಿತು, ಇದಲ್ಲದೆ, ಸುಲ್ತಾನನ ಸೈನ್ಯದ ಪ್ರತಿಯೊಬ್ಬ ಸೈನಿಕನ ಹತ್ತಿರ ಬಹಳಷ್ಟು ಹೆಣ್ಣಾಳುಗಳು ಮತ್ತು ಗುಲಾಮರಿದ್ದರು ಎಂದು ಇತಿಹಾಸಕಾರರು ಹೇಳುತ್ತಾರೆ.

ಇನ್ನೊಂದು ಸನ್ನಿವೇಶ

ಸೈನ್ಯದ ಮುಖ್ಯಾಧಿಕಾರಿ ಅಲತೂನ್-ತಾಶ್ ಮತ್ತು ಅರಸಲಾನ ಜಾಜಿಬನು ಹಿಜರಿ ಶಕೆ ೪೦೩ರಲ್ಲಿ ಗೈರಜಿಸ್ಥಾನನನ್ನು ಗೆದ್ದುಕೊಂಡು ಅಲ್ಲಿಯ ಅರಸನಾದ ಸಹಾಸರಾ ಅಬುಲ್-ನಸರನನ್ನು ಬಂದಿಯಾಗಿಸಿ ಘಜನಿಗೆ ಕರೆತಂದರು. ಇತಿಹಾಸಕಾರರು ಬರೆಯುತ್ತಾರೆ, ಘಝುನವಿ ಸೈನ್ಯವು ಶಹಾ ಸರಾ ಅಬುಲ್-ನಸರನನ್ನು ಬಂದಿಯಾಗಿಸಿ ಘಝುನಿಗೆ ಕರೆತರುವಾಗ ಒಬ್ಬ ಗುಲಾಮನು ಆತನು ಘಜನಿಗೆ ಹೋಗುವ ಮುನ್ನ ಆತನ ಹೆಂಡತಿಗೆ ವಿಷಯವನ್ನು ತಿಳಿಸುವ ಉದ್ದೇಶದಿಂದ ಸಹಾಸರಾ ಅಬುಲ್‌ನಸರನಿಗೆ ಒಂದು ಪತ್ರವನ್ನು ಬರೆಯಲು ಕೋರಿದನು. ಸಹಾಸರಾನು ಪತ್ರ ಕೊಡಲು ನಿರಾಕರಿಸಿದನಾದರೂ ಗುಲಾಮನ ಅತಿಯಾದ ಒತ್ತಾಯದಿಂದ ಅನಿವಾರ್ಯವಾಗಿ ಕಾಗದ ಹಾಗು ಲೇಖನಿಯನ್ನು ತೆಗೆದುಕೊಂಡು ಈ ಹಠವಾದಿ ಗುಲಾಮನ ಕಡೆಯಿಂದ ಆತನ ಹೆಂಡತಿಯ ಹೆಸರಿಗೆ ಒಂದು ಪತ್ರವನ್ನು ಬರೆಸಿದನು. ಅದರ ಸಾರಾಂಶವು ಹೀಗಿತ್ತು: 'ಎಲೈ ನೀತಿಗೆಟ್ಟ, ಉಪಯೋಗಕ್ಕೆ ಬಾರದ ವೇಶ್ಯೆಯೇ! ನಿನ್ನ ದುಷ್ಟ ಕುಕೃತ್ಯಗಳ ವಿಷಯದ ಅರಿವು ನನಗಿಲ್ಲವೆಂದು ತಿಳಿದಿರುವಿ. ನಿನ್ನ ಕಾಮುಕ ಸಂತೋಷಕ್ಕಾಗಿ ನನ್ನ ಹಣವನ್ನೆಲ್ಲಾ ಯಾವ ರೀತಿ ವೆಚ್ಚಮಾಡುತ್ತಿದ್ದೆ ಎಂದು ನನಗೆ ತಿಳಿಯದು ಎಂದು ತಿಳಿದುಕೊಂಡಿರುವಿ, ಆದರೆ ನೀನು ಪ್ರತಿ ರಾತ್ರಿ ಯಾವ ಕೆಟ್ಟ ಕಾರ್ಯವನ್ನು ಮಾಡುತ್ತ ನನ್ನ ಮನೆಯನ್ನು ಹಾಗೂ ನನ್ನ ಮರ್ಯಾದೆಯನ್ನು ಹಾಳು ಮಾಡುತ್ತಲೇ ಇರುವಿ ಎನ್ನುವ ಈ ವಿಷಯದ ಸತ್ಯತೆಯ ಬಗ್ಗೆ ನನಗೆಲ್ಲ ಗೊತ್ತಿದೆ. ನಾನು ಒಂದು ವೇಳೆ ಸುರಕ್ಷಿತವಾಗಿ ಹುಟ್ಟೂರಿಗೆ ಹಿಂದಿರುಗಿ ಬಂದರೆ ನಿನ್ನನ್ನು ತಿದ್ದುವೆನು ಮತ್ತು ನಿನ್ನ ಕೆಟ್ಟ ಕಾರ್ಯಕ್ಕೆ ತಕ್ಕ ಶಿಕ್ಷೆಯನ್ನು ಕೊಡುವೆನು.'

ಆ ಪತ್ರದ ಮೇಲೆ ಸಹಾಸರಾನು ತನ್ನ ಮೊಹರನ್ನೊತ್ತಿ ಗುಲಾಮನ ಕೈಗೆ ಕೊಟ್ಟನು. ಈ ಪತ್ರವು ಗುಲಾಮನ ಹೆಂಡತಿಯ ಕೈಸೇರಿದಾಗ, ಅದರ ವಿಷಯ ತಿಳಿದ ಆಕೆ ಗಾಬರಿಗೊಂಡು ಶತ್ರುಗಳ ಸುಳ್ಳು ಹೇಳಿಕೆ ತನ್ನ ಗಂಡನ ಕಿವಿ ತುಂಬಿದ ಕಾರಣ, ಆಕೆಯು ತನ್ನ ಗಂಡನು ಮರಳಿ ಬಂದನಂತರ ತನ್ನನ್ನು ಶಿಕ್ಷಿಸುವನೆಂದು ದೃಢವಾಗಿ ನಂಬಿದಳು. ಆಕೆಯು ಭಯಭೀತಳಾಗಿ, ಗಂಡನು ಮರಳಿ ಬಂದ ಮೇಲೆ ತನ್ನೊಂದಿಗೆ ಕೆಟ್ಟ ವ್ಯವಹಾರ ಮಾಡಕೂಡದೆಂದು ತನ್ನ ಕೆಲವು ಸ್ತ್ರೀ ಸೇವಕಿಯರೊಂದಿಗೆ ಮನೆಯನ್ನು ಬಿಟ್ಟು, ಒಂದು ಮೂಲೆಯಲ್ಲಿ ಅಡಗಿಕೊಂಡಳು. ಆ ಗುಲಾಮನು ಸಹಾಸರಾನನ್ನು ಘಜನಿಗೆ ಕೊಂಡಯ್ದು ಬಿಟ್ಟು ಮರಳಿ ತನ್ನ ಹುಟ್ಟೂರಿಗೆ ಬಂದು ತನ್ನ ಮನೆಯನ್ನು ನೋಡಿದಾಗ ಖಾಲಿ ಮನೆಯ ಮುಚ್ಚಿದ ಬಾಗಿಲನ್ನು ಕಂಡನು. ಬಾಗಿಲನ್ನು ತೆಗೆದು ನೋಡಲು ಅದರಲ್ಲಿ ತನ್ನ ಹೆಂಡತಿ ಹಾಗೂ ಇತರರು ಇಲ್ಲದಿದ್ದುದನ್ನು ಕಂಡು ಚಿಂತೆಗೀಡಾದನು. ಮನೆಯಲ್ಲಿ ಹೆಂಡತಿ ಹಾಗೂ ಇತರ ಸ್ತ್ರೀ ಗುಲಾಮರ ಸುಳಿವು ಸಹ ಇರಲಿಲ್ಲ! ಈ ಪರಿಸ್ಥಿತಿಯನ್ನು ಕಂಡು ಆ ಗುಲಾಮನು ತನ್ನ ಸುತ್ತ-ಮುತ್ತಲಿನ ಜನರನ್ನು ಕೇಳಿ ನಿಜವಾದ ವಿಷಯವನ್ನು ತಿಳಿಯಲು ಪ್ರಯತ್ನಿಸಿದನು. ನೆರೆಯ ಜನರು ಗುಲಾಮನಿಗೆ ಆ ವಿಚಿತ್ರ ಪತ್ರದ ಸಾರಾಂಶವನ್ನು ತಿಳಿಸಿದರು. ಅದನ್ನು ಕೇಳಿ ಆತನು ತನ್ನ ಹಣೆ ಬಡೆದುಕೊಂಡು ಅಳಲು ಆರಂಭಿಸಿದನು. ಈ ಪತ್ರದ ವಿಷಯ ತನಗೇನೂ ತಿಳಿಯದು ಎಂದು ಹೇಳಿ ತನ್ನ ಹೆಂಡತಿಯನ್ನು ಹುಡುಕಿದನು. ಆಕೆಯನ್ನು ಹುಡುಕಿ, ಅವಳು ಸಿಕ್ಕ ನಂತರ ಆಕೆಯಲ್ಲಿ ಬಹಳವಾಗಿ ಮೊರೆಯಿಟ್ಟು, ಬೇಡಿಕೊಂಡು ಆಕೆಯನ್ನು ಒಪ್ಪಿಸಿದನು. ಸಹಾ ಸರಾ ಅಬುಲ್- ನಸರ ಮೊದಲನೆಯ ಸಾರಿ ಸುಲ್ತಾನ ಮಹಮದನ ದರ್ಬಾರಿನಲ್ಲಿ ಬಂದಾಗ ಕೆಲವು ಅಧಿಕಾರಿಗಳು ಮೇಲೆ ಹೇಳಲಾದ ವಿಷಯವನ್ನು ತಿಳಿಸಿದರು. ಆಗ ಮಹಮದನು ವಿಷಯವನ್ನು ಕೇಳಿ ನಸುನಕ್ಕು, ಯಾವ ವ್ಯಕ್ತಿ ತನ್ನ ಹಿರಿಯರನ್ನು ಗೌರವಿಸುವುದಿಲ್ಲವೋ ಮತ್ತು ತನ್ನ ಸೀಮೆಯ ಉಲ್ಲಂಘನೆ ಮಾಡುವನೋ ಅದರ ಪರಿಣಾಮವು ಹೀಗೆಯೇ ಆಗುತ್ತದೆ ಎಂದನು.

ಬಗದಾದಿನ ಖಲಿಫಾನೊಂದಿಗೆ ಪತ್ರ ವ್ಯವಹಾರ

ಇದೇ ಕಾಲದ ಒಂದು ಘಟನೆ ಎಂದರೆ ಸುಲ್ತಾನ ಮಹಮದನು ಬಗದಾದಿನ ಖಲೀಫನಾದ 'ಅಲ್-ಖಾದರ-ಬಾಅಲ್ಲಾ-ಅಬ್ಬಾಸಿ' ಇವರಿಗೆ ಒಂದು ಪತ್ರ ಕಳುಹಿಸಿದನು. ಆ ಪತ್ರದಲ್ಲಿ,'ಖರಸ್ಥಾನ'ರಾಜ್ಯದ ಬಹಳಷ್ಟು ಭಾಗವು ಘಜನಿ ಆಡಳಿತದ ಅಧೀನದಲ್ಲಿರುವುದರಿಂದ, ಖಲೀಫರ ಅಧೀನದಲ್ಲಿರುವ ಖರಸ್ಥಾನದ ಉಳಿದ ಭಾಗವನ್ನು, ಘಜನಿ ಆಡಳಿತದ ಸ್ವಾಧೀನಕ್ಕೆ ಕೊಡುವುದು ಒಳಿತು' ಎಂದು ಬರೆಯಲಾಗಿತ್ತು. ಬಗದಾದಿನ ಖಲೀಫನು ಸುಲ್ತಾನ ಮಹಮದನ ಈ ಬಯಕೆಯನ್ನು ಅನಿವಾರ್ಯವಾಗಿ ಪೂರೈಸಿದನು. ಈ ರೀತಿಯಾಗಿ ಸಮಸ್ತ ಖರಸ್ಥಾನವು ಸುಲ್ತಾನ ಮಹಮದನ

ಸ್ವಾಧೀನಕ್ಕೆ ಬಂದಿತು. ಇದಾದ ನಂತರ ಸಮರಖಂದವನ್ನು ಸಹ ಒಂದು ರಾಜಾಜ್ಞೆಯ ಮೂಲಕ ಮಹಮದನ ಸ್ವಾಧೀನಕ್ಕೆ ಕೊಡಲು ಕೇಳಿದನು. ಖಲಿಫಾನು ಅತ್ಯಂತ ಉಗ್ರವಾದ, ತಿರಸ್ಕಾರದ ಪದಗಳಿಂದ ಮಹಮದನಿಗೆ ಬರೆದನು, 'ಒಂದು ವೇಳೆ ನೀನು ನನ್ನ ಮನಸ್ಸಿನ ವಿರುದ್ಧ ಸಮರಖಂದ ಕಡೆ ಕಣ್ಣು ಹಾಯಿಸಿದರೆ ಆಗ ನಾನು ಸಮಸ್ತ ಜಗತ್ತನ್ನು ನಿನ್ನ ವಿರುದ್ಧ ಎತ್ತಿ ಹಿಡಿಯುವೆನು.' ಇದನ್ನು ಕೇಳಿ ಮಹಮದನು ಕೊಪಗೊಂಡು, ಖಲಿಫಾನು ಕಳುಹಿಸಿದ ದೂತನಿಗೆ 'ನೀವು ಸಹಸ್ರಾರು ಪೈಕರ ಅರಣ್ಯದ ಆನೆಗಳಿಂದ 'ದಾರೂಲ್-ಖಿಲಾಫತ್' (ಖಲಿಫಾನು ವಾಸಿಸುವ ಅರಮನೆ) ಅನ್ನು ತುಳಿದು ಹಾಳು ಮಾಡಿ ಖಿಲಾಫತ್ತಿನ ಸಮಗ್ರ ಹಾಳಾದ ವಸ್ತುಗಳನ್ನು ಆನೆಗಳ ಮೇಲೆ ತುಂಬಿಕೊಂಡು ಘಝನಿಗೆ ತರಬೇಕೆಂದು ನೀವು ಬಯಸುವುದಿಲ್ಲವೆಂದು ನಾನು ಭಾವಿಸಿದ್ದೇನೆ ಎಂಬ ಉತ್ತರ ಕಳುಹಿಸಿದನು.

ಈ ಉತ್ತರವನ್ನು ತೆಗೆದುಕೊಂಡು ಪ್ರತಿನಿಧಿಯು ಹಿಂದಿರುಗಿ ಬಗದಾದಿಗೆ ಹೋದನು. ಕೆಲವು ಕಾಲದ ನಂತರ ಒಂದು ಪತ್ರವನ್ನು ತೆಗೆದುಕೊಂಡು ಘಜನಿಗೆ ಬಂದನು. ಈ ಪ್ರತಿನಿಧಿಯು ಪತ್ರವನ್ನು ತೆಗೆದುಕೊಂಡು ತಲುಪಿದಾಗ ಮಹಮದನ ದರ್ಬಾರಿನಲ್ಲಿ ಕುಳಿತಿದ್ದ. ಕೈಗಳನ್ನು ಕಟ್ಟಿ ಹಾಕಿದ್ದ ಗುಲಾಮರು ಆತನ ಎದುರಿಗೆ ನಿಂತಿದ್ದರು. ದರ್ಬಾರಿನ ಎದುರಿನಲ್ಲಿ ಪೈಕರ ಅರಣ್ಯದ ಆನೆಗಳನ್ನು ಸಾಲಾಗಿ ನಿಲ್ಲಿಸಲಾಗಿತ್ತು. ಪ್ರತಿನಿಧಿಯು ಮಹಮದನ ಮುಂದೆ ಹಾಜರಾಗಿ ಖಲೀಫರ ಪತ್ರವನ್ನು ಪ್ರಸ್ತುತ ಮಾಡಿ, ನಿಮ್ಮ ಪತ್ರಕ್ಕೆ ಉತ್ತರವು ಹೀಗಿದೆ ಎಂದು ಹೇಳಿದ್ದಾರೆ, ವಿದೇಶದ ವಿಷಯಗಳಿಗೆ ಸಂಬಂಧಿಸಿದ ಮಂತ್ರಿ 'ಖಾರಜಾ'ದ 'ಅಮೀರ ಖಾಜಾ-ಅಬುಲ್-ನಸೀರ ರೋಜನಿ'ಯು ಆ ಪತ್ರವನ್ನು ತೆರೆದು ನೋಡಿದನು. ಅದರಲ್ಲಿ ಬಿಸ್‌ಮಿಲ್ಲಾದ ನಂತರ ಕೆಲವು ವಾಕ್ಯಗಳು, ರೇಷ್ಮೆ ಬಟ್ಟೆಯ ಕತ್ತರಿಸಿದ ಸಣ್ಣ ಸಣ್ಣ ತುಣುಕುಗಳು, ಖುರಾನ್ ಶರೀಫ್‌ನ ಸೂರತಗಳ ಆರಂಭದಲ್ಲಿ ಬರುವ ಅಕ್ಷರಗಳು, ಅಲ್ಫ್-ಅಲ್-ಅಂ ನಲ್ಲಿ ಬರೆಯಲಾದ ಮತ್ತು ಈ ಸಾಲುಗಳ ನಂತರ ಅಲ್ಹ-ಹಂ-ದುಲ್-ಇಲಾಹೀ-ರಬ್ಬಿಲ್-ಆಲಮೀನ್ ವ-ಅಲ್ ಸತ್ವಾ ಲಹು ಅಲಿ ರಸೂಲ್ಲಲ್ಲಾ ಅಜಮಯೀನ್, ಎಂದು ಬರೆಯಲಾಗಿತ್ತು. ಈ ವಿಚಿತ್ರ ಅರಬೀ ಪತ್ರವನ್ನು ಓದಿ ಮತ್ತು ಅದನ್ನು ಕೇಳಿ ಸುಲ್ತಾನ ಮಹಮದನು ಹಾಗೂ ಆಸ್ಥಾನದ ಸದಸ್ಯರೆಲ್ಲ ಆಶ್ಚರ್ಯಪಟ್ಟರು. ಈ ಬರವಣಿಗೆಯಿಂದ ಬಗದಾದ್ ಖಲಿಫಾನ ಉದ್ದೇಶವೇನು ಮತ್ತು ಈ ರೇಷ್ಮೆ ಬಟ್ಟೆಯ ತುಣುಕುಗಳು ಸೂಚಿಸುವುದೇನು, ಎಂದು ಕೆಲವು ಕಾಲದವರೆಗೆ ವಿಚಾರಮಾಡುತ್ತಿದ್ದರು. ಖುರಾನ ಮಜೀದಿನ ಅಕ್ಷರಗಳಿಗೆ ಮತ್ತು ಈ ರೇಷ್ಮೆ ತುಣುಕುಗಳಿಗಿರಬಹುದಾದ ಸಂಬಂಧದ ಬಗ್ಗೆ ಆಲೋಚಿಸಲಾಯಿತು. ಅವೆಲ್ಲವುಗಳನ್ನು ಪುನಃ ಓದಲಾಯಿತು. ಅವುಗಳ ಉದ್ದೇಶ ಮತ್ತು ಕೋರಿಕೆಗಳ ಬಗ್ಗೆ ವಿಚಾರ ಮಾಡಲಾಯಿತು. ಆದರೆ ಯಾರಿಗೂ ಈ ಪತ್ರದ ಸಾರಾಂಶವು ತಿಳಿಯಲಿಲ್ಲ. ಬಹಳ ಕಾಲದವರೆಗೆ ಸುಲ್ತಾನ ಮಹಮೂದನ ದರ್ಬಾರಿನಲ್ಲಿ

ಪ್ರವೇಶ ದೊರೆಯದ, ಖಾಜಾ ಅಬೂಬಕರ ಖ್ವೇಹಸ್ಥಾನಿಯು ಧೈರ್ಯದಿಂದ ವಿನಂತಿಸಿದನು 'ನನ್ನ ವಿಚಾರದಲ್ಲಿ ಗೌರವಾನ್ವಿತರಾದ ತಾವು ಬಗದಾದಿನ ಖಲೀಫಾನನ್ನು ಪೈಕರ ಅರಣ್ಯದ ಆನೆಗಳಿಂದ ತುಳಿಸುತ್ತೇನೆಂದು ಎಚ್ಚರಿಸಿದ್ದಿರಿ, ಅದಕ್ಕಾಗಿ ಖಲಿಫಾನು ಇದರ ಉತ್ತರದಲ್ಲಿ ಕುರಾನನ ಸೂರಾಫೀಲ್ ಅಧ್ಯಾಯದ ಕಡೆಗೆ ಹೀಗೆ ಸನ್ನೆ ಮಾಡಿರುವ ಸಾಧ್ಯತೆಯುಂಟು "ನಿಮ್ಮ ಪ್ರಭುವಾಗಿರುವ ಅಲ್ಲಾಹನು ಆನೆಯ ಒಡೆಯರ ಜೊತೆಗೆ ಹೇಗೆ ವ್ಯವಹರಸದನೆಂದು ನೀವು ಗಮನಿಸಲಿಲ್ಲವೆ", ಈ ಮಾತು ಕೇಳಿದೊಡನೆ ಸುಲ್ತಾನ ಮುಹಮ್ಮದ್‌ನು ದಿಗ್ಭ್ರಾಂತನಾಗಿ ಮೂರ್ಛಿತನಾದನು. ಎಚ್ಚರ ಬಂದಾಗ ಬಹಳ ರೋದಿಸಿದನು. ಬಗದಾದ್ ಖಲಿಫಾನ ಪ್ರತಿನಿಧಿಗೆ ಕ್ಷಮಿಸಲು ಕೋರಿ, ಆತನಿಗೆ ಅಮೂಲ್ಯವಾದ ಇನಾಮುಗಳನ್ನು ಕೊಟ್ಟು ಮರಳಿ ಬಗದಾದಿಗೆ ಕಳುಹಿಸಿದನು. ಇದಲ್ಲದೆ, ಅಬೂಬಕರ ಖ್ವೇಹಸ್ಥಾನಿಗೆ ಬೆಲೆಬಾಳುವ ಉಡುಪನ್ನು ಕೊಟ್ಟು ತನ್ನ ಅಮೀರರ ಗುಂಪಿನಲ್ಲಿ ಸೇರಿಸಿಕೊಂಡನು.

ನಂದೂನಾ ಕೋಟೆಯ ಮೇಲೆ ದಾಳಿ :

ಹಿಜರಿ ಶಕೆ ೪೦೪ರಲ್ಲಿ ಸುಲ್ತಾನ ಮಹಮದನು ಬಾಲನಾಥನ ಪ್ರಸಿದ್ಧ ಕೋಟೆಯಾದ ನಂದೂನಾ ಮೇಲೆ ದಾಳಿ ಮಾಡಿದನು. ಆ ಕಾಲದಲ್ಲಿ ರಾಜಾ ಆನಂದಪಾಲನು ಮೃತಪಟ್ಟಿದ್ದನು ಮತ್ತು ಆನಂದಪಾಲನ ಮಗನು ಲಾಹೋರಿನ ಅರಸನಾಗಿದ್ದನು. ಈತನಿಗೆ ಮಹಮದನ ದಾಳಿಯ ಸಮಾಚಾರವು ತಿಳಿದಾಗ ಆತನನ್ನು ಎದುರಿಸುವ ಸಾಮರ್ಥ್ಯ ತನಗಿಲ್ಲವೆಂದು ತಿಳಿದು ಕೆಲವು ಬುದ್ಧಿವಂತ ಹಾಗು ಅನುಭವಿ ಜನರಿಗೆ ಕೋಟೆಯನ್ನು ಒಪ್ಪಿಸಿ, ತಾನು ಕಾಶ್ಮೀರದ ಗುಡ್ಡಗಾಡಿನಲ್ಲಿ ಹೋಗಿ ಅಡಗಿಕೊಂಡನು.

ಮಹಮದನು ಕೋಟೆಯನ್ನು ಸುತ್ತುವರಿದು, ಕೋಟೆಯ ಬಾಗಿಲುಗಳನ್ನು ತೆಗೆಯಲು ಬೇಕಾದ ಉಪಾಯಗಳನ್ನು ಉಪಯೋಗಿಸಲು ಆದೇಶಿಸಿದನು. ಈ ವಿಧಾನವು ಎಷ್ಟೊಂದು ತಡವಾಯಿತೆಂದರೆ ಕೋಟೆಯ ಒಳಗಿನ ಜನರು ವಿನಮ್ರರಾಗಿ ತಮ್ಮ ಶಸ್ತ್ರಗಳನ್ನು ಕೆಳಗಿಟ್ಟು, ಪ್ರಾಣದಾನವನ್ನು ಕೋರಿದರು. ಮಹಮದನು ಕೋಟೆಯನ್ನು ಸ್ವಾಧೀನ ಪಡಿಸಿಕೊಂಡನು. ತನ್ನ ಒಬ್ಬ ವ್ಯವಸ್ಥಾಪಕನನ್ನು ಆ ಕೋಟೆಯನ್ನು ಆಡಳಿತಕ್ಕೆ ನಿಯಮಿಸಿದನು ಹಾಗು ಸ್ವತಃ ತಾನು ದರ್‍ರಾ ಕಾಶ್ಮೀರ ಕಡೆ ಹೊರಟು ನಿಂತನು. ಆನಂದಪಾಲನ ಮಗನು ಈ ಸಮಾಚಾರ ತಿಳಿದು, ಅಲ್ಲಿಂದಲೂ ಓಡಿಹೋದನು. ಮಹಮದನು ದರ್‍ರೆಯನ್ನು ಸ್ವಾಧೀನಪಡಿಸಿಕೊಂಡನು. ಹೆಚ್ಚು ಶ್ರಮವಿಲ್ಲದೆ ದೊರೆತ ವಸ್ತುಗಳನ್ನು ತೆಗೆದುಕೊಂಡು ಜನರನ್ನು ಇಸ್ಲಾಮ ಮತಕ್ಕೆ ಸೇರಿಸಿ, ಮಹಮದನು ಘಜನಿಗೆ ತಿರುಗಿಬಂದನು.

ಒಂದು ದುಃಖದಾಯಕ ಸನ್ನಿವೇಶ

ಹಿಜರಿ ಶಕೆ ೪೦೭ರಲ್ಲಿ ಸುಲ್ತಾನ ಮಹಮದನು ಕಾಶ್ಮೀರನ್ನು ಗೆಲ್ಲಲು ನಿರ್ಧರಿಸಿದನು.

ಕಾಶ್ಮೀರ ಸೀಮೆಯನ್ನು ಪ್ರವೇಶಮಾಡಿ 'ಲೋ ಕೂಟ' ಕೋಟೆಗೆ ಮುತ್ತಿಗೆ ಹಾಕಿದನು. ಈ ಕೋಟೆಯು ತನ್ನ ಎತ್ತರ ಹಾಗು ಭದ್ರತೆಯ ಕಾರಣ ಬಹಳ ಪ್ರಖ್ಯಾತಿ ಪಡೆದಿತ್ತು. ಈ ಕೋಟೆಯನ್ನು ಗೆಲ್ಲಲು ಬಹಳ ಸಮಯಬೇಕಾಯಿತು. ಕೋಟೆಯನ್ನು ಮುತ್ತಿಗೆ ಹಾಕಿದ ಕಾಲದಲ್ಲಿ ಚಳಿ ಹಾಗೂ ಹಿಮಪಾತವಾಗಿ, ಘಜನಿಯ ಸೈನಿಕರು ಬಹಳ ಕಷ್ಟಗಳನ್ನು ಎದುರಿಸಬೇಕಾಯಿತು. ಇದಲ್ಲದೆ, ಕೋಟೆಯಲ್ಲಿರುವ ಜನರಿಗೆ ರಾಜಧಾನಿಯಿಂದ ಸಹಾಯವು ದೊರೆಯಿತು. ಈ ಕಾರಣದಿಂದ ಮಹಮದನು ಕೋಟೆಯ ಮುತ್ತಿಗೆಯನ್ನು ಹಿಂತೆಗೆದುಕೊಂಡು ಘಜನಿಗೆ ಹಿಂದಿರುಗಿ ಹೋಗುವುದು ಉಚಿತವೆಂದು ತಿಳಿದು ಹಿಂತಿರುಗುವ ಕಾಲದಲ್ಲಿ ಸೈನ್ಯವು ದಾರಿ ತಪ್ಪಿತು. ಸೈನ್ಯವು ಹೊರಟ ಪ್ರದೇಶದ ಸುತ್ತ-ಮುತ್ತಲೂ ಕೇವಲ ನೀರು ಕಾಣುತ್ತಿತ್ತು ಮತ್ತು ಅರಣ್ಯವು ಸಹ ನೀರಿನಿಂದ ತುಂಬಿತ್ತು. ಬಹಳಷ್ಟು ಸೈನಿಕರು ನೀರಿನಲ್ಲಿ ಮುಳುಗಿ ಮೃತಪಟ್ಟರು. ಹಿಂದುಸ್ತಾನ ಗೆಲ್ಲಲು ಕೈಗೊಂಡ ಕಾರ್ಯಗಳ ಸರಣಿಯಲ್ಲಿ ಸುಲ್ತಾನ ಮಹಮದನಿಗೆ ಎಲ್ಲಕ್ಕೂ ಮೊದಲು ಸಂಭವಿಸಿದ ಕೆಟ್ಟ ಘಟನೆಯು ಇದಾಗಿತ್ತು. ಕೆಲವು ದಿನಗಳವರಗೆ ಖೇದಗೊಂಡಿದ್ದ ಮಹಮದನು ಈ ವಿಪತ್ತಿನಿಂದ ಮುಕ್ತಿ ಪಡೆದು, ಯಾವ ವಿಶೇಷ ಕಾರ್ಯವನ್ನು ಕೈಗೊಳ್ಳದೆ ಘಜನಿಗೆ ಮರಳಿದನು.

ಖ್ವಾರಜಮ ಜನರೊಂದಿಗೆ ಸಮರ

ಅದೇ ವರ್ಷ ಘಟಿಸಿದ ಒಂದು ಘಟನೆ ಎಂದರೆ ಖ್ವಾರಜಮ ಅರಸನಾದ ಅಬುಲ್-ಅಬ್ಬಾಸ-ಮಾಮೂನ್‌ನು ಮಹಮದನಿಗೆ ಒಂದು ಪತ್ರ ಬರೆದನು. ಅದರಲ್ಲಿ ಮಹಮದನ ಸಹೋದರಿಯ ಮದುವೆಯನ್ನು ಖ್ವಾರಜಮ ಅರಸನೊಂದಿಗೆ ಮಾಡಲು ಕೋರಲಾಗಿತ್ತು. ಮಹಮದನು ಈ ಬೇಡಿಕೆಯನ್ನು ಒಪ್ಪಿ ತನ್ನ ಸಹೋದರಿಯನ್ನು ಖ್ವಾರಜಮದ ಅರಸನೊಂದಿಗೆ ಮದುವೆ ಮಾಡಿದನು. ಹಿಜರಿ ಶಕೆ ೪೦೭ರಲ್ಲಿ ಸುಲ್ತಾನ ಮಹಮದನಿಗೆ ದೊರೆತ ಸಮಾಚಾರವೆಂದರೆ ಕೆಲವು ದ್ರೋಹಿಗಳು ವಿದ್ರೋಹವನ್ನು ಮಾಡಿ ಖ್ವಾರಜಮದ ಅರಸನನ್ನು ಕೊಂದುಬಿಟ್ಟರು. ಈ ಸಮಾಚಾರ ತಿಳಿದು ಕೂಡಲೆ ಘಜನಿ ಬಿಟ್ಟು ಬಲಿಗಿಗೆ ಹೋದನು. ಅಲ್ಲಿಂದ ಖ್ವಾರಜಮದ ಕಡೆಗೆ ಹೊರಟನು. ಸುಲ್ತಾನ ಮಹಮದನು ಖ್ವಾರಜಮನ ಸೀಮೆಯ ಸಮೀಪದ ಪ್ರಾಂತವಾದ ಹಜರಬಂದಿಗೆ ಹೋದೊಡನೆ, ಅಲ್ಲಿ ತನ್ನ ಒಬ್ಬ ಅಮೀರನಾದ ಮೊಹ್ಮದತಾಯಿ ಎಂಬ ತನ್ನ ಪ್ರತಿನಿಧಿಯನ್ನು, ತನ್ನ ಸೈನ್ಯವು ಹೋಗುವುದಕ್ಕಿಂತ ಮುನ್ನ ಕಳುಹಿಸಿ ಕೊಟ್ಟು, ತಾನೊಂದು ಸ್ಥಳದಲ್ಲಿ ನಿಂತುಕೊಂಡನು. ಒಂದು ದಿನದ ಸನ್ನಿವೇಶವೆಂದರೆ ಘಜನಿ ಸೈನ್ಯವು ಒಂದು ಸ್ಥಳದಲ್ಲಿ ತಂಗಿದ್ದು, ಎಲ್ಲ ಸೈನಿಕರು ಬೆಳಗಿನ ನಮಾಜ ಮಾಡುತ್ತಿದ್ದಾಗ ಖ್ವಾರಜಮನ ಪ್ರಜೆಗಳ ಮುಖ್ಯ ಸೈನ್ಯಾಧಿಕಾರಿ, 'ಖಮಾರ ತಾಶ್'ನು ಇದ್ದಕ್ಕಿದ್ದ ಹಾಗೆ ಕಮೀನ್-ಗಾ (ಕಮೀನ್ ಸ್ಥಳ)ದಿಂದ ಹೊರಟು ಇವರ ಮೇಲೆ ದಾಳಿ ಮಾಡಿ, ಘಜನಿ ಸೈನ್ಯದ ಬಹಳಷ್ಟು ಸೈನಿಕರನ್ನು ಸಂಹಾರ ಮಾಡಿದನು.

ಸುಲ್ತಾನ ಮಹಮದನು ಪ್ರಾರ್ಥನೆ ಮುಗಿದನಂತರ ಕೇವಲ ತನ್ನ ಗುಲಾಮರಿಂದ ಕೂಡಿದ ಒಂದು ದೊಡ್ಡ ಸೈನ್ಯವನ್ನು ಸಂಘಟಿಸಿ ಖಮಾರ ತಾಶ್‌ನ ಬೆನ್ನಟ್ಟಿದರು. ಖಮಾರ ತಾಶ್‌ನನ್ನು ಬಂದಿಮಾಡಿ ಮಹಮದನ ಎದುರಿಗೆ ತರಲಾಯಿತು. ಖಮಾರತಾಶನನ್ನು ಕೈದು ಮಾಡಿಕೊಂಡು 'ಹಜಾರ ಅಶಪ್ಪ'ನ ಕೋಟೆ ಕಡೆಗೆ ಮುನ್ನುಗ್ಗಿದನು. *(ಈ ಹೆಸರಿನ ಒಂದು ನಗರವು ಈಗಲೂ ಸಹ ಹಜಯೂನ್ ನದಿಯ ಪಶ್ಚಿಮ ತಟದಲ್ಲಿದೆ.) ಈ ಕೋಟೆಯ ಹತ್ತಿರ ಖ್ವಾರಜಮ ಪ್ರಜೆಗಳ ಸೈನಿಕರು ಒಂದು ಸ್ಥಳದಲ್ಲಿ ಒಂದುಗೂಡಿ, ಸುಲ್ತಾನ ಮಹಮದನ ಸೈನಿಕರೊಂದಿಗೆ ಯುದ್ಧವಾಯಿತು. ಉಭಯಪಕ್ಷದ ಸೈನಿಕರು ಘನಘೋರ ಯುದ್ಧ ಮಾಡಿದರು. ಈ ಯುದ್ಧದ ಪರಿಣಾಮವಾಗಿ ಖ್ವಾರಜಮ ಪ್ರಜೆಗಳಿಗೆ ಸೋಲಾಗಿ ಅವರ ಸೈನ್ಯಾಧಿಕಾರಿ 'ಸಾಲಾರ ಅಲ್ಪಗೀನ್ ಬೂಖಾರಿ' ಬಂದಿಯಾದನು ಮತ್ತು ತನ್ನ ಅಮೀರ 'ಅಲ್ತ-ಉನ್-ತಾಶ್'ಗೆ ಖ್ವಾರಜಮದ ಅರಸನೆಂದು ಸೂಚಿಸಿ ಖ್ವಾರಜಮ ಹಾಗು ಆವರಕಂದನ ರಾಜನ್ನಾಗಿ ನಿಯುಕ್ತ ಮಾಡಿದನು. ಖ್ವಾರಜಮ ಗೆದ್ದನಂತರ ಮಹಮದನು ಬಲಿಗಿಗೆ ಬಂದನು. ತನ್ನ ಅಮೀರ ಮಸೂದನಿಗೆ ಹರಾತ್‌ನ ರಾಜನನ್ನಾಗಿ ನೇಮಿಸಿದನು. ಇದಲ್ಲದೆ, 'ಅಬೂ-ಅಲ್-ಸಹಲ್-ಬಿನ್-ಹುಸೇನ-ಜೂಜನಿ' ಯನ್ನು ಮಸೂದನ ಪ್ರಧಾನ ವಕೀಲನಾಗಿ ನಿಯಮಿಸಿ ಆತನೊಂದಿಗೆ ಕಳುಹಿದನು. ಮಹಮದನು ತನ್ನ ಎರಡನೆಯ ಅಮೀರನಾದ ಮೊಹ್ಮದನಿಗೆ ಗೋರಗಾವ್‌ನ ಅರಸನನ್ನಾಗಿ ಮಾಡಿ ಅಬೂ-ಅಕರ-ಖ್ಷೇಹಸ್ಥಾನಿಯೊಂದಿಗೆ ಕಳುಹಿಸಿಕೊಟ್ಟನು.

ಕನ್ನೋಜಿನ ಮೇಲೆ ಆಕ್ರಮಣ

ಖ್ವಾರಜಮ ವಶಪಡಿಸಿಕೊಂಡ ನಂತರ ಮಹಮದನು ಸೈನಿಕರಿಗೆ ಸ್ವಲ್ಪ ವಿಶ್ರಾಂತಿ ದೊರೆಯಲೆಂದು ಚಳಿಗಾಲವನ್ನು ಬಸ್ತನಲ್ಲಿ ಕಳೆದನು. ಚಳಿಗಾಲ ಮುಗಿದ ನಂತರ ಹಿಜರಿ ಶಕೆ ೪೦೯ರಲ್ಲಿ ವಸಂತ ಋತುವಿನ ಆರಂಭದಿಂದ ವಾತಾವರಣವು ಪರಿಶುಭ್ರವಾಗಿ, ಸುತ್ತಮುತ್ತಲೂ ಹಚ್ಚ-ಹಸುರಾಗಿದ್ದು, ಮನಸ್ಸಿಗೆ ನೆಮ್ಮದಿ ಎನಿಸುವ ಸ್ಥಿತಿಯಲ್ಲಿ ಮಹಮದನು ಕನ್ನೋಜನ್ನು ಗೆಲ್ಲಲು ನಿಶ್ಚಯಿಸಿದನು. ತನ್ನೊಂದಿಗೆ ಒಂದು ಲಕ್ಷ ಸೈನಿಕರನ್ನು ಮತ್ತು ತುರ್ಕಿಸ್ಥಾನ, ಮಾರ್‍ವಾ, ಅಲ್-ಜಹೀರ ಮತ್ತು ಖುರಸ್ಥಾನನಿಂದ ಜಿಹಾದ ಮಾಡಲು ಬಂದಿದ್ದ ಇಪ್ಪತ್ತು ಸಾವಿರ ಅನ್ಯ ಮುಸಲ್ಮಾನರು, ಮಹಮದನು ಸ್ವತಃ ಪ್ರಯಾಣ ಬೆಳೆಸುವನೆಂದು ನಿರೀಕ್ಷಿಸುತ್ತಿದ್ದರು. 'ಗಷಷ್ಟಾಸಪ'ನಿಂದ ಆರಂಭಿಸಿ ಮಹಮದನ ಆಡಳಿತಾವಧಿವರೆಗೆ, ಹಿಂದುಸ್ತಾನದ ರಾಜರರಲ್ಲದ ಅನ್ಯ ಮತದ ಯಾವ ವ್ಯಕ್ತಿಯೂ ಕನ್ನೋಜಿನ ಮೇಲೆ ದಾಳಿ ಮಾಡಿರಲಿಲ್ಲ. ಈ ಅವಧಿಯ ನಂತರ ಮಹಮದನು ಪ್ರಥಮ ವ್ಯಕ್ತಿಯಾಗಿ ಈ ಕಾರ್ಯದಲ್ಲಿ ನಿರತನಾದನು. ಇತಿಹಾಸವು ಈ ವಿಷಯಕ್ಕೆ ಸಾಕ್ಷಿಯಾಗಿದೆ. ಘಝನಿಯಿಂದ ಕನ್ನೋಜ ತಲುಪುವ ಮಾರ್ಗವನ್ನು ಕ್ರಮಿಸಲು ಮೂರು ತಿಂಗಳ ಸಮಯ ಬೇಕು ಮತ್ತು ಮಾರ್ಗಮಧ್ಯದಲ್ಲಿ

ಏಳು ದೊಡ್ಡ ನದಿಗಳನ್ನು ದಾಟಬೇಕಾಗುತ್ತಿತ್ತು. ಮಹಮೂದನು ಹೆಚ್ಚಿನ ಶ್ರಮವಿಲ್ಲದೆ ಈ ಪ್ರಯಾಣವನ್ನು ಮಾಡಿದನು. ಸುಲ್ತಾನನು ಕಾಶ್ಮೀರ ಸೀಮೆಯವರೆಗೆ ಬಂದಾಗ ಕಾಶ್ಮೀರದ ಸುಲ್ತಾನನು ಬೆಲೆಬಾಳುವ ಕಾಣಿಕೆ, ಬಹುಮಾನಗಳನ್ನು ಸಲ್ಲಿಸಿದನು.

ಮಹಮದನು ಕೂಡಾ ಈತನಿಗೆ ರಾಜೋಚಿತವಾದ ಕೊಡುಗೆ ನೀಡಿದನು. ಕಾಶ್ಮೀರದ ಅರಸನು ಮುಂದಾಗಿ, ಖನ್ನೋಜಗೆ ಹೊರಟು ನಿಂತನು. ಪ್ರಯಾಣವು ತನ್ನ ಗುರಿ ಮುಟ್ಟಿ, ಮುಸಲ್ಮಾನರ ಸೈನ್ಯವು ಕನ್ನೋಜ ತಲುಪಿ ಕೋಟೆಯನ್ನು ನೋಡಿದಾಗ ಅದರ ಸಧೃಢತೆ ಹಾಗೂ ಎತ್ತರವು ಸಮಸ್ತ ಹಿಂದುಸ್ತಾನದಲ್ಲಿಯೇ ಅನುಪಮವಾಗಿತ್ತು. ಕನ್ನೋಜ ರಾಜನ ಹೆಸರು ಕೋರಾ ಎಂದಿತ್ತು. ಒಂದು ಕಾಲದಲ್ಲಿ ಈತನು ಪ್ರಖ್ಯಾತ ರಾಜನಾಗಿದ್ದನು. ಆದರೆ ಮುಸಲ್ಮಾನರ ಸೈನ್ಯದ ಸಂಖ್ಯೆ ಹಾಗು ಸುಲ್ತಾನ ಮಹಮದನ ವೈಭವಾದಿ ಕಂಡು, ಈತನಿಗೆ ಮಹಮದನನ್ನು ಎದುರಿಸುವ ಶಕ್ತಿ ಕಂಡುಬರಲಿಲ್ಲ. ತನ್ನ ಪ್ರತಿನಿಧಿಯನ್ನು ಕಳುಹಿಸಿ, ಮಹಮದನ ಅಧೀನತೆ ಸ್ವೀಕರಿಸಲು ಸಿದ್ಧನಾಗಿರುವುದನ್ನು ತಿಳಿಸಿದನು. ಮಹಮದನು, ರಾಜಾ ಕೋರಾನೊಂದಿಗೆ ವಿನಮ್ರತೆ ಹಾಗು ಪ್ರೀತಿಯಿಂದ ವ್ಯವಹರಿಸಿ ತನ್ನ ಆತ್ಮೀಯ ವಲಯದಲ್ಲಿ ಸೇರಿಸಿಕೊಂಡನು. 'ಜೆಬುಲ್-ಅಸ್ಸರ' ಸಾಹೇಬರ ಹೇಳಿಕೆ ಏನೆಂದರೆ ರಾಜಾ ಕೋರಾನು ಮಹಮದನ ಅಧಿಕಾರವಲ್ಲದೆ ಇಸ್ಲಾಮ ಧರ್ಮವನ್ನು ಕೂಡಾ ಸ್ವೀಕರಿಸಿದನು.

ಮೀರತ ಕೋಟೆಯ ಗೆಲುವು

ಕನ್ನೋಜಿನಲ್ಲಿ ಮೂರುದಿನ ವಸತಿ ಮಾಡಿದನಂತರ ಮಹಮದನು ಮೀರತ ಕೋಟೆಯನ್ನು ಗೆಲ್ಲಲು ನಿರ್ಧರಿಸಿದನು. ಮಹಮದನ ಬರುವಿಕೆ ತಿಳಿದೊಡನೆ ಈ ಕೋಟೆಯ ರಾಜ ಹರೂತನು ಕೆಲವು ವಿಶ್ವಾಸಾರ್ಹ ಹಾಗು ಗೌರವಾನ್ವಿತ ದರ್ಬಾರಿಗಳಿಗೆ ಕೋಟೆಯನ್ನು ಒಪ್ಪಿಸಿ ತಾನು ಅರಣ್ಯದ ಕಡೆಗೆ ಹೊರಟನು. ಕೋಟೆಯಲ್ಲಿದ್ದ ಜನರು ಮಹಮದನನ್ನು ಎದುರಿಸಲು ಸಾಧ್ಯವಾಗದೆ ೨ ಲಕ್ಷ ೫೦ ಸಾವಿರ ರೂಪಾಯಿಗಳು ಮತ್ತು ೩೦ ಆನೆಗಳನ್ನು ಅರ್ಪಿಸಿ ತಮ್ಮ ಪ್ರಾಣಭಿಕ್ಷೆ ಬೇಡಿದರು. ಮಹಮದನು ಇವರು ಸಲ್ಲಿಸಿದ ಕಾಣಿಕೆಯನ್ನು ಸ್ವೀಕರಿಸಿ ಅವರಿಗೆ ಪ್ರಾಣದಾನ ನೀಡಿದನು.

ಮಹಾವನ್ ಕೋಟೆಯ ಗೆಲವು

ಮೀರತ ಕೋಟೆಯ ಗೆಲುವಿನ ನಂತರ ಯಮುನಾ ನದಿಯ ತೀರದಲ್ಲಿರುವ ಮಹಾವೂನ ಗೆಲ್ಲಲು ನಿಶ್ಚಯಿಸಿದನು. ಈ ಕೋಟೆಯನ್ನಾಳುವ ರಾಜನಾದ ಗುಲಚಂದ ನಿಗೆ ಈ ವಿಷಯ ತಿಳಿದಾಗ ಒಂದು ಆನೆಯ ಮೇಲೆ ಕುಳಿತುಕೊಂಡು ನದಿಯನ್ನು ದಾಟಬೇಕೆನ್ನುವಷ್ಟರಲ್ಲಿ ಮುಸಲ್ಮಾನರ ಸೈನ್ಯವೂ ಕೋಟೆ ಸಮೀಪಿಸಿತು. ಈ ಪರಿಸ್ಥಿತಿ

ಕಂಡು ಗುಲಚಂದನು ತನ್ನಲ್ಲಿದ್ದ ಜಂಬೆಯಿಂದ(ಚಿಕ್ಕ ಮೊನಚಾದ ಆಯುಧ) ಮೊದಲು ತನ್ನ ಹೆಂಡತಿ ಮತ್ತು ಮಗನ ರುಂಡಗಳನ್ನು ಕತ್ತರಿಸಿ ಅದರಿಂದಲೇ ತನ್ನ ಹೊಟ್ಟೆ ತಿವಿದುಕೊಂಡನು. ಈ ಕೋಟೆಯ ಸಮಸ್ತ ವಸ್ತುಗಳು ಮುಸಲ್ಮಾನರ ವಶವಾದವು, ಅವುಗಳನ್ನು ವಿವರವಾಗಿ ಹೇಳಲು ಸಾಧ್ಯವಿಲ್ಲ. ಇತರ ವಸ್ತುಗಳೊಂದಿಗೆ ೮೦ ಪೈಕರ ಅರಣ್ಯದ ಆನೆಗಳು ಕೂಡಾ ಕೈಸೇರಿದವು.

ಮಥುರಾದ ಗೆಲವು

ಈ ಗೆಲವುಗಳ ನಂತರ ಮಹಮದನು ಮಥುರಾದ ಕಡೆ ಗಮನ ಹರಿಸಿದನು. ಈ ಪ್ರಾಂತದಲ್ಲಿ ಮಥುರಾ ಪಟ್ಟಣವಿದ್ದು, ಅಲ್ಲಿ 'ಶ್ರೀ ಕೃಷ್ಣ'ನ ಜನ್ಮ ಭೂಮಿಯಿದೆ.

ಹಿಂದುಸ್ಥಾನಿಗಳು 'ಶ್ರೀ ಕೃಷ್ಣ'ನನ್ನು ಪರಮಾತ್ಮನ ಅವತಾರವೆಂದು ತಿಳಿಯುತ್ತಾರೆ. ಮಥುರಾದ ಜನರು ಹಾಗು ಅಲ್ಲಿಯ ಸಂಪತ್ತು ಅನುಪಮವಾಗಿದ್ದು, ಈ ಪಟ್ಟಣದಲ್ಲಿ ನೋಡಲು ಸಂಬಂಧಿಸಿದ ಚಿತ್ರ ವಿಚಿತ್ರವಾದ ವಸ್ತುಗಳಿದ್ದವು. ಮಹಮದನು ಮಥುರಾದ ಮೇಲೆ ದಾಳಿ ಮಾಡಿದಾಗ, ಈ ನಗರದ ರಾಜ್ಯವು ದೆಹಲಿಯ ಮೇಲ್ವಿಚಾರಣೆಯಲ್ಲಿತ್ತು. ಮಹಮದನನ್ನು ಎದುರಿಸಲು ಯಾರೂ ಬರಲಿಲ್ಲ. ಅನಾಯಾಸವಾಗಿ, ಯಾವ ರೀತಿಯ ಅಡ್ಡಿ ಆತಂಕವಿಲ್ಲದೆ ಮಥುರಾ ಸ್ವಾಧೀನವಾಯಿತು. ಅಲ್ಲಿ ಮಹಮದನು ಮನಬಂದತೆ ಪಟ್ಟಣವನ್ನು ಧ್ವಂಸ ಮಾಡಿದನು ಮತ್ತು ನಗರದಲ್ಲಿದ್ದ ಹಾಗೂ ಸುತ್ತ–ಮುತ್ತಲಿನ ಬಹಳಷ್ಟು ಮೂರ್ತಿಗಳಿರುವ ದೇವಸ್ಥಾನಗಳನ್ನು ಭಗ್ನಮಾಡಿ ಸುಟ್ಟಹಾಕಿದನು. ಇಲ್ಲಿಂದ ಎಣಿಕೆಗೆ ಬಾರದಷ್ಟು ನಗ–ನಾಣ್ಯಗಳನ್ನು ಪಡೆದುಕೊಂಡನು. ಮಥುರಾದ ಉನ್ನತ ಕಟ್ಟಡ ಮತ್ತು ದೇವಸ್ಥಾನಗಳನ್ನು ನೋಡಿ ಮಹಮದನು ವಿಸ್ಮಯದಿಂದ ಬೆರಗಾದನು. ಮಥುರಾ ಪಟ್ಟಣದ ಗೆಲುವಿನ ನಂತರ ಘಜನಿಯ ಕೆಲವು ಅಮೀರರಿಗೆ ಬರೆದ ಪತ್ರಗಳಿಂದ ಸುಲ್ತಾನ ಮಹಮದನಿಗಾದ ವಿಸ್ಮಯವನ್ನು ಊಹಿಸಬಹುದು. ಆ ಪತ್ರದಲ್ಲಿ ಮಹಮದನು ಮಥುರಾದ ವೈಭವವನ್ನು 'ಈ ನಗರದಲ್ಲಿ ಒಂದು ಸಾವಿರ ಉನ್ನತವಾದ ಮಹಲುಗಳಿವೆ. ಅವುಗಳಲ್ಲಿ ಹೆಚ್ಚಿನ ಮಹಲುಗಳು ಅಮೃತಶಿಲೆಯಿಂದ ನಿರ್ಮಾಣವಾಗಿವೆ. ಮಥುರಾದಲ್ಲಿ ಎಷ್ಟು ದೇವಸ್ಥಾನಗಳಿವೆಂದರೆ, ಅವುಗಳನ್ನು ಧ್ವಂಸಮಾಡುವದರಲ್ಲಿ ದಣಿದು ಹೋದೆ. ಅಂದರೆ, ದೇವಸ್ಥಾನಗಳ ಸಂಖ್ಯೆಯನ್ನು ಎಣಿಕೆ ಮಾಡಲು ಸಾಧ್ಯವಾಗಲಿಲ್ಲ. ಈ ರೀತಿಯ ಯಾವುದಾದರೊಂದು ಕಟ್ಟಡ ನಿರ್ಮಾಣ ಮಾಡಲು ಬಯಸಿದರೆ ಒಂದು ಲಕ್ಷ ಅಶ್ರಫಿಗಳು ತಗುಲುವ ಸಂಭವವಿದೆ. ಅದನ್ನು ಮೂರು ವರ್ಷದ ಕಾಲಾವಧಿಯಲ್ಲಿ ಬಹಳಷ್ಟು ಪರಿಣಿತರು ಹಾಗು ನಿಪುಣ ಕೆಲಸಗಾರರ ಕೈಯಿಂದ ನಿರ್ಮಿಸಬೇಕಾಗುತ್ತದೆ.' ಎಂದು ವರ್ಣಿಸಿದ್ದಾನೆ.

ಇತಿಹಾಸಕಾರರು ಹೇಳುವುದೇನೆಂದರೆ, ಸುಲ್ತಾನ ಮಹಮದನಿಗೆ ಅನಾಯಾಸವಾಗಿ

ಕೈಗೆ ಸಿಕ್ಕ ಸಂಪತ್ತಲ್ಲದೆ, ಐದು ಚಿನ್ನದಿಂದ ಮಾಡಿದ ಮೂರ್ತಿಗಳು, ಅವುಗಳ ಕಣ್ಣುಗಳಲ್ಲಿ ಬೆಲೆಬಾಳುವ ಹರಳುಗಳನ್ನು ಜೋಡಿಸಲಾಗಿದ್ದು, ಅವುಗಳ ಬೆಲೆ ೫೦ ಸಾವಿರ 'ಜರೇ ಸುರ್ಖ' ನಿಗದಿಮಾಡಲಾಗಿದ್ದು, ಈ ಮೂರ್ತಿಗಳಲ್ಲಿ ಒಂದು ಮೂರ್ತಿ ಒಂದು ವಿಶಿಷ್ಟವಾದ ಹರಳನ್ನು ಜೋಡಿಸಲಾಗಿದ್ದು, ಅದರ ೪೦೦ ಮಿಸ್ಕಾಲ್ *(ಒಂದು ಮಿಸ್ಕಾಲ್ ಎಂದರೆ ಒಂದು ಮುಕ್ಕಾಲು ಮಾಸಿ ಚಿನ್ನ) ಇತ್ತು. ಈ ಮೂರ್ತಿಯನ್ನು ಧ್ವಂಸಮಾಡಿದಾಗ ೯೮,೩೦೦ ಮಿಸ್ಕಾಲ್ ಬಂಗಾರವು ದೊರೆಕಿತು. ಈ ಐದು ಮೂರ್ತಿಗಳಲ್ಲದೆ, ನೂರು ಬೇರೆ ಮೂರ್ತಿಗಳು ಇದ್ದವು. ಅವುಗಳಲ್ಲಿ ಚಿಕ್ಕ, ದೊಡ್ಡವು ಇದ್ದು ಅವುಗಳೆಲ್ಲವನ್ನು ಬೆಳ್ಳಿಯಿಂದ ಮಾಡಲಾಗಿದ್ದವು. ಇವುಗಳನ್ನು ಧ್ವಂಸ ಮಾಡಿ ಪಡೆದ ಬೆಳ್ಳಿಯನ್ನು ನೂರು ಒಂಟೆಗಳ ಮೇಲೆ ಹೇರಲಾಯಿತು. ಈ ಮೂರ್ತಿಗಳು ಧ್ವಂಸವಾದ ನಂತರ ಸುಲ್ತಾನ ಮಹಮದನು ಮಥುರಾದ ಪ್ರಖ್ಯಾತ ಕಟ್ಟಡಗಳನ್ನು ಸುಟ್ಟನು ಮತ್ತು ಇಪ್ಪತ್ತು ದಿನಗಳ ಕಾಲ ಅಲ್ಲಿಯೇ ವಾಸಮಾಡಿದ ಮೇಲೆ ಹೊರಟನು.

ಏಳು ಕೋಟೆಗಳ ಗೆಲವು:

ಅಲ್‌ಫಿ ಇತಿಹಾಸಕಾರನ ಹೇಳಿಕೆ ಎಂದರೆ, ಮಥುರಾದ ಸಮೀಪ ನದಿಯ ತೀರದಲ್ಲಿ ಏಳು ಕೋಟೆಗಳು ಇವೆ ಎಂದು ಮಹಮದನು ಕೇಳಿದ್ದನು. ಈ ಕೋಟೆಗಳ ಎತ್ತರ ಹಾಗೂ ಭದ್ರತೆಯು ಬಹಳ ಪ್ರತೀತಿಯನ್ನು ಪಡೆದುದನ್ನು ಕೇಳಿ ಮಹಮದನು ಈ ಕೋಟೆಗಳತ್ತ ತೆರಳಿದನು. ಕೋಟೆಗಳ ಅಧಿಕಾರಿಯು ಮಹಮದನ ಬರುವಿಕೆಯನ್ನು ಕೇಳಿ ಭಯಗ್ರಸ್ತನಾಗಿ ಓಡಿದನು. ಈ ಕೋಟೆಗಳು ಮಹಮದನ ಸ್ವಾಧೀನವಾದವು.. ಆ ಕೋಟೆಯಲ್ಲಿರುವ ದೇವಾಲಯಗಳನ್ನು ನೋಡಿದನು. ಅವುಗಳ ಅಡಿಪಾಯವು ೪೦೦೦ ವರ್ಷ ಪುರಾತನದ್ದಾಗಿತ್ತು. ಈ ದೇವಾಲಯಗಳನ್ನು ಸ್ವೇಚ್ಛೆಯಿಂದ ಸುಲಿದು, ಸಾಕಷ್ಟು ವಸ್ತುಗಳನ್ನು ಮುಸಲ್ಮಾನರು ವಶಪಡಿಸಿಕೊಂಡರು.

ಮಂಜು ಕೋಟೆಯ ಗೆಲವು

ಈ ಕೋಟೆಗಳ ಗೆಲುವಿನ ನಂತರ ಮುಸಲ್ಮಾನರ ಸೈನ್ಯವು ಮಂಜು ಕೋಟೆಯ ಕಡೆಗೆ ಮುಖಮಾಡಿತು. ಈ ಕೋಟೆಯು ವೀರ ಸೈನಿಕರಿಗೆ ಬೇಕಾಗುವ ಅವಶ್ಯಕ ವಸ್ತುಗಳಿಂದ ತುಂಬಿತ್ತು. ಈ ಕೋಟೆಯನ್ನು ಸುತ್ತುವರೆದು ೧೫ ದಿನಗಳವರೆಗೆ ಕೋಟೆಯನ್ನು ವಶಪಡಿಸಿಕೊಳ್ಳುವ ವಿಧಾನಗಳನ್ನು ಕಾರ್ಯರೂಪಕ್ಕೆ ತರಲಾಯಿತು. ಈ ಅವಧಿಯಲ್ಲಿ ಸುಲ್ತಾನ ಮಹಮದನು ಕೋಟೆಯ ಆಗಮನ-ನಿರ್ಗಮನದ ದಾರಿಯನ್ನು ಮುಚ್ಚಿಬಿಟ್ಟನು. ಕೋಟೆಯಲ್ಲಿರುವ ಜನರಿಗೆ ಮುಸಲ್ಮಾನರು ವಿಜಯಸಾಧಿಸದೆ ಬಿಡುವುದಿಲ್ಲವೆಂಬುದು ಮನವರಿಕೆಯಾದಾಗ, ಅವರಲ್ಲಿ ಬಹಳಷ್ಟು ಜನ ಕೋಟೆಯಿಂದ ಕೆಳಗಿಳಿದು ತಮ್ಮ ಸಂತಾನವನ್ನು ಅಗ್ನಿಗೆ ಆಹುತಿ ಮಾಡಿದರು. ಉಳಿದ ಜನರು ಕೋಟೆಯ ಬಾಗಿಲನ್ನು ತೆರೆದು ಆಯುಧಗಳೊಂದಿಗೆ ಹೊರಗೆ

ಬಂದು ಮುಸಲ್ಮಾನರೊಂದಿಗೆ ಕಾದಾಡಿದರು. ಎಲ್ಲರೂ ಮುಸಲ್ಮಾನರಿಂದ ಹತರಾದರು. ಈ ಕೋಟೆಯ ಸಮಸ್ತ ವಸ್ತುಗಳನ್ನು ಸುಲ್ತಾನನು ವಶಪಡಿಸಿಕೊಂಡನು.

ಚಂದಪಾಲ ಕೋಟೆಯ ಗೆಲವು

ಇದಾದ ಮೇಲೆ ಮಹಮದನು ಚಂದಪಾಲ ಕೋಟೆಯ ಕಡೆಗೆ ಮುಖಮಾಡಿದನು. ರಾಜಾ ಚಂದಪಾಲನು ಮುಸಲ್ಮಾನರ ವಿರುದ್ಧ ಕಾದಾಡಿ ಗೆಲ್ಲುವದು ಸಾಧ್ಯವಿಲ್ಲವೆಂದು ತಿಳಿದು, ತನ್ನ ಹೆಂಡತಿ–ಮಕ್ಕಳು ಹಾಗು ಸಂಪತ್ತಿನೊಂದಿಗೆ ಓಡಿಹೋಗಿ ಸಮೀಪದ ಗುಡ್ಡಗಾಡು ಪ್ರದೇಶದಲ್ಲಿ ಅಡಗಿಕೊಂಡನು. ಮಹಮದನು ಈ ಕೋಟೆಯನ್ನು ಹಾಗೂ ಉಳಿದ ಸಂಪತ್ತನ್ನು ವಶಪಡಿಸಿಕೊಂಡನು.

ರಾಜಾ ಚಂದ್ರರಾಯ ಮೆಲೆ ದಾಳಿ

ಚಂದಪಾಲ ಕೋಟೆಯ ವಿಜಯದ ನಂತರ ಮಹಮದನು ಸಮೀಪದ ಒಬ್ಬ ಕೊಬ್ಬಿದ ರಾಜನಾದ ರಾಜಾ ಚಂದ್ರರಾಯನೊಂದಿಗೆ ಕಾದಾಡಲು ನಿರ್ಧರಿಸಿದನು. ಚಂದ್ರರಾಯನು ಕೂಡಾ ಚಂದಪಾಲನಂತೆ ತನ್ನ ಮಕ್ಕಳು–ಮರಿಗಳೊಂದಿಗೆ ಗುಡ್ಡಗಳಲ್ಲಿ ಅಡಗಿಕೊಂಡನು. ಇತಿಹಾಸಕಾರರ ಹೇಳಿಕೆಯಂತೆ, ಚಂದಪಾಲನ ಹತ್ತಿರ ಅತಿ ಶಕ್ತಿಯುತವಾದ ಪೈಕರ ಅರಣ್ಯದ ಒಂದು ಆನೆ ಇತ್ತು. ಅದು ಸಮಗ್ರ ಹಿಂದುಸ್ತಾನದಲ್ಲಿ ಅನುಪಮವಾಗಿತ್ತು. ಈ ಆನೆಯನ್ನು ಕೊಳ್ಳಲು ಮಹಮದನು ಅದೆಷ್ಟೋ ಸಾರಿ ಪ್ರಯತ್ನಿಸಿದ್ದನು. ಆದರೆ, ಫಲಕಾರಿಯಾಗಲಿಲ್ಲ. ಚಂದ್ರರಾಯನು ಓಡಿಹೋದ ಮೇಲೆ ಆ ಆನೆಯು ತಾನಿದ್ದ ಸ್ಥಳದಿಂದ ಮಾವುತನಿಲ್ಲದೆ ಓಡಿಹೋಗಿ ಮಹಮದನ ಡೇರೆಯ ಹತ್ತಿರ ಬಂದು ನಿಂತಿತು. ಮಹಮದನ ಸಹಚರರು ಯಾವ ಶ್ರಮವಿಲ್ಲದೆ ಆನೆಯನ್ನು ಹಿಡಿದು ತಂದು ಮಹಮದನ ಮುಂದೆ ತಂದು ನಿಲ್ಲಿಸಿದರು. ಇದ್ದಕ್ಕಿದ್ದಂತೆ ಈ ಆನೆಯು ತನ್ನ ವಶಕ್ಕೆ ಬಂದಿದ್ದು ಮಹಮದನಿಗೆ ಅತ್ಯಂತ ಸಂತೋಷವಾಯಿತು. ಏಕೆಂದರೆ ಈ ಆನೆಯು ಯಾವ ಶ್ರಮವಿಲ್ಲದೆ, ಯಾವ ಬೆಲೆ ತೆತ್ತದೆ, ಕೇವಲ ಅಲ್ಲಾಹನ ಅನುಗ್ರಹದಿಂದ ಕೈವಶವಾಗಿತ್ತು. ಮಹಮದನು ಈ ಸಂತೋಷದಲ್ಲಿ ಒಂದು ದೊಡ್ಡ ಸಂತೋಷ ಕೂಟವನ್ನು ಏರ್ಪಡಿಸಿ ಆನಂದಿಸಿದನು ಮತ್ತು ಆನೆಗೆ 'ಖುದಾದಾದ್' ಎಂದು ಹೆಸರಿಸಿ ತನ್ನೊಂದಿಗೆ ಘಜನಿಗೆ ತೆಗೆದುಕೊಂಡು ಹೋದನು.

'ಅರುಸ್ ಫಲಕ್' ಮಸೀದಿಯ ನಿರ್ಮಾಣ

ಸುಲ್ತಾನ ಮಹಮದನು ತನ್ನ ರಾಜ್ಯಧಾನಿಯಾದ ಘಜನಿಗೆ ಹಿಂದಿರುಗಿ ಬಂದು, ಶ್ರಮವಿಲ್ಲದೆ ದಂಡಯಾತ್ರೆಯಲ್ಲಿ ಕೈಸೇರಿದ ವಸ್ತುಗಳ ಪಟ್ಟಿ ಹಾಗು ಅದರ ಸಮಕ್ಕೆ ಬರುವ ಬೆಲೆ ನಿರ್ಧರಿಸಲು ಆದೇಶಿಸಿದನು, ಕೂಡಲೇ ಆತನ ಆದೇಶ ಪರಿಪಾಲಿಸಲಾಯಿತು. ಅದರಿಂದ ತಿಳಿದು ಬಂದಿದುದೇನೆಂದರೆ ಈ ಪ್ರಯಾಣದಲ್ಲಿ ಆತನಿಗೆ ೨೦ ಸಾವಿರ ಅಶ್ರಫಿಗಳು, ಹಲವಾರು ಲಕ್ಷ ರೂಪಾಯಿಗಳು, ೫೦ ಸಾವಿರ

ಹೆಣ್ಣಾಳುಗಳು, ೩೫೦ ಆನೆಗಳು, ಅದಲ್ಲದೆ ಮತ್ತಿತರ ಬಹಳ ಬೆಲೆಬಾಳುವ ವಸ್ತುಗಳು ಸುಲ್ತಾನ ಮಹಮದನ ವಶಕ್ಕೆ ಬಂದವು. ಸುಲ್ತಾನ ಮಹಮದನ ಪ್ರಯಾಣವು ಫಲಪ್ರದವಾಗಿದ್ದು, ದೈವವಶಾತ್ ದೊರೆತ ವಿಜಯಗಳಿಸಿದ ಕಾರಣ ಈ ಅನುಗ್ರಹಕ್ಕಾಗಿ ಅಲ್ಲಾಹನಿಗೆ ಧನ್ಯವಾದಗಳನ್ನು ಸೂಚಿಸಲು ಘಜನಿಯಲ್ಲಿ ಒಂದು 'ಜಾಮಾ' ಮಸೀದಿಯನ್ನು ಕಟ್ಟವುದಾಗಿ, ಮತ್ತು ಇದರ ಕಟ್ಟಡವನ್ನು ಅಮೃತಶಿಲೆಯಿಂದ ಕಟ್ಟುವುದಾಗಿ, ಇದಲ್ಲದೆ ಇತರ ಅಮೂಲ್ಯ ಶಿಲೆಗಳಿಂದ ವಿವಿಧ ಆಕಾರಗಳಿಂದ ತಯಾರಿಸಿ, ನೋಡುಗರಿಗೆ ಸುಂದರವಾಗಿ ಕಂಡು, ಆ ಸೌಂದರ್ಯದ ಪ್ರಭಾವ ಬೀರುವಂತೆ ಮಾಡಿ, ಕಟ್ಟಡದ ನಿರ್ಮಾತೃವಿನ ಶೌರ್ಯ ಮೆಚ್ಚುವಂತೆ ಮಾಡಲು ನಿರ್ಧರಿಸಿದನು.

ಈ ಮಸೀದಿಯು ಸಿದ್ಧವಾದ ನಂತರ, ಸುಲ್ತಾನ ಮಹಮದನು ಬಹಳ ಜಾಗರೂಕತೆಯಿಂದ ಶೃಂಗರಿಸಿದನು. ಸುಂದರವಾದ ದೀಪಗಳಿಂದ ಅದನ್ನು ಪ್ರಜ್ವಲಗೊಳಿಸಿದನು. ಉಜ್ವಲ ಪ್ರಕಾಶದ, ಸೌಂದರ್ಯ ಮತ್ತು ಲಾವಣ್ಯದಿಂದಾಗಿ ಜನರು ಅದನ್ನು 'ಅರುಸೇ ಫಲಕ್' ಎಂದು ಕರೆಯಲಾರಂಭಿಸಿದರು. ಈ ಮಸೀದಿಯ ಜೊತೆಗೆ ಸುಲ್ತಾನ ಮಹಮದನು ಒಂದು ದೊಡ್ಡ ಕಟ್ಟಡವನ್ನು ಶಿಕ್ಷಣ ನೀಡುವುದಕ್ಕಾಗಿ ಶಿಲಾವಿನ್ಯಾಸವನ್ನು ಮಾಡಿದನು. ಆ ಪುಸ್ತಕದ ಭಂಡಾರದಲ್ಲಿ ಉತ್ತಮ ಹಾಗು ಅಲಭ್ಯವಾದ ಪುಸ್ತಕಗಳನ್ನು ಸಂಗ್ರಹಿಸಿದನು. ಮಸೀದಿ, ಶಿಕ್ಷಣ ಕಟ್ಟಡಕ್ಕಾಗಿ ಮತ್ತು ಅದರ ವೆಚ್ಚಕ್ಕಾಗಿ ಬಹಳಷ್ಟು ಹಳ್ಳಿಗಳನ್ನು ದಾನದ ರೂಪದಲ್ಲಿ ನೀಡಿದನು. ಏಕೆಂದರೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹಾಗು ಇತರ ಸಿಬ್ಬಂದಿ ವರ್ಗದವರು ತಮ್ಮ ಅವಶ್ಯಕತೆಗಳನ್ನು ಪೂರ್ಣಗೊಳಿಸಲು, ಮಹಮದನು ನಿರ್ಮಿಸಿದ ಮಸೀದಿ ಹಾಗು ಶಿಕ್ಷಣ ಸಂಸ್ಥೆಗಳು, ಅಮೀರರಿಗೆ ಹಾಗು ಪ್ರಜೆಗಳಿಗೆ ಅನುಕರುಣೀಯವಾಗಿತ್ತು. ಅವರು ತಮ್ಮ ಸುಲ್ತಾನನ್ನು ಅನುಸರಿಸಿ ಅಲ್ಪ ಅವಧಿಯಲ್ಲಿ ಘಜನಿಯಲ್ಲಿ ಬಹಳ ಸಂಖ್ಯೆಯಲ್ಲಿ ಮಸೀದಿಗಳು, ದರ್ಗಾಗಳು, ಸರಾಯ್ ಮತ್ತು ಖಾನಖ್ವಾಗಳನ್ನು ನಿರ್ಮಿಸಲಾಯಿತು.

ಕೆಲವು ವಿಚಿತ್ರ ವಸ್ತುಗಳು

ಕನ್ನೋಜಿನ ಪ್ರಯಾಣದಲ್ಲಿ ಮಹಮದನ ಕೈಗೆ ಸಿಕ್ಕ ಬೆಲೆಬಾಳುವ ವಸ್ತುಗಳಲ್ಲಿ ಒಂದು ವಿಚಿತ್ರವಾದ ಹುಂಜವಿತ್ತು. ಅದು ತನ್ನ ರೂಪ ಲಾವಣ್ಯದಲ್ಲಿ 'ಖಮರಿ'ಯನ್ನು ಹೋಲುತ್ತಿತ್ತು. ಈ ಹುಂಜದ ವೈಶಿಷ್ಟ್ಯವೇನೆಂದರೆ ಅದು ಯಾವ ಸ್ಥಳದಲ್ಲಿರುತ್ತಿತ್ತೋ, ಅಲ್ಲಿ ವಿಷಮಿಶ್ರಿತ ಖಾದ್ಯ ಪದಾರ್ಥವನ್ನು ತಂದರೆ, ಅದು ಚಡಪಡಿಸುತ್ತಿತ್ತು ಮತ್ತು ಅದರ ಕಣ್ಣುಗಳಲ್ಲಿ ಕಣ್ಣೀರು ನಿಲ್ಲದಂತೆ ಸುರಿಸುತ್ತಿತ್ತು. ಈ ವಿಚಿತ್ರವಾದ ಪಕ್ಷಿಯನ್ನು ಸುಲ್ತಾನ ಮಹಮದನು ಮತ್ತಿತರ ಬೆಲೆಬಾಳುವ ವಸ್ತುಗಳೊಂದಿಗೆ 'ಅಲ್-ಖಾದರ-ಬಾ-ಅಲ್ಲಾ-ಅಬ್ಬಾಸಿ' ಬಗದಾದಿನ ಖಲೀಫನಿಗೆ ಕಳುಹಿಸಿಕೊಟ್ಟನು. ಈ ಹುಂಜವಲ್ಲದೆ, ಒಂದು ವಿಚಿತ್ರವಾದ ಕಲ್ಲು ಕೂಡಾ ಮಹಮದನಿಗೆ ಸಿಕ್ಕಿತ್ತು. ಇದರ ವಿಶಿಷ್ಟ ಗುಣವೆಂದರೆ

ಯಾವ ವ್ಯಕ್ತಿಗಾದರೂ ಗಾಯವಾದಲ್ಲಿ, ಗಾಯವು ಎಷ್ಟೇ ಪ್ರಮಾಣದಲ್ಲಿ ದೊಡ್ಡದಿದ್ದರೂ ಆ ಕಲ್ಲಿನಿಂದ ಉಜ್ಜಿದರೆ ಗಾಯವು ಮಾಯವಾಗುತ್ತಿತ್ತು.

ಮಹಮದನ ವಿಜಯದ ನಿರೂಪಣೆ

ಹಿಜರಿಶಕೆ ೪೧೧ರಲ್ಲಿ 'ಫತಾನಾಮಾ' ಪುಸ್ತಕದಲ್ಲಿ ಹಿಂದುಸ್ತಾನದಲ್ಲಿ ಪಡೆದ ಗೆಲವುಗಳನ್ನು ವಿವರವಾಗಿ ನಿರೂಪಿಸಲಾಗಿತ್ತು. ಸುಲ್ತಾನ ಮಹಮದನು ಅದನ್ನು ಬಗದಾದಿನ ಖಲಿಫಾನ ಸೇವೆಯಲ್ಲಿ ಸಲ್ಲಿಸಿದನು. ಫತಾನಾಮಾ ಖಲಿಫಾನ ಕೈಸೇರಿದ ಕೂಡಲೇ ಆತನು ಒಂದು ದೊಡ್ಡ ಸಭೆಯನ್ನು ಫತಾನಾಮಾವನ್ನು ಸಾರ್ವಜನಿಕರು ಮತ್ತು ಅಲ್ಲಾಹನ ಭಕ್ತರ ಸಮ್ಮುಖದಲ್ಲಿ ಓದಿ ಹೇಳುವ ಉದ್ದೇಶದಿಂದ ಕರೆದನು. ಜನರು ಈ ಫತಾನಾಮಾ ಕೇಳಿದಾಗ, ಅವರೆಲ್ಲರೂ ಅಲ್ಲಾಹನ ಅನುಗ್ರಹಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು, ಅಸೂಯೆ ಹಾಗೂ ದಬ್ಬಾಳಿಕೆಯನ್ನು ಸರ್ವನಾಶ ಮಾಡಿದುದಕ್ಕಾಗಿ ಸಂತೋಷ ವ್ಯಕ್ತ ಪಡಿಸಿದರು. ಸುಲ್ತಾನ ಮಹಮದನ ಶೌರ್ಯ ಹಾಗೂ ಪರಾಕ್ರಮಗಳನ್ನು ಇನ್ನೂ ಬೆಳೆಸಿ ಮುಂದೆ ಇದೇ ರೀತಿ ಗೆಲುವನ್ನು ಸಾಧಿಸಲು ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಈ ಸಭೆ ಸೇರಿದ ದಿನದಂದು, ಬಗದಾದಿನ ಪ್ರತಿಯೊಬ್ಬ ವ್ಯಕ್ತಿಯು ಆನಂದದಿಂದ ಇದ್ದನು, ಆ ದಿನವು ಒಂದು ಹಬ್ಬದ ದಿನವೆಂದು ಕಂಡುಬರುತ್ತಿತು, ಎಂದು ಇತಿಹಾಸಕಾರರು ಹೇಳುತ್ತಾರೆ. ಸಾರ್ವಜನಿಕರಿಗೆ ಸತ್ಯಸ್ಥಿತಿಯ ಪರಿಚಯವಾಯಿತು, ಅರಬ, ಅಜ್ಜಂ, ರೋಮ ಮತ್ತು ಶಾಂ ಎಲ್ಲ ಸಜ್ಜನರು ಕೈಗೊಂಡ ಕೃತ್ಯಗಳನ್ನು ಒಬ್ಬನೇ ಹಿಂದುಸ್ತಾನದಲ್ಲಿ ಸುಲ್ತಾನ ಮಹಮದನು ಮಾಡಿದನು. ಅದಕ್ಕಾಗಿ ಮಹಮದನು ಇಹ-ಪರ ಎರಡು ಲೋಕದಲ್ಲಿಯೂ ಪುಣ್ಯ ಪಡೆದನು.

ಬದವೀಯರಿಗೆ ಪಾಠ ಕಲಿಸಿದುದು

ಹಿಜರಿ ಶಕೆ ೪೧೨ರ ಒಂದು ಘಟನೆ, ಬುದ್ಧಿವಂತರು ಹಾಗೂ ಮೇಧಾವಿಗಳ ಒಂದು ಗುಂಪು ಸುಲ್ತಾನ ಮಹಮದನ ಸನ್ನಿಧಾನದಲ್ಲಿ, 'ಪ್ರತಿ ವರ್ಷ ಹಿಂದುಸ್ತಾನಕ್ಕೆ ಹೋಗಿ 'ಕಾಫಿರ'ರೊಂದಿಗೆ ಯುದ್ಧ ಮಾಡಿ, ಅಲ್ಲಿ ಇಸ್ಲಾಮ ಮತವನ್ನು ಸ್ಥಾಪಿಸಿ ಪ್ರಸಾರಮಾಡುವ ಪವಿತ್ರ ಕರ್ತ್ಯವ್ಯವನ್ನು ಪರಿಪಾಲಿಸುತ್ತಿದ್ದಿರಿ. ಆದರೆ, ನೀವು ಇದುವರೆಗೂ 'ಬಯತ್-ಅಲ್ಲಾ'ನ ದಾರಿಯ ಕಡೆ ಕಣ್ಣು ಹಾಯಿಸಿಲ್ಲ. ಬಹಳ ಕಾಲದಿಂದ ಬದಯೂನ ಮುಖಾಂತರ ಕಾಬಾಕ್ಕೆ ಹೋಗುವ ದಾರಿಯು ಖರಮತಿ ಜನರ ದರೋಡೆಕೋರರ ಕೃತಿಯಿಂದಾಗಿ ಮುಚ್ಚಿ ಹೋಗಿದೆ ಮತ್ತು ಮುಸಲ್ಮಾನರಿಗೆ ಈ ದರೋಡೆಕೋರರ ಗಲಭೆಯಿಂದ ಹಜ಼ ಮಾಡಲಾಗುತ್ತಿಲ್ಲ. ಅಬ್ಬಾಸಿ ಖಲಿಫಾರು ಅವರಲ್ಲಿ ಹೆಚ್ಚು ಸಾಮರ್ಥ್ಯವಿರದುದರಿಂದ ದರೋಡೆಕೋರರರಿಂದ ಪವಿತ್ರ ಮಾರ್ಗವನ್ನು ರಕ್ಷಿಸಲು ಸಾಧ್ಯವಿಲ್ಲ. ಅದಕ್ಕಾಗಿ ನೀವು ಈ ವಿಷಯದಲ್ಲಿ ಮುಂದುವರೆಯಬೇಕು,' ಎಂದು ಅರಿಕೆ ಮಾಡಿಕೊಂಡರು. ಸುಲ್ತಾನ ಮಹಮದನು ಈ ವಿನಂತಿಯನ್ನು ಮನ್ನಿಸಿ ತನ್ನ ರಾಜ್ಯದ ಖಾಜಿ ಅಲ್-ಕಫಾ-ಅಬೂ-ಮೊಹ್ಮದ-ನಾಸಹಿಗೆ ಹಾಜಿಗಳ ಗುಂಪಿನ

ಅಮೀರನನ್ನಾಗಿ ನಿಯುಕ್ತಿ ಮಾಡಿದನು ಮತ್ತು ಬದೇಯೂನಗೆ ಮರುಳಿ ಬಂದು ಕೊಲೆ, ಸುಲಿಗೆ ತಡೆಗಟ್ಟುವಂತೆ ೩೦ ಸಾವಿರ ಅಶರಫಿಗಳನ್ನು ಅಬೂ-ಮೊಹ್ಮದ-ನಾಸಹಿಗೆ ಕೊಟ್ಟು ಹಾಜಿಗಳ ಗುಂಪನ್ನು ಮಕ್ಕಾದ ಕಡೆ ಕಳುಹಿಸಿಕೊಟ್ಟನು. ಈ ಗುಂಪಿನೊಂದಿಗೆ,

ಘಜನಿಯ ಅಮೀರರು ಮತ್ತು ಸರದಾರರು ಹಜ 'ಬತುಲ್‌ಲ್ಲಾ' ಹೊರಟರು. ಕೆಲವು ದಿನಗಳ ನಂತರ ಈ ಗುಂಪು ವಿಧವಿಧವಾದ ತಂಗು ದಾಣಗಳನ್ನು ದಾಟಿ ಒಂದು ಅರಣ್ಯದಲ್ಲಿ ಬಂದರು ಮತ್ತು 'ಫೈದ್' ಎಂಬು ಸ್ಥಳದಲ್ಲಿ ತಂಗಿದರು. ಬದಯೂನನು ತನ್ನ ರೂಢಿಯಂತೆ ಈ ಗುಂಪನ್ನು ಸಹ ಕೊಳ್ಳೆ ಹೊಡೆಯಲು ಬಯಸಿದನು. ಅಬೂ ಮೊಹ್ಮದ ನಾಸಿಯು ಬದಯೂನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬಯಸಿ, ಈತನು ಈ ಗುಂಪನ್ನು ಕೊಳ್ಳೆಹೊಡೆಯದೆ ಇರಲಿ ಎಂದು ೫ ಸಾವಿರ ಅಶ್ರಫಿಗಳನ್ನು ಕಳುಹಿಸಿಕೊಟ್ಟನು. ಆದರೆ ಬದಿಯೂನಿನ ಸರದಾರರಾದ ಹಮಾ-ಓ-ಬಿನ್-ಅಲಿಯು ಒಪ್ಪಂದಕ್ಕೆ ಒಪ್ಪಲಿಲ್ಲ ಮತ್ತು ತನ್ನ ಜೊತೆಗಾರರಿಗೆ ಕೊಳ್ಳೆಹೊಡೆಯಲು ಆದೇಶಿಸಿದನು. ಬದಿಯೂನ್ ಗುಂಪಿನ ಮೇಲೆ ಆಕ್ರಮಿಸಿದಾಗ ಗುಂಪಿನ ಜನರು ಇವರನ್ನು ಚೆದರಿಸಲು ಬಿಲ್ಲು-ಬಾಣಗಳನ್ನು ಉಪಯೋಗಿಸಿದರು. ಅಕಸ್ಮಾತ್ತಾಗಿ ಒಬ್ಬ ತುರ್ಕಿ ಗುಲಾಮನ (ಬಾಣ ಹೋಡೆಯುವ ತಜ್ಞ) ಬಾಣವು ಬದಿಯೂನ್ ಸರದಾರ ಹಮಾಓ-ಬಿನ್-ಅಲಿ ತಲೆಗೆ ನಾಟಿತು. ಈ ನೋವನ್ನು ತಾಳಲಾರದೆ ಆತನು, ಕುದುರೆಯಿಂದ ಬಿದ್ದನು. ಬದಿಯೂನನು ಈತನನ್ನು ಕೂಡಲೆ ಎತ್ತಿ ಹಿಡಿದನು ಮತ್ತು ಗುಂಪಿನ ಜನರ ಎದುರಿನಿಂದ ಅವರು ಓಡಿಹೋದರು. ಈ ಘಟನೆಯ ನಂತರ ಅಬೂ-ಮೊಹ್ಮದ-ನಾಸಿ ತನ್ನ ಗುಂಪಿನೊಂದಿಗೆ ದಾರಿಯಲ್ಲಿ ಬರುವ ಎಲ್ಲಾ ಅಡೆತಡೆಗಳನ್ನು ಸಹಿಸುತ್ತಾ ಕಾಬಾದವರೆಗೆ ಬಂದು ಅಲ್ಲಿ ಹಜ್ ಮಾಡಿದ ನಂತರ ಸುರಕ್ಷಿತವಾಗಿ ಘಝನಿಗೆ ಮರುಳಿ ಬಂದರು.

ರಾಜಾ ಆನಂದಪಾಲನೊಂದಿಗೆ ಯುದ್ಧ

ಅದೇ ವರ್ಷ ಅಂದರೆ ೪೧೨ ಹಿಜ್ರಿಯಲ್ಲಿ ಸುಲ್ತಾನ ಮಹಮದನಿಗೆ ಹಿಂದುಸ್ಥಾನಿ ಜನರು ಕನ್ನೋಜ ರಾಜನಾದ ಕೋರ ಅರಸನ ವಿರುದ್ಧವಾಗಿದ್ದಾರೆಂದು ತಿಳಿದು ಮತ್ತು ನಾಲ್ಕು ಕಡೆಯಿಂದ ಈತನ ವಿರೋಧವು ನಡೆಯುತ್ತಿದ್ದು, ಅದು ಎಷ್ಟು ಉತ್ಕಟವಾಗಿತ್ತೆಂದರೆ ಕಾಲಿಂಜರನ ರಾಜನಾದ ನಂದನು, ಕೋರನು ಸುಲ್ತಾನ ಮಹಮದನ ಅಧೀನತೆಯನ್ನು ಏತಕ್ಕೆ ಸ್ವೀಕರಿಸಿದನೊ ಎಂದು ಕನ್ನೋಜಿನ ಮೇಲೆ ದಾಳಿ ಮಾಡಿದನು. ಈ ದಾಳಿಯಲ್ಲಿ ರಾಜಾ ಕೋರನು ಹತನಾದನು. ಈ ವಿಷಯವು ಮಹಮದನಿಗೆ ತಿಳಿದಾಗ, ದೊಡ್ಡ ಸೈನ್ಯ ಹಾಗೂ ಯುದ್ಧ ಸಾಮಗ್ರಿಗಳೊಂದಿಗೆ ರಾಜಾ ನಂದನ ವಿರುದ್ಧ ಪ್ರತೀಕಾರ ಮಾಡಲು ಹಿಂದುಸ್ತಾನದ ಕಡೆಗೆ ಹೊರಟನು. ಮುಸಲ್ಮಾನರ ಸೈನ್ಯವು ಯಮುನಾ ನದಿಯ ತೀರ ತಲುಪಿದಾಗ, ರಾಜಾ ಆನಂದಪಾಲನ

ಮಗ ಹಲವು ಬಾರಿ ಮಹಮದನಿಂದ ಸೋಲನ್ನು ಅನುಭವಿಸಿದುದರಿಂದ, ರಾಜಾ ನಂದನ ಸಹಾಯಕ್ಕಾಗಿ ಮಹಮದನ ದಾರಿಯಲ್ಲಿ ಅಡ್ಡಗಟ್ಟಿದನು. ಆ ಕಾಲದಲ್ಲಿ ಯಮುನಾ ನದಿಯಲ್ಲಿ ನೀರು ಬಹಳವಿತ್ತು ಹಾಗು ಆಳವಾಗಿತ್ತು. ಹೀಗಾಗಿ ಮಹಮದನ ಸೈನ್ಯಕ್ಕೆ ನದಿಯನ್ನು ದಾಟಲು ಕಷ್ಟವಾಯಿತು. ಪ್ರತಿಯೊಬ್ಬ ಸೈನಿಕನು ನದಿಯನ್ನು ದಾಟಲು ಹಿಂದೆ-ಮುಂದೆ ನೋಡುತ್ತಿದ್ದನು. ಮಹಮದನ ವಿಶೇಷ ದಳದ ೮ ಜನ ಗುಲಾಮರು ಧೈರ್ಯಮಾಡಿ ನದಿಯನ್ನು ದಾಟಿ ಹಿಂದುಗಳ ಸೈನ್ಯದಲ್ಲಿ ಸೇರಿದರು ಮತ್ತು ಅವರ ಸೈನ್ಯವನ್ನು ದಾಳಿ ಮಾಡದಂತೆ ಚೆದರಿಸಿದರು. ಆನಂದಪಾಲನ ಮಗ ತನ್ನ ಪ್ರಾಣವನ್ನು ಉಳಿಸಿಕೊಂಡು ಕೆಲವು ಜನರೊಂದಿಗೆ ಓಡಿಹೋದನು. ಈ ಎಂಟು ಜನ ಗುಲಾಮರು ಹಿಂದು ಸೈನ್ಯವನ್ನು ಸೋಲಿಸಿದ ನಂತರ ಸಮೀಪದ ಒಂದು ಪಟ್ಟಣ ಪ್ರವೇಶಿಸಿ ಮನ ಬಂದಂತೆ ಕೊಲೆ, ಸುಲಿಗೆ ಮಾಡಿದರು. ಅಲ್ಲಿದ್ದ ದೇವಾಲಯಗಳನ್ನು ನಾಶ ಮಾಡಿದರು. ಇಲ್ಲಿ ಒಂದು ಪ್ರಶ್ನೆ ಏನೆಂದರೆ, ಕೇವಲ ಎಂಟು ಜನರು ಯಾವ ರೀತಿಯಲ್ಲಿ ಅಷ್ಟೊಂದು ದೊಡ್ಡ ಸೈನ್ಯವನ್ನು ಹೇಗೆ ಸೋಲಿಸಿದರು? ಈ ಅನುಮಾನವನ್ನು ಈ ರೀತಿಯಾಗಿ ದೂರ ಮಾಡಬಹುದು. ಈ ಎಂಟು ಜನರು ಸುಲ್ತಾನನ ಸೈನ್ಯದ ಎಂಟು ಅಮೀರರು ಇರಬಹುದು ಮತ್ತು ಇವರು ತಮ್ಮ ಸೈನಿಕರೊಂದಿಗೆ ನದಿಯನ್ನು ದಾಟಿರಬಹುದು.

ನಂದ ರಾಜನೊಂದಿಗೆ ಯುದ್ಧ:

ಆನಂದಪಾಲನನ್ನು ಸೋಲಿಸಿದನಂತರ ಮುಸಲ್ಮಾನರ ಸೈನ್ಯವು ನಂದನ ಕಡೆಗೆ ತಿರುಗಿತು. ಕಾಲಿಂಜರ ತಲುಪದನಂತರ ಮಹಮದನಿಗೆ ತಿಳಿದು ಬಂದಿದ್ದೇನೆಂದರೆ, ಶತ್ರುಗಳ ಸೈನ್ಯವು ಬಹಳ ದೊಡ್ಡದಾಗಿದ್ದು ಅದು ೩೬ ಸಾವಿರ ಸವಾರರು, ೪೫ ಸಾವಿರ ಕಾಲಪಡೆಗಳು, ಮತ್ತು ೬೪೦ ಆನೆಗಳಿಂದ ಕೂಡಿದೆ. ಮಹಮದನು ಒಂದು ಎತ್ತರದ ಸ್ಥಾನದಲ್ಲಿ ನಿಂತು ಹಿಂದು ಜನರ ಸೈನ್ಯವನ್ನು ವೀಕ್ಷಿಸಿ ಮನಸ್ಸಿನಲ್ಲಿಯೇ ಮುಂದೆ ಹೋಗಲು ಪರದಾಡಿದನು. ಆದರೆ ಧೈರ್ಯವನ್ನು ಬಿಡಲಿಲ್ಲ ಮತ್ತು ಪರಮಾತ್ಮನ ಎದುರಿನಲ್ಲಿ ಶಿರಬಾಗಿಸಿ ತನ್ನ ಗೆಲುವಿಗಾಗಿ ಪ್ರಾರ್ಥಿಸಿದನು. ಮೊಹಮದನ ಸೈನ್ಯವು ಕಾಲಿಂಜರ ತಲುಪಿದ ದಿನವೇ ಪ್ರಾರ್ಥನೆ ಮಾಡಲಾಗಿತ್ತು. ಅದೇ ರಾತ್ರಿ ನಂದನ ಮನಸ್ಸಿನಲ್ಲಿ ಮಹಮದನ ಬಗ್ಗೆ ಭಯಗ್ರಸ್ತನಾಗಿ, ತನ್ನೆಲ್ಲಾ ಸಮಸ್ತ ವಸ್ತುಗಳನ್ನು ಮತ್ತು ಅನ್ಯ ಸಾಮಗ್ರಿಗಳನ್ನು ಅಲ್ಲಿಯೇ ಬಿಟ್ಟು ರಾತ್ರಿಯಲ್ಲಿಯೇ ರಣಾಂಗಣದಿಂದ ಓಡಿಹೋದನು. ಬೆಳಗಿನ ಸಮಯ ಮಹಮದನಿಗೆ ಈ ವಿಷಯ ತಿಳಿದು ಆತನು ಹಿಂದುಗಳ ಸೈನ್ಯದಲ್ಲಿ ಬಂದು ಸುತ್ತು-ಮುತ್ತಲಿನ ಡೇರೆಗಳನ್ನು ನೋಡಿದನು. ಶತ್ರುಗಳ ಸೈನ್ಯದ ಶಕ್ತಿಯು ಕಡಿಮೆಯಾದುದು ಅರಿವಾದೊಡನೆ ಮನಬಂದಂತೆ ಕೊಳ್ಳೆಹೊಡೆಯಲು ಆರಂಭಿಸಿದನು. ಮುಸಲ್ಮಾನರ ಸೈನಿಕರಿಗೆ ಪ್ರಯತ್ನವಿಲ್ಲದೆ ಅಪಾರವಾದ ಅಗಣಿತ ಸಂಪತ್ತು ದೊರೆಯಿತು. ಇದನ್ನು ಶಬ್ದಗಳಲ್ಲಿ ವಿವರಿಸಲು

ಸಾಧ್ಯವಿಲ್ಲ. ಕಾಲಿಂಜರನ ಹತ್ತಿರದಲ್ಲಿದ್ದ ಅರಣ್ಯದಿಂದ ಮುಸಲ್ಮಾನರ ಸೈನಿಕರು ೫೮೦ ಆನೆಗಳನ್ನು ಹಿಡಿದರು. ಮಹಮದನು ಪಂಜಾಬ ಮತ್ತು ಅನ್ಯ ಪ್ರಾಂತಗಳನ್ನು ಪೂರ್ಣವಾಗಿ ಗೆಲ್ಲಲಾಗಲಿಲ್ಲವೆಂದು ಮನವರಿಕೆ ಮಾಡಿಕೊಂಡು ಸಂತುಷ್ಟನಾಗದೆ, ಸದ್ಯಕ್ಕೆ ಇಷ್ಟು ಗೆಲವು ಸಾಕೆಂದು ಘಜನಿಗೆ ಮರಳಿದನು.

ಖೈರಾತ ಹಾಗೂ ನಾರ್ದೀನನ ಮೇಲೆ ಗೆಲವು:

ಕಾಲಿಂಜರ ಗೆದ್ದನಂತರ ಮಹಮದನಿಗೆ ತಿಳಿದು ಬಂದಿದ್ದೇನೆಂದರೆ ಇನ್ನೂವರೆಗೂ ಖೈರಾತ ಮತ್ತು ನಾದೀನರ ಪ್ರಜೆಗಳು ಮೂರ್ತಿ ಪೂಜೆಯ ರೋಗದಿಂದ ಪೀಡಿತರಾಗಿದ್ದಾರೆ, ಮುಸಲ್ಮಾನರು ಎಲ್ಲೆಡೆಯಲ್ಲಿಯೂ ವಿಜಯ ಪಡೆದಿದ್ದರೂ ಅವರು ಇನ್ನೂ ಇಸ್ಲಾಮ ಮತವನ್ನು ಒಪ್ಪಿಕೊಳ್ಳಲಿಲ್ಲ, ಇವರ ರಾಜನು ಸಹ ಇಸ್ಲಾಮ ಧರ್ಮವನ್ನು ಸ್ವೀಕರಿಸಿಲ್ಲ. ಇದನ್ನು ತಿಳಿದ ಮಹಮದನು ಸೈನ್ಯವನ್ನು ಸಿದ್ಧಪಡಿಸಿ, ತನ್ನೊಂದಿಗೆ ಅಕ್ಕಸಾಲಿಗರು, ಬಡಿಗೆ ಜನರು ಮತ್ತು ಶಿಲ್ಪಿಗಳ ದೊಡ್ಡ ಸಮೂಹವನ್ನು ಕರೆದುಕೊಂಡು ಖೈರಾತ ಹಾಗು ನಾದೀನ ಕಡೆಗೆ ಹೊರಟುನಿಂತನು.

ಮಹಮದನು ಮೊದಲು ಖೈರಾತಿನ ಮೇಲೆ ದಾಳಿ ಮಾಡಿದನು. ಖೈರಾತಿನ ವಾತಾವರಣವು ತಂಪಾಗಿದ್ದು, ಹಿಂದುಸ್ತಾನ ಹಾಗು ತುರ್ಕಿಸ್ಥಾನ ಮಧ್ಯದಲ್ಲಿ ಇರುತ್ತದೆ. ಈ ಪ್ರಾಂತವು ತನ್ನ ಹಸಿರು ಮತ್ತು ಫಲಪುಷ್ಪಗಳ್ಳುಳ್ಳ ಉಪವನಗಳಿಗಾಗಿ ವಿಶ್ವದಲ್ಲಿ ಪ್ರಖ್ಯಾತಿ ಪಡೆದಿತ್ತು. ಈ ಪಟ್ಟಣದ ಅರಸನು ತನ್ನ ಸಮಸ್ತ ಪ್ರಜೆಗಳೊಂದಿಗೆ ಇಸ್ಲಾಮ ಮತವನ್ನು ಸ್ವೀಕರಿಸಿದನು.

ಖೈರಾತ ನಗರವನ್ನು ಜಯಿಸಲು ಮಹಮದನಿಗೆ ಬಹಳ ಸಮಯ ಬೇಕಾಗಲಿಲ್ಲ. ಖೈರಾತ ಗೆಲುವಿನನಂತರ ಮಹಮದನು ಸ್ವತಃ ಅಲ್ಲಯೇ ಇದ್ದು, ಹಾಜಬ್-ಅಲಿ-ಬಿನ್-ಇರಸಾಲನ-ಜಾಜಿಬನಿಗೆ ನಾರದೀನ ಗೆಲಲ್ಲು ಕಳುಹಿಸಿಕೊಟ್ಟನು. ಆತನು ನಾರದೀನನ್ನು ಗೆದ್ದನು. ಬಹಳ ಸಂಖ್ಯೆಯ ಗುಲಾಮರು ಮತ್ತು ಹೆಣ್ಣಾಳುಗಳು ಹಾಗೂ ಸಾಕಷ್ಟು ಸಂಪತ್ತು ಸ್ವಾಧೀಪಡಿಸಿಕೊಂಡನು. ಹಾಜಬ ಅಲಿ-ಬಿನ್-ಅರಸಲಾನ್-ಜಾಜಿಬ ನಾರದೀನ ಎಲ್ಲಕ್ಕೂ ದೊಡ್ಡ ಮಂದಿರವನ್ನು ನಾಶ ಮಾಡಿದಾಗ, ಅದರ ಕಟ್ಟಡದ ಒಂದು ಭಾಗದಿಂದ ಒಂದು ವಿಶಿಷ್ಟ ಕಲ್ಲು ದೊರೆತಿತು. ಅದರಿಂದ ತಿಳಿದು ಬಂದಿದುದೇನೆಂದರೆ ಈ ಮಂದಿರವು ಸುಮಾರು ೪೦ ಸಾವಿರ ವರ್ಷ ಹಿಂದೆ ನಿರ್ಮಿಸಲಾದ ಪ್ರಾಚೀನ ಮಂದಿರವಾಗಿತ್ತು. ನಾರದೀನ ಗೆಲುವಿನ ಸಮಾಚಾರವು ಮಹಮದನಿಗೆ ತಿಳಿದ ಕೂಡಲೆ ಆತನು ಸ್ವತಃ ಅಲ್ಲಿಗೆ ಬಂದು, ಈ ಪಟ್ಟಣದಲ್ಲಿ ಒಂದು ದೊಡ್ಡ ಕೋಟೆಯನ್ನು ನಿರ್ಮಿಸಿ ಈ ಪ್ರಾಂತದ ರಾಜ್ಯಭಾರವನ್ನು ಅಲಿ-ಬಿನ್-ಖದರ್-ಸಲ್‌ಜೂಖ್ಚಿ ಈತನಿಗೆ ಒಪ್ಪಿಸಿ ಘಜನಿಗೆ ಮರಳಿ ಬಂದನು.

ಲಾಹೋರಿನ ಮೇಲೆ ಗೆಲವು

ಹಿಜರಿ ಶಕೆ ೪೧೨ರಲ್ಲಿ ಸುಲ್ತಾನ ಮಹಮದನು ತನ್ನ ಗೆಲುವಿನ ಗುರಿಯನ್ನು ಕಾಶ್ಮೀರದ ಕಡೆಗೆ ತಿರುಗಿಸಿದನು. ಕಾಶ್ಮೀರ ತಲುಪಿದ ನಂತರ, 'ಲೋಹಕೋಟ' ಕೋಟೆಯನ್ನು ಒಂದು ತಿಂಗಳ ಕಾಲ ಮುತ್ತಿಗೆ ಹಾಕಿದನು. ಈ ಕೋಟೆಯು ಭದ್ರವಾಗಿತ್ತು. ಮಹಮದನು ಎಲ್ಲ ಪ್ರಯತ್ನಗಳನ್ನು ಮಾಡಿದರೂ ಅದನ್ನು ಗೆಲ್ಲಲಾಗಲಿಲ್ಲ. ಈ ಪರಿಸ್ಥಿತಿಯನ್ನು ಕಂಡು, ಲೋಹಕೂಟ ಗೆಲ್ಲುವ ವಿಚಾರವನ್ನು ಬಿಟ್ಟು ಲಾಹೋರಿನ ಕಡೆ ತಿರುಗಿದನು. ಲಾಹೋರ ತಲುಪುತ್ತಲೇ, ತಾನು ಪಟ್ಟಣದಲ್ಲಿ ಉಳಿದುಕೊಂಡು, ತನ್ನ ಸೈನ್ಯವನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿ ಕೊಲೆ ಸುಲಿಗೆ ಮಾಡಲು ಕಳುಹಿಸಿಕೊಟ್ಟನು. ಸೈನಿಕರು ಹಿಂದು-ಮುಂದು ನೋಡದೆ ಮನಬಂದಂತೆ ಪಟ್ಟಣ ಮತ್ತು ಸುತ್ತ-ಮುತ್ತಲಿನ ಪ್ರದೇಶದ ಹಳ್ಳಿಗಳನ್ನು ಕೊಳ್ಳೆಹೊಡೆದು ಹೆಚ್ಚಿನ ಶ್ರಮವಿಲ್ಲದೆ ಅಪಾರ ಸಂಪತ್ತನ್ನು ವಶಪಡಿಸಿಕೊಂಡು, ಸುಲ್ತಾನ ಮಹಮದನ ಸೇವೆಯಲ್ಲಿ ಹಾಜರಾದರು.

ಲಾಹೋರಿನ ರಾಜನಾದ ಆನಂದಪಾಲನ ಮಗನು ಈಗ ವೃದ್ಧನಾಗಿದ್ದನು, ಸುಲ್ತಾನ ಮಹಮದನ ಸೈನ್ಯವನ್ನು ಎದುರಿಸಲು ಶಕ್ತನಾಗಿರಲಿಲ್ಲ. ವೃದ್ಧಾಪ್ಯ ಮತ್ತು ಬಲಹೀನನಾದ ಆನಂದಪಾಲನ ಪುತ್ರನು ಅಜಮೀರ ಕಡೆಗೆ ಓಡಿಹೋಗಿ, ಅಲ್ಲಿಯ ರಾಜನ ಆಶ್ರಯ ಪಡೆದನು. ಸುಲ್ತಾನ ಮಹಮದನು ಲಾಹೋರನ್ನು ಸ್ವಾಧೀನ ಪಡಿಸಿಕೊಂಡು ಅದನ್ನು ತನ್ನ ವಿಶ್ವಾಸದ ಒಬ್ಬ ಅಮೀರನಿಗೆ ಒಪ್ಪಿಸಿ, ಮತ್ತು ಪಂಜಾಬ ಪ್ರದೇಶದಲ್ಲಿ ಗೆಲ್ಲಲಾದ ರಾಜ್ಯಗಳನ್ನು ಬುದ್ದಿವಂತ ಹಾಗು ಪ್ರಾಮಾಣಿಕ ಮೇಧಾವಿಗಳಿಗೆ ಒಪ್ಪಿಸಿ ಪ್ರಾಂತಗಳನ್ನು ಗೆಲ್ಲುವ ಕೆಲವು ನಿಯಮಗಳು ಮತ್ತು ಕಾನೂನುಗಳ ದೃಷ್ಟಿಯಲ್ಲಿ ಕೊಲೆ, ಸುಲಿಗೆಗಳ ಕೆಲಸವನ್ನು ಕಡಿಮೆ ಮಾಡಿ, ಲಾಹೋರಿನಲ್ಲಿ ಒಂದು ದೊಡ್ಡ ಸೈನ್ಯದ ಬಿಡಾರ ಹೂಡಿ ಈ ರಾಜ್ಯದ ಎಲ್ಲಾ ಭಾಗಗಳಲ್ಲಿ ತನ್ನ ಹೆಸರಿನ ನಾಣ್ಯಗಳನ್ನು ಬಳಕೆಯಲ್ಲಿ ತಂದು ವಸಂತ ಋತುವಿನ ಆರಂಭದಲ್ಲಿ ಘಜನಿಗೆ ಮರಳಿ ಹೋಗಲು ಪ್ರಯಾಣಕ್ಕೆ ಸನ್ನದ್ಧನಾದನು.

ರಾಜಾ ನಂದನ ಮೇಲೆ ದಾಳಿ

೪೧೩ಹಿಜ್ರಿಯಲ್ಲಿ ಸುಲ್ತಾನ ಮಹಮದನು ರಾಜಾ ನಂದನ ಮೇಲೆ ದಾಳಿ ಮಾಡಲು ನಿರ್ಧರಿಸಿ ಗ್ವಾಲಿಯರ ಕೋಟೆ ಸಮೀಪಿಸಿದಾಗ 'ತಮ್ಹಾ' ನು ಈ ಕೋಟೆಗೆ ಮುತ್ತಿಗೆ ಹಾಕಲು ಬಲವಂತ ಮಾಡಿದನು. ಸುಲ್ತಾನನು ಅದೇ ರೀತಿ ಮಾಡಿದನು. ಕೋಟೆಗೆ ಮುತ್ತಿಗೆ ಹಾಕಿ ನಾಲ್ಕು ದಿನಗಳಾದ ನಂತರ ಅಲ್ಲಿಯ ರಾಜನು ಮಹಮದನೊಂದಿಗೆ ಸಂಧಾನ ಮಾಡಲು ಕೋರಿ ೩೫ ಸಾವಿರ ಆನೆಗಳನ್ನು ಬಹುಮಾನವಾಗಿ ಮಹಮದನ ಸೇವೆಯಲ್ಲಿ ಸಲ್ಲಿಸುವೆನೆಂದು ತಿಳಿಸಿದಾಗ ಮಹಮದನು ಈ ಕೋರಿಕೆಯನ್ನು ಮನ್ನಿಸಿ ಒಪ್ಪಂದ ಮಾಡಿಕೊಂಡನು.

ಗ್ವಾಲಿಯರ ರಾಜನೊಂದಿಗೆ ಒಪ್ಪಂದ ಮಾಡಿಕೊಂಡನಂತರ ಸುಲ್ತಾನ ಮಹಮದನು, ರಾಜಾ ನಂದನ ರಾಜ್ಯವಾದ ಕಾಲಿಂಜರ ತಲುಪಿದನು. ರಾಜಾ ನಂದನು ಕೂಡಾ ೩೦೦ ಅನೆಗಳನ್ನು ಪುರಸ್ಕಾರವಾಗಿ ಕೊಡಲು ಒಪ್ಪಿ ಸಂಧಾನವನ್ನು ಕೋರಿದನು. ಸುಲ್ತಾನ ಮಹಮದನು ಈತನು ಕೋರಿಕೆಯನ್ನು ಒಪ್ಪಿ, ಒಪ್ಪಂದದ ಕರಾರಿನಂತೆ ೩೦೦ ಆನೆಗಳನ್ನು ಕೇಳಿದನು. ರಾಜಾ ನಂದನು ಮಹಮದನ ಸೈನಿಕರನ್ನು ಪರೀಕ್ಷಿಸಲು ೩೦೦ ಮದ್ದಾನೆಗಳನ್ನು ಮಾವುತರಿಲ್ಲದೆ ಕೋಟೆಯಿಂದ ಹೊರತೆಗೆದು ಅರಣ್ಯದಲ್ಲಿ ಬಿಟ್ಟನು. ಮಹಮದನು ತನ್ನ ತುರ್ಕಿ ಸೈನಿಕರಿಗೆ ಆ ಆನೆಗಳನ್ನು ಹಿಡಿದು ಅವುಗಳ ಮೇಲೆ ಸವಾರಿ ಮಾಡಲು ಆದೇಶಿಸಿದನು. ಅವರು ಆದೇಶವನ್ನು ಪರಿಪಾಲಿಸಿದರು. ರಾಜಾ ನಂದ ಮತ್ತು ಆತನ ಸಹಚರರು ಮುಸಲ್ಮಾನರ ಈ ಸಾಹಸ ಮತ್ತು ಧೈರ್ಯವನ್ನು ನೋಡಿ ಆಶ್ಚರ್ಯಗೊಂಡರು. ರಾಜಾ ನಂದನು ಮಹಮದನನ್ನು ಪ್ರಶಂಸಿಸುವ ಒಂದು ಕವಿತೆಯನ್ನು ಹಿಂದಿ ಭಾಷೆಯಲ್ಲಿ ರಚಿಸಿ ಸುಲ್ತಾನನಿಗೆ ಕಳುಹಿಸಿದನು. ಸುಲ್ತಾನ ಮಹಮದನು ತನ್ನ ದರ್ಬಾರಿನಲ್ಲಿದ್ದ ಪ್ರಖ್ಯಾತ ಹಿಂದುಸ್ಥಾನಿ, ಅರಬೀ ಹಾಗೂ ಅಜ್ಮೀ ಕವಿಗಳಿಗೆ ಈ ಕವಿತೆಯನ್ನು ಓದಲು ಹೇಳಿ ಅದನ್ನು ಕೇಳಿ ಸಂತುಷ್ಟನಾಗಿ ಮನಃಪೂರ್ವಕ ಆತನನ್ನು ಹೊಗಳಿದನು. ಈ ಕವಿತೆಯ ಭಾವ ಹಾಗೂ ಸೌಂದರ್ಯದಿಂದ ಪ್ರಭಾವಿತನಾದ ಸುಲ್ತಾನ ಮಹಮದನು ರಾಜಾ ನಂದನಿಗೆ ಕಾಲಿಂಜರ ಕೋಟೆಯನ್ನೊಳಗೊಂಡಂತೆ ೧೫ ಕೋಟೆಗಳನ್ನು ಕೊಡುವ ರಾಜಾಜ್ಞೆ ಕಳುಹಿಸಿದನು. ಈ ಉಡುಗೊರೆಗೆ ಧನ್ಯವಾದಗಳನ್ನು ಅರ್ಪಿಸಲು ರಾಜನು ಅತ್ಯಂತ ಬೆಲೆಬಾಳುವ ಮುತ್ತು-ರತ್ನಗಳು ಮತ್ತು ಅತ್ಯಮೂಲ್ಯವಾದ ವಸ್ತುಗಳನ್ನು ಮಹಮದನ ಸನ್ನಿಧಾನಕ್ಕೆ ಕಳುಹಿಸಿದನು. ರಾಜಾ ನಂದನ ಈ ವಿಶ್ವಾಸಪೂರ್ವಕ ಕೃತ್ಯಕ್ಕಾಗಿ ಸುಲ್ತಾನ ಮಹಮದನು ಬಹಳ ಸಂತುಷ್ಟನಾಗಿ, ಆತನಿಗೆ ಯಾವ ರೀತಿ ತೊಂದರೆಗೆ ಒಳಪಡಿಸದೆ ತನ್ನ ರಾಜಧಾನಿಯಾದ ಘಜನಿಗೆ ಮರಳಿದನು.

ಬಲಖ್‌ದಲ್ಲಿ ಮೆಹಮೂದನ ಆಗಮನ:

ಹಿಜರಿ ಶಕೆ ೪೧೫ರಲ್ಲಿ ಸುಲ್ತಾನ ಮಹಮದನು ತನ್ನ ಸೈನ್ಯದ ಲೆಕ್ಕಪತ್ರವನ್ನು ನೋಡಿದಾಗ ಕಂಡು ಬಂದುದೇನೆಂದರೆ, ತನ್ನ ಸೈನ್ಯವು ಅನ್ಯ ರಾಜ್ಯಗಳಲ್ಲಿ ಹಾಗೂ ಅವುಗಳ ವಿವಿಧ ಭಾಗಗಳಲ್ಲಿ ಹರಡಿದ್ದು ಅರಿವಿಗೆ ಬಂದಿತು. ಮಹಮದನ ಬಳಿ ೫೪ ಸಾವಿರ ಅಶ್ವ ಸವಾರರು, ೩೦೦ ಆನೆಗಳು ಇದ್ದವು. ಮಹಮದನು ಈ ಸೈನ್ಯವನ್ನು ಸುಸಜ್ಜಿತಗೊಳಿಸಿ ಬಲ್ಗ ಕಡೆಗೆ ಹೊರಟನು. ಆ ಸಂದರ್ಭದಲ್ಲಿ ಮಾವ್ರಾ-ಅಲಜಹೀರನ ಪ್ರಜೆಗಳು ಅಲಿ-ತಗಯೀನನ ದೌರ್ಜನ್ಯ ಹಾಗು ದಬ್ಬಾಳಿಕೆಯನ್ನು ತಾಳಲಾರದೆ ನ್ಯಾಯವನ್ನು ಬಯಸುತ್ತಿದ್ದರು. ಈ ವಿಷಯವನ್ನು ತಿಳಿದ ಸುಲ್ತಾನ ಮಹಮದನ ಸೈನ್ಯವು 'ಜೂಯಹೂನ' ನದಿಯನ್ನು ದಾಟಿತು.

ಮಾವ್ರಾ ಮತ್ತು ಅಲ್ ಜಹೀರನ ಎಲ್ಲಾ ಪ್ರಖ್ಯಾತ ಹಾಗು ಗೌರವಾನ್ವಿತ ಜನರು

ಸುಲ್ತಾನ ಮಹಮದನ ಸ್ವಾಗತಕ್ಕಾಗಿ ಬಂದಿದ್ದರು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಂತಸ್ತಿಗೆ ಅನುಗುಣವಾಗಿ ಸುಲ್ತಾನ ಮಹಮದನಿಗೆ ಕಾಣಿಕೆಗಳನ್ನು ಕೊಟ್ಟರು. ತುರ್ಕಿಸ್ಥಾನದ ರಾಜನಾದ ಯೂಸೂಫ್-ಖಾದರಖಾನ ಕೂಡಾ ಮಹಮದನ ಸ್ವಾಗತಕ್ಕಾಗಿ ಬಂದಿದ್ದನು. ಅತ್ಯಂತ ಪ್ರೀತಿ ವಿಶ್ವಾಸಗಳಿಂದ ಸುಲ್ತಾನನ್ನು ಭೇಟಿ ಮಾಡಿದನು. ಮಹಮದನು ಕೂಡಾ ಈ ಭೇಟಿಯಿಂದ ಬಹಳ ಸಂತೋಷಪಟ್ಟನು. ಉಭಯ ರಾಜರು ಪರಸ್ಪರ ಆತ್ಮೀಯ ಭೇಟಿಯ ಮಾತುಕತೆಯ ನಂತರ ಉಡುಗೊರೆ ವಿನಿಮಯ ಮಾಡಿಕೊಂಡು, ವಿದಾಯ ಹೇಳಿದರು. ಮಹಮದನ ಬರುವಿಕೆಯ ವಿಷಯ ತಿಳಿದೊಡನೆ ಅಲಿತಗೀನ ಭಯಭೀತನಾಗಿ ತನ್ನ ರಾಜ್ಯವನ್ನು ಬಿಟ್ಟು ಓಡಿಹೋದನು. ಮಹಮದನು ತನ್ನ ಕೆಲವು ವಿಶ್ವಾಸಿ ಜನರನ್ನು ಆತನ ಬೆನ್ನಟ್ಟಲು ಕಳುಹಿಸಿದನು. ಅವರು ಆತನನ್ನು ಬಂದಿ ಮಾಡಿ ಸುಲ್ತಾನನ ಎದುರಿಗೆ ತಂದು ನಿಲ್ಲಿಸಿದರು. ಸುಲ್ತಾನನು ಅಲಿತಗೀನನಿಗೆ ಸರಪಳಿಗಳಿಂದ ಬಂದಿಸಿ ಹಿಂದುಸ್ತಾನದ ಒಂದು ಕೋಟೆಯಲ್ಲಿ ಕೈದಿಯನ್ನಾಗಿಸಿ ಘಜನಿಗೆ ಮರಳಿದನು.

ಸೋಮನಾಥದ ಗೆಲವು:

ಹಿಜರಿ ಶಕೆ ೪೧೬ರಲ್ಲಿ ತನ್ನ ವಿಶ್ವಾಸಾರ್ಹವಾದ ಕೆಲವು ಮೇಧಾವಿ ವ್ಯಕ್ತಿಗಳಿಂದ, 'ಮರಣದನಂತರ ಮನುಷ್ಯರ ಪ್ರಾಣವು ದೇಹದಿಂದ ಬೇರ್ಪಟ್ಟು ಸೋಮನಾಥನ ಸಾನ್ನಿಧ್ಯವನ್ನು ಸೇರುತ್ತದೆ' ಎಂಬ ಹಿಂದುಸ್ತಾನದ ಜನರ ನಂಬಿಕೆಯ ಬಗ್ಗೆ ತಿಳಿದುಕೊಂಡಿದ್ದನು. ಸೋಮನಾಥನು ಈ ಪ್ರಾಣದ ಕರ್ಮಗಳ ಅನುಸಾರ ತಕ್ಕ ಫಲವನ್ನು, ಹೊಸ ಶರೀರವನ್ನು ಕೊಡುವನು. ಹಿಂದೂಗಳ ನಂಬಿಕೆ ಏನೆಂದರೆ ನದಿಗಳ ಏರಿಳಿತವು ಕೂಡಾ ಸೋಮನಾಥನ ಭಕ್ತಿಯಾಗಿದೆ. ಅದು ಸಹ ಅದೇ ರೀತಿಯಲ್ಲಿ ವ್ಯಕ್ತವಾಗುತ್ತದೆ. ಮಹಮದನು ನಾಶ ಮಾಡಿದ ಮೂರ್ತಿಗಳಲ್ಲಿ ಸೋಮನಾಥನ ಬೇಸರಕ್ಕೆ ಒಳಪಡಿಸಿದ ಮೂರ್ತಿಗಳು ಕೂಡಾ ಇದ್ದವು. ಇಲ್ಲದಿದ್ದಲ್ಲಿ ಸೋಮನಾಥನು ಒಂದೇ ನಿಮಿಷದಲ್ಲಿ ಎಲ್ಲ ಮೂರ್ತಿಗಳನ್ನು ನಾಶಪಡಿಸುವಷ್ಟು ಶಕ್ತಿ ಪಡೆದಿದ್ದನು. ಸೋಮನಾಥನು ಅರಸನಿದ್ದು, ಉಳಿದೆಲ್ಲಾ ಮೂರ್ತಿಗಳು ಆತನ ಕಾವಲುಗಾರರು ಹಾಗೂ ಸೇವಕರು ಇರುವರೆಂದು ಕೆಲವು ಬ್ರಾಹ್ಮಣರ ನಂಬಿಕೆ ಇದೆ. ಇವೆಲ್ಲಾ ಅರ್ಥಹೀನ ಕಥೆಯನ್ನು ಕೇಳಿದ ಮಹಮದನ ಮನಸ್ಸಿನಲ್ಲಿ ಜಿಹಾದಿನ ಆಕಾಂಕ್ಷೆಯು ಬಲವಾಗಿ ಬೆಳೆಯಿತು ಮತ್ತು ಈತನು ಸೋಮನಾಥವನ್ನು ಗೆದ್ದು ಅಲ್ಲಿಯ ಮೂರ್ತಿ ಪೂಜಕರನ್ನು ಸಂಹರಿಸಲು ನಿರ್ಧರಿಸಿದನು.

ಈ ಉದ್ದೇಶದಿಂದ ಸುಲ್ತಾನ ಮಹಮದನು ತನ್ನ ವಿಶೇಷ ಸೈನಿಕರನ್ನು ಯುದ್ಧಕ್ಕೆ ಸಿದ್ಧಪಡಿಸಿ, ೩೦ ಸಾವಿರ ಸೈನಿಕರನ್ನು ತುರ್ಕಿಸ್ಥಾನ ಮತ್ತು ಇತರ ಭಾಗದಿಂದ ಜಿಹಾದಗಾಗಿ ಬಂದವರನ್ನು ಜೊತೆಯಲ್ಲಿ ತೆಗೆದುಕೊಂಡು, ಹಿಜರಿ ಶಕೆ ೪೧೬ ರ ಶಾಬಾನ ತಿಂಗಳ ೨೦ನೆಯ ದಿನದಂದು ಸೋಮನಾಥದೆಡೆಗೆ ಹೊರಟನು.

ಸೋಮನಾಥ ಕುರಿತು:

ಈ ಕಾಲದಲ್ಲಿ ಸೋಮನಾಥವು ಒಂದು ದೊಡ್ಡ ಪಟ್ಟಣವಾಗಿತ್ತು, ಇದು 'ಉಮಾನ' *(ಅರಬೀ ಸಮುದ್ರದ ಉತ್ತರಭಾಗ) ನದಿಯ ತೀರದಲ್ಲಿತ್ತು. ಈ ಪಟ್ಟಣದಲ್ಲಿ ವೈಭವಯುತ ಮೂರ್ತಿ ಇದ್ದು ಅದು ಸಮಗ್ರ ಬ್ರಾಹ್ಮಣ ಮತ್ತು ಮುಸಲ್ಮಾನೇತರರಿಗೆ ಕಾಬಾದಂತೆ ಪವಿತ್ರ ಹಾಗೂ ಮಹತ್ವದಾಗಿತ್ತು. ಈ ಪಟ್ಟಣವು ಬಂದರದೇವದಲ್ಲಿದೆ ಮತ್ತು ಇಂಗ್ಲೀಷ ಜನರ ಸ್ವಾಧೀನದಲ್ಲಿದೆ. ಕೆಲವು ಇತಿಹಾಸಕಾರರ ಹೇಳಿಕೆಯಂತೆ ಹಜರತ್ ಮುಹಮ್ಮದ ಪೈಗಂಬರ ಅವರ ಕಾಲದಲ್ಲಿ ಕೆಲವು ಮುಸಲ್ಮಾನೇತರ ಜನರು ಒಂದು ದೊಡ್ಡ ವಿಗ್ರಹವನ್ನು 'ಖಾನಾ ಕಾಬಾ' (ಮಕ್ಕಾ ಪಟ್ಟಣ)ದಿಂದ ಹಿಂದುಸ್ತಾನಕ್ಕೆ ತಂದಿದ್ದರು. ಈ ವಿಗ್ರಹದ ಹೆಸರು 'ಸೋಮನಾಥ' ಎಂದು ಇಡಲಾಗಿತ್ತು. ಇಸ್ಲಾಮ ಮತದ ಹುಟ್ಟಿಗಿಂತಲೂ ಮೊದಲು ಸಹಸ್ರಾರು ವರ್ಷಗಳ ಪೂರ್ವದಲ್ಲಿ ಬರೆಯಲಾದ ಬ್ರಾಹ್ಮಣರ ಕೆಲವು ಗ್ರಂಥಗಳಲ್ಲಿ ಉಲ್ಲೇಖಿಸಲಾಗಿರುವ ವಿಷಯವು ರೂಢಿಪ್ರಕಾರ ತಪ್ಪು ಇದೆ. ಈ ವಿಗ್ರಹವು ಶ್ರೀಕೃಷ್ಣನ ಕಾಲದಿಂದಲೂ ಸಮಸ್ತ ಬ್ರಾಹ್ಮಣರಿಂದ ಪೂಜಿಸಲ್ಪಡುತ್ತಿದ್ದು, ಬ್ರಾಹ್ಮಣರ ಪ್ರಕಾರ ಶ್ರೀಕೃಷ್ಣನು ಇದೇ ಸ್ಥಳದಿಂದ ಜಗತ್ತು ಹಾಗೂ ಜಗತ್ತಿನ ಜನರಿಗೆ ಅದೃಶ್ಯನಾದನು.

ಮಹಮದನ ಪ್ರಯಾಣದ ಸ್ಥಿತಿ ಕುರಿತು:

ಹಿಜರಿ ಶಕೆ ೪೧೫ ರ ರಮಜಾನ ಮುಬಾರಕ ಮಧ್ಯದಲ್ಲಿ ಸುಲ್ತಾನ ಮಹಮದನು ತನ್ನ ಸೈನ್ಯದೊಂದಿಗೆ ಮುಲ್ತಾನಿಗೆ ಬಂದನು. ಇಲ್ಲಿಂದ ಮುಂದೆ ದಾರಿಯಲ್ಲಿ ಒಂದು ನೀರಿಲ್ಲದ ಸ್ಥಳ ಹಾಗು ಅರಣ್ಯವು ಬರುತ್ತಿತ್ತು. ಸುಲ್ತಾನನು ತಮ್ಮ ಜೊತೆಯಲ್ಲಿ ಕೆಲವು ದಿನಗಳವರೆಗೆ ಸಾಲುವಷ್ಟು ನೀರು ಹಾಗು ಖಾದ್ಯ ವಸ್ತುಗಳನ್ನು ಸಂಗ್ರಹಿಸಲು ಆದೇಶಿಸಿದನು. ಇದಲ್ಲದೆ, ಸ್ವತಃ ತಾನು ಇಪ್ಪತ್ತು ಸಾವಿರ ಒಂಟೆಗಳ ಮೇಲೆ ಧಾನ್ಯ ಹಾಗು ನೀರನ್ನು ಇರಿಸಿಕೊಂಡು ಸೈನ್ಯಕ್ಕೆ ಮುಂದೆ ಹೋಗಲು ಆದೇಶಿಸಿದನು. ಈ ಭಯಾನಕ ಅರಣ್ಯದ ಮೂಲಕ ಸಾಗುವ ಪ್ರಯಾಣವು ಕೊನೆಗೊಂಡ ಮೇಲೆ ಮಹಮದನ ಸೈನ್ಯವು ಅಜ್ಮೀರನ ಗಡಿಯ ಹತ್ತಿರ ಬಂದಿತು. ಅಜ್ಮೀರ ರಾಜನು ಮಹಮದನ ಬರುವಿಕೆಯ ವಿಷಯ ಕೇಳಿ ಕಣ್ಮರೆಯಾದನು. ಇದನ್ನು ತಿಳಿದ ಸುಲ್ತಾನನ ಸೈನ್ಯವು ಮನಬಂದಂತೆ ಪಟ್ಟಣವನ್ನು ಹಾಳುಮಾಡಿತು. ಆದರೆ ಅಜ್ಮೀರ ಕೋಟೆಯನ್ನು ಗೆಲ್ಲುವ ಪ್ರಯತ್ನದಲ್ಲಿ ಸಮಯವನ್ನು ವ್ಯರ್ಥಮಾಡಲಿಲ್ಲ, ಏಕೆಂದರೆ ಮಹಮದನು ಸೋಮನಾಥವನ್ನು ಗೆಲ್ಲಲು ಇಚ್ಛಿಸಿದ್ದನು. ಅಲ್ಲಿಂದ ಸೈನ್ಯವು ಮುಂದೆ ಸಾಗಿತು.

ದಾರಿಯಲ್ಲಿ ಸುಲ್ತಾನ ಮಹಮದನಿಗೆ ಇನ್ನೂ ಕೆಲವು ಕೋಟೆಗಳು ದೊರೆತವು. ಈ ಕೋಟೆಗಳಲ್ಲಿ ಬಹಳಷ್ಟು ಶೂರ ಸೈನಿಕರು ಕೂಡಾ ಇದ್ದರು ಮತ್ತು ಯುದ್ಧ ಸಾಮಗ್ರಿಗಳು ಕೂಡಾ ಇದ್ದವು. ಆದರೆ ಮಹಮದನ ಮೇಲೆ ಅಲ್ಲಾಹನ ಅನುಗ್ರಹವು

ಅಪರಿಮಿತವಾಗಿ ಇದ್ದುದರಿಂದ ಈ ಕೋಟೆಗಳಲ್ಲಿ ವಾಸಿಸುವವರು ಭಯದಿಂದ ಯುದ್ಧದ ಬದಲು ತಮ್ಮ ಕೋಟೆಯ ಸಮಸ್ತ ವಸ್ತುಗಳನ್ನು ಮಹಮದನಿಗೆ ಒಪ್ಪಿಸಿದರು. ಈ ಕೋಟೆಗಳನ್ನು ವಶಪಡಿಸಿಕೊಳ್ಳುವ ಕಾರ್ಯವು ಮುಗಿದನಂತರ ಮಹಮದನು ಪಟ್ಟನ್ ಗುಜರಾತ ಎಂದು ಪ್ರತೀತಿಯಾದ ಮೆಹರವಾಲಾಕ್ಕೆ ಬಂದನು.

ಈ ಪಟ್ಟಣದ ಎಲ್ಲ ನಿವಾಸಿಗಳು ಮಹಮದನ ಭಯಕ್ಕೊಳಗಾಗಿ ಪಟ್ಟಣವನ್ನು ತೆರವು ಮಾಡಿ ಬೇರೆಡೆಗೆ ಹೋಗಿದ್ದರು. ಹೀಗಾಗಿ ಮಹಮದನು ಈ ಪಟ್ಟಣದಲ್ಲಿದ್ದ ಸಮಗ್ರ ಧಾನ್ಯವನ್ನು ಹೇರಿಕೊಂಡು, ಬಹಳ ವೇಗದಿಂದ ಸೈನ್ಯದೊಡನೆ ಪ್ರಯಾಣ ಬೆಳಸಿ ಸೋಮನಾಥದ ಹತ್ತಿರ ಬಂದನು.

ಸೋಮನಾಥಕ್ಕೆ ಬರುವಿಕೆ:

ಮುಸಲ್ಮಾನ ಸೈನ್ಯವು ಸೋಮನಾಥನ ಸಮೀಪವಿದ್ದ ನದಿಯ ತೀರವನ್ನು ತಲುಪಿದಾಗ, ಸೋಮನಾಥನ ಕೋಟೆಯು ಬಹಳ ಎತ್ತರವಾಗಿದ್ದುದನ್ನು ಮುಸಲ್ಮಾನರು ಕಂಡರು ಹಾಗೂ ನದಿಯ ನೀರು ಕೋಟೆಯ ಗೋಡೆಯವರೆಗೂ ಹೋಗುತ್ತಿತ್ತು. ಸೋಮನಾಥ ಕೋಟೆಯ ಗೋಡೆಗಳ ಮೇಲೆ ಜನರು ನಿಂತುಕೊಂಡು ಇಸ್ಲಾಮಿ ಸೈನ್ಯವನ್ನು ನೋಡುತ್ತಿದ್ದರು ಮತ್ತು ಕೂಗಿ ಕೂಗಿ ಹೇಳುತ್ತಿದ್ದುದೇನೆಂದರೆ, ನಮ್ಮ ಆರಾಧ್ಯ ಮೂರ್ತಿ ಸೋಮನಾಥ ಹಾಗೂ ನೀವು ಭಗ್ನಗೊಳಿಸಿದ ಮೂರ್ತಿಗಳು, ನಿಮ್ಮ ಮೇಲಿನ ಪ್ರತೀಕಾರದಿಂದ ನಿಮ್ಮೆಲ್ಲರನ್ನು ಏಕ ಕಾಲದಲ್ಲಿ ನಾಶ ಮಾಡಲು ನಿಮ್ಮೆಲ್ಲರನ್ನು ಇಲ್ಲಿಗೆ ಎಳೆದು ತಂದಿದ್ದಾನೆ.

ಯುದ್ಧದ ಆರಂಭ:

ಮುಸಲ್ಮಾನರ ವಿಶಾಲವಾದ ಸೈನ್ಯವು ತಮ್ಮ ಶೌರ್ಯ ಹಾಗೂ ಧೈರ್ಯದಿಂದ ಸುಲ್ತಾನ ಮಹಮದನ ಆದೇಶದಂತೆ ಕೋಟೆಯ ಗೋಡೆಗಳ ಕೆಳಗೆ ಹೋಗಿ ಯುದ್ಧವನ್ನಾರಂಭಿಸಿದರು. ಹಿಂದುಗಳು ಮುಸಲ್ಮಾನರ ಈ ಶೌರ್ಯದ ಕೃತ್ಯವನ್ನು ಹಾಗೂ ಧೈರ್ಯವನ್ನು ಕಂಡು, ಬಾಣಗಳ ಸುರಿಮಳೆಯಿಂದ ತಪ್ಪಿಸಿಕೊಳ್ಳಲು ಕೋಟೆಯ ಗೋಡೆಯಿಂದ ಕೋಟೆಯ ಒಳಹೊಕ್ಕರು ಮತ್ತು ಸೋಮನಾಥ ಮಂದಿರದೊಳಗೆ ಹೋಗಿ ತಮ್ಮ ಗೆಲುವಿಗಾಗಿ ಪ್ರಾರ್ಥಿಸಿದರು. ಮುಸಲ್ಮಾನರು ಹಲವಾರು ಏಣಿಗಳನ್ನು ಉಪಯೋಗಿಸಿ ಕೋಟೆಯ ಒಂದು ಭಾಗದ ಮೇಲೆ ಏರಿ ಮತ್ತು ಉಚ್ಚ ಧ್ವನಿಯಲ್ಲಿ 'ತಕಬೀರ್‌ನ ವೀರ ಘೋಷಣೆ' (ಅಲ್ಲಾ-ಹೂ-ಅಕ್ಬರ್) ಮಾಡಿದರು. ಆ ದಿನ ಬೆಳಗಿನಿಂದ ಸಾಯಂಕಾಲದವರೆಗೆ ಯುದ್ಧ ನಡೆಯಿತು. ಸಂಜೆಯಾದೊಡನೆ ಸುತ್ತ-ಮುತ್ತ ಕತ್ತಲೆಯಾಯಿತು. ಇಸ್ಲಾಮಿ ಸೈನ್ಯವು ತಮ್ಮ ಬಿಡಾರದತ್ತ ಮರಳಿತು. ಎರಡನೆಯ ದಿನ ಬೆಳಗಾಗುತ್ತಲೇ ಮುಸಲ್ಮಾನರು ದಾಳಿ ಮಾಡಿದರು. ಬಾಣಗಳ ಸುರಿಮಳೆಯಿಂದ ಹಾಗೂ ಭರ್ಚಿಯಿಂದ ಘಾಯಗೊಳಿಸಿ ಹಿಂದುಗಳನ್ನು ಕೋಟೆಯ ಆ ಭಾಗದಲ್ಲಿ

ಸೋಲಿಸಿದರು. ಹಿಂದಿನಂತೆ ಏಣಿಗಳಿಂದ ಕೋಟೆಯ ನಾಲ್ಕು ಕಡೆಯಿಂದ ಕೋಟೆಯಲ್ಲಿರುವ ಜನರ ಮೇಲೆ ದಾಳಿ ಮಾಡಿದರು. ಇದನ್ನು ಕಂಡು ಸೋಮನಾಥದಲ್ಲಿದ್ದ ಜನರು ಬಗೆ ಬಗೆಯ ಗುಂಪುಗಳಲ್ಲಿ ಹಂಚಿಹೋದರು ಮತ್ತು ಸೋಮನಾಥ ವಿಗ್ರಹವನ್ನು ಆಲಂಗಿಸಿ ಒಬ್ಬರಿಗೊಬ್ಬರು ಪರಸ್ಪರ ಬೀಳ್ಕೊಂಡರು. 'ಕೊಲ್ಲಿರಿ ಕೊಲ್ಲಿರಿ' ಎಂದು ದೊಡ್ಡ ಧ್ವನಿಯಲ್ಲಿ ಎಷ್ಟೊಂದು ಹೋರಾಡಿದರೆಂದರೆ ಒಬ್ಬಬ್ಬೊರನ್ನಾಗಿ ಪ್ರತಿಯೊಬ್ಬರನ್ನು ಕೊಂದರು.

ಮೂರನೆಯ ದಿನ ಕೋಟೆಯಲ್ಲಿರುವ ಹಿಂದುಗಳ ಸಹಾಯಕ್ಕೆ ಹಾಗೂ ಮುಸಲ್ಮಾನರ ವಿರುದ್ಧ ಹೋರಾಡಲು ಬಂದ ಸುತ್ತ-ಮುತ್ತಲಿನ ಸೈನಿಕರ ಮೇಲೆ, ಕೋಟೆಯನ್ನು ಸುತ್ತುವರಿದ ಒಂದು ದೊಡ್ಡ ಭಾಗದ ಸೈನ್ಯವನ್ನು ಮರಳಿ ಕರೆಯಿಸಿಕೊಂಡು ಹೊರಗಡೆಯಿಂದ ಬಂದ ಸೈನಿಕರ ಮೇಲೆ ಮಹಮದನು ದಾಳಿ ಮಾಡಿದನು.

ಎರಡು ಸೈನ್ಯದ ಮಧ್ಯೆ ಘನಘೋರ ಯುದ್ಧವಾಗಿ ರಣಾಂಗಣವೆಲ್ಲಾ ರಕ್ತದ ಮಡುವಾಯಿತು. ಈ ಪರಿಸ್ಥಿತಿಯನ್ನು ಕಂಡು ಜನರ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. 'ಪರಮದೇವ' ಮತ್ತು 'ವಾಬಶಿಲೀಮ' ಇವರ ಸೈನ್ಯಗಳು ಒಬ್ಬರನಂತರ ಇನ್ನೊಬ್ಬರು ಬಂದ ಕಾರಣ ಯುದ್ಧ ಭೂಮಿಯಿಂದ ಮುಸಲ್ಮಾನರು ಕಾಲು ತೆಗೆಯುವರು ಎನ್ನುವ ವಿಚಾರವು ತಲೆದೋರಿತು. ಇದನ್ನು ಕಂಡ ಮಹಮದನು ದಿಗ್ಭ್ರಮೆಗೊಂಡು ಒಂದು ಮೂಲೆ ಸೇರಿದನು. ಹಜ್ರತ ಶೇಖ್-ಅಬುಲ್-ಹಸನ್-ಖಾನಿ-ಇವರ ಪವಿತ್ರ ವಸ್ತ್ರ ಹಿಡಿದು ಗೆಲುವನ್ನು ಕೋರಿ ಪ್ರಾರ್ಥಿಸಿ ಸಜದಾ ಮಾಡಿದನು ಹಾಗು ಅತಿ ವಿನಯ ಪೂರ್ವಕ ಅಲ್ಲಾಹನನ್ನು ವಿಜಯಕ್ಕಾಗಿ ಪ್ರಾರ್ಥಿಸಿ ಮರಳಿ ಸೈನ್ಯವನ್ನು ಸೇರಿಕೊಂಡನು. ಇದಾದ ನಂತರ ಹಿಂದುಗಳ ಮೇಲೆ ದಾಳಿ ಮಾಡಿ ಗೆದ್ದನು.

ಈ ಯುದ್ಧದಲ್ಲಿ ಐದು ಸಾವಿರ ಸೋಮನಾಥದ ಜನರು ಹತರಾದರು. ಉಳಿದ ಸೈನಿಕರು ನಾಲ್ಕು ಸಾವಿರ ಆನೆಗಳು ಮತ್ತು ಇತರ ಜನರು, ನದಿಯ ಕಡೆಗೆ ಓಡಿಹೋದರು. ಹಡುಗುಗಳಲ್ಲಿ ಕುಳಿತು 'ಸರಾನದೀಪ' ದ್ವೀಪದ ಕಡೆಗೆ ಹೊರಟು ಅಲ್ಲಿ ಆಶ್ರಯ ಪಡೆಯಲು ಹೋಗುವವರ ಮೇಲೆ ಪೂರ್ವಭಾವಿಯಾಗಿ ಮಹಮದನು ಸಣ್ಣ ಸಣ್ಣ ಹಡಗುಗಳಲ್ಲಿ ಸೈನಿಕರನ್ನು ಕಳುಹಿಸಿ ಓಡಿಹೋಗುವ ಜನರನ್ನು ತಡೆಗಟ್ಟಿ, ದಾಳಿ ಮಾಡಿ ವೈರಿಗಳ ಹಡಗುಗಳನ್ನು ಮುಳುಗಿಸಿದನು.

ಸೋಮನಾಥ ಗೆಲುವಿನ ನಂತರ:

ಹಿಂದುಗಳಿಂದ ಯಾವ ಪ್ರತಿರೋಧವು ಇಲ್ಲದಿರುವುದನ್ನು ಮನಗಂಡು, ಸುಲ್ತಾನ ಮಹಮದನು ತನ್ನ ಮಕ್ಕಳು ಹಾಗೂ ರಾಜ್ಯದ ಗೌರವಾನ್ವಿತ ಜನರೊಂದಿಗೆ ಕೋಟೆಯಲ್ಲಿ

ಪ್ರವೇಶಿಸಿದನು. ಕೋಟೆಯ ಪ್ರತಿಯೊಂದು ಭಾಗವನ್ನು ಲಕ್ಷ್ಯ ಕೊಟ್ಟು ನೋಡಲಾರಂಭಿಸಿದನು. ಕಟ್ಟಡವನ್ನು ನೋಡಿದನಂತರ ಸುಲ್ತಾನ ಮಹಮದನು ಒಂದು ಒಳದಾರಿಯಿಂದ ದೇವಾಲಯವನ್ನು ಪ್ರವೇಶಿಸಿದನು. ದೇವಾಲಯವು ಉದ್ದ-ಅಗಲದ ಅಳತೆಯಲ್ಲಿ ಸಾಕಷ್ಟು ದೊಡ್ಡದಾಗಿತ್ತು. ಅದರ ಮೇಲ್ಛಾವಣಿಯು ೫೬ ಕಂಬಗಳ ಆಧಾರದ ಮೇಲೆ ನಿಂತಿತ್ತು. ಈ ದೇವಾಲಯದಲ್ಲಿ ಸೋಮನಾಥನ ಮೂರ್ತಿಯನ್ನು ಇಡಲಾಗಿತ್ತು. ಈ ಮೂರ್ತಿಯು ೫ ಗಜ ಎತ್ತರವಿದ್ದು, ಅದರಲ್ಲಿ ೨ ಗಜ ಭೂಮಿಯಲ್ಲಿ ಹುಗಿದಿದ್ದು, ಕೇವಲ ೩ ಗಜ ನೆಲದ ಮೇಲೆ ಕಾಣುತ್ತಿತ್ತು. ಇದು ಕಲ್ಲಿನಿಂದ ಮಾಡಲಾಗಿತ್ತು. ತನ್ನ ಕೈಯಲ್ಲಿದ್ದ ಆಯುಧದಿಂದ ಒಂದು ಏಟನ್ನು ಹಾಕಿದನು, ಅದರಿಂದ ಮೂರ್ತಿಯ ಮುಖವು ಭಗ್ನವಾಯಿತು. ಇದಾದನಂತರ ಸುಲ್ತಾನ ಮಹಮದನು ಈ ಮೂರ್ತಿಯನ್ನು ಎರಡು ಭಾಗವಾಗಿ ಮಾಡಿ, ಒಂದು ಭಾಗವನ್ನು ಘಜನಿ ಮಸೀದಿಯ ಬಾಗಿಲಿಗೆ ಮತ್ತು ಇನ್ನೊಂದು ಭಾಗವನ್ನು ರಾಜ್ಯದ ದರ್ಬಾರದ ಮಧ್ಯದಲ್ಲಿ ಇಡಲು ಆಜ್ಞೆ ಮಾಡಿದನು.

ಈ ಆಜ್ಞೆಯನ್ನು ಪರಿಪಾಲಿಸಲಾಯಿತು. ಆ ಸಮಯದಿಂದ ಇಂದಿನವರೆಗೆ ಸುಮಾರು ೬೦೦ ವರ್ಷಗಳ ಕಾಲವು ಕಳೆದಿದ್ದು, ಈ ಭಾಗಗಳನ್ನು ಅಲ್ಲಿಯೇ ಇಡಲಾಗಿವೆ. ಇದಲ್ಲದೆ, ಸೋಮನಾಥ ವಿಗ್ರಹದ ಎರಡು ಭಾಗಗಳನ್ನು ಬೇರ್ಪಡಿಸಿ ಮಕ್ಕಾ ಮತ್ತು ಮದೀನಾಕ್ಕೆ ಕಳುಹಿಸಿ ಅವುಗಳನ್ನು ಸಾರ್ವಜನಿಕ ರಸ್ತೆಯಲ್ಲಿಡಲು, ಜನರು ಅವುಗಳನ್ನು ನೋಡಿ ಸುಲ್ತಾನ ಮಹಮದನ ಶೌರ್ಯ ಹಾಗೂ ಧೈರ್ಯದ ಪ್ರಶಂಸೆ ಮಾಡಲು ಆದೇಶಿಸಿದನು.

ಇತಿಹಾಸದಲ್ಲಿ ಈ ಘಟನೆಯ ವಿವರವನ್ನು ಹೀಗೆ ಹೇಳಲಾಗಿದೆ. ಸುಲ್ತಾನ ಮಹಮದನು ಸೋಮನಾಥ ವಿಗ್ರಹವನ್ನು ಭಗ್ನಗೊಳಿಸಲು ನಿಶ್ಚಯಿಸಿದಾಗ ಬ್ರಾಹ್ಮಣ ಸಮಾಜವು ರಾಜ್ಯದ ಗೌರವಾನ್ವಿತರ ಮೂಲಕ ವಿಗ್ರಹವನ್ನು ಭಗ್ನ ಮಾಡಕೂಡದೆಂದು ಮತ್ತು ಅದನ್ನು ಹಾಗೆಯೇ ಬಿಡಲು ಸುಲ್ತಾನನಿಗೆ ಕೋರಿದರು. ಇದಲ್ಲದೆ, ಇದರ ಪ್ರತಿಯಾಗಿ ಸಾಕಷ್ಟು ಸಂಪತ್ತನ್ನು ಕೊಡುವ ಆಶ್ವಾಸನೆ ಇತ್ತರು. ರಾಜ್ಯದ ಗೌರವಾನ್ವಿತ ಗಣ್ಯ ಜನರು ಹಿಂದುಗಳ ಈ ಕೋರಿಕೆಯನ್ನು ಸುಲ್ತಾನನಿಗೆ ತಿಳಿಸುವ ವಿಚಾರ ಮಾಡಿ ಅವರ ಮನವಿಯನ್ನು ಮನ್ನಿಸುವುದರಲ್ಲಿ ನಮ್ಮದೇ ಲಾಭವಿದೆ ಎಂದು ಮತ್ತು ಕೇವಲ ವಿಗ್ರಹವನ್ನು ಭಗ್ನಗೊಳಿಸುವುದರಿಂದ ವಿಗ್ರಹ ಆರಾಧನೆಯು ಈ ಪಟ್ಟಣದಲ್ಲಿ ನಿಲ್ಲಲಾರದು. ವಿಗ್ರಹವನ್ನು ಭಗ್ನಗೊಳಿಸುವುದರಲ್ಲಿ ನಮಗೆ ಯಾವ ಪ್ರಯೋಜನವಿಲ್ಲ. ಪ್ರತಿಯಾಗಿ ನಮಗೆ ಸಿಗುವ ದೊಡ್ಡ ಮೊತ್ತದ ಹಣವನ್ನು ಸ್ವೀಕರಿಸುವುದರಲ್ಲಿ ಬಡ ಮುಸಲ್ಮಾನರಿಗೆ ಲಾಭವಾಗುವುದೆಂದು ಹೇಳಿದರು. ಇದಕ್ಕೆ ಉತ್ತರವಾಗಿ ಮಹಮದನು ಹೇಳಿದುದೇನೆಂದರೆ ನೀವು ಹೇಳುವುದೆಲ್ಲವೂ ಸತ್ಯ, ನಿಮ್ಮ ಹೇಳಿಕೆಯಂತೆ ನಾನು ನಡೆದರೆ ನನ್ನ ನಂತರ ಜಗತ್ತಿನಲ್ಲಿ 'ವಿಗ್ರಹ ಮಾರಾಟಗಾರ

ಮಹಮದ' (ಮಹಮದ ಬುದ್-ಫರೋಶ) ಎಂಬ ಹೆಸರಿನಿಂದ ಸ್ಮರಿಸುವರು, ಒಂದು ವೇಳೆ ನಾನು ಈ ವಿಗ್ರಹವನ್ನು ಭಗ್ನಗೊಳಿಸಿದರೆ ನನಗೆ 'ವಿಗ್ರಹ ಭಂಜಕ ಮಹಮದ' (ಮಹಮದ ಬುದ್-ಶಿಕಂದ) ಎನ್ನುವ ಹೆಸರಿನಿಂದ ಸ್ಮರಿಸುವರು. ನನಗೆ ಇದೇ ಉತ್ತಮವೆನಿಸುತ್ತದೆ. ನನ್ನನ್ನು ಇಹ-ಪರದ ಲೋಕದವರು ಮಹಮದ ವಿಗ್ರಹ ಭಗ್ನಕನೆಂದು ಕರೆಯಲಿ, ಆದರೆ ವಿಗ್ರಹ ಮಾರಾಟಗಾರನೆಂದಲ್ಲ. ವಿಗ್ರಹವನ್ನು ಭಗ್ನಗೊಳಿಸಿದಾಗ ಅದರ ಉದರದಿಂದ ಎಣಿಕೆಗೆ ಬಾರದಷ್ಟು ಬೆಲೆಬಾಳುವ ಮುತ್ತು-ರತ್ನಗಳು ಹೊರಬಂದವು. ಇವೆಲ್ಲದರ ಬೆಲೆಯು ಬ್ರಾಹ್ಮಣ ವರ್ಗವು ಸಲ್ಲಿಸಲು ಮುಂದಾದ ಹಣಕ್ಕಿಂತಲೂ ನೂರು ಪಟ್ಟು ಅಧಿಕವಾಗಿದ್ದಿತು.

ಸೋಮನಾಥ ಪದದ ನೈಜತೆ:

'ಸೋಮನಾಥ' ಇದೊಂದು ವಿಶಿಷ್ಟ ವಿಗ್ರಹವಾಗಿದ್ದು ಹಿಂದುಸ್ತಾನದ ಸಮಸ್ತ ಪ್ರಜೆಗಳು ಸೋಮನಾಥ ವಿಗ್ರಹವನ್ನು ವಿಗ್ರಹಗಳ ರಾಜನೆಂದು ನಂಬುತ್ತಿದ್ದರು. ಈ ಸಂಗತಿಯನ್ನು 'ಜೆಬೂಲ್-ಅಸರ' ನಲ್ಲಿ ಬರೆಯಲಾಗಿದ್ದು, ಎಲ್ಲ ಇತಿಹಾಸಕಾರರು ಇದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಹಜರತ್ 'ಶೇಖ ಫರೀದ್-ಅಲ್-ದೀನ್-ಅತ್ತಾರ್' ನ ಪ್ರಕಾರ ಸೋಮನಾಥ ಪದವು 'ಸೋಮ' ಹಾಗು 'ನಾಥ' ಎರಡು ಸೇರಿದ್ದು, 'ಸೋಮ' ಎಂದರೆ ಮಂದಿರದ ಹೆಸರು, 'ನಾಥ' ಎಂದರೆ ಮಂದಿರದಲ್ಲಿ ಇಡಲಾದ ವಿಗ್ರಹವಾಗುತ್ತದೆ. ಆದರೆ ಈ ವಿನಮ್ರ ಇತಿಹಾಸಕಾರ ಫರಿಶ್ತಾನ ಅಭಿಪ್ರಾಯದಲ್ಲಿ ಪುರಾತನ ಇತಿಹಾಸಕಾರರು ಬರೆದಿದ್ದು ಸರಿಯಾಗಿದೆ. ಹಜ್ರತ ಅತ್ತಾರ ಇವರ ಹೇಳಿಕೆಯು ಆ ಇತಿಹಾಸಕಾರರ ಹೇಳಿಕೆಯ ವಿರುದ್ಧವಿಲ್ಲ.

ಅದಕ್ಕಾಗಿ ಪದ 'ಸೋಮನಾಥ' 'ಸೋಮ' ಹಾಗು 'ನಾಥ' ಎರಡು ಕೂಡಿದೆ. ಆದರೆ ಸೋಮ ಈ ವಿಗ್ರಹವನ್ನು ಮಾಡಿದ ಹೆಸರು ಮತ್ತು ನಾಥ ಸ್ವತಃ ಈ ವಿಗ್ರಹದ ಹೆಸರು. ಈ ಎರಡು ಪದಗಳ ಅತಿಶಯದ ಬಳಿಕೆಯಿಂದ 'ಬ-ಅಲ್-ಬಕ್'ನಂತೆ ಒಂದಾಗಿಬಿಟ್ಟಿವೆ ಮತ್ತು ಈ ಪದಗಳಿಂದ ವಿಗ್ರಹದ ಹೆಸರಾಗಿದೆ. ಅಲ್ಲಿಯ ಪಟ್ಟಣ ಹಾಗೂ ಮಂದಿರದ ಹೆಸರು ಕೂಡಾ ಸೋಮನಾಥ ಎನ್ನಲಾಗುತ್ತದೆ. ವಿಗ್ರಹದ ಹೆಸರು ಸೋಮನಾಥ ಇರಲಿ ಅಥವಾ ಕೇವಲ 'ನಾಥ' ಇರಲಿ ಎರಡೂ ಸರಿಯಾಗಿವೆ. ಹಿಂದಿ ಭಾಷೆಯಲ್ಲಿ ನಾಥ ಎಂದರೆ ಹಿರಿಯರು ಅಥವಾ ವಯಸ್ಕರು. ಹೇಗೆಂದರೆ 'ಜಗನಾಥ' ಇತ್ಯಾದಿಗಳು. 'ಜಗನ್ನಾಥ' ಕೂಡಾ 'ಜಗ' ನಾಥ' ಎರಡು ಶಬ್ದಗಳು ಕೂಡಿಕೊಂಡಿದ್ದು, ಜಗ ಎಂದರೆ ಜಗತ್ತು ನಾಥ ಎಂದರೆ ಪಾಲನೆ ಮಾಡುವವನು ಎಂದಾಗುತ್ತದೆ. ಆದರೆ ನಾಣ್ನುಡಿ ಪ್ರಕಾರ ಈ ಪದಗಳ ಪದಕೋಶದ ಅರ್ಥದ ಬಗ್ಗೆ ವಿಚಾರ ಮಾಡುವುದಿಲ್ಲ. ಆದರೆ ಈ ಎರಡು ಶಬ್ದಗಳನ್ನು ಸೇರಿಸಿ ಒಬ್ಬ ವ್ಯಕ್ತಿಯ ಹೆಸರೆಂದು ತಿಳಿಯುತ್ತದೆ.

ಸೋಮನಾಥ ಮಂದಿರವನ್ನು ಕುರಿತು:

ಸೋಮನಾಥ ಮಂದಿರವು ಹಿಂದುಗಳಿಗೆ ಅತ್ಯಂತ ಮಹತ್ವವಾದ ಮಂದಿರ. ಸೂರ್ಯ ಅಥವಾ ಚಂದ್ರ ಗ್ರಹಣವಾದಾಗ ಸುಮಾರು ೨ ಲಕ್ಷ ೩೦ ಸಾವಿರ ಜನರು ಸೇರುತ್ತಾರೆ. ಅವರಲ್ಲಿ ಬಹಳಷ್ಟು ಜನ ದೇಶದ ದೂರದ ಭಾಗಗಳಿಂದ ಪರಮಾತ್ಮನಿಗೆ ಹರಕೆಗಳನ್ನು ಅರ್ಪಿಸಲು ಬರುತ್ತಿದ್ದರು. ಹಿಂದುಸ್ತಾನದ ರಾಜರು ಈ ಮಂದಿರದ ಖರ್ಚಿಗಾಗಿ ಆಗಾಗ ಗ್ರಾಮಗಳನ್ನು ಮತ್ತು ಹಳ್ಳಿಗಳನ್ನು ದಾನದ ರೂಪದಲ್ಲಿ ಕೊಡುತ್ತಿದ್ದರು. ಸುಲ್ತಾನ ಮಹಮದನು ಇದರ ಮೇಲೆ ದಾಳಿ ಮಾಡಿದಾಗ, ಆ ಸಮಯದಲ್ಲಿ ಸುಮಾರು ಎರಡು ಸಾವಿರ ಹಳ್ಳಿಗಳ ಆದಾಯವನ್ನು ಇದರ ವೆಚ್ಚಕ್ಕಾಗಿ ಉಪಯೋಗಿಸಲಾಗುತ್ತಿತ್ತು. ಈ ಮಂದಿರದಲ್ಲಿ ಎರಡು ಸಾವಿರ ಬ್ರಾಹ್ಮಣರು ಪೂಜೆ ಮತ್ತು ಅರ್ಚನೆಗಾಗಿ ಇರುತ್ತಿದ್ದರು. ಇವರು ಪ್ರತಿನಿತ್ಯ ರಾತ್ರಿಯ ಸಮಯದಲ್ಲಿ ಸೋಮನಾಥನನ್ನು ಗಂಗಾ ನದಿಯ ಶುದ್ಧ ನೀರಿನಿಂದ ತೊಳೆಯುತ್ತಿದ್ದರು. ಗಂಗಾ ಮತ್ತು ಸೋಮನಾಥ ಮಂದಿರದಿಂದ ನಡುವಿನ ಅಂತರವು ಸುಮಾರು ೬೦೦ ಹರದಾರಿ ದೂರವಿದೆ. ಮಂದಿರದ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೆ ಚಿನ್ನದ ಸರಪಳಿಯನ್ನು ಕಟ್ಟಲಾಗಿದ್ದು ಅದರ ತೂಕವು ೨೦೦ ಮಣವಿತ್ತು. ಈ ಸರಪಳಿಯಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಗಂಟೆಗಳಿದ್ದು ಪೂಜೆಯ ವೇಳೆಯಲ್ಲಿ ಅರ್ಚಕರು ಈ ಸರಪಳಿಯನ್ನು ಅಲುಗಾಡಿಸಿದಾಗ ಗಂಟೆಗಳು ಸದ್ದು ಮಾಡುತ್ತಿದ್ದು, ಗಂಟೆಯ ಸದ್ದಿನಿಂದ ಜನರು ಪೂಜೆ ಮಾಡಲು ಮಂದಿರಕ್ಕೆ ಬರುತ್ತಿದ್ದರು. ಇಲ್ಲಿ ಸುಮಾರು ೫೦೦ ಹಾಡುಗಾರ್ತಿಯರು ಮತ್ತು ೩೦೦ ಪುರುಷ ಹಿಮ್ಮೇಳದವರು ನೌಕರರಾಗಿದ್ದರು. ಇವರ ಖರ್ಚನ್ನು ದಾನ ರೂಪದಲ್ಲಿ ನೀಡಿದ ಗ್ರಾಮಗಳಿಂದ ಪೂರೈಸಲಾಗುತ್ತಿತ್ತು. ಅರ್ಚಕರ ತಲೆ ಹಾಗು ಗಡ್ಡಗಳನ್ನು ಕ್ಷೌರಮಾಡಲು ೩೦೦ ಕ್ಷೌರಿಕರು ಇಲ್ಲಿ ಇರುತ್ತಿದ್ದರು. ಹಿಂದುಸ್ತಾನದ ಬಹಳಷ್ಟು ರಾಜರು ತಮ್ಮ ಹೆಣ್ಣುಮಕ್ಕಳನ್ನು ಸೋಮನಾಥನ ಸೇವೆಯಲ್ಲಿ ನಿರತರಾಗಲು ಮಂದಿರಕ್ಕೆ ಕಳುಹಿಸುತ್ತಿದ್ದರು. ಇವರು ಆಜೀವನಪರ್ಯಂತ ಕನ್ಯೆಯರಾಗಿದ್ದು ಮಂದಿರದ ವಿವಿಧ ಕರ್ತ್ಯವ್ಯಗಳನ್ನು ಪರಿಪಾಲಿಸುತ್ತಿದ್ದರು.

ಈ ಮಂದಿರದಿಂದ ಸುಲ್ತಾನ ಮಹಮದನಿಗೆ ದೊರೆತಷ್ಟು ಉತ್ತಮ ದರ್ಜೆಯ ಮುತ್ತು-ರತ್ನಗಳು, ಚಿನ್ನ-ಬೆಳ್ಳಿ ಕೈ ಸೇರಿತ್ತೋ, ಇದರ ೧/೧೦ ಅಂಶ ಭಾಗವು ಕೂಡಾ ಇದಕ್ಕೂ ಮೊದಲು ಯಾವ ರಾಜನ ಬೊಕ್ಕಸದಲ್ಲಿ ಸೇರಿರಲಿಲ್ಲ. ಮಂದಿರದಲ್ಲಿ 'ಸೋಮನಾಥ' ಮೂರ್ತಿಯನ್ನು ಇಟ್ಟ ವಿಶಿಷ್ಟವಾದ ಸ್ಥಾನವು ಅಂಧಕಾರದಲ್ಲಿದ್ದು ಕೇವಲ ಉತ್ತಮ ದರ್ಜೆಯ ಮುತ್ತು-ರತ್ನಗಳಿಂದ ಸೋಮನಾಥ ವಿಗ್ರಹವು ಪ್ರಕಾಶಮಾನವಾಗಿ ಕಾಣುತ್ತಿತ್ತು, ಮಂದಿರದ ದೀಪ ಸ್ತಂಭಗಳಲ್ಲಿ ಹೊಳೆಯುವ ಮುತ್ತು ರತ್ನಗಳನ್ನು ಕೂಡಿಸಲಾಗಿದ್ದವು ಎಂದು 'ಝುಯಿನ್-ಅಲವಾಸೀರ್'

ಇತಿಹಾಸದಲ್ಲಿ ಬರೆಯಲಾಗಿದೆ. ಸೋಮನಾಥ ಭಂಡಾರದಿಂದ ಬೆಳ್ಳಿ-ಬಂಗಾರದ ಮೂರ್ತಿಗಳು ಎಷ್ಟೊಂದು ಪ್ರಮಾಣದಲ್ಲಿ ದೊರೆತವೆಂದರೆ ಇವುಗಳ ಬೆಲೆ ಕಟ್ಟಲು ಸಾಧ್ಯವಿಲ್ಲವೆಂದು ಈ ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ. ಅದಕ್ಕಾಗಿ 'ಹಕೀಮ ಸನಾಯಿ' ಹೀಗೆ ಹೇಳುತ್ತಾನೆ. -

"ಮಕ್ಕಾ ಪಟ್ಟಣದಲ್ಲಿರುವ ಕಾಬಾ ಹಜರತ್ ಮೊಹಮ್ಮದ ಪೈಗಂಬರ್ ಅವರ ಕೈಯಿಂದ ಪವಿತ್ರವಾಯಿತು. ಇದರಂತೆ ಭಾರತದ ಸೋಮನಾಥ ದೇವಾಲಯ ಮಹಮ್ಮೂದ ಘಜನಯ ಕೈಯಿಂದ ಪವಿತ್ರವಾಯಿತು."

ರಾಜಾ ಪರಮದೇವನ ಅಪಮಾನ:

ಸುಲ್ತಾನ ಮಹಮದನು ಸೋಮನಾಥ ನಾಶಮಾಡಿ ಕೊಲೆ ಸುಲಿಗೆಯಿಂದ ತೃಪ್ತನಾದ ನಂತರ, ಮೇಹರವಾಲಾದ ವೈಭವಯುತ ರಾಜನಾದ ಪ್ರೇಮದೇವನನ್ನು ದಾರಿಗೆ ತರಲು ಇಚ್ಛಿಸಿದನು. ಸುಲ್ತಾನ ಮಹಮದನು ಸೋಮನಾಥವನ್ನು ಮುತ್ತಿಗೆ ಹಾಕಿದ ದಿನಗಳಲ್ಲಿ ರಾಜಾ ಪ್ರೇಮದೇವನು ಧೈರ್ಯ ಮತ್ತು ಸಾಹಸದಿಂದ ಒಂದು ದೊಡ್ಡ ಸೈನ್ಯವನ್ನು ಸೋಮನಾಥದ ಸಹಾಯಕ್ಕಾಗಿ ಕಳುಹಿಸಿಕೊಟ್ಟಿದ್ದನು. ಈ ಸೈನ್ಯದೊಂದಿಗೆ ಯುದ್ಧ ಮಾಡಿದ ಸಂದರ್ಭದಲ್ಲಿ ಸುಮಾರು ೩೦೦೦ ಮುಸಲ್ಮಾನರು ಮೃತಪಟ್ಟರು. ಮಹಮದನ ನೆನಪಿನಲ್ಲಿ ರಾಜಾ ಪ್ರೇಮದೇವನ ಈ ಕೃತ್ಯವು ನೆನಪಿನಿಂದ ಮಸುಕಾಗದೆ ಪೂರ್ಣವಾಗಿ ಸುರಕ್ಷಿತವಾಗಿತ್ತು. ಪ್ರೇಮದೇವನ ಕೃತ್ಯಕ್ಕೆ ಪ್ರತೀಕಾರ ಮಾಡುವುದು ಅತ್ಯಂತ ಅವಶ್ಯಕವಾಗಿತ್ತು. ಸೋಮನಾಥನ ಗೆಲುವಿನ ನಂತರ ರಾಜಾ ಪರಮದೇವನು ತನ್ನ ರಾಜಧಾನಿಯಾದ ನೇಹರವಾಲಾದಿಂದ ಓಡಿಹೋಗಿ ಕಂಥ ಕೋಟೆಯಲ್ಲಿ ಆಶ್ರಯ ಪಡೆದಿದ್ದನು. ಸೋಮನಾಥದಿಂದ ಕಂಥದ ಅಂತರವು ೪೦ ಹರದಾರಿಯಿತ್ತು. ಸುಲ್ತಾನ ಮಹಮದನು ಈ ಅಂತರವನ್ನು ಲೆಕ್ಕಿಸದೆ ಅಲ್ಲಲ್ಲಿ ತಂಗುತ್ತಾ ಪ್ರಯಾಣ ಮಾಡಿ ಕಂಥ ಸೇರಿದನು. ಮುಸಲ್ಮಾನರ ಸೈನ್ಯವು ಕಂಥ ಕೋಟೆಯನ್ನು ಸಮೀಪಿಸಿದಾಗ ಅಲ್ಲಿ ಒಂದು ದೊಡ್ಡ ಕಂದಕವು ಕಂಡು ಬಂದಿತು. ಅದು ಕೋಟೆಯ ನಾಲ್ಕು ಕಡೆ ಹರಡಿದ್ದು ಅದರಲ್ಲಿ ಪೂರ್ಣ ನೀರು ತುಂಬಿತ್ತು. ಅದನ್ನು ದಾಟಲು ಯಾವ ದಾರಿಯು ಇರಲಿಲ್ಲ. ಮಹಮದನ ಸೈನಿಕರಲ್ಲಿ ಕೆಲವರು ನೀರಲ್ಲಿ ಮುಳುಗಿ, ನೀರಿನ ಆಳವನ್ನು ತಿಳಿಯಲು ಕೈ-ಕಾಲು ಆಡಿಸಿದರೂ ಕೂಡಾ ಎಲ್ಲಿಯೂ ಇದರ ಆಳವು ಎಷ್ಟೆಂಬುದು ಕಂಡು ಬರಲಿಲ್ಲ. ಕೊನೆಗೆ ಹಿಂದಿನ ಭಾಗದಲ್ಲಿ ನೀರಲ್ಲಿ ಮಳುಗುವವರು ಆಳ ಕಡಿಮೆ ಇದ್ದ ಸ್ಥಳ ಪತ್ತೆ ಮಾಡಿದರು, ಆದರೆ ಈ ಕಂದಕವನ್ನು ದಾಟುವುದು ಅಶಕ್ಯವಾಗಿತ್ತು. ನೀರಿನಲ್ಲಿ ಮುಳುಗುವವರು ಹೇಳಿದುದೇನೆಂದರೆ ಅದನ್ನು ದಾಟಲು ಪ್ರಯತ್ನಿಸಿದಾಗ ನೀರಿನಲ್ಲಿ ಅಲೆಗಳ ಚಲನವು ಆರಂಭವಾಗುತ್ತಿತ್ತು, ಇದರಿಂದ ಸಮಸ್ತ ಸೈನ್ಯವು ನಾಶವಾಗುವುದು. ಇದನ್ನು ಕೇಳಿ ಸುಲ್ತಾನ ಮಹಮದನು ಕುರಾನಿನ ಮೊರೆ ಹೊಕ್ಕಾಗ, ಕಂದಕವನ್ನು

ದಾಟಲು ಅನುಮತಿ ಸಿಕ್ಕು ಅಲ್ಲಾಹನಲ್ಲಿ ವಿಶ್ವಾಸ ಮಾಡಿ ಈತನು ತನ್ನ ಅಮೀರರು, ಸೈನಿಕರು ಮತ್ತು ಕುದುರೆಗಳನ್ನು ಕಂದಕದ ನೀರಿನಲ್ಲಿ ಬಿಟ್ಟನು. ಅವರೆಲ್ಲ ಯಾವ ತೊಂದರೆ ಇಲ್ಲದೆ ಪಾರಾಗಿ, ಸಮಸ್ತ ಸೈನ್ಯವು ಕೋಟೆಯ ಮೇಲೆ ದಾಳಿ ಮಾಡಿತು. ಪ್ರೇಮದೇವನು ಈ ದಾಳಿಯನ್ನು ತಾಳದೆ ತನ್ನ ಸಮಸ್ತ ವಸ್ತುಗಳನ್ನು ಬಿಟ್ಟು, ವೇಷ ಬದಲಾಯಿಸಿ ಮುಸಲ್ಮಾನರ ದೃಷ್ಟಿಗೆ ಬೀಳದೆ ಓಡಿಹೋದನು.

ಕಂದ ಕೋಟೆಯ ವಶ:

ರಾಜಾ ಪರಮದೇವನು ಓಡಿಹೋದನಂತರ ಕೋಟೆಯಲ್ಲಿದ್ದ ಜನರು ಕೋಟೆಯ ಬಾಗಿಲು ತೆರೆದರು ಮತ್ತು ಇಸ್ಲಾಮಿ ಸೈನ್ಯವು ಕೋಟೆಯ ಒಳಗೆ ಪ್ರವೇಶಿಸಿತು. ಮುಸಲ್ಮಾನೇತರರನ್ನು ಕೊಂದು ಕೋಟೆಯನ್ನು ವಶಪಡಿಸಿಕೊಂಡರು. ಇದಲ್ಲದೆ, ಹಿಂದು ಮಹಿಳೆ ಮತ್ತು ಮಕ್ಕಳನ್ನು ಬಂಧಿಸಿದರು. ಸುಲ್ತಾನ ಮಹಮದನು ಪರಮದೇವನ ಭಂಡಾರದಲ್ಲಿರುವ ಅಪಾರ ಸಂಪತ್ತನ್ನು ತನ್ನ ಭಂಡಾರಕ್ಕೆ ಸೇರಿಸಲು ಆಜ್ಞಾಪಿಸಿದನು. ಭಂಡಾರದ ಬಾಗಿಲ ಮೇಲೆ ಯಾವಾಗಲೂ 'ಹಲ್-ಮೀನ್-ಮಜೀದ್' ನಗಾರೆಗಳು ಬಾರಿಸಲಾಗುತ್ತಿದ್ದವು.

ನೇಹರವಾಲಾದ ಕಡೆಗೆ ಪಯಣ:

ಸುಲ್ತಾನ ಮಹಮದನು ಕಂಧ ಕೋಟೆ ಗೆದ್ದ ನಂತರ ನೇಹರವಾಲಾದ ಕಡೆಗೆ ಪಯಣಿಸಿದನು. ಅಲ್ಲಿ ಹೋದನಂತರ ಈತನಿಗೆ ತಿಳಿದು ಬಂದಿದುದೇನೆಂದರೆ ಪ್ರಜೆಗಳ ಸೌಂದರ್ಯ, ಭೂಮಿಯ ಫಲವತ್ತತೆ, ನೀರಿನ ಸೌಲಭ್ಯ ಹಾಗೂ ಶ್ರೀಮಂತಿಕೆಯ ದೃಷ್ಟಿಯಲ್ಲಿ, ಈ ನಗರವು ಹಿಂದುಸ್ತಾನದ ಅತಿ ಉತ್ತಮ ಪ್ರಾಂತವಾಗಿತ್ತು. ಈ ಪ್ರಾಂತದ ಹಿತಕರ ವಾತಾವರಣ ಮತ್ತು ಅನ್ಯ ಗುಣಗಳಿಂದ ಕೂಡಿದುದನ್ನು ಕಂಡು ಸುಲ್ತಾನ ಮಹಮದನು ಅಲ್ಲಿ ಕೆಲವು ವರ್ಷ ವಾಸಿಸಲು ಬಯಸಿದನು. ಇದಲ್ಲದೆ, ಆತನ ಮನಸ್ಸಿನಲ್ಲಿ ಇದನ್ನು ರಾಜಧಾನಿಯಾಗಿ ಮಾಡಿ, ಘಜನಿ ರಾಜ್ಯವನ್ನು ಸುಲ್ತಾನ ಮಸೂದನಿಗೆ ಒಪ್ಪಿಸಲು ಬಯಸಿದನು. ಇತಿಹಾಸದ ಕೆಲವು ಪುಸ್ತಕಗಳಲ್ಲಿ, ಮಹಮದನ ಈ ಬಯಕೆಯ ಕಾರಣವೇನೆಂದರೆ ಆ ಕಾಲದಲ್ಲಿ ನೇಹರವಾಲಾದಲ್ಲಿ ಕೇವಲ ಬಂಗಾರದ ಗಣಿಗಳು ಇದ್ದವು, ಅವನ್ನು ಪಡೆಯುವ ಮಹಮದನ ಲೋಭಿ ಮನಸ್ಸನ್ನು ನೇಹರವಾಲಾ ಆಕರ್ಷಿಸಿತು. ರೂಢಿಯಲ್ಲಿದ್ದ ಈ ವಿಷಯವು ಸರಿ ಇರಬಹುದು. ಆದರೆ ಈಗ ನೇಹರವಾಲಾದಲ್ಲಿ ಬಂಗಾರದ ಗಣಿಗಳು ಹೆಸರಿಗೂ ಕೂಡಾ ಕಾಣಲಾರವು. ಕಾಲಗತಿಯಲ್ಲಿ ಈ ಗಣಿಗಳು ಮುಚ್ಚಿ ಹೋಗಿಂಬಹುದು. ಸುಲ್ತಾನ ಮಹಮದನ ಆರಂಭದ ದಿನಗಳಲ್ಲಿ ಸಯಿಸ್ಥಾನದಲ್ಲಿ ಒಂದು ಬಂಗಾರದ ಗಣಿಯಿದ್ದು ಈತನ ಅಂತಿಮ ದಿನಗಳಲ್ಲಿ ಒಂದು ಭೂಕಂಪವಾಗಿ ಮುಚ್ಚಿಹೋಗಿತ್ತು.

ಸರಾನ ದೀಪ ಹಾಗು ಪೈಕೊ ಇತ್ಯಾದಿಗಳ ಮೇಲೆ ದಾಳಿಯ ಬಯಕೆ:

ಇದಾದ ನಂತರ ಮಹಮದನು ಸರಾನ ದೀಪ, ಪೈಕೊ ಹಾಗೂ ಇದೇ ರೀತಿ ಚಿನ್ನದ ಮತ್ತು ರತ್ನಗಳ ಗಣಿ ಇರುವ ಅನ್ಯ ಬಂದರುಗಳನ್ನು ತನ್ನ ವಶಕ್ಕೆ ಪಡೆದುಕೊಳ್ಳ ಬಯಸಿದನು. ತನ್ನ ಇಚ್ಛೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ಸೈನ್ಯಕ್ಕೆ ಹಡಗುಗಳಲ್ಲಿ ಪ್ರಯಾಣ ಮಾಡಿ ಆ ದ್ವೀಪ ತಲುಪಿ, ಅಲ್ಲಿಯ ಬೆಲೆಬಾಳುವ ಉತ್ತಮ ವಸ್ತುಗಳನ್ನು ಪಡೆದುಕೊಳ್ಳಲು ನಿರ್ದೇಶಿಸಿದನು. ಸುಲ್ತಾನ ಮಹಮದನ ಮಂತ್ರಿ ವರ್ಗವು ಈ ಸನ್ನಿವೇಶದಲ್ಲಿ ಹೇಳಿದುದೇನೆಂದರೆ, 'ನಾವು ಖರಸ್ಥಾನವನ್ನು ಕೆಲ ದಿನಗಳ ಮೇಲೆ ಅದನ್ನು ನಾಶಮಾಡಿ ಅಲ್ಲಿಯ ಬೆಲೆಬಾಳುವ ಮುತ್ತು-ರತ್ನಗಳು ಪಡೆದುಕೊಂಡು ಬಹಳಷ್ಟು ಪ್ರಾಣ ಹಾನಿಯನ್ನು ಮಾಡಿದ್ದೇವೆ. ಅದಕ್ಕಾಗಿ ಈ ದೃಷ್ಟಿಯಿಂದ ಈ ಮನೋಹರವಾದ ಪಟ್ಟಣವನ್ನು ಬಿಟ್ಟು ಗುಜರಾತನ್ನು ರಾಜಧಾನಿಯನ್ನಾಗಿ ಮಾಡುವುದು ದೂರದೃಷ್ಟಿಯಲ್ಲ.' ಸುಲ್ತಾನ ಮಹಮದನು ಮಂತ್ರಿಗಳ ಸಲಹೆಯು ಸರಿಯಾದುದೆಂದು ತಿಳಿದು ಘಜನಿ ಕಡೆ ತೆರಳಲು ಬಯಸಿದನು.

ನೇಹರವಾಲದ ಅರಸನ ಆಯ್ಕೆ:

ಹೊರಡುವಾಗ ಸುಲ್ತಾನ ಮಹಮದನು ತನ್ನ ಆಸ್ಥಾನದ ಸದಸ್ಯರಿಗೆ, ಈ ಪ್ರಾಂತದ ಅರಸನನ್ನಾಗಿಸಿ ವಹಿಸಲು ಒಬ್ಬ ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡಲು ಹೇಳಿದನು. ಆಸ್ಥಾನದ ಸದಸ್ಯರು ಪರಸ್ಪರ ಸಮಾಲೋಚನೆ ಮಾಡಿ, 'ಪುನಃ ನಾವು ಈ ಪ್ರಾಂತದ ಕಡೆಗೆ ಬರುವುದು ಸಾಧ್ಯವಿಲ್ಲದ ಕಾರಣ ಇಲ್ಲಿಯ ಒಬ್ಬ ವ್ಯಕ್ತಿಯನ್ನು ಅರಸನನ್ನಾಗಿ ನಿಯಮಿಸುವುದು ಯೋಗ್ಯ' ಎಂದು ಮಹಮದನಿಗೆ ಸಲಹೆ ನೀಡಿದರು. ಈ ಸಲಹೆಯನ್ನು ಕೇಳಿದ ನಂತರ ಸೋಮನಾಥ ನಗರವಾಸಿಗಳಿಂದಲೂ ಈ ಬಗ್ಗೆ ಅಭಿಪ್ರಾಯ ಪಡೆದನು. ನಗರದ ಗಣ್ಯ ವ್ಯಕ್ತಿಗಳು ಮಹಮದನಿಗೆ, 'ಈ ಪಟ್ಟಣ ವಾಸಿಗಳಲ್ಲಿ ಯಾರ ಪರಿವಾರವೂ 'ವಾ-ಬಸೇಲಮ್' ಪರಿವಾರವನ್ನು ಸರಿಗಟ್ಟಲಾರದು. ಈ ಪರಿವಾರದ ಒಬ್ಬ ವ್ಯಕ್ತಿ ಬ್ರಾಹ್ಮಣ ರೂಪ ಬದಲಾಯಿಸಿ ಆರಾಧನೆ ಮತ್ತು ಯಾತ್ರೆಯಲ್ಲಿ ನಿರತನಾಗಿದ್ದಾನೆ ಮತ್ತು ತಾವು ಬಯಸಿದಲ್ಲಿ ಈ ಪ್ರಾಂತದ ಆಳ್ವಿಕೆಯನ್ನು ಆತನಿಗೆ ಒಪ್ಪಿಸುವುದು ಸೂಕ್ತ.' ಆದರೆ ಸೋಮನಾಥ ನಿವಾಸಿಗಳ ಎರಡನೆಯ ಗುಂಪು ಈ ಸಲಹೆಯನ್ನು ವಿರೋಧಿಸಿತು ಮತ್ತು ಹೇಳಿದುದೇನೆಂದರೆ, 'ವಾ-ಬಸೇಲಮ್' ಪರಿವಾರದ ಈ ವ್ಯಕ್ತಿ ಬಹಳ ನೀರಸನಾಗಿದ್ದು ಮುಂಗೋಪಿಯಾಗಿದ್ದು, ಈತನು ಕೆಲವು ಸಾರಿ ಅರಸನಾಗುವ ಕನಸನ್ನು ಕಂಡು, ಪ್ರತಿ ಸಾರಿಯೂ ತನ್ನ ಸಹೋದರರ ಕೈಯಲ್ಲಿ ಬಂದಿಯಾಗಿ ಈಗ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಮಂದಿರದ ಒಳಗಡೆ ಆಶ್ರಯ ಪಡೆದಿದ್ದಾನೆ. ಈತನ ಆರಾಧನೆ ಮತ್ತು ಯಾತ್ರೆಗಳು ನಿಜವಾಗಿ ಸತ್ಯವಲ್ಲ. ಆದರೆ ಕಾಲಚಕ್ರದ ಗತಿಯ ಒತ್ತಡದಲ್ಲಿ ಅನಿವಾರ್ಯವಾಗಿ ಈ ರೂಪವನ್ನು ತಾಳಿದ್ದಾನೆ. ಆದರೆ ಈತನ ಸಂಬಂಧಿಗಳಲ್ಲಿ ಒಬ್ಬ ವ್ಯಕ್ತಿ ಬಹಳ

ಬುದ್ಧಿವಂತ ಹಾಗು ಮೇಧಾವಿಯಾಗಿದ್ದು, ಹಿಂದುಸ್ತಾನದ ಸಮಸ್ತ ಬ್ರಾಹ್ಮಣರು ಈತನ ಬುದ್ಧಿವಂತಿಕೆಯನ್ನು ಗೌರವಿಸುತ್ತಾರೆ, ಮತ್ತು ಈತನು ಈ ಪ್ರಾಂತದ ಅರಸನಾಗಿದ್ದಾನೆ. ಒಂದು ವೇಳೆ ರಾಜರಾದ ತಾವು ಬಯಸಿ,ರಾಜಾಜ್ಞೆ ಮಾಡಿದಲ್ಲಿ, ಬಹಳ ವಿನಮ್ರತೆಯಿಂದ ಹಾಗೂ ಗೌರವದಿಂದ ತಮ್ಮ ಸೇವೆಯಲ್ಲಿ ಹಾಜರಾಗುವನು. ಇದಲ್ಲದೆ ಪ್ರತಿ ವರ್ಷ ದೂರದ ಅಂತರವಿದ್ದರೂ ಕೂಡ ರಾಜ್ಯ ಭಂಡಾರದಲ್ಲಿ ಕಪ್ಪ ಕಾಣಿಕೆಯನ್ನು ಅರ್ಪಿಸುತ್ತಾನೆ.' ಸುಲ್ತಾನ ಮಹಮದನು ಇದರ ಉತ್ತರವಾಗಿ 'ಒಂದು ವೇಳೆ ಆ ವ್ಯಕ್ತಿ ಸ್ವತಃ ನನ್ನ ಹತ್ತಿರ ಬಂದು ವಿನಂತಿಸಿಕೊಂಡರೆ ನಾನು ಆ ಕೋರಿಕೆಯನ್ನು ಮನ್ನಿಸುತ್ತಿದ್ದೆ, ಈ ಪ್ರಾಂತದ ಅರಸನಾಗಿದ್ದರೂ, ನಾನು ನೋಡದೆ ಇರುವ ವ್ಯಕ್ತಿಯಾಗಿರುವುದರಿಂದ, ಇಷ್ಟು ದೊಡ್ಡ ಪ್ರಾಂತದ ರಾಜ್ಯವನ್ನು ನಿರ್ವಹಿಸಲು ಯಾವ ರೀತಿಯಿಂದಲೂ ಯೋಗ್ಯನಲ್ಲ.' ಎಂದು ಹೇಳಿದನು.

ವಾಬಸೆಲೀಮ್–ಮರತಾಜ್‌ನನ್ನು ನೇಹರವಾಲದ ಮುಖ್ಯಸ್ಥನನ್ನಾಗಿ ನಿಯುಕ್ತಿಸುವುದು:

ಈ ಸಲಹೆ ಸೂಚನೆಗಳ ನಂತರ ಅಂತಿಮವಾಗಿ ಸುಲ್ತಾನ ಮಹಮದನು ವಾ–ಬಸೇಲೀಮ್–ಮರತಜ್‌ನನ್ನು ನೇಹರವಾಲದ ಅರಸನನ್ನಾಗಿಸಲು ಆಯ್ಕೆ ಮಾಡಿ ಆತನನ್ನು ಬರ ಹೇಳಿ ನೇಹರವಾಲಾದ ರಾಜ್ಯವನ್ನು ಆತನಿಗೆ ಒಪ್ಪಿಸಿದನು. ವಾ–ಬಸೇಲೇಯಮ್–ಮರತಾಜ್‌ನು ಕೊಡಬೇಕಾದ ವಾರ್ಷಿಕ ಕಪ್ಪ ಕಾಣಿಕೆ ನಿರ್ಧರಿಸಿದ ನಂತರ ಮಹಮದನಿಗೆ ಹೇಳಿದನು. 'ನನ್ನ ಕುಲದ ಒಬ್ಬ ವಾ–ಬಸೇಲಮ್ ನನ್ನ ಪ್ರಾಣ ಹಾನಿ ಮಾಡುವ ಶತ್ರುವಾಗಿದ್ದಾನೆ. ತಾವು ನನಗೆ ನೇಹರವಾಲಾ ರಾಜ್ಯವನ್ನು ಒಪ್ಪಿಸಿ ತಾವು ತಮ್ಮ ದೇಶಕ್ಕೆ ಹಿಂದಿರುಗಿದ ನಂತರ ಆತನು ನನ್ನನ್ನು ಶಕ್ತಿಹೀನನೆಂದು ತಿಳಿದು ನನ್ನ ಮೇಲೆ ದಾಳಿ ಮಾಡುವನು. ಈಗ ನನ್ನ ರಾಜ್ಯದ ಅಡಿಪಾಯವು ಭದ್ರವಾಗಿಲ್ಲದ ಕಾರಣ ಆತನು ಗೆಲ್ಲುವ ಸಾಧ್ಯತೆಗಳುಂಟು. ಅದಕ್ಕಾಗಿ ನನ್ನ ವೈರಿಗಳು ಹಾಗು ವಿರೋಧಿಗಳಿಂದ ನನ್ನನ್ನು ರಕ್ಷಿಸಿ, ಸಮಾಧಾನದಿಂದಿರಲು ಅವಕಾಶ ಮಾಡುವ ಕೃಪೆಯನ್ನು ತಾವು ತೋರಿದರೆ ಈ ಅನುಗ್ರಹದ ಪ್ರತಿಯಾಗಿ ಕಾಬೂಲ್ ಮತ್ತು ಜಾಬೂಲ್ ಇವುಗಳ ಕಪ್ಪ ಕಾಣಿಕೆಗಿಂತ ಎರಡು ಪಟ್ಟು ಹೆಚ್ಚಿನ ಹಣವನ್ನು ರಾಜ್ಯ ಭಂಡಾರದಲ್ಲಿ ಭರಿಸುವೆನು.' ಇದಕ್ಕೆ ಉತ್ತರವಾಗಿ ಮಹಮದನು, 'ನಾವು ನಮ್ಮ ದೇಶದಿಂದ ಜಿಹಾದ ಉದ್ದೇಶದಿಂದಲೇ ಹೊರಟ್ಟಿದ್ದೇವೆ, ಈಗಾಗಲೇ ಎರಡು ವರ್ಷ ಕಾಲವು ಗತಿಸಿದೆ. ನಾವು ಘಜನಿಯ ಮುಖವನ್ನು ನೋಡಲಿಲ್ಲ. ಒಂದು ವೇಳೆ ನಿನ್ನ ಶತ್ರು ವಾ–ಬಸೇಲಮ್ ಮೇಲೆ ದಾಳಿ ಮಾಡಿದರೆ, ನಾವು ಮತ್ತೆ ಆರು ತಿಂಗಳು ನಮ್ಮ ಹುಟ್ಟೂರಿನಿಂದ ದೂರವಿರಬೇಕಾಗುತ್ತದೆ. ಆದರೆ ಅಲ್ಲಾಹನ ಇಚ್ಛೆಯಂತೆ ನಡೆಯುವ ಜನರಿಗೆ ಎರಡು ಅಥವಾ ಎರಡೂವರೆ ವರ್ಷ ಸಮಾನವಾಗಿರುತ್ತವೆ. ಅದಕ್ಕಾಗಿ ನಾವು ಹೋಗುತ್ತಿದ್ದಂತೆ ಈ ಆಪತ್ತನ್ನು ಕೂಡಾ ಮುಗಿಸಿಬಿಡುತ್ತೇವೆ.' ಎಂದು ಹೇಳಿದನು.

ವಾಬಸೆಲೀಮ್ ದುಶಮನ್ ಮರತಾಜ್‌ನ ಮೇಲೆ ದಾಳಿ:

ಇದಾದನಂತರ ಸುಲ್ತಾನ ಮಹಮದನು ತನ್ನ ಸೈನ್ಯಕ್ಕೆ ವಾಬಸೆಲೀಮ್ ದುಶಮನ್ ಮರತಾಜ್‌ನ ನಾಡಿನೆಡೆಗೆ ಹೊರಡಲು ಆದೇಶಿಸಿದನು. ರಾಜಾಜ್ಞೆಯನ್ನು ಪರಿಪಾಲಿಸಲಾಯಿತು. ಅಲ್ಲಿಗೆ ಹೋದನಂತರ ಮಹಮದನು ಕೆಲವೇ ಸಮಯದಲ್ಲಿ ಆ ದೇಶವನ್ನು ಗೆದ್ದನು. ರಾಜಾ ವಾಬಸೆಲೀಮ್ (ದುಶಮನ್ ಮುರತಾಜ್) ಈತನನ್ನು ಬಂದಿಯಾಗಿಸಿ ಮುರತಾಜನಿಗೆ ಒಪ್ಪಿಸಿದನು. ವಾಬಸೆಲೇಮ-ಮುರತಜನು ಸುಲ್ತಾನ ಮಹಮದನಿಗೆ ವಿನಂತಿಸಿದನು. 'ನಮ್ಮ ಮತದಲ್ಲಿ ರಾಜನನ್ನು ಕೊಲ್ಲುವುದು ಸೂಕ್ತವಲ್ಲ, ನಮ್ಮ ಸಂಪ್ರದಾಯದ ಪ್ರಕಾರ ಒಬ್ಬ ರಾಜನು ಇನ್ನೊಬ್ಬ ರಾಜನನ್ನು ಸೋಲಿಸಿ ಬಂಧಿಸಿದಾಗ ಗೆದ್ದ ರಾಜನು ತನ್ನ ಸಿಂಹಾಸನದ ಕೆಳಗಡೆ ಸಣ್ಣದೊಂದು ಅಂಧಕಾರದ ಕೋಣೆ ನಿರ್ಮಿಸಿ ಅದರಲ್ಲಿ ಸೋತ ರಾಜನನ್ನು ಬಂದಿಯಾಗಿಡುತ್ತಾನೆ. ಈ ಕೋಣೆಯ ಗೋಡೆಯಲ್ಲಿ ಚಿಕ್ಕದೊಂದು ರಂಧ್ರದಿಂದ ಅನ್ನ ನೀರನ್ನು ಕೊಡಲಾಗುತ್ತದೆ. ಗೆದ್ದ ಅಥವಾ ಸೋತ ರಾಜರಲ್ಲಿ ಒಬ್ಬರು ಮರಣ ಹೊಂದುವವರೆಗೆ ಈ ಬಂಧನವು ಇರುತ್ತದೆ. ಈಗ ನನ್ನ ಹತ್ತಿರ ಇಂತಹ ಕಾರಾಗೃಹವಿಲ್ಲ ಮತ್ತು ಶತ್ರುವನ್ನು ಈ ರೀತಿಯಾಗಿ ಇಟ್ಟು ರಕ್ಷಿಸುವ ಸಾಮರ್ಥ್ಯ ನನ್ನಲ್ಲಿಲ್ಲ. ಮತ್ತು ನೀವು ಹೋದನಂತರ ಈ ರಾಜನ ಪರ ಸಹಾನುಭೂತಿವುಳ್ಳವರು ಈತನನ್ನು ನನ್ನ ವಶದಿಂದ ಬಿಡಿಸಿಕೊಳ್ಳುವ ಅನುಮಾನವಿದೆ, ಅದಕ್ಕಾಗಿ ತಮ್ಮಲ್ಲಿ ನಾನು ವಿನಂತಿಸಿಕೊಳ್ಳವುದೇನೆಂದರೆ ಈ ಬಂದಿಯನ್ನು ನನ್ನ ಹತ್ತಿರ ಬಿಡುವ ಬದಲಾಗಿ ತಾವು ಈತನನ್ನು ಬಂಧಿಸಿ ಘಜನಿಗೆ ಕರೆದುಕೊಂಡು ಹೋಗಿ. ನನ್ನ ಆಡಳಿತದ ಅಡಿಪಾಯವು ಸದೃಢವಾದ ನಂತರ ದೂತರನ್ನು ಕಳುಹಿಸಿ ಈ ಕೈದಿಯನ್ನು ನನ್ನ ರಾಜ್ಯಕ್ಕೆ ಕರೆಯಿಸಿಕೊಳ್ಳುವೆನು.' ಸುಲ್ತಾನ ಮಹಮದನು ಮರತಾಜನ ವಿನಂತಿಯನ್ನು ಮನ್ನಿಸಿ, ಎರಡೂವರೆ ವರ್ಷದ ನಂತರ ಘಜನಿ ರಾಜ್ಯದ ಕಡೆ ಹೊರಟನು.

ಘಜನಿಗೆ ಮರಳುವಿಕೆ:

ಸುಲ್ತಾನ ಮಹಮದನು ಘಜನಿ ಕಡೆಗೆ ಹೊರಟ ನಂತರ, ಆ ಕಾಲದಲ್ಲಿ ಪ್ರೇಮದೇವ ಮತ್ತು ರಾಜಾ ಅಜ್ಮೀರನು ಒಂದು ಸುಭದ್ರ ಸೈನ್ಯ ಸಿದ್ಧಪಡಿಸಿ ಸುಲ್ತಾನ ಮಹಮದನ ದಾರಿಯಲ್ಲಿ ಅಡೆತಡೆ ಉಂಟು ಮಾಡುವ ಪ್ರಯತ್ನ ಮಾಡಿದರು. ಆದರೆ ಮಹಮದನು ಆ ಸಮಯದಲ್ಲಿ ಯುದ್ಧ ಮಾಡುವುದು ಯುದ್ಧಕೌಶಲ್ಯದ ವಿರೋಧವೆಂದು ತಿಳಿದು ದಾರಿಯನ್ನು ಬದಲಾಯಿಸಿ ಸಿಂಧ ಮಾರ್ಗವಾಗಿ ಮುಲ್ತಾನ ಕಡೆಗೆ ಹೊರಟುಹೋದನು. ಈ ದಾರಿಯಲ್ಲಿ ಕೆಲವು ಸ್ಥಾನಗಳಲ್ಲಿ ನೀರಿನ ಅಭಾವವಿದ್ದ ಕಾರಣ ಇಸ್ಲಾಮಿ ಸೈನ್ಯವು ತಾಳಲಾರದ ತೊಂದರೆ ಅನುಭವಿಸಬೇಕಾಯಿತು ಮತ್ತು ಸಾಕಷ್ಟು ಅಡಚಣೆಗಳನ್ನು ಎದುರಿಸಿ ಹಿಜರಿಶಕೆ ೪೧೭ರಲ್ಲಿ ಘಜನಿ ತಲುಪಿದನು.

ಇತಿಹಾಸಕಾರರ ಹೇಳಿಕೆ ಏನೆಂದರೆ, ಸುಲ್ತಾನ ಮಹಮದನು ಸಿಂಧದ ಅರಣ್ಯದಲ್ಲಿ ಪ್ರಯಾಣ ಮಾಡುತ್ತ ಮುಲ್ತಾನ ಕಡೆಗೆ ಹೊರಟಾಗ ತನ್ನೊಂದಿಗೆ ದಾರಿ ತೋರಲು ಒಬ್ಬ ಮಾರ್ಗದರ್ಶಕನನ್ನು ಕರೆದುಕೊಂಡು ಹೋಗುವುದು ಸೂಕ್ತವೆಂದು ತಿಳಿದು, ಮುಸಲ್ಮಾನ ಸೈನ್ಯದ ಜೊತೆಗೆ ಒಬ್ಬ ಹಿಂದು ದಾರಿ ತೋರುವ ಕೆಲಸ ನಿರ್ವಹಿಸಲು ಜೊತೆಗೆ ಹೊರಟನು. ಈ ಹಿಂದೂ ಮಾರ್ಗದರ್ಶಕನು ಉದ್ದೇಶ ಪೂರ್ವಕವಾಗಿ ಸೈನ್ಯದ ದಾರಿ ತಪ್ಪಿಸಿ, ದೂರ ದೂರದವರೆಗೆ ನೀರು ಕಾಣುತ್ತಿರದ ಮಾರ್ಗದಲ್ಲಿ ಕರೆದುಕೊಂಡು ಹೋದನು. ಇಂತಹ ಅರಣ್ಯದ ಮಾರ್ಗದಲ್ಲಿ ಸೈನ್ಯವು ಪ್ರಯಾಣಿಸಿಬೇಕಾದಾಗ, ಒಂದು ರಾತ್ರಿ ಒಂದು ತೊಟ್ಟು ನೀರು ಕೂಡ ಸಿಗಲಿಲ್ಲಾ. ಇಂತಹ ವಿಪತ್ತಿನಿಂದ ಸೈನಿಕರಿಗೆ ಯುದ್ಧ ಭೂಮಿಯು ಮಾರಣ ಭೂಮಿಯಾಯಿತು. ಸುಲ್ತಾನ ಮಹಮದನು ಈ ಪರಿಸ್ಥಿತಿಯನ್ನು ಕಂಡು ದಾರಿ ತೋರುವ ಹಿಂದು ವ್ಯಕ್ತಿಯನ್ನು, ಸೈನ್ಯವನ್ನು ನೀನು ಯಾವ ಕಡೆ ತೆಗೆದುಕೊಂಡು ಹೋಗುತ್ತಿರುವಿ?ಎಂದು ಪ್ರಶ್ನಿಸಿದನು. ಆತನು, 'ನಾನು ಸೋಮನಾಥದ ಪ್ರಾಣಾರ್ಪಣೆ ಮಾಡುವವರಲ್ಲಿ ಒಬ್ಬನಿದ್ದೇನೆ, ತಮಗೂ ತಮ್ಮ ಸೈನ್ಯಕ್ಕೂ ಉದ್ದೇಶ ಪೂರ್ವಕವಾಗಿ ಈ ಅರಣ್ಯದಲ್ಲಿ ತಂದಿದ್ದೇನೆ. ಏಕೆಂದರೆ ನೀವೆಲ್ಲರೂ ನೀರಿನ ಒಂದು ತೊಟ್ಟೂ ಸಿಗದೆ ನಾಶವಾಗಬೇಕು.' ಎಂದು ಹೇಳಿದನು. ಸುಲ್ತಾನ ಮಹಮದ ಇದನ್ನು ಕೇಳಿದೊಡನೆ, ಅತ್ಯಂತ ರೋಷದಿಂದ ಹಿಂದು ದಾರಿ ತೋರುವವನನ್ನು ಸ್ಥಳದಲ್ಲಿಯೇ ಕೊಂದನು.

ಆ ರಾತ್ರಿ ಸುಲ್ತಾನ ಮಹಮದನು ತನ್ನ ಸೈನ್ಯದಿಂದ ಬೇರ್ಪಟ್ಟು ಒಂದು ಮೂಲೆಗೆ ಬಂದನು ಮತ್ತು ಮುಸಲ್ಮಾನರನ್ನು ಆದಷ್ಟು ಬೇಗ ಈ ಅನಿರೀಕ್ಷಿತ ವಿಪತ್ತಿನಿಂದ ಪಾರು ಮಾಡಲು ತನ್ನ ಶಿರಸ್ಸನ್ನು ಭೂಮಿಯ ಮೇಲೆ ಇಟ್ಟು ಪರಮಾತ್ಮನನ್ನು ಪ್ರಾರ್ಥಿಸಿದನು. ಸ್ವಲ್ಪ ರಾತ್ರಿ ಕಳೆದ ಮೇಲೆ ಈ ಅರಣ್ಯದಲ್ಲಿ ಪೂರ್ವದಿಂದ ಒಂದು ಬೆಳಕು ಕಾಣಿಸಿತು ಮತ್ತು ಆ ಬೆಳಕಿನ ಕಡೆಗೆ ಮುನ್ನುಗ್ಗಲು ಸುಲ್ತಾನ ಮಹಮದನು ಸೈನ್ಯವನ್ನು ಮುಂದೆ ಹೋಗಲು ಆದೇಶಿಸಿದನು. ರಾಜಾಜ್ಞೆಯನ್ನು ಪರಿಪಾಲಿಸಲಾಯಿತು. ಇದರ ಪರಿಣಾಮವಾಗಿ ಸೈನ್ಯವು ರಾತ್ರಿಯೆಲ್ಲಾ ಪಯಣಿಸಿ ಬೆಳಗಾಗುವದರಲ್ಲಿ ನೀರಿನ ತಟಕ್ಕೆ ಬಂದಿತು. ಈ ರೀತಿಯಾಗಿ ಬಾದಶಾಹನ ಪ್ರಾಮಾಣಿಕತೆ ಹಾಗು ಪ್ರೀತಿಯಿಂದ ಸೈನ್ಯವು ಈ ವಿಪತ್ತಿನಿಂದ ಪಾರಾಯಿತು.

ವಾಬಸೆಲೀಮ್ ಮರತಾಜ್‌ನ ದುರ್ದೈವ:

ವಾ-ಬಸೇಲೀಯಮ್-ಮರತಾಜ್ ತನ್ನ ಆಡಳಿತದ ತಳಹದಿಯನ್ನು ಸದೃಢವಾಗಿ ಮಾಡಿ, ಸೋಮನಾಥ ಮೇಲೆ ಸಂಪೂರ್ಣ ಶಕ್ತಿಯುತ ರಾಜ್ಯಾಡಳಿತ ನಡೆಸಿದ ಮೇಲೆ, ಕೆಲವು ವರ್ಷಗಳ ನಂತರ ಸುಲ್ತಾನ ಮಹಮದನ ಸನ್ನಿಧಿಗೆ ಒಬ್ಬ ರಾಜದೂತನನ್ನು ಕಳುಹಿಸಿದನು. ವಾಬಸೆಲೀಮ್ ಮುರತಾಜನ ಶತ್ರು ಸುಲ್ತಾನ ಮಹಮದನ ಕೈದಿಯಾದ ವ್ಯಕ್ತಿಯನ್ನು ಮರಳಿ ಕಳುಹಿಸಿ, ತನ್ನ ರೂಢಿಯ ಪ್ರಕಾರ

ಆತನಿಗೆ ಶಿಕ್ಷೆ ಕೊಡಲು ಕೇಳಿಕೊಂಡನು. ಈ ರಾಜದೂತನೊಂದಿಗೆ ಮರತಾಜನು ಬಹಳ ಬೆಲೆಬಾಳುವ ಮುತ್ತು-ರತ್ನಗಳನ್ನು ವಾರ್ಷಿಕ ಕಪ್ಪದ ರೂಪದಲ್ಲಿ ಸುಲ್ತಾನ ಮಹಮದನ ಸೇವೆಯಲ್ಲಿ ಕಳುಹಿಸಿ ಕೊಟ್ಟನು. ಸುಲ್ತಾನ ಮಹಮದನಿಗೆ ಈ ಕೈದಿಯ ಮೇಲೆ ಅನುಕಂಪ ಹುಟ್ಟಿತು ಮತ್ತು ಆತನನ್ನು ಮರಳಿ ಕಳುಹಿಸಲು ಪೇಚಾಡಿದನು. ರಾಜ್ಯದ ಮಂತ್ರಿಗಳು ವಾ ಬಸೇಲೆಮ ಮುರತಾಜನನ್ನು ಕುರಿತು ಪೂರ್ಣ ಸಂತುಷ್ಟರಾಗಿದ್ದರು. ಅವರು ಸುಲ್ತಾನನಿಗೆ ಹೇಳಿದ್ದೇನೆಂದರೆ, 'ಕಾಫಿರ ಜನರ ಮೇಲೆ ಅನುಕಂಪ ತೋರಿಸುವುದು ಇಸ್ಲಾಮಿ ಸಂಪ್ರದಾಯದ ವಿರುದ್ಧವಿದೆ ಮತ್ತು ತಾವು ವಾ ಬಸೇಲೆಮ ಮುರತಾಜನೊಂದಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದಿರುವುದು ತಮ್ಮ ಸ್ಥಾನಮಾನಕ್ಕೆ ಯೋಗ್ಯವಲ್ಲ.' ಈ ಗೌರವಾನ್ವಿತರ ಹೇಳಿಕೆಯ ಪ್ರಕಾರ ಸುಲ್ತಾನ ಮಹಮದನು ವಾ ಬಸೇಲೇಮ ಕೈದಿಯನ್ನು ಮುರತಾಜನ ರಾಜದೂತರಿಗೆ ಒಪ್ಪಿಸಿದನು ಮತ್ತು ಈ ರಾಜದೂತರು ಕೈದಿಯನ್ನು ತಮ್ಮ ಜೊತೆಗೆ ತೆಗೆದುಕೊಂಡು ಸೋಮನಾಥ ಕಡೆಗೆ ತೆರಳಿದರು. ಇವರು ಸೋಮನಾಥದ ಸೀಮೆಗೆ ಬಂದ ಮೇಲೆ ಮುರತಾಜನಿಗೆ ತಮ್ಮ ಬರುವಿಕೆಯ ಸಮಾಚಾರವನ್ನು ತಿಳಿಸಿದರು. ಇದನ್ನು ಕೇಳಿದ ರಾಜನು ತನ್ನ ಕೆಲಸಗಾರರಿಗೆ ಸಂಪ್ರದಾಯದ ಪ್ರಕಾರ ಕಾರಾಗೃಹವನ್ನು ನಿರ್ಮಿಸಲು ಆದೇಶಿಸಿದನು ಮತ್ತು ಸ್ವತಃ ತಾನು ಕೈದಿಯನ್ನು ಸ್ವಾಗತಿಸಲು ನಗರದಿಂದ ಹೊರಬಂದನು. ತನ್ನ ಜೊತೆಯಲ್ಲಿ ಮುರತಾಜನು ಒಂದು ತಟ್ಟೆ ಹಾಗು ತಂಬಿಗೆಯನ್ನು ತಂದಿದ್ದನು, ಏಕೆಂದರೆ ರೂಢಿಯ ಪ್ರಕಾರ ಕೈದಿಯ ತಲೆ ಮೇಲೆ ಅವುಗಳನ್ನು ಇಟ್ಟು, ಆತನನ್ನು ತನ್ನ ಕುದುರೆಯ ಜೊತೆ ಜೊತೆಯಲ್ಲಿ ಓಡಿಸುತ್ತಾ, ಕಾರಾಗೃಹದವರೆಗೆ ತರುವುದಾಗಿತ್ತು.

ದಾರಿಯಲ್ಲಿ ಮುರತಾಜ ಒಂದು ಸ್ಥಳದಲ್ಲಿ ನಿಂತುಕೊಂಡು ಬೇಟೆಯಾಡುವುದರಲ್ಲಿ ನಿರತನಾದನು. ಪ್ರಾಣಿಗಳನ್ನು ಹುಡುಕುತ್ತಾ ಬಹಳ ಓಡಾಡಿದನು. ಕೊನೆಯಲ್ಲಿ ಬಿಸಲಿನ ತಾಪ ತಾಳಲಾರದೆ ಒಂದು ಮರದ ಕೆಳಗೆ ವಿಶ್ರಮಿಸಲು ಕುಳಿತನು. ಬೇಟೆಯನ್ನು ಹುಡುಕುವ ಓಡಾಟದಲ್ಲಿ ಮುರತಾಜನು ದಣಿದಿದ್ದನು. ಅದಕ್ಕಾಗಿ ತನ್ನ ಮುಖದ ಮೇಲೆ ಒಂದು ಕೆಂಪು ಬಟ್ಟೆ ಹಾಕಿಕೊಂಡು ಅಲ್ಲಿಯೇ ಮಲಗಿದನು. ಈ ಪರಿಸ್ಥಿತಿಯಲ್ಲಿ ಅಲ್ಲಾಹನ ಇಚ್ಛೆಯಂತೆ ಮುರತಾಜನ ದೈವವು ಬದಲಾಯಿಸಿತು. ಒಂದು ಕ್ರೂರ ಪಕ್ಷಿಯು ಕೆಂಪು ಬಟ್ಟೆಯನ್ನು ಮಾಂಸವೆಂದು ತಿಳಿದು ಕೆಳಗಿಳಿದು ಅತ್ಯಂತ ಬಲವಾಗಿ ಹೊಡೆದು, ತನ್ನ ಕಾಲಿನಿಂದ ಎತ್ತಲು ಮುರತಾಜನ ಕಣ್ಣುಗಳನ್ನು ಕುಕ್ಕಿದವು. ಈ ರೀತಿಯಾಗಿ ಆತನ ಕಣ್ಣುಗಳು ಕಳೆದುಕೊಂಡನು. ಆ ಕಾಲದಲ್ಲಿ ಅಂಗವು ಊನವಾದ ವ್ಯಕ್ತಿಯನ್ನು ರಾಜನನ್ನಾಗಿ ಒಪ್ಪುತ್ತಿರಲಿಲ್ಲ. ಅದಕ್ಕಾಗಿ ರಾಜನ ಸೈನ್ಯದಲ್ಲಿ ಗಲಭೆ ಆರಂಭವಾಯಿತು ಮತ್ತು ಪ್ರತಿಯೊಬ್ಬರು ಮುರತಾಜನ ಅಧೀನತೆ ನಿರಾಕರಿಸಿದರು. ಅದೇ ವೇಳೆಗೆ ವಾ ಬಸೇಲೇಮ ಕೈದಿಯು ಅಲ್ಲಿಗೆ ಬಂದನು. ಮುರತಾಜನ ನಂತರ ಈ ಕೈದಿಯನ್ನುಳಿದು ಬೇರೆ ಯಾರೂ ರಾಜ್ಯದ ಅರಸೊತ್ತಿಗೆ ಪಡೆಯಲು ಅರ್ಹರಾಗಿರಲಿಲ್ಲ. ಈ ಕಾರಣದಿಂದಾಗಿ ಕೈದಿಯನ್ನು ರಾಜ್ಯಾಡಳಿತಕ್ಕಾಗಿ

ಆಯ್ಕೆ ಮಾಡಲಾಯಿತು ಮತ್ತು ಮುರತಾಜನ ಜೊತೆ ವಾ ಬಸೇಲೇಮ ಕೈದಿಯೊಂದಿಗೆ ನಡೆದುಕೊಳ್ಳುವ ರೀತಿ ಆತನೊಂದಿಗೆ ಆಯಿತು, ಅಂದರೆ ಮುರತಾಜನ ತಲೆಯ ಮೇಲೆ ತಟ್ಟೆ ಹಾಗು ತಂಬಿಗೆ ಇಟ್ಟು ಕೈದಿಯ ರೀತಿಯಲ್ಲಿ ಕುದುರೆ ಜೊತೆಗೆ ಓಡಿಸುತ್ತಾ ತರಲಾಯಿತು ಮತ್ತು ಕಾರಾಗೃಹಕ್ಕೆ ನೂಕಲಾಯಿತು. ಭಗವಂತನ ಲೀಲೆಯು ಅತಿ ವಿಚಿತ್ರ, ಕೆಲವೇ ಘಳಿಗೆಯಲ್ಲಿ ಏನೆಲ್ಲಾ ಆಗಿಹೋಯಿತು. ಮುರತಾಜನು ಕೈದಿಗೆ ಕೊಡಬೇಕಾದ ಶಿಕ್ಷೆಯನ್ನು ತಾನು ಸ್ವತಃ ಅನುಭವಿಸಬೇಕಾಯಿತು. 'ಚಾಹಕ ಅಂಧಾ ರಾಚಾರ್ದಪೇಶ' ಎಂಬ ಪ್ರಸಿದ್ಧ ಣಾಣ್ನುಡಿಯಂತೆ ಮುರತಾಜನು ರಕ್ತದ ಕಣ್ಣೀರನ್ನು ಸುರಿಸುತ್ತಾ ಕಾರಾಗೃಹವನ್ನು ಪ್ರವೇಶಿಸಿದನು ಮತ್ತು ಜೀವನಾದ್ಯಂತ ತನ್ನ ದುರ್ದೈವಕ್ಕಾಗಿ ತನ್ನನ್ನು ತಾನು ಹಳಿದುಕೊಳ್ಳುತ್ತಿದ್ದನು. ಈ ಘಟನೆಯ ಬಗ್ಗೆ 'ಶೇಖ ಸೈಯಿದಿ' ಸುಂದರವಾದ ಮಾತನ್ನಾಡಿದ್ದಾನೆ, 'ಪರಮಾತ್ಮನ ಲೀಲೆಯು ಒಂದು ಘಳಿಗೆಯಲ್ಲಿ ಒಬ್ಬ ವ್ಯಕ್ತಿಯನ್ನು ರಾಜ ಸಿಂಹಾಸನದಿಂದ ಇಳಿಸಿ ನೆಲದ ಮೇಲೆ ಕುಳ್ಳಿರುಸುತ್ತದೆ ಮತ್ತು ಎರಡನೆಯವನನ್ನು ಮೀನದ ಹೊಟ್ಟೆಯಲ್ಲಿಟ್ಟು ಸಮಸ್ತ ವಿಪತ್ತಿನಿಂದ ರಕ್ಷಿಸುತ್ತದೆ'. ಈ ಮಾತು ಸತ್ಯ.

ವಿಚಿತ್ರವಾದ ಪ್ರತಿಮೆ:

'ಜಾಮೇ ಅಲ್-ಹಕಾಯಾತ್' ಎಂಬ ಗ್ರಂಥದಲ್ಲಿ, ಸುಲ್ತಾನ ಮಹಮದನು ನೇಹರವಾಲಾದ ಪ್ರಯಾಣ ಮಾಡುವ ಮಾರ್ಗದಲ್ಲಿ, ನಗರದ ಒಂದು ಮಂದಿರದಲ್ಲಿ ಯಾವ ಆಧಾರವಿಲ್ಲದೆ ಅಂತರದಲ್ಲಿ ನಿಂತ ಒಂದು ಮೂರ್ತಿಯನ್ನು ಕಂಡುದಾಗಿ ಬರೆಯುತ್ತಾರೆ. ಅದನ್ನು ನೋಡಿ ಸುಲ್ತಾನ ಮಹಮದನು ಆಶ್ಚರ್ಯಚಕಿತನಾದನು ಮತ್ತು ತನ್ನ ದರ್ಬಾರಿನ ಪಂಡಿತರಿಗೆ ಇದರ ಕಾರಣವನ್ನು ಕೇಳಿದನು. ಈ ಜನರು ಬಹಳ ವಿಚಾರ ಮಾಡಿದ ನಂತರ ಉತ್ತರಸಿದುದೇನೆಂದರೆ, ಈ ದೇವಾಲಯದ ಮೇಲ್ಛಾವಣಿ ಮತ್ತು ಗೋಡೆಯನ್ನು ಆಯಸ್ಕಾಂತದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಈ ಮೂರ್ತಿಯು ಕಬ್ಬಿಣದಾಗಿದ್ದು, ಸುತ್ತ-ಮುತ್ತಲಿನ ಕಾಂತಕ್ಷೇತದೊಡನೆ ಅದಕ್ಕೆ ಸಂಬಂಧವಿದೆ. ಸುತ್ತ-ಮುತ್ತಲಿನ ಸಮಾನ ಕಾಂತಕ್ಷೇತ್ರದಿಂದಾಗಿ ಈ ವಿಗ್ರಹವು ಯಾವ ದಿಕ್ಕಿಗೂ ವಾಲದೆ ಅಂತರದಲ್ಲಿ ನಿಂತಿದೆ. ಅದನ್ನು ಪರೀಕ್ಷಿಸಲು ಕೂಡಲೆ ಸುಲ್ತಾನನು ದೇವಾಲಯದ ಗೋಡೆಯನ್ನು ಕೆಡಹಲು ಆಜ್ಞಾಪಿಸಿದನು. ಕೂಡಲೆ ರಾಜಾಜ್ಞೆಯನ್ನು ಪರಿಪಾಲಿಸಲಾಯಿತು. ಒಂದು ಭಾಗದ ಗೋಡೆಯು ಬಿದ್ದ ಕೂಡಲೆ ವಿಗ್ರಹವು ಕೂಡಾ ಭೂಮಿಯ ಮೇಲೆ ಬಿದ್ದಿತು.

ಬಗದಾದಿನ ಖಲೀಫಾನಿಂದ ಮಹಮೂದನಿಗೆ ಪತ್ರ:

ಸುಲ್ತಾನ ಮಹಮದನು ಸೋಮನಾಥ ಪ್ರಯಾಣ ಬೆಳಸಿ ವಿಜಯ ಪಡೆದು ಬಂದ ವರ್ಷ ಖಲಿಫಾ ಅಲ್-ಖಾದರ್-ಬ-ಅಲ್ಲಾ-ಅಬ್ಬಾಸಿಯು ಸುಲ್ತಾನನ ಹೆಸರಿಗೆ

ಒಂದು ಪತ್ರ ಬರೆದನು ಮತ್ತು ಅದರೊಂದಿಗೆ ಖರಸ್ಥಾನ, ಹಿಂದುಸ್ತಾನ, ನೀಮ್-ರೋಜ ಮತ್ತು ಖಾರಜಮ್‌ನ ರಾಜ್ಯಾಧಿಕಾರವನ್ನು ಸಹ ದಯಪಾಲಿಸಿದನು.

ಈ ಪತ್ರದಲ್ಲಿ ಖಲಿಫಾನು ಸುಲ್ತಾನ ಮಹಮದ, ಆತನ ಮಕ್ಕಳು ಹಾಗೂ ಸಹೋದರರಿಗೆ ಅನುಗ್ರಹ ರೂಪದಲ್ಲಿ ಬಿರುದುಗಳನ್ನು ತಿಳಿಸಿದ್ದನು. ಅಲ್ಲದೆ ಖಲಿಫಾನು ತನ್ನ ಪತ್ರದಲ್ಲಿ. 'ನೀವು ಯಾರನ್ನು ನಿಮ್ಮ ಯುವರಾಜನನ್ನಾಗಿ ಮಾಡುವಿರೊ, ಅದನ್ನು ನಾವು ಅನುಮೋದಿಸುತ್ತೇವೆ.' ಈ ಪತ್ರವು ತಲುಪಿದಾಗ ಸುಲ್ತಾನ ಮಹಮದನು ಆ ಸಮಯದಲ್ಲಿ ಬಲ್ಗನಲ್ಲಿದ್ದನು. ಆತನು ತಾನು ಗೆದ್ದ ಎಲ್ಲಾ ದೇಶಗಳಲ್ಲಿ ಈ ಬಿರುದುಗಳ ಡಂಗುರ ಸಾರಿದನು.

ಜಟಾಯಿ ಜನಾಂಗದ ಮೇಲೆ ದಾಳಿ:

ಅದೇ ವರ್ಷ ಸುಲ್ತಾನ ಮಹಮದನು ಜಟಾಯಿ ಜನಾಂಗದ ಮೇಲೆ ದಾಳಿ ಮಾಡಲು ನಿಶ್ಚಯಿಸಿದನು. ಈ ಜನಾಂಗವು ಜೋತಿಯ ಪಕ್ಕದ ನದಿಯ ತೀರದಲ್ಲಿದ್ದಿತು. ಸುಲ್ತಾನನು ಸೋಮನಾಥವನ್ನು ಗೆದ್ದು ತನ್ನ ಹುಟ್ಟೂರಿನ ಕಡೆಗೆ ಮರಳಿ ಬರುವಾಗ ಈ ಜನಾಂಗದವರು ವಿದ್ರೋಹಿಗಳಾಗಿ ದಾರಿಯಲ್ಲಿ ಸುಲ್ತಾನಿ ಸೈನ್ಯಕ್ಕೆ ಅಡೆತಡೆ ಉಂಟುಮಾಡಲು ಪ್ರಯತ್ನಿಸಿತ್ತು ಹಾಗೂ ಮುಸಲ್ಮಾನರಿಗೆ ಬಹಳ ಕಷ್ಟ ಕೊಟ್ಟಿತ್ತು. ಇವರ ಈ ಅಗೌರವದ ಕೃತ್ಯಕ್ಕೆ ಪ್ರತೀಕಾರ ಮಾಡುವುದು ಅವಶ್ಯಕವಿತ್ತು, ಮುಂದೆಂದೂ ಈ ತರಹದ ಕೃತ್ಯವೆಸಗಬಾರದು ಎಂಬ ವಿಚಾರದಿಂದ ಸುಲ್ತಾನನು ಜಟಾಯಿ ಜನರ ಮೇಲೆ ದಾಳಿ ಮಾಡಿದನು. ಸುಲ್ತಾನ ಮಹಮದನು ಒಂದು ಬೃಹತ್ ಸೈನ್ಯವನ್ನು ಸಿದ್ಧಪಡಿಸಿ ತನ್ನ ಉದ್ದೇಶವನ್ನು ಸಾಧಿಸಲು ಕಳುಹಿಸಿಕೊಟ್ಟನು. ಪ್ರಯಾಣದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ತಂಗುತ್ತಾ ಅವನು ಮುಲ್ತಾನಿಗೆ ಬಂದನು. ಅಲ್ಲಿಗೆ ಬಂದನಂತರ ಈತನು ೧೪೦೦ ದೋಣಿಗಳನ್ನು ತಯಾರಿಸಲು ಆದೇಶಿಸಿದನು ಮತ್ತು ಪ್ರತಿಯೊಂದು ದೋಣಿಯಲ್ಲಿ ಮೂರು ಕಬ್ಬಿಣದ ಸಲಾಕೆಗಳನ್ನು ಅಳವಡಿಸಿದನು, ಒಂದು ಸಲಾಕೆಯು ದೋಣಿಯ ಮುಂಭಾಗದಲ್ಲಿ ಇದ್ದು, ಉಳಿದ ಎರಡು ಸಲಾಕೆಗಳು ದೋಣಿಯ ಎರಡು ಭಾಗದಲ್ಲಿ ಧೃಢವಾಗಿ ಅಳವಡಿಸಿದನು. ಇವುಗಳ ಉದ್ದೇಶವೆಂದರೆ, ದೋಣಿಯ ಎದುರು ವಸ್ತುಗಳು ಬಂದಾಗ, ಅವುಗಳಿಗೆ ಸಲಾಕೆಗಳು ಬಡಿದು ನೀರಲ್ಲಿ ಮುಳಗಿಹೋಗಬೇಕು. ಈ ದೋಣಿಗಳು ಸಿದ್ಧವಾದೊಡನೆ ಸುಲ್ತಾನನ ಆದೇಶದ ಪ್ರಕಾರ ಒಂದೊಂದು ದೋಣಿಯಲ್ಲಿ ೨೦ ಜನರನ್ನು ಕುಳ್ಳಿರಸಲಾಯಿತು. ಪ್ರತಿಯೊಬ್ಬರಿಗೆ ಬಿಲ್ಲು-ಬಾಣಗಳಲ್ಲದೆ, ಮದ್ದು ಗುಂಡುಗಳನ್ನು ಸಹ ಕೊಡಲಾಯಿತು. ಈ ವ್ಯವಸ್ಥೆಯ ನಂತರ ದೋಣಿಗಳನ್ನು ನದಿಯಲ್ಲಿ ತೇಲಿ ಬಿಡಲಾಯಿತು ಮತ್ತು ಜಟಾಯಿ ಜನಾಂಗ ನಾಶಮಾಡಲು ಮುಂದೆ ಹೊರಟಿತು. ಸುಲ್ತಾನ ಮಹಮದನ ಸೈನ್ಯದ ಬರುವಿಕೆಯನ್ನು ತಿಳಿದ ಜಟಾಯಿ ಜನಾಂಗದವರು ಕೂಡ ಎದುರಿಸಲು ಸನ್ನದ್ಧರಾಗಿದ್ದರು. ಈ ಜನರು ತಮ್ಮ ಮಕ್ಕಳನ್ನು ನಡುಗಡ್ಡೆಗಳಲ್ಲಿ ಬಿಟ್ಟು, ತಾವು ಸ್ವತಃ ಎದುರಿಸಲು

ಬಂದಿದ್ದರು. ಇವರಲ್ಲಿ ಸುಮಾರು ೪ ಅಥವಾ ೮ ಸಾವಿರ ದೋಣಿಗಳು ನದಿಯಲ್ಲಿ ತೇಲಿ ಬಿಟ್ಟಿದ್ದರು ಮತ್ತು ಪ್ರತಿಯೊಂದು ದೋಣಿಯಲ್ಲಿ ಸುಸಜ್ಜಿತ ಸೈನಿಕರ ಒಂದೊಂದು ಗುಂಪನ್ನು ಕೂಡಿಸಲಾಗಿತ್ತು. ಮುಸಲ್ಮಾನರ ಸೈನ್ಯ ನಾಶ ಮಾಡುವ ಉದ್ದೇಶದಿಂದ ಅವರು ಮುಂದೆ ಬಂದರು. ಎರಡು ಸೈನ್ಯದ ಮಧ್ಯೆ ನದಿಯಲ್ಲಿ ಘೋರ ಯುದ್ಧವಾಯಿತು.

ಜಟಾಯಿ ಜನರ ದೋಣಿಗಳು ಮುಸಲ್ಮಾನರ ದೋಣಿಯ ಎದುರು ಬಂದ ಕೂಡಲೆ ಕಬ್ಬಿಣದ ಸಲಾಕೆಗಳಿಗೆ ಬಡೆದು ನುಚ್ಚುನೂರಾಗಿ ನೀರಲ್ಲಿ ಮುಳುಗಿಹೋಗುತ್ತಿದ್ದವು. ಇದರಂತೆ ಒಂದಾದ ಮೇಲೆ ಮತ್ತೊಂದು ಜಟಾಯಿ ಜನಾಂಗದ ದೋಣಿಗಳು ನದಿಯಲ್ಲಿ ಮುಳಿಗಿದವು. ಮುಳುಗದೆ ಉಳಿದ ಸೈನಿಕರನ್ನು ಮುಸಲ್ಮಾನರ ಖಡ್ಗಗಳು ಕೊಂದವು. ಇವರೆಲ್ಲರು ನಾಶವಾದ ನಂತರ ಮುಸಲ್ಮಾನಿ ಸೈನ್ಯವು ಮಕ್ಕಳಿದ್ದ ಕಡೆಗೆ ತಿರುಗಿದವು. ನಡುಗಡ್ಡೆ ಸೇರಿದ ನಂತರ ಹತಾಶರಾದ ಶತ್ರುಗಳನ್ನು ಬಂದಿಯಾಗಿಸಿ, ಈ ಕೈದಿಗಳನ್ನು ಜೊತೆಗೆ ತೆಗೆದುಕೊಂಡು ಸುಲ್ತಾನ ಮಹಮದನು ಪ್ರಯಾಣಿಸಿ ಅಲ್ಲಲ್ಲಿ ತಂಗುತ್ತಾ ಘಜನಿ ಕಡೆಗೆ ಮರಳಿ ಹೊರಟನು.

ತುರ್ಕಮಾನಿಗಳ ಪ್ರಸಿದ್ಧ ಪರಿವಾರದೊಂದಿಗೆ ಕಾಳಗ:

ಹಿಜರಿ ಶಕೆ ೪೧೮ ರಲ್ಲಿ ಸುಲ್ತಾನ ಮಹಮದನು ಅಬೂ-ಅಲ್-ಹರಬ್ ಅಮೀರ ತೌಸ್-ಇರಸಾಲನನಿಗೆ ಬಾ-ಅವೌರದ್ ಪ್ರಾಂತದ ಮೇಲೆ ಕಾಳಗ ಮಾಡಲು ಆದೇಶಿಸಿದನು. ಈ ಕಾಳಗದ ಉದ್ದೇಶವು ತುರ್ಕಮಾನಿ ಪ್ರಸಿದ್ಧ ಪರಿವಾರಗಳನ್ನು ನಾಶಮಾಡುವುದಾಗಿತ್ತು. ಏಕೆಂದರೆ ಅವರು ಅಮೂಹ ನದಿಯನ್ನು ದಾಟಿ ಬಾ-ಅವೌರದ್ ಸುತ್ತ-ಮುತ್ತಲಿನಲ್ಲಿ ಅಮೂಹ ನದಿ ದಾಟಿ ಬಾ-ಅವೌರದನಲ್ಲಿ ಗಲಭೆ ಆರಂಭಿಸಿದರು. ಅಮೀರ ತೌಸನು ಶೌರ್ಯದಿಂದ ಕಾದಾಡಿದನು. ಆದರೂ ಗೆಲ್ಲಲು ಸಾಧ್ಯವಾಗಲಿಲ್ಲ, ನಿರಾಶನಾಗಿ ಸುಲ್ತಾನ ಮಹಮದನಿಗೆ ಪತ್ರ ಬರೆದು ತುರ್ಕಮಾನಿಗಳ ಪ್ರಸಿದ್ಧ ಪರಿವಾರಗಳನ್ನು ನಿರ್ನಾಮ ಮಾಡದೆ ಬೇರೆ ದಾರಿಯಿಲ್ಲ ಮತ್ತು ತಾವು ಸ್ವತಃ ಇವರ ಮೇಲೆ ದಾಳಿ ಮಾಡಬೇಕೆಂದು ಕೇಳಿಕೊಂಡನು. ಮಹಮದನು ಈ ಸಲಹೆಯು ಸೂಕ್ತವೆಂದು ಭಾವಿಸಿ, ಒಂದು ಬಲಶಾಲಿಯಾದ ಸೈನ್ಯದೊಂದಿಗೆ ಶತ್ರುಗಳ ಕಡೆಗೆ ಹೊರಟನು. ಘಜನವಿ ಸೈನಿಕರ ಸಾಹಸ ಹಾಗೂ ಶೌರ್ಯದ ಮುಂದೆ ತುರ್ಕಮಾನಿಗಳ ಸೈನ್ಯವು ನಿಲ್ಲದೆ ಚೆದರಿ ಅವರಿಗೆ ಹೀನಾಯವಾದ ಸೋಲಾಯಿತು. ತುರ್ಕಿಗಳ ಪ್ರಸಿದ್ಧ ಪರಿವಾರದ ಮುಖ್ಯಸ್ಥರು ಇರಾಕನ್ನು ಪರಿವಾರದ ವಶಪಡಿಸಿಕೊಂಡು ತನ್ನ ರಾಜ್ಯದಲ್ಲಿ ಸೇರಿಸಿಕೊಂಡಿದ್ದನು. ಈ ಕಾರಣಕ್ಕಾಗಿ ಮಹಮದನು ರೇ ನಾಡಿನ ಕಡೆ ಹೊರಟನು ಮತ್ತು ಅಲ್ಲಿ ತಲುಪಿದನಂತರ ರೇ ದ ಸಮಗ್ರ ಭಂಡಾರವನ್ನು ಮತ್ತು ಅಲ್ಲಿಯ ಸಂಪತ್ತನ್ನು ಯಾವ ಪರಿಶ್ರಮ ಹಾಗೂ ಅಡೆತಡೆಯಿಲ್ಲದೆ ತನ್ನ ಭಂಡಾರದಲ್ಲಿ ಸೇರಿಸಿಕೊಂಡನು. ನಂತರ ಸುಲ್ತಾನ ಮಹಮದನು

ಅಲ್ಲಿಯ ನಿವಾಸಿಗಳಾದ ಇಸ್ಲಾಮ ಮತದ ವಿರೋಧಿಗಳಾದ, ಸನ್ಮಾರ್ಗ ತೊರೆದವರೆನ್ನೆಲ್ಲಾ ಸಂಹರಿಸಿ ರೇ ಯನ್ನು ಗೆದ್ದನು. ಮಹಮದನು ರೇ ಹಾಗೂ ಅಸ್ಫಹಾನ ರಾಜ್ಯಗಳನ್ನು ಅಮೀರ ಮಸೂದನಿಗೆ ಒಪ್ಪಿಸಿ ತಾನು ಮರಳಿ ಬಂದನು.

ಸುಲ್ತಾನ ಮಹಮದನ ಮರಣ:

ಈ ಕೊನೆಯ ಕಾಳಗವಾದ ಕೆಲವು ದಿನಗಳ ನಂತರ ಮಹಮದನು 'ಸಲ್' ಬೇನೆಗೊಳಗಾದನು, ನಿಧಾನವಾಗಿ ರೋಗವು ಬೆಳೆಯುತ್ತಲೇ ಇತ್ತು. ಆರಂಭದಲ್ಲಿ ತನ್ನ ರೋಗದ ಬಗ್ಗೆ ಅನ್ಯರಿಗೆ ಹೇಳಿರಲಿಲ್ಲ. ಇದರ ಸತ್ಯಾಂಶವನ್ನು ಯಾರಿಗೂ ಹೇಳಿರಲಿಲ್ಲ, ತಾನು ಆರೋಗ್ಯವಂತ ಮತ್ತು ಶಕ್ತಿವಂತನೆಂದು ವ್ಯಕ್ತಪಡಿಸುತ್ತಿದ್ದನು. ಈ ಅನಾರೋಗ್ಯದ ಸ್ಥಿತಿಯಲ್ಲಿಯೇ ಬಲ್ಗಿಗೆ ಹೋದನು. ಅಲ್ಲಿ ವಸಂತ ಋತು ಕಳೆದು ಮರಳಿ ಘಜನಿಗೆ ಬಂದನು. ವಾತಾವರಣ ಬದಲಾದರೂ ಈ ರೋಗವು ತೀವ್ರವಾಗಿ ಉಲ್ಬಣವಾಯಿತು. ಈ ರೋಗವು ಗಂಭೀರ ಸ್ಥಿತಿಗೆ ಬಂದು, ಸುಲ್ತಾನ ಮಹಮದನು ತನ್ನ ರಾಜಧಾನಿಯಾದ ಘಜನಿಯಲ್ಲಿ ಹಿಜರಿ ಶಕೆ ೪೨೧ ರ, ರಬ್ಬಿಲ ಸಾನಿ ೨೩, ಗುರುವಾರದಂದು ಮರಣ ಹೊಂದಿದನು. ಸುಲ್ತಾನ ಮಹಮದನು ತನ್ನ ಹೃದಯದಲ್ಲಿ ಸಹಸ್ರಾರು ಆಕಾಂಕ್ಷೆಗಳನ್ನು ಪೋಷಿಸಿಕೊಂಡಿದ್ದು ೬೩ನೆಯ ವಯಸ್ಸಿನಲ್ಲಿ ಪ್ರಪಂಚ ತೊರೆದನು. ಈತನ ರಾಜ್ಯಾವಧಿಯು ೩೫ ವರ್ಷ ಎಂದು ಹೇಳಲಾಗುತ್ತದೆ. ಮಹಮದನು ಮೃತಪಟ್ಟ ದಿನ ರಭಸವಾಗಿ ಮಳೆಯಾಗುತ್ತಿತ್ತು. ರಾತ್ರಿಯ ಸಮಯದಲ್ಲಿ, ರಭಸವಾಗಿ ಸುರಿಯುವ ಮಳೆಯಲ್ಲಿ, ಆತನ ಪಾರ್ಥಿವ ಶರೀರವನ್ನು ಘಜನಿಯ 'ಖಸ್ರ ಫೊರೋಜ' ನಲ್ಲಿ ಅಂತ್ಯಕ್ರಿಯೆ ಮಾಡಲಾಯಿತು.

ರೂಪ ಹಾಗು ಗುಣಗಳು:

ಮಹಮದನ ಎತ್ತರವು ಅತಿ ಹೆಚ್ಚು ಅಥವಾ ತೀರ ಕುಳ್ಳನಾಗಿರದೆ ಸಾಮಾನ್ಯವಾಗಿತ್ತು. ಆತನ ಮುಖದ ಮೇಲೆ ಸಿಡುಬಿನ ಕಲೆಗಳು ಕಂಡು ಬರುತ್ತಿದ್ದವು. ತಾನು ಆಕರ್ಷಕ ವ್ಯಕ್ತಿತ್ವ ಉಳ್ಳವನಾಗಿರಬೇಕೆಂದು ಮಹಮದನು ಬಯಸುತ್ತಿದ್ದನು. ಮಹಮದನು ತನ್ನ ಹೆಸರಿನೊಂದಿಗೆ ಸುಲ್ತಾನ ಎನ್ನುವ ಬಿರುದನ್ನು ಸೇರಿಸಿಕೊಂಡಿದ್ದ ಪ್ರಥಮ ಅರಸನಾಗಿದ್ದನು. ಇತಿಹಾಸದಿಂದ ಈ ಮಾತಿಗೆ ಪುಷ್ಟಿ ದೊರೆಯುತ್ತದೆ, ಮಹಮದನು ತಾನು ಸಾಯುವುದಕ್ಕಿಂತ ಎರಡು ದಿನ ಮೊದಲು ತಾನು ತನ್ನ ಜೀವಿತಾವಧಿಯಲ್ಲಿ ಗೆದ್ದು ತಂದ ಸಮಸ್ತ ಸಂಪತ್ತು, ಮುತ್ತು-ರತ್ನಗಳು, ಅಶ್ರಫಿಗಳನ್ನು ರಾಜ ಭಂಡಾರದಿಂದ ತರಸಿ ರಾಜ ಮಹಲಿನ ಮುಂದೆ ರಾಶಿ ಹಾಕಿದನು. ವಜ್ರ-ವೈಢೂರ್ಯದ ಬೆಳಕಿನಲ್ಲಿ ಒಳಾಂಗಣವು ಸ್ವರ್ಗ ಸಮಾನವಾಗಿ ಕಂಡು ಬರುತ್ತಿತೆಂದು ಇತಿಹಾಸಕಾರರು ಹೇಳುತ್ತಾರೆ. ಬೆಲೆಬಾಳುವ ವಜ್ರ-ವೈಡೂರ್ಯಗಳ ಮೇಲೆ ದೃಷ್ಟಿ ಹಾಯಿಸುತ್ತಾ, ಅವುಗಳ ರಾಶಿ ನೋಡಿ ನೋಡಿ ಮಹಮದನು ಅಳುತ್ತಿದ್ದನು. ಕೆಲ ಸಮಯ ಅವುಗಳನ್ನು ನೋಡಿದ ನಂತರ ಅಳುವುದನ್ನು ನಿಲ್ಲಿಸಿ ಪುನಃ ಭಂಡಾರದಲ್ಲಿ ಸೇರಿಸಿದನು. ಅಂತ್ಯ

ಕಾಲದಲ್ಲಿ ತನ್ನ ಭಂಡಾರದಿಂದ ಮಹಮದನು ಯಾರಿಗೂ ಒಂದಾದರೂ ನಾಣ್ಯವನ್ನು ಕೊಡಲಿಲ್ಲ. ಈ ಘಟನೆಯನ್ನಲ್ಲದೆ ಇನ್ನಿತರ ಇಂತಹ ಸಂಗತಿಗಳಿಂದ ಜನರು ಈತನನ್ನು ಅದೃಷ್ಟವಂತ ರಾಜನಾದರೂ ಜಿಪುಣಾಗ್ರೇಸರ ಅರಸನೆಂದು ತಿಳಿಯುತ್ತಿದ್ದರು. ಇದಾದನಂತರ ಎರಡನೆಯ ದಿನ ಮಹಮದನು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಮೈದಾನದಲ್ಲಿ ಸುತ್ತಾಡಿದನು. ಆತನ ಆದೇಶದಂತೆ ಸಿಬ್ಬಂದಿಗಳು, ಕುದುರೆಗಳು, ಆನೆಗಳು, ಒಂಟೆಗಳು ಮತ್ತು ಇತರ ಪ್ರಾಣಿಗಳನ್ನು ಆತನ ಎದುರಿಗೆ ಹಾಜರ ಪಡಿಸಿದರು. ಇವೆಲ್ಲವನ್ನು ನೋಡಿ ವಿಚಾರ ಮಾಡಿ ನಂತರ ಜೋರಾಗಿ ಅಳುತ್ತ ಅದೇ ಪರಿಸ್ಥಿತಿಯಲ್ಲಿ ತನ್ನ ಅರಮನೆಗೆ ಹೋದನು.

ಸಂಪತ್ತಿನ ಮೇಲೆ ಪ್ರೀತಿ :

ಅಬೂಲ್-ಹಸನ-ಅಲಿ-ಬಿನ್-ಹಸೇನ-ಮೇಮದಿ ಹೇಳುವುದೇನೆಂದರೆ ಒಂದು ದಿನ ಸುಲ್ತಾನ ಮಹಮದನು ಅಬೂ-ತಾಹೀರ್-ಸಾಮಾನಿಗೆ ಪ್ರಶ್ನಿಸಿದನು. 'ಆಲ್-ಸಾಮಾನನು ತನ್ನ ಆಡಳಿತದ ಅವಧಿಯಲ್ಲಿ ಎಷ್ಟು ವಜ್ರ-ವೈಡೂರ್ಯಗಳನ್ನು ಸಂಗ್ರಹಿಸಿದ್ದನು?' ಅಬೂ ತಾಹೀರನು ಉತ್ತರಿಸಿದನು, 'ಅಮೀರ ನೌ ಸಾಮಾನಿಯ ಅವಧಿಯಲ್ಲಿ ಏಳು ಉತ್ತಮವಾದ ರತ್ನಾಭರಣಗಳು ರಾಜ್ಯದ ಭಂಡಾರದಲ್ಲಿದ್ದವು.' ಮಹಮದನು ಈ ಉತ್ತರ ಕೇಳಿ ಪರಮಾತ್ಮನಿಗೆ ಧನ್ಯವಾದಗಳನ್ನು ಸೂಚಿಸಿ, 'ಅಲ್-ಹಮ್-ದುಲಿಲ್ಲಾ-ಖುದಾ-ವಂದ-ತಾಲಾ'ನು ನನಗೆ ನೂರು ರತ್ನಗಳಿಗಿಂತಲೂ ಹೆಚ್ಚಿನ ಬೆಲೆಬಾಳುವ ವಜ್ರ-ವೈಡೂರ್ಯಗಳನ್ನು ಕೊಟ್ಟಿದ್ದಾನೆ.' ಎಂದನು. ಕೆಲವು ಇತಿಹಾಸಕಾರರು ಹೇಳುವುದೇನೆಂದರೆ ಸುಲ್ತಾನ ಮಹಮದನು ತನ್ನ ಕೊನೆಯ ದಿನಗಳಲ್ಲಿ ನಿಶಾಪುರದಲ್ಲಿ ಒಬ್ಬ ಶ್ರೀಮಂತನು ವಾಸಿಸುತ್ತಿದ್ದನೆಂದು ಕೇಳಿ, ಮಹಮದನು ಆ ವ್ಯಕ್ತಿಯನ್ನು ಘಜನಿಗೆ ಕರೆತರಲು ಆದೇಶಿಸಿದನು. ರಾಜಾಜ್ಞೆಯನ್ನು ಪರಿಪಾಲಿಸಲಾಯಿತು ಮತ್ತು ಆ ಶ್ರೀಮಂತನನ್ನು ಘಜನಿಗೆ ಕರೆತಂದು ರಾಜ ದರ್ಬಾರಿನಲ್ಲಿ ಹಾಜರ ಪಡಿಸಲಾಯಿತು. ಸುಲ್ತಾನ ಮಹಮದನು ಆ ವ್ಯಕ್ತಿಗೆ ಕೇಳಿದನು, 'ನೀನು ನಾಸ್ತಿಕ ಹಾಗು ಸನ್ಮಾರ್ಗಿ ಅಲ್ಲವೆಂದು ಕೇಳಿದ್ದೇನೆ.' ಆ ವ್ಯಕ್ತಿಯು ಉತ್ತರಿಸಿದನು, 'ದೊರೆಯೇ, ನಾನು ನಾಸ್ತಿಕನೂ ಅಲ್ಲ, ಸನ್ಮಾರ್ಗ ತೊರೆದವನೂ ಅಲ್ಲ, ನನ್ನ ತಪ್ಪೆಂದರೆ ನನ್ನಲ್ಲಿ ಅಪಾರ ಸಂಪತ್ತಿದೆ. ಅದನ್ನು ಬೇಕಾದರೆ ನೀನು ನನ್ನಿಂದ ತೆಗೆದುಕೋ, ಆದರೆ ನನ್ನನ್ನು ನಾಸ್ತಿಕ ಹಾಗೂ ಸನ್ಮಾರ್ಗ ತೊರೆದ ಅಧಮನೆಂದು ಮಾತ್ರ ಹೇಳಬೇಡಿ'. ಸುಲ್ತಾನ ಮಹಮದನು ಆತನಿಂದ ಸಮಸ್ತ ಸಂಪತ್ತನ್ನು ತೆಗೆದುಕೊಂಡು ಆತನಿಗೆ 'ಹುಸ್ನೇ ಅಖೀದತ್' (ಧರ್ಮಭೀರು)ನ ಒಂದು ಮಾನಪತ್ರ ಬರೆಯಿಸಿಕೊಟ್ಟನು.

ಖತಮುಲ್-ಮುರಸಲೀನ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರ ಸಮಾಧಿ ದರ್ಶನ ಯಾತ್ರೆ :

ತಬಖಾತೇನಾಸೀರಿಯಲ್ಲಿ ಬರೆದುದೇನೆಂದರೆ ಸುಲ್ತಾನ ಮಹಮದನಿಗೆ ಪ್ರಖ್ಯಾತ ಹದೀಸ ಅಲಲ್ಮಯೇ ವಷ್ತಾ ಅಲ್‌ಬೂನಿಯಾದ ಇದರ ಸತ್ಯಾಂಶದಲ್ಲಿ ಪೂರ್ಣ ನಂಬಿಕೆಯಿರಲಿಲ್ಲ ಮತ್ತು ಪ್ರಳಯವಾಗುತ್ತದೆ ಎನ್ನುವ ಬಗ್ಗೆ ಸಹ ಅನುಮಾನವಿದ್ದಿತು. ಇದಲ್ಲದೆ ತಾನು ಸ್ವತಃ ಸಬಸ್ತಗೀನ್‌ನ ಮಗನೆಂಬ ಬಗ್ಗೆ ಅನುಮಾನವಿತ್ತು. ಒಂದು ರಾತ್ರಿ ನಡೆದ ಘಟನೆ ಇದು-ಸುಲ್ತಾನ ಮಹಮದನು ತನ್ನ ವಾಸಸ್ಥಳದಿಂದ ಕಾಲ್ನಡಿಗೆಯಲ್ಲಿ ಎಲ್ಲಿಗೋ ಹೋಗುತ್ತಿದ್ದನು. ಸೇವಕನೊಬ್ಬನು ಬಂಗಾರದ ದೀಪವನ್ನು ಹಿಡಿದುಕೊಂಡು ಮುಂದೆ ಮುಂದೆ ನಡೆಯುತ್ತಿದ್ದನು. ರಸ್ತೆಯಲ್ಲಿ ಒಬ್ಬ ವಿದ್ಯಾರ್ಥಿಯು ರಸ್ತೆಯ ದೀಪದ ಜ್ವಾಲೆಯಲ್ಲಿ ಕುಳಿತುಕೊಂಡು, ತನ್ನ ಪಾಠವನ್ನು ಓದುತ್ತಿದ್ದನು. ಅವನ ಹತ್ತಿರ ಬೆಳಗಿಸಲು ಮನೆಯಲ್ಲಿ ತೈಲವಿರಲಿಲ್ಲ. ಅದಕ್ಕಾಗಿ ಅವನು ಓದಿದ್ದನ್ನು ಮರೆತು ಬಿಡುತ್ತಿದ್ದನು. ಒಬ್ಬ ಅಂಗಡಿಯವನ ದೀಪದ ಬೆಳಕಿನಲ್ಲಿ ಹೋಗಿ ತನ್ನ ಪಾಠವನ್ನು ಓದುತ್ತಿದ್ದನು. ಮಹಮದನಿಗೆ ಈ ವಿದ್ಯಾರ್ಥಿಯನ್ನು ಕಂಡು ಅನುಕಂಪ ಹುಟ್ಟಿ ತನ್ನ ಸೇವಕನ ಕೈಯಲ್ಲಿದ್ದ ಚಿನ್ನದ ದೀಪವನ್ನು ಆ ವಿದ್ಯಾರ್ಥಿಗೆ ಕೊಟ್ಟನು. ಈ ಘಟನೆ ನಡೆದ ಅದೇ ರಾತ್ರಿ ಕನಸಿನಲ್ಲಿ ಮಹಮದನಿಗೆ 'ಹಜ್ರತ - ಮೊಹ್ಮದ - ಸಲೀ - ಅಲ್ಲಾ - ಅಲೇ - ಓ- ಸಲಂ' ಯಾತ್ರೆ ಮಾಡಿದಂತಾಯಿತು. ಆತನು ಮಹಮದನಿಗೆ ಹೇಳಿದುದೇನೆಂದರೆ 'ನಾಸೀರುದ್ದೀನ್ ಸಬಸ್ತಗೀನ್‌ನ ಪುತ್ರನೇ, ನಿನಗೆ ಅಲ್ಲಾಹನು ತನ್ನ ವಾರಸುದಾರನಿಗೆ ತೋರಿದ ಗೌರವವನ್ನು ನಿನಗೆ ಸಿಗುವಂತೆ ಮಾಡಲಿ.' ಆಂ ಹಜ್ರತರ ಈ ಅನುಗ್ರಹದಿಂದ ಮೇಲೆ ಹೇಳಿದ ಮಹಮದನ ಮನಸ್ಸಿನ ಅನುಮಾನಗಳೆಲ್ಲ ದೂರವಾದವು.

ಮಹಮೂದನ ನ್ಯಾಯ:

ಸುಲ್ತಾನ ಮಹಮದನು ಮರಣ ಹೊಂದಿದ ಎರಡನೆಯ ವರ್ಷ ಘಜನಿಯಲ್ಲಿ ಘೋರ ಜಲಪ್ರಳಯವಾಗಿ, ನಗರದ ಹಲವಾರು ಕಟ್ಟಡಗಳು ನಾಶವಾಗಿ ಬಹಳ ಜನರು ಮೃತಪಟ್ಟರು. ಉಮರ-ಬಿನ್-ಲೀಸ-ಸಫಾ ನು ತನ್ನ ಆಡಳಿತದ ಅವಧಿಯಲ್ಲಿ ನದಿಯ ಮೇಲೆ ಕಟ್ಟಿದ ಸೇತುವೆಯು ನೀರಿನ ರಭಸದಲ್ಲಿ ಹೇಳ ಹೆಸರಿಲ್ಲದಂತೆ ನಾಶವಾಯಿತು. ಆ ಜನರ ದೃಷ್ಟಿಯಲ್ಲಿ ಈ ಘಟನೆಯು ಮಹಮದನ ಸಾವಿನ ಒಂದು ಅತಿ ಮಹತ್ವದ ಸಂಕೇತವಾಗಿದ್ದಿತು. ಇದನ್ನು ಮಹಮದನ ನ್ಯಾಯದ ಸಾಕ್ಷಿಯೆಂದು ತಿಳಿಯುತ್ತಿದ್ದರು. ಮಹಮದನು ನೀಡುತ್ತಿದ್ದ ನ್ಯಾಯದ ಬಗ್ಗೆ ಬಹಳಷ್ಟು ಘಟನೆಗಳು ಪ್ರಖ್ಯಾತವಾಗಿವೆ. ಅದರಲ್ಲಿ ಎಲ್ಲಕ್ಕೂ ಹೆಚ್ಚಿನ ಹಾಗೂ ಮಹತ್ವದ ಘಟನೆ ಎಂದರೆ ಒಂದು ದಿನ, ಒಬ್ಬ ವ್ಯಕ್ತಿ ಮಹಮದನ ದರ್ಬಾರಿನಲ್ಲಿ ನ್ಯಾಯ ಪಡೆಯಲು ಹಾಜರಾದನು. ಮಹಮದನು ಈತನ ಕಡೆ ಗಮನ ಹರಿಸಿದಾಗ, ಆ ವ್ಯಕ್ತಿಯು

ವಿನಮ್ರತೆಯಿಂದ ಹೇಳಿದನು, 'ನನ್ನ ದೂರನ್ನು ರಾಜ ದರ್ಬಾರಿನಲ್ಲಿ ಎಲ್ಲರ ಸಮಕ್ಷಮ ಹೇಳಲು ಬಾರದು.' ಮಹಮದನು ಕೂಡಲೆ ಎದ್ದು ಆತನನ್ನು ಏಕಾಂತ ಸ್ಥಳಕ್ಕೆ ಕರೆದೊಂಡು ಹೋಗಿ ಆತನ ಸ್ಥಿತಿಗತಿಯನ್ನು ವಿಚಾರಿಸಿದನು.

ಆ ವ್ಯಕ್ತಿಯು 'ನಿಮ್ಮ ಸಹೋದರರನ ಮಗ ಕೆಲ ಕಾಲದಿಂದ ಪ್ರತಿ ರಾತ್ರಿ ಸಶಸ್ತ್ರನಾಗಿ ನನ್ನ ಮನೆಗೆ ಬಂದು, ಒಳಗೆ ಪ್ರವೇಶಿಸಿ ನನಗೆ ಚಾಟಿ ಏಟು ಹೊಡೆದು ಮನೆಯಿಂದ ಹೊರಹಾಕುತ್ತಾನೆ ಮತ್ತು ನನ್ನ ಹೆಂಡತಿಯ ಜೊತೆಯಲ್ಲಿ ಮಲಗಿಕೊಳ್ಳುತ್ತಾನೆ. ಕೆಲ ಕಾಲದಿಂದ ಇದನ್ನೇ ರೂಢಿಸಿಕೊಂಡಿದ್ದಾನೆ. ನಾನು ಪ್ರತಿಯೊಬ್ಬ ಅಮೀರನಿಗೆ ನನ್ನ ಪರಿಸ್ಥಿತಿಯನ್ನು ಹೇಳಿಕೊಂಡೆನು, ಆದರೆ ಯಾರಿಗೂ ನನ್ನ ಮೇಲೆ ಕನಿಕರ ಬರಲಿಲ್ಲ ಮತ್ತು ತಮ್ಮಲ್ಲಿ ಈ ವಿಷಯವನ್ನು ಹೇಳಲು ಯಾರಿಗೂ ಧೈರ್ಯ ಬರಲಿಲ್ಲ. ನಾನು ನಿರಾಶನಾಗಿ ತಮ್ಮ ದರ್ಬಾರಿನಲ್ಲಿ ಬರಲು ಆರಂಭಿಸಿದೆ ಮತ್ತು ತಮ್ಮ ಮುಂದೆ ನನ್ನ ಸ್ಥಿತಿಗತಿಗಳನ್ನು ಹೇಳಿಕೊಳ್ಳುವ ಸಮಯಕ್ಕಾಗಿ ಕಾದು ಕುಳಿತಿದ್ದೆ. ತಾವು ನನ್ನ ಕಡೆ ದೃಷ್ಟಿ ಹರಿಸಿದ ಕಾರಣ, ನಾನು ತಮ್ಮಲ್ಲಿ ನನ್ನ ಕಥೆಯನ್ನು ನಿವೇದಿಸಿದ್ದೇನೆ. ಅಲ್ಲಾಹನು ತಮ್ಮನ್ನು ರಾಜ್ಯದ ಉತ್ತಮ ರಾಜನಾಗಿಸಲಿ. ಪ್ರಜೆಗಳು ಮತ್ತು ದೀನ ಜನರ ಕಡೆ ಲಕ್ಷ್ಯ ವಹಿಸುವುದು ತಮ್ಮ ಕರ್ತ್ಯವ್ಯವಾಗಿದೆ. ಒಂದು ವೇಳೆ ತಾವು ನನ್ನ ಮೇಲೆ ಕನಿಕರ ತೋರಿಸಿ ನನ್ನ ವಿಷಯದಲ್ಲಿ ನ್ಯಾಯ ಒದಗಿಸಿದರೆ ನನ್ನ ಸುದೈವವೆಂದೊ ತಿಳಿಯುತ್ತೇನೆ, ಇಲ್ಲದಿದ್ದಲ್ಲಿ ಈ ವಿಷಯವನ್ನು ಅಲ್ಲಾಹನ ಕರುಣೆಗೆ ಬಿಟ್ಟುಕೊಡುತ್ತೇನೆ. ಈ ವಿಷಯದಲ್ಲಿ ತಮ್ಮಿಂದ ನ್ಯಾಯಯುತವಾದ ನಿರ್ಣಯ ಬರುವುದನ್ನು ನಿರೀಕ್ಷಿಸುತ್ತೇನೆ.' ಎಂದು ಹೇಳಿದನು. ಮಹಮದನ ಮೇಲೆ ಈ ವಿಷಯವು ಬಹಳ ಪರಿಣಾಮ ಬೀರಿತು. ಇದನ್ನು ಕೇಳಿ ರೋದಿಸಲಾರಂಭಿಸಿದನು ಮತ್ತು ಆ ವ್ಯಕ್ತಿಗೆ, 'ದೌರ್ಜನ್ಯಕ್ಕೊಳಗಾದ ದುರ್ದೈವಿಯೇ, ಇದಕ್ಕೂ ಮೊದಲು ನನ್ನಲ್ಲಿ ಏತಕ್ಕೆ ಬರಲಿಲ್ಲ, ಇಷ್ಟು ದಿನಗಳವರಗೆ ಈ ದೌರ್ಜನ್ಯವನ್ನು ಏಕೆ ಸಹಿಸಿದೆ?' ಎಂದು ಕೇಳಿದನು. ಆ ವ್ಯಕ್ತಿಯು, 'ರಾಜಾ, ಯಾವ ರೀತಿಯಿಂದಾದರೂ ತಮ್ಮ ಸಮ್ಮುಖದಲ್ಲಿ ಹಾಜರಾಗಲು ಕೆಲ ಸಮಯದಿಂದ ನಾನು ಪ್ರಯತ್ನಿಸುತ್ತಲೇ ಇದ್ದೇನೆ ಆದರೆ ದರ್ಬಾರದ ಚೌಕಿದಾರರು ಮತ್ತು ರಕ್ಷಕರು ತಡೆಹಿಡಿದ ಕಾರಣ ಸಫಲನಾಗಲು ಸಾಧ್ಯವಾಗಲಿಲ್ಲ. ಈ ದಿನ ನಾನು ತಮ್ಮಲ್ಲಿ ಯಾವ ಯುಕ್ತಿಯಿಂದ ಚೌಕಿದಾರರ ಕಣ್ಣು ತಪ್ಪಿಸಿ ತಮ್ಮ ಸನ್ನಿಧಿಯಲ್ಲಿ ಬಂದೆನೆಂಬುದು ಕೇವಲ ಅಲ್ಲಾಹನಿಗೆ ಗೊತ್ತು. ನಮ್ಮಂತಹ ಫಕೀರರು ಮತ್ತು ಬಡ ಜನರು ಯಾವ ಅಡೆತಡೆಯಿಲ್ಲದೆ ತಮ್ಮ ದರ್ಬಾರಿನಲ್ಲಿ ಹಾಜರಾಗಿ ತಮ್ಮ ಸ್ಥಿತಿಗತಿಗಳನ್ನು ಅರಸನ ಮುಂದೆ ನಿರೂಪಿಸುವ ಸುದೈವ ಯಾರಿಗುಂಟು?' ಎಂದನು. ಮಹಮದನು ಉತ್ತರಿಸಿದನು, 'ನೀನು ಇಲ್ಲಿ ನಿಶ್ಚಿಂತೆಯಿಂದ ಕುಳಿತುಕೊ, ಈ ಸಂಭಾಷಣೆಯ ವಿಷಯ ಯಾರ ಮುಂದೆಯೂ ಹೇಳಬೇಡ ಮತ್ತು ಆ ನಿರ್ದಯಿ ನಿನ್ನ ಮನೆ ಪ್ರವೇಶಿಸಿ ನಿನ್ನ ಹೆಂಡತಿಯ ಮಾನ

ಹಾನಿ ಮಾಡುವ ಪ್ರಯತ್ನ ಮಾಡಿದಾಗ ನನಗೆ ತಿಳಿಸು, ಆ ಸಮಯದಲ್ಲಿ ನಾನು ನಿನಗೆ ನ್ಯಾಯ ದೊರೆಯುವಂತೆ ಮಾಡುವೆನು ಮತ್ತು ಈ ನಿರ್ದಯಿಗೆ ಶಿಕ್ಷಿಸುವೆನು.' ಇದನ್ನು ಕೇಳಿ ಆ ವ್ಯಕ್ತಿ ಹೇಳಿದನು, 'ದಯಾಳು ರಾಜನೇ, ಯಾವ ಅಡೆತಡೆಗಳಿಲ್ಲದೆ ನನ್ನಂತಹ ಬಡವನಿಗೆ ನಿಮ್ಮನ್ನು ಕಾಣುವುದು ಸಾಧ್ಯವಿಲ್ಲ.' ಮಹಮದನು ದರ್ಬಾರದ ಸದಸ್ಯರನ್ನು ಕರೆದು ಆ ವ್ಯಕ್ತಿಯನ್ನು ಪರಿಚಯಿಸಿ ಅವರಿಗೆ ಆದೇಶಿಸಿದನು, 'ಈ ವ್ಯಕ್ತಿ ನನ್ನ ಸನ್ನಿಧಾನದಲ್ಲಿ ಬರಲು ಬಯಸಿದಾಗ, ಯಾವ ಅಡೆತಡೆಗಳಿಲ್ಲದೆ ಬರಲು ಬಿಡತಕ್ಕದ್ದು ಮತ್ತು ಈ ವ್ಯಕ್ತಿಗೆ ಯಾವ ಪ್ರಶ್ನೆಯನ್ನೂ ಕೇಳಕೂಡದು.' ಈ ದರ್ಬಾರಿಗಳು ಹೋದನಂತರ ಸುಲ್ತಾನ ಮಹಮದನು ಪಿಸು ಮಾತಿನಲ್ಲಿ ಹೇಳಿದನು,

'ನನ್ನ ಆದೇಶದಂತೆ ಈ ಜನರು ನಿನ್ನನ್ನು ಇಲ್ಲಿ ಬರಲು ತಡೆಗಟ್ಟುವ ಧೈರ್ಯ ಮಾಡರು, ಒಂದು ವೇಳೆ ನಾನು ವಿಶ್ರಮಿಸುತ್ತಿದ್ದೇನೆ ಎಂದು ಹೇಳಿ ನಿನ್ನನ್ನು ತಡೆದರೆ ಮತ್ತು ನನ್ನನ್ನಲ್ಲಿ ಬರದಂತೆ ನಿರ್ಬಂಧಿಸಿದರೆ, ನೀನು ಒಂದು ಸ್ಥಳದಿಂದ ಮರೆಯಾಗಿ ನನ್ನಲ್ಲಿಗೆ ಬಾ ಮತ್ತು ತಗ್ಗಿದ ಧ್ವನಿಯಲ್ಲಿ ನನ್ನನ್ನು ಕೂಗು. ನಿನ್ನ ಕೂಗನ್ನು ಕೇಳುತ್ತಲೇ ನಿನ್ನ ಹತ್ತಿರ ಬರುತ್ತೇನೆ.' ಈ ಸಂವಾದದ ನಂತರ ಮಹಮದನು ಆ ವ್ಯಕ್ತಿಯನ್ನು ಬೀಳ್ಕೊಟ್ಟನು ಮತ್ತು ಸ್ವತಃ ಆತನ ಬರುವಿಕೆ ನಿರೀಕ್ಷಿಸುತ್ತಿದ್ದನು.

ಆ ವ್ಯಕ್ತಿಯು ತನ್ನ ಮನೆಗೆ ಮರಳಿ ಬಂದನು. ಎರಡು ರಾತ್ರಿಗಳು ಕಳೆದರೂ ಯಾವ ಘಟನೆ ನಡೆಯಲಿಲ್ಲ ಮತ್ತು ಮಹಮದನನ್ನು ಕಾಣುವ ಅವಶ್ಯಕತೆಯು ಬೀಳಲಿಲ್ಲ. ಮೂರನೆಯ ರಾತ್ರಿ, ಸುಲ್ತಾನ ಮಹಮದನ ಸಹೋದರನ ಮಗ, ಯಥಾ ರೀತಿ ಆತನ ಮನೆಗೆ ಬಂದು ಆತನನ್ನು ಹೊಡೆದು ಹೊರದೂಡಿದನು ಮತ್ತು ಆತನ ಹೆಂಡತಿಯೊಂದಿಗೆ ಕಾಮಲೀಲೆಯಲ್ಲಿ ನಿರತನಾದನು. ಆಗ ಆ ವ್ಯಕ್ತಿಯು ಕೂಡಲೇ ಓಡುತ್ತಾ ರಾಜ ಮಹಲಿನ ಕಡೆ ಹೋಗಿ ದರ್ಬಾರಿಗಳಿಗೆ ತಾನು ಬಂದ ಸಮಾಚಾರ ತಿಳಿಸಲು ಕೇಳಿದನು. ದರ್ಬಾರಿಗಳು, ರಾಜನು ಈಗ ದಿವಾನ ಖಾನೆಯಲ್ಲಿ ಇರದೆ ಒಳ ಮನೆಯಲ್ಲಿದ್ದ ಕಾರಣ ಅವರಿಗೆ ಸಮಾಚಾರ ತಿಳಿಸಲು ಸಾಧ್ಯವಿಲ್ಲವೆಂದು ಹೇಳಿದರು. ಆ ವ್ಯಕ್ತಿಯು ನಿರಾಶನಾಗಿ ಸುಲ್ತಾನ ಮಹಮದನು ಹೇಳಿದ ಸ್ಥಾನದಲ್ಲಿ ಹೋಗಿ ತಗ್ಗಿದ ಧ್ವನಿಯಲ್ಲಿ 'ಪ್ರಭೂ, ಈ ಸಮಯ ತಾವು ಏನು ಮಾಡುತ್ತಿದ್ದೀರಿ?' ಮಹಮದನು ಉತ್ತರಿಸಿದನು, 'ನಿಲ್ಲು ನಾನು ಬರುತ್ತೇನೆ'. ಕೆಲ ಸಮಯದ ನಂತರ ಮಹಮದನು ಹೊರಗೆ ಬಂದನು ಮತ್ತು ಆ ವ್ಯಕ್ತಿಯ ಜೊತೆಗೆ ಆತನ ಮನೆಗೆ ಹೋದನು. ಅಲ್ಲಿ ತನ್ನ ಸಹೋದರನ ಮಗನು ಈ ಬಡವನ ಹೆಂಡತಿಯೊಂದಿಗೆ ಮಲಗಿದುದನ್ನು ಮಹಮದನು ತನ್ನ ಕಣ್ಣಾರೆ ನೋಡಿದನು. ದೀಪವು ತಲೆಯ ಹತ್ತಿರ ಬೆಳಗುತ್ತಿತ್ತು. ಮಹಮದನು ದೀಪವನ್ನು ಆರಿಸಿದನು. ಮಹಮದನು ತನ್ನ ಜಂಬೆಯನ್ನು ತೆಗೆದು ಈ ನಿರ್ದಯಿಯ ರುಂಡವನ್ನು ದೇಹದಿಂದ ಬೇರೆ ಮಾಡಿದನು. ಬಡವನ ಬಳಿ ಬಂದ ಮಹಮದನು ಹೇಳಿದನು, 'ಕೂಡಲೆ

ನನಗೆ ಒಂದು ಗುಟುಕು ನೀರು ಸಿಕ್ಕರೆ ತಂದು ಕೊಡು, ನಾನು ನನ್ನ ಬಾಯಾರಿಕೆಯನ್ನು ನೀಗಿಸಿಕೊಳ್ಳುವೆನು.'

ಆ ಬಡವ್ಯಕ್ತಿಯು ಕೂಡಲೇ ನೀರನ್ನು ತಂದು ಸುಲ್ತಾನನಿಗೆ ನೀಡಿದನು. ಮಹಮದನು ನೀರು ಕುಡಿದನು ಮತ್ತು ತನ್ನ ಸ್ಥಾನದಿಂದ ಎದ್ದು ಕಂಗಾಲಾದ ವ್ಯಕ್ತಿಯನ್ನು ಕುರಿತು 'ಇನ್ನು ನೀನು ನಿಶ್ಚಿಂತನಾಗಿ ವಿಶ್ರಮಿಸು. ನಾನು ಹೋಗುತ್ತೇನೆ.' ಎಂದು ಹೇಳಿ ಹೊರಟು ಹೋಗಲು ಅನುವಾದನು. ಆದರೆ ಆ ವ್ಯಕ್ತಿ ಬಾದಶಹನ ಉಡುಪನ್ನು ಹಿಡಿದು 'ಮಹಾಪ್ರಭೂ, ನಿಮಗೆ ಈ ವೈಭವಯುತ ಸ್ಥಾನವನ್ನು ನೀಡಿದ ಅಲ್ಲಾಹನ ಆಣೆ, ತಾವು ದೀಪವನ್ನು ಆರಿಸಿ, ಆ ನಿರ್ದಯಿಯ ರುಂಡವನ್ನು ದೇಹದಿಂದ ಬೇರ್ಪಡಿಸಿದ ತಕ್ಷಣ ನೀರು ಕೇಳಿ ಕುಡಿಯುವ ಕಾರಣವೇನು ಮತ್ತು ಈ ವಿಷಯವನ್ನು ಹೇಗೆ ಮುಗಿಸಿದಿರಿ.' ಆಗ ಮಹಮದನು, 'ನಿನಗೆ ಈ ನಿರ್ದಯಿಯಿಂದ ಮುಕ್ತಿಪಡಿಸಿದ್ದೇನೆ ಮತ್ತು ಈ ನಿರ್ದಯಿಯ ರುಂಡವನ್ನು ನಾನು ನನ್ನ ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದೇನೆ. ದೀಪದ ಬೆಳಕಿನಲ್ಲಿ ನನ್ನ ಸಹೋದರನ ಮಗನ ಮುಖ ನನಗೆ ಕಾಣದಂತಾಗಲಿ ಮತ್ತು ಆತನ ಮೇಲೆ ಕನಿಕರ ಹುಟ್ಟಿ ನಿನಗೆ ನ್ಯಾಯ ದೊರಕದಂತೆ ಆಗ ಕೂಡದೆಂದು ದೀಪವನ್ನಾರಿಸಿದೆ. ನೀರನ್ನು ಕುಡಿದ ಕಾರಣವೆಂದರೆ, ನೀನು ನಿನ್ನ ಪರಿಸ್ಥಿತಿಯನ್ನು ನಿರೂಪಿಸಿದಾಗ ನಿನಗೆ ಸಂಪೂರ್ಣ ನ್ಯಾಯ ಒದಗಿಸುವವರೆಗೆ ನಾನು ಅನ್ನ, ನೀರನ್ನು ಸ್ವೀಕರಿಸುವುದಿಲ್ಲ ಎಂದು ಪಣ ತೊಟ್ಟಿದ್ದೆನು.' ಎಂದು ಹೇಳಿದನು. ಇತಿಹಾಸಗಳಲ್ಲಿ ರಾಜರುಗಳ ನ್ಯಾಯ ಮಾಡುವ ಕುರಿತು ಬಹಳಷ್ಟು ಕಥೆಗಳು ಬರೆದಿದ್ದಾರೆ, ಆದರೆ ಈ ಬಗೆಯ ಕಥೆ ಯಾವ ರಾಜನ ಬಗೆಗೂ ಕೇಳಲು ಸಿಗದು. ಈ ಘಟನೆಯಿಂದ ಇದನ್ನು ಓದುಗರೇ ಊಹಿಸಬಹುದು. ವಲ್ಲಾ-ಆಲಂ-ಬಲ್-ಸವಾಬ.

ಶೇಖ ಅಬೂಲ್-ಹಸನ್-ಖಿರ್‌ಖಾನಿಯ ಸಂದರ್ಶನ:

'ಬನಾಯಗೀತಿ ಇತಿಹಾಸ'ದಲ್ಲಿ ಹೇಳಲಾದುದೇನೆಂದರೆ, ಸುಲ್ತಾನ ಮಹಮೂದನು ಖಿರಾಸಾನಕ್ಕೆ ಹೋದನೊ, ಆಗ ಆತನ ಮನಸ್ಸಿನಲ್ಲಿ ಶೇಖ ಅಬೂಲ್-ಹಸನ-ಖಿರಖಾನಿ (ನಕ್ಷಬಂದಿಯಾದ ಒಬ್ಬ ಪ್ರಖ್ಯಾತ ಸಂತ) ಅವರನ್ನು ಸಂದರ್ಶಿಸುವ ವಿಚಾರ ಬಂದಿತ್ತು. ಆದರೆ ಈ ಬಯಕೆಯೊಂದಿಗೆ ಭಯವು ಕೂಡ ಸೇರಿಕೊಂಡಿತ್ತು. ಹೀಗಾಗಿ ಆ ಹಿರಿಯರನ್ನು ಕಾಣಲು ಬಂದಿರಲಿಲ್ಲ. ಏಕೆಂದರೆ, ರಾಜಕೀಯ ಕಾರಣಗಳಿಂದಾಗಿ ಈ ಪ್ರಾಂತದ ಪ್ರಯಾಣವನ್ನು ಮಾಡಿರುವುದರಿಂದ, ಭಗವಂತನ ವಿಶೇಷ ಭಕ್ತರ ಸಂದರ್ಶನವನ್ನು ಮಾಡುವುದು ಯಾತ್ರಿಗೆ ಅಗೌರವ ಸೂಚಿಸಿದಂತಾಗುತ್ತದೆ, ಅದಕ್ಕಾಗಿ ಈತನು ಶೇಖ ಅಬೂಲ್-ಹಸನರ ಸಂದರ್ಶನವನ್ನು ಬಿಡಲು ಇಚ್ಛಿಸಿ ಖಿರಾಸಾನಿಂದ ಹಿಂದುಸ್ತಾನದ ಕಡೆಗೆ ತೆರಳಿದ್ದನು. ಅಲ್ಲಿ ಯುದ್ಧಗಳಾದ ನಂತರ ಘಜನಿಗೆ ಹಿಂದಿರುಗಿದನು. ಘಜನಿಗೆ ಬಂದ ನಂತರ ಅಬೂಲ್-ಹಸನ-

ಖರಖಾನಿ ಯಾತ್ರೆ ಮಾಡಲು ನಿರ್ಧರಿಸಿ ಖರಖಾನಿಗೆ ಹೊರಟನು. ಮಹಮದನು ಖರಖಾನ ಸೇರಿದ ನಂತರ, ಒಬ್ಬ ವ್ಯಕ್ತಿಯನ್ನು ಶೇಖ ಸಾಹೇಬರ ಸೇವೆಯಲ್ಲಿ ಈ ಸಂದೇಶದೊಂದಿಗೆ ಕಳುಹಿದನು. 'ರಾಜನು ತಮ್ಮನ್ನು ಸಂದರ್ಶಿಸಲು ಘಜನಿಯಿಂದ ಹೊರಟು ಇಲ್ಲಿಗೆ ಬಂದಿದ್ದಾನೆ. ಸಂಪ್ರದಾಯದಂತೆ ನೀವು ಕೂಡ ತಮ್ಮ ನಿವಾಸದಿಂದ ಹೊರಬಂದು ನನ್ನನ್ನು ಸ್ವಾಗತಿಸಿರಿ.' ಒಂದು ವೇಳೆ ಶೇಖರು ತಮ್ಮ ನಿವಾಸದಿಂದ ಹೊರಬರಲು ನಿರಾಕರಿಸಿದರೆ ಅವರಿಗೆ ಅಲ್ಲಾಹನ ಆದೇಶವನ್ನು ತಿಳಿಸಲು ಮಹಮದನು ಆ ವ್ಯಕ್ತಿಗೆ ಹೇಳಿದನು, 'ವಿಶ್ವಾಸಿಸುವ ಸುಜನರೇ, ಅಲ್ಲಾಹನ ಸೇವೆ ಮಾಡಿ, ರಸೂಲನ ಸೇವೆಯನ್ನು ಮಾಡಿ, ಏಕೆಂದರೆ ಅವರು ನಿಮ್ಮನ್ನು ಆಳುತ್ತಾರೆ.' ಪ್ರತಿನಿಧಿಯು ಹಜರತ ಶೇಖರ ಸನ್ನಿಧಾನದಲ್ಲಿ ಹಾಜರಾಗಿ ಸುಲ್ತಾನ ಮಹಮದನ ಸಂದೇಶವನ್ನು ತಿಳಿಸಿದನು. ಶೇಖ ಸಾಹೇಬರು ತನ್ನ ನಿವಾಸದಿಂದ ಹೊರಬರಲು ನಿರಾಕರಿಸಿ, ಈ ಸೇವೆಯಲ್ಲಿ ನಮ್ರಹೀನರೆಂದು ಸುಲ್ತಾನರು ತಿಳಿಯಲಿ ಎಂದು ಹೇಳಿದರು. ಪ್ರತಿನಿಧಿಯು ಮಹಮದನ ಆದೇಶದ ಪ್ರಕಾರ ಮೇಲೆ ಉಲ್ಲೇಖಿಸಿದ 'ಆಯತ'ನ್ನು ಓದಿ ಹೇಳಿದನು. ಅದಕ್ಕೆ ಉತ್ತರವಾಗಿ ಶೇಖ ಸಾಹೇಬನು ಹೇಳಿದುದೇನೆಂದರೆ, 'ಮಹಮದನಿಗೆ ಹೋಗಿ ತಿಳಿಸಿರಿ, ಇದುವರೆಗೆ ನಾನು ಅಲ್ಲಾಹನ ಸೇವೆಯಲ್ಲಿ ಎಷ್ಟು ನಿರತನಾಗಿದ್ದೆನೆಂದರೆ ರಸೂಲರ ಸೇವೆ ಮಾಡುವ ಹಂತದವರೆಗೆ ಹೋಗಲಾಗದುದಕ್ಕೆ ಬಹಳ ಮನನೊಂದಿದೆ. ಈ ಪರಿಸ್ಥಿತಿಯಲ್ಲಿ ನಾನು ರಾಜರ ಸೇವೆಯ ಕಡೆಗೆ ಹೇಗೆ ಲಕ್ಷ್ಯ ಕೊಡಲು ಸಾಧ್ಯ? ಪ್ರತಿನಿಧಿಯು ಹಿಂದಿರುಗಿದನು ಮತ್ತು ಶೇಖ ಸಾಹೇಬರ ಉತ್ತರವನ್ನು ಸುಲ್ತಾನನಿಗೆ ತಿಳಿಸಿದನು. ಅದನ್ನು ಕೇಳಿ ಮಹಮದನು ಬಹಳ ಖೇದಗೊಂಡನು. ಪ್ರತಿನಿಧಿಗೆ ಹೇಳಿದನು, 'ನಡೆಯಿರಿ ನಾನು ಸ್ವತಃ ಶೇಖ ಸಾಹೇಬರಲ್ಲಿಗೆ ಹೋಗಿ ಸಂದರ್ಶನದ ಸಂತಸವನ್ನು ಮತ್ತು ಯಾತ್ರಾ ಫಲವನ್ನು ಪಡೆಯೋಣ. ಈ ಸತ್ಯಾರಾಧಕನು ನಾವು ಗ್ರಹಿಸಿದಂತೆ ಇಲ್ಲ. ಈತನನ್ನು ನಾವು ತಪ್ಪಾಗಿ ಗ್ರಹಿಸಿದ್ದೇವೆ. ಹೀಗೆ ಹೇಳಿ ಸುಲ್ತಾನ ಮಹಮದನು ಹಜರತ ಶೇಖರ ಕಡೆಗೆ ಹೊರಟನು. 'ಐಯಾಜ'ನ ಉಡುಪನ್ನು ತಾನು ಧರಿಸಿ, ಐಯಾಜನಿಗೆ ತನ್ನ ಉಡುಪನ್ನು ಕೊಟ್ಟು, ಹತ್ತು ಮಹಿಳೆಯರಿಗೆ ಗುಲಾಮರ ಉಡುಪನ್ನು ಕೊಟ್ಟು ಜೊತೆಯಲ್ಲಿ ಕರೆದುಕೊಂಡು ಶೇಖರ ದರ್ಶನಕ್ಕೆ ಹೊರಟನು.

ಈ ಜನರು ಶೇಖ ಸಾಹೇಬನ ಸೇವೆಯಲ್ಲಿ ಹಾಜರಾಗಿ, ಅವರಿಗೆ 'ಸಲಾಂ-ಅಲೈಕಂ' ಮಾಡಿದರು. ಶೇಖನು ಉತ್ತರವೇನೊ ಕೊಟ್ಟನು, ಆದರೆ ಮರ್ಯಾದೆ ಕೊಡಲು ಎದ್ದು ನಿಲ್ಲಲಿಲ್ಲ. ಐಯಾಜನ ಬಟ್ಟೆಗಳನ್ನು ತೊಟ್ಟ ಮಹಮದನ ಕಡೆ ಗಮನ ಹರಿಸಲಿಲ್ಲ, ಮಹಮದನ ಬಟ್ಟೆಗಳನ್ನು ತೋಟ್ಟ ಐಯಾಜನ ಕಡೆಗೆ ಗಮನ ಹರಿಸಿ, ಏನನ್ನೋ ಹೇಳಲು ಸಿದ್ಧರಾದರು. ಅದಕ್ಕಾಗಿ ಐಯಾಜ (ಅಂದರೆ ಮಹಮದ)ನು ಶೇಖ ಸಾಹೇಬರಿಗೆ ಕೇಳಿದನು, 'ತಾವು ರಾಜನಿಗೆ ಗೌರವ ಸೂಚಿಸಲು ಏಕೆ ಎದ್ದು ನಿಲ್ಲಲಿಲ್ಲ, ಮತ್ತು ಆತನ ಕಡೆ ಗಮನ ಹರಿಸಲಿಲ್ಲ? ಅಹಂಕಾರದ ಬಲೆಯಲ್ಲಿ

ಸಿಲುಕಿದವರ ಪ್ರಪಂಚ ಇದೇ ರೀತಿ ರಾಜನನ್ನು ಕಡೆಗಾಣಿಸುತ್ತದೆಯೇ?' ಶೇಖ ಸಾಹೇಬರು ಉತ್ತರಿಸಿದರು, 'ಹಾಂ ಇದುವೇ ಬಲೆ ಇದೆ. ಆದರೆ ನಿನ್ನ ಈ ವ್ಯಕ್ತಿಯು ಈ ಬಲೆಯಲ್ಲಿ ಸಿಕ್ಕಿಬಿದ್ದಿಲ್ಲ. ನೀನು ಮುಂದೆ ಬಾ, ಏಕೆಂದರೆ, ಈ ಬಲೆಗೆ ಸಿಲುಕಿರುವ ನೀನು ಬೇಟೆಯಾಗಿದ್ದಿ'. ಸುಲ್ತಾನ ಮಹಮದನು ಶೇಖ ಸಾಹೇಬರಿಗೆ ಸತ್ಯ ತಿಳಿದಿದೆ ಎಂದು ಅರಿವಾದೊಡನೆ, ಅತಿ ವಿನಮ್ರತೆಯಿಂದ ಅವರ ಮುಂದೆ ಹೋಗಿ ಕುಳಿತನು ಮತ್ತು ಅವರೊಂದಿಗೆ ಹೇಳಿದನು, 'ನನಗೆ ಏನನ್ನಾದರೂ ಹೇಳಿ'. ಶೇಖ ಸಾಹೇಬರು ಗುಲಾಮರ ಉಡುಪಿನಲ್ಲಿ ಕುಳಿತ್ತಿದ್ದ ಮಹಿಳೆಯರನ್ನು ತೋರಿಸಿ, 'ಜೀವವಿಲ್ಲದ ಇವರನ್ನು ಇಲ್ಲಿಂದ ಹೊರಗೆ ಕಳುಹಿಸು.' ಸುಲ್ತಾನನು ಆ ಮಹಿಳೆಯರನ್ನು ಹೊರಗೆ ಕಳುಹಿಸಿ ಶೇಖ ಸಾಹೇಬರ ಜೊತೆಗೆ ಮಾತನಾಡಿ 'ಹಜ್ರತ ಬಾಯ್ಜಯದ–ಬತಾಮಿ' ಯಾವುದಾದರೂ 'ಹೀಕಾಯತ್' ನನಗೆ ಹೇಳಿರಿ. ಶೇಖ ಸಾಹೇಬರು ಹೇಳಿದರು, 'ಬಾಯ್ಜಯದನು ಹೇಳಿದುದೇನೆಂದರೆ, ಯಾರು ನನ್ನನ್ನು ನೋಡುವರೋ, ಅವರು ದೌರ್ಜನ್ಯದ ಸಮಸ್ತ ಕೆಟ್ಟ ಗುಣಗಳಿಂದ ರಕ್ಷಿಸಲ್ಪಡುತ್ತಾರೆ.' ಇದಾದ ಮೇಲೆ ಮಹಮದನು ಪ್ರಶ್ನಿಸಿದನು, 'ಬಾಯ್ಜಯದನ ಮಟ್ಟವು ಹಜರತ ಮೊಹ್ಮದ ಸಲೀಅಲ್ಲಾ ಅಲೇ–ವ–ಸಲಂಕ್ಕಿಂತಲೂ ಹೆಚ್ಚಿದೆ ಎಂಬುದು ನನಗೆ ತಿಳಿದಿಲ್ಲ. ನಬೀ ಕರೀಮ ಸಲೀ ಅಲ್ಲಾ ಅಲೇ–ವ–ಸಲಂ ಅವರನ್ನು ನೋಡುವವರಲ್ಲಿ ಎಲ್ಲರೂ ಒಳ್ಳೆಯವರಾಗಿರಲಿಲ್ಲ. 'ಅಬೂ ಜಹಲ' ಮತ್ತು 'ಅಬೂ ಹಲಬ'ರಂತು ಕಾಫಿರ ಇದ್ದರು. ಆದರೆ ಬಾಯ್ಜಯದನನ್ನು ನೋಡುವ ದುರ್ಜನರಲ್ಲಿ ಒಳ್ಳೆಯ ವ್ಯಕ್ತಿ ಹೇಗಾಗುತ್ತಾನೆ?' ಶೇಖ ಸಾಹೇಬರು ಸುಲ್ತಾನ ಮಹಮದನ ಈ ಮಾತನ್ನು ಕೇಳಿ 'ನೀನು ನಿನ್ನ ಅಂತಸ್ತನ್ನು ಮೀರಿ ಮಾತಾಡಬೇಡ. ಗೌರವದ ಮಿತಿಯಲ್ಲಿರು, ಅಗೌರವದಿಂದ ಪಿತೃಲೋಕದಲ್ಲಿ ಪಾದಾರ್ಪಣೆ ಮಾಡಬೇಡ. ಹಜರತ ಮೊಹ್ಮದ ಸಲೀಅಲ್ಲಾ ಅಲೇ–ವಸಲಂ ಇವರಿಗೆ ನಾಲ್ಕು ಜನರನ್ನು ಉಳಿದು ಯಾರೂ ಅವರ ದರ್ಶನವನ್ನು ಪಡೆದಿಲ್ಲವೆಂಬುದು ನೀನು ತಿಳಿದುಕೊ. ಕುರಾನ ಕರೀಮದ ಈ 'ಆಯತ'ನ್ನು ನೀನು ಕೇಳಿಲ್ಲವೆ, 'ನಿನ್ನನ್ನು ನೋಡುವ ಜನರನ್ನು ನೀನು ನೋಡುತ್ತೀಯೆ, ಆದರೆ ಅವರು ನಿಜವಾಗಿ ನಿನ್ನನ್ನು ನೋಡಲಾರರು.' ಹಜರತ ಶೇಖರ ಈ ಮಾತು ಬಹಳ ಇಷ್ಟವಾಗಿ ಈತನು ಹೇಳಿದನು. 'ನನಗೇನಾದರೂ ಉಪದೇಶ ಮಾಡಿ.' ಶೇಖ ಸಾಹೇಬರು ಉತ್ತರವಾಗಿ, 'ನೀನು ನಾಲ್ಕು ಮಾತುಗಳನ್ನು ಸ್ವೀಕರಿಸು; ಮೊದಲನೆಯದಾಗಿ ತ್ಯಜಿಸುವುದು (ಅಪರಿಗ್ರಹ), ಎರಡನೆಯದಾಗಿ ಜನರೊಂದಿಗೆ ನಮಾಜ ಮಾಡುವುದು; ಮೂರನೆಯದಾಗಿ ದಾನ ಮಾಡುವುದು ಮತ್ತು ಕೊನೆಯದಾಗಿ ಅಂತಃಕರಣ ತೋರುವುದು.' ಎಂದು ಹೇಳಿದರು. ಇದಾದ ನಂತರ ಮಹಮದನು ಶೇಖ ಸಾಹೇಬನಿಗೆ ಹೇಳಿದನು, 'ನನಗಾಗಿ ಪ್ರಾರ್ಥಿಸಿ.' ಶೇಖ ಸಾಹೇಬನು, 'ನಾನು ಐದು ಸಲ ನಮಾಜ ಮಾಡಿದ ನಂತರ ಈ ಪ್ರಾರ್ಥನೆಯನ್ನು ಮಾಡುತ್ತೇನೆ' "ಹೇ ಪ್ರಭು, ನಂಬಿದ ಎಲ್ಲರನ್ನು ನೀನು ಕ್ಷಮಿಸು" ಮಹಮದನೆಂದನು, 'ಈ ಪ್ರಾರ್ಥನೆಯು

ಸಾಮಾನ್ಯವಾಗಿದೆ. ನನಗಾಗಿ ವಿಶೇಷ ಪ್ರಾರ್ಥನೆಯನ್ನು ಮಾಡು.' ಶೇಖ ಸಾಹೇಬರು ನುಡಿದರು, 'ಹೋಗು ನಿನ್ನ ಕೊನೆಯು ಮಹಮದಾಗಲಿ.'

ಇದಾದ ಮೇಲೆ, ಸುಲ್ತಾನ ಮಹಮದನು ರೂಪಾಯಿಗಳುಳ್ಳ ಒಂದು ಚೀಲವನ್ನು ಶೇಖ ಸಾಹೇಬರ ಸೇವೆಯಲ್ಲಿ ಸಮರ್ಪಿಸಿದನು. ಶೇಖನು ಜೌ ನಿಂದ ತಯಾರಿಸಿದ ರೊಟ್ಟಿಯನ್ನು ಇಟ್ಟು ಅದನ್ನು ತಿನ್ನಲು ಹೇಳಿದರು. ಮಹಮದನು ರೊಟ್ಟಿಯು ತೀರಾ ಒಣಗಿದ್ದನ್ನು ಕಂಡನು. ಅದನ್ನು ತಿನ್ನಲು ಪ್ರಯತ್ನಿಸಿದನು. ಆದರೆ ಅದು ಹಲ್ಲಿಗೆ ನುರಿಯದೆ, ಗಂಟಲಲ್ಲಿ ಕೂಡ ಇಳಿಯಲಿಲ್ಲ. ಶೇಖರು ಕೇಳಿದರು, 'ಈ ರೊಟ್ಟಿ ಗಂಟಲಲ್ಲಿ ಸಿಕ್ಕಿಬೀಳುತ್ತದೆಯೇ?' ಮಹಮದುನು ಹೌದು ಎಂದನು. ಶೇಖರು ನುಡಿದರು, 'ಯಾವ ರೀತಿ ಒಣಗಿದ ರೊಟ್ಟಿಯು ನಿನ್ನ ಗಂಟಲಲ್ಲಿ ಇಳಿಯುದಿಲ್ಲವೋ, ಅದರಂತೆ ನೀನು ನೀಡಿದ ಹಣದ ಚೀಲವು ನಮ್ಮ ಗಂಟಲಲ್ಲಿ ಇಳಿಯದು. ಇದನ್ನು ನಮ್ಮ ಎದುರಿನಿಂದ ಎತ್ತಿಕೊ, ಏಕೆಂದರೆ ಅದನ್ನು ನಾವು ಬಹಳ ಹಿಂದೆಯೇ ತ್ಯಜಿಸಿದ್ದೇವೆ.' ಶೇಖ ಸಾಹೇಬರ ಜ್ಞಾಪಕಾರ್ಥವಾಗಿ ಯಾವುದಾದರೂ ವಸ್ತುವನ್ನು ಕೊಡಲು ಮಹಮದ ಕೇಳಿದನು. ಅವರು ತಮ್ಮ ಒಂದು ತೇಪೆ ಹಾಕಿದ ಉಡುಪನ್ನು ಕೊಟ್ಟು ಬೀಳ್ಕೊಟ್ಟರು. ಮಹಮದನು ಅವರಿಂದ ಬೀಳ್ಕೊಂಡು ಎದ್ದು ನಿಂತಾಗ ಶೇಖ ಸಾಹೇಬರು ಗೌರವದಿಂದ ಎದ್ದು ನಿಂತರು. ಮಹಮದನು ಕೇಳಿದನು, 'ನಾನು ತಮ್ಮಲ್ಲಿಗೆ ಬಂದಾಗ ತಾವು ನನ್ನನ್ನು ಗಮನಿಸಲಿಲ್ಲ. ಆದರೆ ನೀವು ಈಗ ನನಗಾಗಿ ಎದ್ದು ನಿಂತುಕೊಂಡಿದ್ದಿರಿ. ಇದರ ಕಾರಣವೇನು?' ಶೇಖ ಸಾಹೇಬರು ಉತ್ತರಿಸಿದರು, 'ನೀನು ನನ್ನ ಹತ್ತಿರ ಬಂದಾಗ ನಿನ್ನಲ್ಲಿ ರಾಜನ ಗರ್ವವು ತುಂಬಿತ್ತು ಮತ್ತು ನನ್ನನ್ನು ಪರೀಕ್ಷಿಸಲು ಬಂದಿದ್ದಿ. ಆದರೆ ಈಗ ನೀನು ವಿನಮ್ರನಾಗಿ ಮರಳಿ ಹೋಗುತ್ತಿದ್ದಿ.'

ಶೇಖರು ಕೊಟ್ಟ ತೇಪೆ ಬಟ್ಟೆಯ ಪವಾಡ:

ಶೇಖ ಸಾಹೇಬರನ್ನು ಬೀಳ್ಕೊಟ್ಟನಂತರ ಸುಲ್ತಾನ ಮಹಮದನು ಮರಳಿ ಘಜನಿಗೆ ಬಂದನು ಮತ್ತು ಅವರು ಕೊಟ್ಟ ತೇಪೆ ಬಟ್ಟೆಯನ್ನು ಬಹಳ ಜೋಪಾನವಾಗಿ ತನ್ನ ಹತ್ತಿರ ಇಟ್ಟುಕೊಂಡನು. ಮಹಮದನು ಸೋಮನಾಥದ ಮೇಲೆ ದಾಳಿ ಮಾಡಿದಾಗ, ಅಲ್ಲಿ ಪ್ರೇಮದೇವ ಹಾಗು ವಾ-ಬಸೇಲೇಂನೊಂದಿಗೆ ಯುದ್ಧವಾದ ಸಂದರ್ಭದಲ್ಲಿ ಮಹಮದನಿಗೆ ಮುಸಲ್ಮಾನರ ಸೈನ್ಯದ ಮೇಲೆ ಹಿಂದೂ ಸೈನ್ಯವು ಗೆಲುವು ಸಾಧಿಸುವ ಆಪತ್ತು ಕಂಡುಬಂದಾಗ, ಆ ಕಳವಳದ ಪರಿಸ್ಥಿತಿಯಲ್ಲಿ ಶೇಖ ಸಾಹೇಬರ ತೇಪೆ ಬಟ್ಟೆಯನ್ನು ಕೈಯಲ್ಲಿ ಹಿಡಿದು 'ಸೀಜದಾ' (ನಮಾಜ ಮಾಡುವ ಪೂರ್ವದಲ್ಲಿ ಹಣೆಯನ್ನು ಭೂಮಿಗೆ ಅಂಟಿಸುವ ಕ್ರಿಯೆ.) ಮಾಡಿ ಪರಮಾತ್ಮನನ್ನು ಪ್ರಾರ್ಥಿಸಿದನು. 'ದೇವರೆ ಈ ತೇಪೆ ಹಾಕಿದ ಬಟ್ಟೆಯ ಮಾಲಕನ ರಕ್ಷೆಯಲ್ಲಿದ್ದೇನೆ. ನನಗೆ ಹಿಂದುಗಳ ವಿರುದ್ಧ ಗೆಲುವನ್ನು ಕೊಡಿಸು. ಇಲ್ಲಿ ಸಿಗುವ ಶ್ರಮರಹಿತ ಹಣವೆಲ್ಲವನ್ನು ಬಡವರು

ಮತ್ತು ದೀನರಲ್ಲಿ ಹಂಚಿ ಬಿಡುವೆನೆಂದು ಧೃಢ ನಿಶ್ಚಯಮಾಡುತ್ತೇನೆ.' ಇತಿಹಾಸಕಾರರ ಹೇಳಿಕೆ ಏನೆಂದರೆ ಈ ಪ್ರಾರ್ಥನೆಯ ಪರಿಣಾಮವಾಗಿ ಆಕಾಶದ ಒಂದು ಭಾಗದಲ್ಲಿ ಕಪ್ಪು ಮೋಡಗಳು ತೇಲಿ ಸಮಸ್ತ ಆಕಾಶವನ್ನು ಆಕ್ರಮಿಸಿ ಗುಡುಗು ಮಿಂಚಿನ ಕಾರಣ ಹಿಂದುಗಳ ಸೈನ್ಯವು ಚೆದರಿಹೋಯಿತು ಮತ್ತು ಎಷ್ಟೊಂದು ಕತ್ತಲು ಕವಿಯಿತೆಂದರೆ ಹಿಂದುಗಳು ಈ ಪರಿಸ್ಥಿತಿಯಲ್ಲಿ ತಮ್ಮ ತಮ್ಮಲ್ಲಿಯೇ ಕಾದಾಡಿದರು. ಅದಕ್ಕಾಗಿ ಪ್ರೇಮದೇವನ ಸೈನ್ಯವೂ ರಣರಂಗವನ್ನು ಬಿಟ್ಟು ಓಡಿಹೋಯಿತು ಮತ್ತು ಮುಸಲ್ಮಾನರಿಗೆ ಹಿಂದುಗಳ ವಿರುದ್ಧ ಗೆಲುವಾಯಿತು.

ನಾನು ಒಂದು ಗೌರವಾನ್ವಿತ ಇತಿಹಾಸದ ನಿರೂಪಣೆಯಲ್ಲಿ ಓದಿರುವದೇನೆಂದರೆ, ಸುಲ್ತಾನ ಮಹಮದನು ಶೇಖ ಅಬುಲ್-ಹಸನ-ಖರಖಾನಿ ನೀಡಿದ ತೇಪೆ ಬಟ್ಟೆಯನ್ನು ಕೈಯಲ್ಲಿ ಹಿಡಿದುಕೊಂಡು ಪರಮಾತ್ಮನನ್ನು ಪ್ರಾರ್ಥಿಸಿದ ಅದೇ ರಾತ್ರಿ ಕನಸಿನಲ್ಲಿ, ಶೇಖ ಅಬೂಲ್-ಹಸನರನ್ನು ನೋಡಿದನು. ಅವರು ಮಹಮದನಿಗೆ ನುಡಿದರು, 'ಮಹಮದ್, ನೀನು ನನ್ನ ತೇಪೆ ಹಾಕಿದ ಬಟ್ಟೆಯ ಗೌರವವನ್ನು ಕಡಿಮೆ ಮಾಡಿದೆ. ಒಂದು ವೇಳೆ ನೀನು ಗೆಲುವಿನ ಪ್ರಾರ್ಥನೆ ಮಾಡದೆ ಸಮಸ್ತ ಮುಸಲ್ಮಾನರಲ್ಲದವರನ್ನು ಇಸ್ಲಾಮ ಮತಕ್ಕೆ ತರಲು ಪ್ರಾರ್ಥಿಸಿದ್ದರೆ ಅದು ಕೂಡ ಸ್ವೀಕಾರವಾಗುತ್ತಿತ್ತು.'

'ಜಾಮಾ-ಅಲ್-ಹಕಾಯಾತ' ದಲ್ಲಿ ಬರೆದುದೇನೆಂದರೆ, ಸುಲ್ತಾನ ಮಹಮದನು ಶೇಖ ಸಾಹೇಬರ ಸನ್ನಿಧಿಗೆ ಬಂದಾಗ, ಆತನು ಶೇಖ ಸಾಹೇಬರನ್ನು ಕುರಿತು ಹೇಳಿದನು, 'ಖರಸ್ಥಾನನಲ್ಲಿ ನನಗೆ ಬಹಳ ಅವಶ್ಯಕವಾದ ಕೆಲಸವಿದ್ದ ಕಾರಣ ನನ್ನ ಎಲ್ಲಾ ಕೆಲಸಗಳನ್ನು ಬಿಟ್ಟು ಘಜನಿಯನ್ನು ತೊರೆದು ಕೇವಲ ತಮ್ಮ ಸಂದರ್ಶನದ ಉದ್ದೇಶದಿಂದ ಬಂದಿದ್ದೇನೆ.' ಶೇಖ ಸಾಹೇಬರು ಉತ್ತರಿಸಿದರು, 'ಮಹಮದ್, ನೀನು ಘಜನಿಯಲ್ಲಿ ನನ್ನ ಯಾತ್ರೆಗಾಗಿ ನಿಶ್ಚಯಿಸಿದುದಾದರೆ ಈ ಅನುಗ್ರಹಕ್ಕಾಗಿ ಜನರು ಕಾಬಾದಿಂದ ನಿನ್ನ ಯಾತ್ರೆಗಾಗಿ ಧೃಡ ನಿಶ್ಚಯಮಾಡಿ ಘಜನಿಗೆ ಬಂದರೆ ಏನಾಶ್ಚರ್ಯ?' ಸುಭಾನ್ ಅಲ್ಲಾ! ಸುಲ್ತಾನ ಮಹಮದನ ಅಂತಸ್ತಿನ ಅನುಮಾನವು ಇದರಿಂದಲೇ ಆಗುತ್ತದೆ. ಶೇಖ ಅಬೂಲ್-ಹಸನ-ಖರಖಾನಿ ಇವರು ಮಹಮದನನ್ನು ಕುರಿತು ಈ ಮಾತನ್ನು ಹೇಳಿದ್ದಾರೆ.

ಒಬ್ಬ ಜೂಜುಗಾರನ ರೋಚಕ ಘಟನೆ:

'ರೌಜತುಸ್ಸಫಾ' ಎಂಬ ಕೃತಿಯಲ್ಲಿ ಈ ಘಟನೆ ಉಲ್ಲೇಖಿಸಲಾಗಿದೆ. ಒಂದು ದಿನ ಸುಲ್ತಾನ ಮಹಮದನು ತನ್ನ ಮಹಲಿನ ಮೇಲ್ಛಾವಣಿಯ ಮೇಲೆ ಕುಳಿತು ಮೈದಾನವನ್ನು ವೀಕ್ಷಿಸುತ್ತಿದ್ದನು. ಆಗ ಇದ್ದಕ್ಕಿದ್ದಂತೆ ಈತನ ದೃಷ್ಟಿ ಬಾಜಾರಿನಲ್ಲಿ ಒಬ್ಬ ವಿಚಿತ್ರ ವ್ಯಕ್ತಿಯ ಮೇಲೆ ಬಿತ್ತು. ಆ ತಿರುಗಾಡುವ ವ್ಯಕ್ತಿಯು ಕೈಯಲ್ಲಿ ಮೂರು ಪಕ್ಷಿಗಳನ್ನು ಹಿಡಿದು ನಿಂತಿದ್ದನು. ಮಹಮದನು ದೃಷ್ಟಿಯು ಆ ವ್ಯಕ್ತಿಯ ದೃಷ್ಟಿಯನ್ನು ಸಂಧಿಸಿದಾಗ

ಆತನು ತನ್ನ ಕೈಯಿಂದ ಸನ್ನೆ ಮಾಡಿದನು, ಕೂಡಲೇ ಮಹಮದನು ತನ್ನ ದೃಷ್ಟಿ ಬೇರೆಡೆಗೆ ತಿರುಗಿಸಿದನು. ಆದರೆ ಮನಸ್ಸಿನಲ್ಲಿ ಆ ವ್ಯಕ್ತಿಯ ಸನ್ನೆಯ ಉದ್ದೇಶವೇನಿರಬಹುದು? ಎಂಬ ಕುತೂಹಲ ಮೂಡಿತು. ಸ್ವಲ್ಪ ಸಮಯದ ನಂತರ ಪುನಃ ಮಹಮದನು ಆ ತಿರುಗಾಡುವ ವ್ಯಕ್ತಿಯನ್ನು ನೋಡಿದನು. ಆ ವ್ಯಕ್ತಿ ಮೊದಲಿನಂತೆ ಸನ್ನೆ ಮಾಡಿದನು. ಈಗ ಮಹಮದನಿಗೆ ತಾಳಲಾಗಲಿಲ್ಲ, ಆ ವ್ಯಕ್ತಿಯನ್ನು ಬರಹೇಳಿ ಪ್ರಶ್ನಿಸಿದನು, 'ನಿನ್ನ ಕೈಯಲ್ಲಿ ಈ ಪಕ್ಷಿಗಳು ಏಕಿವೆ? ಮತ್ತು ನೀನು ಮಾಡಿದ ಸನ್ನೆಯ ಅರ್ಥವೇನು?' ಆತನು ಉತ್ತರವಾಗಿ, 'ನಾನು ಒಬ್ಬ ಜೂಜುಗಾರನು ಮತ್ತು ರಾಜನಿಲ್ಲದಿದ್ದರೂ, ಆತನೊಂದಿಗೆ ಜೂಜಾಡುತ್ತಿರುವೆನೆಂದು ತಿಳಿದು ದಾಳ ಎಸೆದೆನು. ಅದರಿಂದಾಗಿ ಈ ಮೂರು ಪಕ್ಷಿಗಳು ಗೆದ್ದುಬಿಟ್ಟವು.'ಎಂದನು. ಜೂಜುಗಾರನಿಂದ ಈ ಪಕ್ಷಿಗಳನ್ನು ತೆಗೆದುಕೊಳ್ಳಲು ಮಹಮದನು ಆದೇಶಿಸಿದನು.

ಎರಡನೆಯ ದಿನ ಆ ಜೂಜುಗಾರನು ತನ್ನ ಕೈಯಲ್ಲಿ ಎರಡು ಪಕ್ಷಿಗಳನ್ನು ತೆಗೆದುಕೊಂಡು ಅದೇ ರೀತಿ ಮಹಮದನೆದುರಿಗೆ ಬಂದನು. ಮಹಮದನು ಎರಡನೆಯ ದಿನವೂ ಕೂಡ ಆ ಪಕ್ಷಿಗಳನ್ನು ಆತನಿಂದ ತೆಗೆದುಕೊಂಡನು ಮತ್ತು ಆತನ ಉದ್ದೇಶವೇನಿರಬಹುದೆಂದು ಯೋಚಿಸಲಾರಂಭಿಸಿದನು. ಮೂರನೆಯ ದಿನ ಆ ಜೂಜುಗಾರನು ಪುನಃ ಮೂರು ಹಕ್ಕಿಗಳನ್ನು ತೆಗೆದುಕೊಂಡು ಬಂದನು ಮತ್ತು ಅವುಗಳನ್ನು ರಾಜನ ಸೇವೆಯಲ್ಲಿ ಹಾಜರು ಮಾಡಿ ಹೊರಟುಹೋದನು. ನಾಲ್ಕನೆಯ ದಿನ ಆ ಜೂಜುಗಾರನು ಪುನಃ ಸುಲ್ತಾನನನಿಗೆ ಕಂಡನು, ಆದರೆ ಆ ದಿನ ಆತನ ಕೈಯಲ್ಲಿ ಏನೂ ಇರಲಿಲ್ಲ. ಆ ವ್ಯಕ್ತಿ ಕಳವಳಗೊಂಡು ನಿರಾಶೆಗೆ ಒಳಗಾಗಿ ಮಹಲಿನ ಕೆಳಗೆ ನಿಂತಿದ್ದನ್ನು ನೋಡಿದನು. ಮಹಮದನು ಮನಸ್ಸಿನಲ್ಲಿಯೇ ಇವತ್ತು ನಮ್ಮ ಮೇಲೆ ಏನಾಗುವುದೋ, ಏಕೆಂದರೆ ಆತನು ಕಳವಳಗೊಂಡು ನಿರಾಶನಾಗಿ ನಿಂತುಕೊಂಡಿದ್ದಾನೆ, ಎಂದುಕೊಂಡನು. ಮಹಮದನು ಆತನನ್ನು ತನ್ನ ಬಳಿ ಕರೆದು, ಆತನ ಸ್ಥಿತಿಗತಿಯನ್ನು ವಿಚಾರಿಸಿದನು. ಜೂಜುಗಾರನು ಉತ್ತರದಲ್ಲಿ, 'ಈ ದಿನ ನಾನು ಬಾದಶಾಹರ ಜೊತೆಯಲ್ಲಿ ೧೦೦೦ ದಿನಾರಗಳ ಪಣ ಕಟ್ಟಿದ್ದೆನು, ಆದರೆ ದುರ್ದೈವದಿಂದ ದಾಳವು ನನ್ನ ವಿರುದ್ಧ ಬಿದ್ದಿತು, ನಾನು ಈ ಹಣವನ್ನು ಸೋತೆನು' ಎಂದನು. ಮಹಮದನು ಇದನ್ನು ಕೇಳಿ ನಸುನಕ್ಕು ಜೂಜುಗಾರನಿಗೆ ೫೦೦ ದಿನಾರಗಳನ್ನು ಕೊಡಲು ತನ್ನ ದರ್ಬಾನನಿಗೆ ಆದೇಶಿಸಿ ಅವನನ್ನು ಬೀಳ್ಕೊಡುವ ಮೊದಲು ಜೂಜುಗಾರನಿಗೆ, 'ನಾನು ಸ್ವತಃ ಹಾಜರಿಲ್ಲದಿದ್ದಾಗ ನನ್ನೊಂದಿಗೆ ನೀನು ಜೂಜಾಡ ಕೂಡದು.' ಎಂದು ಹೇಳಿ ಕಳುಹಿಸಿದನು.

ಮಹಮೂದನ ಪ್ರಥಮ ಮಂತ್ರಿ – ಅಬೂ–ಅಲ್–ಅಬ್ಬಾಸ್:

ಸುಲ್ತಾನ ಮಹಮೂದನ ಪ್ರಥಮ ಮಂತ್ರಿ ಅಬೂ–ಅಲ್–ಅಬ್ಬಾಸ–ಫಜೀಲ್–ಬಿನ್–ಅಹ್ಮದ ಇದ್ದನೆಂದು 'ತಾರೀಖ–ಜೇಬೂಲ್–ಅಸ್ಸರ್' ದಲ್ಲಿ ಉಲ್ಲೇಖಿಸಲಾಗಿದೆ.

ಈ ಮಂತ್ರಿಯು ಆರಂಭದ ದಿನಗಳಲ್ಲಿ ಫಾಯಕ್‌ನ ದರ್ಬಾರಿನಲ್ಲಿ ಲೆಖ್ಖಿಗನ ಹುದ್ದೆಯಲ್ಲಿದ್ದನು. ಫಾಯಕ್‌ನು ಕೆಟ್ಟ ಕಾಲಚಕ್ರದಲ್ಲಿ ಸಿಲುಕಿದನು. ಆಗ ಅಬೂ-ಅಲ್-ಅಬ್ಬಾಸನು ಸಬಸ್ತಗೀನ್‌ನ ದರ್ಬಾರನ್ನು ಆಶ್ರಯಿಸಿದನು. ಈ ದರ್ಬಾರಿನಲ್ಲಿ ಅಬ್ಬಾಸನು ಬಹಳ ಪ್ರಭಾವಿಯಾಗಿದ್ದು, ಮಂತ್ರಿ ಪದವಿಯನ್ನು ಗಿಟ್ಟಿಸಿದನು. ಸಬಸ್ತಗೀನ್‌ನ ನಂತರ ಸುಲ್ತಾನ ಮಹಮದನು ಆತನನ್ನು ಮಂತ್ರಿ ಪದವಿಯಲ್ಲಿ ಮುಂದುವರೆಸಿದನು. ಅಬೂ-ಅಲ್-ಅಬ್ಬಾಸನಿಗೆ ಅರಬೀ ಭಾಷೆ ತಿಳಿದಿರಲಿಲ್ಲ. ಮೊದಲು ಅರಬೀ ಭಾಷೆಯಲ್ಲಿ ಬರೆಯುತ್ತಿದ್ದ ರಾಜಾಜ್ಞೆಗಳು ಮತ್ತು ಇತರ ಆದೇಶಗಳನ್ನು ಈತನ ಕಾಲಾವಧಿಯಲ್ಲಿ ಫಾರ್ಸೀ ಭಾಷೆಯಲ್ಲಿ ಬರೆಯಲಾಯಿತು. ಅಬೂ-ಅಲ್-ಅಬ್ಬಾಸನ ನಂತರ ಖಾಜಾ ಅಹ್ಮೆದ ನೇಮದೀಯು ಪುನಃ ಅರಬೀ ಭಾಷೆಯಲ್ಲಿ ರಾಜಾಜ್ಞೆಗಳನ್ನು ಬರೆಯುವ ಪದ್ಧತಿಯನ್ನು ಅಂಗೀಕರಿಸಿದನು. ಅಬು-ಅಲ್-ಅಬ್ಬಾಸನು ರಾಜ್ಯಾಡಳಿತವನ್ನು ಸುಸ್ಥಿರವಾಗಿ ನಡೆಸುವ ಮತ್ತು ಯುದ್ಧದ ವ್ಯವಸ್ಥೆ ಮಾಡುವ ಕಾರ್ಯ, ಮತ್ತಿತರ ಇಂತಹ ಕೆಲಸಗಳ ಕುರಿತು ಆತನು ಪರಿಣಿತನಾಗಿದ್ದನು. ಮಹಮದನ ಕಾಲಾವಧಿಯ ಆಡಳಿತದಲ್ಲಿ ಅಬೂ-ಅಲ್-ಅಬ್ಬಾಸನು ೧೦ ವರ್ಷ ಮಂತ್ರಿ ಪದವಿಯಲ್ಲಿ ಕಾರ್ಯ ನಿರ್ವಹಿಸಿದನು. ನಂತರದ ಕೆಟ್ಟ ದಿನಗಳಲ್ಲಿ ಈತನನ್ನು ಮಂತ್ರಿ ಪದವಿಯಿಂದ ತೆಗೆದು ಹಾಕಲಾಯಿತು.

ಅಬೂ-ಅಲ್-ಅಬ್ಬಾಸನ ಪದಚ್ಯುತಿ:

ಕೆಲವು ಇತಿಹಾಸಕಾರರು ಅಬೂ-ಅಲ್-ಅಬ್ಬಾಸನ ಪದಚ್ಯುತಿಯ ನಿರೂಪಣೆಯನ್ನು ಈ ರೀತಿ ಮಾಡುತ್ತಾರೆ. ಸುಲ್ತಾನ ಮಹಮದನಿಗೆ ಸುಂದರವಾದ ಮತ್ತು ಆಕರ್ಷಕ ಗುಲಾಮರನ್ನು ಖರೀದಿಸುವುದರಲ್ಲಿ ಆಸಕ್ತಿಯಿತ್ತು. 'ಅಲ್-ನಾಸ-ಅಲೀ-ವ-ದೀನ-ಮಲೋಕಹಂ' ಮಸದಾಖಿಕಿನ ಪ್ರಜೆಗಳು ಕೂಡ ತಮ್ಮ ಬಾದಶಹಾನ ಅನುಕರಣೆ ಮಾಡುತ್ತಿದ್ದರು. ಅಬೂ-ಅಲ್-ಅಬ್ಬಾಸನಿಗೂ ಕೂಡ ಬಾದಶಹನನ್ನು ನೋಡಿ ಗುಲಾಮರನ್ನು ಖರೀದಿಸಿ ತನ್ನ ಮನೆಯಲ್ಲಿ ಇಟ್ಟುಕೊಳ್ಳುವ ಚಟವು ಬಿದ್ದಿತ್ತು. ಒಂದು ದಿನ ಅಬೂ-ಅಲ್-ಅಬ್ಬಾಸನಿಗೆ ತುರ್ಕಿಸ್ಥಾನದಲ್ಲಿ ಒಬ್ಬ ಅತಿ ಸುಂದರಳಾದ ಗುಲಾಮಳು ಮಾರಾಟಕ್ಕಿದ್ದಳೆಂದು ತಿಳಿಯಿತು. ಅಬೂ-ಅಲ್-ಅಬ್ಬಾಸನು ಕೂಡಲೇ ತನ್ನ ಒಬ್ಬ ವಿಶ್ವಾಸಾರ್ಹ ಸೇವಕನನ್ನು ತುರ್ಕಿಸ್ಥಾನಕ್ಕೆ ಕಳುಹಿಸಿ, ಆ ಸುಂದರಿ ಗುಲಾಮಳನ್ನು ಖರೀದಿಸಿ, ಹೆಣ್ಣು ಮಕ್ಕಳ ಉಡುಪನ್ನು ತೊಡಿಸಿ ಘಜನಿಯಲ್ಲಿ ತರಲು ಹೇಳಿದನು. ಒಬ್ಬ ಚಾಡಿಕೋರನು ಈ ವಿಷಯ ಸುಲ್ತಾನ ಮಹಮದನ ಕಿವಿಗೆ ಬೀಳುವಂತೆ ಮಾಡಿದನು. ಅದಕ್ಕಾಗಿ ಮಹಮದನು ಅಬೂ-ಅಲ್-ಅಬ್ಬಾಸನಿಗೆ ಆ ಗುಲಾಮಳನ್ನು ತನಗೆ ಒಪ್ಪಿಸಲು ಕೇಳಿದನು. ಅಬೂ-ಅಲ್-ಅಬ್ಬಾಸನು ಕಾರಣಗಳನ್ನು ಒಡ್ಡುತ್ತಾ ಗುಲಾಮಳನ್ನು ಕೊಡಲು ನಿರಾಕರಿಸಿದನು. ಒಂದು ದಿನ ಸುಲ್ತಾನ ಮಹಮದನು ಕೆಲಸದ ಕಾರಣದಿಂದ ಹೇಳದೆ ಅಬೂ-

ಅಲ್-ಅಬ್ಬಾಸನ ಮನೆಗೆ ಬಂದನು. ಅಬೂ-ಅಲ್-ಅಬ್ಬಾಸನು ಬಾದಶಾಹನನ್ನು ನೋಡಿದ ಕೂಡಲೇ ಆತನ ಸೇವೆಯಲ್ಲಿ ನಮ್ರನಾಗಿ ಹಾಜರಾದನು ಮತ್ತು ಸ್ವಾಗತಿಸಿ ಆತಿಥ್ಯವನ್ನು ಆರಂಭಿಸಿದನು. ಅದೇ ಸಮಯದಲ್ಲಿ ಆ ಸುಂದರ ಗುಲಾಮಳ ಮೇಲೆ ಮಹಮದನ ಕಣ್ಣು ಬಿದ್ದಿತು. ಬಲವಂತವಾಗಿ ಮಹಮದನು ಅಬೂ-ಅಲ್-ಅಬ್ಬಾಸನಿಂದ ಗುಲಾಮಳನ್ನು ಕಸಿದುಕೊಂಡನು ಮತ್ತು ಆತನನ್ನು ಮಂತ್ರಿ ಪದವಿಯಿಂದ ಕಿತ್ತೆಸೆದು ಹಾಕಿ ಹಾಳು ಮಾಡಿದನು. ಇದೇ ಕಾಲದಲ್ಲಿ ಮಹಮದನು ಹಿಂದುಸ್ತಾನದ ಮೇಲೆ ದಾಳಿ ಮಾಡಿದನು. ಆತನ ಕೆಲವು ಆಸೆಬುರುಕ ದರ್ಬಾರಿಗಳು ಅಬೂ-ಅಲ್-ಅಬ್ಬಾಸನಿಗೆ ಬಹಳಷ್ಟು ಕಿರುಕುಳ ಕೊಡಲಾರಂಭಿಸಿದರು, ಅತಿಯಾದ ಕಿರುಕುಳಕ್ಕೊಳಪಟ್ಟು ಆ ದುರ್ದೈವಿಯು ಮೃತಪಟ್ಟನು.

ಎರಡನೆಯ ಮಂತ್ರಿ -ಖಾಜಾ ಅಹ್ಮದ-ಬಿನ್-ಹಸನ-ಮೇಮಂದೀ :

ಅಬೂ-ಅಲ್-ಅಬ್ಬಾಸನ ನಂತರ ಖಾಜಾ ಅಹ್ಮದ-ಬಿನ್-ಹಸನ್ ಮೇಮಂದೀ ಮಂತ್ರಿ ಪದವಿಯನ್ನು ಪಡೆದನು. ಈ ಮಂತ್ರಿಯು ಮಗುವಾಗಿದ್ದಾಗ ಸುಲ್ತಾನ ಮಹಮದನ ತಾಯಿಯ ಸ್ತನಪಾನ ಮಾಡಿದವನು ಹಾಗೂ ಮಹಮದನ ಸಹಪಾಠಿಯಾಗಿದ್ದನು. ಅಹ್ಮದನ ತಂದೆ ಹಸನ-ಮೇಮದೀ ಸುಬಕ್ತಗೀನ್‌ನ ಅವಧಿಯಲ್ಲಿ 'ಬಸ್ತ' ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದನು. ಹಸನ್‌ನ ಕೆಲಸವು ಬಾದಶಾಹನ ಪರವಾಗಿ ಧಾನ್ಯವನ್ನು ಸಂಗ್ರಹಿಸುವುದಾಗಿತ್ತು. ಹಸನನ ಮೇಲೆ ದುರ್ಬಳಕೆಯ ಆರೋಪವಿತ್ತು. ಇದೇ ಕಾರಣಕ್ಕಾಗಿ ಆತನನ್ನು ನೇಣಿಗೇರಿಸಲಾಯಿತು. ಸಾಮಾನ್ಯ ಜನರಲ್ಲಿ ಸುಲ್ತಾನ ಮಹಮದನ ವಜೀರನೆಂದು ಇವನಿಗೆ ಪ್ರಖ್ಯಾತಿ ಇರುವುದು ಶುದ್ಧ ಸುಳ್ಳು. ಖಾಜಾ ಅಹ್ಮದ-ಬಿನ್-ಹಸನನು ಬಹಳ ಚಟುವಟಿಕೆಯುಳ್ಳ, ಬುದ್ಧಿವಂತ ಹಾಗೂ ತಿಳವಳಿಕೆಯುಳ್ಳ ವ್ಯಕ್ತಿಯಾಗಿದ್ದನು ಮತ್ತು ಸುಂದರ ಲಿಪಿಗಾರನಾಗಿದ್ದನು. ಎಲ್ಲಕ್ಕೂ ಮೊದಲು ಈತನಿಗೆ ಸಾಮಾನ್ಯವಾದ ಹುದ್ದೆ ಕೊಡಲಾಯಿತು, ನಂತರ ಬಾದಶಾಹನ ಅನುಗ್ರಹದಿಂದ ಲೆಕ್ಕಿಗನನ್ನಾಗಿ, ಹಿರಿಯ ಮೀರಮುನ್‌ಶಿ ಮತ್ತು ಖುರಾಸಾನ ರಾಜ್ಯದ ವಿವಿಧವಾದ ಅಧಿಕಾರದಲ್ಲಿ ನಿಯುಕ್ತಿಸಲಾಯಿತು. ಕೆಲ ಕಾಲದ ನಂತರ ಮಹಮದನಿಗೆ ಅಬೂ-ಅಲ್-ಅಬ್ಬಾಸನೊಡನೆ ಮನಸ್ತಾಪವಾಗಿ, ಮಂತ್ರಿ ಪದವಿಯಿಂದ ಆತನನ್ನು ತೆಗೆದು ಹಾಕಿ ಆತನ ಸ್ಥಳದಲ್ಲಿ ಅಹ್ಮದ ಬಿನ್ ಹಸನನನ್ನು ನಿಯುಕ್ತಿಸಲಾಯಿತು. ಅಹ್ಮದನು ಈ ಹುದ್ದೆಯಲ್ಲಿ ೧೮ ವರ್ಷ ಕ್ರಿಯಾಶೀಲನಾಗಿ ತನ್ನ ಕಾರ್ಯವನ್ನು ಸುಸ್ಥಿರವಾಗಿ, ಪ್ರಾಮಾಣಿಕತೆಯಿಂದ ನಿರ್ವಹಿಸಿದನು. ಕೊನೆಯಲ್ಲಿ ಚಾಡಿಕೋರರ ಕೃತಿಗಳಿಂದಾಗಿ ಈತನ ದೋಣಿಯು ಕೂಡ ಸುಳಿಯಲ್ಲಿ ಸಿಕ್ಕಿಕೊಂಡಿತು ಮತ್ತು ದರ್ಬಾರದ ಹಿರಿಯ ಅಧಿಕಾರಿಗಳು ಈತನ ಪ್ರಾಣಘಾತುಕ ಶತ್ರುಗಳಾದರು. ಅತೋವು ನಿತಾಶ ಸೈನ್ಯದ ಮೇಲಾಧಿಕಾರಿ ಹಾಗೂ ಅಮೀರ ಅಲೀ ಖುಷಾವಂದ ನಂತಹ ಹೆಸರಾಂತ ಅಮೀರರು ಅಹ್ಮದ ಬಿನ್ ಹಸನನ ವಿರುದ್ಧವಾಗಿ ಬಾದಶಾಹನ ಕಿವಿ

ತುಂಬಿದರು. ಉತ್ತಮವಾದ ಚಾರಿತ್ರ್ಯವುಳ್ಳ ಈ ವ್ಯಕ್ತಿಯ ಬಗ್ಗೆ ಬಗೆ ಬಗೆಯಾದ ಆರೋಪಗಳನ್ನು ಮಾಡಲಾಯಿತು. ದರ್ಬಾರಿಗಳ ಮಾತುಗಳು ಮಹಮದನ ಮನಸ್ಸಿನ ಮೇಲೆ ಪರಿಣಾಮ ಬೀರಿದವು. ಅದರಿಂದಾಗಿ ಅಹ್ಮದ ಬಿನ್ ಹಸನನನ್ನು ಮಂತ್ರಿ ಪದವಿಯಿಂದ ತೆಗೆದು ಹಾಕಿದನು. ಮಹಮದನು ಅಹ್ಮದನನ್ನು ಪದಚ್ಯುತಿಗೊಳಿಸಿ ಬೇಹರಾಂ ಎಂಬ ನೌಕರನಿಗೆ ಒಪ್ಪಿಸಿದನು. ಏಕೆಂದರೆ ಈತನನ್ನು ತನ್ನ ಜೊತೆ ಕಾಶ್ಮೀರ ಪ್ರಯಾಣದಲ್ಲಿ ಕರೆದುಕೊಂಡು ಹೋಗಿ, ಅಲ್ಲಿಯ ಕಾರಾಗೃಹದ ಮೇಲ್ವಿಚಾರಕನಿಗೆ ಒಪ್ಪಿಸಲಾಗಿ ಅಹ್ಮದ ಬಿನ್ ಹಸನನನ್ನು ೧೩ ವರ್ಷ ಕಾಲೀಂಜರ ಕೋಟೆಯಲ್ಲಿ ಕೈದಿಯಾಗಿ ಜೀವನ ಕಳೆದನು ಮತ್ತು ಸುಲ್ತಾನ ಮಹಮದನ ಕಾಲದಲ್ಲಿ ಈ ಬಂಧನದಿಂದ ಮುಕ್ತನಾಗಿ ಪುನಃ ಮಂತ್ರಿ ಪದವಿ ಪಡೆದನು. ಅಹ್ಮದ ಬಿನ್ ಹಸನನು ಹಿಜರಿ ಶಕೆ ೪೨೪ರಲ್ಲಿ ಮೃತಪಟ್ಟನು.

ಮೂರನೆಯ ಮಂತ್ರಿ – ಅಹ್ಮದ–ಹುಸೇನ–ಬಿನ್–ಮೇಕಾಲ:

ಖಾಜಾ ಅಹ್ಮದ ಹುಸೇನ ಮೇಮದೀ ನಂತರ ಸುಲ್ತಾನ ಮಹಮದನು 'ಮೇಕಾಲ ಕಾಳಗ' ಕಲೆ ಹೆಸರಿನಿಂದ ಪ್ರಸಿದ್ಧನಾದ, ಅಹ್ಮದ–ಹುಸೇನ–ಬಿನ್–ಮೇಕಾಲನನ್ನು ಮಂತ್ರಿಯನ್ನಾಗಿ ಮಾಡಿದನು. ಅಹ್ಮದ ಹುಸೇನ ತನ್ನ ಬಾಲ್ಯದಲ್ಲಿ ಸುಲ್ತಾನ ಮಹಮದನ ಸೇವೆಯಲ್ಲಿದ್ದನು ಮತ್ತು ತನ್ನ ಚತುರ ಸಂಭಾಷಣೆ, ಸುಸ್ವಭಾವ ಮತ್ತು ಉತ್ತಮ ಗುಣಗಳ ಕಾರಣದಿಂದ ಖ್ಯಾತಿ ಪಡೆದು, ಗೌರವಪಡೆದಿದ್ದನು. ಅಹ್ಮದ ಹುಸೇನ ಮೇಮದೀಯ ಪದಚ್ಯುತಿಯ ಕಾಲದಿಂದ ಸುಲ್ತಾನ ಮಹಮದನ ಮರಣದವರೆಗೂ ಮಂತ್ರಿ ಪದವಿಯ ಕಾರ್ಯ ನಿರ್ವಹಿಸಿದನು.

ಜಾಹೀದ್–ಆಹೋಪೋಷನ ಘಟನೆ:

ಕೆಲವು ಇತಿಹಾಸಕಾರರು ಅಹ್ಮದ ಹುಸೇನನ ಪರ ನಿರೂಪಣೆ ಮಾಡುತ್ತಾರೆ. ಸುಲ್ತಾನ ಮಹಮದನು ತನ್ನ ತಂದೆ ಸಬಸ್ತಗೀನ್‌ನ ಜೊತೆಯಲ್ಲಿ ಅಬೂ–ಅಲೀ–ಸಂಜೂರಿಯನ್ನು ನಾಶ ಮಾಡಿದ ಆ ದಿನಗಳಲ್ಲಿ ಒಂದು ಸ್ಥಳದಲ್ಲಿ ಈತನು ಕೇಳಿದ್ದೇನೆಂದರೆ, ಸಮೀಪದಲ್ಲಿಯೇ ಒಬ್ಬ ಫಕೀರನು ಇರುತ್ತಾನೆ. ಆತನು ತನ್ನ ಪವಾಡ ಮತ್ತು ತೇಜಸ್ಸಿನ ಕಾರಣದಿಂದಾಗಿ ಸುತ್ತ–ಮುತ್ತಲಿನ ಪ್ರಾಂತದಲ್ಲಿ ಬಹಳ ಪ್ರಸಿದ್ಧನಾಗಿದ್ದನು. ಸಾಮಾನ್ಯವಾಗಿ ಈತನಿಗೆ ಜನರು 'ಜಾಹೀದ್–ಆಹೋಪೋಷ' ಹೆಸರಿನಿಂದ ಸ್ಮರಿಸುತ್ತಾರೆ. ಮಹಮದನಿಗೆ ಫಕೀರರು ಮತ್ತು ದರವೇಶಿಗಳನ್ನು ಕುರಿತು ನಂಬಿಕೆಯಿತ್ತು. ಅದಕ್ಕಾಗಿ ಈತನು ಜಾಹೀದ್–ಆಹೋಪೋಷನನ್ನು ಸಂದರ್ಶಿಸಲು ಇಚ್ಛಿಸಿದನು. ಅಹ್ಮದ ಹುಸೇನನಿಗೆ ಸೂಫಿಗಳ ಹಾಗೂ ದರವೇಶಿಗಳ ಬಗ್ಗೆ ಯಾವ ಆಸಕ್ತಿ ಇರಲಿಲ್ಲ. ಆದರೆ ಸುಲ್ತಾನ ಮಹಮದನು, ಅಹ್ಮದ ಹುಸೇನನಿಗೆ, 'ನಿನಗೆ ದರವೇಶಿಗಳನ್ನು ಕುರಿತು ನಂಬಿಕೆ ಮತ್ತು ಪ್ರೀತಿಯಿಲ್ಲವೆಂದು ನಾನು ಬಲ್ಲೆ, ಆದರೆ

ನನ್ನ ಬಯಕೆ ಏನೆಂದರೆ ಜಾಹೀದ್–ಆಹೋಪೋಷನ ಸೇವೆಯಲ್ಲಿ ನೀನು ಕೂಡ ನನ್ನ ಜೊತೆಯಲ್ಲಿರು.' ಎಂದು ಹೇಳಿದನು. ಅಹ್ಮದ ಹುಸೇನನು ಮಹಮದನ ಮಾತಿಗೆ ಬೆಲೆ ಕೊಟ್ಟು ಆತನ ಜೊತೆಯಲ್ಲಿ ಹೊರಟನು. ಇಬ್ಬರೂ ಜಾಹೀದ್–ಆಹೋಪೋಷನ ಬಳಿ ಹೋದರು. ಸುಲ್ತಾನ ಮಹಮದನು ಈ ದರವೇಶನೊಂದಿಗೆ ಬಹಳ ಪ್ರೀತಿ ಮತ್ತು ವಿಶ್ವಾಸದಿಂದ ಭೇಟಿಯಾದನು. ಜಾಹೀದ್‌ನು ಕೂಡ ಮಹಮದನಿಗೆ ಕೆಲವು ಉತ್ತಮ ಸೂಫಿ ವಾಕ್ಯಗಳನ್ನು ಹೇಳಿದನು. ಅದನ್ನು ಕೇಳಿ ಸುಲ್ತಾನ ಮಹಮದನಿಗೆ ಇನ್ನೂ ಹೆಚ್ಚು ವಿಶ್ವಾಸ ಹುಟ್ಟಿ, 'ತಮ್ಮ ವಾಸಸ್ಥಳಕ್ಕಾಗಿ ನಿವಾಸ ಮತ್ತು ತಮಗೆ ಬೇಕಾದಷ್ಟು ಧನ, ಧಾನ್ಯಗಳನ್ನು ತಾವು ಹೇಳಿದರೆ ಕೂಡಲೇ ಅವುಗಳನ್ನು ಸಲ್ಲಿಸುವ ವ್ಯವಸ್ಥೆ ಮಾಡುತ್ತೇನೆ.'ಎಂದು ಹೇಳಿದನು. ಜಾಹೀದ್ ಆಹೋಪೋಷನು ಈ ಮಾತನ್ನು ಕೇಳಿ ತನ್ನ ಎರಡು ಕೈಗಳನ್ನು ಗಾಳಿಯಲ್ಲಿ ಎತ್ತಿ ಬೀಸಿ, ಮರುಕ್ಷಣದಲ್ಲಿ ಹಿಡಿ ತುಂಬಿ ಅಶ್ರಫಿಗಳನ್ನು ಮಹಮದನ ಕೈಗೆ ಕೊಟ್ಟು ಹೇಳಿದನು. 'ಕಣ್ಣಿಗೆ ಕಾಣದ ಭಂಡಾರದಿಂದ ಯಾವಾಗಲೂ ಸಂಪತ್ತು ಸಿಗುವ ವ್ಯಕ್ತಿಗೆ, ಅನ್ಯರಿಂದ ಪಡೆಯುವ ಅವಶ್ಯಕತೆ ಇರದು.' ಸುಲ್ತಾನ ಮಹಮದನು ಜಾಹೀದ್ ಆಹೋಪೋಷನ ಈ ಕೃತಿ ಮತ್ತು ಪವಾಡದಿಂದ ಆ ಆಶ್ರಫಿಗಳನ್ನು ಅಹ್ಮದ ಹುಸೇನನಿಗೆ ಕೊಟ್ಟು ಹೇಳಿದನು. 'ನೋಡಿದಿಯಾ' ಫಕೀರರಲ್ಲಿ ಎಂತಹ ಅದ್ಭುತ ಶಕ್ತಿ ಇರುತ್ತದೆ.' ಅಹ್ಮದ ಹುಸೇನನು ಈ ಅಶ್ರಫಿಗಳನ್ನು ಲಕ್ಷ್ಯ ಕೊಟ್ಟು ನೋಡಿದನು. ಅವೆಲ್ಲ ಅಶ್ರಫಿಗಳು ಅಬೂ–ಅಲೀ–ಹುಜೂರಿಯ ನಾಣ್ಯಗಳಾಗಿದ್ದವು. ಜಾಹೀದ್ ಆಹೋಪೋಷನ ಸಂದರ್ಶನದ ನಂತರ ಮಹಮದ ಮತ್ತು ಅಹ್ಮದ ಹುಸೇನ ಹೊರಬಂದ ಮೇಲೆ, ಮಹಮದನು ಹೇಳಿದನು, 'ಕಣ್ಣು ಮುಂದೆ ನಡೆಯುವ ಇಂತಹ ಪವಾಡಗಳನ್ನು ನಿರಾಕರಿಸುವುದು ಹೇಗೆ?' ಅಹ್ಮದ ಹುಸೇನು, 'ನಾನು ಅಲ್ಲಾಹನ ಭಕ್ತರ ಪವಾಡಗಳನ್ನು ನಿರಾಕರಿಸುವುದಿಲ್ಲ. ಈ ಬಗ್ಗೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಯಾವ ವ್ಯಕ್ತಿಯ ನಾಣ್ಯಗಳು ಆಕಾಶದಲ್ಲಿಯೂ ಜಾರಿಯಲ್ಲಿ ಇರುತ್ತವೆಯೋ ಅಂತಹವರೊಡನೆ ಯುದ್ಧ ಮಾಡಕೂಡದು.'ಎಂದು ಉತ್ತರಿಸಿದನು. ಮಹಮದನು ಅಶ್ರಫಿಗಳನ್ನು ನೋಡಿ, ಅದರ ಮೇಲೆ ಅಬೂ–ಅಲೀ–ಹಜೂರಿ ಹೆಸರನ್ನು ಕಂಡು ಮ್ಲಾನನಾಗಿ ಸುಮ್ಮನಾದನು.

ಫರಿಶ್ತಾ ಇತಿಹಾಸಕಾರನು ಹೇಳುವುದೇನೆಂದರೆ, ಅಹ್ಮದ ಹುಸೇನನ ಮಾತು ಸತ್ಯವಲ್ಲ. ಏಕೆಂದರೆ ಹಜರತ ಖಿಜರ ಮತ್ತು ಇತರ ಮಹಾತ್ಮರ ಇಹ–ಪರಗಳಲ್ಲಿ ಅಲ್ಲಾಹನ ಭಕ್ತರ ಅವಶ್ಯಕತೆಗಳನ್ನು ಪೂರೈಸುವನೆಂದು ಪುಷ್ಟಿಯಾಗಿದೆ. ಹೀಗೆ ವಸ್ತುಗಳನ್ನು, ಸಾಮಾನ್ಯರು ಪಡೆಯಲು ಸಾಧ್ಯವಿಲ್ಲ.

ಸುಲ್ತಾನ ಮಸೂದನು ಸಿಂಹಾಸಾನರೂಢನಾದ ನಂತರ, ಅಹ್ಮದ ಹುಸೇನನ ಪವಿತ್ರ ಮಕ್ಕಾದಿಂದ ಮರುಳುವಾಗ, ಮಿಶ್ರಿನ ಪ್ರಸಿದ್ಧ ಕಾಫಿರ ಬಾದಶಹ ಉಡಪನ್ನು

ತೊಟ್ಟಿದ್ದನೆಂದು ಆರೋಪಿಸಿ, ಈ ಆರೋಪದಿಂದ ಅಹ್ಮದ ಹುಸೇನನಿಗೆ ಮರಣದಂಡನೆ ವಿಧಿಸಲಾಯಿತು.

ಮಹಮದನ ಕಾಲದ ಪ್ರಸಿದ್ಧ ಕವಿಗಳು :

ಅಸಾಯಿರಿ – ಮಹಮದನ ಕಾಲದಲ್ಲಿ ಅಸಾಯಿರಿ ಇಲಿಯಾಸ 'ರಾಜ್'ರೇಯಿಂದ ಘಜನಿಗೆ ಬಂದಿದ್ದನು. ಯಾವಾಗಲೂ ಈತನು ಕವಿಗಳಿಗೆ ಪ್ರತಿಯಾಗುತ್ತಿದ್ದನು. ಈತನು ಮಹಮದನ ವೈಭವದ ಬಗ್ಗೆ ಒಂದು ಕವನವನ್ನು ಬರೆದನು. ಅದಕ್ಕಾಗಿ ಆತನಿಗೆ ಮಹಮದನು ೧೪,೦೦೦ ದರಮಗಳನ್ನು ಕೊಟ್ಟಿದ್ದನು.

ಅಸದೀ ತೌಸಿ – ಅಸದೀ ತೌಸಿಯು ಮಹಮದನ ಕಾಲದ ಪ್ರಸಿದ್ಧ ಶಿಕ್ಷಕ ಹಾಗು ಖರಸ್ಥಾನದ ಕವಿಗಳಲ್ಲಿ ಪ್ರಖ್ಯಾತನಾಗಿದ್ದನು. ಮಹಮದನು ಅಸದೀಗೆ 'ಶಹನಾಮಾ' ಬರೆಯಲು ಹಲವು ಸಲ ಹೇಳಿದ್ದನು. ಆದರೆ, ಅಸದೀಯು ತನ್ನ ವೃದ್ಧಾಪ್ಯ ಹಾಗು ನಿಶ್ಶಕ್ತಿಯ ಕಾರಣವನ್ನು ಹೇಳಿ ಆತನ ಬಿನ್ನಹವನ್ನು ಮುಂದೂಡುತ್ತಿದ್ದನು. ಅಸದೀಯ ಕಾವ್ಯವು ಇವತ್ತಿಗೂ ಲಭ್ಯವಿಲ್ಲ ಮತ್ತು ನೆನಪಿಗಾಗಿ ಬರೆದಿಟ್ಟ ಕೈಪಿಡಿ, ಟಿಪ್ಪಣಿ ಇತ್ಯಾದಿಗಳಲ್ಲಿ ಕವನಗಳು ಕಂಡು ಬರುವುದಿಲ್ಲ. ಅಸದೀಯು ತನ್ನ ಪ್ರಸಿದ್ಧ ಶಿಷ್ಯನಾದ 'ಫಿರದೋಸಿ'ಗೆ ಶಹನಾಮ ಬರೆಯಲು ತಿಳಿಸಿದನು, ಗುರುವಿನ ಆಣತಿಯ ಮೇರೆಗೆ ಫಿರದೋಸಿಯು ಶಹನಾಮವನ್ನು ಬರೆದನು.

ಫಿರದೋಸಿ ಘಜನಿಯಿಂದ ಓಡಿಹೋಗಿ ತೌಸ ಸೇರಿದನು. ಅಲ್ಲಿಂದ ರುಸ್ತುಂದಾರ ಹಾಗೂ ತಾಲ್ಗಾನ್ ಪ್ರಾಂತಗಳಿಗೆ ಹೋದನು. ಅಲ್ಲಿಂದ ಪುನಃ ತೌಸಗೆ ಬಂದನು. ಈ ಕಾಲದಲ್ಲಿ ಫಿರದೋಸಿಯು ಅನಾರೋಗ್ಯದಿಂದ ಬಳಲುತ್ತಿದ್ದನು. ಸಾಯುವ ಮುನ್ನ ಅಸದೀಯನ್ನು ಬರಹೇಳಿ ಆತನಿಗೆ, 'ಈಗ ನನ್ನ ಕೊನೆಯ ಘಳಿಗೆಯು ಹತ್ತಿರವಾಗಿದೆ. ಶಹನಾಮಾದ ಸ್ವಲ್ಪ ಭಾಗವು ಉಳಿದುಕೊಂಡಿದೆ. ಈ ಪುಸ್ತಕವು ಪೂರ್ಣವಾಗದೆ ಉಳಿದ ಕಾರಣ ನನಗೆ ವಿಷಾದವಿದೆ. ನನ್ನ ನಂತರ ಅನ್ಯರಲ್ಲಿ ಶಹನಾಮವನ್ನು ಪೂರ್ಣಗೊಳಿಸುವ ಸಾಮರ್ಥ್ಯ ನನಗಿಲ್ಲ.' ಎಂದು ಹೇಳಿದಾಗ ಫಿರದೋಸಿ ದುಃಖಿಸತೊಡಗಿದನು. ಅಸದೀಯು, 'ಕಂದಾ, ನೀನು ವಿಷಾದಿಸಬೇಡ. ನಾನು ಜೀವಿಸಿದ್ದರೆ ಶಹನಾಮುವನ್ನು ಪೂರ್ಣಗೊಳಿಸುತ್ತೇನೆ.' ಎಂದನು. ಫಿರದೋಸಿಯು, 'ಗುರುವೇ, ನೀವು ವೃದ್ಧಾಪ್ಯದಿಂದ ನಿಶ್ಶಕ್ತರಾಗಿದ್ದೀರಿ, ಈ ಪರಿಶ್ರಮವುಳ್ಳ ಕಾರ್ಯ ಪೂರ್ಣಗೊಳಿಸಲಾರಿರಿ.' ಎಂದು ನುಡಿದನು.

ಮನ್ಸೂ ಚಹರ ಬಿಲಗೀ – ಈ ಕವಿಯು ಬಲ್ಗನ ಪ್ರಜೆಯಾಗಿದ್ದನು. ಆದರೆ ಸುಲ್ತಾನ ಮಹಮದನ ಕಾಲದಲ್ಲಿ ಘಜನಿಯಲ್ಲಿ ವಾಸಮಾಡುತ್ತಿದ್ದನು. ಅನ್ಯ ಕವಿಗಳಿಗಿಂತ ಶ್ರೀಮಂತನಿದ್ದನು, ಕಾವ್ಯ ಕಲೆಯು ಈತನಿಗೆ ಕರಗತವಾಗಿತ್ತು. ಈತನ ಒಂದು **'ಖಸೀದಾ'** (ಒಂದು ಬಗೆಯ ಕವನ) ಬಹಳ ಪ್ರಸಿದ್ಧವಿದೆ. ಅದರ ಪಲ್ಲವಿಯು ಹೀಗಿದೆ;

"ಹೇ, ಪ್ರಭು ನೀನು ನಮ್ಮ ಶರೀರದಲ್ಲಿ ಆತ್ಮವನ್ನು ಸ್ಥಾಪಿಸಿರುವೆ.
ಜೀವ ಹೋದ ಬಳಿಕ ಆತ್ಮವಿಲ್ಲದಾಗ ಕಣ್ಣು ಇದ್ದರೂ ನೋಟ ಸಾಧ್ಯವಿಲ್ಲ"

ಹಕೀಮ ಅನಸರೀ– ಅನಸರೀ ಮಹಮದನ ಕಾಲಾವಧಿಯಲ್ಲಿ ಈತನ ಅಂತಸ್ತು ಕವಿಗಳಲ್ಲಿ ಅತಿ ಉತ್ತಮವಾಗಿತ್ತು. ಕಾವ್ಯವಲ್ಲದೇ ಅನ್ಯ ಉತ್ತಮ ಕೃತಿಗಳ ರಚನೆಗೆ ಯೋಗ್ಯನಿದ್ದನು. ಇತಿಹಾಸಕಾರರ ಹೇಳಿಕೆ ಎಂದರೆ, ಮಹಮದನ ದರ್ಬಾರಿನಿಂದ ಸುಮಾರು ೪ ಜನ ಕವಿಗಳು ಸಂಬಂಧಿಸಿದ್ದರು.

ಇವರೆಲ್ಲರು ಅನಸರೀಯ ಶಿಷ್ಯರೆಂದು ಗರ್ವಪಡುತ್ತಿದ್ದರು. ಅನಸರೀಗೆ ಮಹಮದನ ದರ್ಬಾರಿನಲ್ಲಿ ವಿಶೇಷ ಸ್ಥಾನಮಾನವಿತ್ತು ಕೊನೆಯ ಕಾಲದಲ್ಲಿ ಮಹಮದನು ಈತನಿಗೆ 'ಮಲ್ಕೆ ಶೋರಾ' ಎನ್ನುವ ಬಿರುದನ್ನು ನೀಡಿದನು ಮತ್ತು ಪ್ರತಿಯೊಬ್ಬ ಕವಿಯು ತನ್ನ ಕಾವ್ಯದಿಂದ ಅನಸರೀಯ ಮೂಲಕ ಬಾದಶಾಹನ ಸೇವೆಯಲ್ಲಿ ಹಾಜರು ಪಡಿಸಲು ಆದೇಶಿಸಿದನು. ಅನಸರೀಯು ಅವುಗಳನ್ನು ಸಮಂಜಸವೆಂದು ತಿಳಿದು ಬಾದಶಹನ ಸನ್ನಿಧಿಗೆ ಕಳುಹಿಸುತ್ತಿದ್ದನು, ಇಲ್ಲವಾದಲ್ಲಿ ಹಿಂದಿರುಗಿಸುತ್ತಿದ್ದನು. ಅನಸರೀಯ ಒಂದು ದೊಡ್ಡ 'ಖಸೀದಾ' (ಕಾವ್ಯದ ಒಂದು ಬಗೆ) ಬಹಳ ಪ್ರಸಿದ್ಧವಿದೆ. ಇದರಲ್ಲಿ ಈತನು ಸುಲ್ತಾನ ಮಹಮದನ ಸಮಸ್ತ ದಾರಿಗಳನ್ನು ಕುರಿತು ಕಾವ್ಯ ಬರೆದಿದ್ದಾನೆ.

ಇತಿಹಾಸಕಾರರ ಹೇಳಿಕೆ ಏನೆಂದರೆ, ಒಂದು ರಾತ್ರಿ ಪ್ರೇಮರಸದ ಅಮಲಿನಲ್ಲಿ ಸುಲ್ತಾನ ಮಹಮೂದನು 'ಐಯಾಜ'ನೆಡೆಗೆ ಕಾಮ ದೃಷ್ಟಿ ಬೀರಿದನು. ಮಹಮೂದನ ಮೇಲೆ ಪರಮಾತ್ಮನ ಅನುಗ್ರಹವಿದ್ದ ಕಾರಣ ಕೂಡಲೇ ಧರ್ಮದ ಆದೇಶಗಳು ಆತನನ್ನು ಪವಿತ್ರ ಪ್ರೇಮವು ಕಲ್ಮಶವಾಗದಂತೆ ಮಾಡಿದವು. ಕೂಡಲೇ ಮಹಮೂದನು ತನ್ನ ಪರವಶತೆಯಿಂದ ಚೇತರಿಸಿಕೊಂಡು ಐಯಾಜನಿಗೆ ಚಾಕುವನ್ನು ಕೊಟ್ಟು ಹೇಳಿದನು. 'ನೀನು ನಿನ್ನ ಕೇಶರಾಶಿಯನ್ನು ತರಿದು ಹಾಕು' (ಇವುಗಳು ನನ್ನನ್ನು ಕಾಮಕೇಳಿಯಲ್ಲಿ ಪ್ರೇರೇಪಿಸಿದ್ದವು). ಐಯಾಜ ಕೇಳಿದನು. 'ಈ ಕೇಶರಾಶಿಯನ್ನು ಎಷ್ಟು ತರಿದು ಹಾಕಲಿ?' ಮಹಮೂದನು ಹೇಳಿದನು, 'ಸಂಪೂರ್ಣವಾಗಿ ಕತ್ತರಿಸಿ ಬಿಡು.' ಐಯಾಜನು ರಾಜಾಜ್ಞೆಯ ಪ್ರಕಾರ ತನ್ನ ಕೇಶರಾಶಿಯನ್ನು ಕೂಡಲೇ ಕತ್ತರಿಸಿ ಹಾಕಿದನು. ಈ ವಿಧೇಯತೆಗಾಗಿ ಮಹಮೂದನ ಮನಸ್ಸಿನಲ್ಲಿ ಐಯಾಜನ ಬಗ್ಗೆ ಮೊದಲಿದ್ದ ಪ್ರೀತಿಯು ದ್ವಿಗುಣವಾಯಿತು ಮತ್ತು ಆತನ ವಿನಮ್ರ ಗುಣಕ್ಕಾಗಿ ಬೆಲೆಬಾಳುವ ಮುತ್ತು–ರತ್ನಗಳನ್ನು ಬಹುಮಾನವಾಗಿ ನೀಡಿ ಅದೇ ಗುಂಗಿನಲ್ಲಿ ಮಲಗಿದನು.

ಮಹಮದನು ಬೆಳಿಗ್ಗೆ ನಿದ್ದೆಯಿಂದ ಎದ್ದು ರಾತ್ರಿಯ ಘಟನೆ ಜ್ಞಾಪಿಸಿಕೊಂಡು ತಾನು ಐಯಾಜನೊಂದಿಗೆ ವರ್ತಿಸಿದ ರೀತಿಗಾಗಿ ಬಹಳ ನಾಚಿಕೆ ಪಟ್ಟನು. ಅದಕ್ಕಾಗಿ

ಅವನು ಬಹಳ ತಲ್ಲಣಿಸಿದನು. ಆಸ್ಥಾನದ ಸದಸ್ಯರಲ್ಲಿ ಯಾರಿಗೂ ಸತ್ಯಾಂಶವನ್ನು ಕೇಳಲು ಧೈರ್ಯವಾಗಲಿಲ್ಲ. 'ಹಾಜಬ-ಅಲೀ'ಯು ಅನಸರೀಗೆ ಬಾದಶಾಹನೆದುರಿಗೆ ಹೋಗಲು ಹೇಳಿದನು. ಅನಸರೀ ಮಹಮದನ ಸೇವೆಯಲ್ಲಿ ಹಾಜರಾದನು. ಮಹಮದನು ಅನಸರೀಗೆ ಹೇಳಿದನು, 'ನನ್ನ ಪರಿಸ್ಥಿತಿ ಈಗ ಏನಿದೆ ಎಂಬುದು ನೀನು ನೋಡುತ್ತಿದ್ದೀಯಾ, ಅದನ್ನು ಕುರಿತು ನೀನು ಒಂದು ಸೂಕ್ತ ಕವನವನ್ನು ಬರೆ.' ಅನಸರೀಯು ಕೂಡಲೇ ಒಂದು 'ರೂಬಾಯಿ' (ಒಂದು ಬಗೆಯ ಕವನ) ಓದಿದನು.

ನಿನ್ನ ಪ್ರಿಯತಮೆಯ ಕೇಶರಾಶಿಯನ್ನು ಸಿಂಗರಿಸುವ ದಿನವಿದು
ಯಾವುದೇ ದುಃಖ-ಚಿಂತೆ ಮಾಡುವ ದಿನವಲ್ಲವಿದು
ಸೆರೆಕುಡಿದು ಬೇರೊಂದು ಲೋಕಕ್ಕೆ ಹೋಗಿ ಶಾಂತಿ ಪಡೆಯುವ ದಿನವಿದು
ಸುಂದರ ವಸ್ತ್ರಗಳನ್ನು ಮೈಮೇಲೆ ಧರಿಸುವ ದಿನವಿದು.

ಈ ಕವನವನ್ನು ಕೇಳಿ ಮಹಮೂದನು ಬಹಳ ಸಂತೋಷಪಟ್ಟನು. ಅನಸರೀಯ ಬಾಯಿಯನ್ನು ಮೂರು ಸಾರಿ ಮುತ್ತು-ರತ್ನಗಳಿಂದ ತುಂಬಿದನು.

ಇದಾದ ಮೇಲೆ ಹಾಡುಗಾರರನ್ನು ಬರಹೇಳಿ, ರಾತ್ರಿಸಮಯ ಪ್ರೇಮಕೇಳಿಯಲ್ಲಿ ನಿರತನಾದನು. ಅನಸರೀಯು ಹಿಜರಿ ಶಕೆ ೪೨೧ರಲ್ಲಿ ಮೃತನಾದನು.

ಅಸ್‌ಜದೀ – ಅಸ್‌ಜದೀಯು 'ಮರೋ'ನ ನಿವಾಸಿಯಾಗಿದ್ದನು ಈತನ 'ಖಸಿದಾ' (ಕಾವ್ಯದ ಒಂದು ಬಗೆ) ಬಹಳ ಪ್ರಸಿದ್ಧವಾಗಿವೆ. ಆತನು ಅನಸರೀಯ ಶಿಷ್ಯನಾಗಿದ್ದನು

ಮತ್ತು ಮಹಮದನ ಕುರಿತು 'ಮದಾ' (ವ್ಯಕ್ತಿಯ ಸ್ತುತಿವುಳ್ಳ ಕಾವ್ಯದ ಒಂದು ಬಗೆ), ಮತ್ತು ಈತನ 'ಖಸೀದಾ' ಬಹಳ ಪ್ರಸಿದ್ಧವಿದೆ. ಅದರ ಪಲ್ಲವಿಯು ಹೀಗಿದೆ;

"ನಮ್ಮ ಬಾದಶಾಹಾ ಸೋಮನಾಥವನ್ನು ಗೆದೆಯಲು ಹೋಗುವ ಮುಂಚೆ
ತನ್ನ ಸದ್ಗುಣಗಳ ಸಂದೇಶವನ್ನು ಆ ದೇಶಕ್ಕೆ ಕಳಿಸಿದನು."

ಅಸದೀಯ ಕಾವ್ಯ ಸಂಗ್ರಹ (ದಿವಾನ) ಎಲ್ಲಿಯೂ ಸಿಗುವುದಿಲ್ಲ. ಆದರೆ ಈ 'ರುಬಾಯಿ' ಸಾಮಾನ್ಯ ಜನರಲ್ಲಿ ಪ್ರಸಿದ್ಧವಿದೆ.

"ಸೆರೆ ಕುಡಿಯುವ ವಿಷಯಕ್ಕೆ ನನಗೆ ಇಂದಿನಿಂದ ಪಶ್ಚಾತ್ತಾಪವಿರಲಿ
ಸುಂದರ ಮುಖಿಯರ ನನ್ನ ಕಾಮವಿಹಾರಕ್ಕೆ ಇಂದಿನಿಂದ ಪಶ್ಚಾತ್ತಾಪವಿರಲಿ
ಮನಸ್ಸಿನಲ್ಲಿ ತಾಪ ಸೃಷ್ಟಿಸುವ ವಿಚಾರವನ್ನು ನಾಲಗೆಯಲ್ಲ ತರುವುದಕ್ಕೆ
ಪಶ್ಚಾತ್ತಾಪವಿರಲಿ
ನನ್ನ ಜೀವನದಲ್ಲಿ ಈ ಘಟಿಸಿದ ಈ ಪೂರ್ವದ ಪಾಪಗಳಗೆ ಪಶ್ಚಾತ್ತಾಪವಿರಲಿ"

ಫರಕೀ– ಅನಸರೀಯ ಫರಕೀ ಕೂಡ ಅನಸರೀಯ ಶಿಷ್ಯನಿದ್ದನು. ಇತಿಹಾಸಕಾರರು ಹೇಳುತ್ತಾರೆ. ಫರಕೀಯ ತಂದೆ 'ಅಮೀರ ಖಲ್ಫವಾಲೀ' 'ಸೀಸ್ಥಾ'ನದ ಗುಲಾಮನಿದ್ದನು.

ಫರಕೀಯು ಸೀಸ್ಥಾನದ ರೈತರಲ್ಲಿ ಒಬ್ಬನ ನೌಕರನಾಗಿದ್ದನು. ಈ ಸೇವೆಗೆ ಪ್ರತಿಯಾಗಿ ಆತನಿಗೆ ೨೦೫ ಮಣ ಧಾನ್ಯ ಹಾಗು ೧೦೦ ದರಮಗಳು ಸಿಗುತ್ತಿದ್ದವು. ಕೆಲ ಕಾಲದ ನಂತರ ಫರಕೀಯು 'ಬನಿ ಖಲಫ'ನ ಒಬ್ಬ ಕನ್ಯೆಯೊಂದಿಗೆ ಮದುವೆಯಾದನು. ಇದರಿಂದಾಗಿ ಆತನ ಖರ್ಚು ಅಧಿಕವಾಯಿತು. ಫರಕೀಯು ತನ್ನ ಯಜಮಾನನಿಗೆ ವೇತನ ಮತ್ತು ಧಾನ್ಯವನ್ನು ಹೆಚ್ಚಿಸಲು ಬೇಡಿದನು. ಯಜಮಾನನು ಹೇಳಿದನು, 'ನೀನು ನಿನ್ನ ವೇತನ ಮತ್ತು ಧಾನ್ಯದಲ್ಲಿ ಎಷ್ಟು ಹೆಚ್ಚಿಸಬೇಕೆಂದು ಕೇಳುತ್ತಿರುವಿಯೋ, ನೀನು ಅದಕ್ಕಿಂತ್ಕ ಹೆಚ್ಚು ಅರ್ಹತೆಯನ್ನು ಪಡೆದಿರುವೆ ಎಂಬುದು ನನಗೆ ಗೊತ್ತು. ಆದರೆ ನನಗೆ ಅದನ್ನು ಪೂರೈಸಲು ಶಕ್ಯವಿಲ್ಲ. ನಾನು ನಿನ್ನ ಬೇಡಿಕೆಯನ್ನು ಪೂರ್ಣಗೊಳಿಸಲಾರೆನು.' ಫರಕೀ ನಿರಾಶನಾಗಿ ಸುಲ್ತಾನ ಮಹಮದನ ಸಹೋದರನ ಮಗ 'ಅಬೂ-ಅಲ್-ಮುಜಫರ'ನ ಹತ್ತಿರ ಹೋಗಿ ಆತನನ್ನು ಸ್ತುತಿಸುವ ಒಂದು ಒಳ್ಳೆಯ 'ಖಸೀದಾ' ಬರೆದುಕೊಟ್ಟನು. ಇದರ ಪ್ರತಿಯಾಗಿ ಅಬೂ-ಅಲ್-ಮುಜಫರ ಒಂದು ಬೆಲೆಬಾಳುವ ಉಡುಪು ಮತ್ತು ಬಹಳಷ್ಟು ಮುತ್ತು-ರತ್ನಗಳನ್ನು ಕೊಟ್ಟನು. ಇದಾದ ಕೆಲ ದಿನಗಳ ಮೇಲೆ ಫರಕೀಯು ಸುಲ್ತಾನ ಮಹಮದನ ಸೇವೆಯಲ್ಲಿ ಹಾಜರಾದನು. ಮಹಮದನ ದರ್ಬಾರಿನಲ್ಲಿ ಈತನಿಗೆ ಗೌರವ ಸ್ಥಾನವಿದ್ದಿತು. ತುರ್ಕಿಯ ೨೦ ಗುಲಾಮರು ಈತನ ಮುಂದೆ ಮುಂದೆ ನಡೆಯುತ್ತಿದ್ದರು.

ದಖಿಖೀ -ದಖಿಖೀಯು ಒಬ್ಬ ಪುರಾತನ ಕವಿ. ಸುಲ್ತಾನ ಮಹಮೂದನ ಅವಧಿಯಲ್ಲಿ ಈತನು ಶಹಾನಾಮಾ ಪ್ರಾರಂಭಿಸಿದನು. ಸುಮಾರು ೧೦೦೦ ಪದ್ಯವನ್ನು ಬರೆದಿದ್ದನು. ಕೆಲವು ಇತಿಹಾಸಕಾರರು ಬರೆಯುವುದೇನೆಂದರೆ ದಖಿಖೀ ಆರಂಭಿಸಿದ ಶಹನಾಮಾವನ್ನು ಫಿರ್ದೌಸಿ ಪೂರ್ಣಗೊಳಿಸಿದನು. ಈ ಸತ್ಯ ದೇವರಿಗೆ ಗೊತ್ತು.

ಅಮೀರ ಮೊಹ್ಮದ-ಬಿನ್-ಮಹಮದ ಘಜನಿ:

ಸುಲ್ತಾನ ಮಹಮೂದನ ಮೃತ್ಯುವಿನ ನಂತರ, ಆತನ ಮೊದಲನೆಯ ಮಗ ಅಮೀರ ಮೊಹ್ಮದನು ಗೋರಗಾವ್‌ದಲ್ಲಿ, ಎರಡನೆಯ ಮಗ ಅಮೀರ ಮಸೂದ ಸಫಹಾದಲ್ಲಿದ್ದನು.

ಮಹಮದನು ಮೃತಪಟ್ಟನಂತರ ಆತನ ಅಳಿಯ ಅಮೀರ ಅಲೀ-ಬಿನ್-ಇರಸಾಲನ್-ನು ತನ್ನ ಮಾವನ ಮೃತ್ಯು ಪತ್ರದ ಪ್ರಕಾರ ಅಮೀರ ಮೊಹ್ಮದನನ್ನು ಘಜನಿಗೆ ಕರೆದನು, ಮತ್ತು ಆತನ ತಂದೆಯ ವಾರಸುದಾರನನ್ನಾಗಿ ಮಾಡಿದನು. ಅಮೀರ ಮೊಹ್ಮದ ರಾಜ್ಯಾಡಳಿತವನ್ನು ತನ್ನ ಕೈಗೆ ತೆಗೆದುಕೊಂಡ ನಂತರ ತನ್ನ ಚಿಕ್ಕಪ್ಪನಾದ ಅಮೀರ ಯೂಸುಫನನ್ನು ದಂಡನಾಯಕನನ್ನಾಗಿ ಮತ್ತು ಖಾಜಾ-ಅಬೂ-ಸಹಲ್-ಅಮಹ್ಮದ-ಬಿನ್-ಹಸನ-ಹದ್ಮಾನಿ-ಯನ್ನು ರಾಜ್ಯದ ಮಂತ್ರಿಯನ್ನಾಗಿ ನಿಯಮಿಸಿದನು. ಅಮೀರ ಮೊಹ್ಮದನು ಪ್ರಜೆಗಳನ್ನು ತನ್ನ ವಿಧೇಯರನ್ನಾಗಿ

ಮಾಡಿಕೊಳ್ಳಲು ಬಹಳ ಪ್ರಯತ್ನಿಸಿದನು. ಸರ್ಕಾರದ ಭಂಡಾರದ ಬಾಗಿಲುಗಳನ್ನು ಸಾಮಾನ್ಯ ಹಾಗೂ ವಿಶೇಷ ಜನರಿಗಾಗಿ ತೆರೆದನು. ಇದರಿಂದಾಗಿ ಪ್ರತಿ ವ್ಯಕ್ತಿಯು ಶಾಂತಿ, ಸಂಭ್ರಮದ ಜೀವನ ಮಾಡಿದನು. ಪ್ರಜೆಗಳು ಮತ್ತು ಸೈನಿಕರ ಪ್ರತಿಯೊಂದು ವಿಭಾಗವು ಸಂತುಷ್ಟವಾಗಿ ಕಂಡು ಬಂದಿತು. ಆದರೆ ಅಮೀರ ಮೊಹ್ಮದನ ಕೊಡುಗೆ ಹಾಗು ಬಹುಮಾನಗಳು ಜನರ ಮನಸ್ಸಿನಲ್ಲಿ ಮೇಲೆ ಯಾವ ಪರಿಣಾಮವನ್ನು ಬೀರಲಿಲ್ಲ. ಬಹಳ ಜನರ ಒಂದು ಗುಂಪು ಅಮೀರ ಮೊಹ್ಮದನಕ್ಕಿಂತಲೂ ಅಮೀರ ಮಸೂದನಿಗೆ ಆದ್ಯತೆ ನೀಡಿದರು.

ಅಮೀರ ಐಯಾಜನ ವಿದ್ರೋಹ:

ಸುಲ್ತಾನ ಮಹಮದನು ಮೃತಪಟ್ಟ ೫೦ ದಿನಗಳ ನಂತರ ಅಬೂ-ಅಲ್-ನಜಂ ಅಮೀರ ಐಯಾಜ-ಬಿನ್-ಇಸಾಕನು ಗುಲಾಮರು ಮತ್ತು ಅಬೂ-ಅಲೀ-ವಾಯಾನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ದಿನದ ಸಮಯದಲ್ಲಿ ರಾಜ್ಯದ ಕುದುರೆಗಳು ಕಟ್ಟುವ ಸ್ಥಳದಲ್ಲಿ ಪ್ರವೇಶಿಸಿ ವಿಶೇಷವಾದ ಕುದುರೆಗಳನ್ನು ವಶಕ್ಕೆ ತೆಗೆದುಕೊಂಡು, ಎಲ್ಲರೂ ಅವುಗಳ ಮೇಲೆ ಕುಳಿತುಕೊಂಡು 'ಬಸ್ತ' ಕಡೆಗೆ ಹೊರಟರು. ಅಮೀರ ಮೊಹ್ಮದನಿಗೆ ಈ ವಿಷಯ ತಿಳಿದೊಡನೆ ತನ್ನ ಒಬ್ಬ ಬುದ್ಧಿವಂತ, ವಿಶ್ವಾಸಾರ್ಹ ಹಿಂದೂ ಅಮೀರ ಸೋಯಿಂದರ ರಾಯನಿಗೆ ಹಿಂದೂಗಳ ಒಂದು ಸೈನ್ಯದ ತಂಡದೊಂದಿಗೆ ಅಮೀರ ಐಯಾಜನ ಬೆನ್ನಟ್ಟಲು ಕಳುಹಿಸಿದನು. ಈ ಸೈನ್ಯವು ಅಮೀರ ಐಯಾಜನನ್ನು ಸ್ವಲ್ಪ ದೂರದಲ್ಲಿಯೇ ಕಂಡಿತು, ಇಬ್ಬರ ಮಧ್ಯೆ ಘೋರ ಯುದ್ಧವಾಗಿ ಸೋಯಿಂದರ ರಾಯ್ ಬಹು ಸಂಖ್ಯೆಯ ತಂಡದ ಸೈನಿಕರೊಂದಿಗೆ ಮೃತಪಟ್ಟನು. ಅಮೀರ ಐಯಾಜನ ಜೊತೆಗಾರರು ಕೂಡ ಈ ಯುದ್ಧದಲ್ಲಿ ಹತರಾದರು. ಹಿಂದೂ ಸೈನ್ಯದಲ್ಲಿ ಉಳಿದ ಸೈನಿಕರನ್ನು ಅಮೀರ ಐಯಾಜನು ಬಂದಿಯಾಗಿಸಿ, ಅವರ ರುಂಡಗಳನ್ನು ದೇಹದಿಂದ ಬೇರೆ ಮಾಡಿ ಅಮೀರ ಮೊಹ್ಮದನ ಹತ್ತಿರ ಕಳುಹಿಸಿಕೊಟ್ಟು ತಾನು ಮುಂದೆ ಹೊರಟನು.

ಅಮೀರ ಮಸೂದನ ಇಚ್ಛೆ:

ಅಮೀರ ಐಯಾಜ ನಿಶಾಪುರಕ್ಕೆ ಬಂದು, ಅಲ್ಲಿ ಅಮೀರ ಮಸೂದನನ್ನು ಭೇಟಿಯಾದನು. ಇತಿಹಾಸಕಾರರ ಹೇಳಿಕೆ ಏನೆಂದರೆ ಅಮೀರ ಮಸೂದನು ಹಮದಾನನಲ್ಲಿರುವಾಗ ತನ್ನ ತಂದೆಯ ಮರಣದ ವಾರ್ತೆ ಕೇಳಿದನು. ಈತನು ಇರಾಕ ಹಾಗು ಅಜ್ಜಮನಲ್ಲಿ ತನ್ನ ಬುದ್ಧಿವಂತ ಹಾಗು ಅನುಭವಿ ನಾಯಬರನ್ನು ಮತ್ತು ಇತರ ಸಿಬ್ಬಂದಿಗಳನ್ನು ನಿಯಮಿಸಿದನು. ಸ್ವತಃ ತಾನು ಆದಷ್ಟು ಬೇಗನೆ ಖುರಸ್ಥಾನಗೆ ಬಂದನು. ಇಲ್ಲಿಂದ ತನ್ನ ಸಹೋದರ ಅಮೀರ ಮೊಹ್ಮದನಿಗೆ ಈ ಸಾರಾಂಶವುಳ್ಳ ಒಂದು ಪತ್ರವನ್ನು ಬರೆದನು, 'ಮೃತ ಸುಲ್ತಾನ ಮಹಮದನು ನಿನಗೆ

ಒಪ್ಪಿಸಿದ ದೇಶಗಳನ್ನು ನಾನು ನನ್ನ ವಶಕ್ಕೆ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ನನಗೆ ನನ್ನ ವಶದಲ್ಲಿರುವ ದೇಶಗಳಾದ ಜಬ್ಬಾಲ, ತುರಬಸ್ಥಾನ ಮತ್ತು ಇರಾಕಗಳು ಸಾಕು; ನನ್ನ ಇಚ್ಛೆಯೆಂದರೆ ನಿನ್ನ ದೇಶಗಳಲ್ಲಿ ನಿನಗಿಂತಲೂ ಮೊದಲು ನನ್ನ ಹೆಸರು 'ಖುತ್ಬಾ'ದಲ್ಲಿ ಓದುವಂತಗಾಲಿ.'

ಇತಿಹಾಸದ ಪುಸ್ತಕಗಳಲ್ಲಿ ನಿರೂಪಿಸಲಾದುದೇನೆಂದರೆ ಅಮೀರ ಮಸೂದ ಹಾಗು ಮೊಹ್ಮದ ಇಬ್ಬರು ಸಹೋದರರು ಒಂದೇ ದಿನ ಜನ್ಮ ತಾಳಿದರು. ಮಸೂದನು ತನ್ನ ಸಹೋದರನಿಗಿಂತಲೂ ಕೆಲವು ಕ್ಷಣ ಮೊದಲು ಪ್ರಪಂಚದಲ್ಲಿ ಬಂದಿದ್ದ. ಅದಕ್ಕಾಗಿ ಅಮೀರ ಮೊಹ್ಮದ-ಮಸೂದರಲ್ಲಿ ಹಿರಿಯ ಮತ್ತು ಕಿರಿಯರ ವಿಚಾರವಿರಲಿಲ್ಲ. ಆತನು ತನ್ನನ್ನು ತಮ್ಮನೆಂದು ಭಾವಿಸುತ್ತಿರಲಿಲ್ಲ. ಅದಕ್ಕಾಗಿ ಮಸೂದನು ಆತನನ್ನು ಗೌರವಿಸುವುದು ಅವಶ್ಯಕವಿರಲಿಲ್ಲ.

ಮಸೂದನ ಪತ್ರವು ಅಮೀರ ಮೊಹ್ಮದನಿಗೆ ತಲುಪಿದ ಮೇಲೆ, ಬಹಳ ತಳಮಳಗೊಂಡು, ಮಸೂದನಿಗೆ ಕಟುವಾದ ಶಬ್ದಗಳನ್ನು ಉಪಯೋಗಿಸಿ ಉತ್ತರಿಸಿದನು. ಉತ್ತರವು ಕೈಸೇರಿದ ಮೇಲೆ ಅಮೀರ ಮೊಹ್ಮದನು ಯುದ್ಧಕ್ಕೆ ಸನದ್ಧನಾಗಲು ಆರಂಭಿಸಿದನು. ದರ್ಬಾರಿಗಳು, ಮಂತ್ರಿಗಳೆಲ್ಲರೂ ಇಬ್ಬರು ಸಹೋದರರ ಮಧ್ಯೆ ಕಾಳಗವಾಗದಂತೆ ಬಹಳ ಪ್ರಯತ್ನಿಸಿದರು ಮತ್ತು ಸಮಸ್ತ ವಿಷಯಗಳು ಶಾಂತಿಯು ವಾತಾವರಣದಲ್ಲಿ ಪರಿಹರಿಸಬೇಕೆಂದರು. ಆದರೆ ಅಮೀರ ಮೊಹ್ಮದನು ಯಾರ ಮಾತನ್ನು ಕೇಳಲಿಲ್ಲ. ಮತ್ತು ತನ್ನ ನಿರ್ಧಾರಕ್ಕೆ ಅಚಲವಾಗಿ ಅಂಟಿಕೊಂಡನು.

ಅಮೀರರ ವಿದ್ರೋಹ ಮತ್ತು ಅಮೀರ ಮೊಹ್ಮದನ ಪತನ:

ಅಮೀರ ಮೊಹ್ಮದನು ದೊಡ್ಡ ಸೈನ್ಯದೊಂದಿಗೆ ಘಜನಿಯಿಂದ ಹೊರಟನು. ಹಿಜರಿಶಕೆ ೪೨೧ರ ರಂಜಾನ ತಿಂಗಳ ಮೊದಲನೆಯ ದಿನಾಂಕದಂದು, ಅಮೀರ ಮೊಹ್ಮದನು 'ನಕೀಯಾಬಾದ' *(ಈ ಪಟ್ಟಣವು ಘೋರ ಹಾಗೂ ಘಜನಿ ಮಧ್ಯದಲ್ಲಿ, ಘಜನಿಯಿಂದ ೩೦ ಮೈಲು ದೂರದಲ್ಲಿದೆ) ಎಂಬ ಸ್ಥಳಕ್ಕೆ ಬಂದನು. ಅದನ್ನು 'ನಿಕಬತ ಆಬಾದ' ಎಂದು ಹೇಳುವುದು ಸೂಕ್ತ. ಇಲ್ಲಿ ಆತನು ತನ್ನ ಸೈನ್ಯದೊಂದಿಗೆ ಡೇರೆಯಲ್ಲಿ ವಾಸಿಸಿದನು. ರಂಜಾನ ತಿಂಗಳನ್ನು ನಕೀಯಾಬಾದನಲ್ಲಿಯೇ ಕಳೆದನು. ನಂತರ ರಂಜಾನ್ ಹಬ್ಬದ ದಿನದಂದು ಇದ್ದಕ್ಕಿದ್ದಂತೆ ಅಮೀರ ಮೊಹ್ಮದನ ಶಿರಸ್ಸಿನಿಂದ ಕಿರೀಟವು ಕೆಳಗುರುಳಿತು. ಇದನ್ನು ಜನರು ಅಪಶಕುನವೆಂದು ತಿಳಿದು ಆತನಿಂದ ದೂರವಾಗಲು ದೃಢವಾಗಿ ನಿಶ್ಚಯಿಸಿದರು. ಶವಾಲ್ ತಿಂಗಳ ಮೂರನೆಯ ದಿನದಂದು ಪ್ರಖ್ಯಾತ ಅಮೀರರಾದ, ಅಮೀರ-ಅಲೀ-ಖುಶಾವಂದ, ಅಮೀರ ಯೂಸುಫ ಸಬಸ್ತಗೀನ್ ಮತ್ತು ಮೀರ ಹಸನ ಇತರರು ಅಮೀರ ಮೊಹ್ಮದನ ವಿರುದ್ಧ ಬಂಡಾಯ ಮಾಡಿದರು. ಈ ಅಮೀರರೆಲ್ಲ ಅಮೀರ ಮಸೂದನ ಪರವಾಗಿ ವೀರ ಘೋಷಣೆ ಮಾಡುತ್ತ ಅಮೀರ ಮೊಹ್ಮದನ ಡೇರೆಯನ್ನು ಪ್ರವೇಶಿಸಿ ಸುತ್ತುವರೆದರು. ಇವರೆಲ್ಲರೂ

ಅಮೀರ ಮೊಹ್ಮದನನ್ನು ಬಂಧಿಸಿ, ಖಂದಾರದ ಪ್ರಜೆಗಳು 'ಖಲಜ್ಜ' ಎಂದು ಕರೆಯುವ 'ವಲಜ್ಜ' ಕೋಟೆಯಲ್ಲಿ ಬಂದಿಯಾಗಿರಿಸಿದರು ಮತ್ತು ಅಮೀರ ಮಸೂದನ ಸ್ವಾಗತಕ್ಕಾಗಿ ಹರಾತಗೆ ಹೊರಟು ಹೋದರು. ಅಮೀರ ಮಸೂದನು ಹರಾತಿನಿಂದ ಬಲ್ಗಗೆ ಬಂದು ಅಹ್ಮದ ಹುಸೇನ ನೇಮದೀ ಗೆ ಕೊಲ್ಲುವ ಶಿಕ್ಷೆ ಕೊಟ್ಟನು. ಏಕೆಂದರೆ ಈತನು ಪವಿತ್ರ ಮಕ್ಕಾದಿಂದ ಮರುಳುವಾಗ ಈಜಿಪ್ತ್‌ನ ಖಲಿಫಾರು ನೀಡಿದ ಬೆಲೆಬಾಳುವ ಉಡುಪನ್ನು ಸ್ವೀಕರಿಸಿದ್ದನು. ಇದು ಒಂದು ನೆಪವಾಗಿತ್ತು. ನಿಜವಾದ ಕಾರಣವೆಂದರೆ ಒಂದು ದಿನ ಸುಲ್ತಾನ ಮಹಮದನ ಜೀವಿತಾವಧಿಯಲ್ಲಿ ಅಹ್ಮದ ಹುಸೇನನು ದರ್ಬಾರಿನಲ್ಲಿ, ಅಮೀರ ಮಸೂದನು ರಾಜನಾದ ದಿನ ನನ್ನನ್ನು ನೇಣಿಗೇರಿಸಿರಿ ಎಂದು ಹೇಳಿದ್ದನು. ಅಮೀರ ಮಸೂದನು ವಂಚನೆಯ ಆರೋಪದಲ್ಲಿ ಅಬೂ-ಅಲೀ-ಖುಶಾವಂದನ್ನು ಕೊಲ್ಲಿಸಿದನು ಹಾಗೂ ಅಮೀರ ಯೂಸುಫನನ್ನು ಬಂದಿಯಾಗಿಸುವ ಶಿಕ್ಷೆ ನೀಡಿದನು. ಯೂಸುಫನು ಬಂದಿಯಾದ ಸ್ಥಿತಿಯಲ್ಲಿ ಮರಣ ಹೊಂದಿದನು. ಮಸೂದನ ಆದೇಶದ ಮೇಲೆ ಅಮೀರ ಮೊಹ್ಮದನಿಗೂ ಕೂಡ ಬಂದಿಯಾದ ಸ್ಥಿತಿಯಲ್ಲಿ ಕುರುಡನನ್ನಾಗಿ ಮಾಡಲಾಯಿತು. ಅಮೀರ ಮೊಹ್ಮದನು ೫೦ ದಿನಗಳವರೆಗೆ ಸಹ ರಾಜ್ಯ ಮಾಡಿರಲಿಲ್ಲ. ಅಮೀರ ಮೊಹ್ಮದನು ಕೋಟೆಯಲ್ಲಿ ಬಂದಿಯಾಗಿದ್ದನು ಮತ್ತು ಮಸೂದನ ಕೊಲೆಯ ನಂತರ ಸಿಂಹಾಸನಾರೂಢನಾದನು. ಆದರೆ ಒಂದು ವರ್ಷದನಂತರ ಮೋದುದ್-ಬಿನ್-ಮಸೂದನ ಆದೇಶದ ಪ್ರಕಾರ ಕೊಲ್ಲಲ್ಪಟ್ಟನು.

ಸುಲ್ತಾನ ಮಸೂದ ಬಿನ್-ಮಹಮದ ಘಜನವಿ:

ಅಮೀರ ಮಸೂದನು ಬಹಳ ಶೂರ ಹಾಗೂ ಉದಾರಿಯಾಗಿದ್ದನು. ಮಸೂದನ ಶೌರ್ಯಕ್ಕಾಗಿ ಈತನನ್ನು 'ರುಸ್ತೂಂ ಸಾನಿ' (ಎರಡನೆಯ ರುಸ್ತುಮ) ಎಂದು ಕರೆಯುತ್ತಿದ್ದರು. ಮಸೂದನ ಬಾಣದ ತೀವ್ರತೆ ಎಷ್ಟು ಇರುತ್ತಿತ್ತೆಂದರೆ ಅದು ಗಾಯಗೊಳಿಸಿದ ಮೇಲೆ ಆನೆಯ ಶರೀರದಲ್ಲಿ ಪ್ರವೇಶಿಸುತ್ತಿತ್ತು. ಈತನ ಗದೆಯು ಸಾಮಾನ್ಯ ವ್ಯಕ್ತಿಯು ಒಂದೇ ಕೈಯಿಂದ ಎತ್ತಲಾರದಷ್ಟು ಭಾರವಾಗಿತ್ತು. ಸತ್ಯವಾಣಿ ಹಾಗು ಪ್ರಾಮಾಣಿಕತೆ ಮಸೂದನ ಗುಣಗಳಾಗಿದ್ದವು. ಅದಕ್ಕಾಗಿ ಎಷ್ಟೋ ಸಲ ತನ್ನ ತಂದೆ ಸುಲ್ತಾನ ಮಹಮದನೊಂದಿಗೆ ವಿರೋಧವಾಗಿ ಮಾತನಾಡಿ ಬಿಡುತ್ತಿದ್ದನು. ಹೀಗಾಗಿ ಸುಲ್ತಾನ ಮಹಮದನು ಈತನನ್ನು ಬಹಳ ಇಷ್ಟಪಡುತ್ತಿರಲಿಲ್ಲ. ತದ್ವಿರುದ್ಧವಾಗಿ ಮಹಮದ, ಅಮೀರ ಮೊಹ್ಮದನ್ನು ಬಹಳ ಇಷ್ಟಪಡುತ್ತಿದ್ದನು, ಏಕೆಂದರೆ ಅಮೀರ ಮೊಹ್ಮದನು ಪ್ರತಿ ಮಾತಿನಲ್ಲೂ ತಂದೆಯ ಮಾತಿಗೆ ಒಪ್ಪಿಗೆ ಸೂಚಿಸುತ್ತಿದ್ದನು. ಮಸೂದನಿಂದ ಮಹಮದನಿಗೆ ವಿಷಮತೆ ಮತ್ತು ಅಮೀರ ಮೊಹ್ಮದನೊಂದಿಗೆ ಪ್ರೀತಿ ಎಷ್ಟೊಂದು ಬೆಳೆದಿತ್ತೆಂದರೆ ಮಹಮದನು ಮಸೂದನನ್ನು ಪ್ರತಿಯೊಂದು ರೀತಿಯಲ್ಲಿ ಆತನ ಹಕ್ಕು ಚ್ಯುತಿಪಡಿಸುತ್ತಿದ್ದನು. ಬಗದಾದಿನ ಖಲೀಫನೊಂದಿಗೆ

ನಡೆದ ಪತ್ರ ವ್ಯವಹಾರಗಳಲ್ಲಿ ಅಮೀರ ಮೊಹ್ಮದನ ಹೆಸರು ಮಸೂದನಕ್ಕಿಂತಲೂ ಮೊದಲು ಬರೆಯಲು ಹೇಳಲಾಗಿತ್ತು.

ಮಸೂದನ ಹಕ್ಕು ಚ್ಯುತಿ:

'ತಬಖಾತೆನಾಸೀರಿ'ಯ ಲೇಖಕ, ಅಬೂ-ನಸ್ರ-ಮಿಶ್ಕಾತಿ ನಿರ್ಭರಿಸಿಯು ನಿರೂಪಣೆ ಮಾಡಿದ್ದೇನೆಂದರೆ ಮೇಲೆ ಉಲ್ಲೇಖಿಸಲಾದ ಸುಲ್ತಾನ ಮಹಮದನ ಪತ್ರದ ಕರಡು ನಕಲನ್ನು ಆಸ್ಥಾನದಲ್ಲಿ ದರ್ಬಾರಿನಲ್ಲಿ ಓದಿದಾಗ, ಅದನ್ನು ಕೇಳಿ ಸಮಸ್ತ ದರ್ಬಾರಿಗಳು ವ್ಯಥೆಗೊಂಡರು ಮತ್ತು ಮಸೂದನ ಹಕ್ಕುಗಳ ಚ್ಯುತಿಯನ್ನು ಅಸಮಂಜಸವೆಂದು ಬಗೆದರು. ಅಮೀರ ಮಸೂದನು ದರ್ಬಾರದಿಂದ ಎದ್ದು ಹೊರಗೆ ಹೋದ ಮೇಲೆ, ಅಬು ನಸರ ಕೂಡ ಆತನ ಹಿಂದೆ ಹಿಂದೆ ಹೊರಟು ಹೇಳಿದನು, 'ನಿನ್ನ ಹಕ್ಕುಗಳ ಚ್ಯುತಿಯಿಂದ ನನಗೂ ಹಾಗೂ ಸಮಸ್ತ ದರ್ಬಾರಿಗಳಿಗೂ ವ್ಯಥೆಯಾಗಿದೆ.' ಎಂದು ಹೇಳಿದನು. ಮಸೂದನು, 'ಇದನ್ನು ಲಕ್ಷಿಸಬೇಡಿ. ಖಡ್ಗವೂ ಲೇಖನಿಗಿಂತಲೂ ಸತ್ಯ ಹಾಗು ಶಕ್ತಿಯುವಾಗಿರುತ್ತದೆನ್ನುವ ಹಿರಿಯರ ಮಾತೊಂದನ್ನು ನೀವು ಕೇಳಿಲ್ಲವೆ?' ಎಂದು ಉತ್ತರಿಸಿದನು. ಮಸೂದನೊಂದಿಗೆ ಮಾತಸಾಡಿ ದರ್ಬಾರಿಗೆ ಮರುಳಿ ಬಂದ ನಂತರ, ಅಬು ನಸರನನ್ನು ಸುಲ್ತಾನ ಮಹಮದನು ತನ್ನ ಹತ್ತಿರ ಕರೆದು ಕೇಳಿದನು. 'ಮಸೂದನ ಜೊತೆ ಜೊತೆಯಲ್ಲಿ ದರ್ಬಾರದಿಂದ ಹೊರಗೇಕೆ ಹೋದೆ ಮತ್ತು ಅವನೊಂದಿಗೆ ಏನು ಮಾತುಕತೆಯಾಯಿತು?' ಸುಲ್ತಾನ ಮಹಮದನಿಗೆ ನಾನು ಎಲ್ಲವನ್ನು ಸತ್ಯವಾಗಿ ಹೇಳಿದೆನು. ಸುಲ್ತಾನ ಮಹಮದನು ನನ್ನ ಹಾಗು ಮಸೂದನ ಸಂವಾದ ಕುರಿತು ಕೇಳಿ ನನಗೆ ಚೆನ್ನಾಗಿ ಗೊತ್ತು, ಮಸೂದನು ಎಲ್ಲ ರೀತಿಯಲ್ಲಿಯೂ, ಅಮೀರ ಮೊಹ್ಮದನಗಿಂತಲೂ ಉತ್ತಮನಾಗಿದ್ದಾನೆ. ನನ್ನ ನಂತರ ಮಸೂದನೇ ನನ್ನ ರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳುವನು ಎಂದು ನಾನು ಧೃಢವಾಗಿ ನಂಬಿದ್ದೇನೆ. ಆದರೆ ನಾನು ಇದೆಲ್ಲವನ್ನು ಏಕೆ ಮಾಡುತ್ತಿದ್ದೇನೆಂದರೆ ಅಮೀರ ಮೊಹ್ಮದನು ನನ್ನ ಜೀವನದಲ್ಲಿ ನನಗೆ ಯಾವಾಗಲೂ ಗೌರವವನ್ನು ಸೂಚಿಸುತ್ತಾನೆ ಮತ್ತು ಪ್ರತಿ ರೀತಿಯಲ್ಲಿಯೂ ನನ್ನನ್ನು ರಕ್ಷಿಸುತ್ತಾನೆ. ಅಬು ನಸರನ ಹೇಳಿಕೆ ಎಂದರೆ ಈ ಎಲ್ಲಾ ಘಟನೆಯಲ್ಲಿ ಎರಡು ಮಾತಿನ ಬಗ್ಗೆ ನನಗೆ ಆಶ್ಚರ್ಯವಿದೆ. ಒಂದು ಮಸೂದನು ಅರ್ಥ ಪೂರ್ಣ ಉತ್ತರವು ನನ್ನ ತಿಳುವಳಿಕೆಯಲ್ಲಿ ಉತ್ಕೃಷ್ಟವಿತ್ತು ಮತ್ತು ಎರಡನೆಯದೇನೆಂದರೆ ಸುಲ್ತಾನ ಮಹಮದನ ರಾಜ್ಯಾಡಳಿತದ ಬಗ್ಗೆ ನಾನು ಮಸೂದನೊಂದಿಗೆ ಮಾತನಾಡಿದುದು ಅತ್ತ ಮಹಮದನಿಗೆ ತಿಳಿಸಲಾಯಿತು.

ಸುಲ್ತಾನ ಮಸೂದನು ಸಿಂಹಾಸನಾರೂಢನಾದ ಮೇಲೆ, ಕಾಲೇಂಜರ ಕೋಟೆಯಲ್ಲಿ ಸುಲ್ತಾನ ಮಹಮದನ ಆದೇಶಕ್ಕನುಗುಣವಾಗಿ ಬಂದಿಯಾಗಿದ್ದ ಅಹ್ಮದ ಬಿನ್ ಹಸನ ಮೇಮದೀಯನ್ನು ಬಂಧಮುಕ್ತ ಮಾಡಿದನು ಮತ್ತು ಆತನಿಗೆ ರಾಜ್ಯದ ಮಂತ್ರಿ ಪದವಿ ನೀಡಿದನು. ಇದಲ್ಲದೆ, ಅಮೀರ ಅಹ್ಮದ-ಬಿನ್-ನಯಾ-

ಸಬಸ್ತಗೀನ್‌ನಿಂದ ಬಹಳಷ್ಟು ವಸ್ತುಗಳನ್ನು ಮತ್ತು ಸಂಪತ್ತನ್ನು ಪಡೆದುಕೊಂಡನು. ಇದಾದನಂತರ ಸುಲ್ತಾನ ಮಸೂದನು ಅಮೀರ ಅಹ್ಮದನನ್ನು ಹಿಂದುಸ್ತಾನದ ಸೈನ್ಯಾಧಿಕಾರಿಯನ್ನಾಗಿ (ದಂಡನಾಯಕನನ್ನಾಗಿ) ನಿಯಮಿಸಿ ಲಾಹೋರಿಗೆ ಕಳುಹಿಸಿ ಕೊಟ್ಟನು. ಸುಲ್ತಾನ ಮಹಮದನ ಆದೇಶಕ್ಕೊಳಪಟ್ಟು ಕೈದಿಯಾಗಿದ್ದ ಮಜ್ದ-ಅಲ್-ದೌಲಾ-ವ-ಯಲಮಿಯನ್ನು ಬಂಧನ ಮುಕ್ತನನ್ನಾಗಿ ಮಾಡಿ ಆಸ್ಥಾನದಲ್ಲಿ ಸೇರಿಸಿಕೊಂಡನು.

ಕಚ್ಚ ಹಾಗು ಮಖರಾನಿನ ಗೆಲವು:

ಹಿಜರಿ ಶಕೆ ೪೨೨ರಲ್ಲಿ ಅಮೀರ ಮಸೂದ ಬಲ್ಗನಿಂದ ಘಜನಿಗೆ ಬಂದನು. ಇಲ್ಲಿಗೆ ಬಂದ ನಂತರ ಈತನು ಕಚ್ಚ ಹಾಗು ಮಖರಾನ ಗೆದ್ದುಕೊಳ್ಳಲು ಒಂದು ದೊಡ್ಡ ಸೈನ್ಯವನ್ನು ಕಳುಹಿಸಿದನು. ಇವೆರಡು ಪ್ರಾಂತಗಳನ್ನು ಗೆದ್ದಕೊಂಡನಂತರ ಅಮೀರ ಮಸೂದನು ಅಲ್ಲಿ ತನ್ನ ಹೆಸರಿನ 'ಖುತಬಾ' ಮತ್ತು ನಾಣ್ಯವನ್ನು ಜಾರಿ ಮಾಡಿದನು. ಈ ಎರಡು ನಗರಗಳ ಗೆಲುವಿನ ಸಂಕ್ಷಿಪ್ತ ವರದಿ ಹೀಗಿದೆ.

ಸುಲ್ತಾನ ಮಹಮದನ ಕಾಲದಲ್ಲಿ ಕಚ್ಚ ಹಾಗು ಮಖರಾನನಿನ ರಾಜನು ಮೃತಪಟ್ಟಿದ್ದನು. ಆತನ ಎರಡು ಮಕ್ಕಳಲ್ಲಿ ಒಬ್ಬನ ಹೆಸರು 'ಈಸಾ' ಎಂದಿದ್ದು ಆತನು ತಂದೆಯ ರಾಜ್ಯವನ್ನು ವಶಪಡಿಸಿಕೊಂಡನು. ಈತನು ತನ್ನ ಸಹೋದರ ಅಬೂ-ಅಲ್-ಅಸಾನಿಗೆ ಯಾವ ವಸ್ತುಗಳನ್ನು ಕೊಡದೆ ರಾಜ್ಯದಿಂದ ಹೊರದೂಡಿದನು. ಅಬೂ-ಅಲ್-ಅಸಾನಲ್ಲಿ ತನ್ನ ಸಹೋದರನನ್ನು ಎದುರಿಸುವ ಶಕ್ತಿಯಿರಲಿಲ್ಲ. ಅದರಿಂದ ಈತನು ಅಮೀರ ಮಸೂದನ ದರ್ಬಾರಿನಲ್ಲಿ ಅರ್ಜಿಯ ಮೂಲಕ, ಅಮೀರ ಮಸೂದರು ಸೈನ್ಯದ ಸಹಾಯದಿಂದ ತನ್ನ ಹಿರಿಯರ ದೇಶದ ಮೇಲೆ ಆಕ್ರಮಿಸಿ ಸ್ವಾಧೀನ ಪಡೆದರೆ ಸದಾ ಕಾಲದಲ್ಲಿ ಘಜನಿಯ ರಾಜ್ಯಕ್ಕೆ ಅಧೀನನಾಗಿ ಇರುವುದಲ್ಲದೆ, ತನ್ನ ಪ್ರಾಂತದಲ್ಲಿ ಅಮೀರ ಮಸೂದ ಹೆಸರಿನ 'ಖುತಬಾ' ಹಾಗೂ ನಾಣ್ಯಗಳನ್ನು ಜಾರಿ ಮಾಡುವುದಾಗಿ ತಿಳಿಸಿದನು. ಅಮೀರ ಮಸೂದನು ಅಬೂ-ಅಲ್-ಅಸಾನ ವಿನಂತಿಯನ್ನು ಮನ್ನಿಸಿ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಮಖರಾನಿನ ಕಡೆ ಹೊರಟನು. ಮಸೂದನು ತನ್ನ ಸೈನಿಕರಿಗೆ, ಒಂದು ವೇಳೆ 'ಈಸಾ'ನು ಒಪ್ಪಂದ ಒಪ್ಪಿ ರಾಜ್ಯದ ಅರ್ಧ ಪ್ರಾಂತವನ್ನು ಅಬೂ-ಅಲ್-ಅಸಾನಿಗೆ ಕೊಡಲು ಸಿದ್ಧನಾದರೆ, ಆತನೊಂದಿಗೆ ಯುದ್ಧ ಮಾಡುವುದು ಬೇಡ. ಒಂದು ವೇಳೆ ಆತನು ಈ ಸೈನ್ಯವನ್ನು ನೋಡಿ ಒಪ್ಪಂದಕ್ಕೆ ಮುಂದಾಗದಿದ್ದರೆ, ಆತನೊಂದಿಗೆ ಯುದ್ಧ ಮಾಡಿ ಮತ್ತು ರಾಜ್ಯವನ್ನು ಆತನ ವಶದಿಂದ ತೆಗೆದುಕೊಂಡು ಅಬೂ-ಅಲ್-ಅಸಾನಿಯ ಸ್ವಾಧೀನಕ್ಕೆ ಒಪ್ಪಿಸಿರಿ, ಎಂದು ಆದೇಶಿಸಿದನು.

ಘಜನಿ ಸೈನ್ಯವು ಮಖರಾನ ಸೀಮೆಗೆ ಬಂದಾಗ ಅದರ ಹಿರಿಯ ಅಧಿಕಾರಿಯು ಸುಲ್ತಾನ ಮಸೂದನ ಆಜ್ಞೆ ಮೇರೆಗೆ ಅಮೀರ ಈಸಾನೊಂದಿಗೆ ಮಾತುಕತೆ ಆರಂಭಿಸಿ.

ಶಾಂತಿಯ ವಾತಾವರಣದಲ್ಲಿ ಒಪ್ಪಂದದ ಮಾತುಕತೆ ಮುಗಿಯಲು ಪೂರ್ಣ ಪ್ರಯತ್ನ ಮಾಡಿದನು. ಆದರೆ ದುರ್ದೈವದಿಂದ ಈಸಾನ ಕೆಟ್ಟ ದಿನಗಳು ಬಂದಿದ್ದವು, ಆತನು ಯಾವ ಮಾತನ್ನು ಕೇಳದೆ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿ ಯುದ್ಧಕ್ಕೆ ಸಿದ್ಧನಾದನು. ಈಸಾನ ಕೆಲವು ಹಿತೈಷಿ ಅಮೀರರು ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸಿದರು. ಇದರಿಂದ ಈಸಾನ ಮೇಲೆ ಯಾವ ಪರಿಣಾಮವಾಗಲಿಲ್ಲ. ಆತನು ಮೊದಲಿನಂತೆಯೇ ಯುದ್ಧದ ವಿಚಾರದಲ್ಲಿಯೇ ಮಗ್ನನಾಗಿದ್ದನು. ಆತನು ತನ್ನ ವಿಶೇಷ ಸಹಚರರನ್ನು ಜೊತೆಗೆ ತೆಗೆದುಕೊಂಡು ಘಜನವಿ ಸೈನ್ಯವನ್ನು ಎದುರಿಸಲು ಬಂದನು. ಇಬ್ಬರ ಮಧ್ಯೆ ಘನಘೋರ ಯುದ್ಧವಾಗಿ ಈಸಾನು ಎಷ್ಟೊಂದು ಕಾದಾಡಿದನೆಂದರೆ ತನ್ನ ಸೈನ್ಯದ ಜೊತೆಗೆ ತಾನು ಕೂಡ ಯುದ್ಧ ಭೂಮಿಯಲ್ಲಿ ನಾಶವಾದನು. ಅಮೀರ ಈಸಾನ ಮರಣಾನಂತರ ಅಬೂ-ಅಲ್-ಅಸಾ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡನು. ಮತ್ತು ತನ್ನ ಮಾತಿನಂತೆ ತನ್ನ ರಾಜ್ಯದಲ್ಲಿ ಅಮೀರ ಮಸೂದನ ಹೆಸರಿನ 'ಖುತಬಾ' ಹಾಗು 'ನಾಣ್ಯ' ಜಾರಿಗೊಳಿಸಿದನು.

ರೇ ಹಾಗೂ ಹಮದಾನ ಇತ್ಯಾದಿಗಳ ವ್ಯವಸ್ಥೆ:

ಅದೇ ವರ್ಷ ಅಮೀರ ಮಸೂದನು ರೇ, ಹಮದಾನ ಮತ್ತು ಇತರ ಗುಡ್ಡಗಾಡು ಪಟ್ಟಣಗಳ ರಾಜ್ಯಾಧಿಕಾರವನ್ನು ತಾಶ ಹೆಸರಿನ ಒಬ್ಬ ಆಪ್ತಸೇವಕನಿಗೆ ಒಪ್ಪಿಸಿದನು. ತಾಶನು ಕೆಲ ದಿನಗಳಲ್ಲಿ ಮಸೂದನ ಖರಸ್ಥಾನಿ ಅಮೀರರ ಆಸ್ತಿಗಳನ್ನು ಮುಟ್ಟುಗೋಲು ಹಾಕಿದನು ಮತ್ತು ಆ ಪ್ರಾಂತಗಳನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಂಡು. ಸುಲ್ತಾನ ಮಸೂದನ ಆಜ್ಞೆಯಂತೆ ಅಲಾ-ಅಲ್-ದೌಲಾನಿಗೆ ವಿದ್ರೋಹಕ್ಕಾಗಿ ಶಿಕ್ಷೆ ನೀಡಿದನು. ಮತ್ತು ಆ ದೇಶವನ್ನು ಮೇಧಾವಿಗಳ ವಶದಿಂದ ತೆಗೆದುಕೊಂಡು ಅವರನ್ನು ಹಾಳು ಮಾಡಿದನು.

ತುರ್ಕಮಾನಿಯೊಂದಿಗೆ ಕಾಳಗ:

ಹಿಜರಿ ಶಕೆ ೪೨೨ರಲ್ಲಿ ಸುಲ್ತಾನ ಮಸೂದನು ಘಜನಿಯಿಂದ 'ಸಫಾಹಾನ' ಹಾಗೂ 'ರೇ' ಕಡೆಗೆ ಹೊರಟನು. ಮಸೂದನು ಹರಾತಗೆ ಬಂದಾಗ ಸರಖಸ ಮತ್ತು ಬಾಆವರಿನ ಪ್ರಜೆಗಳು ಬಂದು ತುರ್ಕಮಾನ ಸಲಜೊಖಿಯ ದಬ್ಬಾಳಿಕೆ ಹಾಗು ದೌರ್ಜನ್ಯದ ಕುರಿತು ದೂರು ನೀಡಿದರು. ಮಸೂದನು, ಅಬ್ದಲ್ಲರೀಸ-ಬಿನ್-ಅಬ್ದುಲ್-ಅಜೀಜ್‌ನಿಗೆ ಒಂದು ದೊಡ್ಡ ಸೈನ್ಯವನ್ನು ಕೊಟ್ಟು ತುರ್ಕಮಾನಿಯೊಂದಿಗೆ ಯುದ್ಧ ಮಾಡಲು ಕಳುಹಿಸಿದನು. ಅಬ್ದಲ್ಲರೀಸನು ಮೇಲಿಂದ ಮೇಲೆ ಬಿಲ್ಲು ಬಾಣಗಳಿಂದ ಕಾದಾಡಿದನು. ಆದರೆ ಇದರಿಂದ ಯಾವ ಪರಿಣಾಮವಾಗಲಿಲ್ಲ. ಕೊನೆಯಲ್ಲಿ ಸುಲ್ತಾನ ಮಸೂದನು ಸೋತು ಮನನೊಂದು ಘಜನಿಗೆ ಹಿಂದಿರುಗಿದನು.

ಅಲೀ-ತಗೀನ್‌ನೊಂದಿಗೆ ಕಾಳಗ:

ಅಲೀ-ತಗೀನ್‌ನು ಬುಖಾರಾ ಹಾಗೂ ಸಮರಖಂದಗಳನ್ನು ಸ್ವಾಧೀನ ಪಡೆದು ಬಹಳ ಗೊಂದಲವನ್ನೆಬ್ಬಿಸಿದನು. ಸುಲ್ತಾನ ಮಸೂದನು 'ಅಲ್-ತವಾನೀಸ'ನನ್ನು ಅಲೀ-ತಗೀನನಿಗೆ ಶಿಕ್ಷಿಸಲು ನಿಯುಕ್ತಿಗೊಳಿಸಿದನು. ಅಲ್-ತೋ-ನಿತಾಶ-ಖಾರಜಂನಿಂದ ಮಾರ್ವಾ ಅಲ್-ಜಹೀರ ಕಡೆಗೆ ಹೊರಟನು. ಮಸೂದನು ಘಜನಿಯಿಂದ ೧೫ ಸಾವಿರ ಸೈನಿಕರ ಒಂದು ಸೈನ್ಯವನ್ನು ಅಲ್-ತೋ-ನಿತಾಶನ ಸಹಾಯಕ್ಕೆ ಕಳಿಹಿಸಿದನು. ಈ ಸೈನ್ಯವು ಬಲ್ಗ ಪ್ರಾಂತದಲ್ಲಿ ಅಲ-ತೋ-ನಿತಾಶನ ಸೈನ್ಯದೊಂದಿಗೆ ಸೇರಿಕೊಂಡಿತು. ಅಲ್-ತೋ-ನಿತಾಶನು, ಅಸ್ವಯಾ ನದಿಯನ್ನು ದಾಟಿ ಮೊದಲು ಬುಖಾರಾದ ಮೇಲೆ ದಾಳಿ ಮಾಡಿದನು. ಅದನ್ನು ಗೆದ್ದು ಸಮರಖಂದ ಕಡೆಗೆ ಹೊರಟನು. ಅಲೀ-ತಗೀನನಿಗೆ ಘಜನಿ ಸೈನ್ಯದ ಬರುವಿಕೆ ತಿಳಿದೊಡನೆ, ಆತನು ನಗರದಿಂದ ಒಂದು ಮೈದಾನಕ್ಕೆ ಬಂದನು. ಈ ಮೈದಾನದ ಒಂದು ಪಕ್ಕದಲ್ಲಿ ಒಂದು ದೊಡ್ಡ ಹಳ್ಳ ಹರಿಯುತ್ತಿತ್ತು, ಮತ್ತು ಇನ್ನೊಂದು ಕಡೆ ಒಂದು ದೊಡ್ಡ ಬೆಟ್ಟವಿತ್ತು. ಯುದ್ಧ ಆರಂಭವಾದಾಗ ಅಲ್-ತೋ-ನಿತಾಶ ಸೈನ್ಯದ ಮೇಲೆ ಅಲೀ-ತಗೀನ್‌ನ ಸೈನ್ಯದ ಒಂದು ಭಾಗವು ಹಿಂದಿನಿಂದ ದಾಳಿ ಮಾಡಿತು. ಈ ಸೈನ್ಯದ ಭಾಗವು ಕಮೀನ್-ಗಾ ಎಂಬಲ್ಲಿ ಅಡಗಿತ್ತು. ಈ ದಾಳಿಯಲ್ಲಿ ಘಜನವಿ ಸೈನ್ಯದ ಬಹಳಷ್ಟು ಸೈನಿಕರು ಹತರಾದರು, (ಸುಲ್ತಾನ ಮಹಮದನ ಜೊತೆಯಲ್ಲಿ ಹಿಂದುಸ್ತಾನದ ಮೇಲೆ ದಾಳಿ ಮಾಡುವಾಗ ಅಲ್-ತೋ-ನಿತಾಶನಿಗೆ ಕಲ್ಲಿನಿಂದ ಗಾಯವಾಗಿತ್ತು) ಮೊದಲೇ ಗಾಯಗೊಂಡ ಅಲ್-ತೋ-ನಿತಾಶನ ಶರೀರಕ್ಕೆ ಆಕಸ್ಮಾತ್ತಾಗಿ ಅದೇ ಭಾಗಕ್ಕೆ ಗಾಯವಾಯಿತು.

ಅಲ್-ತೋ-ನಿತಾಶನ ಗಾಯಗೊಳ್ಳುವಿಕೆ:

ಅಲ್-ತೋ-ನಿತಾಶನು ತನ್ನ ಈ ಗಾಯದ ಬಗ್ಗೆ ಸಹಚರರಿಗೆ ತಿಳಿಸಿರಲಿಲ್ಲ ಮತ್ತು ಯುದ್ಧ ಭೂಮಿಯಲ್ಲಿ ಸ್ಥಿರವಾಗಿ ಕಾದಾಡಿದನು. ಇದರಿಂದಾಗಿ ಶತ್ರುಗಳ ಆಕ್ರಮಣದಿಂದ ಘಜನಿ ಸೈನ್ಯವು ಧೃತಿಗೆಡದಿರಲೆಂದು ಯೋಚಿಸಿದನು. ಹೀಗಾಗಿ ಘಜನಿ ಸೈನ್ಯದ ಸಿಪಾಯಿಗಳು ಸಹ ಶತ್ರುಗಳ ಬಹಳಷ್ಟು ಸೈನಿಕರನ್ನು ಕೊಂದರು. ಅಲೀ-ತಗೀನ್‌ನ ಒಬ್ಬ ಸೈನಿಕ ಇಲ್ಲದಂತಾದ ಮೇಲೆ ಅಲ್-ತೋ-ನಿತಾಶನು ತನ್ನ ಸೈನ್ಯಕ್ಕೆ ತಮ್ಮ ಡೇರೆಗೆ ವಾಪಸಾಗಲು ಆದೇಶಿಸಿದನು. ರಾತ್ರಿಯಲ್ಲಿ ತನ್ನ ಸೈನ್ಯದ ಸರದಾರರನ್ನು ಬರಹೇಳಿ ಅವರಿಗೆ ತನ್ನ ಗಾಯದ ಬಗ್ಗೆ ತಿಳಿಸಿದನು. 'ಈ ಗಾಯದಿಂದ ನಾನು ಉಳಿಯಲು ಸಾಧ್ಯವಿಲ್ಲ, ಈಗ ನೀವು ಪರಿಸ್ಥಿತಿಯನ್ನು ನೋಡಿ ಯುದ್ಧದ ಬಗ್ಗೆ ಏನಾದರೂ ಮಾಡಿ.'ಎಂದು ಹೇಳಿದನು. ಸೈನ್ಯದ ಸರದಾರರು ಅಲ್-ತೋನಿತಾಶನ ಸ್ಥಿತಿ ಬಹಳ ಗಂಭೀರವಾಗಿರುವುದನ್ನು ಮತ್ತು ಬೆಳಿಗ್ಗೆ ಶತ್ರುಗಳನ್ನು

ಎದುರಿಸಬೇಕಾಗುವುದನ್ನು ಗಮನಿಸಿ. ತಮ್ಮ ತಮ್ಮಲ್ಲಿ ಚರ್ಚಿಸಿ ಸಮಂಜಸವಾದ ಒಪ್ಪಂದ ಮಾಡಿಕೊಂಡು ಯುದ್ಧವನ್ನು ನಿಲ್ಲಿಸಲು ನಿರ್ಣಯಿಸಿದರು.

ಅಲೀ-ತಗೀನ್‌ನೊಂದಿಗೆ ಸಂಧಾನ ಮತ್ತು ಅಲ್-ತೋ-ನಿತಾಶನ ಮರಣ:

ಸೈನ್ಯದ ಸರದಾರರು ಅಲೀ-ತಗೀನ್‌ನ ಬಳಿ ಒಬ್ಬ ದೂತನನ್ನು ಕಳುಹಿಸಿದರು ಮತ್ತು ಸಂಧಾನವನ್ನು ಕೋರಿದರು. ಸಂಧಾನದಲ್ಲಿನ ಶರತ್ತಿನ ಪ್ರಕಾರ ಬುಖಾರವನ್ನು ಘಜನಿ ರಾಜ್ಯದಲ್ಲಿ ಸೇರಿಸುವುದು ಮತ್ತು ಸಮರಖಂದ ಹಾಗೂ ಸುತ್ತ-ಮುತ್ತಲಿನ ಪ್ರಾಂತಗಳು ಅಲೀ-ತಗೀನ್‌ನ ಸ್ವಾಧೀನದಲ್ಲಿ ಉಳಿಯುವುದು. ಸಂಧಾನದ ಈ ಶರತ್ತುಗಳನ್ನು ಅಲೀ-ತಗೀನ್ ಒಪ್ಪಿ, ಒಪ್ಪಂದ ಮಾಡಿಕೊಂಡು ಎರಡನೆಯ ದಿನ ಸಮರಖಂದ ಕಡೆಗೆ ಹೊರಟು ಹೋದನು. - ಘಜನಿ ಸೈನ್ಯವು ಮರಳಿ ಹೊರಟಿತು. ಪ್ರಯಾಣದ ಎರಡನೇಯ ದಿನ ಅಲ್-ತೋ-ನಿತಾಶ ತೀರಿಕೊಂಡನು. ಸೈನ್ಯದ ಸರದಾರರು ಈ ಸಾವಿನ ಸಮಾಚಾರವನ್ನು ದಾರಿಯಲ್ಲಿ ಸೈನಿಕರಿಂದ ಮುಚ್ಚಿಟ್ಟರು ಮತ್ತು ಖಾರಜಂಗೆ ಹೋದ ನಂತರ ಸಾವಿನ ಸಮಾಚಾರ ಸಾರಿದರು. ಸುಲ್ತಾನ ಮಸೂದನಿಗೆ ಅಲ್-ತೋ-ನಿತಾಶಿನ ಸಾವಿನ ಸಮಾಚಾರ ಸಿಕ್ಕಿತು. ಮಸೂದನು ಅಲ್-ತೋ-ನಿತಾಶನ ಸೇವೆಗಳಿಗಾಗಿ ಅವುಗಳ ಪ್ರತಿಫಲ ರೂಪದಲ್ಲಿ ಆತನ ಮಗನಾದ ಆರೋನನಿಗೆ ಖಾರಜಂನ ರಾಜನನ್ನಾಗಿ ನಿಯುಕ್ತಿಸಿದನು. ಅದೇ ವರ್ಷ ರಾಜ್ಯದ ಮಂತ್ರಿಯಾದ ಖಾಜಾ ಅಹ್ಮದ ಬಿನ್ ಹಸನ ನೇಮದೀ ಮೃತಪಟ್ಟನು. ಆತನ ಸ್ಥಾನದಲ್ಲಿ ಅಬೂ ನಸರ ಅಹ್ಮದ ಬಿನ್ ಮೊಹ್ಮದ ಅಬ್ದುಲ್ ಸಮದನಿಗೆ ಖಾರಜಂಗೆ ಕರೆಯಿಸಿ ವಜೀರನನ್ನಾಗಿ ನಿಯುಕ್ತಿ ಮಾಡಿದನು. ಅಬೂ ನಸರ, ಆರೋನ ಬಿನ್ ಅಲ್ ತೋ ನಿತಾಶನ ಕವಿಯ ಮಗನಿದ್ದನು.

ಹಿಂದೂಸ್ಥಾನದ ಮೆಲೆ ದಾಳಿ

ಹಿಜರಿ ಶಕೆ ೪೨೪ ರಲ್ಲಿ ಹಿಂದೂಸ್ಥಾನದ ಮೇಲೆ ದಾಳಿ ಮಾಡಿದನು. ಮತ್ತು ಕಾಶ್ಮೀರ ಕಣಿವೆಯಲ್ಲಿನ ಸರಸತಿ ಕೋಟೆಗೆ ಬಂದು, ಮುತ್ತಿಗೆ ಹಾಕಿದನು. ಇಸ್ಲಾಮಿ ಸೈನ್ಯದ ಆಗಮನದಿಂದ ಕೋಟೆಯ ನಿವಾಸಿಗಳು ಭಯಭೀತರಾಗಿ ನಡುಗಿದರು. ಅವರು ಸುಲ್ತಾನ ಮಸೂದನ ಸೇವೆಯಲ್ಲಿ ಒಬ್ಬ ದೂತನನ್ನು ಕಳುಹಿಸಿ ಸಂಧಾನವನ್ನು ಕೋರಿದರು. ರಾಜನು ನಮ್ಮನ್ನು ಕೊಲ್ಲಕೂಡದು. ಪ್ರತಿಯಾಗಿ ನಾವು ದೊಡ್ಡ ಮೊತ್ತದ ಹಣವನ್ನು ಕಾಣಿಕೆ ರೂಪದಲ್ಲಿ ಪ್ರಸ್ತುತ ಮಾಡುತ್ತೇವೆ ಮತ್ತು ಮುಂದೆಯೂ ಕೂಡ ಇದೇ ರೀತಿ ಹಣವನ್ನು ರಾಜ ಭಂಡಾರದಲ್ಲಿ ಕಪ್ಪದ ರೂಪದಲ್ಲಿ ದಾಖಲಿಸುತ್ತಲೇ ಇರುತ್ತೇವೆ. ಮಸೂದನಿಗೆ ಈ ಸಂಧಾನದ ಶರತ್ತುಗಳು ಸೂಕ್ತವಾಗಿ ಕಂಡು ಕೋಟೆಯ ಜನರೊಡನೆ ಸಂಧಾನ ಮಾಡಿಕೊಂಡು ಘಜನಿಗೆ ಹಿಂತಿರುಗಲು ನಿಶ್ಚಯಿಸಿದನು. ಕೋಟೆಯ ಅಧಿಕಾರಿಗೆ ಉತ್ತರ ಕಳಿಸುವ ಮುನ್ನ ಈತನಿಗೆ ಕೋಟೆಯಲ್ಲಿದ್ದ ಮುಸಲ್ಮಾನ

ವ್ಯಾಪಾರಿಗಳಿಗೆ ಒಂದು ಅರ್ಜಿಯು ಕೈಸೇರಿ ಅವರು ಕೋಟೆಯ ನಿವಾಸಿಗಳ ದೌರ್ಜನ್ಯಕ್ಕೆ ಒಳಗಾಗಿದ್ದರು. ಆ ಅರ್ಜಿಯಲ್ಲಿ ಬರೆಯಲಾಗಿತ್ತು, 'ನಾವು ಕೆಲವು ಮುಸಲ್ಮಾನ ವರ್ತಕರು ನಮ್ಮ ಹುಟ್ಟೂರಿಂದ ಹೊರಟೆವು ಮತ್ತು ದುರ್ದೈವದಿಂದ ಈ ಕಾಫಿರರ ಕೈಯಲ್ಲಿ ಬಂಧಿತರಾದೆವು. ಈ ಹಿಂದೂಗಳು ದ್ವೇಷದ ಕಾರಣ ಬಗೆ ಬಗೆಯ ಹಿಂಸೆಯನ್ನು ಕೊಟ್ಟು ನಮ್ಮಿಂದ ನಮ್ಮೆಲ್ಲ ದಾಸ್ತಾನು ಮತ್ತು ಸಂಪತ್ತನ್ನು ಕಸಿದುಕೊಂಡು ನಮ್ಮನ್ನು ಕವಡಿ-ಕವಡಿಗಾಗಿ ಪರದಾಡುವಂತೆ ಮಾಡಿದರು. ನಮಗೆ ಆತಂಕವಿದ್ದುದೇನೆಂದರೆ ನೀವು ಹಿಂದುಗಳೊಂದಿಗೆ ಅವರುಗಳು ಒಡ್ಡಿದ ಶರತ್ತಿನ ಮೇಲೆ ಸಂಧಾನ ಮಾಡಿಕೊಂಡಲ್ಲಿ, ತಾವು ಹೋದ ಕೂಡಲೇ ಈ ಹಿಂದುಗಳು ನಮಗೆ ಆಪತ್ತು ಒದಗುವಂತೆ ಮಾಡಿ ಜೀವಿಸಲು ಬಿಡುವುದಿಲ್ಲ. ನಾವು ನಮ್ಮ ಈ ಪರಿಸ್ಥಿತಿಯನ್ನು ತಮಗೆ ತಿಳಿಸುವುದು ನಮ್ಮ ಕರ್ತವ್ಯವೆಂದು ತಿಳಿಯುತ್ತೇವೆ. ಈ ಮುತ್ತಿಗೆಗೆ ಒಳಗಾದ ಹಿಂದುಗಳಲ್ಲಿ ಧಾನ್ಯವು ಇಲ್ಲದಂತಾಗಿದೆ ಮತ್ತು ಕೋಟೆಯಲ್ಲಿ ಉಳಿಯುವ ಧೈರ್ಯವು ಇಲ್ಲ, ನೀವು ಕೋಟೆಯ ಮುತ್ತಿಗೆಯನ್ನು ಎರಡು ಮೂರು ದಿನ ಹಾಗೆಯೇ ಮುಂದುವರೆಸಿದರೆ, ಯಾವ ಪ್ರತೀಕಾರವಿಲ್ಲದೆ ಕೋಟೆಯ ಮೇಲೆ ಗೆಲುವಾಗುತ್ತದೆ.' ಮಸೂದನು ಈ ಅರ್ಜಿಯನ್ನು ಓದಿ ಸಂಧಾನ ಮಾಡುವ ಮನಸ್ಸನ್ನು ಬದಲಾಯಿಸಿ ಕೂಡಲೇ ಕೋಟೆಯನ್ನು ಸುತ್ತುವರೆದು ಮುತ್ತಿಗೆಯನ್ನು ಮತ್ತಿಷ್ಟು ಬಲ ಪಡಿಸಿದನು.

ಕೋಟೆಯ ಸುತ್ತ-ಮುತ್ತ ಒಂದು ಆಳವಾದ ಕಂದಕವು ಇದ್ದಿತು. ಮಸೂದನ ಆದೇಶದ ಮೇಲೆ ಈ ಕಂದಕವನ್ನು ಕಬ್ಬಿನ ಬೆಳೆಯಿಂದ ಅದರ ಅಗಲವನ್ನು ಹೆಚ್ಚಿಸಿದರು. ಈ ಪ್ರಾಂತದ ಸುತ್ತ-ಮುತ್ತ ಕಬ್ಬು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಕಂದಕದ ಅಗಲವನ್ನು ಕಬ್ಬುಗಳಿಂದ ತುಂಬಿ ಎತ್ತರವನ್ನು ಹೆಚ್ಚಿಸಿ ಸೈನ್ಯವನ್ನು ಅದರ ಮೇಲೆ ಏರಿ ಕೋಟೆಯವರೆಗೆ ಹೋಗಲು ಅನುಕೂಲ ಮಾಡಲಾಯಿತು. ಇದರ ಮೂಲಕ ಕೋಟೆಯ ಒಳಗೆ ನುಗ್ಗಿದರು. ಮುಸಲ್ಮಾನರು ಹಿಂದುಗಳನ್ನು ವಧಿಸಿದರು ಮತ್ತು ಅವರ ಹೆಣ್ಣುಮಕ್ಕಳನ್ನು ಬಂದಿಯಾಗಿಸಿ ಅವರ ಸಮಸ್ತ ವಸ್ತುಗಳನ್ನು ವಶಪಡಿಸಿಕೊಂಡರು. ಸುಲ್ತಾನ ಮಸೂದನು ಮುಸಲ್ಮಾನ ವರ್ತಕರ ಸಂಪತ್ತನ್ನು ಮರಳಿ ಕೊಟ್ಟನು. ಈ ರೀತಿ ಪ್ರಪಂಚದಲ್ಲಿ ತನ್ನ ಒಳ್ಳೆಯ ಹೆಸರನ್ನು ಸ್ಥಾಯಿಯಾಗಿ ಮಾಡಿದನು.

ಬರ ಮತ್ತು ರೋಗ:

ಅದೇ ವರ್ಷ ಪ್ರಪಂಚದ ಬಹಳಷ್ಟು ಭಾಗದಲ್ಲಿ ಮಳೆಯ ಅಭಾವವಾಗಿ ಒಂದು ದೊಡ್ಡ ಬರವಾಯಿತು. ಈ ಬರದ ಪರಿಣಾಮವಾಗಿ ರೋಗಗಳು ಹುಟ್ಟಿಕೊಂಡವು. ಆ ರೋಗಕ್ಕೆ ಒಳಪಟ್ಟು ಸಹಸ್ರಾರು ಜನರು ಮೃತಪಟ್ಟರು. ಹಿಂದುಸ್ತಾನದಲ್ಲಿ ಬಹಳ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಮೃತರ ಸಂಖ್ಯೆ ಬೆಳೆಯುತ್ತಾ

ಹೋಯಿತು. ಒಕ್ಕಲುತನ ಹಾಗು ಇತರ ಕೆಲಸಗಳಿಗೆ ಕೂಲಿ ಆಳುಗಳು ದೊರೆಯುವುದು ಕಷ್ಟವಾಯಿತು. ಬಗದಾದಿನ ನವಾಹೀ ಪ್ರಾಂತಗಳಲ್ಲಿ ಮೊಸೀಲ್ ಹಾಗು ಜರಜಸ್ಥಾನದಲ್ಲಿ 'ಜದರೀ' (ಚಚಕ್- ಒಂದು ಬಗೆಯ ರೋಗ) ಹರಡಿತು. ಈ ನಗರಗಳಲ್ಲಿ ಈ ರೋಗಕ್ಕೆ ತುತ್ತಾಗಿ ಎರಡು ಮೂರು ಜನ ಮೃತಪಡದೆ ಇರುವ ಮನೆಗಳು ಎಲ್ಲೋ ಒಂದು ಕಾಣಬಹುದು.

ತುರಬಸ್ಥಾನದ ಮುಖ್ಯಸ್ಥನ ಮೇಲೆ ದಾಳಿ:

ಸುಲ್ತಾನ ಮಸೂದನು ಹಿಜರಿ ಶಕೆ ೪೩೫ ರಲ್ಲಿ ಆಯಲ್ ಮತ್ತು ಸಾರೀ (ತುರುಬಸ್ಥಾನದ ಎರಡು ಸ್ಥಾನಗಳು) ಗೆಲ್ಲಲು ನಿರ್ಧರಿಸಿದನು. ಈ ಪ್ರಾಂತದ ನಿವಾಸಿಗಳು ಪರಸ್ಪರ ಜೊತೆಗೂಡಿ ಮಸೂದನನ್ನು ಎದುರಿಸಿದರು. ಆದರೆ ಘಜನಿಯ ಸೈನ್ಯದ ಎದುರಿಗೆ ಇವರ ಆಟ ನಡೆಯಲಿಲ್ಲ ಮತ್ತು ಸುಲ್ತಾನ ಮಸೂದನಿಗೆ ಅದೃಷ್ಟಕ್ಕೆ ಜಯ ಲಭಿಸಿತು. ಆಬಾಕಾ, ಕಾಲೇಂಜರಾ, ಮೀರತುರಬಸ್ಥಾನನು ತನ್ನ ಒಬ್ಬ ಪ್ರತಿನಿಧಿಯನ್ನು ಸುಲ್ತಾನ ಮಸೂದನ ಸೇವೆಯಲ್ಲಿ ಕಳುಹಿಸಿ ಆತನ ಅಧೀನನಾಗಿ ಉಳಿಯಲು ಮನವಿಯನ್ನು ಸಲ್ಲಿಸಿ, ಮಸೂದನ ಹೆಸರಿನಲ್ಲಿ ಖುತಬಾ ಹಾಗು ನಾಣ್ಯವನ್ನು ಜಾರಿ ಮಾಡುವೆನೆಂದೊ ಭಾಷೆ ಕೊಟ್ಟನು. ಮಸೂದನು ಸಂಧಾನದ ಈ ಶರತ್ತನ್ನು ಒಪ್ಪಿಕೊಂಡನು. ಅಮೀರ ತುರಬಸ್ಥಾನನು ತನ್ನ ಮಗ 'ಬಹಮನ' ಮತ್ತು ಸಹೋದರನ ಮಗ 'ಶೇರವಿಯಾ'ರಿಗೆ ಗೋರಗಾವಂಗೆ ಕಳುಹಿಸಿದನು ಮತ್ತು ಸುಲ್ತಾನ ಮಸೂದ ಮರುಳಿ ಘಜನಿಗೆ ಹೊರಟು ಹೋದನು.

ತುರ್ಕಮಾನಿಯವರೊಂದಿಗೆ ಕಾಳಗ:

ಮಸೂದನು ನಿಶಾಪುರಕ್ಕೆ ಬಂದಾಗ, ಅಲ್ಲಿಯ ಪ್ರಜೆಗಳು ತುರ್ಕಮಾನ ಸಲ್-ಜೋತಿಯ ದೌರ್ಜನ್ಯದ ಬಗ್ಗೆ ಮಸೂದನ ಹತ್ತಿರ ದೂರು ಕೊಟ್ಟರು ಮತ್ತು ಇವರಿಂದ ರಕ್ಷಣೆ ಕೋರಿದರು. ಮಸೂದನು ಬಕ್-ತಗದೀ ಹಾಗೂ ಹುಸೇನ ಬಿನ್-ಅಲೀ ಮೇಕಾಲ್ರಿಗೆ ಒಂದು ದೊಡ್ಡ ಸೈನ್ಯವನ್ನು ಕೊಟ್ಟು ತುರ್ಕಮಾನಿಗಳು ತಲೆ ಎತ್ತದಂತೆ ಮಾಡಿದನು. ಘಜನವಿ ಸೈನ್ಯವು ಶಖೀದ-ಅಲ್-ಫಾಕ್ (ಒಂದು ಸ್ಥಳದ ಹೆಸರು)ಗೆ ಬಂದಾಗ ತುರ್ಕಮಾನಿಗಳು ಒಬ್ಬ ಪ್ರತಿನಿಧಿಯನ್ನು ಬಕ್‌ತದೀ ಬಳಿ ಕಳುಹಿಸಿ ಆತನಿಗೆ 'ತುರ್ಕಮಾನಿಗಳು ಅರ್ಜಿಯ ಮೂಲಕ ಅರಿಕೆ ಮಾಡುಕೊಳ್ಳುವುದೇನೆಂದರೆ ನಮ್ಮ ಸಮಗ್ರ ಜನಾಂಗವು ಘಜನಿಗಳ ಅಧೀನರಾಗಿ ಅಮೀರ ಮಸೂದನ ಪಕ್ಷವನ್ನು ವಹಿಸುವರು. ಒಂದು ವೇಳೆ ನಮ್ಮನ್ನು ನಾಶಮಾಡಿದರೆ ಇದರಿಂದ ಪರಸ್ಪರ ಪ್ರಾಂತದ ನಿವಾಸಿಗಳಿಗೆ ಕಷ್ಟವಾಗುತ್ತದೆ. ಅದಕ್ಕಾಗಿ ಅಮೀರ ಮಸೂದ ನಮ್ಮ ಆಸ್ತಿಯ ಜಮೀನುಗಳನ್ನು ಅಳತೆ ಮಾಡಿ ಅವುಗಳ ಸೀಮೆಯನ್ನು ನಿರ್ಧರಿಸಿದರೆ ಮುಂದೆಂದೂ ನಾವು ಯಾರಿಗೂ ನಷ್ಟ ಮಾಡುವುದಿಲ್ಲ'. ಬಕ್‌ತಕದೀ

ತುರ್ಕಮಾನಿ ಪ್ರತಿನಿಧಿಯೊಂದಿಗೆ ಸ್ವಲ್ಪ ಕಟುವಾಗಿ ವರ್ತಿಸಿ ಆತನಿಗೆ, 'ತುರ್ಕಮಾನಿಗಳಿಗೆ ಹೋಗಿ ಹೇಳಿ ಅವರು ನಮ್ಮ ಅಧಿಕಾರವನ್ನು ಸ್ವೀಕರಿಸಲಿ ಮತ್ತು ಮುಂದೆಂದೂ ಕುಕೃತ್ಯಗಳನ್ನು ಮಾಡದಿರಲಿ ಹಾಗೂ ತಮ್ಮ ಒಬ್ಬ ವಿಶ್ವಾಸಾರ್ಹ ವ್ಯಕ್ತಿಯನ್ನು ಸುಲ್ತಾನ ಮಸೂದನ ಸೇವೆಯಲ್ಲಿ ಕಳುಹಿಸಿ ನನ್ನ ಹೆಸರಿನಲ್ಲಿ ಒಂದು ರಾಜಾಜ್ಞೆ ತರಿಸಿಕೊಳ್ಳಲಿ. ಅಂದರೆ ಇವರೊಂದಿಗೆ ನಾನು ಯಾವ ರೀತಿಯ ಕಾಳಗ ಮಾಡೆನು. ಆದರೆ ಈ ಶರತ್ತಿಗೆ ಒಪ್ಪಿಗೆ ಇಲ್ಲದಿದ್ದಲ್ಲಿ ನಮ್ಮ ಮತ್ತು ಅವರುಗಳ ಮಧ್ಯೆ ಖಡ್ಗವೇ ಸಂಧಾನವಾಗುವುದು.' ಎಂದು ಉತ್ತರ ಕೊಟ್ಟನು. ತುರ್ಕಮಾನಿಗಳಿಗೆ ಈ ಉತ್ತರ ದೊರೆತ ಮೇಲೆ, ಅವರು ಅನಿವಾರ್ಯವಾಗಿ ಯುದ್ಧಕ್ಕೆ ಸನ್ನದ್ಧರಾದರು ಮತ್ತು ಬಹಳ ಶೌರ್ಯ ಹಾಗು ವೀರತ್ವದಿಂದ ಕಾದಾಡಿದರು. ಆದರೆ, ಬಕ್‌ತಗದೀಯ ವಿರೋಧದ ಕದನದಲ್ಲಿ ಇವರ ಪರಾಕ್ರಮವು ನಡೆಯಲಿಲ್ಲ. ಸೋಲನ್ನಪ್ಪಿ ರಣಾಂಗಣದಿಂದ ಓಡಿಹೋದರು.

ಬಕ್‌ತಗದೀಯು ತುರ್ಕಮಾನಿಗಳನ್ನ ಹಿಮ್ಮೆಟ್ಟಿದನು ಮತ್ತು ಅವರ ಹೆಂಡತಿ ಮಕ್ಕಳನ್ನು ತನ್ನ ಕೈದಿಗಳನ್ನಾಗಿ ಮಾಡಿ ಅವರ ಸಮಸ್ತ ವಸ್ತು ಹಾಗೂ ಸಂಪತ್ತನ್ನು ಸ್ವಾಧೀನ ಪಡಿಸಿಕೊಂಡನು. ಘಜನವಿ ಸೈನಿಕರು ಕೊಲೆ, ಸುಲಿಗೆ ಮಾಡಿ ಆ ಕಡೆ ಈ ಕಡೆ ಚೆದರಿದರು. ತುರ್ಕಮಾನಿಗಳಿಗೆ ಒಂದು ಒಳ್ಳೆಯ ಸಂದರ್ಭವು ದೊರೆತು ಅವರು ದರ್‍ರಾ ಕ್ಷೋದಿಂದ ಹೊರಟು ಬಕ್‌ತಗದೀ ಮೇಲೆ ದಾಳಿ ಮಾಡಿದರು. ಉಭಯಪಕ್ಷಗಳಲ್ಲಿ ಎರಡು ದಿನ ಹಾಗೂ ಎರಡು ರಾತ್ರಿಗಳವರೆಗೆ ಘನಘೋರ ಯುದ್ಧವಾಯಿತು. ಘಜನವಿ ಸೈನಿಕರ ಸಂಖ್ಯೆ ಕಡಿಮೆ ಇತ್ತು. ಇದರಿಂದಾಗಿ ಅವರು ರಣಾಂಗಣದಿಂದ ಕಾಲ್ತೆಗೆದರು. ಈ ಪರಿಸ್ಥಿತಿಯನ್ನು ನೋಡಿ ಬಕ್‌ತಕದೀಯು ಹುಸೇನ ಮೇಕಾಲನಿಗೆ, 'ಇಲ್ಲಿ ಬಹಳ ಹೊತ್ತು ನಿಲ್ಲುವುದು ಸೂಕ್ತವಲ್ಲ. ರಣ ಭೂಮಿಯಿಂದ ಓಡಿ ಪ್ರಾಣಗಳನ್ನು ಉಳಿಸಿಕೊಳ್ಳುವುದು ಒಳಿತು' ಎಂದು ಹೇಳಿದನು. ಮೇಕಾಲನು ಬಹಳ ಧೈರ್ಯದಿಂದ ಕಾದಾಡಿದನು. ಅಂತಿಮವಾಗಿ ಶತ್ರುಗಳ ಕೈಯಲ್ಲಿ ಬಂದಿಯಾದನು. ಬಕ್‌ತಗದೀಯು ಪ್ರಾಣ ಉಳಿಸಿಕೊಂಡು. ಓಡುತ್ತಾ ನಶಾಪುರಕ್ಕೆ ಬಂದನು ಮತ್ತು ಅಮೀರ ಮಸೂದನಿಗೆ ಸಮಸ್ತ ಘಟನೆಯನ್ನು ನಿರೂಪಿಸಿದನು. ಅದನ್ನ ಕೇಳಿ ಮಸೂದನಿಗೆ ಬಹಳ ಹಿಂಸೆಯಾಯಿತು ಮತ್ತು ಆತನು ಹಿಜರಿಶಕೆ ೪೨೬ರಲ್ಲಿ ಸೋತು ಘಜನಿಗೆ ಮರಳಿ ಹೋದನು.

ಅಹ್ಮಮದ ನಯಾಲತಗೀನನ ವಿದ್ರೋಹ:

ಇದೇ ಕಾಲದಲ್ಲಿ ಹಿಂದುಸ್ತಾನದಿಂದ ಅಹ್ಮಮದ ನಯಾಲತಗೀನನ ವಿದ್ರೋಹದ ಸಮಾಚಾರವು ಕೇಳಿ ಬರುತ್ತಿದ್ದವು. ಸುಲ್ತಾನ ಮಸೂದನು ನಾಥನೆಂಬ ಹೆಸರಿನ ಹಿಂದು ಸರದಾರನಿಗೆ ಆತನನ್ನು ವಿದ್ರೋಹ ನಿರ್ಬಂಧಿಸಲು ಕಳುಹಿಸಿದನು. ನಾಥ ತನ್ನ ಸೈನ್ಯದೊಂದಿಗೆ ಹೊರಟು ನಿಂತನು ಹಾಗೂ ಅಹ್ಮದನೊಂದಿಗೆ ಕಾಳಗ ಮಾಡಿದನು.

ಇಬ್ಬರಲ್ಲಿ ಘೋರ ಯುದ್ಧವಾಗಿ, ಅಹ್ಮದನು ಬಹಳ ಶೌರ್ಯ ಹಾಗು ಧೈರ್ಯದಿಂದ ನಾಥನನ್ನು ಎದುರಿಸಿ ಕಾದಾಡಿದನು. ಈ ಕಾಳಗದಲ್ಲಿ ನಾಥನು ಮೃತಪಟ್ಟನು ಮತ್ತು ಘಜನವಿ ಸೈನ್ಯಕ್ಕೆ ಸೋಲಾಯಿತು. ಸುಲ್ತಾನ ಮಸೂದನಿಗೆ ಈ ಘಟನೆಯ ಬಗ್ಗೆ ತಿಳಿದಾಗ, ತೋಲಕ್ ಬಿನ್ ಹುಸೇನ, ಹಿಂದುಸ್ತಾನದ ಬಹಳ ದೊಡ್ಡ ಅಮೀರನಿದ್ದನು. ನಯಾ ಲತಗೀನನ ಎದುರಾಗಲು ಲಕ್ಷಿಸದೆ ತೋಲಕನು ನಯಾಲತಗೀನನೊಂದಿಗೆ ಯುದ್ಧ ಮಾಡಿ ಸೋಲಿಸಿದನು. ನಯಾ ಲತಗೀನನು ಅಶಾಂತ ಪರಿಸ್ಥಿತಿಯಲ್ಲಿ ಮನಸೋರಾ, ಠಠಾ ಮತ್ತು ಸಿಂಧನಿನ ಕಡೆ ಓಡಿದನು ಮತ್ತು ತೋಲಕನು ಈತನ ಬೆನ್ನಟ್ಟಿದನು ಮತ್ತು ಈತನ ಎಲ್ಲ ಸಹಚರರ ಕಿವಿ ಮತ್ತು ಮೂಗುಗಳನ್ನು ಕೊಯ್ದು ಬಿಟ್ಟನು. ಅಹ್ಮದ ನಂಯಾಲತಗೀನನು ಏದುಸಿರು ಬಿಡುತ್ತಾ ಸಿಂಧ ನದೀ ತೀರಕ್ಕೆ ಬಂದನು. ಆತನು ನದಿಯನ್ನು ದಾಟಿ ಇನ್ನೊಂದು ತೀರಕ್ಕೆ ಹೋಗುವಾಗ ನದಿಯು ಉಕ್ಕೇರಿತು. ನಯಾಲತಗೀನನು ಉಕ್ಕಿ ಹರಿಯುವ ನದಿಯ ಪ್ರವಾಹದಲ್ಲಿ ಸಿಲುಕಿ ಏನೂ ಮಾಡಲಾಗದೆ ಮೃತಪಟ್ಟನು. ನೀರಿನ ಪ್ರವಾಹವು ನಯಾಲತಗೀನನ ಮೃತ ದೇಹವನ್ನು ತೀರಕ್ಕೆ ತಂದಿತು. ಘಜನವಿ ಸೈನಿಕರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆತನ ಕತ್ತನ್ನು ಕತ್ತರಿಸಿ ತೋಲಕನ ಎದುರಿನಲ್ಲಿ ಪ್ರಸ್ತುತ ಮಾಡಿದರು. ತೋಲಕನು ಆ ರುಂಡವನ್ನು ಸುಲ್ತಾನ ಮಸೂದನ ಹತ್ತಿರ ಘಜನಿಗೆ ಕಳುಹಿಸಿದನು.

ಹಿಜಿರ ಶಕೆ ೪೩೦ರಲ್ಲಿ ಮಸೂದನು ಘಜನಿಯಲ್ಲಿ ಒಂದು ಹೊಸ ಮಹಲನ್ನು ನಿರ್ಮಿಸಿದನು. ಮಹಲಿನಲ್ಲಿ ಒಂದು ಸುಂದರವಾದ ರತ್ನಖಚಿತ ಸಿಂಹಾಸನವನ್ನು ಸ್ಥಾಪಿಸಿ ಆ ಸಿಂಹಾಸನದ ಮೇಲೆ ಒಂದು ಕಿರೀಟವನ್ನು ಚಿನ್ನದ ಸರಪಳಿಯಿಂದ ತೂಗುವಂತೆ ಕಟ್ಟಿದನು. ಕಿರೀಟದ ತೂಕವು ೭೦ ಮಣವಿತ್ತು. *(೧ ಮಣವು ಫಾರಸನಲ್ಲಿ ೧/೨ ಸೇರು ಆಗುತ್ತದೆ). ಮಸೂದನು ರತ್ನಖಚಿತ ಸಿಂಹಾಸನದ ಮೇಲೆ ಕುಳಿತು ತನ್ನ ಶಿರಸ್ಸಿನ ಮೇಲೆ ಕಿರೀಟವನ್ನು ಧರಿಸಿದ ಸಂದರ್ಭದಲ್ಲಿ, ಒಂದು ಸಾರ್ವಜನಿಕ ದರ್ಬಾರನ್ನು ಸೇರಿಸಿ ಪ್ರತಿಯೊಬ್ಬ ಪ್ರಜೆಗೆ ತನ್ನ ದರ್ಶನದ ಅವಕಾಶ ನೀಡಿದನು.

ಹಾಂಸಿ ಕೋಟೆಯ ಗೆಲವು:

ಅದೇ ವರ್ಷ ಮಸೂದನು ತನ್ನ ಮಗ ಮೊದುದನಿಗೆ ದೊಡ್ಡ ನಗಾರಿ ಹಾಗೂ ಧ್ವಜದ ಮೇಲ್ವಿಚಾರಕನನ್ನಾಗಿ ಮಾಡಿ ತಾನು ಸ್ವತಃ ಹಾಂಸಿ ಕೋಟೆ ಗೆಲ್ಲಲು ಹಿಂದುಸ್ತಾನದ ಕಡೆಗೆ ಹೊರಟನು. 'ತಬಖಾತಿನಾಸಿರಿ'ಯ ಲೇಖಕರ ಹೇಳಿಕೆಯಂತೆ ಅದೇ ಕಾಲದಲ್ಲಿ ಹಾಂಸಿಯು ಸೌಲಾಕದ ರಾಜಧಾನಿಯಾಗಿತ್ತು. ಹಾಂಸಿ ಕೋಟೆಯು ಬಹಳ ಭದ್ರವಾಗಿತ್ತು. ಇದನ್ನು ಕುರಿತು ಹಿಂದುಗಳ ನಂಬಿಕೆ ಏನೆಂದರೆ ಇದನ್ನು ಮುಸಲ್ಮಾನ ರಾಜನು ಎಂದಿಗೂ ಗೆಲ್ಲಲಾರನು. ಅಮೀರ ಮಸೂದನು ಹಾಂಸಿಗೆ

ಬಂದು ಅಲ್ಲಿಯ ಕೋಟೆಗೆ ಮುತ್ತಿಗೆ ಹಾಕಿದನು. ಆರು ದಿನಗಳವರೆಗೆ ಸತತ ಪ್ರಯತ್ನದಿಂದ ಅದನ್ನು ಗೆದ್ದುಕೊಂಡನು. ಅದರಲ್ಲಿ ಹೆಚ್ಚಿನ ಪ್ರಯತ್ನವಿಲ್ಲದೆ ಬಹಳಷ್ಟು ವಸ್ತುಗಳು ಮಸೂನದ ಕೈಸೇರಿದವು. ಆತನು ಈ ಕೋಟೆಯ ಸಮಸ್ತ ವಸ್ತುಗಳನ್ನು ತನ್ನ ವಿಶ್ವಾಸಾರ್ಹ ಸರದಾರರಿಗೆ ಒಪ್ಪಿಸಿ ತಾನು ಸ್ವತಃ ಸೋನಪತ ಕೋಟೆಯನ್ನು ಗೆಲ್ಲಲು ಮುಂದುವರಿದನು.

ಸೋನಪತ್ತಿನ ಗೆಲವು:

ಸೋನಪತ್ತಿನ ರಾಜಾ ದಯಾಪಾಲ ಹರಿಗೆ ಸುಲ್ತಾನ ಮಸೂದನು ದಾಳಿ ಮಾಡಲು ಬರುವ ಸುದ್ದಿ ತಿಳಿದು, ವಿಹ್ವಲನಾಗಿ ಅರಣ್ಯದ ಕಡೆ ಓಡಿದನು. ಘಜನವಿ ಸೈನ್ಯವು ಸೋನಪತ್ತಿಗೆ ಬಂದು ಅಲ್ಲಿಯ ಕೊಟೆಯನ್ನು ಗೆದ್ದುಕೊಂಡಿತು, ಮತ್ತು ಅಲ್ಲಿಯ ಸಮಗ್ರ ವಿಗ್ರಹಗಳನ್ನು ಭಗ್ನಮಾಡಿ ಎಲ್ಲಾ ಸಂಪತ್ತನ್ನು ತಮ್ಮ ವಶಕ್ಕೆ ತೆಗೆದುಕೊಂಡಿತು. ರಾಜಾ ದಯಾಪಾಲ ಹರಿಯು ಸೋನಪತ್ತಿನಿಂದ ಓಡಿಹೋದ ವಿಷಯವು ಮುಸಲ್ಮಾನರಿಗೆ ತಿಳಿದೊಡನೆ ಅವರು ಆತನ ಬೆನ್ನಟ್ಟಿದರು. ದಯಾಪಾಲನಿಗೆ ಮುಸಲ್ಮಾನರು ಬೆನ್ನಟ್ಟಿದ ವಿಷಯ ತಿಳಿದ ತಕ್ಷಣ, ತನ್ನೆಲ್ಲ ವಸ್ತುಗಳನ್ನು ಮತ್ತು ಸೈನ್ಯವನ್ನು ಅರಣ್ಯದಲ್ಲಿಯೇ ಬಿಟ್ಟುಬಿಟ್ಟನು ಹಾಗೂ ಸ್ವತಃ ಒಂದು ಮೂಲೆಯಲ್ಲಿ ಕಾಣದಂತೆ ಅಡಗಿಕೊಂಡನು. ಮುಸಲ್ಮಾನರು ದಯಾಪಾಲ ಹರಿಯ ಸಮಗ್ರ ವಸ್ತುಗಳನ್ನು ವಶಪಡಿಸಿಕೊಂಡರು ಮತ್ತು ದಯಾಪಾಲನ ಸೈನ್ಯವನ್ನು ನಾಶ ಮಾಡಿ ಕೆಲವರನ್ನು ಬಂದಿಯಾಗಿಸಿ ಅಲ್ಲಿಂದ ದರ್ರಾ ರಾಮದೇವ (ರಾಮದೇವ ಕೊಲ್ಲಿ) ಕಡೆ ಹೊರಟರು. ರಾಜಾ ರಾಮದೇವ ತನ್ನ ಕಣ್ಣಿನಿಂದ ದಯಾಪಾಲ ಹರಿಯ ಸ್ಥಿತಿಯನ್ನು ಕಂಡಿದ್ದನು. ಮಸೂದನ ಬರುವಿಕೆಯ ವಿಷಯವು ತಿಳಿಯುತ್ತಲೇ ಆತನು ಬಹಳ ಬುದ್ಧವಂತಿಕೆಯಿಂದ ಕಾರ್ಯ ಕೈಗೊಂಡು ಬಹಳಷ್ಟು ವಸ್ತುಗಳು ಮತ್ತು ಸಂಪತ್ತನ್ನು ಮಸೂದನ ಸೇವೆಯಲ್ಲಿ ಕಳುಹಿಸಿಕೊಟ್ಟನು, ಮತ್ತು 'ನಾನು ಬಹಳ ವಯಸ್ಕನಾಗಿದ್ದು ಅಶಕ್ತನಾಗಿದ್ದೇನೆ. ಹೀಗಾಗಿ ನಾನು ವೈಯುಕ್ತಿಕವಾಗಿ ನಿಮ್ಮ ಸೇವೆಯಲ್ಲಿ ಹಾಜರಾಗಲು ಸಾಧ್ಯವಿಲ್ಲ. ನನ್ನ ಪರಿಸ್ಥಿತಿಯ ಬಗ್ಗೆ ದಯೆ ತೋರಿ ತಮ್ಮ ಸೇವೆಯಲ್ಲಿ ಅರ್ಪಿಸಿರುವುದನ್ನು ಸ್ವೀಕರಿಸಿರಿ, ಮತ್ತು ನನ್ನನ್ನು ತಮ್ಮ ಅಧೀನ ಜನರಲ್ಲಿ ಸೇರಿಸಿಕೊಳ್ಳಿ.'ಎಂದು ವಿನಂತಿಸಿಕೊಂಡನು. ಮಸೂದನು ಈ ಬೇಡಿಕೆಯನ್ನು ಮನ್ನಿಸಿ, ಆತನೊಂದಿಗೆ ಯಾವ ತರಹದ ಕಾಳಗ ಮಾಡದೆ ಅಲ್ಲಿಂದ ಸೋನಪತ್ತಿಗೆ ಬಂದನು.

ಅಮೀರ ಮಸೂದನು ಸೋನಪತ್ತಿನ ಸುವ್ಯವಸ್ಥೆ ಮತ್ತು ರಕ್ಷಣೆಗಾಗಿ ತನ್ನ ಒಬ್ಬ ವ್ಯವಸ್ಥಾಪಕ ಅಮೀರನನ್ನು ಬಿಟ್ಟು ಸ್ವತಃ ತಾನು ಸೋನಪತ್ತಿನ ಸುತ್ತ-ಮುತ್ತಲಿನ ಪ್ರಾಂತಗಳ ಮೇಲೆ ಅಧಿಕಾರ ಸ್ಥಾಪಿಸುವಲ್ಲಿ ನಿರತನಾದನು. ಈ ಪ್ರಾಂತಗಳನ್ನು ಆತನು ಶೀಘ್ರವಾಗಿ ಗೆದ್ದನು. ಅವುಗಳನ್ನು ವಶಪಡಿಸಿಕೊಂಡ ಮೇಲೆ ಘಜನಿ ಕಡೆ

ಹೊರಟನು. ಮಸೂದನು ಲಾಹೋರಿಗೆ ಬಂದು, ಅಲ್ಲಿ ಕೆಲವು ದಿನಗಳವರೆಗೆ ವಾಸಿಸಿದನು. ತನ್ನ ಎರಡನೆಯ ಮಗ ಅಬೂ-ಅಲ್-ಮಜದೂನನ್ನು ಅಲ್ಲಿಯ ರಾಜನನ್ನಾಗಿ ಮಾಡಿ ಆತನಿಗೆ ಧ್ವಜ ಮತ್ತು ನಗಾರಿಯನ್ನು ಕೊಟ್ಟು ಐಯಾಸ ಖಾನನನ್ನು ಶಿಕ್ಷಕ (ಅತಾಬುಕ್) ನನ್ನಾಗಿ ನಿಯಮಿಸಿ ತಾನು ಮರುಳಿ ಘಜನಿಗೆ ಹೊರಟನು.

ತೊಗರುಲ್ ಬೇಗನಿಗೆ ಬುದ್ಧಿ ಕಲಿಸುವ ಇಚ್ಛೆ :

ತುರ್ಕಮಾನಿಗಳೊಂದಿಗೆ ಕಾಳಗವಾದ ನಂತರ ಹಿಜರಿ ಶಕೆ ೪೩೮ರಲ್ಲಿ ಮಸೂದನು ಬಲ್ಗಗೆ ಬಂದನು. ತುರ್ಕಮಾನಿಗಳಿಗೆ ಈ ವಿಷಯ ತಿಳಿದಾಗ, ಅವರು ಬಲ್ಗನ್ನು ಬಿಟ್ಟು, ಅಲ್ಲಲ್ಲಿಯ ಪ್ರಾಂತಗಳಲ್ಲಿ ಚೆದರಿದರು. ಬಲ್ಗನ ನಿವಾಸಿಗಳು ಮಸೂದನ ಸೇವೆಯಲ್ಲಿ ಹಾಜರಾಗಿ ಕೇಳಿದುದೇನೆಂದರೆ, ‘ಮಸೂದನು ಇಲ್ಲದಿರುವಾಗ ತೊಗರುಲ್ ಬೇಗನು ನದಿ ದಾಟಿ ಹಲವಾರು ಸಲ ಮುಸಲ್ಮಾನರ ಕೊಲೆ, ಸುಲಿಗೆ ಮಾಡಿದ್ದಾನೆ. ಇದನ್ನು ಕೇಳಿದ ಮಸೂದನು ಚಳಿಗಾಲದಲ್ಲಿ ತೊಗರುಲ್‌ನೊಂದಿಗೆ ಕಾದಾಡಲು ನಿರ್ಧರಿಸಿ ತುರ್ಕಮಾನಿಗಳೊಂದಿಗಿನ ಹೋರಾಟವನ್ನು ವಸಂತ ಋತು ಬರುವವವರೆಗೂ ಮುಂದೂಡಿದನು. ರಾಜ್ಯದ ಅಮೀರರು, ಅಧಿಕಾರಿಗಳು ಮತ್ತು ಸೈನ್ಯದ ಮೇಲಾಧಿಕಾರಿಗಳಿಗೆ ರಾಜನ ಈ ಉದ್ದೇಶವು ತಿಳಿದ ಕೂಡಲೇ ಅವರು, ‘ಎರಡು ವರ್ಷದಿಂದ ತುರ್ಕಮಾನಿಗಳು ಖರಸ್ಥಾನಿನಲ್ಲಿ ಕೊಲೆ ಸುಲಿಗೆಗಳನ್ನು ಮಾಡುತ್ತಲಿದ್ದಾರೆ ಮತ್ತು ಖರಸ್ಥಾನಿನ ನಿವಾಸಿಗಳು ಅವರ ಕಿರುಕುಳದಿಂದ ಖರಸ್ಥಾನದ ಒಂದು ದೊಡ್ಡ ಭಾಗವನ್ನು ಅವರ ರಾಜ್ಯಕ್ಕೆ ಕೊಡಲು ಸಿದ್ಧರಾಗಿದ್ದಾರೆ ಈ ಸಮಯದಲ್ಲಿ ಎಲ್ಲರಿಗಿಂತಲೂ ಮೊದಲು ತುರ್ಕಮಾನಿಗಳನ್ನು ಬಗ್ಗು ಬಡೆದು ಸುತ್ತ-ಮುತ್ತಲಿನ ಪ್ರಾಂತಗಳ ಕಡೆ ಲಕ್ಷ ಕೊಡುವುದು ಸೂಕ್ತ.’ ಎಂದು ವಿನಂತಿಸಿದರು.ಸಮಸ್ತ ಜನರು ಬಾದಶಹಾನ ಉದ್ದೇಶದ ವಿರುದ್ಧ ಆತನನ್ನು ಕಾರ್ಯನಿರತನಾಗದಂತೆ ಪ್ರಯತ್ನಿಸುತ್ತಿದ್ದರು. ತಘರುಲ್ ಬೇಗನ ಮೇಲೆ ದಾಳಿ ಮಾಡಕೂಡದೆಂದು ಒಬ್ಬ ಕವಿಯು ಒಂದು ಕವನದಲ್ಲಿ ಬರೆದನು. ಈ ಕವನವನ್ನು ಮಸೂದನಿಗೆ ಕೊಟ್ಟನು. ಆದರೆ ಆತನ ಮೇಲೆ ಅದರ ಪರಿಣಾಮವಾಗಲಿಲ್ಲ, ಮತ್ತು ಆತನು ತಘರುಲ್ ಬೇಗನ ರಾಜ್ಯವು ಶ್ರಮವಿಲ್ಲದೆ ವಶಕ್ಕೆ ಬರುವುದೆಂದು ತಿಳಿದಿದುದರಿಂದ ತನ್ನ ಉದ್ದೇಶಕ್ಕೆ ಬದ್ಧನಾಗಿದ್ದನು. ಅದಕ್ಕಾಗಿ ಆತನು ‘ಜೆಹೂನ’ ನದಿಯ ಮೇಲೆ ಒಂದು ಸೇತುವೆಯನ್ನು ಕಟ್ಟಿಸಿ, ನದಿ ದಾಟಿ ಮಾರ್ವಾ ಅಲ್-ಜಹರಗೆ ಬಂದನು.

ಮಾರ್ವಾ, ಅಲ್‌ನೇಹರನಲ್ಲಿ ಮಸೂದನನ್ನು ಯಾರೂ ಎದುರಿಸಲಿಲ್ಲ. ಅದಕ್ಕಾಗಿ ಆ ಸೂಬಾದ ಬಹಳಷ್ಟು ಪ್ರಾಂತಗಳು ಯಾವ ಪ್ರತಿಭಟನೆ ಇಲ್ಲದೆ ಮಸೂದನ ವಶಕ್ಕೆ ಬಂದವು. ಆ ದಿನಗಳಲ್ಲಿ ಅಲ್‌ನೆಹರ ಪ್ರಾಂತದಲ್ಲಿ ಹೆಚ್ಚಿನ ಹಿಮಪಾತವಾಗುತ್ತಿತ್ತು,

ಆಗ ಚಳಿಗಾಲವಿದ್ದು ಮತ್ತು ಹೆಚ್ಚಿನ ಹಿಮಪಾತದಿಂದಾಗಿ ಘಜನಿ ಸೈನ್ಯವು ಬಹಳ ಕಷ್ಟಗಳನ್ನು ಅನುಭವಿಸಿತು.

ಇದೇ ಕಾಲದಲ್ಲಿ ದಾವೂದ ಸಲಜೂಖೀ ವಿದ್ರೋಹ ಮಾಡಿದನು. ಅವನನ್ನು ನಿರ್ಬಂಧಿಸಲು ಬಲ್ಗ ಕಡೆ ಹೊರಟು ಖಾಜಾ ಅಹ್ಮದ ವಜೀರನು ಬಲ್ಗನಿಂದ ಮಸೂದನಿಗೆ ತಿಳಿಸಿದನು, 'ದಾವೂದನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬಲ್ಗಿನ ಕಡೆ ಬರುತ್ತಿದ್ದಾನೆ, ನನ್ನ ಹತ್ತಿರ ಅಷ್ಟೊಂದು ಸೈನ್ಯ ಮತ್ತು ಯುದ್ಧ ಸಾಮಗ್ರಿಗಳಿಲ್ಲದ ಕಾರಣ ಆತನ ವಿರುದ್ಧ ಹೋರಾಡಲಾರೆನು.' ಈ ಸಮಾಚಾರ ತಿಳಿಯುತ್ತಲೇ ಮಸೂದನು ಬಲ್ಗಿನ ಕಡೆ ನಡೆದನು. ಮಸೂದನು ಹೊರಟ ನಂತರ ಕೂಡಲೇ ತೊಗರುಲ್‌ನು ಘಜನಿಯ ಮೇಲೆ ದಾಳಿ ಮಾಡಿ, ಬಹಳಷ್ಟು ಆನೆ, ಕುದುರೆಗಳನ್ನು ಕೊಳ್ಳೆ ಹೊಡೆದನು. ಈ ಕಾರ್ಯಾಚರಣೆಯಲ್ಲಿ ತೊಗರುಲ್‌ನು ಘಜನಿ ಸೈನಿಕರನ್ನು ಮನಬಂದಂತೆ ಅವಮರ್ಯಾದೆ ಮಾಡಿದನು.

ಅಲೀ ತಖಂದರಿ – ಡಕಾಯಿತನ ಸ್ಥಿತಿ:

ಮಸೂದನು ಬಲ್ಗಿನ ಸುತ್ತ–ಮುತ್ತಲಿನ ಪ್ರದೇಶದಲ್ಲಿ ಬಂದ ಮೇಲೆ, ದಾವೂದ ಬಲ್ಗನ ಮೇಲೆ ದಾಳಿ ಮಾಡುವ ಉದ್ದೇಶವನ್ನು ಬಿಟ್ಟು ಮರೋ ಕಡೆಗೆ ಹೋದನು. ಮಸೂದನು ಬಲ್ಗಗೆ ಬಂದು ತನ್ನ ಮಗ ಮೂದುದನನ್ನು ಜೊತೆಗೆ ತೆಗೆದುಕೊಂಡು ದಾವೂದನ ಬೆನ್ನಟ್ಟಿ ಗೋರಗಾಂವ ಕಡೆಗೆ ಹೊರಟನು. ಗೋರಗಾಂವದಲ್ಲಿ ಕೆಲವು ಜನರು ತಖಂದರಿಯ ದಬ್ಬಾಳಿಕೆ ಹಾಗು ದೌರ್ಜನ್ಯ ಕುರಿತು ದೂರು ಕೊಟ್ಟಿದ್ದರು. ಅವರು ಮಸೂದನಲ್ಲಿಗೆ ಬಂದು ಅಲೀ ತಖಂದರಿಯ ಕೃತಿಗಳ ಬಗ್ಗೆ ಮುಕ್ತಿ ನೀಡುವಂತೆ ಕೋರಿದರು. ಅಲೀ ತಖಂದರಿ ಒಬ್ಬ ಜಾಣ ಮತ್ತು ದೌರ್ಜನ್ಯ ಮಾಡುವ ಡಕಾಯಿತನಿದ್ದನು, ಕೊಲೆ, ಸುಲಿಗೆಯು ಆತನ ಕಾಯಕವಾಗಿತ್ತು, ಮತ್ತು ಅದರಿಂದ ತನ್ನ ಜೀವನ ನಡೆಸುತ್ತಿದ್ದನು. ಮಸೂದನು ಅವನಿಗೆ ತನ್ನ ಅಧೀನನಾಗಲು ಆದೇಶಿಸಿದನು, ಆದರೆ ಆತನು ನಿರಾಕರಿಸಿದನು, ಮತ್ತು ಯಥಾಸ್ಥಿತಿ ತನ್ನ ನಡತೆಯಂತೆ ನಡೆಯುತ್ತಿದ್ದನು. ಅಲೀ ತಖಂದರಿಯು, ಮಸೂದನಿಗೆ ಯುದ್ಧ ಮಾಡುವ ಉದ್ದೇಶವಿರುವದೆಂದು ತಿಳಿದು ಕೋಟೆಯಲ್ಲಿ ಶರಣು ಪಡೆದನು. ಮಸೂದನು ಕೋಟೆಯನ್ನು ಅತಿಕ್ರಮಿಸಲು ತನ್ನ ಸೈನ್ಯದ ಒಂದು ಭಾಗವನ್ನು ಕಳುಹಿಸಿದನು. ಸೈನಿಕರು ಶ್ರಮವಿಲ್ಲದೆ ಕೋಟೆ ಗೆದ್ದರು. ಅಲೀ ತಖಂದರಿಯನ್ನು ಬಂದಿ ಮಾಡಿ ಮಸೂದನ ಮುಂದೆ ತಂದರು. ಮಸೂದನು ಈತನ ಕುಕೃತ್ಯಗಳಿಗೆ ಶಿಕ್ಷೆ ನೀಡಿ ಗಲ್ಲಿಗೇರಿಸಿದನು.

ತುರ್ಕಮಾನಿಗಳೊಂದಿಗೆ ಸಂಧಾನ:

ಮಸೂದನು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಮರೋದ ಕಡೆಗೆ

ಬರುತ್ತಿರುವ ಸಮಾಚಾರವು ತುರ್ಕಮಾನಿಗಳಿಗೆ ತಿಳಿದಾಗ ಅವರು ಒಬ್ಬ ದೂತನೊಂದಿಗೆ ಮಸೂದನಿಗೆ ಸಂದೇಶವನ್ನು ಕಳುಹಿಸಿದರು. ನಮ್ಮ ಜನರು ಪರಿಪೂರ್ಣವಾಗಿ ರಾಜನ ಅಧೀನರಾಗಿದ್ದಾರೆ. ನಮ್ಮ ಇಲ್ಲಿಯವರೆಗಿನ ದುಷ್ಕೃತ್ಯಗಳು ಕೇವಲ ನಮ್ಮ ಜೀವನೋಪಾಯಕ್ಕಾಗಿ ಮಾಡಿದ್ದಾಗಿಯೂ ಮತ್ತು ನಮಗೆ ಯಾವ ಆಸ್ತಿ-ಪಾಸ್ತಿಯು ಇಲ್ಲದಿರುವುದರಿಂದ ಒಂದು ವೇಳೆ ರಾಜನು ನಮಗೆ ಜಹಗೀರನ್ನು ಆಸ್ತಿಯ ರೂಪದಲ್ಲಿ, ನಮ್ಮ ಮಡದಿ, ಮಕ್ಕಳು ಮತ್ತು ದನಕರುಗಳಿಗೆ ಸಾಕಾಗುವಷ್ಟು ಕೊಟ್ಟು ಸಹಾಯ ಮಾಡಬೇಕಾಗಿ ಕೇಳಿದರು ಮತ್ತು ನಾವೆಲ್ಲರು ನಿಮ್ಮ ಸೇವೆಯಲ್ಲಿ ಹಾಜರಾಗಿ ನಮ್ಮೆಲ್ಲ ಹಿಂದಿನ ಕುಕೃತ್ಯಗಳಿಗಾಗಿ ಕ್ಷಮೆ ಕೋರುತ್ತೇವೆ. ಮುಂದೆಂದೂ ಇಂತಹ ಕೆಲಸ ಮಾಡುವುದಿಲ್ಲವೆಂದು ಆಶ್ವಾಸನೆ ನೀಡಿದರು. ಸುಲ್ತಾನ ಮಸೂದನು ತುರ್ಕಮಾನಿಗಳ ಈ ವಿನಂತಿಯನ್ನು ಮನ್ನಿಸಿ ಅವರ ಸರದಾರ ಮುಸಮ್ಮಿ ಪೈಗೂನ ಹತ್ತಿರ ಒಬ್ಬ ದೂತನನ್ನು ಕಳುಹಿಸಿ ತುರ್ಕಮಾನಿಗಳು ನೀಡಿದ ಆಶ್ವಾಸನೆಗಳಿಗೆ ಒಬ್ಬ ಜಾಮೀನದಾರನನ್ನು ಕೊಟ್ಟು ಇನ್ನು ಮುಂದೆ ಸರಿಯಾಗಿ ಜೀವನ ನಡೆಸುವಂತೆ ಹೇಳಿದನು. ತುರ್ಕಮಾನಿಗಳು ಮಸೂದನ ಇಚ್ಛೆಯಂತೆ ಮತ್ತು ತಾವುಗಳು ನೀಡಿದ ಆಶ್ವಾಸನೆಗಳಿಗೆ ಪ್ರಮಾಣೀಕರಿಸಿ ಅವುಗಳನ್ನು ಪೂರ್ಣಗೊಳಿಸುವ ಭರವಸೆ ನೀಡಿದರು. ಮಸೂದನು ಕೂಡ ಅವರ ಬೇಡಿಕೆಗಳನ್ನು ಮನ್ನಿಸಿ ಅವರಿಗೆ ಜೀವಿಸುವುದಕ್ಕಾಗಿ ಜಾಹಗೀರುಗಳನ್ನು ಕೊಟ್ಟನು ನಂತರ, ಮಸೂದನು ಹರಾತ ಕಡೆ ಹೊರಟನು. ದಾರಿಯಲ್ಲಿ ತುರ್ಕುಮಾನಿಗಳ ಒಂದು ಗುಂಪು ಮಸೂದನ ಸೈನ್ಯದ ಮೇಲೆ ದಾಳಿ ಮಾಡಿತು. ಕೆಲವು ಸಿಪಾಯಿಗಳನ್ನು ಕೊಂದು ಅಲ್ಪ ಸ್ವಲ್ಪ ವಸ್ತುಗಳನ್ನು ತೆಗೆದುಕೊಂಡು ಹೋದರು. ಮಸೂದನು ತನ್ನ ಸೈನ್ಯದ ಒಂದು ಭಾಗವನ್ನು ಅವರ ಹಿಂದೆ ಕಳುಹಿದನು. ಈ ಭಾಗವು ತುರ್ಕಮಾನಿಗಳ ಗುಂಪನ್ನು ಎದುರುಸಿ ಎಲ್ಲರನ್ನೂ ಕೊಂದರು. ಸೈನ್ಯದ ಭಾಗವು ತುರ್ಕಮಾನಿಗಳ ಸರದಾರ ಮತ್ತು ಆತನ ಪರಿವಾರವನ್ನು ಮಸೂದನ ಮುಂದೆ ಹಾಜರು ಪಡಿಸಿದರು. ಮಸೂದನು ಈ ನಿರ್ಜೀವಿ ತುರ್ಕಮಾನಿಗಳನ್ನು ಕತ್ತೆಗಳ ಮೇಲೆ ಕೂರಿಸಿ ಪೈಗೋನ ಹತ್ತಿರ ಕಳುಹಿಸಿ ಹೇಳಿದುದೇನೆಂದರೆ, 'ಇನ್ನು ಮುಂದೆ ಜಾಣರಾಗಿರಿ, ಮಾತು ಕೊಟ್ಟು ತಪ್ಪಿದವರಿಗೆ ಇದೇ ಶಿಕ್ಷೆಯಾಗುವುದು. ಪೈಗೋ ಈ ಗುಂಪಿನ ಬಗ್ಗೆ ತನಗೇನು ತಿಳಿಯದೆಂದು ಹೇಳಿದಾಗ ಉತ್ತರವಾಗಿ ಮಸೂದನಿಗೆ ಹೇಳಿದುದೇನೆಂದರೆ, 'ನಾನು ಇವರಿಂದ ಅಸಮಾಧಾನಗೊಂಡಿರುವೆನು ಹಾಗೂ ಶಿಕ್ಷಿಸುವ ಮನಸ್ಸು ಮಾಡಿದ್ದೆನು, ಆದರೆ ಅವರು ಸ್ವತಃ ಶಿಕ್ಷೆಗೊಳಗಾಗಿದ್ದಾರೆ.'

ಮಸೂದನು ಹರಾತಿನಿಂದ ನಿಶಾಪುರಗೆ ಬಂದನು. ಅಲ್ಲಿಂದ ತವಸನ ಕಡೆ ನಡೆದನು. ತವಸಿನ ಹತ್ತಿರ ತುರ್ಕಮಾನಿಗಳ ಒಂದು ಸಣ್ಣ ಸೈನ್ಯವು ಮಸೂದನೊಂದಿಗೆ ಕಿರುಕುಳ ಕೊಟ್ಟ ಕಾರಣ ಮಸೂದನು ಅವರನ್ನು ಕೊಂದನು. ಆ ನಂತರ ಮಸೂದನು ತವಸಿನ ಪಟ್ಟಣ ಪ್ರವೇಶಿಸಿದನು. ಇಲ್ಲಿಯ ಪ್ರಜೆಗಳು ಕೋಟೆಯನ್ನು ತುರ್ಕಮಾನಿಗಳ

ವಶಕ್ಕೆ ಒಪ್ಪಿಸಿದ್ದ ವಿಷಯವು ತಿಳಿದು ಮಸೂದನು ಕೋಟೆಯನ್ನು ಮತ್ತು ಅಲ್ಲಿಯ ಜನರನ್ನು ನಾಶಮಾಡಿದನು. ನಂತರ ನಿಶಾಪುರದೆಡೆಗೆ ಮರಳಿದನು.

ಮಸೂದನು ಚಳಿಗಾಲವನ್ನು ನಿಶಾಪುರದಲ್ಲಿ ಕಳೆದನು. ಹಿಜರಿ ಶಕೆ ೪೩೦ ರಲ್ಲಿ, ವಸಂತ ಋತುವಿನಲ್ಲಿ ತೊಘರುಲ್ ಬೇಗನನ್ನು ತುಳಿಯಲು ಇಚ್ಛಿಸಿ ಬಾದವರ ಕಡೆ ಹೊರಟನು. ತೊಘರುಲ್‌ನು ಮಸೂದನ ಬರುವಿನ ಸುದ್ದಿ ಕೇಳಿದಾಗ, ಆತನು ಭಯಭೀತನಾಗಿ ತಜನ ಕಡೆ ಓಡಿಹೋದನು. ತೊಘರುಲ್‌ನ ಓಡಿದ ಸಮಾಚಾರ ಕೇಳಿ ಮಸೂದನು ತಿರುಗಿ ಮೇಹತಾದಿಂದ ಸರಖಸ ಕಡೆ ಹೊರಟನು. ಮೇಹತಾಗೆ ಬಂದು ಕೂಡಲೇ ಅಲ್ಲಿಯ ಜನರು ವಿದ್ರೋಹ ಮಾಡಲು ಸಿದ್ಧರಾಗಿದ್ದಾರೆಂದು ಮತ್ತು ಕಪ್ಪ ಕೂಡಲು ನಿರಾಕರಿಸಿದ್ದಾರೆಂದು ತಿಳಿದು ಅವರಿಗೆ ಅವರ ಅವಿಧೇಯತೆಯ ತಪ್ಪಿಗಾಗಿ ಶಿಕ್ಷಿಸಿ ಕೆಲವರನ್ನು ಕೊಂದನು. ಕೆಲವರ ಕೈಗಳನ್ನು ಕತ್ತರಿಸಿ ಅವರನ್ನು ಕೆಲಸಕ್ಕೆ ಬಾರದಂತೆ ಮಾಡಿದನು. ನಂತರ ಕೋಟೆಯನ್ನು ಗೆದ್ದು, ನಂದಾನಖಾನಗೆ ಬಂದನು.

ತುರ್ಕಮಾನಿಗಳೊಂದಿಗೆ ಯುದ್ಧ:

ಹಿಜರಿ ಶಕೆ ೪೩೦ರ ರಂಜಾನ್ ಎಂಟನೆಯ ದಿನದಂದು ಮತ್ತೊಮ್ಮೆ ತುರ್ಕಮಾನಿಗಳನ್ನು ಎದುರಿಸಬೇಕಾಯಿತು. ಅವರ ಒಂದು ದೊಡ್ಡ ಸೈನ್ಯವು ಮಸೂದನನ್ನು ನಾಲ್ಕು ಕಡೆಯಿಂದ ಸುತ್ತುವರೆದರು. ಮಸೂದನು ಮನಸ್ಸಿಲ್ಲದೆ, ತನ್ನ ಸೈನ್ಯವನ್ನು ಸನ್ನದ್ಧಗೊಳಿಸಿ ಕಾದಾಡಿದನು. ಇಬ್ಬರ ಮಧ್ಯ ಯುದ್ಧವು ಆರಂಭವಾಗಿ ಯುದ್ಧದ ಮಧ್ಯದಲ್ಲಿ ಮಸೂದನ ಸೈನ್ಯದ ಬಹಳ ಸರದಾರರು, ಶತ್ರುಗಳೊಡನೆ ಸೇರಿ ಅವರ ಪರವಾಗಿ ಕಾದಾಡಲಾರಂಭಿಸಿದರು. ಮಸೂದ ತನ್ನ ಜೊತೆಯ ಸರದಾರರು ಮಾಡಿದ ದ್ರೋಹದ ಬಗ್ಗೆ ತಿಳಿದು ಸ್ವತಃ ತಾನೇ ರಣಾಂಗಣಕ್ಕೆ ಬಂದು ತುರ್ಕಮಾನಿಗಳ ಬಹಳಷ್ಟು ಸೈನಿಕರನ್ನು ಕೊಂದು ತನ್ನ ಪರಾಕ್ರಮವನ್ನು ಪ್ರದರ್ಶಿಸಿದನು. ಅನ್ಯ ರಾಜರು ಈ ರೀತಿ ಯುದ್ಧ ಭೂಮಿಯಲ್ಲಿ ತೋರಿರದಂತಹ ಶೌರ್ಯದಿಂದ ಹಾಗೂ ಧೈರ್ಯದಿಂದ ಮಸೂದನು ಯುದ್ಧ ಮಾಡಿದನು. ಮಸೂದನ ಕೆಟ್ಟ ದಿನಗಳು ಆರಂಭವಾದುದಕ್ಕೆ ಯಾವ ಪರಿಹಾರ? ಸೈನ್ಯದ ಕೆಲ ಭಾಗ ಶತ್ರುಗಳೊಂದಿಗೆ ಸೇರಿದ ಮೇಲೆ ಉಳಿದ ಕೆಲವು ಸಿಪಾಯಿಗಳು ಯುದ್ಧ ಭೂಮಿಯನ್ನು ಬಿಟ್ಟು ಘಜನಿ ಕಡೆ ಹೋದರು.

ಮಸೂದನ ಯುದ್ಧ ಭೂಮಿಯಿಂದ ಪಲಾಯನ:

ತನ್ನ ಜೊತೆಗೆ ಯಾರೂ ಉಳಿದಿಲ್ಲವೆಂದು ತಿಳಿದು ಮಸೂದನು ಅನಿವಾರ್ಯವಾಗಿ ಯುದ್ಧ ನಿಲ್ಲಿಸಿ, ಶತ್ರುಗಳ ಸೈನ್ಯದ ಮಧ್ಯದಿಂದ ರಣಾಂಗಣದಿಂದ ಪಲಾಯನ ಮಾಡಿದನು. ಮಸೂದನ ಪಲಾಯನವನ್ನು ಕಂಡ ಸೈನಿಕರು ಆತನನ್ನು ಹಿಮ್ಮೆಟ್ಟುವ

ಸಾಹಸ ಮಾಡಲಿಲ್ಲ. ಈ ರೀತಿ ಮಸೂದನು ಓಡಿಹೋಗಿ... ಮರ್ವಕ್ಕೆ ಬಂದನು. ಅಲ್ಲಿ ಈತನಿಗೆ ಗಾಯಗೊಳಿಸುವ ಸೈನ್ಯದ ಭಾಗವು ಸಿಕ್ಕಿತು. ದಾರಿಯಲ್ಲಿ ಇವರ ಜೊತೆಗೆ ಮಾತನಾಡದೆ ಅವರೊಂದಿಗೆ ಘಜನಿ ಸೇರಿದನು. ಅಲ್ಲಿ ಈ ಗಾಯಗೊಳಿಸುವ ಸೈನ್ಯದ ಸರದಾರರ ಅಲೀ ವಾಯಾ, ಬಕ್ ತಕದೀ ಮತ್ತು ಹಾಜಬ ಶಬಾನಿ ಇವರನ್ನು ಬಂದಿಯಾಗಿಸಿ ತುಚ್ಚವಾಗಿ ನೋಡಿ, ಅವಮಾನ ಮಾಡಿ ಅಂತಿಮವಾಗಿ ಅವರನ್ನು ಹಿಂದುಸ್ತಾನಕ್ಕೆ ಕಳುಹಿಸಿ ಅಲ್ಲಿ ಬೇರೆ ಬೇರೆ ಕೋಟೆಗಳಲ್ಲಿ ಕೈದಿಗಳನ್ನಾಗಿರಿಸಿದನು. ಈ ಪರಿಸ್ಥಿತಿಯಲ್ಲಿ ಈ ಕೈದಿಗಳ ಪೈಕಿ ಬಹಳಷ್ಟು ಕೈದಿಗಳು ಮೃತಪಟ್ಟರು.

ರಕ್ಷಣೆ ಮತ್ತು ವ್ಯವಸ್ಥೆ:

ಗಾಯಗೊಳಿಸುವ ಈ ಸಿಪಾಯಿಗಳನ್ನು ಶಿಕ್ಷಿಸಿದ ಮೇಲೆ ಮಸೂದನು ತುರ್ಕಮಾನಿಗಳನ್ನು ತುಳಿದು ಹಾಕುವ ಯೋಜನೆ ಮಾಡಿ, ಹಿಂದುಸ್ತಾನಕ್ಕೆ ಹೋಗಲಿಚ್ಛಿಸಿದನು. ಅಲ್ಲಿ ಹೋದನಂತರ ಹೊಸ ಸೈನಿಕರ ಪಡೆ ತಯಾರಿಸಿ ಶಕ್ತಿ ಪಡೆದು ತುರ್ಕಮಾನಿಗಳ ಮೇಲೆ ದಾಳಿ ಮಾಡಿ ಅವರ ಕುಕೃತ್ಯಗಳಿಗೆ ಸಂಪೂರ್ಣ ಶಿಕ್ಷೆ ನೀಡಲು ನಿರ್ಧರಿಸಿದನು. ನಂತರ ಮಸೂದನು ತನ್ನ ಮಗನಾದ ಮೌದುದನಿಗೆ ಬಲ್ಗ ಅಮೀರನನ್ನಾಗಿ ನಿಯಮಿಸಿದನು, ಖಾಜಾ ಮೊಹ್ಮದ ಬಿನ್ ಅಬ್ದುಲ್ ಹಮೀದನನ್ನು ಮಗನ ಜೊತೆಗೆ ಕಳುಹಿಸಿದನು. ಅರತಗೀನ್‌ಗೆ ಕೂಡ ಮೌದೂದನ ಶಿಕ್ಷಕನನ್ನಾಗಿ ಮಾಡಿ ೪ ಸಾವಿರ ಸಿಪಾಯಿಗಳ ಸೈನ್ಯದೊಂದಿಗೆ ಇವನನ್ನೂ ಬಲ್ಗಗೆ ಕಳುಹಿಸಿದನು. ಮಸೂದನ ಎರಡನೆಯ ಮಗ ಯುವರಾಜನಾದ ಅಮೀರ ಮಜದೂದನು ಲಾಹೋರಿಗೆ ಬಂದಿದ್ದನು. ಆತನನ್ನು ೨ ಸಾವಿರ ಸಿಪಾಯಿಗಳ ಜೊತೆಗೆ ಮಸೂದನು ಕಳುಹಿಸಿಕೊಟ್ಟನು. ಏಕೆಂದರೆ ಇವರು ಆ ಸ್ಥಳಗಳಲ್ಲಿ ದಕ್ಷ ಆಡಳಿತವನ್ನು ಮಾಡಲೆಂದು ಬಗೆದನು. ನಿಶಾಪುರನಲ್ಲಿ ಅವ್ಯವಸ್ಥೆ ತಲೆ ಎತ್ತಿದ ಕಾರಣ ಮೂರನೆಯ ಮಗನಾದ ಐಜೊಯಾರನನ್ನು ಮಸೂದನು ಘಜನಿಯ 'ಕೊಹಪಾಯಾ'ಕ್ಕೆ ಅಲ್ಲಿಯ ವಿದ್ರೋಹಿಗಳಾದ ಅಫಘಾನಿಗಳನ್ನು ವಶಪಡಿಸಲು ಕಳುಹಿಸಿದನು. ಈ ರೀತಿ ಘಜನಿ ರಾಜ್ಯದ ಸೀಮೆಯನ್ನು ಭದ್ರವಾಗಿಸಿ ಚೆದರದಂತೆ ರಕ್ಷಿಸಿದನು.

ಲಾಹೋರಿಗೆ ಹೊರಡುವುದು:

ರಕ್ಷಣೆಯ ಈ ವ್ಯವಸ್ಥೆ ಮಾಡಿದ ನಂತರ ಮಸೂದನು ತನ್ನ ತಂದೆ ಮಹಮದ ಘಜನಿ ಕೂಡಿಟ್ಟ ಸಮಗ್ರ ಸಂಪತ್ತನ್ನು ಒಂಟೆಗಳ ಮೇಲೆ ಹೇರಿಕೊಂಡು ಈ ಭಂಡಾರವನ್ನು ತನ್ನ ಜೊತೆಗೆ ತೆಗೆದುಕೊಂಡು ಲಾಹೋರದತ್ತ ಹೊರಟನು. ದಾರಿಯಲ್ಲಿ ತನ್ನ ಒಬ್ಬ ವ್ಯಕ್ತಿಯನ್ನು ತನ್ನ ಸಹೋದರನಾದ ಅಮೀರ ಮೊಹ್ಮದ ಮಕೋಲ ಕೋಟೆಯಿಂದ ತೆಗೆದುಕೊಂಡು ತನ್ನ ಮುಂದೆ ತರಲು ಕಳುಹಿಸಿದನು. ಮಸೂದನು

'ಮಾರ್ಕಲಾ' *(ಇದರ ಸರಿಯಾದ ಶಬ್ದವು 'ಮಾರಗೀಲಾ' ಎಂದಿದೆ. ಈ ಸ್ಥಳವು ರಾವಲಪಿಂಡಿ ಮತ್ತು ಅಟಕದ ಮಧ್ಯದಲ್ಲಿದೆ.) ಅಥವಾ ಜಹನಂ ನದಿಯ ಸಮೀಪ ಬಂದನು. ಆಗ ಮಸೂದನ ಕೆಲವು ಗುಲಾಮರು ದುರಾಸೆಗೊಳಗಾಗಿ ಒಂಟೆಗಳ ಮೇಲೆ ಹೇರಿದ ಸಂಪತ್ತನ್ನು ಲೂಟಿ ಮಾಡಿದರು. ಇದರ ಮಧ್ಯೆ ಅಮೀರ ಮೊಹ್ಮದ ಅಲ್ಲಿಗೆ ಬಂದನು. ಸರ್ಕಾರದ ಖಜಾನೆಯನ್ನು ದ್ರೋಹಿ ಗುಲಾಮರು ಸುಲಿಗೆ ಮಾಡಿದ ಕಾರಣ ಮಸೂದನಿಗೆ ಅಪಮಾನ ಮಾಡಲು ಯೋಗ್ಯವೆಂದು ಬಗೆದನು. ಅವರು ತಮ್ಮ ಅಯೋಗ್ಯ ಕೃತ್ಯವನ್ನು ಕ್ಷಮಿಸದೆ ತೀವ್ರವಾದ ಶಿಕ್ಷೆಯನ್ನು ಕೊಡುವನೆಂದು ಯೋಚಿಸಿ, ಈ ಗುಲಾಮರು ಅಮೀರ ಮಸೂದನ ಮೇಲೆ ಹಲ್ಲೆ ಮಾಡಿದರು. ಮಸೂದನು ಅನಿವಾರ್ಯವಾಗಿ ಈ ಕಾದಾಟದಲ್ಲಿ ಮಾರಕಾ ಕೋಟೆಯಲ್ಲಿ ಆಶ್ರಯ ಪಡೆದನು.

ಮಸೂದನ ಬಂಧನ:

ಘಜನವಿ ಸೈನ್ಯದ ಪ್ರತಿಯೊಬ್ಬ ವ್ಯಕ್ತಿಯು ಸತತವಾದ ಯುದ್ಧಗಳಿಂದ ಬೇಸತ್ತಿದ್ದನು. ಹುಟ್ಟೂರಿನಿಂದ ದೂರವಿರುವುದು ಕೂಡ ಅವರೆಲ್ಲರಿಗೆ ಆತಂಕವಾಗಿತ್ತು. ಇದರಿಂದಾಗಿ ಸಮಗ್ರ ಸೈನ್ಯವು ಮಸೂದನ ವಿರೋಧ ಮಾಡಿತು. ಈ ಜನರು ರಬಾತಿನಲ್ಲಿ ಪ್ರವೇಶಿಸಿ ಮಸೂದನನ್ನು ಬಂದಿಯಾಗಿಸಿ ಅಮೀರ ಮೊಹಮದ ಹತ್ತಿರ ಕರೆತಂದರು. ಅಮೀರ ಮೊಹಮದ ತನ್ನ ಸಹೋದರನಿಗೆ, 'ನಾನು ನಿನ್ನನ್ನು ಕೊಲ್ಲಲು ಬಯಸುವುದಿಲ್ಲ. ಆದರೆ, ನಿನ್ನನ್ನು ಅವಶ್ಯವಾಗಿ ಬಂದಿಯಾಗಿಸುವೆ. ನೀನು ಮತ್ತು ನಿನ್ನ ಪರಿವಾರದವರು ಯಾವ ಸ್ಥಳದಲ್ಲಿ ಇರಲು ಬಯಸುವಿರೋ, ನೀವು ಉಳಿದ ಜೀವನದ ಅವಧಿಯನ್ನು, ಶಾಂತಿ ಹಾಗೂ ಸಮಾಧಾನದಿಂದ ಕಳೆಯಲು ಅಲ್ಲಿ ನಿಮ್ಮನ್ನು ಬಂದಿಯಾಗಿಸುವೆನು' ಎಂದು ಹೇಳಿದನು.

ಖರಖೀನನ ಹೇಳಿಕೆ ಎಂದರೆ, ಮಸೂದನು ಹೊರಟು ನಿಂತಾಗ ಅವನಲ್ಲಿ ಒಂದು ಬಿಡಿಕಾಸು ಇರಲಿಲ್ಲ. ಅದಕ್ಕಾಗಿ ಒಬ್ಬ ಮನುಷ್ಯನನ್ನು ಅಮೀರ ಮೊಹಮದನ ಹತ್ತಿರ ಖರ್ಚಿಗಾಗಿ ಹಣ ತರಲು ಕಳುಹಿದನು. ಅಮೀರ ಮೊಹಮದನು ೫೦೦ ದರಮುಗಳನ್ನು ಕೊಟ್ಟನು. ಅದನ್ನು ನೋಡಿ ಅವನ ಕಣ್ಣುಗಳಲ್ಲಿ ನೀರು ತುಂಬಿತು ಮತ್ತು ತಡೆಯಲಾರದಂತೆ ಅವನ ಬಾಯಿಯಿಂದ ಉದ್ಗಾರದ ಶಬ್ದಗಳು ಹೀಗೆ ಹೊರಬಿದ್ದವು, 'ಸುಬ್ಹಾನ್ ಅಲ್ಲಾಹ!' ನೆನ್ನೆಯವರೆಗೆ ನನ್ನ ವಶದಲ್ಲಿ ಸಂಪತ್ತು, ಮುತ್ತು ರತ್ನಗಳನ್ನು ಹೇರಿದ ೩ ಸಾವಿರ ಒಂಟೆಗಳಿದ್ದವು, ಆದರೆ ಇಂದು ನನ್ನ ದುರ್ದೈವದ ಪರಿಸ್ಥಿತಿ ಹೀಗಿದೆ.' ಅದೇ ಸಮಯದಲ್ಲಿ ಮಸೂದನು ತನ್ನ ಕೆಲವು ಜೊತೆಗಾರರಿಂದ ೧೦೦೦ ದಿನಾರನ್ನು ಸಾಲವಾಗಿ ಪಡೆದು, ೫೦೦ ದರಮುಗಳು ಅಮೀರ ಮೊಹಮದನಿಗೆ ಕಳುಹಿಸಿ ಕೊಟ್ಟು ಹಾಗು ೫೦೦ ದರಮುಗಳನ್ನು ತಂದ ವ್ಯಕ್ತಿಗೆ ಕೊಟ್ಟನು.

ಸುಲ್ತಾನ ಮಸೂದನ ಕೊಲೆ:

ಅಮೀರ ಮೊಹಮದನು ಕುರುಡನಿದ್ದ ಕಾರಣ ಜೀವನವನ್ನು ಸಾಮಾನ್ಯವಾಗಿ ಕಳೆಯುತ್ತಿದ್ದು, ರಾಜ್ಯದ ಸಮಸ್ತ ವ್ಯವಹಾರಗಳನ್ನು ತನ್ನ ಬುದ್ಧಿಗೇಡಿ ಮಗ ಅಹಮದನಿಗೆ ಒಪ್ಪಿಸಿದನು. ಅಹಮದನು ರಾಜ್ಯಾಡಳಿವನ್ನು ಕೈಗೆತ್ತಿಕೊಂಡ ಕೂಡಲೇ 'ಸುಲೇಮಾನ–ಬಿನ–ಉಸುಫ–ಸಬಸ್ತಗೀನ' ಮತ್ತು 'ಅಲೀ–ಖಿಶಾವಂದ'ನ ಮಗನನ್ನು ಜೊತೆಗೆ ಕರೆದುಕೊಂಡು ಒಂದು ದಿನ ಕೋಟೆಯಲ್ಲಿ ಪ್ರವೇಶಿಸಿದನು. ತಂದೆಯ ಅಪ್ಪಣೆಯಿಲ್ಲದೆ ಸುಲ್ತಾನ ಮಸೂದನನ್ನು ಕೊಂದನು. ಈ ಘಟನೆಯು ಹಿಜರಿ ಶಕೆ ೪೩೩ ರಲ್ಲಿ ಘಟಿಸಿತು. ಕೆಲವು ಇತಿಹಾಸಕಾರರ ಹೇಳಿಕೆ ಎಂದರೆ ಅಹ್ಮದನು ಮಸೂದನು ಜೀವಂತವಾಗಿರುವಾಗಲೇ ಬಾವಿಯಲ್ಲಿ ನೂಕಿಸಿ, ಕಲ್ಲು, ಮಣ್ಣಿನಿಂದ ತುಂಬಿದನು ಅಥವ ಅಹಮದನ ಮೂಲಕ ಮೊಹಮದನಿಗೆ ಮಸೂದನನ್ನು ಕೊಲ್ಲಲು ಹೇಳಿದನು. 'ತಾರೀಖೇ ಗಜಿದಾ' (ಸರ್ಕಾರವು ಪ್ರಕಟಿಸುವ ಇತಿಹಾಸ ಪತ್ರಿಕೆ) ನಿರೂಪಿಸಿದ ಪ್ರಕಾರ ಸುಲ್ತಾನ ಮಸೂದನು ೯ ವರ್ಷ, ೯ ತಿಂಗಳು ರಾಜ್ಯವಾಳಿದನು. ಆದರೆ ಕೆಲವು ಜನರ ವಿಚಾರದಲ್ಲಿ ಈ ಅವಧಿಯು ೧೨ ವರ್ಷವಿದೆ. ಸುಲ್ತಾನ ಮಸೂದನು ಬಹಳ ಶೂರ, ಕರುಣಾಳು ಹಾಗೂ ಹಸನ್ಮುಖದ ವ್ಯಕ್ತಿಯಾಗಿದ್ದನು. ಮಸೂದನು ವಿದ್ವಾಂಸರ ಹಾಗೂ ಪಂಡಿತರ ಮೇಲೆ ನಂಬಿಕೆ ಇಟ್ಟುಕೊಂಡಿದ್ದನು. ಮಸೂದನು ಅವರ ಸಾನ್ನಿಧ್ಯವನ್ನು ಯಾವಾಗಲೂ ಬಯಸುತ್ತಿದ್ದನು. ಮಸೂದನ ಕಾಲದಲ್ಲಿ ಬಹಳಷ್ಟು ವಿದ್ವಾಂಸರು ತಮ್ಮ ಪುಸ್ತಕಗಳಲ್ಲಿ ಮಸೂದನ ಹೆಸರು ಉಲ್ಲೇಖಿಸಿದ್ದಾರೆ. ಉಸ್ತಾದ ಖಾರಜಮೀ, ಅಬೂ ರೇಹಮಾನ ಮುಂಜಮಂ ಆ ಕಾಲದ ದೊಡ್ಡ ವಿದ್ವಾಂಸ ಮತ್ತು ಗಣಿತ ಶಾಸ್ತ್ರದ ತಜ್ಞರಿದ್ದರು. ಇವರು ರಚಿಸಿದ ಪುಸ್ತಕ 'ಕಾನೂನ–ಎ–ಮಸೂದೀ' ಒಂದು ಉತ್ತಮ ದರ್ಜೆಯ ಪುಸ್ತಕವಾಗಿದೆ. ಇದು ಗಣಿತ ಶಾಸ್ತ್ರಕ್ಕೆ ಸಂಬಂಧಿಸಿದೆ. ಅದರ ಹೆಸರೇ ಸೂಚಿಸುವಂತೆ ಈ ಪುಸ್ತಕವನ್ನು ಸುಲ್ತಾನ ಮಸೂದನ ಹೆಸರಿನಲ್ಲಿ ಬರೆಯಲಾಗಿದೆ. ಈ ಉತ್ತಮ ಲೇಖನಕ್ಕಾಗಿ ಸುಲ್ತಾನ ಮಸೂದನು ಅಬೂ ರೇಹಾನನಿಗೆ ಒಂದು ಆನೆ ತೂಕದ ಸಮಾನ ಬೆಳ್ಳಿಯನ್ನು ಕೊಟ್ಟಿದ್ದನು. 'ಖಾಜಿ ಅಬೂ ಮೊಹ್ಮಮದ ನಾ ಸಹಿ'ಯ 'ಫಕ್ಹಾ ಅನಫೀ'ಗೆ ಸಂಬಂಧಿಸಿದ ಉತ್ಕೃಷ್ಟವಾದ ಪುಸ್ತಕವು ಕೂಡ ಅಮೀರ ಮಸೂದನ ಹೆಸರಿಗೆ ಸಂಬಂಧಿಸಿದೆ ಮತ್ತು ಇದರ ಹೆಸರು 'ಕಿತಾಬ–ಎ– ಮಸೂದೀ' ಎಂದಿದೆ. 'ಇತಿಹಾಸ ರೋಸ್ತಾ ಅಲ್ ಸಫಾ'ದಲ್ಲಿ ನಿರೂಪಿಸಲಾದುದೇನೆಂದರೆ ಮಸೂದನು ದೀನ ದಲಿತರ ಬಗ್ಗೆ ಬಹಳ ಗಮನ ಕೊಡುತ್ತಿದ್ದನು. ಅವರಿಗೆ ದಾನ ಧರ್ಮ ಮಾಡುತ್ತಿದ್ದನು. ರಂಜಾನ ತಿಂಗಳಲ್ಲಿ ಮಸೂದನು ಕೇವಲ ಒಂದು ದಿನದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ದರಮಗಳನ್ನು ದಾನ ಮಾಡಿದನು. ಮಸೂದನ ರಾಜ್ಯಾವಧಿಯಲ್ಲಿ ಘಜನವಿ ರಾಜ್ಯದಲ್ಲಿ ಬಹಳಷ್ಟು ಮಸೀದೆಗಳು ಮತ್ತು ಶಾಲೆಗಳು ನಿರ್ಮಾಣವಾದವು.

ಅಮೀರ ಮೊದುದ-ಬಿನ್-ಅಮೀರ ಮಸೂದ:

ಅಮೀರ ಮೊಹಮದ ಮಕಹೂಲನಿಗೆ ಆತನ ಸಹೋದರ ಅಮೀರ ಮಸೂದನನ್ನು ವಧಿಸಿದ ಸಮಾಚಾರವು ತಲುಪಿದಾಗ, ಬಹಳವಾಗಿ ರೋದಿಸಿದನು. ಮಸೂದನನ್ನು ಕೊಂದ. ಜನರಿಗೆ ಅಮೀರ ಮೊಹಮದನು ಬಹಳ ಛೀಮಾರಿ ಹಾಕಿದನು. ಬಲ್ಗನಲ್ಲಿದ್ದ ಮಸೂದನ ಮಗನಿಗೆ ಆತನು ಪತ್ರ ಬರೆದು ಕಳುಹಿದನು. ಇಂತಹ ಕೆಲ ವ್ಯಕ್ತಿಗಳು ತಮ್ಮ ತಂದೆಯ ಪ್ರತೀಕಾರ ರೂಪದಲ್ಲಿ ನಿಮ್ಮ ತಂದೆಯನ್ನು ಕೊಂದಿದ್ದಾರೆ. ಇವರನ್ನುಳಿದು ಬೇರೆ ಯಾರೂ ಈ ಕೃತ್ಯಕ್ಕೆ ಭಾಗಿಯಾಗಿಲ್ಲ. ಮೊದುದನು ಈ ಪತ್ರದ ಉತ್ತರವಾಗಿ, 'ಅಲ್ಲಾಹನು ನಿಮ್ಮ ಆಯುಷ್ಯವನ್ನು ಹೆಚ್ಚಿಸಲಿ. ತಮ್ಮ ಚಿರಂಜೀವಿ ಅಹ್ಮಮದ ಮಕ್ಖೂತ ಅಲ್-ಅವಾಸ ನಿಗೆ ಪ್ರಪಂಚದ ಏಳು-ಬೀಳುಗಳನ್ನು ಅರಿಯುವ ಜ್ಞಾನ ಕೊಡಲಿ. ನಿಮ್ಮ ಹುಚ್ಚ ಮಗನು ಬಹಳ ದೊಡ್ಡ ಅಪರಾಧ ಮಾಡಿದ್ದಾನೆಂದು ನಿಮಗೆ ಗೊತ್ತಿರಬಹದು. ಆತನು ಯಾವ ರಾಜನನ್ನು ವಧಿಸಿದನೋ, ಆತನಿಗೆ ಅಮೀರ-ಉಲ್-ಮೋಮೀನನು ಸಯದ್-ಉಲ್-ಮುಲ್ಕ-ವ-ಅಲ್-ಸಲಾತೀನ್ ಎಂಬ ಬಿರುದನ್ನು ಕೊಟ್ಟಿದ್ದರು. ಒಂದು ದಿನ ಈ ರಕ್ತವು ಬಣ್ಣ ತರುವುದೆಂದು ತಮಗೆ ನಿಶ್ಚಯವಾಗಿ ಹೇಳುತ್ತೇನೆ ಹಾಗೂ ನಿಮ್ಮ ಮಗನ ಕೆಲಸಕ್ಕೆ ತಕ್ಕ ಶಿಕ್ಷೆ ಅವಶ್ಯ ಸಿಗುವುದು.' ಎಂದು ಬರೆದನು.

ಈ ಪತ್ರವನ್ನು ಕಳಿಸಿಕೊಟ್ಟ ನಂತರ ತನ್ನ ತಂದೆಯ ಸಾವಿನ ಪ್ರತೀಕಾರವನ್ನು ಮಾಡಲು ಇಚ್ಛಿಸಿ ಮೊದುದನು ಕೂಡಲೇ ಮಾರಗಲಾಕ್ಕೆ ಹೋದನು. ಆದರೆ ಅಬೂ-ಅಲ್-ನಸರ-ಬಿನ್-ಮೊಹ್ಮಮದ-ಅಬ್ದುಲ್ಲಾನು ಮೊದುದನ ಈ ಉದ್ದೇಶವನ್ನು ಕಾರ್ಯಗತಗೊಳಿಸ ಕೂಡದೆಂದು ತಿಳಿಹೇಳಿ ಅತನನ್ನು ತನ್ನ ಜೊತೆಗೆ ಘಜನಿಗೆ ಕರೆದುಕೊಂಡು ಹೋದನು. ಮೊದುದನು ಬರುವ ಸಮಾಚಾರ ತಿಳಿದು ಘಜನಿಯ ಸಮಸ್ತ ಹಿರಿಯ ಹಾಗೂ ಕಿರಿಯ ಸರದಾರರು ಮತ್ತು ಅಮೀರರು ಆತನ ಸ್ವಾಗತಕ್ಕಾಗಿ ನಗರದ ಹೊರಗೆ ಬಂದು ಅವರೆಲ್ಲರೂ ಮೊದುದನ ಶಿರಸ್ಸಿನ ಮೇಲೆ ರಾಜನ ಕಿರೀಟವನ್ನು ಇಟ್ಟರು.

ಅಮೀರ ಮೊಹ್ಮದನ ಯುದ್ಧ:

ಹಿಜರಿ ಶಕೆ ೪೩೨ ರಲ್ಲಿ ಅಮೀರ ಮೊದುದನು ತನ್ನ ತಂದೆಯ ಸಾವಿನ ಪ್ರತೀಕಾರವನ್ನು ಮಾಡಲು ಘಜನಿಯಿಂದ ಹೊರಟನು. ಅಮೀರ ಮೊಹ್ಮದ ಮಕಹೂಲನು ತನ್ನ ಕಿರಿಯ ಪುತ್ರ ನಾಮೀಗೆ ಒಂದು ದೊಡ್ಡ ಸೈನ್ಯದ ಹಿರಿಯ ಅಧಿಕಾರಿಯನ್ನಾಗಿ ಮತ್ತು ಮುಲ್ತಾನ ಹಾಗೂ ಪೇಶಾವರದ ಸೈನ್ಯಾಧಿಕಾರಿಯನ್ನಾಗಿ ನಿಯುಕ್ತ ಮಾಡಿದವನನ್ನು ಮೊದುದನನ್ನು ಎದುರಿಸಲು ಕಳುಹಿದನು. ಅಮೀರ ಮೊಹ್ಮದ ಮತ್ತು ಅಮೀರ ಮೊದುದ ಎಂದರೆ ಚಿಕ್ಕಪ್ಪ ಮತ್ತು ಮಕ್ಕಳ ಮಧ್ಯದಲ್ಲಿ ಘನ ಘೋರ ಯುದ್ಧವಾಗಿ ಉಭಯಪಕ್ಷದವರು ವಿಜಯವನ್ನು ಪಡೆಯಲು

ಪ್ರಯತ್ನಿಸಿದರು. ಅಮೀರ ಮೊಹ್ಮದನ ಪ್ರಯತ್ನವು ಫಲಿಸದೇ ಅಮೀರ ಮೊದುದನಿಗೆ ಗೆಲುವಾಯಿತು. ಕುರುಡ ಅಮೀರ ಮೊಹ್ಮದನನ್ನು ಆತನ ಮಕ್ಕಳನ್ನು ಮತ್ತು ಕಾದಾಡುವ ಅಮೀರರನ್ನು (ಅಂದರೆ ತೋಶತಗೀನ ಬಲ್ಖೀ, ಅಬೂ ಅಲೀ ಖೂಶಾವಂದ, ಮತ್ತು ಸುಲ್ತಾನ ಬಿನ್ ಉಸುಫ ಇತರರು) ಬಂಧಿಸಿದನು. ಮೊದುದನ ಕಾರ್ಯ ನಿರ್ವಾಹಕರು ಅಮೀರ ಮೊಹಮದ ಮಕಹೂಲನ ಮಗ 'ಅಬ್ದುಲ್ ರಹೀಮ'ನನ್ನು ಬಿಟ್ಟು ಉಳಿದ ಎಲ್ಲರನ್ನು ಕೊಂದರು.

ಅಬ್ದುಲ್ ರಹೀಮನ್ನು ಕೊಲ್ಲದೆ ಇರುವ ಕಾರಣವೆಂದರೆ, ಅಮೀರ ಮಸೂದನ ಕೈದಿಯಾದ ಅವಧಿಯಲ್ಲಿ ಒಂದು ದಿನ ಅಬ್ದುಲ್ ರಹೀಮ ತನ್ನ ಸಹೋದರ ಅಬ್ದೂಲ್ ರೆಹಮಾನನೊಂದಿಗೆ ಅಮೀರ ಮಸೂದನನ್ನು ನೋಡಲು ಕಾರಾಗೃಹಕ್ಕೆ ಹೋದರು. ಅಬ್ದೂಲ್-ರೆಹಮಾನನು ಅಮೀರ ಮಸೂದನನ್ನು ನೋಡಿದ ಕೂಡಲೇ, 'ಈಗ ಈ ಶಿರಸ್ಸು ರಾಜ ಕಿರೀಟವನ್ನು ಧರಿಸಲು ಯೋಗ್ಯವಿಲ್ಲ.'ಎಂದು ನುಡಿದು, ಮಸೂದನ ತಲೆಯ ಮೇಲಿನ ಟೋಪಿಯನ್ನು ತೆಗೆದನು. ಅಬ್ದೂಲ್ ರಹೀಮನು ತನ್ನ ಸಹೋದರನ ಈ ಕೃತಿಗಾಗಿ ಛೀಮಾರಿ ಹಾಕಿ ಅವನ ಕೈಯಿಂದ ಟೋಪಿಯನ್ನು ಕಸಿದುಕೊಂಡು ಪುನಃ ಅದನ್ನು ಚಿಕ್ಕಪ್ಪನ ತಲೆಯ ಮೇಲೆ ಇಟ್ಟನು. ಇದರಿಂದಾಗಿ ಅಬ್ದುಲ್ ರಹೀಮನು ಬದುಕಿ ಉಳಿದುಕೊಂಡನು ಎಂದು ಇತಿಹಾಸಕಾರರು ಹೇಳುತ್ತಾರೆ.

ಫತೇ ಆಬಾದಿನ ನಿರ್ಮಾಣ:

ಮೊದುದನು ತನ್ನ ತಂದೆಯ ಕೊಲೆಗಾರರನ್ನು ವಧಿಸಿದ ನಂತರ, ತನಗೆ ವಿಜಯ ದೊರೆತ ಸ್ಥಳದಲ್ಲಿ ಒಂದು ಪಟ್ಟಣವನ್ನು ನಿರ್ಮಿಸಿದನು. ಅದರಲ್ಲಿ ಒಂದು ಧರ್ಮ ಛತ್ರವನ್ನು ಕಟ್ಟಿಸಿ ಆ ಪಟ್ಟಣಕ್ಕೆ 'ಫತೇ ಆಬಾದ' ಎಂದು ಹೆಸರಿಸಿದನು. ಮೊದುದನು ತನ್ನ ಸಹೋದರ ಮತ್ತು ತಂದೆಯ ಮೃತದೇಹಗಳನ್ನು ಗೈರಿಯಿಂದ ಘಜನಿಗೆ ತರಲು ಆದೇಶಿಸಿದನು ಮತ್ತು ಆದಷ್ಟು ಬೇಗ ಘಜನಿಗೆ ಬಂದನು.

ಘಜನಿಗೆ ಬಂದ ನಂತರ ಮೊದುದನು ಅಬೂ ನಸರ ಅಹ್ಮದನನ್ನು ಪ್ರಧಾನಿಯನ್ನಾಗಿ ನಿಯಮಿಸಿ ಹಿಜರಿ ಶಕೆ ೪೩೩ರಲ್ಲಿ ತಾಹೀರ ಬಿನ್ ಮೊಹ್ಮದನಿಗೆ ತನ್ನ ಪ್ರಧಾನಿಯನ್ನಾಗಿ ಮಾಡಿದನು. ಮೊದುದನು ತನ್ನ ಒಬ್ಬ ವಿಶ್ವಾಸಾರ್ಹ ಅಮೀರ ಅಬೂ ನಸೀರ ಮೊಹ್ಮಮದ ಬಿನ್ ಅಜ್ಮದನನ್ನು ಅಮೀರ ಮೊಹ್ಮದ ಮಕಹೂಲನ ಮಗ 'ನಾಮೀ'ಯನ್ನು ಎದುರಿಸಲು ಹಿಂದುಸ್ತಾನದ ಕಡೆ ಹೊರಟನು. ಅಬೂ ನಸೀರನು ನಾಮೀಗೆ ಸೋಲಿಸಿದನು. ಹಾಗೂ ಅಮೀರ ಮೊಹ್ಮದನ ಮಗನು ಕೂಡ ಮೃತಪಟ್ಟನು. ನಾಮೀಯ ಮರಣದನಂತರ ಮೊದುದನು ತನ್ನ ತಮ್ಮನಾದ ಮಜದೂದ ಬಿನ್ ಮಸೂದನನ್ನುಳಿದು ಬೇರೆ ಯಾರೂ ರಾಜ್ಯದ ವಾರಸುದಾರರು ಉಳಿಯಲಿಲ್ಲ.

ಮೊದುದ ಹಾಗು ಮಜದೂದರ ಯುದ್ಧದ ಸಿದ್ಧತೆ:

ಅಮೀರ ಮಸೂದನು ಕೊಲ್ಲಲ್ಪಟ್ಟನಂತರ ಮಜದೂದ ಮುಲ್ತಾನದಲ್ಲಿ ವಾಸಿಸುವುದನ್ನು ಬಿಟ್ಟನು. ಮಜದೂದನು ಲಾಹೋರಿಗೆ ಬಂದು ಐಯಾಜನ ವಿಶೇಷ ಸಲಹೆ ಮತ್ತು ಸಹಾಯದೊಂದಿಗೆ ಸಿಂಧ ನದಿಯಿಂದ ಆರಂಭಿಸಿ ಥಾನಿಸರ ಹಾಗೂ ಹಾಂಸಿವರೆಗಿನ ಪ್ರಾಂತವನ್ನು ವಶಪಡಿಸಿಕೊಂಡಿದ್ದನು. ಮಜದೂದನು ಬಹಳ ಪ್ರಬಲನಾಗಿದ್ದನು. ಮೊದುದನು, ಮಜದೂದನ ಶಕ್ತಿಯಿಂದ ಆತಂಕಿತನಾಗಿ, ಮಜದೂದನನ್ನು ವಧಿಸಲು ನಿರ್ಧರಿಸಿದನು. ಅದೇ ವರ್ಷ ಮೊದುದನು ಒಂದು ಪ್ರಬಲ ಸೈನ್ಯದೊಂದಿಗೆ ಮಜದೂದನ ಮೇಲೆ ದಾಳಿ ಮಾಡಲು ಕಳುಹಿಸಿಕೊಟ್ಟನು. ಮಜದೂದ ಆ ದಿನಗಳಲ್ಲಿ ಹಾಂಸೀಯಲ್ಲಿದ್ದನು. ದಿಲ್ಲಿಯನ್ನು ಗೆದ್ದು ತನ್ನ ರಾಜ್ಯದಲ್ಲಿ ಸೇರಿಸಿಕೊಂಡು ತನ್ನ ರಾಜ್ಯವನ್ನು ಶಕ್ತಿಯುತ ಹಾಗೂ ದಕ್ಷ ಮಾಡಲು ಹಾಂಸೀಯಲ್ಲಿ ಉಳಿದುಕೊಂಡಿದ್ದನು. ಮೊದುದನ ಸೈನ್ಯದ ಬರುವಿಕೆ ತಿಳಿದು ಈತನು ಒಂದು ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿ ಆತನನ್ನು ಎದುರಿಸಲು ಹಾಂಸೀಯಿಂದ ಕಳುಹಿಸಿಕೊಟ್ಟನು. ಮೊದುದನ ಸೈನ್ಯವು ಲಾಹೋರ ಕೋಟೆಯನ್ನು ವಶಪಡಿಸಿಕೊಳ್ಳುವ ಮುನ್ನ ಮಜದೂದನು ವಾಲ ಹಜಾದ ೬ ನೆಯ ದಿನದಂದು ರೋಮದು ಲಾಹೋರಿಗೆ ಬಂದನು.

ಮಜದೂದದ ಸೈನ್ಯದ ಸಂಖ್ಯೆಯನ್ನು ಕಂಡು ಮೊದುದನ ಸೈನ್ಯದಲ್ಲಿ ಭಯ ಹುಟ್ಟಿತು. ಭಯದ ಅಲೆಯು ಸಮಗ್ರ ಸೈನ್ಯದಲ್ಲಿ ಹರಡುವ ಮೊದಲು ಮೊದುದನ ಸೈನ್ಯವು ಚೆದರಿಲಾರಂಭಿಸಿತು. ಅಮೀರರು, ಅಧಿಕಾರಿಗಳು ಮಜದೂದನ ಸೇವೆಯಲ್ಲಿ ಹಾಜರಾಗಿ ಆತನ ಅಧೀನತೆಯನ್ನು ಸ್ವೀಕರಿಸುವ ಮೊದಲು ದೈವೇಚ್ಛೆಯು ಬದಲಾಗಿ ಐಯದ ಉಲ್ ಜಹೀ ಬೆಳಿಗ್ಗೆ ಮಜದೂದನು ತನ್ನ ಹಾಸಿಗೆಯಲ್ಲಿ ಮೃತನಾಗಿ ಬಿದ್ದುದನ್ನು ಕಾಣಲಾಯಿತು. ಮಜದೂದನ ಆಕಸ್ಮಿಕ ಮರಣದ ಸಮಾಚಾರವು ಎಲ್ಲರಿಗೂ ತಿಳಿಯಲಿಲ್ಲ. ಕೇವಲ ಪರಮಾತ್ಮನ ಇಚ್ಛೆಯಲ್ಲದೆ ಇಹಲೋಕದವರಿಂದ ಈ ಕೃತ್ಯವು ನಡೆದಿರಲಿಲ್ಲ. ಮಜದೂದನ ಮರಣದ ಕೆಲವೇ ದಿನಗಳ ನಂತರ ಐಯಾಜನು ಮೃತಪಟ್ಟನು. ಮಜದೂದನ ವಶದಲ್ಲಿದ್ದ ಎಲ್ಲಾ ಪ್ರಾಂತಗಳು ಯಾವ ಅಡೆತಡೆಗಳಿಲ್ಲದೆ, ಮೊದುದನ ವಶಕ್ಕೆ ಬಂದವು. ಮೊದುದನ ಶಕ್ತಿಯು ಎಷ್ಟು ಬೆಳೆಯಿತೆಂದರೆ ಮಾರ್ವಾ ಹಾಗೂ ಅಲ್‌ನರನ ರಾಜರುಗಳು ಭಯಭೀತರಾಗಿ ಮೊದೂದನ ಅಧೀನತೆಯನ್ನು ಸ್ವೀಕರಿಸಿದರು. ಇದಲ್ಲದೆ ಮೊದೂದನ ಬಲವು ಮತ್ತು ರಾಜ್ಯವು ಬಹಳಷ್ಟು ಪ್ರಗತಿ ಹೊಂದಿತು, ಆದರೆ ಸಲಜೊಖೀಗಳು ತಮ್ಮ ಕುಕೃತ್ಯಗಳನ್ನು ಬಿಡಲು ನಿರಾಕರಿಸಿದರು. ಮೊದೂದನು ಆ ಜನಾಂಗದೊಂದಿಗೆ ಸ್ನೇಹಪರ ವ್ಯವಹಾರ ಮಾಡಲು ಪ್ರಯತ್ನಿಸಿದನು, ಅವರೊಡನೆ ಬಂಧುತ್ವ ಸಹ ಬೆಳೆಸಿ, ಸರದಾರ ಜಾಫರ ಬೇಗ್‌ರ ಮಗಳೊಂದಿಗೆ ಮದುವೆ ಮಾಡಿಕೊಂಡನು.

ಆದರೂ ಕೂಡ ಈ ಉಪಟಳ ಮಾಡುವ ಜನಾಂಗವು ಮೊದೂದನ ವಿರೋಧ ಮಾಡುತ್ತಲೇ ಇತ್ತು.

ಹಾಂಸೀ, ತಾನಸೀರ ಹಾಗೂ ನಗರಕೋಟ ಮೇಲೆ ಹಿಂದುಗಳ ಸ್ವಾಧೀನ:

ಹಿಜರಿ ಶಕೆ ೪೩೫ ರಲ್ಲಿ ದೆಹಲಿ ಮತ್ತು ಹಿಂದುಸ್ತಾನದ ಅನ್ಯ ಪ್ರಾಂತ್ಯಗಳ ಹಿಂದೂ ರಾಜರು ಒಂದಾಗಿ ಹಾಂಸೀ ಹಾಗೂ ತಾನಸೀರ ವಶಪಡಿಸಿಕೊಂಡು ಈ ಪ್ರಾಂತಗಳಿಂದ ಘಜನಿ ಸರದಾರರನ್ನು ತೆಗೆದು ಹಾಕಿ ಹಿಂದೂಗಳ ಸೈನ್ಯವು ನಗರಕೋಟ ಕಡೆ ಹೊರಟಿತು. ನಗರಕೋಟೆಗೆ ಬಂದ ನಂತರ ಹಿಂದೂಗಳು ಕೋಟೆಯನ್ನು ಮುತ್ತಿದರು. ಈ ಮುತ್ತಿಗೆಯು ೪ ತಿಂಗಳವರೆಗೆ ನಡೆದಿತ್ತು. ಈ ಅವಧಿಯಲ್ಲಿ ಎಷ್ಟೋ ಸಾರಿ ಮುಸಲ್ಮಾನರು ಲಾಹೋರನಿಂದ ಸಹಾಯ ಕೇಳಿದರು, ಆದರೆ ಪರಿಸ್ಥಿತಿಯ ಕಾರಣ ಹಾಗೂ ಕೆಲವು ಅಡೆತಡೆಗಳಿಂದ ಅವರಿಗೆ ಲಾಹೋರಿನಿಂದ ಯಾವ ಸಹಾಯವೂ ಸಿಗಲಿಲ್ಲ. ದೀರ್ಘ ಕಾಲದ ಕೋಟೆಯ ಮುತ್ತಿಗೆಯ ಪರಿಣಾಮವಾಗಿ ಖಾದ್ಯ ವಸ್ತುಗಳ ಅಭಾವ ಉಂಟಾಗಿ ಮುಸಲ್ಮಾನರಿಗೆ ಹಿಂದೂಗಳನ್ನು ಎದುರಿಸುವಷ್ಟು ಸಾಹಸ ಇರಲಿಲ್ಲ. ಈ ರೀತಿ ನಗರಕೋಟೆಯು ಸಹ ತಾನಸೀರ ಮತ್ತು ಹಾಂಸೀಯಂತೆ ಹಿಂದೂಗಳ ಸ್ವಾಧೀನವಾಯಿತು.

ಹಿಂದೂಗಳು ನಗರಕೋಟನ್ನು ಪುನಃ ವಿಗ್ರಹ ಪೂಜಕರ ಪವಿತ್ರ ಸ್ಥಾನವನ್ನಾಗಿ ಮಾರ್ಪಡಿಸಿದರು. ಈ ನಗರದಲ್ಲಿ ಅಲ್ಲಲ್ಲಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ಪುನಃ ವಿಗ್ರಹ ಪೂಜೆಯ ಪರಂಪರೆಯನ್ನು ಆರಂಭಿಸಿದರು.

ನಗರಕೋಟನಲ್ಲಿ ವಿಗ್ರಹ ಪೂಜೆ ಬೆಳೆಯುವುದರ ವಿವರವು ಹೀಗಿದೆ, 'ದಿಲ್ಲಿಯ ರಾಜನು ಘಜನವಿ ರಾಜ್ಯದ ಅಡಿಪಾಯ ಅಲುಗಾಡುವುದನ್ನು ಕಂಡಾಗ, ಘಜನವಿ ಆಡಳಿತದ ಪತನದ ಸಂಕೇತಗಳು ಕಾಣಲಾರಂಭಿಸಿದವು. ದಿಲ್ಲಿಯ ರಾಜನು ಬ್ರಾಹ್ಮಣರ ಸಲಹೆಯ ಮೇರೆಗೆ ಒಂದು ತಂತ್ರ ಹೂಡಿದನು. ಒಂದು ದಿನ ಬೆಳಿಗ್ಗೆ ತನ್ನ ಸಮಸ್ತ ಅಮೀರರು, ವಜೀರರಿಗೆ ಬರ ಹೇಳಿ ಅವರಿಗೆ ಹೇಳಿದನು, ನಿನ್ನೆ ನನ್ನ ಕನಸಿನಲ್ಲಿ ನಗರಕೋಟದ ಒಂದು ವಿಗ್ರಹವು ಬಂದು, 'ನಾನು ಇದುವರೆಗೂ ಘಜನಿಯಲ್ಲಿ ಇರುತ್ತಿದ್ದೆನು, ಅಲ್ಲಿರುವ ನನ್ನ ಉದ್ದೇಶವೆಂದರೆ ಮುಸಲ್ಮಾನರನ್ನು ನಾಶ ಮಾಡಿ ಘಜನವಿ ರಾಜ್ಯವನ್ನು ಬಲಹೀನ ಮಾಡುವುದು. ನನ್ನ ಉದ್ದೇಶವನ್ನು ನಾನು ಸಂಪೂರ್ಣ ಸಾಧಿಸಿದ್ದೇನೆ. ಈಗ ನಾನು ಪುನಃ ನನ್ನ ಕೇಂದ್ರಸ್ಥಾನಕ್ಕೆ ಬರಲು ಇಚ್ಛಿಸುತ್ತೇನೆ. ನನ್ನ ಆರಾಧಕರಿಗೆ ಆರಾಧನೆ ಮಾಡಲು ಅವಕಾಶ ನೀಡಿ. ನನ್ನ ಭಕ್ತರು ಸಹ ಮುಸಲ್ಮಾನರ ವಿರುದ್ಧ ಪ್ರಾಣಾರ್ಪಣೆ ಮಾಡುವುದು ತಮ್ಮ ಕರ್ತವ್ಯವೆಂದು ತಿಳಿದು ಪ್ರಾಣಾರ್ಪಣೆಗೆ ಸಿದ್ಧರಾಗಿ. ನನ್ನ ಸಹಾಯದ ಮೇಲೆ ನೀವು ವಿಶ್ವಾಸವಿಡಿ. ಮತ್ತು ಸಮಗ್ರ ದೇಶವನ್ನು ಮುಸಲ್ಮಾನರ ವಶದಿಂದ ಮುಕ್ತಗೊಳಿಸಿರಿ.'ಎಂದು ತನ್ನ

ಮನದಿಚ್ಛೆಯನ್ನು ಹೇಳಿಕೊಂಡಿತು. ರಾಜನ ಈ ಭಾಷಣವು ಅಲ್ಲಿ ಉಪಸ್ಥಿತರಿದ್ದ ಶ್ರೋತೃಗಳ ಮೇಲೆ ಬಹಳ ಪರಿಣಾಮ ಮಾಡಿತು. ಹಾಗೂ ಎಲ್ಲರೂ ಮುಸಲ್ಮಾನರ ವಿರುದ್ಧ ಯುದ್ಧ ಮಾಡಲು ದೃಢ ನಿರ್ಧಾರ ಮಾಡಿದರು. ಈ ಸಂಬಂಧದಲ್ಲಿ ಅವರು ಒಂದು ಸಂತಸದ ಸಭೆಯನ್ನು ಆಯೋಜಿಸಿದರು. ಹಿಂದೂಗಳು ಈ ದಿನವನ್ನು ಒಂದು ದೊಡ್ಡ ಹಬ್ಬದ ರೂಪದಲ್ಲಿ ಸಂತೋಷದಿಂದ ಆಚರಿಸಿದರು.

ದಿಲ್ಲಿಯ ರಾಜನು ತನ್ನ ರೈತಾಪಿ ಜನರನ್ನು ಸಹ ತನ್ನ ವಿಚಾರಕ್ಕೆ ಒಪ್ಪುವಂತೆ ಮಾಡಲು, ಹೊಸದೊಂದು ತಂತ್ರವನ್ನು ಹೂಡಿದನು. ಕೆಲವು ವಿಶ್ವಾಸಾರ್ಹ ಶಿಲ್ಪಿಗಳನ್ನು ಕರೆಯಿಸಿ ಅವರಿಗೆ ನಗರಕೋಟದಲ್ಲಿ ಇರುವಂತಹ ವಿಗ್ರಹದಂತೆಯೇ ಇನ್ನೊಂದು ವಿಗ್ರಹವನ್ನು ತಯಾರಿಸಲು ಹೇಳಿದನು. ಅವರು ಕೂಡಲೇ ತಮ್ಮ ಕೆಲಸವನ್ನು ಆರಂಭಿಸಿ, ನಗರಕೋಟೆಯ ವಿಗ್ರಹದಂತಹ ಇನ್ನೊಂದು ವಿಗ್ರಹವನ್ನು ತಯಾರಿಸಿದರು. ಈ ವಿಗ್ರಹವನ್ನು ತೆಗೆದುಕೊಂಡು ದಿಲ್ಲಿಯ ರಾಜನು ಅನ್ಯ ಹಿಂದೂ ರಾಜರುಗಳೊಂದಿಗೆ ಹಾಂಸೀ, ತಾನಸೀರ ಇವುಗಳನ್ನು ಗೆದ್ದುಕೊಂಡ ನಂತರ ನಗರಕೋಟಗೆ ಬಂದನು. ಅಲ್ಲಿ ಕೋಟೆಯ ಒಂದು ಭಾಗದಲ್ಲಿ ಅದೇ ದಿನ ರಾತ್ರಿಯಲ್ಲಿ ರಾಜನು ಕೆಲವು ತೀಕ್ಷ್ಣಮತಿ ಬ್ರಾಹ್ಮಣರಿಗೆ ಆ ವಿಗ್ರಹವನ್ನು ಕೊಟ್ಟು ತೋಟದ ಒಂದು ಭಾಗದಲ್ಲಿ ಅದನ್ನು ನಿಲ್ಲಿಸಲು ಹೇಳಿ, ಬಂದು ಹೋಗುವವರ ದೃಷ್ಟಿ ಅದರ ಮೇಲೆ ಬೀಳುವಂತೆ ಮಾಡಲು ಹೇಳಿದನು. ತಾನು ಜನರ ಕಣ್ಣು ತಪ್ಪಿಸಿ ಮರಳಿದನು. ಬೆಳಗಾಗುತ್ತಲೇ ತೋಟಗಾರನು ತನ್ನ ಕೆಲಸವನ್ನು ಮಾಡಲು ಬಂದಾಗ ವಿಗ್ರಹವನ್ನು ನೋಡಿದನು. ಈ ತೋಟಗಾರನು ನಗರಕೋಟಿನ ವಿಗ್ರಹವನ್ನು ಚೆನ್ನಾಗಿ ನೋಡಿದ್ದನು. ಅದಕ್ಕಾಗಿ ಅದನ್ನು ನೋಡಿದ ಕೂಡಲೇ ವಿಗ್ರಹವು ಮರಳಿ ಬಂದಿತೆಂದು ತಿಳಿಸಿದನು. ಎಲ್ಲರಿಗೂ ಅತೀವ ಸಂತೋಷವಾಗಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ಜೋರಾಗಿ ಘೋಷಣೆಯನ್ನು ಕೂಗುತ್ತಾ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ತೋಟಗಾರರು ಈ ವಿಷಯದ ಸಮಾಚಾರವನ್ನು ಹಿಂದೂ ಸೈನ್ಯದವರೆಗೆ ತಲುಪಿಸಿದರು. ಅದನ್ನು ಕೇಳಿ ಸೈನಿಕರಿಗೆ ಅತಿ ಆನಂದವಾಗಿ ಅವರು ಕೂಡ ಘೋಷಣೆಯನ್ನು ಕೂಗಲಾರಂಭಿಸಿದರು.

ದಿಲ್ಲಿಯ ರಾಜನು ಏನೂ ಅರಿಯದ ಸಾಮಾನ್ಯ ಸೈನಿಕರ ಮೇಲೆ ಈ ತೆರನಾದ ಪ್ರಭಾವವಾದುದನ್ನು ಅರಿತು, ಅವರ ನಂಬಿಕೆಯನ್ನು ಇನ್ನೂ ದೃಢಪಡಿಸಲು ತನ್ನ ಮಕ್ಕಳು, ಸಂಬಂಧಿಕರು ಮತ್ತು ಅಧಿಕಾರ ವರ್ಗದವರೊಂದಿಗೆ ಬರಿಗಾಲಿನಿಂದ ಓಡುತ್ತ ಓಡುತ್ತ ತೋಟದ ಕಡೆ ಬಂದನು ಮತ್ತು ಭಕ್ತಿಯನ್ನು ವ್ಯಕ್ತ ಪಡಿಸುತ್ತ ತನ್ನ ಶಿರಸ್ಸನ್ನು ವಿಗ್ರಹದ ಪಾದಗಳ ಮೇಲೆ ಇಟ್ಟನು. ಅದಲ್ಲದೇ ತನ್ನ ನಂಬಿಕೆಯ ಪ್ರಕಾರ ಪರಮಾತ್ಮನಿಗೆ ಅರ್ಪಿಸ ಬೇಕಾದುದುದನ್ನು ಅರ್ಪಿಸಿ ತೋಟದಿಂದ ಹೊರಬಂದನು. ನಂತರ ತನ್ನ ಪ್ರಜೆಗಳಿಗೆ, 'ನಮ್ಮ ದೇವರು ಘಜನಿಯಿಂದ ಹಿಂದೂಸ್ಥಾನದ ಪ್ರಯಾಣವನ್ನು ಒಂದೇ ರಾತ್ರಿಯಲ್ಲಿ ಮಾಡಿದ ಕಾರಣ ಆಯಾಸಗೊಂಡಿರಬಹುದಾದ

ಕಾರಣ ಇವತ್ತೊಂದು ದಿನ ಸಂಪೂರ್ಣ ವಿಶ್ರಾಂತಿ ಪಡೆಯುವನು. ನಾಳೆಯ ದಿನ ಅರ್ಚಕರಿಗೆ ದರ್ಶನ ಭಾಗ್ಯವನ್ನು ನೀಡುವನು.' ಎಂದು ಹೇಳಿದನು. ಎಲ್ಲರಿಗೂ ರಾಜನ ಮಾತಿನ ಮೇಲೆ ವಿಶ್ವಾಸ ಮೂಡಿ ತಮ್ಮ ತಮ್ಮ ಯೋಗ್ಯತೆ ಪ್ರಕಾರ ಪರಮಾತ್ಮನಿಗೆ ಸಲ್ಲಿಸಬೇಕಾದ ಸೇವೆಯನ್ನು ಸಲ್ಲಿಸಿ ವರಗಳನ್ನು ಕೇಳಿಕೊಂಡು ತಮ್ಮ ತಮ್ಮ ವಾಸಸ್ಥಾನಗಳಿಗೆ ಮರಳಿದರು. ಎರಡನೆಯ ದಿನ ಹಿಂದೂ ಸಿಪಾಯಿಗಳು ಮತ್ತು ಸಾಮಾನ್ಯ ಜನರು ತಮ್ಮ ಪೂಜೆಗೊಂಡ ದೇವರ ವಿಗ್ರಹದ ಕಡೆಗೆ ಬಂದರು ಮತ್ತು ಆ ವಿಗ್ರಹದ ಮೇಲೆ ಎಷ್ಟೊಂದು ಬೆಳ್ಳಿ ಹಾಗು ಚಿನ್ನದ ನಾಣ್ಯಗಳನ್ನು ಸಲ್ಲಿಸಿದರೆಂದರೆ, ಮೃತಪಟ್ಟ ಮಹಮದ ಘಜನಿಯ ಆತ್ಮವೂ ಕೂಡ ಘಜನಿಯಿಂದ ಹಿಂದುಸ್ತಾನಕ್ಕೆ ಬಂದು ಹೋಗಿರಬಹುದು. ದೆಹಲಿಯ ರಾಜನು ಅತ್ಯಂತ ಚಾಣಾಕ್ಷರಾದ ಬ್ರಾಹ್ಮಣರ ಜೊತೆಯಲ್ಲಿ ವಿಗ್ರಹದ ಹತ್ತಿರ ನಿಂತುಕೊಂಡಿದ್ದನು. ವಿಗ್ರಹಕ್ಕೆ ತಮ್ಮ ಸೇವೆಯನ್ನು ಅರ್ಪಿಸಲು ಬಂದ ಪ್ರತಿ ವ್ಯಕ್ತಿಯ ಕಿವಿಯಲ್ಲಿ ಬ್ರಾಹ್ಮಣನು ಹೇಳುತ್ತಿದ್ದನು, 'ನೀವು ಸೇವೆ ಸಮರ್ಪಿಸಿದ ವಿಗ್ರಹದ ಆದೇಶವೆಂದರೆ, ಯಾವ ರೀತಿಯಿಂದಲಾದರೂ ಮುಸಲ್ಮಾನರನ್ನು ಹೊರದೂಡಬೇಕು. ಏಕೆಂದರೆ ಇದು ನಿಮ್ಮ ದೇವರ ವಾಸಸ್ಥಾನವಾಗಿದ್ದು ಪುನಃ ಅದನ್ನು ದೇವರ ವಾಸಸ್ಥಾನವನ್ನಾಗಿ ಮಾಡಿರಿ.'

ಪ್ರತಿಯೊಬ್ಬ ಹಿಂದು ವ್ಯಕ್ತಿಯು ದೇವರ ಆದೇಶವನ್ನು ಕೇಳಿ ಕೋಟೆಯನ್ನು ವಿಗ್ರಹ ಆರಾಧಕರ ವಶಕ್ಕೆ ತೆಗೆದುಕೊಳ್ಳಲು ಪರಿಪೂರ್ಣ ಪ್ರಯತ್ನ ಮಾಡುವೆನು ಮತ್ತು ಮುಸಲ್ಮಾರೊಂದಿಗೆ ಪ್ರಾಣವಿರುವವರೆಗೆ ಹೋರಾಡುವೆನು ಎಂದು ದೃಢ ನಿಶ್ಚಯ ಮಾಡಿದನು. ಇದಾದ ನಂತರ ಎಲ್ಲ ಹಿಂದೂ ಸಿಪಾಯಿಗಳು ಪರಸ್ಪರ ಸೇರಿ ಪೂರ್ಣ ಶಕ್ತಿಯಿಂದ ಕೋಟೆಯನ್ನು ಮುತ್ತಿದರು. ಮೇಲೆ ಉಲ್ಲೇಖಿಸಿದಂತೆ ಮುಸಲ್ಮಾನರು ಮುತ್ತಿಗೆಯ ತೀಕ್ಷ್ಣತೆಯಿಂದ ಬೆದರಿ, ಆಹಾರ ಧಾನ್ಯಗಳ ಅಭಾವದಲ್ಲಿ, ಲಾಹೋರಿನ ಸಹಾಯವಿಲ್ಲದೆ ತತ್ತರಿಸಿ ಕೊನೆಯಲ್ಲಿ ನಿರಾಶರಾಗಿ ಕೋಟೆಯನ್ನು ಹಿಂದೂಗಳ ವಶಕ್ಕೆ ಕೊಟ್ಟು, ಸ್ವತಃ ಲಾಹೋರ ಕಡೆ ಹೊರಟು ಹೋದರು.

ಮುಸಲ್ಮಾನರು ಹೊರಟು ಹೋದನಂತರ, ದಿಲ್ಲಿಯ ರಾಜನು ಸುಲ್ತಾನ ಮಹಮದನು ನಾಶಮಾಡಿದ ಮಂದಿರವನ್ನು ಪುನರುಜ್ಜೀವನಗೊಳಿಸಿ ವಿಗ್ರಹವನ್ನು ಮೊದಲಿದ್ದ ಸ್ಥಳದಲ್ಲಿಯೇ ಸ್ಥಾಪಿಸಿ ಅರ್ಚನೆ ಆರಾಧನೆಗಳನ್ನು ಆರಂಭಿಸಲು ಅನುವು ಮಾಡಿಕೊಟ್ಟನು. ನಗರಕೋಟ ಕೋಟೆಯನ್ನು ವಶಪಡಿಸಿಕೊಂಡ ಹಾಗೂ ವಿಗ್ರಹವು ಮರಳಿ ಬಂದ ವಿಷಯವು ಜನಜನಿತವಾಗಿ ಸುತ್ತ-ಮುತ್ತಲಿನ ಹಿಂದೂಗಳು ಆನಂದತುಂದಿಲರಾಗಿ ನಗರಕೋಟ ಕಡೆಗೆ ಯಾತ್ರೆಗಾಗಿ ಬರಲಾರಂಭಿಸಿದರು. ಈ ಸಾರಿ ನಗರಕೋಟನಲ್ಲಿ ಅಸಂಖ್ಯಾತ ಹಿಂದುಗಳು ಸೇರಿಕೊಂಡು ವಿಗ್ರಹವನ್ನು ಹಿಂದೆಂದಿಗೂ ಮಾಡದಂತಹ ವೈಭವದ ಪೂಜೆ ಮಾಡಿದರು. ಹಿಂದುಗಳ ಪರಿಪಾಠವೆಂದರೆ ಯಾವುದರೂ ಒಳ್ಳೆಯ ಕೆಲಸ ಆರಂಭ ಮಾಡುವಾಗ ವಿಗ್ರಹದ

ಸಲಹೆ ಕೇಳುತ್ತಾರೆ. ಸಲಹೆ ದೊರೆತರೆ ಮನಸ್ಸಿನಲ್ಲಿ ಅಂದುಕೊಂಡ ಕೆಲಸವನ್ನು ಪೂರ್ಣಗೊಳಿಸುತ್ತಾರೆ ಇಲ್ಲದಿದ್ದರೆ ಸುಮ್ಮನಿರುತ್ತಾರೆ. ಈ ಕಾಲದಲ್ಲಿ ನಗರಕೋಟದ ಸುತ್ತ-ಮುತ್ತಲಿನ ಕೆಲವು ತಿಳಿವಳಿಕೆ ಇಲ್ಲದ ಮುಸಲ್ಮಾನರು ಹಿಂದುಗಳಂತೆಯೇ ವಿಗ್ರಹಕ್ಕೆ ಕಾಣಿಕೆಗಳನ್ನು ಸಲ್ಲಿಸಿ, ಈ ಢೋಂಗಿ ಭಗವಂತನ ಭಕ್ತರು ಪ್ರಾಣವಿಲ್ಲದ ಕಲ್ಲಿನಿಂದ ತಮ್ಮ ಆಶಾಕಾಂಕ್ಷೆಗಳನ್ನು ಪೂರ್ಣಗೊಳಿಸುವ ಕಾರಣವೆಂದು ತಿಳಿದರು.

ಲಾಹೋರಿನ ಮೇಲೆ ಹಿಂದೂಗಳ ದಾಳಿ:

ಮೇಲೆ ಹೇಳಲಾದ ಘಟನೆಗಳ ಜೊತೆ ಜೊತೆಗೆ, ಮುಸಲ್ಮಾನರ ಭಯಕ್ಕೊಳಗಾಗಿ ಅರಣ್ಯದಲ್ಲಿ ಅಡಗಿದ ರಾಜರುಗಳು ಈ ಸಮಯದ ಲಾಭ ಪಡೆದರು ಮತ್ತು ಅವರಲ್ಲಿಯ ಬಹಳ ಖ್ಯಾತ ಹಾಗೂ ಶಕ್ತಿಯುತ ಮೂರು ಜನ ರಾಜರು ಸಂಘಟಿತರಾಗಿ, ೧೦ ಸಾವಿರ ಅಶ್ವಸವಾರರು ಮತ್ತು ಅಸಂಖ್ಯಾತ ಕಾಲ್ದಳದವರೊಂದಿಗೆ ಲಾಹೋರ ಕಡೆಗೆ ಹೊರಟರು. ಅಲ್ಲಿ ಹೋದ ನಂತರ ರಾಜರು ಪಟ್ಟಣವನ್ನು ಮುತ್ತಿದರು. ಈಗಾಗಲೇ ಪಂಜಾಬಿನಲ್ಲಿ ಮುಸಲ್ಮಾನರ ಸಣ್ಣ ಪುಟ್ಟ ಸಂಸ್ಥಾನಗಳು ಸ್ಥಾಪನೆಗೊಂಡು, ಮುಸಲ್ಮಾನರ ಜಹಗೀರದಾರರು ಹಾಗೂ ಅಮೀರ ಮೊದುದನ ಅಧೀನತೆಯಿಂದ ದೂರವಾಗಿ ತಮ್ಮ ತಮ್ಮಲ್ಲಿ ಜಗಳವಾಡುತ್ತಿದ್ದರು. ಹಿಂದುಗಳು ಲಾಹೋರನ್ನು ಮುತ್ತಿದಾಗ ಮುಸಲ್ಮಾನ ಅಮೀರರ ಕಣ್ಣು ತೆರೆದವು. ಸಮಯೋಚಿತ ಯುಕ್ತಿಯನ್ನು ಕೈಗೊಂಡು ಮುಸಲ್ಮಾನರು ಜೊತೆ ಸೇರಿ ಸೈನ್ಯವನ್ನು ಸಿದ್ಧಪಡಿಸಿ, ಅಮೀರ ಮೊದುದನ ಆಡಳಿತವನ್ನು ಸ್ವೀಕರಿಸಲು ಸಿದ್ಧರಾಗಿ ಹಿಂದುಗಳೊಂದಿಗೆ ಕಾದಾಡಲು ನಗರದಿಂದ ಹೊರಬಂದರು. ಮುಸಲ್ಮಾನರ ಐಕ್ಯತೆ ಅವರ ಸೈನ್ಯದ ವಿಶಾಲತೆಯನ್ನು ಊಹಿಸಿ, ಶಕ್ತಿಹೀನರಾಗಿ ಯುದ್ಧ ಮಾಡದೇ ರಣಾಂಗಣದಿಂದ ಓಡಿಹೋದರು.

ತುರ್ಕಮಾನಿಯೊಂದಿಗೆ ಯುದ್ಧ:

ಹಿಜರಿ ಶಕೆ ೪೩೪ರಲ್ಲಿ, ಅಮೀರ ಮೊದುದನು ಅರ್ತಗೀನ ಹಾಜಬನಿಗೆ ತಖಾರಸ್ಥಾನ *(ಉತ್ತರ ಪೂರ್ವ ಖರಸ್ಥಾನದ ಒಂದು ಪ್ರಾಂತ) ಕಡೆ ಕಳುಹಿಸಿದನು. ಅರ್ತಗೀನ ಅಲ್ಲಿಗೆ ಬಂದಾಗ, ದಾವೂದ ತುರ್ಕಮಾನಿಯ ಮಗ ಅರಮನೆವರೆಗೆ ಬಂದ ವಿಷಯವು ತಿಳಿಯಿತು. ಅದನ್ನು ಕೇಳುತ್ತಲೇ ಅರಸ್ಥಗೀನನು ತುರ್ಕಮಾನಿಗಳ ಮೇಲೆ ದಾಳಿ ಮಾಡಿದನು. ಘಜನವಿ ಸೈನ್ಯವು ತಮ್ಮನ್ನು ತುಳಿಯಲು ಬಂದ ಸಮಾಚಾರ ತಿಳಿದು ತುರ್ಕಮಾನಿ ಸೈನ್ಯದ ಸರದಾರನು ಭಯಭೀತನಾಗಿ ತನ್ನ ಸೈನ್ಯವನ್ನು ಯುದ್ಧ ಭೂಮಿಯಲ್ಲಿ ಬಿಟ್ಟು ಅರಣ್ಯದ ದಾರಿ ಹಿಡಿದನು. ಅರಸ್ಥಗೀನ ಅರಮನೆಗೆ ಬಂದು ಅಲ್ಲಿ ಆತನು ತುರ್ಕಮನಿ ಸೈನ್ಯದ ಮೇಲೆ ದಾಳಿ ಮಾಡಿ ಅವರನ್ನು ಸೋಲಿಸಿ ಮನಬಂದಂತೆ ಅವರನ್ನು ಕೊಂದು ಅಲ್ಲಿಂದ ಅರ್ತಗೀನನು ಬಲ್ಗಗೆ ಹೋದನು. ಬಲ್ಗನ್ನು ಸಹ ಗೆದ್ದುಕೊಂಡು ಅಲ್ಲಿ ಅಮೀರ ಮೊದುದನ ಹೆಸರಿನ ಖುತ್ಬಾ ಮತ್ತು ನಾಣ್ಯಗಳನ್ನು ಜಾರಿಗೊಳಿಸಿ ಮುಂದೆ ಹೋಗುವಷ್ಟರಲ್ಲಿ

ತುರ್ಕಮಾನಿ ಸೈನ್ಯವು ಇದ್ದಕಿದ್ದಂತೆ ಇವರನ್ನು ಎದುರಿಸಲು ಬಲ್ಗಿನ ಸಮೀಪ ಬಂದರು. ಅರಸ್ಥಗೀನನಿಗೆ ತುರ್ಕಮಾನಿಗಳ ಸೈನ್ಯವನ್ನು ಎದುರಿಸಲಾಗದೆಂದು ಅರಿವಾದಾಗ ಅಮೀರ ಮೊದುದನ ಸಹಾಯವನ್ನು ಕೇಳಿದನು. ಆದರೆ, ಮೊದುದನು ಅರಸ್ಥಗೀನನ ಕೋರಿಕೆಯನ್ನು ಅಲಕ್ಷಿಸಿದನು. ಅದಕ್ಕಾಗಿ ಅನಿವಾರ್ಯ ಪರಿಸ್ಥಿತಿಯಲ್ಲಿ ಅರಸ್ಥಗೀನನು ಬಲ್ಗನಿಂದ ಹೊರಟು ಪಂಜರ, ಕಾಬೂಲ ಮೂಲಕ ಘಜನಿಗೆ ಮರಳಿ ಬಂದನು.

ಕೆಲವು ಚಾಡಿಕೋರರ ಮಾತುಗಳ ಪ್ರಭಾವಕ್ಕೊಳಗಾಗಿ ಹಿಜರಿ ಶಕೆ ೪೩೫ ರಲ್ಲಿ ಅಮೀರ ಮೊದುದನು ಘಜನಿಯ ಕೋತ್ವಾಲನಾದ ಅಬೂ ಅಲಿಯನ್ನು ಬಂಧಿಸಿದನು. ಆತನ ಮೇಲಿನ ಆರೋಪವು ಸುಳ್ಳೆಂದು ಸಾಬೀತಾದಾಗ ಮೊದುದನು ಅಬೂ ಅಲಿಯನ್ನು ಬಂಧನದಿಂದ ಬಿಡುಗಡೆ ಮಾಡಿ ಪುನಃ ರಾಜ್ಯಾಧಿಕಾರವನ್ನು ಮತ್ತು ಘಜನಿಯ ಕೋತ್ವಾಲಗಿರಿಯನ್ನು ನೀಡಿದನು. ಮೊದುದನು ಇಮಾಮ ಅಲಿರಜಾ ಅಲೀಯ ಇಸ್ಲಾಮರ ಮಜಾರಿನ ಸೇವಕನಾದ ಸೂರಿ ಬಿನ್ ಅಲ್ಮಖೈಜ್‌ನನ್ನು ಬಂದಿಯಾಗಿಸಿ ಕಾರಾಗೃಹದಲ್ಲಿ ಹಾಕಿದನು. ಆ ಕಾಲದಲ್ಲಿ ಆತನು ದಿವಾನನು ಆಗಿದ್ದನು. ಸೂರಿ ಈ ಕಾರಾಗೃಹ ವಾಸದಲ್ಲಿ ಮೃತಪಟ್ಟನು. ಚಾಡಿಕೋರರು ಅರ್ತಗೀನನ ಬಗೆಗೆ ಕೂಡ ಮೊದುದನ ಮನಸ್ಸಿನಲ್ಲಿ ಅನುಮಾನಗಳನ್ನು ಹುಟ್ಟಿಸಿದರು. ಅದಕ್ಕಾಗಿ ಮೊದುದನು ತನ್ನ ಸಮ್ಮುಖದಲ್ಲಿ ಅರ್ತಗೀನನನ್ನು ಕೊಲ್ಲಿಸಿದ. ಅದೇ ವರ್ಷ ತುರ್ಕಮಾನಿಗಳು ಘಜನಿಯನ್ನು ಗೆಲ್ಲುವ ವಿಚಾರಮಾಡಿದರು. ಇವರ ಒಂದು ಸೈನ್ಯದ ಭಾಗವು ಬಸ್ತನ ಸಮೀಪ ತಂಗಿತು. ಮೊದುದನು ಆ ಸೈನ್ಯವನ್ನು ಸೋಲಿಸಲು ತನ್ನ ಸೈನ್ಯವನ್ನು ಕಳುಹಿಸಿದನು. ತುರ್ಕಮಾನಿಗಳು ಸೋತು ಚೆದರಿ ಓಡಿದರು.

ಹಿಜರಿ ಶಕೆ ೪೩೬ ರಲ್ಲಿ ಖಾಜಾ ತಾಹೀರ ಮಂತ್ರಿಯು ಮೃತಪಟ್ಟನು. ಆತನ ಸ್ಥಾನದಲ್ಲಿ ಖಾಜಾ ಅಬೂಲ್ ಫತಾ ಅಬ್ದೈಲ್ ರಜಾಖ ಬಿನ್ ಅಹ್ಮಮದ ಬಿನ್ ಹಸನ ಮೇಮದೀಯನ್ನು ನಿಯಮಿಸಲಾಯಿತು. ಅದೇ ವರ್ಷ ಮೊದುದನು ತಫರುಲ್ ಸಾಹೇಬನನ್ನು ಬಸ್ತ ಕಡೆ ಕಳುಹಿದನು. ತಫರುಲ್ಲನು ಸೀಸ್ಥಾನಕ್ಕೆ ಬಂದು ಅಬೂಲ್ ಫಜಲನ ಸಹೋದರ ಹಾಗು ಅಬೂಲ್ ಮನಸೂರ ರಂಗಿಯನ್ನು ಬಂಧಿಸಿದನು. ಮತ್ತು ಹೀಗೆ ಬಂಧಿಸಿದವರನ್ನು ಜೊತೆಗೆ ಕರೆದುಕೊಂಡು ಘಜನಿಗೆ ಮರಳಿದನು.

ಹಿಜರಿ ಶಕೆ ೪೩೭ರಲ್ಲಿ ಸಲಜೂಖೀಗಳು ಘಜನಿ ಕಡೆಗೆ ಮುನ್ನುಗ್ಗಿ ಬಸ್ತ ಮೂಲಕ ರಬಾತ ಅಮೀರವರೆಗೆ ಬಂದು ಆ ಪ್ರಾಂತವನ್ನು ನಾಶ ಮಾಡಿದರು. ಘಜನಿಯಿಂದ ತಫರುಲ್ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಅವರನ್ನು ತುಳಿಯಲು ಹೊರಟನು, ಶೀಘ್ರವಾಗಿ ಇವರಲ್ಲಿಗೆ ಬಂದನು. ಇಬ್ಬರ ಮಧ್ಯೆ ಘೋರ ಯುದ್ಧವಾಗಿ, ಘಜನಿ ಸೈನ್ಯಕ್ಕೆ ಗೆಲುವಾಗಿ ತುರ್ಕಮಾನಿಗಳು ಸೋತು ಓಡಿದರು.

ಇದಾದ ನಂತರ ತಘರುಲ್ಲನು, ಗರಂ ಸೀರ *(ದಕ್ಷಿಣ ಪಶ್ಚಿಮ ಅಫಘಾನಿಸ್ಥಾನದ ಒಂದು ಜಿಲ್ಲೆ) ಕಂದ್ಹಾರ ಕಡೆಗೆ ತಿರುಗಿದನು. 'ಸುರಖ್ಹಿಕಲಾಹ' ಹೆಸರಿನಿಂದ ಪ್ರಖ್ಯಾತಿಯಾದ ಈ ಪ್ರಾಂತ್ಯದ ತುರ್ಕಮಾನಿಗಳನ್ನು ವಧಿಸಿ, ಕೆಲವರನ್ನು ಬಂಧಿಸಿ ಗೆಲುವನ್ನು ಸಾಧಿಸಿ ಘಜನಿಗೆ ಮರಳಿ ಬಂದನು.

ತೊಗರುಲ್ಲನ ದಾಳಿ:

ಹಿಜರಿ ಶಕೆ ೪೩೭ರಲ್ಲಿ ಅಮೀರ ಮೊದುದನು ತೊಗರುಲ್ಲನನ್ನು ಒಂದು ಸುಸಜ್ಜಿತ ಸೈನ್ಯದ ಸಂಗಡ ತಕೀಯಾಬಾದಿಗೆ ಕಳುಹಿಸಿದನು. ಅಲ್ಲಿ ಹೋದನಂತರ ತೊಗರುಲ್ಲನಿಗೆ ಸ್ವಾತಂತ್ರ್ಯದ ಕಲ್ಪನೆ ಹುಟ್ಟಿ ಮೊದುದನ ಅಧೀನತೆಯನ್ನು ನಿರಾಕರಿಸಿದನು. ಮೊದುದನಿಗೆ ಈ ವಿಷಯ ತಿಳಿದಾಗ ಕೆಲವು ವಿಶ್ವಾಸಾರ್ಹ ಜನರನ್ನು ತೊಗರುಲ್ಲನ ಬಳಿ ಕಳುಹಿಸಿ ಆತನು ತನ್ನ ಅಧಿಕಾರವನ್ನು ಒಪ್ಪುವಂತೆ ಮನವೊಲಿಸಲು ತನ್ನಲ್ಲಿಗೆ ಬರಹೇಳಿ ಕಳುಹಿಸಿದನು. ಅಮೀರ ಮೊದುದನ ಪ್ರತಿನಿಧಿಗೆ ತೊಗರುಲ್ಲನು, 'ಈಗ ಅವರು ನನ್ನ ಶತ್ರುಗಳಿದ್ದಾರೆ. ನಾನು ಅವರಿಗೆ ಮೃತ್ಯುವನ್ನೇ ಕೊಡಬೇಕಾಗಿದೆ, ಕಾರಣ ನಾನು ಅವರ ಸೇವೆಯಲ್ಲಿ ಹಾಜರಾಗಲಾರೆನು.' ಎಂದು ಉತ್ತರಿಸಿದನು. ಈ ಉತ್ತರವನ್ನು ಪಡೆದು ಅಮೀರ ಮೊದುದನು ೧೦ ಸಾವಿರ ಸಿಪಾಯಿಗಳ ಸೈನ್ಯವನ್ನು ಅಲೀ ಬಿನ್ ಖಾದೀಮ ರಬಿಯಾ ನೇತೃತ್ವದಲ್ಲಿ ಕಳುಹಿದನು. ಅಲೀ ಬಿನ್ ರಬಿಯಾ ಕೂಡಲೇ ತೊಗರುಲ್ಲನ ಕಡೆ ಹೋದನು. ಆತನ ಬರುವಿಕೆಯಿಂದ ತೊಗರುಲ್ಲನು ವಿಹ್ವಲನಾಗಿ ತನ್ನ ಸೈನ್ಯವನ್ನು ಅಲ್ಲಿಯೇ ಬಿಟ್ಟು ಕೆಲವು ಅಧಿಕಾರಿಗಳೊಂದಿಗೆ ಓಡಿಹೋದನು. ಅಲೀ ಬಿನ್ ರಬಿಯಾನು ತೊಗರುಲ್ಲನ ಸೈನ್ಯದ ಮೇಲೆ ದಾಳಿ ಮಾಡಿ ಅವರಲ್ಲಿಯ ಕೆಲವು ಜನರನ್ನು ಬಂದಿಮಾಡಿ ಘಜನಿಗೆ ತೆಗೆದುಕೊಂಡು ಹೋದನು.

ಗೋರನ ಮೇಲೆ ದಾಳಿ:

ಅದೇ ವರ್ಷ ಮೌದುದನು ಅಮೀರ ಬಾಸ್ತಗೀನ ಹಿರಿಯ ಸಂರಕ್ಷಣಾಧಿಕಾರಿ ಗೌರ ಎಂಬುವನನ್ನು ಕಳುಹಿಸಿಕೊಟ್ಟನು. ಬಾಸ್ತಗೀನ ಗೋರನ ಹತ್ತಿರ ಬಂದಾಗ ಆತನು ವಲ್ದ ಹೇಚಿ ಗೋರಿಯನ್ನು ತನ್ನ ಜೊತೆಗೆ ಕರೆದುಕೊಂಡು ಅಬೂ ಅಲೀ ಕೋಟೆಗೆ ಹೊರಟನು. ಬಾಸ್ತಗೀನನು ಈ ಕೋಟೆಯನ್ನು ಗೆದ್ದು, ಗೋರಿಗಳ ಸರದಾರನಾದ ಅಬೂ ಅಲೀ ಕೋಟೆಯ ಮೇಲ್ವಿಚಾರಕನನ್ನು ಬಂದಿಮಾಡಿದನು. ಈ ಕೋಟೆಯ ಎಷ್ಟೊಂದು ದೃಢವಾಗಿತ್ತೆಂದರೆ ಬಾಸ್ತಗೀನಕ್ಕಿಂತಲೂ ಮೊದಲು ೭೦೦ ವರ್ಷಗಳಲ್ಲಿ ಇದನ್ನು ಯಾರೂ ಗೆದ್ದಿರಲಿಲ್ಲ. ಬಾಸ್ತಗೀನನು ವಲ್ದ ಹೇಚಿ ಹಾಗು ಅಬೂ ಅಲೀ ಇವರನ್ನು ಬಂದಿ ಮಾಡಿ ತನ್ನ ಜೊತೆಯಲ್ಲಿ ಘಜನಿಗೆ ಕರೆದೊಯ್ದನು. ಇಬ್ಬರೂ ವಿದ್ರೋಹಿಗಳನ್ನು ಮೊದುದನು ವಧಿಸಿದನು.

ಖರ್ಝುವಾರ ಬೇಹರಾಮನ ಮೇಲೆ ದಾಳಿ:

ಗೋರನ ದಾಳಿಯ ನಂತರ ಅಮೀರನು ಅದೇ ವರ್ಷ ಬಾಸ್ತಗೀನನೊಂದಿಗೆ ತುರ್ಕಮಾನಿಗಳ ಸರದಾರನಾದ ಬೇಹರಾಂ ನಿಯಾಲನನ್ನು ಎದುರಿಸಲು ಕಳುಹಿಸಿದನು. ಬಸ್ತನ ಹತ್ತರ ಉಭಯ ಸೈನ್ಯಗಳು ಪರಸ್ಪರ ಎದುರಾಗಿ ಕಾದಾಟದಲ್ಲಿ ಬಾಸ್ತಗೀನನು ಗೆದ್ದು ತುರ್ಕಮಾನಿಗಳಿಗೆ ಸೋಲಾಯಿತು ಮತ್ತು ಅವರು ರಣಾಂಗಣದಿಂದ ಪಲಾಯನ ಮಾಡಿದರು.

ಹಿಜರಿಶಕೆ ೪೬೯ ರಲ್ಲಿ ಅಮೀರ ಖಜಾವರನು ವಿದ್ರೋಹ ಮಾಡಿದನು. ಕೂಡಲೇ ಬಾಸ್ತಗೀನ ಖಜಾವರನೊಂದಿಗೆ ಯುದ್ಧ ಆರಂಭಿಸಿದನು. ಇದರ ಪರಿಣಾಮವಾಗಿ ವಿದ್ರೋಹಿಗಳಿಗೆ ಸೋಲಾಯಿತು. ಖಜಾವರನು ಕೆಲವು ದಿನಗಳನಂತರ ಅಮೀರ ಮೊದುದನ ಅಧೀನತೆಯನ್ನು ಸ್ವೀಕರಿಸಿ, ವಾರ್ಷಿಕ ಕಪ್ಪವನ್ನು ಕೊಡಲು ಕೂಡ ಒಪ್ಪಿಕೊಂಡನು. ಇದರಿಂದಾಗಿ ಬಾಸ್ತಗೀನನು ಖಜಾವರನೊಂದಿಗೆ ಒಪ್ಪಂದ ಮಾಡಿಕೊಂಡು ಘಜನಿಗೆ ಮರಳಿದನು.

ಹಿಜರಿಶಕೆ ೪೪೦ ರಲ್ಲಿ ಅಮೀರ ಮೊದುದನು ತನ್ನ ಇಬ್ಬರು ಮಕ್ಕಳನ್ನು ಅಬೂ ಅಲ್ ಖಾಸೀಮ ಮಹಮದ ಮತ್ತು ಮನಸೂರ, ಈ ಇಬ್ಬರನ್ನು ಖೀಲತನಿಂದ ಬರಹೇಳಿ ಅವರಿಗೆ ಧ್ವಜ ಹಾಗೂ ನಗಾರಿಗಳನ್ನು ಕೊಟ್ಟನು. ಮಹಮದನಿಗೆ ಲಾಹೋರ ಮತ್ತು ಮನಸೂರನಿಗೆ ಬರಶೋರ *(ಸಿಂಧ ನದಿ ಮತ್ತು ಕನಂಧಾರ ಮಧ್ಯದ ಸ್ಥಳ) ಘಜನಿಯ ಕೋತ್ವಾಲನ ಅಬೂ ಅಲೀಯನ್ನು ಮೊದುದನು ಫೌಜದಾರನನ್ನಾಗಿ ಮಾಡಿ ವಿದ್ರೋಹಿಗಳ ಸದೆಬಡೆಯಲು ಹಿಂದುಸ್ತಾನಕ್ಕೆ ಕಳುಹಿದನು. ಅಬೂ ಅಲೀಯು ಪೇಶಾವರಗೆ ಹೋಗಿ ಮಾಹತಲೀಯಾ ಕೋಟೆಯ ಕಡೆಗೆ ಹೊರಟನು. ಈ ಕೋಟೆಯ ವಿದ್ರೋಹಿ ಅರಸನಾದ 'ಖೂಘಝುದಾ' ಮೇಲಿಂದ ವ್ಯಯಕ್ತಿಕವಾಗಿ ಓಡಿಹೋದನು. ಅಬೂ ಅಲೀಯ ಕೋಟೆಯನ್ನು ವಶಪಡಿಸಿಕೊಂಡನು. ಮಹಮದನ ಕಾಲದಲ್ಲಿ ಅಧೀನತೆಯ ಜೀವನವನ್ನು ನಡೆಸುತ್ತಿದ್ದ, ಆದರೆ ಮಹಮದನ ಮರಣಾನಂತರ ಗೌರವದಿಂದ ಘಜನಿಗೆ ಬಂದ ಹಾಗೂ ಕಾಶ್ಮೀರದ ಕಣಿವೆಗಳಲ್ಲಿ ಜೀವಿಸುತ್ತಿದ್ದ ಹಿಂದೂಗಳ ಸರದಾರನಾದ ಬೇಜಿರಾಯನನ್ನು ಬರಹೇಳಿದನು. ಅಬೂ ಅಲೀಯು ಬೇಜಿರಾಯನ ಸುರಕ್ಷತೆಯ ಬಗ್ಗೆ ಆಶ್ವಾಸನೆ ಇತ್ತು ಆತನನ್ನು ಅಮೀರ ಮೊದುದನ ಕಡೆ ಕಳುಹಿಸಿದನು. ವಯಸ್ಸಾದ ಆ ಸೈನ್ಯಾಧಿಕಾರಿಯು ಹಿಂದೆ ಮಾಡಿದ ಸೇವೆಗಳಿಗಾಗಿ ಮೊದುದನು ಅನುಗ್ರಹಿಸಿ, ಮರಣದ ಭಯವನ್ನು ಆತನ ಮನಸ್ಸಿನಿಂದ ತೆಗೆದು ಹಾಕಿ ಆತನನ್ನು ಸಂತುಷ್ಟನನ್ನಾಗಿಸಿದನು.

ಅಬೂ ಅಲೀಯ ಕೊಲೆ:

ಅಬೂ ಅಲೀಯು ಸಿಂಧನ ಕೋತ್ವಾಲನಿದ್ದ ಕಾಲದಲ್ಲಿ ಈತನ ವೈರಿಗಳು

ಸಮಯವನ್ನು ಸಾಧಿಸಿ ಮೊದುದನನ್ನು ಅಲಿಯ ವಿರುದ್ಧ ಎತ್ತಿ ಕಟ್ಟಿದರು. ಅಬೂ ಅಲೀಯು ಸ್ವತಂತ್ರನಾಗಿರುವುದು ಸಮಂಜಸವಲ್ಲವೆಂದು ತಿಳಿದು, ಅಬೂ ಅಲೀಯು ಸಮಗ್ರ ವಸ್ತುಗಳು ಹಾಗು ಸಂಪತ್ತಿನೊಂದಿಗೆ ಘಜನಿಗೆ ಮರಳಿದ ನಂತರ, ಆತನ ಬಗ್ಗೆ ಮನನೊಂದ ಮೊದುದನು ಅಬು ಅಲೀಯನ್ನು ಬಂದಿ ಮಾಡಿ ಮೇರಕ ಬಿನ್ ಹಸನನಿಗೆ ಒಪ್ಪಿಸಿದನು. ಬಂದಿ ಮಾಡಿದ ನಾಲ್ಕನೆಯ ದಿನ ಅಬೂ ಅಲೀಯ ವೈರಿಗಳು ಅಬೂ ಅಲೀಯನ್ನು ಕೊಂದರು. ಅವರು ಈ ವಿಷಯವನ್ನು ಮೊದುದನಿಂದ ಮುಚ್ಚಿಡಲು ಬಹಳ ಪ್ರಯತ್ನ ಮಾಡಿದರು, ಏಕೆಂದರೆ ಮೊದುದನ ಆದೇಶವಿಲ್ಲದೆ ಈ ಕೃತಿಯನ್ನು ಮಾಡಿದ್ದರು. ಅಬೂ ಅಲೀಯ ನೆನಪಾಗದಿರದಂತೆ ಮಾಡಲು ಈ ಜನರು ಮೋದುದನು ಸಂಚಾರದಲ್ಲಿ ನಿರತನಾಗುವಂತೆ ಮಾಡುತ್ತಿದ್ದರು. ಅವರು ತಮ್ಮ ಉದ್ದೇಶದಲ್ಲಿ ಸಫಲರಾದರು. ಅಮೀರ ಮೊದುದನು ಕಾಬೂಲ್ ಕಡೆ ಹೊರಟನು.

ಮೊದುದನ ಮರಣ:

ಕಾಬೂಲ್‌ಗೆ ಬಂದ ನಂತರ ಮೊದುದನು ಖರಸ್ಥಾನಕ್ಕೆ ಹೋಗಲು ಇಚ್ಛಿಸಿದನು. ಏಕೆಂದರೆ ಅಲ್ಲಿ ತುರ್ಕಮಾನಿಗಳನ್ನು ನಾಶ ಮಾಡಿ ಅವರ ದೇಶವನ್ನು ವಶಪಡಿಸಿಕೊಳ್ಳಬೇಕೆಂದು ಯೋಚಿಸಿ ಮೊದುದನು ಮುಂದುವರೆದನು. ಮೋದುದನು 'ಸಜಾವಂದ' ಹಾಗೂ 'ಲಹೂಕರದಾ' ಸುತ್ತ–ಮುತ್ತಲಿನ ಪ್ರದೇಶದಲ್ಲಿ ಬಂದ ಮೇಲೆ ಸಾನಖೋತ ಕೋಟೆಯ ಕಡೆಗೆ ತಿರುಗಿದನು. ಅದನ್ನು ಕೂಡ ಗೆದ್ದು, ಮುಂದೆ ಹೋಗಲು ಬಯಸಿದ್ದನು. ಅಲ್ಲಿಗೆ ಹೋದನಂತರ, ಮೊದುದನು ಎದೆಯ ಪಕ್ಕೆನೋವು ಪೀಡಿತನಾಗಿ ದಿನೇ ದಿನೇ ಅದು ಉಲ್ಬಣಿಸಿತು. ಮುಂದುವರೆಯುವ ಉದ್ದೇಶವನ್ನು ತ್ಯಜಿಸಿ, ಅಮೀರ ಅಬ್ದುಲ್ ರಜಾಖ ಸಲ್ಲಜೂಖಿಗಳು ಅಧೀನತೆಯನ್ನು ಒಪ್ಪಿಕೊಳ್ಳವಂತೆ ಮಾಡಲು ಸೀಸ್ಥಾನಕ್ಕೆ ಕಳುಹಿಸಿದನು. ತಾನು ಆನೆಯ ಮೇಲೆ ಕುಳಿತುಕೊಂಡು ಘಜನಿಗೆ ಹಿಂದಿರುಗಿದನು. ಘಜನಿಗೆ ಬಂದು ಮೇಲೆ ಮೇರಕ ವಕೀಲರಿಗೆ, ಅಬೂ ಅಲಿಯನ್ನು ಬಂದಿಖಾನೆಯಿಂದ ಬಿಡುಗಡೆ ಮಾಡಿ ತನ್ನ ಸಮ್ಮುಖದಲ್ಲಿ ತರುವಂತೆ ಆದೇಶಿಸಿದನು. ಮೇರಕ ವಕೀಲನು ಬುದ್ಧಿವಂತಿಕೆಯಿಂದ ಒಂದು ವಾರದ ಸಮಯ ಕೋರಿದನು. ಒಂದು ವಾರದ ಸಮಯ ಮುಗಿಯುವುದಕ್ಕಿಂತ ಮೊದಲು, ಹಿಜರಿ ಶಕೆ ೪೪೧ರ ರಜ್ಜಬ ತಿಂಗಳು ೨೪ ನೆಯ ದಿನದಂದು ಮೊದುದನು ಮೃತಪಟ್ಟನು. ಮೊದುದನು ೯ ವರ್ಷ ರಾಜ್ಯವಾಳಿದನು. ಕೆಲವು ಇತಿಹಾಸಕಾರರ ಹೇಳಿಕೆ ಏನೆಂದರೆ ಮೊದುದನು ಮೃತಪಟ್ಟ ವರ್ಷ ಮಾರ್ವಾ, ಅಲ್ ಜಹೀರ ಹಾಗು ಬಾಮೀಯಾದ ಸರದಾರರು ತಮ್ಮ ಸಂಪತ್ತು ಮತ್ತು ಸೈನ್ಯದಿಂದ ಮೊದುದನಿಗೆ ಸಹಾಯ ಮಾಡಿ ಖರಸ್ಥಾನದ ಸಲ್ಲಜೂಖಿಗಳ ಗಲಭೆಯನ್ನಡಗಿಸಲು ನಿರ್ಧರಿಸಿದರು. ಆದರೆ

ಸಲ್ಲಜೂಖಿಗಳ ಅದೃಷ್ಟವು ಉತ್ತಮವಾಗಿದ್ದುದರಿಂದ ಇವರು ತಮ್ಮ ಉದ್ದೇಶದಲ್ಲಿ ಸಫಲರಾಗಲಿಲ್ಲ.

ಅಬೂ ಜಾಫರ ಮಸೂದ ಬಿನ್ ಮೊದೂದ:

ಅಲೀ ಬನ್ ರಬಿಯಾನು ರಾಜ್ಯವಾಳುವ ಕನಸ್ಸನ್ನು ಕಾಣುತ್ತಿದ್ದನು. ಮೊದೂದನ ಮರಣಾಂತರ ಈತನು ಮೊದೂದನ ೪ ವರ್ಷದ ಮಗನಾದ ಮಸೂದನನ್ನು ಸಿಂಹಾಸನದ ಮೇಲೆ ಕೂಡಿಸಿದನು. ಸುಲ್ತಾನ ಮಹಮದನ ಅಮೀರರಲ್ಲಿ ಒಬ್ಬನಾದ ಬಾಸ್ಥಗೀನ ಹಾಜಬನಿಗೆ ಮಸೂದನು ಸಿಂಹಾಸನಾರೂಢನಾದುದು ಸಮಂಜಸವೆನಿಸದೆ, ಅಲೀ ಬಿನ್ ರಬಿಯಾನನ್ನು ವಿರೋಧಿಸಿದನು. ಇದರಿಂದಾಗಿ ಇಬ್ಬರ ಮಧ್ಯ ಯುದ್ಧವು ಖಚಿತವಾಯಿತು. ಘಜನಿಯ ಸಮಸ್ತ ಜನ ಆಯುಧಗಳಿಂದ ಸನ್ನದ್ಧರಾಗಿ ಬಾಸ್ತಗೀನನ ದ್ವಾರದ ಮುಂದೆ ಒಗ್ಗೂಡಿದರು. ಆ ಕಾಲದಲ್ಲಿ ಸುಲ್ತಾನ ಮಹಮದ ಬಿನ್ ಮಸೂದನ ಘಜನವಿ ಮಕ್ಕಳಲ್ಲಿ ಕೇವಲ ಅಬೂಲ್ ಹಸನನು ಮಾತ್ರ ಘಜನಿಯಲ್ಲಿದ್ದನು. ಅಬೂಲ್ ಹಸನನು ಅಪ್ರಾಪ್ತನಾದ (ಅಬೂ ಜಾಫರ ಮಸೂದ ಬಿನ್ ಮೊದುದ) ಈತನ ಶತ್ರುವಾಗಿ ತನ್ನ (ಅಲೀ ಬಿನ್ ರಬಿಯಾ) ಮಾಡಲಾದ ರಾಜಕೀಯ ವ್ಯವಸ್ಥೆಯನ್ನು ತಲೆಕೆಳಗಾಗಿಸುವನೆಂದು ಬಗೆದು, ಅಬೂಲ ಹಸನನನ್ನು ನಿರ್ನಾಮ ಮಾಡಲು ಯೋಜಿಸಿದನು. ಅಲೀ ಬಿನ್ ರಬಿಯಾನ ಈ ಉದ್ದೇಶದ ಸಮಾಚಾರವು ಅಬೂಲ್ ಹಸನನಿಗೆ ತಲಪುತ್ತಲೇ ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಬಾಸ್ತಗೀನನ ಹತ್ತಿರ ಆಶ್ರಯ ಪಡೆದನು. ಅಬೂಲ್ ಹಸನನನು ಬಂದ ಕೂಡಲೇ ಬಾಸ್ಥಗೀನನು ತನ್ನ ಸಮಸ್ತ ರಾಜ್ಯದ ಅಧಿಕಾರಿಗಳ ಸಲಹೆ ಪಡೆದು ಮಸೂದ ಬಿನ್ ಮೊದುದನ ೫ ಅಥವ ೬ ದಿನದ ಆಡಳಿತ ನಂತರ ಸಿಂಹಾಸನದಿಂದ ಇಳಿಸಿದನು. ಆತನ ಚಿಕ್ಕಪ್ಪನಾದ ಅಬುಲ್ ಹಸನ ಬಿನ್ ಮಸೂದನನ್ನು ಘಜನಿ ರಾಜ್ಯದ ಅರಸನನ್ನಾಗಿ ಸ್ವೀಕರಿಸಿದನು.

ಅಬೂಲ್ ಹಸನ ಅಲೀ ಬಿನ್ ಮಸೂದ:

ಅಬೂಲ್ ಹಸನ ಬಿನ್ ಮಸೂದನು ಹಿಜರಿ ಶಕೆ ೪೪೧ರ ಶಬ್ಬಾನ ತಿಂಗಳ ಮೊದಲನೆಯ ದಿನ ಶುಕ್ರವಾರದಂದು ಘಜನಿಯ ರಾಜ್ಯದ ಆಡಳಿತವನ್ನು ವಹಿಸಿಕೊಂಡನು. ಮೌದುದನ ಪತ್ನಿಯಾಗಿದ್ದ ಜಾಫರ ಬೇಗನ ಮಗಳೊಂದಿಗೆ ಮದುವೆ ಮಾಡಿಕೊಂಡನು. ಮಸೂದ ಬಿನ್ ಮೊದುದನನ್ನು ಸಿಂಹಾಸನದಿಂದ ಇಳಿಸಿದ ವಿಷಯವು ಅಲೀ ಬಿನ್ ರಬಿಯಾನಿಗೆ ತಿಳಿದ ಕೂಡಲೇ ತನ್ನ ಪ್ರಾಣವು ಸುರಕ್ಷಿತವಿಲ್ಲವೆಂದು ತಿಳಿದು ಮೇರಕ ವಕೀಲರ ಸಲಹೆಯ ಮೇರೆಗೆ ಸಾಧ್ಯವಾದಷ್ಟು ಸಂಪತ್ತು ಹಾಗೂ ಮುತ್ತು-ರತ್ನಗಳನ್ನು ಗಂಟು ಕಟ್ಟಿಕೊಂಡು ತನ್ನ ಗುಲಾಮನನ್ನು ಜೊತೆಗೆ ಕರೆದುಕೊಂಡು ಪೇಶಾವರ ಕಡೆಗೆ ಓಡಿಹೋದನು. ಪೇಶಾವರಗೆ ಹೋದನಂತರ

ಮುಲ್ತಾನ ಹಾಗು ಸಿಂಧ ಪ್ರಾಂತ್ಯಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ವಿದ್ರೋಹಿ ಅಫಘಾನಿಗಳನ್ನು ಸೋಲಿಸಿ ತನ್ನ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. ಅಬೂಲ್ ಹಸನನನು ನನೇ ಕೋಟೆಯಲ್ಲಿ ಕೈದಿಯಾಗಿದ್ದ, ಇಬ್ಬರು ಸಹೋದರರಾದ 'ಮರದಾನ ಶಾಹ' ಹಾಗೂ 'ಐಜೂ ಶಹಾ' ರನ್ನು ಸಕಲ ಮರ್ಯಾದೆಗಳಿಂದ ಬಿಡುಗಡೆ ಮಾಡಿ ಅವರನ್ನು ತನ್ನ ಹತ್ತಿರ ಘಜನಿಯಲ್ಲಿ ಉಳಿಸಿಕೊಂಡನು. ಅದೇ ಕಾಲದಲ್ಲಿ ಅಬ್ದೂಲ್ ರಶೀದ್ ಬಿನ್ ಮಹಮದ ಘಜನವಿಯ ವಿದ್ರೋಹದ ಸಮಾಚಾರವು ಘಜನಿಗೆ ಬರುತ್ತಲೇ ಇದ್ದವು. ಅಬೂಲ್ ಹಸನನಿಗೆ ಯಾವಾಗಲೂ ತನ್ನ ಪ್ರಾಣ ಮತ್ತು ರಾಜ್ಯದ ಕುರಿತು ಭಯವು ಇದ್ದಿತು. ಅದಕ್ಕಾಗಿ ತನ್ನ ಭಂಡಾರದ ಬಾಗಿಲುಗಳನ್ನು ತೆರೆದನು. ತನ್ನ ಪ್ರಜೆಗಳು ಹಾಗು ಸಿಪಾಯಿಗಳಲ್ಲಿ ಸಂಪತ್ತನ್ನು ಅನುಗ್ರಹ ಪೂರ್ವಕವಾಗಿ ಹಂಚಿದನು. ಆದರೆ ಆತನ ದೈವವು ವಿರುದ್ಧವಾಗಿತ್ತು. ಈ ಉದಾರತನ ಇದ್ದರೂ ಕೂಡ ವರ್ಷದ ಅಂತ್ಯದಲ್ಲಿ ಅಬ್ದೂಲ್ ರಶೀದ್ ಘಜನಿಗೆ ಬಂದು ಅಬೂಲ್ ಹಸನನನ್ನು ಸೋಲಿಸಿ ಸ್ವತಃ ಅರಸನಾದನು. ಕೆಲ ಕಾಲದ ನಂತರ ಸುಖ ಸಂತೋಷದ ಜೀವನವನ್ನು ವ್ಯತೀತ ಮಾಡಿದನು. ಅಬೂಲ್ ಹಸನನು ೨ ವರ್ಷ ರಾಜ್ಯವಾಳಿದ ನಂತರ ಫಕೀರನಾದನು.

ಸುಲ್ತಾನ ಅಬ್ದುಲ್ ರಶೀದ ಬಿನ್ ಸುಲ್ತಾನ ಮಸೂದ ಘಜನವಿ :

ಅಬ್ದುಲ್ ರಶೀದನ ತಂದೆ ಯಾರು ಎಂಬುದರ ಬಗ್ಗೆ ಬಹಳ ವಿವಾದವಿದೆ. ಆದರೆ ಸತ್ಯವಾದ ನಡುವಳಿಕೆಯಲ್ಲಿ ಸುಲ್ತಾನ ಮಹಮದ ಘಜನವಿಯ ಸ್ವಂತ ಮಗನಿದ್ದನು. ಅಮೀರ ಮೊದುದನ ಆದೇಶದ ಮೇರೆಗೆ ಅಬ್ದುಲ್ ರಶೀದನು ಬಸ್ತ ಹಾಗು ಅಸಫರೀನ್ ಮಧ್ಯದಲ್ಲಿರುವ ಕೋಟೆಯಲ್ಲಿ ಕೈದಿಯಾಗಿದ್ದನು. ಅಬ್ದುಲ್ ರಜಾಖ ಬಿನ್ ಅಹ್ಮಮದ ಹುಸೇನ ಮೇಮದೀ ಆಪನಾರ ರಸ್ತೆಯಲ್ಲಿ ಅಮೀರ ಮೊದುದನ ಮರಣ ವಾರ್ತೆ ಕೇಳಿದನು. ಕೂಡಲೇ ಮೇಮದೀಯು ಸೀಸ್ಥಾನ ಮೇಲೆ ದಾಳಿ ಮಾಡುವುದನ್ನು ಮುಂದೂಡಿದನು ಹಾಗೂ ತಕೀಬಾದಿನ ಕಡೆ ತೆರಳಿದನು. ಅಲ್ಲಿ ಕೆಲವು ದಿನ ವಾಸಿಸಿದ ನಂತರ ಹಿಜರಿ ಶಕೆ ೪೪೩ರ ಕೊನೆಯಲ್ಲಿ ಮೇಮದೀಯು ಖಾಜಾ ಅಬ್ದುಲ್ ಫಜಲ್, ರಷೀದ ಬಿನ್ ಅಲ್ತುನಿತಾಶ ಹಾಗು ತೌಶಗೀನ್ ಮುಂತಾದವರ ಸಲಹೆಯ ಮೇರೆಗೆ ಹಾಗೂ ಅಮೀರ ಮೊದುದನ ಮೃತ್ಯುಪತ್ರದ ಮೇರೆಗೆ ಅಬ್ದೂಲ್ ರಷೀದನನ್ನು ಬಂದೀಖಾನೆಯಿಂದ ಬಿಡುಗಡೆ ಮಾಡಿ ಘಜನವಿ ರಾಜ್ಯದ ವಾರಸುದಾರನನ್ನಾಗಿ ಮಾಡಿದರು. ಮೇಮದೀಯು ಅಬ್ದುಲ್ ರಷೀದ ಹಾಗೂ ಇತರ ಅಮೀರರನ್ನು ಜೊತೆಗೆ ಕರೆದುಕೊಂಡು ಘಜನಿಗೆ ಪ್ರಯಾಣ ಬೆಳೆಸಿದನು.

ಅಬ್ದುಲ್ ಹಸನನು, ಅಬ್ದುಲ್ ರಶೀದನ ಬರುವಿಕೆಯ ಸಮಾಚಾರ ಕೇಳಿ ಧೈರ್ಯಗುಂದಿ, ಯುದ್ಧ ಮಾಡುವ ಬದಲು ರಾಜ್ಯ ಹಾಗೂ ಸಿಂಹಾಸನವನ್ನು

ಬಿಟ್ಟೋಡಿದನು. ಅಬ್ದುಲ್ ರಶೀದನು ಯಾವ ಅಡೆತಡೆಯಿಲ್ಲದೆ ರಾಜ್ಯ ಹಾಗೂ ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರವನ್ನು ಮಾಡಿದನು. ಆಡಳಿತವನ್ನು ಕೈಗೆತ್ತಿಕೊಂಡ ನಂತರ ಎಲ್ಲಕ್ಕೂ ಮೊದಲು ಅಬ್ದುಲ್ ರಷೀದನು ಅಬುಲ್ ಹಸನನನ್ನು ಬಂದಿಮಾಡಿ ಆತನನ್ನು 'ವಂದೀರೂ' ಕೋಟೆಯಲ್ಲಿ ಬಂದಿಯಾಗಿರಿಸಿದನು. ಇದಾದ ನಂತರ ಅಲೀ ಬಿನ್ ರಬಿಯಾಗೆ (ಹಿಂದುಸ್ತಾನವನ್ನು ಪೂರ್ಣ ವಶಪಡಿಸಿಕೊಂಡಿದ್ದನು, ಅದರಿಂದಾಗಿ ಘಜನಿಯ ಬಾದಶಾಹನೆದುರು ಹಾಜರಾಗಲು ಬಯಸುತ್ತಿರಲಿಲ್ಲ.) ತನ್ನಲ್ಲಿ ಬರಹೇಳಿ ತನ್ನ ಪರವಾಗಿ ಆಶ್ವಾಸನೆ ಇತ್ತನು. ಇಬ್ಬನ್ನ್ ರಬಿಯಾನ ವಿಷಯದಲ್ಲಿ ಈ ಸಂತಸದ ವ್ಯವಹಾರ ಮಾಡಿ ರಷೀದನು ಹಿಂದುಸ್ತಾನದ ಕಡೆ ಗಮನಹರಿಸಿದನು. ತೋಸ್ಥಗೀನನನ್ನು ಸೈನ್ಯಾಧಿಕಾರಿಯನ್ನಾಗಿ ಮಾಡಿಕೊಂಡು ಒಂದು ದೊಡ್ಡ ಸೈನ್ಯದ ಜೊತೆಗೆ ಲಾಹೋರಿನ ಕಡೆ ಹೊರಟನು.

ಅಬ್ದುಲ್ ರಷೀದನ ಕೊಲೆ:

ತೋಸ್ಥಗೀನನು ಲಾಹೋರಿಗೆ ಬಂದು ನಗರಕೋಟ ಕೋಟೆಯ ಕಡೆಗೆ ಹೊರಟು ನಾಲ್ಕೈದು ದಿನ ಮುತ್ತಿಗೆ ಹಾಕಿ, ಅದನ್ನು ಗೆದ್ದುಕೊಂಡು ಪುನಃ ಇಸ್ಲಾಮಿ ರಾಜ್ಯದಲ್ಲಿ ಸೇರಿಸಿಕೊಂಡನು. ತೋಸ್ಥಗೀನನು ಲಾಹೋರಿಗೆ ಕಳುಹಿಸಿದ ನಂತರ ಮೊದುದನು ತನ್ನ ಸಂಬಂಧಿಕನಾದ ಹೆಂಡತಿಯ ತಮ್ಮನಾದ ತಘರುಲ್ಲ ಹಾಜಬನನ್ನು ಒಂದು ದೊಡ್ಡ ಸೈನ್ಯದ ಸರದಾರನನ್ನಾಗಿ ಮಾಡಿ ಸೀಸ್ಥಾನಕ್ಕೆ ಕಳುಹಿಸಿದನು. ತಘರುಲ್ಲನು ಸೀಸ್ಥಾನಕ್ಕೆ ಬಂದು ಈ ಪ್ರಾಂತವನ್ನು ಪೂರ್ಣವಾಗಿ ಗೆದ್ದುಕೊಂಡು, ಅಲ್ಲಿಯೇ ಉಳಿದು ರಾಜ್ಯಭಾರ ಮಾಡುವ ಕನಸನ್ನು ಕಂಡನು. ಈ ದ್ರೋಹಿಯು ಎಷ್ಟು ಧೈರ್ಯ ಮಾಡಿದನೆಂದರೆ ಈತನು ತನ್ನ ಸೈನ್ಯದೊಂದಿಗೆ ಘಜನಿಯ ಮೇಲೆ ದಾಳಿ ಮಾಡಿದನು. ಅಬ್ದುಲ್ ರಷೀದನು ತಘರುಲ್ಲನ ಬರುವಿಕೆ ಕೇಳಿ ಅನಿವಾರ್ಯವಾಗಿ ಕೋಟೆಯಲ್ಲಿ ಆಶ್ರಯ ಪಡೆದನು. ತಘರುಲ್ಲನು ಈ ಕೋಟೆಯನ್ನು ಗೆದ್ದು ಅಬ್ಬುಲ್ ರಷೀದನಲ್ಲದೆ ಘಜನವಿ ಪರಿವಾರದ ೯ ಜನರನ್ನು ಕೊಂದನು.

ತೊಗರುಲ್ಲ ಹಾಜಬನ ರಾಜ್ಯಾಡಳಿತ:

ತೊಗರುಲ್ಲನು ಘಜನವಿ ರಾಜ್ಯದ ಸಿಂಹಾಸನವೇರಿದನು. ಅಮೀರ ಮಸೂದನ ಮಗಳನ್ನು ಮದುವೆಯಾದನು. ಈ ಎಲ್ಲಾ ದ್ರೋಹಗಳ ಕಾರಣದಿಂದಾಗಿ ಇತಿಹಾಸದಲ್ಲಿ, 'ತೊಗರುಲ್ಲ ಕಾಫಿರ ನೇಹಮತ್' ಎನ್ನವ ಹೆಸರಿನಿಂದ ಸ್ಮರಿಸುತ್ತಾರೆ. ತಘರುಲ್ಲನು ರಾಜ್ಯದ ಆಡಳಿತವನ್ನು ಕೈಗೆತ್ತಿಕೊಂಡ ನಂತರ ಅಬ್ದುಲ್ ರಷೀದನ ಆದೇಶದ ಮೇರೆಗೆ ಪೇಶಾವರನಲ್ಲಿ ವಾಸಿಸುತ್ತಿದ್ದ ತೋಸ್ಥಗೀನ, ಖಿರಖೀಗೆ ಪ್ರೀತಿ ವ್ಯಕ್ತ ಪಡಿಸುವ ಪತ್ರವನ್ನು ಬರೆದು ಹಿತೈಷಿಯ ಶ್ರೇಣಿಯಲ್ಲಿ ತಂತ್ರವನ್ನು ಹೂಡಿದನು. ಆದರೆ ತೋಸ್ಥಗೀನನು ಪ್ರಾಮಾಣಿಕತೆ ಬಿಡಲಿಲ್ಲ. ತೊಗರುಲ್ಲನ ಪತ್ರಕ್ಕೆ ಉತ್ತರವಾಗಿ ತೀಕ್ಷ್ಣವಾದ

ಶಬ್ದಗಳನ್ನು ಬಳಸಿ ಆ ದ್ರೋಹಿಯನ್ನು ಬಹಳವಾಗಿ ತೆಗಳಿದನು. ತಘರುಲ್ಲನಿಗೆ ಪತ್ರದ ಉತ್ತರ ಕೊಟ್ಟನಂತರ ತೊಸ್ಥಗೀನನು ಒಂದು ಗುಪ್ತಪತ್ರವನ್ನು ಮಸೂದನ ಮಗಳ ಹೆಸರಿನಲ್ಲಿ ಬರೆದನು. ತೊಗರುಲ್ಲನನ್ನು ಕೊಲ್ಲಲು ಪ್ರೇರೇಪಿಸಿದನು. ಮಸೂದನ ಮಗಳಿಗಲ್ಲದೆ ತೋಸ್ಥಗೀನನು ಘಜನವಿ ಪರಿವಾರದ ಪಾಲಕರಾದ ಅಮೀರರಿಗೂ ಕೂಡ ಪತ್ರಗಳನ್ನು ಕಳುಹಿದನು. ಅವರ ಮೌನವನ್ನು ಟೀಕಿಸಿ ಅವರ ಆತ್ಮಸಾಕ್ಷಿಯನ್ನು ಕೆರಳಿಸಿದನು. ತೋಸ್ಥಗೀನನ ಪತ್ರಗಳು ಸಿಗುತ್ತಲೇ ಅವರ ನರನಾಡಿಗಳಲ್ಲಿ ಒಳ್ಳೆಯತನದ ರಕ್ತವು ಕುದಿಯತೊಡಗಿ, ಅವರೆಲ್ಲರೂ ಸೇರಿಕೊಂಡು ತೊಗರುಲ್ಲನನ್ನು ಕೊಲ್ಲಲು ನಿರ್ಧರಿಸಿದರು.

ತೊಗರುಲ್ಲನ ಕೊಲೆ:

ಸುಲ್ತಾನ ಮಹಮದನ ಸಿಂಹಾಸನದಲ್ಲಿ ಕುಳಿತ ತೊಗರುಲ್ಲನು ೬ ದಿನಗಳ ನಂತರ ಸಾರ್ವಜನಿಕರ ಸಭೆ ಕರೆದನು. ಮೇಲೆ ಉಲ್ಲೇಖಿಸಿದ ಅಮೀರರು ಸಮಯ ಸಾಧಿಸಿ ಇದ್ದಕ್ಕಿದಂತೆ ಅವನನ್ನು ಕೊಂದರು. ತೊಗರುಲ್ಲನನನು ಕೊಂದ ಮೇಲೆ ತೊಸ್ಥಗೀನನು ಕೂಡ ಘಜನಿಗೆ ಬಂದನು. ಆತನು ಸಮಸ್ತ ಅಮೀರರು ಹಾಗು ಇತರ ಗೌರವಾನ್ವಿತರನ್ನು ಸಂದರ್ಶಿಸಿ ನಿರ್ಣಯಿಸಿದುದೇನೆಂದರೆ ಅಮೀರ ಸಬಸ್ಥಗೀನನ ಸಂತಾನವನ್ನು ಹುಡುಕಿ ಅವರಲ್ಲಿಯ ಉತ್ತಮ ಹಾಗೂ ಬುದ್ಧಿವಂತ ವ್ಯಕ್ತಿಯನ್ನು ಅರಸನನ್ನಾಗಿ ಸ್ವೀಕರಿಸಬೇಕು. ಈ ನಿರ್ಣಯದಂತೆ ಸಬಸ್ಥಗೀನನ ಸಂತಾನದಲ್ಲಿ ಉಳಿದ ವ್ಯಕ್ತಿಗಳ ಅರಸುವಿಕೆ ಆರಂಭವಾಯಿತು. ಬಹಳಷ್ಟು ಹುಡುಕಾಟ ಹಾಗೂ ಪರಿಶ್ರಮದ ನಂತರ ಮೂರು ಜನ ಯುವರಾಜರು 'ಶಬಾನರಹ ಫರಕ್ ಜಾದ್, ಶಹಜಾದ ಇಬ್ರಾಹೀಂ ಮತ್ತು ಶಾಷೂಜಾ' ಸಿಕ್ಕರು. ಈ ಮೂರು ಜನ ರಾಜಕುಮಾರರು ಬೇರೆ ಬೇರೆ ದೇಶಗಳಲ್ಲಿ ಜೀವಿಸುತ್ತಿದ್ದರು. ಇವರಲ್ಲಿ ರಾಜ್ಯಭಾರ ನಡೆಸುವುದಕ್ಕೆ ಫರಕ್ ಜಾದನನ್ನು ಯುವರಾಜನನ್ನಾಗಿ ಆರಿಸಿ ರಾಜ್ಯದ ಸಮಸ್ತ ಅಧಿಕಾರಿಗಳು ಆತನನ್ನು ತಮ್ಮ ಅರಸನನ್ನಾಗಿ ಸ್ವೀಕರಿಸಿ ಆತನ ಅಧೀನತ್ವಕ್ಕಾಗಿ ಪ್ರಮಾಣಿಸಿದರು.

'ತಬಖಾತಿನಾಸೀರಿ'ಯಲ್ಲಿ ಬರೆಯಲಾದುದೇನೆಂದರೆ ವ್ಯಕ್ತಿಯೊಬ್ಬನು ತೊಗರುಲ್ಲನನ್ನು ಪ್ರಶ್ನಿಸಿದನು, 'ಸರದಾರ ಪಟ್ಟವನ್ನು ಬಿಟ್ಟು ಅರಸನಾಗುವ ಹುಚ್ಚು ನಿನಗೆ ಏಕೆ ಹಿಡಿಯಿತು?' ತೊಗರುಲ್ಲನು ಉತ್ತರಿಸಿದನು, 'ಅಬ್ದುಲ್ ರಶೀದನು ಸೇಸ್ಥಾನವನ್ನು ಗೆಲ್ಲಲು ಹೊರಟಾಗ, ಆತನು ನನ್ನ ಕೈ ಮೇಲೆ ಕೈಯಿಟ್ಟು, ಪ್ರಾಮಾಣಿಕತೆಯ ಪ್ರಮಾಣ ಮಾಡಿದನು. ಆಗ ಆತನ ಸಮಸ್ತ ಶರೀರ ಭಯದಿಂದ ಕಂಪಿಸುತ್ತಿತ್ತು. ಆಗ ನಾನು ಇಂತಹ ಹೇಡಿಯು ರಾಜ್ಯ ಮಾಡಲು ಯೋಗ್ಯನಲ್ಲವೆಂದು ನಿರ್ಧಾರಕ್ಕೆ ಬಂದು ರಾಜ್ಯಭಾರವನ್ನು ಕೈಗೆತ್ತಿಕೊಳ್ಳುವ ಪ್ರಯತ್ನವನ್ನು ಮಾಡಿ ಅದರಲ್ಲಿ ಸಾಫಲ್ಯವನ್ನು ಪಡೆದೆನು.' ಅಬ್ದುಲ್ ರಶೀದನು ಒಂದು ವರ್ಷಕ್ಕೂ ಕಡಿಮೆ ಅವಧಿಗಾಗಿ ರಾಜ್ಯವಾಳಿದನು.

ಫರ್ರೂಕಜಾದ ಬಿನ್ ಸುಲ್ತಾನ ಮಸೂದ ಬಿನ್ ಸುಲ್ತಾನ ಮಹಮದ ಘಜನವಿ:

ಸುಲ್ತಾನ ಫರ್ರೂಕಜಾದನು ಘಜನಿಯ ಸಿಂಹಾಸನಾರೂಢನಾದ ಸಮಯದಿಂದ ರಾಜ್ಯಾಡಾಳಿತವು ತೋಸ್ಥಗೀನ ಕಹ್ರೀ ಕೈಸೇರಿತು. ದಾವೂದ ಸಲ್ಲಜೂಖೀ ಘಜನಿಯಲ್ಲಿ ವಿಪ್ಲವದ ಸಮಾಚಾರ ಕೇಳಿದಾಗ ಘಜನಿಯ ಮೇಲೆ ದಾಳಿ ಮಾಡಿದನು. ತೋಸ್ಥಗೀನನು ಘಜನಿಯ ಶೂರ ಸಿಪಾಯಿಗಳ ಒಂದು ದೊಡ್ಡ ಸೈನ್ಯದೊಂದಿಗೆ ದಾವೂದ ಸಲ್ಲಜೂಖಿಯನ್ನು ಎದುರಿಸಲು ನಗರದ ಹೊರಗಡೆ ಹೊರಟನು. ಉಭಯ ಸೈನ್ಯಗಳಲ್ಲಿ ಯುದ್ಧವು ಆರಂಭವಾಯಿತು. ಎರಡೂ ಪಕ್ಷದ ಸೈನಿಕರು ಶತ್ರುಗಳ ಸೈನ್ಯವನ್ನು ನಾಶಮಾಡಲು ಮನಸಾಪೂರ್ವಕ ಪ್ರಯತ್ನ ಮಾಡಿದರು. ಬೆಳಿಗ್ಗೆಯಿಂದ ಸಂಜೆಯವರೆಗೆ ಯುದ್ಧ ನಡೆದು ಬಹಳ ಹೋರಾಡಿ ಗಾಯಗೊಂಡ ಸೈನಿಕರನ್ನು ಕೊಂದುಬಿಡುವ ವಿಚಾರದಲ್ಲಿದ್ದು, ಬೇರೆ ಯಾವ ವಿಷಯದ ಬಗ್ಗೆ ಅವರಿಗೆ ಪ್ರಜ್ಞೆಯಿರಲಿಲ್ಲ. ಯುದ್ಧವು ನಡೆಯುತ್ತಲಿದ್ದರೂ ಎರಡೂ ಪಕ್ಷದವರು ಯಾವ ರೀತಿಯ ಕೊರತೆಯನ್ನೂ ಪ್ರದರ್ಶಿಸಲಿಲ್ಲ. ಆದರೆ ೧೨ ಗಂಟೆಯವರೆಗೆ ಸತತವಾಗಿ ಯುದ್ಧ ಮಾಡಿದ ಕಾರಣ ಸಲ್ಲಜೂಖೀಗಳ ಧೈರ್ಯವು ಕುಂದಿದಂತೆ ಕಂಡುಬಂದಿತು ಮತ್ತು ಅವರು ರಣಾಂಗಣದಿಂದ ಕಾಲು ತೆಗೆಯಲಾರಂಭಿಸಿದರು.

ತನ್ನ ಸೈನ್ಯದ ಅಧೀರ ಪರಿಸ್ಥಿತಿಯನ್ನು ಕಂಡು ಸಲ್ಲಜೂಖೀಗಳ ಸರದಾರನಾದ ದಾವೂದನು ಕೂಡ ಧೈರ್ಯಗುಂದಿದನು. ಕೊನೆಗೆ ರಣಾಂಗಣದಿಂದ ಓಡಿ ಹೋದನು. ತೋಷಸ್ಥಗೀನ ಪೂರಖೀ ತನ್ನ ಸಿಪಾಯಿಗಳೊಂದಿಗೆ ಸ್ವಲ್ಪ ದೂರದೊಂದಿಗೆ ಓಡುತ್ತಿರುವ ಸಲ್ಲಜೂಖೀಗಳನ್ನು ಹಿಮ್ಮೆಟ್ಟಿ ಅವರ ವಸ್ತು ಹಾಗೂ ಪ್ರಾಣಿಗಳನ್ನು ಕೂಡ ವಶಕ್ಕೆ ತೆಗೆದುಕೊಂಡು ಗೆಲುವನ್ನು ಸಾಧಿಸಿ ನಗರವನ್ನು ಪ್ರವೇಶಿಸಿದರು. ಈ ಗೆಲುವಿನಿಂದ ಘಜನಿ ಆಡಳಿತಕ್ಕೆ ಸ್ಥೈರ್ಯಬಂದಿತು. ಅದರ ತಳಹದಿಯು ಭದ್ರವಾಗತೊಡಗಿತು. ನಂತರ ಘಜನವಿ ಸೈನ್ಯವು ಬಹಳ ವೈಭವದಿಂದ ಖರಾಸ್ಥಾನದ ಕಡೆಗೆ ಹೊರಟು ನಿಂತಿತು.

ಆ ಕಾಲದಲ್ಲಿ ಖರಾಸ್ಥಾನದ ಮೇಲೆ 'ಕಲೀಯಾರಖ' ಎಂಬ ವ್ಯಕ್ತಿಯು ರಾಜ್ಯ ಮಾಡುತ್ತಿದ್ದನು. ಅವನು ಸಲ್ಲಜೂಖೀಗಳ ವಶದಲ್ಲಿದ್ದು, ಅವರ ಆಡಳಿತವನ್ನು ಸ್ವೀಕರಿಸಿದ್ದನು. ಕಲೀಯಾರಖನು ಘಜನವಿ ಸೈನ್ಯದ ಬರುವಿಕೆಯ ಸಮಾಚಾರ ಕೇಳಿ ಒಂದು ದೊಡ್ಡ ಸೈನ್ಯವನ್ನು ಸನ್ನದ್ಧಗೊಳಿಸಿ ಅವರನ್ನು ಎದುರಿಸಲು ಮುಂದೆ ಹೋದನು. ಸ್ವಲ್ಪ ದೂರ ಹೋಗುವುದರಲ್ಲಿ ಘಜನಿ ಸೈನ್ಯವು ಎದುರಾಯಿತು. ಉಭಯ ಸೈನ್ಯದ ಸೈನಿಕರು ಒಬ್ಬರ ಮೇಲೊಬ್ಬರು ಯುದ್ಧವನ್ನು ಆರಂಭಿಸಿದರು. ಎರಡೂ ಕಡೆಯ ಸೈನಿಕರು ತಮ್ಮ ಶೌರ್ಯ ಹಾಗು ಧೈರ್ಯವನ್ನು ಪ್ರದರ್ಶಿಸುತ್ತ ಒಬ್ಬರ ವಿರುದ್ಧ ಇನ್ನೊಬ್ಬರು ಸಾಹಸದಿಂದ ಕಾದಾಡಿದರು. ಅವರ ಕಾದಾಟದ ವರ್ಣನೆಯು ಶಬ್ದಗಳಿಗೆ ಮೀರಿದುದಾಗಿತ್ತು.

ಈ ಯುದ್ಧದ ಪರಿಣಾಮವು ಕೂಡ ಘಜನಿಗಳ ಗೆಲುವಿನಲ್ಲಿ ಮುಗಿದು ಅವರಿಗೆ ದೈವವಶಾತ್ ಗೆಲುವಾಯಿತು. ಕಲೀಯಾರಖ ತನ್ನ ಪ್ರಮುಖ ಜೊತೆಗಾರರರೊಂದಿಗೆ ಘಜನಿಗಳ ವಶವಾದನು. ದಾವುದ ಸಲ್ಲಜೂಖೀಯು ತನ್ನ ಸೈನ್ಯದ ಸೇನಾಧಿಕಾರಿ ಕಲಾರಖನ ಬಂಧನ ಮತ್ತು ಸೋಲಿನ ಸಮಾಚಾರ ಕೇಳಿದೊಡನೆ, ತನ್ನ ಮಗ 'ಅಲಪ ಇರಸಾಲನ್'ನೊಂದಿಗೆ ಫರ್ರೂಕಜಾದನ ವಿರುದ್ಧ ಯುದ್ಧ ಮಾಡಲು ಕಳುಹಿಸಿ ಕೊಟ್ಟನು.

ತೋಸ್ಥಗೀನ ಫರ್ರೂಕೀಯು ತನ್ನ ಸೈನ್ಯವನ್ನು ಪುನಃ ಸಜ್ಜುಗೊಳಿಸಿ ಅಲಪ ಇರಸಾಲನ್‌ನನ್ನು ಎದುರಿಸಲು ಬಂದನು. ಈ ಬಾರಿ ಸಹ ಎರಡೂ ಪಕ್ಷಗಳಲ್ಲಿ ಯುದ್ಧವಾಯಿತು, ಆದರೆ ಯುದ್ಧದ ಪರಿಣಾಮವು ಮಾತ್ರ ಬೇರೆಯಾಯಿತು. ಸಲ್ಲಜೂಖೀಗಳಿಗೆ ಗೆಲುವಾಗಿತ್ತು. ಘಜನವಿಗಳಿಗೆ ಸೋಲಾಗಿ ಘಜನಿ ಸೈನ್ಯದ ಕೆಲ ಹೆಸರಾಂತ ಅಮೀರರು ಅಮೀರ ಸಲ್ಲಜೂಖೀಯ ಸೈನಿಕರಿಂದ ಬಂದಿಯಾದರು. ಅಲಪ ಇರಸಾಲನು ಬಹಳ ವೈಭವ ಹಾಗು ಗರ್ವದಿಂದ ತನ್ನ ದೇಶಕ್ಕೆ ಮರಳಿದನು. ಫರ್ರೂಕಜಾದನು ಈ ಯುದ್ಧದ ಪರಿಣಾಮವನ್ನು ಕೇಳಿದ ಮೇಲೆ, ಕಲೀಯಾರಖನು ಮೊದಲು ಯುದ್ಧದಲ್ಲಿ ಘಜನವಿಗಳು ಬಂದಿ ಮಾಡಿದ್ದ ಸಲ್ಲಜೂಖಿ ಸರದಾರರನ್ನು ಅತ್ಯಂತ ಗೌರವದಿಂದ ಉತ್ತಮವಾದ ಉಡುಪುಗಳನ್ನು ಧರಿಸಲು ಕೊಟ್ಟು ಅವರನ್ನು ಬಿಡುಗಡೆ ಮಾಡಿದನು. ಸಲ್ಲಜೂಖಿಗಳಿಗೆ ಫರ್ರೂಕಜಾದನ ಅನುಗ್ರಹ ಹಾಗೂ ಮಾನವೀಯ ಸಹಾನುಭೂತಿಯ ಅರಿವಾದ ಮೇಲೆ, ಅವರು ಕೂಡ ಉತ್ತರರೂಪದಲ್ಲಿ ಘಜನವಿ ಕೈದಿಗಳನ್ನು ಬಿಡುಗಡೆ ಮಾಡಿದರು.

ಫರ್ರೂಕಜಾದನ ತಂದೆಯ ಬಗ್ಗೆ ಖಚಿತವಾಗಿ ಇತಿಹಾಸಕಾರರು ಬರೆದಿಲ್ಲ. **'ರೋಸ್ತಾ ಅಲ್ ಸಫಾ'** ಪ್ರಸಿದ್ಧ ಇತಿಹಾಸದ ಪುಸ್ತಕದಲ್ಲಿ ನಿರೂಪಿಸಿದುದೇನೆಂದರೆ ಫರ್ರೂಕಜಾದನು ಸುಲ್ತಾನ ಮಸೂದನ ಮಗನಾಗಿದ್ದನು. ಮೃತನಾದ ಅಮಹ್ಮದುಲ್ಲಾ ಮುತ್‌ಸ್ತೌಫಿ ಬರೆಯುತ್ತಾನೆ, ಆತನು (ಫರ್ರೂಕಜಾದ) ಸುಲ್ತಾನ ಅಬ್ದೂಲ್ ರಷೀದನ ಮಗನಿದ್ದನು. ಫರ್ರೂಕಜಾದನು ೬ ವರ್ಷಗಳವರೆಗೆ ಘಜನಿ ರಾಜ್ಯಾಡಳಿತವನ್ನು ನಡೆಸಿ ಕೊನೆಯ ವಯಸ್ಸಿನಲ್ಲಿ ಈತನಿಗೆ ಪಕ್ಕೆಗಳ ಕೆಳಗಿನ ರೋಗದಿಂದ ಪೀಡಿತನಾದನು. ಇದೇ ಕಾರಣದಿಂದ ಹಿಜರಿ ಶಕೆ ೪೫೦ ರಲ್ಲಿ ಮೃತಪಟ್ಟನು.

ಫರ್ರೂಕಜಾದ ಸಾಯುವುದಕ್ಕೆ ಮುನ್ನ ಒಂದು ವರ್ಷದ ಹಿಂದೆ ನಡೆದ ಘಟನೆ, ಫರ್ರೂಕಜಾದನ ಗುಲಾಮರ ಗುಂಪೊಂದು ಫರ್ರೂಕಜಾದನನ್ನು ಕೊಲ್ಲಲು ನಿಶ್ಚಯಿಸಿತು. ಒಂದು ದಿನ ಫರ್ರೂಕನು ಸ್ನಾನಗೃಹದಲ್ಲಿ ಸ್ನಾನ ಮಾಡುವಾಗ ಈ ವಿದ್ರೋಹಿಗಳು ಪ್ರವೇಶಿಸಿ ಆತನ ಮೇಲೆ ಹಲ್ಲೆ ಮಾಡಿದರು. ಫರ್ರೂಕಜಾದನು ತನ್ನ ಖಡ್ಗವನ್ನು ತೆಗದು ಈ ವಿದ್ರೋಹಿಗಳನ್ನು ಎದುರಿಸಿದನು. ಎಲ್ಲ ಗುಲಾಮರ ಜೊತೆಗೆ ಫರ್ರೂಕಜಾದ ಒಬ್ಬನೇ ಹೋರಾಟ ಮಾಡಿದನು. ಇದೇ ಪರಿಸ್ಥಿತಿಯಲ್ಲಿ ಬಹಳಷ್ಟು ಕಾಲ ಹಲ್ಲೆ

ಮಾಡಿದವರ ವಿರುದ್ಧ ಹೋರಾಡಿ ತನ್ನ ಖಡ್ಗದ ಕಲೆಯನ್ನು ಪ್ರರ್ದಶಿಸಿದನು. ಆಗ ಸ್ನಾನಗೃಹದ ಹೊರಗೆ ನಿಂತ ರಾಜನ ಸಿಬ್ಬಂದಿ ವರ್ಗದವರು ಈ ವಿಷಯ ತಿಳಿದು ಸ್ನಾನಗೃಹವನ್ನು ಪ್ರವೇಶಿಸಿ ಗುಲಾಮರನ್ನು ಕೊಂದರು ಮತ್ತು ಬಾದಶಹನ ಪ್ರಾಣ ಉಳಿಸಿದರು.

ಇತಿಹಾಸಕಾರರ ಹೇಳಿಕೆ ಏನೆಂದರೆ ಈ ಘಟನೆಯ ನಂತರ ಫರಕಜಾದನು ಯಾವಾಗಲೂ ತನ್ನ ಸಾವನ್ನು ಜ್ಞಾಪಿಸಿಕೊಳ್ಳುತ್ತಿದ್ದನು. ಇಹಲೋಕದ ಬಗ್ಗೆ ಪ್ರೀತಿಯನ್ನು ತೋರಲು ಅನಾಸಕ್ತಿ ತೋರುತ್ತಿದ್ದನು. ಫರ್ರೂಕಜಾದನು ಆರಂಭದ ಆಳ್ವಿಕೆಯಲ್ಲಿ ಮಂತ್ರಿ ಪದವಿಯಲ್ಲಿದ್ದ ಹಸನ ಬಿನ್ ಮೇಹರಾನ ಇದ್ದನು. ಆದರೆ ಕೊನೆಯ ಅವಧಿಯಲ್ಲಿ ಅಬೂ ಬಕರ ಬಿನ್ ಸಾಲೇಯನ್ನು ನಿಯುಕ್ತಿ ಮಾಡಲಾಯಿತು.

ಝುಹೀರ ಅಲ್ ದೌಲಾ ಸುಲ್ತಾನ ಇಬ್ರಾಹಿಮ ಬಿನ್ ಸುಲ್ತಾನ ಮಸೂದ ಘಜನವಿ:

ಸುಲ್ತಾನ ಫರ್ರೂಕಜಾದ ಮರಣದ ನಂತರ ಆತನ ಸಹೋದರ ಇಬ್ರಾಹಿಮ ಬಿನ್ ಮಸೂದನು ರಾಜ್ಯಾಡಳಿತವನ್ನು ತನ್ನ ಕೈಗೆತ್ತಿಕೊಂಡನು. ಸುಲ್ತಾನ ಇಬ್ರಾಹಿಮನು ಬಹಳ ವಿಶ್ವಾಸವುಳ್ಳ ಮತ್ತು ಅಪರಿಗ್ರಹ ಮಾಡುವ ಮನಷ್ಯನಾಗಿದ್ದನು. ಈತನು ತನ್ನ ತುಂಬು ಯೌವನದಲ್ಲಿ ಪ್ರಾಪಂಚಿಕ ಸುಖಗಳನ್ನು ತ್ಯಜಿಸಿದನು. ರಜ್ಜಬ ಹಾಗು ಶಾಬಾನ ತಿಂಗಳು ಎರಡು ತಿಂಗಳುಗಳಲ್ಲಿ ರಂಜಾನ್ ತಿಂಗಳಂತೆ 'ರೋಜಾ' (ಉಪವಾಸ ಕೈಗೊಳ್ಳುವ ವೃತ) ಆಚರಿಸುತ್ತಿದ್ದನು. ಈ ರೀತಿ ೩ ತಿಂಗಳು ಈತನಿಗೆ ರಂಜಾನ್ ತಿಂಗಳು ಆಗಿರುತ್ತಿದ್ದವು. ಈ ಯುವಕ ಸಾಲೇಹನು ರಾಜ್ಯಭಾರದ ಕಾರ್ಯ ಮುಗಿದು ಉಳಿದ ವೇಳೆಯಲ್ಲಿ ಪರಮಾತ್ಮನ ಪ್ರಾರ್ಥನೆಯಲ್ಲಿ ನಿರತನಾಗಿರುತ್ತಿದ್ದನು. ಪ್ರಜೆಗಳ ಸಂತೋಷ ಹಾಗೂ ಸಮಾಧಾನದ ಬಗ್ಗೆ ಬಹಳ ಚಿಂತಿತನಿದ್ದನು. ದೇಶದ ಮೇಲೆ ನ್ಯಾಯಯುತವಾಗಿ ರಾಜ್ಯ ಮಾಡುತ್ತ ದೀನ ದಲಿತರಿಗೆ ದಾನ ಧರ್ಮಗಳನ್ನು ಮಾಡುತ್ತಿದ್ದನು.

'ಜಾಮಾ ಅಲ್ ಹಕಾಯಾತ'ದಲ್ಲಿ ಬರೆಯಲಾಗಿದುದೇನೆಂದರೆ, ರಾಜನ ಅರಮನೆಯಲ್ಲಿ ಪ್ರತಿ ವರ್ಷ ಒಂದು ಸಭೆ ಸೇರಿ ಉಪದೇಶಯುಕ್ತ ಪ್ರವಚನಗಳನ್ನು ಏರ್ಪಡಿಸಲಾಗುತ್ತಿತ್ತು. ಈ ಸಭೆಯಲ್ಲಿ ಇಮಾಮ ಯುಸೂಫ ಸಜಾವಂದಿ ತನ್ನ ಪ್ರವಚನಗಳಿಂದ ಅರಸನನ್ನು ಮತ್ತು ಅನ್ಯ ಸಭಿಕರ ಮನಸ್ಸುಗಳನ್ನು ಪಳಗಿಸುತ್ತಿದ್ದನು. ಸುಲ್ತಾನ ಇಮಾಮ ಯುಸೂಫ ಸಜಾವಂದಿಯ ಜ್ಞಾನ ಕಾರ್ಯ ಹಾಗೂ ಅಪರಿಗ್ರಹಗಳ ಬಗ್ಗೆ ಹೆಚ್ಚಿಗೆ ಗಮನ ಹರಿಸುತ್ತಿದ್ದನು. ಇವರ ಪ್ರತಿಯೊಂದು ಮಾತನ್ನು ಆಸಕ್ತಿಯಿಂದ ಗಮನಿಸುತ್ತಿದ್ದನು. ಇಮಾಮರು ಪ್ರತಿಯೊಂದು ಮಾತನ್ನು ಸುಲ್ತಾನನೊಂದಿಗೆ ಯಾವ ಅಡೆತಡೆ ಮತ್ತು ಭಯವಿಲ್ಲದೆ ಹೇಳುತ್ತಿದ್ದನು. ಕೆಲವೊಂದು ಸಾರಿ ಸುಲ್ತಾನನ ತಪ್ಪುಗಳು ಮತ್ತು ನ್ಯೂನತೆಗಳನ್ನು ತೀಕ್ಷ್ಣವಾಗಿ ಟೀಕಿಸುತ್ತಿದ್ದನು. ಈ ರೀತಿಯ

ವ್ಯವಹಾರದಿಂದ ಸತ್ಯಾರಾಧಕನಾದ ಬಾದಶಾಹನು ಮನನೊಂದು ಅಗೌರವವನ್ನು ಸೂಚಿಸುತ್ತಿರಲಿಲ್ಲ.

ಗುಣಗಳು ಹಾಗು ಹವ್ಯಾಸಗಳು:

'ಖತೆನಸ್ಕ' ಇದರಲ್ಲಿ ಸುಲ್ತಾನ ಇಬ್ರಾಹಿಮನು ಬಹಳ ಉತ್ತಮವಾಗಿ ಬರೆದಿದ್ದಾನೆ. ತನ್ನ ರಾಜ್ಯಾವಧಿಯ ಕಾಲದಲ್ಲಿ ಪ್ರತಿ ವರ್ಷ ಒಂದು 'ಖುತನ'ನ್ನು ಕೈಯಿಂದ ಬರೆದು ಪವಿತ್ರ 'ಮಕ್ಕಾ'ಕ್ಕೆ ಕಳುಹಿಸುವ ಹವ್ಯಾಸವನ್ನು ರೂಢಿಸಿಕೊಂಡಿದ್ದನು. ಕೆಲವು ಇತಿಹಾಸಕಾರರ ಹೇಳಿಕೆ ಎಂದರೆ, ಸುಲ್ತಾನನು ತನ್ನ ಕೈಯಿಂದ ಬರೆದ ಕುರಾನಗಳ ಕೆಲವು ಪ್ರತಿಗಳು 'ಅಬುಯಿ' ಪುಸ್ತಕ ಭಂಡಾರದಲ್ಲಿ ಈಗಲೂ ಸಂಗ್ರಹಿಸಲಾಗಿದೆ. ಈ ರಾಜನು ಬಹಳ ಪವಿತ್ರ ಹಾಗೂ ಶ್ರೇಷ್ಠಗುಣವುಳ್ಳವನಾಗಿದ್ದು ಅಲ್ಲಾಹನಭಕ್ತರ ಮೇಲೆ ಅನುಗ್ರಹಿತನಾಗುತ್ತಿದ್ದನು. ಅದಕ್ಕಾಗಿ ಈತನು ಸಲ್ಲಜೂಖಿಗಳೊಂದಿಗೆ ಒಬ್ಬರ ಮೇಲೊಬ್ಬರು ದಾಳಿ ಮಾಡದಂತೆ ಸಂಧಾನ ಮಾಡಿಕೊಂಡನು. ಪ್ರಜೆಗಳೆಲ್ಲರೂ ಅಲ್ಲಾಹನು ನೀಡಿದ ಅನುಪಮ ನಿಕ್ಷೇಪವಾಗಿದೆ. ಅದಕ್ಕಾಗಿ ರಾಜ್ಯ ವಿಸ್ತರಣೆಯ ಕಾರ್ಯ ಕೈಗೊಂಡು ವಿನಾಶವನ್ನು ಮಾಡಕೂಡದು. ಇಬ್ರಾಹಿಮನು ತನ್ನ ಮಗ ಮಸೂದನ ಮದುವೆಯನ್ನು ಮಲಿಕಶಹಾ ಸಲ್ಲಜೂಖಿಯ ಮಗಳೊಂದಿಗೆ ಮಾಡಿ ಸಂಧಾನವನ್ನು ದೃಢೀಕರಿಸಿದ್ದನು.

ಇತಿಹಾಸಕಾರರ ಹೇಳಿಕೆ ಎಂದರೆ ಮೊದಲೊಂದು ಸಾರಿ ಸಲ್ಲಜೂಖಿಯು ಘಜನಿಯ ಮೇಲೆ ದಾಳಿ ಮಾಡುವ ಉದ್ದೇಶವಿಟ್ಟುಕೊಂಡಿದ್ದನು. ಇಬ್ರಾಹಿಮನಿಗೆ ಈ ವಿಷಯವು ತಿಳಿದಾಗ ವಿಹ್ವಲನಾದನು. ಈ ಯುದ್ಧದ ಆಪತ್ತಿನಿಂದ ಉಳಿಯುವ ಒಂದು ತಂತ್ರವಾಗಿ, ಸಲ್ಲಜೂಖಿ ಅಮೀರರ ಹೆಸರಿನಲ್ಲಿ ಕೆಲವು ಪತ್ರಗಳನ್ನು ಬರೆದನು ಅವುಗಳ ನಿರೂಪಣೆ ಹೀಗಿದೆ. 'ನೀವೆಲ್ಲರೂ ಘಜನಿಗೆ ಪ್ರಯಾಣ ಮಾಡಲು ಇಚ್ಛಿಸಿ ಬಹಳ ಶ್ರಮಪಟ್ಟಿರುವುದನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ನೀವು ಬಾದಶಾಹನನ್ನು ಪ್ರಯಾಣ ಮಾಡಲು ಸಿದ್ಧನಾಗಿ ಮಾಡಿದ ರೀತಿಯಲ್ಲಿ, ನೀವು ಸಹ ಆದಷ್ಟು ಬೇಗ ಘಜನಿಗೆ ಬರಲು ಪ್ರಯತ್ನಿಸಿ. ಏಕೆಂದರೆ ಆದಷ್ಟು ಬೇಗ ಮಲೀಕ ಶಹಾನಿಂದ ಮುಕ್ತಿ ಪಡೆಯೋಣ. ಈ ಕಾರ್ಯದ ಪ್ರತಿಯಾಗಿ ತಮಗೆ ಸಂಪತ್ಭರಿತರನ್ನಾಗಿ ಮಾಡುವೆನು. ನಿಮ್ಮೊಂದಿಗೆ ಕೊಡಲೊಪ್ಪಿದ ಹಣದ ಎರಡು ಪಟ್ಟು ಹಣವನ್ನು ಕೊಡುವೆನು.' ಇಬ್ರಾಹಿಮನು ಈ ಪತ್ರಗಳನ್ನು ತನ್ನ ಒಬ್ಬ ಸೇವಕನಿಗೆ ಕೊಟ್ಟು ಹೇಳಿದನು, 'ಮಲೀಕ ಶಹಾನಿಗೆ ಬೇಟೆಯಾಡುವುದರಲ್ಲಿ ಆಸಕ್ತಿ. ಆ ಸಮಯಕ್ಕಾಗಿ ಕಾಯ್ದು ಆತನು ಬೇಟೆಗಾಗಿ ಹೊರಟ ಸಮಯಕ್ಕೆ ಸರಿಯಾಗಿ, ಆತನ ಹಿಂದೆಯೇ ಬೇಟೆಯಾಡುವ ಸ್ಥಳಕ್ಕೆ ಪ್ರವೇಶಿಸು. ಸಲ್ಲಜೂಖಿ ಸಿಪಾಯಿಗಳು ನಿನ್ನನ್ನು ನೋಡಿದಾಗ, ನಿನ್ನನ್ನು ಹಿಡಿದು ಬಾದಶಾಹನ ಸಮ್ಮುಖದಲ್ಲಿ ಕರೆದೊಯ್ಯುವರು. ಬಾದಶಾಹನು

ನಿನ್ನನ್ನು ಮಾತನಾಡಿಸಿದಾಗ, ಮೊದಲು ನೆಪ ಒಡ್ಡು. ಅನಂತರ ಈ ಪತ್ರಗಳನ್ನು ಆತನಿಗೆ ಒಪ್ಪಿಸು.'

ಈ ಕಾರ್ಯದಲ್ಲಿ ಸುಲ್ತಾನ ಇಬ್ರಾಹಿಮನ ಉದ್ದೇಶವೆಂದರೆ ಈ ಪತ್ರಗಳು ಆತನ ಕೈಸೇರುವ ಸಮಯ ಸಲ್ಲಜೂಖಿಯ ಅಮೀರರು ಯಾರೂ ಆ ಸಮಯದಲ್ಲಿ ಆತನ ಹತ್ತಿರವಿರಕೂಡದು.

ಆ ದಿನಗಳಲ್ಲಿ ಮಲೀಕ ಶಹಾನು 'ಅಸ್ವರಾಯಿನ' *(ಖರಾಸ್ಥಾನದ ಒಂದು ಪ್ರಸಿದ್ಧ ಸ್ಥಳ) ಹಳ್ಳಿಯಲ್ಲಿ ತಂಗಿದಲ್ಲಿಗೆ ಈ ದೂತನು ಹೊರಟು ಬಂದನು. ತನ್ನ ಹವ್ಯಾಸದಂತೆ ಒಂದು ದಿನ ಮಲೀಕ ಶಹಾನು ಬೇಟೆಯಾಡಲು ಹೊರಟನು, ಇಬ್ರಾಹಿಮನ ದೂತನು ಕೂಡ ಯೋಜನೆಯಂತೆ ಆತನ ಹಿಂದೆಯೇ ಹೊರಟನು. ಮಲೀಕ ಶಹಾನ ಸಿಪಾಯಿಗಳು ಈ ದೂತನನ್ನು ನೋಡಿ, ಅವನನ್ನು ಬಂದಿಮಾಡಿ ಮಲೀಕ ಶಹಾನ ಸಮ್ಮುಖದಲ್ಲಿ ಹಾಜರು ಪಡಿಸಿದರು. ಮಲೀಕ ಶಹನು ಈತನಿಗೆ ಚಾಟಿಯಿಂದ ಹೊಡೆಯಲು ಆದೇಶಿಸಿದನು. ದೂತನಿಗೆ ಚಾಟಿ ಏಟು ನೀಡಲಾಯಿತು. ಅದರಿಂದ ದೂತನ ಬೆನ್ನಿಗೆ ಗಾಯವಾಯಿತು. ಮೊದಲೇ ಯೋಜಿಸಿ ನಿರ್ಣಯಿಸಿದ ಪ್ರಕಾರ, ದೂತನು, 'ನಾನು ಸುಲ್ತಾನ ಇಬ್ರಾಹಿಮನ ದೂತನಾಗಿದ್ದು ಆತನ ಹೇಳಿಕೆಯಂತೆ ಇಲ್ಲಿಗೆ ಬಂದು ಈ ಪತ್ರಗಳನ್ನು ಸಲ್ಲಜೂಖಿ ಅಮೀರರರಿಗೆ ತಲಪುವಂತೆ ಮಾಡಲು ಬಂದಿದ್ದೇನೆ.' ಎಂದು ಹೇಳಿದನು. ಮಲೀಕ ಶಹನು ಈ ಪತ್ರಗಳನ್ನು ಆತನಿಂದ ತೆಗೆದುಕೊಂಡು ಓದಿ ಕೂಡಲೇ ತನ್ನ ದೇಶಕ್ಕೆ ಮರಳಲು ಇಚ್ಛಿಸಿದನು. ತನ್ನ ರಾಜಧಾನಿಗೆ ಬಂದು ಈ ಬಗ್ಗೆ ವಿಚಾರಣೆಯನ್ನು ಮಾಡಿದನು. ವಿಚಾರಣೆಯ ಪರಿಣಾಮವಾಗಿ ತಿಳಿದು ಬಂದುದೇನೆಂದರೆ, ಅಮೀರರಿಗೆ ಸುಲ್ತಾನ ಇಬ್ರಾಹಿಮನ ಉದ್ದೇಶದ ಸುಳಿವು ಕೂಡ ಇರಲಿಲ್ಲ. ಇದು ಒಂದು ಇಬ್ರಾಹಿಮನ ತಂತ್ರವಾಗಿದ್ದು ಅದನ್ನು ಕಾರ್ಯಗತಗೊಳಿಸಿ ಯುದ್ಧದ ಯೋಜನೆಗಳಿಂದ ಮುಕ್ತನಾದನು. ಇದಾದನಂತರ ಎಷ್ಟೋ ಸಾರಿ ಮಲೀಕ ಶಹಾನು ಹೇಳುತ್ತಿದ್ದನು, 'ಇಬ್ರಾಹಿಮನು ಈ ತಂತ್ರವನ್ನು ಏಕೆ ಹೂಡಿದನೆಂದರೆ ಘಜನವಿ ಹಾಗೂ ಸಲ್ಲಜೂಖಿ ಸೈನ್ಯಗಳ ಮಧ್ಯೆ ಯುದ್ಧವಾಗಕೂಡದು, ಏಕೆಂದರೆ ಆ ರೀತಿಯಾದಲ್ಲಿ ಪರಿಣಾಮವಾಗಿ ಘಜನವಿ ಸೈನ್ಯವು ರಣರಂಗದಿಂದ ಓಡಿಹೋಗುವುದೆಂದು ಆತನಿಗೆ ವಿಶ್ವಾಸವಿತ್ತು. ಸಲ್ಲಜೂಖಿಗಳಿಗೆ ಗೆಲುವಾಗುವುದೂ ತಿಳಿದಿತ್ತು. ಈ ತಂತ್ರದಿಂದ ಆತನು ನನ್ನನ್ನು ನನ್ನ ಉದ್ದೇಶದಿಂದ ದೂರ ಉಳಿಸಿದನು. ಇದರಿಂದಾಗಿ ನಿಜವಾಗಿ ಆತನಿಗೆ ಗೆಲುವಾಗಿ ನಾನು ಸೋತೆನು.'

ಅಜೊಧನ ಹಾಗು ರೂಪಾಲ ಕೋಟೆಗಳ ಗೆಲವು:

ಇಬ್ರಾಹಿಮನಿಗೆ ಸಲ್ಲಜೂಖಿಗಳ ಬಗ್ಗೆ ನೆಮ್ಮದಿಯಾಯಿತು. ಆತನು ಒಂದು ದೊಡ್ಡ ಸೈನ್ಯವನ್ನು ಹಿಂದುಸ್ತಾನದ ಕಡೆ ಕಳುಹಿಸಿದನು. ಈ ಸೈನ್ಯವು ಇಸ್ಲಾಮಿ

ರಾಜ್ಯದಿಂದ ಹೊರ ಉಳಿದ ಬಹಳಷ್ಟು ಭೂಭಾಗಗಳನ್ನು ಗೆದ್ದು ಹಿಜರಿಶಕೆ ೪೭೩ ರಲ್ಲಿ ಇಬ್ರಾಹಿಮ ಶಹಾನು ಸ್ವತಃ ಹಿಂದುಸ್ತಾನಕ್ಕೆ ಬಂದನು. ಇಲ್ಲಿ ಪ್ರಸಿದ್ಧ ಕೋಟೆಗಳಾದ ಅಜೊಧನ (ಇದು ಪಟ್ಟನ್ ಎಂಬ ಹೆಸರಿನಿಂದ ಪ್ರಸಿದ್ಧವಿದ್ದು ಲಾಹೋರಿನಿಂದ ನೂರು ಹರದಾರಿ ಅಂತರದಲ್ಲಿದೆ.)ಗೆ ಮುತ್ತಿಗೆ ಹಾಕಿ ಗೆದ್ದಕೊಂಡನು. ಅಜೊಧನ ಗೆದ್ದ ನಂತರ ಇಬ್ರಾಹಿಮನು ಪಂಜಾಬದ ಅತೀ ದೊಡ್ಡ ಕೋಟೆಯಾದ ರೂಪಾಲ ಕಡೆಗೆ ಗಮನಹರಿಸಿದನು. ಈ ಕೋಟೆಯು ಒಂದು ಎತ್ತರದ ಬೆಟ್ಟದ ತುದಿಯಲ್ಲಿ ಕಟ್ಟಲಾಗಿತ್ತು. ಇದರ ಒಂದು ಭಾಗದಲ್ಲಿ ನದಿಯು ಹರಿಯುತ್ತಿತ್ತು. ಇನ್ನೊಂದು ಭಾಗದಲ್ಲಿ ದಟ್ಟ ಅರಣ್ಯವಿತ್ತು. ಈ ಅರಣ್ಯದಲ್ಲಿ ಅಸಂಖ್ಯಾತ ಮರಗಳಿದ್ದವು. ಈ ಗಿಡಮರಗಳು ಒಂದಕ್ಕೊಂದು ಹೆಣೆದುಕೊಂಡಂತೆ ಇದ್ದುದರಿಂದ ಸೂರ್ಯನ ಕಿರಣಗಳು ಭೂಮಿಗೆ ತಲುಪಲು ಸಾಧ್ಯವಿರಲಿಲ್ಲ. ಬಹಳಷ್ಟು ಗಿಡಗಳಲ್ಲಿ ಯಾವಾಗಲೂ ವಿಷ ಸರ್ಪಗಳು ಸುತ್ತಿಕೊಂಡಿರುತ್ತಿದ್ದವು. ಇದರಿಂದ ಕೋಟೆಯ ಎರಡೂ ಕಡೆ ನಿಲ್ಲಲು ಕೂಡ ಸ್ಥಳವಿರಲಿಲ್ಲ ಎಂಬುದನ್ನು ಊಹಿಸಬಹುದು. ಈ ಕೋಟೆಯ ಸುತ್ತ-ಮುತ್ತಲಿನ ಪರಿಸ್ಥಿತಿ ಹೇಗಿತ್ತೆಂದರೆ ದಾಳಿ ಮಾಡುವವನು ನಿರಾಶನಾಗಿ, ಅಧೈರ್ಯನನ್ನಾಗಿಸುವ ವಾತಾವರಣವಿತ್ತು. ಆದರೆ ಇಬ್ರಾಹಿಮನು ಧೈರ್ಯಗುಂದದೆ ಸಕಲ ಅಡೆತಡೆಗಳನ್ನು ಸಾಹಸದಿಂದ ಎದುರಿಸುತ್ತಾ ಅಲ್ಲಿಗೆ ಬಂದನು. ಕೆಲವು ಕಾಲದವರೆಗೆ ಕೋಟೆಗೆ ಮುತ್ತಿಗೆ ಹಾಕಿ ಅಂತಿಮವಾಗಿ ಗೆದ್ದನು.

ಕಣಿವೆಯ ಗೆಲವು:

ರೂಪಾಲ ಕೋಟೆ ಗೆದ್ದನಂತರ, ಇದರ ಹತ್ತಿರದಲ್ಲಿದ್ದ ಒಂದು ಪಟ್ಟಣ 'ವರ್ರಾ'ದ ಮೇಲೆ ದಾಳಿ ಮಾಡಿದನು. ಖರಾಸ್ಥಾನಿ ವಂಶದ ಮುಸ್ಲಿಮರು ಇಲ್ಲಿ ವಾಸಿಸುತ್ತಿದ್ದರು. ಈ ಜನರನ್ನು ಅಪಸರ ಅಸಿಯಾಬನು ಖರಸ್ಥಾನದಿಂದ ಹೊರದೂಡಿ ಹಿಂದುಸ್ತಾನದ ಗಡಿಯನ್ನು ವಾಸಸ್ಥಾನವನ್ನಾಗಿ ಮಾಡಿದನು. ಈ ಜನರು ವಿಗ್ರಹ ಪೂಜಕರು ಮತ್ತು ವಿಗ್ರಹಗಳಿಗೆ ಕಾಣಿಕೆಗಳನ್ನು ಸಲ್ಲಿಸುವುದರಲ್ಲಿ ನಿರತರಾಗಿರುತ್ತಿದ್ದರು. ವರ್ರಾದಲ್ಲಿ ಒಂದು ಕೆರೆಯಿದ್ದು ಅದರ ಹರಿವು ಒಂದು ಮೈಲಿ, ಮತ್ತು ಅದರ ಆಳವನ್ನು ಕಂಡುಹಿಡಿಯುವುದು ಬಹಳ ಕಷ್ಟವಾಗಿತ್ತು. ನೀರಿನ ಪ್ರಮಾಣವು ಎಲ್ಲ ಸಮಯದಲ್ಲಿಯೂ ಹೆಚ್ಚಾಗಿರುತ್ತಿತ್ತು. ಈ ನಗರ ನಿವಾಸಿಗಳು ಹಾಗು ಪ್ರಾಣಿಗಳು ಮಾಡುತ್ತಿದ್ದ ಉಪಯೋಗದಿಂದ ನೀರಿನ ಪ್ರಮಾಣ ಕಡಿಮೆಯಾಗುತ್ತಿರಲಿಲ್ಲ. ಇದರ ಸುತ್ತ-ಮುತ್ತ ದಟ್ಟಾರಣ್ಯವಿತ್ತು. ಇದರಿಂದಾಗಿ ನಗರ ಪ್ರವೇಶ ಹಾಗೂ ಹೊರ ಹೋಗುವ ದಾರಿಯು ಕಷ್ಟವಾಗಿತ್ತು. ಹಿಂದೆ ಆಳುತ್ತಿದ್ದ ರಾಜರಿಗೆ ಈ ನಗರನಿವಾಸಿಗಳನ್ನು ತಮ್ಮ ಅಧೀನದಾರರನ್ನಾಗಿ ಮಾಡಿಕೊಳ್ಳಲು ಕಷ್ಟವೆಂದು ತಿಳಿದು ಈ ಕಡೆಗೆ ಬರದಂತಿದ್ದರು. ಆದರೆ ಮಹಮದ ಘಜನವಿಯ ಶೂರ ವಾರಸುದಾರರು ಈ ಕಷ್ಟದಿಂದ ಹಿಮ್ಮೆಟ್ಟದೆ ಹಾಗು ಭಯಭೀತರಾಗದೆ ಇಲ್ಲಿಯ ನಿವಾಸಿಗಳಿಗೆ ಇಸ್ಲಾಮ ಧರ್ಮದ ಬೆಳಕನ್ನು

ತೋರಲು ದೃಢ ನಿಶ್ಚಯ ಮಾಡಿದ್ದರು. ಅದಕ್ಕಾಗಿ ಸಾವಿರಾರು ಪದಾತಿಗಳನ್ನು ಮುಂದೆ ಕಳುಹಿಸಿದರು, ಅವರು ಸೈನ್ಯದ ಮುಂದೆ ನಡೆದು ದಾರಿಯ ಗಿಡಗಳನ್ನು ಕತ್ತರಿಸಿ ಸೈನಿಕರ ದಾರಿಯನ್ನು ಸುಗಮ ಮಾಡಲು ಹೇಳಿದನು. ಈ ಕಾರ್ಯದ ಪರಿಣಾಮವಾಗಿ ದಾರಿಯು ಸ್ವಚ್ಛವಾಗಿ ಘಜನವಿ ಸೈನ್ಯವು ಮುಂದೆ ಹೋಗಲು ಅನುಕೂಲವಾಯಿತು. ಈ ಸೈನ್ಯವು ಜಾನಬಾಜೂರಾ ಸಮೀಪ ಬಂದಾಗ ಮಳೆಗಾಲ ಆರಂಭವಾಯಿತು. ನಿಲ್ಲಲಾರದಂತೆ ಮಳೆ ರಭಸವಾಗಿ ಸುರಿಯುತ್ತಿತ್ತು, ಹೀಗಾಗಿ ಸೈನ್ಯವು ಕೆಲ ಕಾಲದವರೆಗೆ ನಗರದ ಹೊರಗಡೆ ಗಡಿಯಲ್ಲಿ ವಸತಿ ಮಾಡಬೇಕಾಯಿತು. ಸೈನ್ಯದ ಜನರಿಗೆ ಮಳೆಯು ಒಂದು ವಿಪತ್ತಾಗಿ ಕಂಡರೂ, ಬಾದಶಾಹ ಇಬ್ರಾಹಿಮನ ಮೇಲೆ ಪರಿಣಾಮ ಬೀರಲಿಲ್ಲ. ಆತನು ಕೋಟೆಯನ್ನು ಗೆಲ್ಲುವ ನಿರ್ಧಾವನ್ನು ಸಡಲಿಸಲಿಲ್ಲ. ಮೂರು ತಿಂಗಳ ಕಾಲದ ನಂತರ ಮಳೆ ನಿಂತಿತು ಮತ್ತು ಸೈನ್ಯವು ನಗರದ ಸಮೀಪ ಹೋಗಲು ಸಮಯ ಸಿಕ್ಕಿತು.

ಇಬ್ರಾಹಿಮ ಶಹಾನು ಸ್ವತಃ ಸೈನ್ಯದ ಜೊತೆಗೆ ನಗರದ ಗಡಿಯಲ್ಲಿ ವಾಸವಾಗಿದ್ದು ತನ್ನ ಕೆಲವು ಜನರನ್ನು ನಗರದ ಜನರ ಹತ್ತಿರ ಇಸ್ಲಾಮಿನ ಆಮಂತ್ರಣವನ್ನು ಕಳುಹಿಸಿದನು. ಆದರೆ, ಈ ಆಮಂತ್ರಣವು ಫಲಕಾರಿಯಾಗಲಿಲ್ಲ. ವರ್ರಾದ ಪ್ರಜೆಗಳು ತಮ್ಮ ಪೂರ್ವಜರ ಮತವನ್ನು ಅನುಸರಿಸುವುದಾಗಿ ಅಚಲರಾಗಿ ನಿಂತರು. ಈ ಪರಿಸ್ಥಿತಿಯನ್ನು ಕಂಡ ಇಬ್ರಾಹಿಮು ಶಹಾನಿಗೆ ನಗರದ ಮೇಲೆ ದಾಳಿ ಮಾಡುವುದನ್ನುಳಿದು ಬೇರೆ ದಾರಿ ಇರಲಿಲ್ಲ. ಅದಕ್ಕಾಗಿ ಮನನೊಂದು ನಗರದ ಮೇಲೆ ದಾಳಿ ಮಾಡಿ ಗೆದ್ದುಕೊಂಡನು. ಇಬ್ರಾಹಿಮನು ಈ ನಗರದಿಂದ ೧ ಲಕ್ಷ ಹೆಣ್ಣಾಳು ಮತ್ತು ಗುಲಾಮರ ಜೊತೆಗೆ ಅತ್ಯಂತ ಬೆಲೆಬಾಳುವ ವಸ್ತು ಹಾಗು ಸಂಪತ್ತನ್ನು ಜೊತೆಯಲ್ಲಿ ತೆಗೆದುಕೊಂಡು ಹಿಂದಿರುಗಿದನು.

ಇಬ್ರಾಹಿಮನ ಸಾತತ್ಯೆಯ ಗುಣದ ಒಂದು ನಿದರ್ಶನ:

ಕೆಲವು ಇತಿಹಾಸಕಾರರು ಹೇಳುತ್ತಾರೆ, ಒಂದು ದಿನ ಇಬ್ರಾಹಿಮ ಶಾಹ ಘಜನಿಯ ರಾಜ ಮಾರ್ಗದಲ್ಲಿ ಹೋಗುತ್ತಿರುವಾಗ ಆತನು ಒಬ್ಬ ಕೂಲಿಕಾರನನ್ನು ನೋಡಿದನು. ಆತನು, ರಾಜನು ಕಟ್ಟಿಸುತ್ತಿರುವ ಕಟ್ಟಡಕ್ಕಾಗಿ ದೊಡ್ಡದಾದ, ಭಾರವಾದ ಕಲ್ಲನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದನು. ಈ ಕೂಲಿಯು ಬಹಳ ಅಶಕ್ತನಾಗಿದ್ದನು. ಕಲ್ಲಿನ ಭಾರವನ್ನು ಆತನಿಗೆ ತಾಳಲಾಗುತ್ತಿರಲಿಲ್ಲ. ಆ ಕೂಲಿಯ ಪರಿಸ್ಥಿತಿ ಕಂಡು ಇಬ್ರಾಹಿಮ ಶಹನು ಕನಿಕರಗೊಂಡು ಆ ಕೂಲಿ ಆಳಿಗೆ ಕಲ್ಲನ್ನು ಬಿಸಾಡಲು ಆದೇಶಿಸಿದನು. ಕೂಲಿ ಆಳು ಆದೇಶವನ್ನು ಪಾಲಿಸಿದನು. ಈ ರೀತಿಯಾಗಿ ಪ್ರಾಣ ತೆಗೆಯುವ ಕಲ್ಲಿನ ಭಾರದಿಂದ ಬಿಡುಗಡೆ ಹೊಂದಿದನು ಮತ್ತು ಕಲ್ಲು ಅಲ್ಲಿಯೇ ರಾಜಮಾರ್ಗದಲ್ಲಿ ಬಿದ್ದಿತ್ತು. ಇಬ್ರಾಹಿಮ ಶಹಾನು ತನ್ನ ಮಹಲಿನ ಕಡೆ ಹೋದನು. ರಾಜ ಮಾರ್ಗದ ಮಧ್ಯದಲ್ಲಿ ಆ ಕಲ್ಲು ಹೇಗೆ ಬಿದ್ದಿತ್ತೆಂದರೆ

ಕಾಲ್ನಡಿಗೆಯವರು, ದಾರಿಹೋಕರು ಮತ್ತು ಸವಾರರಿಗೆ ಕಲ್ಲು ತಟ್ಟುತ್ತಿತ್ತು. ದಾರಿ ಹೋಕರಿಗೆ ನಡೆಯುವುದು ಕಷ್ಟವಾಗುತ್ತಿತ್ತು. ಇದನ್ನು ಕಂಡ ಒಬ್ಬ ವ್ಯಕ್ತಿಯು ಇಬ್ರಾಹಿಮ ಶಹಾನಿಗೆ ಕೇಳಿದನು. ತಾವು ಅನುಮತಿ ಕೊಟ್ಟರೆ ಈ ಕಲ್ಲನ್ನು ಎತ್ತಿ ಒಂದು ಕಡೆ ಇಡಲಾಗುವುದು. ಇದರಿಂದ ರಸ್ತೆಯು ಸಚ್ಛವಾಗಿ ಜನರು ದಿನನಿತ್ಯದ ಕಷ್ಟದಿಂದ ಬಿಡುಗಡೆ ಹೊಂದುವರು. ಇಬ್ರಾಹಿಮ ಶಾಹನು ಉತ್ತರವಾಗಿ, 'ನಾನು ಒಬ್ಬ ವ್ಯಕ್ತಿಗೆ ಈ ಕಲ್ಲನ್ನು ಬಿಸಾಡಲು ಹೇಳಿದ್ದೆ, ಇನ್ನೊಬ್ಬ ವ್ಯಕ್ತಿಗೆ ಅದನ್ನು ತೆಗೆಯಲು ಹೇಳಿದರೆ ನನ್ನ ಮಾತಿನ ಮೇಲೆ ಇರುವ ವಿಶ್ವಾಸವು ಉಳಿಯಲಾರದು. ಜನರು ನನ್ನನ್ನು ಅಸ್ಥಿರ ಪ್ರವೃತ್ತಿಯ ವ್ಯಕ್ತಿಯೆಂದು ತಿಳಿಯುವರು. ಈ ರೀತಿ ರಾಜನ ಬಗ್ಗೆ ಜನರು ತಿಳಿಯುವುದು ಯಾವ ರೀತಿಯಿಂದಲೂ ಸಮಂಜಸವೆನಿಸದು.' ಎಂದು ಹೇಳಿದನು. ಇತಿಹಾಸಕಾರರು ದಾಖಲಿಸುವುದೇನೆಂದರೆ, ಇಬ್ರಾಹಿಮ ಶಾಹನ ಅವಧಿಯು ಮುಗಿಯುವವರೆಗೆ ಕಲ್ಲು ಅಲ್ಲಿಯೇ ಬಿದ್ದಿತ್ತು. ಇಬ್ರಾಹಿಮ ಶಾಹನ ಆದೇಶವನ್ನು ಆತನ ಮರಣದ ನಂತರವೂ ಜನರು ಪರಿಪಾಲಿಸುತ್ತಲೇ ಇದ್ದರು ಹಾಗೂ ಮೃತಪಟ್ಟ ಬಾದಶಾಹನ ಆದೇಶವನ್ನು ಯಾರೂ ವಿರೋಧಿಸಲಿಲ್ಲ. ಸುಲ್ತಾನ ಇಬ್ರಾಹಿಮನ ಸಂತಾನವು ಹೆಚ್ಚು ಸಂಖ್ಯೆಯಲ್ಲಿ ವೃದ್ಧಿಯಾಗಿತ್ತು. ಆತನ ಗಂಡು ಮಕ್ಕಳ ಸಂಖ್ಯೆ ೩೬ ಹಾಗು ಹೆಣ್ಣು ಮಕ್ಕಳ ಸಂಖ್ಯೆ ೪೦ ಇದ್ದಿತು. ತನ್ನ ಹೆಣ್ಣು ಮಕ್ಕಳನ್ನು ದೇಶದ ಗುಣವಂತ ಹಾಗೂ ಬುದ್ಧಿವಂತ ಜನರೊಂದಿಗೆ ಮದುವೆ ಮಾಡಿದನು.

ಇಬ್ರಾಹಿಮನ ಮರಣದ ವರ್ಷ ಮತ್ತು ರಾಜ್ಯಾವಧಿಯ ಕಾಲದ ಬಗ್ಗೆ ಭಿನ್ನ ಮತಗಳಿವೆ. ಕೆಲವು ಜನರ ಹೇಳಿಕೆ ಎಂದರೆ ಈತನು ೩೧ ವರ್ಷ ರಾಜ್ಯವಾಳಿ ಹಿಜರಿ ಶಕೆ ೪೯೨ರಲ್ಲಿ ಮೃತಪಟ್ಟನು. ಇಬ್ರಾಹಿಮನ ಆಳ್ವಿಕೆಯ ಆರಂಭದ ದಿನಗಳಲ್ಲಿ ಅಬೂ ಸಹೀಲ್ ಖಜನದಿ ಮತ್ತು ಖಾಜಾ ಮಸೂದ ರೆಹಜೀ ಮಂತ್ರಿಗಳಾಗಿದ್ದರು. ಆದರೆ, ಕೊನೆಯ ಕಾಲದಲ್ಲಿ ಈ ಸೇವೆಗಳು ಅಬ್ದುಲ್ ಮಜೀದ ಬಿನ್ ಅಬ್ದುಲ್ ಸಮದನಿಗೆ ಒಪ್ಪಿಸಲಾಯಿತು. ಈ ಮಂತ್ರಿಯ ಸ್ತುತಿಯಲ್ಲಿ ಅಬೂ-ಅಲ್-ಫರಜನು ಒಂದು 'ಖಸೀದಾ' (ಒಂದು ಬಗೆಯ ಕವನ) ಬಹಳ ಖ್ಯಾತಿ ಪಡೆದಿದೆ. ಆರಂಭದ ಪಲ್ಲವಿಯು ಹೀಗಿದೆ,

ದಾನ, ಧರ್ಮ ಮಾಡುವ ಪರಂಪರೆಯು
ಅಬ್ದುಲ್ ಮಜೀದ ಅಹಮದ ಅಬ್ದುಲ್ ಸಮದನಿಂದ ಆರಂಭವಾಯಿತು.

ಅಬೂ ಅಲ್ ಫರಜ:- ಅಬುವಾ ಅಲ್ ಫರಜನು ಸುಲ್ತಾನನ ಸಮಕಾಲೀನನಿದ್ದನು. ಕೆಲ ಇತಿಹಾಸಕಾರರು ಸಯೀಸ್ಥಾನಿ ಮತ್ತು ಇತರರು ಘಜನವಿ ಎಂದು ಹೇಳುತ್ತಾರೆ. ಖ್ಯಾತ ಕವಿ 'ಅನಸರಿ' ಇದೇ ನಗರದ ಆಫಾಖಿ ಶಿಕ್ಷಕನ ಶಿಷ್ಯನಾಗಿದ್ದನು. ಅಬು ಅಲ್ ಫರಜನು ಖ್ಯಾತ ಸಾಮಾನೀ ಅಮೀರ ಅಬೂ ಅಲೀ ಸಮಜೋರಿಯ ಕಾಲದಲ್ಲಿ ತನ್ನ ಶಿಕ್ಷಕನ ಕಲಾವಂತಿಕೆಯನ್ನು ಪ್ರದರ್ಶಿಸಿದನು ಹಾಗೂ ಯಾವಾಗಲೂ

ಇದೇ ಪರಿವಾರದ ಸ್ತುತಿ ಮಾಡುತ್ತಿದ್ದನು. ಆತನೊಬ್ಬ ಉತ್ತಮ ಮಟ್ಟದ ಕವಿಯಾಗಿದ್ದು ಆಸ್ಥಾನದ ಹೆಮ್ಮೆಯಾಗಿದ್ದನು. ಧನಿಕರು ಆತನಿಗೆ ಕಾಣಿಕೆಗಳನ್ನು ಕೊಡುತ್ತಿದ್ದರು. ಅಬು ಅಲ್ ಫರಜನು ಕಾವ್ಯದ ಕಲೆಯಲ್ಲಿ ಪರಿಣಿತನಾಗಿದ್ದನು. ಕಾವ್ಯದ ಕಲೆಯ ಬಗ್ಗೆ ಮತ್ತು ಅದರ ಪ್ರಗತಿಯ ಬಗ್ಗೆ ಒಂದು ಪುಸ್ತಕವೂ ಇದೆ. ಅವುಗಳಿಂದ ಆತನ ಸ್ಥಾನಮಾನದ ಅರಿವಾಗುತ್ತದೆ. ಪ್ರಮುಖ ಬರಹಗಾರರು ತಮ್ಮ ಪುಸ್ತಕಗಳಲ್ಲಿ ಈತನ ಕಾವ್ಯಗಳನ್ನು ಉಲ್ಲೇಖಿಸುತ್ತಾರೆ. ಅಬು ಅಲ್ ಫರಜನ 'ಖತಾ' ಬಹಳ ಪ್ರಖ್ಯಾತವಿದೆ.

ಅಲಾವಲ್‌ದವಲಾ ಮಸೂದ ಬಿನ್ ಇಬ್ರಾಹಿಮ ಬಿನ್ ಮಸೂದ ಘಜನವಿ:

ಸುಲ್ತಾನ ಮಸೂದನು ಬಹಳ ಉದಾರಿ ಹಾಗು ಸದ್ಗುಣಗಳ್ಳುಳ್ಳ ವ್ಯಕ್ತಿಯಾಗಿದ್ದನು. ಈತನು ರಾಜ್ಯದಲ್ಲಿ ಕೆಡಕುಗಳ ಹುಟ್ಟನ್ನು ನಿರ್ನಾಮ ಮಾಡಿದನು. ಮಸೂದನು ತನ್ನ ತಂದೆ ಇಬ್ರಾಹಿಮನ ಆಡಳಿತದ ಅಧಿಕಾರದಲ್ಲಿದ್ದವರನ್ನೆಲ್ಲ ಅವರುಗಳ ಹುದ್ದೆಗಳಲ್ಲಿ ಉಳಿಸಿದನು. ಅವರ ಜಹಗೀರುಗಳನ್ನು ಇದ್ದಂತೆಯೇ ಮುಂದುವರಿಸಿಕೊಂಡು ಹೋದನು. ಸುಲ್ತಾನ ಸಂಜರ್‌ನ ಸಹೋದರಿಯಾದ 'ಮಹು ಇರಾಖ' ಳನ್ನು ಮದುವೆಯಾಗಿ ಹೆಸರಾಂತ ತುರ್ಕಿ ಪರಿವಾರದ ಸದ್ಗುಣಗಳಾದ ಪ್ರೀತಿ, ಪ್ರೇಮದ ಪರಂಪರೆಯನ್ನು ನಿರ್ಮಿಸಿದನು.

ಸುಲ್ತಾನ ಮಸೂದನು ಲಾಹೋರಿನ ಜಹಗೀರದಾರ 'ಸಾಹೇಬ ತಘಾ'ನನ್ನು ಹಿಂದೂಸ್ಥಾನದ ಸೇನಾಧಿಪತಿಯನ್ನಾಗಿ ನಿಯಮಿಸಿ, ಆತನನ್ನು ಹಿಂದೂಸ್ಥಾನದ ಮೇಲೆ ದಾಳಿ ಮಾಡಲು ಆದೇಶಿಸಿದನು. ತಘಾನು ಗಂಗಾನದಿಯನ್ನು ದಾಟಿ ಹಿಂದೂಸ್ಥಾನದ ಪ್ರಾಂತ್ಯಗಳಲ್ಲಿ ಕೊಲೆ, ಸುಲಿಗೆ ಹಾಗೂ ದಂಗೆಯನ್ನು ಹುಟ್ಟು ಹಾಕಿದನು. ಇಲ್ಲಿ ಸುಲ್ತಾನ ಮಹಮೂದ ಘಜನವಿಯನ್ನು ಬಿಟ್ಟು ಬೇರೆ ಯಾವ ಮುಸಲ್ಮಾನ ರಾಜರುಗಳಿಗೆ ಪ್ರವೇಶವಿರಲಿಲ್ಲ. ತಘಾನು ಪ್ರಯತ್ನವಿಲ್ಲದೆ ಕೈಸೇರಿದ ಧನರಾಶಿಯನ್ನು ತೆಗೆದುಕೊಂಡು ಮರಳಿದನು.

ಸುಲ್ತಾನ ಮಸೂದನು ೧೬ ವರ್ಷ ಆಜ್ಞಾಧಾರಕನಾಗಿದ್ದು, ಹಿಜರಿ ಶಕೆ ೫೦೮ ರಲ್ಲಿ ಮೃತಪಟ್ಟನು. ಈತನು ತನ್ನ ರಾಜ್ಯಾವಧಿಯಲ್ಲಿ ಯಾವ ತರಹದ ಗಲಭೆ ಕೋಲಾಹಲಗಳಿಲ್ಲದೆ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತ ರಾಜ್ಯಭಾರ ಮಾಡಿದನು.

'ಇತಿಹಾಸದ ಗೆಜೆಟ'ನಲ್ಲಿ ಬರೆಯಲಾಗಿದ್ದುದೇನೆಂದರೆ, ಸುಲ್ತಾನ ಮಸೂದನ ಮರಣದ ನಂತರ ಆತನ ಮಗನಾದ ಕಮಾಲ ಅಲ್ ದೌಲಾ ಶೇರ್‌ಜಾದ್ ಸಿಂಹಸನಾರೂಢನಾದನು. ಪಟ್ಟಾಭಿಷೇಕವಾದ ನಂತರ ಒಂದೇ ವರ್ಷದಲ್ಲಿ ತನ್ನ ಸಹೋದರ ಅರ್‌ಸಲಾನ್‌ಶಹಾನಿಂದ ಮೃತಪಟ್ಟನು. ಆದರೆ ಉಳಿದೆಲ್ಲ ಇತಿಹಾಸಕಾರರು ಅರ್‌ಸಲಾನ್‌ಶಹಾನು ಸುಲ್ತಾನ ಮಸೂದನ ನಂತರ ರಾಜನಾದನೆಂದು ಹೇಳುತ್ತಾರೆ.

ಸುಲ್ತಾನ ಅಲ್ ದೌಲಾ ಅರ್‌ಸಲಾನ್‌ಶಹಾ ಬಿನ್ ಸುಲ್ತಾನ ಮಸೂದ:

ಅರ್‌ಸಲಾನ್ ಶಹಾನು ರಾಜ್ಯಭಾರ ಕೈಗೆತ್ತಿಕೊಂಡ ಮೇಲೆ ಸಹೋದರರನ್ನು ಬಂದಿಯಾಗಿಸಿ ಸೆರೆಮನೆಯಲ್ಲಿಟ್ಟನು. ಈ ದುರ್ದೈವಿ ಸಹೋದರರಲ್ಲಿ ಒಬ್ಬನಾದ ಬಹರಾಮ ಮಾತ್ರ ಜೀವ ಉಳಿಸಿಕೊಂಡು ಸುಲ್ತಾನ ಸಖಜರ ಇವರಲ್ಲಿ ಆಶ್ರಯ ಪಡೆದನು. ಸುಲ್ತಾನ ಸಖಜರನ ತಮ್ಮನಾದ ಅಹ್ಮದ ಸುಲ್ತಾನ ಬಿನ್ ಮಲೀಕ ಶಹಾನ ವತಿಯಿಂದ ದೊಡ್ಡದೊಂದು ಬೀಸುವ ಕಲ್ಲಿನಿಂದ ಬೀಸಲು ಆದೇಶಿಸಿದನು. ಅರ್‌ಸಲಾನ್ ಶಹಾನು ಬಹರಾಮನನ್ನು ತನ್ನ ಹತ್ತಿರ ಕಳುಹಿಸಲು ಸುಲ್ತಾನ ಸಖಜರನಿಗೆ ಹಲವಾರು ಪತ್ರಗಳನ್ನು ಬರೆದನು. ವಿವಿಧ ರೀತಿಯಿಂದ ವಿನಂತಿಸಿ ಮನವಿ ಮಾಡಿದನು, ಆದರೆ ಸಖಜರ ಈ ವಿನಂತಿ ಗೌರವಿಸಲಿಲ್ಲ. ಅರ್‌ಸಲಾನ್ ಶಹಾನ ಆಸೆಯ ವಿರುದ್ಧ ಬಹರಾಮನಿಗೆ ಎಲ್ಲಾ ತರಹದ ಸಹಾಯ ಮಾಡಲು ದೃಢ ನಿಶ್ಚಯ ಮಾಡಿದ. ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿ ಬಹರಾಮನೊಂದಿಗೆ ತಾನೂ ಘಜನಿ ಮೇಲೆ ದಾಳಿ ಮಾಡಿದನು.

ಅರ್‌ಸಲಾನ್ ಶಹಾನ ಈ ವರ್ತನೆ ಬಗ್ಗೆ ಸುಲ್ತಾನ ಮಹ್ಮದನಿಗೆ ದೂರು ನೀಡಿ, ಮನವಿ ಮಾಡಿದ್ದೇನೆಂದರೆ, ಸುಲ್ತಾನ ಮಹ್ಮದನು ತನ್ನ ತಮ್ಮನನ್ನು ಯುದ್ಧ ಮಾಡಲು ತಡೆಯಲು ಕೇಳಿದ ಸುಲ್ತಾನ ಮಹ್ಮದನು (ಅರ್‌ಸಲಾನ್ ಶಹಾನ ಮನವಿಯ ದೃಷ್ಟಿಯಲ್ಲಿ) ಬಹರಾಮ ಮತ್ತು ಇರಸಾಲನ ಇಬ್ಬರಲ್ಲಿ ಒಪ್ಪಂದ ಮಾಡಿಸಲು ಬಹಳವಾಗಿ ಪ್ರಯತ್ನಿಸಿದ ಆದರೆ ಸಫಲನಾಗಲಿಲ್ಲ. ಅರ್‌ಸಲಾನ್ ಶಹನು ಸುಲ್ತಾನ ಮಹ್ಮದನ ಪ್ರಯತ್ನ ಫಲಿಸದಿದ್ದನ್ನು ಕಂಡು, ತನ್ನ ತಾಯಿ 'ಮಹೋಇರಾಕ್'ಳ ಮೊರೆ ಹೊಕ್ಕನು. ಆದರೆ ಅರ್‌ಸಲಾನ್ ತಾಯಿಯು ಅರ್‌ಸಲಾನ್‌ನಿಂದ ಸಂತುಷ್ಟಳಿರಲಿಲ್ಲ, ಈತನ ದೌರ್ಜನ್ಯಗಳಿಂದ ಆತಂಕಿತಳಾಗಿದ್ದಳು. ತನ್ನ ಇಬ್ಬರ ಮಕ್ಕಳ ನಿರ್ನಾಮದ ಬಗ್ಗೆ ಅತಿ ಸಂಕಟವಿತ್ತು, ಆದ್ದರಿಂದ ಸುಲ್ತಾನ ಸಖಜರನೊಂದಿಗೆ ಒಪ್ಪಂದದ ಮಾತನಾಡುವ ಬದಲು ತನ್ನ ಸಹೋದರನ ಹತ್ತಿರ ಹೋಗಿ ಅರ್‌ಸಲಾನ್‌ನ ದೌರ್ಜನ್ಯದ ಕಥೆ ಹೇಳಿದಳು. ಆತನನ್ನು ಘಜನವಿ ಮೇಲೆ ದಾಳಿ ಮಾಡಲು ಒತ್ತಾಯಿಸಿದಳು.

ಅರ್‌ಸಲಾನ್ ಶಹಾ ತಾಯಿಯಿಂದ ನೆರವು ದೊರೆಯದೆ ನಿರಾಶನಾಗಿ, ಅನಿವಾರ್ಯವಾಗಿ ಯುದ್ಧ ಸನ್ನಾಹ ಮಾಡಲು ಆರಂಭಿಸಿದನು. ಸಖಜರನನ್ನು ಚಕಿತಗೊಳಿಸಬೇಕೆಂದು ೩೦ ಸಾವಿರ ಕುದುರೆ ಸವಾರರು, ಅನೇಕ ಕಾಲ್ದಳ ಮತ್ತು ೧೬೦ ಆನೆಗಳ ದೊಡ್ಡ ಸೈನ್ಯದೊಂದಿಗೆ ಘಜನಿಯಿಂದ ಒಂದು ಹರದಾರಿ ದೂರದಲ್ಲಿ ತಂಗಿದ್ದನು. ಸಖಜರ ಹಾಗೂ ಬಹರಾಮರ ಜಂಟಿ ಸೈನ್ಯವು ಎದುರಾಯಿತು. ಪರಸ್ಪರರಲ್ಲಿ ಘನಘೋರ ಯುದ್ಧವಾಯಿತು. ಆರಂಭದಲ್ಲಿ ಉಭಯ ಸೈನಿಕರು ಧೈರ್ಯ ಹಾಗೂ ಸಾಹಸದಿಂದ ಹೋರಾಡಿ ರಣಾಂಗಣದಲ್ಲಿ ಧೃಢವಾಗಿ ನಿಂತರು. ಆದರೆ, ಸ್ವಲ್ಪ ಸಮಯದ ನಂತರ, ಸೀಸ್ತಾನದ ರಾಜನಾದ ಅಬುಲ ಫಜಲನ

ಧೈರ್ಯ ಹಾಗೂ ಸಾಹಸದಿಂದ ಸಂಜ್ರೂ ಬೆಹರಾಮನ ಸೈನ್ಯವು ಇರಸಾಲನನ ಸೈನ್ಯದ ಮೇಲೆ ಪ್ರಭುತ್ವ ಪಡೆಯಲಾರಂಭಿಸಿತು. ಶತ್ರುಗಳು ರಣಭೂಮಿಯಿಂದ ಹಿಂದೆ ಸರಿದರು. ಅರ್‌ಸಲಾನ್‌ನು ಸೋಲನ್ನು ಅನುಭವಿಸಿ ಹಿಂದೂಸ್ಥಾನದ ಕಡೆಗೆ ಓಡಿದನು. ಸುಲ್ತಾನ 'ಸಂಜರ'ನು ಗೆದ್ದವನಂತೆ ಘಜನಿ ಪ್ರವೇಶಿಸಿದನು. ಸಂಜರನು ೪೦ ದಿನ ಘಜನಿಯಲ್ಲಿಯೇ ವಾಸವಾಗಿದ್ದು ಅಲ್ಲಿಯ ರಾಜ್ಯಭಾರವನ್ನು ಬೆಹರಾಮನಿಗೆ ಒಪ್ಪಿಸಿ ತಾನು ಸ್ವತಃ ಖರಾಸ್ಥಾನಕ್ಕೆ ಮರಳಿದನು.

ಅರ್‌ಸಲಾನ್‌ನು ಸಂಜರನು ಮರಳಿದ ಸಮಾಚಾರವನ್ನು ಕೇಳಿದ ಮೇಲೆ, ಆತನು ಹಿಂದೂಸ್ಥಾನಿಗಳ ಒಂದು ಸೈನ್ಯವನ್ನು ಸಜ್ಜುಗೊಳಿಸಿ ಘಜನಿಯ ಮೇಲೆ ದಾಳಿ ಮಾಡಿದನು. ಬೆಹರಾಮನಿಗೆ ಅರ್‌ಸಲಾನ್‌ನ್ನು ಎದುರಿಸಲಾಗಲಿಲ್ಲ. 'ಬಾಮಿಯಾನ' *(ಈ ಸ್ಥಾನವು ಕಾಬೂಲ ನಗರದ ಉತ್ತರ ಪಶ್ಚಿಮದಲ್ಲಿ ಸುಮಾರು ಮೂರು ಮೈಲಿಗಳ ಅಂತರದಲ್ಲಿದೆ.) ಕೋಟೆಯಲ್ಲಿ ಆಶ್ರಯ ಪಡೆದನು. ಬೆಹರಾಮನನ್ನು ಅಂತಿಮವಾಗಿ ಕೊಲ್ಲುವ, ಹಾಗೂ ಘಜನಿಯ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಅರ್‌ಸಲಾನ್ ಬಯಸಿದನು. ಇದ್ದಕ್ಕಿದಂತೆ ಸುಲ್ತಾನ ಸಂಜರನು ದೊಡ್ಡ ಸೈನ್ಯದೊಂದಿಗೆ ಈತನ ಮೇಲೆ ದಾಳಿ ಮಾಡಿದನು. ಆ ಸೈನ್ಯವನ್ನು ಕಂಡು ಅರ್‌ಸಲಾನ್‌ನು ಹೆದರಿ, ಧೈರ್ಯಗುಂದಿ ಅಫಘಾನರ ಕಡೆಗೆ ಓಡಿಹೋದನು. ಸಂಜರನ ಸೈನಿಕರು ಈತನನ್ನು ಹಿಮ್ಮೆಟ್ಟಿದರು ಮತ್ತು ಬಂದಿಮಾಡಿ ಬೆಹರಾಮನಿಗೆ ಒಪ್ಪಿಸಿದರು. ಬೆಹರಾಮನು ಕೂಡಲೇ ಈ ದುಷ್ಕೃತ್ಯ ಮಾಡುವವನನ್ನು ಖಡ್ಗದಿಂದ ವಧಿಸಿದನು. ಅರ್‌ಸಲಾನ್‌ನು ಮೂರು ವರ್ಷ ರಾಜ್ಯ ಮಾಡಿ ೨೭ ನೆಯ ವಯಸ್ಸಿನಲ್ಲಿ ಮೃತಪಟ್ಟನು.

'ತಬಖಾತಿನಾಸೀರಿ' ಯಲ್ಲಿ ಬರೆದುದೇನೆಂದರೆ ಮೂರು ವರ್ಷ ಅರ್‌ಸಲಾನ್‌ನ ಆಡಳಿತದ ಅವಧಿಯು ನೈಸರ್ಗಿಕ ವಿಪತ್ತುಗಳಿಂದ ಕೂಡಿತ್ತು. ಘಜನಿಯ ಪರಿಸ್ಥಿತಿ ಹಾಳಾಯಿತು. ಅರ್‌ಸಲಾನ್‌ನ ಅವಧಿಯಲ್ಲಿ ಗುಡುಗು, ಮಿಂಚು, ಸಿಡಿಲು ಮತ್ತು ಅಗ್ನಿವರ್ಷವಾಗಿ ಘಜನಿಯ ಬಹಳಷ್ಟು ಮನೆಗಳು ಹಾಗೂ ಪೇಟೆಗಳು ನಶಿಸಿಹೋದವು.

ಮಾಜುದ್‌ದೌಲಾ ಬೆಹರಾಮ್ ಶಾಹ ಬಿನ್ ಮಸೂದ:

ಬೆಹರಾಮ್‌ಶಾಹನು ಬಹಳ ವೈಭವಯುತ ಮತ್ತು ಪ್ರಭಾವಿ ರಾಜನಾಗಿದ್ದನು. ಮೇಧಾವಿಗಳು, ಪಂಡಿತರು ಮತ್ತು ಫಕೀರರ ಸಂಗವನ್ನು ಬಯಸುತ್ತಿದ್ದನು, ಅವರ ಒಳ್ಳೆಯ ಗುಣ, ಜ್ಞಾನ ಹಾಗೂ ಕಲೆಗಳ ಬಗ್ಗೆ ಬಹಳ ಗೌರವ ಸೂಚಿಸುತ್ತಿದ್ದನು. ಹೆಸರಾಂತ ಲೇಖಕರು ಬೆಹರಾಮನ ಬಗ್ಗೆ ಬರೆದ ನಿಬಂಧಗಳು ಬೆಹರಾಮನ ಮೇಧಾವಿಗಳ ಹಾಗೂ ಪಂಡಿತರ ಸ್ನೇಹದ ಸಾಕ್ಷಿಯಾಗಿವೆ. 'ಹಜ್ರತ ಶೇಖ ನಿಜಾಮೀಯ ಶೇಹರಾ ಆಫಾಖ್ದ ಮಷನವಿ ಫಖ್ರನ ಅಲಾ ಸರಾರ' ಇದು ಬೆಹರಾಮ ಬಾದಶಹಾನಿಗೆ ಸಂಬಂಧಿಸಿದೆ. ಈತನ ಕಾಲಾವಧಿಯ ಒಬ್ಬ ಪ್ರಸಿದ್ಧ ಕವಿ ಸಯ್ಯದ ಹುಸೇನ

ಘಜನವಿಯು ಬೆಹರಾಮನ ಸ್ತುತಿಯಲ್ಲಿ ಒಂದು 'ಖಸೀದಾ' (ಒಂದು ಬಗೆಯ ಕಾವ್ಯ) ಬರೆದಿದ್ದಾನೆ. ಅದರ ಪಲ್ಲವಿ ಹೀಗಿದೆ;

"ಏಳನೇ ಆಕಾಶದಿಂದ ಬಂದಿತು ಈ ಸುದ್ದಿ ಬೆಹರಾಮ್‌ಶಾಹ ಈ ಜಗದ ಒಡೆಯ".

ಈ ಕಸೀದಾವನ್ನು ಸಯ್ಯದ ಹುಸೇನ ಘಜನವಿಯು ಸುಲ್ತಾನ ಸಂಜರನ ಸೇವೆಯಲ್ಲಿ ಪ್ರಸ್ತುತ ಪಡಿಸಿದನು.

ಕಲೀಲಾ ವದಿಮ್ನಾದ ಅನುವಾದ:

ಪ್ರಖ್ಯಾತ ಹಿಂದಿ (ಭಾರತೀಯ) ಪುಸ್ತಕ ಕಲೀಲಾ ವದಿಮ್ನಾದ ಅನುವಾದವು ಫಾರಸೀ ಭಾಷೆಯಲ್ಲಿ ಮೊದಲಿಗೆ ಬೆಹರಾಮ್‌ನ ಕಾಲದಲ್ಲಿಯೇ ಆಯಿತು ಮತ್ತು ಅದು ಬೆಹರಾಮ್‌ನ ಹೆಸರಿನಲ್ಲಿ ಇದೆ. ಹಿಂದೂಸ್ಥಾನದ ರಾಜನು ಈ ಪುಸ್ತಕವನ್ನು ಮತ್ತು 'ಬಸ್ಸಾತ ಶತರಂಜ' ಹಾಗೂ ಈತನ 'ಮೇಹರೇ ನೌ ಶೇರವಾನ ಆದೀಲ್' ಬೆಹರಾಮನ ಸೇವೆಯಲ್ಲಿ ಕಾಣಿಕೆಯಾಗಿ ಅರ್ಪಿಸಿದನೆಂದು, ಕಲೀಲಾ ವದಿಮ್ನಾದಿ ಪುಸ್ತಕದ ಬಗ್ಗೆ ಹೇಳುತ್ತಾರೆ. ಹಕೀಂ ಬಜ್ರ್ ಜಮ್ಹುರ್ ಬಹಳ ಪರಿಶ್ರಮ ಪಟ್ಟು ಈ ಪುಸ್ತಕವನ್ನು ಸಂಸ್ಕೃತ ಭಾಷೆಯಿಂದ ಫಾರಸೀ ಭಾಷೆಗೆ ಅನುವಾದಿಸಿದ್ದಾನೆ. ಇದಲ್ಲದೆ ಬಿಸಾತೆ ಶತರಂಜ್‌ದ ಮೇಲೆ ದಾಳಗಳನ್ನು ಕೂಡಿಸುವ ಮತ್ತು ಅವುಗಳ ಚಲನವಲನಗಳ ಮೇಲೆ ಹೆಚ್ಚಿನ ಗಮನ ಹರಿಸಿ ಚದುರಂಗವಾಡುವ ರೀತಿಯನ್ನು ತಿಳಿದುಕೊಂಡನು. ಚದುರಂಗದಿಂದ ನಿಜವಾದ ಆಟದ ರೀತಿಯನ್ನು ಕಲಿತು, ಹಿಂದೂಸ್ತಾನದ ಪ್ರತಿನಿಧಿಗಳೊಂದಿಗೆ ಆಟವಾಡಿದನು. ಮೊದಲನೆಯ ಸಲ ಆಟವು ಸಮವಾಗಿತ್ತು, ಆದರೆ ಎರಡನೆಯ ಬಾರಿ ಬಜರ ಜಮೀಹರ ಹಿಂದೂಸ್ಥಾನದ ಪ್ರತಿನಿಧಿಗಳನ್ನು ಸೋಲಿಸಿದನು. ಬಜರ ಜಮೀಹರನು ಈ ಆಟದ ಪ್ರತಿಯಾಗಿ 'ಚೌಸರ' ಆಟವನ್ನು ಹೊಸದಾಗಿ ತಿಳಿದುಕೊಂಡನು. ನೌ ಶೇರವಾನ ಕಡೆಯಿಂದ ಹಿಂದೂಸ್ತಾದನ ರಾಜನ ಸೇವೆಯಲ್ಲಿ ಕಾಣಿಕೆಯಾಗಿ ಸಲ್ಲಿಸಿದನು. ಹಿಂದೂಸ್ತಾನದ ಪ್ರಜೆಗಳು ಈ ಆಟವನ್ನು ನಿಜವಾಗಿ ತಿಳಿದಿರಲಿಲ್ಲ. ಕೊನೆಯಲ್ಲಿ ಅನಿವಾರ್ಯವಾಗಿ ಹಿಂದುಸ್ತಾನದ ಮೇಧಾವಿಗಳು ಅಜ್ಮೀ ಪ್ರತಿನಿಧಿಯಿಂದ ಇದರ ಬಗ್ಗೆ ಮಾಹಿತಿಯನ್ನು ಪಡೆದರು.

ಚದುರಂಗ ಹಾಗೂ ಚೌಸರ ಎರಡರ ಸತ್ಯತ್ವದ ಬಗ್ಗೆ ವಿಚಾರಮಾಡಿದರೆ, ಹಿಂದೂಸ್ಥಾನಿಗಳ ಹಾಗೂ ಅಜ್ಮೀಯವರ ನಂಬಿಕೆಯ ಬಗ್ಗೆ ಮಾಹಿತಿ ದೊರೆಯುತ್ತದೆ ಎಂದು ಇತಿಹಾಸಕಾರರು ಹೇಳುತ್ತಾರೆ.

ಚದುರಂಗದ ಹುಟ್ಟಿನಿಂದ ಹಿಂದುಸ್ಥಾನಿಗಳ ಉದ್ದೇಶವು ಜಗತ್ತಿನ ಸಕಲ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳು ಮನುಷ್ಯನ ಮೇಲೆ ನಿರ್ಭರವಾಗಿವೆ. ಇಲ್ಲಿಯ ಸರ್ವ ಕಾರ್ಯಗಳು ಮನುಷ್ಯ ಪ್ರಯತ್ನದಿಂದ ಸಾಗುತ್ತವೆ. ಪ್ರಾಪಂಚಿಕ ಕಾರ್ಯಗಳ

ಕುರಿತು ದೈವ ಅಥವಾ ದೇವರ ಆದೇಶಕ್ಕೆ ಯಾವ ರೀತಿಯ ಮಧ್ಯಸ್ಥಿಕೆಯ ಅವಶ್ಯಕತೆ ಇಲ್ಲ. ವಿವಿಧ ವಿಷಯಗಳು, ಉದಾಹರಣೆಗಾಗಿ ಜ್ಞಾನ ಪ್ರಾಪ್ತಿ, ಪ್ರಗತಿ ಇತ್ಯಾದಿಗಳಿಗೆ ಕೇವಲ ಮನುಷ್ಯನ ಪ್ರಯತ್ನದಂತೆ ಫಲ ಸಿಗುತ್ತದೆ. ಮನುಷ್ಯನ ಪ್ರಾಪಂಚಿಕ ಜೀವನದಲ್ಲಿ ಆಕಾಶ ಮತ್ತು ಗ್ರಹಗಳ ಚಲನದಿಂದ ಯಾವ ರೀತಿಯ ಪರಿಣಾಮಗಳೂ ಆಗವು, ಏಕೆಂದರೆ ಹಿಂದುಸ್ಥಾನಿಗಳ ವಿಶ್ವಾಸವು ಅಜ್ಮೀಗಳ ನಂಬಿಕೆಗಳಿಗೆ ವಿರುದ್ಧವಾಗಿವೆ, ಅದಕ್ಕಾಗಿ ಚೇರಸ್‌ನ್ನು ಕಂಡುಹಿಡಿದನು. ಹಿಂದುಸ್ತಾನದ ಪಂಡಿತರಿಗೆ ಕಳುಹಿಸಿಕೊಟ್ಟನು. ಚೌರಸ್ ಆಡುವ ಪದ್ಧತಿಯಲ್ಲಿ ಇದರ ಸತ್ಯತ್ವದೆಡೆಗೆ ಸೂಚನೆಯಾಗುತ್ತದೆ. ಮನುಷ್ಯನ ವೈಯುಕ್ತಿಕ ಪ್ರಯತ್ನಕ್ಕೂ ಹಾಗು ಪ್ರಾಪಂಚಿಕ ವಿಷಯಗಳ ಸಂಬಂಧಕ್ಕೂ ಅನ್ಯ ರೀತಿಯ ಯಾವುದೇ ಮಧ್ಯಸ್ಥಿಕೆಯಿಲ್ಲ. ಆದರೆ ಪ್ರಪಂಚದ ಪ್ರತಿಯೊಂದು ಕೆಲಸವು ಪರಮಾತ್ಮನ ಪ್ರೇರಣೆಯನ್ನವಲಂಬಿಸಿದೆ. ಪ್ರತಿ ಕೆಲಸದಲ್ಲಿಯೂ ಯುಕ್ತಿ ಹಾಗು ದೈವಗಳ ಇರುವಿಕೆಯಿಂದ ಕೆಲಸವು ಕೈಗೂಡುತ್ತದೆ. ಇಲ್ಲದಿದ್ದರೆ ಮನುಷ್ಯನಿಗೆ ತನ್ನ ಪ್ರಯತ್ನದಲ್ಲಿ ಸಫಲ ಕಾಣುವುದಿಲ್ಲ. ನರು ತಟ್ಟೆಯು ಆಕಾಶವನ್ನು ಮತ್ತು ಲೆತ್ತಗಳು ನಕ್ಷತ್ರಗಳನ್ನು ಹೋಲುತ್ತವೆ. ಆಕಾಶ ಮತ್ತು ಅದರಲ್ಲಿರುವ ಗ್ರಹಗಳ ಕಡೆಗೆ ಸೂಚಿಸಲಾಗುತ್ತದೆ. ಇದರ ಸಾರಾಂಶವೆಂದರೆ ಮನುಷ್ಯನ ಹಣೆಬರಹದ ಪ್ರಕಾರ, ಅದೇ ರೀತಿಯಲ್ಲಿ ಮನುಷ್ಯನು ಪ್ರಯತ್ನಿಸಿ ಲೆತ್ತಗಳನ್ನಾಡುತ್ತಾನೆ.

ಬಜರ ಜಮೀಹರನು ಅನುವಾದಿಸಿದ ಕಲೀಯಲಾ ಹಾಗೂ ದಮನ ಪುಸ್ತಕವು ಒಂದು ಕಾಲದವರೆಗೆ ಕೇವಲ ಅಜ್ಮೀಯವರಲ್ಲಿ ಸ್ವೀಕೃತವಾಗಿತ್ತು, ಆದರೆ ಸಮಯವು ಕಳೆದಂತೆ ಇದನ್ನು ಓದುವವರ ಸಂಖ್ಯೆ ಹೆಚ್ಚಿತು. ಹಾರೋನ ರಷೀದರ ಖಲೀಫಾ ಅವಧಿಯಲ್ಲಿ ಇಬ್ನೂಲ್ನ ಮಖಖ್ಖನು ಫಾರಸಿ ಭಾಷೆಯಿಂದ ಅರಬೀ ಭಾಷೆಯಲ್ಲಿ ಇದನ್ನು ಅನುವಾದ ಮಾಡಿದನು. ಇದಾದ ಮೇಲೆ ಬೆಹರಾಂ ಶಹಾನ ಅವಧಿಯಲ್ಲಿ ಅರಬೀ ಭಾಷೆಯ ಅನುವಾದಕ್ಕೆ ಫಾರಸೀ ಭಾಷೆಯ ಉಡುಪನ್ನು ತೊಡಿಸಲಾಯಿತು. ಸುಲ್ತಾನ ಹುಸೇನ ಮಜರನ ಕಾಲದಲ್ಲಿ ಮುಲ್ಲಾ ಹುಸೇನ ವಾಜನು ಬೆಹರಾಮಿ ಅವಧಿಯಲ್ಲಿ ಕಷ್ಟಕರವಾದ ವಾಕ್ಯಗಳನ್ನು ಸಾಮಾನ್ಯ, ಸರಳ ಮತ್ತು ಸುಗಮವಾದ ಫಾರಸೀ ಭಾಷೆಯಲ್ಲಿ ಬರೆದನು. ಅಲ್ಲಲ್ಲಿ ಬರೆಯಲಾದ ಕಾವ್ಯ ಶ್ಲೋಕಗಳನ್ನು ಬಿಟ್ಟು ಕಾಲಕ್ಕನುಗುಣವಾಗಿ ಅವುಗಳನ್ನು ರೂಪಿಸಿದನು. ಈಗ ಅವು 'ಅನ್ವಾರ ಸಹೇಲಿ'ಯ ಹೆಸರಿನಿಂದ ಪ್ರಖ್ಯಾತವಿದೆ.

ಮೊಹ್ಮಮದ ಭಾಹೀಲಂನ ವಿರುದ್ಧ ಯುದ್ಧ:

ತನ್ನ ರಾಜ್ಯಾವಧಿಯಲ್ಲಿ ಹಲವಾರು ಸಲ ಹಿಂದುಸ್ತಾನದ ಮೇಲೆ ದಾಳಿ ಮಾಡಿದನು. ಪ್ರತಿ ಸಾರಿ ಹಿಂದುಸ್ಥಾನಿ ವಿದ್ರೋಹಿಗಳನ್ನು ಸೋಲಿಸಿದನು. ಅವರ ಕೃತ್ಯಗಳಿಗೆ ತಕ್ಕ ಶಿಕ್ಷೆ ನೀಡಿದನು. ಬೆಹರಾಮನು ಹಿಜರಿ ಶಕೆ ೫೧೨ ರಲ್ಲಿ ಹಿಂದುಸ್ತಾನದ ಮೇಲೆ ಆಕ್ರಮಣ ಮಾಡಿದನು. ಈತನು ಮೊಹ್ಮದ ಬಾಹೀಯಲಂನನ್ನು ರಂಜಾನ್‌ನ

ತಿಂಗಳ ೨೭ನೆಯ ದಿನದಂದು ಬಂಧಿಸಿದನು. ಮೊಹ್ಮಮದ ಬಾಹೀಯಲಮನು ಸುಲ್ತಾನ ಅರ್ಸಲಾನ್ ಶಾಹನಿಂದ ನಿಯುಕ್ತನಾದ ಹಿಂದು ಸೈನ್ಯದ ಮುಖ್ಯಾಧಿಕಾರಿಯಾಗಿದ್ದನು. ಅರ್ಸಲಾನ್‌ನ ಮರಣದ ನಂತರ ಘಜನವಿ ರಾಜ್ಯದ ಅಧೀನತೆ ತೊರೆದು ಎದುರಿಸಲು ಸಿದ್ಧನಾದನು. ಕೆಲವು ದಿನಗಳನಂತರ ಬೆಹರಾಮನು ಮೊಹಮದ ಬಾಹೀಯಲಂನ ತಪ್ಪನ್ನು ಕ್ಷಮಿಸಿ ಪುನಃ ಹಿಂದಿ ಸೈನ್ಯದ ಮೇಲಾಧಿಕಾರಿಯನ್ನಾಗಿ ನಿಯುಕ್ತಿ ಮಾಡಿ, ಮರಳಿ ಘಜನಿಗೆ ಬಂದನು. ಬಾಹಿಯಲಂನು ಬೆಹರಾಮ ಶಹಾನ ಈ ಉಪಕಾರದ ಕೃತಿಯನ್ನು ಸ್ಮರಿಸದೆ ಆತನು ಹಿಂದಿರುಗಿದ ನಂತರ *('ನಾಗೂರ' ಈ ಸ್ಥಳವು ಜೋದಪುರ ರಾಜ್ಯದಲ್ಲಿದೆ.) ಕೋಟೆಯನ್ನು ನಿರ್ಮಾಣ ಮಾಡಿ ತನ್ನ ಹೆಂಡತಿ ಮಕ್ಕಳನ್ನು ಈ ಕೋಟೆಯಲ್ಲಿ ಸುರಕ್ಷಿತವಾಗಿ ಬಿಟ್ಟು ಸ್ವತಃ ತಾನು ಅರಬೀ, ಅಜಮೀ, ಅಫಘಾನಿ ಹಾಗು ಖಿಲ್ಜಿ ಸೈನಿಕರ ಒಂದು ದೊಡ್ಡ ಸೈನ್ಯವನ್ನು ಒಗ್ಗೂಡಿಸಿ, ಹಿಂದುಸ್ತಾನದ ವಿದ್ರೋಹಿಗಳನ್ನು ಸದೆಬಡೆಯಲು ದಾಳಿ ಮಾಡಿದನು. ಬಾಹೀಯಲಂಗೆ ಸಂಪೂರ್ಣವಾಗಿ ಗೆಲುವಾಯಿತು. ಇದರ ಪರಿಣಾಮದಿಂದ ಬಾಹೀಯಲಂನ ಗರ್ವವು ಹೆಚ್ಚಾಯಿತು, ಅಹಂಕಾರದ ಮನಸ್ಥಿತಿಯಲ್ಲಿ ರಾಜ್ಯವನ್ನು ವಿಸ್ತರಿಸುವ ಮತ್ತು ಅದನ್ನು ಸುಭದ್ರಗೊಳಿಸುವ ಕಾರ್ಯವನ್ನು ಆರಂಭಿಸಿದನು. ಬೆಹರಾಂ ಶಹಾನು ಬಾಹೀಯಲಂನ ವಿಶ್ವಾಸಘಾತುಕತನದ ಸಮಾಚಾರವನ್ನು ಕೇಳಿದ ಕೂಡಲೇ, ಘಜನಿಯಿಂದ ಹಿಂದುಸ್ತಾನಕ್ಕೆ ಬಂದನು. ಬಾಹೀಯಲಂನ ವಿರುದ್ಧ ಯುದ್ಧ ಮಾಡಲು ನಿರ್ಧರಿಸಿ ರಾಜ್ಯದ ವಿವಿಧ ಭಾಗಗಳಲ್ಲಿ ಅಮೀರರಾಗಿದ್ದ ತನ್ನ ಹತ್ತು ಮಕ್ಕಳನ್ನು ಜೊತೆಗೆ ಕರೆದುಕೊಂಡು ತನಗೆ ಉಪಕಾರ ಮಾಡಿದ ಬೆಹರಾಮನ ಶಹಾನ ವಿರುದ್ಧ ಕಾದಾಡಲು ಮುಂದಾದನು. ಮುಲ್ತಾನದ ಸಮೀಪ ಎರಡು ಸೈನ್ಯಗಳು ಎದುರಾಗಿ ಯುದ್ಧವು ಆರಂಭವಾಯಿತು. ಇಬ್ಬರ ಮಧ್ಯೆ ಘನ ಘೋರ ಯುದ್ಧವಾಯಿತು. ಈ ಯುದ್ಧದ ಉಪಮೆ ಇತಿಹಾಸಗಳಲ್ಲಿ ಸಿಗುವುದು ಕಷ್ಟ. ಬಾಹೀಯಲಂನ ಸೈನಿಕರು ಶೌರ್ಯ ಹಾಗೂ ಧೈರ್ಯದಿಂದ ಕಾದಾಡಿದರು. ಆದರೂ ಕೂಡ ಸೈನ್ಯದ ಸರದಾರನ ತಲೆಯ ಮೇಲೆ ಸಾವಿನ ಕಾರ್ಮೋಡಗಳು ಕವಿದವು, ಆತನ ದುಷ್ಕೃತ್ಯಗಳಿಗೆ ಶಿಕ್ಷಿಸಲೇಬೇಕಾಗಿತ್ತು. ಅದಕ್ಕಾಗಿ ಘಜನಿ ಸೈನ್ಯದ ದಾಳಿಯ ಭರದಿಂದ ಬಾಹೀಯಲಂನ ಸೈನ್ಯವು ರಣಾಂಗಣದಿಂದ ಅನಿವಾರ್ಯವಾಗಿ ಓಡಬೇಕಾಯಿತು. ಬಾಹೀಯಲಂನು ತನ್ನ ಸೈನ್ಯದ ಈ ಸ್ಥಿತಿಯನ್ನು ಕಂಡು, ತನ್ನ ಎರಡು ಮಕ್ಕಳು ಮತ್ತು ಕೆಲವು ಅಧಿಕಾರಿಗಳೊಂದಿಗೆ ರಣಾಂಗಣದಿಂದ ಓಡಿಹೋದನು. ಈ ರೀತಿ ಓಡುವಾಗ ಕೆಸರಿನಲ್ಲಿ ಸಿಕ್ಕಿಬಿದ್ದನು. ಆತನ ಕುದುರೆಯು ಕೂಡ ಸತ್ತುಹೋಯಿತು. ಬೆಹರಾಂ ಶಹಾನು ಬಾಹೀಯಲಂನೊಂದಿಗೆ ಯುದ್ಧವಾದ ನಂತರ ಹುಸೇನ ಬಿನ್ ಇಬ್ರಾಹಿಮ ಅಲ್ವಿಗೆ ಹಿಂದು ಸೈನ್ಯದ ಮೇಲಾಧಿಕಾರಿಯನ್ನಾಗಿ ನಿಯಮಿಸಿ ಘಜನಿಗೆ ಮರಳಿದನು.

ಸೈಫುದ್ದೀನ್ ಸೂರಿಯ ದಾಳಿ:

ಬೆಹರಾಮ ಶಹಾನು ತನ್ನ ಅಂತಿಮ ದಿನಗಳಲ್ಲಿ ತನ್ನ ಅಳಿಯನಾದ ಕುತುಬುದ್ದೀನ ಸೂರಿಯನ್ನು ಕೊಲೆ ಮಾಡಿಸಿದನು. ಕುತುಬುದ್ದೀನ ಸೂರಿಯ ಸಹೋದರ ಸೈಫುದ್ದೀನ್ ಸೂರಿ ತನ್ನ ಸಹೋದರನ ಮರಣದ ಪ್ರತೀಕಾರವನ್ನು ಮಾಡಲು ಘಜನಿಯ ಮೇಲೆ ದಾಳಿ ಮಾಡಿದನು. ಬೆಹರಾಮ ಶಹಾನು ಸೈಫುದ್ದೀನ್ ಸೂರಿಯನ್ನು ಎದುರಿಸದೆ ಘಜನಿಯಿಂದ ಓಡಿ ಕರಾಮನಿಗೆ ಹೋದನು. ಈ ಕರಾಮಾನವು ಇತಿಹಾಸದಲ್ಲಿ ಉಲ್ಲೇಖಿಸಲಾಗಿದ್ದ ಇರಾನದ ಸ್ಥಳವಾದ ಕರಾಮಾನ ಅಲ್ಲ. ಇದು ಹಿಂದುಸ್ತಾನ ಮತ್ತು ಘಜನಿಯ ಮಧ್ಯದಲ್ಲಿರುವ ಒಂದು ಗುಡ್ಡಗಾಡು ಪ್ರಾಂತ್ಯ. ಇದನ್ನು ಅಫಘಾನಿಗಳು ಶತ್ರುಗಳ ಆಕ್ರಮಣದಿಂದ ರಕ್ಷಿತವಾದ ಸ್ಥಳವೆಂದು ತಮ್ಮ ನಿವಾಸ ಸ್ಥಳ ಮಾಡಿಕೊಂಡರು. ಸೈಫುದ್ದೀನ್‌ನು ಸಮಯ ಸಾಧಿಸಿ ಘಜನಿಯ ಮೇಲೆ ದಾಳಿ ಮಾಡಿದನು. ನಂತರ ಘಜನಿಯ ಜನರ ಮೇಲೆ ವಿಶ್ವಾಸ ಮಾಡಿ, ಘಜನಿಯಲ್ಲಿಯೇ ವಾಸಿಸಿದನು. ಆದರೆ ತನ್ನ ಸಹೋದರ ಅಲ್ಲಾವುದ್ದೀನನನ್ನು ಸಮಸ್ತ ಗೋರಿ ಅಮೀರರು ಮತ್ತು ಸೈನಿಕ ಸರದಾರರೊಂದಿಗೆ ತನ್ನ ದೇಶಕ್ಕೆ ಮರಳಿ ಕಳುಹಿಸಿದನು. ಸೈಫುದ್ದೀನ್‌ನು ಘಜನಿಯಲ್ಲಿ ವಾಸಿಸುವ ಅವಧಿಯಲ್ಲಿ ಘಜನಿಯ ಜನರೊಂದಿಗೆ ಸದ್ವರ್ತನೆಯಿಂದ ನಡೆದುಕೊಂಡನು. ಏಕೆಂದರೆ ಗೋರಿಗೆ ಬೇರೆ ಯಾವ ಸಹಾಯ ಹಾಗೂ ಸಹಕಾರವಿರಲಿಲ್ಲ. ಅದಕ್ಕಾಗಿ ಘಜನಿಗಳ ಮೇಲೆ ಯಾವ ರೀತಿಯ ದೌರ್ಜನ್ಯವನ್ನು ಮಾಡುವುದು ಯೋಗ್ಯವಲ್ಲವೆಂದು ತಿಳಿದನು. ಘಜನಿಯ ನಿವಾಸಿಗಳು ಸೈಫುದ್ದೀನನ ನಡತೆಯಿಂದ ಪರಿಚಿತರಾಗಿ ಮೇಲ್ನೋಟಕ್ಕೆ ಸೈಫುದ್ದೀನ್‌ನ ಅಧೀನರೆಂದು ಪ್ರಕಟಿಸಿದರು. ಆಂತರಿಕವಾಗಿ ಬೆಹರಾಮ ಶಹಾನ ಸ್ವಾಮಿಭಕ್ತರಾಗಿದ್ದು, ಆತನೊಂದಿಗೆ ರಹಸ್ಯವಾಗಿ ಪತ್ರ ವ್ಯವಹಾರ ಮಾಡುತ್ತಿದ್ದರು. ಘಜನಿಯ ನಿವಾಸಿಗಳು ತಮ್ಮ ಈ ರಾಜಕೀಯ ತಂತ್ರವನ್ನು ಅತ್ಯಂತ ದೀರ್ಘ ಕಾಲ ನಡೆಸಿದರು, ಚಳಿಗಾಲ ಆರಂಭವಾಯಿತು ಹಾಗೂ ಗೋರಸ್ಥಾನದ ಎಲ್ಲಾ ದಾರಿಗಳು ಹಿಮದಿಂದ ಮುಚ್ಚಿಹೋಗಿದ್ದವು. ಬೆಹರಾಮ ಶಹಾನು ಇದೇ ಸಮಯಕ್ಕಾಗಿ ಕಾದಿದ್ದನು, ಕೂಡಲೇ ಈತನು ಅಫಘಾನಿ, ಖಿಲ್ಜಿ ಹಾಗು ಇತರ ಮರುಭೂಮಿಯ ಜನರ ಒಂದು ದೊಡ್ಡ ಸೈನ್ಯವನ್ನು ಸಂಘಟಿಸಿ ಘಜನಿಯ ಮೇಲೆ ದಾಳಿ ಮಾಡಿದನು. ಸೈಫುದ್ದೀನ್‌ನ ಮೇಲೆ ಘಜನಿ ಜನರ ವಿಶ್ವಾಸದ ಪ್ರಭಾವದಲ್ಲಿದ್ದು ಅವರನ್ನು ನಂಬಿಕೊಂಡಿದ್ದನು. ಹೀಗಾಗಿ ಬೆಹರಾಮ ಶಹನ ದಾಳಿಯ ವ಼ಿಷಯ ತಿಳಿಯುತ್ತಲೇ ಘಜನಿಯ ಜನರ ಸಲಹೆ ಕೇಳಿದನು. ಘಜನಿಯ ಜನರು ತಮ್ಮ ಉದ್ದೇಶಕ್ಕನುಗುಣವಾಗಿ ಸಲಹೆ ನೀಡಿದರು. ರಾಜ್ಯದ ಮೇಲೆ ದಾಳಿ ಮಾಡದೆ ಹಿಂದಿರುಗುವ ಬದಲಾಗಿ ಬೆಹರಾಮ ಶಹನ ವಿರುದ್ಧವಾಗಿ ಯುದ್ಧ ಮಾಡಲು ಪ್ರೋತ್ಸಾಹಿಸಿದರು. ಸೈಫುದ್ದೀನ್ ಇವರ ಸಮೀಪಕ್ಕೆ ಬಂದನು. ಘಜನವಿಗಳ ಒಂದು ಸೈನ್ಯವನ್ನು ತನ್ನ ಜೊತೆಗೆ ತೆಗೆದುಕೊಂಡು ನಗರದಿಂದ ಹೊರಗೆ ಹೊರಟು ಬೆಹರಾಮ ಶಹಾನ ಎದುರಿಗೆ

ಬಂದು ನಿಂತನು. ಯುದ್ಧವು ಇನ್ನೂ ಆರಂಭವಾಗಿರಲಿಲ್ಲ, ಘಜನವಿಗಳು ಸೈಫುದ್ದೀನ್‌ನನ್ನು ಬಂಧಿಸಿ ಬೆಹರಾಮ ಶಹಾನೆದುರಿಗೆ ಹಾಜರು ಪಡಿಸಿದರು. ಬೆಹರಾಮ ಶಹಾನ ಆದೇಶದ ಮೇರೆಗೆ ಸೈಫುದ್ದೀನ್‌ನ ಮುಖಕ್ಕೆ ಕಪ್ಪು ಬಳಿದು ಒಂದು ಆಕಳ ಮೇಲೆ ಕೂಡಿಸಿ ನಗರದಲ್ಲೆಲ್ಲಾ ಮೆರವಣಿಗೆ ಮಾಡಿ ಕೇವಲ ಮಕ್ಕಳಲ್ಲದೆ ಹಿರಿಯರು ಕೂಡ ಈತನ ಹಿಂದೆ ಚಪ್ಪಾಳೆ ತಟ್ಟುತ್ತಾ, ನಿಂದನೆಯ ಕೂಗು ಕೂಗಿಕೊಂಡು ಸುತ್ತಾಡಿದರು. ಎಲ್ಲ ರೀತಿಯಿಂದ ಆತನನ್ನು ಅವಮಾನಿಸಿದರು. ಇದಾದ ನಂತರ ಬೆಹರಾಮನು ಸೈಫುದ್ದೀನ್‌ನನ್ನು ಕೊಂದನು ಮತ್ತು ಈತನ ರುಂಡವನ್ನು ದೇಹದಿಂದ ಬೇರ್ಪಡಿಸಿ ಸುಲ್ತಾನ ಸಂಜರನ ಸೇವೆಯಲ್ಲಿ ಕಳುಹಿಸಿದನು. ಸೈಫುದ್ದೀನ್‌ನ ಮಂತ್ರಿಯಾದ ಮಜೀದ ಅಲಾವುದ್ದೀನನೊಂದಿಗೆ ಕೂಡ ಇದೇ ರೀತಿ ನಡೆದುಕೊಳ್ಳಲಾಯಿತು.

ಅಲ್ಲಾವುದ್ದೀನನೊಂದಿಗೆ ಕಾಳಗ:

ಯಾವಾಗ ಸೈಫುದ್ದೀನ್‌ನ ಸಹೋದರ ಅಲ್ಲಾವುದ್ದೀನ್‌ನು ತನ್ನ ಸಹೋದರನ ಪರಿಸ್ಥಿತಿಯ ಬಗ್ಗೆ ಕೇಳಿದಾಗ, ಆತ ಕೋಪೋದ್ರಿಕ್ತನಾದ. ಅದೇ ಕಳವಳದ ಪರಿಸ್ಥಿತಿಯಲ್ಲಿ ಆತನು ಒಂದು ದೊಡ್ಡ ಹಾಗು ಯುದ್ಧ ಯೋಗ್ಯ ಸೈನ್ಯವನ್ನು ತಯಾರಿಸಿ ಘಜನಿಯ ಮೇಲೆ ದಾಳಿ ಮಾಡಿದನು. ಬೆಹ್ರಾಮ್‌ಶಾಹ ಹಾಗೂ ಅಲ್ಲಾವುದ್ದೀನ್‌ರ ಮಧ್ಯೆ ಯುದ್ಧವಾಯಿತೊ ಇಲ್ಲವೊ? ಈ ಬಗ್ಗೆ ಎರಡು ಅಭಿಪ್ರಾಯಗಳು ಪ್ರಸಿದ್ಧವಾಗಿವೆ. ನಿಜವಾದ ಅಭಿಪ್ರಾಯವೆಂದರೆ ಯುದ್ಧದ ಅವಕಾಶವೇ ಸಿಗಲಿಲ್ಲ, ಏಕೆಂದರೆ ಅಲ್ಲಾವುದ್ದೀನ್ ಘಜನಿ ತಲುಪುವ ಮೊದಲೇ ಬೆಹರಾಂ ಶಹನು ಮೃತಪಟ್ಟಿದ್ದನು ಮತ್ತು ಆತನ ಮಗ ಖುಸ್ರು ಶಹಾ ಸಿಂಹಸಾನರೂಗಿದ್ದನು. – ಆದರೆ, ಸಾಮಾನ್ಯವಾಗಿ ಇತಿಹಾಸಕಾರರು ಬೆಹರಾಂ ಶಹಾ ಹಾಗು ಅಲ್ಲಾವುದ್ದೀನ್‌ನ ಮಧ್ಯೆ ಯುದ್ಧವಾಯಿತೆಂದು, ಆ ಯುದ್ಧದಲ್ಲಿ ಬೆಹರಾಂ ಶಹಾನಿಗೆ ಸೋಲಾಗಿ ಹಿಂದುಸ್ತಾನದ ಕಡೆ ಓಡಿಹೋದನೆನ್ನುತ್ತಾರೆ. ಈ ಸಮಸ್ತ ಕಥೆಯ ವಿವರವೆನೆಂದರೆ ಬೆಹರಾಂ ಶಹಾನು ಅಲ್ಲಾವುದ್ದೀನ್‌ನ ಬರುವಿಕೆ ವಿಷಯ ಕೇಳಿ ಒಬ್ಬ ದೂತನ ಜೊತೆಗೆ ಸಂದೇಶವನ್ನು ರವಾನಿಸಿದ್ದನು. 'ನೀನು ಮರುಳಿ ಗೋರಸ್ಥಾನಕ್ಕೆ ಹೋಗುವುದರಲ್ಲಿ ನಿನ್ನ ಕ್ಷೇಮವಿದೆ ಮತ್ತು ನಿನ್ನ ಉದ್ದೇಶವನ್ನು ಪೂರ್ಣ ಮಾಡಬೇಡ. ನಿನಗೆ ಘಜನವಿ ರಾಜ್ಯದ ವಿರುದ್ಧ ಹೋರಾಡಲು ಕಷ್ಟವಾಗುತ್ತದೆ. ಘಜನಿ ರಾಜರಲ್ಲಿ ಲಕ್ಷಗಟ್ಟಲೇ ಯುದ್ದಯೋಗ್ಯ ಯುವಕರು ಹಾಗು ಸಹಸ್ರಾರು ಸೈನೀಕರು ಶತ್ರುಗಳು ಹಾಗು ವಿದ್ರೋಹಿಗಳನ್ನು ನಾಶಮಾಡಲು ಸದಾ ಸಿದ್ಧರಿರುತ್ತಾರೆದು ಸಮಸ್ತ ಜಗತ್ತಿಗೆ ಗೋತ್ತುಂಟು. ನಿನ್ನ ಅಂತಿಮ ಪರಿಣಾಮದ ಬಗ್ಗೆ ವಿಚಾರಿಸು ಮತ್ತು ನನ್ನ ವಿರುದ್ಧ ಬರಬೇಡ. ನಿನ್ನ ಈ ದುರುದ್ದೇಶದ ಕಾರ್ಯದ ಫಲವಾಗಿ ಘೋರಿ ಪರಿವಾರದ ಹೆಸರನ್ನುಳಿಸಲು ಒಬ್ಬ ವ್ಯಕ್ತಿಯ ಉಳಿಯನು.

ಬೆಹರಾಮ ಶಹಾನ ಈ ಸಂದೇಶವನ್ನು ಕೇಳಿ ಆತನು ದೂತನಿಗೆ ಹೇಳಿದನು. ಬೆಹರಾಮ ಶಹಾನಿಗೆ ಹೋಗಿ ಹೇಳು ಯಾವ ವ್ಯವಹಾರವು ಆತನು ಒಬ್ಬ ರಾಜನ ಮಗನೊಂದಿಗೆ (ಸೈಫುದ್ದೀನ್) ಮಾಡಿದನೊ, ಸ್ವತಃ ತಾನು ಘಜನಿಯ ವಿನಾಶದ ಒಂದು ಉದಾಹರಣೆಯಿರುವನು. ಒಬ್ಬ ರಾಜನು ಇನ್ನೊಬ್ಬ ರಾಜನ ಮೇಲೆ ಆಕ್ರಮಿಸಿ ವಶಪಡಿಸಿಕೊಳ್ಳವುದು ಜಗತ್ತಿನಲ್ಲಿ ನಡೆಯುತ್ತಲೇ ಬಂದಿದೆ. ತನ್ನ ಶತ್ರುಗಳನ್ನು ಬಂದಿಮಾಡಿ ಅವರನ್ನು ಕೊಂದುಬಿಡುತ್ತಾನೆ. ಆದರೆ ಬೆಹರಾಂನು ತನ್ನ ಒಬ್ಬ ಕೀರಿಟದ ದಾವೆದಾರ (ಸೈಫುದ್ದೀನ್)ನೊಂದಿಗೆ ಯಾವ ಅಮಾನವೀಯ ಕೆಲಸ ಮಾಡಿದನೊ, ಅಂತಹ ಕೆಲಸವನ್ನು ಸ್ವಾಭೀಮಾನವುಳ್ಳ ರಾಜನು ವಶದಲ್ಲಿರುವ ವ್ಯಕ್ತಿಯೊಂದಿಗೆ ಬಹುಶಃ ಮಾಡುವನು. ಬೆಹರಾಂನಿಗೆ ತನ್ನ ದುಷ್ಕೃತ್ಯಕ್ಕಾಗಿ ಕಾಲವು ಅವಶ್ಯ ಪ್ರತಿಯಾಗಿ ಪ್ರತಿಕಾರ ಮಾಡುತ್ತದೆ. ನನ್ನ ಕೈಯಿಂದಲೇ ಆತನಿಗೆ ಶಿಕ್ಷೆಯಾಗುತ್ತದೆ. ನಿನ್ನ ಗರ್ವಿಷ್ಠ ರಾಜ (ಬೆಹರಾಂ)ನಿಗೆ ತನ್ನ ಆನೆಗಳ ಯಜಮಾನಿಕೆಯ ಮೇಲೆ ದುರಭಿಮಾನವಿದ್ದಲ್ಲಿ ನನಗೂ ಇದೆ. 'ಖರಮೀಲಿಯೋಂ'ಗೆ ನಾನು ಯಜಮಾನನು. (ಅನ್ಯರ ಸೈನ್ಯದಲ್ಲಿ ಎರಡು ಅತಿ ಶೂರ ಹಾಗು ಶಕ್ತಿಯುತ ಸಿಪಾಯಿಗಳಿದ್ದರು. ಅವರನ್ನು 'ಖರಮೀಲ' ಅನ್ನುತ್ತಾರೆ. ಈ ಸಿಪಾಯಿಗಳು ಅತಿ ನಿರ್ಭಯರಾಗಿದ್ದು ಮತ್ತು ಬುದ್ಧಿಹೀನರಿರುತ್ತಾರೆ. ಇವರು ಯಾವದರಿಂದಲೂ ಹೆದರುವವರಲ್ಲ. ತಮ್ಮ ಶಕ್ತಿಗಯಿಂದ ಆನೆಗಳನ್ನು ಕೂಡ ವಶಪಡಿಸಿಕೋಳ್ಳುತ್ತಿದ್ದರು. ಇವರಲ್ಲಿ ಹಿರಿಯನಿಗೆ 'ಖರಮೀಲ ಬೂಜ್ರಗ' ಅನ್ನುತ್ತಿದ್ದು ಹಾಗೂ ಸನ್ನವನಿಗೆ 'ಖರಮೀಲ ಕೋಚಕ್' ಅನ್ನುತ್ತಿದ್ದರು.

ಬೆಹರಾಂನ ದೂತನು ಯಾವಾಗ ಅಲ್ಲಾವುದ್ದೀನ್‌ನ ಉತ್ತರವನ್ನು ತೆಗೆದುಕೋಂಡು ಮರಳಿ ಬೆಹರಾಂನ ಹತ್ತಿರ ಬಂದನೊ, ಬೆಹರಾಂನ ಮೇಲೆ ಇದರ ಪರಿಣಾಮವೇನು ಕಂಡುಬರಲಿಲ್ಲ. ಆದರೆ, ಒಳಮನಸ್ಸಿನಲ್ಲಿ ಬಹಳ ವಿಹ್ವಲನಾದನು. ಈ ಸಂವಾದದ ನಂತರ ಯುದ್ಧದ ಪರಿಸ್ಥಿತಿಯುಂಟಾಯಿತು. ಎರಡೂ ಸೈನ್ಯದವರು ದಾಳಿ ಮಾಡಿದರು. ಸೈನಿಕರ ಖಡ್ಗಗಳು ಹಾಗು ಬಿಲ್ಲು ಬಾಣಗಳು ರಣರಂಗವೆಲ್ಲ ತುಂಬಿದವು. ಇಬ್ಬರು ಖರಮೀಲಿಗಳು ಕೂಡ ರಣಾಂಗಣಕ್ಕೆ ಬಂದು ಯುದ್ಧದಲ್ಲಿ ಭಾಗವಹಿಸಿದರು. ಖರ್ಮಿಲ್ ಬುಜುರ್ಗ್ ಬಹಳ ಪ್ರಸಿದ್ಧವಾದ ಆನೆ ಮೇಲೆ ದಾಳಿ ಮಾಡಿದನು ಮತ್ತು ತನ್ನ ಕತ್ತಿಯಿಂದ ಆನೆಯ ಹೊಟ್ಟೆಯನ್ನು ಸೀಳಿದನು. ಆದರೆ ತನ್ನ ರಕ್ಷಣೆ ಮಾಡಿಕೊಳ್ಳಲಿಕ್ಕಾಗಲಿಲ್ಲ ಗಾಯಗೊಂಡ ಆನೆಯ ಅಡಿಯಲ್ಲಿ ಬಿದ್ದು ಸತ್ತುಹೋದನು. ಖರ್ಮಿಲ್ ಕೋಚಕ್‌ನು ಎರಡನೆಯ ಆನೆಯ ಮೇಲೆ ದಾಳಿ ಮಾಡಿ ಅದನ್ನು ಕೊಂದನು. ಬಹಳ ಕಷ್ಟದಿಂದ ಅದರ ಅಡಿಯಿಂದ ಪಾರಾಗಿ ಸುರಕ್ಷಿತವಾಗಿ ಹೊರಬಂದನು. ಯಾವಾಗ ಘಜನಿಗಳಿಗೆ ತಮ್ಮ ಆನೆಗಳ ಯೋಗ್ಯತೆಯು, ಆಕಳೂ ಮತ್ತು ಎಮ್ಮೆಗಳಕ್ಕಿಂತಲು ಹೆಚ್ಚಾಗಿಲ್ಲವೆಂದು ತಿಳಿದ ಕೂಡಲೇ, ಅವರ ಶೌರ್ಯವು ಇನ್ನೂ ಹೆಚ್ಚಾಗಿ ಅಲ್ಲಾವುದ್ದೀನ್‌ನು ತನ್ನ ಸೈನ್ಯದೊಂದಿಗೆ ಬೆಹ್ರಾಮ್‌ಶಾಹನ ಮೇಲೆ

ದಾಳಿ ಮಾಡಿದನು. ಘಜನಿಗಳಿಗೆ ಈ ದಾಳಿಯನ್ನು ತಾಳಲಾಗಲಿಲ್ಲ ಮತ್ತು ಯುದ್ಧಭೂಮಿಯಿಂದ ಕಾಲತೆಗೆದರು. ಬೆಹ್ರಾಮ್‌ಶಾಹನ ತರುಣ ಹಾಗೂ ಶೂರ ಮಗ 'ದೋಸ್ತ ಶಹಾ' ಯಾವನು ಸೈನ್ಯದ ಹಿರಿಯ ಅಧಿಕಾರಿಯಿದ್ದನೊ, ಅನ್ಯರ ಕೈಯಲ್ಲಿ ಮೃತಪಟ್ಟನು. ತನ್ನ ತರುಣ ಮಗನ ಈ ಪರಿಸ್ಥಿತಿಯನ್ನು ಕಂಡು ಬೆಹರಾಂ ಶಹಾನು ಅತಿಯಾಗಿ ಪರಿವರ್ತನೆಗೊಂಡನು ಮತ್ತು ಈ ದುರಂತ ಘಟನೆಯನಂತರ ಆತನ ಧೈರ್ಯವು ಕುಂದಿತು. ಘಜನಿಯ ಸೈನಿಕರು ಒಬ್ಬೊಬ್ಬರಾಗಿ ರಣಭೂಮಿಯಿಂದ ಯುದ್ಧವನ್ನು ಬಿಟ್ಟು ಓಡಲಾರಂಭಿಸಿದರು. ಬೆಹ್ರಾಮ್‌ಶಾಹನು ಮಗನ ಸಾವು ಹಾಗು ಸೈನ್ಯದಲ್ಲಿ ಬೆಳವಣಿಗೆ ಆಗುತ್ತಿರುವ ಸ್ಥಿತಿಯನ್ನು ಕಂಡು ಅತಿ ವಿಹ್ವವನಾಗಿ ಹಿಂದೂಸ್ತಾನದ ಕಡೆ ಓಡಿಹೋದನು. ಈ ರೀತಿಯಾಗಿ ಘೋರಿಗಳಿಗೆ ಗೆಲುವಾಯಿತು.

ಈ ಘಟನೆಯ ಕೆಲ ದಿನಗಳನಂತರ ಬೇಹರಾಮ ಶಹಾನು ಅತಿಯಾದ ವಿಪತ್ತುಗಳ ಪ್ರಭಾವವನ್ನು ತಾಳಲಾರದೆ ಮೃತ್ಯುವಶವಾದನು. ಈತನ ರಾಜ್ಯಾವಧಿಯು ೨೫ ವರ್ಷಮತ್ತು ಬೆಹರಾಮನು ಹಿಜರಿ ಶಕೆ ೫೪೭ರಲ್ಲಿ ಮರಣ ಹೊಂದಿದನು.

ಪ್ರಖ್ಯಾತ ಕವಿ ಹಕೀಮ ಸನಾಯಿ ಬಗ್ಗೆ :

ಬೆಹರಾಮನ ಕಾಲದ, ಒಬ್ಬ ಪ್ರಸಿದ್ಧ ಕವಿ ಇದ್ದನು. ಅವನ ಕಾಲದಲ್ಲಿ ಅಮೀರರು, ಮಂತ್ರಿಗಳು ಹಾಗೂ ಇತರರ ಸ್ತುತಿಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಇಹಲೋಕ ತೊರೆದ ಮೇಲೆ ಕೇವಲ ಪರಮಾತ್ಮನ ಮೇಲೆ ನಿರ್ಭರರಾಗುವ ಕಥೆಯು 'ನಫಹಾತುಲ್ ಉನ್ಸ್' (ಶಾಂತಿಯ ಉಸಿರು) ಈ ಪ್ರಕರಣದಲ್ಲಿ ನಿರೂಪಿಸಲಾಗಿದೆ. ಒಮ್ಮೆ ಚಳಿಗಾಲದಲ್ಲಿ ಸುಲ್ತಾನ ಮಹಮದ ಘಜನಿಯು ತನ್ನ ಗೆಲುವಿನ ಸರಣಿಯಲ್ಲಿ ಘಜನಿಯ ಹೊರಗಡೆ ಡೇರೆಯಲ್ಲಿ ನಿವಾಸಮಾಡಿದ್ದನು. ಹಕೀಂ ಸನಾಯಿಯು ಸುಲ್ತಾನ ಮಹಮದನ ಸ್ತುತಿಯಲ್ಲಿ ಒಂದು 'ಖಸೀದಾ' (ಒಂದು ಬಗೆಯ ಕವನ) ಬರೆದನು. ಅದನ್ನು ಬಾದಶಾಹನ ಸೇವೆಯಲ್ಲಿ ಪ್ರಸ್ತುತ ಮಾಡಲು ತನ್ನ ಹುಟ್ಟೂರಿನಿಂದ ಸೈನ್ಯವಿರುವೆಡೆಗೆ ಹೊರಟನು. ಪ್ರಯಾಣದ ಕಾಲದಲ್ಲಿ ಒಂದು ಮದ್ಯದಂಗಡಿಯ ಬಾಗಿಲಿಗೆ ಬಂದನು. ಅಲ್ಲಿ ಒಬ್ಬ ಮಜದೂಬನೆಂಬ ವ್ಯಕ್ತಿಯು ಹಾಗೇ ಮದ್ಯಪಾನ ಮಾಡುವುದರಲ್ಲಿ ನಿರತನಾಗಿದ್ದು, ಮದ್ಯವನ್ನು ಸರಬರಾಜು ಮಾಡುವವನಿಗೆ ಹೇಳಿದನು, 'ನನಗೆ ಸುಲ್ತಾನ ಮಹಮದನ ದೃಷ್ಟಿ ತಪ್ಪಿದ, ವಿಚಾರಮಾಡಲಾಗದ ಕೊನೆಯ ಪೇಯವನ್ನು ಕೊಡು.' ಇದನ್ನು ಕೇಳಿ ಸರಬರಾಜ ಮಾಡುವವನು ಮಜದೂಬ ಕುಡುಕನಿಗೆ ಹೇಳಿದನು, 'ಮಹಮದನು ಒಬ್ಬ ನಿಜವಾದ ಮುಸಲ್ಮಾನ ಬಾದಶಾಹನಿದ್ದು, ಅಲ್ಲಾಹನ ಆದೇಶದ ಮೇರೆಗೆ ಮುಸಲ್ಮಾನೇತರೊಂದಿಗೆ ಜಿಹಾದ ಮಾಡುತ್ತಿದ್ದಾನೆ. ನೀನು ಆತನ ಬಗ್ಗೆ ಈ ರೀತಿಯ ಶಬ್ದಗಳನ್ನು ಏಕೆ ಬಳಸುತ್ತಿ?' ಮತ್ತೇರಿದ ಕುಡುಕನು ಉತ್ತರಿಸಿದನು, 'ಮಹಮದನ ಅಂತಿಮ ವಿಚಾರರಹಿತ, ವ್ಯವಹಾರದಿಂದ ಹೆಚ್ಚಿನ ಸಾಕ್ಷಿ ಏನು ಬೇಕು? ಎಷ್ಟೊಂದು ದೇಶದ ಭಾಗವು ಈತನ ವಶದಲ್ಲಿದೆಯೋ

ಅದರ ವ್ಯವಸ್ಥೆ ಮಾಡಲಾಗದೆ, ಇನ್ನೂ ಹೆಚ್ಚಿನ ದೇಶಗಳನ್ನು ಗೆಲ್ಲುವ ಆಸೆಯಿಂದ ಜೀವಿಸುತ್ತಿದ್ದಾನೆ.' ಇದನ್ನು ಹೇಳಿ ಸರಬರಾಜು ಮಾಡುವವನ ಕೈಯಲ್ಲಿದ್ದ ಪೇಯವನ್ನು ತೆಗೆದುಕೊಂಡು ಕುಡಿದುಬಿಟ್ಟನು. ಅದಾದ ನಂತರ ಸರಬರಾಜು ಮಾಡವವನಿಗೆ ಹೇಳಿದನು, 'ಹಕೀಮ ಸನಾಯಿಯ ವಿಚಾರರಹಿತ ಒಂದು ಪೇಯವನ್ನು ನನಗೆ ಕೊಡು.' ಸರಬರಾಜು ಮಾಡುವವನು ಈ ಸಾರಿಯೂ ಕೂಡ ಮದ್ಯ ತುಂಬಿದ ಪೇಯವನ್ನು ಮಜದೂಬನಿಗೆ ಕೊಡುತ್ತಾ ಹೇಳಿದನು, 'ಸನಾಯಿ ಒಬ್ಬ ಬುದ್ಧಿವಂತ ಹಾಗೂ ದಯಾಮಯ ವ್ಯಕ್ತಿ ಇದ್ದಾನೆ. ಈತನ ಬಗ್ಗೆ ಈ ಶಬ್ದಗಳು ಉಪಯೋಗಿಸುವುದು ಸಮಂಜಸವಲ್ಲ.' ಮಜದೂಬನು ಉತ್ತರಿಸಿದನು, 'ತಿಳಿವಳಿಕೆಯಿಲ್ಲದವನೇ, ಸನಾಯಿಗೂ ತೀಕ್ಷ್ಣ ಬುದ್ಧಿಗೂ, ನಿಶ್ಚಲವಾದ ದೃಷ್ಟಿಗೂ ಏನು ಸಂಬಂಧ? ಅವನಿಗೆ ಸ್ವಲ್ಪವಾದರೂ ಬುದ್ಧಿ ಇದ್ದರೆ, ಇಹ–ಪರಗಳಲ್ಲಿ ಉಪಯಕ್ತವಾಗುವ ಕೆಲಸಗಳನ್ನು ಮಾಡುತ್ತಿದ್ದನು. ಆದರೆ, ಆತನ ಪರಿಸ್ಥಿತಿ ಹೇಗಿದೆ ಎಂದರೆ ಉಪಯೋಗವಿಲ್ಲದ ವಿಚಾರಗಳಿಗೆ ಕಾವ್ಯದ ಸ್ವರೂಪ ಕೊಟ್ಟು ಅಮೀರರು ಮತ್ತು ಬಾದಶಾಹರ ದ್ವಾರಗಳ ಮುಂದೆ 'ಸಿಸದಾ' (ನಮಾಜಿನ ಒಂದು ಭಾಗ ಅದರಲ್ಲಿ ಅಲ್ಲಾಹನಭಕ್ತನು ತನ್ನ ಹಣೆಯನ್ನು ಭೂಮಿಗೆ ಹಚ್ಚಿ ಮಾಡುವ ಪ್ರಾರ್ಥನೆ.) ಮಾಡುತ್ತಾ ತಿರುಗುತ್ತಾನೆ. ಇದುವರೆಗೂ ಅವನಿಗೆ ಪರಮಾತ್ಮನು ಯಾವ ಕೆಲಸಕ್ಕಾಗಿ ಆತನಿಗೆ ಜನ್ಮಕೊಟ್ಟನೆಂಬ ಬಗ್ಗೆ ತಿಳಿದುಕೊಳ್ಳಲೇ ಇಲ್ಲ. ಹಕೀಮ ಸನಾಯಿಯು ಮಜದೂಬನ ಈ ಶಬ್ದಗಳನ್ನು ಕೇಳಿದಾಗ, ಅವನ ಆಂತರಿಕ ಕಣ್ಣು ತೆರೆಯಿತು. ಕೂಡಲೇ ಆತನಿಗೆ ವಿರಕ್ತಿ ಹುಟ್ಟಿ ಜಗತ್ತನ್ನು ತೊರೆದು ಒಂದು ಮೂಲೆಯಲ್ಲಿ ಕುಳಿತುಕೊಂಡು ಅಲ್ಲಾಹನ ಪ್ರಾರ್ಥನೆಯನ್ನು ಆರಂಭಿಸಿದನು.

ಇತಿಹಾಸಕಾರನಾದ ಫರಿಶ್ತಾನ ಅರಿಕೆ ಏನೆಂದರೆ ಈ ಘಟನೆಯ ಸತ್ಯದ ಬಗ್ಗೆ ಯಾವ ಅನುಮಾನವೂ ಇಲ್ಲ. ಆದರೆ, ಹಕೀಮ ಸನಾಯಿಯು ಸುಲ್ತಾನ ಮಹಮದನ ಅವಧಿಯಲ್ಲಿ ಪ್ರಪಂಚವನ್ನು ತೊರೆದನೆಂಬುವುದು ಯಾವ ರೀತಿಯಿಂದಲೂ ತಿಳಿಯುವುದು ಅಸಾಧ್ಯ. ಈತನ ಕಾರ್ಯಗಳ ಬಗ್ಗೆ ಎಲ್ಲರಿಗೂ ಒಮ್ಮತವಿದ್ದು, ಸುಲ್ತಾನ ಮಹಮದನ ಮರಣವು ಹಿಜರಿ ಶಕೆ ೪೨೧ರಲ್ಲಿ ಆಯಿತು. ಹಕೀಮ ಸನಾಯಿ ಬೆಹರಾಮಿ ಕಾಲದ ಕವಿಗಳಲ್ಲಿ ಒಬ್ಬನಾಗಿದ್ದು, ಹಕೀಮ ಸನಾಯಿಯ ಪ್ರಸಿದ್ಧ 'ಹದೀಖಾ' (ಕಾವ್ಯದ ಒಂದು ಬಗೆ) ವನ್ನು ಹಿಜರಿಶಕೆ ೫೨೫ರಲ್ಲಿ ಸಂಪೂರ್ಣ ಮಾಡಿ ಇದನ್ನು ಬೆಹರಾಮನ ಹೆಸರಿನಲ್ಲಿ ಬರೆದನೆಂಬುದು ತಿಳಿದುಬರುತ್ತದೆ. ಈ ಇಬ್ಬರ ಕಾಲಾವಧಿಗಳ ಬಗ್ಗೆ ವಿಚಾರ ಮಾಡಿದಲ್ಲಿ, ಹಕೀಮ ಸನಾಯಿಯು ಸುಲ್ತಾನ ಮಹಮದನ ಕಾಲದಲ್ಲಿ ಪ್ರಪಂಚವನ್ನು ತೊರೆದನೆಂಬುವುದನ್ನು ನಂಬುವುದು ಸಾಧ್ಯವಿಲ್ಲ. ನನ್ನ ವಿಚಾರದಲ್ಲಿ ಈ ಘಟನೆಯು ಸುಲ್ತಾನ ಮಹಮದನ ಅವಧಿಯ ಪುಸ್ತಕವೆಂಬುವುದು ತಪ್ಪಾಗಿ ಮಸೂದನ ಬದಲಾಗಿ ಮಹಮದನ ಹೆಸರನ್ನು ಬರೆಯಲಾಗಿದೆ. ಸತ್ಯವು ದೇವರಿಗೆ ಮಾತ್ರ ಗೊತ್ತು.

ಹಕೀಮ ಸನಾಯಿಯ ಮರಣದ ಕಾಲದ ಬಗ್ಗೆಯೂ ಭಿನ್ನಾಭಿಪ್ರಾಯವಿದೆ. 'ತಾರೀಖೇ ಗಜೀದಾ' ಅದರ ಲೇಖನದಲ್ಲಿ ಸನಾಯಿಯು ಬೆಹರಾಮ್‌ನ ಆಡಳಿತದ ಅವಧಿಯ ಅಂತಿಮ ಭಾಗದಲ್ಲಿ ಮರಣಹೊಂದಿದನು. ಕೆಲವು ಜನರು ಈತನ ಮರಣದ ವರ್ಷವು ಹಿಜರಿ ಶಕೆ ೫೨೫, 'ಹದೀಖಾ' ಮುಕ್ತಾಯವಾದುದ್ದು ಕೂಡ ಅದೇ ವರ್ಷದಲ್ಲಿ ಎಂದು ಹೇಳುತ್ತಾರೆ.

ಝುಹೀರ ಅಲ್ ದೌಲಾ ಖುಸ್ರು ಶಹಾ ಬಿನ್ ಬೆಹ್ರಾಮ್‌ಶಾಹ :

ನಿಜವಾದ ರೂಢಿಯ ಪ್ರಕಾರ ಬೆಹ್ರಾವಮ್‌ಶಾಹನು ಘಜನಿಯಲ್ಲಿಯೇ ಮೃತಪಟ್ಟನೆಂಬುದು ಈ ಮೊದಲೇ ಹೇಳಲಾಗಿದೆ. ಈತನ ಮಗ ಖುಸ್ರು ಶಹಾ ರಾಜ್ಯಾಡಳಿತ ಕೈಗೆತ್ತಿ ಕೊಂಡ ಮೇಲೆ, ಅಲ್ಲಾವುದ್ದೀನ ಘೋರಿಯ ದಾಳಿಗಳ ಬಗ್ಗೆ ನಡೆದ ಗಲಭೆಗಳ ವದಂತಿಯಿಂದ ತುಂಬಿದ ಕಾಲದಲ್ಲಿ ಖುಸ್ರು ಶಹನು ಘಜನಿಯಲ್ಲಿ ವಸತಿಮಾಡಲು ಯೋಗ್ಯವಲ್ಲವೆಂದು ತಿಳಿದು ಹಿಂದೂಸ್ತಾನದ ದಾರಿ ಹಿಡಿದನು. ಇಲ್ಲಿ ಲಾಹೋರಿನಲ್ಲಿ ಬಂದು ತನ್ನ ಪರಿವಾರದೊಂದಿಗೆ ವಾಸಿಸಿದನು.

ಅಲ್ಲಾವುದ್ದೀನ ಪ್ರಪಂಚ ನಾಶಕ:

ಖುಸ್ರು ಶಹಾ ಹಾಜರ ಇಲ್ಲವೆಂದು ತಿಳಿದು ಅಲ್ಲಾವುದ್ದೀನನು ಘಜನಿಯನ್ನು ವಶಪಡಿಸಿಕೊಂಡನು. ಘಜನಿ ಹಾಗೂ ಘಜನಿಯ ನಿವಾಸಿಗಳ ಮೇಲೆ ತನ್ನ ಸಹೋದರನ ರಕ್ತದ ಪ್ರತೀಕಾರವನ್ನು ಮಾಡಲಾರಂಭಿಸಿದನು. ಅಲ್ಲಾವುದ್ದೀನನು ತನ್ನ ದೌರ್ಜನ್ಯದ ಪ್ರಭಾವವನ್ನು ಬೀರಿದನು. ಘಜನಿಗೆ ಬಂದ ನಂತರ ತನ್ನ ಸೈನಿಕರಿಗೆ ಘಜನಿ ಹಾಗೂ ಪ್ರಜೆಗಳ ಸರ್ವನಾಶ ಮಾಡಲು ಆದೇಶಿಸಿದನು. ಕಾದಾಡುವ ಸೈನಿಕರು ಬಾದಶಹಾನ ಈ ರೀತಿಯ ಆದೇಶವನ್ನೇ ಕಾಯುತ್ತಿದ್ದು, ಕೂಡಲೇ ಅವರು ಮನಬಂದಂತೆ ನಾಶಮಾಡಲು ಆರಂಭಿಸಿದರು. ಕೊಲೆ, ಸುಲಿಗೆ ಅಲ್ಲದೆ ಮನೆಗಳಿಗೂ ಕೂಡ ಬೆಂಕಿ ಹಚ್ಚಿ ಜನರನ್ನು ಕೊಂದು, ನಗರವನ್ನು ಹಾಳು ಮಾಡಿದರು. ಏಳು ದಿನಗಳವರೆಗೆ ಈ ದೌರ್ಜನ್ಯವು ನಡೆಯುತ್ತಲೇ ಇತ್ತು. ಸೈಫುದ್ದೀನನನ್ನು ಆಕಳ ಮೇಲೆ ಕೂಡಿಸಿ ಮುಖಕ್ಕೆ ಮಸಿ ಬಳೆದು ನಗರದಲ್ಲೆಲ್ಲ ಸುತ್ತಾಡಿಸಿದ ವಿಷಯ ಹಾಗೂ ಘಜನಿಯ ಹೆಣ್ಣು ಮಕ್ಕಳು ಕೂಡ ಮೆರವಣಿಗೆಯಲ್ಲಿ ಭಾಗವಹಿಸಿ, ಅವಹೇಳನ ಮಾಡಿದುದನ್ನು ಈ ಸಂದರ್ಭದಲ್ಲಿ ಅಲ್ಲಾವುದ್ದೀನನಿಗೆ ಹೇಳಿದರು. ಈ ವಿಷಯವನ್ನು ಕೇಳಿ, ಅಲ್ಲಾವುದ್ದೀನನು ಘಜನಿಯ ಹೆಣ್ಣು ಮಕ್ಕಳನ್ನು ಕೂಡ ಕೊಲ್ಲುವಂತೆ ಆದೇಶಿಸಿದನು. ಸೈನಿಕರು ಈ ನಿರಾಯುಧ ಹೆಣ್ಣು ಮಕ್ಕಳನ್ನು ಗಂಡಸರಂತೆ ಕೊಚ್ಚಿ, ಕೈ ಕಾಲುಗಳನ್ನು ಕಡಿದು, ಲಕ್ಷಾಂತರ ಜನರನ್ನು ಕೊಂದು ಹಾಕಿದರು.

ಘಜನಿ ಹಾಗೂ ಘಜನಿಯ ಜನರ ಮೇಲೆ ಪ್ರಳಯಾಗ್ನಿ ಸುರಿಸಿ ಅಲಾವುದ್ದೀನನು

ಘೋರ್ ಕಡೆ ಹೊರಟನು. ಮಾರ್ಗದಲ್ಲಿ ಕಂಡ ಸಬಸ್ತಗೀನನ ಸಂತಾನದ ಮನೆಗಳನ್ನು ಕೂಡಲೇ ಧ್ವಂಸಮಾಡಿದನು. ಅಲಾವುದ್ದೀನನು (ಸೈಫುದ್ದೀನ್‌ನ ಮಂತ್ರಿ) ಸೈಯದ ಅಮಜದ್‌ಉದ್ಧೀನನ ಮರಣದ ಪ್ರತೀಕಾರವಾಗಿ ಘಜನಿಯ ಸೈಯದೀಗಳ ದೊಡ್ಡ ಗುಂಪನ್ನು ಬಂದಿಮಾಡಿ ಮುಖಕ್ಕೆ ಮಣ್ಣು ತುಂಬಿದ ತೋಬರಿಗಳನ್ನ ಕಟ್ಟಿ ನೇತುಹಾಕಿ ಅದೇ ಪರಿಸ್ಥಿತಿಯಲ್ಲಿ ಫೇರೋಜಾ ಬೆಟ್ಟದ ಮೇಲೆ ಕೊಂಡೊಯ್ದು ಕೊಂದು ಹಾಕಿದರು. ತಪ್ಪು ಮಾಡದ ಜನರ ರಕ್ತದಿಂದ ಮಣ್ಣು ತೊಯ್ದು ಹೋಯಿತು. ಹಾಗು ಫೇರೋಜಾ ಬೆಟ್ಟದ ಬುರುಜುಗಳನ್ನು ಕಟ್ಟಲು ಉಪಯೋಗಿಸಿದನು. ಅಲಾವುದ್ದೀನನ ಈ ದೌರ್ಜನ್ಯಗಳಿಂದಾಗಿ ಈತನಿಗೆ 'ಜಹಾ ಸೋಜ' (ಪ್ರಪಂಚವನ್ನು ನಾಶಮಾಡುವವ) ಬಿರುದಿನಿಂದ ಖ್ಯಾತಿ ಪಡೆದನು. ಈ ಬಿರುದು ಆತನ ಹೆಸರಿನ ಒಂದು ಭಾಗವಾಯಿತು.

ಅಲಾವುದ್ದೀನನು ಮರಳಿದ ನಂತರ ಖುಸ್ರು ಶಹನು ತನ್ನ ಹಿರಿಯರ ದೇಶವನ್ನು ವಶಪಡಿಸಿಕೊಳ್ಳುವ ಇಚ್ಛೆ ಮಾಡಿದನು. ಸುಲ್ತಾನ ಸಂಜರನ ಸಹಾಯದ ಆಸೆಯಿಂದ ಲಾಹೋರಿನಿಂದ ಘಜನಿಗೆ ಹೊರಟನು. ದುರ್ದೈವದಿಂದ ಈ ಕಾಲದಲ್ಲಿ ತುರ್ಕಿಗಳು ಸುಲ್ತಾನ ಸಂಜರನನ್ನು ಬಂದಿಮಾಡಿ ಘಜನಿಯ ಮೇಲೆ ದಾಳಿ ಮಾಡಿದುದರಿಂದ ಖುಸ್ರು ಶಹನು ತನ್ನ ಉದ್ದೇಶವನ್ನು ಪೂರ್ಣಗೊಳಿಸದೆ ಮರಳಿ ಲಾಹೋರಿಗೆ ಬಂದನು.

ಕೆಲವು ಇತಿಹಾಸಕಾರರು ಹೇಳುವುದೇನೆಂದರೆ ಘೋರಿಗಳು ೧೦ ವರ್ಷದ ನಂತರ ಘಜನಿಯನ್ನು ತುರ್ಕಿಗಳ ವಶದಿಂದ ತೆಗೆದುಕೊಂಡರು. ಇದಾದ ಮೇಲೆ ಖುಸ್ರುನ ಅಮೀರರು ಘಜನಿಯನ್ನು ವಶಪಡಿಸಿಕೊಂಡರು. ಇನ್ನೂ ಕೆಲವು ಇತಿಹಾಸಕಾರರಿಂದ ತಿಳಿದು ಬರುವುದೇನೆಂದರೆ ಖುಸ್ರು ಶಹಾನು ಅಲಾವುದ್ದೀನ ಜಹಾ ಸೋಜನ ದಾಳಿಯ ಭೀತಿಯಿಂದ ಹಿಂದೂಸ್ಥಾನದಲ್ಲಿ ಆಶ್ರಯ ಪಡೆದಾಗ ಅಲಾವುದ್ದೀನನು ತಕೀಯಾಬಾದ ಹಾಗೂ ಕಂದಹಾರ ನಗರಗಳನ್ನು ಗೆದ್ದು ಅಲ್ಲಿಯ ರಾಜ್ಯಾಡಳಿತವನ್ನು ಗಯಾಸುದ್ದೀನ ಮಹಮದನಿಗೆ ಒಪ್ಪಿಸಿ ಘೋರ್‌ಗೆ ಹೊರಟನು. ಅಲಾವುದ್ದೀನನು ಮರಳಿ ಹೋದಮೇಲೆ ಖುಸ್ರು ಶಹಾನು ಒಂದು ದೊಡ್ಡ ಸೈನ್ಯದೊಂದಿಗೆ ಘಜನಿ ಕಡೆಗೆ ಹೊರಟನು. ಅಲಾವುದ್ದೀನನು ಖುಸ್ರುವಿನ ಬರುವಿಕೆಯ ಸುದ್ದಿ ಕೇಳಿ ಸಂಧಾನಕ್ಕೆ ಸಿದ್ಧನಾಗಿ, ಮಂಡಿಸಿದ ಶರತ್ತೆಂದರೆ ಖುಸ್ರು ಶಹಾನು ತಕೀಯಾಬಾದಿನ ನಗರ ಹಾಗೂ ಕೋಟೆಯನ್ನು ಬಿಟ್ಟುಕೊಡುವುದು, ಹಾಗೂ ಕೇವಲ ಘಜನಿ ರಾಜ್ಯದಿಂದಲೇ ತೃಪ್ತನಾಗುವುದು. ಆದರೆ ಈ ಶರತ್ತನ್ನು ಖುಸ್ರು ಶಹಾನು ನಿರಾಕರಿಸಿದನು. ಇದಕ್ಕೆ ಉತ್ತರವಾಗಿ ಅಲಾವುದ್ದೀನನು ಖುಸ್ರುನನ್ನು ಅಪಮಾನ ಮಾಡಿ ಒಂದು 'ರುಬಾಯಿ' (ಒಂದು ಬಗೆಯ ಕವನ) ಬರೆದು ಕಳುಹಿಸಿದನು.

ಮೊದಲು ನಿನ್ನ ತಂದೆಯು ಸರ್ವನಾಶದ ಬುನಾದಿಯನ್ನು ಹಾಕಿದ್ದನು. ಅದರಿಂದ ಪ್ರಪಂಚವು ಬಹುದೊಡ್ಡ ಕಷ್ಟದಲ್ಲಿ ಸಿಲುಕಿತು ಪ್ರತಿಯೊಬ್ಬರೂ ತನ್ನ ಮಾತನ್ನೇ ಕೇಳಬೇಕೆಂದನು ಅದರಿಂದ ಮಹಮೂದನ ಪ್ರದೇಶವು ಹಾಳಾಯಿತು.

ಖುಸ್ರು ಶಹಾನಿಗೆ ಸುಲ್ತಾನ ಸಂಜರನು ಪೂರ್ಣ ಸಹಾಯ ಮಾಡುವನೆಂಬ ಆಸೆಯಿತ್ತು. ಇದರಿಂದಾಗಿ ಅಲ್ಲಾವುದ್ದೀನನ ಮಾತಿನೆಡೆ ಲಕ್ಷಿಸಲಿಲ್ಲ. ಆತನು ಸಂಧಾನಕ್ಕಾಗಿ ಒಡ್ಡಿದ ಶರತ್ತುಗಳನ್ನು ದೃಢವಾಗಿ ನಿರಾಕರಿಸಿದನು. ಆದರೆ ದುರ್ದೈವದಿಂದ ಸುಲ್ತಾನ ಸಂಜರನ ಮೇಲೆ ತುರ್ಕಿಗಳ ಗೆಲುವಾಗಿತ್ತು. ಅಲ್ಲಾವುದ್ದೀನನ ಭಯದಿಂದ ಖುಸ್ರು ಶಹಾನಿಗೆ ಲಾಹೋರಿಗೆ ಮರಳಿ ಬರಬೇಕಾಯಿತು. ಈ ಘಟನೆಯ ನಂತರ, ಅಲ್ಲಾವುದ್ದೀನ ಘಜನಿಯನ್ನು ವಶಪಡಿಸಿಕೊಂಡು ಮರಳಿ ಘೋರಸ್ತಾನ್ ಬಂದನು.

ಖುಸ್ರು ಶಹಾನು ಏಳು ವರ್ಷ ರಾಜ್ಯಭಾರ ಮಾಡಿ ಹಿಜರಿ ಶಕೆ ೫೫೫ರಲ್ಲಿ ಮೃತಪಟ್ಟನು.

ಖುಸ್ರು ಮಲಿಕ್ ಬಿನ್ ಖುಸ್ರು ಶಾಹ

ಲಾಹೋರನಲ್ಲಿ ಖುಸ್ರು ಶಹಾನ ಮರಣದ ನಂತರ ಆತನ ಪುತ್ರ ಘುಸಲೋ ಮುಲ್ಕ ಶಹಾ ಪಟ್ಟಾಭಿಷಿಕ್ತನಾದನು. ಖುಸ್ರು ಮಲಿಕ್‌ನು ಲಾಹೋರನ್ನು ತನ್ನ ರಾಜಧಾನಿಯನ್ನಾಗಿಸಿ ರಾಜ್ಯಭಾರವನ್ನು ಉತ್ತಮವಾಗಿ ನ್ಯಾಯಯುತ ರೀತಿಯಲ್ಲಿ ನಡೆಸಿದನು. ಈತನು ತನ್ನ ರಾಜ್ಯದ ಅಡಿಪಾಯವನ್ನು ಸದೃಢ ಹಾಗು ಸಶಕ್ತವಾಗಿ ಮಾಡಿದನು. ಇಬ್ರಾಹಿಮ ಹಾಗೂ ಬೆಹರಾಮನು ಗೆದ್ದುಕೊಂಡು ಘಜನಿ ರಾಜ್ಯದಿಂದ ಕೈಬಿಟ್ಟ ಹಿಂದೂಸ್ಥಾನದ ಭೂಭಾಗಗಳನ್ನು ಪುನಃ ತನ್ನ ವಶಕ್ಕೆ ತೆಗೆದುಕೊಂಡನು.

ಶಹಾಬುದ್ದೀನ ಘೋರಿಯ ಪ್ರಥಮ ದಾಳಿ:

ಶಹಾಬುದ್ದೀನ ಘೋರಿ ಕೇವಲ ಘಜನಿಯನ್ನು ತನ್ನ ವಶಪಡಿಸಿಕೊಳ್ಳುವುದು ಸಾಲದೆಂದು ವಿಚಾರಿಸಲಿಲ್ಲ. ಆತನ ದುರಾಸೆಯ ದೃಷ್ಟಿಯು ಅಲ್ಲಿಯ ಸಂಪತ್ತಿನ ಮೇಲೆ ಇರದೆ, ಹಿಂದೂಸ್ಥಾನದ ಮೇಲೆ ದಾಳಿ ಮಾಡಿ ಘಜನಿ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ಬಯಸಿದನು. ತನ್ನ ಈ ಬಯಕೆಯನ್ನು ಕಾರ್ಯರೂಪಕ್ಕೆ ತರಲು ಈತನು ಹಿಂದೂಸ್ಥಾನದ ಮೇಲೆ ಪೇಶಾವರ, ಸಿಂಧ ಹಾಗು ಮುಲ್ತಾನಗಳನ್ನು ಗೆದ್ದು ಲಾಹೋರಿಗೆ ಮರಳಿದನು. ಖುಸ್ರು ಮುಲ್ಕನಿಗೆ ಶಹಾಬುದ್ದೀನನನ್ನು ಎದುರಿಸಲು ಆಗಲಿಲ್ಲ. ಲಾಹೋರಿನ ಕೋಟೆಯಲ್ಲಿ ಆಶ್ರಯ ಪಡೆದನು. ಶಹಾಬುದ್ದೀನ ಘೋರಿಯು ಖುಸ್ರು ಮುಲ್ಕನ ಎಳೆ ವಯಸ್ಸಿನ ಮಗನನ್ನು ಮತ್ತು ಒಂದು ಆನೆಯನ್ನು ಸೆರೆಹಿಡಿದನು. ಅವರನ್ನು ತನ್ನ ಜೊತೆಗೆ ತೆಗೆದುಕೊಂಡು ತನ್ನ ಘೋರಿ ರಾಜ್ಯಕ್ಕೆ ಮರಳಿದನು.

ಶಹಾಬೂದ್ದೀನ ಘೋರಿಯ ದ್ವಿತೀಯ ದಾಳಿ:

ಹಿಜರಿ ಶಕೆ ೫೮೦ರಲ್ಲಿ ಶಹಾಬುದ್ದೀನ ಘೋರಿಯು ಲಾಹೋರಿನ ಮೇಲೆ ಎರಡನೆಯ ದಾಳಿ ಮಾಡಿದನು. ಖುಸ್ರು ಮುಲ್ಕನು ಈ ಸಾರಿಯೂ ಕೋಟೆಯಲ್ಲಿ ಆಶ್ರಯ ಪಡೆದನು. ಘೋರಿಯು ಲಾಹೋರಿನ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಸುಲಿಗೆ ಮಾಡಿದನು. ಸಿಯಾಲಕೋಟ್ ಕೋಟೆಯನ್ನು ಕಟ್ಟಿ ಅಲ್ಲಿಯ ರಾಜ್ಯಭಾರವನ್ನು ಒಬ್ಬ ಅಧಿಕಾರಿಗೆ ಒಪ್ಪಿಸಿ ಘೋರಿ ರಾಜ್ಯಕ್ಕೆ ಮರುಳಿದನು.

ಸಿಯಾಲಕೋಟ್ ಕೋಟೆಯ ಆಕ್ರಮಣ:

ಘೋರಿಯು ಮರುಳಿದ ನಂತರ ಖುಸ್ರು ಮುಲ್ಕನು ಖಖ್ರೊಂನ್ನು ತನ್ನ ಬೆಂಬಲಿಗರನ್ನಾಗಿಸಿಕೊಂಡು ಸಿಯಾಲಕೋಟ್ ಕೋಟೆಯನ್ನು ಆಕ್ರಮಿಸಿದನು. ಆದರೆ ಈ ಆಕ್ರಮಣದಲ್ಲಿ ಕೋಟೆಯನ್ನು ಗೆಲ್ಲಲು ಆಗಲಿಲ್ಲ. ಖುಸ್ರು ಮಲ್ಕನು ವಿಫಲನಾಗಿ ಮರಳಿದನು.

ಶಹಾಬುದ್ದೀನ ಘೋರಿಯ ತೃತೀಯ ದಾಳಿ:

ಖುಸ್ರು ಮುಲ್ಕನ ಈ ಕೃತಿಯಿಂದ ಶಹಾಬುದ್ದೀನನು ತೀವ್ರ ಅಸಮಾಧಾನಗೊಂಡು ಲಾಹೋರನ್ನು ಗೆಲ್ಲುವ ಧೃಢ ನಿಶ್ಚಯ ಮಾಡಿದನು. ಈ ಬಾರಿ ಶಹಾಬುದ್ದೀನ ಘೋರಿಯು ಚತುರೋಪಾಯ ಮಾಡಿ ಖುಸ್ರು ಮುಲ್ಕನ ಶತ್ರುತ್ವದ ಬದಲಾಗಿ ತೋರಿಕೆಯ ಸ್ನೇಹವನ್ನು ಪ್ರಕಟಿಸಿದನು. ಶಹಾಬುದ್ದೀನನ ಉಪಾಯವೇನೆಂದರೆ ಖುಸ್ರು ಮುಲ್ಕನ ಬಂದಿಯಾಗಿದ್ದ ಮಗ ಮಲೀಕ್ ಶಹಾನನ್ನು ಹಿಜರಿ ಶಕೆ ೫೮೨ರಲ್ಲಿ ಬಂಧಮುಕ್ತಗೊಳಿಸಿದನು. ಆತನನ್ನು ಕೆಲವು ಅಧಿಕಾರಿಗಳೊಂದಿಗೆ ಸಮಗ್ರ ರಾಜ ವೈಭವದಿಂದ ತಂದೆಯನ್ನು ಕಾಣಲು ಕಳುಹಿಸಿದನು. ದಾರಿಯುದ್ದಕ್ಕೂ ಮಲಿಕ್ ಶಹಾನಿಗೆ ಮದ್ಯಪಾನ ಮಾಡಿಸುತ್ತ, ಮದ್ಯದ ಅಮಲಿನಲ್ಲಿ ದಾರಿ ಸಾಗಲು ಹೆಚ್ಚಿನ ಸಮಯ ಬೇಕಾಗುವಂತೆ ನೋಡಿಕೊಳ್ಳಲು ಶಹಾಬುದ್ದೀನನು ತನ್ನ ಅಧಿಕಾರಿಗಳಿಗೆ ವಿಶೇಷ ಆದೇಶ ನೀಡಿದನು.

ಖುಸ್ರು ಶಹಾ ತನ್ನ ಮಗನು ಬಂಧನದಿಂದ ಮುಕ್ತನಾಗಿ ಬರುವ ವಿಷಯವನ್ನು ತಿಳಿದು ಅತೀವ ಸಂತಸಗೊಂಡನು. ವೈರತ್ವವನ್ನೆಲ್ಲಾ ಮರೆತು ಶಹಾಬುದ್ದೀನನ ಸ್ನೇಹವನ್ನು ನಂಬಿ ವಿರಾಮವಾಗಿ ದಿನಗಳನ್ನು ಕಳೆಯಲಾರಂಭಿಸಿದನು. ಶಹಾಬುದ್ದೀನನು ಕಳುಹಿಸಿದ ಅಧಿಕಾರಿಗಳು ರಾಜಾಜ್ಞೆಯಂತೆ ಅತ್ಯಂತ ನಿಧಾನವಾಗಿ ನಡೆದರು. ಇದಕ್ಕೂ ಮೊದಲು ಅವರು ಶಹಾಬುದ್ದೀನನ್ನು ಕರೆದುಕೊಂಡು ಲಾಹೋರಿಗೆ ಸೇರುವ ಮುನ್ನ ಶಹಾಬುದ್ದೀನ ಬೇರೆ ಮಾರ್ಗವಾಗಿ ಲಾಹೋರದ ನದಿಯ ತೀರದಲ್ಲಿ ವೈರಿಗಳ ಸೈನ್ಯದ ಬಿಡಾರ ಮಾಡಿದನು. ಮಾರನೆಯ ದಿನ ಖುಸ್ರು ಮುಲ್ಕನು ಕಣ್ಣು

ತೆರೆದಾಗ ನದಿಯ ತೀರದಲ್ಲಿ ವೈರಿಗಳ ಸೈನ್ಯವು ತಂಗಿದುದನ್ನು ಕಂಡು ಅನಿವಾರ್ಯವಾಗಿ ಖುಸ್ರು ಮಲಕ್ ಘೋರಿಯೊಂದಿಗೆ ಶಾಂತಿಯನ್ನು ಕೋರಿದನು. ಲಾಹೋರನ್ನು ಯುದ್ಧವಿಲ್ಲದೆ ವಶಪಡಿಸಿಕೊಳ್ಳಲಾಯಿತು. ಖುಸ್ರು ಮುಲ್ಕನು ೨೮ ವರ್ಷಗಳ ಕಾಲ ರಾಜ್ಯಭಾರ ನಡೆಸಿ ಮೃತಪಟ್ಟನು. ಈತನ ಮರಣದ ನಂತರ ಘಜನಿಯ ವೈಭವಯುತ ರಾಜ್ಯವು ಮಹಮದ ಘಜನಿಯ ಪರಿವಾರದಿಂದ ಘೋರಿ ಪರಿವಾರದ ಕೈ ಸೇರಿತು.

■

*

ಅಧ್ಯಾಯ - ೨

ದೆಹಲಿ ಸುಲ್ತಾನರ ವೃತ್ತಾಂತ

ಪೀಠಿಕೆ:

ದೆಹಲಿಯ ಸುಲ್ತಾನರ ಹಿನ್ನೆಲೆಯ ಬಗ್ಗೆ ಬರವಣಿಗೆಯನ್ನು ಆರಂಭಿಸುವದಕ್ಕೆ ಮುನ್ನ ಹಿಂದೂಸ್ಥಾನದ ಮುಸ್ಲಿಮೇತರ ರಾಜ ಮಹಾರಾಜರ ಸಂಕ್ಷಿಪ್ತವಾದ ಇತಿಹಾಸ, ರಾಜಧಾನಿ ದೆಹಲಿಯ ಅಸ್ತಿತ್ವದ ಬಗ್ಗೆ ವಿವರಗಳು ಮತ್ತು ಘೋರಿ ಸುಲ್ತಾನರ ಹಿನ್ನೆಲೆ ಮೊದಲಾದ ವಿಷಯಗಳ ಬಗ್ಗೆ ಹೇಳುವುದು ಅಗತ್ಯವಾಗಿದೆ. ತದ ನಂತರ ಮುಖ್ಯ ವಿಷಯವಾದ ದೆಹಲಿಯ ಸುಲ್ತಾನರ ಬಗ್ಗೆ ಸವಿವರವಾದ ಸಂಗತಿಗಳನ್ನು ತಿಳಿದುಕೊಳ್ಳಬಹುದಾಗಿದೆ.

ಹಿಂದೂಗಳ ನಂಬಿಕೆಗಳು:

ಈಗಾಗಲೇ ಈ ಗ್ರಂಥದ ಪ್ರಸ್ತಾವನೆಯಲ್ಲಿ ಉಲ್ಲೇಖ ಮಾಡಿರುವಂತೆ ಹಿಂದೂಸ್ಥಾನದ ರಾಜಮಹಾರಾಜರುಗಳು ಕಾಲವನ್ನು ನಾಲ್ಕು ಪ್ರಮುಖ ಘಟ್ಟಗಳಲ್ಲಿ ವಿಂಗಡಿಸಿದ್ದಾರೆ . ಅವುಗಳ ಹೆಸರು ಇಂತಿವೆ ೧) ಸತ್ಯಯುಗ ೨) ತ್ರೇತಾಯಯುಗ ೩)ದ್ವಾಪರಯುಗ ಮತ್ತು ೪)ಕಲಿಯುಗ. ಹಿಂದೂಸ್ಥಾನದ ಜನತೆಯ ಮೇಲ್ಕಂಡ ನಂಬಿಕೆಯ ಪ್ರಕಾರ ಕಾಲವನ್ನು ಎಣಿಕೆ ಮಾಡುವುದಾದಲ್ಲಿ ಪ್ರವಾದಿ ಮೊಹಮ್ಮದ್‌ರವರ ಕಾಲದವರೆಗೆ ಕಲಿಯುಗದ ಮೂರು ಸಾವಿರದ ಏಳು ನೂರು ಮತ್ತು ಇನ್ನು ಹೆಚ್ಚಿನ ವರ್ಷಗಳು ಘಟಿಸಿದ್ದವು. ಹಿಂದೂಗಳು ಪ್ರತಿ ಯುಗದ ನಿರ್ದಿಷ್ಟ ವಿಶೇಷತೆಗಳನ್ನು ಮತ್ತು ಪ್ರಭಾವಗಳನ್ನು ಗುರುತಿಸಿದ್ದಾರೆ. ಅವರ ನಂಬಿಕೆಯ ಪ್ರಕಾರ ಕಲಿಯುಗದ ನಿಗದಿತ ಅವಧಿಯು ಮುಕ್ತಾಯಗೊಂಡ ನಂತರ ಮತ್ತೆ ಹೊಸದಾಗಿ ಸತ್ಯಯುಗವು ಆರಂಭವಾಗುತ್ತದೆ. ಮತ್ತು ಇದೇ ರೀತಿಯಲ್ಲಿ ಒಂದರ ಹಿಂದೆ ಒಂದು ಯುಗಗಳು ಮತ್ತೆ ಮತ್ತೆ ಮರುಕಳಿಸುತ್ತಾ ಇರುತ್ತವೆ. ಪ್ರತಿ ಯುಗದ ಅಂತ್ಯವು ಪ್ರಳಯದ ಮೂಲಕ ಆಗುತ್ತದೆ. ಹಾಗೂ ಈ ವಿಶ್ವವು ಅತ್ಯಂತ ಪುರಾತನವಾದುದು ಮತ್ತು

ವಿಶ್ವಕ್ಕೆ ಅಂತ್ಯವಿಲ್ಲ ಎಂಬುದು ಅವರ ಅಭಿಪ್ರಾಯವಾಗಿದೆ. ಆದರೆ ಈ ನಂಬಿಕೆಯ ವಿರುದ್ಧವಾಗಿ ಕೆಲವು ಬ್ರಾಹ್ಮಣರ ವಿಭಿನ್ನ ಅಭಿಪ್ರಾಯವು ಕೂಡ ಪ್ರಚಲಿತವಾಗಿದೆ. ಆ ಬ್ರಾಹ್ಮಣರ ಅಭಿಪ್ರಾಯದ ಮೇರೆಗೆ ಈ ವಿಶ್ವವು ನಶ್ವರವಾದದ್ದು ಮತ್ತು ಅದು ಸಂಪೂರ್ಣವಾಗಿ ನಾಶವಾಗುವ ಕಾಲವು ಬರುತ್ತದೆ ಎಂಬುದಾಗಿದೆ. ಈ ಅಲ್ಪಸಂಖ್ಯಾತ ಬ್ರಾಹ್ಮಣರ ಗುಂಪಿನ ಬಳಿ ವಿಶ್ವದ ಉಗಮದ ಬಗ್ಗೆ ಯಾವುದೇ ಸಿದ್ಧಾಂತವಿಲ್ಲ ಬ್ರಾಹ್ಮಣರ ಇನ್ನೊಂದು ನಂಬಿಕೆ ಎಂದರೆ ಪ್ರತಿಯೊಂದು ಯುಗದಲ್ಲಿಯೂ ಕೂಡ ಒಬ್ಬ ಪ್ರವಾದಿ ಅಥವಾ ಋಷಿಯು ಅಂದಿನ ಕಾಲದ ಅವಶ್ಯಕತೆಗೆ ಅನುಗುಣವಾಗಿ ಗ್ರಂಥವನ್ನು ರಚಿಸಿದ್ದಾರೆ ಮತ್ತು ಅತಿ ದೀರ್ಘ ಕಾಲವು ಗತಿಸಿದ್ದರೂ ಆ ಎಲ್ಲಾ ಗ್ರಂಥಗಳು ಕೂಡ ಇಂದಿನವರೆಗೂ ಸುರಕ್ಷಿತವಾಗಿದೆ ಎಂಬುದು.

ಹಿಂದೂಸ್ಥಾನದ ಜನರು ಚೈನಾ ದೇಶ ಹಾಗೂ ಇನ್ನಿತರೆ ಖಂಡಾಂತರಗಳ ಮುಸ್ಲಿಮೇತರ ಜನಾಂಗದವರಂತೆ ನೂಹ್ ಪ್ರವಾದಿಯವರ ಕಾಲದ ಪ್ರವಾಹದ ಬಗ್ಗೆ ಸಂಪೂರ್ಣವಾಗಿ ನಿರಾಕರಣೆ ಮಾಡುತ್ತಾರೆ. ಹೀಗಾಗಿ ಅನಾದಿ ಕಾಲದ ಎಲ್ಲಾ ವಸ್ತುಗಳು ಕೂಡ ಸುರಕ್ಷಿತವಾಗಿವೆ ಎಂದು ಅವರು ಆಳವಾಗಿ ನಂಬುತ್ತಾರೆ. ಅಷ್ಟೇ ಅಲ್ಲದೆ ಆದಿಯುಗವಾದ ಸತ್ಯಯುಗದ ಆರಂಭದಿಂದ ಇದುವರೆಗೂ ವಿಶ್ವದಲ್ಲಿ ಮನುಷ್ಯನ ಅಸ್ತಿತ್ವ ಇದೆಯೆಂತಲೂ ಅವರು ನಂಬುತ್ತಾರೆ. ಹಿಂದೂಗಳ ಅನೇಕ ಪಂಡಿತರು ಈ ವಿಶ್ವದ ಉಗಮವು ಸತ್ಯಯುಗದಿಂದ ಆರಂಭವಾಯಿತು ಎಂದು ಹೇಳುತ್ತಾರೆ. ಹಿಂದೂಸ್ಥಾನಿ ಪಂಡಿತರ ಹೇಳಿಕೆಯ ಪ್ರಕಾರ ಪ್ರತಿಯೊಂದು ಯುಗದಲ್ಲಿಯೂ ಆದಮ್ ಮತ್ತು ಈವ್ (ಆದಿ ಪುರುಷ ಮತ್ತು ಆದಿ ಮಾತೆ) ವಿವಿಧ ಗುಣಲಕ್ಷಣಗಳನ್ನು ಹೊಂದಿ ಜನ್ಮ ತಾಳುತ್ತಾರೆ ಎಂಬುದಾಗಿದೆ. ಈ ಕಾರಣದಿಂದಲೇ ವಿವಿಧ ಕಾಲಮಾನದಲ್ಲಿ ಜನಿಸಿದ ಮಾನವರು ನೀಳಕಾಯ, ದೀರ್ಘಾಯಸ್ಸು ಹಾಗೂ ದಷ್ಟಪುಷ್ಟತೆಯಿಂದ ಕೂಡಿದ ಶಾರೀರಿಕ ಗುಣಲಕ್ಷಣಗಳನ್ನು ಹೊಂದಿರುತ್ತಾರೆ ಇನ್ನು ಕೆಲವು ಕಾಲಮಾನಗಳಲ್ಲಿ ಜನಿಸಿದ ಮಾನವರು ಇದಕ್ಕೆ ತದ್ವಿರುದ್ಧವಾಗಿ ಅಂದರೆ ಕುಳ್ಳಗಿನ ಕಾಯ ಅಲ್ಪಾಯುಷಿಗಳು ಮತ್ತು ಕ್ಷೀಣ ಕಾಯದವರಾಗಿರುತ್ತಾರೆ. ಮನುಷ್ಯರಲ್ಲಿ ಕಂಡುಬರುವ ಈ ವಿಭಿನ್ನ ವಿಶೇಷತೆಗಳು ಸಸ್ಯ ಪ್ರಭೇಧಗಳಲ್ಲಿ ಮತ್ತು ಪ್ರಾಣಿ ಲೋಕದಲ್ಲಿಯೂ ಕಂಡು ಬರುತ್ತವೆ ಮತ್ತು ಪ್ರತಿಯೊಂದು ಯುಗದಲ್ಲಿಯೂ ಸೃಷ್ಟಿಯಾಗುವ ಮರಗಿಡಗಳು ಮುಂತಾದವು ಬೇರೆ ಯುಗದ ಮರಗಿಡಗಳು ಸಸ್ಯಗಳಿಗಿಂತ ಎತ್ತರ, ಬಣ್ಣ, ಸುವಾಸನೆಗಳಿಂದ ವಿಭಿನ್ನವಾಗಿರುತ್ತದೆ. ಸದರಿ ಹಿಂದೂಗಳ ಇನ್ನೊಂದು ನಂಬಿಕೆ ಎಂದರೆ ಬ್ರಾಹ್ಮಣರು ಮತ್ತು ಕ್ಷತ್ರಿಯರು ವಿಶ್ವದ ಉಗಮದ ಮೊದಲ ದಿನದಿಂದಲು ಅಸ್ತಿತ್ವದಲ್ಲಿದ್ದಾರೆ ಎಂಬುದು. ಅವರುಗಳನ್ನು ಹೊರತು ಪಡಿಸಿದಂತೆ ಉಳಿದ ಜಾತಿಗೆ ಸೇರಿದ ಜನರು ಮೂರನೇ ಯುಗ ಅಂದರೆ ದ್ವಾಪರಯುಗದ ಕೊನೆಯ ಮತ್ತು ನಾಲ್ಕನೇ ಪಾದದಲ್ಲಿ ಅಂದರೆ ಕಲಿಯುಗದ ಆರಂಭದ ಕಾಲಮಾನದಲ್ಲಿ ಅಪಾರ ಸಂಖ್ಯೆಯಲ್ಲಿ

ಜನ್ಮತಾಳಿದರು ಎಂಬ ನಂಬಿಕೆ ಇದೆ. ರಜಪೂತರ ಪ್ರಖ್ಯಾತ ಜನಾಂಗವು ದ್ವಾಪರಯುಗದ ಅಂತಿಮ ಭಾಗದಲ್ಲಿ ಜನ್ಮ ತಾಳಿದ್ದು, ಕಲಿಯುಗದ ಕಾಲದಲ್ಲಿ ಅವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದರು. ಹಿಂದೂಗಳ ಇನ್ನಿತರೆ ಜಾತಿ ಜನಾಂಗದವರು ಕಲಿಯುಗದ ಆರಂಭದ ಶಕೆಯಲ್ಲಿ ವಿಪರೀತವಾಗಿ ಹೆಚ್ಚಳಗೊಂಡರು. ಈ ಎಲ್ಲ ಪ್ರಕ್ರಿಯೆಯ ಬಗ್ಗೆ ಒಟ್ಟಾರೆ ಹೇಳುವುದೇನೆಂದರೆ ಪ್ರತಿಯೊಂದು ಯುಗದಲ್ಲಿಯೂ ಅಸಂಖ್ಯ ರಾಜ ಮಹಾರಾಜರು ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ರಾಜ್ಯವನ್ನು ಆಳುತ್ತಿದ್ದರು. ಮಹಾಭಾರತದಲ್ಲಿ ಈ ಬಗ್ಗೆ ಹೇಳಲಾಗಿದೆ. (ಅಕ್ಬರ್ ಚಕ್ರವರ್ತಿಯ ಕಾಲಾವಧಿಯಲ್ಲಿ ಈ ಪುರಾಣವನ್ನು ಪರ್ಶಿಯನ್ ಭಾಷೆಗೆ ಅನುವಾದ ಮಾಡಲಾಗಿದೆ) ಈ ರಾಜಮಹಾರಾಜರುಗಳ ಪೈಕಿ ದುರ್ಯೋಧನ ಎಂಬ ಒಬ್ಬ ಕ್ಷತ್ರಿಯ ರಾಜನಿದ್ದ. ಆತನು ದ್ವಾಪರಯುಗದ ಅಂತ್ಯಭಾಗದಲ್ಲಿ ಹಿಂದೂಸ್ಥಾನದ ಅತಿ ದೊಡ್ಡ ರಾಜ್ಯವನ್ನು ಆಳುತ್ತಿದ್ದ. ಆ ರಾಜನು ದೆಹಲಿ ಸಮೀಪದಲ್ಲಿದ್ದ ಹಸ್ತಿನಾಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಹಿಂದೂಗಳು ತಮ್ಮ ಪ್ರವಾದಿ ಎಂದು ಗೌರವಿಸುವ ಶ್ರೀಕೃಷ್ಣರವರು ರಾಜ ದುರ್ಯೋಧನನ ಸಮಕಾಲೀನರಾಗಿದ್ದರು. ದುರ್ಯೋಧನನಿಗೆ ಪಾಂಡವರೆಂಬ ಐದು ಮಂದಿ ಸಹೋದರರಿದ್ದು ಅವರು ದುರ್ಯೋಧನನ ಚಿಕ್ಕಪ್ಪನ ಮಕ್ಕಳಾಗಿದ್ದರು. ಆ ಐವರು ಸಹೋದರರ ವ್ಯಕ್ತಿತ್ವದಿಂದ ವಿವೇಕ ಮತ್ತು ಪರಾಕ್ರಮವು ಎದ್ದು ಕಾಣುತ್ತಿತ್ತು. ಈ ಕಾರಣದಿಂದ ಅವರ ಭವಿಷ್ಯದ ಬೆಳವಣಿಗೆ ಮತ್ತು ಜನಾದರಣೆಯ ದೆಸೆಯಿಂದ ದುರ್ಯೋಧನನು ಚಿಂತಿತನಾದ ಮತ್ತು ಅವನು ಆ ಐವರು ಸಹೋದರರ ಶತ್ರುವಾಗಿ ಪರಿಣಮಿಸಿದ. ಅವನು ಹಗಲಿರುಳು ಕೂಡ ಆ ಸಹೋದರರ ವಿನಾಶದ ಬಗ್ಗೆ ಆಲೋಚನೆ ಮಾಡುತ್ತಿದ್ದ ಆದರೆ ಯಾವುದೇ ಉಪಾಯ ಕೂಡ ಫಲಿಸುತ್ತಿರಲಿಲ್ಲ. ಕೊನೆಗೆ ಆತನು ಪಾಂಡವರನ್ನು ಜೂಜಾಟದ ಜಾಲದಲ್ಲಿ ಸಿಲುಕಿಸಿದ ಮತ್ತು ಒಂದು ದಿನ ಅವರೊಡನೆ ಜೂಜಾಟದಲ್ಲಿ ನಿರತನಾದ. ಆ ಸಂದರ್ಭದಲ್ಲಿ ಪಾಂಡವರ ಗ್ರಹಚಾರ ನೆಟ್ಟಗಿರಲಿಲ್ಲ ಹೀಗಾಗಿ ಅವರು ಜೂಜಾಟದಲ್ಲಿ ಸೋಲುತ್ತಾ ಹೋದರು. ಅವರು ತಮ್ಮ ಎಲ್ಲಾ ಆಸ್ತಿಯನ್ನು ಸೋತು ಹೋದ ನಂತರ ಆ ಐವರು ಸಹೋದರರು ಕೂಡ ತಮಗೆ ಸೇರಿದ ದೇಶಗಳಾದ (ಇಂದ್ರಪ್ರಸ್ಥ, ಸೋನಪತ್, ಪಾಣಿಪತ್, ತಪತ್ ಮತ್ತು ಭಾಗಪತ್) ಕೂಡ ಒಂದೊಂದಾಗಿ ಸೋತು ಕೈಬಿಟ್ಟರು. ದುರ್ಯೋಧನನು ಪಾಂಡವರಿಂದ ಎಲ್ಲವನ್ನು ಕಸಿದುಕೊಂಡ ನಂತರ ಅವರನ್ನು ದೇಶಾಂತರ ಅಟ್ಟಬೇಕೆಂದು ಆಲೋಚಿಸಿದ ಮತ್ತು ಅವನು ಜೂಜಿನ ಅಂತಿಮ ಆಟದಲ್ಲಿ ಪಣವಾಗಿ ಒಂದು ಶರತ್ತನ್ನು ಒಡ್ಡಿದ. ಆ ಶರತ್ತಿನ ಪ್ರಕಾರ ಆ ಜೂಜಾಟದಲ್ಲಿ ಸೋಲನ್ನುಂಡವರು ತಮ್ಮ ಸರ್ವಸ್ವವನ್ನು ತೊರೆದು ದೇಶವನ್ನು ಕೂಡ ಬಿಟ್ಟು ಹನ್ನೆರಡು ವರ್ಷಗಳವರೆಗೆ ದೇಶಾಂತರ ಹೋಗಬೇಕೆಂತಲೂ ತದ ನಂತರ (ಆ ಹನ್ನೆರಡು ವರ್ಷದ ದೇಶಾಂತರದ ನಂತರ) ಒಂದು ವರ್ಷದವರೆಗೆ ಅಜ್ಞಾತವಾಸವನ್ನು ಮಾಡಬೇಕು ಎಂಬುದು ಆ ಶರತ್ತಾಗಿತ್ತು.

ಈ ಶರತ್ತನ್ನು ಒಪ್ಪಿಕೊಂಡ ನಂತರ ಜೂಜಾಟದಲ್ಲಿ ಭಾಗವಹಿಸಿದ ಪಾಂಡವರು ಪುನಃ ಸೋತರು ಮತ್ತು ಅವರು ಶರತ್ತಿನ ಮೇರೆಗೆ ದೇಶಾಂತರ ಹೋದರು. ಪಾಂಡವರು ತಮ್ಮ ದೇಶವನ್ನು ತೊರೆದು ದಖ್ಖನಿನತ್ತ ಪ್ರಯಾಣ ಬೆಳೆಸಿದರು ಮತ್ತು ಹನ್ನೆರಡು ವರ್ಷಗಳವರೆಗೆ ಈ ಭೂಭಾಗದಲ್ಲಿ ಅಪರಿಚಿತರಂತೆ ತಮ್ಮ ಜೀವನ ನಡೆಸಿದರು . ಈ ಕಾಲಾವಧಿಯಲ್ಲಿ ದುರ್ಯೋಧನನು ತನ್ನ ಕಾರ್ಯಭಾರಿಗಳ ಮೂಲಕ ಪಾಂಡವರ ಬಗ್ಗೆ ಸಕಲ ವಿಷಯವನ್ನು ತಿಳಿದುಕೊಳ್ಳುತ್ತಿದ್ದ .ಹನ್ನೆರಡು ವರ್ಷಗಳ ಅವಧಿ ಮುಕ್ತಾಯಗೊಂಡ ನಂತರ ಮುಂದಿನ ಶರತ್ತಿನ ಮೇರೆಗೆ ಅವರು ಒಂದು ವರ್ಷದ ಅಜ್ಞಾತವಾಸವನ್ನು ಅನುಭವಿಸಬೇಕಿತ್ತು. ಈ ಉದ್ದೇಶದ ಸಲುವಾಗಿ ಅವರು ತಮ್ಮ ವೇಷಭೂಷಣಗಳನ್ನು ಬದಲಾಯಿಸಿಕೊಂಡರು ಮತ್ತು ಅವರು ಹಾಲಿ ದಖ್ಖನ್‌ನಲ್ಲಿರುವ ಆದಿಲ್‌ಶಾಹಿ ಪ್ರದೇಶದ ರಾಯನ್‌ಗೆ ಹೋದರು ಹಾಗೂ ಅಲ್ಲಿ ವಾಸ ಮಾಡತೊಡಗಿದರು. ದುರ್ಯೋಧನನು ಅವರನ್ನು ಪತ್ತೆ ಹಚ್ಚಲು ಸರ್ವವಿಧದಲ್ಲಿಯೂ ಪ್ರಯತ್ನ ಪಟ್ಟ. ಆದರೆ ಈ ನಿಟ್ಟಿನಲ್ಲಿ ಅವನು ಸಫಲನಾಗಲಿಲ್ಲ.ಹನ್ನೆರಡು ವರ್ಷದ ವನವಾಸಕ್ಕಿಂತಲೂ ತೀರಾ ಕಷ್ಟಕರವಾಗಿದ್ದ ಒಂದು ವರ್ಷದ ಅಜ್ಞಾತವಾಸ ಕೂಡ ಮುಕ್ತಾಯಗೊಂಡ ನಂತರ ಪಾಂಡವರು ತಮ್ಮ ಶರೀರದಿಂದ ದೇಶ ಭ್ರಷ್ಟತೆ ಮತ್ತು ಪ್ರಯಾಣದ ಕುರುಹುಗಳನ್ನು ಕಿತ್ತೊಗೆದು ಸ್ವದೇಶಕ್ಕೆ ಮರಳಿದರು ಮತ್ತು ತಮ್ಮ ರಾಜ್ಯಗಳನ್ನು ಮರಳಿಕೊಡುವಂತೆ ದುರ್ಯೋಧನನನ್ನು ಕೋರಿದರು.

ಪಾಂಡವರು ಕ್ಷೇಮವಾಗಿ ಮರಳಿ ಬಂದಿದ್ದರಿಂದ ದುರ್ಯೋಧನನಿಗೆ ಅತೀವ ದುಃಖವಾಯಿತು. ತನ್ನ ಹಿಂದಿನ ಎಲ್ಲಾ ಕೃತ್ಯಗಳ ಉದ್ದೇಶವು ಶತ್ರುಗಳನ್ನು ದಮನ ಮಾಡುವುದೇ ಆಗಿದ್ದು, ಅದು ವಿಫಲವಾದರೂ ಅವನು ತನ್ನ ಹಟವನ್ನು ಬಿಡಲಿಲ್ಲ. ದುರ್ಯೋಧನನು ತನ್ನ ನಿಲುವಿಗೆ ದೃಢವಾಗಿ ಅಂಟಿಕೊಂಡ ಹಾಗೂ ಐವರು ಸಹೋದರರಿಗೂ ತಮ್ಮ ಪ್ರಾಣಗಳು ಪ್ರಿಯವಾಗಿದ್ದರೆ ಕೂಡಲೇ ಅವರು ದೇಶದಿಂದ ಹೊರ ಹೋಗಬೇಕೆಂತಲೂ ಇಲ್ಲವಾದಲ್ಲಿ ಅವರನ್ನು ಸಾವಿನ ಮನೆಗೆ ಅಟ್ಟಲಾಗುವುದೆಂತಲೂ ಅವನು ಮರು ಉತ್ತರವನ್ನು ನೀಡಿದ. ದುರ್ಯೋಧನನ ಈ ರೀತಿಯ ಉತ್ತರದಿಂದ ಪಾಂಡವರು ನಿರಾಶರಾಗಿ ಮಥುರಾವನ್ನು ತಲುಪಿದರು ಮತ್ತು ಅಲ್ಲಿ ಅವರು ಹಿಂದೂಗಳ ಪ್ರಖ್ಯಾತ ಋಷಿಯಾದ ಶ್ರೀಕೃಷ್ಣನ ಆಶ್ರಯದಲ್ಲಿ ರಕ್ಷಣೆ ಪಡೆದರು.

ಶ್ರೀಕೃಷ್ಣನು ದುರ್ಯೋಧನನಿಗೆ ಪಾಂಡವರ ಬಗ್ಗೆ ಶಿಫಾರಸ್ಸು ಮಾಡಿದ ಆದರೆ ದುರ್ಯೋಧನನ ದುರಾಸೆ ಮತ್ತು ಕುಟಿಲತೆಯು ಎಷ್ಟು ತೀವ್ರವಾಗಿತ್ತೆಂದರೆ ಆತನು ಹಿಂದೂಗಳ ಅತಿ ಪ್ರಭಾವೀ ಅವತಾರ ಪುರುಷನ ಮಾತನ್ನು ಕೂಡ ಗಣನೆಗೆ ತೆಗೆದುಕೊಳ್ಳಲಿಲ್ಲ. ಮತ್ತು ಶ್ರೀಕೃಷ್ಣನ ಬುದ್ಧಿವಾದವನ್ನು ಕಡೆಗಣಿಸಿದ. ದುರ್ಯೋಧನನು

ಯಾವುದೇ ಕಾರಣಕ್ಕೂ ತನ್ನ ವಾಗ್ದಾನವನ್ನು ಪೂರೈಸಲು ಒಪ್ಪಲಿಲ್ಲವಾದ್ದರಿಂದ ಉಭಯತ್ರರ ನಡುವೆ ಯುದ್ಧ ಅನಿವಾರ್ಯವಾಯಿತು. ಉಭಯತ್ರರ ನಡುವೆ ಅತ್ಯಂತ ರೋಚಕವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಉಭಯ ಪಕ್ಷದ ಅಸಂಖ್ಯ ಸಿಪಾಯಿಗಳ ಮಾರಣ ಹೋಮವಾಯಿತು ಆದರೆ ದೇವರು ಎಂದಿಗೂ ನ್ಯಾಯಪಕ್ಷಪಾತಿಯಾಗಿರುತ್ತಾನೆ. ಅಂತೆಯೇ ಆ ಯುದ್ಧದಲ್ಲಿ ದುರ್ಯೋಧನನು ವಧಿಸಲ್ಪಟ್ಟ ಹಾಗೂ ಪಾಂಡವರಿಗೆ ವಿಜಯ ಪ್ರಾಪ್ತಿಯಾಯಿತು. ಆ ಐವರು ಸಹೋದರರು ಹಿಂದೂಸ್ಥಾನದ ರಾಜರಾದರು ಮತ್ತು ಹಿಂದೂಸ್ಥಾನದ ಬಹುತೇಕ ಭಾಗವು ಅವರ ಆಳ್ವಿಕೆಗೆ ಒಳಪಟ್ಟಿತು. ಕ್ರಮೇಣ ಆ ಐವರು ಸಹೋದರರು ಕೂಡ ಕಾಲನ ಕರೆಗೆ ಓ ಗೊಟ್ಟರು . ನಂತರ ಅವರ ಸಂತತಿಯು ಅನೇಕ ತಲೆಮಾರುಗಳವರೆಗೆ ಹಿಂದೂಸ್ಥಾನವನ್ನು ಆಳಿತು .

ದ್ವಾಪರ ಯುಗವು ಮುಕ್ತಾಯಗೊಂಡು ಕಲಿಯುಗದ ಕಾಲಾವಧಿಯಲ್ಲಿ ಹಿಂದೂಸ್ಥಾನದ ಆಳ್ವಿಕೆಯು ರಾಜ ಮಹಾರಾಜರ ವಶದಿಂದ ಗುಲಾಮರು ಮತ್ತು ಅವರಿಗೆ ಸಂಬಂಧಪಟ್ಟವರ ವಶಕ್ಕೆ ಹಸ್ತಾಂತರಿಸಲ್ಪಟ್ಟಿತು. ಇಡೀ ದೇಶದಲ್ಲಿ ಅರಾಜಕತೆಯು ತಾಂಡವವಾಡತೊಡಗಿತು. ಗುಲಾಮರ ಆಡಳಿತ ಕ್ರಮವು ದಿನೇ ದಿನೇ ಅವನತಿಯನ್ನು ಹೊಂದಿಲಾರಂಭಿಸಿ, ಕೊನೆಗೆ ಈ ರಾಜ್ಯಾಡಳಿತವು ಉಜ್ಜಯನಿಯ ಪ್ರಖ್ಯಾತ ದೊರೆಯಾದ ವಿಕ್ರಮಾದಿತ್ಯನ ಕೈಗೆ ತಲುಪಿತು .ಅವನು ಹಿಂದೂಸ್ಥಾನದಿಂದ ಅರಾಜಕತೆಯನ್ನು ತೊಲಗಿಸಿದ ಹಾಗೂ ಕ್ರಮೇಣ ಅಲ್ಲಿ ನುಸುಳಿದ್ದ ದಂಗೆಕೋರರು ಮತ್ತು ವಿದ್ರೋಹಿಗಳಿಂದ ತಪ್ಪಿಸಿ ದುರ್ಯೋಧನನ ಸಂಪೂರ್ಣ ರಾಜ್ಯಾಡಳಿತ ಪ್ರದೇಶವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ . ಮತ್ತು ಹಿಂದೂಸ್ಥಾನದ ದಕ್ಷಿಣ ಭಾಗವನ್ನು ಕೂಡ ಅವನು ಆಕ್ರಮಿಸಿದ. ರಾಜ ವಿಕ್ರಮಾದಿತ್ಯನ ಆಳ್ವಿಕೆಯ ಕೊನೆಯ ಹಂತದಲ್ಲಿ ಪಾಟ್ನಾದ ನಿವಾಸಿಯಾಗಿದ್ದ ಇಪ್ಪತ್ತೇಳು ವರ್ಷ ವಯಸ್ಸಿನ ಶಾಲಿವಾಹನ ಎಂಬ ಹೆಸರಿನ ಬ್ರಾಹ್ಮಣನು ದಖ್ಖನಿನಲ್ಲಿ ದಂಗೆ ಎದ್ದ ಹಾಗೂ ಸಂಪೂರ್ಣ ದಖ್ಖನ್ನನ್ನು ಆಕ್ರಮಿಸಿಕೊಂಡ. ವಿಕ್ರಮಾದಿತ್ಯನು ಶಾಲಿವಾಹನನನ್ನು ಎದುರಿಸಲು ಅಪಾರ ಸೈನ್ಯವನ್ನು ಜಮಾವಣೆ ಮಾಡಿದ ಮತ್ತು ನರ್ಮದಾ ನದಿಯ ತೀರವನ್ನು ತಲುಪಿದ. ಶಾಲಿವಾಹನನು ಆ ಸೈನ್ಯವನ್ನು ಪರಾಕ್ರಮದಿಂದ ಎದುರಿಸಿದ ಹಾಗೂ ಅಲ್ಲಿ ನಡೆದ ಘನ ಘೋರ ಯುದ್ಧದಲ್ಲಿ ರಾಜ ವಿಕ್ರಮಾದಿತ್ಯನು ಹತನಾದ ಮತ್ತು ಶಾಲಿವಾಹನನಿಗೆ ವಿಜಯಲಕ್ಷ್ಮಿ ಒಲಿದಳು. ವಿಕ್ರಮಾದಿತ್ಯನ ಮರಣವಾದ ನಂತರ ಶಾಲಿವಾಹನನು ನರ್ಮದಾ ನದಿಯನ್ನು ದಾಟಿ ರಾಜ ವಿಕ್ರಮಾದಿತ್ಯನ ಆಳ್ವಿಕೆಗೆ ಒಳಪಟ್ಟಿದ್ದ ಹಿಂದೂಸ್ಥಾನದ ಆ ಭಾಗವನ್ನು ಗೆಲ್ಲಬೇಕೆಂದು ನಿರ್ಧರಿಸಿದ. ಆದರೆ ನದಿಯಲ್ಲಿ ತೀವ್ರ ಪ್ರವಾಹವು ಏರಿದ್ದರಿಂದ ಅತನ ಅನೇಕ ಸೈನಿಕರು ಮತ್ತು ಯುದ್ಧೋಪಯೋಗಿ ಜಾನುವಾರುಗಳು ಸಾವನ್ನಪ್ಪಿದವು ಶಾಲಿವಾಹನನಿಗೆ ತನ್ನ

ನಿರ್ಧಾರದ ಬಗ್ಗೆ ಅತೀವ ನಾಚಿಕೆಯುಂಟಾಯಿತು. ಮತ್ತು ಅವನು ಆ ನಿರ್ಧಾರವನ್ನು ಕೈಬಿಟ್ಟು ಉಜ್ಜಯಿನಿಯನ್ನು ಆತ ರಾಜ ವಿಕ್ರಮಾದಿತ್ಯನ ಮಗನಿಗೆ ಒಪ್ಪಿಸಿದ.

ಅಖಂಡ ಹಿಂದೂಸ್ಥಾನವು ತನ್ನ ವರ್ಷದ ಆರಂಭವನ್ನು ವಿಕ್ರಮಾದಿತ್ಯನ ಮೆರವಣಿಗೆಯ ಮೂಲಕ ಆಚರಿಸುತ್ತದೆ. ಹಜರತ್ ಮೊಹಮ್ಮದ್ ಸಲ್ಲಲ್ಲಾಹುವಸಲ್ಲಮ್ ರವರ ಹಿಜರತ್‌ನ (ಮೆಕ್ಕಾದಿಂದ ಮದೀನಾಗೆ ವಲಸೆ ಹೋದ ಘಟನೆಗೆ ಹಿಜರತ್ ಎನ್ನುತ್ತಾರೆ) ಸಂದರ್ಭದಲ್ಲಿ ವಿಕ್ರಮ ಶಕೆಯು ಆರಂಭವಾಗಿ ೬೨೧ ವರ್ಷಗಳಾಗಿದ್ದವು. ಹಿಂದೂಸ್ಥಾನದ ಇತಿಹಾಸಕಾರರು ದಾಖಲಿಸಿರುವ ಮೇರೆಗೆ ವಿಕ್ರಮಾದಿತ್ಯನ ನಂತರ ಬಹುಕಾಲದವರೆಗೆ ಆ ದೇಶದ ಆಳ್ವಿಕೆಯು ರಾವ್ ವಂಶಜರ ಹಿಡಿತಕ್ಕೆ ಒಳಪಟ್ಟಿತ್ತು .ನಂತರ ಕ್ರಮೇಣ ಅವರು ಶಕ್ತಿಗುಂದಿದರು ಮತ್ತು ಕ್ಷತ್ರಿಯ ಸಂತತಿ ಹಾಗೂ ರಜಪೂತರು ಅಧಿಕಾರವನ್ನು ಪಡೆಯ ತೊಡಗಿದರು. ಹೀಗಾಗಿ ಈ ಗುಂಪುಗಳ ಅನೇಕ ವ್ಯಕ್ತಿಗಳು ತಮ್ಮದೇ ಆದ ಸ್ವತಂತ್ರ ರಾಜ್ಯಗಳನ್ನು ಕಟ್ಟಿಕೊಂಡರು.

ರಜಪೂತರ ಶಕ್ತಿ ಪರಾಕ್ರಮಗಳು ಕ್ರಮೇಣ ಸೊರಗತೊಡಗಿದವು ವಿಕ್ರಮಾದಿತ್ಯನ ಆಡಳಿತಾವಧಿಯಲ್ಲಿಯೇ ಇವರ ಪೈಕಿ ಕೆಲವರು ಅತೀವ ಸಿರಿವಂತಿಕೆ ಮತ್ತು ಅಧಿಕಾರವನ್ನು ಪಡೆದುಕೊಂಡಿದ್ದರು. ವಿಕ್ರಮಾದಿತ್ಯನ ಕಾಲಾವಧಿಯ ಈ ಅಧಿಕಾರಸ್ಥ ರಜಪೂತರು ತಮ್ಮ ವಂಶದ ಇತರೆ ಸದಸ್ಯರಿಗೆ ಅತ್ಯಂತ ಉತ್ತಮ ರೀತಿಯ ತರಬೇತಿಯನ್ನು ನೀಡುತ್ತಿದ್ದರು ಹಾಗೂ ಅವರ ಬಗ್ಗೆ ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಇದರ ಫಲವಾಗಿ ಈ ಗುಂಪು ಅಲ್ಪ ಕಾಲದಲ್ಲಿಯೇ ಕ್ಷತ್ರಿಯ ರಾಜ್ಯರ ಸೈನ್ಯ ಮತ್ತು ಆಸ್ಥಾನಗಳಲ್ಲಿ ಪ್ರಭಾವಿ ಶಕ್ತಿಗಳಾಗಿ ಬೆಳೆದರು. ಹಾಗೂ ಈ ಬೆಳವಣಿಗೆಯ ಪರಿಣಾಮವಾಗಿ ಈ ಜನರು ಕ್ಷತ್ರಿಯ ರಾಜರ ಊಳಿಗವನ್ನು ತೊರೆದು ತಮ್ಮದೇ ಆದ ಸ್ವತಂತ್ರ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡರು . ಈ ಕ್ರಮವು ಮುಂದುವರೆಯುತ್ತಾ ಹೋಯಿತು ಹಾಗೂ ರಜಪೂತರು ತಮ್ಮ ಸ್ವಂತ ಶಕ್ತಿ ಸಾಮರ್ಥ್ಯಗಳಿಂದ ಇತರೆ ರಜಪೂತ ರಾಜರ ಊಳಿಗವನ್ನು ತೊರೆದು ತಮ್ಮದೇ ಆದ ಸ್ವತಂತ್ರ ರಾಜ್ಯಗಳನ್ನು ಕಟ್ಟಿಕೊಂಡರು. ತದ ನಂತರ ಇಸ್ಲಾಮಿ ದಿಗ್ವಿಜಯಗಳ ಸರಣಿಯು ಆರಂಭವಾಯಿತು ಹಾಗೂ ಸುಲ್ತಾನರಿಗಿಂತ ಮುಂಚಿತವಾಗಿಯೇ ಇಡೀ ಹಿಂದೂಸ್ಥಾನದಲ್ಲಿ ಸದರಿ ರಜಪೂತರ ಆಳ್ವಿಕೆಯು ಇತ್ತು.

ಹಿಂದೂಸ್ಥಾನದ ಮೇಲೆ ಇಸ್ಲಾಮೀ ಶಕ್ತಿಗಳ ದಿಗ್ವಿಜಯಗಳ ಸರಣಿಯು ಪ್ರಾರಂಭವಾದಾಗ ಈ ರಜಪೂತ ರಾಜರ ಪರಿಸ್ಥಿತಿಯು ದಯನೀಯವಾಗ ತೊಡಗಿತು. ಹಾಗೂ ಮೆಹಮೂದ್ ಹಾಗೂ ಆತನ ಪುತ್ರರ ನಿರಂತರ ಆಕ್ರಮಣವು ಈ ರಜಪೂತರ ಆಳ್ವಿಕೆಯನ್ನು ಕೊನೆಗಾಣಿಸಿತು. ಘಜ್ನಿ ವಿಜಯಗಳು ಸರ್‌ಹಿಂದ್, ಥಾನೇಸರ್ ಮತ್ತು ಹಾನ್ಸಿ ಮೊದಲಾದ ಪ್ರಖ್ಯಾತ ಕೋಟೆಗಳ ಮೇಲೆ ತಮ್ಮ ವಿಜಯ ಪತಾಕೆಯನ್ನು ಹಾರಿಸಿದರು. ಲಾಹೋರ್ ಮತ್ತು ಅದರ ಸುತ್ತಮುತ್ತಲಿನ ಅನೇಕ ರಾಜರು

ಪರಾಜಯವನ್ನು ಅನುಭವಿಸಿದರು. ಈ ಘಜ್ನಿ ವಂಶಸ್ಥರು ಅಜ್ಮೀರ್ ಮತ್ತು ದೆಹಲಿಯ ರಾಜರ ಆಡಳಿತವನ್ನು ಕೊನೆಗೊಳಿಸಬೇಕೆಂಬ ಆಲೋಚನೆಯಲ್ಲಿ ಇರುವಾಗಲೇ ಅವರ ರಾಜ್ಯವು ಅಧಃಪತನವನ್ನು ಹೊಂದಿತು. ಆದರೆ ಅವರ ಈ ಇರಾದೆಯನ್ನು ನಂತರದ ಕಾಲಮಾನದಲ್ಲಿ ಸುಲ್ತಾನ್ ಶಹಾಬುದ್ದೀನ್ ಘೋರಿಯು ಕಾರ್ಯಗತಗೊಳಿಸಿದ. ಯಾವ ಹಿಂದೂ ರಾಜರು ಸುಲ್ತಾನ್ ಘೋರಿಯ ಆಕ್ರಮಣದಿಂದ ಬಚಾವಾದರೋ ಅವರನ್ನು ದೆಹಲಿ ಗುಜರಾತ್ ಮತ್ತು ಮಂದೋ ಮೊದಲಾದ ಇಸ್ಲಾಮಿ ರಾಜರು ಆಕ್ರಮಿಸಿಕೊಂಡು ಆ ರಾಜ್ಯಗಳನ್ನು ಧೂಳೀಪಟ ಮಾಡಿದರು. ಘೋರಿಯ ನಂತರ ತೈಮೂರಿ ಚಕ್ರವರ್ತಿಗಳು ರಜಪೂತ ರಾಜರನ್ನು ರೈತರು ಮತ್ತು ಕೂಲಿಯಾಳುಗಳಾಗಿ ಪರಿವರ್ತನೆ ಮಾಡಿದರು. ಈ ಮುಸ್ಲಿಮೇತರ ರಾಜಮಹಾರಾಜರ ಮೇಲೆ ನಿರಂತರವಾಗಿ ನಡೆದ ಯುದ್ಧಗಳ ದೆಸೆಯಿಂದ ಜಹಾಂಗೀರ್ ಬಾದಶಹ ಗಾಜಿಯ ಆಡಳಿತಾವಧಿಯ ಸಂದರ್ಭದಲ್ಲಿ ರಜಪೂತ ರಾಜನಾದ ರಾಣಾನನ್ನು ಹೊರತು ಪಡಿಸಿ ಇನ್ನು ಯಾವ ರಜಪೂತ ರಾಜನ ನಿಶಾನೆಯೂ ಉಳಿದಿರಲಿಲ್ಲ. ಜಹಾಂಗೀರ್ ಬಾದಶಹ ಗಾಜಿಯು ಈ ರಾಣಾನ ಮೇಲೆ ಕೂಡ ಯುದ್ಧವನ್ನು ಮಾಡಿದ ಎಂದು ಐತಿಹ್ಯವಿದೆ.

ದಿಲ್ಲಿ ಶಹರಿನ ಬುನಾದಿ:

೩೦೭ ನೇ ಇಸವಿಯ ಒಂದು ಪವಿತ್ರ ಮಾಹೆಯಲ್ಲಿ ತವಾರ್ ಪರಿವಾರದ ರಜಪೂತ ರಾಜನಾದ ದ್ರೌಪದನು ಇಂದ್ರ ಪ್ರಸ್ಥ ಪಟ್ಟಣದ ಜೊತೆಯಲ್ಲಿ ಇನ್ನೊಂದು ಹೊಸ ಪಟ್ಟಣದ ಅಸ್ತಿಭಾರವನ್ನು ಹಾಕಿದ ಆ ಪಟ್ಟಣದ ಮಣ್ಣು ತೀರಾ ಮೃದುವಾಗಿತ್ತು. ಆ ಕಾರಣದಿಂದ ಕಬ್ಬಿಣದ ಸರಳುಗಳನ್ನು ನೆಲದಲ್ಲಿ ಗಟ್ಟಿಯಾಗಿ ನೆಡಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಈ ನಗರದ ಹೆಸರನ್ನು ದೆಹಲಿ ಎಂದು ಕರೆಯಲಾಯಿತು. ದ್ರೌಪದನ ನಂತರ ದೆಹಲಿಯನ್ನು ಎಂಟು ಮಂದಿ ತವಾರ್ ವಂಶದ ರಜಪೂತರು ಆಳಿದರು ಅವರ ಹೆಸರುಗಳು ಇಂತಿವೆ:

೧. ರಾಜ ಭನೋಜ್, ೨. ರಾಜ ಇಥರ್ನ್, ೩.ರಾಜ ಸಪಸಂದಲ್, ೪. ರಾಜ ರೊಬೆಕ್ ೫. ರಾಜ ರ್ಥೇತಕ್, ೬.ರಾಜಾ ಆಹತಕತ್ ೭. ರಾಜಾ ಮದನ್ ಪಾಲ್ ಮತ್ತು ೮. ರಾಜ ಶಾಲಿ ವಾಹನ. ಈ ವಂಶಜರು ಅವನತಿಯನ್ನು ಹೊಂದಿದ ನಂತರ ದೆಹಲಿಯ ಆಳ್ವಿಕೆಯು ರಜಪೂತರ ಪೈಕಿ ಅತ್ಯಂತ ಉತ್ತಮ ಕುಲದವರಾದ ಚೌಹಾಣ್ ಕುಲಸ್ಥರ ಕೈಸೇರಿತು. ಚೌಹಾಣ್ ರಾಜರ ಪೈಕಿ ಮಾಣಿಕ್‌ದೇವ್, ದೇವರಾಜ್, ರಾವಲ್‌ದೇವ್, ಜಾಹರ್‌ದೇವ್,ಸಹರ್‌ದೇವ್ ಮೊದಲಾದ ಪ್ರಖ್ಯಾತ ರಾಜರು ಒಬ್ಬರ ನಂತರ ಒಬ್ಬರು ರಾಜ್ಯವಾಳಿದರು. ನಂತರ ದೆಹಲಿಯ ಆರನೇ ಮತ್ತು ಕೊನೆಯ ಚೌಹಾಣ್ ರಾಜನಾದ ರಾಜ ಪೃಥ್ವಿರಾಜ್ ಸಿಂಹಾಸನವನ್ನು ಏರಿದ. ಈ ರಾಜನು ಶಹಾಬುದ್ದೀನ್ ಘೋರಿಯಂತಹ ಅತ್ಯಂತ ಶಕ್ತಿಶಾಲಿ ಮತ್ತು ಪರಾಕ್ರಮಿ ರಾಜನನ್ನು

ಎದುರಿಸಬೇಕಾಯಿತು. ಉಭಯತ್ರರ ನಡುವೆ ಯುದ್ಧ ರಂಗದಲ್ಲಿ ಘೋರ ಕಾಳಗ ನಡೆಯಿತು. ಆ ಯುದ್ಧದಲ್ಲಿ ರಾಜ ಪೃಥ್ವಿರಾಜ್ ಸಾವನ್ನಪ್ಪಿದ. ಹಿಜರಿ ಶಕೆ ೫೮೮ ನೇ ಇಸವಿಯ ಕೊನೆಯ ಭಾಗದಲ್ಲಿ ದೆಹಲಿಯ ಆಳ್ವಿಕೆಯು ಚೌಹಾಣ್ ವಂಶಜರ ಆಳ್ವಿಕೆಯಿಂದ ಘೋರಿ ಮನೆತನದ ಇಸ್ಲಾಮಿ ಬಾದಶಹನ ಕೈಸೇರಿತು.

ಘೋರಿಗಳ ವೃತ್ತಾಂತ :

ಘೋರಿ ಸುಲ್ತಾನರ ಬಗ್ಗೆ ಎಲ್ಲಾ ಇತಿಹಾಸಕಾರರ ಒಮ್ಮತದ ಅಭಿಪ್ರಾಯವೇನೆಂದರೆ ಈ ವಂಶವು ಜೆಹಾಕ್ ಬಾದಶಹನ ಸಂತತಿ ಎಂಬುದು. ಘೋರಿ ವಂಶದ ಸಂಕ್ಷಿಪ್ತ ಹಿನ್ನೆಲೆ ಏನೆಂದರೆ ಇರಾನಿನ ಬಾದಶಹನಾದ ಫರೀದೋನ್ ಎಂಬುವಾತನು ಜೆಹಾಕ್‌ನ ಮೇಲೆ ಯುದ್ಧ ಮಾಡಿದಾಗ ಜೆಹಾಕ್ ವಂಶದ ಎಲ್ಲಾ ಸದಸ್ಯರನ್ನು ಕೊಲೆ ಮಾಡಿದ ಅಥವಾ ಅವರನ್ನು ದೇಶ ಭ್ರಷ್ಟರನ್ನಾಗಿ ಮಾಡಿದ. ಆದರೆ ಸೂರಿ ಮತ್ತು ಸಾಮ್ ಎಂಬ ಇಬ್ಬರು ಸಹೋದರರರು ಫರೀದೋನ್‌ನ ಆಸ್ಥಾನದಲ್ಲಿ ಸಾಮಂತ ರಾಜರಾಗಿ ಉಳಿದರು. ಕೆಲದಿನಗಳ ಕಾಲ ಇಬ್ಬರು ಸಹೋದರರು ಕೂಡ ಫರೀದೋನ್‌ನ ಆಸ್ಥಾನದ ಪರಿಚಾರಿಕೆಯಲ್ಲಿ ಜೀವನವನ್ನು ನಡೆಸಿದರು. ನಂತರ ಫರೀದೋನ್ ತಮ್ಮ ವಂಶದ ಶತ್ರು ಎಂಬುದನ್ನು ಮನಗಂಡರು. ಹಾಗೂ ಅವರು ತಮ್ಮ ಕೆಲವು ನಂಬಿಗಸ್ಥ ಬೆಂಬಲಿಗರೊಡನೆ ನಹವಂದ್‌ನ ಕಡೆ ಪರಾರಿಯಾದರು ಮತ್ತು ಅದನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅಭಿವೃದ್ಧಿಯನ್ನು ಹೊಂದ ತೊಡಗಿದರು. ಸೂರಿಯು ತನ್ನ ವಂಶದ ಮುಖಂಡ ಸರ್ದಾರ್ ಆಗಿ ಗುರುತಿಸಲ್ಪಟ್ಟ ಮತ್ತು ಸಾಮ್ ಸೇನಾಧಿಕಾರಿಯಾಗಿ ಆಡಳಿತವನ್ನು ತನ್ನ ಕೈಗೆತ್ತಿಕೊಂಡ ಇಬ್ಬರು ಸಹೋದರರ ನಡುವೆಯೂ ಅಪಾರ ಪ್ರೀತಿ, ವಿಶ್ವಾಸ ಮತ್ತು ನಂಬಿಕೆಯ ಬೆಸುಗೆ ಇತ್ತು ಸೂರಿಯ ಮಗಳ ಮದುವೆಯು ಸಾಮ್‌ನ ಮಗ ಶುಜಾನೊಡನೆ ನೆರವೇರಿತು. ಈ ಮದುವೆ ನಡೆದ ಕೆಲ ಸಮಯದ ನಂತರ ಸಾಮ್ ಮೃತ ಪಟ್ಟ ಮತ್ತು ಶುಜಾ ತನ್ನ ಚಿಕ್ಕಪ್ಪನ ಆಶ್ರಯದಲ್ಲಿ ನೆಮ್ಮದಿಯ ಬದುಕನ್ನು ನಡೆಸತೊಡಗಿದ .ಆದರೆ ಅವನ ನೆಮ್ಮದಿ ಬಹುಕಾಲ ಉಳಿಯಲಿಲ್ಲ ಮತ್ತು ಕುತಂತ್ರಗಳು ಚಾಡಿ ಮಾತುಗಳಿಂದ ಸೂರಿಯ ಮನಸ್ಸನ್ನು ಕಲುಷಿತಗೊಳಿಸಿ ಶುಜಾನ ಬಗ್ಗೆ ದ್ವೇಷವನ್ನು ಉಂಟು ಮಾಡಿದರು. ಮತ್ತು ಸೂರಿಯು ಶುಜಾನಿಂದ ತನ್ನ ಮಗಳನ್ನು ಬೇರ್ಪಡಿಸಿ ಅವನನ್ನು ದೇಶ ಭ್ರಷ್ಟನನ್ನಾಗಿಸಬೇಕೆಂದು ಯೋಜನೆಯೊಂದನ್ನು ರೂಪಿಸಿದ. ಸೂರಿಯ ಮಗಳಿಗೆ ಈ ವಿಷಯವು ತಿಳಿದುಬಂದಾಗ ಆಕೆಯು ತನ್ನ ಪತಿಯಾದ ಶುಜಾಗೆ ಸಕಲ ಮಾಹಿತಿಯನ್ನು ನೀಡಿದಳು. ಎಲ್ಲಾ ಸಂಗತಿಗಳ ಮಾಹಿತಿಯನ್ನು ಪಡೆದ ನಂತರ ಶುಜಾ ಅಲ್ಲಿಂದ ಹೊರ ಬೀಳುವ ತೀರ್ಮಾನವನ್ನು ಕೈಗೊಂಡ. ಒಂದು ಇರುಳಿನಂದು ಆತನು ಅಶ್ವಾರೋಹಿ ತಂಡದ ಹತ್ತು ಉತ್ತಮ ಕುದುರೆಗಳು ಮತ್ತು ಒಂಟೆಗಳನ್ನು ಸಿದ್ದ ಪಡಿಸಿಕೊಂಡಿದ್ದು ತನ್ನ ಹೆಂಡತಿ ಮತ್ತು ಮಕ್ಕಳು ಹಾಗೂ ಅಪಾರ ದನ

ಕನಕದೊಡನೆ ಘೋರಿಸ್ಥಾನದತ್ತ ಪರಾರಿಯಾದ. ಘೋರಿಸ್ಥಾನದ ಒಂದು ಸುರಕ್ಷಿತ ಮತ್ತು ನೆಮ್ಮದಿಯ ತಾಣವನ್ನು ತಲುಪಿದ ಕೂಡಲೇ ಅವನಿಗೆ ಅತ್ಯಂತ ಸಂತೋಷವಾಯಿತು. ಆ ತಾಣದ ಸುರಕ್ಷತೆಯಿಂದ ಪ್ರಭಾವಿತನಾಗಿ ಆತನು "ರೋ ಮಂದಿಶ್" (ಈಗ ಭಯವಿಲ್ಲ) ಎಂಬ ಉದ್ಗಾರ ತೆಗೆದ. ಈ ಕಾರಣದಿಂದ ಆ ಪ್ರದೇಶದ ಹೆಸರು ರೋಮಂದಿಶ್ ಎಂದಾಯಿತು. ಆ ಭೂಭಾಗದಲ್ಲಿ ಶುಜಾ ಅನೇಕ ಕೋಟೆಗಳನ್ನು ನಿರ್ಮಿಸಿದ ಹಾಗೂ ಅತ್ಯಂತ ಪರಾಕ್ರಮದಿಂದ ಅನೇಕ ವರ್ಷಗಳವರೆಗೆ ಇರಾನಿನ ಸೈನ್ಯದೊಂದಿಗೆ ಯುದ್ಧ ಮಾಡಿ ಗೆಲುವು ಸಾಧಿಸುತ್ತಿದ್ದ. ಆದರೆ ಕೊನೆಗೆ ಆತನು ಇರಾನಿಯರಿಗೆ ಯುದ್ಧದಲ್ಲಿ ಶರಣಾಗಿ ಅವರ ಆಶ್ರಿತ ರಾಜನಾಗಿ ಉಳಿದ.

ಫರೀದೋನ್‌ನ ಆಳ್ವಿಕೆಯಲ್ಲಿ ಮಾಂಡಲೀಕನಾದ ಶುಜಾಗೆ ಈ ವ್ಯವಸ್ಥೆಯಿಂದ ತುಂಬಾ ಅನುಕೂಲವಾಯಿತು. ಇರಾನಿಯರೊಂದಿಗೆ ಯುದ್ಧ ಭೀತಿಯು ತಪ್ಪಿದುದ್ದರಿಂದ ಆತನು ತನ್ನ ರಾಜ್ಯದ ಒಳಾಡಳಿತ ವ್ಯವಸ್ಥೆಗೆ ಹೆಚ್ಚಿನ ಗಮನವನ್ನು ಕೊಡಲು ಸಾಧ್ಯವಾಯಿತು. ತನ್ನ ಸನ್ನಡತೆಗಾಗಿ ಆತನು ಅಪಾರ ಖ್ಯಾತಿಯನ್ನು ಹೊಂದಿದ ಮತ್ತು ಜೆಹಾಕ್ ವಂಶಸ್ಥರು ನಾಲ್ಕೂ ದಿಕ್ಕಿನಿಂದ ಬಂದು ಆತನ ರಾಜ್ಯದಲ್ಲಿ ಆಶ್ರಯ ಪಡೆಯ ತೊಡಗಿದರು. ಶುಜಾನ ಮರಣದ ನಂತರ ಆತನ ಬೆಂಬಲಿಗರು ಆ ವಂಶದ ಮುಖಂಡರು ಮತ್ತು ಸರ್ದಾರರಾಗಿ ವಂಶಪಾರಂಪರ್ಯವಾಗಿ ರಾಜ್ಯವಾಳ ತೊಡಗಿದರು. ಹೀಗೆ ಅವನ ರಾಜ್ಯದ ಸರ್ದಾರನಾದವರ ಪೈಕಿ ಶಂಸಬ್ ಬಹಳ ಪ್ರಖ್ಯಾತಿಯನ್ನು ಹೊಂದಿದ ಆತನ ಕಾಲದಲ್ಲಿ ಆ ವಂಶಜರು ಇಸ್ಲಾಮನ್ನು ತಮ್ಮ ಧರ್ಮವನ್ನಾಗಿ ಸ್ವೀಕರಿಸಿದರು. ಆ ಸಂದರ್ಭದಲ್ಲಿ ಹಜರತ್ ಅಲಿ ಮುರ್ತಜಾ (ಪ್ರವಾದಿಯವರ ಅಳಿಯ) ಇಸ್ಲಾಮಿನ ಖಲೀಫರಾಗಿದ್ದರು ಮತ್ತು ಈ ಅವಧಿಯಲ್ಲಿ ಘೋರಿ ಸಂತತಿಯ ಸರ್ದಾರ ಶಂಸಬ್ ಬಿನ್ ಹರೀಖ್ ತನ್ನ ಇಡೀ ರಾಜ್ಯದ ಜನತೆಯೊಂದಿಗೆ ಇಸ್ಲಾಮ್‌ನ್ನು ಸ್ವೀಕರಿಸಿದ. ಶಂಸಬ್ ಮತ್ತು ಆತನ ವಂಶಸ್ಥರು ಇಸ್ಲಾಮ್‌ನ ಅನುಯಾಯಿಗಳಾಗಿದ್ದರಿಂದ ಹಜರತ್ ಅಲಿಯವರು ಅತ್ಯಂತ ಸಂಪ್ರೀತರಾಗಿ ಶಂಸಬ್‌ನನ್ನು ಘೋರಿ ಸಂತತಿಯ ರಾಜನಾಗಿ ಮನ್ನಣೆಯನ್ನು ನೀಡಿದ್ದು ತಮ್ಮ ಸ್ವಹಸ್ತಾಕ್ಷರದಿಂದ ಪತ್ರ ಬರೆದು ಆತನನ್ನು ರಾಜನನ್ನಾಗಿ ಘೋಷಿಸಿರುತ್ತಾರೆ. ಇತಿಹಾಸಕಾರರು ಶಂಸಬ್‌ನ ವಂಶಾವಳಿಯನ್ನು ಮೂಲ ಪುರುಷನಾದ ಜೆಹಾಕ್‌ನೊಡನೆ ಈ ರೀತಿಯಾಗಿ ಜೋಡಿಸಿರುತ್ತಾನೆ ಶಂಸಬ್ ಬಿನ್ ಹರೀಖ್ ಬಿನ್ ನಹೀಕ್ ಬಿನ್ ಈಸಾ ಬಿನ್ ಜೋಜನ್ ಬಿನ್ ಹುಸೇನ್ ಬಿನ್ ಬೆಹ್ರಾಮ್ ಬಿನ್ ಹಜಶ್ ಬಿನ್ ನೆಹಸ್ ಬಿನ್ ಇಬ್ರಾಹಿಂ ಬಿನ್ ಸಾದ್ ಬಿನ್ ಅಸದ್ ಬಿನ್ ಶದಾದ್ ಬಿನ್‌ಬಿಜಾಮ್ ಬಿನ್ ಮೆಹಶಾದ್ ಬಿನ್ ನರೀಮಾನ್ ಬಿನ್ ಫರೀದೋನ್ ಬಿನ್ ಸಾಮ್ ಬಿನ್ ಸಫೀರ್ ಅಸಬ್ ಬಿನ್ ಜೆಹಾಕ್ ಬಿನ್ ಶೆಹ್ರಾನ್ ಬಿನ್ ಸಂದ್ ಬಿನ್ ಸಾಮ ಮಜ್‌ತಾಶ್ ಬಿನ್ ಜೆಹಾಕ್‌ವುಲ್ ಮುಲ್ಕ್.

ಘೋರಿ ಸಂತತಿಯ ಪೈಕಿ ಮೊಟ್ಟ ಮೊದಲಿಗೆ ಇಸ್ಲಾಮ್ ಸ್ವೀಕರಿಸಿದವನು ಶಂಸಬ್. ಆದ್ದರಿಂದ ಈ ವಂಶವು ಶಂಸಬೀ ಎಂಬ ಹೆಸರಿನಿಂದ ಖ್ಯಾತಿ ಹೊಂದಿತು. ಬನೀ ಉಮ್ಮಯ್ಯಾನ ಆಡಳಿತಾವಧಿಯಲ್ಲಿ ಹಜರತ್ ಅಲಿಯವರ ಪುತ್ರರ ವಿರುದ್ಧ ನಡೆಸಿದ ನಿಂದನೆ ಮತ್ತು ಸಂಚಿನಲ್ಲಿ ಅನೇಕ ಶಂಸಬಿಗಳು ಭಾಗವಹಿಸಿದ್ದರು . ಆದರೆ ಘೋರಿಸ್ಥಾನದ ಶಂಸಬೀ ವಂಶಸ್ಥರು ಎಂದಿಗೂ ಆ ರೀತಿಯಲ್ಲಿ ನಡೆದುಕೊಳ್ಳಲಿಲ್ಲ ಬದಲಿಗೆ ಪ್ರವಾದಿ ಮೊಹಮ್ಮದ್‌ರವರ ಸಂತತಿಯ ಬಗ್ಗೆ ಅತ್ಯಂತ ಗೌರವ ಪೂರ್ವಕವಾಗಿ ವರ್ತಿಸುತ್ತಿದ್ದರು ಅಷ್ಟೇ ಅಲ್ಲದೆ ಅಬೂಮುಸ್ಲಿಮ್ ಮರೀಜಿಯು ಪ್ರವಾದಿ ಮೊಹಮ್ಮದ್‌ರವರ ಸಂತತಿಯ ಶತ್ರುಗಳ ವಿರುದ್ದ ಯುದ್ಧಕ್ಕೆ ಹೊರಟಾಗ ಫೌಲಾದ್ ಶಂಸಬಿಯು ಅಬುಮುಸ್ಲಿಮ್‌ಗೆ ಎಲ್ಲಾ ವಿಧದಲ್ಲಿಯೂ ನೆರವು ನೀಡಿದ ಮತ್ತು ಪ್ರವಾದಿ ಮೊಹಮ್ಮದ್‌ರವರ ಸಂತತಿಯ ಶತ್ರುಗಳನ್ನು ಸದೆ ಬಡಿಯುವಲ್ಲಿ ಯಾವುದೇ ರೀತಿಯಲ್ಲಿ ಹಿಂಜರಿಯಲಿಲ್ಲ.

ಹಾರೂನ್ ಅಲ್ ರಶೀದ್‌ರವರ ಸಮಕಾಲೀನನಾಗಿದ್ದ ಘೋರಿ ಚಕ್ರ ವರ್ತಿಯಾದ ಯಹ್ಯಾ ಬಿನ್ ನಹಾತಾನ್ ಕೂಡ ಶಂಸಬಿಯಾಗಿದ್ದ. ಈತನ ವಂಶಾವಳಿಯು ಈ ರೀತಿಯಲ್ಲಿದೆ, ಯಹ್ಯಾ ಬಿನ್ ನಹಾತಾನ್ ಬಿನ್ ದರ್ಮಶ್ ಬಿನ್ ದರ್ಮನಷ್ ಬಿನ್ ಪರ್ವೀಜ್ ಬಿನ್ ಶಂಸಬ್ ಯಹ್ಯಾನ ಮೊಮ್ಮಗನಾದ ಸೂರಿ ಬಿನ್ ಮೊಹಮ್ಮದ್ ಸಫಾ ಆ ಕಾಲಾವಧಿಯ ಒಬ್ಬ ಖ್ಯಾತ ವ್ಯಕ್ತಿಯಾಗಿದ್ದ. ಈ ಸೂರಿಯ ಮಗ ಮೊಹಮ್ಮದ್ ಬಿನ್ ಸೂರಿಯು ಸುಲ್ತಾನ್ ಮೊಹಮ್ಮದ್ ಘಜ್ನಿಯ ಸಮಕಾಲೀನಾಗಿದ್ದ. ಈತನು ಸುಲ್ತಾನ್ ಮಹಮೂದ್‌ನ ಆಶ್ರಿತ ರಾಜನಾಗಿರಲಿಲ್ಲ. ಈತನ ಮೇಲೆ ಮೆಹಮೂದ್ ಯುದ್ಧ ಮಾಡಿದ ಹಾಗೂ ಆತನನ್ನು ಬಂಧಿಸಿ ಕಾರಾಗೃಹದಲ್ಲಿಟ್ಟ. ಮೊಹಮ್ಮದ್‌ನನ್ನು ಕಾರಾಗೃಹಕ್ಕೆ ತಳ್ಳಿದ ನಂತರ ಸುಲ್ತಾನ್ ಮೆಹಮೂದ್‌ನು ಘೋರಿಯ ರಾಜನಾಗಿದ್ದ ಮೊಹಮ್ಮದ್‌ನ ಮಗನಾದ ಅಬೂ ಅಲಿಗೆ ಹಸ್ತಾತರಿಸಿದ. ಅಬೂ ಅಲಿಯು ಸುಲ್ತಾನ್ ಮೆಹಮೂದ್‌ನ ಆಶ್ರಿತ ಸಾಮಂತನಾಗಿದ್ದು ಅವನಿಗೆ ಕಪ್ಪ ಕಾಣಿಕೆಯನ್ನು ಒಪ್ಪಿಸುತ್ತಿದ್ದ. ಆದರೆ ಘೋರಿ ಸಂತತಿಯವರು ಆತನನ್ನು ಇಷ್ಟಪಡುತ್ತಿರಲಿಲ್ಲ ಈ ಬೆಳವಣಿಗೆಯ ಪರಿಣಾಮವಾಗಿ ಮೊಹಮ್ಮದ್‌ನ ಸಹೋದರನ ಮಗನಾದ ಅಬ್ಬಾಸ್ ಬಿನ್ ಶಂಸಬ್ ಬಿನ್ ಮೊಹಮ್ಮದ್ ಬಲತ್ಕಾರವಾಗಿ ರಾಜ್ಯವನ್ನು ಆಕ್ರಮಿಸಿಕೊಂಡ. ಅಬ್ಬಾಸ್ ಕೂಡ ಅತ್ಯಂತ ಕ್ರೂರಿ ಮತ್ತು ಕಠೋರ ರಾಜನಾಗಿದ್ದ. ರಾಜನ ಇಂತಹ ಕ್ರೂರ ನಡವಳಿಕೆಯ ದೆಸೆಯಿಂದ ಪ್ರಕೃತಿ ನೀಡಿದ ಸಜೆ ಎಂದರೆ ಏಳು ವರ್ಷಗಳವರೆಗೆ ಘೋರಿಸ್ಥಾನದಲ್ಲಿ ಒಂದೇ ಒಂದು ಹನಿ ಮಳೆಯೂ ಬೀಳಲಿಲ್ಲ. ಈ ಬರಗಾಲದ ದೆಸೆಯಿಂದ ಸಾವಿರಾರು ಜನರು ಹಸಿವು ಮತ್ತು ಬಾಯಾರಿಕೆಯಿಂದ ನರಳಿ ಸತ್ತರು. ದೂರಗಾಮಿ ಪರಿಣಾಮಗಳ ಬಗ್ಗೆ ಅರಿವಿಲ್ಲದ ಈ ರಾಜನು ಸುಲ್ತಾನ್ ಇಬ್ರಾಹಿಮ್ ಘಜ್ನಿಯನ್ನು ಕೂಡ ಯುದ್ಧದಲ್ಲಿ ಎದುರಿಸಬೇಕೆಂಬ

ತೀರ್ಮಾನವನ್ನು ಕೈಗೊಂಡ. ಈತನ ದುರದೃಷ್ಟಕರವಾದ ತೀರ್ಮಾನದ ದೆಸೆಯಿಂದ ಆತನು ಯುದ್ಧ ರಂಗದಲ್ಲಿ ಘಜ್ನಿ ಸೈನಿಕರಿಂದ ಸೆರೆಯಾಳಾದ.

ಖುತ್ಬುದ್ದೀನ್ ಹಸನ್ ಮತ್ತು ಆತನ ಪುತ್ರರ ಬಗ್ಗೆ:

ಅಬ್ಬಾಸ್‌ನ ಬಂಧನದ ನಂತರ ಘೋರಿ ರಾಜ್ಯದ ಆಳ್ವಿಕೆಯನ್ನು ಸುಲ್ತಾನ್ ಇಬ್ರಾಹಿಂ ಘಜ್ನಿಯು ಅಬ್ಬಾಸ್‌ನ ಮಗನಾದ ಮೊಹಮ್ಮದ್ ಬಿನ್ ಅಬ್ಬಾಸ್‌ನ ವಶಕ್ಕೆ ನೀಡಿದ. ಆತನ ಮಗನಾದ ಖುತ್ಬುದ್ದೀನ್ ಹಸನ್ ಹಿಂದೂಸ್ಥಾನದಲ್ಲಿ ಘೋರಿ ರಾಜರ ಆಳ್ವಿಕೆಯ ಆದಿ ಪುರುಷನಾಗಿದ್ದಾನೆ. ಖುತ್ಬುದ್ದೀನ್ ಮತ್ತು ಆತನ ಮಕ್ಕಳ ವೃತ್ತಾಂತವು ಅತ್ಯಂತ ಆಸಕ್ತಿ ಪೂರ್ಣವಾಗಿದೆ ಅದನ್ನು ಕೆಳಕಂಡ ವಾಕ್ಯಗಳಲ್ಲಿ ಹೇಳಲಾಗಿದೆ.

ತನ್ನ ಆಡಳಿತಾವಧಿಯಲ್ಲಿ ಖುತುದ್ದೀನ್‌ನು ತನ್ನ ಒಬ್ಬ ಶತ್ರುವಿನ ಮೇಲೆ ಯುದ್ಧ ಸಾರಿದ ಹಾಗೂ ಆತನ ಕೋಟೆಗೆ ನಾಲ್ಕು ದಿಕ್ಕಿನಿಂದ ಮುತ್ತಿಗೆ ಹಾಕಿದ. ಖುತ್ಬುದ್ದೀನನ ಅಂತ್ಯ ಸಮೀಪಿಸಿತ್ತು. ಈ ಯುದ್ಧ ಕಾಲದಲ್ಲಿ ಶತ್ರು ಸೈನ್ಯದ ಒಬ್ಬ ಸಿಪಾಯಿಯ ಬಾಣವು ಆತನ ಕಣ್ಣನ್ನು ಭೇದಿಸಿತು. ಆತನ ಕಣ್ಣಿಗೆ ಆದ ಗಾಯದಿಂದ ಅವನು ಚೇತರಿಸಿಕೊಳ್ಳದೆ ಮರಣ ಹೊಂದಿದ. (ಇದರ ಫಲಿತಾಂಶವೇನಾಯಿತೆಂದರೆ) ಘೋರಿಸ್ಥಾನದ ಪ್ರಖ್ಯಾತ ಕೋಟೆಗಳನ್ನು ಘಜ್ನಿ ವಂಶಸ್ಥರು ವಶಪಡಿಸಿಕೊಂಡರು. ಈ ಎಲ್ಲಾ ಗೊಂದಲಗಳ ನಡುವೆ ಖುತ್ಬುದ್ದೀನನ ಪುತ್ರನಾದ ಸಾಮ್ ಹಿಂದೂಸ್ಥಾನದತ್ತ ದೌಡಾಯಿಸಿದ. ಹಿಂದೂಸ್ಥಾನದಲ್ಲಿ ನೆಮ್ಮದಿ ಇದ್ದರೂ ಆತನಿಗೆ ಸ್ವದೇಶದ ಮೋಹ ಕಾಡತೊಡಗಿತು. ಕೊನೆಗೂ ಆತನು ತನ್ನ ಪತ್ನಿ ಮತ್ತು ಮಕ್ಕಳ ಸಮೇತ ಸ್ವದೇಶಕ್ಕೆ ಮರಳಲು ಸಮುದ್ರಯಾನವನ್ನು ಕೈಗೊಂಡ. ಈ ನೌಕೆಗಳು ಅನತಿ ದೂರವನ್ನು ಕ್ರಮಿಸಿದಾಗ ವಿರುದ್ಧ ದಿಕ್ಕಿನಿಂದ ಬಿರುಗಾಳಿ ಬೀಸಿತು ಮತ್ತು ಬಿರುಗಾಳಿಯ ವೇಗವು ತೀವ್ರವಾಯಿತು. ಸ್ವದೇಶ ಪ್ರೇಮಿಗಳ ನೌಕೆಗಳು ನುಚ್ಚುನೂರಾಗಿ ಮುಳುಗಿದವು. ಸಾಮ್ ಮತ್ತು ಆತನ ಎಲ್ಲಾ ಸಹ ಪ್ರಯಾಣಿಕರು ಬಿರುಗಾಳಿಗೆ ಆಹುತಿಯಾದರು ಆದರೆ ಸಾಮ್‌ನ ಒಬ್ಬ ಪುತ್ರನಾದ ಐಜುದ್ದೀನ್ ಎಂಬುವವನು ನೌಕೆಯ ಮುರಿದ ಹಲಗೆಯ ಆಧಾರದ ಮೇಲೆ ಈಜ ತೊಡಗಿದ. ಇನ್ನೊಂದು ಮುಳುಗುತ್ತಿದ್ದ ನೌಕೆಯಲ್ಲಿದ್ದ ಸಿಂಹವು ಕೂಡ ಐಜುದ್ದೀನ್ ತೇಲುತ್ತಿದ್ದ ಹಲಗೆಯ ಆಸರೆಯಿಂದ ಈಜ ತೊಡಗಿತು. ಅಂದರೆ ಆ ಸಿಂಹ ಮತ್ತು ಐಜುದ್ದೀನ್ ಇಬ್ಬರೂ ಕೂಡ ಆ ಅಪಾಯಕಾರಿ ಪ್ರಯಾಣದ ಸಹ ಪ್ರಯಾಣಿಕರಾಗಿ ಈಸುತ್ತಿದ್ದರು. ಮೂರು ಹಗಲು ಹಾಗೂ ಮೂರು ಇರುಳು ಇದೇ ದುರವಸ್ಥೆಯಲ್ಲಿ ಕಳೆದರು. ಅಸಹಾಯಕನಾಗಿದ್ದ ಐಜುದ್ದೀನ್ ಹಸಿವು ಮತ್ತು ಬಾಯಾರಿಕೆಗಳಿಂದ ತಪ್ತನಾಗಿ ಹಲಗೆಯೊಂದಿಗೆ ಅಂಟಿಕೊಂಡು ಅದರ ಹರಿವಿನೊಂದಿಗೆ ಮುನ್ನಡೆಯ ತೊಡಗಿದ. ಮೂರು ದಿನಗಳ ನಂತರ ದೇವರು ಅವನನ್ನು ಈ ಸಂಕಟದಿಂದ ಪಾರು ಮಾಡಿದ ಮತ್ತು ಆ

ಹಲಗೆಯು ಒಂದು ದಡವನ್ನು ಸೇರಿತು. ಸಿಂಹವು ಕೂಡಲೇ ನೆಗೆದು ಕಾಡಿನಲ್ಲಿ ಸೇರಿಕೊಂಡಿತು .ಐಜುದ್ದೀನನು ತನ್ನನ್ನು ಸಂರಕ್ಷಿಸಿದ ಅಲ್ಲಾಹನ ಸನ್ನಿಧಿಯಲ್ಲಿ ವಂದನೆಗಳನ್ನು ಸಲ್ಲಿಸಿದ. ಐಜುದ್ದೀನನು ಸಮುದ್ರ ತೀರದ ಉದ್ದಕ್ಕೂ ನೋಟವನ್ನು ಹರಿಸಿದಾಗ ಸಮೀಪದಲ್ಲಿಯೇ ನಗರವೊಂದರ ಕುರುಹುಗಳು ಕಂಡು ಬಂದವು. ಈ ಅಪರಿಚಿತ ಪ್ರಯಾಣಿಕನು ನಗರಾಭಿಮುಖವಾಗಿ ನಡೆಯತೊಡಗಿದ ಆದರೆ ತೀವ್ರ ದುರ್ಘಟನೆಗಳಿಗೆ ಈಡಾಗಿದ್ದು ಅನ್ನಾಹಾರಗಳಿಲ್ಲದೆ ನಿತ್ರಾಣಗೊಂಡಿದ್ದರಿಂದ ಮುಂದೆ ಹೆಜ್ಜೆ ಇಡಲು ಅವನಿಂದಾಗಲಿಲ್ಲ .ಸೂರ್ಯ ಮುಳುಗುವ ವೇಳೆಗೆ ಅವನು ಸಾಕಷ್ಟು ಸಂಕಷ್ಟದಿಂದ ನಗರವನ್ನು ಪ್ರವೇಶಿಸಿದ ಮತ್ತು ಒಂದು ಅಂಗಡಿಯ ಬಳಿ ಹೋಗಿ ನಿದ್ರಿಸತೊಡಗಿದ. ಅಲ್ಲಿನ ಚೌಕಿದಾರರು ಅವನನ್ನು ಕಳ್ಳ ಎಂದು ಬಂಧಿಸಿದರು ಮತ್ತು ನಗರದ ಕೊತ್ವಾಲನ ಸಮ್ಮುಖದಲ್ಲಿ ಹಾಜರು ಪಡಿಸಿದರು .ಅವನು ಯಾವುದೇ ತನಿಖೆಯನ್ನು ಕೈಗೊಳ್ಳದೆ ಐಜುದ್ದೀನ್‌ನನ್ನು ಬಂದಿಖಾನೆಗೆ ತಳ್ಳಿದ. ಅವನು ಏಳು ವರ್ಷಗಳ ಕಾಲ ಕಾರಾಗೃಹವಾಸವನ್ನು ಅನುಭವಿಸಿದ ನಂತರ ಅವನ ದುರ್ದೈವ ಕಳೆದು ಸುದಿನಗಳು ಪ್ರಾಪ್ತವಾದವು. ಆ ನಗರದ ರಾಜನು ಗಂಭೀರ ರೋಗಕ್ಕೆ ಬಲಿಯಾಗಿದ್ದನು ಮತ್ತು ಅವನ ರೋಗ ಗುಣವಾಗಿದ್ದರಿಂದ ಅವನು ಖೈದಿಗಳನ್ನು ಬಿಡುಗಡೆ ಮಾಡಿದ ಹೀಗೆ ಐಜುದ್ದೀನ್‌ನಿಗೆ ಸ್ವಾತಂತ್ರ್ಯವು ದೊರಕಿತು.

ಕಾರಾಗೃಹದಿಂದ ಬಿಡುಗಡೆ ಹೊಂದಿದ ನಂತರ, ಐಜುದ್ದೀನ್ ಘಜ್ನಿಯತ್ತ ಪ್ರಯಾಣ ಬೆಳೆಸಿದ. ಪ್ರಯಾಣ ಮಧ್ಯದಲ್ಲಿ ದರೋಡೆಕೋರರಿಗೆ ಸೆರೆಸಿಕ್ಕ. ಅವನ ದೇಹಧಾರ್ಢ್ಯತೆ ಮತ್ತು ಬಲವನ್ನು ಕಂಡ ದರೋಡೆಕೋರರು ಅವನನ್ನು ಬಲವಂತವಾಗಿ ತಮ್ಮ ತಂಡಕ್ಕೆ ಸೇರಿಸಿಕೊಂಡರು. ಯಾವ ರಾತ್ರೆಯಂದು ಐಜುದ್ದೀನ್‌ನನ್ನು ದರೋಡೆಕೋರರು ತಮ್ಮೊಡನೆ ಸೇರಿಸಿಕೊಂಡರೋ, ಅದರ ಮಾರನೇ ಬೆಳಗ್ಗೆ ಸುಲ್ತಾನ್ ಇಬ್ರಾಹಿಮ್‌ನ ಸೈನಿಕರು, ಆ ತಂಡವನ್ನು ಸೆರೆ ಹಿಡಿದರು. ಸೈನಿಕರ ಅನೇಕ ದಿನಗಳ ಪ್ರಯತ್ನವು ಅಂದು ಫಲಿಸಿತು. ಐಜುದ್ದೀನನ ಬವಣೆಗೆ ಕೊನೆಯೇ ಇರಲಿಲ್ಲ. ಐಜುದ್ದೀನ್ ಮತ್ತು ದರೋಡೆಕೋರರ ತಂಡವನ್ನು ಸುಲ್ತಾನ್ ಇಬ್ರಾಹಿಮ್‌ನ ಸಮ್ಮುಖದಲ್ಲಿ ಹಾಜರಿಸಲಾಯಿತು. ಸುಲ್ತಾನನು ಎಲ್ಲರಿಗೂ ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಿದ. ಅವರೆಲ್ಲರನ್ನು ಸಾಲಾಗಿ ನಿಲ್ಲಿಸಿ, ಕಟುಕನು ಸರದಿಯಂತೆ ಒಬ್ಬೊಬ್ಬರ ರುಂಡವನ್ನು ಹಾರಿಸತೊಡಗಿದ. ಐಜುದ್ದೀನನ ಸರದಿ ಬಂದಾಗ ಕಟುಕನು ಆತನ ಕಣ್ಣುಗಳ ಮೇಲೆ ಪಟ್ಟಿಯನ್ನು ಬಿಗಿದಾಗ, ಆತನು ನಿಟ್ಟುಸಿರಿನೊಂದಿಗೆ ಆಕಾಶದ ಕಡೆ ತಲೆ ಎತ್ತಿ ನುಡಿದ, "ಓ ಅಲ್ಲಾಹ್ ನನಗೆ ಗೊತ್ತಿದೆ, ನೀನು ತಪ್ಪು ದಾರಿಯನ್ನು ಅನುಸರಿಸುವುದಿಲ್ಲ. ಮತ್ತು ನೀನು ಎಲ್ಲಾ ಅನ್ಯಾಯ ಮತ್ತು ಹಿಂಸೆಯಿಂದ ಮುಕ್ತನಾಗಿರುವನೆಂಬ ವಿಶ್ವಾಸ ನನಗೆ ಇದೆ. ನನ್ನಂತಹ ನಿರಪರಾಧಿಯಾದ ನಾನು ಯಾವ ಅಪರಾಧಕ್ಕಾಗಿ ಜೀವ ತೆರುತ್ತಿದ್ದೇನೆ ಎನ್ನುವುದು ಕೂಡ ನನಗೆ ಗೊತ್ತಿಲ್ಲ "ಅವನ ಈ ಮಾತುಗಳನ್ನು ಕೇಳಿ, ಕಟುಕನು ಅವನೊಂದಿಗೆ ನುಡಿದ, "ಮೋಸಗಾರನೇ,

ಯಾಕೆ ನಿರಪರಾಧಿಯಂತೆ ದೇವರ ಸಮ್ಮುಖದಲ್ಲಿ ಮೊರೆ ಇಡುತ್ತಿದ್ದೀಯಾ? ನಿನಗಿಂತ ಹೆಚ್ಚಿನ ಕ್ರೂರಿ ಇನ್ನೊಬ್ಬನಿಲ್ಲ. ಪ್ರಜೆಗಳ ಮೇಲೆ ಕ್ರೌರ್ಯವೆಸಗುತ್ತಿದ್ದು ಮಹಾರಾಜರ ಆಜ್ಞೆಗೆ ಅವಿಧೇಯುತೆಯಿಂದ ನಡೆದುಕೊಳ್ಳುತ್ತಿದ್ದೀಯಾ ಇಂತಹ ಕೆಟ್ಟ ನಡವಳಿಕೆಯನಾಗಿದ್ದರೂ ಕೂಡ ನೀನು ನಿರಪರಾಧಿ ಎಂತಲೇ ಭಾವಿಸುವೆಯಾ?" ಐಜುದ್ದೀನನು ತನ್ನ ಸವಿವರ ವೃತ್ತಾಂತವನ್ನು ಕಟುಕನಿಗೆ ತಿಳಿಸಿದ ಮತ್ತು ತಾನು ನಿರಪರಾಧಿ ಎಂಬುದನ್ನು ಅವನಿಗೆ ಖಚಿತ ಪಡಿಸಿದ. ಕಟುಕನಿಗೆ ಆತನ ಮೇಲೆ ತುಂಬಾ ಮರುಕವುಂಟಾಯಿತು. ರಾಜಾಜ್ಞೆಯಂತೆ ಉಳಿದ ಖೈದಿಗಳ ಮರಣ ದಂಡನೆಯ ಶಿಕ್ಷೆಯನ್ನು ಜಾರಿಗೊಳಿಸಿದ ನಂತರ, ಬಾದಶಹನ ಆಪ್ತರೊಬ್ಬರ ಮೂಲಕ, ಈ ವಿಷಯವನ್ನು ಬಾದಶಹನ ಗಮನಕ್ಕೆ ತಂದ. ಸುಲ್ತಾನನು ಐಜುದ್ದೀನ್‌ನನ್ನು ಕರೆಸಿ, ಆತನ ಪೂರ್ಣ ವೃತ್ತಾಂತವನ್ನು ತಿಳಿದುಕೊಂಡ. ಆತನಿಗೆ ಐಜುದ್ದೀನನ ಮೇಲೆ ಮರುಕವುಂಟಾಯಿತು . ಹೀಗಾಗಿ ಬಾದಶಹನು ಅವನನ್ನು ರಾಜ್ಯದ ಆಶ್ರಿತ ಸಿಬ್ಬಂದಿಯಾಗಿ ನೇಮಕ ಮಾಡಿದ.

ಐಜುದ್ದೀನನು ತನ್ನ ಧೈರ್ಯಸಾಹಸ ಹಾಗೂ ದೂರಾಲೋಚನೆಗಳ ದೆಸೆಯಿಂದ ಸುಲ್ತಾನ್ ಇಬ್ರಾಹಿಮ್‌ನ ಸಮೀಪವರ್ತಿಯಾದ. ಇದರ ಪರಿಣಾಮವಾಗಿ ಸುಲ್ತಾನ್ ಇಬ್ರಾಹಿಮ್‌ನು ಆತನನ್ನು ಹಾಜಿಬ್‌ನ ಆಡಳಿತಗಾರನನ್ನಾಗಿ ನೇಮಿಸಿದ. ಹಾಗೂ ತನ್ನ ಆಪ್ತ ರಾಜ ಪರಿವಾರದ ಕನ್ಯೆಯೊಂದಿಗೆ ಆತನ ಮದುವೆಯನ್ನು ನೆರವೇರಿಸಿದ್ದ. ಆ ವಿವಾಹದ ನಂತರ, ಐಜುದ್ದೀನನ ಪ್ರಭಾವ ದಿನೇ ದಿನೇ ವೃದ್ಧಿಸತೊಡಗಿತು. ನಂತರದ ಅವಧಿಯಲ್ಲಿ ಸುಲ್ತಾನ್ ಇಬ್ರಾಹಿಮ್‌ನ ಮರಣವಾಗಿ ಆತನ ಮಗನಾದ ಮಸೂದ್‌ಬಿನ್ ಇಬ್ರಾಹಿಮ್‌ನ ಪಟ್ಟಾಭಿಷೇಕವಾಯಿತು. ಆತನ ಆಡಳಿತಾವಧಿಯಲ್ಲಿ ಐಜುದ್ದೀನನು ಇನ್ನಷ್ಟು ಪ್ರವರ್ಧಮಾನಕ್ಕೇರಿದ. ಆತನನ್ನು ಮಸೂದ್ ಘೋರಿ ರಾಜ್ಯದ ರಾಜನನ್ನಾಗಿ ನೇಮಕ ಮಾಡಿದ.

ಐಜುದ್ದೀನನ ವಂಶಾವಳಿಯಲ್ಲಿ ಸಾಕಷ್ಟು ವಿರೋಧಭಾಸಗಳು ಕಂಡು ಬರುತ್ತವೆ. ಅನೇಕ ಇತಿಹಾಸಕಾರರು ಆತನನ್ನು ಖುತ್ಬುದ್ದೀನನ ಮೊಮ್ಮಗ ಎಂದು ದಾಖಲಿಸುತ್ತಾರೆ. ಆತನು ಸದರಿ ಖುತ್ಬುದ್ದೀನನ ಹಿರಿಯ ಮಗನಾದ ಸಾಮ್‌ನ ಒಬ್ಬ ಮಗನೆಂದು ಹೇಳುತ್ತಾರೆ. ಇನ್ನು ಕೆಲವು ಇತಿಹಾಸಕಾರರು ಆತನನ್ನು ಖುತ್ಬುದ್ದೀನನ ಮಗನೆಂದು ಹೇಳುತ್ತಾರೆ. ಐಜುದ್ದೀನನ ವಿವಾಹವಾದ ಘಜ್ನವಿ ಪತ್ನಿಯ ದಾಂಪತ್ಯ ಜೀವನದಿಂದ ಆತನಿಗೆ ಏಳು ಮಂದಿ ಪುತ್ರರು ಜನಿಸಿದರು ಅವರುಗಳ ಹೆಸರುಗಳು ಹೀಗಿವೆ, ೧) ಮುಲ್ಕ್ ಫಕ್ರುದ್ದೀನ್ ಬಾಮಿಯಾನ್, ೨) ಮೊಹಮ್ಮದ್ ದಾಮಾದ್ ಬೆಹ್ರಾಮ್ ಶಾಹ್ ಘುಜ್ನವಿ, ೩) ಶುಜಾವುದ್ದೀನ್ ಅಲಿ (ಈತ ಯೌವನದಲ್ಲಿಯೆ ಮೃತ್ಯುವಶನಾದ) ೪) ನಾಸೀರುದ್ದೀನ್ ಮೊಹಮ್ಮದ್ ಹಾಕೀಮ್ ವಿಲಾಯತ್ ಜಮಿನ್‌ವಾರಿದ್, ೫) ಸೈಫುದ್ದೀನ್ ಸೂರಿ, ೬) ಬಹಾವುದ್ದೀನ್ ಸಾಮ್, ೭) ಅಲ್ಲಾವುದ್ದೀನ್ ಹುಸೇನ್ (ಈತನು 'ಜಹಾಂಸೋಜ್' ಎಂಬ ಹೆಸರಿನಿಂದ ಪ್ರಖ್ಯಾತಿಯನ್ನು ಹೊಂದಿದ.)

ಐಜುದ್ದೀನನು ತನ್ನ ಜೀವಿತಾವಧಿಯ ಅವಧಿ ಪೂರ್ತ ಸಂಜರ್ ಮತ್ತು ಘಜ್ನಿ ಸುಲ್ತಾನ್‌ರಿಗೆ ವಿಧೇಯನಾಗಿದ್ದು ಅವರ ಆಶ್ರಿತ ರಾಜನಾಗಿದ್ದ. ಆತನ ಸಾವಿನ ನಂತರ "ಸಪ್ತ ರತ್ನಗಳು" ಎಂಬ ಬಿರುದಿನಿಂದ ಖ್ಯಾತಿ ಹೊಂದಿದ್ದ ಆತನು ಮಕ್ಕಳು ಎರಡು ತಂಡಗಳಲ್ಲಿ ವಿಭಾಗ ಹೊಂದಿದರು. ಮೊದಲನೆಯ ಗುಂಪು ಮುಲೂಕ್ ಮಾಬಿಯಾನ್‌ಗೆ ಸೇರಿದವರಾಗಿದ್ದು ತಖಾರಿಸ್ತಾನ್ ಹಾಗೂ ಮುಲ್ಕ್ ಮುಬಾತಿಲ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದರು. ಎರಡನೆಯ ಗುಂಪನ್ನು ಮುಲೂಕ್ ಘೋರಿ ಮತ್ತು ಘಜ್ನಿ ಎಂದು ಕರೆಯಲಾಯಿತು. ಖುತ್ಬುದ್ದೀನ್ ಮೊಹಮ್ಮದ್ ಇಮಾದ್ ಬೆಹರಮ್ ಶಾ ಎಂಬಾತನು ಈ ಎರಡನೆಯ ಗುಂಪಿನ ಮೊಟ್ಟ ಮೊದಲ ರಾಜನಾದನು. ಈ ರಾಜನು ಇತಿಹಾಸದಲ್ಲಿ "ಮಲಿಕ್ ಉಲ್ ಜಿಬಾಲ್"ನ ಹೆಸರಿನಲ್ಲಿ ಖ್ಯಾತಿಯನ್ನು ಹೊಂದಿದನು. ಈ ಘೋರಿ ಮನೆತನದ ರಾಜನು ಫೈರೋಜ್ ಕೋಹ್ ಪಟ್ಟಣದ ನಿರ್ಮಾಣವನ್ನು ಕೈಗೊಂಡು ಸದರಿ ಪಟ್ಟಣದ ಸುತ್ತ ಒಂದು ಬಲಾಢ್ಯ ಕೋಟೆಯನ್ನು ನಿರ್ಮಾಣ ಮಾಡಿದ ಹಾಗೂ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ತನ್ನ ರಾಜಧಾನಿಯ ಎರಡೂ ಬದಿಗಳಲ್ಲಿ ಎರಡೆರಡು ಹರದಾರಿ ದೂರದವರೆಗೆ ಗೋಡೆಗಳನ್ನು ನಿರ್ಮಾಣ ಮಾಡಿದ್ದು, ಅದನ್ನು ತನ್ನ ಶಿಕಾರಿ ತಾಣವನ್ನಾಗಿ ಮಾಡಿಕೊಂಡಿದ್ದ. ಆ ಶಿಕಾರಿ ತಾಣದಲ್ಲಿ ಅವನು ವ್ಯವಸ್ಥಿತವಾಗಿ ಅನೇಕ ಕೋಟೆಗಳ ನಿರ್ಮಾಣ ಕಾರ್ಯವನ್ನು ಕೈಗೊಂಡ ಹಾಗೂ ರಾಜ ವೈಭೋಗದ ಸಕಲ ಸಾಮಾನು –ಸರಂಜಾಮುಗಳಿಂದ ತುಂಬಿಸಿ, ಘಜ್ನಿಯ ಮೇಲೆ ಆಕ್ರಮಣ ಮಾಡುವ ಸಿದ್ಧತೆಯನ್ನು ಮಾಡಿದ. ಖುತ್ಬುದ್ದೀನನ ಉದ್ದೇಶವು ಬೆಹ್ರಾಮ್ ಶಾಹ್‌ಗೆ ತಿಳಿದು ಬಂದಿತು . ಬೆಹ್ರಾಮ್ ಶಾಹನು ಯಾವುದೋ ನೆಪದಲ್ಲಿ ಖುತ್ಬುದ್ದೀನ್‌ನನ್ನು ಘಜ್ನಿಗೆ ಆಹ್ವಾನಿಸಿ, ಅವನನ್ನು ಬಂಧಿಸಿ ಒಂದು ಕೋಟೆಯಲ್ಲಿ ಸೆರೆಯಾಳಾಗಿಟ್ಟ. ಹಾಗೂ ಅವನು ಸೆರೆಮನೆಯಲ್ಲಿ ಇರುವಾಗಲೇ ಇಬ್ರಾಹಿಮ್‌ನ ಆದೇಶದ ಮೇರೆಗೆ ಅವನನ್ನು ವಿಷಪ್ರಾಶನದ ಮೂಲಕ ಕೊಲ್ಲಿಸಿದ. ಖುತ್ಬುದ್ದೀನನ ಸಾವು ಘಜ್ನಿ ಮತ್ತು ಘೋರಿ ವಂಶಸ್ಥರ ಬದ್ಧ ದ್ವೇಷ ಸಾಧನೆಗೆ ಮೂಲ ಕಾರಣವಾಯಿತು ಹಾಗೂ ಆ ಎರಡು ವಂಶದವರು ಆಜನ್ಮ ಶತ್ರುಗಳಾಗಿ ಮಾರ್ಪಟ್ಟರು.

ಸೈಫುದ್ದೀನ್

ಘೋರಿ ಮನೆತನದ ಕುಲೀನರ ಪೈಕಿ ಸೈಫುದ್ದೀನನು ತನ್ನ ಹೆಸರಿಗೆ "ಸುಲ್ತಾನ್" ಎಂಬ ಬಿರುದನ್ನು ಹಚ್ಚಿದ ಮೊದಲನೆಯ ವ್ಯಕ್ತಿಯಾಗಿದ್ದಾನೆ. (ಖುತ್ಬುದ್ದೀನ್‌ನನ್ನು ನೆಪವೊಡ್ಡಿ ಘಜ್ನಿಗೆ ಆಹ್ವಾನಿಸಿದ್ದ ಸಂದರ್ಭದಲ್ಲಿ) ಸೈಫುದ್ದೀನ ಕೂಡ ತನ್ನ ಸಹೋದರ ಖುತ್ಬುದ್ದೀನನ ಜೊತೆಯಲ್ಲಿ ಘಜ್ನಿಗೆ ಹೋಗಿದ್ದನು. ಖುತ್ಬುದ್ದೀನನ ಕೊಲೆಯಾದಾಗ ಸೈಫುದ್ದೀನನು ತಪ್ಪಿಸಿಕೊಂಡು ಘೋರಿಯತ್ತ ದೌಡಾಯಿಸಿದ್ದ ಮತ್ತು ತನ್ನ ಸಹೋದರನ ಕೊಲೆಯ ಪ್ರತೀಕಾರದ ಸಲುವಾಗಿ ಸೈನ್ಯವನ್ನು ಜಮಾವಣೆ ಮಾಡಿ ಬೆಹ್ರಾಮ್ ಶಾ

ಮೇಲೆ ಯುದ್ಧವನ್ನು ಘೋಷಿಸಿದ. ಬೆಹ್ರಾಮ್ ಶಾ ಸೈಫುದ್ದೀನನ ದಾಳಿಯನ್ನು ತಡೆಯಲು ಅಸಮರ್ಥನಾದ ಮತ್ತು ಘಜ್ನಿಯನ್ನು ತೊರೆದು ಹಿಂದುಸ್ತಾನದತ್ತ ಪರಾರಿಯಾದ. ಸೈಫುದ್ದೀನ ಯುದ್ಧದಲ್ಲಿ ವಿಜಯಿಯಾಗಿ ಅಲ್ಲಿನ ಭೂಭಾಗವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡ. ಅಖಂಡ ಘಜ್ನಿಯ ಮೇಲೆ ನಂಬಿಕೆಯಿಟ್ಟು ತನ್ನ ಸಹೋದರನಾದ ಬಹಾವುದ್ದೀನನನ್ನು ಘೋರಿ ನಾಯಕರು ಮತ್ತು ಸೈನಿಕರು ಹಾಗೂ ಸೇನಾದಿಕಾರಿಗಳೊಡನೆ ಘೋರಿ ಸ್ಥಾನಕ್ಕೆ ಮರಳಿ ಕಳಿಸಿದ.

ತೀವ್ರ ಚಳಿಗಾಲವು ಆರಂಭವಾಗಿ, ಹಿಮಪಾತದ ದೆಸೆಯಿಂದ ಘೋರಿ ಸ್ಥಾನದ ಎಲ್ಲಾ ರಸ್ತೆಗಳು ಹಿಮದಿಂದ ಆವೃತವಾಗಿ ಸಂಚಾರವು ದುರ್ಗಮವಾಯಿತು. ಆಗ ಘಜ್ನಿಯ ಬೆಂಬಲಿಗರು (ಬಬಾತಿನ್ ಬೆಹ್ರಾಮ್ ಶಾಹನ ಅನುಯಾಯಿಗಳಾಗಿದ್ದರು) ಸದವಕಾಶವನ್ನು ಬಳಸಿಕೊಂಡು ಘಜ್ನಿಗೆ ಬರುವಂತೆ ಬೆಹ್ರಾವ್ ಶಾಹಗೆ ಆಮಂತ್ರಣವನ್ನು ನೀಡಿದರು. ಬೆಹ್ರಾಮ್ ಈ ಆಹ್ವಾನವನ್ನು ಕೂಡಲೇ ಒಪ್ಪಿದ ಮತ್ತು ಶೀಘ್ರವಾಗಿ ಘಜ್ನಿ ತಲುಪಿದ. ಮೇಲಿನ ವಾಕ್ಯಗಳಲ್ಲಿ ಈಗಾಗಲೇ ಹೇಳಿರುವಂತೆ ಬೆಹ್ರಾವ್ ಶಾಹನು ಸೈಫುದ್ದೀನ ಸೂರಿ ಮತ್ತು ಆತನ ಮಂತ್ರಿಯಾದ ಮಜದುದ್ದೀನನನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಂಡು ಅವರಿಬ್ಬರಿಗೂ ಮರಣ ದಂಡನೆ ವಿಧಿಸಿದ. ಯಾವ ದ್ವೇಷದ ಬೀಜವನ್ನು ಖುತ್ಬುದ್ದೀನ ನೆಟ್ಟಿದ್ದನೋ ಅದರ ಮುಂದಿನ ಫಲವಾಗಿ ಸೈಫುದ್ದೀನನ ಕೊಲೆಯಾಯಿತು. ಸುಲ್ತಾನ್ ಗಯಾಸುದ್ದೀನನ ತಂದೆಯಾದ ಬಹಾವುದ್ದೀನಗೆ ತನ್ನ ಸಹೋದರನಾದ ಸೈಫುದ್ದೀನನ ದುರ್ಗತಿಯ ಬಗ್ಗೆ ತಿಳಿದ ಕೂಡಲೇ ಆತನು ಘಜ್ನಿಯ ಮೇಲೆ ಯುದ್ಧ ಸಾರುವ ಮನಸ್ಸು ಮಾಡಿದ. ಆದರೆ ಆತನ ಉದ್ದೇಶವು ಈಡೇರುವುದಕ್ಕೆ ಮುಂಚಿತವಾಗಿಯೇ ಆತನು ನಂಜೇರಿದ ಗಾಯದಿಂದ ಮೃತಪಟ್ಟ.

ಗಯಾಸುದ್ದೀನ್ ಮತ್ತು ಶಹಾಬುದ್ದೀನ್

ಬಹಾವುದ್ದೀನನ ಮರಣದ ನಂತರ ಐಜುದ್ದೀನನ ಪ್ರಖ್ಯಾತ ಪುತ್ರನಾದ ಅಲ್ಲಾವುದ್ದೀನನು ತನ್ನ ಪರಾಕ್ರಮದಿಂದ ಘೋರಿ ಸಂತತಿಯ ಹೆಸರನ್ನು ಖ್ಯಾತಿಯ ತುತ್ತ ತುದಿಗೆ ಏರಿಸಿದ. ಆತನು ಘಜ್ನಿಯನ್ನು ವಶಪಡಿಸಿಕೊಂಡ ಮತ್ತು ಸುಲ್ತಾನ್ ಮೆಹಮೂದ, ಮಸೂದ ಮತ್ತು ಇಬ್ರಾಹಿಮ- ಇವರುಗಳನ್ನು ಬಿಟ್ಟು ಉಳಿದ ಎಲ್ಲಾ ಶತ್ರುಗಳ ಗೋರಿಗಳನ್ನು ಅಗೆಸಿದ ಮತ್ತು ಅವರ ಮೂಳೆಗಳನ್ನು ಬೆಂಕಿಗೆ ಆಹುತಿಮಾಡಿದ. ಈ ಕ್ರೌರ್ಯ ಮತ್ತು ಬರ್ಬರತೆಯ ನಂತರ ಅಲ್ಲಾವುದ್ದೀನನು ಘೋರಿಸ್ಥಾನಕ್ಕೆ ಮರಳಿದ ಮತ್ತು ತನ್ನ ಅಣ್ಣನಾದ ಬಹಾವುದ್ದೀನನ ಇಬ್ಬರು ಮಕ್ಕಳಾದ ಗಯಾಸುದ್ದೀನ್ ಮತ್ತು ಶಹಾಬುದ್ದೀನ್‌ಗೆ ಸಂಜರ್‌ನ ಆಡಳಿತವನ್ನು ವಹಿಸಿಕೊಟ್ಟ. ಆ ಇಬ್ಬರು ಸಹೋದರರು ಕೂಡ ತುಂಬ ಪರಾಕ್ರಮಿ ಮತ್ತು ದಯಾಳುಗಳಾಗಿದ್ದರು. ಅವರ ಆಡಳಿತದ ವೆಚ್ಚವು ಆದಾಯಕ್ಕಿಂತ ಹೆಚ್ಚಾಗಿತ್ತು. ಆದರೂ ಅವರ ಕರುಣೆ ಮತ್ತು

ದಯೆಯ ಪ್ರಭಾವಕ್ಕೊಳಗಾದ ಅನೇಕ ಸೈನಿಕರು ಸುತ್ತ ಮುತ್ತಲಿನಿಂದ ಅವರ ರಾಜ್ಯಕ್ಕೆ ಬಂದು ಸೇರತೊಡಗಿದರು. ಹೀಗಾಗಿ ಆ ಸಹೋದರರು ತಮ್ಮ ಸಚ್ಚಾರಿತ್ರ್ಯ ಮತ್ತು ದಾನ ಧರ್ಮಗಳಿಂದ ಹೆಸರು ವಾಸಿಗಳಾದರು. ಅವರ ಖ್ಯಾತಿಯಿಂದ ಕರುಬಿದ ಚಾಡಿಕೋರರು ಗಯಾಸ್ ಮತ್ತು ಶಹಾಬ್‌ನ ಜನಪ್ರಿಯತೆಯಿಂದ ಅಸೂಯೆಗೊಂಡು ಅಲ್ಲಾವುದ್ದೀನನ ಬಳಿ ಚಾಡಿ ಹೇಳಿದರು. ಇದರ ಪರಿಣಾಮವಾಗಿ ಅವರ ನಡುವೆ ದ್ವೇಷ ಉಂಟಾಯಿತು. ಹೀಗಾಗಿ ಅಲ್ಲಾವುದ್ದೀನನು ಆ ಇಬ್ಬರು ಸಹೋದರರನ್ನು ಕೂಡ ಜರಜಸ್ತಾನ್‌ನ ಕೋಟೆಯಲ್ಲಿ ಬಂಧಿಸಿಟ್ಟ. ನಂತರ ಅಲ್ಲಾವುದ್ದೀನನು ತನ್ನ ಅಹಂಕಾರದ ನಡುವಳಿಕೆಯಿಂದ ಮತ್ತು ಪಾನಮತ್ತತೆಯ ವ್ಯಸನದಲ್ಲಿ ಎಷ್ಟೊಂದು ಮಗ್ನನಾದ ಎಂದರೆ ಸಂಜರ್‌ನ ಸುಲ್ತಾನ್‌ನ ಆಜ್ಞೆಯನ್ನು ಕೂಡ ಪಾಲಿಸಲಿಲ್ಲ. ಸಂಜರಿ ಖಜಾನೆಗೆ ಐಜುದ್ದೀನನು ನೀಡುತ್ತಿದ್ದ ವಾರ್ಷಿಕ ಕಪ್ಪ ಕಾಣಿಕೆಗಳನ್ನು ಕೂಡ ಅಲ್ಲಾವುದ್ದೀನನು ನೀಡಲಿಲ್ಲ. ಅಷ್ಟೇ ಅಲ್ಲದೆ ಸಂಜರಿ ಆಳ್ವಿಕೆಗೆ ಒಳಪಟ್ಟಿದ್ದ ಬಲಫ್ ಮತ್ತು ಹೇರಾತ್ ಭೂಭಾಗವನ್ನು ಕೂಡ ಬಲಾತ್ಕಾರವಾಗಿ ಆಕ್ರಮಿಸಿದ.

ಸಂಜರ್‌ನ ಸುಲ್ತಾನನು ಅಲ್ಲಾವುದ್ದೀನನ ದುರಾಕ್ರಮಣವನ್ನು ಯುದ್ಧದಲ್ಲಿ ಸಮರ್ಥವಾಗಿ ಎದುರಿಸಿದ. ಮತ್ತು ಮೇಲ್ಕಂಡ ಯುದ್ದದಲ್ಲಿ ಸೋತ ಅಲ್ಲಾವುದ್ದೀನ್‌ನನ್ನು ಸಂಜರ್ ರಾಜನು ಬಂಧಿಸಿ ಸೆರೆಮನೆಯಲ್ಲಿ ಇರಿಸಿದ. ಕೊನೆಗೆ ಸಂಜರ್ ರಾಜನಿಗೆ ಆತನ ಮೇಲೆ ಕರುಣೆ ಮೂಡಿತು ಹಾಗೂ ಅಲ್ಲಾವುದ್ದೀನನನ್ನು ಘೋರಿಸ್ಥಾನದ ಸುಲ್ತಾನ್‌ನಾಗಿ ಮತ್ತೆ ನೇಮಕ ಮಾಡಿದ. ಸುಲ್ತಾನ್‌ನಾಗಿ ಪುನರ್ನೇಮಕಗೊಂಡ ಕೆಲಕಾಲದ ನಂತರ ಅಂದರೆ, ಹಿಜರಿ ಶಕೆ ೫೫೧ ನೇ ಇಸವಿಯಲ್ಲಿ ಅಲ್ಲವುದ್ದೀನ್‌ನು ಸಾವನ್ನಪ್ಪಿದ.

ಸೈಫುದ್ದೀನ್ ಮೊಹಮ್ಮದ್ ಬಿನ್ ಅಲ್ಲಾವುದ್ದೀನ್

ಅಲ್ಲಾವುದ್ದೀನನ ಮರಣದ ನಂತರ ಆತನ ಮಗ ಸೈಫುದ್ದೀನ್ ರಾಜ್ಯಾಡಳಿತವನ್ನು ವಹಿಸಿಕೊಂಡ. ಆತನು ಅಧಿಕಾರವನ್ನು ಕೈಗೆತ್ತಿಕೊಂಡ ಕೂಡಲೇ ತನ್ನ ಚಿಕ್ಕಪ್ಪನ ಮಕ್ಕಳಾದ ಗಯಾಸುದ್ದೀನ್ ಮತ್ತು ಶಹಾಬುದ್ದೀನ್‌ನನ್ನು ಬಂಧನದಿಂದ ಬಿಡುಗಡೆ ಮಾಡಿದ. ಮತ್ತು ಸಂಜರ್‌ನ ನವಾಬರನ್ನಾಗಿ ಪುನರ್ನೇಮಕ ಮಾಡಿದ. ಆತನು ಪಟ್ಟಾಭಿಷಿಕ್ತನಾದ ಸುಮಾರು ಒಂದು ವರ್ಷದ ನಂತರ ಘಜ್ನಿ ಸೈನಿಕರೊಡನೆ ಯುದ್ಧ ಮಾಡುತ್ತಿದ್ದಾಗ ತನ್ನ ಸೇನೆಯ ಸಿಪಾಯಿಯಿಂದ ಹತನಾದ. ಸೈಫುದ್ದೀನನ ಮರಣವಾದ ನಂತರ ಗಯಾಸುದ್ದೀನ್ ಮಹಮ್ಮದ್‌ನು ಫೈರೋಜ್ ಕೋಹ್ ತಲುಪಿದ. ಆತನು ರಾಜ್ಯಾಡಳಿತವನ್ನು ವಹಿಸಿಕೊಂಡ ನಂತರ ತನ್ನ ಸಹೋದರನಾದ ಶಹಾಬುದ್ದೀನ್‌ನನ್ನು ತನ್ನ ಸೇನಾಧಿಕಾರಿಯಾಗಿ ನೇಮಕಗೊಳಿಸಿದ. ಗಯಾಸುದ್ದೀನನು ಅಲ್ಪಾವಧಿಯಲ್ಲಿಯೇ ಖುರಾಸಾನ್ ಮತ್ತು ಹಿಂದುಸ್ತಾನವನ್ನು ಗೆದ್ದುಕೊಂಡ. ಮತ್ತು

ಆ ದೇಶಗಳಲ್ಲಿ ತನ್ನ ನಾಣ್ಯ ಮತ್ತು ಆಡಳಿತವನ್ನು ಜಾರಿ ಮಾಡಿದ. ಗಯಾಸುದ್ದೀನ್ ಹಿಜರಿ ಶಕೆ ೫೯೯ರಲ್ಲಿ ಮರಣ ಹೊಂದಿದ.

ಶಹಾಬುದ್ದೀನ್ ಘೋರಿ

ಮಲ್ಲಿಕ್ ಸೈಫುದ್ದೀನ್‌ನ ನಂತರ ಘೋರಿ ರಾಜ್ಯದ ಆಡಳಿದ ಚುಕ್ಕಾಣಿಯು ಗಯಾಸುದ್ದೀನ್‌ನ ಕೈ ಸೇರಿತು. ಗಯಾಸುದ್ದೀನ್‌ನು ತನ್ನ ಸಹೋದರನಾದ ಶಹಾಬುದ್ದೀನ್‌ನನ್ನು ಪ್ರಖ್ಯಾತ ಸ್ಥಳವಾದ ತಕಿಯಾಬಾದ್‌ನಲ್ಲಿ ನೆಲಸುವಂತೆ ಆದೇಶಿಸಿದ ಮತ್ತು ಆತನು ತನ್ನ ರಾಜ್ಯದ ಇತರೆ ಪ್ರದೇಶಗಳ ಅಭಿವೃದ್ಧಿಯತ್ತ ಗಮನ ಹರಿಸಿದ. ಶಹಾಬುದ್ದೀನನು ತನ್ನ ರಾಜ್ಯವಾದ ತಕಿಯಾಬಾದ್‌ನಿಂದ ಘಜ್ನಿಯ ಮೇಲೆ ಅನೇಕ ಬಾರಿ ಯುದ್ಧ ಸಾರಿದ. ಘಜ್ನಿಯು ಸುಬಕ್ತಗೀನ್ ಸಂತತಿಯ ಆಳ್ವಿಕೆಯಲ್ಲಿ ಇತ್ತು. ಮೆಹಮೂದ್‌ನ ಸಂತತಿಯ ಆಶ್ರಯದಲ್ಲಿ ಇದ್ದ ಪ್ರದೇಶವನ್ನು ಅವರಿಂದ ಕಸಿದು ಘೋರಿ ತಾಜ್ಯದಲ್ಲಿ ವಿಲೀನಗೊಳಿಸಬೇಕೆಂಬುದು ಆತನ ಉದ್ದೇಶವಾಗಿತ್ತು. ಶಹಾಬುದ್ದೀನನು ಘಜ್ನಿಯನ್ನು ವಶಪಡಿಸಿಕೊಳ್ಳಲು ಅನೇಕ ಪ್ರಯತ್ನಗಳನ್ನು ಮಾಡಿದರೂ ಆವನು ವಿಫಲಗೊಂಡನು. ೫೬೭ನೇ ಇಸವಿಯಲ್ಲಿ ಗಯಾಸುದ್ದೀನ್‌ನು ಸ್ವತಃ ಘಜ್ನಿಯ ಮೇಲೆ ಯುದ್ಧ ಮಾಡಿದ ಮತ್ತು ಘಜ್ನಿಯನ್ನು ಖುಸ್ರುಮಲಿಕ್ ಸರದಾರರರಿಂದ ತನ್ನ ವಶಕ್ಕೆ ಪಡೆದುಕೊಂಡು ಘೋರಿಸ್ಥಾನದ ಒಂದು ಪ್ರಾಂತ್ಯವನ್ನಾಗಿ ಮಾಡಿಕೊಂಡ ಹಾಗೂ ಆದರ ಆಡಳಿತವನ್ನು ತನ್ನ ಸಹೋದರನಾದ ಶಹಾಬುದ್ದೀನನ ವಶಕ್ಕೆ ಒಪ್ಪಿಸಿದ.

ಮುಲ್ತಾನ್ ಮತ್ತು ಅಛ್‌ನ ವಿಜಯ

೫೭೭ ನೇ ಇಸವಿಯಲ್ಲಿ ಶಹಾಬುದ್ದೀನನು ತನ್ನ ಸಹೋದರನಾದ ಗಯಾಸುದ್ದೀನನ ಆದೇಶದ ಮೇರೆಗೆ ಮುಲ್ತಾನ್ ಮೇಲೆ ದಾಳಿ ಮಾಡಿದ. ಆತನು ಮುಲ್ತಾನ್ ಮತ್ತು ಸುತ್ತ ಮುತ್ತಲಿನ ಪ್ರದೇಶವನ್ನು ಖಿರಾಮತನ ಆಳ್ವಿಕೆಯಿಂದ ಕಸಿದುಕೊಂಡ. ತದ ನಂತರ ಶಹಾಬುದ್ದೀನನು ಅಛ್‌ನ ಮೇಲೆ ಆಕ್ರಮಣ ಮಾಡಿದ ಅಛ್‌ನ ರಾಜನಿಗೆ ಶಹಾಬುದ್ದೀನನ ಆಕ್ರಮಣದ ಸುದ್ದಿ ತಲುಪುತ್ತಿದ್ದಂತೆಯೇ ಆತನು ಕೋಟೆ ಬಾಗಿಲನ್ನು ಮುಚ್ಚಿದ. ಶಹಾಬುದ್ದೀನ್‌ನು ಕೋಟೆಯ ಸುತ್ತ ಮುತ್ತ ತನ್ನ ಡೇರೆಗಳನ್ನು ನಿರ್ಮಿಸಿದ ಮತ್ತು ಕೋಟೆಯನ್ನು ವಶಪಡಿಸಿಕೊಳ್ಳಲು ಉಪಾಯಗಳನ್ನು ಹೂಡತೊಡಗಿದ. ಸ್ವಲ್ಪ ಕಾಲದ ನಂತರ ತನ್ನ ಈ ರೀತಿಯ ಉಪಾಯಗಳು ಫಲಿಸುವುದಿಲ್ಲ ಹಾಗೂ ಕೋಟೆಯು ತನ್ನ ವಶಕ್ಕೆ ಬರುವುದಿಲ್ಲವೆಂದು ಅರಿವಾಯಿತು. ಹೀಗಾಗಿ ಶಹಾಬುದ್ದೀನನು ಅಛ್‌ನ ರಾಣಿಗೆ ತನ್ನ ಖಾಸಗಿ ಸಂದೇಶವಾಹಕನ ಮೂಲಕ ಸಂದೇಶವನ್ನು ಕಳುಹಿಸಿದ. "ನಿನ್ನ ಪ್ರಯತ್ನಗಳಿಂದ ಈ ಕೋಟೆಯನ್ನು ನಾನು ಗೆದ್ದಲ್ಲಿ, ನಿನ್ನನ್ನು ನನ್ನ ರಾಣಿಯನ್ನಾಗಿ ಮಾಡಿಕೊಳ್ಳುವೆ" ರಾಣಿಯು ಬಹಳ ಕಾಲದಿಂದ ಅವನಿಂದ

ಭಯಗ್ರಸ್ಥಳಾಗಿದ್ದಳು ಮತ್ತು ಆ ಯುದ್ಧದಲ್ಲಿ ಆತನಿಗೇ ಗೆಲವು ಸಿಗವುದೆಂದು ಆಕೆ ಖಚಿತವಾಗಿ ನಂಬಿದ್ದಳು. ಆಕೆಯು ಸಂದೇಶವಾಹಕನೊಡನೆ ಕಳುಹಿಸಿದ ಮರು ಉತ್ತರದಲ್ಲಿ ಹೀಗಿತ್ತು, "ಬಾದಶಹಾನ ರಾಣಿಯಾಗುವಂತಹ ವಯಸ್ಸು ನನ್ನದಲ್ಲ. ಆದರೆ ನನಗೊಬ್ಬ ಮಗಳಿದ್ದು ಆಕೆಯು ವಿವಾಹ ಯೋಗ್ಯಳಾಗಿದ್ದಾಳೆ. ಆಕೆಯು ಶಹಾಬುದ್ದೀನ್ ನಂತಹ ಪರಾಕ್ರಮಿ ಮತ್ತು ದಕ್ಷ ಬಾದಶಹನ ಪತ್ನಿಯಾಗಲು ತಕ್ಕವಳಿದ್ದಾಳೆ. ನಾನು ಬಾದಶಹನ ಆಜ್ಞೆಯನ್ನು ಪಾಲಿಸಲು ಸಿದ್ಧಳಿದ್ದೇನೆ. (ಬಾದಶಹನು ವಿಜಯಿಯಾದ ನಂತರ) ನನ್ನ ಮಗಳನ್ನು ವಿವಾಹವಾಗಿ ರಾಣಿಯನ್ನಾಗಿ ಮಾಡಿಕೊಳ್ಳಬೇಕು ನನ್ನ ಧನ-ಕನಕ ಮತ್ತು ಸೌಕರ್ಯಗಳನ್ನು ಕಾಪಾಡಬೇಕು." ಶಹಾಬುದ್ದೀನನು ಸದರಿ ರಾಣಿಯ ಆ ಶರತ್ತುಗಳನ್ನು ಒಪ್ಪಿಕೊಂಡನು. ನಂತರ ರಾಣಿಯು ಎರಡು ದಿನಗಳ ಅವಧಿಯಲ್ಲಿಯೇ ರಾಜನನ್ನು ಯಮಪುರಿಗೆ ಅಟ್ಟಿದಳು ಮತ್ತು ಪಟ್ಟಣವನ್ನು ಶಹಾಬುದ್ದೀನನಿಗೆ ಅರ್ಪಿಸಿದಳು. ಶಹಾಬುದ್ದೀನನು ಶರತ್ತಿನ ರೀತ್ಯಾ ರಾಜನ ಮಗಳನ್ನು ಮುಸಲ್ಮಾನಳಾಗಿ ಮತಾಂತರಗೊಳಿಸಿ ಮದುವೆ ಮಾಡಿಕೊಂಡ. ನಂತರ ಇಸ್ಲಾಮಿ ರಿವಾಜುಗಳನ್ನು ಅರಿತುಕೊಂಡು ಕುರಾನ್‌ನ ಅಧ್ಯಯನವನ್ನು ನಡೆಸುವ ಸಲುವಾಗಿ ಆತನು ಅಛ್‌ನ ರಾಣಿಯನ್ನು ಮತ್ತು ಆಕೆಯ ಮಗಳನ್ನು ಘಜ್ನಿಗೆ ಕಳುಹಿಸಿದ. ಶಹಾಬುದ್ದೀನನು ಸದರಿ "ಪತಿಯನ್ನು ಕೊಂದ" ರಾಣಿಯ ವತಿಯಿಂದ ತನ್ನ ಉದ್ದೇಶವನ್ನು ಸಾಧಿಸಿಕೊಂಡರೂ ಕೂಡ ಆಕೆಯ ಬಗ್ಗೆ ತೀವ್ರ ಕೋಪವನ್ನು ಹೊಂದಿದ್ದ. ತನ್ನ ಪತಿಗೆ ದ್ರೋಹವನ್ನು ಎಸಗಿದ್ದ ಅಛ್‌ನ ರಾಣಿ ಮತ್ತು ಆಕೆಯ ಮಗಳನ್ನು ಆತನು ನಂಬಿಕೆಗೆ ಅನರ್ಹರೆಂದು ಭಾವಿಸಿದ್ದ. ಸ್ವಲ್ಪ ದಿನಗಳ ನಂತರ ಅಛ್‌ನ ರಾಣಿ ಮರಣ ಹೊಂದಿದಳು ಮಗಳು ಕೂಡ ಶಹಾಬುದ್ದೀನನ ರಾಣಿಯಾಗಿ ಯಾವುದೇ ಪ್ರಯೋಜನವನ್ನು ಹೊಂದಲಿಲ್ಲ, ಬದಲಿಗೆ ತನ್ನ ತಾಯಿಯ ಮರಣದ ಎರಡು ವರ್ಷಗಳ ನಂತರ ದುಃಖ ಮತ್ತು ನೋವಿನಿಂದ ಕೂಡಿ ಆಕೆಯು ಕೂಡ ಮರಣ ಹೊಂದಿದಳು. ಶಹಾಬುದ್ದೀನನು ಮುಲ್ತಾನ್ ಮತ್ತು ಅಛ್‌ನ ರಾಜ್ಯಾಡಳಿತವನ್ನು ಅಲಿ ಕರ್ಮಾಜ್‌ಗೆ ವಹಿಸಿಕೊಟ್ಟು ತಾನು ಘಜ್ನಿಗೆ ಮರಳಿದ.

ಗುಜರಾತ್, ಪೆಶಾವರ್, ಸಿಂಧ್ ಮತ್ತು ಲಾಹೋರ್ ಮೊದಲಾದವುಗಳ ಮೇಲೆ ಸೇನೆಯ ಆಕ್ರಮಣ.

ಹಿಜರಿ ಶಕೆ ೫೭೪ ನೇ ಇಸವಿಯಲ್ಲಿ ಶಹಾಬುದ್ದೀನನು ಮುಲ್ತಾನ್ ಮತ್ತು ಅಛ್‌ನತ್ತ ಪ್ರಯಾಣ ಬೆಳೆಸಿದ ಮತ್ತು ಅಲ್ಲಿಂದ ಮರಳುಗಾಡಿನ ಮೂಲಕ ಗುಜರಾತನತ್ತ ಮುಂದುವರೆದ. ಆ ಸಂದರ್ಭದಲ್ಲಿ ಬ್ರಹ್ಮದೇವನ ಮರಿಮಗನಾದ ರಾಯೆ ಭೀಮದೇವ ಗುಜರಾತ್‌ನ ರಾಜನಾಗಿದ್ದ. ಭೀಮದೇವನು ಅತ್ಯಂತ ಪರಾಕ್ರಮದಿಂದ ಶಹಾಬುದ್ದೀನನನ್ನು ಎದುರಿಸಿದ. ಇದರ ಫಲವಾಗಿ ಮುಸ್ಲಿಮರಿಗೆ ಸೋಲಾಯಿತು.

ಬಹುತೇಕ ಮುಸ್ಲಿಮ್ ಸೈನಿಕರು ಹತರಾದರು. ಅತೀವ ಸಂಕಷ್ಟಕ್ಕೆ ಗುರಿಯಾದ ಶಹಾಬುದ್ದೀನನು ಯುದ್ಧ ಭೂಮಿಯಿಂದ ತನ್ನ ಪ್ರಾಣವನ್ನು ಉಳಿಸಿಕೊಂಡು ಘಜ್ನಿಗೆ ಮರಳಿದ.

ಹಿಜರಿ ಶಕೆ ೫೭೫ ನೇ ಇಸವಿಯಲ್ಲಿ ಶಹಾಬುದ್ದೀನನು ಪೇಶಾವರ್‌ನ ಬಿಕ್ರಾಮ್ ಪುರ್‌ಶೋರ್ ಮತ್ತು ಫರ್‌ಸೋರ್ ಎಂಬ ಹೆಸರಿನಿಂದ ಇತಿಹಾಸ ಪ್ರಸಿದ್ಧವಾಗಿದ್ದ ಪ್ರದೇಶಗಳನ್ನು ಗೆದ್ದುಕೊಂಡ. ಅದರ ಒಂದು ವರ್ಷದ ನಂತರ ಆತನು ಲಾಹೋರಿನ ಮೇಲೆ ಆಕ್ರಮಣ ಮಾಡಿದ. ಆ ಸಂದರ್ಭದಲ್ಲಿ ಲಾಹೋರ ಪಟ್ಟಣವು ಘಜ್ನಿ ಸಂತತಿಯ ಕೊನೆಯ ರಾಜನಾದ ಖುಸ್ರುಮಲಿಕ್‌ನ ಆಡಳಿತಕ್ಕೆ ಒಳಪಟ್ಟಿತು. ದೆಹಲಿಯ ರಾಜ ಮತ್ತು ಹಿಂದ್‌ನ ಇತರೆ ರಾಜ ಮಹಾರಾಜರ ಪ್ರಾಬಲ್ಯದಿಂದ ಮತ್ತು ಆಫ್ಘನ್ನರು ಹಾಗೂ ಯೂರಿಷ್‌ಗಳ ಮೇಲುಗೈ ಆಗಿದ್ದರಿಂದ ಖುಸ್ರೂಮುಲ್ಕ್‌ನ ಆಡಳಿತದ ಬುನಾದಿಯು ಸಡಿಲಗೊಂಡಿತ್ತು. ಆದುದರಿಂದ ಖುಸ್ರೂ ಶಹಾಬುದ್ದೀನ್‌ನನ್ನು ಯುದ್ಧ ರಂಗದಲ್ಲಿ ಎದುರಿಸಲು ಸಿದ್ದನಿರಲಿಲ್ಲ ಮತ್ತು ತನ್ನ ಕೋಟೆಯನ್ನು ಬಂದ್ ಮಾಡಿ ಕುಳಿತಿದ್ದ. ಸ್ವಲ್ಪ ಕಾಲ ತಾಳ್ಮೆಯಿಂದ ಪರೀಕ್ಷೆ ಮಾಡಿದ ಶಹಾಬುದ್ದೀನ್ ಯುದ್ಧದ ಯೋಜನೆಯನ್ನು ಕೈಬಿಟ್ಟ. ಖುಸ್ರೂಮುಲ್ಕ್‌ನು ತನ್ನ ಒಬ್ಬ ಕಿರಿ ವಯಸ್ಸಿನ ಮಗನ ಜೊತೆಯಲ್ಲಿ ಒಂದು ವೈಭವೋಪೇತವಾದ ಆನೆಯನ್ನು ಜಾಮೀನಿನ ರೂಪದಲ್ಲಿ ಶಹಾಬುದ್ದೀನನಿಗೆ ಕಳಿಸಿಕೊಟ್ಟ. ರಾಜಿಯು ಅತ್ಯಂತ ಉತ್ತಮ ಕೆಲಸ ಎಂಬ ನಂಬಿಕೆಯಂತೆ ಖುಸ್ರೂಮುಲ್ಕ್‌ನೊಡನೆ ಹೆಚ್ಚು ಸಂಘರ್ಷ ನಡೆಸದೆ ಶಹಾಬುದ್ದೀನನು ಘಜ್ನಿಗೆ ಮರಳಿದ.

ಹಿಜರಿ ಶಕೆ ೫೭೬ ನೇ ಇಸವಿಯಲ್ಲಿ ಶಹಾಬುದ್ದೀನನು ಸಿಂಧ್‌ನ ಪ್ರಸಿದ್ದ ಪಟ್ಟಣವಾದ ದೇವಲ್ ಮೇಲೆ ಯುದ್ಧ ಸಾರಿದ. (ದೇವಲ್ ಅಥವಾ ದೇಬಲ್ ಸಿಂಧ್‌ನ ಪುರಾತನ ಪ್ರದೇಶವಾಗಿದೆ ಇಂದಿನ ಸಂದರ್ಭದಲ್ಲಿ ಆ ಪಟ್ಟಣವು ಯಾವ ಭಾಗದಲ್ಲಿ ಇತ್ತು ಎಂದು ಹೇಳುವುದು ಸಾದ್ಯವಾಗುವುದಿಲ್ಲ ಆದರೆ, ಅದು ಕರಾಚಿಯ ಸಮೀಪದಲ್ಲಿತ್ತು ಎಂದು ಖಚಿತವಾಗಿ ಹೇಳಬಹುದಾಗಿದೆ. ಕೆಲವು ಇತಹಾಸಜ್ಞರು ಪ್ರಚಲಿತ ಠಠ್‌ನ ಸಮೀಪದಲ್ಲಿದೆ ಎಂದು ಅಭಿಪ್ರಾಯ ಪಡುತ್ತಾರೆ) ಮತ್ತು ಸಿಂಧ್ ನದಿಯ ತೀರದ ಎಲ್ಲಾ ಪ್ರದೇಶವನ್ನು ವಶಪಡಿಸಿಕೊಂಡ ಮತ್ತು ಅಪಾರವಾದ ಯುದ್ಧ ಸಾಮಗ್ರಿಯ ಲೂಟಿಯೊಂದಿಗೆ ತನ್ನ ಸ್ವದೇಶಕ್ಕೆ ಮರಳಿ ಹೋದ.

ಹಿಜರಿ ಶಕೆ ೫೮೦ ನೇ ಇಸವಿಯಲ್ಲಿ ಶಹಾಬುದ್ದೀನನು ಲಾಹೋರ್ ಮೇಲೆ ಮತ್ತೆ ಸೇನೆಯೊಂದಿಗೆ ಆಕ್ರಮಣ ಮಾಡಿದ ಮತ್ತು ಆ ಪಟ್ಟಣದ ಸುತ್ತ ಮುತ್ತಲಿನ ಎಲ್ಲಾ ಪ್ರದೇಶವನ್ನು ಮನಸೋ ಇಚ್ಛೆ ಲೂಟಿ ಮಾಡಿದ. ರಾವಿ ಮತ್ತು ಚೀನಾಬ್ ನದಿಗಳ ನಡುವೆ ಸಿಯಾಲ್‌ಕೋಟ್ ಕೋಟೆಯನ್ನು ನಿರ್ಮಾಣ ಮಾಡಿದ ಮತ್ತು ಅದರ ಆಡಳಿತವನ್ನು ಹುಸೇನ್‌ಖರ್ಮಿಲ್‌ನ ವಶಕ್ಕೆ ಒಪ್ಪಿಸಿದ. ನಂತರ ಆತನು

ಘಜ್ನಿಗೆ ಮರಳಿ ಹೋದ. ಶಹಾಬುದ್ದೀನ್ ಮರಳಿ ಹೋದ ನಂತರ ಖುಸ್ರು ಮುಲ್ಕ್‌ಗೆ ಸದವಕಾಶ ಒದಗಿ ಬಂದಿತು. ಅವನು ಖಕ್ಕರ್‌ಗಳು ಮತ್ತು ಹಿಂದುಗಳೊಡನೆ ಕೈ ಜೋಡಿಸಿ ಸಿಯಾಲ್‌ಕೋಟ್‌ನ ಕೋಟೆಯೆನ್ನು ಸುತ್ತುವರೆದ ಮತ್ತು ಆ ಕೋಟೆಯನ್ನು ತನ್ನ ವಶ ಪಡಿಸಿಕೊಳ್ಳಲು ಅಪಾರವಾಗಿ ಪ್ರಯತ್ನ ಪಟ್ಟ. ಆದರೆ ತನ್ನ ಉದ್ದೇಶದಲ್ಲಿ ವಿಫಲನಾಗಿ ಆತ ಹಿಮ್ಮೆಟ್ಟಿದ. ಖುಸ್ರುವಿನ ಆ ಪ್ರಯತ್ನದ ಬಗ್ಗೆ ಶಹಾಬುದ್ದೀನನಿಗೆ ತುಂಬಾ ಕೋಪವುಂಟಾಯಿತು. ಅವನು ೫೮೨ನೆಯ ಇಸವಿಯಲ್ಲಿ ಬಲಿಷ್ಠ ಸೈನ್ಯದ ಜೊತೆಗೂಡಿ ಲಾಹೋರಿನ ಮೇಲೆ ಆಕ್ರಮಣ ಮಾಡಿದ. ಖುಸ್ರು ಮುಲ್ಕ್ ಅವನನ್ನು ಯುದ್ಧದಲ್ಲಿ ಎದುರಿಸದೆ ಕೋಟೆಯೊಳಗೆ ಅವಿತುಕೊಂಡ. ಕೆಲವು ದಿನಗಳವರೆಗೆ ಖುಸ್ರು ಮುಲ್ಕ್ ಶಹಾಬುದ್ದೀನನಿಂದ ಬಿಡುಗಡೆ ಪಡೆಯುವ ಉಪಾಯದ ಬಗ್ಗೆ ಯೋಜನೆಯನ್ನು ರೂಪಿಸುವ ಪ್ರಯತ್ನವನ್ನು ಮಾಡಿದ. ಆದರೆ, ಆ ಸಿಂಹದೊಡನೆ ಸೆಣಸಾಡುವುದು ಸುಲಭವಲ್ಲವೆಂಬ ವಾಸ್ತವತೆಯನ್ನು ಮನಗಂಡು ಅವನು ಕೋಟೆಯ ಬಾಗಿಲನ್ನು ತೆರೆದು ಬಿಟ್ಟ. ಖುಸ್ರು ಮುಲ್ಕ್ ಅತ್ಯಂತ ದೈನ್ಯತೆಯಿಂದ ಶಹಾಬುದ್ದೀನನ ಸಮ್ಮುಖದಲ್ಲಿ ಹಾಜರಾದ ಮತ್ತು ತುಂಬಾ ಗೌರವ ಹಾಗೂ ಘನತೆಯಿಂದ ಅವನನ್ನು ನಗರದೊಳಗೆ ಕರೆತಂದ. ಶಹಾಬುದ್ದೀನನು ಲಾಹೋರನ್ನು ಕೂಡ ಮುಲ್ತಾನಿನ ರಾಜನಾದ ಅಲಿ ಕರ್ಮಾಜ್‌ನ ವಶಕ್ಕೆ ಒಪ್ಪಿಸಿದ ಹಾಗೂ ಖುಸ್ರು ಮುಲ್ಕ್ ಮತ್ತು ಅವನ ಮಗನನ್ನು ಗಯಾಸುದ್ದೀನನ ಬಳಿ ಫೈರೋಜ್ ಕೋಹ್‌ಗೆ ರವಾನೆ ಮಾಡಿದ. ಸುಲ್ತಾನ್ ಗಯಾಸುದ್ದೀನನು ಅವರಿಬ್ಬರನ್ನೂ ಜರ್ಜಿಸ್ತಾನಿನ ಕೋಟೆಯೊಂದರಲ್ಲಿ ಬಂಧನದಲ್ಲಿಟ್ಟ. ಕೆಲ ಕಾಲದ ನಂತರ ಖವಾರ್‌ಜಿಮ್ ಶಾಹನ ಘಟನೆ ಬೆಳಕಿಗೆ ಬಂದಿತು. ಗಯಾಸುದ್ದೀನನು ಆ ಸಂಚಿನಲ್ಲಿ ಭಾಗಿಯಾದ ಆರೋಪದ ಮೇಲೆ ಘಜ್ನಿ ಕೈದಿಗಳೊಡನೆ ಖುಸ್ರು ಮುಲ್ಕ್‌ನನ್ನು ಕೂಡಾ ಮರಣ ದಂಡನೆಗೆ ಗುರಿ ಪಡಿಸಿದ. ಈ ರೀತಿಯಲ್ಲಿ ಸುಲ್ತಾನ್ ಮೆಹಮೂದನ ಮನೆತನದ ದೀಪವು ಆರಿ ಹೋಯಿತು.

ತರಾಯನ್‌ನ ಪ್ರಥಮ ಯುದ್ಧ :

ಶಹಾಬುದ್ದೀನನು ಹಿಜರಿ ಶಕೆ ೫೮೭ ರಲ್ಲಿ ಮತ್ತೊಮ್ಮೆ ಹಿಂದುಸ್ತಾನದ ಮೇಲೆ ಆಕ್ರಮಣ ಮಾಡಿದ. ಆ ಯುದ್ಧದಲ್ಲಿ ಅವನು ತಪಿಂದದ ಕೋಟೆಯ ಮೇಲೆ ಪ್ರಭುತ್ವವನ್ನು ಸಾಧಿಸಿದ. (ತಪಿಂದ ಎಂದರೆ ಪ್ರಖ್ಯಾತ ಪಟ್ಟಣವಾದ ಭಟಿಂಡ) ಆ ಕಾಲದಲ್ಲಿ ಭಟಿಂಡ ನಗರವು ಹಿಂದುಗಳ ಪ್ರಮುಖ ರಾಜ ಮಹಾರಾಜರ ಕೇಂದ್ರ ಸ್ಥಾನವಾಗಿ ಗುರುತಿಸಲ್ಪಟ್ಟಿತ್ತು ಮತ್ತು ಅಜ್ಮೇರಿನ ರಾಜನ ಆಳ್ವಿಕೆಗೊಳಪಟ್ಟಿತ್ತು. ಶಹಾಬುದ್ದೀನನು ವಿಜಯಿಯಾದ ನಂತರ ತಪಿಂದದ ಆಡಳಿತವನ್ನು ಮಲಿಕ್ ಬಹಾವುದ್ದೀನ್ ಟೋಂಕಿಗೆ ವಹಿಸಿಕೊಟ್ಟ ಹಾಗೂ ಆತನನ್ನು ೧೦೪೦ ಸವಾರರುಗಳ ಸೈನ್ಯದೊಡನೆ ಅಲ್ಲಿಯೇ ಬಿಟ್ಟು ತಾನು ಮರಳಿ ಹೋಗುವ ಸಿದ್ಧತೆಯಲ್ಲಿ ತೊಡಗಿದ.

ಆದರೆ, ರಾಯೆ ಪುಥೂರಾ ಎಂಬ ರಾಜನು ತನ್ನ ಸಹೋದರನೂ ಮತ್ತು ದೆಹಲಿಯ ರಾಜನೂ ಆದ ಖಂಡೇರಾವ್ ಹಾಗೂ ಹಿಂದುಗಳ ಇತರೆ ರಾಜರೊಡನೆ ಕೂಡಿ ತಪಿಂದವನ್ನು ಮರಳಿ ಪಡೆಯಲು ಸಂಚನ್ನು ರೂಪಿಸುತ್ತಿದ್ದಾರೆಂಬ ವರ್ತಮಾನವು ಶಹಾಬುದ್ದೀನನು ಮರಳಿ ಹೋಗುವುದಕ್ಕೆ ಮುಂಚಿತವಾಗಿ ಆತನಿಗೆ ದೊರಕಿತು ಹಾಗೂ ಅ ಇಬ್ಬರು ಸಹೋದರರು ಕೂಡಾ ೨ ಲಕ್ಷ ಸವಾರರು ಮತ್ತು ೩೦೦೦ ಆನೆಗಳಿಂದ ಕೂಡಿದ ಬಲಿಷ್ಠ ಸೈನ್ಯದ ನೆರವಿನಿಂದ ತಪಿಂದದತ್ತ ಪ್ರಯಾಣ ಬೆಳೆಸುತ್ತಿರುವರೆಂಬ ಸುದ್ದಿಯೂ ಆತನಿಗೆ ತಲುಪಿತು. ಈ ಬೆಳವಣಿಗೆಯಿಂದ ಶಹಾಬುದ್ದೀನನು ತನ್ನೂರಿಗೆ ಮರಳಿ ಹೋಗುವ ತನ್ನ ಇರಾದೆಯನ್ನು ಬದಲಿಸಿದ ಮತು ಬೃಹತ್ ಸೇನೆಯಿಂದ ಒಡಗೂಡಿ ರಾಯೆ ಪುಥೂರಾನನ್ನು ಎದುರಿಸಲು ಪಣ ತೊಟ್ಟ. ಹಾಲಿ ತರಾವಡಿ ಎಂದು ಕರೆಯಲ್ಪಡುತ್ತಿರುವ ಮತ್ತು ದೆಹಲಿಯಿಂದ ೪೦ ಹರದಾರಿ ದೂರವಿದ್ದ ಸರಸ್ವತಿ ನದಿಯ ದಡದ ಮೇಲೆ ಇದ್ದ ಮೋಜೆ ತರಾಯನ್ ಎಂಬ ಸ್ಥಳದಲ್ಲಿ ಉಭಯ ಸೇನೆಗಳು ಎದುರು ಬದುರಾದವು.

ಅವರ ನಡುವೆ ಘನಘೋರ ಯುದ್ಧ ನಡೆಯಿತು. ತಮ್ಮ ಜೀವಗಳನ್ನು ಒತ್ತೆ ಇಟ್ಟು ಹಿಂದುಗಳು ಶೌರ್ಯದಿಂದ ಕಾದಾಡಿದರು. ಇದರ ಪರಿಣಾಮವಾಗಿ ಮುಸ್ಲಿಮ್ ಸಿಪಾಯಿಗಳ ಸ್ಥೈರ್ಯ ಕುಸಿಯತೊಡಗಿತು. ಶಹಾಬುದ್ದೀನನ ಸೈನ್ಯವು ನಿರ್ನಾಮವಾಗತೊಡಗಿತು. ಆತನ ಸೈನಿಕರ ಮಾರಣಹೋಮ ನಡೆಯಿತು. ಸೈನ್ಯದ ಈ ದುರವಸ್ಥೆಯನ್ನು ಕಂಡು, ಶಹಾಬುದ್ದೀನನ ಸರದಾರನೊಬ್ಬ ಹೀಗೆಂದು ನುಡಿದ "ಘೋರಿ ಮನೆತನದ ಪಾಲನೆ ಮತ್ತು ಪೋಷಣೆಯಿಂದ ತರಬೇತಿಯನ್ನು ಹೊಂದಿದ್ದ ಸೈನ್ಯದ ಎಡ ಮತ್ತು ಬಲ ಭಾಗದ ಇಬ್ಬರು ಸರದಾರರು ಕೂಡಾ ಭಯಗ್ರಸ್ತರಾಗಿ, ದಿಕ್ಕೆಟ್ಟು ಈಗಾಗಲೇ ಯುದ್ಧಭೂಮಿಯಿಂದ ಪಲಾಯನಗೈದಿದ್ದಾರೆ. ಬೊಗಳೆ ಮಾತಿಗೆ ಖ್ಯಾತರಾಗಿದ್ದ ಮೊಕದ್ದಮತಲ್ ಜೈಷ್‌ನ ಆಫ್ಘನ್ ಮತ್ತು ಖಿಲ್ಜಿ ಸರದಾರರು ಕೂಡ ಯುದ್ಧ ರಂಗದಿಂದ ಕಾಣೆಯಾಗಿದ್ದಾರೆ. ಆದ್ದರಿಂದ ನೀವು ಈಗ ಯುದ್ಧ ರಂಗದಿಂದ ಹಿಮ್ಮೆಟ್ಟಿ, ಲಾಹೋರಿನತ್ತ ಪ್ರಯಾಣ ಬೆಳೆಸುವುದು ಸೂಕ್ತ. ಈ ಸಲಹೆಯು ಶಹಾಬುದ್ದೀನನಿಗೆ ಅಮಾನ್ಯವಾಯಿತು. ಅವನು ಮಧ್ಯ ಭಾಗದಲ್ಲಿ ತನ್ನ ಅಳಿದುಳಿದ ಸೈನ್ಯವನ್ನು ಒಟ್ಟುಗೂಡಿಸಿದ ಮತ್ತು ಅವರಲ್ಲಿ ಸ್ಥೈರ್ಯವನ್ನು ತುಂಬಿ ಶತ್ರುಗಳ ಮೇಲೆ ದಾಳಿ ನಡೆಸಿದ. ಆ ಯುದ್ಧಭೂಮಿಯಲ್ಲಿ ಅವನ ವೀರಾವೇಷ ಮತ್ತು ಪರಾಕ್ರಮವನ್ನು ಕಂಡು ಶತ್ರು ಪಾಳಯದವರು ಕೂಡಾ ನಿಬ್ಬೆರಗಾದರು. ಶಹಾಬುದ್ದೀನ್ ಯುದ್ಧ ನಿರತನಾಗಿದ್ದಾಗ ದೆಹಲಿಯ ರಾಜನಾದ ಖಂಡೇರಾವ್‌ನ ದೃಷ್ಟಿ ಆಕಸ್ಮಿಕವಾಗಿ ಅವನ ಮೇಲೆ ಬಿತ್ತು. ಅವನು ತನ್ನ ಆನೆಯನ್ನು ಶಹಾಬುದ್ದೀನ್‌ನತ್ತ ನಡೆಸಿದ . ಶಹಾಬುದ್ದೀನ್ ಕೂಡಾ ಭಲ್ಲೆಯನ್ನು ಕೈಯಲ್ಲಿ ಹಿಡಿದು ಅವನತ್ತ ಮುನ್ನುಗ್ಗಿದ .ಆನೆಯು ಅವನನ್ನು ಸಮೀಪಿಸಿದೊಡನೆ ಶಹಾಬುದ್ದೀನನು ತನ್ನ ಎಲ್ಲಾ ಶಕ್ತಿಯನ್ನು ಪ್ರಯೋಗಿಸಿ ತನ್ನ ಭಲ್ಲೆಯನ್ನು ಆನೆಯ ಮುಖದ ಮೇಲೆ ಬೀಸಿದ. ಅವನ ಶಕ್ತಿಶಾಲಿ

ಹೊಡೆತವು ಆನೆಯ ಮುಖದ ಹಣೆಯಲ್ಲಿ ನೆಟ್ಟಿತು. ಆನೆಯ ದಂತ ಮುರಿಯಿತು. ಖಂಡೆರಾವ್ ಕೂಡಾ ಅಪ್ರತಿಮ ಶೌರ್ಯದಿಂದ ಹೋರಾಡಿದ ಹಾಗೂ ಆನೆಯ ಮೇಲೆ ಕುಳಿತಿದ್ದಂತೆಯೇ ಶಹಾಬುದ್ದೀನನ ಪಕ್ಕೆಗೆ ಖಡ್ಗದಿಂದ ಆಳವಾದ ಗಾಯವನ್ನು ಉಂಟು ಮಾಡಿದ. ಗಾಯದ ತೀವ್ರತೆಯಿಂದ ಶಹಾಬುದ್ದೀನನು ಮೂರ್ಛೆ ತಪ್ಪಿ ತನ್ನ ಕುದುರೆಯಿಂದ ಬೀಳುವ ಕ್ಷಣದಲ್ಲಿ ಒಬ್ಬ ಖಿಲ್ಜಿ ಸಿಪಾಯಿಯು ಅಪಾರ ವಿಚಕ್ಷಣತೆಯಿಂದ ಈ ಅವಘಡವನನು ತಪ್ಪಿಸಿದ. ಅವನು ಎವೆ ಇಕ್ಕುವುದರಲ್ಲಿ ಕುದುರೆಯ ಮೇಲೆ ಏರಿ, ಶಹಾಬುದ್ದೀನ್‌ನನ್ನು ತನ್ನ ಆಸರೆಯಲ್ಲಿ ಹಿಡಿದು ಯುದ್ಧ ರಂಗದಿಂದ ಪಲಾಯನಗೈದ. ಆ ಸೈನಿಕನು ಗಾಯಗೊಂಡ ಶಹಾಬುದ್ದೀನ್‌ನನ್ನು ತನ್ನ ಮಡಿಲಲ್ಲಿಟ್ಟು ರಕ್ಷಿಸುತ್ತಾ ನಾಗಾಲೋಟದಿಂದ ೨೦ ಹರದಾರಿ ದೂರದತ್ತ ದೌಡಾಯಿಸಿದ. ಅಲ್ಲಿ ಶಹಾಬುದ್ದೀನನ ಸರದಾರರು ಬೀಡು ಬಿಟ್ಟಿದ್ದರು. ತಮ್ಮ ಸೋಲಿನ ದೆಸೆಯಿಂದ ಹಾಗೂ ಬಾದಶಹನನ್ನು ಕಾಣದೆ ಕಂಗೆಟ್ಟಿದ್ದ ಸೈನಿಕರ ಅನಿಶ್ಚಿತತೆ ಕೊನೆ ಗೊಂಡಿತು. ಶಹಾಬುದ್ದೀನನು ಹಿಂದುಸ್ತಾನದ ಭೂಭಾಗವನ್ನು ತನ್ನ ನಂಬಿಕಸ್ತ ಸರದಾರರ ಹಸ್ತ ಒಪ್ಪಿಸಿ, ಘೋರಿಗೆ ಮರಳಿದ.

ಘೋರಿಸ್ತಾನ ತಲುಪಿದ ನಂತರ ಅವನು ಯುದ್ಧ ಭೂಮಿಯನ್ನು ತೊರೆದು ಪಲಾಯನ ಮಾಡಿದ ಆಫ್ಘನ್ ಸರದಾರರಿಗೆ ಯಾವುದೇ ಪ್ರತಿಕ್ರಿಯೆಯನ್ನು ತೋರಲಿಲ್ಲ. ಆದರೆ, ಖಿಲ್ಜಿ ಮತ್ತು ಘೋರಿ ಸರದಾರರಿಗೆ ಮಾತ್ರ ಕಠಿಣ ಶಿಕ್ಷೆಯನ್ನು ವಿಧಿಸಿದ. ಅವನು ಚೀಲಗಳಲ್ಲಿ ಹಸಿ ಗೋಧಿಯನ್ನು ತುಂಬಿಸಿ ಆ ಸರದಾರರ ಕುತ್ತಿಗೆಗೆ ನೇತು ಹಾಕಿದ ಮತ್ತು ಇಡೀ ನಗರದಲ್ಲಿ ಮೆರವಣಿಗೆ ಮಾಡಿಸಿದ. ಅಷ್ಟೇ ಅಲ್ಲದೆ, ತಮ್ಮ ಚೀಲಗಳ ಹಸಿ ಗೋಧಿಯನ್ನು ತಿನ್ನದ ಸರದಾರರಿಗೆ ಶಹಾಬುದ್ದೀನನು ಮರಣ ದಂಡನೆಯನ್ನು ವಿಧಿಸಿದ. ಸರದಾರರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳುವ ಸಲುವಾಗಿ ತಮ್ಮ ಚೀಲಗಳ ಹಸಿ ಗೋಧಿಯನ್ನು ತಿಂದು ತಮ್ಮ ಜೀವವನ್ನು ಉಳಿಸಿಕೊಂಡರು.

ಶಹಾಬುದ್ದೀನನು ಜೀವಂತವಾಗಿ ಬದುಕುಳಿದ ಘಟನೆಯ ವಿವರಗಳು

"ಜೈನುಲ್‌ಮಾಸರ್" ಗ್ರಂಥದಲ್ಲಿ ಶಹಾಬುದ್ದೀನನು ಜೀವಂತವಾಗಿ ಬದುಕುಳಿದ ಘಟನೆಯು ಕೆಳಕಂಡಂತೆ ವರದಿಯಾಗಿದೆ. ಖಂಡೇರಾವ್‌ನಿಂದ ಗಾಯಗೊಂಡ ಶಹಾಬುದ್ದೀನನು ಧರಾಶಾಯಿಯಾದ. ಸಂಜೆಯವರೆವಿಗೂ ಆ ಘೋರಿ ಸಿಂಹವಾದ ಶಹಾಬುದ್ದೀನನು ಅತೀವ ದುರವಸ್ಥೆಯಲ್ಲಿ ಯುದ್ಧ ಭೂಮಿಯಲ್ಲಿಯೇ ಬಿದ್ದಿದ್ದ. ಹಿಂದೂ ಸೈನಿಕರಿಗೆ ಆತ ಪರಿಚಿತನಾಗಿರಲಿಲ್ಲ ಆದ್ದರಿಂದ ಯಾರ ಗಮನವೂ ಅತ್ತ ಹೋಗಲಿಲ್ಲ. ಸೂರ್ಯಾಸ್ತವಾಗಿ ಇರುಳಿನ ಕತ್ತಲೆಯಾವರಿಸಿದ ನಂತರ ಶಹಾಬುದ್ದೀನನ ಗುಲಾಮರ ಒಂದು ತಂಡವು ತಮ್ಮ ಬಾದಶಹನನ್ನು ಹುಡುಕುತ್ತಾ ಅವನ ಬಳಿ ಸಾರಿತು. ಆ ಹೊತ್ತಿಗಾಗಲೇ ಅವನಿಗೆ ಅಲ್ಪ ಸ್ವಲ್ಪ ಪ್ರಜ್ಞೆಯು ಮರುಕಳಿಸಿತ್ತು. ಅವನು ತನ್ನ ಗುಲಾಮರ ಧ್ವನಿಯನ್ನು ಗುರುತಿಸಿ ಅವರನ್ನು ತನ್ನ ಬಳಿ ಕರೆದ ಮತ್ತು ತನ್ನ

ವೃತ್ತಾಂತವನ್ನು ಅರುಹಿದ. ನಂಬಿಕಸ್ತ ಗುಲಾಮರು ತಮ್ಮ ಬಾದಶಹನನ್ನು ಕಂಡು ಸಂತೋಷ ಪಟ್ಟರು ಹಾಗೂ ಅವನನ್ನು ಅಲ್ಲಿಂದ ಎತ್ತಿಕೊಂಡು ಪರಾರಿಯಾಗಿದ್ದ ಸರದಾರರ ಬಳಿ ಕರೆ ತಂದರು. ಗುಲಾಮರು ಅವನನ್ನು ತಮ್ಮ ಹೆಗಲ ಮೇಲೆ ಹೊತ್ತಿಕೊಂಡಿದ್ದರು ಹಾಗೂ ಅವರು ಹೆಗಲು ಬದಲಾಯಿಸಿಕೊಳ್ಳುತ್ತಾ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಇಡೀ ರಾತ್ರೆ ತಮ್ಮ ನಡಿಗೆಯನ್ನು ಮುಂದುವರೆಸಿದ ಗುಲಾಮರು ತಮ್ಮ ಬಾದಶಹನನ್ನು ಎತ್ತಿಕೊಂಡು ಬೆಳಗಿನ ಜಾವ ಪರಾರಿಯಾದ ಸರದಾರರ ತಾಣವನ್ನು ಮುಟ್ಟಿದರು. ಹೀಗಾಗಿ ಶಹಾಬುದ್ದೀನನು ತನ್ನನ್ನು ಯುದ್ಧರಂಗದಲ್ಲಿ ತೊರೆದು ಪರಾರಿಯಾಗಿದ್ದ ಸರದಾರರೊಡನೆ ಮೇಲ್ಕಂಡಂತೆ ವರ್ತಿಸಿದ.

ಒಟ್ಟಾರೆ ಹೇಳುವುದಾದಲ್ಲಿ ಈ ವರದಿಯು ಸತ್ಯವೆಂದು ನಂಬುವುದಾದರೂ ಶಹಾಬುದ್ದೀನನು ಯುದ್ಧ ರಂಗದಿಂದ ಸೋಲನ್ನುಂಡು ಪಲಾನಗೈದ. ಮತ್ತು ರಾಯೆ ಪುಥೂರಾ ತತ್ ಕ್ಷಣದಲ್ಲಿ ತಪಿಂದಾವನ್ನು ಸುತ್ತುವರೆದ. ಈ ಮುತ್ತಿಗೆಯು ಒಟ್ಟು ಹದಿಮೂರು ತಿಂಗಳ ವರೆಗೆ ನಡೆಯಿತು. ಈ ಆಪತ್ತು ಸುದೀರ್ಘವಾದ ನಂತರ ಜಿಯಾವುದ್ದೀನ ಟೋಂಕಿಯು ರಾಯೆ ಪುಥೂರಾನೊಡನೆ ಸಂಧಿಯನ್ನು ಮಾಡಿಕೊಂಡ ಮತ್ತು ಈ ರೀತಿಯಲ್ಲಿ ಕೋಟೆಯ ಮೇಲೆ ಹಿಂದುಗಳು ಹಿಡಿತವನ್ನು ಹೊಂದಿದರು.

ತರಾಯನ್‌ನ ದ್ವಿತೀಯ ಯುದ್ಧ

ಶಹಾಬುದ್ದೀನ್ ಘೋರಿಸ್ತಾನವನ್ನು ತಲುಪಿದ ನಂತರ ಘಜ್ನಿಗೆ ಪ್ರಯಾಣ ಬೆಳೆಸಿದ. ಮತ್ತು ತನ್ನ ಸೋಲಿನ ಪ್ರತೀಕಾರದ ಸಲುವಾಗಿ ಒಂದು ಬಲಿಷ್ಠವಾದ ಸೈನ್ಯವನ್ನು ತಯಾರು ಮಾಡಲು ಆರಂಭಿಸಿದ. ಈ ಉದ್ದೇಶದ ಸಲುವಾಗಿ ಆವನು ನಿದ್ರೆ ವಿಶ್ರಾಂತಿ ಊಟ ಉಪಚಾರ ಎಲ್ಲವನ್ನೂ ಮರೆತ. ಹಿಂದಿನ ತನ್ನ ಪರಾಭವದ ಮರುವರ್ಷವೇ ಅವನು ೧,೦೭,೦೦೦ (ಒಂದು ಲಕ್ಷದ ಏಳು ಸಾವಿರ) ಮಂದಿ ತುರ್ಕಿ, ಖಿಲ್ಜಿ ಮತ್ತು ಆಫ್ಘನ್ ಸರದಾರರು ಮತ್ತು ಸೈನಿಕರಿಂದ ಕೂಡಿದ ಸುಸಜ್ಜಿತ ಸೇನೆಯೊಂದಿಗೆ ಹಿಂದೂಸ್ಥಾನದತ್ತ ರವಾನೆಯಾದ. ತನ್ನ ಸರದಾರರ ಬಗ್ಗೆ ಅವನಿಗೆ ನಂಬಿಕೆ ಇರಲಿಲ್ಲವಾದರಿಂದ ಆ ಯುದ್ಧದ ಬಗೆಗಿನ ಯಾವ ಸಲಹೆಗಳನ್ನು ಕೂಡ ಅವನು ಅವರಿಂದ ಪಡೆಯಲಿಲ್ಲ. ಶಹಾಬುದ್ದೀನನ ಆನೇಕ ಸರದಾರರು ತಮ್ಮ ಸೈನ್ಯದ ಸಮವಸ್ತ್ರ ಮತ್ತು ವೇಷಭೂಷಣದ ದೆಸೆಯಿಂದ ಬಾದಶಹನಂತೆ ವಿಜೃಂಭಿಸುತ್ತಿದ್ದರು.

ಕಳಂಕಿತ ಸರದಾರರಿಗೆ ಕ್ಷಮೆ

ಆತನ ಅತಿ ಬಲಿಷ್ಠ ಮತ್ತು ಬೃಹತ್ ಸೈನ್ಯವು ಪೆಶಾವರ್ ಬಳಿ ಬೀಡುಬಿಟ್ಟಾಗ

ಬಾದಶಹನ ಸಮೀಪ ವರ್ತಿಯಾಗಿದ್ದ ವೃದ್ಧ ಸರದಾರನೊಬ್ಬ ಹೀಗೆಂದು ಕೋರಿದ "ಇದುವರೆಗೂ ನಿಮ್ಮ ಬೆಂಬಲಿಗರಿಗೆ ಜಹಾಂಪನಾರವರ ಇರಾದೆಯ ಬಗ್ಗೆ ಏನೂ ಅರಿವಿಲ್ಲ. ಮತ್ತು ಯಾವ ಶತ್ರುವಿನ ವಿನಾಶಕ್ಕಾಗಿ ಈ ಬಲಾಢ್ಯ ಸೇನೆಯನ್ನು ಜೊತೆಯಲ್ಲಿ ಕರೆತಂದು ಪ್ರಯಾಣ ಮಾಡುತ್ತಿದ್ದೀರಿ?" ಶಹಾಬುದ್ದೀನನು ಹೀಗೆಂದು ಉತ್ತರಿಸಿದ. "ನಾನು ಹಿಂದುಗಳಿಂದ ಯಾವತ್ತು ಪರಾಭವವನ್ನು ಹೊಂದಿದೆನೊ ಅಂದಿನಿಂದ ನಾನು ನನ್ನ ಪತ್ನಿಯ ಮುಖವನ್ನು ನೋಡಿಲ್ಲ ಮತ್ತು ಉಟ್ಟ ಬಟ್ಟೆಯನ್ನು ಇದುವರೆವಿಗೂ ಬದಲಾಯಿಸಿಲ್ಲ ಎಂಬ ಅಂಶ ನಿನಗೆ ಗೊತ್ತಿಲ್ಲವೆ, ಆ ಇಡೀ ವರ್ಷವನ್ನು ನಾನು ಅತೀವ ದಃಖ ಮತ್ತು ನೋವಿನಿಂದ ಕಳೆದಿದ್ದೇನೆ. ಮತ್ತು ಯಾವ ಖಿಲ್ಜಿ ಮತ್ತು ಘೋರಿ ಸರದಾರರು ನನ್ನ ಸೇವೆಯ ಕರ್ತವ್ಯವನ್ನು ಕಡೆಗಣಿಸಿ ನನ್ನನ್ನು ಏಕಾಂಗಿಯಾಗಿ ಯುದ್ಧ ರಂಗದಲ್ಲಿ ತೊರೆದು ಹೋದರೋ ಅವರಿಂದ ನಾನು ಸಲಾಮನ್ನು ಕೂಡ ಸ್ವೀಕರಿಸಿಲ್ಲ. ಆ ನಮಕ್ ಹರಾಮ್ ಸರದಾರ ಮೇಲೆ ನನಗೆ ಯಾವ ಭರವಸೆಯೂ ಇಲ್ಲ. ಆದರೆ, ಅಲ್ಲಾಹನ ಮೇಲಿನ ಭರವಸೆಯ ಮೇರೆಗೆ ನಾನು ಈ ಸೇನೆಯೊಂದಿಗೆ ಕೂಡಿಕೊಂಡು ಹಿಂದುಸ್ತಾನದ ಮೇಲೆ ಯುದ್ದ ಸಾರಲು ಹೋಗುತ್ತಿದ್ದೇನೆ." ಬಾದಶಹನ ಮಾತುಗಳಿಗೆ ಪ್ರತಿಯಾಗಿ ವೃದ್ಧ ಸರದಾರನು ಅತ್ಯಂತ ಗೌರವದಿಂದ ನುಡಿದನು. "ಅಲ್ಲಾಹನು ನಿಮಗೆ ವಿಜಯ ಮಾಲೆಯನ್ನು ಮತ್ತು ಶತ್ರುಗಳಿಗೆ ಸೋಲನ್ನು ಕರುಣಿಸಲಿ ತಮ್ಮ ಹಿಂದಿನ ತಪ್ಪನ್ನು ಸರಿಪಡಿಸಿಕೊಂಡು ಆ ಸರದಾರರು ತಮ್ಮ ಸೇವೆಗೆ ಕಂಕಣಬದ್ಧರಾಗಿ ನಿಲ್ಲುವರೆಂಬ ನಂಬಿಕೆ ನನಗಿದೆ. ಆ ಸರದಾರರು ತಮ್ಮ ರುಮಾಲುಗಳ ಮೇಲೆ ತಗುಲಿರುವ ಹೇಡಿತನದ ಕಲೆಗಳನ್ನು ತಮ್ಮ ರಕ್ತದಿಂದ ತೊಳೆದು ಪ್ರಪಂಚದಲ್ಲಿ ತಮ್ಮ ಹೆಸರನ್ನು ಶಾಶ್ವತಗೊಳಿಸುವರು. ಈ ಪುರಾತನ ನಂಬಿಗಸ್ಥನ ಅಹವಾಲನ್ನು ತಾವು ಮನ್ನಿಸಿ ಕೆಲವು ಸರದಾರರು ಹಿಂದೆ ಮಾಡಿದ ತಪ್ಪನ್ನು ಮನ್ನಿಸಬೇಕು ಮತ್ತು ಅವರನ್ನು ನಂಬಿಕೆಗೆ ಅರ್ಹರೆಂದು ಪರಿಗಣಿಸಬೇಕು. ನಿಮ್ಮ ಈ ವರ್ತನೆಯ ದೆಸೆಯಿಂದ ಆ ಸರದಾರರು ಸರಿ ದಾರಿಗೆ ಬರುತ್ತಾರೆ ಮತ್ತು ತಮ್ಮ ಪ್ರಾಣವನ್ನು ಪಣಕ್ಕೆ ಒಡ್ಡಿ ಹಿಂದಿನ ಹೇಡಿತನವನ್ನು ಮರೆತು ವಿವೇಕ ಮತ್ತು ಪರಾಕ್ರಮದ ಹಾದಿಯಲ್ಲಿ ನಡೆದು ನಿಮ್ಮ ಋಣವನ್ನು ತೀರಿಸುತ್ತಾರೆ" ಶಹಾಬುದ್ದೀನ್‌ನಿಗೆ ವೃದ್ಧ ಸರದಾರನ ಸಲಹೆಯು ಉಚಿತವೆನಿಸಿತು. ಆತನು ಕೂಡಲೇ ದರಬಾರನ್ನು ಕರೆದ ಹಾಗೂ ಕಳಂಕಿತ ಸರದಾರರಿಗೆ ಅಮೂಲ್ಯವಾದ ಬಿರುದು ಬಾವಲಿಗಳನ್ನು ಹಾಗೂ ವಿಶೇಷ ಖಡ್ಗಗಳ ಉಡುಗೊರೆಯನ್ನು ನೀಡಿದ. ಹಾಗೂ ಅವರ ಹಿಂದಿನ ಲೋಪಗಳನ್ನು ಕ್ಷಮಿಸಿ ಮುಂದೆ ವಿವೇಚನೆಯಿಂದ ನಡೆದುಕೊಳ್ಳುವಂತೆ ಅನುಗ್ರಹಿಸಿದ.

ಹೊಡೆದಾಟ :

ಮರುದಿನ ಶಹಾಬುದ್ದೀನನು ಆ ಪ್ರದೇಶದಿಂದ ಬೀಳ್ಕೊಂಡು ಮುನ್ನಡೆದ.

ಬಾದಶಹನ ಸೇನೆಯು ಹಂತ ಹಂತವಾಗಿ ಮುನ್ನಡೆಯುತ್ತ ಮುಲ್ತಾನ್ ತಲುಪಿತು. ಅಲ್ಲಿ ತಲುಪಿದ ನಂತರ ಶಹಾಬುದ್ದೀನನು ತನ್ನ ನಂಬಿಗಸ್ಥರಾಗಿದ್ದ ಮತ್ತು ವಿಧೇಯರಾಗಿದ್ದ ಸರದಾರರಿಗೆ ವಿಶೇಷ ಗೌರವಗಳನ್ನು ನೀಡಿದ. ಹಾಗೂ ಅಲ್ಲಿನ ಮುಸ್ಲಿಮ್ ಸೇನಾಧಿಕಾರಿಗಳಿಗೆ ನೆರವು ನೀಡಿದ ಸರದಾರರ ಸ್ಥಾನ ಮಾನಗಳನ್ನು ಉನ್ನತ ಸ್ಥಾನಕ್ಕೆ ಏರಿಸಿದ. ಬಾದಶಹನ ಸೇನೆಯು ಲಾಹೋರನ್ನು ತಲುಪಿದಾಗ ಶಹಾಬುದ್ದೀನನು ತನ್ನ ಅತ್ಯಂತ ನಂಬಿಗಸ್ಥ ಮತ್ತು ಯೋಗ್ಯ ಸರದಾರನಾದ ಖವ್ವಾಮುಲ್ ಮುಲ್ಕ್‌ರುಕ್ನುದ್ದೀನ್ ಹಮ್‌ಜ ಎಂಬುವಾತನನ್ನು ಅಜ್ಮೀರ್‌ಗೆ ರವಾನೆ ಮಾಡಿದ ಮತ್ತು ಆತನ ರಾಯಭಾರತ್ವದಲ್ಲಿ ಅಜ್ಮೀರ್‌ನ ರಾಜ ಮತ್ತು ಪ್ರಜೆಗಳಿಗೆ ಇಸ್ಲಾಮ್ ಸ್ವೀಕರಿಸುವಂತೆ ಆಮಂತ್ರಣವನ್ನು ನೀಡಿದ. ಈ ಸಂದೇಶ ತಲುಪಿದ ನಂತರ ರಾಯೆ ಪಿಥೂರಾ ಬಾದಶಾಹನನ್ನು ತೀವ್ರವಾಗಿ ಜರೆದ ಮತ್ತು ಖವ್ವಾಮುಲ್ ಮುಲ್ಕ್‌ರುಕ್ನುದ್ದೀನ್ ಹಮ್‌ಜನನ್ನು ಆಸ್ಥಾನದಿಂದ ಹೊರಗಟ್ಟಿದ.

ರಾಯೆ ಪಿಥೂರಾನು ಹಿಂದೂಸ್ಥಾನದ ಎಲ್ಲಾ ರಾಜ ಮಹಾರಾಜರಿಗೆ ಓಲೆಯನ್ನು ಕಳಿಸಿ ಸಹಾಯವನ್ನು ಕೋರಿದ. ಎಲ್ಲಾ ರಾಜ ಮಹಾರಾಜರು ಕೂಡ ಅವನನ್ನು ಬೆಂಬಲಿಸಬೇಕೆಂದು ನಿರ್ಧರಿಸಿದರು ಹಾಗೂ ಆತನ ಓಲೆಯು ತಲುಪಿಸಿದ ಕೂಡಲೇ ತಮ್ಮ ತಮ್ಮ ಸೈನ್ಯದೊಂದಿಗೆ ಹೊರಟು ನಿಂತರು. ಹಾಗೂ ಸ್ವಲ್ಪ ಕಾಲದಲ್ಲಿಯೇ ಎಲ್ಲಾ ಹಿಂದೂ ರಾಜರು ರಾಯೆ ಪಿಥೂರಾನ ಸುತ್ತ ಜಮಾವಣೆಯಾದರು. ಸದರಿ ರಾಜನು ಮೂರು ಲಕ್ಷ ರಜಪೂತರು ಮತ್ತು ಆಫ್ಘನ್ನರಿಂದ ಕೂಡಿದ ಅಪಾರ ಸೇನೆಯ ಬೆಂಬಲದೊಂದಿಗೆ ಯುದ್ಧಕ್ಕೆ ಸನ್ನದ್ದನಾದ. ಹಿಜರಿ ಶಕೆ ೫೮೮ ನೇ ಇಸವಿಯಲ್ಲಿ ಸರಸ್ವತಿ ನದಿಯ ತೀರದಲ್ಲಿ ತರಾಯನ್ ಎಂಬ ಸ್ಥಳದಲ್ಲಿ ಬೀಡುಬಿಟ್ಟರು. ಶಹಾಬುದ್ದೀನ್ ಎದುರಾದ ಕೂಡಲೆ ೧೫೦ ಮಂದಿ ರಾಜ ಮಹಾರಾಜರು ಪರಾಕ್ರಮದ ತಿಲಕವನ್ನು ತಮ್ಮ ಹಣೆಗೆ ಇಟ್ಟರು ಮತ್ತು ತಮ್ಮ ಪರಾಕ್ರಮದಿಂದ ಮುಸಲ್ಮಾನರನ್ನು ನಾಶ ಮಾಡುವುದಾಗಿ ಆಣೆ ಮಾಡಿದರು.ಅಷ್ಟೇ ಅಲ್ಲದೆ ಮುಸ್ಲಿಮರನ್ನು ಸಂಪೂರ್ಣವಾಗಿ ನಾಶ ಮಾಡುವವರೆಗೂ ತಮ್ಮ ಖಡ್ಗಗಳನ್ನು ಒರೆಗೆ ಇಡುವುದಿಲ್ಲವೆಂದು ಆ ಹಿಂದೂ ರಾಜರು ಪರಸ್ಪರ ಒಪ್ಪಂದವನ್ನು ಮಾಡಿಕೊಂಡರು. ಮತ್ತು ಯುದ್ಧ ರಂಗದಲ್ಲಿ ತಮ್ಮ ಯುದ್ದ ನೈಪುಣ್ಯವನ್ನು ಮೆರೆದು ತಮ್ಮ ಹೆಸರನ್ನು ಚಿರಸ್ಥಾಯಿಯನ್ನಾಗಿಸಬೇಕೆಂದು ಅವರು ಸಂಕಲ್ಪ ತೊಟ್ಟರು. ಈ ಹಿಂದೆ ಶಹಾಬುದ್ದೀನ್‌ನನ್ನು ಅವರು ಸೋಲಿಸಿದ್ದರಿಂದ ಅವರ ಆತ್ಮವಿಶ್ವಾಸ ದೃಢವಾಗಿತ್ತು.

ಯುದ್ಧ ಆರಂಭವಾಗುವುದಕ್ಕಿಂತ ಮುಂಚಿತವಾಗಿ ಶಹಾಬುದ್ದೀನನಿಗೆ ಒಂದು ಸಂದೇಶವನ್ನು ಕಳುಹಿಸಬೇಕೆಂದು ಆ ರಾಜ ಮಹಾರಾಜರು ನಿರ್ಧರಿಸಿದ್ದರು. ಅವರು ಕಳುಹಿಸಿದ ಪತ್ರದ ಸಾರಾಂಶ ಹೀಗಿತ್ತು, "ಹಿಂದೂ ರಾಜ ಮಹಾರಾಜರಾದ ನಮ್ಮ ಸೈನ್ಯದ ಪರಾಕ್ರಮ ಈಗಾಗಲೇ ನಿನಗೆ ತಿಳಿದು ಬಂದಿದೆ. ನಮ್ಮ ಬಳಿ ಇರುವ

ಸೈನ್ಯವು ನಿನ್ನನ್ನು ಮತ್ತು ನಿನ್ನ ಸೈನ್ಯವನ್ನು ನಾಶ ಮಾಡಲು ಸಶಕ್ತವಾಗಿದೆ. ಇನ್ನಷ್ಟು ಸೈನ್ಯ ನಮ್ಮನ್ನು ಬಂದು ಕೂಡಲಿದೆ. ಅವರ ಹೆಜ್ಜೆಯ ಸದ್ದಿನಿಂದ ಭೂಮಿಯ ಎದೆ ಕಂಪಿಸುತ್ತಿದೆ ನಿನಗೆ ನಿನ್ನ ಪ್ರಾಣ ಪ್ರಿಯವಾಗಿದ್ದರೆ ನಿನ್ನ ಸೈನಿಕರ ಕಷ್ಟ ಕಾರ್ಪಣ್ಯದ ಮೇಲೆ ಕರುಣೆ ತೋರಿಸು. ನಾವು ನಮ್ಮ ದೇವಾನುದೇವತೆಗಳ ಎದುರಿನಲ್ಲಿ ಪ್ರಮಾಣ ಮಾಡಿದ್ದೇವೆ. ನೀನು ಮರಳಿ ಹೋಗುವ ಇರಾದೆಯನ್ನು ಹೊಂದಿದ್ದಲ್ಲಿ ನಾವು ಯಾವುದೇ ತಡೆ ಒಡ್ಡುವುದಿಲ್ಲ ಮತ್ತು ನಿನ್ನ ದಾರಿಯನ್ನು ತಡೆಯುವುದಿಲ್ಲ. ನಿನ್ನ ಮೇಲೆ ಕರುಣೆ ತೋರಿ ನಿನ್ನನ್ನು ಮರಳಿ ಹೋಗುವಂತೆ ಸಲಹೆಯನ್ನು ನೀಡುತ್ತಿದ್ದೇವೆ. ಇಲ್ಲದಿದ್ದಲ್ಲಿ ನಾಳೆ ಬೆಳಗ್ಗೆ ೩೦೦೦ (ಮೂರು ಸಾವಿರ) ಆನೆಗಳು ಮತ್ತು ಲಕ್ಷಾಂತರ ಸೈನಿಕರೊಡನೆ ಯುದ್ಧ ಭೂಮಿಯನ್ನು ರುದ್ರಭೂಮಿಯನ್ನಾಗಿ ಮಾಡುತ್ತೇವೆ. ಆ ಮೂಲಕ ನೀನು ಸೋತು ಸುಣ್ಣವಾಗಿ ಯುದ್ಧ ಭೂಮಿಯಿಂದ ಪಲಾಯನ ಮಾಡಬೇಕಾಗುತ್ತದೆ."

ಶಹಾಬುದ್ದೀನನು ಮೇಲ್ಕಂಡ ಪತ್ರಕ್ಕೆ ಕಳುಹಿಸಿದ ಮರುತ್ತರ ಹೀಗಿತ್ತು "ನಿಮ್ಮ ಪತ್ರವು ತುಂಬ ಪ್ರೀತಿ ಕರುಣೆ ಮತ್ತು ಸದಾಶಯದಿಂದ ಕೂಡಿದೆ ಎಂದು ನನಗೆ ತಿಳಿದಿದೆ. ನಾನು ನಿಮ್ಮ ಸಲಹೆಯನ್ನು ಕಾರ್ಯಗತಗೊಳಿಸುತ್ತಿದ್ದೆ. ಆದರೆ ನಾನು ತೀರ ಅಸಾಯಕನಾಗಿದ್ದೇನೆ ನಾನು ನನ್ನ ಸಹೋದರನ ಅಧೀನದಲ್ಲಿ ಇದ್ದೇನೆ ಮತ್ತು ಅವನ ಆಜ್ಞೆಯನ್ನು ಪಾಲಿಸುತ್ತಿದ್ದೇನೆ. ನನ್ನ ಸಹೋದರನಿಗೆ ನಿಮ್ಮ ಅಗಣಿತ ಸೇನೆಯ ಶಕ್ತಿ ಸಾಮರ್ಥ್ಯದ ಬಗ್ಗೆ ಸಂಪೂರ್ಣ ವಿವರಗಳನ್ನು ನನ್ನ ಖಾಸಾ ಗುಪ್ತಚರರ ಮೂಲಕ ಕಳುಹಿಸಿ ನನ್ನ ಅಸಹಾಯಕತೆ ಮತ್ತು ಸೇನೆಯ ದಯನೀಯ ಸ್ಥಿತಿಯನ್ನು ಆತನಿಗೆ ಮನವರಿಕೆ ಮಾಡಿ ಸಂಧಿ ಮಾಡಲು ಸೂಕ್ತ ಕಾಲಾವಧಿ ದೊರೆತಲ್ಲಿ, ಅನುಕೂಲವಾಗುತ್ತದೆ. ಸಂಧಿಯ ಶರತ್ತು ಏನೆಂದರೆ ಪಂಜಾಬ್ ಮತ್ತು ಮುಲ್ತಾನದ ಮೇಲೆ ಘೋರಿವಂಶಸ್ಥರ ಅಧಿಕಾರವಿರತಕ್ಕದ್ದು ಮತ್ತು ಉಳಿದ ಹಿಂದೂಸ್ಥಾನದ ಎಲ್ಲಾ ಪ್ರದೇಶವು ನಿಮ್ಮ ಆಳ್ವಿಕೆಗೆ ಒಳಪಡತಕ್ಕದ್ದು."

ಶಹಾಬುದ್ದೀನನ ಪತ್ರವನ್ನು ನೋಡಿದ ಹಿಂದೂ ರಾಜ ಮಹಾರಾಜರು ಆತನ ಸೇನೆಯು ನಿಜವಾಗಿಯು ಅತ್ಯಂತ ದಯನೀಯ ಪರಿಸ್ಥಿತಿಯಲ್ಲಿದೆ ಎಂದು ಭಾವಿಸಿದರು. ಹೀಗಾಗಿ ತಮ್ಮ ಶೌರ್ಯ ಮತ್ತು ಪರಾಕ್ರಮದ ಅಮಲಿನಲ್ಲಿ ಮುಳುಗಿ ಅವರುಗಳು ಮುಸ್ಲಿಮರ ಇರುವಿಕೆಯನ್ನು ಮರೆತರು. ಹಿಂದೂ ರಾಜ ಮಹಾರಾಜರು ಸುಖಲೋಲುಪತೆಯಲ್ಲಿ ಮಗ್ನರಾಗಿ ಯುದ್ಧವನ್ನು ಮರೆತಿದ್ದಾರೆಂದು ಶಹಾಬುದ್ದೀನನಿಗೆ ಖಚಿತವಾದಾಗ ಅವನು ರಾತ್ರೋ ರಾತ್ರಿ ತನ್ನ ಸೈನ್ಯದ ವ್ಯೂಹವನ್ನು ರಚಿಸಿದ ಮತ್ತು ಮುಂಜಾನೆ ರಜಪೂತ್ ಸೈನಿಕರು ಶೌಚಕ್ರಿಯೆ ಮತ್ತು ಸ್ನಾನಾದಿಗಳನ್ನು ಮುಗಿಸುವ ಮುಂಚಿತವಾಗಿಯೇ ಯುದ್ಧವನ್ನು ಪ್ರಾರಂಭಿಸಿದ. ಹಿಂದೂ ರಾಜ ಮಹಾರಾಜರು

ತತ್ ಕ್ಷಣದಲ್ಲಿ ದಿಕ್ಕೆಟ್ಟವರಂತೆ ತೋರಿದರೂ ಕೂಡಲೇ ಸುಧಾರಿಸಿಕೊಂಡು ಯುದ್ಧ ಸನ್ನದ್ಧರಾಗಿ, ಯುದ್ಧ ರಂಗದಲ್ಲಿ ಪ್ರತಿ ಏಟನ್ನು ನೀಡಲಾರಂಭಿಸಿದರು.

ಹಿಂದೂ ರಾಜ ಮಹಾರಾಜರ ಮತ್ತು ಸೇನೆಯ ಶೌರ್ಯ ಪರಾಕ್ರಮದ ಬಗ್ಗೆ ಶಹಾಬುದ್ದೀನಗೆ ಅರಿವಿತ್ತು. ಅವನು ತನ್ನ ಸೇನೆಯನ್ನು ನಾಲ್ಕು ತುಕಡಿಗಳಾಗಿ ವಿಂಗಡಿಸಿದ್ದ ಮತ್ತು ಪ್ರತಿ ತುಕಡಿಗೂ ಒಬ್ಬರಾದ ನಂತರ ಒಬ್ಬರು ಹಿಂದೂಗಳೊಡನೆ ಕಾದಾಡಬೇಕೆಂದು ತಾಕೀತು ಮಾಡಿದ್ದ. ಹಿಂದೂಸ್ಥಾನಿ ಸೇನೆಯ ಆನೆಯ ಸಾಲುಗಳು ಮುಸಲ್ಮಾನರ ಮೇಲೆ ಆಕ್ರಮಣ ಮಾಡಿದಾಗ, ತಾವು ಯುದ್ಧ ರಂಗದಿಂದ ಹಿಮ್ಮೆಟ್ಟಿ ಪರಾರಿಯಾದಂತೆ ನಟಿಸಬೇಕೆಂದು ಶಹಾಬುದ್ದೀನನು ತನ್ನ ಸೇನೆಯ ಪ್ರತಿ ತುಕಡಿಯ ಸರದಾರರು ಮತ್ತು ಸೇನೆಗೆ ಸೂಚನೆಯನ್ನು ನೀಡಿದ್ದ. ಹೀಗೆ ಮಾಡುತ್ತಾ ಹಿಂದೂಸ್ಥಾನಿ ಸೇನೆಯನ್ನು ತಮ್ಮ ಸರಹದ್ದಿನಿಂದ ಆಚೆ ಸೆಳೆಯಬೇಕೆಂತಲೂ ಮತ್ತು ಸುರಕ್ಷಿತ ತಾಣ ತಲುಪಿದ ಕೂಡಲೇ ಒಮ್ಮೆಲೆ ಮರಳಿ ಆ ಸೈನ್ಯದ ಮೇಲೆ ಆಕ್ರಮಣ ಮಾಡಿ ಶತ್ರುವಿನ ನಾಶವನ್ನು ಮಾಡಬೇಕೆಂತಲೂ ಅವನು ಯುದ್ಧ ತಂತ್ರವನ್ನು ರೂಪಿಸಿದ್ದ. ಇಸ್ಲಾಮೀ ಸೇನೆಯು ತಮ್ಮ ಬಾದಶಹನ ಸೂಚನೆಯ ಮೇರೆಗೆ ಬೆಳಗಿನಿಂದ ಸಂಜೆಯವರೆಗೂ ಶತ್ರುಗಳೊಡನೆ ಯುದ್ಧ ಮಾಡಿದರು. ಈ ಎಲ್ಲಾ ತಂತ್ರಗಾರಿಕೆಯನ್ನು ಅಳವಡಿಸಿದರೂ ಹಿಂದೂ ಸೇನೆಯು ಯುದ್ಧ ರಂಗದಲ್ಲಿ ಅಚಲವಾಗಿ ನಿಂತಿತು. ಇಡೀ ದಿನ ವ್ಯರ್ಥವಾಗಿ ಕಳೆದುಹೋಗುತ್ತಿದೆ ಎಂದು ಶಹಾಬುದ್ದೀನನಿಗೆ ಅನಿಸಿದಾಗ ಅವನು ೧೨೦೦೦ (ಹನ್ನೆರಡು ಸಾವಿರ) ಸೈನಿಕರೂಡನೆ ಕೂಡಿ ಹಿಂದೂಗಳ ಮೇಲೆ ಆಕ್ರಮಣ ಮಾಡಿದ. ಶಹಾಬುದ್ದೀನನು ಖರ್ಮಿಲ್ ಸರ್ದಾರರೊಡನೆ ಕೂಡಿ ಮಾಡಿದ ತೀವ್ರತರದ ಆಕ್ರಮಣದಿಂದ ಹಿಂದೂ ಸೇನೆ ಅಚೇತನವಾಯಿತು ಮತ್ತು ಧೈರ್ಯಗುಂದಿತು. ಅವರ ಯೋಧರ ಸಾಲುಗಳಲ್ಲಿ ಹಾಹಾಕಾರ ಆರಂಭವಾಯಿತು ಅವರ ಸೈನಿಕರು ಯುದ್ಧ ರಂಗಕ್ಕೆ ಬೆನ್ನು ತೋರಿಸಿದರು. ಹಿಂದೂಸ್ಥಾನಿ ಅಧಿಕಾರಿಗಳಿಗೆ ಆ ಗೊಂದಲದ ಪರಿಸ್ಥಿತಿಯನ್ನು ನಿಯಂತ್ರಿಸಲು ದಾರಿ ಕಾಣದೆ ಬೇರೆ ಯುದ್ಧ ತಂತ್ರವನ್ನು ಅಳವಡಿಸಿದರೂ ಯಾವ ಉಪಾಯವು ಕೂಡ ಫಲಿಸಲಿಲ್ಲ ಮತ್ತು ನೋಡು ನೋಡುತ್ತಿದ್ದಂತೆಯೆ ಖಂಡೇರಾವ ಮೊದಲಾದ ಆನೇಕ ಹಿಂದೂಸ್ಥಾನಿ ರಾಜರು ಸಾವನ್ನಪ್ಪಿದರು. ರಾಯೆ ಪಥೂರಾ ಅಳಿದುಳಿದ ಸೈನ್ಯದೊಂದಿಗೆ ಪಲಾಯನ ಗೈದ. ಆದರೆ, ಆತ ಸ್ವಲ್ಪ ದೂರವನ್ನು ಕ್ರಮಿಸುವಷ್ಟರಲ್ಲಿಯೇ ಸರಸ್ವತಿ ನದಿ ತೀರದಲಿ ಬೀಡು ಬಿಟ್ಟಿದ್ದ ಮುಸ್ಲಿಮರ ಇನ್ನೊಂದು ತುಕಡಿಯು ಅವನನ್ನು ಬಂಧಿಸಿತು. ಶಹಾಬುದ್ದೀನನು ರಾಯೆ ಪುಥೂರಾನನ್ನು ಮರಣ ದಂಡನೆಗೆ ಗುರಿ ಪಡಿಸಿದ. ಮತ್ತು ಸರಸ್ವತಿ, ಸಮಾನಾ, ಹಾಂಸಿ ಮತ್ತು ಕಹರಾಮ್ ಮೊದಲಾದ ಕೋಟೆಗಳನ್ನು ವಶಪಡಿಸಿಕೊಂಡ. (ಸರಸ್ವತಿ ಅಕ್ಬರ್ ಬಾದಶಹನ ಕಾಲದವರೆಗೂ ಆ ಪ್ರದೇಶದ ಪ್ರಖ್ಯಾತ ಪಟ್ಟಣವಾಗಿತ್ತು. ಸಮಾನಾ ಮತ್ತು ಕಹರಾಮ್ ದೆಹಲಿಯಿಂದ ಸುಮಾರು ೧೨೫ ಕಿ.ಮೀ ದೂರದಲ್ಲಿವೆ ಮತ್ತು ಹಾಲಿ ಪಟಿಯಾಲ ಪ್ರಾಂತ್ಯದಲ್ಲಿವೆ.)

ನಿರ್ಗಮನ:

ಹಿಂದೂ ಸರದಾರರು ಮತ್ತು ರಾಜ ಮಹಾರಾಜರನ್ನು ಸೋಲಿಸಿ ಅವರ ಕೊಲೆ ಮಾಡಿದ ನಂತರ ಶಹಾಬುದ್ದೀನನು ಅಜ್ಮೀರ್ ಪ್ರವೇಶಿಸಿದ. ಅಜ್ಮೀರ್ ಮತ್ತು ಸುತ್ತ ಮುತ್ತಲಿನ ಪ್ರದೇಶವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಆನೇಕ ಮಂದಿಯನ್ನು ಸೆರೆಹಿಡಿದ. ನಂತರ ರಾಯ ಪುಥೂರಾನ ಮಗನಾದ ರಾಜ ಕೋಲಾನನ್ನು ತನ್ನ ಮಾಂಡಲೀಕನನ್ನಾಗಿ ನೇಮಿಸಿದ. ಅಲ್ಲಿಂದ ಅವನು ದೆಹಲಿಯತ್ತ ಮುನ್ನಡೆದ. ದೆಹಲಿಯ ರಾಜನು ಶಹಾಬುದ್ದೀನನತ್ತ ಸ್ನೇಹ ಹಸ್ತವನ್ನು ಚಾಚಿದ ಹಾಗೂ ಅನರ್ಘ್ಯ ಕಪ್ಪ ಕಾಣಿಕೆಗಳ ನಜರನ್ನು ಒಪ್ಪಿಸಿದ. ದೆಹಲಿ ಬಿಟ್ಟ ನಂತರ ಶಹಾಬುದ್ದೀನನು ತನ್ನ ಗುಲಾಮನಾಗಿದ್ದ ಮುಲ್ಕ್ ಖುತ್ಬುದ್ದೀನ್ ಐಬಕ್‌ನನ್ನು ಕಹರಾಮ್‌ನ ಸುಲ್ತಾನ್‌ನನ್ನಾಗಿ ಮಾಡಿದ ಮತ್ತು ಸ್ವತಃ ಹಿಂದೂಸ್ಥಾನದ ಉತ್ತರ ಭಾಗದ ಪ್ರದೇಶದಲ್ಲಿ ವಿನಾಶಕಾರೀ ಕೃತ್ಯಗಳಲ್ಲಿ ತೊಡಗಿದ. ನಂತರ ಅವನು ಘಜ್ನಿಗೆ ಮರಳಿದ.

ಖುತ್ಬುದ್ದೀನ್ ಐಬಕ್‌ನ ಚಟುವಟಿಕೆಗಳು

ಶಹಾಬುದ್ದೀನನು ಘಜ್ನಿಗೆ ಮರಳಿದ ನಂತರ ಖುತ್ಬುದ್ದೀನ್ ಐಬಕ್‌ನು ಅದೇ ವರ್ಷ ದೆಹಲಿ ಮತ್ತು ಮೀರತ್‌ನ ಕೋಟೆಗಳ ಮೇಲೆ ಲಗ್ಗೆ ಇಟ್ಟು ರಾಯೆ ಪುಥೂರಾ ಮತ್ತು ಖಂಡೇರಾವ್‌ನ ಬಂಧುಗಳ ಆಳ್ವಿಕೆಯಿಂದ ಬಿಡಿಸಿ ಇಸ್ಲಾಮೀ ಆಕ್ರಮಿತ ಪ್ರದೇಶಗಳಲ್ಲಿ ಸೇರಿಸಿಕೊಂಡ. ಹಿಜರಿ ಶಕೆ ೫೮೮ರಲ್ಲಿ ಅವನು ಕೋಲ್‌ನ ಕೋಟೆಯನ್ನು ವಶಪಡಿಸಿಕೊಂಡ. ಮತ್ತು ಅದೇ ವರ್ಷದಲ್ಲಿ ಅವನು ದೆಹಲಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಹಾಗೂ ದೆಹಲಿಯ ಸುತ್ತ ಮುತ್ತಲಿನ ಪ್ರದೇಶಗಳನ್ನೆಲ್ಲಾ ವಶಪಡಿಸಿಕೊಂಡು ಆ ಪ್ರದೇಶಗಳಲ್ಲಿ ಇಸ್ಲಾಮೀ ಕಾನೂನನ್ನು ಜಾರಿಗೊಳಿಸಿದ.

ಶಹಾಬುದ್ದೀನನ ಅಗಮನ

ಕೆಲಕಾಲದ ನಂತರ ಶಹಾಬುದ್ದೀನನು ಘಜ್ನಿಯಿಂದ ಮತ್ತೆ ಹಿಂದೂಸ್ಥಾನಕ್ಕೆ ಆಗಮಿಸಿದ. ಆ ಬಾರಿ ಅವನು ಕನೋಜ್‌ನ ಮಾರ್ಗವನ್ನು ಹಿಡಿದ. ಅಲ್ಲೀನ ರಾಜನಾದ ಜಯಚಂದ್‌ವಾಲಿಯು ಬನಾರಸ್ ಮತ್ತು ಕನೋಜ್‌ನ ೩೦೦೦ಕ್ಕಿಂತಲು ಹೆಚ್ಚು ಆನೆಗಳಿಂದ ಕೂಡಿದ ಸೇನೆಯೊಂದಿಗೆ ಶಹಾಬುದ್ದೀನನನ್ನು ಎದುರಿಸಿದ. ಚಂದವಾಡ ಮತ್ತು ಇಟಾವದ ಬಳಿ ಎರಡು ಸೇನೆಗಳ ನಡುವೆ ಯುದ್ಧ ನಡೆಯಿತು. ಜಯಚಂದನು ಮುಸ್ಲಿಮರ ಸೇನೆ ಮತ್ತು ಮುಲ್ಕ್ ಖುತ್ಬುದ್ದೀನ್ ಐಬಕ್‌ನನ್ನು ಎದುರಿಸಲು ಅಸಮರ್ಥನಾದ. ಮತ್ತು ತನ್ನ ಅಸಂಖ್ಯ ಆನೆಗಳ ಸಾಲುಗಳನ್ನು ಯುದ್ಧ ರಂಗದಲ್ಲಿ ತೊರೆದು ಪರಾರಿಯಾದ. ಜಯಚಂದನು ಪರಾರಿಯಾದ ನಂತರ ಶಹಾಬುದ್ದೀನನು ಅಸ್ನಿ ಪ್ರಾಂಗಣವನ್ನು ಪ್ರವೇಶಿಸಿದ. ಅದು ಜಯಚಂದ್‌ನ

ಅರಮನೆಯಾಗಿತ್ತು ಮತ್ತು ಅಲ್ಲಿ ಅವನು ಅಪಾರ ಸಂಪತ್ತನ್ನು ಶೇಖರಿಸಿ ಇಟ್ಟಿದ್ದ. ಎಲ್ಲಾ ಸಂಪತ್ತನ್ನು ತನ್ನ ವಶಕ್ಕೆ ಪಡೆದುಕೊಂಡ ನಂತರ ಶಹಾಬುದ್ದೀನನು ಬನಾರಸ್ ಕಡೆ ಪ್ರಯಾಣ ಬೆಳೆಸಿದ. ಅಲ್ಲಿ ತಲುಪಿದ ನಂತರ ಅವನು ಮುಸ್ಲಿಮರ ವಾಸದ ಮನೆಗಳನ್ನಾಗಿ ಪರಿವರ್ತಿಸಲು ೧೦೦೦ ಮಂದಿರಗಳನ್ನು ನಾಶ ಮಾಡಿದ. ಕೋಲ್‌ನ ಕೋಟೆಯನ್ನು ವಶಪಡಿಸಿಕೊಂಡ ನಂತರ ಶಹಾಬುದ್ದೀನನು ಹಿಂದೂಸ್ಥಾನಿ ಆಕ್ರಮಿತ ಪ್ರದೇಶಗಳ ಆಡಳಿತಾಧಿಕಾರವನ್ನು ಖುತ್ಬುದ್ದೀನ್ ಐಬಕ್‌ಗೆ ಒಪ್ಪಿಸಿ ತನ್ನ ಹುಟ್ಟೂರಿಗೆ ಮರಳಿದ.

ಅಜ್ಮೀರ್ ಮತ್ತು ಗುಜರಾತ್‌ನ ಮೇಲೆ ಆಕ್ರಮಣ:

ಇದೇ ಸಂದರ್ಭದಲ್ಲಿ ಭೀಮರಾಜ್ ಎಂಬ ರಾಯ ಪಿಥೂರಾನ ಸಂಬಂಧಿಯೊಬ್ಬ ರಾಯ ಪಿಥೂರಾನ ಮಗನ ಮೇಲೆ ಆಕ್ರಮಣ ಮಾಡಿದ ಮತ್ತು ಅಜ್ಮೀರನ್ನು ವಶಪಡಿಸಿಕೊಂಡ ನಂತರ ಆತನು ಖುತ್ಬುದ್ದೀನ್ ಐಬಕ್‌ನೊಡನೆ ಕೂಡ ಹಗೆತನವನನು ಸಾಧಿಸತೊಡಗಿದ. ಈ ಕಾರಣದಿಂದ ಹಿಜರಿ ಶಕೆ ೫೯೧ರಲ್ಲಿ ಖುತ್ಬುದ್ದೀನನು ಭೀಮರಾಜನೊಡನೆ ಯುದ್ಧ ಸನ್ನದ್ದನಾದ. ಭೀಮರಾಜ್ ಕೂಡ ಬಲಾಢ್ಯ ಸೈನ್ಯದೊಡನೆ ಖುತ್ಬುದ್ದೀನನನ್ನು ಎದುರಿಸಿದ. ಉಭಯತ್ರರರ ನಡುವೆ ಘನ ಘೋರ ಯುದ್ಧ ನಡೆಯಿತು ಭೀಮರಾಜ್ ಆ ಯುದ್ಧದಲ್ಲಿ ಹತನಾದ. ಹೀಗೆ ಅಜ್ಮೀರ್‌ನ ಮೇಲೆ ಮುಸಲ್ಮಾನರ ಆಳ್ವಿಕೆಯು ಆರಂಭವಾಯಿತು.

ಈ ಯುದ್ಧದಿಂದ ವಿರಾಮ ಹೊಂದಿದ ನಂತರ ಖುತ್ಬುದ್ದೀನನು ನೆಹರ್‌ವಾಲದ ಮೇಲೆ ಆಕ್ರಮಣ ಮಾಡಿದ ಮತ್ತು ಭೀಮದೇವನಿಗೆ ಸೇರಿದ್ದ ಗುಜರಾತನ್ನು ಕೂಡ ಗೆದ್ದು ಕೊಂಡ. ಆ ಮೂಲಕ ಖುತ್ಬುದ್ದೀನನು ಭೀಮದೇವನ ಮೇಲೆ ಶಹಾಬುದ್ದೀನನ ಹಿಂದಿನ ಸೇಡನ್ನು ತೀರಿಸಿಕೊಂಡ. ಮತ್ತು ಅವನು ರಾಯೆ ಪಿಥೂರಾನನ್ನು ಬೆಂಬಲಿಸಿದ ಕಾರಣಕ್ಕೆ ಪ್ರತೀಕಾರವನ್ನು ಮಾಡಿದ. ನೆಹರ್‌ವಾಲವನ್ನು ಗೆದ್ದುಕೊಂಡ ನಂತರ ಖುತ್ಬುದ್ದೀನ್‌ನು ಅಗಣಿತವಾದ ಸಮರ ಸಂಪತ್ತಿನೊಡನೆ ಘಜ್ನಿಗೆ ಹೋದ ಮತ್ತು ಅಪಾರ ರಾಜ ಮನ್ನಣೆಯನ್ನು ಗಳಿಸಿ ದೆಹಲಿಗೆ ಮರಳಿದ.

ಮುಂದುವರಿದ ವಿಜಯ ಯಾತ್ರೆ:

ಹಿಜರಿ ಶಕೆ ೫೯೨ರಲ್ಲಿ ಶಹಾಬುದ್ದೀನನು ಮತ್ತೆ ಯುದ್ಧ ಮಾಡುವ ಸಲುವಾಗಿ ಹಿಂದೂಸ್ಥಾನದತ್ತ ಅಭಿಮುಖನಾದ. ಹಿಂದೂಸ್ಥಾನಕ್ಕೆ ಬಂದು ಅವನು ಹಾಲಿ ಬಯಾನ ಎಂದು ಪ್ರಖ್ಯಾತಿ ಹೊಂದಿರುವ ತಂಕರ್ ಪಟ್ಟಣವನ್ನು ಯುದ್ಧದಲ್ಲಿ ಗೆದ್ದುಕೊಂಡ ಹಾಗೂ ಅದರ ಆಡಳಿತಾಧಿಕಾರವನ್ನು ಬಹಾವುದ್ದೀನ್ ತೊಗ್ರಲ್‌ಗೆ ವಹಿಸಿಕೊಟ್ಟ. ತದನಂತರ ಅವನು ಗ್ವಾಲಿಯರ್ ಕೋಟೆಯನ್ನು ವಶ ಪಡಿಸಿಕೊಳ್ಳುವಂತೆ ಸದರಿ ತೊಗ್ರಲ್‌ಗೆ ಆದೇಶವನ್ನು ನೀಡಿದ ಮತ್ತು ತಾನು ಘಜ್ನಿಗೆ ಮರಳಿದ. ಗ್ವಾಲಿಯರ್

ಕೋಟೆಯು ಕೈ ಬಿಟ್ಟನಂತರ ಕ್ರೋಧಗೊಂಡ ಅಜ್ಮೀರಿನ ಸುತ್ತ ಮುತ್ತಲಿನ ರಜಪೂತರು ಖುತ್ಬುದ್ದೀನನ್ನು ಎದುರಿಸಲು ಮತ್ತೊಮ್ಮೆ ಸಂಘಟಿತರಾದರು. ಆದರೆ ಅವರ ಪ್ರಯತ್ನವು ವಿಫಲವಾಯಿತು ಮತ್ತು ಹಿಜರಿ ಶಕೆ ೫೯೩ರಲ್ಲಿ ಅವರು ದಯನೀಯವಾಗಿ ಸೋಲನ್ನುಂಡರು. ಹಾಗೂ ನೆಹರ್‌ವಾಲದ ಮೇಲೆ ಕೂಡಾ ಮುಸ್ಲಿಮರ ಆಡಳಿತವು ಸ್ಥಾಪನೆಗೊಂಡಿತು. ಹಿಜರಿ ಶಕೆ ೫೯೯ರಲ್ಲಿ ಮುಸ್ಲಿಮರು ಕಾಲಿಂಜರ್ ಮತ್ತು ಬದಾಯೂನಿನ ಕೋಟೆಗಳನ್ನು ಕೂಡಾ ತಮ್ಮ ವಶಪಡಿಸಿಕೊಂಡರು.

ಗಯಾಸುದ್ದೀನನ ಮರಣ

ತೌಸ್ ಮತ್ತು ಸರ್ಖಸ್‌ನ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ ಮಗ್ನನಾಗಿದ್ದ ಶಹಾಬುದ್ದೀನನಿಗೆ ಘೋರಿ ಸಂಸ್ಥಾನದ ಬಾದಶಹನು ಮತ್ತು ಅವನ ಅಣ್ಣನಾಗಿದ್ದ ಗಯಾಸುದ್ದೀನನ ಮರಣದ ಸುದ್ದಿಯು ಸಿಡಿಲಿನೋಪಾದಿಯಲ್ಲಿ ಅಪ್ಪಳಿಸಿತು. ಕೂಡಲೇ ಅವನು ಬಾದೆಗೈಸನ್ನು ತಲುಪಿದ. ತನ್ನ ಅಣ್ಣನ ಸಾವಿನ ಶೋಕಾಚರಣೆಯನ್ನು ಮಾಡಿದ. ನಂತರ ಅವನು ಖುರಾಸಾನ್ ಪ್ರಾಂತ್ಯವನ್ನು ಆಲೆ ಸಾಮಾನ್‌ರವರ ನಡುವೆ ಹಂಚಿದ. (ಇಲ್ಲಿ ಫರಿಶ್ತಾನಿಂದ ಲೋಪವಾಗಿದೆ. ಇನ್ನಿತರೆ ಗ್ರಂಥಗಳ ಪರಾಮರ್ಶೆಯಿಂದ ತಿಳಿದು ಬರುವುದೇನೆಂದರೆ ಶಹಾಬುದ್ದೀನನು ಖಿರಾಸಾನಿನ ಆಡಳಿತವನ್ನು ಆಲೆಸಾಮಾನಿನ ನಡುವೆ ಹಂಚಲಿಲ್ಲ ಬದಲಿಗೆ ತನ್ನ ಬಂಧುಗಳ ನಡುವೆ ಹಂಚಿದ ಎಂದು), ತನ್ನ ಚಿಕ್ಕಪ್ಪನ ಮಗನೂ ಮತ್ತು ಗಯಾಸುದ್ದೀನನ ಅಳಿಯನೂ ಆದ ಜಿಯಾವುದ್ದೀನನಿಗೆ ಫೈರೋಜ್ ಕೋಹ್ ಮತ್ತು ಘೋರಿಸ್ತಾನದ ಒಡೆಯನನ್ನಾಗಿ ಮಾಡಿದ. ಗಯಾಸುದ್ದೀನನ ಮಗನಾದ ಸುಲ್ತಾನ್ ಮೆಹಮೂದನ ಒಡೆತನಕ್ಕೆ ಬಸಂತ್, ಫರಹ್, ಅಸ್ಫರಾಯನ್ ಪ್ರಾಂತ್ಯಗಳನ್ನು ನೀಡಿದ. ತನ್ನ ಸಹೋದರಿಯ ಮಗನಾದ ನಾಸಿರುದ್ದೀನನಿಗೆ ಹೇರಾತ್ ಮತ್ತು ಸುತ್ತಲಿನ ಪ್ರದೇಶಗಳ ಆಡಳಿತವನ್ನು ನೀಡಿದ. ನಂತರ ಆತನು ಬಾದಗೈಸಿನಿಂದ ಘಜನಿ ತಲುಪಿ, ಸಿಂಹಾಸನವನ್ನೇರಿದ.

ಖವಾರ್‌ಜಿಮ್‌ನ ಮೇಲೆ ಆಕ್ರಮಣ :

ಅದೇ ಕಾಲಾವಧಿಯಲ್ಲಿ ಮರ್ವದ ರಾಜನಾದ ಮೊಹಮ್ಮದ್ ಖೈರ್‌ಬೇಗ್‌ನನ್ನು ಅವನ ಶತ್ರುಗಳು ಕೊಲೆ ಮಾಡಿದ್ದಾರೆಂಬ ಸುದ್ದಿಯು ಆತನಿಗೆ ತಲುಪಿತು. ಆ ಸುದ್ದಿಯಿಂದ ಕೆರಳಿದ ಶಹಾಬುದ್ದೀನನು ೬೦೦ನೆಯ ಇಸವಿಯಲ್ಲು ಖವಾರ್‌ಜಮ್‌ನ ಮೇಲೆ ಮುತ್ತಿಗೆಯನ್ನು ಹಾಕಿದ. ಖವಾರ್‌ಜಮ್‌ನ ರಾಜನು ಶಹಾಬುದ್ದೀನನನ್ನು ಯುದ್ಧದಲ್ಲಿ ಎದುರಿಸಲು ಅಸಂಭವವೆಂದು ಅರಿತು ಕೋಟೆ ಬಾಗಿಲನ್ನು ಹಾಕಿ ಒಳಗೆ ಸೇರಿಕೊಂಡ. ಜೇಹೋನ್ ನದಿಯ ಉಪನದಿಯಾಗಿ ಪ್ರವಹಿಸಿ ಖವಾರ್‌ಜಮ್ ಹಾಗೂ ಖಲೀಜ್ ನಗರಗಳ ಪಶ್ಚಿಮಕ್ಕೆ ಹರಿಯುತ್ತಿದ್ದ ಉಪನದಿಯ ದಡದಲ್ಲಿ ಶಹಾಬುದ್ದೀನನು ಬೀಡು ಬಿಟ್ಟಿದ್ದ. ಕೆಲವು ದಿನಗಳವರೆಗೆ ಶಹಾಬುದ್ದೀನನು ಅತ್ಯಂತ

ಧೈರ್ಯ ಸಾಹಸಗಳಿಂದ ಶತ್ರುಗಳೊಡನೆ ಹೋರಾಟ ಮಾಡುತ್ತಿದ್ದ. ಆದರೆ, ಅವನಿಗೆ ಬಾದಶಾಹೆ ಖಿತಾನ ಸೇನಾಧಿಕಾರಿಯಾದ ಖಿರಾಬೇಗ್‌ಖಾನ್ ಮತ್ತು ಸಮರಕಂದ ಸುಲ್ತಾನನಾದ ಉಸ್ಮಾನ್‌ಖಾನ್ ತಮ್ಮ ತಮ್ಮ ಸೇನೆಯೊಡನೆ ಖವಾರ್‌ಜಿಮ್‌ನ ಬಾದಶಹನ ನೆರವಿಗೆ ಧಾವಿಸುತ್ತಿದ್ದಾರೆ ಎಂಬ ಅಂಶವು ತಿಳಿದು ಬಂದ ಕೂಡಲೇ ಅವನು ಗಾಬರಿಯಾದ. ಅವರಿಬ್ಬರಿಂದ ಭಯಗ್ರಸ್ತನಾಗಿ ತನ್ನ ಅವಶ್ಯಕತೆಗಿಂತ ಹೆಚ್ಚಾಗಿದ್ದ ಸಾಮಾನು ಸರಂಜಾಮಿಗೆ ಅವನು ಬೆಂಕಿ ಇಟ್ಟ. ಮತ್ತು ಖಿರಾಸಾನ್‌ನತ್ತ ಪಲಾಯನ ಮಾಡಿದ. ಖವಾರ್‌ಜಮ್‌ನ ಬಾದಶಹನು ಶಹಾಬುದ್ದೀನನ ಬೆನ್ನಟ್ಟಿದ. ಅವನು ಹಿಂಬಾಲಿಸುತ್ತಿದ್ದ ತೀವ್ರ ರೀತಿಯ ಆವೇಗವನ್ನು ತಡೆಯಲಾರದೆ ಶಹಾಬುದ್ದೀನನು ಕೊನೆಗೂ ಅವನ ವಿರುದ್ದ ಸೆಣಸಾಡಬೇಕಾಯಿತು. ಈ ಮರು ಆಕ್ರಮಣದ ಹೋರಾಟದಲ್ಲಿ ಶಹಾಬುದ್ದೀನನಿಗೆ ಸೋಲು ಉಂಟಾಯಿತು ಮತ್ತು ಘೋರಿಸ್ಥಾನದ ಆ ಸಿಂಹವು ತನ್ನ ಆನೆ, ಕುದುರೆ ಮತ್ತು ಖಜಾನೆ ಮೊದಲಾದವುಗಳನ್ನು ಬಿಟ್ಟು ಕಾಡಿನತ್ತ ಓಡಿದ. ಅರ್ಧ ದಾರಿಯಲ್ಲಿಯೇ ಖಿರಾಬೇಗ್‌ಖಾನ್ ಮತ್ತು ಸುಲ್ತಾನ್ ಉಸ್ಮಾನನು ಅವನನ್ನು ಸುತ್ತುವರೆದರು. ಇಂದರ್‌ಖುದ್‌ನ ಪ್ರದೇಶದಲ್ಲಿ ಉಭಯತ್ರರ ನಡುವೆ ಘನ ಘೋರ ಯುದ್ಧವು ನಡೆಯಿತು. (ಇಂದರ್‌ಖುದ್ ಎಂಬುದು ಆಫ್ಘಾನಿಸ್ಥಾನದ ಉತ್ತರಭಾಗದಲ್ಲಿರುವ ಪ್ರಖ್ಯಾತ ಸ್ಥಳವಾಗಿದ್ದು ಹಾಲಿ ಖಿರಾಸಾನ್‌ನಲ್ಲಿ ಸೇರಿದೆ.) ಶಹಾಬುದ್ದೀನನು ಧೈರ್ಯಗುಂದದೆ ಅತೀವ ಪರಾಕ್ರಮವನ್ನು ತೋರಿದ ಅವನ ಸೇನೆಯು ಶತ್ರು ಸೇನೆಗಿಂತ ಕಡಿಮೆಯಿತ್ತು ಅವನು ಸಂಖ್ಯಾಬಲವನ್ನು ಪರಿಗಣಿಸದೆ ವೀರಾವೇಷದಿಂದ ಯುದ್ಧ ಮಾಡಿದ. ಆದರೆ, ಶತ್ರು ಸೇನೆಯ ಅಸಂಖ್ಯ ಸೈನಿಕರು ಅವನ ಸೈನ್ಯದ ಬಹುತೇಕ ಸೈನಿಕರ ಮಾರಣಹೋಮವನ್ನು ಮಾಡಿದಾಗ ಅವನೊಡನೆ ಕೇವಲ ೧೦೦ ಸೈನಿಕರು ಮಾತ್ರ ಉಳಿದರು. ಅವನು ಧೈರ್ಯಗೆಟ್ಟು ಈ ಆಪತ್ತಿನಿಂದ ಪಾರಾಗುವ ಸಲುವಾಗಿ ಇಂದರ್‌ಖುದ್‌ನ ಕೋಟೆಯೊಳಗೆ ಸೇರಿಕೊಂಡು ರಕ್ಷಣೆ ಪಡೆದ. ಎರಡು ದಿನಗಳ ನಂತರ ಸುಲ್ತಾನ್ ಉಸ್ಮಾನ್‌ನ ಮಧ್ಯಸ್ಥಿಕೆಯಲ್ಲಿ ಸಂಧಿ ಏರ್ಪಟ್ಟಿತು. ಮತ್ತು ಶಹಾಬುದ್ದೀನನು ಇಂದರ್‌ಖುದ್‌ನ ಕೋಟೆಯನ್ನು ಖಿರಾಬೇಗ್‌ಖಾನ್‌ನ ವಶಕ್ಕೆ ಒಪ್ಪಿಸಿ ಘಜ್ನಿಯತ್ತ ಪ್ರಯಾಣ ಬೆಳೆಸಿದ.

ಐಬಕ್ (ಶಹಾಬುದ್ದೀನನ ಗುಲಾಮನ) ಕಾರ್ಯಚಟುವಟಿಕೆಗಳು:

ಖವಾರ್‌ಜಿಮ್‌ನ ಯುದ್ಧದಲ್ಲಿ ಸೋತು ಶಹಾಬುದ್ದೀನನು ಪರಾರಿಯಾದಾಗ ನಂಬಿಕೆ ದ್ರೋಹವೆಸಗಿದ ಐಬಕ್‌ಗೆ ಸಮಯಸಾಧಕತನವನ್ನು ತೋರಲು ಅವಕಾಶ ದೊರಕಿತು.ಆ ಕೃತಘ್ನ ಗುಲಾಮನು ಶಹಾಬುದ್ದೀನನು ಇದೀಗ ಬದುಕಿ ಉಳಿಯಲು ಅಸಂಭವ ಎಂದು ಮನದಲ್ಲಿ ಆಲೋಚನೆ ಮಾಡಿದ. ಆದ್ದರಿಂದ ಅವನು ಮುಲ್ತಾನ್ ತಲುಪಿದ ಹಾಗೂ ಸಿಂಧ್ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶವನ್ನು ವಶಪಡಿಸಿಕೊಂಡು ಸ್ವತಂತ್ರ ರಾಜ್ಯವನ್ನು ರಚಿಸಬೇಕೆಂದು ಅವನು ಆಲೋಚನೆ

ಮಾಡಿದ. ಮುಲ್ತಾನ್ ತಲುಪಿದ ಐಬಕ್ ಅಲ್ಲಿನ ಕೊತ್ವಾಲನಾದ ಅಮೀರ್‌ದಾದ್ ಹಸನ್‌ನನ್ನು ತನ್ನ ಕಪಟ ಮಾತುಗಳಿಂದ ಮರಳು ಮಾಡಿದ ಮತ್ತು ಅವನು ಹೀಗೆಂದು ನುಡಿದ "ನಿನಗೆ ರಾಜ್ಯದ ರಾಜಕೀಯ ರಹಸ್ಯಗಳನ್ನು ಹೇಳಬೇಕೆಂದು ನನಗೆ ಶಹಾಬುದ್ದೀನನು ಆಜ್ಞೆ ಮಾಡಿದ್ದಾನೆ." ಬಡಪಾಯಿಯಾದ ಅಮೀರ್‌ದಾದ್‌ಹಸನ್ ಅವನ ಮಾತುಗಳಿಗೆ ಮರುಳಾಗಿ ತನ್ನ ಆಸ್ಥಾನದಿಂದ ಎಲ್ಲರನ್ನು ಹೊರಗೆ ಕಳುಹಿಸಿದ. ಅವರಿಬ್ಬರೇ ಉಳಿದಾಗ ಐಬಕ್‌ನು ಅಮೀರ್‌ದಾದ್‌ಹಸನ್‌ನೊಂದಿಗೆ ಸಾವಕಾಶವಾಗಿ ಮಾತನಾಡರಂಭಿಸಿದ. ಅಮೀರ್‌ದಾದ್‌ಹಸನ್ ತನ್ನೊಡನೆ ಸಂಭಾಷಣೆಯಲ್ಲಿ ಸಂಪೂರ್ಣವಾಗಿ ಮಗ್ನನಾಗಿದಾನೆಂದು ಐಬಕ್‌ಗೆ ಅರಿವಾಗುತ್ತಿದ್ದಂತೆಯೇ ಅವನು ಮೊದಲೇ ನಿಯುಕ್ತಿಗೊಂಡಿದ್ದ ತನ್ನ ತುರ್ಕಿ ಗುಲಾಮನಿಗೆ ಸನ್ನೆ ಮಾಡಿದ. ಐಬಕ್‌ನಿಂದ ಆದೇಶ ದೊರೆತ ಕೂಡಲೇ ಆ ತುರ್ಕಿ ಗುಲಾಮನು ಹರಿತವಾದ ಖಡ್ಗದಿಂದ ಅಮೀರ್‌ದಾದ್‌ಹಸನ್‌ನ ಕೊಲೆ ಮಾಡಿದ. ನಂತರ ಐಬಕ್‌ನು ಶಹಾಬುದ್ದೀನನ ಆಜ್ಞೆಯ ಮೇರೆಗೆ ಅಮೀರ್‌ದಾದ್‌ಹಸನ್‌ನ ಕೊಲೆಮಾಡಲಾಗಿದೆ ಎಂದು ಜನರ ನಡುವೆ ಪ್ರಚಾರ ಮಾಡಿದ. ಐಬಕ್‌ನು ಒಂದು ನಕಲಿ ಫರ್ಮಾನನ್ನು ಹೊರಡಿಸಿ ಮುಲ್ತಾನನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ಪಡೆದುಕೊಂಡ. ನಂತರ ಶಹಾಬುದ್ದೀನನು ಕೊಲೆಯಾದ ಎಂಬ ಹುಸಿ ಸುದ್ದಿಯನ್ನು ತೇಲಿ ಬಿಟ್ಟ. ಇದರ ಪರಿಣಾಮವಾಗಿ ಕೋಹೆ ಜೂದ್ ಮೊದಲಾದ ಪ್ರದೇಶಗಳ ಖಕ್ಕರ್‌ಗಳ ಸರದಾರನಾದ ಸುರ್ಕ ಎಂಬುವಾತನು ಸ್ವತಂತ್ರ ರಾಜನಾಗಬೇಕೆಂಬ ಇಚ್ಛೆಯಿಂದ ಲಾಹೋರ್‌ನ ಮೇಲೆ ಆಕ್ರಮಣ ಮಾಡಿದ. ಈ ಆಕ್ರಮಣದ ದೆಸೆಯಿಂದ ಜೇಲಂ ಮತ್ತು ಸೋದ್ರಾ ನಡುವಿನ ಎಲ್ಲಾ ಪ್ರದೇಶಗಳಲ್ಲಿ ಅರಾಜಕತೆ ತಾಂಡವಾಡ ತೊಡಗಿತು. ಮತ್ತು ಯುದ್ಧದ ಕೆನ್ನಾಲಿಗೆಯು ಪ್ರಜ್ವಲಿಸ ತೊಡಗಿತು.

ಐಲ್ದಗಜ್ (ಶಹಾಬುದ್ದೀನನ ಗುಲಾಮನ) ಕಾರ್ಯಚಟುವಟಿಕೆ

(ಇಲ್ಲಿ ಫರಿಶ್ತಾನಿಂದ ತಪ್ಪಾಗಿದೆ ಈ ಗುಲಾಮನ ಹೆಸರನ್ನು ಬೇರೆ ಇತಿಹಾಸಕಾರರು "ಯಾಲ್ದೂಜ್" ಎಂದು ದಾಖಲಿಸಿದ್ದಾರೆ.) ಶಹಾಬುದ್ದೀನನು ಇಂದರ್‌ಖುದ್‌ನ ಕೋಟೆಯನ್ನು ಖಿರಾಬೇಗ್‌ಖಾನ್‌ಗೆ ಒಪ್ಪಿಸಿ ಘಜ್ನಿಯನ್ನು ತಲುಪಿದಾಗ ಅವನ ಗುಲಾಮನಾದ ಐಲ್ದಗಜ್‌ನು ಘಜ್ನಿಯನ್ನು ತನ್ನ ವಶಕ್ಕೆ ಪಡೆದುಕೊಂಡಿದ್ದಾನೆಂಬ ವಿಷಯ ತಿಳಿಯಿತು. ಶಹಾಬುದ್ದೀನನು ಕೋಟೆಯೊಳಗಡೆ ಪ್ರವೇಶಿಸಬೇಕೆಂದು ಅತೀವ ಪ್ರಯತ್ನ ಮಾಡಿದ. ಆದರೆ, ಐಲ್ದಗಜ್‌ನು ಅವನಿಗೆ ಅನುಮತಿಯನ್ನು ನೀಡಲಿಲ್ಲ ಮತ್ತು ತನ್ನ ಒಡೆಯನ ಮೇಲೆ ಯುದ್ಧಮಾಡಲು ಸನ್ನದ್ದನಾದ. ಆ ಹೊತ್ತಿನಲಿ ಐಲ್ದಗಜ್‌ನೊಡನೆ ಯುದ್ಧ ಮಾಡುವುದು ಸೂಕ್ತವಲ್ಲವೆಂದು ಶಹಾಬುದ್ದೀನನು ನಿರ್ಧರಿಸಿದ ಮತ್ತು ಮುಲ್ತಾನಿನತ್ತ ರವಾನೆಯಾದ. ಮುಲ್ತಾನ್ ತಲುಪಿದ ನಂತರ

ಅವನಿಗೆ ತನ್ನ ಇನ್ನೊಬ್ಬ ಗುಲಾಮನಾದ ಐಬಕನನು ಅಮೀರ್‌ದಾದ್‌ಹಸನ್‌ನನ್ನು ಮೋಸದಿಂದ ಕೊಂದು ಮುಲ್ತಾನನ್ನು ತನ್ನ ವಶಕ್ಕೆ ಪಡೆದುಕೊಂಡಿರುವನೆಂದು ಐಬಕ್‌ನ ನಮಕ್‌ಹರಾಮಿತನದ ಬಗ್ಗೆ ತಿಳಿದು ಬಂದಿತು. ಐಬಕ್ ತನ್ನ ಆಜ್ಞೆಯನ್ನು ಪಾಲಿಸುವುದಿಲ್ಲವೆಂದು ಶಹಾಬುದ್ದೀನನಿಗೆ ತಿಳಿದುಬಂದ ನಂತರ ಅವನು ಮುಲ್ತಾನಿನ ಮೇಲೆ ಯುದ್ಧವನ್ನು ಸಾರಿದ. ಒಂದೇ ಆಕ್ರಮಣದಲ್ಲಿ ಮುಲ್ತಾನ್‌ನ ಕೋಟೆಯ ವಿಜಯಿಯಾದ ಶಹಾಬುದ್ದೀನನು ಐಬಕ್‌ನನ್ನು ಸೆರೆಹಿಡಿದ. ನಂತರ ಶಹಾಬುದ್ದೀನನು ಒಂದು ಬಲಾಢ್ಯ ಸೇನೆಯನ್ನು ತಯಾರುಮಾಡಿ ಘಜ್ನಿಯತ್ತ ನಡೆದ. ಈ ಸಂದರ್ಭದಲ್ಲಿ ಐಲ್ದಿಗಜ್‌ನು ತನ್ನ ನಮಾಕ್‌ಹರಾಮಿತನದಿಂದ ಬೇಸತ್ತು ಸ್ವತಂತ್ರ ಸಂಸ್ಥಾನವನ್ನು ಕಟ್ಟುವ ಮಹಾದಾಸೆಯನ್ನು ಕೈಬಿಟ್ಟಿದ್ದ. ಆದ್ದರಿಂದ ಅವನು ತನ್ನ ಒಡೆಯನ ವಿರುದ್ದ ಯುದ್ಧ ಮಾಡಲಿಲ್ಲ. ಬದಲಿಗೆ ಗುಲಾಮನಂತೆ ಶಹಾಬುದ್ದೀನನ ಸೇವೆಯಲ್ಲಿ ಹಾಜರಾದ ಮತ್ತು ಅತ್ಯಂತ ವಿಧೇಯತೆಯಿಂದ ತನ್ನ ತಪ್ಪಿಗೆ ಕ್ಷಮೆಯನ್ನು ಕೋರಿದ. ಇತರೆ ಸರದಾರರ ಶಿಫಾರಸ್ಸಿನ ಮೇರೆಗೆ ಶಹಾಬುದ್ದೀನನು ಅವನಿಗೆ ಕ್ಷಮೆಯನ್ನು ನೀಡಿದ ಮತ್ತು ಘಜ್ನಿಯನ್ನು ಮರುಪ್ರವೇಶ ಮಾಡಿ ತನ್ನ ರಾಜ್ಯಭಾರವನ್ನು ಸುಸೂತ್ರವಾಗಿ ನಡೆಸತೊಡಗಿದ.

ಖಕ್ಕರ್‌ಗಳ ಇಸ್ಲಾಮ್ ಸ್ವೀಕಾರ:

ಈ ಅವಧಿಯಲ್ಲಿ ಖವಾರ್‌ಜಮ್‌ನ ಬಾದಶಹನು ತನ್ನ ಸಂದೇಶವಾಹಕನನ್ನು ಶಹಾಬುದ್ದೀನನ ದರಬಾರಿಗೆ ಕಳುಹಿಸಿದ್ದರಿಂದ, ಅವರಿಬ್ಬರ ನಡುವೆ ನಡುವೆ ಸಂಧಿ ಏರ್ಪಟ್ಟಿತು. ಐಬಕ್ ಮತ್ತು ಐಲ್ದಿಗಜ್‌ನ ಪ್ರಕರಣದಿಂದ ಮುಕ್ತಿ ಹೊಂದಿದ ಶಹಾಬುದ್ದೀನನು ಖಕ್ಕರ್‌ಗಳ ಮೇಲೆ ಆಕ್ರಮಣವನ್ನು ಮಾಡಿದ. ಅವನ ನೆರವಿಗಾಗಿ ದೆಹಲಿಯಿಂದ ಖುತ್ಬುದ್ದೀನನು ಕೂಡ ಆಗಮಿಸಿದ. ಖಕ್ಕರ್‌ಗಳ ರಾಜದ್ರೋಹದ ಕೃತ್ಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅವರನ್ನು ಶಿಕ್ಷೆಗೆ ಗುರಿ ಮಾಡಿ ಲಾಹೋರ್ ತಲುಪಿದ. ಅಲ್ಲಿಂದ ಅವನು ಖುತ್ಬುದ್ದೀನ್‌ನನ್ನು ದೆಹಲಿಗೆ ಬೀಳ್ಕೊಟ್ಟು ಸ್ವತಃ ಅಲ್ಲಿಯೇ ಉಳಿದು ರಾಜ್ಯದ ಸುವ್ಯವಸ್ಥೆಗಾಗಿ ಶ್ರಮಿಸತೊಡಗಿದ.

ಲಾಹೋರ್‌ನಲ್ಲಿ ನೆಲಸಿದ ಶಹಾಬುದ್ದೀನನಿಗೆ ಸಿಂಧೂ ನದಿಯ ದಡದಿಂದ ಹಿಡಿದು ಸವಾಲಿಕ್‌ನ ಸೆರೆಗಿನವರೆಗೆ ಹರಡಿಕೊಂಡಿರುವ ಮುಸ್ಲಿಮೇತರ ಖಕ್ಕರ್‌ಗಳು ದೇಶಾದ್ಯಂತ ಗಲಭೆಗಳಿಗೆ ಕಾರಣ ಕರ್ತರಾಗಿದ್ದಾರೆಂದು ತಿಳಿದುಬಂದಿತು. ಅವರ ದ್ವೇಷಪೂರಿತ ನಡವಳಿಕೆಯ ದೆಸೆಯಿಂದ ಸುತ್ತಮುತ್ತಲಿನ ಜನರಿಗೆ ಅಪಾರ ಸಾವು ನೋವುಗಳು ಉಂಟಾಗುತ್ತಿವೆ ಮತ್ತು ವಿಶೇಷವಾಗಿ ಪೆಶಾವರ್ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶದ ಮುಸಲ್ಮಾನರು ಬದುಕುವುದೇ ದುಸ್ತರವಾಗಿದೆ ಎಂಬ ಅಂಶವೂ ಅವನಿಗೆ ತಿಳಿದು ಬಂದಿತು. ಅಧಾರ್ಮಿಕ ಖಕ್ಕರ್‌ಗಳು ಆಸ್ತಿಕ ಮುಸಲ್ಮಾನರ ಪಂಜಾಬಿನ ಪ್ರಯಾಣವನ್ನು ಕೂಡ ದುಸ್ತರ ಮಾಡಿದ್ದರು. ಆ ಜನರಿಗೆ ಯಾವುದೇ ಧರ್ಮ

ಪರಿಪಾಲನೆಯ ಹೊಣೆಗಾರಿಕೆ ಇರಲಿಲ್ಲ. ಹೆಣ್ಣು ಮಕ್ಕಳೊಡನೆ ಅವರು ಅತ್ಯಂತ ಕ್ರೂರವಾಗಿ ವರ್ತಿಸುತ್ತಿದ್ದರು. ಆ ಜನರಲ್ಲಿ ಒಂದು ವಿಚಿತ್ರ ಸಂಪ್ರದಾಯವಿತ್ತು ಯಾರ ಮನೆಯಲ್ಲಾದರು ಯೌವನಾವಸ್ಥೆಗೆ ತಲುಪಿದ ಹೆಣ್ಣು ಮಗಳು ಇದ್ದಲ್ಲಿ ಆ ಯುವತಿಯ ತಂದೆ ಅಥವಾ ಸಹೋದರನು ಆಕೆಯ ಕೈಯನ್ನು ಹಿಡಿದು ತನ್ನ ಮನೆಯ ಬಾಗಿಲಲ್ಲಿ ನಿಲ್ಲುತ್ತಿದ್ದರು ಹಾಗೂ ರಸ್ತೆಯಲ್ಲಿ ಹೋಗುವವರನ್ನು ಕರೆದು ಆ ಯುವತಿಯನ್ನು ಕ್ರಯಕ್ಕೆ ಕೊಳ್ಳುವಂತೆ ಆಹ್ವಾನಿಸುತ್ತಿದ್ದರು. ಯಾರಾದರೂ ಒಪ್ಪಿ ಆಕೆಯನ್ನು ಖರೀದಿಸಿದಲ್ಲಿ ಅವಳನ್ನು ಅವನ ಜೊತೆ ಸಾಗ ಹಾಕುತ್ತಿದ್ದರು. ಇಲ್ಲವಾದಲ್ಲಿ ಆ ಅಸಹಾಯಕ ಯುವತಿಯನ್ನು ಅಲ್ಲಿಯೇ ಕೊಲೆಮಾಡಿ ಆಕೆಯಿಂದ ಮುಕ್ತಿ ಪಡೆಯುತ್ತಿದ್ದರು. ಅಷ್ಟೇ ಅಲ್ಲದೆ ಅವರಲ್ಲಿದ್ದ ಇನ್ನೊಂದು ಸಂಪ್ರದಾಯವೇನೆಂದರೆ, ಒಬ್ಬ ಮಹಿಳೆಯು ಅನೇಕ ಪುರುಷರಿಗೆ ಪತ್ನಿಯಾಗಿರುತ್ತಿದ್ದಳು. ಯಾವ ಪತಿಯು ಆಕೆಯ ಮನೆಯೊಳಗೆ ಪ್ರವೇಶಿಸುತ್ತಿದ್ದನೋ ಆತನು ಉಳಿದ ಪುರುಷರಿಗೆ ತನ್ನ ಇರುವಿಕೆಯ ಬಗ್ಗೆ ತಿಳಿಸಲು ಹೊರಬಾಗಿಲಿನಲ್ಲಿ ತನ್ನ ಗುರುತನ್ನು ನಿಶಾನೆ ಮಾಡಿ ಹೋಗುತ್ತಿದ್ದ. ಆ ಸಂದರ್ಭದಲ್ಲಿ ಬೇರೆ ಇನ್ನೊಬ್ಬ ಪುರುಷನು ಆ ಮಹಿಳೆಯ ಮನೆಗೆ ಹೋದಾಗ ಹೊರಬಾಗಿಲಿನ ಆ ಗುರುತನ್ನು ನೋಡಿ ಆಕೆಯು ಏಕಾಂಗಿಯಾಗಿ ಇಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುತ್ತಿದ್ದ ಮತ್ತು ಕೂಡಲೇ ಮರಳಿ ಹೋಗುತ್ತಿದ್ದ. ಬೇರೆಯವರಿಗೆ ಅಸಹನೀಯ ಹಿಂಸೆಯನ್ನು ನೀಡುವುದರಲ್ಲಿ ಆ ಜನಾಂಗವು ವಿಶೇಷ ಪರಿಣಿತಿಯನ್ನು ಪಡೆದಿತ್ತು. ವಿಶೇಷವಾಗಿ ಮುಸಲ್ಮಾನರನ್ನು ನೋಯಿಸುವುದರಲ್ಲಿ ಅವರು ತುಂಬಾ ಸಂತೋಷವನ್ನು ಕಂಡುಕೊಳ್ಳುತ್ತಿದ್ದರು. ಆ ಜನಾಂಗವು ಬಹಳ ಕಾಲದವರೆಗೆ ಅದೇ ರೀತಿಯ ಮೃಗೀಯ ನಡವಳಿಕೆಯಿಂದ ಕೂಡಿ ತಮ್ಮ ಬದುಕನ್ನು ಸಾಗಿಸುತ್ತಿದ್ದರು.

ಸುಲ್ತಾನ್ ಶಹಾಬುದ್ದೀನನ ಆಡಳಿತಾವಧಿಯ ಕೊನೆಯ ಭಾಗದಲ್ಲಿ ಒಬ್ಬ ಧರ್ಮ ಭೀರು ಮುಸಲ್ಮಾನನನ್ನು ಖಕ್ಕರ್‌ಗಳು ಬಂಧಿಸಿದರು. ಧಾರ್ಮಿಕ ಸ್ವಭಾವದ ಆ ಮುಸಲ್ಮಾನನು ಇಸ್ಲಾಮ್ ಧರ್ಮದ ಮುಖ್ಯ ವೈಶಿಷ್ಟ್ಯಗಳ ಬಗ್ಗೆ ಮತ್ತು ಇಸ್ಲಾಮಿ ಆರಾಧನೆಯ ಕ್ರಮವನ್ನು ತಿಳಿಸಿಕೊಟ್ಟ. ಅದು ಆ ಜನಾಂಗಕ್ಕೆ ಅರಿವು ಮೂಡಿದ ಸಂದರ್ಭವಾಗಿತ್ತು ಮತ್ತು ಖಕ್ಕರ್‌ಗಳ ಸರದಾರನಿಗೆ ಆ ಮಾತುಗಳು ತೀವ್ರ ಪರಿಣಾಮಕಾರಿಯಾಗಿ ಕಂಡುಬಂದವು. ಅವನು ಆ ಮುಸ್ಲಿಮ್‌ನನ್ನು ಪ್ರಶ್ನಿಸಿದ "ಒಂದು ವೇಳೆ ನಾನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಲು ಸುಲ್ತಾನ್ ಶಹಾಬುದ್ದೀನನ ಸಮ್ಮುಖದಲ್ಲಿ ಹಾಜರಾದಲ್ಲಿ ನನ್ನೊಡನೆ ಯಾವ ರೀತಿಯಲ್ಲಿ ವರ್ತಿಸುತ್ತಾರೆ?" ಆಗ ಆ ವ್ಯಕ್ತಿಯು ಹೀಗೆಂದು ಉತ್ತರಿಸಿದ "ಬಾದಶಹ ನಿನ್ನನ್ನು ಈ ಪರಿವರ್ತನೆಯೊಂದಿಗೆ ಕಂಡಾಗ ಅತ್ಯಂತ ಸಂತೋಷದಿಂದ ನಿನ್ನೊಡನೆ ವರ್ತಿಸುವರು. ಈ ಪರ್ವತ ಪ್ರದೇಶದ ರಾಜ್ಯಾಡಳಿತವನ್ನು ನಿನಗೆ ವಹಿಸಿಕೊಡುತ್ತಾರೆ ಮತ್ತು ನಿನ್ನನ್ನು ಇಲ್ಲಿನ ಸ್ವತಂತ್ರ ರಾಜನೆಂದು ಮನ್ನಣೆಯನ್ನು ನೀಡುತ್ತಾರೆ." ಈ ಸಂಭಾಷಣೆ ನಡೆದ

ನಂತರ ಖಕ್ಕರ್‌ನ ಸರದಾರನು ತನ್ನ ಪೂರ್ಣ ಬುಡಕಟ್ಟಿನೊಂದಿಗೆ ಇಸ್ಲಾಮನ್ನು ಸ್ವೀಕರಿಸುವ ಇರಾದೆಯನ್ನು ವ್ಯಕ್ತಪಡಿಸಿದ. ಸೆರೆಯಾಳಾಗಿದ್ದ ಮುಸ್ಲಿಮನು ಈ ಸಂಪೂರ್ಣ ವಿವರಗಳನ್ನು ಪತ್ರದ ಮುಖೇನ ಸುಲ್ತಾನ್ ಶಹಾಬುದ್ದೀನನಿಗೆ ವರದಿ ಮಾಡಿದ. ಆ ಪತ್ರ ತಲುಪಿದ ಕೂಡಲೇ ಸುಲ್ತಾನ್ ಶಹಾಬುದ್ದೀನನು ಚಿನ್ನದ ಎಳೆಗಳಿಂದ ನೆಯ್ದ ಸೊಂಟಪಟ್ಟಿ ಮತ್ತು ಇನ್ನು ಅನೇಕ ಅಮೂಲ್ಯ ಖಿಲ್ಲತ್‌ಗಳನ್ನು ಸರದಾರನಿಗೆ ಉಡುಗೊರೆಯಾಗಿ ಕಳಿಸಿಕೊಟ್ಟ ಮತ್ತು ಅವನನ್ನು ತನ್ನ ದರಬಾರಿಗೆ ಆಹ್ವಾನಿಸಿದ. ಖಕ್ಕರ್‌ನ ಸರದಾರನು ಶಹಾಬುದ್ದೀನನ ಸಮ್ಮುಖದಲ್ಲಿ ಹಾಜರಾದ ಮತ್ತು ಇಸ್ಲಾಮನ್ನು ಸ್ವೀಕರಿಸಿದ. ಶಹಾಬುದ್ದೀನನು ಅವನನ್ನು ಹಿಸ್ತಾನಿ ಪ್ರದೇಶಗಳ ಸಾಮಂತನನ್ನಾಗಿ ನೇಮಕ ಮಾಡಿದ. ತನ್ನ ವಾಸಸ್ಥಾನಕ್ಕೆ ಮರಳಿದ ಆ ಸರದಾರನು ತನ್ನ ಬುಡಕಟ್ಟಿನ ಬಹುತೇಕ ಜನರನ್ನು ಮುಸಲ್ಮಾನರನ್ನಾಗಿ ಪರಿವರ್ತನೆ ಮಾಡಿದ. ಆದರೆ, ಅವನ ಆಡಳಿತ ಪ್ರದೇಶದ ವ್ಯಾಪ್ತಿಯ ಅಂಚಿನಲ್ಲಿದ್ದ ಮತ್ತು ಕೇಂದ್ರಸ್ಥಾನದಿಂದ ದೂರವಾಗಿದ್ದ ಕೆಲವು ಖಕ್ಕರ್‌ಗಳು ತಮ್ಮ ಪೂರ್ವಜರ ಮೂಲಸಂಪ್ರದಾಯ ಮತ್ತು ಧರ್ಮವನ್ನೇ ಮುಂದುವರೆಸಿದರು.

ತರಾಹೀಯದ ಕಡೆ ಗಮನ

ತರಾಹೀಯ ಎಂಬುದು ಘಜ್ನಿ ಮತ್ತು ಪಂಜಾಬ್‌ನ ನಡುವಿನ ಪರ್ವತ ಪ್ರದೇಶದಲ್ಲಿದೆ. ಅದೇ ವರ್ಷದಲ್ಲಿ ಸುಲ್ತಾನ್ ಶಹಾಬುದ್ದೀನನು ಆ ಪ್ರದೇಶದ ಮೇಲೆ ಆಕ್ರಮಣ ಮಾಡಿದ. ಎಲ್ಲಿ ಬಾಹುಬಲ ಪ್ರದರ್ಶನದ ಅಗತ್ಯವಿತ್ತೋ ಅಲ್ಲಿ ಅವನು ಖಡ್ಗದಿಂದ ಮತ್ತು ಎಲ್ಲಿ ಪ್ರೀತಿ,ವಿಶ್ವಾಸ ಮತ್ತು ಮೃದುಮಾತುಗಳಿಂದ ಪ್ರಭಾವಿತಗೊಳಿಸಬಹುದೋಅಲ್ಲಿ ಅವನು ತನ್ನ ನಯ ವಿನಯದ ಮೂಲಕ ಜನತೆಯನ್ನು ಇಸ್ಲಾಮ್‌ನತ್ತ ಆಕರ್ಷಿಸಿದ. ಆ ಪ್ರದೇಶದ ಜನರು ಮತ್ತು ಖಕ್ಕರ್‌ಗಳು ಕೂಡಿದಂತೆ ಒಟ್ಟು ಸುಮಾರು ನಾಲ್ಕು ಲಕ್ಷ ಮುಸ್ಲಿಮೇತರರು ಇಸ್ಲಾಮನ್ನು ಸ್ವೀಕರಿಸಿದರು. ಮತ್ತು ಈ ಜನರು ಹಿಜರಿ ಶಕೆ ೧೦೧೮ರ ಈ ಕಾಲಘಟ್ಟದಲ್ಲೂ ಇಸ್ಲಾಮ್ ಮತಾವಲಂಬಿಗಳಾಗಿದ್ದಾರೆ ಅವರ ವಿಶ್ವಾಸವು ಅಚಲವಾಗಿದೆ ಮತ್ತು ಅವರು ಇಂದಿಗೂ ಪಕ್ಕಾ ಮುಸ್ಲಿಮರಾಗಿ ಉಳಿದಿದ್ದಾರೆ.

ಹಿಂದೂಸ್ಥಾನದ ಎಲ್ಲಾ ಗಲಭೆಗಳನ್ನು ಅಡಗಿಸಿದ ನಂತರ ಹಿಜರಿ ಶಕೆ ೬೦೨ರ ರಜಬ್ ತಿಂಗಳ ೧೨ರಂದು ಸುಲ್ತಾನ್ ಶಹಾಬುದ್ದೀನನು ಲಾಹೋರ್‌ನಿಂದ ಘಜ್ನಿಯತ್ತ ಪ್ರಯಾಣ ಬೆಳೆಸಿದ. ಅವನು ಹೊರಡುವ ವೇಳೆಗೆ ಬಾಮಿಯಾನ್‌ನ ಸಾಮಂತ ರಾಜನಾದ ಮಲಿಕ್ ಬಹಾವುದ್ದೀನನ ಹೆಸರಿಗೆ ಸುಲ್ತಾನನು ಬರೆದ ಒಂದು ಪತ್ರದ ಸಾರಾಂಶವೇನೆಂದರೆ, "ಈ ಸಾರಿ ತುರ್ಕಿಸ್ತಾನದ ಮುಸ್ಲಿಮೇತರ ಜನತೆಯ ಮೇಲೆ ನಾನು ಇಸ್ಲಾಮ್‌ನ ಸೇನೆಯೊಡನೆ ಆಕ್ರಮಣ ಮಾಡಬೇಕೆಂಬ ಇರಾದೆಯನ್ನು ಹೊಂದಿದ್ದೇನೆ. ಆದ್ದರಿಂದ ನೀನು ಕೂಡಲೇ ಬಾಮಿಯಾನ್‌ನ ಎಲ್ಲಾ ಸೇನೆಯನ್ನು

ಜಮಾವಣೆ ಮಾಡಿ ಕೂಡಲೇ ಹೊರಡಬೇಕೆಂದು ಆಜ್ಞೆಯನ್ನು ನೀಡುತ್ತಿದ್ದೇನೆ ಮತ್ತು ಜೇಹೋನ್ ನದಿಯ ದಡದಲ್ಲಿ ಬಿಡಾರವನ್ನು ಹೂಡಿ ಇಸ್ಲಾಮಿ ಸೇನೆಯು ನಿರಾಯಸವಾಗಿ ನದಿಯನ್ನು ದಾಟಲು ನದಿಯ ಮೇಲೆ ಸೇತುವೆಯನ್ನು ನಿರ್ಮಿಸತಕ್ಕದ್ದು."

ಶಹಾಬುದ್ದೀನನ ಕೊಲೆ:

೬೦೨ ನೇ ಇಸವಿಯ ಶಾಬಾನ್ ತಿಂಗಳ ೨ ನೇ ತಾರೀಖಿನಂದು ಸುಲ್ತಾನ್‌ನನು ಸಿಂಧ್ ನದಿಯ ತೀರವನ್ನು ತಲುಪಿ ಅಲ್ಲಿ ಬರ್‌ಮಹೀಕ್ ಎಂಬ ಸ್ಥಳದಲ್ಲಿ ಬಿಡುಬಿಟ್ಟ, ಅಲ್ಲಿ ಬಿಡಾರ ಹಾಕಿದ ಮಾರನೇ ದಿನ ಸುಲ್ತಾನ ಶಹಾಬುದ್ದೀನನ ಕೊಲೆಯ ದುರಂತವು ಸಂಭವಿಸಿತು. ಆ ಘಟನೆಯ ವಿವರಗಳೇನೆಂದರೆ, ಖಕ್ಕರ್‌ಗಳ ಜನಾಂಗದ ೨೦ ಮಂದಿ ಸುಲ್ತಾನ್ ಶಹಾಬುದ್ದೀನನಿಂದ ತೀರಾ ಆತಂಕಕ್ಕೆ ಈಡಾಗಿದ್ದರು. ಏಕೆಂದರೆ, ಅವನು ಸದರಿ ಖಕ್ಕರ್‌ಗಳ ಆಪ್ತರ ಕೊಲೆಮಾಡಿದ್ದು ಮಾತ್ರವಲ್ಲದೆ ಸ್ವತಃ ಅವರನ್ನು ವಸತಿಹೀನರನ್ನಾಗಿ ಮಾಡಿದ್ದ.. ಆ ಇಪ್ಪತ್ತು ಮಂದಿ ಖಕ್ಕರ್‌ಗಳು ಪರಸ್ಪರ ಸಮಾಲೋಚನೆಯನ್ನು ಮಾಡಿಕೊಂಡು ಶಹಾಬುದ್ದೀನನನ್ನು ಕೊಲೆಮಾಡುವ ಯೋಜನೆಯನ್ನು ರೂಪಿಸಿದ್ದರು ಮತ್ತು ಆ ಉದ್ದೇಶದ ಸಲುವಾಗಿ ತಮ್ಮ ಪ್ರಾಣವನ್ನು ಒತ್ತೆ ಇಟ್ಟರು. ಅಂದು ಸುಲ್ತಾನ್ ಬರ್‌ಮಹೀಕ್‌ನ ತಾಣದಲ್ಲಿ ಬಿಡಾರ ಹೂಡಿದ ಅದರ ಮಾರನೆಯ ದಿನವೇ ಖಕ್ಕರ್‌ಗಳು ಉಪಾಯವಾಗಿ ಬಾದಶಾಹನ ಡೇರೆಯ ಬಳಿ ತಲುಪಿದರು. ಆ ಹೊತ್ತಿನಲ್ಲಿ ಬಾದಶಹನ ಸೇನೆಯು ಅಲ್ಲಿಂದ ಹೊರಡುವ ತಯಾರಿಯಲ್ಲಿತ್ತು ಮತ್ತು ಡೇರೆಯ ಪರದೆಗಳನ್ನು ತೆಗೆಯುತ್ತಿದ್ದರು. ಆ ಕೊಲೆಗಡುಕರು ಬಾದಶಹನ ಡೇರೆಯೊಳಗೆ ನುಗ್ಗಿ ಬಂದರು. ಅದು ಶಾಬಾನ್ ತಿಂಗಳ ಮೂರನೆಯ ತಾರೀಖಿನ ರಾತ್ರಿಯಾಗಿತ್ತು. ಒಬ್ಬ ಖಕ್ಕರ್‌ನು ಮುಂದೆ ಬಂದು ದ್ವಾರಪಾಲಕನ ಮೇಲೆ ಚಾಕುವಿನಿಂದ ಆಕ್ರಮಣಮಾಡಿದ ಮತ್ತು ಅಲ್ಲಿಂದ ಓಡಿದ. ಆ ದ್ವಾರಪಾಲಕನು ಗಾಯಗೊಂಡ ಕೂಡಲೇ ನಾಲ್ಕು ದಿಕ್ಕಿನಲ್ಲಿ ಗಲಭೆ ಮೂಡಿತು. ಬಾದಶಹನ ಖಾಸ ಸೇವಕರು ಕೂಡ ಆ ಡೇರೆಯನ್ನು ಬಿಟ್ಟು ಗಾಯಾಳು ದ್ವಾರಪಾಲಕನ ಹತ್ತಿರ ಓಡಿದರು. ಬಾದಶಹನ ಡೇರೆಯು ಖಾಲಿಯಾಗಿದೆ ಮತ್ತು ಎಲ್ಲಾ ಅಂಗರಕ್ಷಕರು ಕೂಡ ಬಾದಶಹನನ್ನು ಏಕಾಂಗಿಯಾಗಿ ಬಿಟ್ಟು ಗಾಯಾಳು ದ್ವಾರಪಾಲಕನ ಹತ್ತಿರ ಸುತ್ತುವರೆದಿದ್ದಾರೆ ಎಂಬ ಅಂಶವು ಖಕ್ಕರ್‌ಗಳಿಗೆ ಅರಿವಾದ ಕೂಡಲೇ ಅವರು ಆ ಡೇರೆಯನ್ನು ಹರಿದು ಚಾಕು ಮತ್ತು ಖಡ್ಗಗಳನ್ನು ಹಿಡಿದು ಬಾದಶಹನ ಶಯ್ಯಾಗೃಹದೊಳಗೆ ಪ್ರವೇಶಿಸಿದರು. ಆಗ ಒಂದಿಬ್ಬರು ತುರ್ಕಿ ಗುಲಾಮರು ಮಾತ್ರ ಬಾದಶಹನ ಜೊತೆಗಿದ್ದರು. ಆದರೆ ಅವರು ಅನಿರೀಕ್ಷಿತವಾಗಿ ಖಕ್ಕರ್‌ಗಳನ್ನು ನೋಡಿ ಸ್ತಂಭೀಭೂತರಾದರು. ಶಹಾಬುದ್ದೀನ ಕೂಡ ಏಳಲು ಪ್ರಯತ್ನಿಸುತ್ತಿರುವಷ್ಟರಲ್ಲಿ ಆ ದ್ರೋಹಿಗಳು ಅವನ ಮೇಲೆ ಆಕ್ರಮಣ ಮಾಡಿದರು ಮತ್ತು ಬಾಕುಗಳಿಂದ ಆತನ

ದೇಹದ ಮೇಲೆ ೨೨ ಆಳವಾದ ಗಾಯಗಳನ್ನು ಉಂಟುಮಾಡಿದರು ಮತ್ತು ಅಂತಹ ಅಮೋಘ ಮತ್ತು ಭವ್ಯ ಆಡಳಿತಗಾರನ ಅಂತ್ಯವನ್ನು ಕಾಣಿಸಿದರು.

ಸುಲ್ತಾನ್ ಶಹಾಬುದ್ದೀನನು ಘಜ್ನಿ ರಾಜ್ಯದ ಆರಂಭದಿಂದ ಹಿಡಿದು ಹುತಾತ್ಮನಾಗುವವರೆಗೂ ೩೫ ವರ್ಷಕ್ಕಿಂತಲೂ ತುಸು ಹೆಚ್ಚಿಗೆ ರಾಜ್ಯಭಾರವನ್ನು ಮಾಡಿದ. ಅವನ ಸಂತತಿಯಲ್ಲಿ ಒಬ್ಬ ಮಗಳು ಮಾತ್ರ ಅವನ ನೆನಪಿನ ಕುರುಹು ಆಗಿ ಉಳಿದಳು.

ಶಹಾಬುದ್ದೀನನ ಬಲಿದಾನದ ನಂತರ:

ಸುಲ್ತಾನ್ ಶಹಾಬುದ್ದೀನನ ಕೊಲೆಯ ನಂತರ ಮವೀದ್-ಉಲ್-ಮಲಿಕ್ ಬಿನ್-ಖಾಜಾ ಮೊಹಮ್ಮದ್ ಸಜಸ್ತಾನಿಯು ಕೆಲವು ವಿದ್ರೋಹಿ ಖಕ್ಕರ್‌ಗಳನ್ನು ಸೆರೆಹಿಡಿದ. ಮತ್ತು ಅವರ ಮಾರಣ ಹೋಮವನ್ನು ಮಾಡಿದ. ಸುಲ್ತಾನ್‌ನ ಖಜಾನೆಯನ್ನು ೪೦೦೦ ಒಂಟೆಗಳ ಮೇಲೆ ಹೇರಲಾಗಿತ್ತು. ಅವನ ಸೇನೆಯು ಆ ಖಜಾನೆಯನ್ನು ಲೂಟಿ ಮಾಡಲು ಉದ್ಯುಕ್ತವಾಗಿತ್ತು. ಆಗ ಮವೀದ್‌ಉಲ್ ಮಲಿಕ್‌ಖಾಜಾ ಮೊಹಮ್ಮದನು ಘೋರಿ ಸರದಾರರು ಮತ್ತು ಸೇನಾಪತಿಗಳೊಡನೆ ಸಮಾಲೋಚನೆಯನ್ನು ನಡೆಸಿ ಬಾದಶಹನ ಖಜಾನೆಯ ರಕ್ಷಣೆ ಮಾಡುವುದಾಗಿ ಅವರಿಂದ ಪ್ರಮಾಣ ಮಾಡಿಸಿದ. ನಂತರ ಸೈನಿಕರ ಮೇಲೆ ಬೆದರಿಕೆಯನ್ನು ಒಡ್ಡಿ ಅವರು ಆ ನಿರ್ಧಾರದಿಂದ ಹಿಂದೆಗೆಯುವಂತೆ ಮಾಡಿದ. ಖಜಾನೆಯ ರಕ್ಷಣೆಯ ಬಗ್ಗೆ ಖಾತರಿಯಾದ ನಂತರ ಮಲಿಕ್ ಖಾಜಾ ಬಾದಶಹನ ಶವವನ್ನು ತುಂಬಾ ಗೌರವಾದರಗಳಿಂದ ತೆಗೆದುಕೊಂಡು ಘಜ್ನಿಯತ್ತ ಹೊರಟ. ಶಹಾಬುದ್ದೀನನ ಸರದಾರರು ಮತ್ತು ಸೇನಾಪತಿಗಳ ಪೈಕಿ ತದ್ವಿರುದ್ಧ ನಿಲುವನ್ನು ಹೊಂದಿದ್ದ ಎರಡು ಗುಂಪುಗಳು ಅಲ್ಲಿದ್ದವು. ಒಂದು ತುರ್ಕಿ ಸರದಾರರ ಗುಂಪಿತ್ತು ಮತ್ತು ಅದರ ಸರದಾರನಾಗಿ ಸ್ವತಃ ಮವೀದ್‌ಉಲ್‌ಮಲಕ್‌ಖಾಜಾ ಮೊಹಮ್ಮದ್ ಇದ್ದ. ಎಲ್ಲಾ ಘೋರಿ ಸರದಾರರ ತಂಡ ಎರಡನೆಯದಾಗಿತ್ತು. ಶಹಾಬುದ್ದೀನನ ಉತ್ತರಾಧಿಕಾರಿಯಾಗಿ ಗಯಾಸುದ್ದೀನ್ ಮೊಹಮ್ಮದ್ ಆಗಬೇಕೆಂಬುದು ತುರ್ಕಿ ತಂಡದ ಅಭಿಲಾಷೆಯಾಗಿತ್ತು. ಘೋರಿ ಸರದಾರರು ಬಹಾವುದ್ದೀನನಿಗೆ ಪಟ್ಟಾಭಿಷೇಕವನ್ನು ಮಾಡಬೇಕೆಂಬ ನಿಲುವನ್ನು ಹೊಂದಿದ್ದರು. ಮಾರ್ಗ ಮಧ್ಯದಲ್ಲಿ ಈ ಉಭಯ ತಂಡಗಳ ಅಭಿಪ್ರಾಯಭೇದವು ಸ್ಫೋಟವಾಯಿತು. ಬಾದಶಹನಿಲ್ಲದ ಆ ಸೇನೆಯು ಫರ್‌ಸಾವರ್‌ನ ಸುತ್ತಮುತ್ತಲಿನ ಪ್ರದೇಶವನ್ನು ತಲುಪಿದಾಗ ಸರದಾರರುಗಳ ಪರಸ್ಪರ ವಿರೋಧವು ತೀವ್ರ ಸ್ವರೂಪಕ್ಕೆ ಏರಿತು. (ಫರ್‌ಸಾವರರ್ ಎಂದರೆ ಪ್ರಖ್ಯಾತ ಪಟ್ಟಣವಾದ ಪೆಶಾವರ್ ಎಂದರ್ಥ.) ಮವೀದ್‌ಉಲ್ ಮಲಿಕ್‌ಖಾಜಾ ಮೊಹಮ್ಮದ್ ಮತ್ತು ಆತನ ತುರ್ಕಿ ತಂಡವು ಕರ್ಮಾನ್‌ನ ದಾರಿಯಿಂದ ಪ್ರಯಾಣ ಮುಂದುವರೆಸಬೇಕೆಂಬ ಅಭಿಪ್ರಾಯವನ್ನು ಹೊಂದಿತ್ತು ಹಾಗೆ ಸಾಗಿ ಹೋಗುವಾಗ ಖರ್ಮಾನ್‌ನ ಬಾದಶಹನಾದ ತಾಜುದ್ದೀನ್

ಇಲ್ದಗಜ್‌ನನ್ನು ತಮ್ಮ ಅಭಿಪ್ರಾಯಕ್ಕೆ ಬೆಂಬಲ ನೀಡುವಂತೆ ಆತನ ಮೇಲೆ ಪ್ರಭಾವ ಬೀರುವುದು ಅವರ ಉದ್ದೇಶವಾಗಿತ್ತು. ಘೋರಿ ಸರದಾರರು ಇದಕ್ಕೆ ವಿರುದ್ಧವಾಗಿದ್ದರು. ಅವರು ಬಾಮಿಯಾನ್‌ಗೆ ಸಮೀಪವಿದ್ದ ರಸ್ತೆಯ ಮೂಲಕ ಹಾದುಹೋಗಬೇಕೆಂದು ನಿಶ್ಚಯಿಸಿದ್ದರು ಮತ್ತು ಹಾಗೆ ಹೋಗಬೇಕಾದಲ್ಲಿ ಬಾಮಿಯಾನ್ ತಲುಪಿ ಬಹಾವುದ್ದೀನಗೆ ರಾಜ್ಯದ ಖಜಾನೆಯನ್ನು ಒಪ್ಪಿಸಿ ಅವನನ್ನು ರಾಜ್ಯದ ವಾರೀಸುದಾರನನ್ನಾಗಿ ಮಾಡಬೇಕು ಎಂಬುದಾಗಿತ್ತು. ಈ ಭಿನ್ನಾಭಿಪ್ರಾಯವು ಎಷ್ಟರಮಟ್ಟಿಗೆ ತೀವ್ರವಾಗಿತ್ತೆಂದರೆ ಒಬ್ಬರ ವಿರುದ್ಧ ಒಬ್ಬರು ಕತ್ತಿ ಹಿರಿಯಲು ಉದ್ಯುಕ್ತರಾದರು. ಆ ಸಂದರ್ಭದಲ್ಲಿ ಮವೀದ್‌ಉಲ್‌ಮುಲ್ಕ್‌ಖ್ವಾಜ ಮೊಹಮ್ಮದನು ಅತ್ಯಂತ ವಿವೇಚನೆಯಿಂದ ವರ್ತಿಸಿದ. ಆತನು ಘೋರಿ ಸರದಾರರ ಬಳಿ ಹೋದ ಮತ್ತು ಅತ್ಯಂತ ಮೃದುಮಾತಿನಲ್ಲಿ ಅವರನ್ನು ಪ್ರಭಾವಿತಗೊಳಿಸಿ ಆ ಸಂದರ್ಭಕ್ಕೆ ತಕ್ಕಂತೆ ಶೇರ್ವಾನ್ ಮತ್ತು ಖರ್ಮಾನ್‌ನ ರಸ್ತೆಯಲ್ಲಿ ಪ್ರಯಾಣ ಮುಂದುವರೆಸುವುದು ಸೂಕ್ತ ಎಂದು ಮನವರಿಕೆ ಮಾಡಿಕೊಟ್ಟ. ಘೋರಿ ಸರದಾರರು ಮವೀದ್‌ಉಲ್‌ಮುಲ್ಕ್‌ಖ್ವಾಜ ಮೊಹಮ್ಮದನ ಮಾತನ್ನು ಒಪ್ಪಿದರು. ಹೀಗೆ ಸುಲ್ತಾನಿ ಸೇನೆಯು ಶಹಾಬುದ್ದೀನನ ಶವವನ್ನು ಹೊತ್ತು ಕರ್ಮಾನ್‌ನತ್ತ ಪ್ರಯಾಣ ಬೆಳೆಸಿತು.

ಆ ಸೇನೆಯು ಕರ್ಮಾನ್‌ನ ಸಮೀಪ ತಲುಪಿದಾಗ ತಾಜುದ್ದೀನ್ ಇಲ್ದಗಜ್‌ನು (ಅಂದರೆ ಯಲ್ಡೋಸ್) ಸುಲ್ತಾನಿ ಸವಾರಿಯ ಸ್ವಾಗತಗೋಸ್ಕರ ನಗರದಿಂದ ಹೊರ ಬಂದ. ಸವಾರಿಯ ಮೇಲೆ ಅತನ ದೃಷ್ಟಿಯು ಬಿದ್ದೊಡನೆಯೇ ತನ್ನ ಒಡೆಯನಿಗೆ ಅಂತಿಮ ನಮನ ಸಲ್ಲಿಸಲು ತನ್ನ ಕತ್ತನ್ನು ಬಗ್ಗಿಸಿದ. ತನ್ನ ಒಡೆಯನ ಅಂತಿಮ ದರ್ಶನಕ್ಕೋಸ್ಕರ ಆ ಗುಲಾಮನು ತೀವ್ರ ದುಃಖಾರ್ತನಾಗಿ ಆ ಶವವಾಹಕದ ಪರದೆಯನ್ನು ಎತ್ತಿದಾಗ ಅಲ್ಲಿ ಅವನ ಒಡೆಯನ ಜೀವಂತ ಚೆಹರೆಯ ಬದಲಾಗಿ ರಕ್ತಸಿಕ್ತ ಶವದ ದರ್ಶನವಾಯಿತು. ಬಾದಶಹನ ಶವವನ್ನು ಕಂಡು ತಾಜುದ್ದೀನನು ತನ್ನ ಅಂಗಿಯನ್ನು ಹರಿದುಹಾಕಿದ ಮತ್ತು ಶೋಕದಿಂದ ರೋದಿಸತೊಡಗಿದ. ಆ ಸಂತಾಪ ಸಭೆಯ ಶೋಕದ ನೋವಿನ ಕ್ಷಣಗಳನ್ನು ದಾಟಿ ಸುಲ್ತಾನಿ ಸೇನೆಯು ಮುಂದುವರೆಯಿತು ಮತ್ತು ಶಾಬಾನ್ ತಿಂಗಳ ೨೨ ನೆಯ ದಿನದಂದು ತಮ್ಮ ಒಡೆಯನ ಶವವನ್ನು ಹೊತ್ತು ಘಜ್ನಿಯನ್ನು ತಲುಪಿತು.

ತನ್ನ ಮಗಳಿಗಾಗಿ ಸುಲ್ತಾನ್ ಶಹಾಬುದ್ದೀನನು ನಿರ್ಮಾಣ ಮಾಡಿದ್ದ ಕಟ್ಟಡದಲ್ಲಿ ಆತನನ್ನು ದಫನ್ ಮಾಡಲಾಯಿತು. ಇತಿಹಾಸಕಾರರ ಪ್ರಕಾರ ಘಜ್ನಿಯ ಖಜಾನೆಯು ಅಪಾರ ಹಣ ಮತ್ತು ಚಿನ್ನದ ನಾಣ್ಯಗಳಿಂದ ತುಂಬಿತ್ತು. ಅನೇಕ ಅಮೂಲ್ಯ ಮುತ್ತು ರತ್ನಗಳಲ್ಲದೆ ಖಜಾನೆಯಲ್ಲಿ ೫೦೦ ಮಣ ವಜ್ರಗಳು ಕೂಡ ಇದ್ದವು. ಶಹಾಬುದ್ದೀನನು ಹಿಂದೂಸ್ಥಾನದ ಮೇಲೆ ಮೂರು ಸಾರಿ ಯುದ್ಧ ಮಾಡಿದ್ದ. ಎರಡು ಸಾರಿ ಆತನಿಗೆ ಸೋಲು ಉಂಟಾಗಿತ್ತು ಆದರೆ ಮೂರನೆಯ ಸಾರಿಗೆ ಅವನು ತನ್ನ ಶತ್ರುಗಳನ್ನು ನಾಶ ಮಾಡಿದ್ದ.

ಸುಲ್ತಾನ್ ಶಹಾಬುದ್ದೀನ್ ಒಬ್ಬ ದೈವಭಕ್ತ, ಕರುಣಾಳು ಮತ್ತು ನ್ಯಾಯಪರತೆಯನ್ನು ಹೊಂದಿದ ಬಾದಶಹನಾಗಿದ್ದ. ಆತ ಒಬ್ಬ ಸ್ವತಂತ್ರ ರಾಜನಾಗಿದ್ದಾಗ್ಯೂ ವಿದ್ವಾಂಸರ ಸೂಫಿ ಸಂತರ ಸಂಗದಲ್ಲಿ ಇರುವುದು ತನ್ನ ಸೌಭಾಗ್ಯವೆಂದು ತಿಳಿದಿದ್ದ ಹಾಗೂ ಅವರನ್ನು ಗೌರವಿಸಿ ಅವರಿಗೆ ಸೇವೆ ಸಲ್ಲಿಸುವುದು ತನ್ನ ಕರ್ತವ್ಯವೆಂದು ಪರಿಭಾವಿಸಿದ್ದ.

ಸುಲ್ತಾನ್ ಖುತ್ಬುದ್ದೀನ್ ಐಬಕ್

ಸುಲ್ತಾನ್ ಖುತ್ಬುದ್ದೀನನ ವ್ಯಕ್ತಿತ್ವದಲ್ಲಿ ಅನೇಕ ವೈಶಿಷ್ಟ್ಯಗಳು ಹಾಗೂ ಸಕಾರಾತ್ಮಕ ಅಂಶಗಳು ಇದ್ದವು. ಆರಂಭದಿಂದಲೇ ಅವನ ಮನಃಸ್ಥಿತಿಯು ರಾಜ್ಯಾಡಳಿತ ಮತ್ತು ಪ್ರಭುತ್ವದ ನಿರ್ವಹಣೆಗೆ ಸೂಕ್ತವಾಗಿತ್ತು. ಆ ಬಾದಶಹನಿಗೆ ರಾಜಕಾರಣದ ನಿಯಮಗಳು ಮತ್ತು ಆಡಳಿತಾತ್ಮಕ ವಿವೇಕದ ಅರಿವಿತ್ತು. ಯುದ್ಧ ಮಾಡುವುದರಲ್ಲಿ ಮತ್ತು ಶತ್ರು ಸಂಹಾರ ಮಾಡುವುದರಲ್ಲಿ ಅವನಿಗೆ ವಿಶೇಷ ಪರಿಣಿತಿಯಿತ್ತು. ಖುತ್ಬುದ್ದೀನನ ಹಿನ್ನೆಲೆಯನ್ನು ಕೆಳ ಕಂಡಂತೆ ಹೇಳ ಬಹುದಾಗಿದೆ.

ಸುಲ್ತಾನ್ ಖುತ್ಬುದ್ದೀನ್ ಐಬಕ್‌ನ ಆರಂಭದ ದಿನಗಳು

ಆತನನ್ನು ಬಾಲ್ಯದಲ್ಲಿ ಒಬ್ಬ ವ್ಯಾಪಾರಿಯು ತರನ್‌ನಿಂದ ನಿಶಾಪುರಕ್ಕೆ ತಂದು ಆ ಹೊತ್ತಿನ ಖಾಜಿಯಾಗಿದ್ದ ಫಕ್ರುದ್ದೀನ್ ಬಿನ್ ಖುತ್ಬುದ್ದೀನನಿಗೆ (ಸದರಿಯವರು ಇಮಾಮ್ ಅಬು ಹನೀಫ್‌ರವರ ಸಂತತಿಗೆ ಸೇರಿದವರು) ಮಾರಾಟ ಮಾಡಿದ. ಖುತ್ಬುದ್ದೀನನು ಉನ್ನತಿಯನ್ನು ಹೊಂದಬೇಕೆಂದು ದೇವರ ಇಚ್ಛೆಯಾಗಿತ್ತು. ಆದ್ದರಿಂದ ಬಾಲ್ಯದಿಂದಲೇ ಅವನ ಮೋರೆಯ ಮೇಲೆ ಘನತೆ ಮತ್ತು ಗಾಂಭಿರ್ಯದ ಲಕ್ಷಣಗಳು ಕಂಡುಬಂದಿದ್ದವು ಖಾಜಿ ಫಕ್ರುದ್ದೀನ್ ಅವನನ್ನು ಬಹಳ ಆಪ್ತನನ್ನಾಗಿ ಪರಿಗಣಿಸಿದ್ದರು ಹಾಗೂ ಜೀವನಪರ್ಯಂತ ಅವರು ಅವನನ್ನು ತಮ್ಮಿಂದ ದೂರ ಮಾಡಲಿಲ್ಲ ಮತ್ತು ತಮ್ಮ ಮಗನಂತೆ ಅವನ ಪಾಲನೆ ಪೋಷಣೆಯನ್ನು ಮಾಡಿದರು.

ಖಾಜಿ ಸಾಹೇಬರ ನಂತರ ಅವರ ಮಗನು ಖುತ್ಬುದ್ದೀನನನ್ನು ಒಬ್ಬ ವ್ಯಾಪಾರಿಗೆ ಮಾರಾಟ ಮಾಡಿದ. ಆ ವ್ಯಾಪಾರಿಯು ಖುತ್ಬುದ್ದೀನನನ್ನು ಉಡುಗೊರೆಯ ರೂಪದಲ್ಲಿ ಸುಲ್ತಾನ್ ಶಹಾಬುದ್ದೀನ್ ಘೋರಿಯ ಸೇವೆಯಲ್ಲಿ ಹಾಜರು ಪಡಿಸಿದ. ಸುಲ್ತಾನನು ಖುತ್ಬುದ್ದೀನನ ಮಾರಾಟದ ಪ್ರತಿಫಲವೆಂದು ಅತ್ಯಂತ ದೊಡ್ಡ ಮೊತ್ತವನ್ನು ಆ ವ್ಯಾಪಾರಿಗೆ ನೀಡಿದ. ಖುತ್ಬುದ್ದೀನನ ಒಂದು ಹಸ್ತದ ಕಿರು ಬೆರಳು ಮುರಿದು ಹೋಗಿದ್ದರಿಂದ ಬಾದಶಹ ಮತ್ತು ಅವನ ಆಸ್ಥಾನಿಕರು ಅವನನ್ನು ಐಬಕ್ ಎಂದು ಕರೆಯಲಾರಂಭಿಸಿದರು ಕ್ರಮೇಣ ಆ ಶಬ್ದವು ಅವನ ಹೆಸರಿನ ಅವಿಭಾಜ್ಯ ಅಂಗವಾಗಿ ಪರಿಣಮಿಸಿತು. ಖುತ್ಬುದ್ದೀನನು ತುಂಬಾ ಗೌರವ ಮತ್ತು ಪ್ರೀತಿಯಿಂದ ಶಹಾಬುದ್ದೀನ ಘೋರಿಗೆ ಸೇವೆಯನ್ನು ಸಲ್ಲಿಸಿದ. ಇದರ ಪರಿಣಾಮವಾಗಿ ಅತ್ಯಂತ ಕಡಿಮೆ ಅವಧಿಯಲ್ಲಿ ಖುತ್ಬುದ್ದೀನನು ಬಾದಶಹನ ಮನಸ್ಸಿನಲ್ಲಿ ವಿಶೇಷ ಸ್ಥಾನವನ್ನು ಪಡೆದ.

ಖುತ್ಬುದ್ದೀನನ ದಾನಶೂರತ್ವ:

ಸುಲ್ತಾನ್ ಶಹಾಬುದ್ದೀನನು ಒಂದು ಇರುಳಿನಲ್ಲಿ ಸಂತೋಷಕೂಟವನ್ನು ಏರ್ಪಡಿಸಿದ. ಆ ಸಂತೋಷಕೂಟದಲ್ಲಿ ಸುಲ್ತಾನನ ಅತ್ಯಂತ ಆಪ್ತ ಮತ್ತು ವಿಶೇಷ ದರಬಾರಿಗಳು ಭಾಗವಹಿಸಿದ್ದರು. ಬಾದಶಹನು ಅವರೆಲ್ಲರಿಗೂ ಬಿರುದು ಬಾವಲಿ ಮತ್ತು ಉಡುಗೊರೆಗಳನ್ನು ನೀಡಿ ಗೌರವಿಸಿದ. ಎಲ್ಲರಿಗಿಂತಲೂ ಹೆಚ್ಚು ಅನರ್ಘ್ಯ ಮತ್ತು ಉತ್ತಮ ಇನಾಮು ಖುತ್ಬುದ್ದೀನನಿಗೆ ದೊರಕಿತು. ಆ ಸಂತೋಷಕೂಟವು ಮುಕ್ತಾಯವಾದ ನಂತರ ಖುತ್ಬುದ್ದೀನನು ತನ್ನ ಪಾಲಿನ ರಾಜಾತಿಥ್ಯದ ಉಡುಗೊರೆಗಳನ್ನು ಬಡವರು ಮತ್ತು ಸೇವಕರಿಗೆ ನೀಡಿದ. ಅವನ ಈ ಉದಾರ ಕೃತ್ಯದಿಂದ ಶಹಾಬುದ್ದೀನನು ಸಂತುಷ್ಟನಾದ ಮತ್ತು ಅವನು ಖುತ್ಬುದ್ದೀನನನ್ನು ತನ್ನ ದರಬಾರಿನ ಸರದಾರನನ್ನಾಗಿ ನಿಯುಕ್ತಿಗೊಳಿಸಿದನಲ್ಲದೆ ರಾಜನ ಸಿಂಹಾಸನದ ಎದುರಿಗೆ ಅವನ ಪೀಠವನ್ನು ಏರ್ಪಡಿಸಿದ.

ಖುತ್ಬುದ್ದೀನನ ಅದೃಷ್ಟದ ಚಕ್ರವು ದಿನೇ ದಿನೇ ಏರುತ್ತಲೇ ಹೋಯಿತು. ಕೆಲವೇ ದಿನಗಳಲ್ಲಿ ಅವನಿಗೆ ಅಶ್ವಾರೋಹಿ ಸವಾರರ ಸರದಾರ ಎಂಬ ಬಿರುದು ಪ್ರಾಪ್ತವಾಯಿತು. ಘೋರಿ, ಘಜ್ನಿ ಮತ್ತು ಬಾಮಿಯಾನ್‌ನ ಬಾದಶಹರು ಒಟ್ಟಾಗಿ ಐಕ್ಯತೆಯಿಂದ ಕೂಡಿ ಖವಾರ್‌ಜಮ್‌ನ ಮೇಲೆ ಆಕ್ರಮಣ ಮಾಡಿದ್ದ ಆ ಯುದ್ಧದಲ್ಲಿ ಖುತ್ಬುದ್ದೀನ್ ಕೂಡ ಬಾದಶಹನೊಡನೆ ಕೂಡಿ ಮೇಲ್ಕಂಡ ಯುದ್ಧದಲ್ಲಿ ಭಾಗಿಯಾಗಿದ್ದ.

ಖುತ್ಬುದ್ದೀನನ ತಾತ್ಕಾಲಿಕ ಬಂಧನ:

ಖುತ್ಬುದ್ದೀನನು ತನ್ನ ಕುದುರೆಗೆ ಹುಲ್ಲನ್ನು ಅರಸುತ್ತಾ ಪ್ರತಿದಿನ ಕಾಡಿಗೆ ಹೋಗುವ ಅಭ್ಯಾಸವನ್ನು ಹೊಂದಿದ್ದ. ಒಂದು ದಿನ ಕಾಡಿನಲ್ಲಿ ಅವನು ಮರೋ ನದಿಯ ತೀರದಲ್ಲಿ ಸುಲ್ತಾನ್ ಶಾಹನ ಸೇನೆಗೆ ಎದುರಾದ. ಅವರಿಬ್ಬರ ನಡುವೆ ಕದನ ಏರ್ಪಟ್ಟಿತು. ಖುತ್ಬುದ್ದೀನನು ಅಪ್ರತಿಮ ಧೈರ್ಯದಿಂದ ಹೋರಾಡಿದ. ಆದರೆ ಅವನ ಸೇನೆಯ ಸಂಖ್ಯಾಬಲವು ಕಡಿಮೆ ಇದ್ದದ್ದರಿಂದ ಅವನು ವಿಜಯಿಯಾಗಲಿಲ್ಲ ಮತ್ತು ಅವನು ಸುಲ್ತಾನ್ ಶಾಹನಿಂದ ಬಂಧನಕ್ಕೊಳಗಾದ. ಖವಾರಿಜಮ್‌ನ ಸೈನ್ಯವು ಖುತ್ಬುದ್ದೀನ್‌ನನ್ನು ಸುಲ್ತಾನ್ ಶಾಹನ ಸಮ್ಮುಖದಲ್ಲಿ ಹಾಜರು ಪಡಿಸಿತು. ಸುಲ್ತಾನ್ ಶಾಹನ ಆಜ್ಞೆಯ ಮೇರೆಗೆ ಖುತ್ಬುದ್ದೀನ್‌ನನ್ನು ಒಂದು ಲೋಹದ ಪಂಜರದಲ್ಲಿ ಬಂಧಿಸಿದರು. ಘೋರಿ ಮತ್ತು ಖವಾರಿಜಮ್‌ನ ಸೈನ್ಯಗಳ ನಡುವೆ ವಿಧ್ಯುಕ್ತವಾಗಿ ಯುದ್ಧವಾದ ನಂತರ ಸುಲ್ತಾನ್ ಶಾಹ ಸೋತು ಪರಾರಿಯಾದ. ಆಗ ಘಜ್ನಿಯ ಸೈನಿಕರು ಖುತ್ಬುದ್ದೀನ್‌ನನ್ನು ಪಂಜರದ ಬಂಧನದಲ್ಲಿ ಇರುವಂತೆಯೇ ಆ ಪಂಜರವನ್ನು ಒಂಟೆಯ ಮೇಲೆ ಹೊರಿಸಿಕೊಂಡು ಶಹಾಬುದ್ದೀನನ ಸಮ್ಮುಖದಲ್ಲಿ ಹಾಜರಿಸಿದರು. ಖುತ್ಬುದ್ದೀನನನ್ನು ಆ ಕೂಡಲೇ "ಬುಲ್ ಬುಲ್ ನಂತಹ ಸೆರೆಮನೆಯಿಂದ"

ಸ್ವತಂತ್ರನನ್ನಾಗಿ ಮಾಡಿದ ಸುಲ್ತಾನನು ಅವನ ಕೊರಳಿನಲ್ಲಿ ಮುತ್ತುಗಳ ಹಾರವನ್ನು ಹಾಕಿ ಸನ್ಮಾನಿಸಿದನು.

ಹಿಂದೂಸ್ಥಾನದಲ್ಲಿ ಸೇನಾಪತಿಯಾಗಿ ಖುತ್ಬುದ್ದೀನ್‌ನ ನೇಮಕ:

ಹಿಜರಿ ಶಕೆ ೫೮೮ರ ಸುಲ್ತಾನ್ ಶಹಾಬುದ್ದೀನನು ದೆಹಲಿ ಮತ್ತು ಅಜ್ಮೀರ್‌ನ ರಾಜರನ್ನು ಸೋಲಿಸಿ ಕೊಹರಾಮ್ ಮತ್ತು ಸಮಾನವನ್ನು ಖುತ್ಬುದ್ದೀನನಿಗೆ ಜಹಗೀರಿನ ರೂಪದಲ್ಲಿ ನೀಡಿದ ಮತ್ತು ಅವನನ್ನು ಹಿಂದೂಸ್ಥಾನದ ಸೇನಾಪತಿಯಾಗಿ ನೇಮಕ ಮಾಡಿದ. ಖುತ್ಬುದ್ದೀನನು ಆ ಮಹತ್ವದ ಹುದ್ದೆಯ ಹೊಣೆಗಾರಿಕೆಯನ್ನು ಸಂಪೂರ್ಣ ಗಮನವಿಟ್ಟು ನಿಭಾಯಿಸಿದ. ಕೊಹರಾಮ್ ಮತ್ತು ಸಮಾನಾದ ಸುತ್ತ ಮುತ್ತಲಿನ ಎಲ್ಲಾ ಪ್ರದೇಶಗಳು ಮತ್ತು ಮೀರತ್‌ನ ಕೋಟೆಯನ್ನು ತನ್ನ ವಶಕ್ಕೆ ಪಡೆದುಕೊಂಡ ನಂತರ ಖುತ್ಬುದ್ದೀನನು ದೆಹಲಿಯ ಮೇಲೆ ಆಕ್ರಮಣ ಮಾಡಿದ ಹಾಗೂ ಆ ನಗರಕ್ಕೆ ಮುತ್ತಿಗೆ ಹಾಕಿದ. ಯುದ್ಧದಲ್ಲಿ ಹಿಂದೂ ರಜಪೂತರು ಉಗ್ರ ಹೋರಾಟವನ್ನು ಮಾಡಿದರು. ಉಭಯತ್ರರ ನಡುವೆ ಘನ ಘೋರ ಯುದ್ಧ ನಡೆಯಿತು. ಅದರ ಪರಿಣಾಮವಾಗಿ ಹಿಂದೂಗಳಿಗೆ ಸೋಲುಂಟಾಯಿತು ಮತ್ತು ಆ ಕೋಟೆಗಳು ಮುಚ್ಚಲ್ಪಟ್ಟವು. ಖುತ್ಬುದ್ದೀನನು ಕೋಟೆಗೆ ಮುತ್ತಿಗೆ ಹಾಕಿದ ಹಾಗೂ ವೇಳೆ ಸರಿದಂತೆ ಅವನು ಮುತ್ತಿಗೆಯ ತೀವ್ರತೆಯನ್ನು ಹೆಚ್ಚಿಸುತ್ತಾ ಹೋದ. ಹಿಂದೂಗಳು ಈ ದುರವಸ್ಥೆಯನ್ನು ಕಂಡು ಮತ್ತು ಅಪಾರ ಕಷ್ಟ-ನಷ್ಟಗಳನ್ನು ತಡೆಯಲಾರದೆ ಖುತ್ಬುದ್ದೀನನಿಗೆ ಶರಣಾಗತರಾದರು ಮತ್ತು ಕೋಟೆಯನ್ನು ಅವನ ವಶಕ್ಕೆ ಬಿಟ್ಟುಕೊಟ್ಟರು.

ರಾಜ ಜೀತವಾನನ ಸೋಲು:

ಹಿಜರಿ ಶಕೆ ೫೮೯ರ ನೆಹರ್‌ವಾಲದ ರಾಜನ ಅಪ್ತನಾದ ಜೀತವಾನ ಎಂಬ ಹೆಸರಿನ ಒಬ್ಬ ರಜಪೂತ ಸರದಾರನಿದ್ದ. ಅವನು ಹಾಂಸಿಯ ಮೇಲೆ ಆಕ್ರಮಣ ಮಾಡಿದ ಹಾಗೂ ಅವನು ಕೋಟೆಯ ಕೆಳಭಾಗವನ್ನು ತಲುಪಿ ಗುಡಾರವನ್ನು ಹಾಕಿದ. ಹಾಂಸಿಯ ಮುಸ್ಲಿಮ್ ಸುಬೇದಾರನಾದ ನುಸ್ರತ್‌ಉದ್ದೀನ್ ಜೀತವಾನನನ್ನು ಎದುರಿಸಲು ಅಸಮರ್ಥನಾದ ಮತ್ತು ಕೋಟೆಯು ಮುಚ್ಚಲ್ಪಟ್ಟಿತು. ಈ ವಿವರಗಳು ಖುತ್ಬುದ್ದೀನನಿಗೆ ತಲುಪಿದ ಕೂಡಲೇ ಅವನು ಹಾಂಸಿಗೆ ತೆರಳಿದ ಮತ್ತು ಕೋಟೆಯ ಕೆಳಗೆ ತಲುಪಿ ಅವನು ರಾಜ ಜೀತವಾನನನ್ನು ಸೋಲಿಸಿದ. ಆ ರಾಜನು ಯುದ್ಧ ಭೂಮಿಯಿಂದ ಪರಾರಿಯಾದ ಮತ್ತು ನೆಹರ್‌ವಾಲದಲ್ಲಿ ಶರಣಾಗತನಾದ.

ಹಿಜರಿ ಶಕೆ ೫೯೦ರ ಖುತ್ಬುದ್ದೀನನು ನದಿಯನ್ನು ದಾಟಿ ಕೋಲ್‌ನ ಮೇಲೆ ವಿಜಯವನ್ನು ಸಾಧಿಸಿದ. ಇಲ್ಲಿ ಅವನಿಗೆ ಅಪಾರವಾದ ಯುದ್ಧ ಸಂಪತ್ತು ಮತ್ತು ಒಂದು ಸಾವಿರ ಕುದುರೆಗಳು ದೊರಕಿದವು. ಅವುಗಳನ್ನು ಪಡೆದುಕೊಂಡು ಮರಳಿ

ಹೋಗುವ ಸಿದ್ಧತೆಯಲ್ಲಿ ತೊಡಗಿದಾಗ ಸುಲ್ತಾನ್ ಶಹಾಬುದ್ದೀನ್ ಘಜ್ನಿಯು ಬನಾರಸ್ ಮತ್ತು ಕನೋಜ್‌ನ ಮೇಲೆ ಯುದ್ಧ ಸಾರುವ ಸಲುವಾಗಿ ಹಿಂದೂಸ್ಥಾನದತ್ತ ಆಗಮಿಸುತ್ತಿದ್ದಾನೆ ಎಂಬ ವರ್ತಮಾನ ಸಿಕ್ಕಿತು. ಖುತ್ಬುದ್ದೀನ್ ತನ್ನ ಒಡೆಯನನ್ನು ಸ್ವಾಗತಿಸಿ ಅವನ ಸೇವೆಯಲ್ಲಿ ಒಂದು ನೂರು ಅರಬಿ ಕುದುರೆಗಳು, ಆನೆಗಳ ಒಂದು ತುಕಡಿ ಮತ್ತು ಆನೆಗಳನ್ನು ಬಂಧಿಸುವ ಒಂದು ಸರಪಣಿ ಹಾಗೂ ಐವತ್ತು ಸಾವಿರ ಸವಾರರನ್ನು ಯುದ್ಧದ ಸಲುವಾಗಿ ಉಡುಗೊರೆಯನ್ನಾಗಿ ಅರ್ಪಿಸಿದ. ಸುಲ್ತಾನ್ ಶಹಾಬುದ್ದೀನನು ಈ ಉಡುಗೊರೆಗಳಿಂದ ಸಂತುಷ್ಟನಾದ ಮತ್ತು ಖುತ್ಬುದ್ದೀನನಿಗೆ ಅನೇಕ ಖಿಲ್ಲತ್ತುಗಳನ್ನು ದಯಪಾಲಿಸಿದ ಮತ್ತು ಸೇನೆಯ ಮುಖ್ಯಸ್ಥನನ್ನಾಗಿ ಅವನನ್ನು ನೇಮಕ ಮಾಡಿದ. ಖುತ್ಬುದ್ದೀನನು ಬಾದಶಹನ ಸೇನೆಯ ಮುಂಚೂಣಿಯಲ್ಲಿ ನಡೆದ ಮತ್ತು ಶಹಾಬುದ್ದೀನ ಕೂಡ ತನ್ನ ಸೇನೆಯೊಂದಿಗೆ ಅವನ ಹಿಂದೆ ಪ್ರಯಾಣ ಬೆಳೆಸಿದ.

ಬನಾರಸ್‌ನ ರಾಜನೊಂದಿಗೆ ಯುದ್ಧ:

ಖುತ್ಬುದ್ದೀನನಗೆ ಅನತಿ ದೂರದಲ್ಲಿಯೇ ಬನಾರಸ್‌ನ ರಾಜನಾದ ಜಯಚಂದ್ರನ ಸೇನೆಯೊಂದಿಗೆ ಮುಖಾಮುಖಿಯಾಯಿತು ಖುತ್ಬುದ್ದೀನನು ಜಯಚಂದ್ರನ ಸೈನ್ಯವನ್ನು ಸೋಲಿಸಿ ಅವರನ್ನು ಯುದ್ಧ ರಂಗದಿಂದ ಓಡಿಸಿದ. ತನ್ನ ಸೈನ್ಯದ ಸೋಲಿನ ಸುದ್ದಿಯನ್ನು ಕೇಳಿದ ಜಯಚಂದ್ರನು ಸ್ವತಃ ಯುದ್ಧದಲ್ಲಿ ಭಾಗಿಯಾದ ಮತ್ತು ಖುತ್ಬುದ್ದೀನನೊಂದಿಗೆ ಯುದ್ಧ ಮಾಡಲಾರಂಭಿಸಿದ. ಮುಸ್ಲಿಮ್ ಸೈನಿಕರು ತಮ್ಮ ಶತ್ರುಗಳ ಸೇನೆಗಳ ಮೇಲೆ ಬಾಣದ ಮಳೆ ಕರೆದರು. ಒಂದು ಬಾಣವು ಜಯಚಂದ್ರನ ಕಣ್ಣಿಗೆ ನಾಟಿತು ಆ ಬಾಣವು ಎಷ್ಟೊಂದು ಮಾರಣಾಂತಿಕವಾಗಿತ್ತೆಂದರೆ, ಜಯಚಂದ್ರನು ತನ್ನ ಆನೆಯ ಬೆನ್ನಿನಿಂದ ಕೆಳಕ್ಕೆ ಜಿಗಿದ ಮತ್ತು ಅಲ್ಲಿಯೇ ಅಂತ್ಯ ಕಂಡ. ತಮ್ಮ ರಾಜನ ದಾರುಣ ಪರಿಸ್ಥಿತಿಯನ್ನು ಕಂಡ ಅವನ ಸೈನಿಕರು ಯುದ್ಧ ಭೂಮಿಯನ್ನು ತೊರೆದು ಪಲಾಯನ ಮಾಡಿದರು. ಹೀಗೆ ಖುತ್ಬುದ್ದೀನನು ವಿಜಯಿಯಾದ. ಜಯಚಂದ್ರನ ಪರಿಸ್ಥಿತಿಯ ಬಗ್ಗೆ ಯಾರಿಗೂ ಅರಿವಿರಲಿಲ್ಲ. ಅಷ್ಟೇ ಅಲ್ಲದೆ ಅವನ ಶವದ ಸುಳಿವು ಕೂಡ ಸಿಗಲಿಲ್ಲ ತುಂಬಾ ಹುಡುಕಾಟದ ನಂತರ ಅವನ ಶವವು ಪತ್ತೆಯಾಯಿತು. ವೃದ್ಧಾಪ್ಯದ ದೆಸೆಯಿಂದ ಅವನ ಹಲ್ಲುಗಳನ್ನು ಚಿನ್ನದ ಕೀಲು ಮತ್ತು ದಾರದಿಂದ ಬಿಗಿಗೊಳಿಸಿದ್ದರಿಂದ ಆ ಗುರುತಿನ ಮೇರೆಗೆ ಅವನ ಶವವನ್ನು ಗುರುತಿಸಲಾಯಿತು. ಖುತ್ಬುದ್ದೀನನ ಆ ಸಮರದಲ್ಲಿ ವಿಜಯಪತಾಕೆಯನ್ನು ಹಾರಿಸಿದ ನಂತರ ಶಹಾಬುದ್ದೀನನು ಕೂಡ ಆ ಸ್ಥಳವನ್ನು ತಲುಪಿದ. ಹಾಗೂ ಶತ್ರು ಸಂಹಾರವಾದದ್ದರಿಂದ ದೇವರಿಗೆ ವಂದನೆಗಳನ್ನು ಅರ್ಪಿಸಿ ತನ್ನ ಸೇನೆಯ ಸಮೇತ ಬನಾರಸ್‌ನೊಳಗೆ ಪ್ರವೇಶ ಮಾಡಿದ.

ಖುತ್ಬುದ್ದೀನನು ಬನಾರಸ್‌ನಿಂದ ಹಿಡಿದು ಬಂಗಾಳದ ಸರಹದ್ದಿನವರೆಗೆ ಎಲ್ಲಾ

ಪಟ್ಟಣಗಳ ವಿನಾಶಗೈದ ಮತ್ತು ಒಂದು ಸಾವಿರ ಮಂದಿರಗಳನ್ನು ಕೆಡವಿದ. ಶಹಾಬುದ್ದೀನನು ಬನಾರಸ್‌ನ ಆಡಳಿತವನ್ನು ಹುಸಾಮುದ್ದೀನನ ಜಗಲ್‌ಬಕ್ ವಶಕ್ಕೆ ನೀಡಿದ ಮತ್ತು ತಾನು ಸ್ವತಃ ಅತ್ಯಂತ ಅಮೂಲ್ಯವಾದ ಮತ್ತು ಉತ್ತಮ ದರ್ಜೆಯ ಮುತ್ತು ರತ್ನಗಳನ್ನು ತನ್ನೊಡನೆ ತೆಗೆದುಕೊಂಡು (ನಾಲ್ಕು ಸಾವಿರ ಒಂಟೆಗಳ ಮೇಲೆ ಹೇರಿಕೊಂಡು) ಘಜ್ನಿಗೆ ಮರಳಿ ಹೋದ.

ಬಿಳಿಯಾನೆ:

ಇತಿಹಾಸಕಾರರ ಪ್ರಕಾರ ಶಹಾಬುದ್ದೀನನು ಬನಾರಸ್‌ನಲ್ಲಿ ದರ್ಬಾರನ್ನು ಕರೆದಾಗ ಅವನಿಗೆ ಅಪಾರ ಸಂಖ್ಯೆಯ ಆನೆಗಳ ಉಡುಗೊರೆಗಳನ್ನು ನೀಡಲಾಯಿತು. ಬಾದಶಹನ ಸಮ್ಮುಖದಿಂದ ಹಾದುಹೋಗುತ್ತಿದ್ದ ಪ್ರತಿ ಆನೆಯು ಕೂಡ ಮಾವುತನ ಇಷಾರೆಯ ಮೇರೆಗೆ ಬಾದಶಹನಿಗೆ ಸಲಾಮ್ ಮಾಡುತ್ತಿತ್ತು. ಆ ಗುಂಪಿನಲ್ಲಿ ಒಂದು ಬಿಳಿಯಾನೆ ಕೂಡ ಇತ್ತು. ಬಾದಶಹನ ಎದುರಿನಿಂದ ಆ ಬಿಳಿ ಆನೆಯು ಹಾದು ಹೋಗುತ್ತಿದ್ದಾಗ ಮಾವುತ ಎಷ್ಟೇ ಸನ್ನೆಯನ್ನು ಮಾಡಿದರೂ ಕೂಡ ಆ ಬಿಳಿಯಾನೆಯು ಬಾದಶಹನಿಗೆ ಮುಜರೆಯನ್ನು ಸಲ್ಲಿಸಲಿಲ್ಲ. ಆ ಆನೆಯು ವಿಪರೀತ ಮೊಂಡಾಟವನ್ನು ಮಾಡಿತು. ಅಷ್ಟೇ ಅಲ್ಲದೆ ಆ ಕಿಡಿಗೇಡಿ ಆನೆಯು ಮಾವುತನ ಅಂಕೆಯನ್ನು ಮೀರಿತು ಹಾಗೂ ಮಾವುತನನ್ನು ಕೊಲ್ಲಲು ಪ್ರಯತ್ನ ಪಟ್ಟಿತು. ಆ ಪರಿಸ್ಥಿತಿಯನ್ನು ಗಮನಿಸಿದ ಶಹಾಬುದ್ದೀನನು ತನ್ನ ಸಮ್ಮುಖದಿಂದ ಆ ಆನೆಯನ್ನು ನಿರ್ಗಮಿಸುವಂತೆ ಸೂಚನೆ ನೀಡಿದ ಮತ್ತು ಬಾದಶಹನು ಅಲ್ಲಿಂದ ಘಜ್ನಿಯತ್ತ ತೆರಳುವಾಗ ಆ ಬಿಳಿಯಾನೆಯನ್ನು ತನಗಾಗಿ ಮೀಸಲಾಗಿಟ್ಟ ಮತ್ತು ಉಳಿದ ಎಲ್ಲಾ ಆನೆಗಳನ್ನು ಖುತ್ಬುದ್ದೀನನಿಗೆ ನೀಡಿದ. ಶಹಾಬುದ್ದೀನನು ಒಂದಿಷ್ಟು ದೂರ ಕ್ರಮಿಸಿದ ನಂತರ ಆ ಬಿಳಿಯಾನೆಯನ್ನು ಕೂಡ ಮಾವುತನೊಂದಿಗೆ ಖುತ್ಬುದ್ದೀನನ ಉಪಯೋಗಕ್ಕೆಂದು ಕಳಿಸಿಕೊಟ್ಟ. ಆ ಬಿಳಿಯಾನೆಯು ಖುತ್ಬುದ್ದೀನನ ಜೀವನ ಪರ್ಯಂತ ಅವನೊಂದಿಗಿತ್ತು ಮತ್ತು ಖುತ್ಬುದ್ದೀನನ ಮರಣವಾದ ಮೂರು ದಿನಗಳ ನಂತರ ಆ ಬಿಳಿಯಾನೆ ಕೂಡ ಸಾವನ್ನಪ್ಪಿತು. ಖುತ್ಬುದ್ದೀನನ ನಂತರ ಇಂದಿನವರೆಗೂ ಇನ್ನು ಯಾವ ದಿಲ್ಲಿ ಬಾದಶಹನು ಕೂಡ ತನ್ನ ಮನೆಬಾಗಿಲಿನಲ್ಲಿ ಬಿಳಿಯಾನೆಯನ್ನು ಕಟ್ಟಲಿಲ್ಲ. ದೆಹಲಿಯ ಸುತ್ತ ಮುತ್ತಲಿನ ಪ್ರದೇಶದ ರಾಜ ಮಹಾರಾಜರ ಬಗ್ಗೆಯು ಕೂಡ ಇಂತಹ ವಿಶೇಷ ಗುಣದ ಆನೆಯ ಸುದ್ದಿ ಕೇಳಿ ಬರಲಿಲ್ಲ. ಆದರೆ, ಈ ಇತಿಹಾಸಕಾರನಾದ ಫರಿಶ್ತಾ ಆದ ನಾನು ಅದೃಷ್ಟವಶಾತ್ ಬಾದಶಹ ಜಮ್‌ಜಾಹ್ ಸುಲ್ತಾನ್ ಇಬ್ರಾಹಿಂ ಆದಿಲ್ ಶಾಹನ ಉಪ್ಪು ತಿಂದವರ ಪಟ್ಟಿಯಲ್ಲಿ ಸೇರ್ಪಡೆಯಾಗಿ ಬಿಜಾಪುರದ ರಾಜ್ಯದಲ್ಲಿ ನೌಕರಿ ಹಿಡಿದೆನು. ಆ ಕಾಲದಲ್ಲಿ ಪೇಕು ದ್ವೀಪದ ರಾಜನು ತನ್ನ ಮನೆ ಬಾಗಿಲಿನಲ್ಲಿ ಪ್ರತಿನಿತ್ಯ ಎರಡು ಬಿಳಿಯಾನೆಗಳನ್ನು ಕಟ್ಟುತ್ತಿದ್ದನೆಂದು ನಾನು ಕೆಲವು ನಂಬಲರ್ಹ ವ್ಯಾಪಾರಿಗಳಿಂದ ಕೇಳಿ ತಿಳಿದಿದ್ದೇನೆ. ಹಾಗೂ ಆ ಬಿಳಿಯಾನೆಗಳ ಬಗ್ಗೆ

ಇದ್ದ ಕಥೆಗಳ ಪೈಕಿ ಏನೆಂದರೆ, ಈ ಎರಡು ಆನೆಗಳು ಕೂಡ ಜೀವಂತವಾಗಿರುವವರೆಗೆ ಪೇಕು ದ್ವೀಪದ "ಕಚೀಲಿ" ಎಂಬ ಕಾಡಿನಲ್ಲಿ ಇನ್ನು ಯಾವುದೇ ಬಿಳಿ ಆನೆಯು ಕಂಡು ಬರುತ್ತಿರಲಿಲ್ಲ ಆದರೆ ಆ ಆನೆಗಳ ಪೈಕಿ ಯಾವುದಾದರೂ ಒಂದು ಆನೆಯು ಸಾವನ್ನಪ್ಪಿದ್ದಲ್ಲಿ ಅದರ ಸ್ಥಾನವನ್ನು ತುಂಬಲು ಕಾಡಿನಿಂದ ಕೂಡಲೇ ಇನ್ನೊಂದು ಬಿಳಿ ಆನೆಯು ಉದ್ಭವವಾಗುತ್ತಿತ್ತು ಮತ್ತು ಬೇಟೆಗಾರರು ಅದನ್ನು ಕೂಡಲೇ ಸೆರೆ ಹಿಡಿದು ಪಟ್ಟಣದೊಳಗೆ ತರುತ್ತಿದ್ದರು.

ದೆಹಲಿ ಮತ್ತು ಅಜ್ಮೀರದಲ್ಲಿ ಗಲಭೆಗಳು:

ಸುಲ್ತಾನ್ ಶಹಾಬುದ್ದೀನನು ಘಜ್ನಿಗೆ ಮರಳಿದ ನಂತರ ಖುತ್ಬುದ್ದೀನನು ಕೆಲದಿನಗಳ ಕಾಲ ಹಿಸಾರ್ ಅಸ್ನಿಯಲ್ಲಿ ತಂಗಿದ್ದು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಸುರಕ್ಷತೆಗಾಗಿ ಸಮಂಜಸವಾದ ಏರ್ಪಾಡುಗಳನ್ನು ಮಾಡಿ ಮರಳಿದನು. ಅವನ ಮರು ಪ್ರಯಾಣದಲ್ಲಿ ಅವನು ಸ್ವಲ್ಪ ದೂರ ಕ್ರಮಿಸಿದಾಗ ದೆಹಲಿ ಮತ್ತು ಅಜ್ಮೀರ್‌ನ ಉಭಯ ಪಟ್ಟಣಗಳ ಮೇಲೆ ಯುದ್ಧದ ಜ್ವಾಲೆ ಹರಡಿದೆ ಎಂದು ಅವನಿಗೆ ತಿಳಿದು ಬಂದಿತು. ಒಂದೆಡೆ ಹೇಮರಾಜ್ ರಜಪೂತನು ರಾಜ ಕೋಲಾನ ಮೇಲೆ ಆಕ್ರಮಣ ಮಾಡಿ ಅವನನ್ನು ಅಜ್ಮೀರ್‌ನಿಂದ ಕಿತ್ತೆಸೆದಿದ್ದಾನೆ ಹಾಗೂ ರಾಜ ಕೋಲಾನು ಯುದ್ಧ ಭೂಮಿಯಿಂದ ಪರಾರಿಯಾಗಿ ರಣಥಂಬೂರ್‌ನಲ್ಲಿ ಆಶ್ರಯ ಪಡೆದಿದ್ದಾನೆ. ಇನ್ನೊಂದೆಡೆ ಛತ್ರಾಯೆ ಒಂದು ಸೈನ್ಯದ ಸಮೇತ ದೆಹಲಿಯನ್ನು ಪುನಃ ವಶಪಡಿಸಿಕೊಳ್ಳಲು ತನ್ನ ಶಹರದಿಂದ ರವಾನೆಯಾಗಿದ್ದಾನೆ. ಆ ಸೇನೆಯು ದೆಹಲಿಯ ಸಮೀಪ ತಲುಪಿದೆ. ಮತ್ತು ಆ ಸೇನೆಯ ಮುಸ್ಲಿಮೇತರ ಸಿಪಾಯಿಗಳು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮನಸೋ ಇಚ್ಛೆ ಲೂಟಿ ಮಾಡುತ್ತಿದ್ದಾರೆ. ಈ ಎಲ್ಲಾ ಸುದ್ದಿಯನ್ನು ಕೇಳಿದ ಖುತ್ಬುದ್ದೀನನು ಒಂದಿನಿತು ಕೂಡ ವಿಚಲಿತನಾಗಲಿಲ್ಲ. ಅವನು ತನ್ನ ಸೈನ್ಯದಿಂದ ಇಪ್ಪತ್ತು ಸಾವಿರ ಪರಾಕ್ರಮಿ ಶೂರರ ಆಯ್ಕೆ ಮಾಡಿದ ಮತ್ತು ಅವರನ್ನು ಜೊತೆಯಲ್ಲಿ ಕರೆದುಕೊಂಡು ಛತ್ರಾಯನನ್ನು ಎದುರಿಸಲು ವೀರಾವೇಷದಿಂದ ಮುನ್ನಡೆದ. ಛತ್ರಾಯಗೆ ಖುತ್ಬುದ್ದೀನನ ಆಗಮನದ ಸುದ್ದಿ ತಲುಪಿದ ಕೂಡಲೇ ಅವನು ಅಜ್ಮೀರ್‌ನತ್ತ ಓಡಿದ. ಖುತ್ಬುದ್ದೀನನು ಅವನ ಬೆನ್ನಟ್ಟಿ ಹೊರಟ ಮತ್ತು ಛತ್ರಾಯೆ ಅಜ್ಮೀರ್ ತಲುಪಿದ ಕೂಡಲೇ ಅವನು ಕೂಡ ಅಲ್ಲಿ ತಲುಪಿದ. ಅಜ್ಮೀರ್‌ನ ರಾಜ ಹೇಮರಾಜನು ನಗರದಿಂದ ಹೊರಬಿದ್ದು ಖುತ್ಬುದ್ದೀನ್‌ನೊಡನೆ ಉಗ್ರಹೋರಾಟ ನಡೆಸಿದ. ಆದರೆ ಖುತ್ಬುದ್ದೀನ್‌ನಿಂದ ಸೋಲನ್ನು ಉಂಡು ಯುದ್ಧ ರಂಗದಲ್ಲಿಯೇ ಅಂತ್ಯವನ್ನು ಕಂಡುಕೊಂಡ ಹೀಗೆ ಅಜ್ಮೀರ್‌ನ ಮೇಲೆ ಪುನಃ ಮುಸ್ಲಿಮರ ಆಳ್ವಿಕೆವುಂಟಾಯಿತು. ಮತ್ತು ಹಿಂದೂಗಳ ಕೇಂದ್ರಸ್ಥಾನವಾಗಿದ್ದ ಆ ನಗರವು ಎಂದೆಂದಿಗೂ ಮುಸ್ಲಿಮ್ ರಾಜ ಮಹಾರಾಜರ ಕೇಂದ್ರಾಡಳಿತ ಸ್ಥಾನವಾಗಿ ಪರಿಣಮಿಸಿತು.

ಹಿಜರಿ ಶಕೆ ೫೯೧ರ ಖುತ್ಬುದ್ದೀನನು ನೆಹರ್‌ವಾಲದ ಮೇಲೆ ಆಕ್ರಮಣ ಮಾಡಿದ.

ಆಗ ನೆಹರ್‌ವಾಲದ ರಾಜನಾದ ಭೀಮದೇವನ ಸೇನಾಪತಿಯಾದ ಜೀತವಾನನು ನೆಹರ್‌ವಾಲಾದ ಕೋಟೆಯ ಕೆಳಗಡೆ ಬಿಡಾರವನ್ನು ಹೊಂದಿದ್ದು ಮುಸ್ಲಿಮರ ಸೇನೆಯ ಆಗಮನದ ಸುದ್ದಿಯನ್ನು ಕೇಳಿದೊಡನೆಯೇ ಕೋಟೆಯನ್ನು ತೊರೆದು ಓಡಿ ಹೋದ. ಖುತ್ಬುದ್ದೀನನು ಜೀತವಾನನನ್ನು ಬೆನ್ನಟ್ಟಿ ಹೋದ ಮತ್ತು ಅನತಿ ದೂರದಲ್ಲಿಯೇ ಅವನನ್ನು ಹಿಡಿದ. ಜೀತವಾನನು ಆ ಗೊಂದಲದಿಂದ ಮುಂದೇನೂ ದಾರಿ ಕಾಣದೆ ಕಾದಾಟವನ್ನು ಆರಂಭಿಸಿದ. ಮತ್ತು ಅದರ ಪರಿಣಾಮವಾಗಿ ಯುದ್ಧ ರಂಗದಲ್ಲಿ ಅವನು ಖುತ್ಬುದ್ದೀನನ ಕೈಯಾರೆ ಮರಣವನ್ನಪ್ಪಿದ. ಜೀತವಾನನ ಸಾವಿನ ಸುದ್ದಿಯನ್ನು ಕೇಳಿದ ನೆಹರ್‌ವಾಲದ ರಾಜನಾದ ಭೀಮದೇವನು ನೆಹರ್‌ವಾಲವನ್ನು ಬಿಟ್ಟು ತನ್ನ ರಾಜ್ಯದ ಗಡಿ ಪ್ರದೇಶದ ಒಂದು ಸ್ಥಳದಲ್ಲಿ ಆಶ್ರಯವನ್ನು ಪಡೆದ. ಖುತ್ಬುದ್ದೀನನು ನೆಹರ್‌ವಾಲದಿಂದ ಅಪಾರವಾದ ಯುದ್ಧ ಸಂಪತ್ತನ್ನು ಸಂಗ್ರಹಿಸಿದ ಮತ್ತು ಅತ್ಯಂತ ತೀವ್ರಗತಿಯಲ್ಲಿ ಹಾನ್‌ಸಿಯನ್ನು ತಲುಪಿದ. ಅಲ್ಲಿ ತಲುಪಿದ ನಂತರ ಅವನು ಕೋಟೆಯನ್ನು ನಿರ್ಮಾಣ ಮಾಡಿದ ಮತ್ತು ಕೊಹರಾಮನ್ನು ಗೆದ್ದುಕೊಂಡು ದೆಹಲಿ ತಲುಪಿದ. ಅದೇ ಸಂದರ್ಭದಲ್ಲಿ ರಣಥಂಬೂರ್‌ನ ಸುತ್ತ ಮುತ್ತಲಿನ ಪ್ರದೇಶದ ರಾಜನಾದ ಖವಾಮುಲ್‌ಮುಲ್ಕ್ ರುಕ್ನುದ್ದೀನ್ ಹಮ್ಜಾ ಯುದ್ಧದ ಬಗ್ಗೆ ವಿವರವಾದ ಸಂಗತಿಗಳನ್ನು ಖುತ್ಬುದ್ದೀನಗೆ ಅರುಹಿದ. ಸೋತು ಸುಣ್ಣವಾಗಿ ಕಾಡಿನಲ್ಲಿ ರಕ್ಷಣೆಯನ್ನು ಪಡೆದಿದ್ದ ಅಜ್ಮೀರ್ ರಾಜನ ಸಹೋದರನು ಅಲ್ಪ ಸಲ್ಪ ಸೈನ್ಯವನ್ನು ಜಮಾವಣೆ ಮಾಡಿಕೊಂಡು ಹಾಂಸಿಯ ಮೇಲೆ ಆಕ್ರಮಣ ಮಾಡಿದ್ದಾನೆ ಮತ್ತು ರಾಜ ಕೋಲೂವಿಗೆ ಮುತ್ತಿಗೆ ಹಾಕಿದ್ದಾನೆ ಎಂಬ ಸುದ್ದಿಯನ್ನು ಅವನು ಖುತ್ಬುದ್ದೀನನಿಗೆ ನೀಡಿದ. ಹಾಗೂ ರಾಜ ಕೋಲೂ ಮುಸ್ಲಿಮರ ಬೆಂಬಲಿಗನಾಗಿದ್ದ. ಆದ್ದರಿಂದ ಖುತ್ಬುದ್ದೀನನು ಅವನ ನೆರವಿಗೆ ಸಿದ್ಧನಾಗಿ ತನ್ನ ಸೇನೆಯೊಂದಿಗೆ ಹಾಂಸಿಯತ್ತ ಪ್ರಯಾಣ ಬೆಳೆಸಿದ. ಅಜ್ಮೀರನ ರಾಜನಿಗೆ ಖುತ್ಬುದ್ದೀನನ ಆಗಮನದ ಸುದ್ದಿ ತಿಳಿಯುತ್ತಿದ್ದಂತೆಯೇ ಅವನು ಪಲಾಯನ ಗೈದ. ರಾಜ ಕೋಲೂ ಕೋಟೆಯಿಂದ ಹೊರಬಂದು ಖುತ್ಬುದ್ದೀನ್‌ನಿಗೆ ಅನೇಕ ಅಮೂಲ್ಯ ಉಡುಗೊರೆಗಳನ್ನು ನೀಡಿದ. ಖುತ್ಬುದ್ದೀನನು ಆ ಉಡುಗೊರೆಗಳ ಸಮೇತ ದೆಹಲಿಗೆ ಮರಳಿದ.

ಖುತ್ಬುದ್ದೀನ್ ಐಬಕ್‌ನ ಘಜ್ನಿ ಪ್ರಯಾಣ

"ತಾಜುಲ್ ಮಾ ಅಸರ್" ಎಂಬ ಗ್ರಂಥವು ಖುತ್ಬುದ್ದೀನನ ಹೆಸರಿಗೆ ಅರ್ಪಣೆಯಾಗಿದ್ದು ಅವನ ಬದುಕಿನ ವಿವರಗಳಿಂದ ಕೂಡಿದೆ. ಆ ಗ್ರಂಥದಲ್ಲಿ ಉಲ್ಲೇಖಿಸಿರುವ ಪ್ರಕಾರ ಅಜ್ಮೀರನ್ನು ಪುನಃ ತನ್ನ ವಶಪಡಿಸಿಕೊಂಡ ಖುತ್ಬುದ್ದೀನನು ನೆಹರ್‌ವಾಲ ಮತ್ತು ರಣಥಂಬೂರನ್ನು ಗೆದ್ದುಕೊಂಡ. ನಂತರ ಅವನು ದೆಹಲಿಗೆ ಮರಳಿದ. ಅಲ್ಲಿಗೆ ತಲುಪಿದ ನಂತರ ಅವನು ತನ್ನ ಒಡೆಯನಾದ ಸುಲ್ತಾನ್ ಶಹಾಬುದ್ದೀನನ ಅವಗಾಹನೆಗೆ ಒಂದು ಪತ್ರವನ್ನು ಕಳಿಸಿದ ಮತ್ತು ಅದರಲ್ಲಿ ತನ್ನ

ಅನೇಕ ವಿಜಯಗಳ ಬಗ್ಗೆ ವಿವರಗಳನ್ನು ತಿಳಿಸಿದ್ದ. (ಆ ಪತ್ರವನ್ನು ಓದಿದ ಬಳಿಕ) ಸುಲ್ತಾನ್ ಶಹಾಬುದ್ದೀನ್ ತನ್ನ "ಬಾದಶಹನ ಠೀವಿಯುಳ್ಳ" ಗುಲಾಮನ ಕಾರ್ಯವಿಧಾನದ ಬಗ್ಗೆ ಅತೀವ ಸಂತಪ್ತನಾದ ಹಾಗೂ ಅವನನ್ನು ಭೇಟಿಯಾಗುವ ಇಚ್ಛೆಯುಳ್ಳವನಾಗಿದ್ದು ಅವನನ್ನು ಘಜ್ನಿಗೆ ಕರೆ ಕಳುಹಿಸಿದ. ರಾಜಾಜ್ಞೆಯು ತಲುಪಿದ ಕೂಡಲೇ ಖುತ್ಬುದ್ದೀನನು ಘಜ್ನಿಯತ್ತ ಪ್ರಯಾಣ ಬೆಳೆಸಿದ ಮತ್ತು ಕೆಲವೇ ದಿನಗಳಲ್ಲಿ ತನ್ನ ಬಾದಶಹನ ಸಮ್ಮುಖದಲ್ಲಿ ಹಾಜರಾದ. ಶಹಾಬುದ್ದೀನನು ಅವನಿಗೆ ಅಮೂಲ್ಯವಾದ ಉಡುಗೊರೆಗಳನ್ನು ನೀಡಿದ. (ಸ್ವಲ್ಪ ದಿನಗಳವರೆಗೆ ಘಜ್ನಿಯಲ್ಲಿ ವಾಸ್ತವ್ಯದ ನಂತರ) ಖುತ್ಬುದ್ದೀನನು ಮರಳಿ ಹೋಗುವ ಇರಾದೆಯನ್ನು ಹೊಂದಿದ. ಶಹಾಬುದ್ದೀನನು ಅವನಿಗೆ ಸಂತೋಷದಿಂದ ಅನುಮತಿಯನ್ನು ನೀಡಿದ. ಖುತ್ಬುದ್ದೀನನು ಅಲ್ಲಿಂದ ಹೊರಡುವಷ್ಟರಲ್ಲಿ ಆಕಸ್ಮಿಕವಾಗಿ ಅನಾರೋಗ್ಯ ಪೀಡಿತನಾದ. ಅವನ ಕಾಯಿಲೆಯು ದಿನೇ ದಿನೇ ವೃದ್ಧಿಸಿ ಅವನು ಪ್ರಾಣಸಹಿತ ಉಳಿಯುವನೆಂಬ ಭರವಸೆ ಇಲ್ಲದಂತಾಯಿತು. ಆದರೆ ಅಲ್ಲಾಹನ ದಯೆಯಿಂದ ಮತ್ತು ರಾಜ ವೈದ್ಯರ ಆರೈಕೆಯಿಂದ ಅವನು ಗುಣಹೊಂದಿ ತನ್ನ ಶಕ್ತಿ ಸಾಮರ್ಥ್ಯವನ್ನು ಮರಳಿ ಪಡೆದು ಹಿಂದೂಸ್ಥಾನದತ್ತ ಪ್ರಯಾಣ ಬೆಳೆಸಿದ. ಮಾರ್ಗ ಮಧ್ಯದಲ್ಲಿ ಅವನು ಕೆಲದಿನಗಳ ಕಾಲ ಕರ್ಮಾನ್‌ನಲ್ಲಿ ಉಳಿದು ವಿಶ್ರಾಂತಿಯನ್ನು ಪಡೆದ ಮತ್ತು ಸುಲ್ತಾನ್ ಶಹಾಬುದ್ದೀನನ ಆಜ್ಞೆಯ ಮೇರೆಗೆ ತಾಜುದ್ದೀನ್ ಎಲ್ರೋಜ್‌ನ ಮಗಳೊಡನೆ ಮದುವೆ ಮಾಡಿಕೊಂಡ ನಂತರ ದೆಹಲಿಯತ್ತ ನಡೆದ.

ಜಾಮಿಯ ಮಸೀದಿಯ ನಿರ್ಮಾಣ:

ಖುತ್ಬುದ್ದೀನನು ದೆಹಲಿಯನ್ನು ತಲುಪಿದ ನಂತರ ಇಡೀ ನಗರವನ್ನು ವಧುವಿನಂತೆ ಅಲಂಕರಿಸಿದ ಮತ್ತು ಸಂತೋಷ ಸಮಾರಂಭವನ್ನು ಆಯೋಜಿಸಿದ. ಆಸ್ಥಾನಿಕರು ಮತ್ತು ಇನ್ನಿತರೆ ಅನೇಕ ಜನರಿಗೆ ಉಡುಗೊರೆ ಮತ್ತು ಬಿರುದು ಬಾವಲಿಗಳಿಂದ ಸಂಪನ್ನರನ್ನಾಗಿಸಿದ. ಈ ಹಿಂದೆಯೇ ಖುತ್ಬುದ್ದೀನ್ ಆರಂಭಿಸಿದ್ದ ಜಾಮೀಯ ಮಸೀದಿಯ ಕಟ್ಟಡದ ನಿರ್ಮಾಣ ಕಾರ್ಯವು ಹಿಜರಿ ಶಕೆ ೫೯೨ರಲ್ಲಿ ಪೂರ್ಣಗೊಂಡಿತು. ನಂತರ ಖುತ್ಬುದ್ದೀನನು ಬಯಾನದ ಕೋಟೆಯನ್ನು ತನ್ನ ವಶಕ್ಕೆ ಪಡೆದುಕೊಳ್ಳುವ ಸಲುವಾಗಿ ಸಿದ್ಧತೆಯನ್ನು ಮಾಡಿಕೊಂಡ .ಆದರೆ, ಅವನು ದೆಹಲಿಯಿಂದ ಹೊರಡುವ ಮುಂಚೆಯೇ ಅವನಿಗೆ ಸುಲ್ತಾನ್ ಶಹಾಬುದ್ದೀನನ ಆಗಮನದ ವರ್ತಮಾನ ಸಿಕ್ಕಿತು. ಆದ್ದರಿಂದ ಅವನು ಬಯಾನ ಕೋಟೆಯ ಮೇಲಿನ ಯುದ್ಧದ ಇರಾದೆಯನ್ನು ಮುಂದೂಡಿ ಶಹಾಬುದ್ದೀನನ ಸ್ವಾಗತದ ಸಲುವಾಗಿ ಹಾಂಸಿಯ ಕಡೆಗೆ ಪ್ರಯಾಣ ಮಾಡಿದ. ಶಹಾಬುದ್ದೀನನು ತನ್ನ ಶೂರ ಸೇನಾಪತಿಯನ್ನು ತುಂಬಾ ಪ್ರೀತಿಯಿಂದ ಬರಮಾಡಿಕೊಂಡು ಅವನಿಗೆ ಕುದುರೆಗಳು ಮತ್ತು ಬಿರುದನ್ನು ದಯಪಾಲಿಸಿದ. ವಿಚಿತ್ರ ಸಂಯೋಗವೆಂದರೆ, ಶಹಾಬುದ್ದೀನನು ಕೈಗೊಂಡ

ಹಿಂದೂಸ್ಥಾನದ ಪ್ರಯಾಣದ ಉದ್ದೇಶವು ಖುತ್ಬುದ್ದೀನನ ಅಭಿಲಾಷೆಗೆ ಅನುಗುಣವಾಗಿತ್ತು. ಅಂದರೆ, ಉಭಯತ್ರರಿಗೂ ಬಯಾನದ ಕೋಟೆಯನ್ನು ಗೆಲ್ಲುವ ಸಮಾನ ಉದ್ದೇಶವಿತ್ತು. ಹೀಗಾಗಿ ಒಡೆಯ ಮತ್ತು ಗುಲಾಮರಿಬ್ಬರು ಸೇರಿ ಬಯಾನ ಕೋಟೆಯನ್ನು ಗೆಲ್ಲುವ ಇರಾದೆಯನ್ನು ಕಾರ್ಯಗತಗೊಳಿಸಿದರು. ಅಂತೆಯೇ ಅವರಿಬ್ಬರ ಉದ್ದೇಶವು ಸಫಲವಾಯಿತು ಮತ್ತು ಶಹಾಬುದ್ದೀನನು ಬಯಾನ ಕೋಟೆಯ ಆಡಳಿತವನ್ನು ತನ್ನ ಒಬ್ಬ ತುರ್ಕಿ ಗುಲಾಮನಾದ ಬಹಾವುದ್ದೀನ್ ತೊಘ್ರಾಲ್‌ನ ವಶಕ್ಕೆ ನೀಡಿದ.

ಸುಲ್ತಾನ್ ಶಹಾಬುದ್ದೀನ್‌ನನ್ನು ಬಯಾನದಲ್ಲಿ ಬೀಳ್ಕೊಟ್ಟು ಖುತ್ಬುದ್ದೀನನು ಗ್ವಾಲಿಯರ್ ಕಡೆಗೆ ಮುನ್ನಡೆದ. ಅಲ್ಲಿನ ರಾಜನಾದ ಸುಲಕ್‌ಮನ್ ಎಂಬುವಾತನು ಖುತ್ಬುದ್ದೀನ್‌ನನ್ನು ಎದುರಿಸುವ ಧೈರ್ಯವನ್ನು ಮಾಡಲಿಲ್ಲ. ಅವನು ಅತ್ಯಂತ ಅಮೂಲ್ಯವಾದ ಉಡುಗೊರೆಗಳನ್ನು ಖುತ್ಬುದ್ದೀನ್‌ನಿಗೆ ಕಾಣಿಕೆಯಾಗಿ ಸಲ್ಲಿಸಿದ ಮತ್ತು ವಾರ್ಷಿಕ ರಾಜಧನವನ್ನು ಪಾವತಿಸುವ ವಾಗ್ದಾನವನ್ನು ಮಾಡಿದ.

ನೆತ್ರಾನ್‌ನ ರಜಪೂತರೊಂದಿಗೆ ಯುದ್ಧ:

ಬಯಾನ ಮತ್ತು ಗ್ವಾಲಿಯರ್‌ನ ಸಮಸ್ಯೆಗಳನ್ನು ಬಗೆಹರಿಸಿದ ನಂತರ ಶಹಾಬುದ್ದೀನನು ಘಜ್ನಿಗೆ ಹಿಂದಿರುಗಿದ ಮತ್ತು ಖುತ್ಬುದ್ದೀನ್ ದೆಹಲಿಗೆ ಮರಳಿದ. ನೆತ್ರಾನ್‌ನ ರಜಪೂತ ರಾಜನು ನೆಹರ್‌ವಾಲನ ಜೊತೆಯಲ್ಲಿ ಕೈಜೋಡಿಸಿದ್ದು ಅವರೊಡನೆ ಹಿಂದುಗಳ ದೊಡ್ಡ ಸೈನ್ಯ ಸನ್ನದ್ಧವಾಗಿದೆ ಎಂಬ ಅಂಶವು ಅವನು ದೆಹಲಿ ತಲುಪುವಷ್ಟರಲ್ಲಿ ಅವನಿಗೆ ದೊರಕಿತು. ಸದರಿ ಸೈನ್ಯ ಜಮಾವಣೆಯ ಉದ್ದೇಶವು ಅಜ್ಮೇರನ್ನು ಮುಸ್ಲಿಮರ ವಶದಿಂದ ತಪ್ಪಿಸಿ ಹಿಂದೂಗಳ ಆಳ್ವಿಕೆಯಲ್ಲಿ ವಿಲೀನಗೊಳಿಸುವುದೇ ಆಗಿತ್ತು. ಈ ಸಂಪೂರ್ಣ ಮಾಹಿತಿಯು ದೊರಕಿದ ಕೂಡಲೇ ಖುತ್ಬುದ್ದೀನನು ನೆತ್ರಾನ್‌ನ ಮಾರ್ಗದತ್ತ ತಿರುಗಿದ ಮತ್ತು ಅಲ್ಲಿ ರಾಜ ನೆಹರ್‌ವಾಲನ ನೆರವು ತಲುಪುದಕ್ಕೆ ಮುಂಚಿತವಾಗಿಯೇ ರಜಪೂತರೊಡನೆ ಯುದ್ಧವನ್ನು ಆರಂಭಿಸಿದ. ಆ ಯುದ್ಧದಲ್ಲಿ ಖುತ್ಬುದ್ದೀನನ ಕುದುರೆಯು ಗಾಯಗೊಂಡು ಧರಾಶಾಯಿಯಾಯಿತು. ತಮ್ಮ ಸರದಾರನು ಕೆಳಗೆ ಬಿದ್ದುದ್ದನ್ನು ಕಂಡ ಮುಸ್ಲಿಮ್ ಸೈನ್ಯದ ಸ್ಥೈರ್ಯ ಕುಂದಿತು. ಆ ಸೈನಿಕರು ಅತ್ಯಂತ ಕಠಿಣ ಸನ್ನಿವೇಶವನ್ನು ಎದುರಿಸಿ ಖುತ್ಬುದ್ದೀನ್‌ನನ್ನು ಒಂದು ಬೇರೆ ಕುದುರೆಯ ಮೇಲೆ ಕೂರಿಸಿ ಅಜ್ಮೇರ್‌ನತ್ತ ತೆರಳಿದರು. ನೆತ್ರಾನ್‌ನ ಹಿಂದೂಗಳು ತಮ್ಮ ವಿಜಯೋತ್ಸವದ ಆಚರಣೆಯ ಸಂಭ್ರಮದಲ್ಲಿ ಮುಳುಗಿದ್ದಾಗಲೇ ರಾಜ ನೆಹರ್‌ವಾಲನ ಸೈನ್ಯ ಕೂಡ ಅವರ ನೆರವಿಗೆ ಬಂದು ಕೂಡಿತು. ಆ ಎರಡು ಸೇನೆಗಳು ಕೂಡಿ ಅಜ್ಮೇರ್‌ನ ಕಡೆ ತಮ್ಮ ಪ್ರಯಾಣವನ್ನು ಮುಂದುವರೆಸಿ ಅಜ್ಮೇರ್‌ನಿಂದ ಮೂರು ಹರದಾರಿ ದೂರದಲ್ಲಿ ಬಿಡಾರವನ್ನು ಹೂಡಿದರು.

ಘಜ್ನಿಯಿಂದ ನೆರವಿನ ಸೈನ್ಯದ ಆಗಮನ:

ಹಿಂದೂಗಳ ಉಭಯಸೇನೆಗಳು ಕೂಡಿ ಅನೇಕ ತಿಂಗಳವರೆಗೆ ಯುದ್ಧವನ್ನು ಮುಂದುವರೆಸಿದವು. ಈ ಹಂತದಲ್ಲಿ ಶಹಾಬುದ್ದೀನ್ ಘೋರಿಗೆ ಖುತ್ಬುದ್ದೀನನ ಅಸಹಾಯಕತೆ ಮತ್ತು ಹಿಂದೂಗಳ ಪ್ರಾಬಲ್ಯದ ಸುಳಿವು ದೊರಕಿತು. ಅವನು ತನ್ನ ಪ್ರಖ್ಯಾತ ಸರದಾರರಾದ ಇಸ್ಲಾಮ್ ಖಾನ್ ಅಸದುದ್ದೀನ್, ಅರ್ಸಲಾನ್ ಖಿಲ್ಜಿ, ನಸೀರುದ್ದೀನ್ ಹುಸೇನ್, ಐಸುದ್ದೀನ್ ಮವೇದ್ ಮತ್ತು ಅಶ್ರಫುದ್ದೀನ್ ಮುಂತಾದವರ ಮುಂದಾಳತ್ವದಲ್ಲಿ ಒಂದು ಬಲಿಷ್ಠವಾದ ಸೈನ್ಯವನ್ನು ಖುತ್ಬುದ್ದೀನನ ನೆರವಿಗಾಗಿ ಹಿಂದೂಸ್ಥಾನಕ್ಕೆ ಕಳಿಸಿಕೊಟ್ಟ. ಒಂದೆಡೆ ಈ ಬಲಿಷ್ಠ ಸೇನೆಯು ಘಜ್ನಿಯಿಂದ ಹಿಂದೂಗಳ ಪ್ರಾಬಲ್ಯವನ್ನು ಅಡಗಿಸಲು ಹೊರಟುನಿಂತರೆ ಇನ್ನೊಂದೆಡೆ ಅತೀವ ಥಂಡಿಯು ರಜಪೂತರ ಕೈಕಾಲುಗಳನ್ನು ಸೆಟೆದುಕೊಳ್ಳುವಂತೆ ಮಾಡಿತು. ಈ ಸನ್ನಿವೇಶದಲ್ಲಿ ಆ ಸೈನ್ಯವು ಹೆಚ್ಚುಕಾಲ ಯುದ್ಧ ಮುಂದುವರೆಸದೆ ಇರಲು ನಿರ್ಧರಿಸಿದ ಮೇರೆಗೆ ಆ ಸೇನೆಯ ಪ್ರತ್ಯೇಕ ಘಟಕಗಳು ತಮ್ಮ ತಮ್ಮ ಹುಟ್ಟೂರಿಗೆ ಮರಳಿದವು. ಹಿಂದೂಗಳ ಸೇನೆಯ ನಿರ್ಗಮನ ಮತ್ತು ಘಜ್ನಿಯಿಂದ ನೆರವಿನ ಸೈನ್ಯದ ಆಗಮನದಿಂದ ಖುತ್ಬುದ್ದೀನನಿಗೆ ತುಂಬಾ ನಿರಾಳವಾಯಿತು ಮತ್ತು ಅವನು ಹಿಂದೂಗಳ ನಾಶ ಮಾಡಲು ಪಣ ತೊಟ್ಟ.

ಗುಜರಾತ್‌ನ ಕೈವಶ :

ಖುತ್ಬುದ್ದೀನನ ಅತಿ ದೊಡ್ಡ ಶತ್ರು ಗುಜರಾತ್‌ನ ರಾಜನಾಗಿದ್ದ. ಆದ್ದರಿಂದ ಅವನು ಎಲ್ಲರಿಗಿಂತ ಮೊದಲು ಆ ರಾಜನ ಮೇಲೆ ಆಕ್ರಮಣ ಮಾಡಿದ. ೫೯೩ನೇ ಇಸವಿಯ ಸಫರ್ ತಿಂಗಳಲ್ಲಿ ಖುತ್ಬುದ್ದೀನನು ಅಜ್ಮೀರ್‌ನಿಂದ ನೆಹರ್‌ವಾಲದ ಕಡೆ ಹೊರಟ. ಮಾರ್ಗ ಮಧ್ಯದಲ್ಲಿ ಅವನು ಹೋತ್ಲಿ ಮತ್ತು ಬುಜ್‌ದಿಲ್ ಕೋಟೆಗಳನ್ನು ತನ್ನ ವಶಪಡಿಸಿಕೊಂಡ ಹಾಗೂ ಅವನು ತನ್ನ ಮುಂದಿನ ಯುದ್ಧವನ್ನು ಕೈಗೊಳ್ಳುವಷ್ಟರಲ್ಲಿ ನೆಹರ್‌ವಾಲದ ರಾಜನು ಮತ್ತು ವಾಲನ್ ವಾರೀಸಿಯ ರಜಪೂತರು ಪರಸ್ಪರ ಒಗ್ಗಟ್ಟಾಗಿ ಮುಸ್ಲಿಮರ ಆಕ್ರಮಣವನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದಾರೆ ಹಾಗೂ ಅವರಿಬ್ಬರು ತಮ್ಮ ಸೈನ್ಯಗಳೊಂದಿಗೆ ಬಲ್ದಸರೋಸಿಯ ಸುತ್ತ ಮುತ್ತಲಿನಪ್ರದೇಶದಲ್ಲಿ ಅಬುಗಢ್‌ನ ಕೋಟೆಯ ಕೆಳಭಾಗದಲ್ಲಿ ಮುಸಲ್ಮಾನರೊಡನೆ ಯುದ್ಧ ಮಾಡಲು ಸಿದ್ಧರಾಗಿ ವ್ಯೂಹ ರಚಿಸಿದ್ದಾರೆ ಎಂಬ ವರ್ತಮಾನವು ತಿಳಿದುಬಂದಿತು. ಖುತ್ಬುದ್ದೀನನು ತತ್‌ಕ್ಷಣ ಹಿಂದೂಗಳ ಆ ಸೈನ್ಯಗಳನ್ನು ಎದುರಿಸಲು ಪ್ರಯಾಣ ಬೆಳೆಸಿದ ಮತ್ತು ಹಳ್ಳ ಕೊಳ್ಳಗಳನ್ನು ದಾಟುತ್ತ ಶತ್ರುಗಳ ಮೇಲೆ ಆಕ್ರಮಣ ಮಾಡಿದ. ಖುತ್ಬುದ್ದೀನನ ಸೈನ್ಯವು ಶತ್ರುಗಳೊಡನೆ ವೀರಾವೇಷದಿಂದ ಹೊರಾಡಿತು ಮತ್ತು ಸ್ವಲ್ಪ ಕಾಲದಲ್ಲಿಯೇ ಐವತ್ತು ಸಾವಿರ ಮಂದಿ ಶತ್ರು ಸೈನಿಕರ ಸಂಹಾರ ಮಾಡಿತು. ತನ್ನ ಮೊದಲ ಸೋಲಿನ ಪ್ರತಿಕಾರವನ್ನು ಖುತ್ಬುದ್ದೀನನು ತೀರಿಸಿಕೊಂಡ ಮತ್ತು ಅಲ್ಲಿಂದ ಅಗಣಿತವಾದ

ಯುದ್ಧ ಸಂಪತ್ತನ್ನು ದೋಚಿ ಇಪ್ಪತ್ತು ಸಾವಿರ ಗುಲಾಮ ಮಹಿಳೆಯರು ಮತ್ತು ಪುರುಷರನ್ನು ತನ್ನೊಡನೆ ಸೆಳೆದುಕೊಂಡು ಗುಜರಾತ್‌ನತ್ತ ಪ್ರಯಾಣ ಬೆಳೆಸಿದ. ಗುಜರಾತನ್ನು ತಲುಪಿದ ಖುತ್ಬುದ್ದೀನನು ಯಾವುದೇ ಭಯ ಮತ್ತು ಪ್ರತಿರೋಧವಿಲ್ಲದೆ ನಗರದೊಳಗೆ ಪ್ರವೇಶಿಸಿದ ಮತ್ತು ತನ್ನ ಮನಸೋ ಇಚ್ಛೆ ಆ ನಗರವನ್ನು ಹಾಳು ಗೆಡವಿದ ನಂತರ ಅವನು ನೆಹರ್‌ವಾಲದ ಆಡಳಿತವನ್ನು ತನ್ನ ಒಬ್ಬ ಖ್ಯಾತ ಸರದಾರನ ವಶಕ್ಕೆ ಒಪ್ಪಿಸಿ ತಾನು ಅಜ್ಮೀರ್‌ನ ಮಾರ್ಗದಿಂದ ದೆಹಲಿಗೆ ಮರಳಿದ.

ಕಾಲಂಜರ್ ಮೇಲೆ ಆಕ್ರಮಣ:

ದೆಹಲಿ ತಲುಪಿದ ನಂತರ ಖುತ್ಬುದ್ದೀನನು ಕೆಲವು ಅತ್ಯಂತ ಸುಂದರಿಯರಾದ ದಾಸಿಯರನ್ನು ಮತ್ತು ಗುಲಾಮರನ್ನು ಹಾಗೂ ಅತ್ಯಂತ ಅಮೂಲ್ಯವಾದ ಉಡುಗೊರೆಗಳನ್ನು ಸುಲ್ತಾನ್ ಶಹಾಬುದ್ದೀನನಿಗೆ ಕಾಣಿಕೆಯಾಗಿ ಘಜ್ನಿಗೆ ಕಳಿಸಿಕೊಟ್ಟ ಮತ್ತು ದೆಹಲಿಯಲ್ಲಿ ತನ್ನ ವಿಜಯದ ಸಂಭ್ರಮವನ್ನು ಆಚರಿಸಲು ಒಂದು ಬೃಹತ್ ಸಮಾರಂಭವನ್ನು ಆಯೋಜನೆ ಮಾಡಿದ. ಅತ್ಯಂತ ಯೋಗ್ಯರಾದ ನವಾಬರು ಮತ್ತು ಆಸ್ಥಾನಿಕರು ಮುಂತಾದವರಿಗೆ ಅಪಾರ ಕಾಣಿಕೆ ಮತ್ತು ಗೌರವಗಳನ್ನು ದಯಪಾಲಿಸಿದ ಮತ್ತು ಫಕೀರರು ಹಾಗೂ ದೀನರಿಗೆ ಅಪಾರವಾಗಿ ದಾನ ಧರ್ಮಗಳನ್ನು ಮಾಡಿದ.

ಹಿಜರಿ ಶಕೆ ೫೯೯ರಲ್ಲಿ ಖುತ್ಬುದ್ದೀನನು ಕಾಲಂಜರ್‌ನ ಮೇಲೆ ಆಕ್ರಮಣ ಮಾಡಿದ. ಅಲ್ಲಿನ ರಾಜನು ಯುದ್ಧ ಮಾಡುವ ನಿರ್ಧಾರ ಕೈಗೊಂಡ. ಆದರೆ ಸೋತು ಕೋಟೆಯೊಳಗಡೆ ಅಡಗಿಕೊಂಡ ಆ ರಾಜನು ತನ್ನ ತೀರ್ಮಾನದ ಪರಿಣಾಮಗಳ ಬಗ್ಗೆ ಆಲೋಚನೆ ಮಾಡಿದಾಗ ಅವನಿಗೆ ತನ್ನ ಕೃತ್ಯವು ಸಮರ್ಥನೀಯವಲ್ಲ ಎಂದು ಅರಿವಾಗಿ ಅಪಾರ ವ್ಯಥೆ ಪಟ್ಟ. ಹೀಗಾಗಿ ಅವನು ತನ್ನ ಪೂರ್ವಜರ ಕ್ರಮವನ್ನು ಅನುಸರಿಸಲು ನಿರ್ಧರಿಸಿದ. ತನ್ನ ಪೂರ್ವಜರು ಯಾವ ರೀತಿಯಲ್ಲಿ ಸುಲ್ತಾನ್ ಮೆಹಮೂದನ ಅಧಿಕಾರವನ್ನು ಒಪ್ಪಿಕೊಂಡು ರಾಜ ತೆರಿಗೆಯನ್ನು ಪಾವತಿಸುತ್ತಿದ್ದರೋ ಅದೇ ರೀತಿಯಲ್ಲಿ ಖುತ್ಬುದ್ದೀನನ ಸಾಮಂತನಾಗಿ ರಾಜ ತೆರಿಗೆಯನ್ನು ಪಾವತಿಸಬೇಕೆಂದು ನಿರ್ಧರಿಸಿದ. ಆ ರಾಜನು (ಸಂಧಿಯ ಸಲುವಾಗಿ) ಅಪಾರ ಕಾಣಿಕೆ ಮತ್ತು ಉಡುಗೊರೆಗಳನ್ನು ತೆಗೆದುಕೊಂಡು ಖುತ್ಬುದ್ದೀನನನ್ನು ಭೇಟಿಯಾಗಲು ನಿಗದಿತವಾದ ಹಿಂದಿನ ರಾತ್ರಿಯೇ ಅವನು ಮರಣ ಹೊಂದಿದ. ಹೀಗೆ ಬಗೆಹರಿದಿದ್ದ ಸಮಸ್ಯೆಯು ಒಂದಿಷ್ಟು ಕಾಲದವರೆಗೆ ಮತ್ತೆ ಬಿಗಡಾಯಿಸಿತು ರಾಜನ ಮರಣದ ನಂತರ ಅವನ ಮಂತ್ರಿಯಾದ ಜಧ್‌ದೇವ್‌ಗೆ ರಾಜನ ತೀರ್ಮಾನವು ಸರಿಕಂಡು ಬರಲಿಲ್ಲ ಮತ್ತು ಖುತ್ಬುದ್ದೀನನ ವಿರುದ್ಧ ಆಕ್ರಮಣವನ್ನು ಮುಂದುವರೆಸಿ ಸ್ವರಕ್ಷಣೆಗಾಗಿ ಯುದ್ಧ ಮಾಡಬೇಕೆಂಬ ಪಿತೂರಿಯನ್ನು ಅವನು ಆರಂಭಿಸಿದ.

ಜಥ್‌ದೇವನು ಈ ನಿರ್ಧಾರಕ್ಕೆ ಬರಲು ಪ್ರಮುಖ ಕಾರಣವೇನೆಂದರೆ, ಕೋಟೆಯ ಒಳಭಾಗದಲ್ಲಿದ್ದ ಚಿಲುಮೆಯಿಂದ ಉತ್ತಮ ನೀರು ಸರಬರಾಜು ಆಗುತ್ತಿತ್ತು. (ಆದರೆ, ಈ ಪರಿಸ್ಥಿತಿಯು ಮುಂದುವರೆಯುಲಿಲ್ಲ) ಖುತ್ಬುದ್ದೀನನ ಅದೃಷ್ಟತಾರೆ ಮಿನುಗುತ್ತಿದುದರಿಂದಲೂ ಅವನ ಶತ್ರುಗಳ ಗ್ರಹಚಾರ ನೆಟ್ಟಗಿರಲಿಲ್ಲವಾದರಿಂದಲೂ ಏಕಾಏಕಿ ಕೋಟೆಯೊಳಗಿದ್ದ ಚಿಲುಮೆ ಬತ್ತಿ ಹೋಯಿತು. ಕೋಟೆಯ ಒಳಗೆ ಇದ್ದವರು ನೀರಿಲ್ಲದೆ ಹಾಹಾಕಾರ ಮಾಡತೊಡಗಿದರು ಮತ್ತು ತಮ್ಮ ಪ್ರಾಣ ರಕ್ಷಣೆಗಾಗಿ ಖುತ್ಬುದ್ದೀನನಿಗೆ ಶರಣಾಗತರಾದರು. ಹೀಗೆ ಕೋಟೆಯು ಮುಸ್ಲಿಮರ ಕೈವಶವಾಯಿತು. ಖುತ್ಬುದ್ದೀನನು ಕಾಲಂಜರ್‌ನ ಕೋಟೆಯನ್ನು ವಶಪಡಿಸಿಕೊಂಡ ಅಲ್ಲಿಂದ ಐವತ್ತು ಸಾವಿರ ಜನರನ್ನು ಸೆರೆಹಿಡಿದ ಮತ್ತು ಅವರಿಗೆ ಇಸ್ಲಾಮ್‌ನ ದೀಕ್ಷೆಯನ್ನು ನೀಡಿದ.

ಮಹುವಾ ಮತ್ತು ಬದಾಯೂನಿನ ಗೆಲವು:

ಕಾಲಂಜರ್‌ನ ವಿಜಯಪ್ರಾಪ್ತಿಯಾದ ನಂತರ ಖುತ್ಬುದ್ದೀನನು ಕಾಲ್ಪಿ ಪ್ರದೇಶದ ರಾಜಧಾನಿಯಾದ ಮಹುವಾದ ಮೇಲೆ ಆಕ್ರಮಣ ಮಾಡಿದ. ನಂತರ ಮುಸ್ಲಿಮರ ಸೇನೆಯು ಬದಾಯೂನ್‌ನತ್ತ ಹೊರಟು ಆ ಪಟ್ಟಣವನ್ನು ಕೂಡ ಗೆದ್ದು ತನ್ನ ವಶಪಡಿಸಿಕೊಂಡ. ನಂತರ ಅವನು ಮುಂದುವರೆಯುವ ಯೋಜನೆಯ ಸಿದ್ಧತೆಯಲ್ಲಿದ್ದಾಗ ಬಿಹಾರದಿಂದ ಬಖ್ತಿಯಾರ್ ಖಿಲ್ಜಿಯು ಅವನ ಸನ್ನಿಧಿಯಲ್ಲಿ ಹಾಜರಾದ ಮತ್ತು ಅತ್ಯಂತ ಉತ್ತಮವಾದ ಅಮೂಲ್ಯವಾದ ಮುತ್ತು ರತ್ನಗಳನ್ನು ಕಾಣಿಕೆಯ ಸ್ವರೂಪದಲ್ಲಿ ಖುತ್ಬುದ್ದೀನನಿಗೆ ನೀಡಿದ ಹಾಗೂ ಖುತ್ಬುದ್ದೀನನು ಇನ್ನು ಮುಂದುವರೆಯುವುದು ತರವಲ್ಲವೆಂದು ನಿರ್ಧರಿಸಿ ದೆಹಲಿಗೆ ಮರಳಿದ.

ಖುತ್ಬುದ್ದೀನನ ಸರ್ವಾಧಿಕಾರಿ ಧೋರಣೆ:

ಖವಾರ್‌ಜಮ್‌ನ ಘಟನೆಯ ನಂತರ ಖಕ್ಕರ್‌ಗಳನ್ನು ಸದೆ ಬಡೆಯುವ ಆಲೋಚನೆಯಿಂದ ಶಹಾಬುದ್ದೀನ್ ಘೋರಿಯು ಮತ್ತೊಮ್ಮೆ ಹಿಂದೂಸ್ಥಾನಕ್ಕೆ ಬಂದ. ಖುತ್ಬುದ್ದೀನ್ ಮತ್ತು ಶಮ್‌ಸುದ್ದೀನ್ ಅಲ್ತಮಷ್ ಅವನ ಜೊತೆಯಲ್ಲಿದ್ದರು. ಶಹಾಬುದ್ದೀನನ ಪ್ರೀತಿ ಪಾತ್ರ ಗುಲಾಮರಿಬ್ಬರು ಸೇರಿ ಎಷ್ಟೊಂದು ಪರಾಕ್ರಮ ಮತ್ತು ವೀರಾವೇಷದಿಂದ ಖಕ್ಕರ್‌ಗಳನ್ನು ಸದೆ ಬಡಿದರು ಎಂಬುದರ ಬಗ್ಗೆ ವಿವರಗಳನ್ನು ಶಹಾಬುದ್ದೀನ್ ಬಗ್ಗೆ ಇರುವ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಖಕ್ಕರ್‌ಗಳ ಸದ್ದುಡಗಿಸಿದ ನಂತರ ಖುತ್ಬುದ್ದೀನನು ದೆಹಲಿಗೆ ಮರಳಿದ ಮತ್ತು ಶಹಾಬುದ್ದೀನ್ ಘಜ್ನಿಗೆ ತೆರಳಿದ. ಮಾರ್ಗ ಮಧ್ಯದಲ್ಲಿ ಶಹಾಬುದ್ದೀನನು ಹುತಾತ್ಮನಾದ ಮತ್ತು ಅವನ ಅಣ್ಣನ ಮಗನಾದ ಸುಲ್ತಾನ್ ಮೆಹಮೂದ್ ಬಿನ್ ಸುಲ್ತಾನ್ ಗಯಾಸುದ್ದೀನ್ ಘೋರಿಸ್ಥಾನದ ಬಾದಶಹನಾದ. ಈ ಹೊಸ ರಾಜನು ತನ್ನ ಚಿಕ್ಕಪ್ಪನಾದ ಶಹಾಬುದ್ದೀನ್‌ಗಿಂತಲೂ ಹೆಚ್ಚಾಗಿ ಖುತ್ಬುದ್ದೀನನಿಗೆ ಗೌರವಾದರಗಳನ್ನು ಸಲ್ಲಿಸಿದ. ಸುಲ್ತಾನ್ ಮೆಹಮೂದ್

ಬಿನ್ ಗಯಾಸುದ್ದೀನನು ರಾಜ್ಯದ ಆಡಳಿತ ಸೂತ್ರವನ್ನು ಪಡೆದುಕೊಂಡ ಕೂಡಲೇ ಖುತ್ಬುದ್ದೀನನನ್ನು "ಮಲಿಕ್"ನಿಂದ "ಸುಲ್ತಾನ್" ಪದವಿಗೆ ಏರಿಸಿದ ಹಾಗೂ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸರ್ವಾಧಿಕಾರತ್ವದ ಫರ್ಮಾನನ್ನು ಹೊರಡಿಸಿ ಛತ್ರ ಚಾಮರವನ್ನು ದಯಪಾಲಿಸಿದ ಮತ್ತು ಬಾದಶಹನ ಹುದ್ದೆಯ ಎಲ್ಲಾ ಗೌರವ ಮತ್ತು ಅಲಂಕಾರಗಳನ್ನು ಹಿಂದೂಸ್ತಾನಕ್ಕೆ ಕಳಿಸಿಕೊಟ್ಟ. ಖುತ್ಬುದ್ದೀನನು ಆ ಫರ್ಮಾನು (ರಾಜಾಜ್ಞೆ) ಮತ್ತು ಖಿಲ್ಲತ್‌ಗಳಿಗೆ ಸ್ವಾಗತ ಕೋರಲು ಲಾಹೋರ್‌ವರೆಗೆ ಬಂದ ಮತ್ತು ತನ್ನ ಒಡೆಯನ ಬಗ್ಗೆ ತನಗಿದ್ದ ವಿಶ್ವಾಸ ಮತ್ತು ವಿಧೇಯತೆಯ ಪ್ರತಿಫಲವಾಗಿ ತನಗೆ ದೊರಕುತ್ತಿರುವ ಮನ್ನಣೆಯನ್ನು ಕಂಡು ಸಂತುಷ್ಟನಾದ. ಈ ಖಿಲ್ಲತ್ತುಗಳನ್ನು ಪಡೆದುಕೊಂಡು ಖುತ್ಬುದ್ದೀನನು ಹಿಜರಿ ಶಕೆ ೬೦೨ರ ಜೀಕಾಯ್ದಾ ತಿಂಗಳ ೧೮ ನೇ ದಿನಾಂಕದಂದು ಲಾಹೋರ್‌ನಲ್ಲಿ ತನ್ನ ಪಟ್ಟಾಭಿಷೇಕದ ವಿಧಿ ವಿಧಾನಗಳ ಆಚರಣೆಯನ್ನು ಮಾಡಿದ ಹಾಗೂ ತನ್ನ ಸಾರ್ವಭೌಮತ್ವ ಮತ್ತು ಸುಲ್ತಾನ್ ಮೆಹಮೂದ್ ಬಿನ್ ಗಯಾಸುದ್ದೀನನ ರಾಜಾಜ್ಞೆಯನ್ನು ಜನತೆಯ ನಡುವೆ ಜಾಹೀರು ಮಾಡಿ ಲಾಹೋರ್‌ನಿಂದ ದೆಹಲಿಗೆ ಮರಳಿದ.

ತಾಜುದ್ದೀನ್ ಯಲ್ದೋೞ ಜೊತೆ ಯುದ್ಧ :

ಖುತ್ಬುದ್ದೀನನು ಲಾಹೋರ್‌ನಿಂದ ನಿರ್ಗಮಿಸಿದ ನಂತರ ತಾಜುದ್ದೀನ್ ಯಲ್ದೋಜ್ ಪಂಜಾಬ್‌ನ ಮೇಲೆ ಆಕ್ರಮಣ ಮಾಡುವ ಸದಾವಕಾಶ ಲಭಿಸಿತು. ಅವನು ಘಜ್ನಿಯಿಂದ ಪ್ರಯಾಣ ಬೆಳೆಸಿ ಲಾಹೋರ್‌ನ ಮೇಲೆ ಆಕ್ರಮಣ ಮಾಡಿದ ಮತ್ತು ಅಲ್ಲಿನ ಆಡಳಿತಗಾರನನ್ನು ನಗರದಿಂದ ಹೊರ ದೂಡಿ ಸ್ವತಃ ಲಾಹೋರನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. ಖುತ್ಬುದ್ದೀನನಿಗೆ ಈ ವಿವರಗಳು ಲಭ್ಯವಾದ ನಂತರ ಅವನು ತತ್‌ಕ್ಷಣ ಲಾಹೋರ್ ತಲುಪಿದ. ಶಹಾಬುದ್ದೀನ್ ಘೋರಿಯಿಂದ ಪಾಲನೆ ಪೋಷನೆ ಮಾಡಲ್ಪಟ್ಟ ಅವರಿಬ್ಬರು ಹಿಜರಿ ಶಕೆ ೬೦೫ರ ಒಬ್ಬರ ವಿರುದ್ಧ ಒಬ್ಬರು ಯುದ್ಧದಲ್ಲಿ ಎದುರು ಬದುರಾಗಿ ನಿಂತರು. ಉಭಯತ್ರರ ನಡುವೆ ಘನಘೋರ ಯುದ್ಧ ನಡೆಯಿತು. ಇದರ ಪರಿಣಾಮವಾಗಿ ತಾಜುದ್ದೀನ್ ಯಲ್ರೋಜ್‌ನು ಹೀನಾಯವಾಗಿ ಪರಾಭವವನ್ನು ಹೊಂದಿದನು ಮತ್ತು ಅವನು ಯುದ್ಧರಂಗದಿಂದ ಪಲಾಯನ ಗೈದು ತವರಾನ್ ಮತ್ತು ಕರ್ಮಾನ್‌ನ ಮಾರ್ಗದಿಂದ ಬೆಟ್ಟಗುಡ್ಡ ಪ್ರದೇಶದಲ್ಲಿ ಅಡಗಿದ. ಈ ವಿಜಯದ ನಂತರ ಖುತ್ಬುದ್ದೀನನು ಘಜ್ನಿ ತಲುಪಿದ ಮತ್ತು ಅಲ್ಲಿನ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡ. ಘಜ್ನಿಯ ಸಿಂಹಾಸನವನ್ನು ಏರಿದ ಮೇಲೆ ಖುತ್ಬುದ್ದೀನನು ಅಮೋಘವಾದ ಮತ್ತು ಅತಿ ವೈಭವದ ಸಮಾರಂಭವನ್ನು ಏರ್ಪಡಿಸಿದ. ಹಾಗೂ "ಶತ್ರುವಿನ ಆಲೋಚನೆ" ಮತ್ತು "ವಿಧಿಯಾಟ" ದಿಂದ ನಿರ್ಲಿಪ್ತನಾಗಿ ಕುಡಿತದ ಚಟದಲ್ಲಿ ಹಗಲು ರಾತ್ರಿ ಕಳೆಯತೊಡಗಿದ.

ಘಜ್ನಿಯ ಸಮಸ್ತರು ಖುತ್ಬುದ್ದೀನ್‌ಗಿಂತಲೂ ಹೆಚ್ಚು ತಾಜುದ್ದೀನ್ ಯಲ್ದೋಜ್‌ನನ್ನು

ಮೆಚ್ಚುತ್ತಿದ್ದರು. ಖುತ್ಬುದ್ದೀನನ ವಿಲಾಸ, ಕುಡಿತ ಮತ್ತು ದಿನನಿತ್ಯದ ಆಗುಹೋಗುಗಳ ಬಗ್ಗೆ ನಿರ್ಲಕ್ಷ್ಯವನ್ನು ಕಂಡ ಅಲ್ಲಿನ ಕುಲೀನರು ಮತ್ತು ತಾಜುದ್ದೀನ್ ಯಲ್ದೋಜ್‌ನ ಬೆಂಬಲಿಗರು ಸಮಸ್ತ ವಿವರಗಳನ್ನು ತಿಳಿಸಿ ಘಜ್ನಿಯ ಮೇಲೆ ಆಕ್ರಮಣ ಮಾಡುವಂತೆ ಅವನಿಗೆ ಆಮಂತ್ರಣವನ್ನು ನೀಡಿದರು. ತಾಜುದ್ದೀನ ಯಲ್ದೋಜ್‌ನು ಹೀಗೊಂದು ಸದಾವಕಾಶದ ನಿರೀಕ್ಷೆಯಲ್ಲಿದ್ದ. ಘಜ್ನಿಯ ತನ್ನ ಶುಭಾಕಾಂಕ್ಷಿಗಳ ಪತ್ರವು ತಲುಪಿದ ಕೂಡಲೇ ಅವನು ಸುಸಜ್ಜಿತ ಸೇನೆಯೊಂದಿಗೆ ಘಜ್ನಿಯ ಮೇಲೆ ಆಕ್ರಮಣ ಮಾಡಿದ. ವಿಲಾಸದಲ್ಲಿ ಮುಳುಗೇಳುತ್ತಿದ್ದ ಖುತ್ಬುದ್ದೀನನು ವಾಸ್ತವಕ್ಕೆ ಬಂದು ಕಣ್ಣು ತೆರೆದಾಗ ಶತ್ರು ಎದುರಿಗಿದ್ದ. ಆದರೆ ಬಲಾಢ್ಯ ಶತ್ರುವನ್ನು ಎದುರಿಸುವಷ್ಟು ಸಿದ್ಧತೆ ಅವನಲ್ಲಿರಲಿಲ್ಲ. ಈ ಗೊಂದಲ ಮತ್ತು ಯುದ್ಧ ಭೀತಿಯ ನಡುವೆ ಸುರಂಗ ಮಾರ್ಗದ ಮೂಲಕ ರಾಜಮಹಲನ್ನು ತೊರೆದು ಪಲಾಯನ ಮಾಡಿದ ಮತ್ತು ನೇರವಾಗಿ ಲಾಹೋರ್ ತಲುಪಿದ.

ಯಾವ ಕ್ಷಣದಲ್ಲಾದರೂ ತಾಜುದ್ದೀನ್ ಯಲ್ದೋಜ್‌ನು ಲಾಹೋರ್‌ನ ಮೇಲೆ ಆಕ್ರಮಣ ಮಾಡಬಹುದೆಂಬ ಭೀತಿ ಸುಲ್ತಾನ್ ಖುತ್ಬುದ್ದೀನನಿಗೆ ಹಗಲಿರುಳು ಕಾಡಿಸತೊಡಗಿತು. ಆ ಆಪತ್ತನ್ನು ನಿವಾರಿಸುವ ಸಲುವಾಗಿ ಕೆಲ ವರ್ಷಗಳವರೆಗೆ ಅವನು ಲಾಹೋರ್‌ನಲ್ಲಿ ನೆಲೆಸಿದ. ಆ ಅವಧಿಯಲ್ಲಿ ಅವನು ಲಾಹೋರ್‌ನ ಜನತೆಯೊಂದಿಗೆ ಅತ್ಯಂತ ಕರುಣೆ ಮತ್ತು ದಯೆಯಿಂದ ವರ್ತಿಸುತ್ತಿದ್ದ ಮತ್ತು ತನ್ನ ದತ್ತಿದಾನಗಳಿಂದ ಅವರನ್ನು ಸಂತುಷ್ಟರನ್ನಾಗಿ ಇಟ್ಟಿದ್ದ.

ಖುತ್ಬುದ್ದೀನನ ಸಾವು:

ಹಿಜರಿ ಶಕೆ ೬೦೭ರ ಒಂದು ಹಗಲಿನಲ್ಲಿ ಖುತ್ಬುದ್ದೀನನು ಕುದುರೆಯ ಮೇಲೆ ಕುಳಿತು ಆಡುವ ಪೋಲೋ ಆಟದಲ್ಲಿ ತಲ್ಲೀನನಾಗಿದ್ದಾಗ ಆಕಸ್ಮಿಕವಾಗಿ ಕುದುರೆಯಿಂದ ಕೆಳಗೆ ಬಿದ್ದ. ಹಾಗೂ ಆ ಕುದುರೆಯ ಜೀನು ಕುದುರೆಯ ಅದರ ಬೆನ್ನಿನಿಂದ ಜಾರಿ ಖುತ್ಬುದ್ದೀನನ ಎದೆಯ ಮೇಲೆ ಬಿತ್ತು. ಈ ಘಟನೆಯಿಂದ ಅವನು ತೀವ್ರವಾಗಿ ಗಾಯಗೊಂಡ ಹಾಗೂ ಸದರಿ ಗಾಯದಿಂದ ಗುಣಮುಖನಾಗದೆ ಅವನು ಮರಣ ಹೊಂದಿದ. ದೆಹಲಿಯ ವಿಜಯ ಪ್ರಾಪ್ತಿಯಾದಾಗಿನಿಂದಲೂ ತನ್ನ ಸಾವಿನವರೆಗೂ ಖುತ್ಬುದ್ದೀನನು ಹಿಂದೂಸ್ತಾನವನ್ನು ಇಪ್ಪತ್ತು ವರ್ಷ ಮತ್ತು ಕೆಲವು ತಿಂಗಳವರೆಗೆ ಆಳ್ವಿಕೆ ಮಾಡಿದ. ಈ ಆಳ್ವಿಕೆಯ ಅವಧಿಯಲ್ಲಿ ನಾಲ್ಕು ವರ್ಷ ಕಾಲದ ಅವನ ಸ್ವತಂತ್ರ ಬಾದಶಹನ ಕಾಲವು ಕೂಡ ಸೇರಿದೆ. ಖುತ್ಬುದ್ದೀನನು ಪರಾಕ್ರಮ, ಪೌರುಷದ ವಿಷಯದಲ್ಲಿ ಹೆಸರುವಾಸಿಯಾಗಿದಂತೆ ದಯೆ ಹಾಗೂ ದಾನ ಧರ್ಮ ಮುಂತಾದ ಕ್ಷೇತ್ರದಲ್ಲಿಯೂ ಅಪಾರವಾಗಿ ತೊಡಗಿಸಿಕೊಂಡಿದ್ದ ಮತ್ತು ಇಂದಿಗೂ ಅವನ ಹೆಸರು ಹಿಂದೂಸ್ಥಾನದಲ್ಲಿ ಪ್ರಖ್ಯಾತವಾಗಿದೆ. ಅನೇಕ ಸಂದರ್ಭಗಳಲ್ಲಿ ಅವನು ತನ್ನ ಆಪ್ತರು

ಮತ್ತು ಹಿತೈಷಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ನೀಡುತ್ತಿದ್ದ. ಅಸಹಾಯಕರು ಮತ್ತು ಬಡವರಿಗೆ ಅಪಾರ ನೆರವನ್ನು ನೀಡುತ್ತಿದ್ದ ಮತ್ತು ಅವರ ನಿರೀಕ್ಷೆಯನ್ನು ಮೀರಿ ಅವರಿಗೆ ಇನಾಮು ಮತ್ತು ಉಡುಗೊರೆಗಳನ್ನು ನೀಡುತ್ತಿದ್ದ. ಖುತ್ಬುದ್ದೀನನ ಉದಾರತೆ ಮತ್ತು ದಯೆಯ ಕಾರಣಕ್ಕಾಗಿ ಅವನ ಹೆಸರು ಇಂದಿಗೂ 'ಲಕ್‌ಬಕ್ಷ್‌ನ' ಬಿರುದಿನಿಂದ ಈ ಪ್ರಪಂಚದಲ್ಲಿ ಗುರುತಿಸಲ್ಪಡುತ್ತಿದೆ. ಇವತ್ತಿನ ಸಂದರ್ಭದಲ್ಲಿ ಕೂಡ ಯಾವ ವ್ಯಕ್ತಿಯು ದಾನ ಶೂರನಾಗಿದ್ದಾನೋ ಅವನನ್ನು (ಖುತ್ಬುದ್ದೀನ್-ಎ-ಜಮಾನ)ಇಂದಿನ ಖುತ್ಬುದ್ದೀನ್ ಎಂದು ಕರೆಯುತ್ತಾರೆ.

ಖುತ್ಬುದ್ದೀನನು ಮಾತ್ರವಲ್ಲದೆ ಅವನ ನಾಲ್ಕು ಮಂದಿ ಗುಲಾಮರು ಕೂಡ ಹಿಂದೂಸ್ಥಾನದ ಮೇಲೆ ಆಳ್ವಿಕೆ ನಡೆಸಿದ್ದಾರೆ. ಆದ್ದರಿಂದ ಅವರ ಬಗ್ಗೆ ಕೂಡ ಈ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ದಾಖಲು ಮಾಡುವ ಅಗತ್ಯವಿದೆ.

"ಸುಲ್ತಾನ್ ತಾಜುದ್ದೀನ್ ಯಲ್ದೋಜ್"

ಸುಲ್ತಾನ್ ಶಹಾಬುದ್ದೀನ್ ಘೋರಿಗೆ ಒಬ್ಬ ಮಗಳು ಮಾತ್ರ ಇದ್ದಳೆಂದು ಇತಿಹಾಸಕಾರರು ದಾಖಲಿಸುತ್ತಾರೆ. (ಅವನಿಗೆ ಗಂಡು ಮಕ್ಕಳು ಜನಿಸಿರಲಿಲ್ಲ). ಆದ್ದರಿಂದ ಅವನಿಗೆ ತುರ್ಕಿ ಗುಲಾಮರನ್ನು ಖರೀದಿ ಮಾಡಿ ಅವರನ್ನು ತನ್ನ ಸ್ವಂತ ಗಂಡು ಮಕ್ಕಳಂತೆ ಪೋಷಿಸುವ ಮನೋಧರ್ಮವಿತ್ತು. ಒಂದು ದಿನದ ಘಟನೆ ಏನೆಂದರೆ, ಶಹಾಬುದ್ದೀನನಿಗೆ ಒಬ್ಬ ಸಮೀಪ ವರ್ತಿಯಾದ ಮತ್ತು ಕುಚೇಷ್ಟೆ ಸ್ವಭಾವದ ಸರದಾರನೊಬ್ಬ ಸುಲ್ತಾನೊಡನೆ ನುಡಿದ "ಬಾದಶಹರವರಿಗೆ ಖುದಾವಂದನು ಒಬ್ಬ ಪುತ್ರನನ್ನು ದಯಪಾಲಿಸಿದ್ದಲ್ಲಿ ಎಷ್ಟೊಂದು ಚೆನ್ನಾಗಿರುತ್ತಿತ್ತು. ಯಾವುದಾದರೂ ಅಘಟಿತ ಘಟನೆಯು ನಡೆದಿದ್ದಲ್ಲಿ ಆಗ ಸಿಂಹಾಸನಕ್ಕೊಬ್ಬ ವಾರೀಸುದಾರನು ಇರುತ್ತಿದ್ದ." ಈ ಮಾತನ್ನು ಕೇಳಿ ಸುಲ್ತಾನನು "ಬಾದಶಹನಿಗೆ ಕೆಲವು ಪುತ್ರರು ಇರುತ್ತಾರೆ ಮತ್ತು ಅವರು ತಮ್ಮ ತಂದೆಯ ಮರಣದ ನಂತರ ರಾಜ್ಯಕ್ಕೆ ವಾರೀಸುದಾರರಾಗಿ ಇರುತ್ತಾರೆ. ಆದರೆ ನನಗೆ ಸಾವಿರಾರು ವಿಧೇಯ ಮತ್ತು ನಂಬಿಕಸ್ಥ ಪುತ್ರರಿದ್ದಾರೆ. ಅವರು ನನ್ನ ನಂತರ ರಾಜ್ಯದ ಆಡಳಿತ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಶತಮಾನಗಳ ಕಾಲ ನನ್ನ ಹೆಸರನ್ನು ಜೀವಂತವಾಗಿಡುತ್ತಾರೆ." ಓದುಗರು ಈ ವಿಷಯದ ಬಗ್ಗೆ ಗಮನಹರಿಸಿದಲ್ಲಿ ಆ ಸರಳ ಹೃದಯದ ಬಾದಶಹನ ನುಡಿಯಂತೆ ಇತಿಹಾಸವು ಮುಂದುವರೆಯಿತು. ಶಹಾಬುದ್ದೀನ್ ಘೋರಿಯ ಪ್ರೀತಿ ಪಾತ್ರರಾದ ಗುಲಾಮರು ಯಾವ ಪರಾಕ್ರಮ ಮತ್ತು ವಿವೇಕದಿಂದ ಹಿಂದೂಸ್ಥಾನವನ್ನು ಆಳಿದರು ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಅವರ ಈ ರಾಜೋಚಿತವಾದ ನಡವಳಿಕೆ ದೆಸೆಯಿಂದ ಆ ಗುಲಾಮ ಆಶ್ರಿತ ರಾಜರ ಹೆಸರಷ್ಟೇ ಅಲ್ಲದೆ ಶಹಾಬುದ್ದೀನನ ಹೆಸರು ಕೂಡ ಜೀವಂತ ದಂತಕಥೆಯಾಗಿ ಚಾಲ್ತಿಯಲ್ಲಿದೆ.

ಆರಂಭದ ದಿನಗಳು:

ಸುಲ್ತಾನ್ ಶಹಾಬುದೀನನ ಮೇಲೆ ಹೇಳಿದ ಪುತ್ರರ ಪೈಕಿ ಸುಲ್ತಾನ್ ತಾಜುದ್ದೀನ್ ಯಲ್ದೋಜ್ ಕೂಡ ಒಬ್ಬನು. ಯಲ್ದೋಜ್ ಬಾಲ್ಯಾವಸ್ಥೆಯಲ್ಲಿದ್ದಾಗಲೇ ಅವನನ್ನು ಶಹಾಬುದ್ದೀನನು ಒಬ್ಬ ವ್ಯಾಪಾರಿಯಿಂದ ಖರೀದಿಸಿದ್ದ. ಯಲ್ದೋಜ್‌ನ ಗುಣನಡತೆ ಮತ್ತು ಸೌಂಧರ್ಯದಿಂದ ಶಹಾಬುದ್ದೀನನು ತುಂಬಾ ಪ್ರಭಾವಿತನಾಗಿದ್ದ ಅವನ ಅನೇಕ ಸಾಕು ಪುತ್ರರ ಪೈಕಿ ಯಲ್ದೋಜ್‌ಗೆ ತುಂಬಾ ಪ್ರಾಶಸ್ತ್ಯವಿತ್ತು. ಯಲ್ರೋಜ್ ಯೌವನವನ್ನು ತಲುಪಿದಾಗ ಆತನ ಮೋರೆಯಲ್ಲಿದ್ದ ಗಾಂಭೀರ್ಯ ಮತ್ತು ಪೌರುಷವನ್ನು ಕಂಡ ಸುಲ್ತಾನನು ತನ್ನ ಗೌರಾವಾನ್ವಿತ ಸರದಾರರ ಸಾಲಿನಲ್ಲಿ ಅವನನ್ನು ಸೇರಿಸಿಕೊಂಡ ಹಾಗೂ ಶೇರ್ವಾನ್ ಮತ್ತು ಖರ್ಮಾನನ ಪ್ರದೇಶಗಳನ್ನು ಅವನ ಜಹಗೀರು ಎಂದು ಘೋಷಿಸಿದ. ತಾಜುದ್ದೀನ ಯಲ್ದೋಜ್‌ನು ತನ್ನ ಜಹಗೀರಿನಲ್ಲಿ ವಾಸವಾಗಿದ್ದ ಮತ್ತು ಸುಲ್ತಾನ್ ಶಹಾಬುದ್ದೀನನು ಹಿಂದೂಸ್ಥಾನದ ಮೇಲೆ ಆಕ್ರಮಣ ಮಾಡುವ ಸಲುವಾಗಿ ಶೇರ್ವಾನ್ ಮತ್ತು ಖರ್ಮಾನ್‌ನ ಮಾರ್ಗದಿಂದ ಪ್ರಯಾಣ ಬೆಳೆಸಿದಾಗಲೆಲ್ಲಾ ಯಲ್ದೋಜ್ ಅತ್ಯಂತ ಸೇವಾತತ್ಪರನಾಗಿ ಸುಲ್ತಾನ್‌ನ ಸೇನೆಗೆ ಆದರೋಪಚಾರ ಮಾಡಿ ಸೇವೆಯನ್ನು ಸಲ್ಲಿಸುತ್ತಿದ್ದ. ಅವನು ಸೇನೆಯ ಸರದಾರರಿಗೆ ಒಂದೊಂದು ಸಾವಿರ ಖಬಾವ ಕಲಾಹ್ ಇನಾಮನ್ನು ನೀಡುತ್ತಿದ್ದ. ಸುಲ್ತಾನ ಯಲ್ದೋಜ್‌ಗೆ ಇಬ್ಬರು ಪುತ್ರಿಯರಿದ್ದರು. ಸುಲ್ತಾನ ಶಹಾಬುದ್ದೀನನ ಆಜ್ಞೆಯ ಮೇರೆಗೆ ಅವನು ತನ್ನ ಒಬ್ಬ ಪುತ್ರಿಯನ್ನು ಖುತ್ಬುದ್ದೀನ ಐಬಕ್‌ಗೆ ಮದುವೆ ಮಾಡಿಕೊಟ್ಟ ಮತ್ತು ಒನ್ನೊಬ್ಬಾಕೆಯನ್ನು ನಾಸೀರುದ್ದೀನ ಖಬಾಚನ ಜೊತೆಯಲ್ಲಿ ಮದುವೆಯನ್ನು ನೆರವೇರಿಸಿದ. ಅವನಿಗೆ ಇಬ್ಬರು ಹೆಣ್ಣು ಮಕ್ಕಳಲ್ಲದೆ ಇಬ್ಬರು ಪುತ್ರರನ್ನು ಕೂಡಾ ಅಲ್ಲಾಹನು ದಯಪಾಲಿಸಿದ್ದ. ಈ ಪೈಕಿ ಒಬ್ಬನು ಬಾಲ್ಯಾವಸ್ಥೆಯಲ್ಲಿಯೇ ಮರಣ ಹೊಂದಿದ. ಅವನ ಮರಣದ ವೃತ್ತಾಂತ ಕೂಡ ತೀರಾ ವಿಚಿತ್ರವಾಗಿತ್ತು. ಆ ಸನ್ನಿವೇಶದ ಹಿನ್ನೆಲೆಯನ್ನು ಗಮನಿಸಿದಾಗ ತಾಜುದ್ದೀನ್ ಯಲ್ದೋಜ್‌ನ ಉತ್ತಮ ವ್ಯಕ್ತಿತ್ವವು ಎದ್ದು ಕಾಣುತ್ತದೆ.

ಮಗನ ಸಾವಿನ ಚಿತ್ರವಿಚಿತ್ರ ಸನ್ನಿವೇಶ:

ತಾಜುದ್ದೀನ್ ಯಲ್ದೋಜ್ ತನ್ನ ಪ್ರೀತಿ ಪಾತ್ರ ಮಗನ ವಿದ್ಯಾಭ್ಯಾಸದ ಸಲುವಾಗಿ ಅವನನ್ನು ಒಬ್ಬ ಗುರುವಿನ ವಶಕ್ಕೆ ನೀಡಿದ್ದ. ಒಂದು ದಿನ ಆ ಗುರುವು ತನ್ನ ರಾಜಕುವರ ಶಿಷ್ಯನ ಬಗ್ಗೆ ಬೇಸರಪಟ್ಟುಕೊಂಡ ಮತ್ತು ಕೋಪದ ತೀವ್ರತೆಯಿಂದ ಚಾಟಿಯನ್ನು ಎತ್ತಿಕೊಂಡು ಅವನ ತಲೆಯ ಮೇಲೆ ಪ್ರಹಾರ ಮಾಡಿದ. ರಾಜಕುಮಾರನ ಕೊನೆಗಾಲ ಸಮೀಪಿಸಿತ್ತು ಆದ್ದರಿಂದ ಚಾಟಿ ಏಟಿನ ತೀವ್ರತೆಯನ್ನು ಸಹಿಸಲಾರದೆ ಅವನು ಕೊನೆಯುಸಿರೆಳೆದ. ಯಲ್ದೋಜ್‌ಗೆ ಈ ವಿಷಯದ ಬಗ್ಗೆ ತಿಳಿದುಬಂದಾಗ ಅವನು ಗುರುಕುಲಕ್ಕೆ ಹೋದ ಆಗ ಆ ಗುರುವಿನ ಪರಿಸ್ಥಿತಿ ದಯನೀಯವಾಗಿದ್ದು

ಅವನು ತನ್ನ ಕೃತ್ಯದ ಬಗ್ಗೆ ಅಪಾರ ಪಶ್ಚಾತ್ತಾಪಕ್ಕೆ ಈಡಾಗಿದ್ದ. ಗುರುವಿನ ಈ ದುರ್ಗತಿಯನ್ನು ಕಂಡ ಯಲ್ದೋಜ್ ಗುರುವಿನೊಂದಿಗೆ "ಈ ರಾಜಕುಮಾರನ ಸಾವು ಅವನ ತಾಯಿಗೆ ತಿಳಿಯುವುದಕ್ಕೆ ಮುಂಚೆ ನೀನು ಈ ಪಟ್ಟಣವನ್ನು ತೊರೆದು ಹೊರಡು ಮತ್ತು ಬೇರೆ ಯಾವುದಾದರೂ ಒಂದು ಪ್ರದೇಶದಲ್ಲಿ ನಿನ್ನ ಆಶ್ರಯವನ್ನು ಕಂಡುಕೋ. ಇಲ್ಲವಾದಲ್ಲಿ ನಿನಗೂ ಕೂಡ ಈ ಕೃತ್ಯದ ಶಿಕ್ಷೆಯಾಗಿ ಮರಣದಂಡನೆ ಆಗಬಹುದು. ಗುರುವು ಯಲ್ದೋಜ್‌ನ ದಯಾಪರತೆಯ ಕೃತ್ಯಕ್ಕೆ ವಂದನೆಗಳನ್ನು ಸಲ್ಲಿಸಿದ ಮತ್ತು ಅವನ ಸೂಚನೆಯ ಮೇರೆಗೆ ಆ ಪಟ್ಟಣವನ್ನು ಕೂಡಲೇ ತೊರೆದು ಪ್ರಾಣವನ್ನು ಉಳಿಸಿಕೊಂಡ.

ಯಲ್ದೋಜ್‌ನ ಪಟ್ಟಾಭಿಷೇಕ:

ತನ್ನ ಕೊನೆಗಾಲದಲ್ಲಿ ಶಹಾಬುದ್ದೀನನು ಕಿರ್ಮಾನ್‌ಗೆ ಆಗಮಿಸಿದಾಗ ಅವನು ತಾಜುದ್ದೀನ್ ಯಲ್ರೋಜ್‌ಗೆ ರಾಜ ಪೋಷಾಕನ್ನು ನೀಡಿ ಗೌರವಿಸಿದ ಮತ್ತು ತನ್ನ ಸೇನೆಯ ಧ್ವಜವನ್ನು ಕೂಡ ದಯಾಪಾಲಿಸಿದ. ತನ್ನ ನಂತರ ಯಲ್ರೋಜ್ ತನ್ನ ಉತ್ತರಾಧಿಕಾರಿಯಾಗಬೇಕೆಂಬ ಹಂಬಲ ಶಹಾಬುದ್ದೀನನಿಗೆ ಇತ್ತು. ಆ ದಯಾಳು ದೊರೆಯ ಬಯಕೆಯಂತೆಯೇ ಆಯಿತು. ಶಹಾಬುದ್ದೀನನ ಮರಣವಾದಾಗ ತುರ್ಕಿ ಮತ್ತು ಘಜ್ನಿ ಸರದಾರರು ಸುಲ್ತಾನ್ ಗಯಾಸುದ್ದೀನನ ಮಗನಾದ ಸುಲ್ತಾನ್ ಮೆಹಮೂದ್‌ನನ್ನು ಬಿಲಾವಗರಮ್‌ಸೇರ್‌ನಿಂದ ಆಹ್ವಾನಿಸಿ ಅವನನ್ನು ಶಹಾಬುದ್ದೀನನ ಉತ್ತರಾಧಿಕಾರಿಯಾಗಿ ಮಾಡಬೇಕೆಂದು ನಿರ್ಧರಿಸಿದರು. ಆ ಸರದಾರರುಗಳು ಈ ಸಾರಾಂಶವನ್ನು ಒಳಗೊಂಡ ಒಂದು ಪತ್ರವನ್ನು ಕೂಡ ಸುಲ್ತಾನ್ ಮೆಹಮೂದನ ಸನ್ನಿಧಿಗೆ ಕಳುಹಿಸಿ ಕೊಟ್ಟಿದ್ದರು. ಆ ಪತ್ರಕ್ಕೆ ಸುಲ್ತಾನ್ ಮೆಹಮೂದನು ನೀಡಿದ ಉತ್ತರ ಹೀಗಿತ್ತು "ನನ್ನ ಜನ್ಮ ಸ್ಥಳವಾದ ಫೈರೋಜ್ ಕೋ ನನಗೆ ಇಡೀ ಪ್ರಪಂಚಕ್ಕಿಂತಲೂ ಪ್ರಿಯವಾದುದ್ದು ಮತ್ತು ಇದಕ್ಕಿಂತ ಉತ್ತಮವಾದ ಯಾವ ಜಾಗವು ಇಲ್ಲ. ನಾನು ಇದನ್ನು ಬಿಟ್ಟು ಘಜ್ನಿಗೆ ಬರಲು ಇಷ್ಟಪಡುವುದಿಲ್ಲ." ಆ ಸರದಾರರುಗಳಿಗೆ ಮೇಲ್ಕಂಡಂತೆ ಉತ್ತರವನ್ನು ರವಾನೆ ಮಾಡಿದ ಸುಲ್ತಾನ್ ಮೆಹಮೂದನು ತಾಜುದ್ದೀನ್ ಯಲ್ರೋಜ್‌ನ ಹೆಸರಿಗೆ ಸ್ವಾತಂತ್ರ್ಯದ ಪತ್ರವನ್ನು ಮತ್ತು ಆತನು ಘಜ್ನಿ ರಾಜ್ಯದ ಸುಲ್ತಾನನೆಂಬ ಫರ್ಮಾನನ್ನು ಕಳಿಸಿಕೊಟ್ಟ. ಹೀಗೆ ತನ್ನ ದಿವಂಗತ ಚಿಕ್ಕಪ್ಪನಾದ ಶಹಾಬುದ್ದೀನನ ಅಂತಿಮ ಇಚ್ಛೆಯನ್ನು ಸುಲ್ತಾನ್ ಮೆಹಮೂದನು ಪೂರೈಸಿದ. ಸುಲ್ತಾನ್ ಮೆಹಮೂದನ ರಾಜಾಜ್ಞೆಯು ತಲುಪಿದ ಕೂಡಲೇ ಯಲ್ರೋಜನು ಘಜ್ನಿಯ ಸಮಸ್ತ ಆಡಳಿತವನ್ನು ತನ್ನ ವಶಕ್ಕೆ ಪಡೆದುಕೊಂಡ ಮತ್ತು ಘಜ್ನಿಯ ಸುತ್ತಮುತ್ತಲಿನ ನಗರ ಪಟ್ಟಣಗಳನ್ನು ವಶಪಡಿಸಿಕೊಂಡು ಸಮಸ್ತ ಆಡಳಿತದ ಅಭಿವೃದ್ಧಿಯಲ್ಲಿ ತನ್ನನ್ನು ತೊಡಗಿಸಿಕೊಂಡ.

ಯಲ್ದ್ರೋಜ್‌ನ ಯುದ್ಧ ಮತ್ತು ಆಕ್ರಮಣಗಳು:

ಪಟ್ಟಾಭಿಷಿಕ್ತನಾದ ಕೆಲ ಕಾಲದ ನಂತರ ತಾಜುದ್ದೀನ್ ಯಲ್ದ್ರೋಜನಿಗೆ ಹಿಂದೂಸ್ಥಾನದ ವಿಜಯಿಯಾಗಬೇಕೆಂಬ ಗೀಳು ಹತ್ತಿತು. ಈ ಉದ್ದೇಶದ ಹಿನ್ನೆಲೆಯಲ್ಲಿ ಅವನು ಲಾಹೋರ್‌ನ ಮೇಲೆ ಆಕ್ರಮಣ ಮಾಡಿದ. ಖುತ್ಬುದ್ದೀನ್ ಐಬಕ್‌ನು ಯಲ್ದ್ರೋಜ್‌ನನ್ನು ಎದುರಿಸಿದ. ಪಂಜಾಬ್‌ನ ಸರಹದ್ದಿನಲ್ಲಿ ಉಭಯತ್ರರ ನಡುವೆ ಘೋರ ಯುದ್ಧ ನಡೆಯಿತು. ಇದರ ಪರಿಣಾಮವಾಗಿ ಯಲ್ದ್ರೋಜನು ಸೋತು ಪರಾರಿಯಾದ ಮತ್ತು ಘಜ್ನಿಯ ಮೇಲೆ ಕೂಡ ಖುತ್ಬುದ್ದೀನನ ರಾಜ್ಯಭಾರವಾಯಿತು. ಇದಾದ ಕೆಲವು ದಿನಗಳ ನಂತರ ತಾಜುದ್ದೀನ್ ಯಲ್ದ್ರೋಜ್ ಪನಃ ಘಜ್ನಿಯನ್ನು ತನ್ನ ವಶಕ್ಕೆ ಪಡೆದುಕೊಂಡ (ಇದರ ವಿವರಗಳು ಖುತ್ಬುದ್ದೀನನ ವೃತ್ತಾಂತದಲ್ಲಿ ಈಗಾಗಲೇ ಪ್ರಸ್ತುತ ಪಡಿಸಲಾಗಿದೆ.)

ತನ್ನ ಆಡಳಿತಾವಧಿಯಲ್ಲಿ ತಾಜುದ್ದೀನ್ ಯಲ್ದ್ರೋಜನು ಸುಲ್ತಾನ್ ಮೆಹಮೂದ್ ಬಿನ್ ಗಯಾಸುದ್ದೀನನ ನೆರವಿನಿಂದ ಹೇರಾತ್ ಮೇಲೆ ಆಕ್ರಮಣ ಮಾಡಿದ ಮತ್ತು ಐಜುದ್ದೀನ್ ಕರ್ಮೆಲ್‌ನನ್ನು ಸೋಲಿಸಿ ತಾನು ವಿಜಯಿಯಾದ. ಅವನು ಒಂದು ಸಾರಿ ಸೇಸ್ತಾನ್ ಮೇಲೆ ಕೂಡ ಆಕ್ರಮಣ ಮಾಡಿದ. ಆದರೆ ಮುತ್ತಿಗೆ ಹಾಕಿದ ಕೂಡಲೇ ಸೇಸ್ತಾನಿನ ರಾಜನು ಯಲ್ದ್ರೋಜ್‌ನೊಂದಿಗೆ ಸಂಧಿ ಮಾಡಿಕೊಂಡ. (ಇದೇ ಕಾಲಾವಧಿಯಲ್ಲಿ) ತಾಜುದ್ದೀನ್ ಸೇಸ್ತಾನ್‌ನಿಂದ ಘಜ್ನಿಗೆ ಮರಳುತ್ತಿದ್ದಾಗ ನಸೀರುದ್ದೀನ್ ಮೀರ್‌ಶಿಕಾರ್ ಅವನನ್ನು ಸೇನೆಯೊಂದಿಗೆ ಎದುರಿಸಿದ. ಅವರಿಬ್ಬರ ನಡುವೆ ಯುದ್ಧ ನಡೆಯಿತು ಮತ್ತು ನಸೀರುದ್ದೀನನಿಗೆ ಸೋಲುಂಟಾಯಿತು. ವಿಜಯಿಯಾದ ಯಲ್ದ್ರೋಜ್ ತನ್ನ ರಾಜಧಾನಿಗೆ ಮರಳಿದ.

ಸ್ವಲ್ಪ ದಿನಗಳ ನಂತರ ಘಜ್ನಿಯು ಖವಾರಜಮ್‌ನ ಸುಲ್ತಾನನ ಕೈವಶವಾಯಿತು ಮತ್ತು ಯಲ್ದ್ರೋಜ್ ಶೇರ್ವಾನ್ ಮತ್ತು ಖರ್ಮಾನ್‌ನಲ್ಲಿ ತಲೆಮರೆಸಿಕೊಂಡ. ಮತ್ತು ಸ್ವಲ್ಪ ಕಾಲದವರೆಗೆ ತನ್ನ ಪುರಾತನವಾದ ಜಹಗೀರಿನಲ್ಲಿ ನೆಲೆಯಾದ. ಆದರೆ ಹಿಂದೂಸ್ಥಾನದ ಸಸ್ಯಶಾಮಲೆ ಮತ್ತು ಸಂಪದ್ಭರಿತ ಭೂಮಿಯು ಅವನನ್ನು ಮತ್ತೆ ಮತ್ತೆ ಆಕರ್ಷಿಸಿತು ಹಾಗೂ ಅವನು ತನ್ನ ಜಹಗೀರಿನ ಮಿತಿಯಲ್ಲಿ ಇರಲು ಇಷ್ಟಪಡಲಿಲ್ಲ. ಅವನು ಹಿಂದೂಸ್ಥಾನದ ವಿಜಯಿ ಆಗುವ ಉದ್ದೇಶದಿಂದ ಅಲ್ತಮಷ್ ಮೇಲೆ ಯುದ್ದ ಸಾರಿದ. ಅಲ್ತಮಷ್ ಅವನನ್ನು ಯುದ್ಧರಂಗದಲ್ಲಿ ಎದುರಿಸಿದ. ತರಾವಳಿ ಎಂಬ ಪ್ರದೇಶದಲ್ಲಿ ಉಭಯತ್ರರ ನಡುವೆ ಯುದ್ಧ ನಡೆಯಿತು ಮತ್ತು ಅಲ್ತಮಷ್ ವಿಜಯಿಯಾದ. (ತರಾವಳಿ ಅಂದರೆ ಫರಿಶ್ತಾನ ಅಭಿಪ್ರಾಯ ತಡಾವಡಿ ಅಥವಾ ತರಾಯನ್ ಎಂಬುದಾಗಿದೆ.) ಸದರಿ ಯುದ್ಧದಲ್ಲಿ ಸೋತ ಯಲ್ದ್ರೋಜ್ ಅಲ್ತಮಷ್‌ನ ಬಂದಿಯಾದ ಹಾಗೂ ಸೆರೆಮನೆಯಲ್ಲಿದ್ದಾಗಲೇ ಅವನು ಮರಣ ಹೊಂದಿದ.

ನಾಸೀರುದ್ದೀನ್ ಖಬಾಚ:

ಈ ರಾಜನ ಬಗ್ಗೆ "ಸಲಾತೀನ್–ಎ– ಸಿಂಧ್ (ಸಿಂಧ್‌ನ ಸುಲ್ತಾನರು) ಇತಿಹಾಸದಲ್ಲಿ ತಿಳಿಸಲಾಗುವುದು.

ಇಕ್ತಿಯಾರುದ್ದೀನ್ ಮೊಹಮದ್ ಖಿಲ್ಜಿ:

ಈ ಬಾದಶಹನ ಇತಿಹಾಸವನ್ನು "ಬಂಗಾಳದ ಸುಲ್ತಾನರು" ಎಂಬ ಅಧ್ಯಯನದಲ್ಲಿ ತಿಳಿಸಲಾಗುವುದು.

ಬಹಾವುದ್ದೀನ್ ತೊಘ್ರಲ್:

ಬಹಾವುದ್ದೀನ್ ತೊಘ್ರಲ್‌ನು ಘೋರಿ ಸಂಸ್ಥಾನದ ಸುಲ್ತಾನನಾದ ಶಹಾಬುದ್ದೀನ್ ಘೋರಿಯ ಒಬ್ಬ ಪ್ರಖ್ಯಾತ ಸರದಾರ ಮತ್ತು ಗುಲಾಮನಾಗಿದ್ದ. ಅವನು ಶಹಾಬುದ್ದೀನನ ನೆರವಿನಿಂದ ಕ್ರಮೇಣ ಅಭಿವೃದ್ಧಿ ಹೊಂದುತ್ತ ಗುಲಾಮನಿಂದ ಸರದಾರನ ದರ್ಜೆಗೆ ಏರಿದ್ದ ಅವನು ಅತ್ಯಂತ ಉತ್ತಮ ಗುಣಗಳನ್ನು ಹೊಂದಿದವನಾಗಿದ್ದು ಸನ್ನಡತೆಯವನಾಗಿದ್ದ. ಈ ಕಾರಣದಿಂದಲೇ ಸುಲ್ತಾನ್ ಶಹಾಬುದ್ದೀನ್ ಪೋಷಿತ ಗುಲಾಮರ ಪೈಕಿ ಅವನಿಗೆ ವಿಶೇಷ ಸ್ಥಾನ ಮಾನ ಮತ್ತು ಮನ್ನಣೆ ದೊರಕಿತ್ತು. ಹಿಜರ ಶಕೆ ೫೯೨ರ ಸುಲ್ತಾನ್ ಶಹಾಬುದ್ದೀನ್‌ನು ಬೆಹಕರ್ ಕೋಟೆಯನ್ನು (ಈಗ ಅದರ ಹೆಸರು ಬಯಾನಾ ಎಂದು ಜನಜನಿತವಾಗಿದೆ) ಗೆದ್ದುಕೊಂಡ ಮತ್ತು ಅದರ ಆಡಳಿತವನ್ನು ತೊಘ್ರಲ್‌ನ ವಶಕ್ಕೆ ನೀಡಿದ. ಹಾಗೂ ತಾನು ಗ್ವಾಲಿಯರ್‌ನತ್ತ ನಡೆದ. ಅಲ್ಲಿ ತಲುಪಿದ ನಂತರ ಯುದ್ಧ ಮಾಡಿ ಗ್ವಾಲಿಯರ್ ಕೋಟೆಯನ್ನು ಗೆಲ್ಲುವುದು ಕಷ್ಟದ ವಿಷಯವೆಂದು ಅವನಿಗೆ ಅರಿವಾಯಿತು. ಹೀಗಾಗಿ ಅವನು ಯುದ್ಧವನ್ನು ಮಾಡಲಿಲ್ಲ ಆದರೆ ಕೋಟೆಗೆ ಮುತ್ತಿಗೆಯನ್ನು ಹಾಕಿದ ಮತ್ತು ದಿನೇ ದಿನೇ ಮುತ್ತಿಗೆಯ ತೀವ್ರತೆಯನ್ನು ಹೆಚ್ಚಿಸುತ್ತಾ ಹೋದ. ಕೊನೆಗೆ ಗ್ವಾಲಿಯರ್‌ನ ರಾಜನು ಈ ಮುತ್ತಿಗೆಯ ತೀವ್ರತೆಯನ್ನು ಸಹಿಸಲು ಸಾಧ್ಯವಾಗದೆ ಅಪಾರ ದೂರದೃಷ್ಟಿಯನ್ನು ಪ್ರದರ್ಶಿಸಿದ. ಹಾಗೂ ಶಹಾಬುದ್ದೀನ್ ಸನ್ನಿಧಿಯಲ್ಲಿ ಹಾಜರಾಗಿ ಅವನಿಗೆ ಅಪಾರ ಧನ ಕನಕಗಳ ಕಾಣಿಕೆಯನ್ನು ನೀಡಿದ. ಹಾಗೂ ಶಹಾಬುದ್ದೀನ್‌ನನ್ನು ತನ್ನ ರಾಜ್ಯದ ಸರಹದ್ದಿನಿಂದ ದೂರ ಕಳಿಸಿದ. ಶಹಾಬುದ್ದೀನನು ಗ್ವಾಲಿಯರ್ ರಾಜನು ನೀಡಿದ ಅಪಾರ ಹಣ ಮತ್ತು ಅಮೂಲ್ಯ ವಸ್ತುಗಳನ್ನು ಪಡೆದುಕೊಂಡು ಮರಳಿ ಘಜ್ನಿಗೆ ಹೋದ. ಮತ್ತು ಅವನು ಬಯಾನಾದಲ್ಲಿ ಒಂದು ಬಲಿಷ್ಠವಾದ ಕೋಟೆಯನ್ನು ನಿರ್ಮಾಣ ಮಾಡಿ ಅದನ್ನೇ ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡ.

ಗ್ವಾಲಿಯರ್ ಪಟ್ಟಣದ ಮುತ್ತಿಗೆಯನ್ನು ಕೈಬಿಟ್ಟ ತೊಘರಲ್‌ನು ಗ್ವಾಲಿಯರ್‌ನ ಸುತ್ತಮುತ್ತಲಿನ ಅನೇಕ ಪ್ರದೇಶಗಳ ಮೇಲೆ ನಿರಂತರವಾಗಿ ಆಕ್ರಮಣವನ್ನು ಮಾಡುತ್ತಾ ಆ ಪ್ರದೇಶಗಳನ್ನು ನಾಶ ಮಾಡುವ ಕಾಯಕವನ್ನು ಮುಂದುವರೆಸಿದ. ಇದಕ್ಕೆ

ಮುಖ್ಯ ಕಾರಣವೊಂದಿತ್ತು. ಘಜ್ನಿಗೆ ಮರಳಿ ಹೋಗುವ ಸಂದರ್ಭದಲ್ಲಿ ಶಹಾಬುದ್ದೀನನು ತೊಘರಲ್ ಜೊತೆಗೆ ಸಮಾಲೋಚನೆ ನಡೆಸುತ್ತಾ ಒಂದು ವೇಳೆ ಗ್ವಾಲಿಯರ್ ಕೋಟೆಯ ವಿಜಯಿಯಾದಲ್ಲಿ ಅದರ ಆಡಳಿತವನ್ನು ಕೂಡ ಬಯಾನಾದಂತೆ ತೊಘರಲ್‌ನ ವಶಕ್ಕೆ ನೀಡುವುದಾಗಿ ಶಹಾಬುದ್ದೀನ್ ನುಡಿದಿದ್ದ. ತುಂಬಾ ಕಾಲದವರೆಗೆ ತೊಘರಲ್‌ನು ಈ ರೀತಿಯ ಲೂಟಿಯನ್ನು ನಡೆಸುತ್ತಿದ್ದ. ಆದರೆ ಕೋಟೆಯನ್ನು ಗೆದ್ದು ಕೊಳ್ಳಲು ಅವನಿಂದ ಸಾಧ್ಯವಾಗಲಿಲ್ಲ ಮತ್ತು ಮೊದಲಿನಂತೆಯೇ ಹಿಂದೂಗಳು ಕೋಟೆಯೊಳಗಡೆ ಸುರಕ್ಷಿತವಾಗಿದ್ದರು. ಹೀಗಾಗಿ ಲೂಟಿ ಮತ್ತು ಸುಲಿಗೆಯಿಂದ ತನ್ನ ಉದ್ದೇಶ ಸಾಧನೆಯಾಗುವುದಿಲ್ಲವೆಂದು ತೊಘರಲ್‌ಗೆ ಮನದಟ್ಟಾಯಿತು. ಆದ್ದರಿಂದ ಅವನು ಗ್ವಾಲಿಯರ್‌ನಿಂದ ಎರಡು ಹರದಾರಿ ದೂರದಲ್ಲಿ ಒಂದು ಹೊಸದಾದ ಮತ್ತು ಬಲಾಢ್ಯವಾದ ಕೋಟೆಯನ್ನು ನಿರ್ಮಾಣ ಮಾಡಿಸಿದ ಮತ್ತು ತನ್ನ ಸೈನ್ಯದೊಂದಿಗೆ ಆ ಕೋಟೆಯೊಳಗಡೆ ವಾಸ್ತವ್ಯವನ್ನು ಹೂಡಿದ. ತೊಘರಲ್‌ನು ಗ್ವಾಲಿಯರ್ ಪಟ್ಟಣದ ಸುತ್ತಮುತ್ತಲಿನ ಪ್ರದೇಶದ ಮೇಲೆ ಒಂದು ವರ್ಷಗಳವರೆಗೆ ನಿರಂತರವಾಗಿ ಆಕ್ರಮಣವನ್ನು ಮಾಡುತ್ತಿದ್ದ ಮತ್ತು ಆ ಮೂಲಕ ಕೋಟೆಯೊಳಗಡೆ ಇದ್ದವರನ್ನು ತೀರ ಅಸಹಾಯಕರನ್ನಾಗಿ ಮಾಡಿದ. ತೊಘರಲ್‌ನ ಈ ಕಠಿಣ ಕ್ರಮಗಳಿಂದ ನೊಂದ ಗ್ವಾಲಿಯರ್ ಕೋಟೆಯವರು ಅಪಾರ ಧನಕನಕಗಳು ಉಡುಗೊರೆಗಳೊಂದಿಗೆ ತಮ್ಮ ರಾಯಭಾರಿಯನ್ನು ಖುತ್ಬುದ್ದೀನ್ ಐಬಕ್‌ನ ಬಳಿ ಕಳಿಸಿದರು. ಮತ್ತು ಕೋಟೆಯನ್ನು ಅವನ ವಶಕ್ಕೆ ನೀಡಿದರು. ಕೋಟೆಯು ತನ್ನ ಶತ್ರುವಾದ ಖುತ್ಬುದ್ದೀನ್ ಐಬಕ್‌ನ ಕೈವಶವಾಯಿತೆಂದು ತಿಳಿದ ಕೂಡಲೇ ತೊಘರಲ್ ದ್ವೇಷಾಸೂಯೆಗಳಿಂದ ಬೆಂದುಹೋದ. ಈ ಕಾರಣದಿಂದ ತೊಘರಲ್ ಮತ್ತು ಖುತ್ಬುದ್ದೀನ್ ಐಬಕ್‌ನ ನಡುವೆ ದ್ವೇಷ ಇನ್ನೂ ಹೆಚ್ಚಾಯಿತು. ಹೀಗಾಗಿ ಸುಲ್ತಾನ್ ಶಹಾಬುದ್ದೀನ್‌ನಿಂದ ಪಾಲನೆ ಪೋಷಣೆಗೊಳಗಾಗಿ ತರಬೇತಿಯನ್ನು ಹೊಂದಿದ ಗುಲಾಮರಿಬ್ಬರೂ ಪರಸ್ಪರ ಒಬ್ಬರ ವಿರುದ್ದ ಒಬ್ಬರು ಯುದ್ಧ ಮಾಡುವ ಸಲುವಾಗಿ ಸಿದ್ಧತೆಯನ್ನು ಮಾಡಲಾರಂಭಿಸಿದರು. ಆದರೆ ಏಕಾಏಕೀ ಸಂಭವಿಸಿದ ತೊಘರಲ್‌ನ ಸಾವಿನ ದೆಸೆಯಿಂದ ಈ ಘೋರ ಯುದ್ಧವು ನಡೆಯಲಿಲ್ಲ. ತೊಘರಲ್ ನಿರ್ಮಿಸಿದ ಸುಲ್ತಾನ್ ಕೋಟ್‌ನ ಪ್ರಖ್ಯಾತ ಕೋಟೆಯು ತೊಘರಲ್‌ನ ನೆನಪಿನಲ್ಲಿ ಇಂದಿಗೂ ಉಳಿದುಕೊಂಡಿದೆ.

ಆರಾಮ್ ಶಾ ಬಿನ್ ಖುತ್ಬುದ್ದೀನ್ ಐಬಕ್:

ಖುತ್ಬುದ್ದೀನ್ ಐಬಕ್‌ನ ಮರಣದ ನಂತರ ರಾಜ್ಯದ ಸರದಾರರ ಒಮ್ಮತದ ಅಭಿಪ್ರಾಯದ ಮೇರೆಗೆ ಅವನ ಮಗನಾದ ಆರಾಮ್ ಶಾ ತನ್ನ ತಂದೆಯ ವಾರೀಸುದಾರನಾದ. ಹಾಗೂ ಅವನು ರಾಜ್ಯದ ಆಡಳಿತ ಸೂತ್ರಗಳನ್ನು ತನ್ನ ಕೈಗೆ ಪಡೆದುಕೊಂಡ. ಆರಾಮ್ ಶಾಗೆ ರಾಜ್ಯಾಡಳಿತವನ್ನು ನಡೆಸುವ ಸಾಮರ್ಥ್ಯ ಇರಲಿಲ್ಲ.

ಈ ಕಾರಣದಿಂದ ಒಂದು ವರ್ಷದ ಒಳಗಾಗಿ ಇಡೀ ರಾಜ್ಯವು ಗೊಂದಲದ ಗೂಡಾಯಿತು ಮತ್ತು ರಾಜ್ಯದಲ್ಲಿ ಅರಾಜಕತೆಯು ತಾಂಡವವಾಡತೊಡಗಿತು. ನಾಸೀರುದ್ದೀನ್ ಖಬಾಚನು ಸಿಂಧ್ ಪ್ರದೇಶದ ಮೇಲೆ ದಾಳಿ ಮಾಡಿ ಮುಲ್ತಾನ್, ಔಛ್ ಬಖರ್ ಮತ್ತು ಶೇವ್ರಾನ್ ಮೊದಲಾದ ಪಟ್ಟಣಗಳನ್ನು ತನ್ನ ವಶಕ್ಕೆ ಪಡೆದುಕೊಂಡ. ಬಂಗಾಳದಲ್ಲಿ ಖಿಲ್ಜಿ ಸರದಾರರು ತಮ್ಮ ಸ್ವತಂತ್ರ ರಾಜ್ಯವನ್ನು ಅಸ್ತಿತ್ವಕ್ಕೆ ತಂದರು. ಮುಸಲ್ಮಾನ್ ಸರದಾರರ ತಲೆಹರಟೆಗಳನ್ನು ಕಂಡ ಅನೇಕ ಹಿಂದೂ ರಾಜರುಗಳಿಗೂ ತಮ್ಮದೇ ಆದ ಸ್ವತಂತ್ರ ಸಂಸ್ಥಾನಗಳನ್ನು ಸ್ಥಾಪಿಸುವ ಬಯಕೆವುಂಟಾಯಿತು. ರಾಜ್ಯದ ಎಲ್ಲಾ ಗಡಿ ಪ್ರದೇಶಗಳಲ್ಲಿಯೂ ಪಿತೂರಿ ಮತ್ತು ದಂಗೆಯ ಜ್ವಾಲೆಗಳು ವ್ಯಾಪಿಸತೊಡಗಿದವು. ಬಾದಶಹನ ಅಯೋಗ್ಯತೆ ಮತ್ತು ರಾಜ್ಯದ ಅತಂತ್ರ ಸ್ಥಿತಿಯನ್ನು ಮನಗಂಡ ಅಮೀರ್ ಅಲಿ ಇಸ್ಮಾಯಿಲ್ ಮತ್ತು ಅಮೀರ್ ದಾವೂದ್ ವೆಲಮಿ ಎಂಬ ಸರದಾರರುಗಳು ತೀವ್ರ ಪಶ್ಚಾತ್ತಾಪವನ್ನು ಪಟ್ಟರು. ಅವನನ್ನು ಖುತ್ಬುದ್ದೀನ್ ಐಬಕ್‌ನ ಉತ್ತರಾಧಿಕಾರಿಯನ್ನಾಗಿ ಮಾಡಿ ಸುಲ್ತಾನನನ್ನಾಗಿ ಪಟ್ಟಾಭಿಷೇಕ ಮಾಡುವುದರಲ್ಲಿ ಅವರಿಬ್ಬರೂ ಪ್ರಮುಖವಾಗಿ ಕಾರಣಕರ್ತರಾಗಿದ್ದರು. ಅವರಿಬ್ಬರು ಆರಾಮ್ ಶಾನನ್ನು ಬಾದಶಾಹನ ಹುದ್ದೆಯಿಂದ ನಿವೃತ್ತಿಗೊಳಿಸಿ ಖುತ್ಬುದ್ದೀನ್ ಐಬಕ್‌ನ ಸಾಕು ಮಗ ಹಾಗೂ ಅವನ ಅಳಿಯನಾಗಿದ್ದ ಶಮ್‌ಸುದ್ದೀನ್ ಅಲ್ತಮಷ್‌ನನ್ನು ಬಾದಶಹನಾಗಿ ಮಾಡಬೇಕೆನ್ನುವ ಪಕ್ಕಾ ಇರಾದೆಯನ್ನು ಮಾಡಿಕೊಂಡರು. ಅಲ್ತಮಷ್ ಆ ಹೊತ್ತಿನಲ್ಲಿ ಬದಾಯೂನಿನಲ್ಲಿದ್ದ. ಸರದಾರರು ಪತ್ರ ಮುಖೇನ ಅವನನ್ನು ಆಹ್ವಾನಿಸಿದರು. ಆ ಪತ್ರ ಸಿಕ್ಕ ಕೂಡಲೇ ಅವನು ತತ್‌ಕ್ಷಣ ದೆಹಲಿ ತಲುಪಿದ ಮತ್ತು ರಾಜ್ಯವನ್ನು ಆಕ್ರಮಿಸಿಕೊಂಡ.

ಸರದಾರರುಗಳ ಇರಾದೆ ಹಾಗೂ ಸದರಿಯವರ ರಾಜಕೀಯ ಚಟುವಟಿಕೆಗಳು ಮತ್ತು ಅಲ್ತಮಷ್‌ನ ಆಗಮನದ ವಿಷಯ ತಿಳಿದ ಕೂಡಲೇ ಆರಾಮ್ ಶಾಹ್ ದೆಹಲಿಯನ್ನು ತೊರೆದು ಸಮೀಪದ ಪ್ರದೇಶ ಒಂದರಲ್ಲಿ ಬೀಡುಬಿಟ್ಟ. ಅಲ್ತಮಷ್ ಇಡೀ ರಾಜ್ಯವನ್ನು ಆಕ್ರಮಿಸಿಕೊಂಡ ವಿಷಯ ಅವನಿಗೆ ತಲುಪಿದಾಗ ಅವನು ತನ್ನ ತಂದೆಯ ನಂಬಿಗಸ್ತ ಅಧಿಕಾರಿಗಳನ್ನು ಮತ್ತು ಸೈನ್ಯದವರನ್ನು ಕರೆಸಿ ಅವರ ನೆರವನ್ನು ಕೋರಿದ. ಖುತ್ಬುದ್ದೀನ್ ಐಬಕ್‌ನ ಕೆಲವು ಸರದಾರರು ಆರಾಮ್ ಶಾಹ್‌ಗೆ ನೆರವು ನೀಡಲು ಸಿದ್ಧರಾದರು. ಆರಾಮ್ ಶಾಹ್ ಒಂದು ಬಲಿಷ್ಠ ಸೇನೆಯೊಂದಿಗೆ ದೆಹಲಿಯ ಮೇಲೆ ಯುದ್ಧವನ್ನು ಸಾರಿದ. ಅಲ್ತಮಷ್‌ನು ಅವನನ್ನು ಯುದ್ಧ ರಂಗದಲ್ಲಿ ಎದುರಿಸಿದ ಮತ್ತು ಆ ಯುದ್ಧದಲ್ಲಿ ಅಲ್ತಮಷ್‌ಗೆ ವಿಜಯ ಪ್ರಾಪ್ತವಾಯಿತು ಹಾಗೂ ಆರಾಮ್ ಶಾಹನು ಯುದ್ಧ ಭೂಮಿಯಿಂದ ಪರಾರಿಯಾದ. ಆ ವಿಜಯದ ನಂತರ ಅಲ್ತಮಷ್‌ನನ್ನು ಹಿಂದೂಸ್ತಾನದ ಬಾದಶಹ ಎಂದು ಸ್ವೀಕರಿಸಿ ಮನ್ನಣೆಯನ್ನು ನೀಡಲಾಯಿತು. ಆರಾಮ್ ಶಾಹನು ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿಯವರೆಗೆ ರಾಜ್ಯವನ್ನು ಆಳಿದ.

ಶಮ್ಸುದ್ದೀನ್ ಅಲ್ತಮಷ್

ಆರಂಭದ ದಿನಗಳು:

"ತಬ್‌ಖಾತೆ ನಾಸಿರಿ" ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವ ಪ್ರಕಾರ ಶಮ್ಸುದ್ದೀನ್ ಅಲ್ತಮಷ್ ಖರಾಕ್ತಾಯಿ ತುರ್ಕಿಗಳ ದೊಡ್ಡ ಮನೆತನದ ಸಂತಾನವಾಗಿದ್ದ. ಅಲ್ತಮಷ್‌ನ ತಂದೆಯ ಹೆಸರು ಏಲಮ್‌ಖಾನ್ ಎಂದಾಗಿತ್ತು. ಅವನು ಅಲ್ಬರಿ ಬುಡಕಟ್ಟಿನ ಸರದಾರನಾಗಿದ್ದ. ಅವನು ತನ್ನ ಅಪಾರ ಶ್ರೀಮಂತಿಕೆ, ಅಸಂಖ್ಯ ಸೇವಕರು ಹಾಗೂ ನಂಬಿಗಸ್ಥ ಬೆಂಬಲಿಗರನ್ನು ಹೊಂದಿದ್ದ. ಹೀಗಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಅವನು ಅಪಾರ ಖ್ಯಾತಿಯನ್ನು ಹೊಂದಿದ್ದ. ತನ್ನ ಸೌಂದರ್ಯ ಮತ್ತು ಉತ್ತಮ ನಡವಳಿಕೆಯ ಕಾರಣದಿಂದ ಅಲ್ತಮಷ್ ತನ್ನ ಎಲ್ಲಾ ಸಹೋದರರ ಪೈಕಿ ಅತ್ಯಂತ ಹೆಸರು ವಾಸಿಯಾಗಿದ್ದ. ಆದ್ದರಿಂದ ತನ್ನ ಎಲ್ಲಾ ಪುತ್ರರ ಪೈಕಿ ಅವನನ್ನು ಏಲಮ್‌ಖಾನ್ ಅತ್ಯಂತ ಹೆಚ್ಚು ಪ್ರೀತಿಸುತ್ತಿದ್ದ. ಅಲ್ತಮಷ್‌ನ ಸಹೋದರರು ಅವನ ಬಗ್ಗೆ ಅಪಾರ ಈರ್ಷ್ಯೆ ಮತ್ತು ಅಸೂಯೆಯನ್ನು ಹೊಂದಿದ್ದರು. ಪ್ರವಾದಿ ಯೂಸುಫ್‌ರವರ ಜೊತೆಯಲ್ಲಿ ವ್ಯವಹರಿಸಿದಂತೆ ಅಲ್ತಮಷ್‌ನ ಶತ್ರುಗಳು ಅಲ್ತಮಷ್‌ನೊಂದಿಗೆ ನಡೆದುಕೊಂಡರು. ಅಲ್ತಮಷ್‌ನ ಸಹೋದರರು ಮತ್ತು ಅವರ ಮಕ್ಕಳು ಸೇರಿ 'ತುರ್ಕಿಯ ಈ ಯೂಸುಫ್' ಅಲ್ತಮಷ್‌ನನ್ನು ಗುಲಾಬಾನಿ ಉತ್ಸವದ ನೆಪವೊಡ್ಡಿ ಅಲ್ಬರಿ ಬುಡಕಟ್ಟಿನ ಯಾಕೂಬ್ (ಏಲಮ್‌ಖಾನ್)ನಿಂದ ಬೇರ್ಪಡಿಸಿ ಒಬ್ಬ ವ್ಯಾಪಾರಿಗೆ ಮಾರಿಬಿಟ್ಟರು. ಕೆಲಕಾಲದವರೆಗೆ ಆ "ಒಡೆಯನ" ಮನೆಯಲ್ಲಿ ಅಲ್ತಮಷ್ ತುಂಬಾ ಆರಾಮವಾಗಿ ಪಾಲನೆ ಪೋಷಣೆಯನ್ನು ಹೊಂದಿದ. ಆದರೆ ಅವನ ಅದೃಷ್ಟ ಅವನಿಗೆ ಅಲ್ಲಿ ನೆಲೆಯಾಗಲು ಬಿಡಲಿಲ್ಲ ಮತ್ತು ಅವನನ್ನು ಹಾಜಿ ಬುಕಾರಿ ಎಂಬ ವ್ಯಾಪಾರಿಯು ಖರೀದಿಸಿದ. ಹಾಜಿ ಬುಕಾರಿಯು ಅಲ್ತಮಷ್‌ನನ್ನು ಹಾಜಿ ಜಮಾಲುದ್ದೀನ್‌ನ ವಶಕ್ಕೆ ನೀಡಿದ. ಹಾಜಿ ಜಮಾಲ್ ಅವನನ್ನು ತನ್ನೊಡನೆ ಕರೆದುಕೊಂಡು ಘಜ್ನಿಗೆ ಬಂದ. ಇಡೀ ಘಜ್ನಿ ರಾಜ್ಯವು ಅದುವರೆಗೂ ಅಂತಹ ಸುಂದರ ಗುಲಾಮನನ್ನು ಕಂಡಿರಲಿಲ್ಲ. ಆದ್ದರಿಂದ ಅಲ್ತಮಷ್ ಘಜ್ನಿ ತಲುಪಿದ ಕೂಡಲೇ ಅವನ ಸೌಂದರ್ಯದ ಚರ್ಚೆಯು ಎಲ್ಲಾ ವಲಯಗಳಲ್ಲೂ ಹರಡಿತು. ಬಾದಶಹನ ಆಸ್ಥಾನಿಕರು ಅವನ ವಿಷಯವನ್ನು ಶಹಾಬುದ್ದೀನ್ ಘೋರಿಯ ಬಳಿ ಪ್ರಸ್ತಾಪ ಮಾಡಿದರು ಹಾಗೂ ಶಹಾಬುದ್ದೀನನು ಅಲ್ತಮಷ್‌ನ ಕ್ರಯದ ಪ್ರತಿಫಲವನ್ನು ನೀಡುವಂತೆ ಆಜ್ಞೆ ಮಾಡಿದ. ಹಾಜಿ ಜಮಾಲ್‌ನ ಬಳಿ ಅಲ್ತಮಷ್‌ನ ಜೊತೆಯಲ್ಲಿ ಇನ್ನೊಬ್ಬ ಗುಲಾಮ ಕೂಡ ಇದ್ದ. ಇಬ್ಬರು ಗುಲಾಮರ ಬೆಲೆಯನ್ನು ಎರಡು ಸಾವಿರ ದೀನಾರ್‌ಗಳೆಂದು ಹಾಜಿ ಜಮಾಲ್ ಹೇಳಿದ. ಆದರೆ ಇಬ್ಬರು ಗುಲಾಮರ ಬೆಲೆಯಾಗಿ ಒಂದು ಸಾವಿರ ದೀನಾರ್‌ಗಳನ್ನು ನೀಡುವುದಾಗಿ ಶಹಾಬುದ್ದೀನ ನಿರ್ಧರಿಸಿದ. ಹಾಜಿ ಜಮಾಲನು ಆ ಬೆಲೆಗೆ ತನ್ನ ಗುಲಾಮರನ್ನು ಮಾರಾಟ ಮಾಡಲು ತಿರಸ್ಕರಿಸಿದ.

ಇದರಿಂದ ಕುಪಿತಗೊಂಡ ಶಹಾಬುದ್ದೀನನನು ಆ ವ್ಯಾಪಾರಿಯ ಅವಿಧೇಯತೆಗಾಗಿ ಅವನನ್ನು ಶಿಕ್ಷಿಸಬೇಕೆಂದು ಎಣಿಸಿ ಆ ಇಬ್ಬರು ಗುಲಾಮರನ್ನು ಕೂಡ ಯಾರೂ ಖರೀದಿಸಕೂಡದೆಂದು ಆಜ್ಞೆ ಹೊರಡಿಸಿದ. ಹಾಜಿ ಜಮಾಲನು ಒಂದು ವರ್ಷದವರೆಗೆ ಘಜ್ನಿಯಲ್ಲಿದ್ದ. ಆದರೆ ಯಾರೊಬ್ಬರು ಕೂಡ ಆ ಗುಲಾಮರನ್ನು ಖರೀದಿಸಲು ಮುಂದೆ ಬರಲಿಲ್ಲ. ನಿರಾಶನಾಗಿ ಅವನು ಬುಖಾರಾಗೆ ಹೋದ. ಕೆಲವು ದಿನಗಳವರೆಗೆ ಅವನು ಬುಖಾರಾದಲ್ಲಿ ವಾಸವಾಗಿದ್ದು ನಂತರ ಹಾಜಿ ಜಮಾಲ್ ಪುನಃ ಘಜ್ನಿಗೆ ಹೋದ. ಅವನು ಘಜ್ನಿಗೆ ಕಾಲಿಟ್ಟ ಕೂಡಲೇ ಪಟ್ಟಣವಾಸಿಗಳು ಅವನ ಸುತ್ತ ಮುತ್ತ ಘೇರಾಯಿಸ ತೊಡಗಿಸಿದರು. ಅಲ್ಲಿನ ಪ್ರತಿಯೊಬ್ಬ ಶ್ರೀಮಂತನಿಗೂ ಅವನನ್ನು ಖರೀದಿ ಮಾಡಿ ಅವರ ಪಾಲನೆ ಪೋಷಣೆ ಮಾಡಬೇಕೆಂಬ ಬಯಕೆ ಇತ್ತು. ಆದರೆ ಬಾದಶಹನ ಭಯದ ದೆಸೆಯಿಂದ ಯಾರೊಬ್ಬರಿಗೂ ಹಾಜಿ ಜಮಾಲನೊಡನೆ ಈ ಬಗ್ಗೆ ವ್ಯವಹಾರ ಮಾಡುವ ಧೈರ್ಯವುಂಟಾಗಲಿಲ್ಲ. ಹಾಜಿ ಜಮಾಲ ಕೂಡ ಭಯಗ್ರಸ್ಥನಾಗಿ ಈ ನಿಟ್ಟಿನಲ್ಲಿ ಯಾವುದೇ ರೀತಿಯಲ್ಲಿ ಮುಂದುವರೆಯಲಿಲ್ಲ. (ಇದೇ ಹೊತ್ತಿನಲ್ಲಿ) ಅಲ್ತಮಷ್‌ನ ಅದೃಷ್ಟದ ತಾರೆ ಮಿನುಗುತ್ತಿತ್ತು. ನೆಹರ್‌ವಾಲದ ರಾಜನನ್ನು ಸೋಲಿಸಿದ ನಂತರ ಖುತ್ಬುದ್ದೀನ್ ಐಬಕ್‌ನು ನಸೀರುದ್ದೀನ್ ಖರ್ಮೇಲ್‌ನ ಜೊತೆಯಲ್ಲಿ ಘಜ್ನಿಗೆ ಬಂದ. ಅಲ್ತಮಷ್‌ನ ಅತೀವ ಸೌಂದರ್ಯದ ಚರ್ಚೆಯನ್ನು ಕೇಳಿದ ಅವನು ಅಲ್ತಮಷ್‌ನನ್ನು ತಾನು ಖರೀದಿಸುವುದಾಗಿ ಶಹಾಬುದ್ದೀನ್‌ನ ಅಪ್ಪಣೆಯನ್ನು ಕೋರಿದ. ಶಹಾಬುದ್ದೀನನು "ನಾನು ಈಗಾಗಲೇ ಆ ಗುಲಾಮನನ್ನು ಖರೀದಿಸಕೂಡದೆಂದು ರಾಜಾಜ್ಞೆಯನ್ನು ಹೊರಡಿಸುವುದರಿಂದ ಮತ್ತೆ ಘಜ್ನಿಯ ಬಜಾರಿನಲ್ಲಿ ಅವನ ಮಾರಾಟವನ್ನು ಮಾಡುವಂತೆ ಆಜ್ಞೆ ಮಾಡುವುದು ಆಡಳಿತಾತ್ಮಕ ದೃಷ್ಟಿಯಿಂದ ಸೂಕ್ತವಾಗುವುದಿಲ್ಲ. ಆದರೆ ಆ ವ್ಯಾಪಾರಿಯು ದೆಹಲಿಗೆ ಹೋಗಿ ಅಲ್ಲಿ ಆ ಶ್ರೇಷ್ಠ ಗುಲಾಮನನ್ನು ಮಾರಾಟ ಮಾಡಬಹುದಾಗಿದೆ." ಎಂದನು.

ಸುಲ್ತಾನ್ ಖುತ್ಬುದ್ದೀನನು ಕೆಲಕಾಲದವರೆಗೆ ಘಜ್ನಿಯಲ್ಲಿ ಉಳಿದಿದ್ದ. ನಂತರ ತನ್ನ ಮಂತ್ರಿಯಾದ ನಿಜಾಮುದ್ದೀನನನ್ನು ಕೆಲವು ಮುಖ್ಯ ಕರ್ತವ್ಯಗಳನ್ನು ನಿರ್ವಹಿಸುವಂತೆ ಆದೇಶ ಮಾಡಿ ಸ್ವತಃ ದೆಹಲಿಗೆ ಮರಳಿದ. ಘಜ್ನಿಯಿಂದ ಮರಳುವಾಗ ನಿಜಾಮುದ್ದೀನನು ತನ್ನೊಡನೆ ಹಾಜಿ ಜಮಾಲನನ್ನು ಕರೆತರಬೇಕೆಂದು ಖುತ್ಬುದ್ದೀನನು ಸೂಚನೆಯನ್ನು ನೀಡಿದ್ದ. ಅಂತೆಯೇ ತನ್ನ ಮುಖ್ಯ ಕರ್ತವ್ಯಗಳನ್ನು ನಿರ್ವಹಿಸಿದ ಬಳಿಕ ನಿಜಾಮುದ್ದೀನನು ದೆಹಲಿಗೆ ಹೊರಡುವಾಗ ಹಾಜಿ ಜಮಾಲನನ್ನು ತನ್ನೊಡನೆ ಕರೆತಂದ. ಖುತ್ಬುದ್ದೀನನು ಐಬಕ್‌ನೆಂಬ ಹೆಸರಿನ ಗುಲಾಮನನ್ನು ತಘಾಕ್ ಎಂಬ ಹೆಸರಿನಿಂದಲೂ ಮತ್ತು ಇನ್ನೊಬ್ಬನ ಹೆಸರನ್ನು ಅಲ್ತಮಷ್ ಎಂದು ಇಟ್ಟ. ಐಬಕ್‌ನನ್ನು ಖುತ್ಬುದ್ದೀನನು ಖಜಾನೆಯ ಮುಖ್ಯಸ್ಥನನ್ನಾಗಿ ಮಾಡಿದ. ಹಾಗೂ ಅಲ್ತಮಷ್‌ನನ್ನು ಪುತ್ರನನ್ನಾಗಿ ಮಾಡಿಕೊಂಡ. ತನ್ನ ಆಸ್ಥಾನದಲ್ಲಿ ಸೇರಿಸಿಕೊಂಡ ಖುತ್ಬುದ್ದೀನ್ ಮತ್ತು ಯಲ್ದೋಜ್‌ನ ನಡುವಿನ ಯುದ್ಧದಲ್ಲಿ ಖುತ್ಬುದ್ದೀನನ ಕಡೆಯಿಂದ ಯುದ್ಧ ಮಾಡುತ್ತ

ಯುದ್ಧ ರಂಗದಲ್ಲಿ ಐಬಕ್ ಹತನಾದ. ಮತ್ತು ಅಲ್ತಮಷ್ ತನ್ನ ಒಡೆಯನ ಕರುಣೆಯ ಆಶ್ರಯದಲ್ಲಿ ಪಾಲನೆಪೋಷಣೆಯನ್ನು ಪಡೆಯುತ್ತಿದ್ದ ಮತ್ತು ಅಭಿವೃದ್ಧಿಯನ್ನು ಹೊಂದುತ್ತ ಬಾದಶಹನ ಖಾಸಾ ಮೇಲ್ವಿಚಾರಕನ ಹುದ್ದೆಗೆ ಏರಿದ.

ಅಲ್ತಮಷ್‌ನ ಮೇಲೆ ಖುತ್ಬುದ್ದೀನನು ಅಪಾರ ನಂಬಿಕೆಯನ್ನಿಟ್ಟಿದ್ದ. ಈ ನಂಬಿಕೆಯು ಎಷ್ಟು ಪ್ರಬಲವಾಗಿತ್ತೆಂದರೆ, ಗ್ವಾಲಿಯರ್‌ನ ಕೋಟೆಯನ್ನು ಗೆದ್ದುಕೊಂಡು ಅಲ್ತಮಷ್‌ನ ವಶಕ್ಕೆ ಅದನ್ನು ನೀಡಿದ. ಕೆಲ ಕಾಲದ ನಂತರ ಅಲ್ತಮಷ್‌ಗೆ ಬರನ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದ ಜಹಗೀರನ್ನು ನೀಡಲಾಯಿತು ಮತ್ತು ಅವನನ್ನು ಬದಾಯೂನ್‌ದ ರಾಜನನ್ನಾಗಿಯೂ ನೇಮಕ ಮಾಡಲಾಯಿತು. ಶಹಾಬುದ್ದೀನನು ಖಕ್ಕರ್‌ಗಳನ್ನು ಸದೆಬಡಿಯಲು ಹಿಂದೂಸ್ಥಾನಕ್ಕೆ ಬಂದಾಗ ರಾಜಾಜ್ಞೆಗೆ ಅನುಗುಣವಾಗಿ ಖುತ್ಬುದ್ದೀನನು ಕೂಡ ಬಲಾಢ್ಯ ಸೇನೆಯೊಂದಿಗೆ ಶಹಾಬುದ್ದೀನನ ನೆರವಿಗಾಗಿ ಪಂಜಾಬ್‌ನತ್ತ ಪ್ರಯಾಣ ಬೆಳೆಸಿದ. ಅಲ್ತಮಷ್‌ಗೆ ಈ ವಿಷಯ ತಿಳಿದು ಬಂದ ನಂತರ ಅವನು ಕೂಡ ಬದಾಯೂನ್‌ನಿಂದ ಒಂದು ಬಲಿಷ್ಠ ಸೇನೆಯನ್ನು ಸಿದ್ಧ ಪಡಿಸಿಕೊಂಡು ಖುತ್ಬುದ್ದೀನನ ಬಳಿ ತಲುಪಿದ ಮತ್ತು ಅವನ ಜೊತೆಯಲ್ಲಿ ಪ್ರಯಾಣ ಮುಂದುವರೆಸಿದ. ಮತ್ತು ಅಲ್ತಮಷ್ ಪಂಜಾಬ್‌ನ ಯುದ್ಧದಲ್ಲಿ ತನ್ನ ಎಂದಿನ ಪರಾಕ್ರಮವನ್ನು ಮೆರೆದ ಹಾಗೂ ಮುಸಲ್ಮಾನರ ಸೈನ್ಯದಲ್ಲಿ ಅವನಂತಹ ಪರಾಕ್ರಮಿ ಮತ್ತು ಶೂರ ಸೈನಿಕ ಮತ್ತೊಬ್ಬನಿಲ್ಲ ಎಂದು ಸಾಬೀತು ಪಡಿಸಿದ.

ಅಲ್ತಮಷ್‌ಗೆ ಸರ್ದಾರರ ಮುಖಂಡನಾಗಿ ಹುದ್ದೆ:

ಖಕ್ಕರ್‌ಗಳ ಸೈನ್ಯವು ನದಿಯ ಇನ್ನೊಂದು ತೀರದಲ್ಲಿತ್ತು ಮತ್ತು ಹಿಂದೂ ಸೈನ್ಯದ ಮೇಲೆ ಮುಸ್ಲಿಮ್ ಸೈನಿಕರ ಯಾವುದೇ ಹಿಡಿತವಿರಲಿಲ್ಲ. ಅಲ್ತಮಷ್‌ನು ಧೈರ್ಯಸಾಹಸಗಳಿಂದ ಪ್ರೇರಿತನಾಗಿ ನದಿಯಲ್ಲಿ ಕುದುರೆಯನ್ನು ದೌಡಾಯಿಸಿದ. ಮತ್ತು ನದಿಯನ್ನು ದಾಟಿ ಶತ್ರುಗಳ ಮೇಲೆ ಆಕ್ರಮಣ ಮಾಡಿದ. ಅಲ್ತಮಷ್‌ನು ತೋರಿದ ಕತ್ತಿವರಸೆಯ ಚಮತ್ಕಾರಗಳಲ್ಲಿ ಹತ್ತು ಸಾವಿರ ಹಿಂದೂಗಳು ಸಾವನ್ನಪ್ಪಿದರು. ಖಕ್ಕರ್‌ಗಳ ಸೈನ್ಯ ಸೋತು ಯುದ್ಧ ರಂಗದಿಂದ ಪಲಾಯನ ಮಾಡಿತು. ಶಹಾಬುದ್ದೀನನು ಅಲ್ತಮಷ್‌ನ ಪರಾಕ್ರಮವನ್ನು ಕಂಡು ಅವನಿಗೆ ಅನೇಕ ಪಾರಿತೋಷಕಗಳನ್ನು ನೀಡಿದ ಮತ್ತು ಅಲ್ತಮಷ್‌ನನ್ನು ಗುಲಾಮಗಿರಿಯಿಂದ ಸ್ವತಂತ್ರನನ್ನಾಗಿ ಮಾಡುವ ಅವನ ಸ್ವಾತಂತ್ರ್ಯದ ರಾಜಾಜ್ಞೆಯನ್ನು ಹೊರಡಿಸಬೇಕೆಂತಲೂ ಮತ್ತು ಅತ್ಯಂತ ಉತ್ತಮ ರೀತಿಯಲ್ಲಿ ಅವನ ಪೋಷಣೆ ಮಾಡಬೇಕೆಂತಲೂ ಖುತ್ಬುದ್ದೀನ್ ಬಳಿ ಶಿಫಾರಸ್ಸು ಮಾಡಿದ. ಖುತ್ಬುದ್ದೀನನು ತನ್ನ ಒಡೆಯನ ಆಜ್ಞೆಯನ್ನು ಪಾಲಿಸಿದ ಮತ್ತು ಅಲ್ತಮಷ್‌ನ ಕೊರಳಿನಿಂದ ಗುಲಾಮಗಿರಿಯ ಹೊರೆಯನ್ನು ಕೆಳಗಿಳಿಸಿದ. ಅಲ್ತಮಷ್‌ನು ಕ್ರಮೇಣ ಅಭಿವೃದ್ಧಿ ಹೊಂದುತ್ತ ಅಮೀರ್ ಉಲ್ ಉಮ್ರಾ ಅಂದರೆ ಸರದಾರರುಗಳ ನಾಯಕನ ಹುದ್ದೆಯನ್ನು ಅಲಂಕರಿಸಿದ.

ಪಟ್ಟಾಭಿಷೇಕ:

ಖುತ್ಬುದ್ದೀನ್ ಐಬಕ್‌ಗೆ ಅಲ್ಲಾಹನು ಮೂವರು ಪುತ್ರಿಯರನ್ನು ದಯಪಾಲಿಸಿದ್ದ. ಅವರ ಪೈಕಿ ಒಬ್ಬಳು ಅಲ್ತಮಷ್‌ನ ಪತ್ನಿಯಾದಳು ಮತ್ತು ಉಳಿದವರಿಬ್ಬರು ಒಬ್ಬರ ನಂತರ ಒಬ್ಬರು ನಾಸಿರುದ್ದೀನ್ ಖಬಾಚನೊಡನೆ ವಿವಾಹವಾದರು. ಖುತ್ಬುದ್ದೀನನ ಮರಣದ ನಂತರ ದೆಹಲಿಯ ಸರದಾರರು ಮತ್ತು ಅಧಿಕಾರಿಗಳು ಸಿಂಹಾಸನವನ್ನೇರಲು ದೆಹಲಿಗೆ ಆಗಮಿಸುವಂತೆ ಅಲ್ತಮಷ್‌ಗೆ ಅಮಂತ್ರಣವನ್ನು ನೀಡಿದರು. ಅಲ್ತಮಷ್‌ನು ಬದಾಯೂನ್‌ನ ಸರದಾರರು ಮತ್ತು ತನ್ನ ಸೈನ್ಯದೊಂದಿಗೆ ದೆಹಲಿಗೆ ಆಗಮಿಸಿದ ಮತ್ತು ಸಿಂಹಾಸನವನ್ನು ಅಲಂಕರಿಸಿದ. ಹಾಗೂ ಶಮ್‌ಸುದ್ದೀನ್ ಎಂಬ ಬಿರುದನ್ನು ಪಡೆದುಕೊಂಡ ಅಲ್ತಮಷ್‌ನು ಹಜರಿ ಶಕೆ ೬೦೭ರಲ್ಲಿ ರಾಜ್ಯದ ಆಡಳಿತ ಸೂತ್ರಗಳನ್ನು ತನ್ನ ವಶಕ್ಕೆ ತೆಗೆದುಕೊಂಡ ಮತ್ತು ಖುತ್ಬುದ್ದೀನನ ಕಾಲಾವಧಿಯ ಸರದಾರರು ಮತ್ತು ಆಸ್ಥಾನಿಕರನ್ನು ತನ್ನ ದಯಾಪರತೆ ಮತ್ತು ಉತ್ತಮ ನಡವಳಿಕೆಯಿಂದ ಪ್ರಭಾವಿತಗೊಳಿಸಿದ.

ಹೀಗೆ ಹಿಂದಿನ ಅವಧಿಯ ಎಲ್ಲಾ ಪ್ರಮುಖರು ಅಲ್ತಮಷ್‌ನ ಪ್ರಭಾವಕ್ಕೆ ಒಳಗಾದರು. ಆದರೆ ಜಾಮ್‌ದಾರ್‌ನ ಸರದಾರನು ಇದಕ್ಕಿಂತ ವಿಭಿನ್ನವಾಗಿ ವರ್ತಿಸಿದ ಮತ್ತು ಅಹಂಕಾರದ ನಶೆ ಏರಿದವನಾಗಿ ಬಂಡಾಯದ ಆಲೋಚನೆಗಳಿಂದ ಕೂಡಿದವನಾದ. ಅವನು ಶಹಾಬುದ್ದೀನ್ ಮತ್ತು ಖುತ್ಬುದ್ದೀನನ ಕಾಲಾವಧಿಯ ಕೆಲ ಸರದಾರರನ್ನು ತನ್ನ ಜೊತೆಯಲ್ಲಿ ಶಾಮೀಲು ಮಾಡಿಕೊಂಡು ರಾಜಕಾರಣದ ಚಕ್ರವ್ಯೂಹದಲ್ಲಿ ಸಿಲುಕಿಸಿಕೊಂಡ ಮತ್ತು ದೆಹಲಿಯ ಸುತ್ತಮುತ್ತಲಿನಿಂದ ಸಾಕಷ್ಟು ಸೇನೆಯ ಜಮಾವಣೆಯನ್ನು ಮಾಡಿಕೊಂಡು ದೆಹಲಿಯ ಸಮೀಪದ ಒಂದು ಮೈದಾನದಲ್ಲಿ ಅಲ್ತಮಷ್‌ನ ವಿರುದ್ಧ ಯುದ್ಧ ಸನ್ನದ್ಧನಾದ. ಅಲ್ತಮಷ್‌ನ ಅದೃಷ್ಟದ ತಾರೆ ಏರುಗತಿಯಲ್ಲಿತ್ತು. ಹೀಗಾಗಿ ಜಾವ್‌ದಾರ್‌ಗೆ ಸೋಲುಂಟಾಯಿತು. ಜಾಮ್‌ದಾರ್‌ನ ಇಬ್ಬರು ಪ್ರಖ್ಯಾತ ಸರದಾರರುಗಳಾದ ಅಕ್ಸನ್‌ಖರ್ ಮತ್ತು ಫರಕ್ ಶಾಹ್ ಯುದ್ಧರಂಗದಲ್ಲಿ ನೆರವು ನೀಡಿದರು. ತುರ್ಕಿ ಜಾಮ್‌ದಾರ್‌ನ ಉನ್ನತ ಅಧಿಕಾರಿಯು ತನ್ನ ಖಾಸಗಿ ಬೆಂಗಾಲಿನವರನ್ನು ಜೊತೆಯಲ್ಲಿ ಇಟ್ಟುಕೊಂಡು ಯುದ್ಧ ರಂಗದಿಂದ ಪಲಾಯನ ಮಾಡಿದ.

ಶಮ್‌ಸುದ್ದೀನ್ ಅಲ್ತಮಷ್‌ನ ಸೈನಿಕರು ಆ ವಿದ್ರೋಹಿಗಳ ಬೆನ್ನಟ್ಟಿದರು. ಕಡಿಮೆ ಕಾಲಾವಧಿಯಲ್ಲಿ ಆ ಎಲ್ಲಾ ವಿದ್ರೋಹಿಗಳನ್ನು ಹಿಡಿದು ಒಬ್ಬೊಬ್ಬರನ್ನಾಗಿ ಸಾವಿಗಟ್ಟಿದರು. ಈ ವಿಜಯದ ನಂತರ ಅಲ್ತಮಷ್‌ನ ವಿರೋಧಿಗಳು ಯಾರೂ ಉಳಿಯಲಿಲ್ಲ ಮತ್ತು ವಿದ್ರೋಹಿಗಳು ಹಾಗೂ ಸಂಚುಕೋರರ ಷಡ್ಯಂತ್ರಗಳಿಂದ ರಾಜ್ಯವು ಮುಕ್ತಿ ಪಡೆಯಿತು.

ಜಾಲೂರಿನ ಮೇಲೆ ಯುದ್ಧ:

ಇದೇ ಅವಧಿಯಲ್ಲಿ ಜಾಲೂರಿನ ರಾಜನಾದ ರಾಜ ಅಡೇಸನು (ಈ ಜಾಗವು ಅಜ್ಮೇರ್‌ನಿಂದ ಸುಮಾರು ನೂರ ಐವತ್ತು ಮೈಲಿ ದೂರದಲ್ಲಿದೆ) ನಿಗದಿತವಾದ ಕಪ್ಪಕಾಣಿಕೆಯನ್ನು ಸುಲ್ತಾನನಿಗೆ ಪಾವತಿ ಮಾಡಲು ತಿರಸ್ಕರಿಸಿದ ಹಾಗೂ ಅವನಿಗೆ ವಿದ್ರೋಹದ ಗೀಳು ಅಂಟಿತ್ತು. ಆ ರಾಜನು ಅಲ್ತಮಷ್‌ನೊಂದಿಗೆ ಯುದ್ಧ ಮಾಡುವ ಇರಾದೆಯನ್ನು ಹೊಂದಿದ್ದ. (ಇದನ್ನು ನೋಡಿ) ಅಲ್ತಮಷ್‌ನು ಜಾಲೂರಿನ ಮೇಲೆ ಆಕ್ರಮಣ ಮಾಡಿದ ಮತ್ತು ಅಡೇಸಾನನ್ನು ಸೋಲಿಸಿದ ಹಾಗೂ ಅವನನ್ನು ತನ್ನ ಅಧೀನ ಸಾಮಂತ ರಾಜನನ್ನಾಗಿ ಮಾಡಿಕೊಂಡ. ಅಡೇಸಾನಿಂದ ರಾಜಧನವನ್ನು ಪಡೆದುಕೊಂಡು ಅಲ್ತಮಷ್‌ನು ದೆಹಲಿಗೆ ವಾಪಸ್ಸಾದ. ಮೊಹಮದ್ ಘೋರಿಯ ರಾಜಾಜ್ಞೆಯ ಮೇರೆಗೆ ಘಜ್ನಿಯ ಸುಲ್ತಾನನಾಗಿ ನೇಮಕವಾಗಿದ್ದ ತಾಜುದ್ದೀನ್ ಯಲ್ರೋಜ್‌ನು ಮೇಲ್ಕಂಡ ವಿಜಯದ ನಂತರ ಅಲ್ತಮಷ್‌ಗೆ ಹಿಂದೂಸ್ಥಾನದಲ್ಲಿ ಧ್ವಜವನ್ನು ಮತ್ತು ಛತ್ರ ಚಾಮರಗಳನ್ನು ಉಡುಗೊರೆಯಾಗಿ ನೀಡಿದ. ಘಜ್ನಿ ರಾಜ್ಯದ ಬಗ್ಗೆ ತನಗಿದ್ದ ಗೌರವಾದರಗಳ ಭಾವದಿಂದ ಅಲ್ತಮಷ್‌ನು ಸದರಿ ಪಾರಿತೋಷಕಗಳನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿದ.

ತಾಜುದ್ದೀನ್ ಯಲ್ರೋಜ್‌ನೊಂದಿಗೆ ಯುದ್ಧ:

ಈ ಘಟನೆ ನಡೆದ ಕೆಲವು ದಿನಗಳ ನಂತರ ಯಲ್ರೋಜ್‌ನು ಖವಾರ್‌ಜಮ್‌ನ ಸೈನ್ಯದ ಕೈಯಲ್ಲಿ ಸೋಲನ್ನುಂಡ ಮತ್ತು ಶೇರ್ವಾನ್ ಮತ್ತು ಕರ್ಮಾನ್‌ನಲ್ಲಿ ರಕ್ಷಣೆಯನ್ನು ಪಡೆದ. ಅಲ್ಲಿ ಕುಳಿತು ಅವನು ಹಿಂದೂಸ್ಥಾನದ ಸಸ್ಯಶಾಮಲೆ ಮತ್ತು ಸಂಪದ್ಭರಿತ ಭೂಭಾಗದತ್ತ ದುರಾಸೆಯ ನೋಟವನ್ನು ಬೀರತೊಡಗಿದ. ಯಲ್ದೋಜ್‌ನು ಹಿಜರಿ ಶಕೆ ೬೧೩ರಲ್ಲಿ ಪಂಜಾಬ್ ಮತ್ತು ತಾನೇಸರ್‌ನ ಭೂಭಾಗಗಳ ಮೇಲೆ ಆಧಿಪತ್ಯವನ್ನು ಪಡೆದುಕೊಂಡಿದ್ದ. ಹಿಂದೂಸ್ಥಾನದ ಗಡಿಭಾಗದ ಈ ಪ್ರದೇಶಗಳನ್ನು ವಶಪಡಿಸಿಕೊಂಡ ಯಲ್ರೋಜನು ನಂತರ ಅಲ್ತಮಷ್‌ನ ಬಳಿ ತನ್ನ ಕೆಲವು ರಾಯಭಾರಿಗಳನ್ನು ಕಳಿಸಿದ. ಮತ್ತು ಅವರ ಮೂಲಕ ಒಂದು ಸಂದೇಶವನ್ನು ಕೂಡ ಕಳಿಸಿದ. ಆ ಮೂಲಕ ಅಲ್ತಮಷ್‌ನ ಘನತೆ ಮತ್ತು ಗೌರವಗಳಿಗೆ ಧಕ್ಕೆ ಒದಗುವ ಸಂದರ್ಭವು ಮೂಡಿಬಂದಿತು. ಯಲ್ದೋಜ್‌ನ ಆ ಸಂದೇಶದಿಂದ ಅಲ್ತಮಷ್‌ಗೆ ಅತೀವ ಕೋಪ ಮೂಡಿ ಬಂದಿತು ಮತ್ತು ಅವನು ತತ್‌ಕ್ಷಣ ಪಂಜಾಬ್‌ನ ಮೇಲೆ ಯುದ್ಧವನ್ನು ಆರಂಭಿಸಿದ. ತರಾಯನ್ ಪ್ರದೇಶದಲ್ಲಿ ಯಲ್ದೋಜ್ ಮತ್ತು ಅಲ್ತಮಷ್‌ನ ಸೈನ್ಯವು ಪರಸ್ಪರ ಎದುರಿಸಿತು ಮತ್ತು ಅವರ ನಡುವೆ ಘನ ಘೋರ ಸಮರ ನಡೆಯಿತು. ಪರಿಣಾಮವಾಗಿ ಯಲ್ದೋಜ್ ಸೋತ ಮತ್ತು ಅವನ ಕೆಲವು ಪ್ರಖ್ಯಾತ ಸರದಾರರು ಶಮ್‌ಸುದ್ದೀನ್ ಅಲ್ತಮಷ್‌ನ ಸೈನ್ಯಕ್ಕೆ ಸೇರೆಯಾದರು. ಯಲ್ದೋಜ್‌ನನ್ನು ಬಂಧಿಸಿ ತನ್ನ ಜೊತೆಯಲ್ಲಿ ದೆಹಲಿಗೆ ಕರೆತಂದ ಅಲ್ತಮಷ್‌ನು

ಅವನನ್ನು ಬದಾಯೂನ್ ಕೋಟೆಯಲ್ಲಿ ಸೆರೆಯಾಳಾಗಿ ಇಟ್ಟ. ಅವನು ಸೆರೆಮನೆಯಲ್ಲಿದ್ದಾಗಲೇ ಯಾವುದೋ ರೋಗದಿಂದ ಅಥವಾ ವಿಷಪ್ರಾಶನದಿಂದ ಮರಣ ಹೊಂದಿದ.

ನಾಸಿರುದ್ದೀನ್ ಖಬಾಚನೊಂದಿಗೆ ಯುದ್ಧ:

ಹಿಜರಿ ಶಕೆ ೬೧೪ರಲ್ಲಿ ಅಲ್ತಮಷ್‌ಗೆ ಅವನ ಷಡ್ಡಕನಾದ ಖುತ್ಬುದ್ದೀನ್ ಐಬಕ್‌ನ ಎರಡನೇ ಅಳಿಯನಾದ ನಾಸಿರುದ್ದೀನ್ ಖಬಾಚನೊಂದಿಗೆ ಲಾಹೋರ್ ಒಂದು ಭೂಭಾಗದ ಬಗ್ಗೆ ಸಂಘರ್ಷವುಂಟಾಯಿತು. ಈ ಸಂಘರ್ಷವು ಎಷ್ಟು ತೀವ್ರವಾಯಿತೆಂದರೆ ಉಭಯತ್ರರ ನಡುವೆ ಯುದ್ಧ ಏರ್ಪಟ್ಟಿತು. ಮನ್‌ಸೂರಿಯಾದ ಸುತ್ತಮುತ್ತಲಿನ ಪ್ರದೇಶದಲ್ಲಿ ಅಂದರೆ ಚೀನಾಬ್ ನದಿಯ ದಡದಲ್ಲಿ ಅವರಿಬ್ಬರು ಪರಸ್ಪರ ಎದುರುಬದುರಾದರು. ತೀವ್ರವಾಗಿ ಯುದ್ಧ ನಡೆದು ನಾಸಿರುದ್ದೀನ್ ಖಬಾಚ ಯುದ್ಧರಂಗದಿಂದ ಪರಾರಿಯಾದ ಮತ್ತು ಅಲ್ತಮಷ್‌ಗೆ ವಿಜಯ ಪ್ರಾಪ್ತಿಯಾಯಿತು. ೬೧೫ ನೇ ಇಸವಿಯಲ್ಲಿ ಖಬಾಚನು ಘಜ್ನಿಯ ಸುತ್ತಮುತ್ತಲಿನ ಪ್ರದೇಶದ ಖಿಲ್ಜಿ ಸರದಾರರನ್ನು ಸೋಲಿಸಿದ. ಆ ಸರದಾರರು ಸಿಂಧ್‌ನ ಪ್ರದೇಶವನ್ನು ತಮ್ಮ ಸೈನ್ಯದ ಕಾರ್ಯಾಚರಣೆಯ ಮೂಲಕ ನಾಶ ಮಾಡುತ್ತಿದ್ದರು. ಖಬಾಚನಿಂದ ಸೋಲನ್ನು ಅನುಭವಿಸಿದ ಬಳಿಕ ಆ ಖಿಲ್ಜಿ ಸರದಾರರು ಅಲ್ತಮಷ್‌ನ ಆಶ್ರಯದಲ್ಲಿ ರಕ್ಷಣೆ ಪಡೆದರು. ಅಲ್ತಮಷ್‌ನು ಅವರಿಗೆ ನೆರವನ್ನು ನೀಡಿದ ಮತ್ತು ತನ್ನ ಬಲಾಢ್ಯ ಸೇನೆಯೊಂದಿಗೆ ಖಬಾಚನ ಮೇಲೆ ಆಕ್ರಮಣ ಮಾಡಿದ. ಅವನನ್ನು ಎದುರಿಸಲಾಗದೆ ಖಬಾಚನು ತನ್ನ ರಾಜ್ಯದ ಗಡಿಭಾಗದ ಒಂದು ಪ್ರದೇಶದಲ್ಲಿ ತಲೆಮರೆಸಿಕೊಂಡ. ಅಲ್ತಮಷ್‌ನು ಅವನನ್ನು ಬೆನ್ನಟ್ಟುವುದು ಸೂಕ್ತವಲ್ಲವೆಂದು ನಿರ್ಧರಿಸಿ ದೆಹಲಿಗೆ ಮರಳಿದ.

ಖವಾರ್‌ಜಮ್ ಶಾಹನೊಡನೆ ಯುದ್ಧ:

ಹಿಜರಿ ಶಕೆ ೬೧೮ರಲ್ಲಿ ಚಂಗೇಸ್‌ಖಾನ್‌ನ ಕ್ರೌರ್ಯದಿಂದ ಭಯಭೀತನಾಗಿ ಜಲಾಲುದ್ದೀನ್ ಖವಾರ್‌ಜಿಮ್ ಶಾಹ ತನ್ನ ರಾಜ್ಯವನ್ನು ತೊರೆದು ಓಡಿದ ಮತ್ತು ಲಾಹೋರ್ ಪ್ರದೇಶಕ್ಕೆ ಬಂದು ಅಲ್ಲಿ ರಕ್ಷಣೆ ಪಡೆದ. ಗಡಿಭಾಗದಲ್ಲಿ ಖವಾರ್‌ಜಮ್ ಶಾಹನ ವಾಸವು ರಾಜ್ಯದ ಹಿತದೃಷ್ಟಿಯಿಂದ ಸುರಕ್ಷಿತವಾಗಿರಲಿಲ್ಲ. ಆದ್ದರಿಂದ ಅಲ್ತಮಷ್‌ನು ಈ ವರ್ತಮಾನವನ್ನು ಕೇಳಿದ ಕೂಡಲೇ ಅವನ ಮೇಲೆ ಆಕ್ರಮಣ ಮಾಡಿದ. ಖವಾರ್‌ಜಮ್ ಶಾಹ ಅಲ್ತಮಷ್‌ನ ಆಕ್ರಮಣವನ್ನು ಎದುರಿಸಲಾರದೆ ಸಿಂಧ್ ಮತ್ತು ಸೇವಸ್ಥಾನದ ಪ್ರದೇಶದತ್ತ ಓಡಿ ಹೋದ. ಸಿಂಧ್ ತಲುಪಿದ ನಂತರ ಖವಾರ್‌ಜಿಮ್ ಮತ್ತು ಖಬಾಚ ನಡುವೆ ಯುದ್ಧವೇರ್ಪಟ್ಟಿತು. ಹೀಗಾಗಿ ಖವಾರ್‌ಜಿಮ್ ಶಾಹನಿಗೆ ಎಲ್ಲಿಯೂ ನೆಲೆ ಸಿಗಲಿಲ್ಲವಾದ್ದರಿಂದ ಅವನು ಕಛ್ ಮತ್ತು ಮುಕರಾನ್‌ನ ಮಾರ್ಗವಾಗಿ ಹಿಂದೂಸ್ತಾನದ ಸರಹದ್ದಿನಿಂದ ಹೊರ ಹೋದ. ನಿಜಾಮುದ್ದೀನ್

ಬಕ್ಷಿ ಮತ್ತು ಇತರೆ ಇತಿಹಾಸಕಾರರ ಪ್ರಕಾರ 'ಜಲಾಲುದ್ದೀನ್ ಖವಾರ್‌ಜಿಮ್ ಶಾಹ ಹಿಂದೂಸ್ತಾನಕ್ಕೆ ಬಂದಾಗ ಸಿಂಧೂ ನದಿಯ ಪ್ರವಾಹದ ದೆಸೆಯಿಂದ ಖಬಾಚ ಮರಣ ಹೊಂದಿದ್ದ ಎಂದು' ಆದರೆ ಮುಂದುವರೆದ ಭಾಗದಲ್ಲಿ ಕಾಣಿಸಿರುವಂತೆ ಆ ಇತಿಹಾಸಕಾರರ ಈ ಹೇಳಿಕೆ ಸರಿಯಾಗಿರುವುದಿಲ್ಲ.

ಲಖ್ನೋತಿ ಮತ್ತು ಬಿಹಾರಿನ ಮೇಲೆ ಯುದ್ಧ:

ಹಿಜರಿ ಶಕೆ ೬೨೬ರಲ್ಲಿ ಅಲ್ತಮಷ್‌ನು ಬಿಹಾರ ಮತ್ತು ಲಖ್‌ನೋತಿಯ ಪ್ರದೇಶಗಳ ಮೇಲೆ ಆಕ್ರಮಣ ಮಾಡಿದ ಮತ್ತು ಗಯಾಸುದ್ದೀನ್ ಖಿಲ್ಜಿ (ಇದರ ಬಗ್ಗೆ ವಿವರಗಳು ಮುಂದಿನ ಪುಟಗಳಲ್ಲಿವೆ)ಯನ್ನು ಸೋಲಿಸಿ ಅವನನ್ನು ತನ್ನ ಸಾಮಂತ ರಾಜನನ್ನಾಗಿ ಮಾಡಿಕೊಂಡ. ಅಲ್ತಮಷ್‌ನು ಬಿಹಾರ ಮತ್ತು ಲಖ್‌ನೋತಿಯಲ್ಲಿ ತನ್ನ ಹೆಸರಿನ ಶಾಸನ ಮತ್ತು ನಾಣ್ಯವನ್ನು ಜಾರಿಗೆ ತಂದ ಹಾಗೂ ಖಿಲ್ಜಿ ಸರದಾರನಿಂದ ೩೮ ಆನೆಗಳ ಸರಪಳಿಗಳು ಮತ್ತು ೮೦ ಸಾವಿರ ನಗದು ಹಣವನ್ನು ಪಡೆದುಕೊಂಡು ಅವನಿಗೆ ಸ್ವಾತಂತ್ರ್ಯವನ್ನು ನೀಡಿದ. ಅಲ್ತಮಷ್‌ನು ತನ್ನ ಹಿರಿಯ ಪುತ್ರನಿಗೆ ನಾಸಿರುದ್ದೀನ್ ಎಂಬ ಬಿರುದನ್ನು ಪ್ರದಾನ ಮಾಡಿ ಅವನನ್ನು ಲಖ್‌ನೋತಿಯ ರಾಜನನ್ನಾಗಿ ಮಾಡಿದ ಮತ್ತು ಅವನಿಗೆ ಛತ್ರ ಚಾಮರಗಳ ಕೊಡುಗೆಯನ್ನು ನೀಡಿ ಲಖ್‌ನೋತಿಯಲ್ಲಿ ಇರಲು ವ್ಯವಸ್ಥೆ ಮಾಡಿದ ಮತ್ತು ಖುದ್ದು ದೆಹಲಿಗೆ ಮರಳಿಹೋದ ನಾಸಿರುದ್ದೀನನು ಗಯಾಸುದ್ದೀನ್ ಖಿಲ್ಜಿಯೊಂದಿಗೆ ಯುದ್ಧ ಮಾಡಿ ಅವನನ್ನು ಸೋಲಿಸಿದ ಮತ್ತು ಕೊಲೆಮಾಡಿದ. ಅವನು ಖಿಲ್ಜಿಗಳಿಂದ ಪಡೆದ ಅಗಣಿತವಾದ ಹಣ ಧನಕನಕ ಐಶ್ವರ್ಯಗಳನ್ನು ತನ್ನ ಬೆಂಬಲಿಗರು ಮತ್ತು ಹಿತೈಷಿಗಳ ನಡುವೆ ಹಂಚಿದ.

ಖಬಾಚ ಮುಳುಗಿದ ನೈಜ ವೃತ್ತಾಂತ:

ಔಛಾ ಕೋಟೆಯನ್ನು ವಶಪಡಿಸಿಕೊಳ್ಳುವಿಕೆ ಮತ್ತು ಖಬಾಚ ಹೊಳೆಯಲ್ಲಿ ಮುಳುಗಿ ಸತ್ತ ಘಟನೆಯ ನೈಜ ವೃತ್ತಾಂತವೇನೆಂದರೆ, ತನ್ನ ಶತ್ರುವಾದ ಖಬಾಚನ ಧೈರ್ಯ ಮತ್ತು ಅಸೀಮ ಶಕ್ತಿಯನ್ನು ಕಂಡ ಅಲ್ತಮಷ್‌ನು ಅವನನ್ನು ತನ್ನ ಅಧೀನ ಮತ್ತು ವಿಧೇಯನನ್ನಾಗಿ ಮಾಡಿಕೊಳ್ಳಲು ಇಚ್ಛೆಪಟ್ಟನು. ಅಲ್ತಮಷ್‌ನು ಅವನ ಮೇಲೆ ಬಲವಾದ ಆಕ್ರಮಣವನ್ನು ಮಾಡಿ ಅವನು ಕೋಟೆಯೊಳಗಡೆ ಅಡಗಿಕೊಳ್ಳುವಂತೆ ಮಾಡಿದ. ಖಬಾಚ ಔಛಾ ಕೋಟೆಯನ್ನು ತೊರೆದು ನೆಹನ್‌ಕರ್‌ನ ಕೋಟೆಯಲ್ಲಿ ಅಡಗಿಕೊಂಡ ಅವನನ್ನು ಬೆನ್ನಟ್ಟುವಂತೆ ನಿಜಾಮುದ್ದೀನ್ ಜುನೇದಿಗೆ ಆಜ್ಞೆ ನೀಡಿದ. ಅಲ್ತಮಷ್ ಸ್ವತಃ ಔಛಾನ ಕೋಟೆಗೆ ಮುತ್ತಿಗೆ ಹಾಕಿ ಅದನ್ನು ಗೆಲ್ಲುವತ್ತ ಮಗ್ನನಾದ. ಅಲ್ತಮಷ್‌ನು ಎರಡು ತಿಂಗಳು ಮತ್ತು ಇಪ್ಪತ್ತು ದಿನಗಳ ಅತ್ಯಂತ ಕಷ್ಟಕರವಾದ ಮುತ್ತಿಗೆಯಲ್ಲಿ ಔಛಾ ಕೋಟೆಯನ್ನು ಗೆದ್ದುಕೊಂಡ. ನಾಸಿರುದ್ದೀನ್ ಖಬಾಚಗೆ ಈ ವಿಷಯ ತಿಳಿದುಬಂದ ನಂತರ ಅವನು ತನ್ನ

ಪುತ್ರನಾದ ಅಲ್ಲಾವುದ್ದೀನನನ್ನು ಅಲ್ತಮಷ್‌ನ ಬಳಿ ಕಳುಹಿಸಿದ ಮತ್ತು ಸಂಧಿಯ ಪ್ರಸ್ತಾವನೆಯನ್ನು ಸಲ್ಲಿಸಿದ. ಸಂಧಿಯ ಸೂತ್ರಗಳು ಸಂಪೂರ್ಣವಾಗಿ ಬಗೆಹರಿಯುವಷ್ಟರಲ್ಲಿ ಖಬಾಚ ಭಕ್ಕರ್‌ನಿಂದ ಪಲಾಯನ ಮಾಡುತ್ತಿದ್ದಾಗ ನದಿಯಲ್ಲಿ ಅಪಾರ ಪ್ರವಾಹ ಉಕ್ಕಿ ಬಂದಿತು ಮತ್ತು ಖಬಾಚ ಆ ಪ್ರವಾಹಕ್ಕೆ ಆಹುತಿಯಾದ.

ರಣಥಂಬೂರ್‌ನ ವಿಜಯ:

ಖಬಾಚ ಮುಳುಗಿ ಸತ್ತ ಸುದ್ದಿ ಅಲ್ತಮಷ್‌ಗೆ ತತ್‌ಕ್ಷಣವೇ ತಲುಪಿತು ಮತ್ತು ಅವನು ಖಬಾಚನ ಎಲ್ಲಾ ಆಕ್ರಮಿತ ಪ್ರದೇಶಗಳನ್ನು ತನ್ನ ವಶಪಡಿಸಿಕೊಂಡ. ಹಿಜರಿ ಶಕೆ ೬೨೩ರಲ್ಲಿ ಅಲ್ತಮಷ್‌ನು ರಣಥಂಬೂರ್‌ನ ಕೋಟೆಯ ಮೇಲೆ ಯುದ್ಧ ಮಾಡಿದ ಮತ್ತು ಅದರಲ್ಲಿ ವಿಜಯಿಯಾದ. ಮತ್ತು ಒಂದು ವರ್ಷದ ನಂತರ ಅಲ್ತಮಷ್‌ನು ಸಿಂಧ್‌ನ ಕೋಟೆಯ ಮೇಲೆ ಸೇನೆಯನ್ನು ನುಗ್ಗಿಸಿದ ಮತ್ತು ಈ ಕೋಟೆಯನ್ನು ಕೂಡ ಅಲ್ತಮಷ್‌ನು ಗೆದ್ದುಕೊಂಡ. ಅಲ್ತಮಷ್‌ನ ಸಮಕಾಲೀನ ಪ್ರಖ್ಯಾತ ವಿದ್ವಾಂಸರಾದ ಅಮೀರ್ ರುಹಾನಿ (ಇವರು ಚಂಗೇಸ್‌ಖಾನ್‌ನ ಕಾಲಾವಧಿಯ ಕ್ಷೋಭೆ ಮತ್ತು ಕ್ರೌರ್ಯದಿಂದ ಬೇಸತ್ತು ಬೂಖಾರಾದಿಂದ ವಲಸೆ ಮಾಡಿ ದೆಹಲಿಯಲ್ಲಿ ವಾಸವಾಗಿದ್ದರು) ರಣಥಂಬೂರ್‌ನ ಕೋಟೆಯ ವಿಜಯಶಾಲಿಯಾದುದರಿಂದ ಈ ಕೆಳಗಿನ ಅಭಿನಂದನಾ ಕವನವನ್ನು ರಚಿಸಿ ಅವನ ಸಮ್ಮುಖದಲ್ಲಿ ಓದಿದನು.

ಜಿಬರೀಲ್ ಅಮೀನನು ಆಕಾಶದವರಿಗೆ ಸುಲ್ತಾನ್ ಶಮ್ಸುದ್ದೀನನ ಗೆಲುವಿನ ಸುದ್ದಿಯನ್ನು ತಲುಪಿಸಿದ.

ಆಕಾಶದಲ್ಲಿ ಪವಿತ್ರ ದೇವದೂತರೇ ನೀವು ಪಡೆಯಿರಿ ಈ ವಿಜಯದ ಶುಭಸಂದೇಶವನ್ನು ಉತ್ಸಾಹದಿಂದ.

ಇಸ್ಲಾಮಿನ ಶಹಿನ್‌ಶಾಹನು ಅನ್ಯರ ಪ್ರದೇಶಗಳಲ್ಲಿನ ಸುಭದ್ರ ಕೋಟೆಗಳನ್ನು ಗೆದ್ದುಕೊಂಡನು.

ನಿರಂತರ ಯುದ್ಧದಲ್ಲಿ ತೊಡಗಿ ಅನ್ಯರ ವಿರುದ್ಧ ಗೆಲುವು ಸಾಧಿಸಿದ ಈ ಷಹಿನ್‌ಶಾಹನ ಶೌರ್ಯವೀರ ಯೋಧ ಅಲಿಯ ನೆನಪು ತರಿಸಿತು.

ಅಲ್ತಮಷ್‌ಗಾಗಿ ಖಲೀಫಾನ ಪೇಟ:

ಹಿಜರಿ ಶಕೆ ೬೨೬ರಲ್ಲಿ ಅಬ್ಬಾಸಿಯ ಖಲೀಫಾರವರ ರಾಯಭಾರಿ ದೆಹಲಿಗೆ ಆಗಮಿಸಿದರು ಮತ್ತು ಅವರು ಅಲ್ತಮಷ್‌ಗೆ ಅಬ್ಬಾಸಿ ಅಸ್ಥಾನದ ವತಿಯಿಂದ ಖಲೀಫಾನ ಪೇಟವನ್ನು ನೀಡಿದರು. ಅಲ್ತಮಷ್‌ನು ಆ ಧಾರ್ಮಿಕ ಖಿಲ್ಲತ್ತನ್ನು ಸಂಪೂರ್ಣ ಗೌರವಾದರಗಳಿಂದ ಸ್ವೀಕರಿಸಿ ಆ ಹೆಮ್ಮೆಯ ಖಿಲ್ಲತ್ತನ್ನು ತಲೆಗೇರಿಸಿ ತುಂಬಾ ಸಂತೋಷ ಪಟ್ಟ. ಆ ಸುಸಂದರ್ಭದಲ್ಲಿ ಅವನು ತನ್ನ ಸರದಾರರು ಮತ್ತು

ಆಸ್ಥಾನಿಕರನ್ನು ಖಿಲ್ಲತ್ತು ಮತ್ತು ಪಾರಿತೋಷಕಗಳಿಂದ ಸಂತೋಷಪಡಿಸಿದ ಮತ್ತು ಇಡೀ ಪಟ್ಟಣವನ್ನು ವಧುವಿನಂತೆ ಅಲಂಕರಿಸಿ ಸಮಾರಂಭಗಳನ್ನು ಆಯೋಜಿಸಿದ. ಅಲ್ತಮಷ್‌ನು ತನಗೆ ದೊರಕಿದ ಆ ಧಾರ್ಮಿಕವಾದ ಗೌರವದ ಬಗ್ಗೆ ಸಂಭ್ರಮಾಚರಣೆ ಮಾಡುತ್ತಿರುವಾಗಲೇ ಲಖ್‌ನೋತಿಯ ರಾಜಪಾಲನಾಗಿದ್ದ ಅವನ ಹಿರಿಯ ಪುತ್ರನಾದ ನಾಸಿರುದ್ದೀನನ ಮರಣದ ವಾರ್ತೆ ಅವನಿಗೆ ತಲುಪಿತು. ಅಲ್ತಮಷ್ ತೀವ್ರವಾಗಿ ದುಃಖಿತನಾದ ಮತ್ತು ಮಗನ ಸಾವಿನ ಶೋಕಾಚರಣೆ ನಡೆಯುತ್ತಿದ್ದಂತೆಯೇ ಅಲ್ತಮಷ್ ನಾಸಿರುದ್ದೀನ್ ಎಂಬ ಹೆಸರನ್ನೇ ಹೊಂದಿದ್ದ ತನ್ನ ಎರಡನೇ ಪುತ್ರನನ್ನು ಅಪಾರವಾಗಿ ಪ್ರೀತಿಸಲಾರಂಭಿಸಿದ.

ಹಿಜರಿ ಶಕೆ ೬೨೭ರಲ್ಲಿ ಅಲ್ತಮಷ್ ದೆಹಲಿಯಿಂದ ಲಖ್‌ನೋತಿಯತ್ತ ರವಾನೆಯಾದ ಅಲ್ಲಿ ತಲುಪಿದ ನಂತರ ನಾಸಿರುದ್ದೀನನ ಸಾವಿನ ಪರಿಣಾಮವಾಗಿ ಆ ಪ್ರದೇಶದ ಮೂಲೆ ಮೂಲೆಯಲ್ಲಿಯೂ ಉಂಟಾಗಿದ್ದ ಅರಾಜಕತೆಯನ್ನು ತೊಲಗಿಸಿದ. ಶಾಂತಿ ಮತ್ತು ಸುವ್ಯವಸ್ಥೆಯನ್ನು ಎಲ್ಲಾ ಕಡೆಗಳಲ್ಲಿಯೂ ಸ್ಥಾಪನೆ ಮಾಡಿದ ನಂತರ ಅಲ್ತಮಷ್‌ನು ಇಜ್ಜ –ತುಲ್– ಮುಲ್ಕ್ –ಮುಲ್ಕ್ ಅಲ್ಲಾವುದ್ದೀನ್ ಖಾನಿಯನ್ನು ಲಖ್‌ನೋತಿಯ ಸುಲ್ತಾನನ್ನಾಗಿ ನೇಮಕ ಮಾಡಿ ಅವನು ದೆಹಲಿಗೆ ಮರಳಿದ.

ಗ್ವಾಲಿಯರ್‌ನ ವಿಜಯ:

ಮುಸ್ಲಿಮರ ವಶದಿಂದ ಕೈ ತಪ್ಪಿದ್ದ ಗ್ವಾಲಿಯರ್ ಮೇಲೆ ಹಿಜರಿ ಶಕೆ ೬೨೯ರಲ್ಲಿ ಯುದ್ಧ ಮಾಡಬೇಕೆಂದು ಅಲ್ತಮಷ್ ನಿರ್ಧರಿಸಿದ. ಹಾಗೂ ಅಲ್ಲಿಗೆ ತಲುಪಿ ಗ್ವಾಲಿಯರ್ ಕೋಟೆಗೆ ಮುತ್ತಿಗೆಯನ್ನು ಹಾಕಿದ. ಒಂದು ವರ್ಷದವರೆಗೆ ನಿರಂತರವಾಗಿ ಮುತ್ತಿಗೆ ಮುಂದುವರೆಯಿತು. ಮುತ್ತಿಗೆಯ ಸಂಕಷ್ಟಗಳಿಂದ ಕೋಟೆಯ ನಿವಾಸಿಗಳು ತೀವ್ರ ಆಪತ್ತಿಗೆ ಒಳಗಾದರು. ಅಲ್ತಮಷ್‌ನು ಕೋಟೆಯನ್ನು ಕೈವಶಮಾಡಿಕೊಳ್ಳದೆ ಬಿಡುವುದಿಲ್ಲವೆಂದು ಹಿಂದೂ ರಾಜನಾದ ದೇವಬಲ್‌ಗೆ ಅರಿವಾಗುತ್ತಿದ್ದಂತೆಯೇ ಅವನು ಒಂದು ರಾತ್ರಿ ಜನರ ಕಣ್ಣಿಗೆ ಕಾಣದಂತೆ ಪರಾರಿಯಾದ. ಬೆಳಗಾದ ನಂತರ ಕೋಟೆಯ ನಿವಾಸಿಗಳಿಗೆ ತಮ್ಮ ರಾಜನು ಮಾಯವಾದ ವಿಷಯ ತಿಳಿಯುತ್ತಿದ್ದಂತೆಯೇ ಅವರು ಅಸಹಾಯಕರಾಗಿ ಕೋಟೆಯ ಬಾಗಿಲನ್ನು ತೆರೆದುಬಿಟ್ಟರು. ಮತ್ತು ಹೀಗೆ ಮುಸಲ್ಮಾನರ ಸೈನ್ಯವು ಕೋಟೆಯನ್ನು ವಶಪಡಿಸಿಕೊಂಡಿತು. ಮುಸಲ್ಮಾನರು ಅನೇಕ ಹಿಂದೂಗಳನ್ನು ಸೆರೆಹಿಡಿದು ಅವರ ಸಂಪತ್ತನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಆ ಹಿಂದೂ ಖೈದಿಗಳ ಪೈಕಿ ಮುನ್ನೂರು ಮಂದಿ ಅವಿಧೇಯರನ್ನು ಮುಸಲ್ಮಾನರು ಸಾವಿಗಟ್ಟಿದರು. ಹೀಗೆ ಪುನಃ ಮುಸ್ಲಿಮ್ ಆಡಳಿತಗಾರರ ಹೆಸರಿನ ಶಾಸನ ಮತ್ತು ನಾಣ್ಯವು ಗ್ವಾಲಿಯರ್‌ನಲ್ಲಿ ಜಾರಿಯಾಯಿತು. ಅಲ್ತಮಷ್‌ನ ಪ್ರಧಾನ ಖಜಾಂಚಿ ತಾಜುದ್ದೀನ್ ರೇಸಾ ಎಂಬುವಾತನು ಗ್ವಾಲಿಯರ್‌ನ ವಿಜಯದ ಸುಸಂದರ್ಭದಲ್ಲಿ

ಒಂದು ರುಬಾಯಿಯನ್ನು (ದ್ವಿಪದಿ) ರಚಿಸಿದ್ದು, ಆ ರುಬಾಯಿಯನ್ನು ಕೋಟೆಯ ಬಾಗಿಲಿನ ಮೇಲೆ ಕೆತ್ತಲಾಗಿದೆ.

ನಮ್ಮ ಬಾದಶಾಹರು ಯಾವ ಯಾವ ಕೋಟೆಗಳನ್ನು ಗೆದ್ದರೊ
ಆ ಗೆಲುವಿನ ಹಿಂದೆ ಅಲ್ಲಾಹನ ಕೃಪಾಶೀರ್ವಾದವಿತ್ತು.
ಗ್ವಾಲಿಯರದ ಆ ಸುಭದ್ರ ಕೋಟೆಯನ್ನು
ಹಿಜರಿ ಶಕೆ ೬೩೦ರಲ್ಲಿ ಗೆಲ್ಲಲಾಯಿತು.

ಹಿಜರಿ ಶಕೆ ೬೩೧ರಲ್ಲಿ ಅಲ್ತಮಷ್‌ನು ಮಾಳವದ ಮೇಲೆ ಯುದ್ಧ ಮಾಡಿದ ಮತ್ತು ಅಲ್ಲಿನ ಕೋಟೆಯನ್ನು ನಾಶ ಮಾಡಿದ. ನಂತರ ಉಜ್ಜಯನಿಯ ಮೇಲೆ ಕೂಡ ಆಧಿಪತ್ಯವನ್ನು ಸಾಧಿಸಿದ. ಅವನು ಮಹಾಕಾಲ ಮಂದಿರದ ನಾಶ ಮಾಡಿದ. ಈ ಮಂದಿರವು ಬಹಳ ಬಲಿಷ್ಠವಾಗಿ ನಿರ್ಮಾಣವಾಗಿತ್ತು ಅದರ ನಿರ್ಮಾಣ ಕಾರ್ಯದಲ್ಲಿ ಮುನ್ನೂರು ವರ್ಷಗಳ ಕಾಲ ತಗುಲಿತ್ತು ಮತ್ತು ಅದರ ಗೋಡೆಯು ೧೦೦ ಗಜ ಎತ್ತರಕ್ಕಿತ್ತು. ಆ ಮಂದಿರದಲ್ಲಿ ಅಲ್ತಮಷ್‌ಗೆ ಉಜ್ಜಯನಿಯ ರಾಜನಾದ ವಿಕ್ರಮಾದಿತ್ಯನ ಒಂದು ಅಪೂರ್ವ ಚಿತ್ರ ದೊರಕಿತು. ಮತ್ತು ಮಹಾಕಾಲನ ಮೂರ್ತಿ ಹಾಗೂ ಹಿತ್ತಾಳೆಯ ಅನೇಕ ಚಿತ್ರಗಳು ಕೂಡ ದೊರಕಿದವು. ಅಲ್ತಮಷ್‌ನು ಆ ಎಲ್ಲಾ ವಸ್ತುಗಳನ್ನು ತನ್ನ ಜೊತೆಯಲ್ಲಿ ದೆಹಲಿಗೆ ತಂದ.

ಸಾವು:

ಉಜ್ಜಯನಿಯ ಪ್ರಯಾಣದ ಬಳಲಿಕೆಯನ್ನು ನಿವಾರಿಸಿಕೊಳ್ಳಲು ಅಲ್ತಮಷ್ ಕೆಲದಿನಗಳಕಾಲ ದೆಹಲಿಯಲ್ಲಿ ವಿಶ್ರಾಂತಿ ಪಡೆದ. ನಂತರ ಮುಲ್ತಾನ್‌ನತ್ತ ಪ್ರಯಾಣ ಬೆಳೆಸಿದ. ಈ ಪ್ರಯಾಣವು ಅವನಿಗೆ ನೆಮ್ಮದಿ ತರಲಿಲ್ಲ ಮತ್ತು ಅವನ ಆರೋಗ್ಯದ ಮೇಲೆ ವಿಪರೀತ ಪರಿಣಾಮಗಳನ್ನು ಬೀರಿತು. ಹಾಗೂ ಅವನು ಅನಾರೋಗ್ಯ ಪೀಡಿತನಾದ. ಅನಾರೋಗ್ಯವು ದಿನೇ ದಿನೇ ಹೆಚ್ಚಾಗಿ ಅವನು ಮೃತ್ಯುಶಯ್ಯೆಯಲ್ಲಿ ಒರಗಿದ. ಆಸ್ಥಾನಿಕರು ಮತ್ತು ಸರದಾರರು ಅವನನ್ನು ಅಂಬಾರಿಯ ಮೇಲೆ ಕೂರಿಸಿ ದೆಹಲಿಗೆ ತಂದರು. ದೆಹಲಿ ತಲುಪಿದ ನಂತರ ದಿನೇ ದಿನೇ ಅವನ ಆರೋಗ್ಯ ಕೆಡುತ್ತಲೇ ಹೋಯಿತು. ಹಿಜರಿ ಶಕೆ ೬೩೩ರಲ್ಲಿ ಶಾಬಾನ್ ತಿಂಗಳ ೨೦ ನೇ ದಿನಾಂಕದಂದು ಅವನು ಅಸು ನೀಗಿದ. (ಖುದಾನ ಕರುಣೆ ಅವನ ಗೋರಿಯ ಮೇಲೆ ನೆರಳಾಗಲಿ)

ಶಮ್‌ಸಿ ಕೊಳ:

ಹಜರತ್ ಷೇಕ್ ಉಲ್ ಇಸ್ಲಾಮ್ ಫರೀದುದ್ದೀನ್ ಶಕರ್ ಗಂಜ್ ತಮ್ಮ ಗುರುಗಳಾದ ಹಜರತ್ ಖುತ್ಬುದ್ದೀನ್ ಬಖ್ತಿಯಾರ್ ಓಶಿಯ ಬಗ್ಗೆ ಪ್ರಸ್ತುತ ಪಡಿಸುವುದೇನೆಂದರೆ, ಒಂದು ಸಾರಿ ಅಲ್ತಮಷ್‌ಗೆ ಕೊಳವೊಂದನ್ನು ನಿರ್ಮಿಸುವ

ಆಸೆಯಾಯಿತು ಆ ಬಗ್ಗೆ ಅವನು ಪ್ರತಿ ನಿತ್ಯ ಹಜರತ್ ಖುತುಬ್ ಸಾಹೇಬರ ಸಮಕ್ಷಮದಲ್ಲಿ ಹಾಜರಾಗುತ್ತಿದ್ದ ಹಾಗೂ ಸೂಕ್ತ ಜಾಗ ಮತ್ತು ಅಳತೆ ಮೊದಲಾದುವುದರ ಬಗ್ಗೆ ಚರ್ಚೆ ನಡೆಸುತ್ತಿದ್ದ. ಆ ಕೊಳ ನಿರ್ಮಾಣದ ಬಗ್ಗೆ ಸೂಕ್ತವೆಂದು ಭಾಸವಾಗುತ್ತಿದ್ದ ಸ್ಥಳವನ್ನು ಕೂಡಲೇ ಹೋಗಿ ಪರಿಶೀಲನೆ ನಡೆಸುತ್ತಿದ್ದ ಮತ್ತು ಆ ಸ್ಥಳವು ಅವನ ಸೂಕ್ತವಲ್ಲವೆಂದು ಅದನ್ನು ತಿರಸ್ಕರಿಸುತ್ತಿದ್ದ. ವಿಚಿತ್ರ ಸಂಯೋಗದಿಂದ ಒಂದು ದಿನ ಅಲ್ತಮಷ್ ಒಂದು ನಿರ್ದಿಷ್ಟ ಜಾಗವನ್ನು ನೋಡಿದ ಹಾಗೂ ಆ ಜಾಗವನ್ನು ಮನಸಾರೆ ಒಪ್ಪಿದ ಮತ್ತು ಆ ಜಾಗದಲ್ಲಿ ಕೊಳದ ನಿರ್ಮಾಣವನ್ನು ಮಾಡಬೇಕೆಂದು ನಿಶ್ಚಯಿಸಿದ. ಈ ಘಟನೆ ನಡೆದ ರಾತ್ರಿಯಂದು ಅಲ್ತಮಷ್‌ನ ಕನಸಿನಲ್ಲಿ ಹಜರತ್ ಮೊಹಮ್ಮದ್ ಸಲ್ಲಲ್ಲಾಹುವ ಸಲ್ಲಮ್‌ರವರ ದರ್ಶನವಾಯಿತು. ಅವನ ಕನಸಿನಲ್ಲಿ ಹಜರತ್ ಮೊಹಮ್ಮದ್ ಪ್ರವಾದಿಯವರು ಒಂದು ಕುದುರೆಯ ಮೇಲೇರಿ ಬಂದು ಅವನು ಕೊಳಕ್ಕಾಗಿ ಆಯ್ಕೆ ಮಾಡಿದ ಸ್ಥಳದತ್ತ ಬಂದರು ಮತ್ತು ಅವನು ಯಾವ ಕೆಲಸವನ್ನು ಮಾಡಲು ಇಚ್ಛಿಸುವನು ಎಂದು ಪ್ರಶ್ನಿಸಿದರು. ಆ ಸ್ಥಳದಲ್ಲಿ ತಾನು ಒಂದು ಕೊಳವನ್ನು ನಿರ್ಮಿಸಲು ಬಯಸುವುದಾಗಿ ಅವನು ನುಡಿದ. ಪ್ರವಾದಿಯವರು ಅವನ ಕೋರಿಕೆಯಿಂದ ಪ್ರಸನ್ನರಾದರು. ಮತ್ತು ಅವರ ಕುದುರೆಯು ಆ ಸ್ಥಳದ ಮೇಲೆ ಕಾಲಿನಿಂದ ಒದೆಯಿತು ಮತ್ತು ಅಲ್ಲಿಂದ ನೀರಿನ ಚಿಲುಮೆ ಚಿಮ್ಮಿತು ಮತ್ತು ವೇಗವಾಗಿ ಪ್ರವಹಿಸ ತೊಡಗಿತು. ಇಲ್ಲಿಯವರೆಗೆ ಕನಸು ಕಂಡಿದ್ದ ಅವನ ನಿದ್ರೆ ಹರಿಯಿತು ಆಗ ರಾತ್ರೆ ಇನ್ನೂ ಬಾಕಿ ಇತ್ತು. ಕೂಡಲೇ ಅವನು ಹಜರತ್ ಖುತುಬ್ ಸಾಹೇಬರ ಸನ್ನಿಧಿಯಲ್ಲಿ ಹಾಜರಾದ ಮತ್ತು ಅತ್ಯಂತ ವಿನೀತನಾಗಿ ತನ್ನ ಕನಸಿನ ಸಕಲ ಸಂಗತಿಗಳನ್ನು ಅರುಹಿದ. ಹಾಗೂ ಹಜರತ್ ಖುತುಬ್ ಸಾಹೇಬರನ್ನು ಆ ಸ್ಥಳಕ್ಕೆ ಕರೆತಂದ. ದೀವಟಿಗೆಯ ಬೆಳಕಿನಲ್ಲಿ ಹಜರತ್ ಖುತುಬ್ ಸಾಹೇಬರು ನೋಡಿದಾಗ ಅಲ್ಲಿ ಒಂದು ಚಿಲುಮೆ ಚಿಮ್ಮುತ್ತಿದ್ದು ನೀರು ಸುತ್ತಲೂ ಹರಿಯುತ್ತಿತ್ತು. ಅಲ್ಪ ಸಲ್ಪ ಬದಲಾವಣೆಗಳೊಡನೆ ಈ ಘಟನೆಯು ಹಿಂದೂಸ್ಥಾನದ ಅನೇಕ ಸೂಫಿಗಳ ಬರವಣಿಗೆಗಳಲ್ಲಿ ದಾಖಲಾಗಿದೆ.

ಅದೃಶ್ಯ ಹಸ್ತದ ನೆರವು:

ಅನೇಕ ಜನರು ಖುದ್ದು ಅಲ್ತಮಷ್‌ನಿಂದ ಮೇಲ್ಕಂಡ ಘಟನೆಯನ್ನು ಮೌಖಿಕವಾಗಿ ಕೇಳಿರುವ ಸಂಗತಿಯನ್ನು ಉದ್ಧರಿಸುತ್ತಾರೆ. ಅಲ್ತಮಷ್‌ನು ಬುಖಾರಾದಲ್ಲಿ ಗುಲಾಮಿ ಜೀವನವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಅವನ ಒಡೆಯನು ಅವನ ಕೈಗೆ ಒಂದು ನಾಣ್ಯವನ್ನು ನೀಡಿ ಮಾರುಕಟ್ಟೆಯಿಂದ ದ್ರಾಕ್ಷಿಯನ್ನು ತರುವಂತೆ ಹೇಳಿದ. ಆದರೆ ದುರದೃಷ್ಟವಶಾತ್ ನಾಣ್ಯ ಅವನ ಕೈಯಿಂದ ಬಿದ್ದು ಕಳೆದುಹೋಯಿತು. ಅವನು ಎಷ್ಟು ಹುಡುಕಿದರೂ ನಾಣ್ಯ ಸಿಗಲಿಲ್ಲ. ಒಡೆಯನ ಭಯದಿಂದ ಅಸಹಾಯಕನಾಗಿ ಒಂದೆಡೆ ಕುಳಿತು ಕಣ್ಣೀರು ಹರಿಸತೊಡಗಿದ. ಆಗ ಅಲ್ಲಿ ಒಬ್ಬ

ಫಕೀರ ಕಂಡು ಬಂದ. ಆ ಫಕೀರನು ತನ್ನ ಅಂತರ್ದೃಷ್ಟಿಯಿಂದ ಅಲ್ತಮಷ್‌ನ ವಿಷಯವನ್ನು ತಿಳಿದುಕೊಂಡ ಮತ್ತು ದ್ರಾಕ್ಷಿಯನ್ನು ಖರೀದಿಸಿ ಅವನಿಗೆ ಕೊಟ್ಟ ಹಾಗೂ ಅವನನ್ನು ಉದ್ದೇಶಿಸಿ ಹೇಳಿದ. "ಆ ಖುದಾ ನಿನ್ನನ್ನು ಎಂದಾದರೂ ಬಾದಶಾಹನನ್ನಾಗಿ ಮಾಡಿದಲ್ಲಿ , ನಿನ್ನೊಡನೆ ಇಂದು ಖುದಾ ಹೇಗೆ ವರ್ತಿಸಿದ್ದಾನೋ ಅದೇ ರೀತಿಯಲ್ಲಿ ನೀನು ಫಕೀರರು ಮತ್ತು ಅಸಹಾಯಕರೊಡನೆ ವರ್ತಿಸಬೇಕು."

ಫಕೀರರ ಸೇವೆ:

ಅನೇಕ ಇತಿಹಾಸದ ಗ್ರಂಥಗಳಲ್ಲಿ ಈ ಕೆಳಕಂಡ ಘಟನೆಯನ್ನು ಕೂಡಾ ಅಲ್ತಮಷ್‌ನಿಂದ ಮೌಖಿಕವಾಗಿ ಕೇಳಿ ದಾಖಲಿಸಲಾಗಿದೆ. ಅಲ್ತಮಷ್‌ನು ಬಾಗ್ದಾದಿನಲ್ಲಿ ತನ್ನ ಗುಲಾಮಿತನದ ಆರಂಭದ ದಿನಗಳನ್ನು ಕಳೆಯುತ್ತಿದ್ದಾಗ ಅವನ ಒಡೆಯನು ನಿಷ್ಕಲ್ಮಶ ಮನದ ಫಕೀರರನ್ನು ತನ್ನ ಮನೆಗೆ ಆಹ್ವಾನಿಸಿದ. ಸಂಗೀತದ ಸಭೆಯು ಉತ್ತುಂಗಕ್ಕೇರಿತ್ತು ಮತ್ತು ಅಲ್ಲಾಹನ ನಿರ್ಲಿಪ್ತ ಪ್ರೇಮದಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಲು ಸಿದ್ಧರಿದ್ದ ಫಕೀರರು ಅಲ್ಲಾಹನ ಹೆಸರಿನ ಘೋಷಣೆಯಲ್ಲಿ ಮೈ ಮರೆತಿದ್ದರು. ಆತ್ಮದ ಅನುಸಂಧಾನದ ಆ ಸಭೆಯು ಇಡೀ ರಾತ್ರಿ ನಡೆಯಿತು ಮತ್ತು ಅಲ್ತಮಷ್ ಇಡೀ ರಾತ್ರಿ ದೀವಟಿಗೆಯನ್ನು ಕೈಯಲ್ಲಿ ಹಿಡಿದು ನಿಂತಿದ್ದ. ಖಾಜಿ ಹಮೀದುದ್ದೀನ್ ನಾಗೋರಿಯವರು ಆ ಆಧ್ಯಾತ್ಮಿಕ ಸಭೆಯ ಅಧ್ಯಕ್ಷರಾಗಿದ್ದರು. ಆ ಪವಿತ್ರ ಫಕೀರರು ಅಲ್ತಮಷ್‌ನ ಸೇವೆಯಿಂದ ಅತ್ಯಂತ ಪ್ರಸನ್ನವದನರಾದರು. ಮತ್ತು ಆತ್ಮದ ಬೆಳಕಿಂಡಿಯಂತಹ ನೋಟ ಹೊಂದಿದ್ದ ಆ ಫಕೀರರ ಪ್ರಭಾವದಿಂದ ಗುಲಾಮ ಅಲ್ತಮಷ್‌ನ ಅದೃಷ್ಟ ಖುಲಾಯಿಸಿತು. ಅವನು ಮೊದಲು ಮಣ್ಣಾಗಿದ್ದ ನಂತರ ಬಂಗಾರವಾದ; ಮೊದಲು ಗುಲಾಮನಾಗಿದ್ದ ನಂತರ ಅಗಣಿತ ಗುಲಾಮರ ಒಡೆಯನಾದ.

ಸಂಗೀತ ಸಭೆಯ ಆಸಕ್ತಿ :

ಅಲ್ತಮಷ್‌ನ ಕಾಲಾವಧಿಯ ಒಂದು ಘಟನೆ ಏನೆಂದರೆ, ಒಂದು ಸಾರಿ ಖಾಜಿ ಹಮೀದುದ್ದೀನ್ ನಾಗೋರಿಯವರು ಹಿಂದೂಸ್ಥಾನಕ್ಕೆ ಆಗಮಿಸಿದರು. ದೆಹಲಿಯ ಒಂದು ತಾಣದಲ್ಲಿ ನೆಲೆ ನಿಂತು ಭಕ್ತರಿಗೆ ಮಾರ್ಗದರ್ಶನ ಹಾಗೂ ಸಲಹೆ ಸೂಚನೆ ನೀಡುವ ಪವಿತ್ರ ಕರ್ತವ್ಯವನ್ನು ಅವರು ನಿರ್ವಹಿಸುತ್ತಿದ್ದರು. ಸಂಗೀತದ ಸಭೆಯ ಮೂಲಕ ಆಧ್ಯಾತ್ಮಿಕ ಔನ್ನತ್ಯವನ್ನು ಮತ್ತು ಭಕ್ತಿರಸವನ್ನು ಆಸ್ವಾದಿಸುತ್ತಿದ್ದ ಫಕೀರರ ಗುಂಪಿನೊಂದಿಗೆ ಖಾಜಿ ಸಾಹೇಬರಿಗೆ ಒಲವಿತ್ತು. ಆದ್ದರಿಂದ ಪ್ರತಿದಿನ ಧರ್ಮಗುರುಗಳ ಆವರಣದಲ್ಲಿ ಸಂಗೀತದ ಸಭೆಯನ್ನು ಆಯೋಜಿಸಲಾಗುತ್ತಿತ್ತು ಆದರೆ ಸಂಗೀತಸುಧೆಯನ್ನು ಆಸ್ವಾದಿಸುವುದು ಶರೀಯತ್ ಕಾನೂನಿಗೆ ವಿರೋಧವಾದುದ್ದರಿಂದ ಇಬ್ಬರು ಪ್ರಖ್ಯಾತ ಮುಲ್ಲಾಗಳಾದ, ಮುಲ್ಲಾ ಇಮಾದುದ್ದೀನ್ ಮತ್ತು ಮುಲ್ಲಾ ಜಮಾಲುದ್ದೀನ್ ಸೇರಿ ಖಾಜಿ ಸಾಹೇಬರ ಬಗ್ಗೆ ವಿಪರೀತ ಟೀಕೆ ಮಾಡಲಾರಂಭಿಸಿದರು.

ಆ ಮುಲ್ಲಾಗಳು ಖಾಜಿ ಸಾಹೇಬರಿಗೆ ಕಟ್ಟಾ ವಿರೋಧಿಗಳಾದರು ಹಾಗೂ ಅಲ್ತಮಷ್‌ನ ಮೇಲಿನ ತಮ್ಮ ಪ್ರಭಾವವನ್ನು ಬಳಸಿಕೊಂಡು ಖಾಜಿ ಸಾಹೇಬರ ಸಂಗೀತ ಸಭೆಗಳನ್ನು ರಾಜಾಜ್ಞೆಯ ಮೂಲಕ ನಿಷೇಧಿಸಬೇಕೆಂದು ಒತ್ತಾಯ ಮಾಡಲಾರಂಭಿಸಿದರು. ಅಸಹಾಯಕನಾದ ಅಲ್ತಮಷ್ ಖಾಜಿ ಸಾಹೇಬರನ್ನು ತನ್ನ ಬಳಿ ಕರೆಸಿದ್ದು ಅವರೊಡನೆ ಚರ್ಚೆ ಮತ್ತು ಸಮಾಲೋಚನೆಯನ್ನು ನಡೆಸಲು ಮುಲ್ಲಾ ಇಮಾದುದ್ದೀನ್ ಮತ್ತು ಮುಲ್ಲಾ ಜಲಾಲುದ್ದೀನ್‌ರವರನ್ನು ಕೂಡ ಆಹ್ವಾನಿಸಿದನು. ಆ ಇಬ್ಬರು ಮುಲ್ಲಾಗಳೂ ಕೂಡ ಖಾಜಿ ಸಾಹೇಬರನ್ನು ಪ್ರಶ್ನಿಸಿದರು, "ಶರೀಯತ್‌ನ ಕಾನೂನಿನ ರೀತ್ಯಾ ಸಂಗೀತ ಸಭೆಯು ಸಕ್ರಮವೋ ಅಥವಾ ಅಕ್ರಮವೋ?" ಖಾಜಿ ಸಾಹೇಬರು ಉತ್ತರಿಸಿದರು, "ಈ ಕೃತ್ಯವು ಜಪ ತಪದ ಆದೇಶವನ್ನು ಹೊಂದಿದವರಿಗೆ ಸಕ್ರಮವಾಗಿದೆ ಮತ್ತು ತೋರಿಕೆಯ ಆಷಾಢ ಭೂತಿಗಳಿಗೆ ಅಕ್ರಮವಾಗಿದೆ" ಮುಲ್ಲಾಗಳಿಗೆ ಈ ಉತ್ತರವನ್ನು ಕೊಟ್ಟ ನಂತರ ಖಾಜಿ ಸಾಹೇಬರು ಕೂಡಲೇ ಅಲ್ತಮಷ್‌ನನ್ನು ಸಂಬೋಧಿಸಿ ನುಡಿದರು, "ಸನ್ಮಾನ್ಯರಿಗೆ ತಮ್ಮ ಬಾಲ್ಯದ ಆ ಘಟನೆಯು ನೆನಪಿನಲ್ಲಿರಬಹುದು, ಆಗ ತಾವು ಗುಲಾಮರಾಗಿದ್ದಿರಿ. ತಮ್ಮ ಒಡೆಯನ ಮನೆಯಲ್ಲಿ ಸಂಗೀತದ ಸಭೆ ನಡೆಯುತ್ತಿತ್ತು. ಇಡೀ ರಾತ್ರಿ ತಾವು ಆ ಸಭೆಯಲ್ಲಿ ದೀವಟಿಗೆಯನ್ನು ಹಿಡಿದುನಿಂತು ಕೊಂಡಿದ್ದಿರಿ. ಅಲ್ಲಿ ಸೇರಿದ್ದ ಫಕೀರರಿಗೆ ತಮ್ಮ ಈ ಸೇವೆಯಿಂದ ಸಂತುಷ್ಟರನ್ನಾಗಿ ಮಾಡಿದಿರಿ ಮತ್ತು ಆ ಫಕೀರರ ಹರಕೆಯ ಫಲದಿಂದ ಖುದಾ ತಮಗೆ ಬಾದಶಹನ ಉನ್ನತ ಅಧಿಕಾರವನ್ನು ಕರುಣಿಸಿದ "ಖಾಜಿ ಸಾಹೇಬರ ಈ ಮಾತನ್ನು ಕೇಳಿದ ಅಲ್ತಮಷ್‌ನ ಕಣ್ಣೆದುರಿಗೆ ಹಿಂದಿನ ದೃಶ್ಯಾವಳಿಯೆಲ್ಲವೂ ಮರುಕಳಿಸಿದವು. ಭಾವುಕನಾದ ಅಲ್ತಮಷ್ ಖಾಜಿ ಸಾಹೇಬರೊಡನೆ ತುಂಬಾ ದಯೆಯಿಂದ ವರ್ತಿಸಿದ ಮತ್ತು ಅತ್ಯಂತ ಗೌರವದಿಂದ ಅವರನ್ನು ಬೀಳ್ಕೊಟ್ಟ. ಖಾಜಿ ಸಾಹೇಬರನ್ನು ಭೇಟಿಯಾದ ಪರಿಣಾಮವಾಗಿ ಅಲ್ತಮಷ್‌ನು ಸಂಗೀತ ಸಭೆಯನ್ನು ನಿಷೇಧಿಸುವ ಬದಲಿಗೆ ಸ್ವತಃ ತಾನು ಕೂಡ ಖಾಜಿ ಸಾಹೇಬರ ಧಾರ್ಮಿಕ ಸಭೆಗಳಲ್ಲಿ ಹಾಜರಾಗಿ ಸಂಗೀತದ ಆಧ್ಯಾತ್ಮಿಕತೆಯನ್ನು ಆಸ್ವಾದಿಸಿ ಆತ್ಮದ ಔನ್ನತ್ಯವನ್ನು ಸಾಧಿಸಿದ.

ಕೊಲೆ ಯತ್ನ:

ಅಲ್ತಮಷ್ ಧರ್ಮಭೀರುವಾಗಿದ್ದು ಧಾರ್ಮಿಕ ಕರ್ತವ್ಯಗಳ ಬಗ್ಗೆ ತೀರಾ ನಿಷ್ಠನಾಗಿದ. ಅವನು ಪ್ರತಿ ಶುಕ್ರವಾರವೂ ಜಾಮಿಯಾ ಮಸೀದಿಗೆ ಹೋಗಿ ಜಮಾತ್‌ನೊಂದಿಗೆ ನಮಾಜನ್ನು ನಿರ್ವಹಿಸುತ್ತಿದ್ದ. ಆದರೆ ಬಾದಶಹನ ಈ ಧರ್ಮ ನಿಷ್ಠೆ ಮತ್ತು ದೈವಭಕ್ತಿಯು ದೆಹಲಿಗೆ ಅಪ್ರಿಯವಾಯಿತು. ಇಂತಹದೇ ಒಂದು ವಿರೋಧಿ ಗುಂಪಿನ ಸರ್ದಾರನ ಹೆಸರು ನೂರ್ ಎಂದಾಗಿತ್ತು. ತನ್ನ ಸಂಗಡಿಗರೊಡನೆ ಕೂಡಿ ಅಲ್ತಮಷ್‌ನನ್ನು ನಮಾಜ್ ನಿರ್ವಹಿಸುವ ಸಂದರ್ಭದಲ್ಲೇ ಕೊಲೆ ಮಾಡುವ

ಯೋಜನೆಯೊಂದನ್ನು ಆತ ತಯಾರಿಸಿದ. (ಒಂದು ದಿನ) ಆ ಜನರು ಖಡ್ಗ ಮತ್ತು ಬಾಕುಗಳನ್ನು ಹಿಡಿದು ಮಸೀದಿಯೊಳಗಡೆ ಪ್ರವೇಶಿಸಿದರು ಮತ್ತು ನಮಾಜ್ ಮಾಡುತ್ತಿದ್ದ ಕೆಲವು ನಾಗರೀಕರ ಕಗ್ಗೊಲೆಯನ್ನು ಮಾಡುತ್ತಾ ಅಲ್ತಮಷ್‌ನ ಬಳಿ ಸಮೀಪಿಸಿದರು. ಆದರೆ ದೇವರು ಆ ಧರ್ಮಭ್ರಷ್ಟರನ್ನು ದಾರಿ ತಪ್ಪಿಸಿ ಅಲ್ತಮಷ್‌ನನ್ನು ರಕ್ಷಿಸಿದ. ಮತ್ತು ಆ ಕೊಲೆ ಪಾತಕಿಗಳು ಭಯಭೀತರಾಗಿ ಮಸೀದಿಯಿಂದ ಪರಾರಿಯಾದರು. ಜನರು ಅವರನ್ನು ಹಿಂಬಾಲಿಸಿದರು ಮತ್ತು ಗೋಡೆಗಳ ಮೇಲೆ ಹಾಗೂ ಮನೆಗಳ ಮೇಲೆ ಹತ್ತಿ ಅವರುಗಳ ಮೇಲೆ ಕಲ್ಲು ಬೀರ ತೊಡಗಿದರು. ಆ ಗುಂಪಿನ ಪ್ರತಿಯೊಬ್ಬ ವ್ಯಕ್ತಿಯೂ ಸಾವಿಗೀಡಾದನು ಮತ್ತು ದೆಹಲಿ ಆ ಕಿಡಿಗೇಡಿಗಳಿಂದ ಮುಕ್ತವಾಯಿತು.

ಅಲ್ತಮಷ್‌ನ ಕಾಲಾವಧಿಯ ಕೊನೆಯ ಹಂತದಲ್ಲಿ ಬಾಗ್ದಾದ್‌ನ ಪ್ರಖ್ಯಾತ ವಿದ್ವಾಂಸರು ಮತ್ತು ಧೀಮಂತ ಚಿಂತಕರು ಹಾಗೂ ಆಧ್ಯಾತ್ಮಿಕ ಗುರುಗಳೂ ಆದ ಫಕ್ರುದ್ದೀನ್ ಮುಲ್ಕ್ ಅಸಾಯಿಯವರು ದೆಹಲಿಗೆ ಆಗಮಿಸಿದರು. ಮೂವತ್ತು ವರ್ಷಗಳ ಕಾಲ ಅಬ್ಬಾಸಿಯ ಖಲೀಫರ ಆಡಳಿತಾವಧಿಯಲ್ಲಿ ಮಂತ್ರಿಯಾಗಿದ್ದ ಅವರು ಯಾವುದೋ ಕಾರಣದಿಂದ ಬೇಸರಗೊಂಡು ದೇಶ ತ್ಯಜಿಸಿ ದೆಹಲಿಯನ್ನು ಆಶ್ರಯಿಸಿದರು. ಅಲ್ತಮಷ್‌ನು ಆ ವಿದ್ವಾಂಸರ ಸ್ವಾಗತವನ್ನು ಅವರ ಯೋಗ್ಯತೆಗನುಸಾರವಾಗಿ ಮಾಡಿ ಅನೇಕ ಪಾರಿತೋಷಕಗಳನ್ನು ನೀಡಿ ಗೌರವಾದರಗಳನ್ನು ಸಲ್ಲಿಸಿ ಅವರನ್ನು ತನ್ನ ಮಂತ್ರಿಯನ್ನಾಗಿ ನೇಮಕ ಮಾಡಿದ. ಅಲ್ತಮಷ್‌ನ ಕಾಲಾವಧಿಯಲ್ಲಿ ವಿದ್ವಾಂಸರು ಮತ್ತು ಸೃಜನಶೀಲ ಲೇಖಕರ ಒಂದು ಬಹು ದೊಡ್ಡ ಗುಂಪು ಬಾದಶಹನ ಮೇಲುಸ್ತುವಾರಿಯಲ್ಲಿ ತನ್ನ ಸೃಜನಶೀಲ ಕ್ರಿಯಾತ್ಮಕತೆಯ ಮೂಲಕ ಜನ ಸಾಮಾನ್ಯರಿಗೆ ನೆರವಾದರು ಆ ಸಮೂಹದಲ್ಲಿ ನೂರುದ್ದೀನ್ ಔಫಿಯ ಹೆಸರು ಪ್ರಖ್ಯಾತವಾಗಿತ್ತು. ಆ ಉನ್ನತ ಸ್ತರದ ವಿದ್ವಾಂಸರು "ಜಾಮಿಯಲ್ ಹಿಕಾಯಾತ್" ಎಂಬ ಗ್ರಂಥವನ್ನು ರಚಿಸಿ ಅದನ್ನು ಅಲ್ತಮಷ್‌ನ ಮಂತ್ರಿಯಾದ ನಿಜಾಮುಲ್ ಮುಲ್ಕ್ ಮೊಹಮ್ಮದ್ ಬಿನ್ ಅಬೂಸಯೀದ್ ಜುನೇದಿಯ ಹೆಸರಿಗೆ ಅರ್ಪಣೆ ಮಾಡಿದರು.

ಅಲ್ತಮಷ್‌ನು ೩೬ ವರ್ಷಗಳ ಕಾಲ ಆಡಳಿತದ ಕರ್ತವ್ಯವನ್ನು ನಿರ್ವಹಿಸಿದನು. ಆತನು ಮರಣದ ನಂತರ ಅವನ ಪುತ್ರನಾದ ರುಕ್ನುದ್ದೀನ್ ಫೈರೋಜ್ ಶಾಹ ದೆಹಲಿಯ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದ.

ರುಕ್ನುದ್ದೀನ್ ಫೈರೋಜ್ ಶಾಹ:

ಹಿಜರಿ ಶಕೆ ೬೨೫ರಲ್ಲಿ ಅಲ್ತಮಷ್‌ನು ಫೈರೋಜ್ ಶಾಹಗೆ ಮನ್ನಣೆಯನ್ನು ನೀಡಿ ಅವನನ್ನು ಬದಾಯೂನ್ ಪರಗಣದ ರಾಜನನ್ನಾಗಿ ನೇಮಿಸಿದ್ದ. ಗ್ವಾಲಿಯರನ್ನು ಗೆದ್ದುಕೊಂಡ ನಂತರ ಅಲ್ತಮಷ್ ಲಾಹೋರ್‌ನ ಆಡಳಿತವನ್ನು ಅವನ ಅಧೀನದಲ್ಲಿ

ನೀಡಿದ್ದ ಮತ್ತು ಹೀಗೆ ನೀಡಿದ್ದರಿಂದ ಅವನ ಬಲ ಇನ್ನೂ ಹೆಚ್ಚಾಯಿತು ಮತ್ತು ಸೇವಸ್ತಾನ್‌ನ ಪ್ರಯಾಣದ ನಂತರ ದೆಹಲಿಯಲ್ಲಿ ಅಲ್ತಮಷ್ ಕೊನೆಯುಸಿರೆಳೆದಾಗ ರುಕ್ನುದ್ದೀನ್ ದೆಹಲಿಯಲ್ಲಿಯೇ ಇದ್ದ. ತಂದೆಯ ಮರಣದ ನಂತರ, ಹಿಜರಿ ಶಕೆ ೬೩೩ರಲ್ಲಿ ಮಂಗಳವಾರದ ದಿನ ಫೈರೋಜ್ ಶಾಹ್‌ನ ಪಟ್ಟಾಭಿಷೇಕದ ಸಮಾರಂಭವು ನಡೆಯಿತು. ಮಂತ್ರಿಗಳು ಮತ್ತು ಸರದಾರರು ಕಾಣಿಕೆ ಮತ್ತು ಉಡುಗೊರೆಗಳನ್ನು ಸಲ್ಲಿಸಿದರು ಮತ್ತು ಕವಿಗಳು ಅಭಿನಂದನೆಯ ಗೀತೆಗಳನ್ನು ಹಾಡಿ ಇನಾಮುಗಳನ್ನು ಪಡೆದರು. ಆ ಎಲ್ಲಾ ಕವಿತೆಗಳ ಪೈಕಿ ತಾಜುದ್ದೀನ್ ರೇಷ (ಮುಖ್ಯ ಕರಣಿಕನ) ಕವನವು ಬಹು ಪ್ರಖ್ಯಾತವಾಗಿದೆ. ಅದರ ಎರಡು ಚರಣಗಳು ಹೀಗಿವೆ.

ಶಾಶ್ವತವಾಗಿರುವ ಈ ದೇಶದ ದೊರೆಯಾದ
ನಿಮಗೆ ಶುಭಾಶಯಗಳು. ಏಕೆಂದರೆ ನೀವು
ಹದಿಹರೆಯದಲ್ಲೇ ಈ ದೇಶದ ಒಡೆಯರಾದಿರಿ.
ಅಮೀನುದ್ದೌಲಾ ರುಕ್ನುದ್ದೀನ್ ತಮ್ಮ ಹೆಸರೇ
ಕಾಬಾದ ರುಕ್ನೆಯಮಾನಿಯಂತೆ ಪವಿತ್ರವಾಗಿದೆ.

ರುಕ್ನುದ್ದೀನ್‌ನ ವಿಲಾಸೀ ಜೀವನ:

ರುಕ್ನುದ್ದೀನ್‌ನು ರಾಜ್ಯದ ಆಡಳಿತ ಸೂತ್ರವನ್ನು ತನ್ನ ವಶಕ್ಕೆ ತೆಗೆದುಕೊಂಡ ನಂತರ ಅವನು ಆಡಳಿತಾತ್ಮಕ ವ್ಯವಸ್ಥೆಯತ್ತ ಸೂಕ್ತ ಗಮನವನ್ನು ನೀಡಲಿಲ್ಲ ಹಾಗೂ ಹಗಲು ಮತ್ತು ರಾತ್ರೆ ವಿಲಾಸೀ ಜೀವನದಲ್ಲಿ ಮಗ್ನನಾದ. ಖುತ್ಬುದ್ದೀನ್ ಐಬಕ್ ಮತ್ತು ಶಹಾಬುದ್ದೀನ್ ಅಲ್ತಮಷ್ ಸೇರಿ ಕೂಡಿಟ್ಟ ಖಜಾನೆಯನ್ನು ಅವನು ಗಾಯಕರು ಮತ್ತು ವಿದೂಷಕರ ಮೇಲೆ ಅನಾಯಾಸವಾಗಿ ವೆಚ್ಚ ಮಾಡಲಾರಂಭಿಸಿದ. ರುಕ್ನುದ್ದೀನ್ ಭೋಗ ವಿಲಾಸದಲ್ಲಿ ಎಷ್ಟೊಂದು ಮಗ್ನನಾದನೆಂದರೆ, ರಾಜ್ಯದ ಆಡಳಿತವನ್ನು ತನ್ನ ತಾಯಿಯಾದ ತರ್ಕಾನ್‌ಶಾಹಳ ಸುಪರ್ದಿಗೆ ಒಪ್ಪಿಸಿ ತಾನು ಸುತ್ತಲಿನ ಪರಿವೆ ಇಲ್ಲದಂತೆ ಕುಡಿತ ಮತ್ತು ಭೋಗ ಜೀವನದಲ್ಲಿ ತೊಡಗಿಸಿಕೊಂಡ. ಶಾಹ ತರ್ಕಾನ್ ಒಬ್ಬ ತುರ್ಕಿ ದಾಸಿಯಾಗಿದ್ದು ಅಲ್ತಮಷ್‌ನ ಅಂತಃ ಪುರವನ್ನು ಪ್ರವೇಶಿಸಿ ಅವನ ಮೇಲೆ ತುಂಬಾ ಪ್ರಭಾವವನ್ನು ಬೀರಿದ್ದಳು. ಆ ಹೆಂಗಸು ತುಂಬಾ ಕುತ್ಸಿತ ಸ್ವಭಾವವನ್ನು ಹೊಂದಿದ್ದಳು. ಅವಳು ತನ್ನ ಮಗನಾದ ರುಕ್ನುದ್ದೀನ್‌ನ ವಿಲಾಸೀ ಜೀವನ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ಅವನಿಗಿದ್ದ ನಿರಾಸಕ್ತಿಯಿಂದ ತುಂಬಾ ಫಾಯಿದೆಯನ್ನು ಪಡೆದುಕೊಂಡಳು. ಹಾಗೂ ಅಲ್ತಮಷ್‌ನ ಅನೇಕ ಮಂದಿ ವಿಧಿ ಬದ್ಧ ವಿವಾಹಿತ ಪತ್ನಿಯರನ್ನು ಅವಮಾನ ಮತ್ತು ಭಂಗಕ್ಕೆ ಗುರಿಪಡಿಸಿ ಕೊಲೆ ಮಾಡಿಸಿದಳು. ಶಹಾಬುದ್ದೀನ್ ಅಲ್ತಮಷ್‌ನ ಅಂತಃಪುರದ ತುರ್ಕಿ ಮಹಿಳೆಯರು ಕೂಡ ಆ ಕುಟಿಲ ಹೆಂಗಸಿನ ಕುತಂತ್ರಕ್ಕೆ ಬಲಿಯಾದರು. ತುರ್ಕಾನ್‌ಶಾಹಳ ಕ್ರೌರ್ಯಕ್ಕೆ ಬಲಿಯಾದ ಆ ಮಹಿಳೆಯರು ಬಡತನ ಮತ್ತು ದಾರಿದ್ರ್ಯದ ಬದುಕನ್ನು ಅನುಭವಿಸುವಂತಾಯಿತು.

ಶಾಹ ತುರ್ಕಾನಳ ಅಧಿಕಾರ:

ಶಾಹ ತುರ್ಕಾನಳ ಕುಟಿಲತೆಗೆ ಗುರಿಯಾದವರು ಅಲ್ತಮಷ್‌ನ ಅಂತಃಪುರದ ಮಹಿಳೆಯರು ಮಾತ್ರ ಆಗಿರಲಿಲ್ಲ ಬದಲಿಗೆ ಆ ಮತ್ಸರದ ಹೆಂಗಸು ಅಲ್ತಮಷ್‌ನ ಮಕ್ಕಳ ಮೇಲೆ ಕೂಡ ಭಯಂಕರ ಕ್ರೌರ್ಯವನ್ನು ಎಸಗಿದಳು. ಅಲ್ತಮಷ್‌ನ ಕಿರಿಯ ಪುತ್ರನಾದ ಖುತ್ಬುದ್ದೀನ್ ಶಾಹ ತುರ್ಕಾನನ ಕುತಂತ್ರಕ್ಕೆ ಬಲಿಯಾಗಿ ಕೊಲೆಯಾದ. ಶಾಹ ತುರ್ಕಾನನ ಇಂತಹ ದೌರ್ಜನ್ಯದ ದೆಸೆಯಿಂದ ರುಕ್ನುದ್ದೀನ್ ದೆಹಲಿಯ ಎಲ್ಲಾ ವಲಯದ ಜನರ ಕೆಂಗಣ್ಣಿಗೆ ಗುರಿಯಾದ.

ದೇಶದಲ್ಲಿ ಬಂಡಾಯ ಮತ್ತು ವಿದ್ರೋಹದ ಕಿಡಿಗಳು :

(ಈ ಎಲ್ಲಾ ಕೃತ್ಯಗಳ ಪರಿಣಾಮದಿಂದ ದೇಶದಲ್ಲಿ ಅಸಮಾಧಾನ ಹಾಗೂ ನಿರಾಶೆಯ ಅಲೆ ಮೂಡಿತು) ರುಕ್ನುದ್ದೀನ್‌ನ ತಮ್ಮನೂ ಮತ್ತು ಅವಧ್‌ನ ರಾಜನೂ ಆಗಿದ್ದ ಮೊಹಮ್ಮದನು ರುಕ್ನುದ್ದೀನ್‌ನ ಅಧೀನತೆಯನ್ನು ನಿರಾಕರಿಸಿದ ಮತ್ತು ಅವನು ದೆಹಲಿಗೆ ಕಳಿಸಿದ್ದ ಲಖ್ನೋತಿಯ ತೆರಿಗೆ ಹಣವನ್ನು ಮಾರ್ಗ ಮಧ್ಯದಿಂದಲೇ ವಾಪಸ್ಸು ತರಿಸಿಕೊಂಡ. ಬದಾಯೂನ್, ಲಾಹೋರ್, ಮುಲ್ತಾನ್ ಮತ್ತು ಹಾನ್ಸಿಯ ರಾಜರುಗಳು ಪರಸ್ಪರ ಪತ್ರ ವ್ಯವಹಾರದ ಮೂಲಕ ಸಂಪರ್ಕವನ್ನು ಸಾಧಿಸಿ ರುಕ್ನುದ್ದೀನ್‌ನ ಪ್ರಭುತ್ವವನ್ನು ಒಪ್ಪಿಕೊಳ್ಳಲು ನಿರಾಕರಿಸಿದರು ಹಾಗೂ ಬಂಡಾಯದ ಬಾವುಟವನ್ನು ಹಾರಿಸಿದರು. ರುಕ್ನುದ್ದೀನನು ಆ ಕಿಡಿಗೇಡಿ ಸರದಾರರನ್ನು ದಮನಗೊಳಿಸುವ ನಿರ್ಧಾರ ಮಾಡಿದ ಮತ್ತು ದೆಹಲಿಯಿಂದ ಈ ಉದ್ದೇಶದ ಸಲುವಾಗಿ ಅವನು ಹೊರಟ. ಅವನು ಪ್ರಯಾಣ ಬೆಳೆಸುತ್ತಾ ಕೇಲೋಖರಿವರೆಗೆ ತಲುಪಿದ. ಈ ಹಂತದಲ್ಲಿ ಮಂತ್ರಿಯಾಗಿದ್ದ ನಿಜಾಮುಲ್ ಮುಲ್ಕ್ ವಿದ್ರೋಹಿಗಳ ಭಯದಿಂದ ಕೇಲೋಖರಿಯಿಂದ ಪಲಾಯನ ಮಾಡಿದ ಮತ್ತು ಕೋಲ್ ತಲುಪಿದ್ದು ಬದಾಯೂನಿನ ರಾಜನಿಗೆ ಶರಣಾದ.

ರಜಿಯಾಳ ಪಟ್ಟಾಭಿಷೇಕ:

ನಿಜಾಮುಲ್ ಮುಲ್ಕ್ ಮತ್ತು ಐಜುದ್ದೀನ್ ಇಬ್ಬರು ಕೂಡಾ ಪರಸ್ಪರ ಮೈತ್ರಿಯೊಂದಿಗೆ ಕೂಡಿ ಲಾಹೋರ್ ತಲುಪಿದರು ಮತ್ತು ಒಮ್ಮತದ ಅಭಿಪ್ರಾಯಕ್ಕೆ ಬಂದು ರುಕ್ನುದ್ದೀನ್ ಮೇಲೆ ಯುದ್ಧ ಮಾಡಲು ಸಿದ್ಧತೆಗೆ ತೊಡಗಿಕೊಂಡರು. ಈ ವಿಷಯ ತಿಳಿದು ಬಂದ ನಂತರ ರುಕ್ನುದ್ದೀನನು ಪಂಜಾಬನ ಮಾರ್ಗ ಹಿಡಿದ. ರುಕ್ನುದ್ದೀನ್‌ನ ಸೈನ್ಯವು ಮನ್ಸೂರಿಯದ ಪ್ರದೇಶದ ಬಳಿ ತಲುಪಿದಾಗ ಅಲ್ತಮಷ್‌ನ ಕಾಲಾವಧಿಯ ಪ್ರಖ್ಯಾತ ಸರದಾರನಾದ ತಾಜುದ್ದೀನ್ ಮುಲ್ಕ್ ಮೊಹಮದ್, ಬಹಾವುದ್ದೀನ್ ಹಸನ್, ಕರೀಮುದ್ದೀನ್, ಜಿಯಾವುಲ್ ಮುಲ್ಕ್, ಖ್ವಾಜ ರಶೀದ್ ಮತ್ತು ಫಕ್ರುದ್ದೀನ್ ಮುಂತಾದವರು ರಾಜನ ಸೇನೆಯನ್ನು ತೊರೆದು ದೆಹಲಿಯತ್ತ

ಪ್ರಯಾಣ ಬೆಳೆಸಿದರು. ತತ್‌ಕ್ಷಣ ಆ ಸರದಾರರು ಸಮಾಲೋಚನೆಯನ್ನು ಮಾಡಿ ಸುಲ್ತಾನ್ ಅಲ್ತಮಷ್‌ನ ಹಿರಿಯ ಪುತ್ರಿಯಾದ ರಜಿಯಾ ಸುಲ್ತಾನಳನ್ನು ತಮ್ಮ ದೊರೆಯನ್ನಾಗಿ ಸ್ವೀಕರಿಸಿ ಅವಳ ಪಟ್ಟಾಭಿಷೇಕವನ್ನು ನೆರವೇರಿಸಿದರು. ರಜಿಯಾ ಸುಲ್ತಾನಳು ಶಾಹ ತುರ್ಕಾನ್‌ಳನ್ನು ಬಂಧಿಸಿ ಸೆರೆಮನೆಗಟ್ಟಿದಳು. ಈ ಸುದ್ದಿಯು ತಿಳಿದು ಬಂದ ನಂತರ ರುಕ್ನುದ್ದೀನನು ದೆಹಲಿಯತ್ತ ಪ್ರಯಾಣ ಬೆಳೆಸಿದ. ರುಕ್ನುದ್ದೀನನು ಕೇಲೋಖರಿ ತಲುಪಿದಾಗ ಅವನನ್ನು ಎದುರಿಸಲು ರಜಿಯಾ ಸೈನ್ಯವನ್ನು ಕಳಿಸಿದಳು. ಉಭಯತ್ರರ ನಡುವೆ ಕದನವೇರ್ಪಟ್ಟು ರುಕ್ನುದ್ದೀನನಿಗೆ ಅಪಜಯವುಂಟಾಯಿತು. ಮತ್ತು ಅವನನ್ನು ಬಂಧಿಸಿ ಒಂದು ಕೋಟೆಯಲ್ಲಿ ಸೆರೆಮನೆಯಲ್ಲಿಡಲಾಯಿತು. ಕೆಲ ದಿನಗಳ ನಂತರ ರುಕ್ನುದ್ದೀನ್ ಬಂಧನದಲ್ಲಿ ಸಾವನ್ನಪ್ಪಿದ ರುಕ್ನುದ್ದೀನ್‌ನನ ಆಡಳಿತಾವಧಿಯು ೬ ತಿಂಗಳು ಮತ್ತು ೮ ದಿನಗಳ ಕಾಲವಾಗಿತ್ತು.

ರಜಿಯಾ ಸುಲ್ತಾನ

ಆರಂಭದ ದಿನಗಳು:

ರಜಿಯಾ ಸುಲ್ತಾನ ಉತ್ತಮ ದರ್ಜೆಯ ಆಡಳಿತಾತ್ಮಕ ಸಾಮರ್ಥ್ಯವನ್ನು ಹೊಂದಿದ್ದಳು ಬುದ್ಧಿಮತ್ತೆ ಮತ್ತು ವಿವೇಕವನನು ಹೊಂದಿದ್ದ ಮತ್ತು ಚತುರೋಪಾಯಪ್ರವೀಣೆಯಾಗಿದ್ದು ರಾಜಕಾರಣದ ಸೂಕ್ಷ್ಮತೆಯ ಬಗ್ಗೆ ಆ ಮಹಿಳೆಯು ತನ್ನ ಕಾಲಾವಧಿಯ ಅನೇಕ ಮಂದಿ ಪುರುಷರಿಗಿಂತಲೂ ಸಂಪನ್ನಳಾಗಿದ್ದಳು. ಮನುಷ್ಯನ ಸಾಮರ್ಥ್ಯವನ್ನು ಅಳೆಯುವವರಿಗೆ ಆಕೆಯ ಹೆಣ್ತನವೊಂದನ್ನು ಬಿಟ್ಟರೆ ಬಾದಶಹನ ಹುದ್ದೆಯನ್ನು ಹೊಂದುವಲ್ಲಿ ಬೇರೆ ಯಾವ ಐಬು ಕೂಡ ಕಂಡು ಬರುತ್ತಿರಲಿಲ್ಲ. ರಜಿಯಾ ಎಂದಿನಿಂದಲೂ ಅತ್ಯಂತ ಭಕ್ತಿ ಪೂರ್ವಕವಾಗಿ ಕುರಾರಿನ ಪಠಣವನ್ನು ಮಾಡುತ್ತಿದ್ದಳು. ಧಾರ್ಮಿಕ ಶಿಕ್ಷಣ ಮಾತ್ರವಲ್ಲದೆ ಇತರೆ ವಿದ್ಯೆ ಮತ್ತು ಕಲೆಗಳ ಬಗ್ಗೆ ಕೂಡ ಆಕೆ ಪಾರಂಗತಳಾಗಿದ್ದಳು.

ರಜಿಯಾಳ ಬಗ್ಗೆ ಅಲ್ತಮಷ್‌ನ ಅಭಿಪ್ರಾಯ:

ಶಂಸುದ್ದೀನ್ ಅಲ್ತಮಷ್‌ನ ಕಾಲಾವಧಿಯಿಂದಲೂ ರಜಿಯಾ ಸುಲ್ತಾನ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಆಸಕ್ತಿ ವಹಿಸುತ್ತಿದ್ದಳು. ಮತ್ತು ಆಗಿನ ರಾಜ್ಯಾಡಳಿತದಲ್ಲಿ ಮೂಡಿ ಬರುತ್ತಿದ್ದ ಪ್ರಮುಖ ಬಿಕ್ಕಟ್ಟುಗಳಲ್ಲಿ ಅವಳ ನಿರ್ಧಾರವೇ ಅಂತಿಮವಾಗಿರುತಿತ್ತು. ಅಲ್ತಮಷ್‌ಗೆ ರಜಿಯಾ ಸುಲ್ತಾನಾಳ ವಿವೇಕ ಮತ್ತು ದೂರ ದರ್ಶಿತ್ವದ ಬಗ್ಗೆ ಅಪಾರ ನಂಬಿಕೆ ಇತ್ತು. ಹೀಗಾಗಿ ರಾಜ್ಯಾಡಳಿತದ ಪ್ರಮುಖ ನಿರ್ಣಯಗಳ ಸಂದರ್ಭದಲ್ಲಿ ಆಕೆಯ ಸಲಹೆ ಸೂಚನೆಗಳನ್ನು ಸ್ವಾಗತಿಸುತ್ತಿದ್ದ. ಗ್ವಾಲಿಯರ್‌ನ ವಿಜಯದ ನಂತರ ಅಲ್ತಮಷ್‌ನು ತನ್ನ ಖಾಸಾ ಸರದಾರರ ಸಮ್ಮುಖದಲ್ಲಿ ರಜಿಯಾ ಸುಲ್ತಾನಾಳನ್ನು ತನ್ನ ಉತ್ತರಾಧಿಕಾರಿ ಎಂದು ನೇಮಕ ಮಾಡಿದ್ದ. ಆ ಸಂದರ್ಭದಲ್ಲಿ ಅಲ್ಲಿ ಉಪಸ್ಥಿತರಿದ್ದ

ಸರದಾರರು ಈ ಬಗ್ಗೆ ಅಲ್ತಮಷ್‌ನನ್ನು ಪ್ರಶ್ನಿಸಿ "ಪುತ್ರರು ಇರುವಾಗ ಪುತ್ರಿಯನ್ನು ಸಿಂಹಾಸನ ಮತ್ತು ಕಿರೀಟಕ್ಕೆ ಉತ್ತರಾಧಿಕಾರಿಯನ್ನಾಗಿ ಘೋಷಿಸುವುದರ ಹಿನ್ನಲೆಯಲ್ಲಿ ಎಂತಹ ವಿವೇಕವಿದೆ?" ಎಂದು ಪ್ರಶ್ನಿಸಿದ್ದರು. ಆಗ ಅವನು "ನನಗೆ ನನ್ನ ಪುತ್ರರ ನಡವಳಿಕೆ ಮತ್ತು ರೀತಿ ನೀತಿಯ ಬಗ್ಗೆ ಅರಿವಿದೆ. ಈ ಹೊತ್ತಿನಲ್ಲಿ ಅವರು ನನ್ನ ಕೃಪೆಯಲ್ಲಿ ಇದ್ದಾರೆ ಮತ್ತು ಅತ್ಯಂತ ತೀವ್ರವಾಗಿ ಕುಡಿತ ಮತ್ತು ಭೋಗ ವಿಲಾಸದ ದಾಸರಾಗಿದ್ದಾರೆ. ಆದ್ದರಿಂದ ಅವರು ರಾಜ್ಯಾಡಳಿತವನ್ನು ನಿಭಾಯಿಸಲು ಅರ್ಹರೆಂದು ನಾನು ಭಾವಿಸುವುದಿಲ್ಲ ರಜಿಯಾ ಸುಲ್ತಾನಾಳನ್ನು ನಾನು ನನ್ನ ಪುತ್ರರಿಗಿಂತಲೂ ಹೆಚ್ಚಿನ ಆದ್ಯತೆ ಕೊಡುವುದು ಏಕೆಂದರೆ ಆಕೆ ಹೊರನೋಟಕ್ಕೆ ಮಹಿಳೆಯಾಗಿ ಕಂಡೂಬಂದರೂ, ಅವಳಿಗಿರುವ ವಿವೇಕ ಮತ್ತು ಪಕ್ವತೆ ಹಾಗೂ ಬುದ್ಧಿ ಶಕ್ತಿಯ ದೆಸೆಯಿಂದ ಅವಳು ವಾಸ್ತವವಾಗಿ ಪುರುಷನೇ ಸರಿ ಎಂದು ಉತ್ತರಿಸಿದ್ದ.

ಹಿಜರಿ ಶಕೆ ೬೩೪ರಲ್ಲಿ ರಜಿಯಾ ಸುಲ್ತಾನ ಸಿಂಹಾಸನವನ್ನು ಏರಿದಳು. ರಾಜ್ಯಾಭಾರವನ್ನು ಸುಸೂತ್ರವಾಗಿ ನಡೆಸುವ ಸಲುವಾಗಿ ಅವಳು ಪರ್ದಾದಿಂದ ಹೊರಬಂದಳು ಹಾಗೂ ಪುರಷನ ಪೋಷಾಕನ್ನು ಧರಿಸಿ ದರ್ಬಾರನ್ನು ಆಯೋಜಿಸಿದಳು. ರುಕ್ನುದ್ದೀನ್‌ನ ಆಡಳಿತಾವಧಿಯಲ್ಲಿ ಮಂಗ ಮಾಯಾವಾಗಿದ್ದ ಅಲ್ತಮಷ್‌ನ ಕಾಲದ ಎಲ್ಲಾ ಕಾನೂನುಗಳನ್ನು ಮತ್ತು ವಿಧಿ ವಿಧಾನಗಳನ್ನು ಆಕೆ ಮತ್ತೆ ಜಾರಿಗೆ ತಂದಳು ಆಡಳಿತಾತ್ಮಕ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ಆಕೆಯು ತನ್ನ ತಂದೆಯ ಕಾರ್ಯ ವಿಧಾನವನ್ನು ತದ್ರೂಪು ಪಾಲಿಸಿದಳು ಮತ್ತು ನ್ಯಾಯ ಪರತೆ ಹಾಗೂ ದಯಾಪರತೆಯನ್ನು ಮೈಗೂಡಿಸಿಕೊಂಡಳು.

ಕೆಲವು ಬಲಾಢ್ಯ ನಾಯಕರ ವಿದ್ರೋಹ:

ರಜಿಯಾ ರಾಜ್ಯಾಭಾರದ ಹೊಣೆಗಾರಿಕೆಯನ್ನು ತನ್ನ ವಶಕ್ಕೆ ತೆಗೆದುಕೊಂಡಾಗ ಕೆಲವು ಪ್ರಖ್ಯಾತ ಮತ್ತು ಬಲಾಢ್ಯ ನಾಯಕರಾದ ನಿಜಾಮುಲ್‌ಮುಲ್ಕ್ ಮೊಹಮದ್ ಜುನೇದಿ ರಾಜ್ಯದ ಮಂತ್ರಿ, ಅಲ್ಲಾವುದ್ದೀನ್ ಶೇರ್‌ಖಾನಿ ಮತ್ತು ಮುಲ್ಕ್ ಸೈಫುದ್ದೀನ್ ಕೊಚ್ಚಿ ಮೊದಲಾದವರು ಬಂಡಾಯದ ಧ್ವಜವನ್ನು ಹಾರಿಸಿದರು. ಈ ನಾಯಕರುಗಳು ಪರಸ್ಪರ ಚಿತಾವಣೆಯ ಮೂಲಕ ದೇಶದ ಇತರೆ ಸರದಾರರು ಮತ್ತು ಜಾಗೀರುದಾರರನ್ನು ಕೂಡ ರಜಿಯಾ ಸುಲ್ತಾನಳ ವಿರುದ್ಧ ಪ್ರೇರೇಪಿದರು. ಅವಧ್‌ನ ಜಾಗೀರುದಾರನಾದ ಮುಲ್ಕ್ ನಾಸೀರುದ್ದೀನ್‌ಗೆ ಈ ಸರದಾರರ ದ್ರೋಹದ ಸಂಗತಿ ತಿಳಿದುಬಂದಾಗ ಅವನು ರಜಿಯಾ ಸುಲ್ತಾನಳಿಗೆ ಬೆಂಬಲ ನೀಡಬೇಕೆಂದು ನಿರ್ಧರಿಸಿದ ಮತ್ತು ದೆಹಲಿಯ ಕಡೆ ದೌಡಾಯಿಸಿದ. ನಸೀರುದ್ದೀನ್‌ನು ಗಂಗಾ ನದಿಯ ತೀರವನ್ನು ಕ್ರಮಿಸಿ ಮುಂದುವರೆಯುವಷ್ಟರಲ್ಲಿ ವಿದ್ರೋಹಿ ಸರದಾರರು ಅವಳ ಮೇಲೆ ಆಕ್ರಮಣವನ್ನು ಮಾಡಿದರು ಮತ್ತು ಆ ನಾಯಕರು ನಸೀರುದ್ದೀನ್‌ನನ್ನು ಬಂಧಿಸಿ ಅವನ ಸೈನ್ಯವನ್ನು ಚೆದರಿಸಿದರು. ಮುಲ್ಕ್ ನಾಸೀರುದ್ದೀನ್‌ನ ಆರೋಗ್ಯ ಚೆನ್ನಾಗಿರಲಿಲ್ಲ. ಹೀಗಾಗಿ ಅವನು ಬಂಧನದ ಅವಸ್ಥೆಯಲ್ಲಿದ್ದಾಗಲೇ ಸಾವನ್ನಪ್ಪಿದ.

ವಿದ್ರೋಹಿ ಸರದಾರರ ಕಿಡಿಗೇಡಿತನದ ವಿಷಯವು ರಜಿಯಾ ಸುಲ್ತಾನಾಳಿಗೆ ತಿಳಿದು ಬಂದಾಗ ಆಕೆ ಅತ್ಯಂತ ಧೀಮಂತಿಕೆ ಮತ್ತು ವಿವೇಕದಿಂದ ಆ ಸರದಾರರ ಸಂಘಟಿತ ಶಕ್ತಿಯನ್ನು ವಿಘಟನೆ ಮಾಡಿದಳು. ಮತ್ತು ಒಬ್ಬೊಬ್ಬ ನಾಯಕನನ್ನು ಕೂಡ ಯಮಪುರಿಗೆ ಅಟ್ಟಿದಳು. ಮಲ್ಲಿಕ್ ಸೈಘುದ್ದೀನ್ ಮತ್ತು ಅವನ ಸಹೋದರರು ಯುದ್ಧ ಭೂಮಿಯಲ್ಲಿ ಬಂಧನಕ್ಕೊಳಗಾದರು ಮತ್ತು ಕೊಲೆ ಮಾಡಲ್ಪಟ್ಟರು. ಅಲ್ಲಾವುದ್ದೀನ್ ಶೇರ್‌ಖಾನಿಯನ್ನು ಬಾಬುಲ್ ಎಂಬ ಸ್ಥಳದಲ್ಲಿ ಕೊಲೆಮಾಡಲಾಯಿತು ಮತ್ತು ಅವನ ತಲೆಯನ್ನು ದೆಹಲಿಗೆ ತರಲಾಯಿತು. ನಿಜಾಮುದ್ದೀನ್ ಯುದ್ಧ ರಂಗದಿಂದ ಪಲಾಯನ ಮಾಡಿದ ಮತ್ತು ಕೋಹೆ ಸರ್ಮೋರ್‌ನಲ್ಲಿ ರಕ್ಷಣೆ ಪಡೆದ ಮತ್ತು ಅಲ್ಲಿಯೇ ಅಂತ್ಯವನ್ನು ಕಂಡುಕೊಂಡ.

ಆಡಳಿತದ ಹೊಸ ವ್ಯವಸ್ಥೆ:

ಆ ದುರುಳ ನಾಯಕರನ್ನು ಸೂಕ್ತ ರೀತಿಯಲ್ಲಿ ಅಂತ್ಯ ಕಾಣಿಸಿದ ನಂತರ ರಜಿಯಾ ಸುಲ್ತಾನಾಳ ದರ್ಪ ಮತ್ತು ಭಯದ ಭಾವವು ಜನತೆಯ ಮನಸ್ಸಿನಲ್ಲಿ ಬಲವಾಗಿ ಮೂಡಿತು. ಮತ್ತು ಇಡೀ ರಾಜ್ಯವು ವಿದ್ರೋಹಿ ಮತ್ತು ಕಿಡಿಗೇಡಿಗಳ ಗಲಭೆಗಳಿಂದ ಮುಕ್ತಾಯವಾಯಿತು. ರಜಿಯಾ ಸುಲ್ತಾನ ಆಡಳಿತದ ಬುನಾದಿಯನ್ನು ಬಿಗಿ ಮಾಡಿದ್ದೂ ಅಲ್ಲದೆ ರಾಜ್ಯದ ಪ್ರಭಾವಿ ಹುದ್ದೆಗಳನ್ನು ಪ್ರಖ್ಯಾತ ಮತ್ತು ನಂಬಿಕೆಗೆ ಅರ್ಹರಾದ ಸರದಾರರ ಕೈಗೆ ನೀಡಿದಳು. ಆಕೆಯು ಮಾಜಿ ಸಚಿವನಾಗಿದ್ದ ನಿಜಾಮುಲ್ ಮುಲ್ಕ್‌ನ ಕೈಕೆಳಗೆ ಉಪಸಚಿವನಾಗಿದ್ದ ಖ್ವಾಜ ಮೆಹದಿ ಘಜ್ನವಿಗೆ ಸಚಿವ ಹುದ್ದೆಯನ್ನು ಪ್ರಧಾನ ಮಾಡಿದಳು ಹಾಗೂ ಈ ಹೊಸ ಸಚಿವನಿಗೂ ಕೂಡ ನಿಜಾಮುಲ್ ಮುಲ್ಕ್ ಎಂಬ ಬಿರುದನ್ನು ನೀಡಿದಳು. ಸೇನಾಧಿಕಾರಿಯ ಪಟ್ಟವನ್ನು ಸೈಘುದ್ದೀನ್ ಐಬಕ್‌ಗೆ ನೀಡಲಾಯಿತು ಮತ್ತು ಅವನಿಗೆ ಖತಲಖ್ ಖಾನ್ ಎಂಬ ಬಿರುದನ್ನು ನೀಡಲಾಯಿತು. ಐಜುದ್ದೀನ್ ಕಬೀರಖಾನಿ ರಜಿಯಾಳ ಅಧೀನತೆಯನ್ನು ಅಂಗೀಕರಿಸಿದ್ದ ಅವನಿಗೆ ಲಾಹೋರ್‌ನ ರಾಜನನ್ನಾಗಿ ನೇಮಕ ಮಾಡಲಾಯಿತು. ಇದೇ ರೀತಿಯಲ್ಲಿ ಲಖ್‌ನೋತಿ, ದೇವಲ್, ಸಿಡಾರ್ ಮತ್ತು ಇನ್ನಿತರೆ ಪ್ರದೇಶಗಳ ಆಡಳಿತವನ್ನು ಕೂಡ ದೇಶದ ಪ್ರಖ್ಯಾತ ಹಾಗೂ ನಂಬಿಕೆಗೆ ಪಾತ್ರರಾದ ನಾಯಕರ ವಶಕ್ಕೆ ನೀಡಲಾಯಿತು ಮತ್ತು ಅವರೆಲ್ಲರೂ ರಾಜಧಾನಿಯಾದ ದೆಹಲಿಯಿಂದ ತಮ್ಮ ತಮ್ಮ ನೇಮಕಾತಿ ಆದೇಶಗಳನ್ನು ಪಡೆದುಕೊಂಡು ತಮ್ಮ ತಮ್ಮ ಸ್ಥಳಕ್ಕೆ ಹೋದರು ಕೆಲದಿನಗಳ ನಂತರ ಸೈಘುದ್ದೀನ್ ಐಬಕ್‌ನು ಸಾವನ್ನಪ್ಪಿದನು. ಅವನ ಜಾಗದಲ್ಲಿ ಖುತ್ಬುದ್ದೀನ್‌ನಿಗೆ ಸೇನೆಯ ನಾಯಕತ್ವವನ್ನು ವಹಿಸಿಕೊಡಲಾಯಿತು.

ಖುತ್ಬುದ್ದೀನ್‌ನಿಗೆ ಸೈನ್ಯದ ಉಪಸೇನಾಪತಿಯ ಸ್ಥಾನವನ್ನು ನೀಡಿದ ಬಳಿಕ ಅವನನ್ನು ರಜಿಯಾ ರಣಥಂಬೂರಿನ ಯುದ್ಧಕ್ಕೆ ಕಳುಹಿಸಿದಳು. ಖುತ್ಬುದ್ದೀನನು ರಣಥಂಬೂರಿನ್ನು ತಲುಪಿದ ಮತ್ತು ಅಲ್ಲಿ ಅಲ್ತಮಷ್‌ನ ಮರಣವಾದಾಗಿನಿಂದಲೂ

ಸೆರೆಮನೆಯಲ್ಲಿದ್ದ ಮುಸ್ಲಿಮ್ ಖೈದಿಗಳನ್ನು ಹಿಂದೂಗಳ ಕಾರಾಗೃಹದಿಂದ ಬಿಡುಗಡೆ ಮಾಡಿಸಿದ. ಆದರೆ ಖುತ್ಬುದ್ದೀನನು ಕೋಟೆಯನ್ನು ಗೆಲ್ಲುವ ಪ್ರಯತ್ನವನ್ನು ಮಾಡದೆ ದೆಹಲಿಗೆ ಮರಳಿದ.

ಯಾಕೂತ್ ಹಬಶಿಯ ಅಧಿಕಾರ:

ಖುತ್ಬುದ್ದೀನನು ರಣಥಂಬೂರಿಗೆ ಹೋದ ನಂತರ ದೆಹಲಿಯ ಪರಿಸ್ಥಿತಿಯು ಏಕಾಏಕೀ ಬದಲಾಯಿತು. ಮುಲ್ಕ್ ಇಖ್ತಿಯಾರುದ್ದೀನ್ ಅಲಪ್ತಗೀನ್ ಹಜಬ್ ಮುಖ್ಯ ಮಂತ್ರಿಯ ಸ್ಥಾನವನ್ನು ಅಲಂಕರಿಸಿದ. ಅಶ್ವದಳದ ಸರದಾರನಾಗಿದ್ದ ಜಮಾಲುದ್ದೀನ್ ಯಾಕೂತ್ ಹಬಶಿಯು ರಾಜ ದರ್ಬಾರನ್ನು ಸಂಪೂರ್ಣವಾಗಿ ಆಕ್ರಮಿಸಿದ ಮತ್ತು ಯಾಕೂತ್ ಹಬಶಿಯು ರಜಿಯಾ ಸುಲ್ತಾನಾಳ ಹೃದಯದಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದ್ದು, ಅತ್ಯಂತ ಕಡಿಮೆ ಅವಧಿಯಲ್ಲಿಯೇ "ಅಮೀರ್ ಉಲ್ ಉಮ್ರಾ" (ಸರದಾರರ ನಾಯಕನಾದ) ಅವನ ಪ್ರಭಾವ ವಲಯ ಎಷ್ಟು ವಿಸ್ತಾರವಾಯಿತೆಂದರೆ, ರಜಿಯಾ ಕುದುರೆಯ ಮೇಲೆ ಏರುತ್ತಿದ್ದಾಗ ಅವನು ಆಕೆಯ ಸೊಂಟಕ್ಕೆ ಕೈ ಹಾಕಿ ಅವಳನ್ನು ಕುದುರೆಯ ಬೆನ್ನೇರಿಸುತ್ತಿದ್ದ. ಯಾಕೂತ್ ಹಬಶಿಯ ಇಂತಹ ಅಪಾರ ಅಧಿಕಾರ ವ್ಯಾಪ್ತಿಯನ್ನು ಸಹಿಸದ ದರಬಾರಿನ ಎಲ್ಲಾ ಸರದಾರರು ಮತ್ತು ನಾಯಕರು ಅವನ ಶತ್ರುಗಳಾಗಿ ಪರಿಣಮಿಸಿದರು ಮತ್ತು ರಜಿಯಾ ಸುಲ್ತಾನಾಳ ಅದೃಷ್ಟ ತಾರೆಯು ಅಂಧಕಾರದಲ್ಲಿ ಮುಳುಗಿತು.

ರಜಿಯಾಳ ಅಧಃಪತನ ಮತ್ತು ಸೆರೆ:

ಲಾಹೋರ್‌ನ ರಾಜಪಾಲನಾದ ಮುಲಿಕ್ ಐಜುದ್ದೀನನು ಹಿಜರಿ ಶಕೆ ೬೩೭ರಲ್ಲಿ ಬಂಡಾಯದ ಬಾವುಟವನ್ನು ಹಾರಿಸಿದ. ಐಜುದ್ದೀನ್‌ನ ಬಂಡಾಯವನ್ನು ನಿಗ್ರಹಿಸುವ ಸಲುವಾಗಿ ರಜಿಯಾ ಸುಲ್ತಾನ ಅವನ ಮೇಲೆ ಯುದ್ಧವನ್ನು ಮಾಡಿದಳು. ಐಜುದ್ದೀನ್‌ನು ರಜಿಯಾಳ ಮೇಲೆ ಯುದ್ಧ ಮಾಡುವುದು ಸೂಕ್ತವಲ್ಲವೆಂದು ನಿರ್ಧರಿಸಿದ ಮತ್ತು ಅವಳ ಪ್ರಭುತ್ವವನ್ನು ಅಂಗೀಕರಿಸಿ ಮೌನವಾದ. ತನ್ನ ಅಧೀನತೆಯನ್ನು ಅಂಗೀಕರಿಸಿದ ಐಜುದ್ದೀನನ ನಡವಳಿಕೆಯು ರಜಿಯಾಗೆ ಬಹಳ ಆಪ್ತವಾಯಿತು ಮತ್ತು ಆಕೆಯು ಸಂತುಷ್ಟಳಾಗಿ ಲಾಹೋರ್‌ನ ಆಡಳಿತದೊಂದಿಗೆ ಮುಲ್ತಾನ್‌ನ ಆಡಳಿತವನ್ನು ಕೂಡ ಐಜುದ್ದೀನ್‌ಗೆ ವಹಿಸಿಕೊಟ್ಟಳು. ಆ ವರ್ಷದಲ್ಲಿ "ತರ್‌ಕಾನೆ ಚೆಹಲ್ ಗಾನಿ" ಗುಂಪಿನ ಸದಸ್ಯನಾದ ಭಟಿಂಡದ ರಾಜನಾದ ಮುಲ್ಕುಲ್ ತೋನಿಯನು ಯಾಕೂತ್ ಹಬಷಿಯ ಪ್ರಭಾವ ಮತ್ತು ಅಧಿಕಾರದಿಂದ ವ್ಯಸ್ತನಾಗಿ ರಜಿಯಾಳ ವಿರುದ್ಧ ಬಂಡಾಯವೆದ್ದ (ತರ್‌ಕಾನೆ ಚೆಹಲ್ ಗಾನಿ ಅಂದರೆ, ಪ್ರಭಾವೀ ಹುದ್ದೆಗಳಲ್ಲಿ ನೇಮಕವಾಗಿದ್ದ ಅಲ್ತಮಷ್‌ನ ನಲವತ್ತು ಮಂದಿ ಗುಲಾಮರು. ಮುಂದುವರೆದಂತೆ ಫರಿಶ್ತಾನು ಅವರ ಬಗ್ಗೆ ವಿವರವಾಗಿ ದಾಖಲಿಸಿದ್ದಾನೆ) ಇದಕ್ಕೆ ಉತ್ತರ ರೂಪವಾಗಿ ರಜಿಯಾ ತನ್ನ ಸೈನ್ಯವನ್ನು ಸಿದ್ಧಗೊಳಿಸಿ ಭಟಿಂಡಾದ ಮೇಲೆ ಯುದ್ಧವನ್ನು ಸಾರಿದಳು.

ಆಕೆಯ ಸೈನ್ಯವು ಇನ್ನೂ ಮಾರ್ಗ ಮಧ್ಯೆದಲ್ಲಿರುವಾಗಲೆ ತುರ್ಕಿಯ ಸರದಾರರು ಅದರ ಮೇಲೆ ಆಕ್ರಮಣ ಮಾಡಿದರು. (ಈ ಯುದ್ಧದಲ್ಲಿ ತುರ್ಕಿಗಳಿಗೆ ಜಯವಾಯಿತು) ಯಾಕೂತ್ ಹಬಷಿಯನ್ನು ಕೊಲೆಮಾಡಲಾಯಿತು. ಮತ್ತು ರಜಿಯಾ ಸುಲ್ತಾನಾಳನ್ನು ಸೆರೆಹಿಡಿದು ಭಟಿಂಡದ ಕೋಟೆಯಲ್ಲಿ ಬಂಧನದಲ್ಲಿಡಲಾಯಿತು.

ರಜಿಯಾ ಮತ್ತು ಮಲಿಕ್‌ಅಲ್ ತೌನಿಯಾ ವಿವಾಹ:

ಆ ವಿದ್ರೋಹಿ ಸರದಾರರು ದೆಹಲಿಯ ಇತರೆ ನಾಯಕರೊಡನೆ ಸಮಾಲೋಚನೆ ನಡೆಸಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಲ್ತಮಷ್‌ನ ಪುತ್ರನಾದ ಮಲಅಜುದ್ದೀನ್ ಬೆಹ್ರಾಮ್ ಶಾಹ್‌ನ ಪಟ್ಟಾಭಿಷೇಕವನ್ನು ನಡೆಸಿದರು. ಈ ನಡುವೆ ರಜಿಯಾ ಸುಲ್ತಾನಾ ಮತ್ತು ಭಟಿಂಡಾದ ರಾಜನಾದ ಮುಲ್ಕ್ ಉಲ್ ತೌನಿಯಾ ಇಬ್ಬರೂ ಪರಸ್ಪರ ವಿವಾಹವಾದರು. ಹಾಗೂ ಅವರಿಬ್ಬರೂ ಕೂಡಿ ಪರಸ್ಪರ ಸಲಹೆ ಸೂಚನೆಗಳ ಮೂಲಕ ಒಮ್ಮತಕ್ಕೆ ಬಂದು ಖಕ್ಕರ್‌ಗಳು, ಜಾಟ್‌ಗಳು ಮತ್ತು ಅಕ್ಕಪಕ್ಕದ ಜಮೀನ್ದಾರರುಗಳ ಹೋರಾಟದ ಬುಡಕಟ್ಟು ಜನಾಂಗದವರನ್ನು ತಮ್ಮ ಜೊತೆ ಸೇರಿಸಿಕೊಂಡು ಒಂದು ಬಲಾಢ್ಯ ಸೈನ್ಯವನ್ನು ಕಟ್ಟಿದರು. ಮತ್ತು ದೆಹಲಿಯ ಮೇಲೆ ಯುದ್ಧವನ್ನು ಸಾರಿದರು. ಮಲಅಜುದ್ದೀನ್ ಬೆಹ್ರಾಮ್ ಶಾಹ್‌ನು ಐಜುದ್ದೀನ್ ಬಲ್ಬನ್‌ನ ನೇತೃತ್ವದಲ್ಲಿ ತನ್ನ ಸೈನ್ಯವನ್ನು ಕೂಡ ಯುದ್ಧಕ್ಕೆ ರವಾನೆ ಮಾಡಿದ. (ಐಜುದ್ದೀನ್ ಬಲ್ಬನ್ನನು ಅಲ್ತಮಷ್‌ನ ಅಳಿಯನಾಗಿದ್ದ ಮತ್ತು ನಂತರ ಅಲಘ್‌ಖಾನ್ ಎಂಬ ಹೆಸರಿನಿಂದ ಖ್ಯಾತಿ ಹೊಂದಿದ) ಮಾರ್ಗ ಮಧ್ಯದಲ್ಲಿಯೇ ಉಭಯ ಸೈನ್ಯಗಳು ಎದುರುಬದುರಾದವು. (ಅವರಿಬ್ಬರ ನಡುವೆ ನಡೆದ ಘೋರ ಯುದ್ಧದ ಪರಿಣಾಮವಾಗಿ) ರಜಿಯ ಸುಲ್ತಾನಾಳಿಗೆ ಅಪಜಯ ಉಂಟಾಯಿತು ಮತ್ತು ಆಕೆ ಯುದ್ಧರಂಗದಿಂದ ಪಲಾಯನ ಗೈದು ಭಟಿಂಡದಲ್ಲಿ ರಕ್ಷಣೆಯನ್ನು ಪಡೆದಳು.

ರಜಿಯಾಳ ಕೊಲೆ:

ಈ ಅಪಜಯದಿಂದ ರಜಿಯಾ ನಿರಾಶಳಾಗಲಿಲ್ಲ. ಅವಳ ಅಧಿಕಾರ ಕೇಂದ್ರಿತ ಮನಸ್ಸು ಮತ್ತು ಅತೃಪ್ತ ಭಾವನೆಯು ಅವಳನ್ನು ನೆಮ್ಮದಿಯಿಂದ ಕೂರಲು ಅವಕಾಶ ನೀಡಲಿಲ್ಲ. ಆಕೆ ಚೆದುರಿದ ತನ್ನ ಸೈನ್ಯವನ್ನು ಮತ್ತೆ ಹೊಸದಾಗಿ ಕಟ್ಟಿ ಮತ್ತೊಮ್ಮೆ ದೆಹಲಿಯ ಮೇಲೆ ಯುದ್ಧ ಸಾರಿದಳು. ಈ ಬಾರಿಯೂ ಕೂಡ ಬೆಹ್ರಾಮ್ ಶಾಹ್‌ನು ಐಜುದ್ದೀನ್‌ನನ್ನು ರಜಿಯಾಳ ವಿರುದ್ದ ಯುದ್ಧಕ್ಕೆ ಕಳಿಸಿದ. ಹಿಜರಿ ಶಕೆ ೬೩೮ರಲ್ಲಿ ರಬೀಯುಲ್ ಅವ್ವಲ್ ತಿಂಗಳ ೪ ನೇ ತಾರೀಖಿನಂದು ಖೇಥಲ್‌ನ ಸಮೀಪದಲ್ಲಿ ಉಭಯ ಸೈನ್ಯಗಳ ನಡುವೆ ಯುದ್ಧವಾಯಿತು ಈ ಬಾರಿಯೂ ಕೂಡ ರಜಿಯಾಗೆ ಅಪಜಯವುಂಟಾಯಿತು. ಮತ್ತು ಐಜುದ್ದೀನ್ ವಿಜಯಿಯಾದ. ರಜಿಯಾ ಮತ್ತು ಮಲಿಕ್ ಅಲ್‌ತೌನಿಯಾ ಯುದ್ಧ ರಂಗದಿಂದ ಪಲಾಯನ ಮಾಡಿದರು. ಆದರೆ

ಕೆಲವು ಜಮೀನ್ದಾರರುಗಳು ಆ ಪತಿ ಪತ್ನಿಯರನ್ನು ಬಂಧಿಸಿದರು. ಅವರಿಬ್ಬರನ್ನು ಅದೇ ಜಮೀನ್ದಾರರುಗಳು ಕೊಲೆ ಮಾಡಿದರು ಇಲ್ಲವೇ ಅವರನ್ನು ಬಂಧಿಸಿ ಮಲಅಜುದ್ದೀನ್ ಬೆಹ್ರಾಮ್ ಶಾಹನ ಸಮ್ಮುಖದಲ್ಲಿ ತರಲಾಯಿತು ಮತ್ತು ಅವನ ಆಜ್ಞೆಯ ಮೇರೆಗೆ ಅವರಿಬ್ಬರ ಕೊಲೆಯಾಯಿತು.

ರಜಿಯಾ ಸುಲ್ತಾನಾಳು ೩ ವರ್ಷ ೬ ದಿನಗಳವರೆಗೆ ಆಡಳಿತವನ್ನು ನಡೆಸಿದಳು. ರಜಿಯಾಳ ಅವನತಿಯ ಕಾರಣಗಳತ್ತ ಹೆಚ್ಚು ಗಮನವನ್ನು ಕೊಡಬೇಕಾಗಿಲ್ಲ. ಆದರೆ ವಿಚಾರಶಕ್ತಿ ಇರುವ ವ್ಯಕ್ತಿಯು ಸುಲಭವಾಗಿ ಕಾರಣವನ್ನು ಪತ್ತೆ ಮಾಡಬಹುದಾಗಿದೆ. ಒಂದಿಷ್ಟು ಗಮನ ಹರಿಸಿದಲ್ಲಿ ಯಾಕೂತ್ ಹಬಷಿಯ ಮೇರೆ ಮೀರಿದ ಅಧಿಕಾರವೇ ರಜಿಯಾಳ ಅವನತಿಯ ಮುಖ್ಯ ಕಾರಣವೆಂದು ತಿಳಿದು ಬರುತ್ತದೆ. ಹಾಗೂ ಒಬ್ಬ ಹಬಷಿಯು (ನೀಗ್ರೋ) ದೆಹಲಿಯ ಸರದಾರನಾಗಲು ಯವ ಹಕ್ಕನ್ನು ಹೊಂದಿದ್ದಾನೆ? ಹಿಂದೂಸ್ಥಾನದ ಅತ್ಯಂತ ಅಮೋಘ ವ್ಯಕ್ತಿತ್ವದೊಡನೆ ಒಬ್ಬ ಕೀಳು ವ್ಯಕ್ತಿಯು ಸಂಬಂಧ ಹೊಂದಿದ್ದ ಎಂದರೆ ಅದರ ಅರ್ಥವೇನು ರಜಿಯಾ ಸುಲ್ತಾನ ಹಿಜರಿ ಶಕೆ ೬೩೭ರಲ್ಲಿ ರಬಿ ಉಲ್ ಅವಲ್ ತಿಂಗಳ ೨೫ ನೇ ತಾರೀಖಿನಂದು ಕೊಲೆಯಾದಳು.

ಮಲಅಜುದ್ದೀನ್ ಬೆಹ್ರಾಮ್ ಶಾಹ

ಅಲಪ್ತಗೀನ್‌ನ ಅಧಿಕಾರ:

ರಜಿಯಾ ಸುಲ್ತಾನಾಳನ್ನು ಭಟಿಂಡದ ಕೋಟೆಯಲ್ಲಿ ಗೃಹ ಬಂಧನದಲ್ಲಿ ಇರಿಸಿದ ನಂತರ ೬೩೭ ನೇ ಇಸವಿಯ ರಂಜಾನ್ ತಿಂಗಳ ೨೮ನೇ ದಿನಾಂಕ ಮಂಗಳವಾರದಂದು ಮಲಅಜುದ್ದೀನ್ ಬೆಹ್ರಾಮ್ ಶಾಹ್‌ನ ಪಟ್ಟಾಭಿಷೇಕವಾಯಿತು. ಮತ್ತು ಅವನು ಮೇಲೆ ವಿವರಿಸಿರುವಂತೆ ಅದಷ್ಟು ಬೇಗ ರಜಿಯಾ ಸುಲ್ತಾನಾಳ ಅಂತ್ಯವನ್ನು ಕರುಣಿಸಿದ ಮಲಅಜುದ್ದೀನ್ ರಾಜ್ಯಾಡಳಿತವನ್ನು ತನ್ನ ವಶಕ್ಕೆ ಪಡೆದುಕೊಂಡ ಕೂಡಲೇ ಮುಲ್ಕ್ ಇಖ್ತಿಯಾರುದ್ದೀನ್ ಅಲಪ್ತಗೀನ್‌ಗೆ ಸುಸಂಧಿ ದೊರಕಿತು ಮತ್ತು ಎಲ್ಲಾ ಅಧಿಕಾರವು ಅವನ ಹಸ್ತ ಕೇಂದ್ರೀಕೃತವಾಯಿತು. ಅಲಪ್ತಗೀನ್ ಮತ್ತು ನಿಜಾಮುಲ್ ಮುಲ್ಕ್‌ನ ಕೈಯಲ್ಲಿ ನಿಜವಾದ ಅಧಿಕಾರ ದಂಡವಿತ್ತು. ಅವರು ಮನಸೋ ಇಚ್ಛೆ ತಮ್ಮ ಅಧಿಕಾರವನ್ನು ಬಳುಸುತ್ತಿದ್ದರು. ಅವರಿಬ್ಬರ ಎದುರಿಗೆ ಮಲಅಜುದ್ದೀನನ ಅಸ್ತಿತ್ವವು ಚದುರಂಗದ ರಾಜನಂತೆ ಇತ್ತು. ಅಲಪ್ತಗೀನನು ತಾನು ದಕ್ಕಿಸಿಕೊಂಡಿದ್ದ ತಾತ್ಕಾಲಿಕ ಅಧಿಕಾರವನ್ನು ಬಳಸಿ ರಾಜನ ವಂಶದೊಂದಿಗೂ ಸಂಬಂಧವನ್ನು ಬೆಳೆಸಿದ. ಮತ್ತು ಈ ಮೊದಲಿಗೆ ಖಾಜಿ ಇಖ್ತಿಯಾರುದ್ದೀನನ ಪತ್ನಿಯಾಗಿದ್ದ ಮಲಅಜುದ್ದೀನನ ಸಹೋದರಿಯನ್ನು ವಿವಾಹವಾದ. ಅವನ ದರ್ಪ ಮತ್ತು ಠೀವಿಗೆ ಯಾವುದೇ ಕೊರತೆ ಇರಲಿಲ್ಲ. ಅವನ ಮನೆಯು ರಾಜನ ದರ್ಬಾರಿನಂತೆ ಕಂಗೊಳಿಸುತ್ತಿತ್ತು. ಮತ್ತು ಅವನ ಹೊಸ್ತಿಲಿನ ಮುಂದೆ ಕೂಡ ಬಾದಶಹನ ಅರಮನೆ

ಬಾಗಿಲಿನಲ್ಲಿ ಇದ್ದಂತೆ ಆನೆಯು ವಾಲಾಡುತ್ತಿತ್ತು. ಅಲಪ್ತಗೀನನ ಈ ಅಧಿಕಾರದ ವೈಭೋಗವನ್ನು ಕಂಡು ಮಲಅಜುದ್ದೀನ್‌ನ ಮನಸ್ಸಿನಲ್ಲಿಯೂ ಭಯದ ಬೀಜದ ಅಂಕುರವಾಯಿತು.

ಅಲಪ್ತಗೀನ್‌ನ ಅಂತ್ಯ:

ಅಲಪ್ತಗೀನ್‌ನ ಕೊನೆಯಿರದ ಅಧಿಕಾರದಿಂದ ಭಯಭೀತನಾದ ಮಲಅಜುದ್ದೀನ್‌ನು ಅಲಪ್ತಗೀನ್‌ನಿಂದ ಮುಕ್ತಿ ಹೊಂದುವ ದೃಢ ನಿಶ್ಚಯವನ್ನು ಮಾಡಿದ. ಈ ವಿಷಯದಲ್ಲಿ ಮಲಅಜುದ್ದೀನ್‌ನು ತನ್ನ ಇಬ್ಬರು ತುರ್ಕಿ ಹಿತೈಷಿಗಳ ನೆರವನ್ನು ಪಡೆದುಕೊಂಡ. ಮತ್ತು ಅವರಿಬ್ಬರೂ ಕೂಡ ಹುಚ್ಚರಂತೆ ನಟಿಸುತ್ತಾ ಅಲಪ್ತಗೀನ್ ಮತ್ತು ನಿಜಾಮುಲ್ ಮುಲ್ಕ್ ಮೇಲೆ ಹಲ್ಲೆ ನಡೆಸಿ ಅವರ ಕೊಲೆಮಾಡಬೇಕೆಂದು ಸೂಚನೆಯನ್ನು ನೀಡಿದ್ದ. ೬೩೮ ನೇ ಇಸವಿಯ ಮೊಹರ್ರಮುಲ್ ಹರಾಮ್ ತಿಂಗಳ ೮ ನೇ ತಾರೀಖು ಸೋಮವಾರದಂದು ಬಾದಶಹನ ಅರಮನೆಯಲ್ಲಿ ಮಲಅಜುದ್ದೀನ್‌ನು ದರ್ಬಾರ್‌ನ್ನು ಕರೆದಿದ್ದನು. ಮಲಅಜುದ್ದೀನ್‌ನ ಮಾರ್ಗದರ್ಶನದ ಮೇರೆಗೆ ಆ ಇಬ್ಬರು ತುರ್ಕಿ ಸಿಪಾಯಿಗಳು ತಮ್ಮದೇ ಆದ ಲೋಕದಲ್ಲಿ ವಿಹರಿಸುತ್ತಾ ದರ್ಬಾರಿನಲ್ಲಿ ಪ್ರವೇಶಿಸಿದರು ಮತ್ತು ಹುಚ್ಚರಂತೆ ನಟಿಸಲಾರಂಭಿಸಿದರು. ಆ ಹೊತ್ತಿನಲ್ಲಿ ಅಲಪ್ತಗೀನ್ ಸರದಾರರ ಸಾಲಿನಲ್ಲಿ ನಿಂತಿದ್ದ ಅವನು ಆ ಸಿಪಾಯಿಗಳ ಅಸಭ್ಯ ನಡವಳಿಕೆಯ ಬಗ್ಗೆ ಗದರಿಸಿದ. ಆ ಸ್ವಯಂಕೃತ ನಟನೆಯ ಹುಚ್ಚರು ಆ ಗದರಿಕೆಯ ದುರ್ಲಾಭವನ್ನು ಪಡೆದುಕೊಳ್ಳುತ್ತಾ ಅಲಪ್ತಗೀನ್ ಮೇಲೆ ಚಾಕುವಿನಿಂದ ತೀವ್ರವಾಗಿ ಹಲ್ಲೆ ನಡೆಸಿದುದರ ಪರಿಣಾಮವಾಗಿ ಅವನು ಕುಸಿದು ಬಿದ್ದ ಮತ್ತು ನರಳಾಡತೊಡಗಿದ ಅಲಪ್ತಗೀನ್‌ನನ್ನು ನಿರ್ದಯವಾಗಿ ಕೊಂದ ನಂತರ ಆ "ಹುಚ್ಚರು" ನಿಜಾಮುಲ್ ಮುಲ್ಕ್‌ನ ಕಡೆ ಮುಂದುವರೆದರು. ಮತ್ತು ಅವನ ಮೇಲೆ ಕೂಡ ಭೀಕರವಾಗಿ ಆಕ್ರಮಣವನ್ನು ಮಾಡಿದರು. ನಿಜಾಮುಲ್ ಮುಲ್ಕ್‌ನ ಭುಜದ ಮೇಲೆ ಕತ್ತಿಯಿಂದ ಆಳವಾದ ಎರಡು ಗಾಯಗಳಾದವು. ಇದನ್ನು ನೋಡಿದ ಎಲ್ಲಾ ಸರದಾರರು ತಮ್ಮ ಸ್ಥಾನದಿಂದ ಎದ್ದು ನಿಜಾಮುಲ್ ಮುಲ್ಕ್‌ನ ಕಡೆ ಓಡಿದರು. ಮತ್ತು "ಆ ಹುಚ್ಚರಿಂದ" ಅವರನ್ನು ಪಾರು ಮಾಡಿದರು. ಮಲಅಜುದ್ದೀನ್‌ನು ಈ ಸಂಪೂರ್ಣ ಗಲಭೆಗೂ ತನಗೂ ಯಾವುದೇ ಸಂಬಂಧವಿಲ್ಲವೆಂದು ಸಾಬೀತು ಮಾಡಲು ಆ ಸರದಾರರನ್ನು ಅಕ್ಕಪಕ್ಕ ತಳ್ಳಿ ಆ "ಹುಚ್ಚರನ್ನು" ಬಂಧಿಸಿ ಸೆರೆಮನೆಗೆ ತಳ್ಳಿದ. (ಮೇಲೆ ಈಗಾಗಲೇ ಹೇಳಿರುವಂತೆ) ಈ ಎಲ್ಲಾ ಆಟವು ಬಾದಶಹನ ಸಮ್ಮತಿಯ ಮೇರೆಗೆ ನಡೆದುದ್ದರಿಂದ ಕೆಲವು ದಿನಗಳ ನಂತರ ಆ ಇಬ್ಬರು ತುರ್ಕಿ ಸಿಪಾಯಿಗಳನ್ನು ಬಂಧನದಿಂದ ಬಿಡುಗಡೆ ಮಾಡಲಾಯಿತು.

ಸರದಾರರ ಸಂಚು:

ಗಾಯಗಳ ದೆಸೆಯಿಂದ ನಿಜಾಮುಲ್ ಮುಲ್ಕ್‌ನು ಕೆಲ ದಿನಗಳವರೆಗೆ ಚಿಕಿತ್ಸೆಗೆ

ಒಳಪಟ್ಟ ಆರೋಗ್ಯ ಮರುಕಳಿಸಿದ ಕೂಡಲೇ ಎಂದಿನಂತೆ ದರ್ಬಾರಿನಲ್ಲಿ ಹಾಜರಾಗಿ ಮಂತ್ರಿಯ ಕರ್ತವ್ಯಗಳನ್ನು ನಿರ್ವಹಿಸತೊಡಗಿದ. ಅ ಹೊತ್ತಿಗಾಗಲೇ ಮುಖ್ಯ ಸಚಿವನ ಸ್ಥಾನಕ್ಕೆ ಬದ್ರುದ್ದೀನ್ ಸಂಖರ್ ರೂಮಿ ಎಂಬುವವನ ನೇಮಕವಾಗಿತ್ತು. ಆತನು ಅಧಿಕಾರದ ಓಟದಲ್ಲಿ ನಿಜಾಮುಲ್ ಮುಲ್ಕ್‌ನಿಂದ ವೇಗವಾಗಿ ಅಧಿಕಾರ ಪಡೆದುಕೊಳ್ಳುವ ತರಾತುರಿಯ ಪ್ರಯತ್ನದಲ್ಲಿದ್ದ. ಕೆಲವು ದಿನಗಳ ನಂತರ ಅವನು ಬದ್ರುದ್ದೀನ್ ಮುಫ್‌ಸಿರೂನ್ ಮತ್ತು ಇತರೆ ಸಂಚು ಕೋರರ ಚಿತಾವಣೆಯ ಮೇರೆಗೆ ಬಾದಶಹನಿಗೆ ವಿರೋಧಿಯಾಗಿ ಮಾರ್ಪಟ್ಟ. ಸಫರ್ ತಿಂಗಳ ೧೮ ನೇ ತಾರೀಖು ಸೋಮವಾರದಂದು ಪ್ರಧಾನ ಖಜಾಂಚಿಯಾಗಿದ್ದ ಬದ್ರುದ್ದೀನ್ ಸದರುಲ್ ಮುಲ್ಕ್ ತಾಜ್‌ನ ಮನೆಗೆ ಹೋದ ಮತ್ತು ಅಲ್ಲಿ ಎಲ್ಲಾ ಸರದಾರರು ನಾಯಕರು ಮತ್ತು ರಾಜ್ಯದ ಅಧಿಕಾರಿಗಳನ್ನು ಸೇರಿಸಿ ಅವರೊಡನೆ ಮಅಜುದ್ದೀನ್ ಬೆಹ್ರಾಮ್ ಶಾಹ್‌ನ ಪದಚ್ಯುತಿಯ ಬಗ್ಗೆ ಸಮಾಲೋಚನೆಯನ್ನು ನಡೆಸಿದ. ಸದರುಲ್ ಮುಲ್ಕ್‌ನು (ದ್ವಂದ್ವ ಪೂರಕವಾಗಿ ನಡೆದುಕೊಂಡ) ಒಂದೆಡೆ ನಿಜಾಮುಲ್ ಮುಲ್ಕ್‌ನ್ನು ಈ ಸಮಾಲೋಚನಾ ಸಭೆಯಲ್ಲಿ ಭಾಗವಹಿಸುವಂತೆ ಆಮಂತ್ರಣವನ್ನು ನೀಡಿದ ಮತ್ತು ಇನ್ನೊಂದೆಡೆ ತನ್ನ ಒಬ್ಬ ಖಾಸಾ ಸಿಬ್ಬಂದಿಯೊಬ್ಬನನ್ನು ಮಅಜುದ್ದೀನ್ ಬಳಿ ಕಳಿಸಿ ಅವನಿಗೆ ಸಕಲ ಮಾಹಿತಿಯನ್ನು ನೀಡಿದ. ಸದರುಲ್ ಮುಲ್ಕ್ ಕಳುಹಿಸಿದ್ದ ವ್ಯಕ್ತಿಯು ತನ್ನೊಡನೆ ಬಾದಶಹನ ಒಬ್ಬ ಖಾಸಾ ಮತ್ತು ನಂಬಿಕೆಯ ವ್ಯಕ್ತಿಯನ್ನು ತನ್ನೊಡನೆ ಕರೆ ತಂದ. ಆ ವ್ಯಕ್ತಿಯು ಅಲ್ಲಿನ ಸಕಲ ಮಾಹಿತಿಯನ್ನು ಬಾದಶಹನಿಗೆ ವರದಿ ಮಾಡುವ ಸಲುವಾಗಿ ಒಬ್ಬ ಅಪರಿಚಿತನಂತೆ ಆ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ. ಆ ವ್ಯಕ್ತಿಯನ್ನು ಸದರುಲ್ ಮುಲ್ಕ್ ಒಂದು ಮೂಲೆಯಲ್ಲಿ ನಿಲ್ಲಿಸಿದ ಮತ್ತು ಸ್ವತಃ ನಿಜಾಮುಲ್ ಮುಲ್ಕ್‌ನೊಡನೆ ಮಾತನಾಡ ತೊಡಗಿದ. ಖಾಜಿ ಜಲಾಲುದ್ದೀನ್ ಕಾಶಾನಿ, ಖಾಜಿ ಶಮ್‌ಸುದ್ದೀನ್ ಮತ್ತು ಶೇಕ್ ಮೊಹಮ್ಮದ್ ಸಾವುಜಿ ವಗೈರೆ ಗೌರವಾನ್ವಿತ ಸರದಾರರ ಸಲಹೆಯ ಮೇರೆಗೆ ತಾಜುದ್ದೀನನ ಸಭೆಯ ಆರಂಭವನ್ನು ಮಾಡಿದ. ನಿಜಾಮುಲ್ ಮುಲ್ಕ್ ಅತೀವ ಎಚ್ಚರಿಕೆಯಿಂದ ವರ್ತಿಸಿದ ಮತ್ತು ಪ್ರತಿ ಮಾತಿಗೂ "ಹಾಂ ಹೂಂ" ಎಂದು ನುಡಿದು ಸಲಹೆಗಳ ಬಗ್ಗೆ ತನ್ನ ಅನಿಸಿಕೆಯನ್ನು ಇನ್ನೊಂದು ಸಾರಿ ಹೇಳುವುದಾಗಿ ನಿರ್ಲಿಪ್ತನಾಗಿ ಮುಂದೂಡಿದ. ಸದರ್‌ಮುಲ್ಕ್‌ನು ಹೀಗೆ ಎಲ್ಲಾ ವಿವರಗಳನ್ನು ಕೂಡ ಮಅಜುದ್ದೀನ್‌ಗೆ ತಿಳಿಸಿದ. ಮಅಜುದ್ದೀನ್‌ನು ತತ್‌ಕ್ಷಣವೇ ಆ ಸಮಾಲೋಚನಾ ಸಭೆಗೆ ನುಗ್ಗಿದ ಮತ್ತು ಆ ಕುತಂತ್ರಿಗಳ ಸಭೆಯನ್ನು ಬರಖಾಸ್ತುಗೊಳಿಸಿದ.

ಸರದಾರರ ಮೇಲೆ ಕ್ರೋಧ:

ಮುಲ್ಕ್ ಬದ್ರುದ್ದೀನ್‌ನು ರಾಜಧಾನಿ ದೆಹಲಿಯಲ್ಲಿರುವುದು ಸೂಕ್ತವಲ್ಲವೆಂದು ಭಾವಿಸಿದ ಮಅಜುದ್ದೀನ್ ಬೆಹ್ರಾಮ್ ಶಾಹ್‌ನು ಅವನನ್ನು ಬದಾಯೂನ್‌ನ

ಜಹಗೀರುದಾರನನ್ನಾಗಿ ನಿಯುಕ್ತಿಗೊಳಿಸಿ ದೆಹಲಿಯಿಂದ ರವಾನೆ ಮಾಡಿದ. ಖಾಜಿ ಜಲಾಲುದ್ದೀನ್ ಕಾಶಾನಿಯನ್ನು ಖಜಾನೆಯ ಹುದ್ದೆಯಿಂದ ಪದಚ್ಯುತಿಗೊಳಿಸಿದ. ಕೆಲವು ತಿಂಗಳ ನಂತರ ಬದ್ರುದ್ದೀನ್‌ನು ಬದಾಯೂನ್‌ನಿಂದ ಮರಳಿದ ನಂತರ ಮಅಜುದ್ದೀನ್‌ನು ಅವನನ್ನು ಮತ್ತು ತಾಜುದ್ದೀನ್ ಮೂಸಾನನ್ನು ಕೊಲೆ ಮಾಡಿದ. ಖಾಜಿ ಜಲಾಲುದ್ದೀನ್ ಕಾಶಾನಿ ಮತ್ತು ಖಾಜಿ ಮಾರೆಹುನನ್ನು ಆನೆಯ ಕಾಲಿನಿಂದ ತುಳಿಸಿ ಸಾಯಿಸಿದ. ಈ ಕ್ರೌರ್ಯದ ಕ್ರಮದಿಂದ ಜನ ಸಾಮಾನ್ಯರಲ್ಲಿ ಜಿಗುಪ್ಸೆಯುಂಟಾಯಿತು ಮತ್ತು ಇಡೀ ಸೈನ್ಯವು ಬಾದಶಹನನಿಂದ ವಿಮುಖವಾಯಿತು. ನಿಜಾಮುದ್ದೀನ್ ಮುಲ್ಕ್‌ನಂತೂ ಮೊದಲಿನಿಂದಲೂ ಮಅಜುದ್ದೀನ್‌ನೊಂದಿಗೆ ತೀವ್ರ ವಿರಸದಿಂದ ಕೂಡಿದ್ದ. ಈ ಸದವಕಾಶವನ್ನು ಬಳಸಿಕೊಂಡು ಅವನು ಜನತೆಯನ್ನು ಬಾದಶಹನ ವಿರುದ್ಧ ಎತ್ತಿ ಕಟ್ಟಿದ. ಈ ಗೊಂದಲದ ಗೂಡಿನ ಪರಿಣಾಮವಾಗಿ ಇಡೀ ದೇಶವು ಬಾದಶಹನನ್ನು ದ್ವೇಷಿಸುತ್ತಾ ಅವನ ರಕ್ತ ಹೀರಲು ಸಿದ್ಧವಾಯಿತು.

ಲಾಹೋರ್‌ನ ಮೇಲೆ ಚೆಂಗೇಸ್ ಮೊಘಲರ ಆಕ್ರಮಣ:

ಈ ಅವಧಿಯಲ್ಲಿ ಹಿಜರಿ ಶಕೆ ೬೩೯ರಲ್ಲಿ ಜಮಾದಿಯುಲ್ ಆಖರ್‌ನ ೧೮ ನೇ ತಾರೀಖಿನಂದು ಚೆಂಗೇಸ್ ಖಾನ್ ಮೊಘಲರ ಆಕ್ರಮಣ ಮಾಡಿ ಲಾಹೋರಿಗೆ ಮುತ್ತಿಗೆಯನ್ನು ಹಾಕಿದನು. ಆಗ ಮುಲ್ಕ್ ಖರಾಖಿಷ್ ಲಾಹೋರ್‌ನ ರಾಜನಾಗಿದ್ದ ತನ್ನ ಸೇನೆಯಲ್ಲಿ ಸಾಮರಸ್ಯ ಇಲ್ಲದೆ ಇರುವುದನ್ನು ಕಂಡ ಅವನು ಅರ್ಧ ರಾತ್ರಿಯ ಹೊತ್ತಿನಲ್ಲಿ (ಕಣ್ತಪ್ಪಿಸಿ) ಪಲಾಯನ ಮಾಡುವಂತಹ ಅಯೋಗ್ಯ ಕೃತ್ಯವನ್ನು ಎಸಗಿದ ಮತ್ತು ನೇರವಾಗಿ ದೆಹಲಿಯನ್ನು ತಲುಪಿದ. ಚೆಂಗೇಸೀ ಮೊಘಲರು ಮನಸೋ ಇಚ್ಛೆ ಲಾಹೋರಿನ ಲೂಟಿ ಹೊಡೆದರು ಮತ್ತು ಹಾಳುಗೆಡವಿದರು ಹಾಗೂ ಅನೇಕ ಮಂದಿಯನ್ನು ಸೆರೆ ಹಿಡಿದರು. ಮಅಜುದ್ದೀನ್ ಬೆಹ್ರಾಮ್ ಶಾಹಗೆ ಈ ವಿಷಯ ಮುಟ್ಟಿದಾಗ ಅವನು ತನ್ನ ಅರಮನೆಯಲ್ಲಿ ಎಲ್ಲಾ ಸರದಾರರನ್ನು ಮತ್ತು ನಾಯಕರನ್ನು ಸೇರಿಸಿ ಅವರಿಂದ ವಿಧೇಯತೆಯ ಹೊಸ ಪ್ರಮಾಣವನ್ನು ಪಡೆದ. ಮಅಜುದ್ದೀನ್‌ನು ನಿಜಾಮುಲ್ ಮುಲ್ಕ್ ಮತ್ತು ಖುತ್ಬುದ್ದೀನ್ ಮತ್ತು ರಾಜ್ಯದ ವಕೀಲನಾದ ಹಸನ್ ಘೋರಿಯನ್ನು ಮೊಘಲರನ್ನು ಸದೆ ಬಡೆಯಲು ಕಳಿಸಿಕೊಟ್ಟ. ಅವರಿಬ್ಬರೂ ಸೈನ್ಯದೊಡನೆ ಬಿಯಾ ನದಿಯ ದಡದಲ್ಲಿರುವ ಸುಲ್ತಾನ ಪುರ ಕಸಬಾವನ್ನು ತಲುಪಿದಾಗ ಬಾದಶಾಹನಿಂದ ಮೊದಲೇ ಕ್ರುದ್ಧನಾಗಿದ್ದ ನಿಜಾಮುಲ್ಕ್ ಇನ್ನುಳಿದ ಸರ್ದಾರರನ್ನು ಬಾದಶಹನ ವಿರೋಧಿಗಳನ್ನಾಗಿ ಪರಿವರ್ತನೆ ಮಾಡಲು ಒಂದು ತಂತ್ರವನ್ನು ಹೂಡಿದ ಮತ್ತು ಆ ಸ್ಥಳದಲ್ಲಿ ವಾಸ್ತವ್ಯವನ್ನು ಹೂಡಿ ಬಾದಶಾಹನಿಗೆ ಒಂದು ಪತ್ರವನ್ನು ಕಳಿಸಿದ. ಪತ್ರದ ಸಾರಾಂಶ ಹೀಗಿತ್ತು "ನೀವು ಯಾವ ದುಷ್ಟ ಸರ್ದಾರರನ್ನು ನನ್ನ ಜೊತೆಯಲ್ಲಿ ಕಳಿಸಿದ್ದೀರೋ ಅವರೊಂದಿಗೆ ಕೂಡಿ ಕೆಲಸ ಮಾಡುವುದು ಕಷ್ಟಕರವಾಗಿದೆ. ತಾವು ಖುದ್ದು ಇಲ್ಲಿಗೆ ದಯಾಮಾಡಿಸಿ ಇಲ್ಲವಾದಲ್ಲಿ

ಖುತ್ಬುದ್ದೀನ್‌ನ ಸಲಹೆಯ ಮೇರೆಗೆ ಆ ಸರ್ದಾರರ ಬಗ್ಗೆ ಸಮಯೋಚಿತವಾದ ತೀರ್ಮಾನವನ್ನು ಕೈಗೊಳ್ಳಲು ನನಗೆ ಅಪ್ಪಣೆಯನ್ನು ನೀಡಿ". ಮಅಜುದ್ದೀನ್ ಬೆಹ್ರಾಮ್ ಶಾಹನು ಬಹಳ ಸರಳವಾಗಿ ಉತ್ತರ ನೀಡಿದ "ನಿನ್ನ ಸಂಗಾತಿ ಸರದಾರರು ಮರಣ ದಂಡನೆಯ ಶಿಕ್ಷೆಗೆ ಗುರಿಯಾಗುವಂತಹ ಕೃತ್ಯವನ್ನು ಎಸಗಿದ್ದಾರೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಈ ಹೊತ್ತಿನಲ್ಲಿ ಅವರೊಡನೆ ಸಂಘರ್ಷ ಮಾಡುವುದು ಸೂಕ್ತವಲ್ಲ ನೀನು ಅವರನ್ನು ಸಂತೋಷವಾಗಿಟ್ಟು ನಿನ್ನ ಎದುರಿನ ಕರ್ತವ್ಯವನ್ನು ನಿಭಾಯಿಸು ನಂತರ ಆ ಕಪಟಿ ಸರದಾರರಿಗೆ ಅವರ ಕುಕೃತ್ಯಕ್ಕೆ ಅನುಗುಣವಾಗಿ ಸಜೆಯನ್ನು ನೀಡಲಾಗುವುದು". ನಿಜಾಮುಲ್ ಮುಲ್ಕ್‌ನು ಬಾದಶಹನ ಆ ರಾಜಾಜ್ಞೆಯನ್ನು ಸರದಾರರಿಗೆ ಓದಿ ಹೇಳಿದ.

ಸರದಾರರು ಈ ಸಂದೇಶವನ್ನು ಕೇಳಿದ ಕೂಡಲೇ ಬಾದಶಹನ ವಿರೋಧಿಗಳಾದರು ಹಾಗೂ ನಿಜಾಮುದ್ದೀನ್ ಮುಲ್ಕ್‌ನ ಸಲಹೆಯ ಮೇರೆಗೆ ಮಅಜುದ್ದೀನ್‌ನನ್ನು ಪದಚ್ಯುತಿಗೊಳಿಸಲು ಸಿದ್ಧತೆಯನ್ನು ನಡೆಸತೊಡಗಿದರು. ಬಾದಶಹನಿಗೆ ಈ ಕುತಂತ್ರದ ಸುಳಿವು ಸಿಕ್ಕ ನಂತರ ಅವನು ಹಜರತ್ ಶೇಕುಲ್ ಇಸ್ಲಾಮ್ ಖ್ವಾಜಾ ಖುತ್ಬುದ್ದೀನ್ ಔಶಿಯನ್ನು ಸರದಾರರ ಬಳಿ ಕಳಿಸಿ ಅವರಿಗೆ ಸ್ಪಷ್ಟೀಕರಣವನ್ನು ನೀಡಲು ಮತ್ತು ಸಮಾಧಾನವನ್ನು ಹೇಳಲು ಕಳಿಸಿಕೊಟ್ಟ. ಆದರೆ ಹಜರತ್ ಖುತ್ಬುದ್ದೀನ್ ವಿಫಲರಾಗಿ ದೆಹಲಿಗೆ ಮರಳಿದರು. ಆ ಸರದಾರರು ಕೂಡ ದೆಹಲಿಯತ್ತ ಧಾವಿಸಿದರು ಮತ್ತು ಮಅಜುದ್ದೀನ್ ಬೆಹ್ರಾಮ್ ಶಾಹ್‌ಗೆ ಮುತ್ತಿಗೆ ಹಾಕಿದರು. ಮೂರೂವರೆ ತಿಂಗಳವರೆಗೆ ಬಾದಶಹ ಮತ್ತು ಸರದಾರರ ನಡುವೆ ಯುದ್ಧ ಜಾರಿಯಲ್ಲಿತ್ತು ಆ ನಾಯಕರಂತೆಯೇ ಬಹುತೇಕ ಜನತೆ ಕೂಡ ಬಾದಶಹನ ವಿರೋಧಿ ನೆಲೆಯಲ್ಲಿದ್ದರು. (ಈ ಕಾರಣದಿಂದ) ಅಂತಿಮವಾಗಿ ಸರದಾರರಿಗೆ ಗೆಲುವಾಯಿತು ಮತ್ತು ಹಿಜರಿ ಶಕೆ ೬೩೯ರ ಜೀಖಾದ ತಿಂಗಳ ೮ನೇ ತಾರೀಖಿನಂದು ಮಅಜುದ್ದೀನ್‌ನ ಬಂಧನವಾಯಿತು. ಕೆಲ ಕಾಲದವರೆಗೆ ಅವನು ಗೃಹ ಬಂಧನದಲ್ಲಿದ್ದ ಆದರೆ ನಂತರ ಸರದಾರರು ಅವನನ್ನು ತಮ್ಮ ಉದ್ದೇಶಗಳಿಗೆ ಅವನೊಂದು ತೊಡಕು ಎಂದು ನಿರ್ಧರಿಸಿ ಅವನ ಕೊಲೆ ಮಾಡಿದರು. ಮಅಜುದ್ದೀನ್‌ನ ಆಡಳಿತಾವಧಿಯು ೨ ವರ್ಷ ಒಂದೂವರೆ ತಿಂಗಳ ಕಾಲಾವಧಿಯಿಂದ ಕೂಡಿತ್ತು. (ಬಿಯಾ ಎಂದರೆ ಪೂರ್ವಪಂಜಾಬ್ (ಭಾರತದ) ಸುಪ್ರಸಿದ್ದ ನದಿ ಬಿಯಾಸ್ ಆಗಿದೆ. ಅದರ ಪುರಾತನ ಹೆಸರು "ಬಿಯಾ" ಎಂದಿತ್ತು.)

■

*

ಅಲ್ಲಾವುದ್ದೀನ್ ಮಸೂದ್ ಬಿನ್ ರುಕ್ನುದ್ದೀನ್ ಫೈರೋಜ್ ಶಾಹ

ಐಜುದ್ದೀನ್ ಬಲ್ಬನ್‌ನ ಪಟ್ಟಾಭಿಷೇಕ:

ಮಲಅಜುದ್ದೀನ್ ಬೆಹ್ರಾಮ್ ಶಾಹ್‌ನ ಕೊಲೆಯ ನಂತರ ಹಿರಿಯ ಐಜುದ್ದೀನ್ ಬಲ್ಬನ್ ಸಿಂಹಾಸನದ ಮೇಲೆ ವಿರಾಜಮಾನನಾದ ಮತ್ತು ಇಡೀ ಪಟ್ಟಣದಲ್ಲಿ ತಾನು ಬಾದಶಾಹನಾದುದರ ಬಗ್ಗೆ ಉದ್ಘೋಷಣೆಯನ್ನು ಹೊರಡಿಸಿದ. ಆಸ್ಥಾನಿಕರು ಐಜುದ್ದೀನ್ ಬಲ್ಬನ್‌ನನ್ನು ಇಷ್ಟ ಪಡುತ್ತಿರಲಿಲ್ಲ. ಆದ್ದರಿಂದ ಅವನ ರಾಜ್ಯಾಡಳಿತವನ್ನು ಸ್ವಾಗತಿಸಲಿಲ್ಲ ಆ ಹೊತ್ತಿನಲ್ಲಿ ರಾಜಕುಮಾರ ನಾಸೀರುದ್ದೀನ್, ಜಲಾಲುದ್ದೀನ್ (ಸುಲ್ತಾನ ಶಂಸುದ್ದೀನ್ ಅಲ್ತಮಷ್‌ನ ಪುತ್ರರು) ಮತ್ತು ಅಲ್ಲಾವುದ್ದೀನ್ ಮಸೂದ್ (ಸುಲ್ತಾನರು ರುಕ್ನುದ್ದೀನ್‌ನ ಮಗ) ಸೆರೆಮನೆಯಲ್ಲಿದ್ದರು. ಆ ರಾಜಕುಮಾರರ ಪೈಕಿ ಬಾದಶಹನ ಆಯ್ಕೆ ಮಾಡಬೇಕೆಂದು ತೀರ್ಮಾನವಾಯಿತು. ಅವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. ಆ ಮೂವರು ರಾಜಕುಮಾರರ ಪೈಕಿ ರಾಜಕುಮಾರ ಅಲ್ಲಾವುದ್ದೀನ್ ಮಸೂದ್‌ನನ್ನು ಬಾದಶಹನನ್ನಾಗಿ ಆಯ್ಕೆ ಮಾಡಲಾಯಿತು.

ಅಲ್ಲಾವುದ್ದೀನ ಮಸೂದನ ಪಟ್ಟಾಭಿಷೇಕ:

ಹಿಜರಿ ಶಕೆ ೬೪೪ರ ಜೀಖಾದ ತಿಂಗಳಿನಲ್ಲಿ ಅಲ್ಲಾವುದ್ದೀನನ ಪಟ್ಟಾಭಿಷೇಕ ಮಹೋತ್ಸವವು ನಡೆಯಿತು. ಖುತ್ಬುದ್ದೀನ ಹಸನನನ್ನು ಉಪ ಸುಲ್ತಾನನನ್ನಾಗಿ ನೇಮಕ ಮಾಡಲಾಯಿತು. ನಿಜಾಮುಲ್ ಮುಲ್ಕ್ ಮಂತ್ರಿಯ ಹುದ್ದೆಯನ್ನು ಅಲಂಕರಿಸಿದ ಮತ್ತು ಮಲ್ಲಿಕ್ ಖರಾಬಷ್‌ನನ್ನು ಸಿಬ್ಬಂದಿಯ ಮಂತ್ರಿಯನ್ನಾಗಿ ನಿಯುಕ್ತಿಗೊಳಿಸಲಾಯಿತು. ನಿಜಾಮುಲ್ ಮುಲ್ಕ್ ತನ್ನ ಮನಸೋ ಇಚ್ಛೆ ಆಡಳಿತವನ್ನು ನಿರ್ವಹಣೆ ಮಾಡ ತೊಡಗಿದಾಗ ಉಳಿದ ಸರದಾರರು ಮತ್ತು ನಾಯಕರಿಗೆ ಅವನ ನಿರಂಕುಶತೆಯು ಒಂದಿನಿತೂ ಸಹ್ಯವಾಗಲಿಲ್ಲ ಮತ್ತು ಅವರೆಲ್ಲರೂ ಸೇರಿ ನಿಜಾಮುಲ್ ಮುಲ್ಕ್‌ನನ್ನು ಕೊಲೆ ಮಾಡುವ ನಿರ್ಧಾರವನ್ನು ಕೈಗೊಂಡರು ಹಿಜರಿ ಶಕೆ ೬೪೦ರ

ಜಮಾದಿ ಯುಲ್ ಅವ್ವಲ್ ತಿಂಗಳ ೨ ನೇ ತಾರೀಖು ಬುಧವಾರದಂದು ನಿಜಾಮುಲ್ ಮುಲ್ಕ್‌ನ ಕೊಲೆಯಾಯಿತು ಮತ್ತು ಅವನ ಜಾಗದಲ್ಲಿ ಹೈದರುಲ್ ಮುಲ್ಕ್ ನಜ್ಮುದ್ದೀನ್ ಅಬೂಬಕರ್ ವಿದೇಶಾಂಗ ಸಚಿವನಾಗಿ ನಿಯುಕ್ತಿಗೊಂಡ ಮತ್ತು ಗಯಾಸುದ್ದೀನ್ ಬಲ್ಬನ್ ಸಿಬ್ಬಂದಿ ಸಚಿವನಾಗಿ ನಿಯುಕ್ತಿಗೊಂಡ. ನಾಗೂರ್, ಸಿಂಧ್ ಮತ್ತು ಅಜ್ಮೀರ್‌ನ ಸುಬೇದಾರನಾಗಿ ಹಿರಿಯ ಬಲ್ಬನ್‌ನ ನೇಮಕವಾಯಿತು. ಮುಲ್ಕ್ ತಾಜುದ್ದೀನನಿಗೆ ಬದಾಯೂನಿನ ಸುಬೇದಾರಿಕೆಯನ್ನು ನೀಡಲಾಯಿತು. ಅದೇ ರೀತಿಯಲ್ಲಿ ದೇಶದ ಉತ್ತರ ಭಾಗವನ್ನು ಕೂಡ ಅನೇಕ ಸರದಾರರು ತಮ್ಮಲ್ಲಿ ಹಂಚಿಕೊಂಡರು. ಈ ವಿಭಾಗದ ಉತ್ತಮ ಪರಿಣಾಮ ಕಂಡುಬಂದಿತು. ರಾಜ್ಯದ ಆಡಳಿತ ವ್ಯವಸ್ಥೆಯು ಉತ್ತಮಗೊಂಡಿತು ಮತ್ತು ಜನತೆಯು ಶಾಂತಿ ಸಮಾಧಾನದಿಂದ ಹರ್ಷ ಚಿತ್ತರಾದರು.

ಅಲ್ತಮಷ್‌ನ ಪುತ್ರರ ಬಿಡುಗಡೆ:

ಆ ದಿನಗಳಲ್ಲಿ ಕಟ್ರಾದಿಂದ ಐಜುದ್ದೀನ್ ತಘಾ ಖಾನ್ ಲಖ್ನೋತಿಗೆ ಬಂದ ಮತ್ತು ಅವನು ಶರ್ಖುಲ್ ಮುಲ್ಕ್ ಸಂಖರಿಯನ್ನು ಅಲ್ಲಾವುದ್ದೀನ ಮಸೂದ್‌ನ ಸನ್ನಿಧಿಗೆ ಕಳಿಸಿಕೊಟ್ಟ. ಅವಧ್‌ನ ಆಡಳಿತಗಾರನಾದ ಜಲಾಲುದ್ದೀನ ಕಾಶಾನಿಯ ಶಿಫಾರಸ್ಸಿನ ಮೇಲೆ ಅಲ್ಲಾವುದ್ದೀನ್ ಮಸೂದ್‌ನು ಐಜುದ್ದೀನ್ ತಘಾ ಖಾನ್‌ಗೆ ಛತ್ರ ಚಾಮರಗಳನ್ನು ಮತ್ತು ಖಿಲ್ಲತ್ತನ್ನು ನೀಡಿದ. ಹಾಗೂ ಅವನು ತನ್ನ ಇಬ್ಬರು ಚಿಕ್ಕಪ್ಪಂದಿರಾದ ನಾಸೀರುದ್ದೀನ್ ಮತ್ತು ಜಲಾಲುದ್ದೀನರನ್ನು ಕಾರಾಗೃಹದಿಂದ ಬಿಡುಗಡೆ ಮಾಡಿದ ಮತ್ತು ಅವರನ್ನು ಅತೀವ ಗೌರವಾದರಗಳಿಂದ ಸತ್ಕರಿಸಿದ.

ನಾಸಿರುದ್ದೀನ್‌ನನ್ನು ಬಹರೈಚ್‌ನ ಹಾಗೂ ಜಲಾಲುದ್ದೀನನನ್ನು ಕನೋಜ್‌ನ ಆಡಳಿತಗಾರರನ್ನಾಗಿ ನೇಮಕ ಮಾಡಿದ. ಅಲ್ತಮಷ್‌ನ ಈ ಇಬ್ಬರು ಪುತ್ರರು ತಮ್ಮ ಉತ್ತಮ ನಡವಳಿಕೆ ಮತ್ತು ಹೃದಯವಂತಿಕೆಯಿಂದ ತಮ್ಮ ತಮ್ಮ ದೇಶಗಳಲ್ಲಿ ಜನಪ್ರಿಯತೆಯನ್ನು ಪಡೆದರು.

ಲಖ್ನೋತಿಯ ಮೇಲೆ ಮೊಘಲರ ಆಕ್ರಮಣ:

ಹಿಜರಿ ಶಕೆ ೬೪೨ರಲ್ಲಿ ಮೊಘಲರ ಸೈನ್ಯವು ಲಖ್ನೋತಿಯ ಮೇಲೆ ಆಕ್ರಮಣವನ್ನು ಮಾಡಿತು. ಮೊಹಮ್ಮದ್ ಬಖ್ತಿಯಾರ್ ಖಿಲ್ಜಿಯು ಟಿಬೆಟ್ ಮತ್ತು ಖಿತಾ ದೇಶಕ್ಕೆ ಪ್ರಯಾಣ ಮಾಡಿದಾಗ ಬಳಸಿದ ಮಾರ್ಗವನ್ನೇ ಮೊಘಲರು ಕೂಡ ಬಳಸಿದರು ಎಂಬ ಒಂದು ಊಹೆ ಇದೆ. ತುರ್ಕಾನ್ ಖ್ವಾಜಾ ತಾಶ್ ಜನಾಂಗದ ಮಲಿಕ್ ಕರಾ ಬೇಗ್ ತೈಮೂರ್ ಖಾನಿಯನ್ನು ಅಲ್ಲಾವುದ್ದೀನ್ ಮಸೂದಿಯು ತಘಾನ ನೆರವಿಗಾಗಿ ಲಖ್ನೋತಿಗೆ ಕಳಿಸಿದ. ಆ ಯುದ್ಧದಲ್ಲಿ ಮೊಘಲರಿಗೆ ಅಪಜಯವುಂಟಾಯಿತು. ಇದರ ನಂತರ ತಘಾ ಮತ್ತು ಕರಾ ಬೇಗ್ ನಡುವೆ ಮನಸ್ತಾಪ ಮೂಡಿತು ಈ ವಿಷಯವು ಬಾದಶಹನಿಗೆ ತಿಳಿದು ಬರುತ್ತಿದ್ದಂತೆಯೇ ಅವನು ಲಖ್ನೋತಿಯ ಆಡಳಿತವನ್ನು ಕರಾ ಬೇಗ್‌ನ ಸುಪರ್ದಿಗೆ ವಹಿಸಿ ತಘಾನನ್ನು ದೆಹಲಿಗೆ ಕರೆಸಿಕೊಂಡ.

ಅಲ್ಲಾವುದ್ದೀನನ ದುರ್ನಡತೆ:

ಹಿಜರಿ ಶಕೆ ೬೪೩ರಲ್ಲಿ ಮೊಘಲರು ಮರಳಿ ಕಂದಹಾರ ಮತ್ತು ತಾಲಿಖಾನ್ ಮಾರ್ಗದಿಂದ ಸಿಂಧ್‌ನ ಮೇಲೆ ಆಕ್ರಮಣ ಮಾಡಿದರು. ಅಲ್ಲಾವುದ್ದೀನನು ತನ್ನ ಸರದಾರರು ಮತ್ತು ಗಣ್ಯ ನಾಯಕರನ್ನು ಸೇರಿಸಿಕೊಂಡು ಔಛ್‌ನ ಮಾರ್ಗ ಹಿಡಿದ. ಆ ಸೈನ್ಯವು ಬಿಯಾಹ್ ನದಿಯ ತೀರವನ್ನು ತಲುಪಿದಾಗ ಮೊಘಲರು ಔಛ್‌ನ ಕೋಟೆಯ ಮುತ್ತಿಗೆಯನ್ನು ಕೈಬಿಟ್ಟು ಕಾಡಿನತ್ತ ಓಡಿದರು. ಅಲ್ಲಾವುದ್ದೀನನು ವಿಜಯದ ನಗೆ ಬೀರುತ್ತ ದೆಹಲಿಗೆ ಮರಳಿದ ನಂತರ ಅಲ್ಲಾವುದ್ದೀನನ ನಡತೆಯಲ್ಲಿ ಅನೇಕ ಕೆಟ್ಟ ಬದಲಾವಣೆಗಳುಂಟಾದವು. ಕುಡಿತ ಮತ್ತು ವಿಲಾಸೀ ಜೀವನದ ಕರಿನೆರಳು ಅವನ ಬದುಕನ್ನು ಆಕ್ರಮಿಸಿ ನ್ಯಾಯಪರತೆಯ ದೃಷ್ಟಿಯಿಂದ ಅವನನ್ನು ವಿಮುಖಗೊಳಿಸಿತು ಮತ್ತು ಅವನಿಗೆ ಕ್ರೌರ್ಯ ದೌರ್ಜನ್ಯ ಮತ್ತು ಆಸ್ತಿ ಪಾಸ್ತಿಗಳನ್ನು ಜಪ್ತಿ ಮಾಡುವುದರ ಹೊರತಾಗಿ ಬೇರೆ ಕಾಯಕವೇ ಇರಲಿಲ್ಲ. ಈ ನಿಲುವಿನಿಂದ ಆಡಳಿತದ ವ್ಯವಸ್ಥೆಯಲ್ಲಿ ಅಲ್ಲೋಲ ಕಲ್ಲೋಲ ಉಂಟಾಯಿತು ಮತ್ತು ಇಡೀ ದೇಶದಲ್ಲಿ ದಂಗೆ ಮತ್ತು ಪಿತೂರಿಯ ಹೆಬ್ಬಾಗಿಲು ತೆರೆಯಿತು. ದೇಶದ ಈ ಪರಿಸ್ಥಿತಿಯನ್ನು ಕಂಡು ಬಹುತೇಕ ಸರದಾರರುಗಳು ಬಾದಶಾಹನ ವಿರೋಧವನ್ನು ಮಾಡಲಾರಂಭಿಸಿದರು ಮತ್ತು ಅವನನ್ನು ಪದಚ್ಯುತಗೊಳಿಸಲು ನಿರ್ಧರಿಸಿದರು.

ಆ ಕಿಡಿಗೇಡಿ ಸರ್ದಾರರು ಅಲ್ಲಾವುದ್ದೀನನ ಚಿಕ್ಕಪ್ಪನಾದ ನಾಸೀರುದ್ದೀನ್ ಮೆಹಮೂದ್‌ನ ಬಳಿ ಒಬ್ಬ ಗೌಪ್ಯ ದೂತನನ್ನು ಕಳಿಸಿದರು ಮತ್ತು ಅವನನ್ನು ದೆಹಲಿಗೆ ಬರುವಂತೆ ಆಹ್ವಾನಿಸಿದರು. ಅಲ್ಲಾವುದ್ದೀನನ ಪರಿಸ್ಥಿತಿಯ ಬಗ್ಗೆ ನಾಸೀರ್ ಮೆಹಮೂದ್‌ನಿಗೆ ತಿಳಿದುಬಂದಾಗ ಮತ್ತು ಅನೇಕ ಸರ್ದಾರರನ್ನು ತನ್ನ ಬೆಂಬಲಿಗರನ್ನಾಗಿ ಕಂಡಾಗ ತತ್‌ಕ್ಷಣವೇ ಅವನು ಬೆಹ್ರಾಯಿಚ್‌ನಿಂದ ಹೊರಟ ಮತ್ತು ದೆಹಲಿ ತಲುಪಿದ. ಹಿಜರಿ ಶಕೆ ೬೪೪ನೇ ಮೊಹರ್ರಮ್ ತಿಂಗಳ ೨೬ ರಂದು ಆ ಸರದಾರರುಗಳು ಅಲ್ಲಾವುದ್ದೀನ್‌ನನ್ನು ಬಂಧಿಸಿ ಕಾರಾಗೃಹದಲ್ಲಿಟ್ಟರು. ಮತ್ತು ನಾಸೀರುದ್ದೀನ್‌ನನ್ನು ಬಾದಶಹ ಎಂದು ಮಾನ್ಯತೆ ನೀಡಿದರು. ಕೆಲ ದಿನಗಳ ನಂತರ ಅಲ್ಲಾವುದ್ದೀನನು ಬಂಧನದಲ್ಲಿರುವಾಗಲೇ ಅಸು ನೀಗಿದ. ಆ ಬಾದಶಹನ ಆಡಳಿತ ಅವಧಿಯು ೪ ವರ್ಷ ಮತ್ತು ೧ ತಿಂಗಳ ಕಾಲದಿಂದ ಕೂಡಿತ್ತು.

(ಇಲ್ಲಿ ಫರಿಶ್ತಾನಿಂದ ತಪ್ಪಾಗಿದೆ. ಲಖ್ನೋತಿ ಮೇಲೆ ಮೊಘಲರರಿಂದ ಆಕ್ರಮಣವಾಗಿರಲಿಲ್ಲ ಬದಲಿಗೆ ಜಾಜ್ ನಗರದ ರಾಜನಿಂದ ಆಕ್ರಮಣವಾಗಿತ್ತು. ಜಾಜ್ ನಗರವು ನಾಗಪುರ ಮತ್ತು ಪಶ್ಚಿಮ ಒರಿಸ್ಸಾದ ನಡುವೆ ಇದೆ.)

ನಾಸಿರುದ್ದೀನ್ ಮೆಹಮೂದ್:

ವಾಸ್ತವವಾಗಿ ಅಲ್ತಮಷ್‌ನ ಹಿರಿಯ ಪುತ್ರನ ಹೆಸರು ನಾಸಿರುದ್ದೀನ್ ಎಂದಾಗಿತ್ತು

ಎಂಬುದು ಅನೇಕ ಚರಿತ್ರಕಾರರ ಅಭಿಪ್ರಾಯವಾಗಿವೆ. ಲಖ್ನೋತಿಯಲ್ಲಿ ಆ ಮಗ ಮರಣ ಹೊಂದಿದ. ಆ ದುರ್ಘಟನೆಯ ನಂತರ ಅಲ್ತಮಷನ ಮನೆಯಲ್ಲಿ ಒಬ್ಬ ಪುತ್ರ ಜನಿಸಿದ. ಅಲ್ತಮಷನು ತನ್ನ ಮೃತ ಪುತ್ರನ ನೆನಪನ್ನು ಹಸಿರಾಗಿಡುವ ಸಲುವಾಗಿ ನವಜಾತ ಶಿಶುವಿನ ಹೆಸರನ್ನು ಕೂಡ ನಾಸಿರುದ್ದೀನ್ ಎಂದು ಕರೆದ. ನಾಸೀರುದ್ದೀನನ ಬಯಕೆ ಸಾಕಾರಗೊಂಡಿತ್ತು. ಮತ್ತು ಅವನ ಹಿರಿಯ ಪುತ್ರನ ಸ್ಥಾನದಲ್ಲಿ ಅವನ ಕಿರಿಯ ಮಗನು ನಾಸಿರುದ್ದೀನ್ ಮೆಹಮೂದನ ಹೆಸರಿನಲ್ಲಿ ತನ್ನ ತಂದೆಯ ಉತ್ತರಾಧಿಕಾರಿಯಾದ. ಅಲ್ತಮಷ್‌ನು ನಾಸಿರುದ್ದೀನನ ವಿದ್ಯಾಭ್ಯಾಸ ಮತ್ತು ತರಬೇತಿಯ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿದ್ದ. ಅಲ್ಲಾವುದ್ದೀನ್ ಮಸೂದ್‌ನ ರಾಜ್ಯಭಾರದಲ್ಲಿ ನಾಸಿರ್ ಬೆಹ್ರಾಯಿಚ್‌ನ ಆಡಳಿತಾಧಿಕಾರಿಯಾಗಿ ನೇಮಕಗೊಂಡಿದ್ದ. ಅವನು ಮುಸ್ಲಿಮೇತರರ ಮೇಲೆ ಅಪಾರ ಯುದ್ಧಗಳನ್ನು ಮಾಡಿದ ಮತ್ತು ತನ್ನ ಆಡಳಿತ ಪ್ರದೇಶವನ್ನು ತುಂಬಾ ಸಂಪದ್ಭರಿತವಾಗಿ ಅಭಿವೃದ್ಧಿಗೊಳಿಸಿದ. ಅವನ ನ್ಯಾಯಪರತೆ ಮತ್ತು ಜನಸ್ನೇಹಿ ವರ್ತನೆಯು ಅಪಾರ ಪ್ರಶಂಸೆಯನ್ನು ಗಳಿಸಿತು ಮತ್ತು ಕಡಿಮೆ ಅವಧಿಯಲ್ಲಿ ಅವನು ಅಪಾರ ಜನಮನ್ನಣೆಯನ್ನು ಗಳಿಸಿದ.

ಪಟ್ಟಾಭಿಷೇಕ:

ಆಡಳಿತ ವ್ಯವಸ್ಥೆ ಮತ್ತು ನ್ಯಾಯದಾನ ಮತ್ತು ನ್ಯಾಯಪರತೆಯಲ್ಲಿ ನಾಸಿರುದ್ದೀನನ ಕ್ರಿಯಾಶೀಲತೆಯು ದೆಹಲಿಯ ಪ್ರತಿಯೊಬ್ಬ ಸರದಾರ ಮತ್ತು ಗಣ್ಯ ವ್ಯಕ್ತಿಗಳ ಅರಿವಿಗೂ ಬಂದಿತು. ಅಲ್ಲಾವುದ್ದೀನನ ನಿರಾಸಕ್ತಿ ಹಾಗೂ ದೌರ್ಜನ್ಯದ ದೆಸೆಯಿಂದ ರಾಜ್ಯದ ಸರದಾರರು ತೀರಾ ಸಂಕಷ್ಟಕ್ಕೆ ಗುರಿಯಾಗಿದ್ದರಿಂದ ಅವರುಗಳು ನಾಸಿರುದ್ದೀನ್‌ನನ್ನು ಬೆಹರಾಯಿಚ್‌ನಿಂದ ಆಹ್ವಾನಿಸಿ ಆಡಳಿತ ಸಿಂಹಾಸನದ ಮೇಲೆ ಕೂರಿಸಿದರು ಮತ್ತು ಅಲ್ಲಾವುದ್ದೀನ್ ಮಸೂದ್‌ನನ್ನು ಸೆರೆಮನೆ ಗಟ್ಟಿದರು. ನಾಸಿರುದ್ದೀನನು ತನ್ನ ತಂದೆಯ ಸ್ಥಾನದಲ್ಲಿ ಶ್ವೇತ ಅರಮನೆಯ ಸಭಾಂಗಣದಲ್ಲಿ ಸಿಂಹಾಸನವನ್ನೇರಿದ. ಆ ರಾಜನು ಪರಾಕ್ರಮ ದೈವಭಕ್ತಿ ಮತ್ತು ಕ್ರಿಯಾಶೀಲತೆ ದಾನ ಧರ್ಮಾದಿಗಳಲ್ಲಿ ಉದಾರತೆ ಮುಂತಾದವುಗಳ ಜೀವಂತ ಉದಾಹರಣೆಯಾಗಿದ್ದ ಅವನು ತನ್ನ ವೈಯಕ್ತಿಕ ಖರ್ಚುವೆಚ್ಚಕ್ಕಾಗಿ ರಾಜ ಖಜಾನೆಯಿಂದ ಯಾವ ಹಣವನ್ನು ಪಡೆದುಕೊಳ್ಳಲಿಲ್ಲ. (ಅವನು ತನ್ನ ವೈಯಕ್ತಿಕ ಶ್ರಮದಿಂದ ಖಾಸಗಿ ವೆಚ್ಚಕ್ಕಾಗಿ ಹಣವನ್ನು ಗಳಿಸುತ್ತಿದ್ದ) ಅವನು ಪ್ರತಿ ವರ್ಷ ತನ್ನ ಕೈಯಾರೆ ಕುರಾನಿನ ಎರಡು ಹಸ್ತ ಪ್ರತಿಗಳನ್ನು ಬರೆಯುತ್ತಿದ್ದ. ಮತ್ತು ಅದರಿಂದ ಬಂದ ಆದಾಯದಿಂದ ಜೀವನ ನಿರ್ವಹಣೆ ಮಾಡುತ್ತಿದ್ದ. ನಾಸಿರುದ್ದೀನನಿಗೆ ಪಂಡಿತರು, ವಿದ್ವಾಂಸರು, ಮತ್ತು ಸೂಫಿಗಳೆಂದರೆ ಅಪಾರ ಗೌರವವಿತ್ತು. ಕಲಾವಿದರ ಕಲೆಯನ್ನು ಪುರಸ್ಕರಿಸುತ್ತಿದ್ದ ಮತ್ತು ಅವರ ಯೋಗ್ಯತೆಗೆ ಅನುಸಾರವಾಗಿ ಅವರಿಗೆ ಖಿಲ್ಲತ್ತು ಮತ್ತು ಇನಾಮುಗಳನ್ನು ನೀಡುತ್ತಿದ್ದ. ಅವನ ಪಟ್ಟಾಭಿಷೇಕದ ಸಮಯದಲ್ಲಿ ಅನೇಕ ಕವಿಗಳು ಅಭಿನಂದನಾ ಕವಿತೆಗಳನ್ನು ನುಡಿದರು.

(ಮತ್ತು ಸೂಕ್ತ) ಇನಾಮುಗಳನ್ನು ಪಡೆದುಕೊಂಡರು. "ತಬ್‌ಖಾತೆ ನಾಸಿರಿಯ" ಕರ್ತೃವಾದ ಖಾಜಿ ಮೀನ್ ಹಾಜ್ ಅಲ್ ಸಿರಾಜ್ ಕೂಡ ಆ ಸಂದರ್ಭದಲ್ಲಿ ಒಂದು ಕವನವನ್ನು ರಚಿಸಿದನು. ಅದು ಹೀಗಿದೆ,

"ಆ ಅಲ್ಲಾಹನು ಹಾಲೆಮ್‌ನಂಥ ದಯಾಳು ಮತ್ತು
ರುಸ್ತುಮನಂಥ ವೀರನನ್ನು ಕಳುಹಿಸಿದ್ದಾನೆ. ಆತನು
ಅಲ್ತಮಿಶ್‌ನ ಮಗನಾದ ನಾಸಿರ್ ಮೆಹಮೂದ್ ಜಗತ್ತಿನ ಮತ್ತು
ಧರ್ಮದ ಅನುಯಾಯಿಗಳಿಗೆ ಸಹಾಯ ಮಾಡುವಂಥವನಾಗಿದ್ದಾನೆ."

ರಾಜ್ಯದ ಆಡಳಿತ ವ್ಯವಸ್ಥೆ:

ನಾಸಿರುದ್ದೀನನ ಆಡಳಿತಾವಧಿಯಲ್ಲಿ ಮಂತ್ರಿಯ ಹುದ್ದೆಯನ್ನು ಅಲ್ತಮಷ್‌ನ ಪ್ರೀತಿ ಪಾತ್ರ ಗುಲಾಮ ಮತ್ತು ಅಳಿಯನಾದ ಗಯಾಸುದ್ದೀನನಿಗೆ ನೀಡಲಾಯಿತು. ಹಾಗೂ ಬಲ್ಬನ್‌ಗೆ ನಾಸಿರುದ್ದೀನನು ಖಾನೆ ಆಜಂ ಅಲಫ್‌ಖಾನ್‌ನ ಬಿರುದನ್ನು ದಯಪಾಲಿಸಿದ ಮತ್ತು ಛತ್ರ ಚಾಮರವನ್ನು ಪ್ರದಾನ ಮಾಡಿದ. ನಾಸಿರುದ್ದೀನನು ರಾಜ್ಯದ ಎಲ್ಲಾ ಕೆಲಸ ಕಾರ್ಯಗಳನ್ನು ಬಲ್ಬನ್‌ನ ಅಭಿಪ್ರಾಯದ ಮೇರೆಗೆ ಮಾಡುತ್ತಿದ್ದ. ಬಲ್ಬನ್‌ನ ಚಿಕ್ಕಪ್ಪನ ಮಗನಾದ ಶೇರ್‌ಖಾನ್‌ಗೆ ಖಾನೆ ಮುಅಜ್ಜಮ್‌ನ ಬಿರುದನ್ನು ಮತ್ತು ಪಂಜಾಬ್ ಮತ್ತು ಮುಲ್ತಾನಿನ ಸುಬೇದಾರಿಕೆಯನ್ನು ನೀಡಿದ. ಶೇರ್‌ಖಾನನು ಮೊಘಲರ ಗಲಭೆಗಳ ತೂಫಾನನ್ನು ನಿಯಂತ್ರಿಸಲಿ ಎಂಬುದು ಈ ನೇಮಕಾತಿಯ ಹಿಂದಿನ ಉದ್ದೇಶವಾಗಿತ್ತು. ಮೊಘಲರು ಆ ಹೊತ್ತಿನಲ್ಲಿ ಕಾಬೂಲ್, ಕಂದಹಾರ, ಘಜ್ನಿ ಮತ್ತು ಹೇರಾತ್‌ನಿಂದ ಹಿಂದೂಸ್ತಾನದ ವಿನಾಶದ ಸಲುವಾಗಿ ಪ್ರವಾಹದೋಪಾದಿಯಲ್ಲಿ ಏರಿ ಬರುತ್ತಿದ್ದರು. ಖಾನೆಮುಅಜ್ಜಮ್ ಶೇರ್ ಖಾನನು ತನ್ನ ಕರ್ತವ್ಯವನ್ನು ಸಕ್ಷಮವಾಗಿ ನಿಭಾಯಿಸಿದ ಮತ್ತು ಅವನು ಭಟ್ನೇರ್ ಹಾಗೂ ಭಟಿಂಡದಲ್ಲಿ ಬಲಿಷ್ಠವಾದ ಕೋಟೆಗಳ ನಿರ್ಮಾಣವನ್ನು ಮಾಡಿದ. ಆ ಮೂಲಕ ಅವನು ಮೊಘಲರ ಆಕ್ರಮಣವನ್ನು ನಿಯಂತ್ರಿಸಿದ.

ಬಲ್ಬನ್ನಿನ (ಉಪಸ್ಥಾನ) ಉಪನಾಯಕತ್ವ:

ಬಲ್ಬನ್ನನನ್ನು ನಾಸಿರುದ್ದೀನನು ತನ್ನ ಮಂತ್ರಿಯನ್ನಾಗಿ ನೇಮಕ ಮಾಡಿದ ನಂತರ ಅವನನ್ನು ಏಕಾಂತದಲ್ಲಿ ಕಂಡು "ನಾನು ನಿನ್ನನ್ನು ಉಪನಾಯಕನನ್ನಾಗಿ ನೇಮಕ ಮಾಡಿದ್ದೇನೆ ಮತ್ತು ದೇವರ ಸೃಷ್ಟಿಯ ಮೇಲೆ ನಿನ್ನನ್ನು ರಾಜನನ್ನಾಗಿ ಮಾಡಿದ್ದೇನೆ. ನಾನು ಅಲ್ಲಾಹನೆದುರು ತಲೆ ತಗ್ಗಿಸುವಂತಹ ಕೆಲಸವನ್ನು ನೀನು ಎಂದಿಗೂ ಮಾಡಕೂಡದು". ಆಡಳಿತಾತ್ಮಕ ದೃಷ್ಟಿಯಿಂದ ಬಲ್ಬನ್ ಕಠಿಣ ಮತ್ತು ಬಲಿಷ್ಠ ಕಾನೂನುಗಳನ್ನು ರಚಿಸಿದ. ಮತ್ತು ನೈಜವಾದ ಅಧಿಕಾರವು ಅವನ ಕೈಯಲ್ಲಿ ಕೇಂದ್ರೀಕೃತವಾಯಿತು. ಸರದಾರರು ಮತ್ತು ಅಧಿಕಾರಿಗಳು ಅವನ ಕಾರ್ಯಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶವಿಲ್ಲದಂತಾಯಿತು.

ಮುಲ್ತಾನಿನ ಮೇಲೆ ಯುದ್ಧ:

ಬಲ್ಬನ್‌ನ ಸಲಹೆಯ ಮೇರೆಗೆ ರಜಬ್ ತಿಂಗಳಿನಲ್ಲಿ ನಾಸಿರುದ್ದೀನನು ಮುಲ್ತಾನಿನ ಮೇಲೆ ಯುದ್ಧ ಸಾರಿದ. ಜೀಖಾದ ತಿಂಗಳ ಮೊದಲನೇ ತಾರೀಖಿನಂದು ಲಾಹೋರ್ (ಅಂದರೆ ರಾವಿ ನದಿ) ನದಿಯನ್ನು ದಾಟಿ ಸೌದ್ರ ನದಿಯ ತೀರವನ್ನು ತಲುಪಿದ. ನಾಸಿರುದ್ದೀನನು ಅಲ್ಲಿಯೇ ಠಿಕಾಣಿಯನ್ನು ಹಾಕಿದ ಮತ್ತು ಬಲ್ಬನ್‌ನನ್ನು ಸೇನೆಯೊಂದಿಗೆ ಸಿಂಧ್ ಮತ್ತು ಕೋಹೆ ಜೂದ್‌ನತ್ತ ಕಳಿಸಿದ. ಬಲ್ಬನ್‌ನು ಕೋಹೆ ಜೂದ್ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶವನ್ನು ಮನಸೋ ಇಚ್ಛೆ ನಾಶ ಮಾಡಿದ ಮತ್ತು ಲೂಟಿ ಮಾಡಿದ ಹಾಗೂ ಆ ಖಕ್ಕರ್‌ಗಳು ಹಾಗೂ ಹಿಂದಿನ ಯುದ್ಧದ ಸಂದರ್ಭದಲ್ಲಿ ಮೊಘಲರಿಗೆ ನೆರವು ನೀಡಿದ್ದ ಖಕ್ಕರ್‌ಗಳು ಹಾಗೂ ವಿದ್ರೋಹಿಗಳನ್ನು ಕೊಲೆ ಮಾಡಿದ. ಆ ಕೊಲೆ ಗೀಡಾದವರ ಪತ್ನಿಯರು ಮತ್ತು ಮಕ್ಕಳನ್ನು ಸೆರೆ ಹಿಡಿದು ಬಾದಶಹನ ಸಮಕ್ಷಮ ಹಾಜರು ಪಡಿಸಿದ. ಸೈನ್ಯದಲ್ಲಿ ಅವಶ್ಯಕ ಸಾಮಗ್ರಿಯ ಕೊರತೆಯುಂಟಾದುದರಿಂದ ನಾಸೀರುದ್ದೀನನು ಮುಲ್ತಾನಿನಲ್ಲಿ ಉಳಿಯುವುದು ವಿಹಿತವಲ್ಲವೆಂದು ನಿರ್ಧರಿಸಿ ದೆಹಲಿಗೆ ಮರಳಿದ.

ಖುತ್ಬುದ್ದೀನ್ ಐಬಕ್ ಮತ್ತು ಶಂಸುದ್ದೀನ್ ಅಲ್ತಮಷ್‌ನ ಕಾಲಾವಧಿಯಲ್ಲಿ ಮುಲ್ತಾನ್ ಮತ್ತು ಲಾಹೋರ ಸರದಾರನಾಗಿದ್ದ ವೃದ್ಧ ಸರದಾರರು ನಿಷ್ಕಲ್ಮಷ ಹೃದಯದಿಂದ ಹಾಲಿ ಬಾದಶಹನ ಅನುಯಾಯಿಗಳಾಗಿ ಉಳಿದಿರಲಿಲ್ಲ ಹಾಗೂ ಮೊಘಲ್ ಲೂಟಿಕೋರರನ್ನು ತಮ್ಮ ಸಮಗ್ರ ಶಕ್ತಿ ಸಾಮರ್ಥ್ಯಗಳು ಬಳಸಿ ಎದುರಿಸದೆ ತಮ್ಮ ಒಡೆಯನಿಗೆ ನಂಬಿಕೆ ದ್ರೋಹವನ್ನು ಎಸಗಿದ್ದರು. ಚರಿತ್ರೆಕಾರರು ದಾಖಲಿಸಿರುವಂತೆ ನಾಸಿರುದ್ದೀನನು ಬಲ್ಬನ್‌ನ ಸಲಹೆಯ ಮೇರೆಗೆ ಆ ಸರದಾರರೆಲ್ಲರನ್ನು ಪದಚ್ಯುತಿಗೊಳಿಸಿ, ಅವರ ಪುತ್ರರಿಗೆ ಜಹಗೀರನ್ನು ನೀಡಿದ. ಮತ್ತು ಆ ವೃದ್ಧ ಸರದಾರರನ್ನು ತನ್ನೊಡನೆ ದೆಹಲಿಗೆ ಕರೆ ತಂದ. ಈ ಕ್ರಮದಿಂದ ಪಂಜಾಬ್‌ನ ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿ ಭದ್ರತೆಯುಂಟಾಯಿತು. ಹಾಗೂ ನಾಸಿರುದ್ದೀನನ ಆಡಳಿತವು ಬಹುಕಾಲ ಭದ್ರವಾಗಿ ಉಳಿಯಿತು.

ಸಿಕಂದರೆ ಆಜಮ್‌ನ (ಅಲೆಗ್ಸಾಂಡರ್‌ನ) ಘಟನೆ:

ಅನೇಕ ಪುರಾತನ ಇತಿಹಾಸಕಾರರು ಅಲೆಗ್ಸಾಂಡರ್ ಬಗ್ಗೆ ಈ ಘಟನೆಯನ್ನು ಉದ್ಧರಿಸುತ್ತಾರೆ. ಅಲೆಗ್ಸಾಂಡರ್‌ನು ವಿಶ್ವದ ಅನೇಕ ರಾಜ್ಯಗಳನ್ನು ಜಯಿಸಿ ಹಿಂದೂಸ್ಥಾನವನ್ನು ಕೂಡ ಜಯಿಸುವ ಆಕಾಂಕ್ಷೆಯನ್ನು ಹೊಂದಿದ್ದ. ಆಗ ಅವನ ಅನೇಕ ಸರದಾರರು ಮತ್ತು ಅಧಿಕಾರಿಗಳು ಅವನ ಆಜ್ಞೆಯನ್ನು ವಿರೋಧಿಸಿದರು. ಮತ್ತು ಪ್ರತಿಯೊಬ್ಬನು ಕೂಡ ತಾನೇ ಸಾರ್ವಭೌಮ ಎಂದು ಭಾವಿಸತೊಡಗಿದ. ಅಲೆಗ್ಸಾಂಡರ್ ತನ್ನ ಅನುಯಾಯಿಗಳನ್ನು ಸಮಾಧಾನ ಪಡಿಸಿ ತನ್ನ ಇಚ್ಛೆಯನ್ನು

ಅವರು ಬೆಂಬಲಿಸುವಂತೆ ಶ್ರಮಿಸಿದ. ಆದರೆ ಅವನ ಈ ಕ್ರಮವು ನಿರೀಕ್ಷಿತ ಪರಿಣಾಮವನ್ನು ಬೀರಲಿಲ್ಲ ಕೊನೆಗೆ ಅವನು ಎಲ್ಲಾ ವಿಷಯವನ್ನು ನಮೂದಿಸಿ ತನ್ನ ಗುರುವಾದ ಅರಿಸ್ಟಾಟಲ್‌ಗೆ ತಲುಪಿಸುವಂತೆ ಒಂದು ಪತ್ರವನ್ನು ತನ್ನ ದೂತನೊಡನೆ ರೋಮ್‌ಗೆ ಕಳಿಸಿ ಕೊಟ್ಟ ಮತ್ತು ಈ ಬಗ್ಗೆ ತನಗೆ ಸಲಹೆ ನೀಡುವಂತೆ ಕೋರಿದ. ತನ್ನ ವೃದ್ಧಾಪ್ಯದ ದೆಸೆಯಿಂದ ರೋಮ್‌ನಲ್ಲಿ ಉಳಿದಿದ್ದ. ಅರಿಸ್ಟಾಟಲ್‌ನು ಅಲೆಗ್ಸಾಂಡರ್‌ನ ದೂತನ ಎಲ್ಲ ಮಾತನ್ನು ಕೇಳಿಸಿಕೊಂಡ ಮತ್ತು ಆ ದೂತನಿಗೆ ಯಾವುದೇ ಪ್ರತ್ಯುತ್ತರವನ್ನು ನೀಡಲಿಲ್ಲ. ಆದರೆ ಅವನನ್ನು ಜೊತೆಯಲ್ಲಿ ಕರೆದುಕೊಂಡು ಒಂದು ತೋಟಕ್ಕೆ ಬಂದ ಹಾಗೂ ತೋಟದ ಮಾಲಿಯನ್ನು ಕರೆದು ಆ ತೋಟದಲ್ಲಿದ್ದ ಎಲ್ಲ ಹಳೆಯ ಮತ್ತು ದೊಡ್ಡ ಮರಗಳನ್ನು ಬುಡ ಸಮೇತ ಕಿತ್ತು ಬಿಸಾಕುವಂತೆಯೂ ಮತ್ತು ಅದರ ಜಾಗದಲ್ಲಿ ಹೊಸ ಮತ್ತು ಚಿಕ್ಕ ಗಿಡಗಳನ್ನು ನೆಡುವಂತೆಯೂ ಆದೇಶ ನೀಡಿದ. ಮಾಲಿಯು ತನ್ನ ಕೆಲಸದಲ್ಲಿ ನಿರತನಾದಾಗ ಅರಿಸ್ಟಾಟಲ್‌ನು ತನ್ನ ಮನೆಗೆ ಹೊರಟು ಹೋದ. ಆಗ ಅಲೆಗ್ಸಾಂಡರ್‌ನ ದೂತನು ಅವನಿಂದ ಬೀಳ್ಕೊಂಡು ತನ್ನ ಒಡೆಯನತ್ತ ಮರಳಿ ಬಂದ. ಹಾಗೂ ತನ್ನ ಒಡೆಯನನ್ನು ಕಂಡು "ನಾನು ತಮ್ಮ ಸಂದೇಶವನ್ನು ಅರಿಸ್ಟಾಟಲ್‌ಗೆ ತಲುಪಿಸಿದೆ. ಆದರೆ ಅವರು ನನಗೆ ಪ್ರತ್ಯುತ್ತರವನ್ನು ನೀಡದೆ ವಾಪಸ್ ಕಳಿಸಿದರು" ಎಂದು ಅರುಹಿದ. ಆ ದೂತನನ್ನು ಅರಿಸ್ಟಾಟಲ್‌ನು ಸಂಭಾಷಣೆಗೆ ಯೋಗ್ಯನೆಂದು ಪರಿಗಣಿಸಿಲ್ಲವಾದ್ದರಿಂದ ಪತ್ರ ಮುಖೇನ ಉತ್ತರ ಕಳಿಸಿಲ್ಲವೆಂಬುದು ಅಲೆಗ್ಸಾಂಡರ್‌ಗೆ ಕೂಡಲೇ ಅರಿವಾಯಿತು. ಅಲೆಗ್ಸಾಂಡರ್‌ನು ಆ ದೂತನೊಂದಿಗೆ ಕೇಳಿದ "ನೀನು ಅವರಿಗೆ ನನ್ನ ಸಂದೇಶವನ್ನು ನೀಡಿದ ನಂತರ ಅವರು ಯವುದಾದರೂ ಕೆಲಸ ಕಾರ್ಯವನ್ನು ಮಾಡಿದರೋ ಇಲ್ಲವೋ?' ಆಗ ದೂತ ಉತ್ತರಿಸಿದ "ನಾನು ತಮ್ಮ ಮಾತನ್ನು ಅರಿಸ್ಟಾಟಲ್‌ಗೆ ತಲುಪಿಸಿದ ಕೂಡಲೇ ಅವರು ಎದ್ದು ನಿಂತರು ಮತ್ತು ನನ್ನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ತೋಟಕ್ಕೆ ಹೋದರು. ಅಲ್ಲಿ ತಲುಪಿದ ಕೂಡಲೇ ಮಾಲಿಯನ್ನು ಕರೆದು ಹಳೆಯ ಮರಗಳನ್ನು ಬುಡ ಸಮೇತ ಕಿತ್ತೆಸೆದು ಮತ್ತು ಹೊಸ ಗಿಡಗಳನ್ನು ನೆಡುವಂತೆ ಆದೇಶಿಸಿದರು. ಮಾಲಿಯು ತನ್ನ ಕೆಲಸದಲ್ಲಿ ನಿರತನಾದಾಗ ಅವರು ಕೂಡ ನೆರವು ನೀಡಿದರು. ಒಂದಿಷ್ಟು ಹೊತ್ತಿನ ನಂತರ ಗುರುಗಳು ತಮ್ಮ ಮನೆಗೆ ಮರಳಿದರು ಮತ್ತು ನನಗೆ ಯಾವ ಉತ್ತರವನ್ನು ನೀಡದೆ ಮರಳಿ ಕಳಿಸಿದರು". ಅವನ ಉತ್ತರವನ್ನು ಕೇಳಿ ಅಲೆಗ್ಸಾಂಡರ್ ನುಡಿದ "ಗುರುಗಳು ನನ್ನ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ನೀಡಿದ್ದಾರೆ ನಿನಗೆ ಅದು ಅರ್ಥವಾಗಲಿಲ್ಲವೆಂಬುದು ಬೇರೆಯದೇ ವಿಷಯ" ಅಲೆಗ್ಸಾಂಡರ್‌ನು ತನ್ನ ಗುರುವಿನ ಕ್ರಿಯೆಯ ಮೂಲಕ ನೈಜ ಗುಟ್ಟನ್ನು ಅರಿತುಕೊಂಡು ಕಿಡಿಗೇಡಿ ಹಾಗೂ ಅವಿಧೇಯ ನಾಯಕರನ್ನು ಪದಚ್ಯುತಿಗೊಳಿಸಿದ ಮತ್ತು ಅವರ ಸ್ಥಾನದಲ್ಲಿ ಅವರ ಪುತ್ರರನ್ನು ನೇಮಿಸಿ ತನ್ನ ಉದ್ದೇಶದಲ್ಲಿ ಸಫಲನಾದ.

ರಾಜ ದಮ್ಕಿ ಮಲ್ಕಿ ಮೇಲೆ ಯುದ್ಧ:

೬೪೫ ನೆಯ ಇಸವಿಯ ಶಾಬಾನ್ ತಿಂಗಳ ೨ ನೆಯ ತಾರೀಕಿನಂದು ನಾಸಿರುದ್ದೀನ್ ಮೆಹಮೂದನು ದೋಆಬ್ ಪ್ರದೇಶದಲ್ಲಿ ಪ್ರಯಾಣ ಮಾಡಿದ. ಮತ್ತು ಅತ್ಯಂತ ಸಂಕಷ್ಟಗಳನ್ನು ಎದುರಿಸಿ ಪರಾಕ್ರಮದಿಂದ ಬರ್ಥ್‌ನ ಕೋಟೆಯನ್ನು ಗೆದ್ದುಕೊಂಡ.(ಈ ಸ್ಥಳವು ಕನೋಜ್ ಬಳಿ ಇದೆ) ಅದೇ ವರ್ಷದ ಜೀಖಾದ ತಿಂಗಳ ೧೦ ನೇ ತಾರೀಖಿನಂದು ನಾಸೀರುದ್ದೀನನು ಕಥಾದತ್ತ ದೃಷ್ಟಿ ಹಾಯಿಸಿದ ಮತ್ತು ಬಲ್ಬನ್‌ನನ್ನು ತನ್ನ ಸೇನೆಯ ಮುಖ್ಯಸ್ಥನನ್ನಾಗಿ ಮಾಡಿ ಕಳಿಸಿಕೊಟ್ಟ. ಖಾನೆ ಆಝುಮ್ ಬಲ್ಬನ್‌ನನು ದಮ್‌ಕಿ ಮಲ್‌ಕಿಯ ಹಳ್ಳಿಗಳನ್ನು ಮನ ಬಂದಂತೆ ಲೂಟಿ ಮಾಡಿದ. ಆ ರಾಜನೊಂದಿಗೆ ಬಲ್ಬನ್ ಅನೇಕ ಯುದ್ಧಗಳನ್ನು ಮಾಡಿದ. ಅಂತಿಮವಾಗಿ ಬಲ್ಬನ್ ವಿಜಯಿಯಾದ. ಬಲ್ಬನ್‌ನು ತನ್ನ ವಿರೋಧಿಗಳ ನೌಕರ ಚಾಕರರು ಮತ್ತು ಮಕ್ಕಳನ್ನು ದೊಡ್ಡ ಸಂಖ್ಯೆಯಲ್ಲಿ ಸೆರೆ ಹಿಡಿದು ವಾಪಸ್ ಮರಳಿದ. ಆ ಯುದ್ಧಗಳ ಮೂಲಕ ಪಡೆದುಕೊಂಡಿದ್ದ ಅಪಾರ ಸಂಪತ್ತನ್ನು ಕೂಡ ಬಲ್ಬನ್ ನಾಸೀರುದ್ದೀನ್ ಮೆಹಮೂದನ ಸನ್ನಿಧಿಗೆ ಅರ್ಪಿಸಿದ. ಯಮುನಾ ನದಿಯ ತೀರದಲ್ಲಿದ್ದ ಒಂದು ಪ್ರದೇಶದ ರಾಜನ ಹೆಸರು ದಮ್‌ಕಿ ಮಲ್‌ಕಿ ಎಂದಾಗಿತ್ತು ಆ ರಾಜನು ಹಿಂದಿನ ಅನೇಕ ಯುದ್ಧಗಳಲ್ಲಿ ಬಾದಶಾಹನ ಠಾಣೆಗಳನ್ನು ನಾಶ ಮಾಡಿದ್ದು ಕಾಲಿಂಜರ್ ಮತ್ತು ಕಥಾದಿಂದ ಹಿಡಿದು ಮಾಳವ ತನಕದ ಎಲ್ಲಾ ಪ್ರದೇಶವನ್ನು ತನ್ನ ವಶಪಡಿಸಿಕೊಂಡಿದ್ದ. ೬೪೦ ನೇ ಇಸವಿಯ ಶಾಬಾನ್ ತಿಂಗಳ ೨೬ ನೇ ತಾರೀಕಿನಂದು ನಾಸೀರ್ ಮೆಹಮೂದನು ರಣಥಂಬೂರ್ ಮತ್ತು ಕೋಹೆ ಪಾಯ ಹಾಗೂ ಮೇವಾಡ್ ರಾಜ್ಯಗಳನ್ನು ಗೆಲ್ಲುವಂತೆ ಆದೇಶಿಸಿ ಬಲ್ಬನ್‌ನನ್ನು ರವಾನೆ ಮಾಡಿದ ಅಂತೆಯೇ ಬಲ್ಬನ್ ಆ ಭಾಗದ ಕಿಡಿಗೇಡಿಗಳನ್ನು ಸೋಲಿಸಿ ಅಪಾರ ದನಕನಕ ಸಂಪತ್ತಿನೊಂದಿಗೆ ಮರಳಿದ ಹಾಗೂ ಅವೆಲ್ಲವನ್ನು ಬಾದಶಹನಿಗೆ ಸಮರ್ಪಿಸಿದ ಆ ಸಂದರ್ಭದಲ್ಲಿ ಖಾನೆ ಆಜಮ್ ಬಲ್ಬನ್‌ನ ಸಹೋದರನಾದ ಐಬಕ್ ಕಶೀಲ್ ಖಾನ್‌ನನ್ನು ಸರದಾರನನ್ನಾಗಿ ನೇಮಕ ಮಾಡಲಾಯಿತು. ಅಯ್ಯಾಜ್ ರೇಹಾನಿಯನ್ನು ರಾಜ್ಯದ ವಕೀಲನನ್ನಾಗಿ ನಿಯುಕ್ತಿಗೊಳಿಸಲಾಯಿತು. ಅದೇ ವರ್ಷದಲ್ಲಿ ನಾಸಿರುದ್ದೀನನ ಸಹೋದರನಾದ ಜಲಾಲುದ್ದೀನ್ ತನ್ನ ಜಹಗೀರಿನಿಂದ ದೆಹಲಿಗೆ ಬಂದ ಮತ್ತು ಬಾದಶಹನಿಂದ ಭಯಗ್ರಸ್ತನಾಗಿ ಕೋಹೆ ಜೈತುರ್‌ನತ್ತ ಓಟ ಕಿತ್ತ (ಇದು ಬರವಣಿಗೆಯ ದೋಷವಾಗಿದೆ ಸರಿಯಾದ ಶಬ್ದ ಸತನುರ್ ಆಗಿದೆ. ಕೋಹೆ ಸತನೂರ್ ಅಂದರೆ ಶವಾಲೀಕ್ ಎಂದು ಕರೆಯಲ್ಪಡುವ ಪರ್ವತ ಪ್ರದೇಶವಾಗಿದೆ. ಮತ್ತು ಡೆಹಾರ್‌ಡೂನನ ದಕ್ಷಿಣ ಭಾಗದಲ್ಲಿದೆ.) ನಾಸಿರುದ್ದೀನನು ಪರ್ವತದ ತಪ್ಪಲಿನವರೆಗೂ ತನ್ನ ಸಹೋದರನನ್ನು ಅಟ್ಟಿಸಿಕೊಂಡು ಹೋದ. ಅವನು ಏಳೆಂಟು ತಿಂಗಳವರೆಗೆ ಆ ಪ್ರದೇಶದಲ್ಲಿದ್ದ. ಆದರೆ ತಾನು ಸಫಲನಾಗುವುದು ದುಸ್ತರವೆಂದು ಅರಿವಾಗಿ ಕೊನೆಗೂ ಅವನು ದೆಹಲಿಗೆ ಮರಳಿದ. ಅದೇ ವರ್ಷದಲ್ಲಿ ನಾಸಿರುದ್ದೀನನು ಖಾಜಿ

ಇಮಾದುದ್ದೀನ್ ಸಂಖೂರ್ ಖಾನಿಯ ಮೇಲೆ ಅಪನಂಬಿಕೆಯನ್ನು ಹೊಂದಿ ಅವನನ್ನು ನ್ಯಾಯಾಧೀಶನ ಹುದ್ದೆಯಿಂದ ಪದಚ್ಯುತಿಗೊಳಿಸಿದ ಹಾಗೂ ಖಾಜಿ ಇಮಾದುದ್ದೀನ್ ರೇಹಾನಿಯ ಚಿತಾವಣೆಯ ಮೇರೆಗೆ ಅವನ ಕೊಲೆ ಮಾಡಿಸಿದ.

ಮುಲ್ತಾನಿನ ಮೇಲೆ ಯುದ್ಧ:

ನಾಸಿರುದ್ದೀನನು ಹಿಜರಿ ಶಕೆ ೬೪೭ರಲ್ಲಿ ಬಲ್ಬನ್‌ನ ಮಗಳೊಂದಿಗೆ ವಿವಾಹವಾದ ಮತ್ತು ಒಂದು ವರ್ಷದ ನಂತರ ಅಂದರೆ ೬೪೮ ನೇ ಇಸವಿಯಲ್ಲಿ ನಾಸಿರುದ್ದೀನನು ಮುಲ್ತಾನಿನ ಮೇಲೆ ಆಕ್ರಮಣವನ್ನು ಮಾಡಿದ. ಮುಲ್ತಾನ್ ಮತ್ತು ಲಾಹೋರ್ ಆಡಳಿತಗಾರನಾದ ಶೇರ್ ಖಾನನು ಬಿಯಾಸ್ ನದಿಯ ದಂಡೆಯಲ್ಲಿ ನಾಸಿರುದ್ದೀನನ ಸಮಕ್ಷಮ ಹಾಜರಾದ. ಹಿಜರಿ ಶಕೆ ೬೪೮ರ ರಬೀಯುಲ್ ಅವ್ವಲ್ ತಿಂಗಳಲ್ಲಿ ನಾಸಿರುದ್ದೀನನು ಮುಲ್ತಾನನ್ನು ತಲುಪಿದ. ಕೆಲವು ದಿನಗಳ ನಂತರ ನಾಸಿರುದ್ದೀನನು ಹಿರಿಯ ಮಲಿಕ್ ಐಜುದ್ದೀನ್ ಬಲ್ಬನ್‌ನನ್ನು ನಾಗೂರ್ ಮತ್ತು ಔಛ್‌ನತ್ತ ಕಳಿಸಿ ತಾನು ದೆಹಲಿಗೆ ಮರಳಿದ. ಹಿಜರಿ ಶಕೆ ೬೫೧ರಲ್ಲಿ ಐಜುದ್ದೀನನು ಬಾದಶಹನ ಆಜ್ಞೆಯನ್ನು ಉಲ್ಲಂಘಿಸಿ ಬಂಡಾಯದ ಬಾವುಟವನ್ನು ಹಾರಿಸಿದ. ಅವನನ್ನು ಅಡಗಿಸುವ ಸಲುವಾಗಿ ನಾಸಿರುದ್ದೀನನು ನಾಗೂರ್‌ಗೆ ಹೋದ. ಐಜುದ್ದೀನನು ಬಾದಶಹನ ಶಕ್ತಿ ಸಾಮರ್ಥ್ಯವನ್ನು ಎದುರಿಸಲು ಸಾಧ್ಯವಾಗದೆ ಅವನಿಗೆ ಮಣಿದು ರಕ್ಷಣೆಯನ್ನು ಕೋರಿದ. ಐಜುದ್ದೀನನು ತನ್ನ ದುರ್ನಡತೆಯನ್ನು ಕ್ಷಮಿಸುವಂತೆ ನಾಸಿರುದ್ದೀನನ ಬಳಿ ಕ್ಷಮೆಯನ್ನು ಕೋರಿದ. ಬಾದಶಹನು ಅವನನ್ನು ಮನ್ನಿಸಿ ಅವನ ರಾಜ್ಯವನ್ನು ಅವನಿಗೆ ಮರಳಿಸಿ ವಿಜಯ ಮಾಲೆಯನ್ನು ಧರಿಸಿ ದೆಹಲಿಗೆ ಮರಳಿದ.

ಜಾಹರ್ ದೇವನೊಂದಿಗೆ ಯುದ್ಧ:

ಹಿಜರಿ ಶಕೆ ೬೫೧ರ ಶಾಬಾನ್ ತಿಂಗಳ ೫ ನೇ ತಾರೀಖಿನಂದು ನಾಸಿರುದ್ದೀನನು ಬಲಾಢ್ಯ ಸೇನೆಯೊಂದಿಗೆ ಕೂಡಿ ತಿರೂರು ಕೋಟೆಯ ಮೇಲೆ ಆಕ್ರಮಣ ಮಾಡಿದ. ಜಾಹರ್ ದೇವನು ಬೆಟ್ಟದ ನೆತ್ತಿಯ ಮೇಲೆ ಒಂದು ಕೋಟೆಯ ನಿರ್ಮಾಣ ಮಾಡಿದ್ದ. ಅವನು ಐದು ಸಾವಿರ ಸೈನಿಕರು ಮತ್ತು ಒಂದು ಲಕ್ಷ ಪ್ಯಾದೆಗಳ ಸೈನ್ಯದೊಂದಿಗೆ ನಾಸೀರುದ್ದೀನನ ವಿರುದ್ಧ ಸಮರ ಸಾರಿದ. ಉಭಯತ್ರರ ನಡುವೆ ಘೋರ ಯುದ್ಧ ನಡೆದು ಅವನು ಯುದ್ಧರಂಗದಿಂದ ಪರಾರಿಯಾದ ನಾಸೀರುದ್ದೀನನು ಕೋಟೆಗೆ ಮುತ್ತಿಗೆ ಹಾಕಿದ ಮತ್ತು ಕೆಲವೇ ದಿನಗಳಲ್ಲಿ ಕೋಟೆಯನ್ನು ಗೆದ್ದುಕೊಂಡ ಅಲ್ಲಿಂದ ಬಾದಶಹನು ಚಂದೇರಿ ಮತ್ತು ಮಾಳವದ ಕಡೆ ಮುಂದುವರೆದ ಮತ್ತು ಅಲ್ಲಿ ಪ್ರಖ್ಯಾತ ಸರದಾರರನ್ನು ನೇಮಕ ಮಾಡಿ ಮರಳಿ ಬಂದ. ಆ ಯುದ್ಧದಲ್ಲಿ ಖಾನೆ ಆಝಮ್ ಬಲ್ಬನ್‌ನು ಅತ್ಯಂತ ಪೌರುಷ ಮತ್ತು ಪರಾಕ್ರಮದಿಂದ ಕಾದಾಡಿದ.

ಈ ಘಟನೆಯ ನಂತರ ಖಾನೆ ಆಝುಮ್‌ನ ಚಿಕ್ಕಪ್ಪನ ಮಗನಾದ ಶೇರ್ ಖಾನನು ಪರಾಕ್ರಮ ಹಾಗೂ ವಿವೇಚನೆಯಿಂದ ಘಜ್ನಿಯನ್ನು ಮೊಘಲರ ವಶದಿಂದ ತಪ್ಪಿಸಿದ. ಮತ್ತು ಅಲ್ಲಿಯೂ ನಾಸೀರುದ್ದೀನನ ಶಾಸನ ಮತ್ತು ನಾಣ್ಯವು ಜಾರಿಗೆ ಬಂದಿತು. ನಂತರ ಶೇರ್ ಖಾನನು ಬಾದಶಹನ ಆಜ್ಞೆಯ ಮೇರೆಗೆ ಮುಲ್ತಾನ್ ಮತ್ತು ಔಛ್‌ನ ಮೇಲೆ ಸೇನೆಯನ್ನು ನುಗ್ಗಿಸಿದ. ಐಜುದ್ದೀನ್ ಬಲ್ಬನ್‌ನ ಮನೋಗತದಲ್ಲಿ ಬಂಡಾಯ ಮತ್ತು ಕಿಡಿಗೇಡಿತನದ ಅಂಶಗಳು ಕಂಡು ಬರುತ್ತಿದ್ದವು ಆದರೆ ಅವನು ಶೇರ್ ಖಾನನ ದರ್ಪದಿಂದ ಭಯಭೀತನಾದ ಮತ್ತು ಅಸಹಾಯಕನಾಗಿ ನಾಗೂರ್‌ನಿಂದ ಔಛ್‌ಗೆ ಬಂದ ಮತ್ತು ಯಾವುದೇ ತಕರಾರು ಮತ್ತು ಪ್ರತಿಭಟನೆಯಿಲ್ಲದೆ ಕೋಟೆಯನ್ನು ಶೇರ್ ಖಾನನ ಸುಪರ್ದಿಗೆ ಒಪ್ಪಿಸಿದ ಮತ್ತು ಖುದ್ದು ಬಾದಶಹನ ಸಮಕ್ಷಮದಲ್ಲಿ ಹಾಜರಾದ. ನಾಸೀರುದ್ದೀನನು ಅವನಿಗೆ ಬದಾಯೂನ್‌ನ ಒಡೆತನವನ್ನು ನೀಡಿದ.

ಖಾನೆ ಆಜಮ್‌ನ ಹಾನ್‌ಸಿಯ ವಾಸ್ತವ್ಯ:

ಹಿಜರಿ ಶಕೆ ೬೫೦ರ ಶವ್ವಾಲ್ ತಿಂಗಳ ೨೨ನೇ ತಾರೀಖಿನಂದು ನಾಸೀರುದ್ದೀನನು ಲಾಹೋರ್ ಮಾರ್ಗದಿಂದ ಮುಲ್ತಾನ್ ಮತ್ತು ಔಛ್‌ನತ್ತ ಪ್ರಯಾಣ ಬೆಳೆಸಿದ. ಅವನು ಬಿಯಾಸ್ ನದಿಯ ತೀರವನ್ನು ತಲುಪಿದಾಗ ಸೆಹವಾನ್‌ನಿಂದ ಸನ್‌ಖರ್ ಖತ್‌ಲಕ್‌ಖಾನ್ ಮತ್ತು ಬದಾಯೂನ್‌ನಿಂದ ಹಿರಿಯ ಸರದಾರನಾದ ಮುಲ್ಕ್ ಐಜುದ್ದೀನ್ ಬಲ್ಬನ್ನನು ತಮ್ಮ ತಮ್ಮ ಸೈನ್ಯದೊಂದಿಗೆ ಬಾದಶಹನ ಜೊತೆ ಗೂಡಿದರು. ಹಿಜರಿ ಶಕೆ ೬೫೧ರ ಆರಂಭದಲ್ಲಿ ಇಮಾದುದ್ದೀನ್ ರೇಹಾನಿಯು ಖಾನೆ ಆಜಮ್‌ನ ಗೈರು ಹಾಜರಿಯ ದುರ್ಬಳಕೆಯನ್ನು ಮಾಡಿಕೊಂಡು ಆಸ್ಥಾನದ ಆನೇಕ ಗಣ್ಯರೊಡನೆ ಸಂಚನ್ನು ಹೂಡಿ ಖಾನೆ ಆಜಮ್‌ನನ್ನು ಕೊಲೆ ಮಾಡುವ ಯೋಜನೆಯನ್ನು ತಯಾರಿಸಿದ. ಆದರೆ ರೇಹಾನಿಯು ತನ್ನ ಇರಾದೆಯಲ್ಲಿ ಸಫಲನಾಗಲಿಲ್ಲ. ಆದರೂ ಅವನು ಖಾನೆ ಆಜಮ್‌ನ ಗೈರು ಹಾಜರಿಯ ಅವಕಾಶವನ್ನು ಬಳಸಿಕೊಂಡು ಆತನ ವಿರುದ್ಧ ಬಾದಶಹನಲ್ಲಿ ಚಾಡಿ ಹೇಳತೊಡಗಿದ. ಅವನು ನಾಸೀರುದ್ದೀನನ ಕಿವಿಯೂದಿ ಖಾನೆ ಆಜಮ್‌ನ ವಿರುದ್ಧ ಅನೇಕ ಸುಳ್ಳು ಸಂಗತಿಗಳನ್ನು ಹೇಳಿದ. ಹಾಗೂ ಖಾನೆ ಆಜಮ್ ತನ್ನ ಜಹಗೀರ್ ಆದ ಹಾನ್‌ಸಿಯಲ್ಲಿಯೇ ವಾಸವಾಗಿರುವುದು ಎಲ್ಲಾ ವಿಧದಲ್ಲಿಯೂ ಸೂಕ್ತವೆಂದು ನಾಸೀರುದ್ದೀನನಿಗೆ ಮನವರಿಕೆ ಮಾಡಿದ. ನಾಸಿರುದ್ದೀನನು (ಇಮಾದುದ್ದೀನ್ ರೆಹಾನಿಯ ಚಾಡಿ ಮಾತುಗಳಿಗೆ ಬಲಿಯಾದ) ದೆಹಲಿಯನ್ನು ತೊರೆದು ಹಾಂಸಿಯಲ್ಲಿ ವಾಸ ಮಾಡುವಂತೆ ಖಾನೆ ಆಝುಮ್‌ಗೆ ಆದೇಶ ನೀಡಿದ. (ಖಾನೆ ಆಜಮ್ ಸದರಿ ಆದೇಶದಿಂದ ತೀವ್ರ ಮುಖಭಂಗವನ್ನು ಅನುಭವಿಸಿದರೂ ಅವನು ರಾಜಾಜ್ಞೆಯನ್ನು ಪಾಲಿಸಬೇಕಾಯಿತು ಹಾಗೂ ಅವನು ಹಾಂಸಿಗೆ ಹೊರಟು ಹೋದ). ಖಾನೆ ಆಜಮ್‌ನ ನಿರ್ಗಮನದ ನಂತರ

ಇಮಾದುದ್ದೀನನು ಅನೇಕ ಸರದಾರರನ್ನು ಗಣ್ಯರನ್ನು ಮತ್ತು ಸೇನೆಯ ಅಧಿಕಾರಿಗಳನ್ನು ಬಹಿರಂಗವಾಗಿಯೇ ಕಾಡಿಸತೊಡಗಿದ ಹಾಗೂ ಖಾನೆ ಆಜಮ್‌ನೊಡನೆ ಅಲ್ಪಸಲ್ಪ ಮಧುರ ಬಾಂಧವ್ಯವನ್ನು ಹೊಂದಿದ್ದವರ ಹುದ್ದೆಗಳೆಲ್ಲವುಗಳನ್ನು ಬದಲಾವಣೆ ಮಾಡಲಾಯಿತು. ಇಮಾದುದ್ದೀನ್ ರೇಹಾನಿಯು ಐಬಕ್ ಕಶ್ಲಿಖಾನ್‌ನನ್ನು ಕಡಾಮಾಣಿಕ ಪುರದ ಸುಬೇದಾರನನ್ನಾಗಿ ನೇಮಕ ಮಾಡಿ ಅಲ್ಲಿಗೆ ಕಳಿಸಿಕೊಟ್ಟ ಹಾಗೂ ಬಹಳ ಕಾಲದಿಂದ ದೆಹಲಿಯಲ್ಲಿ ಉಳಿದಿದ್ದ ಐನುಲ್ ಮುಲ್ಕ್ ಜುನೇದಿಯನ್ನು ಅರ್ಥ ಸಚಿವನನ್ನಾಗಿ ನೇಮಕ ಮಾಡಿದ. ಅಮೀರ್ ಐಜುದ್ದೀನ್ ಕಶ್ಲಿಖಾನ್‌ನನ್ನು ಅಮೀರ್ ಸಾಹೇಬನ ಹುದ್ದೆಗೆ ನಿಯುಕ್ತಿಗೊಳಿಸಲಾಯಿತು. ಇಮಾದುದ್ದೀನ್ ರೇಹಾನಿಯು ದೆಹಲಿ ತಲುಪಿದ ನಂತರ ಬಾದಶಹನ ಸಮಸ್ಯೆಗಳನ್ನು ಇನ್ನಷ್ಟು ಬಿಗಡಾಯಿಸಿದ. ಶವ್ವಾಲ್ ತಿಂಗಳ ಆರಂಭದಲ್ಲಿ ನಾಸೀರುದ್ದೀನನು ದೆಹಲಿಯಿಂದ ಬಿಯಾಸ್ ನದಿಯ ತೀರದ ಪ್ರದೇಶದವರೆಗೆ ಪ್ರಯಾಣ ಬೆಳೆಸಿದ. (ಆ ಕಾಲದಲ್ಲಿ) ಶೇರ್ ಖಾನ್ ರೇಹಾನಿಯು ಸಿಂಧ್ ಬಂಡಾಯಗಾರರಿಂದ ಅಪಜಯವನ್ನು ಅನುಭವಿಸಿದ್ದ. ಆದ್ದರಿಂದ ಇಮಾದುದ್ದೀನ್ ಚಾಡಿ ಮಾತುಗಳಿಗೆ ಕಿವಿ ಕೊಟ್ಟ ಬಾದಶಹನು ತನ್ನ ಸೇನೆಯನ್ನು ಆ ದಿಕ್ಕಿನಲ್ಲಿ ರವಾನೆ ಮಾಡಿದ ಮತ್ತು ಭಟಿಂಡ, ಔಛ್ ಹಾಗೂ ಮುಲ್ತಾನ್‌ನ ಕೋಟೆಗಳನ್ನು ಶೇರ್ ಖಾನನ ವಶದಿಂದ ತಪ್ಪಿಸಿ ಅರ್‌ಸೇಲಾನ್‌ಖಾನನ ವಶಕ್ಕೆ ನೀಡಲಾಯಿತು. ಇದೇ ಹೊತ್ತಿನಲ್ಲಿ ಮುಲ್ಕ್ ಐಜುದ್ದೀನ್ ಕಥೀಲ್‌ನನ್ನು ಕೊಹಾರಾಮ್‌ನ ವಿದ್ರೋಹಿ ಹುಚ್ಚ ಜಮೀನ್ದಾರರ ಕೈಯಲ್ಲಿ ಹತನಾದ. ಐಜುದ್ದೀನನ ಸೇಡು ತೀರಿಸಿಕೊಳ್ಳುವ ಸಲುವಾಗಿ ನಾಸಿರುದ್ದೀನನು ಕೊಹಾರಾಮ್ ಮೇಲೆ ಯುದ್ಧ ಸಾರಿದ ಮತ್ತು ಅವನ ಕೊಲೆ ಪಾತಕರಿಗೆ ಕಠಿಣ ಶಿಕ್ಷೆಯನ್ನು ನೀಡಿ ಬದಾಯೂನ್ ಕಡೆ ತೆರಳಿದ. ಕೆಲವು ದಿನಗಳ ಕಾಲ ಬದಾಯೂನ್‌ನಲ್ಲಿ ನೆಲಸಿದ್ದ ನಾಸಿರುದ್ದೀನ್ ನಂತರ ದೆಹಲಿಗೆ ಮರಳಿದ.

ಇಮಾದುದ್ದೀನ್ ರೇಹಾನಿಯ ಪದಚ್ಯುತಿ:

ನಾಸಿರುದದ್ದೀನನು ದೆಹಲಿ ತಲುಪಿದ ನಂತರ ಹಿಂದೂಸ್ಥಾನದ ಪ್ರಖ್ಯಾತ ರಾಜ್ಯಗಳಾದ ಬದಾಯೂನ್, ಲಾಹೋರ್, ಖಿಡಾ, ಸವಾಲಿಕ್, ಕೊಹಾರಾಮ್, ಸರ್‌ಹಿಂದ್, ಸುನಾಮ್ ಮತ್ತು ನಾಗೂರ್ ಮುಂತಾದ ಅನೇಕ ರಾಜರು ಒಮ್ಮತದ ಅಭಿಪ್ರಾಯದ ಮೇರೆಗೆ ಖಾನೆ ಆಜಮ್‌ಗೆ ಪತ್ರವನ್ನು ಬರೆದರು ಮತ್ತು ಅದರಲ್ಲಿ "ಇಮಾದುದ್ದೀನನ ಮೇರೆ ಮೀರಿದ ದೌರ್ಜನ್ಯ ಮತ್ತು ಕ್ರೌರ್ಯದ ದೆಸೆಯಿಂದ ಇಡೀ ದೇಶದ ವ್ಯವಸ್ಥೆಯು ನಿರ್ವೀರ್ಯವಾಗಿದೆ. ಈ ಪರಿಸ್ಥಿತಿಯಲ್ಲಿ ತಾವು ಈ ಹಿಂದಿನಂತೆ ದೆಹಲಿಗೆ ಬಂದು ರಾಜ್ಯಾಡಳಿತವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕು" ಎಂದು ಕೋರಿದ್ದರು. ಸದರಿ ಸರದಾರರುಗಳ ಆಹ್ವಾನದ ಮೇರೆಗೆ ಖಾನೆ ಆಝುಮ್ ಹಾಂಸಿಯಿಂದ ಹೊರಟ ಮತ್ತು ಅತ್ತ ಈ ಎಲ್ಲಾ ಸರದಾರರು ಮತ್ತು ಗಣ್ಯರು

ಅವನನ್ನು ಭೇಟಿಯಾಗಲು ತಮ್ಮ ತಮ್ಮ ಜಹಗೀರ್‌ನಿಂದ ಹೊರಟು ಕೊಹರಾಮ್‌ನ ಸಮೀಪದಲ್ಲಿ ಸೇರಿಕೊಂಡರು. ಇಮಾದುದ್ದೀನನಿಗೆ ಈ ವಿಷಯವು ತಿಳಿದುಬಂದಿದ್ದು ಅವನು ಕೂಡಲೇ ನಾಸಿರುದ್ದೀನನಿಗೆ ತಿಳಿಸಿದ. ಮತ್ತು ಅವನು ಆ ಸರದಾರರೊಡನೆ ಯುದ್ಧ ಮಾಡಲು ಹೊರಟ. ನಾಸಿರುದ್ದೀನನು ಹಾಂಸಿಯ ಬಳಿ ತಲುಪಿದಾಗ ಖಾನೆ ಆಝುಮ್ ಮತ್ತು ಇತರೆ ಸರದಾರರು ಸೇರಿ ಕೆಳಕಂಡಂತೆ ಸಂದೇಶವನ್ನು ಕಳುಹಿಸಿದರು. "ನಾವೆಲ್ಲಾ ಸರದಾರರುಗಳು ಕೂಡ ತಮ್ಮ ನಂಬಿಗಸ್ತ ಸೇವಕರು ಮತ್ತು ತಮ್ಮ ಪರಿವಾರದವರಾಗಿದ್ದೇವೆ. ತಮ್ಮೊಡನೆ ಇಮಾದುದ್ದೀನ್ ಇಲ್ಲದೆ ಇದ್ದಲ್ಲಿ ನಾವೆಲ್ಲರೂ ತಮ್ಮ ಕಾಲಿಗೆ ನಮಸ್ಕಾರ ಮಾಡುವ ಸಲುವಾಗಿ ಮತ್ತು ತಮಗೆ ಗೌರವ ಸಲ್ಲಿಸುವ ಸಲುವಾಗಿ ತಮ್ಮ ಸನ್ನಿಧಿಯಲ್ಲಿ ಹಾಜರಾಗುತ್ತೇವೆ. ನಾಸಿರುದ್ದೀನನು ತತ್‌ಕ್ಷಣವೇ ಇಮಾದುದ್ದೀನ್ ರೇಹಾನಿಯನ್ನು ರಾಜ್ಯದ ವಕೀಲನ ಸ್ಥಾನದಿಂದ ಕಿತ್ತು ಹಾಕಿ ಬದಾಯೂನ್‌ನ ಸುಬೇದಾರನನ್ನಾಗಿ ಮಾಡಿ ಅವನನ್ನು ರವಾನೆ ಮಾಡಿದ. ತದ ನಂತರ ಎಲ್ಲಾ ಸರದಾರರು ಕೂಡ ನಾಸಿರುದ್ದೀನನ ಸಮಕ್ಷಮದಲ್ಲಿ ಹಾಜರಾಗಿ ರಾಜನ ಕೃಪಕಟಾಕ್ಷಕ್ಕೆ ಒಳಗಾದರು.

ಮುಲ್ಕ್ ಜಲಾಲುದ್ದೀನ್ ಖಾನಿಯು ಬಾದಶಹನ ತುರ್ಕಿ ಅನುಯಾಯಿಯಾಗಿದ್ದು ಅವನನ್ನು ಲಾಹೋರ್‌ನ ಸಾಮಂತನಾಗಿ ನೇಮಕ ಮಾಡಲಾಯಿತು. ಮತ್ತು ಶೇರ್‌ಖಾನ್‌ಗೆ ಎಂದಿನಂತೆ ದೇಪಾಲ್‌ಪುರ, ಮುಲ್ತಾನ್, ಭಟಿಂಡ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಒಡೆಯನನ್ನಾಗಿ ನೇಮಕ ಮಾಡಲಾಯಿತು. ನಾಸಿರುದ್ದೀನನು ವಿಜಯಿಯಾಗಿ ದೆಹಲಿಗೆ ಮರಳಿದ. (ಖಾನೆ ಆಝುಮ್ ಕೂಡ ಅವನ ಜೊತೆ ಬಂದ) ಖಾನೆ ಆಜಮ್‌ನ ದೆಹಲಿಯ ಪುನರಾಗಮನದಿಂದ ದೆಹಲಿಯ ಜನತೆ ಅಪಾರವಾಗಿ ಸಂತೋಷ ಪಟ್ಟರು.

ವಿದ್ರೋಹಿ ಸರದಾರರ ನಿಗ್ರಹ:

ಹಿಜರಿ ಶಕೆ ೬೫೩ರಲ್ಲಿ ನಾಸಿರುದ್ದೀನನಿಗೆ ಆತನ ತಾಯಿಯಾದ ಮಲ್ಲಿಕಾ ಜಹಾನ್‌ಳೊಂದಿಗೆ ವಿರಸ ಮೂಡಿತು. ಆಕೆಯು ಖತಲಕ್ ಖಾನ್‌ನೊಂದಿಗೆ ವಿವಾಹವಾಗಿದ್ದಳು. ಅವನು ಖತಲಕ್‌ಖಾನ್‌ನನ್ನು ಅವಧ್‌ನ ಜಹಗೀರುದಾರನನ್ನಾಗಿ ಮಾಡಿ ದೆಹಲಿಯಿಂದ ಹೊರಗೆ ಕಳಿಸಿದ. ಸ್ವಲ್ಪ ದಿನಗಳ ನಂತರ ಖತಲಕ್‌ಖಾನ್‌ನನ್ನು ಬೆಹರಾಯಿಚ್‌ನ ಸಾಮಂತನನ್ನಾಗಿ ನೇಮಕ ಮಾಡಲಾಯಿತು. ಹುದ್ದೆಯ ಈ ಬದಲಾವಣೆಯಿಂದ ನೊಂದ ಖತಲಕ್‌ಖಾನನು ಬಂಡಾಯವನ್ನು ಹೂಡಿದ. ಈ ವಿಷಯದಲ್ಲಿ ಇತರೆ ಕೆಲವು ಸರದಾರರಾದ ಇಮಾದುದ್ದೀನ್ ರೇಹಾನಿ ಮತ್ತು ಮುಲ್ಕ್ ಐಜುದ್ದೀನ್ ಕಷ್ಲಿಖಾನ್ ಮುಂತಾದವರು ಅವನಿಗೆ ಸಹಕಾರವನ್ನು ನೀಡಿದರು. ಹೀಗಾಗಿ ಖತಲಕ್‌ಖಾನನ ನಿಗ್ರಹಕ್ಕಾಗಿ ಖಾನೆ ಆಝುಮ್‌ನನ್ನು ಮತ್ತು ಇಮಾದುದ್ದೀನ್ ರೇಹಾನಿಯನ್ನು ದಮನ ಮಾಡಲು ಮುಲ್ಕ್ ತಾಜುದ್ದೀನ್ ತುರ್ಕ್‌ನನ್ನು ನಾಸಿರುದ್ದೀನ್

ಕಳುಹಿಸಿದ. ಯುದ್ಧದಲ್ಲಿ ಇಮಾದುದ್ದೀನ್ ಸೋತು ಸೆರೆಸಿಕ್ಕ ಮತ್ತು ನಂತರ ಅವನನ್ನು ಕೊಲೆ ಮಾಡಲಾಯಿತು. ಹಾಗೂ ಖಾನೆ ಆಝುಮ್‌ನ ವಿರುದ್ದ ಸೆಣಸಲಾಗದೆ ಖತಲಕ್‌ಖಾನನು ಯುದ್ಧರಂಗದಿಂದ ಪರಾರಿಯಾದ ಮತ್ತು ಜೈತಪುರದಲ್ಲಿ ರಕ್ಷಣೆಯನ್ನು ಪಡೆದ. ಅವನ ಒಡೆತನದ ರಾಜ್ಯವನ್ನು ನಾಶ ಮಾಡಿ ಖಾನೆ ಆಝುಮ್ ಮರಳಿದ.

ಕಶ್ಲಿಖಾನ್ ಮತ್ತು ಖತಲಗ್‌ಖಾನನ ಚಟುವಟಿಕೆಗಳು:

ಹಿಜರಿ ಶಕೆ ೬೫೫ರಲ್ಲಿ ಜೈತಪುರದ ರಾಜನಾದ ರಾಜ ದೇಬಾಲನು ಖತಲಗ್‌ಖಾನನಿಗೆ ನೆರವು ನೀಡಿದ. ಅವನ ನೆರವಿನಿಂದ ಖತಲಗ್‌ಖಾನನು ಒಂದು ಬಲಿಷ್ಠ ಸೈನ್ಯವನ್ನು ಸಿದ್ಧಗೊಳಿಸಿ ಸಿಂಧ್‌ನ ಒಡೆಯನಾದ ಕಶ್ಲಿಖಾನನ ಬಳಿ ಹೋದ. ಅವರಿಬ್ಬರು ಪರಸ್ಪರ ಒಟ್ಟುಗೂಡಿ ಕೊಹಾರಾಮ್ ಮತ್ತು ಸಮಾನಾ ಪ್ರಾಂತ್ಯಗಳಲ್ಲಿ ತಲುಪಿದರು ಮತ್ತು ದೇಶದ ಶಾಂತಿ ಮತ್ತು ಸುರಕ್ಷತೆಯ ವಿಷಯದಲ್ಲಿ ಹಸ್ತಕ್ಷೇಪವನ್ನು ಮಾಡಲಾರಂಭಿಸಿದರು. ಅವರನ್ನು ಎದುರಿಸಲು ನಾಸೀರುದ್ದೀನನು ಒಂದು ಬಲಾಢ್ಯ ಸೇನೆಯೊಂದಿಗೆ ಐಜುದ್ದೀನನನ್ನು ಹಾಜಿಬ್‌ಗೆ ಕಳಿಸಿದ. ಉಭಯ ಪಕ್ಷಕಾರರ ಸೈನ್ಯಗಳು ಮುಖಾಮುಖಿಯಾದಾಗ ದೆಹಲಿಯಿಂದ ನಗರದ ಗಣ್ಯ ವ್ಯಕ್ತಿಗಳಾದ ಹಜರತ್ ಷೇಕುಲ್ ಇಸ್ಲಾಮ್ ಖುತ್ಬುದ್ದೀನ್ ಮತ್ತು ಖಾಜಿ ಶಂಸುದ್ದೀನ್ ಬೆಹರಾಯಿಚಿ ಮೊದಲಾದವರು ಖತಲಗ್‌ಖಾನನಿಗೆ ಗೌಪ್ಯವಾಗಿ ಪತ್ರವನ್ನು ಬರೆದರು ಮತ್ತು ದೆಹಲಿ ತಲುಪಿ ನಗರವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ಆಮಂತ್ರಿಸಿದರು. ಅಲಗ್‌ಖಾನ್‌ಗೆ ಈ ಸರದಾರರ ಕುತಂತ್ರದ ಸುಳಿವು ಸಿಕ್ಕಿತು ಹಾಗೂ ಅವನು ಈ ಸಂಚಿನ ವಿಷಯವನ್ನು ಬಾದಶಹನ ಗಮನಕ್ಕೆ ತಂದ. ನಾಸಿರುದ್ದೀನನು ತತ್‌ಕ್ಷಣವೇ ತಮ್ಮ ತಮ್ಮ ರಾಜ್ಯಕ್ಕೆ ಮರಳಬೇಕೆಂದು ಆ ಸರದಾರರಿಗೆ ಆಜ್ಞೆ ಮಾಡಿದ. ನಾಸೀರುದ್ದೀನನು ಅವರೆಲ್ಲರನ್ನು ಸೆರೆಮನೆಗೆ ತಳ್ಳಿದ ಎಂಬ ಐತಿಹ್ಯ ಕೂಡ ಇದೆ. ಖತಲಕ್‌ಖಾನ್ ಮತ್ತು ಕಶ್ಲಿಖಾನ್‌ಗೆ ಮೇಲ್ಕಂಡ ಯಾವ ಮಾಹಿತಿಯು ದೊರಕಲಿಲ್ಲ ಮತ್ತು ಅವರಿಗೆ ಮೇಲ್ಕಂಡ ಸಂಗತಿಗಳ ಯಾವ ಅರಿವೂ ಇಲ್ಲದೆ ದೆಹಲಿಯತ್ತ ಹೊರಟರು ಹಾಗೂ ಶರವೇಗದಲ್ಲಿ ಘಟಿಸಿದ ಘಟನೆಗಳ ಕಿಂಚಿತ್ತೂ ಅರಿವಿಲ್ಲದೆ ಕೇವಲ ಎರಡೇ ದಿನಗಳಲ್ಲಿ ಸಮಾನಾದಿಂದ ದೆಹಲಿಯನ್ನು ತಲುಪಿದರು. ದೆಹಲಿಯಲ್ಲಿ ತಮ್ಮ ಬೆಂಬಲಿಗರು ಮತ್ತು ಹಿತಕಾಂಕ್ಷಿಗಳು ಯಾರೂ ಇಲ್ಲವೆಂಬುದು ತಿಳಿಯುತ್ತಿದ್ದಂತೆಯೇ ಅವರ ಸ್ಥೈರ್ಯ ಕುಸಿಯಿತು. ಕಶ್ಲಿಖಾನ್‌ನು ಸಿಂಧ್‌ನ ಮಾರ್ಗದಿಂದ ಪಲಾಯನ ಮಾಡಿದ ಹಾಗೂ ಖಾನೆ ಆಝುಮ್‌ನ ಶಿಫಾರಸ್ಸಿನ ಮೇರೆಗೆ ಪುನಃ ತನ್ನ ಜಹಗೀರನ್ನು ಮರಳಿ ಪಡೆದ. ಆದರೆ ಖತಲಕ್‌ಖಾನನ ಬಗ್ಗೆ ಯಾವ ಮಾಹಿತಿಯು ದೊರಕಲಿಲ್ಲ.

ಮೊಗಲರ ಆಕ್ರಮಣ:

ಹಿಜರಿ ಶಕೆ ೬೫೫ರ ಕೊನೆಯ ಭಾಗದಲ್ಲಿ ಮೊಘಲರ ಸೈನ್ಯವು ಅಛ್ ಮತ್ತು

ಮುಲ್ತಾನಿನ ಭಾಗದಲ್ಲಿ ಆಕ್ರಮಣ ಮಾಡಿತು. ಸದರಿ ಆಕ್ರಮಣದ ಅಧ್ಯಾಯವನ್ನು ಕೊನೆಗೊಳಿಸಲು ಕೆಂಪು ಡೇರೆಯನ್ನು ಹೊರ ತರಲು ಆದೇಶ ಮಾಡಲಾಯಿತು. ನಾಲ್ಕು ತಿಂಗಳ ನಂತರ ಸೇನೆಯ ಜಮಾವಣೆಯಾದ ನಂತರ ಬಾದಶಹನು ಹಂತ ಹಂತವಾಗಿ ಪ್ರಯಾಣ ಬೆಳೆಸುತ್ತಾ ಮುಲ್ತಾನ್ ತಲುಪಿದ. (ಅವನು ತಲುಪುವುದಕ್ಕೆ ಮುಂಚಿತವಾಗಿಯೇ) ಮೊಘಲರ ಸೈನ್ಯವು ಯುದ್ಧ ಮಾಡದೆ ವಾಪಸ್ಸು ಹೊರಟು ಹೋಯಿತು. ಹೀಗಾಗಿ ಮರಳಿದ ಶೇರ್‌ಖಾನ್‌ನನ್ನು ನಾಸೀರುದ್ದೀನನು ಪಂಜಾಬ್‌ನ ಆಡಳಿತಗಾರನನ್ನಾಗಿ ನೇಮಿಸಿದ ಮತ್ತು ಲಖ್ನೋತಿಯ ಆಳ್ವಿಕೆಯ ಅಧಿಕಾರವನ್ನು ಜಲಾಲುದ್ದೀನ್ ಖಾನಿಯ ವಶಕ್ಕೆ ನೀಡಿದ. ಹಿಜರಿ ಶಕೆ ೬೫೬ರಲ್ಲಿ ಬಾದಶಹನು ಕಥಾಮಾನ್‌ಪುರದ ಪ್ರಯಾಣವನ್ನು ಬೆಳೆಸಿದ. ಅರ್ಸಲಾನ್ ಖಾನ್ ಮತ್ತು ಖಲೀಚ್‌ಖಾನನು ಆ ಪ್ರದೇಶದಲ್ಲಿ ವಿದ್ರೋಹದ ಚಟುವಟಿಕೆಗಳನ್ನು ನಡೆಸುತ್ತಿದ್ದರು ಮತ್ತು ರಾಜಾಜ್ಞೆಯನ್ನು ಧಿಕ್ಕರಿಸಿ, ನಾಸೀರುದ್ದೀನನ ಮುಲ್ತಾನಿನ ಪ್ರಯಾಣದಲ್ಲಿ ಭಾಗವಹಿಸಿರಲಿಲ್ಲ. ಈ ಬಾರಿ ಅವರು (ತಮ್ಮ ಅಗೌರವಯುತ ನಡವಳಿಕೆಯನ್ನು ತೊರೆದು) ಕಾಯಿದೆ ರೀತ್ಯಾ ಪ್ರಮಾಣ ವಚನ ಸ್ವೀಕರಿಸಿ ಬಾದಶಹನ ಸೇವೆಯಲ್ಲಿ ಹಾಜರಾದರು. ಅರ್ಸಲಾನ್ ಖಾನ್‌ಗೆ ಲಖ್ನೋತಿ ಮತ್ತು ಖಲೀಚ್‌ಖಾನ್‌ಗೆ ಕೋಹೆ ಪಾಯದ ಪ್ರಾಂತ್ಯಗಳ ಅಧಿಕಾರವನ್ನು ನೀಡಲಾಯಿತು. ಹಿಜರಿ ಶಕೆ ೬೫೭ರಲ್ಲಿ ಖಾನೆ ಆಜಮ್‌ನ ಸಹೋದರನಾದ ಕಷ್ಲಿಖಾನ್‌ಗೆ ಬಯಾನ, ಕೋಲ್, ಜಾಲ್‌ಸೇರ್ ಮತ್ತು ಗ್ವಾಲಿಯರ್‌ನ ಆಡಳಿತಾಧಿಕಾರವನ್ನು ನೀಡಲಾಯಿತು. ಆ ವರ್ಷದಲ್ಲಿ ಲಖ್ನೋತಿಯಿಂದ ಎರಡು ಸರಪಳಿ ಹಾಕಿದ ಆನೆಗಳು ಮತ್ತು ಅಗಣಿತ ಧನಕನಕ ಹಾಗೂ ಬಟ್ಟೆಗಳು ಬಾದಶಹನಿಗೆ ಬಳುವಳಿಯಾಗಿ ಬಂದವು. ಮಲಿಕ್ ಐಜುದ್ದೀನ್ ಕಷ್ಲಿಖಾನನು ಆ ವರ್ಷದಲ್ಲಿ ಮರಣ ಹೊಂದಿದನು.

ಕೋಹೆಪಾಯ, ರಣಥಂಬೂರ್ ಮತ್ತು ಸವಾಲಿಕ್ ಮೇಲೆ ಸೈನ್ಯದ ಆಕ್ರಮಣ:

ಖಾನೆ ಅಜಮ್‌ನು ಬಾದಶಹನ ಆಜ್ಞೆಯ ಮೇರೆಗೆ ಹಿಜರಿ ಶಕೆ ೬೫೮ ರಲ್ಲಿ ಕೋಹೆಪಾಯ, ರಣಥಂಬೂರ್ ಮತ್ತು ಸವಾಲಿಕ್‌ನ ಮೇಲೆ ಆಕ್ರಮಣ ಮಾಡಿದ. ಮೇವಾಡ ಮತ್ತು ಸವಾಲಿಕ್‌ನ ರಾಜನು ಅಸಂಖ್ಯ ಸೈನ್ಯದ ಜಮಾವಣೆಯನ್ನು ಮಾಡಿದ್ದು ದುರ್ಗಮವಾದ ಹಾದಿಯಲ್ಲಿ ಬಾದಶಹನ ಸೇನೆಗೆ ಮುಖಾಮುಖಿಯಾದ. ಅಲಘ್‌ಖಾನನು ಆ ವಿದ್ರೋಹಿ ಸೈನ್ಯವನ್ನು ಧೂಳಿಪಟ ಮಾಡಿದ ಹಾಗೂ ಆವೇಶಭರಿತನಾಗಿ ಹೋರಾಡಿದ. ಮುಸ್ಲಿಮೇತರರು ಅಡಗಿದ್ದ ಹಳ್ಳಕೊಳ್ಳಗಳನ್ನು ಕೂಡ ಅವನು ಜಾಲಾಡಿದ. ಖಾನೆ ಆಜಮ್ ಸುಮಾರು ಮೂರ್‍ನಾಲ್ಕು ತಿಂಗಳವರೆಗೂ ಆ ಮುಸ್ಲಿಮೇತರರೊಡನೆ ಹೋರಾಡಿದ. ಆದರೆ ಶತ್ರುಗಳ ಎಲ್ಲಾ "ಶರಣಾರ್ಥಿ ಸ್ಥಳ"ಗಳನ್ನು ಜಾಲಾಡಿ ಅವುಗಳ ಮೇಲೆ ವಿಜಯವನ್ನು ಸಾಧಿಸಲಾಗಲಿಲ್ಲ. ವ್ಯಕ್ತಿಯು ಶತ್ರುವನ್ನು ಜೀವಂತವಾಗಿ ಸೆರೆ ಹಿಡಿಯುವನೋ ಅವನಿಗೆ ಎರಡು ತಂಗ (ಈ

ಕಾಲದ ಒಂದು ನಾಣ್ಯ)ದ ಇನಾಮನ್ನು ನೀಡುವುದಾಗಿ ಖಾನೆ ಆಜಮ್ ಅಥವಾ ಯಾರಾದರೂ ಶತ್ರುವಿನ ತಲೆಯನ್ನು ತಂದಲ್ಲಿ ಅವನಿಗೆ ಒಂದು ತಂಗ ನೀಡಲಾಗುವುದು ಎಂದು ತನ್ನ ಸೈನ್ಯದಲ್ಲಿ ಪ್ರಚಾರ ಪಡಿಸಿದ. ಈ ಆಜ್ಞೆಯನ್ನು ಕೇಳಿದ ಕೂಡಲೇ ಸೈನ್ಯದಲ್ಲಿ ಹೊಸ ಚೈತನ್ಯವು ಮೂಡಿ ಬಂದಿತು. ಪ್ರತಿ ದಿನ ಸುಮಾರು ಮೂನ್ನೂರು ನಾನೂರು ಸೈನಿಕರು ಶತ್ರುವನ್ನು ಜೀವಂತ ಅಥವಾ ಮೃತ ರೂಪದಲ್ಲಿ ಹಿಡಿದು ತರುತ್ತಿದ್ದರು. ಹಾಗೂ ಖಾನೆ ಆಜಮ್‌ನಿಂದ ಇನಾಮನ್ನು ಪಡೆಯುತ್ತಿದ್ದರು ಖಾನೆ ಆಜಮ್‌ನ ಈ ಕಾರ್ಯತಂತ್ರದಿಂದ ಶತ್ರುಗಳು ಅಪಾರ ಸಂಕಷ್ಟಕ್ಕೆ ಸಿಲುಕಿದರು. ಕೊನೆಗೂ ಅವರು ಹಳ್ಳಕೊಳ್ಳಗಳಿಂದ ಹೊರಬಂದರು ಮತ್ತು ಯುದ್ಧರಂಗದಲ್ಲಿ ಮುಸ್ಲಿಮರಿಗೆ ಎದುರು ಬದುರಾದರು. ಖಾನೆ ಆಝಮ್ ಕೂಡ ಆ ಮುಸ್ಲಿಮೇತರರ ಎದುರಿಗೆ ತನ್ನ ಸೈನ್ಯದ ವ್ಯೂಹ ರಚನೆ ಮಾಡಿದ ಹಾಗೂ ಸೈನ್ಯದ ಸ್ಥೈರ್ಯವನ್ನು ದೃಢಪಡಿಸಿ ಯುದ್ಧದಲ್ಲಿ ಮಗ್ನನಾದ. ಖಾನೆ ಆಝಮ್‌ನು ಬೆಳಗ್ಗಿನಿಂದ ಸಂಜೆಯವರೆಗೂ ಯುದ್ಧ ನಿರತನಾಗಿದ್ದ ಹಾಗೂ ಅನೇಕ ಸರದಾರರು ಈ ವ್ಯೂಹ ರಚನೆಯಲ್ಲಿ ನೆರವಾದರು. ಆದರೆ ಖಾನೆ ಆಝಮ್‌ಗೆ ವಿಜಯಲಕ್ಷ್ಮಿ ಒಲಿದಳು ಮತ್ತು ಅವನು ಶತ್ರು ಸೈನ್ಯದ ಇನ್ನೂರೈವತ್ತು (೨೫೦) ಮಂದಿ ಸರದಾರರು ಮತ್ತು ನಾಯಕರನ್ನು ಸೆರೆಹಿಡಿದ. ಖಾನೆ ಆಝಮ್‌ನು ರಣಥಂಬೂರಿನ ಕೋಟೆಯನ್ನು ಶತ್ರು ಸೈನ್ಯದ ಮುತ್ತಿಗೆಯಿಂದ ಸ್ವತಂತ್ರಗೊಳಿಸಿದ ಮತ್ತು ಅತ್ಯಂತ ಆಡಂಬರದಿಂದ ದೆಹಲಿ ಪ್ರವೇಶಿಸಿದ ಮತ್ತು ಸರಪಳಿಯಿಂದ ಆವೃತರಾದ ಸೆರೆಯಾಳುಗಳನ್ನು ಬಾದಶಹನ ಸಮ್ಮುಖದಲ್ಲಿ ಹಾಜರು ಪಡಿಸಿದ. ನಾಸೀರುದ್ದೀನ್ ಅವರೆಲ್ಲರ ಶಿರಚ್ಛೇದನಕ್ಕೆ ಆಜ್ಞೆ ಮಾಡಿದ ಹಾಗೂ ದೆಹಲಿಯ ಬಜಾರಿನಲ್ಲಿ ವಿವಿಧ ರೀತಿಯಲ್ಲಿ ಅವರ ಕೊಲೆ ಮಾಡಲಾಯಿತು.

ಹಲಾಕು ಖಾನನ ರಾಯಭಾರಿಯ ಆಗಮನ:

೬೫೮ ನೇ ಇಸವಿಯ ರಬಿಯುಲ್ ಅವಲ್ ತಿಂಗಳಿನಲ್ಲಿ ಹಿಲಾಕುಖಾನನ ಒಬ್ಬ ದೂತ ದೆಹಲಿಗೆ ಬಂದ. ಆಗ ತನ್ನ ಸೈನ್ಯದ ಶಕ್ತಿ ಸಾಮರ್ಥ್ಯವನ್ನು ಅವನಿಗೆ ತಿಳಿಸುವ ಉದ್ದೇಶದಿಂದ ಖಾನೆ ಆಜಮ್‌ನು ಐವತ್ತು ಸಾವಿರ ಶಸ್ತ್ರಸಜ್ಜಿತ ಅರಬ್ಬಿಗಳು, ಇರಾನಿ, ತುರ್ಕಿ, ಖಿಲ್ಜಿ ಮತ್ತು ಅಫಘಾನಿ ಸವಾರರು ಹಾಗೂ ಎರಡು ಲಕ್ಷ ಕಾಲಾಳುಗಳು, ಯುದ್ಧ ಸಾಮಗ್ರಿಯನ್ನು ಹೊತ್ತ ಎರಡು ಸಾವಿರ ಆನೆಗಳು ಮತ್ತು ಮೂರು ಸಾವಿರ ಮದ್ದು ಗುಂಡುಗಳ ಗಾಡಿಗಳೊಂದಿಗೆ ಅವನು ನಗರದಿಂದ ಹೊರ ತಲುಪಿ ಅವನಿಗೆ ಸ್ವಾಗತವನ್ನು ಕೋರಿದ. ರಣಕಹಳೆಗಳ ಸದ್ದು ನಗಾರಿಗಳ ಭೋರ್ಗರೆತ, ಆನೆಗಳ ಘರ್ಜನೆ, ಕುದುರೆಗಳ ಹೇಷಾರವ ಮತ್ತು ಸೈನ್ಯದ ಕಡಕ್ ಶಿಸ್ತಿನಿಂದ ಇಡೀ ಮೈದಾನವು ಪ್ರತಿಧ್ವನಿಸಿತು. ತನ್ನ ಸೈನ್ಯವ್ಯೂಹ ರಚನೆಯನ್ನು ಮಾಡಿದ ನಂತರ ಖಾನೆ ಆಝಮ್‌ನು ಸ್ವಲ್ಪ ಮುಂದೆ ಹೋಗಿ ಹಲಾಕುಖಾನನ

ದೂತನನ್ನು ತನ್ನೊಡನೆ ಕರೆದುಕೊಂಡು ಅವನನ್ನು ಸಾಲು ಸಾಲು ಕುದುರೆಗಳು, ಆನೆಗಳು ಹಾಗೂ ಸೈನ್ಯದ ವೀರರಿಂದ ಕೂಡಿದ ತನ್ನ ಅದ್ಭುತ ಸೈನ್ಯದ ಪ್ರದರ್ಶನವನ್ನು ಮಾಡುತ್ತ ಆ ದೂತನನ್ನು ಅರಮನೆಯ ಬಳಿ ಸಭಾಂಗಣದಲ್ಲಿ ನಾಸೀರುದ್ದೀನನ ಮುಂದೆ ಹಾಜರು ಪಡಿಸಿದ. ಆ ದಿನ ಬಾದಶಾಹನ ಮಹಲನ್ನು ಚಿನ್ನ ಮತ್ತು ಬೆಳ್ಳಿಯ ಸಾಮಾನುಗಳಿಂದ ಸಿಂಗರಿಸಲಾಗಿತ್ತು. ಗಣ್ಯ ವ್ಯಕ್ತಿಗಳು ರಾಜ್ಯದ ಸರದಾರರು ಧಾರ್ಮಿಕ ಮುಖಂಡರು ಮತ್ತು ಸೂಫಿಗಳು ಹಾಗೂ ಚೆಂಗೇಸ್‌ಖಾನನ ಕ್ರೌರ್ಯದಿಂದ ನಲುಗಿ ತಮ್ಮ ರಾಜ್ಯಗಳನ್ನು ತೊರೆದು ಹಿಂದೂಸ್ಥಾನದಲ್ಲಿ ಶರಣಾರ್ಥಿಗಳಾದ ಇಪ್ಪತ್ತೈದು ಮಂದಿ ರಾಯೆ ವಂಶದ ರಾಜಕುವರರು ಅತ್ಯಂತ ಗೌರವದಿಂದ ಕೂಡಿ ಸಿಂಹಾಸನದ ಎದುರುಗಡೆ ಸಾಲುಗಳಲ್ಲಿ ನಿಂತಿದ್ದರು.

ನಾಸಿರುದ್ದೀನನ ನಡತೆ:

ನಿಜಾಮುದ್ದೀನ್ ಅಹಮದ್‌ರವರು ತಮ್ಮ ಚರಿತ್ರೆಯ ಗ್ರಂಥದಲ್ಲಿ ಬರೆದಿರುವ ಪ್ರಕಾರ ನಾಸಿರುದ್ದೀನನು ಪ್ರತಿವರ್ಷ ತನ್ನ ಹಸ್ತಾಕ್ಷರದಲ್ಲಿ ಕುರಾನಿನ ಎರಡು ಪ್ರತಿಗಳನ್ನು ಬರೆಯುತ್ತಿದ್ದ. ಅದರ ಮೂಲಕ ಬಂದ ಹಣದಿಂದ ಆತ ತನ್ನ ಖರ್ಚು ವೆಚ್ಚವನ್ನು ನಿರ್ವಹಣೆ ಮಾಡುತ್ತಿದ್ದ. ಒಂದು ಸಾರಿ ಒಬ್ಬ ಸರದಾರನು ಬಾದಶಹನ ಹಸ್ತಾಕ್ಷರದ ಕುರಾನನ್ನು ಎಂದಿಗಿಂತ ಹೆಚ್ಚಿನ ಬೆಲೆಗೆ ಕೊಂಡುಕೊಂಡ. ಬಾದಶಹನಿಗೆ ಈ ಮಾತು ಅಪ್ರಿಯವಾಯಿತು. ಅದ್ದರಿಂದ ಮುಂದಿನ ಸಾಲಿನಿಂದ ತನ್ನ ಹಸ್ತಾಕ್ಷರ ವಿರಚಿತ ಕುರಾನನ್ನು ಗೌಪ್ಯವಾಗಿ ನಿಗದಿತ ಮತ್ತು ಸೂಕ್ತ ಮಾರುಕಟ್ಟೆಯ ಬೆಲೆಗೆ ಮಾರಾಟ ಮಾಡಬೇಕೆಂದು ತಾಕೀತು ಮಾಡಿದ. ನಾಸಿರುದ್ದೀನನ ಮನೆಯಲ್ಲಿ ಅವನ ಪತ್ನಿಯನ್ನು ಹೊರತು ಪಡಿಸಿ ಸಹಾಯಕ್ಕಾಗಿ ಬೇರೆ ಯಾವ ದಾಸಿ ಇರಲಿಲ್ಲ. ಆಕೆಯೇ ಖುದ್ದು ಮನೆಕೆಲಸವನ್ನು ಮಾಡುತ್ತಿದ್ದಳು. ಚಕ್ರವರ್ತಿನಿಯಾಗಿದ್ದು ಕೂಡ ಸ್ವತಃ ತಾನೇ ಕೈಯಾರೆ ಅಡುಗೆ ಮಾಡುತ್ತಿದ್ದು ಮನೆಯ ಇತರೇ ಕೆಲಸಗಳನ್ನು ಕೂಡ ಮಾಡುತ್ತಿದ್ದಳು. ಒಂದು ದಿನ ಚಕ್ರವರ್ತಿನಿಯು ನಾಸಿರುದ್ದೀನನೊಂದಿಗೆ ನುಡಿದಳು "ರೊಟ್ಟಿಯನ್ನು ನಿರಂತರವಾಗಿ ತಟ್ಟುತ್ತ ನನ್ನ ಕೈಯಲ್ಲಿ ಬೊಬ್ಬೆಗಳಾಗಿವೆ ಈ ಕೆಲಸಕ್ಕೋಸ್ಕರ ಒಬ್ಬ ದಾಸಿಯನ್ನು ಖರೀದಿಗೆ ಪಡೆದರೆ ಅನುಕೂಲವಾಗುತ್ತದೆ". ನಾಸಿರುದ್ದೀನನು ಆಕೆಗೆ ಹೀಗೆಂದು ಉತ್ತರಿಸಿದ, "ಸರ್ಕಾರಿ ಖಜಾನೆಯ ಮೇಲೆ ಜನತೆಗೆ ಮಾತ್ರ ಹಕ್ಕಿದೆ ನಾನು ನನ್ನ ವೈಯಕ್ತಿಕ ಸುಖ ಮತ್ತು ಸಂತೋಷಕ್ಕಾಗಿ ಸರ್ಕಾರಿ ಬೊಕ್ಕಸದಿಂದ ದಾಸಿಯನ್ನು ಖರೀದಿಸುವ ಹಕ್ಕು ನನಗೆ ಸುತಾರಾಮ್ ಇಲ್ಲ. ನಿನಗೆ ಪ್ರಾಪಂಚಿಕ ಕಷ್ಟಗಳನ್ನು ಸಹಿಸಬೇಕಾಗುತ್ತದೆ ಏಕೆಂದರೆ ನಿನಗೆ ಅಲ್ಲಾಹನು ಇದರ ಪ್ರತಿಫಲವನ್ನು ಮರಣ ನಂತರ ಕರುಣಿಸುವನು".

ನಾಸೀರುದ್ದೀನನ ಗುಣ ನಡತೆ:

ಒಂದು ದಿನ ಒಬ್ಬ ಫಕೀರನು ಬಾದಶಹನ ಸಮ್ಮುಖದಲ್ಲಿ ಹಾಜರಾದ ಆ

ಸಂದರ್ಭದಲ್ಲಿ ಬಾದಶಹನು ಕುರಾನಿನ ಹಸ್ತಪ್ರತಿಯ ಬರವಣಿಗೆಯಲ್ಲಿ ತೊಡಗಿದ್ದ. ಆ ಫಕೀರನ ದೃಷ್ಟಿಯು "ಫಿಯಾ ಫಿಯಾ" ಎಂದು ಎರಡು ಸಾರಿ ಬರೆದಿದ್ದ ಕುರಾನಿನ ಹಾಳೆಯ ಮೇಲೆ ಬಿತ್ತು. ಫಕೀರನು ಬಾದಶಹನೊಂದಿಗೆ ನುಡಿದ ಈ ಜಾಗದಲ್ಲಿ "ಫಿಯಾ" ಎಂಬ ಶಬ್ದದ ಪುನರುಕ್ತಿಯಾಗಿದೆ ಒಂದೇ "ಫಿಯಾ" ಎಂಬ ಶಬ್ದ ಇಲ್ಲಿ ಸೂಕ್ತವಾಗಿದೆ" ಎಂದು ನುಡಿದ. ಬಾದಶಹನು ಕೂಡಲೇ ಮಸಿ ಮತ್ತು ಲೇಖನಿಯನ್ನು ತೆಗೆದುಕೊಂಡು ಒಂದು "ಫಿಯಾ" ಎಂಬ ಶಬ್ದದ ಸುತ್ತ ವೃತ್ತವನ್ನು ಎಳೆದು ಗುರುತಿಸಿದ ಹಾಗೂ ಆ ಫಕೀರನ ಬೇಡಿಕೆಯನ್ನು ಪೂರೈಸಿ ಅವನನ್ನು ಬೀಳ್ಕೊಟ್ಟ. ಆ ಫಕೀರನು ಅಲ್ಲಿಂದ ನಿರ್ಗಮಿಸಿದ ನಂತರ ಬಾದಶಹನು ಕಿರುಕತ್ತಿಯನ್ನು ತೆಗೆದುಕೊಂಡು ಒಂದು "ಫಿಯಾ" ಶಬ್ದದ ಸುತ್ತ ಸುತ್ತಿದ್ದ ವೃತ್ತದ ಗುರುತನ್ನು ತೆಗೆದು ಹಾಕಿದ. ಸದರಿ ಘಟನೆಯನ್ನು ವೀಕ್ಷಿಸುತ್ತಾ ಒಬ್ಬ ಗುಲಾಮನು ಅವನ ಬಳಿ ನಿಂತಿದ್ದ ಮತ್ತು ಅವನು ನಾಸೀರುದ್ದೀನನೊಡನೆ ಕೇಳಿದ, "ಒಂದು ಸಲ ವೃತ್ತವನ್ನು ಎಳೆದು ಇನ್ನೊಂದು ಸಲ ಅದನ್ನು ಅಳಿಸುವ ಹಿಂದಿನ ಉದ್ದೇಶವೇನು"? ಬಾದಶಹನು ನುಡಿದ, "ಫಿಯಾ ಶಬ್ದದ ಬಗ್ಗೆ ತಕರಾರು ಮಾಡಿದ ವ್ಯಕ್ತಿಯು ಒಬ್ಬ ಫಕೀರನಾಗಿದ್ದ ಮತ್ತು ತನ್ನ ಬಳಿ ತನ್ನ ಅವಶ್ಯಕತೆಯನ್ನು ಕೋರಿ ಬಂದಿದ್ದ. ನಾನು ಅವನ ತಕರಾರನ್ನು ತಿರಸ್ಕರಿಸಿದಲ್ಲಿ ಅವನು ಅವಮಾನಿತನಾಗಿ ತನ್ನ ಬೇಡಿಕೆಯನ್ನು ನನ್ನೆದುರಿಗೆ ಹೇಳದೆ ಹೊರಟು ಹೋಗುತ್ತಿದ್ದ. ಆದ್ದರಿಂದ ನಾನು ಅವನ ಉಪಸ್ಥಿತಿಯಲ್ಲಿ ಆ ಶಬ್ದದ ಸುತ್ತ ವೃತ್ತವನ್ನು ರಚಿಸಿದೆ ಮತ್ತು ಅವನು ಹೊರಟು ಹೋದ ನಂತರ ಅದನ್ನು ಅಳಿಸಿದೆ. ಪ್ರಪಂಚದಲ್ಲಿ ಹೃದಯದ ದುಃಖವನ್ನು ಅಳಿಸುವುದು ಕಷ್ಟವಾಗಿದೆ ಆದರೆ ಕಾಗದದ ಮೇಲಿನ ಗುರುತನ್ನು ಅಳಿಸುವುದು ಸುಲಭವಾಗಿದೆ.

ಆತ್ಮದ ಪಾವಿತ್ರ್ಯ :

ನಾಸೀರುದ್ದೀನ್ ಒಬ್ಬ ಸಂಗಡಿಗನ ಹೆಸರು ಮೊಹಮ್ಮದ್ ಎಂದಾಗಿತ್ತು. ಬಾದಶಹನು ಅವನನ್ನು ಯಾವಾಗಲೂ ಇದೇ ಹೆಸರಿನಿಂದ ಸಂಬೋಧಿಸುತ್ತಿದ್ದ. ಒಂದು ದಿನ ನಾಸಿರುದ್ದೀನನು ಅವನನ್ನು "ತಾಜುದ್ದೀನ್" ಎಂದು ಕರೆದ. ಆ ವ್ಯಕ್ತಿಯು ಕೂಡಲೇ ಬಾದಶಹನ ಆಜ್ಞೆಯನ್ನು ಪಾಲಿಸಿದ. ಆದರೆ ನಂತರ ಅವನು ತನ್ನ ಮನೆಗೆ ಹೋದ ಹಾಗೂ ಮೂರು ದಿನಗಳ ಕಾಲ ಬಾದಶಹನ ಸೇವೆಗೆ ಹಾಜರಾಗಲಿಲ್ಲ. ನಾಸಿರುದ್ದೀನನು ಆ ನೌಕರರನ್ನು ಕರೆದ ಮತ್ತು ಮೂರು ದಿನಗಳ ಕಾಲ ಅವನ ಗೈರು ಹಾಜರಿಗೆ ಕಾರಣಗಳನ್ನು ಕೇಳಿದ "ತಾವು ಯಾವಾಗಲು ನನ್ನನ್ನು ಮೊಹಮ್ಮದ್ ಹೆಸರಿನಿಂದ ಕರೆಯುತ್ತಿದ್ದೀರಿ ಆದರೆ ಆ ದಿನ ತಾವು ಮಾಮೂಲಿಗಿಂತ ಭಿನ್ನವಾಗಿ ನನ್ನನ್ನು ತಾಜುದ್ದೀನ್ ಎಂದು ಕರೆದಿರಿ. ಇದರಿಂದ ನಿಮ್ಮ ಹೃದಯದಲ್ಲಿ ನನ್ನ ಬಗ್ಗೆ ಏನೋ ಅಪನಂಬಿಕೆ ಮೂಡಿದೆ ಎಂದು ನನಗೆ ಅನ್ನಿಸಿತು ಆದ್ದರಿಂದ ಈ ಮೂರು ದಿನಗಳಿಂದ ನಾನು ತಮ್ಮ ಸೇವೆಗೆ ಹಾಜರಾಗಲಿಲ್ಲ

ಮತ್ತು ಈ ಮೂರು ದಿನಗಳ ಕಾಲಾವಧಿಯನ್ನು ಅತ್ಯಂತ ಸಂಕಟ ಮತ್ತು ಅಶಾಂತಿಯಿಂದ ಕಳೆದಿದ್ದೇನೆ" ಎಂದು ನುಡಿದ. ಬಾದಶಹನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳಿದ, "ದೇವರಾಣೆಯಾಗಿಯೂ ನಾನು ನಿನ್ನ ಮೇಲೆ ಯಾವುದೇ ಅಪನಂಬಿಕೆಯನ್ನು ಪಟ್ಟಿರುವುದಿಲ್ಲ ಆದರೆ ನಾನು ನಿನ್ನನ್ನು ತಾಜುದ್ದೀನ್ ಹೆಸರಿನಿಂದ ಕರೆದಾಗ ನಾನು ವಜು(ನಮಾಜ್ ಮಾಡುವುದಕ್ಕೆ ಮೊದಲು ಮುಸ್ಲಿಮರು ಕೈಕಾಲು ತೊಳೆಯುವ ವಿಧಿ) ಮಾಡಿರಲಿಲ್ಲ ಹಾಗೂ ವಜುವಿನ ಮೂಲಕ ದೇಹ ಶುದ್ಧಿ ಮಾಡದೆ ಮೊಹಮ್ಮದ್‌ರವರ ಪವಿತ್ರ ನಾಮವನ್ನು ನನ್ನ ನಾಲಿಗೆಯಿಂದ ನುಡಿಯುವುದು ಸೂಕ್ತವಲ್ಲವೆಂದು ನಾನು ಭಾವಿಸಿದೆ" ಎಂದು ನುಡಿದನು. ಹಿಜರಿ ಶಕೆ ೬೬೩ರಲ್ಲಿ ನಾಸಿರುದ್ದೀನನು ಅನಾರೋಗ್ಯ ಪೀಡಿತನಾದ ಮತ್ತು ಹಿಜರಿ ಶಕೆ ೬೬೪ರ ಜಮಾದಿ ಉಲ್ ಅವಲ್‌ನ ೧೧ ನೇ ತಾರೀಖಿನಂದು ಅವನು ದೈವಾಧೀನನಾದನು. ಅವನ ಆಡಳಿತಾವಧಿಯು ೨೨ ವರ್ಷಗಳಿಗಿಂತಲೂ ತುಸು ಹೆಚ್ಚಿನದಾಗಿದೆ.

ಗಯಾಸುದ್ದೀನ್ ಬಲ್ಬನ್:

ಗುಲಾಮೀ ಜೀವನ:

ಗಯಾಸುದ್ದೀನನು ತುರ್ಕಿಗಳ ಪ್ರತಿಷ್ಠಿತ ಖರಾಖ್ತಾಯಿ ಜನಾಂಗದ ಅಲ್ಬರಿ ಬುಡಕಟ್ಟಿನ ಕುಡಿಯಾಗಿದ್ದನು. ಅವನ ತಂದೆಯು ಹತ್ತು ಸಾವಿರ ಕುಟುಂಬಗಳ ಸರದಾರನಾಗಿದ್ದು ಆ ಬುಡಕಟ್ಟಿನ ಪ್ರಮುಖ ನಾಯಕರಲ್ಲಿ ಒಬ್ಬನಾಗಿದ್ದನು. ಮೊಘಲರು ವಿಜಯದ ಪತಾಕೆಯುನ್ನು ಹಾರಿಸುತ್ತಾ ತುರ್ಕಿಸ್ಥಾನವನ್ನು ತಲುಪಿದಾಗ (ಇತರೆಯವರಂತೆ) ಬಲ್ಬನ್‌ನನ್ನು ಕೂಡ ಒಬ್ಬ ಮೊಘಲನು ಸೆರೆ ಹಿಡಿದಿದ್ದ. ಆ ಮೊಘಲನು ಬಲ್ಬನ್ನನನ್ನು ಒಬ್ಬ ವ್ಯಾಪಾರಿಗೆ ಮಾರಾಟ ಮಾಡಿದ. ಆ ವ್ಯಾಪಾರಿಯು ಅವನನ್ನು ತನ್ನೊಡನೆ ಬಾಗ್ದಾದ್‌ಗೆ ಕರೆ ತಂದ ಮತ್ತು ಅಲ್ಲಿನ ಪ್ರಖ್ಯಾತ ಧಾರ್ಮಿಕ ಮುಖಂಡರಾದ ಖ್ವಾಜಾ ಜಮಾಲುದ್ದೀನ್ ಬಸ್ರಿಗೆ ಮಾರಾಟ ಮಾಡಿದ. ಖ್ವಾಜಾ ಜಮಾಲ್‌ಗೆ ಬಲ್ಬನ್ನನ ಹಿನ್ನೆಲೆಯ ಅರಿವಾಗಿ ಅವನು ಹಿಂದೂಸ್ಥಾನದ ಪ್ರಖ್ಯಾತ ದೊರೆಯಾದ ಬಾದಶಾಹ ಅಲ್ತಮಷ್‌ನ ಜನಾಂಗದ ವ್ಯಕ್ತಿ ಎಂಬುದು ತಿಳಿಯುತ್ತಿದಂತೆ ಬಹು ಅಮೂಲ್ಯ ಇನಾಮುಗಳ ನಿರೀಕ್ಷೆಯೊಂದಿಗೆ ಆ ವರ್ಷದಲ್ಲಿ ಬಲ್ಬನ್ನನ್ನು ಕರೆದುಕೊಂಡು ಹಿಂದೂಸ್ಥಾನಕ್ಕೆ ಪ್ರಯಾಣ ಬೆಳೆಸಿದ. ದೆಹಲಿ ತಲುಪಿದ ನಂತರ ಖ್ವಾಜ ಜಮಾಲ್‌ನು ಅಲ್ತಮಷ್‌ನ ಸಮ್ಮುಖದಲ್ಲಿ ತುರ್ಕಿ ಜನಾಂಗದ ಕೆಲವು ಗುಲಾಮರನ್ನು ಹಾಜರು ಪಡಿಸಿದ. ಬಲ್ಬನ್ ಕೂಡ ಆ ಗುಲಾಮರ ಪೈಕಿ ಒಬ್ಬನಾಗಿದ್ದ. ಅಲ್ತಮಷ್‌ನು ಎಲ್ಲಾ ಗುಲಾಮರನ್ನು ಕೂಡ ದೊಡ್ಡ ಮೊತ್ತದ ಪ್ರತಿಫಲವನ್ನು ನೀಡಿ ಖರೀದಿಸಿದ ಮತ್ತು ಖ್ವಾಜಾ ಜಮಾಲ್ ರಾಜ ಪಾರಿತೋಷಕಗಳಿಂದ ಸಂಪನ್ನನಾಗಿ ಬಾಗ್ದಾದ್‌ಗೆ ಮರಳಿದ.

ಅಲ್ತಮಷ್‌ನ ಸನ್ನಧಿಯಲ್ಲಿ ಬಲ್ಬನ್:

ಬಲ್ಬನ್ನನ ಮೋರೆಯ ಮೇಲಿನ ತೇಜಸ್ಸು ಹಾಗೂ ಅವನ ವಿವೇಕವನ್ನು ಕಂಡ ಅಲ್ತಮಷ್‌ನು ಬಲ್ಬನ್ನನನ್ನು ತನ್ನ ಖಾಸಾ ಸೇವೆಯಲ್ಲಿ ನೇಮಕ ಮಾಡಿದ. ಬಲ್ಬನ್ನಿನ ಅದೃಷ್ಟತಾರೆ ಪ್ರಕಾಶಿಸಲಾರಂಭಿಸಿತು ಮತ್ತು ಅವನು ಅಲ್ತಮಷ್‌ನ ಹೃದಯವನ್ನು ಗೆದ್ದುಕೊಂಡ. ಆ ಸಂದರ್ಭದಲ್ಲಿ ಆ ಬಾದಶಹನ ಆಸ್ಥಾನದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದ ತನ್ನ ಸಹೋದರನಾದ ಕಷೀಲ್‌ಖಾನಿನ ಗುರುತು ಕೂಡ ಅವನಿಗೆ ಹತ್ತಿತು. ತನ್ನ ಅಧಿಕಾರಸ್ಥ ಸಹೋದರನ ಗುರುತು ಪತ್ತೆಯಾದ ನಂತರ ಅಲ್ತಮಷ್‌ನ ದರಬಾರಿನಲ್ಲಿ ಬಲ್ಬನ್‌ಗೆ ಹೆಚ್ಚಿನ ಗೌರವಾದರಗಳು ದೊರಕಲಾರಂಭಿಸಿದವು. ಸುಲ್ತಾನ್ ರುಕ್ನುದ್ದೀನನ ಆಡಳಿತಾವಧಿಯಲ್ಲಿ ಬಲ್ಬನ್ನನನ್ನು ಹಿಂದೂಸ್ಥಾನದ ಎಲ್ಲಾ ತುರ್ಕಿಗಳ ಮುಖ್ಯ ಸರದಾರರನ್ನಾಗಿ ನೇಮಕ ಮಾಡಲಾಗಿದ್ದು ಪಂಜಾಬ್‌ನ ವಿದ್ರೋಹಿ ಮತ್ತು ಕಿಡಿಗೇಡಿ ಸರದಾರರ ಮುಖ್ಯಸ್ಥನಾಗಿಯೂ ನೇಮಕಗೊಂಡಿದ್ದ. ರಜಿಯಾ ಸುಲ್ತಾನಾಳ ಕಾಲದಲ್ಲಿ ತುರ್ಕರು ದೆಹಲಿಯ ಸುತ್ತಮುತ್ತಲ ಪ್ರದೇಶದಲ್ಲಿ ಪರಸ್ಪರ ಕಚ್ಚಾಟದಲ್ಲಿ ತೊಡಗಿ ಅನೇಕ ಗುಂಪುಗಳಾಗಿ ವಿಭಜನೆಗೊಂಡಿದ್ದರಿಂದ ರಾಜನ ಸೈನ್ಯವು ಅವರೆಲ್ಲರನ್ನು ಸೆರೆಮನೆಗೆ ಅಟ್ಟಿತ್ತು. ಆ ತುರ್ಕರ ಪೈಕಿ ಬಲ್ಬನ್ ಕೂಡ ಸೇರಿದ್ದ. ಕೆಲವೇ ದಿನಗಳ ನಂತರ ಬಲ್ಬನ್ನನು ಸೆರೆಮನೆಯಿಂದ ಬಿಡುಗಡೆ ಹೊಂದಿದ ಮತ್ತು ಮೀರ್‌ಶಿಕಾರ್‌ನ ಹುದ್ದೆಗೆ ನೇಮಕವಾದ.

ಬಲ್ಬನ್ನನ ಭೂತ, ಭವಿಷ್ಯ ಮತ್ತು ಅಭ್ಯುದಯ:

ಮಅಜುದ್ದೀನ್ ಬೆಹ್ರಾಂ ಶಾಹನ ಆಡಳಿತಾವಧಿಯಲ್ಲಿ ಬಲ್ಬನ್ನನು ತುಂಬಾ ಅಭಿವೃದ್ಧಿಯನ್ನು ಹೊಂದಿದ ಹಾಗೂ ಮೀರ್‌ಶಿಕಾರಿಯ ಹುದ್ದೆಯಿಂದ ಅಶ್ವಾರೋಹಿ ಸೈನ್ಯದಳದ ಮುಖ್ಯ ಸರದಾರನ ಹುದ್ದೆಗೆ ಬಡ್ತಿಯನ್ನು ಹೊಂದಿದ. ಬಲ್ಬನ್ನನ ಬದುಕಿನ ಅನೇಕ ಸ್ಥಿತ್ಯಂತರಗಳಲ್ಲಿ ಅವನ ಭವಿಷ್ಯದ ಬದುಕಿನ ಅಭ್ಯುದಯದ ಒಂದಲ್ಲ ಒಂದು ಸೂಚನೆ ಇತ್ತು. ಹೀಗಾಗಿ ಅವನ ಕಾರಾಗೃಹ ವಾಸ ಕೂಡ ಅವನ ಆರಂಭದ ದಿನಗಳ ಒಂದು ಅನುಭವವಾಗಿತ್ತು. ಇದರಿಂದ ಅಧಿಕಾರಸ್ಥನಾದವನು ಬೇರೆಯವರ ಸಂಕಷ್ಟಗಳಿಗೆ ಸ್ಪಂದಿಸುವುದು ಅಗತ್ಯ ಎಂಬ ಮೂಲಭೂತ ಪಾಠ ಅವನಿಗೆ ದೊರಕಿತು. ಮೀರ್ ಶಿಕಾರಿಯ ಮುಖ್ಯಸ್ಥ ಹುದ್ದೆಗೆ ನಿಯುಕ್ತಿಯಾಗುವುದರ ಮೂಲಕ ಅವನು ಒಂದಾನೊಂದು ದಿನ ಈ ಪ್ರಪಂಚವು ತನ್ನ ರಾಜಕೀಯ ದಾಳದ ಶಿಕಾರಿ ಆಗುವುದೆಂಬ ವಿಷಯ ಅವನಿಗೆ ಅರಿವಾಯಿತು. ಅಶ್ವದಳದ ಸರದಾರನಾಗಿ ನಿಯುಕ್ತಿಯಾಗುವುದರ ಮೂಲಕ ಆ ಅಶ್ವಾರೋಹಿ ಸಿಪಾಯಿಯಾದ ಅವನು ರಾಜ್ಯಾಡಳಿತ ಕ್ಷೇತ್ರಕ್ಕೆ ಅಗತ್ಯವಾದ ವೇಗದ ಚಮತ್ಕಾರವನ್ನು ಕೂಡ ಅವನು ಕರಗತ ಮಾಡಿಕೊಂಡ.

ಜಹಗೀರು:

ಬಲ್ಬನ್ನನು ಅಶ್ವಾರೂಢ ಸೈನ್ಯದ ಸರದಾರನಾಗಿ ನಿಯುಕ್ತಿಯಾಗಿ ಕೆಲವೇ ದಿನಗಳು ಕಳೆದಿದ್ದವು, ಅಷ್ಟರಲ್ಲೇ ಅವನ ಅದೃಷ್ಟ ಖುಲಾಯಿಸಿತು ಹಾಗೂ ಅವನು ಬದರ್‌ರೂಮಿ ಎಂಬ ಸಿಬ್ಬಂದಿ ಸಚಿವನ ಮನವನ್ನು ಗೆದ್ದುಕೊಂಡ. ಬದರ್‌ರೂಮಿಯ ಆಸಕ್ತಿಯ ದೆಸೆಯಿಂದ ಮತ್ತು ಶಿಫಾರಸ್ಸಿನ ಮೇರೆಗೆ ಬಲ್ಬನ್ನನ ಹೆಸರು ಬೆಹರಾಮಿ ಸರದಾರರ ಪಟ್ಟಿಯಲ್ಲಿ ದಾಖಲಾಯಿತು. ಹಾಗೂ ಹಾಂಸಿ ಮತ್ತು ರವಾಡೀಯ ಪ್ರದೇಶಗಳು ಅವನಿಗೆ ಜಹಗೀರಿನ ರೂಪದಲ್ಲಿ ನೀಡಲ್ಪಟ್ಟವು. ತನ್ನ ಜಹಗೀರನ್ನು ತಲುಪಿದ ಬಲ್ಬನ್ನನ್ನು ಕಿಡಿಗೇಡಿ ಮತ್ತು ವಿದ್ರೋಹಿ ಮೇವಾಡದ ಜನತೆಗೆ ಬುದ್ಧಿ ಕಲಿಸಿದ. ಮೇವಾಡಿನ ಜನರು ರಾಜಧಾನಿಯ ಮೇಲೆ ಆಕ್ರಮಣ ಮಾಡಿ ಲೂಟಿ ಮಾಡಿದ್ದೂ ಅಲ್ಲದೇ ಅದರ ವಿನಾಶಕ್ಕಾಗಿ ಪಣತೊಟ್ಟಿದ್ದರು. ಈ ಮೇವಾಡಿನ ಮುಸ್ಲಿಮೇತರ ಕಿಡಿಗೇಡಿಗಳನ್ನು ಸೋಲಿಸಿದ ನಂತರ ಬಲ್ಬನ್ನನ ಶೌರ್ಯ ಸಾಹಸಗಳ ಪ್ರತಾಪವು ಮೊಳಗಲಾರಂಭಿಸಿತು ಮತ್ತು ಇಡೀ ದೇಶದಲ್ಲಿ ಅವನು ತುಂಬಾ ಪ್ರಸಿದ್ಧಿಯನ್ನು ಪಡೆದ.

ಸಿಬ್ಬಂದಿ ಮುಖ್ಯಸ್ಥ ಮತ್ತು ಮಂತ್ರಿಗಿರಿ:

ದೇಶದ ಆಡಳಿತವು ಬೆಹ್ರಾಮ್‌ನ ಕೈವಶವಾದ ನಂತರ ಆ ಅವಕಾಶವು ಬಲ್ಬನ್ನನ ಪಾಲಿಗೆ ವರವಾಗಿ ಪರಿಣಮಿಸಿತು. ಹಿಜರಿ ಶಕೆ ೬೪೩ರಲ್ಲಿ ಬಲ್ಬನ್ನನನ್ನು ಸಿಬ್ಬಂದಿ ಇಲಾಖೆಯ ಮುಖ್ಯಸ್ಥನನ್ನಾಗಿ ನೇಮಕ ಮಾಡಲಾಯಿತು. ಇಂತಹ ಪ್ರಭಾವೀ ಹುದ್ದೆಗೆ ತಲುಪಿದ ನಂತರ ಬಲ್ಬನ್ನನು ರಾಜ್ಯದ ಕೆಲಸ ಕಾರ್ಯಗಳನ್ನು ಅತೀವ ಆಸಕ್ತಿಯಿಂದ ನಿರ್ವಹಿಸುತ್ತಿದ್ದ. ನಾಸಿರುದ್ದೀನ್ ಮೆಹಮೂದ್‌ನ ಆಡಳಿತಾವಧಿಯಲ್ಲಿ ಬಲ್ಬನ್ನನು ಇನ್ನಷ್ಟು ಅಭಿವೃದ್ಧಿ ಹೊಂದಿದ ಮತ್ತು ಸಿಬ್ಬಂದಿ ಇಲಾಖೆಯ ಮುಖ್ಯಸ್ಥನ ಹುದ್ದೆಯಿಂದ ಬಡ್ತಿ ಹೊಂದಿ ಮಂತ್ರಿಯ ಹುದ್ದೆಗೆ ಏರಿದ. ಈ ಅವಧಿಯಲ್ಲಿ ಬಲ್ಬನ್ನನ ಅಧಿಕಾರವು ಉತ್ತುಂಗ ಶಿಖರಕ್ಕೆ ಏರಿತ್ತು. ಅಲ್ತಮಷ್‌ನ ವಂಶದ ಆಡಳಿತಾವಧಿಯ ಕೊನೆಯ ಸುತ್ತಿನಲ್ಲಿ ನಾಸಿರುದ್ದೀನ್ ಮೆಹಮೂದ್‌ನು ಕೇವಲ ಹೆಸರಿಗೆ ಮಾತ್ರ ಬಾದಶಹನಾಗಿದ್ದ ಮತ್ತು ಅಸಲಿ ಆಳ್ವಿಕೆ ಮತ್ತು ಅಧಿಕಾರದ ಲಗಾಮು ಬಲ್ಬನ್ನನ ಕೈಯಲ್ಲಿತ್ತು.

ಪಟ್ಟಾಭಿಷೇಕ:

ನಾಸಿರುದ್ದೀನ್ ಮೆಹಮೂದ್‌ನ ಉತ್ಕರ್ಷ ಪರ್ವವು ಕೊನೆಗೊಂಡಾಗ ಯಾವುದೇ ಅಡೆತಡೆಗಳಿಲ್ಲದೆ ಬಲ್ಬನ್ನನು ಬಾದಶಹನ ಸ್ಥಾನಕ್ಕೇರಿದ. ಅವನ ಪಟ್ಟಾಭಿಷೇಕದ ಸಮಾರಂಭದಲ್ಲಿ ಅವನು ಶ್ವೇತ ಸಭಾಂಗಣದ ರಾಜ ಸಿಂಹಾಸನವನ್ನು ವಿಧ್ಯುಕ್ತವಾಗಿ ಏರಿದ.

ಇಸ್ಲಾಮೀ ಚರಿತ್ರಕಾರರು ಗಯಾಸುದ್ದೀನನ ಜೊತೆಯಲ್ಲಿ ಇನ್ನೂ ನಾಲ್ಕಾರು ತುರ್ಕಿ ಮುಖಂಡರು ಮತ್ತು ಸರ್ದಾರರುಗಳ ಹೆಸರಿನ ಜೊತೆಯಲ್ಲಿ "ಬಲ್ಬನ್" ಶಬ್ದವನ್ನು ಸೇರಿಸಿದ್ದಾರೆ. "ಬಲ್ಬನ್" ಎಂಬ ಶಬ್ದದ ಈ ವಿಶೇಷತೆಯೊಂದಿಗೆ ಇದು ಕೇವಲ ಗಯಾಸುದ್ದೀನನ ಸ್ವತ್ತಲ್ಲ ಬದಲಿಗೆ ತುರ್ಕರ ಯಾವುದೋ ವಂಶದ ಹೆಸರು ಎಂಬುದು ಅರಿವಾಗುತ್ತದೆ.

ತುರ್ಕಾನೆ ಚೆಹಲ್‌ಗಾನಿ:

ಅಲ್ತಮಷ್‌ನ ಅತ್ಯಂತ ಪ್ರೀತಿಪಾತ್ರರಾದ ನಲವತ್ತು ಮಂದಿ ಗುಲಾಮರು ಬಹಳ ಪ್ರಸಿದ್ಧಿಯನ್ನು ಹೊಂದಿದ್ದರು. ಮತ್ತು ಅವನ ಆ ಸಾಕು ಮಕ್ಕಳ ತಂಡಕ್ಕೆ "ತುರ್ಕಾನೆ ಚೆಹಲ್‌ಗಾನಿ" ಎಂದು ಕರೆಯಲಾಗುತ್ತಿತ್ತು. ಅಲ್ತಮಷ್‌ನ ಮರಣವಾದ ನಂತರ ತುರ್ಕರ ಈ ಗುಂಪು ಪರಸ್ಪರ ಒಟ್ಟುಗೂಡಿದರು ಹಾಗೂ ಅವರುಗಳು ಪರಸ್ಪರ ನೆರವು ಮತ್ತು ಪ್ರೀತಿಯ ಆಣೆ ಪ್ರಮಾಣಗಳನ್ನು ಮಾಡಿದರು. ಅಷ್ಟೇ ಅಲ್ಲದೆ ಹಿಂದೂಸ್ಥಾನದ ಆಡಳಿತವನ್ನು ತಮ್ಮ ತಮ್ಮಲ್ಲಿಯೇ ಹಂಚಿಕೊಂಡರು. ಈ ಘಟನೆಯ ನಂತರ ಈ ತಂಡವು "ತುರ್ಕಾನೆ ಖ್ವಾಜಾ ತಾಶ್"ನ ಹೆಸರಿನಿಂದ ಪ್ರಸಿದ್ಧಿ ಪಡೆಯಿತು. ಈ "ರಾಜಕೀಯ ಸಹೋದರರ" ಒಗ್ಗಟ್ಟು ಮತ್ತು ಮೈತ್ರಿ ಹೆಚ್ಚು ದಿನ ನಡೆಯಲಿಲ್ಲ. ಮತ್ತು ಕೆಲವೇ ದಿನಗಳಲ್ಲಿ ಪ್ರತಿಯೊಬ್ಬನು ಕೂಡ ಅಹಂಕಾರದ ಅಮಲಿನಲ್ಲಿ ತೇಲುತ್ತಾ ಸ್ವಹಿತಾಸಕ್ತಿಯ ವ್ಯೂಹದಲ್ಲಿ ಸಿಲುಕಿದರು. ಆ ತಂಡದ ಪೈಕಿ ಗಯಾಸುದ್ದೀನ್ ಬಲ್ಬನ್ನನು ಪ್ರಭಾವೀ ಅಧಿಕಾರವನ್ನು ಹೊಂದಿದ ಮತ್ತು ಇತರೆಯವರ ಮೇಲೆ ಮೇಲುಗೈಯನ್ನು ಪಡೆದುಕೊಂಡ.

ಬಲ್ಬನ್ನನು ಆಡಳಿತದ ಲಗಾಮನ್ನು ತನ್ನ ವಶಕ್ಕೆ ತೆಗೆದುಕೊಂಡ ಕೂಡಲೇ ಎಲ್ಲಕ್ಕಿಂತ ಮೊದಲು ತನ್ನ ಖ್ವಾಜ ತಾಶ್ ಶತ್ರುಗಳ ನಿರ್ನಾಮವನ್ನು ಮಾಡಿದ ಮತ್ತು ಅವರ ಪೈಕಿ ಯಾರಾದರೂ ತಲೆ ಎತ್ತುವ ಪ್ರಯತ್ನ ಮಾಡಿದ್ದಲ್ಲಿ ಕೂಡಲೇ ಅವರನ್ನು ಮಣಿಸಿದ. ಬಲ್ಬನ್ನನ ಈ ಹಸ್ತಕ್ಷೇಪವು ಎಷ್ಟೊಂದು ತೀವ್ರವಾಯಿತೆಂದರೆ ಅವನ ಚಿಕ್ಕಪ್ಪನ ಮಗನಾದ ಸರ್ದಾರ್ ಶೇರ್‌ಖಾನ್ ಹಾಗೂ "ತುರ್ಕಾನೆ ಚೆಹಲ್ ಗಾನಿಯ" ಪ್ರಮುಖ ಸದಸ್ಯನಾಗಿದ್ದವನನ್ನು ಬಲ್ಬನ್ ವಿಷವಿಕ್ಕಿ ಕೊಲ್ಲಿಸಿದ. ವಿರೋಧಿಗಳು ಮತ್ತು ಶತ್ರುಗಳಿಂದ ದೇಶಕ್ಕೆ ಮುಕ್ತಿ ದೊರಕಿಸಿದ ನಂತರ ಬಲ್ಬನ್ನನು ಆಡಳಿತ ವ್ಯವಸ್ಥೆಯ ಕಡೆಗೆ ತನ್ನ ಗಮನವನ್ನು ಹರಿಸಿದ ಹಾಗೂ ಅತ್ಯಂತ ಕಡಿಮೆ ಅವಧಿಯಲ್ಲಿ ಇಡೀ ದೇಶವನ್ನು ತನ್ನ ಸ್ವಾಧೀನ ಪಡಿಸಿಕೊಂಡ. ಅವನ ವೈಭವ ಮತ್ತು ಪರಾಕ್ರಮಗಳು ಜನಜನಿತವಾಗಿ ಇರಾಕ್, ಖಿರಾಸಾನ್ ಮತ್ತು ಮಾವರಾ, ಅನ್‌ನೆಹರ್‌ನ ರಾಜ ಮಹಾರಾಜರು ಅವನೊಡನೆ ಸ್ನೇಹ ಹಸ್ತವನ್ನು ಯಾಚಿಸಿ ಸೌಹಾರ್ದಯುತ ಸಂಬಂಧವನ್ನು ಏರ್ಪಡಿಸಿಕೊಂಡರು.

ಬಲ್ಬನ್ನನ ಮೇರು ವ್ಯಕ್ತಿತ್ವ:

ಬಲ್ಬನ್ನನು ಒಬ್ಬ ಪ್ರಜ್ಞಾವಂತ ಮತ್ತು ವಿವೇಕಿಯಾಗಿದ್ದು ಅತೀವ ಚಾಣಕ್ಷತೆಯನ್ನು ಹೊಂದಿದ್ದ ಗಂಭೀರ ಸ್ವಭಾವದ ಮಹಾರಾಜನಾಗಿದ್ದ. ಅವನ ಪ್ರತಿಯೊಂದು ಆಜ್ಞೆಯಲ್ಲಿಯೂ ಬುದ್ಧಿವಂತಿಕೆ ಮತ್ತು ಗಾಂಭೀರ್ಯತೆಯ ಲಕ್ಷಣಗಳು ಕಂಡು ಬರುತ್ತಿದ್ದವು. ಅವನು ಯಾವಾಗಲೂ ರಾಜ್ಯದ ಪ್ರಮುಖ ಕರ್ತವ್ಯಗಳನ್ನು ಯೋಗ್ಯ ಮತ್ತು ಸೂಕ್ತ ವ್ಯಕ್ತಿಗಳ ಸುಪರ್ದಿಗೆ ನೀಡುತ್ತಿದ್ದ. ಆಯೋಗ್ಯ ವ್ಯಕ್ತಿಗಳು ಅವನ ದರಬಾರಿನ ಸುತ್ತಮುತ್ತಲು ಕೂಡ ಸುಳಿಯುತ್ತಿರಲಿಲ್ಲ. ಅವನಿಗೆ ವ್ಯಕ್ತಿಗಳ ಯೋಗ್ಯತೆ, ಪ್ರಾಮಾಣಿಕತೆ, ಸಚ್ಚಾರಿತ್ರ್ಯ ಹಾಗೂ ಅವರ ಪಕ್ವ ಮನಃಸ್ಥಿತಿಯ ಬಗ್ಗೆ ನಂಬಿಕೆ ಬರುತ್ತಿರಲಿಲ್ಲವೋ ಅಲ್ಲಿಯವರೆಗೂ ಅವರಿಗೆ ಪ್ರಮುಖ ಕರ್ತವ್ಯಗಳನ್ನು ವಹಿಸಿಕೊಡುತ್ತಿರಲಿಲ್ಲ. ಈ ಗುಣಗಳ ಜೊತೆ ಜೊತೆಯಲ್ಲಿ ಕರ್ತವ್ಯನಿಷ್ಠೆ ಮತ್ತು ಉತ್ತಮ ಕುಲ ಹಾಗೂ ಸನ್ನಡತೆಯ ಬಗ್ಗೆ ಕೂಡ ಅವನು ಬಹಳ ಎಚ್ಚರಿಕೆಯನ್ನು ವಹಿಸುತ್ತಿದ್ದ. ಅವನು ನೇಮಕ ಮಾಡಿದ ಅಮಲ್ದಾರರು ಮತ್ತು ಸುಬೇದಾರರ ಪೈಕಿ ದ್ವಂದ್ವ ವ್ಯಕ್ತಿತ್ವ ಮತ್ತು ನಿರುತ್ಸಾಹೀ ವ್ಯಕ್ತಿಗಳಿಗೆ ಯಾವುದೇ ಅವಕಾಶವಿರುತ್ತಿರಲಿಲ್ಲ. ಅವರಿಗೆ ನೇಮಕಾತಿ ಅದೇಶವನ್ನು ನೀಡುವ ಸಂದರ್ಭದಲ್ಲಿಯೇ ಅಮಲ್ದಾರರ ಮತ್ತು ಸುಬೇದಾರರ ನ್ಯಾಯ ನಿಷ್ಠೆ ಮತ್ತು ಸನ್ನಡತೆಗಳ ಬಗ್ಗೆ ಖಾತರಿ ಪಡಿಸಿಕೊಳ್ಳುತ್ತಿದ್ದ. ಒಂದು ವೇಳೆ ಅವನ ಪ್ರಾಥಮಿಕ ತನಿಖೆಯಲ್ಲಿ ದೋಷ ಉಂಟಾಗಿ ನಂತರ ಸದರಿ ಅಮಲ್ದಾರರು ಮತ್ತು ಸುಬೇದಾರರ ವ್ಯಕ್ತಿತ್ವದಲ್ಲಿ ಅಪ್ರಾಮಾಣಿಕತೆ ಹಾಗೂ ಮೋಸದ ನಡವಳಿಕೆಯು ಸಾಬೀತಾದ್ದಲ್ಲಿ ತತ್‌ಕ್ಷಣವೇ ಆ ಹುದ್ದೆಯಿಂದ ಅವನನ್ನು ವಜಾಗೊಳಿಸುತ್ತಿದ್ದ. ಬಲ್ಬನ್ನನು ಮುಸ್ಲಿಮೇತರರಿಗೆ ಕೂಡ ಯಾವುದೇ ಜವಾಬ್ದಾರಿಯುತ ಹುದ್ದೆಗಳನ್ನು ನೀಡಲಿಲ್ಲ. ಮುಸ್ಲಿಮೇತರರು ರಾಜರಾದಲ್ಲಿ ಮುಸ್ಲಿಮ್ ಜನತೆಗೆ ಸಂಕಷ್ಟಗಳು ಉಂಟಾಗುತ್ತವೆ ಎಂಬುದು ಅವನ ಅಭಿಪ್ರಾಯವಾಗಿತ್ತು. ಬಲ್ಬನ್ನನು ತನ್ನ ಇಪ್ಪತ್ತೆರಡು ವರ್ಷಗಳ ಆಳ್ವಿಕೆಯಲ್ಲಿ ಎಂದಿಗೂ ಪಾನಪ್ರಿಯರೊಂದಿಗೆ ಮಾತುಕತೆಯನ್ನು ಆಡಲಿಲ್ಲ ಹಾಗೂ ಅವನ ಎದುರಿಗೆ ತಲುಪುವುದು ಕೂಡ ಆ ಜನರಿಗೆ ಅಸಾಧ್ಯವಾಗಿತ್ತು.

ಸನ್ನಡತೆಯ ಒಂದು ಘಟನೆ:

ಬಲ್ಬನ್ನನ ಕಾಲಾವಧಿಯಲ್ಲಿ ಫಖ್ರುಬಾಯಿ ಎಂಬ ಹೆಸರಿನ ಒಬ್ಬ ಗಣ್ಯ ವ್ಯಕ್ತಿ ಇದ್ದ ಎಂದು ಹೇಳಲಾಗುತ್ತದೆ. ಆ ವ್ಯಕ್ತಿಯು ತುಂಬಾ ಅಧಿಕಾರವನ್ನು ಹೊಂದಿದ್ದ ಹಾಗೂ ಅವನು ಬಹುಕಾಲದವರೆಗೆ ಬಲ್ಬನ್‌ಗೆ ಸೇವೆಯನ್ನು ಸಲ್ಲಿಸಿದ. ತನ್ನ ಎಂದಿನ ನಡವಳಿಕೆಯಂತೆ ಬಲ್ಬನ್ ಫಖ್ರೋನ್‌ನೊಂದಿಗೆ ಎಂದಿಗೂ ಮಾತನಾಡಿರಲಿಲ್ಲ. ಫಖ್ರೋನ್ ದರ್ಬಾರಿನ ಮೂಲಕ ಬಾದಶಹನಿಗೆ ಹೇಳಿ ಕಳಿಸಿದ್ದೇನೆಂದರೆ ಬಾದಶಹನು ಅವನೊಂದಿಗೆ ಒಮ್ಮೆ ಸಂಭಾಷಣೆಯನ್ನು ನಡೆಸಿದ್ದಲ್ಲಿ ಫಖ್ರೋನ್ ಅವನಿಗೆ ಅಪಾರ ಐಶ್ವರ್ಯ ಮತ್ತು ದಿನಸಿಯ ದೊಡ್ಡ ಮೊತ್ತವನ್ನು ಉಡುಗೊರೆಯ ರೂಪದಲ್ಲಿ

ಬಾದಶಹನ ಸನ್ನಿಧಿಗೆ ಅರ್ಪಿಸುವುದಾಗಿ ಹೇಳಿ ಕಳಿಸಿದ. ಫಕ್ರೋನನ ಸದರಿ ಪ್ರಸ್ತಾವನೆಯನ್ನು ದರಬಾರಿಗಳು, ಆಸ್ಥಾನಿಕರು ಬಾದಶಹನ ಸಮ್ಮುಖದಲ್ಲಿ ನುಡಿದಾಗ ಅವನು ಉತ್ತರಿಸಿದ, "ಫಕ್ರೋನ್ ಅತ್ಯಂತ ಶ್ರೀಮಂತನಾಗಿರಬಹುದು ಆದರೆ ಅವನು ಒಬ್ಬ ಬಜಾರಿ ವ್ಯಕ್ತಿಯಾಗಿದ್ದಾನೆ. ಮತ್ತು ಬಜಾರಿ ನಡವಳಿಕೆಯನ್ನು ಹೊಂದಿದ್ದಾನೆ. ಇಂತಹ ವ್ಯಕ್ತಿಯೊಂದಿಗೆ ಬಾದಶಹನು ಸಂಭಾಷಣೆ ನಡೆಸುವುದು ಅವನ ದರ್ಪ ಮತ್ತು ಘನತೆಗೆ ಕುಂದು ತರುವಂತಾಗಿದೆ ಮತ್ತು ಜನತೆಯ ಹೃದಯದಲ್ಲಿ ಬಾದಶಹನ ನಿಜವಾದ ಪ್ರತಿಷ್ಠೆ ಹಾಗೂ ಗೌರವಾದರಗಳು ಉಳಿಯುವುದಿಲ್ಲ".

ವಿದೇಶೀ ರಾಜಕುಮಾರರ ಆಗಮನ:

ಶೇಕ್ ಐನುದ್ದೀನ್ ಬಿಜಾಪುರಿಯವರು "ಮುಲೆಹ್‌ಖಾಕೆ ತಬ್‌ಖಾತೆ ನಾಸಿರಿ" ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ಸುಲ್ತಾನ್ ಗಯಾಸುದ್ದೀನ್ ಬಲ್ಬನ್ನನ ಆಳ್ವಿಕೆಗಿಂತಲೂ ಮುಂಚಿತವಾಗಿ ಬಾದಶಹರು ಮತ್ತು ಮಹಾರಾಜರುಗಳು ಹಿಂದೂಸ್ಥಾನಕ್ಕೆ ಬಂದು ಅಲ್ಲಿಯೇ ನೆಲೆಸಿದ್ದು ಸುಲ್ತಾನನಿಗೆ ಹೆಮ್ಮೆ ತರುವ ವಿಷಯವಾಗಿತ್ತು. ಜಮೀನ್ದಾರರುಗಳು ಮತ್ತು ತುರ್ಕಿಸ್ಥಾನದ ರಾಜಕುಮಾರರು ಚೆಂಗೇಸ್‌ಖಾನ್‌ನ ಗಲಭೆ ಮತ್ತು ಆರ್ಭಟಗಳಿಂದ ತಲ್ಲಣಗೊಂಡು, ಮಾವರಅನ್ನೆಹರ್, ಖಿರಾಸಾನ್, ಇರಾಕ್, ಅಜರ್‌ಬೈಜಾನ್, ಫಾರೇಸ್, ರೋಮ್ ಮತ್ತು ಈಜಿಪ್ಟ್, ವಗೈರೆ ದೇಶಗಳನ್ನು ತೊರೆದು ದೆಹಲಿಯಲ್ಲಿ ರಕ್ಷಣೆ ಪಡೆದಿದ್ದರು. ಈ ವಿಷಯವನ್ನು ಶೇರ್ ಐನುದ್ದೀನ್ ಬಿಜಾಪುರಿಯವರು "ಮುಲೆಹ್‌ಖಾಕೆ ತಬ್‌ಖಾತೆ ನಾಸಿರಿ" ಗ್ರಂಥದಲ್ಲಿ ದಾಖಲಿಸಿದ್ದಾರೆ. ಮೇಲೆ ಹೇಳಿದ ಎಲ್ಲಾ ರಾಜಕುಮಾರರು ಬಲ್ಬನ್‌ನ ಅಧೀನದಲ್ಲಿ ಸಾಮಂತರಾಗಿ ಗೌರವಾದರ ಮತ್ತು ಘನತೆಯನ್ನು ಹೊಂದಿದ್ದರು. ಈ ನಿರಾಶ್ರಿತ ರಾಜಕುಮಾರರ ಪೈಕಿ ಬನೀ ಹಬಾಸ್ ವಂಶದ ರಾಜಕುಮಾರರಿದ್ದರು. ಅವರಿಬ್ಬರೂ ದರ್ಬಾರಿನಲ್ಲಿ ರಾಜಸಿಂಹಾಸನದ ಬಳಿ ಆಸೀನರಾಗುತ್ತಿದ್ದರು ಉಳಿದ ಹದಿಮೂರು ರಾಜಕುಮಾರರು ಅತ್ಯಂತ ಗೌರವ, ವಿನಯ, ಶ್ರದ್ದೆ ಹಾಗೂ ಶಿಸ್ತಿನೊಂದಿಗೆ ರಾಜಸಿಂಹಾಸನದ ಮುಂಭಾಗದಲ್ಲಿ ಕೈಕಟ್ಟಿ ನಿಂತಿರುತ್ತಿದ್ದರು. ಯಾರಾದರೂ ಒಬ್ಬ ರಾಜಕುಮಾರ ಅಥವಾ ರಾಜನು ಯಾವುದಾದರೂ ಸಂಕಷ್ಟಕ್ಕೆ ಒಳಗಾಗಿ ತನ್ನ ದೇಶವನ್ನು ತೊರೆದು ಬಲ್ಬನ್‌ನ ಆಸರೆಯನ್ನು ಯಾಚಿಸಿ ಬಂದಾಗ ಬಲ್ಬನ್ ಆ ಅತಿಥಿಯ ಆಗಮನದಿಂದ ಅತ್ಯಂತ ಸಂಪ್ರೀತನಾಗಿ ಅಲ್ಲಾಹನ ಸಮ್ಮುಖದಲ್ಲಿ ವಂದನೆಗಳನ್ನು ಸಲ್ಲಿಸುತ್ತಿದ್ದ ಎಂದು ಇತಿಹಾಸಕಾರರು ದಾಖಲಿಸಿದ್ದಾರೆ. ಹಾಗೂ ಹಾಗೆ ಬಂದಂತಹ ತನ್ನ ಅತಿಥಿಗಳ ಸಲುವಾಗಿ ಪ್ರತ್ಯೇಕವಾಗಿ ಮೊಹಲ್ಲಾಗಳನ್ನು ರೂಪಿಸುತ್ತಿದ್ದ. ಈ ಕ್ರಮವನ್ನು ಅವನು ಅನುಸರಿಸುತ್ತಿದ್ದುದರಿಂದ ಆ ಪ್ರಭಾವಶಾಲೀ ವಂಶಸ್ಥ ಅತಿಥಿಗಳು ಹದಿನೈದು ಮೊಹಲ್ಲಾಗಳಲ್ಲಿ ತಮ್ಮ ಬೆಂಬಲಿಗರೊಡನೆ ಕೂಡಿ ನೆಮ್ಮದಿಯಿಂದ ವಾಸವಾಗಿದ್ದರು. ಆ ಮೊಹಲ್ಲಾಗಳ ಹೆಸರು ಕೆಳಕಂಡಂತಿವೆ, ೧. ಮೊಹಲ್ಲಾ ಅಬ್ಬಾಸಿ ೨. ಮೊಹಲ್ಲಾ

ಸಂಜೇರಿ ೩. ಮೊಹಲ್ಲಾ ಖವಾರ್‌ಜಮ್‌ಶಾಹಿ ೪. ಮೊಹಲ್ಲಾ ದೇಲ್‌ಮಿ ೫. ಮೊಹಲ್ಲಾ ಅಲ್‌ವಿ ೬. ಮೊಹಲ್ಲಾ ಅತಾಬಕಿ ೭. ಮೊಹಲ್ಲಾ ಘೋರಿ ೮. ಮೊಹಲ್ಲಾ ಚಂಗೇಸಿ ೯. ಮೊಹಲ್ಲಾ ರೂಮಿ ೧೦. ಮೊಹಲ್ಲಾ ಸಂಖರಿ ೧೧. ಮೊಹಲ್ಲಾ ಯಮನಿ ೧೨. ಮೊಹಲ್ಲಾ ಮೌಸೀಲಿ ೧೩. ಮೊಹಲ್ಲಾ ಸಮರ್‌ಖಂದಿ ೧೪. ಮೊಹಲ್ಲಾ ಕಾಶ್‌ಘರಿ ೧೫. ಮೊಹಲ್ಲಾ ಖತಾಯಿ.

ಆಸ್ಥಾನದ ಘನತೆ ಮತ್ತು ವೈಭವ:

ಬಲ್ಬನ್‌ನ ಆಸ್ಥಾನದಲ್ಲಿ ಅತ್ಯಂತ ವಿಶೇಷ ಸಾಮರ್ಥ್ಯವುಳ್ಳ ಹಾಗೂ ಅಸೀಮ ವ್ಯಕ್ತಿತ್ವವನ್ನು ಹೊಂದಿದ್ದದವರು ಒಂದೆಡೆ ಸೇರಿದ್ದರು. ಹಾಗೂ ಆ ಪೈಕಿ ಕೆಲವರು ಒಳ್ಳೆಯ ಲೇಖಕರಾಗಿದ್ದರೆ ಇನ್ನೂ ಕೆಲವರು ಉತ್ತಮ ಗಾಯಕರು ಹಾಗೂ ಕೆಲವರು ಅದ್ವಿತೀಯ ವಾದ್ಯ ನುಡಿಸುವವರು ಕೂಡ ಇದ್ದರು. ಅವನ ಆಸ್ಥಾನ ವೈಭವವು ಮಹಮೂದ್ ಘಜ್ನವಿ ಮತ್ತು ಸಂಜರ್‌ನಂತಹ ಮೇರು ಸದೃಶ ರಾಜರ ಆಸ್ಥಾನದ ವೈಭವಕ್ಕಿಂತಲೂ ಹೆಚ್ಚಿನದಾಗಿತ್ತು. ಆ ಅದ್ವಿತೀಯ ಕಲಾಕಾರರ ಒಂದು ತಂಡವು ಪಂಡಿತರು, ವಿದ್ವಾಂಸರು ಮತ್ತು ಸಮಕಾಲೀನ ಯುದ್ಧ ಕಲೆಯಲ್ಲಿ ಪರಿಣಿತರಾಗಿದ್ದು ಬಲ್ಬನ್‌ನ ಹಿರಿಯ ಮಗನಾದ ಖಾನ್ ಷಹೀದ್‌ನ ಸಭೆಯಲ್ಲಿ ಸೇರಿ ಜನತೆಯ ಕಲ್ಯಾಣಕ್ಕೆ ಶ್ರಮಿಸುತ್ತಿದ್ದರು. ಆ ಕಲಾವಿದರ ಇನ್ನೊಂದು ತಂಡವು ಗಾಯಕರು, ವಾದ್ಯಗಾರರು, ವಿದೂಷಕರು ಮತ್ತು ಭಾಷಾ ಪ್ರಾವೀಣ್ಯತೆವನ್ನು ಹೊಂದಿದವರಾಗಿದ್ದು ಬಲ್ಬನ್‌ನ ಕಿರಿಯ ಮಗನಾದ ಬಘ್ರಾಖಾನ್‌ನ ಸಭೆಗಳಲ್ಲಿ ಶೋಭಾಯಮಾನವಾಗಿದ್ದರು ಹಾಗೂ ಪ್ರಾಪಂಚಿಕ ದುಃಖದಿಂದ ಹೃದಯಗಳನ್ನು ಹಗುರಗೊಳಿಸುವ ಕ್ರಿಯೆಯಲ್ಲಿ ತೊಡಗಿದ್ದರು. ಗಣ್ಯರು, ಸರದಾರರು ಮತ್ತು ಮುಖಂಡರ ಸಾಂಸ್ಕೃತಿಕ, ಸಾಮಾಜಿಕ ಆಸಕ್ತಿಯ ಕೇಂದ್ರ ಬಿಂದುವು ಕೂಡಾ ರಾಜಕುಮಾರರ ಮನಃಸ್ಥಿತಿಗೆ ಅನುಗುಣವಾಗಿತ್ತು ಮತ್ತು ಅವರೆಲ್ಲರೂ ತಮ್ಮ ತಮ್ಮ ಸ್ವಭಾವ ವೈರುಧ್ಯಗಳಿಗೆ ಅನುಗುಣವಾಗಿ ಈ ಎರಡು ಗುಂಪುಗಳ ನಡುವೆ ಹಂಚಿ ಹೋಗಿದ್ದರು. ಮತ್ತು ತಮ್ಮ ತಮ್ಮ ಸಭೆಗಳ ಮಹತ್ವವನ್ನು ಹೆಚ್ಚಿಸುತ್ತಿದ್ದರು. ಗಯಾಸುದ್ದೀನ್ ಬಲ್ಬನ್‌ನು ಉತ್ತಮ ರಾಜ ಪೋಷಾಕನ್ನು ಮತ್ತು ಆಡಳಿತದ ಹಿರಿಮೆಯನ್ನು ಮೆಚ್ಚುತ್ತಿದ್ದ ಹಾಗೂ ಬಾದಶಹನ ಪ್ರತಾಪ, ವೈಭೋಗ ಮತ್ತು ದರ್ಪವನ್ನು ಬಹಳ ಪ್ರದರ್ಶಿಸುತ್ತಿದ್ದ. ಆತನು ತನ್ನ ಎಲ್ಲಾ ವೈಭವ ಮತ್ತು ಠೀವಿಯನ್ನು ಮೆರೆಸುತ್ತಾ ಆಸ್ಥಾನವನ್ನು ನಡೆಸುತ್ತಿದ್ದ. ಆ ಮೆರಗು. ಠೀವಿ ವೈಭವ ಮತ್ತು ದರ್ಪವನ್ನು ಕಂಡು ಜನರ ಹೃದಯದಲ್ಲಿ ನಡುಕವುಂಟಾಗುತ್ತಿತ್ತು. ಹಾಗೂ ಆ ವೈಭೋಗದ ವಿವರಗಳನ್ನು ಕೇಳಿದ ವಿದ್ರೋಹಿ ಮತ್ತು ಕಿಡಿಗಳ ದೇಹಗಳು ತರತರನೆ ನಡುಗಲಾರಂಭಿಸಿದವು. ಅವನ ಮೇಲ್ಮೆ ಮತ್ತು ಹಿರಿಮೆಯು ವಿದ್ರೋಹಿಗಳಿಗೆ ನೀಡಿದ ಸೂಕ್ತ ಉತ್ತರವಾಗಿತ್ತು. ಗಯಾಸುದ್ದೀನ್ ಬಲ್ಬನ್‌ನು ತನ್ನ ಸವಾರಿಯನ್ನೇರಿ ಎಲ್ಲಿಗಾದರೂ ಹೊರಟನೆಂದರೆ ಅವನ ಸವಾರಿಯೊಂದಿಗೆ ೫೦೦ ಘೋರಿ, ಅರಬ್ಬಿ,

ಸೇಸ್ತಾನಿ, ಸಮರಕಂದಿ ಮತ್ತು ಕುರ್ದ್ ಸೈನಿಕರು 'ಹಾವ್‌ಹೋ' ಎಂಬ ಘೋಷಣೆಯನ್ನು ಕೂಗುತ್ತ ಕಾಲ್ನಡಿಗೆಯಲ್ಲಿ ನಡೆಯುತ್ತಿದ್ದರು. ಬಲ್ಬನ್ನನು ಅತ್ಯಂತ ಧೂಮ್‌ದಾಮ್‌ನಿಂದ ಸಂತೋಷ ಕೂಟಗಳನ್ನು ಏರ್ಪಡಿಸುತ್ತಿದ್ದ. ಈದ್ ಮತ್ತು ಹೊಸ ವರ್ಷದ ಸಂದರ್ಭದಲ್ಲಿ ಆಸ್ಥಾನವನ್ನು ಇರಾನ್‌ನ ಬಾದಶಹನ ಆಸ್ಥಾನದಂತೆ ಅಲಂಕರಿಸುತ್ತಿದ್ದನು. ಮತ್ತು ಬಲ್ಬನ್ನನು ಇಡೀ ದಿನ ದರ್ಬಾರಿನಲ್ಲಿ ಆಸೀನನಾಗಿ ಸಾಮಂತರು, ಗಣ್ಯರು, ಕುಲೀನರು ಮತ್ತು ಅಧಿಕಾರಿಗಳಿಂದ ನಜರನ್ನು ಪಡೆಯುತ್ತಿದ್ದ. ಹಾಗೂ ಯಾವನಾದರೂ ಕುಲೀನ, ಸರದಾರ ಮತ್ತು ಸಾಮಂತನು ಬಾದಶಹನ ಸನ್ನಿಧಿಯಲ್ಲಿ ನಜರನ್ನು ಒಪ್ಪಿಸುತ್ತಿದ್ದಾಗ ಒಬ್ಬ ರಾಜ ಕರ್ಮಚಾರಿಯು ಆ ಕುಲೀನ ವ್ಯಕ್ತಿಯ ಉತ್ತಮ ಗುಣಗಳನ್ನು ಮತ್ತು ಆತನ ಅತ್ಯುತ್ತಮ ಸೇವೆಗಳ ಬಗ್ಗೆ ಬಾದಶಹನ ಎದುರಿಗೆ ಉದ್ಘೋಷಿಸುತ್ತಿದ್ದ. ಆಸ್ಥಾನದಲ್ಲಿ ಅತ್ಯಂತ ಕಲಾತ್ಮವಾಗಿ ಹೆಣೆದಿದ್ದ ರತ್ನ ಕಂಬಳಿಯನ್ನು ಹಾಸಲಾಗುತ್ತಿತ್ತು. ಚಿನ್ನ ಮತ್ತು ಬೆಳ್ಳಿಯ ಜರಿ ಪರದೆಗಳಿಂದ ಸಭೆಯು ಶೋಭಾಯ ಮಾನವಾಗಿರುತ್ತಿತ್ತು ಹಾಗೂ ಚಿನ್ನ ಮತ್ತು ಬೆಳ್ಳಿಯ ತಟ್ಟೆಗಳನ್ನು ಉಪಯೋಗಿಸುತ್ತಿದ್ದರು. ಇಡೀ ಆಸ್ಥಾನಿಕರ ಸೇವೆಯಲ್ಲಿ ಶರಬತ್ತು, ವಿವಿಧ ಬಗೆಯ ಫಲಹಾರಗಳು ಹಾಗೂ ವೀಳ್ಯದೆಲೆ ಮೊದಲಾದವುಗಳನ್ನು ನೀಡಲಾಗುತ್ತಿತ್ತು. ಬಲ್ಬನ್ ತನ್ನ ಆಸ್ಥಾನದ ಸರದಾರರಿಗೆ ಹೀಗೆಂದು ಹೇಳುತ್ತಿದ್ದ. "ನಾನು ಸುಲ್ತಾನ್ ಶಮ್‌ಸುದ್ದೀನ್ ಅಲ್ತಮಷ್‌ನ ದರ್ಬಾರಿನಲ್ಲಿ ತುರ್ಕಿ ಸರದಾರರಿಂದ ಹೀಗೆಂದು ಕೇಳಿದ್ದೇನೆ ; ಯಾವ ಬಾದಶಹನಿಗೆ ದರ್ಬಾರಿನ ರೀತಿ ನೀತಿ ಮತ್ತು ವ್ಯವಸ್ಥೆ ಹಾಗೂ ಸವಾರಿಯ ಕ್ರಮ ಮತ್ತು ಆಡಳಿತದ ಶಿಸ್ತಿನ ಬಗ್ಗೆ ಪ್ರಜ್ಞೆ ಇಲ್ಲವೋ ಜನತೆಯ ಹೃದಯದ ಮೇಲೆ ಅಂತಹ ಬಾದಶಹನ ದರ್ಪ ಮತ್ತು ಸಾಹಸದ ಮುದ್ರೆ ಬೀಳುವುದಿಲ್ಲ. ಹಾಗೂ ನೋಡುಗರು ಅಂತಹ ಬಾದಶಹನ ವೈಭವ ಮತ್ತು ಶ್ರೀಮಂತಿಕೆಯಿಂದ ಪ್ರಭಾವಿತರಾಗುವುದಿಲ್ಲ ಅಂತಹ (ಅಶಿಸ್ತಿನ) ಬಾದಶಹನ ಶತ್ರುಗಳು ಬಹಳ ಹೆಚ್ಚು ಶಕ್ತಿಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ ಮತ್ತು ಅಂತಹ ಬಾದಶಹನ ಆಡಳಿತದ ಹಾದಿಯಲ್ಲಿ ದೊಡ್ಡ ತೊಡಕಾಗಿ ಪರಿಣಮಿಸಿ ಆ ದೇಶದ ವಿನಾಶಕ್ಕೆ ಕಾರಣಕರ್ತರಾಗುತ್ತಾರೆ.

ಬಲ್ಬನ್‌ನ ನ್ಯಾಯ ಮತ್ತು ಸತ್ಯನಿಷ್ಠೆ:

ಯಾವ ರೀತಿಯಲ್ಲಿ ಬಲ್ಬನ್ನನು ಆಸ್ಥಾನದ ಶಿಸ್ತು ಮತ್ತು ಕಾಯ್ದೆಯ ಬಗ್ಗೆ ಪ್ರಜ್ಞೆಯನ್ನು ಹೊಂದಿದ್ದನೋ ಅದೇ ರೀತಿಯಲ್ಲಿ ಅವನು ನ್ಯಾಯ ಮತ್ತು ಸತ್ಯ ನಿಷ್ಠೆಯ ಬಗ್ಗೆ ಕೂಡ ಸಂಪೂರ್ಣವಾಗಿ ಬದ್ಧನಾಗಿದ್ದ. ಒಂದು ಘಟನೆಯ ವಿವರ ಇಂತಿವೆ; ಜಾಮ್‌ದಾರ್‌ನ ಮಗನಾದ ಮುಲ್ಕ್ ನಯೀಂಖ್ ಒಬ್ಬ ಸರದಾರನಾಗಿದ್ದ ಮತ್ತು ನಾಲ್ಕು ಸಾವಿರ ಕುದುರೆ ಸವಾರರ ಒಡೆಯನಾಗಿದ್ದ ಹಾಗೂ ಬದಾಯೂನ್‌ನ ಸುಬೇದಾರನಾಗಿದ್ದ. ಆತನು ಒಮ್ಮೆ ಸಿಟ್ಟಿಗೆದ್ದು ತನ್ನ ಬಳಿ ಮೇಲ್ವಿಚಾರಣೆಯ ನೌಕರಿಯಲ್ಲಿದ್ದ ಸೇವಕನನ್ನು ಅಮಾನುಷವಾಗಿ ಹೊಡೆದು ಚಾಟಿ ಏಟನ್ನು ಕೊಟ್ಟ.

ಆ ಬಡಪಾಯಿಯು ಮರಣ ಹೊಂದಿದ. ಇದಾದ ಕೆಲವು ದಿನಗಳ ನಂತರ ಬಲ್ಬನ್ನನು ಬದಾಯೂನ್‌ಗೆ ಹೋದಾಗ ಆ ಮೃತ ಮೇಲ್ವಿಚಾರಕನ ವಿಧವೆ ಪತ್ನಿಯು ತನ್ನ ಅಹವಾಲಿನೊಂದಿಗೆ ಬಲ್ಬನ್‌ನ ಬಳಿ ಬಂದಳು. ಎಲ್ಲಾ ಸಂಗತಿಗಳ ಬಗ್ಗೆ ಅರಿವಾದ ನಂತರ ಆ ಮೃತ ಮೇಲ್ವಿಚಾರಕನಿಗೆ ಎಷ್ಟು ಚಾಟಿ ಏಟುಗಳನ್ನು ಹೊಡೆಯಲಾಯಿತೋ ಅಷ್ಟೇ ಚಾಟಿ ಏಟುಗಳನ್ನು ಮುಲ್ಕ್ ನಯೀಖ್‌ಗೂ ಹೊಡೆಯಬೇಕೆಂತಲೂ ಮತ್ತು ಅವನಿಗೆ ಆ ಮೇಲ್ವಿಚಾರಕನಿಗೆ ಆದಂತೆ ದುರ್ಗತಿಯಾಗಬೇಕೆಂದು ಬಾದಶಹನು ಆಜ್ಞೆಯನ್ನು ಹೊರಡಿಸಿದ. ಬಲ್ಬನ್ನನ ಆದೇಶವು ಜಾರಿಯಾಯಿತು ಮತ್ತು ಆ ಚಾಟಿ ಏಟುಗಳನ್ನು ತಡೆಯಲಾರದೆ ಮುಲ್ಕ್ ನಯೀಖ್ ಅಸು ನೀಗಿದ ಹಾಗೂ ಅವನ ಶವವನ್ನು ಪಟ್ಟಣದ ಮುಖ್ಯ ದ್ವಾರದಲ್ಲಿ ನೇತು ಹಾಕಲಾಯಿತು. ಇದೇ ರೀತಿಯ ಇನ್ನೊಂದು ಘಟನೆಯು ಕೂಡ ವರದಿಯಾಗಿದೆ. ಬಲ್ಬನ್ನನ ಅತ್ಯಂತ ನಂಬಿಗಸ್ಥ ಗುಲಾಮನಾದ ಐಬಕ್‌ಖಾನ್‌ನು ಅವಧ್‌ನ ಆಡಳಿತಗಾರನಾಗಿ ನೇಮಕಗೊಂಡಿದ್ದ. ಅವನು ದರ್ಪದಿಂದ ಪ್ರೇರೇಪಿತನಾಗಿ ಒಬ್ಬ ವ್ಯಕ್ತಿಯ ಕೊಲೆ ಮಾಡಿದ. ಕೊಲೆಯಾದವನ ಪತ್ನಿಯು ಬಲ್ಬನ್‌ನ ಬಳಿ ದೂರನ್ನು ಕೊಟ್ಟಳು. ಬಲ್ಬನ್ನನು ಐಬಕ್‌ಖಾನ್‌ನಿಗೆ ೫೦೦ ಚಾಟಿ ಏಟುಗಳನ್ನು ನೀಡುವ ಆಜ್ಞೆಯನ್ನು ಮಾಡಿದ. ಆ ಸಜೆಯನ್ನು ನೀಡಿದ ಬಳಿಕ ಬಲ್ಬನ್ನನು ಐಬಕ್‌ಖಾನ್‌ನನ್ನು ಆ ವಿಧವೆಯ ವಶಕ್ಕೆ ಒಪ್ಪಿಸಿದ ನುಡಿದ "ಈ ವ್ಯಕ್ತಿ ಮೊದಲು ನನ್ನ ಗುಲಾಮನಾಗಿದ್ದ ಈಗ ನಿನ್ನ ಗುಲಾಮನಾಗಿದ್ದಾನೆ. ಇವನೊಡನೆ ನಿನಗಿಷ್ಟ ಬಂದಂತಂಹ ವರ್ತನೆಯನ್ನು ಮಾಡು ನಿನಗೆ ಇಷ್ಟವಾದಲ್ಲಿ ಕೊಲೆಯನ್ನು ಮಾಡಿಸು ಇಲ್ಲವೇ ಕ್ಷಮೆಯನ್ನು ನೀಡು." ಐಬಕ್‌ಖಾನ್‌ನು ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಮಧ್ಯಸ್ಥಿಕೆಯ ಮೂಲಕ ಬಲ್ಬನ್ನನಿಗೆ ಶಿಫಾರಸ್ಸು ಮಾಡಿಸಿದ. ಕೊನೆಗೆ ಐಬಕ್‌ಖಾನ್‌ನು ಆ ವಿಧವೆಗೆ ಪರಿಹಾರ ರೂಪವಾಗಿ ಮೂವತ್ತು ಸಾವಿರ ರೂಪಾಯಿಗಳನ್ನು ಪಾವತಿ ಮಾಡಿ ತನ್ನ ಪ್ರಾಣವನ್ನು ಉಳಿಸಿಕೊಂಡ. ಬಾದಶಹನು ಈ ರಾಜಿ ಸೂತ್ರವನ್ನು ಒಪ್ಪಿದ ಆದರೆ ಐಬಕ್‌ಖಾನ್‌ನು ಈ ಘಟನೆಯಿಂದ ತೀವ್ರ ನಾಚಿಕೆಗೆ ಈಡಾಗಿ ತನ್ನ ಮನೆಯಿಂದ ಹೊರ ಹೊರಡುವುದನ್ನೇ ನಿಲ್ಲಿಸಿದ.

ಲೋಕಜ್ಞಾನದ ಸಂಹಿತೆ:

ಬಲ್ಬನ್ ತನ್ನ ಅನೇಕ ಅನುಭವಗಳನ್ನು ತನ್ನ ಪುತ್ರರೊಂದಿಗೆ ಹಂಚಿಕೊಳ್ಳುತ್ತಿದ್ದ. "ಸುಲ್ತಾನ್ ಶಮ್‌ಸುದ್ದೀನ್ ಅಲ್ತಮಷ್‌ರವರು ಅಪ್ಪಣೆ ಕೊಡಿಸುತ್ತಿದ್ದುದ್ದರೆನೆಂದರೆ, ನಾನು ಮಲಜುದ್ದೀನ್ ಬಿನ್, ಬಹಾವುದ್ದೀನ್ ಸಾಮ್‌ನ ಸಭೆಯಲ್ಲಿ ಎರಡು ಸಾರಿ ಸೈಯದ್ ಮುಬಾರಕ್ ಘಜ್ನವಿಯವರಿಂದ ಕೇಳಿರುವುದರೆನೆಂದರೆ ಬಾದಶಹರ ಅನೇಕ ಕೃತ್ಯಗಳು ದೇವ ಸಹಭಾಗಿತ್ವದ ಗಡಿಯನ್ನು ಮುಟ್ಟುತ್ತವೆ. ಮತ್ತು ಅವರು ಮಾಡುವ ಅನೇಕ ಕೆಲಸಗಳು ನಬಿ ಪ್ರವಾದಿಯವರ ಸುನ್ನತ್ (ಆಚರಣೆಗೆ)

ವಿರೋಧವಾಗಿರುತ್ತದೆ. ಆದರೆ ಈ ನಾಲ್ಕು ವಿಷಯಗಳ ಪಾಲನೆಯನ್ನು ಮಾಡದೆ ಇದ್ದಲ್ಲಿ ಅವರು ಪರಮಪಾಪಿಗಳಾಗುತ್ತಾರೆ. ಆ ನಾಲ್ಕು ವಿಷಯಗಳು ಹೀಗಿವೆ, ೧. ಬಾದಶಹನಿಗೆ ತನ್ನ ವೈಭವ ಮತ್ತು ದರ್ಪವನ್ನು ಸೂಕ್ತ ಸಮಯದಲ್ಲಿ ಪ್ರದರ್ಶಿಸುವ ಅಗತ್ಯವಿದೆ ಆದರೆ ದೈವಭಕ್ತಿ ಮತ್ತು ದೇವರ ಸೃಷ್ಟಿಯ ಒಳಿತು ಎಲ್ಲಾ ಸಂದರ್ಭಗಳಲ್ಲಿಯೂ ಅಗತ್ಯವಿದೆ. ೨. ಬಾದಶಹನು ತನ್ನ ದೇಶದಲ್ಲಿ ದುರ್ನಡತೆಯು ಸಾರ್ವತ್ರಿಕವಾಗದಂತೆ ತಡೆಯುವ ತೀವ್ರ ಅಗತ್ಯವಿದೆ. ಧರ್ಮನಿಂದಕರು ಹಾಗೂ ನಿರಭಿಮಾನೀ ಜನರನ್ನು ಮತ್ತು ನಿರ್ಲಜ್ಜರನ್ನು ಕೀಳಾಗಿ ಕಾಣಬೇಕು ೩. ರಾಜ್ಯದ ಕರ್ತವ್ಯಗಳನ್ನು ಬುದ್ದಿವಂತರು ಮತ್ತು ಸಭ್ಯ ವ್ಯಕ್ತಿಗಳ ವಶದಲ್ಲಿ ನೀಡತಕ್ಕದ್ದು. ಜನತೆಯ ಮೇಲೆ ನೇಮಕ ಮಾಡುವ ಆಡಳಿತಗಾರರು ನಂಬಿಕಸ್ಥರು ಮತ್ತು ದೈವ ಭಕ್ತರಾಗಿರುವಂತೆ ನೋಡಿಕೊಳ್ಳತಕ್ಕದ್ದು. ಕಿಡಿಗೇಡಿಗಳು ಮತ್ತು ಕೆಟ್ಟ ನಡತೆಯವರನ್ನು ದೇಶದ ಒಳಗೆ ಪ್ರವೇಶಿಸಲು ಅವಕಾಶ ನೀಡತಕ್ಕದ್ದಲ್ಲ ಏಕೆಂದರೆ, ಇಂತಹ ಜನರು ಜನತೆಯನ್ನು ಕೆಟ್ಟ ಮಾರ್ಗಕ್ಕೆ ಎಳೆಯುತ್ತಾರೆ. ೪. ಕೊನೆಯ ಮಾತೇನೆಂದರೆ, ಬಾದಶಹನಾದವನು ನ್ಯಾಯಪರತೆಯಿಂದ ಕರ್ತವ್ಯವನ್ನು ನಿರ್ವಹಿಸತಕ್ಕದ್ದು ತನ್ನ ಅಧೀನ ಕಾರ್ಯಭಾರಿಗಳ ಕರ್ತವ್ಯಗಳ ಬಗ್ಗೆ ನ್ಯಾಯ ಪರತೆಯಿಂದ ಪರಿವೀಕ್ಷಣೆ ಮಾಡುತ್ತಿದ್ದಲ್ಲಿ ದೇಶದಿಂದ ಕ್ರೌರ್ಯ ಮತ್ತು ಶೋಷಣೆಯ ಗುರುತು ಕೂಡ ಉಳಿಯದಂತೆ ಮಾಯವಾಗುವುದು" ಹೀಗೆಂದು ನುಡಿಯುತ್ತಿದ್ದ ಬಲ್ಬನ್ನನು ಮುಂದುವರೆದಂತೆ ತನ್ನ ಪುತ್ರರಿಗೆ ಬುದ್ಧಿವಾದವನ್ನು ಹೇಳುತ್ತಿದ್ದ. "ನೀವು ನನ್ನ ಕರುಳಿನ ಕುಡಿಗಳಾಗಿದ್ದೀರಿ ಈ ಮಾತನ್ನು ಚೆನ್ನಾಗಿ ಗಮನವಿಟ್ಟು ಕೇಳಿ. ನಿಮ್ಮ ಪೈಕಿ ಯಾರಾದರೂ ಒಬ್ಬ ಅಸಹಾಯಕ ಬಡಪಾಯಿಗೆ ಹಿಂಸೆಯನ್ನು ಮಾಡಿದ್ದಲ್ಲಿ ನಾನು ಆ ಕ್ರೂರಿಗೆ ಅವನ ಕ್ರೌರ್ಯದ ಬದಲಿಗೆ ಪೂರ್ತಾ ಶಿಕ್ಷೆಯನ್ನು ನೀಡುತ್ತೇನೆ" ಎಂದು ಎಚ್ಚರಿಕೆಯನ್ನು ನೀಡುತ್ತಿದ್ದ.

ಬಲ್ಬನ್ನನ ವ್ಯಕ್ತಿತ್ವ:

ಗಯಾಸುದ್ದೀನ್ ಬಲ್ಬನ್ನನು ಯಾವುದಾದರೂ ನದಿಯ ತೀರಕ್ಕೆ ಹೋದಾಗ ಅಥವಾ ಯಾವುದಾದರೂ ಸೇತುವೆಯ ಸಮೀಪ ತಲುಪಿದಾಗ ಅವನು ಸ್ವತಃ ಬದಿಗೆ ಸರಿದು ನಿಲ್ಲುತ್ತಿದ್ದ ಹಾಗೂ ತನ್ನ ಅಧಿಕಾರಿಗಳಿಗೆ ಆಜ್ಞೆಯನ್ನು ನೀಡಿ ತಮ್ಮ ಕೈಯಲ್ಲಿ ಕೋಲನ್ನು ಹಿಡಿದು ಸುವ್ಯವಸ್ಥೆಯಿಂದ ನಡೆದುಕೊಳ್ಳುವಂತೆ ಆದೇಶವನ್ನು ನೀಡುತ್ತಿದ್ದ ಎಂದು ಚರಿತ್ರಕಾರರು ದಾಖಲಿಸಿದ್ದಾರೆ. ಮತ್ತು ಅಲ್ಲಿ ನೆರದಿದ್ದ ಜನರ ಪೈಕಿ ರೋಗಿಗಳು, ಮಹಿಳೆಯರು, ಮಕ್ಕಳು ಮತ್ತು ಅಸಹಾಯಕ ಪ್ರಾಣಿಗಳನ್ನು ಮೊದಲು ಆದ್ಯತೆಯ ಮೇರೆಗೆ ಅಲ್ಲಿಂದ ಇಳಿಸಬೇಕು ಎಂದು ಆಜ್ಞೆ ಮಾಡಿದ ಹಾಗೂ ಆರೋಗ್ಯವಂತ ಮತ್ತು ದೃಢಕಾಯ ಹೊಂದಿದ ಜನರು ಅಶಕ್ತರು ಮತ್ತು ಅಸಹಾಯಕರಿಗೆ ನೆರವು ನೀಡಬೇಕೆಂದು ಎಂಬುದು ಅವನ ಸಾರ್ವತ್ರಿಕ ಆದೇಶವಾಗಿತ್ತು.

ಆ ನಂತರದಲ್ಲಿ ಕುದುರೆ, ಆನೆ ಹಾಗೂ ಸೈನ್ಯದ ಇತರೆ ಪ್ರಾಣಿಗಳು ದಡ ಸೇರಲಿ ಎಂಬುದು ಅವನ ಆದೇಶವಾಗಿತ್ತು. ತನ್ನ ಈ ರೀತಿಯ ಆದೇಶಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸಲು ಬಲ್ಬನ್ನನು ವಿವಿಧ ಸ್ಥಳಗಳಲ್ಲಿ ಅನೇಕ ಅನೇಕ ದಿನಗಳವರೆಗೆ ವಾಸ್ತವ್ಯ ಹೂಡುತ್ತಿದ್ದ. ಆದರೆ ಅವನ ಹೃದಯದಲ್ಲಿ ಎಂದಿಗೂ ಭಯವುಂಟಾಗಲಿಲ್ಲ. ಅವನ ಪಟ್ಟಾಭಿಷೇಕಕ್ಕಿಂತ ಮುಂಚಿತವಾಗಿ ಅಂದರೆ ಅವನು ಸರದಾರನಾಗಿದ್ದ ಸಂದರ್ಭದಲ್ಲಿ ಬಲ್ಬನ್ನನಿಗೆ ವಿಪರೀತ ಕುಡಿತದ ಚಟವಿತ್ತು ಹಾಗೂ ಅವನ ಸಭೆಗಳು ಸುಮಧುರ ಕಂಠದ ಸ್ನೇಹಿತರು ಮತ್ತು ನುರಿತ ಕಲಾವಿದ ಗಾಯಕರಿಂದ ತುಂಬಿ ತುಳುಕುತ್ತಿತ್ತು. ಅವನು ಅನೇಕ ಪ್ರಭಾವೀ ಸರದಾರರು ಮತ್ತು ಕುಲೀನರನ್ನು ತನ್ನ ಸಭೆಗಳಿಗೆ ಅಹ್ವಾನಿಸುತ್ತಿದ್ದು ಅವನು ವಿಶೇಷ ಆಸಕ್ತಿಯಿಂದ ಅವರೊಡನೆ ಚದುರಂಗದಾಟದಲ್ಲಿ ಮೈಮರೆಯುತ್ತಿದ್ದ. ಹಾಗೂ ಅವರೆಲ್ಲರ ಮೇಲೆ ಅಪಾರವಾದ ಚಿನ್ನ ಮತ್ತು ಬೆಳ್ಳಿಯನ್ನು ವ್ಯಯ ಮಾಡುತ್ತಿದ್ದ. ಆದರೆ ಆಡಳಿತದ ಲಗಾಮು ಅವನ ಕೈವಶವಾದ ನಂತರ ಅವನು ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡು ತನ್ನ ಈ ಎಲ್ಲಾ ಕೃತ್ಯಗಳನ್ನು ತೊರೆದ ಹಾಗೂ ಕುಡಿತ ಮತ್ತು ಇತರೆ ವಿಲಾಸೀ ಕೃತ್ಯಗಳ ಗುರುತನ್ನು ಕೂಡ ತನ್ನ ದೇಶದಿಂದ ಅಳಿಸಿ ಹಾಕಿದ ಮತ್ತು ಅತ್ಯಂತ ಕಠಿಣ ಶಿಸ್ತಿನಿಂದ ಧಾರ್ಮಿಕ ಕರ್ತವ್ಯಗಳ ಅಂದರೆ ನಮಾಜ್, ಉಪವಾಸ ಮೊದಲಾದ ಧಾರ್ಮಿಕ ಕೃತ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡ. ಕಡ್ಡಾಯ ನಮಾಜ್ ಜೊತೆಯಲ್ಲಿ ತಹಜ್ಜುದ್, ಚಾಶ್ತ್ ಮತ್ತು ಇಶ್ರಾಕ್ ನಂತಹ ಐಚ್ಛಿಕ ನಮಾಜ್‌ಗಳನ್ನು ಕೂಡ ನಿಯಮಿತವಾಗಿ ಪಾಲಿಸಿದ ಅವನು ದಿನವಿಡಿ ವಜುವಿನೊಂದಿಗೆ ಇರುತ್ತಿದ್ದ. ವಿದ್ವಾಂಸರು, ಸೂಫಿಗಳು ಮತ್ತು ಧಾರ್ಮಿಕ ಮುಖಂಡರು ಮೊದಲಾದವರ ಉಪಸ್ಥಿತಿಯಲ್ಲಿ ಊಟ ಮಾಡುವಾಗ ಎಂದಿಗೂ ನಾ ಮುಂದು ಎಂಬ ಪ್ರತಿಷ್ಠೆಯನ್ನು ಮೆರೆಸುತ್ತಿರಲಿಲ್ಲ. ಊಟ ಮಾಡುವಾಗ ವಿವಿಧ ಧಾರ್ಮಿಕ ವಿಷಯಗಳ ಬಗ್ಗೆ ವಿದ್ವಾಂಸರೊಡನೆ ಮುಕ್ತ ಚರ್ಚೆಯನ್ನು ಮಾಡುವುದು ಅವನ ಸ್ವಭಾವವಾಗಿತ್ತು. ತನ್ನ ಅಸ್ಥಾನದ ಸರದಾರರು ಮತ್ತು ಮಂತ್ರಿ ವಗೈರೆಯವರ ಮನೆಗೆ ಹೋಗಿ ಅವರನ್ನು ಭೇಟಿ ಮಾಡುವುದರ ಮೂಲಕ ಅವರ ಗೌರವವನ್ನು ಹೆಚ್ಚಿಸುತ್ತಿದ್ದ. ಶುಕ್ರವಾರದ ನಮಾಜ್ ಮಾಡಿದ ನಂತರ ಅವನು ಸೂಫಿ ಸಂತರು ಮತ್ತು ಧಾರ್ಮಿಕ ವಿದ್ವಾಂಸರ ಮನೆಗಳಿಗೆ ಭೇಟಿ ನೀಡುತ್ತಿದ್ದ. ಶೇರ್ ಬುರ್‌ಹಾನ್ ಬಲ್ಖಿ, ಮೌಲಾನ ಸಿರಾಜುದ್ದೀನ್ ಸಂಜರಿ, ಮತ್ತು ಮೌಲಾನ ನಜ್ಮುದ್ದೀನ್ ದಮಶ್‌ಖೀ ಮೊದಲಾದ ಹಿರಿಯ ಮತಪಂಡಿತರ ಸಹವಾಸದಿಂದ ಶ್ರೇಯಸ್ಸನ್ನು ಪಡೆದುಕೊಂಡ.

ಬಲ್ಬನ್ನನು ಖಬರ್‌ಸ್ತಾನಗೆ ಹೋಗಿ ಗೋರಿಗಳ ದರ್ಶನಗಳನ್ನು ಕೂಡ ಮಾಡುತ್ತಿದ್ದ. ರಾಜ್ಯದ ಪ್ರಮುಖ ವ್ಯಕ್ತಿ ಅಥವಾ ಹಿರಿಯ ವ್ಯಕ್ತಿಯು ಮರಣ ಹೊಂದಿದಾಗ ಆ ಶವದ ಸಂಸ್ಕಾರದಲ್ಲಿ ಭಾಗಿಯಾಗುತ್ತಿದ್ದ. ತದ ನಂತರ ಮೃತರ ಮನೆಗೆ ಹೋಗಿ ಅಲ್ಲಾಹನ ಇಚ್ಛೆಯೊಂದಿಗೆ ರಾಜಿಯಾಗಬೇಕೆಂದು ಸಹನೆಯ ತತ್ತ್ವವನ್ನು ಬೋಧಿಸುತ್ತಿದ್ದ.

ಮೃತ ಸರದಾರರ ವಂಶಜರಿಗೆ ಬಲ್ಬನ್ನನು ರಾಜ ಪೋಷಾಕು ಮತ್ತು ಇನಾಮುಗಳನ್ನು ನೀಡಿ ರಾಜ ಮನ್ನಣೆಯನ್ನು ನೀಡುತ್ತಿದ್ದ ಹಾಗೂ ಅನಾಥ ಮಕ್ಕಳ ಪಾಲನೆ ಪೋಷಣೆಯ ಸಲುವಾಗಿ ದೊಡ್ಡ ಮೊತ್ತದ ವಿಶ್ರಾಂತಿ ವೇತನವನ್ನು ನಿಗದಿಪಡಿಸುತ್ತಿದ್ದ. ಹಾಗೂ ಅವರ ದುಃಖದಲ್ಲಿ ಸಮಸಮವಾಗಿ ಭಾಗಿಯಾಗುತ್ತಿದ್ದ. ಆತನು ಸವಾರಿ ಹೊರಟಾಗ ಮಾರ್ಗ ಮಧ್ಯದಲ್ಲಿ ಎಲ್ಲಿಯಾದರೂ ಜನರ ಗುಂಪನ್ನು ಕಂಡಾಗ ಅಲ್ಲಿ ಪ್ರವಚನ ನಡೆಯುತ್ತಿದೆ ಎಂದು ತಿಳಿದುಬಂದಾಗ ಕೂಡಲೇ ಸವಾರಿಯಿಂದ ಇಳಿದು ಆ ಪ್ರವಚನದ ಸಭೆಯಲ್ಲಿ ಭಾಗವಹಿಸುತ್ತಿದ್ದುದು ಅವನ ಅಭ್ಯಾಸವಾಗಿತ್ತು. ಅವನು ದೇವರ ಆಜ್ಞೆಯನ್ನು ಮತ್ತು ಪ್ರವಾದಿಯವರ ಆದೇಶಗಳನ್ನು ಅತ್ಯಂತ ಸೂಕ್ಷ್ಮವಾಗಿ ಆಲಿಸುತ್ತಿದ್ದ ಹಾಗೂ ಅವನು ರೋದಿಸುತ್ತಿದ್ದ. ಬಲ್ಬನ್ನನ ಪುರಾತನ ಗುಲಾಮರು ಮತ್ತು ಅವನ ಖಾಸಾ ಗುಲಾಮರ ಹೇಳಿಕೆಯಂತೆ ಅವರ್‍ಯಾರು ಕೂಡ ತಲೆಯ ಉಡುಗೆ ಇಲ್ಲದ ಮತ್ತು ಕಾಲಿಗೆ ಚಪ್ಪಲಿ ಇಲ್ಲದ ಬಾದಶಹನನ್ನು ನೋಡಿಯೇ ಇರಲಿಲ್ಲವೆಂಬುದು ಚರಿತ್ರೆಯಲ್ಲಿ ದಾಖಲಾಗಿದೆ. ಅವನು ಸಭೆಯಲ್ಲಿ ಎಂದಿಗೂ ಜೋರಾಗಿ ಗಹಗಹಿಸಿ ನಗುತ್ತಿರಲಿಲ್ಲ. ಬಾದಶಹನ ದರ್ಪ ಮತ್ತು ಅವನ ಗಾಂಭೀರ್ಯದ ಮುದ್ರೆಯು ಜನತೆಯ ಹೃದಯದ ಮೇಲೆ ಎಷ್ಟು ಆಳವಾಗಿ ಮತ್ತು ಗಂಭೀರವಾಗಿ ಒತ್ತಲ್ಪಡುತ್ತದೆಯೋ ಅಷ್ಟು ತೀವ್ರವಾಗಿ ರಾಜಕೀಯದ ಪರಿಣಾಮದ ಪ್ರಭಾವ ಆಗುವುದಿಲ್ಲ" ಎಂದು ಅವನು ನುಡಿಯುತ್ತಿದ್ದ ಅಷ್ಟೇ ಅಲ್ಲದೆ "ಯಾವ ಬಾದಶಹನು ದರ್ಪ ಠೀವಿ ಮತ್ತು ಪ್ರತಿಷ್ಠೆಯ ಪ್ರದರ್ಶನ ಮಾಡುವುದಿಲ್ಲವೋ ಅವನ ಪ್ರಜೆಗಳು ಕಿಡಿಗೇಡಿತನ ಮತ್ತು ವಿದ್ರೋಹಿ ಚಟುವಟಿಕೆಗಳತ್ತ ವಾಲುತ್ತಾರೆ. ಯಾವ ಬಾದಶಹನು ತನ್ನ ವೈಯುಕ್ತಿಕ ಘನತೆಯ ರಕ್ಷಣೆಯನ್ನು ಮಾಡುತ್ತಾನೋ ಆತನು ಬಹಳ ನಿರಾಳವಾಗಿ ಅನೇಕಾನೇಕ ವರ್ಷಗಳವರೆಗೆ ರಾಜ್ಯಾವಾಳುತ್ತಾನೆ. ಹೀಗೆ ತನ್ನ ದರ್ಪ ಮತ್ತು ಪ್ರತಾಪದ ಪ್ರದರ್ಶನವನ್ನು ಮಾಡದ ಬಾದಶಹನ ರಾಜ್ಯವು ಪಿತೂರಿ ಮತ್ತು ಗಲಭೆಗಳ ಕೇಂದ್ರ ಬಿಂದುವಾಗುತ್ತದೆ. ನ್ಯಾಯ ನೀಡುವ ಕಾನೂನುಗಳು ಬರೀ ಪುಸ್ತಕದ ಅಲಂಕಾರವಾಗಿ ಉಳಿಯುತ್ತವೆ ಹಾಗೂ ಬದುಕಿನ ಕಾರ್ಯರಂಗದಲ್ಲಿ ಅವುಗಳಿಗೆ ಯಾವುದೇ ಆದ್ಯತೆ ದೊರಕುವುದಿಲ್ಲ. ಕ್ರೌರ್ಯ ಮತ್ತು ಹಿಂಸೆಯ ಯುಗ ಆರಂಭವಾಗುತ್ತದೆ." ಎಂದು ಕೂಡ ಬಲ್ಬನ್ ನುಡಿಯುತ್ತಿದ್ದ.

ಶಾಂತಿ ಮತ್ತು ಸುವ್ಯವಸ್ಥೆ:

ಈ ಎಲ್ಲಾ ಸದ್ಗುಣಗಳು ಮತ್ತು ಸಜ್ಜನಿಕೆಯ ನಡವಳಿಕೆಗಳನ್ನು ಪಾಲಿಸುತ್ತಿದ್ದ ಬಲ್ಬನ್ನನು ವಿದ್ರೋಹ ಮತ್ತು ಕಿಡಿಗೇಡಿತನವನ್ನು ಇಷ್ಟ ಪಡುತ್ತಿರಲಿಲ್ಲ. ವಿದ್ರೋಹಿಯು ಮುಸ್ಲಿಮನಾಗಲೀ ಅಥವಾ ಮುಸ್ಲಿಮೇತರನಾಗಲೀ ಆ ವ್ಯಕ್ತಿಯ ಶಿರಚ್ಛೇದನವನ್ನು ಮಾಡುವುದರಲ್ಲಿ ಅವನು ಯಾವುದೇ ರೀತಿಯ ರಿಯಾಯಿತಿಯನ್ನು ತೋರಿಸುತ್ತಿರಲಿಲ್ಲ. ಅವನ ಆಡಳಿತಾವಧಿಯಲ್ಲಿ ದೇಶದ ಎಲ್ಲೆಡೆ ಮತು ಶಾಂತಿ ಸುವ್ಯವಸ್ಥೆಯನ್ನು

ಕಾಪಾಡುವ ಸಲುವಾಗಿ ಅವನು ರಾಜ ದ್ರೋಹಿಗಳಿಗೆ ಎಲ್ಲಾ ರೀತಿಯ ಸಜೆಗಳನ್ನು ನೀಡುತ್ತಿದ್ದ. ಕೊಲೆ ಮಾಡಲು ಅಥವಾ ಕಾರಾಗೃಹ ವಾಸದ ಶಿಕ್ಷೆಗಳನ್ನು ನೀಡುವಲ್ಲಿ ಅವನು ಯಾವುದೇ ರೀತಿಯಲ್ಲಿ ತಡಮಾಡುತ್ತಿರಲಿಲ್ಲ. ಮತ್ತು ಸಜೆಯು ಶರೀಯತ್‌ಗೆ ಅನುಗುಣವಾಗಿದೆಯೇ ಅಥವಾ ವಿರೋಧವಾಗಿದೆಯೇ ಎಂದು ದ್ವಂದ್ವದಿಂದ ಕೂಡಿ ಕರ್ತವ್ಯ ಲೋಪವನ್ನು ಮಾಡುತ್ತಿರಲಿಲ್ಲ. ಬಲ್ಬನ್ನನು ಅಲ್ತಮಷ್‌ನ ಸಂತತಿಯವರನ್ನು ತನ್ನ ಶತ್ರುಗಳೆಂದು ಪರಿಗಣಿಸಿ ಅವರನ್ನು ಎಲ್ಲಾ ಸಂದರ್ಭದಲ್ಲಿಯೂ ಶಿರಚ್ಛೇದನದ ಸಜೆಗೆ ಗುರಿ ಪಡಿಸಿದ. ಅವನು ಒಬ್ಬ ವ್ಯಕ್ತಿಯ ವಿದ್ರೋಹ ಮತ್ತು ಕಿಡಿಗೇಡಿತನದ ದೆಸೆಯಿಂದ ಇಡೀ ಸೈನ್ಯ ಅಥವಾ ಇಡೀ ಪಟ್ಟಣವನ್ನು ನಾಶ ಮಾಡಿದಂತಹ ಪ್ರಕರಣಗಳು ಕೂಡ ನಡೆದಿವೆ. ಈ ಕಾರಣದಿಂದ ಬಲ್ಬನ್ನನ ಆದೇಶವನ್ನು ಧಿಕ್ಕರಿಸುವ ಧೈರ್ಯವು ಯಾರಿಗೂ ಇರುತ್ತಿರಲಿಲ್ಲ ಶಮ್ಸುದ್ದೀನ್ ಅಲ್ತಮಷ್‌ನ ಕಾಲಾವಧಿಯ ಅನೇಕ ಸಂಹಿತೆ ಮತ್ತು ಕಾನೂನುಗಳು ಅವನ ವಾರೀಸುದಾರರ ಲೋಪ ಮತ್ತು ಅಸಾಮರ್ಥ್ಯದಿಂದ ರದ್ದುಗೊಂಡಿದ್ದು, ಬಲ್ಬನ್ನನು ತನ್ನ ಆಡಳಿತಾವಧಿಯಲ್ಲಿ ಅವುಗಳೆಲ್ಲವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದ.

ಶಿಕಾರಿಯ ಹವ್ಯಾಸ:

ಬಲ್ಬನ್ನನಿಗೆ ಶಿಕಾರಿಯಲ್ಲಿ ಅತೀವ ಆಸಕ್ತಿ ಇತ್ತು ಹೀಗಾಗಿ ಅವನ ಕಾಲಾವಧಿಯಲ್ಲಿ ಮೀರ್ ಶಿಕಾರಿ (ಶಿಕಾರಿ ಇಲಾಖೆಯ ಮುಖ್ಯಸ್ಥನ) ಹುದ್ದೆಯನ್ನು ತುಂಬಾ ಗೌರವದಿಂದ ಕಾಣಲಾಗುತ್ತಿತ್ತು. ತನ್ನ ಆಡಳಿತದ ಕರ್ತವ್ಯಗಳನ್ನು ಯಶಸ್ವಿಯಾಗಿ ನೆರವೇರಿಸುತ್ತಿದ್ದುದರ ಜೊತೆಯಲ್ಲಿ ಬಲ್ಬನ್ನನು ಇಡೀ ದಿನವನ್ನು ಬೇಟೆಯ ವಿಹಾರದಲ್ಲಿ ಕಳೆಯುತ್ತಿದ್ದ. ಬೇಟೆಯನ್ನಾಡಲು ಥಂಡಿ ಹವೆಯು ಪ್ರಶಸ್ತವಾದ ಕಾಲವೆಂದು ಅವನು ಭಾವಿಸಿದ್ದ ಹಾಗೂ ಆ ಋತುವಿನ ಆಗಮನದ ನಿರೀಕ್ಷೆಯಲ್ಲಿರುತ್ತಿದ್ದ. ಆ ಋತುವಿನಲ್ಲಿ ದೆಹಲಿಯ ನಾಲ್ಕು ದಿಕ್ಕುಗಳಲ್ಲಿಯೂ ಇಪ್ಪತ್ತು ಇಪ್ಪತ್ತು ಹರದಾರಿ ರಸ್ತೆಗಳಲ್ಲಿ ರಕ್ಷಣೆಯ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಬಲ್ಬನ್ನನು ರಾತ್ರಿಯು ಇನ್ನೂ ಬಾಕಿ ಇರುವಾಗಲೇ ಶಿಕಾರಿಗೆ ಹೊರಡುತ್ತಿದ್ದ ಹಾಗೂ ಮರು ರಾತ್ರಿಯ ಮೂರನೆಯ ಎರಡು ಭಾಗ ಕಳೆದ ನಂತರ ಅವನು ಶಿಕಾರಿಯಿಂದ ಮನೆಗೆ ಮರಳುತ್ತಿದ್ದ. ಅವನ ಬೆಂಗಾವಲಾಗಿ ಯಾವಾಗಲೂ ಒಂದು ಸಾವಿರ ಕುದುರೆ ಸವಾರರು ಹಾಗೂ ಒಂದು ಸಾವಿರ ಪದಾತಿ ದಳದ ಬಿಲ್ಲು ವಿದ್ಯೆ ಪರಿಣಿತರು ಇರುತ್ತಿದ್ದರು. ಅವರ ಎಲ್ಲಾ ವೆಚ್ಚಗಳನ್ನು ರಾಜನ ಖಜಾನೆಯಿಂದ ನಿರ್ವಹಿಸಲಾಗುತ್ತಿತ್ತು. ಹಿಲಾಕು ಖಾನನು ಬಲ್ಬನ್ನನ ಈ ಹವ್ಯಾಸದ ವಿವರಗಳನ್ನು ಕೇಳಿದಾಗ ಆ ಕ್ರೂರಿಯು ಹೇಳಿದ, "ಬಲ್ಬನ್ ಒಬ್ಬ ಅನುಭವಸ್ಥ ಹಾಗೂ ದೂರ ದೃಷ್ಟಿಯುಳ್ಳ ಬಾದಶಹನಾಗಿದ್ದಾನೆ. ಹೊರ ನೋಟಕ್ಕೆ ಅವನು ಶಿಕಾರಿಯ ಹವ್ಯಾಸದಲ್ಲಿ ಮಗ್ನನಾಗಿದ್ದಾನೆ ಎಂದು ತಿಳಿದು ಬರುತ್ತದೆ. ಆದರೆ ಅಸಲಿಗೆ ನೋಡಿದಲ್ಲಿ ಅವನು ಈ ಮೂಲಕ ತನ್ನ ಕುದುರೆ ಸವಾರರಿಗೆ

ಕವಾಯತನ್ನು ನಡೆಸಿ ತನ್ನ ಸೇನೆಯನ್ನು ಸನ್ನದ್ಧನಾಗಿಟ್ಟಿರುತ್ತಾನೆ. ಹಿಲಾಕುಖಾನ್‌ನ ಸದರಿ ಮಾತನ್ನು ಕೇಳಿದ ಬಲ್ಬನ್ನನು ಆತನ ಬುದ್ಧಿವಂತಿಕೆ ಮತ್ತು ಜ್ಞಾನವನ್ನು ಪ್ರಶಂಸೆ ಮಾಡಿದ ಮತ್ತು ನುಡಿದ, "ಯಾವಾತನು ತನ್ನ ಕತ್ತಿಯ ಬಲದ ಶ್ರಮದಿಂದ ಲೋಕ ಜ್ಞಾನವನ್ನು ಪಡೆದಿದ್ದಾನೆಯೋ ಅವನಿಗೆ ರಾಜ್ಯಾಡಳಿತ ಹಾಗೂ ರಾಜಕಾರಣದ ಕಾಯಿದೆ ಮತ್ತು ಸಂಹಿತೆಯ ಬಗ್ಗೆ ಉತ್ತಮ ಒಳನೋಟ ದೊರಕುತ್ತದೆ."

ಬಲ್ಬನ್ನನ ದೂರದೃಷ್ಟಿ:

ಗಯಾಸುದ್ದೀನ್ ಬಲ್ಬನ್‌ನ ರಾಜ್ಯ ಹಾಗೂ ಆಡಳಿತ ವ್ಯವಸ್ಥೆಯ ಬುನಾದಿಯು ಭದ್ರವಾದ ನಂತರ ಅವನ ಕೆಲವು ನಂಬಿಕಸ್ಥ ಸರದಾರರು ಅವನಲ್ಲಿ ಕೆಳಕಂಡಂತೆ ಅರಿಕೆ ಮಾಡಿದರು "ಖುತ್ಬುದ್ದೀನ್ ಐಬಕ್ ಮತ್ತು ಸುಲ್ತಾನ್ ಶಂಸುದ್ದೀನ್ ಅಲ್ತಮಷ್‌ನ ಆಡಳಿತಾವಧಿಯಲ್ಲಿ ಇಸ್ಲಾಮಿ ಆಡಳಿತಕ್ಕೆ ಒಳ ಪಟ್ಟಿದ್ದ ಗುಜರಾತ್ ಮತ್ತು ಮಾಳವ ಹಾಗೂ ಇನ್ನಿತರೆ ಕೆಲವು ರಾಜ್ಯಗಳು ಈಗ ನಿರಂಕುಶಮತಿಗಳಾಗಿದ್ದಾರೆ . ದೇಶದೊಳಗೆ ನೆಮ್ಮದಿ ಉಂಟಾಗಿ ಶಾಂತಿ ಸುವ್ಯವಸ್ಥೆಯು ಏರ್ಪಟ್ಟಿರುವುದರಿಂದ ಈ ನಿರಂಕುಶ ರಾಜರ ಕಡೆ ಗಮನ ಕೊಡುವುದು ಅಗತ್ಯವಾಗಿದೆ. ಹಾಗೂ ಆ ಮೂಲಕ ಆ ರಾಜ್ಯಗಳನ್ನು ದೆಹಲಿಯ ಬಾದಶಹನ ಆಳ್ವಿಕೆಯಲ್ಲಿ ಸೇರ್ಪಡೆ ಮಾಡಿ ಕೊಳ್ಳಬಹುದು". ಬಲ್ಬನ್ನನು ಅವರ ಮಾತಿಗೆ ಹೀಗೆಂದು ಉತ್ತರಿಸಿದ, "ಇತ್ತೀಚಿನ ದಿನಗಳಲ್ಲಿ ಮೊಘಲರ ಹಾವಳಿ ಹೆಚ್ಚಾಗಿದೆ. ಅವರು ಹಿಂದೂಸ್ತಾನದ ಒಂದು ಭಾಗವನ್ನು ಈಗಾಗಲೇ ಆಕ್ರಮಿಸಿಕೊಂಡಿದ್ದಾರೆ ಮತ್ತು ಅವರ ಒಂದು ತಂಡವು ನಿರಂತರವಾಗಿ ಹಿಂದೂಸ್ತಾನದ ಮೇಲೆ ಲೂಟಿ ಹಾಗೂ ಹಲ್ಲೆಯನ್ನು ಮಾಡುವಲ್ಲಿ ನಿರತವಾಗಿದೆ. ಈ ಪರಿಸ್ಥಿಯಲ್ಲಿ ದೆಹಲಿಯಿಂದ ಹೊರ ಹೋಗುವುದು ಮತ್ತು ದೂರದ ಪ್ರದೇಶಗಳ ವಿಜಯವನ್ನು ಪಡೆದುಕೊಳ್ಳಲು ರಾಜಧಾನಿಯನ್ನು ರಕ್ಷಣಾ ರಹಿತವಾಗಿ ಮಾಡುವುದು ವಿವೇಕ ರಹಿತ ನಡವಳಿಕೆಯಾಗಿದೆ. ನಮ್ಮ ದೇಶವನ್ನು ಹಾಲಿ ದೇಶದ ಶತ್ರುಗಳಿಂದ ರಕ್ಷಣೆ ಮಾಡುವುದು ಆದ್ಯ ಕರ್ತವ್ಯವಾಗಿದೆ ಹೊರತು ಹೊಸ ಹೊಸ ಪ್ರದೇಶದಲ್ಲಿ ವಿಜಯದ ಪತಾಕೆಯನ್ನು ಹಾರಿಸುವುದಲ್ಲ."

ತಾತಾರ್‌ಖಾನ್‌ನ ಅಧೀನತೆ:

ಹಿಜರಿ ಶಕೆ ೬೬೪ರಲ್ಲಿ ಮೊಹಮ್ಮದ್ ಅರ್ಸಲಾನ್ ಖಾನ್‌ನ ಮಗನಾದ ತಾತಾರ್‌ಖಾನ್‌ನು (ಸುಲ್ತಾನ ನಾಸಿರುದ್ದೀನ್ ಮೆಹಮೂದ್‌ನ ಆಡಳಿತಾವಧಿಯಲ್ಲಿ ಈತ ಬಂಡಾಯವೆದ್ದಿದ್ದ) ಲಕ್ನೋತಿಯಿಂದ ೬೩ ಆನೆಗಳನ್ನು ಮತ್ತು ಇನ್ನೂ ಅನೇಕ ಅಮೂಲ್ಯವಾದ ಉಡುಗೊರೆಗಳನ್ನು ಬಲ್ಬನ್‌ನ ಸನ್ನಿಧಿಗೆ ಕಳಿಸಿಕೊಟ್ಟ. ಅವನ ಆ ನಡವಳಿಕೆಯನ್ನು ಬಲ್ಬನ್ನನು ಮೆಚ್ಚಿ ಆ ಉಡುಗೊರೆಗಳನ್ನು ಸ್ವೀಕರಿಸಿದ ಹಾಗೂ ಆ ಸಂದರ್ಭವನ್ನು ಸಂತೋಷವಾಗಿ ಆಚರಿಸಬೇಕೆಂತಲೂ ನಗರವನ್ನು ಶೃಂಗರಿಸಿ ಸಂಭ್ರಮದ ಕೂಟಗಳನ್ನು ಆಯೋಜಿಸಬೇಕೆಂತಲೂ ಪ್ರಜೆಗಳಿಗೆ ಆಜ್ಞೆ

ಮಾಡಿದ. ಹಾಗೂ ಆ ಸಂಭ್ರಮಾಚರಣೆಯ ಸಲುವಾಗಿ ಬದಾಯೂನ್ ಬಾಗಿಲ ಹೊರಗಡೆ ನಿರ್ಮಿಸಲಾಗಿದ್ದ ಚಬೂತ್ರಯ ನಾಸಿರಿ (ನಾಸಿರಿ ವೇದಿಕೆ) ಯಲ್ಲಿ ದರಬಾರನ್ನು ಆಯೋಜಿಸಿದ. ಸದರಿ ದರಬಾರಿನಲ್ಲಿ ಎಲ್ಲಾ ಸರದಾರರು ಆಸ್ಥಾನಿಕರು ಅಧಿಕಾರಿಗಳು ಮತ್ತು ಕಪ್ಪ ಕಾಣಿಕೆಯನನು ಒಪ್ಪಿಸುತ್ತಿದ್ದ ಸಾಮಂತ ರಾಜ ಮಹಾರಾಜರು ಭಾಗವಹಿದರು. ಅವರೆಲ್ಲರೂ ಬಾದಶಹನಿಗೆ ಉತ್ಕೃಷ್ಟವಾದ ಉಡುಗೊರೆಗಳನ್ನು ನೀಡಿದರು ಹಾಗೂ ರಾಜ ಪಾರಿತೋಷಕಗಳ ಮನ್ನಣೆಯನ್ನು ಪಡೆದರು. ಹೀಗೆ ಬಲ್ಬನ್ನನು ತಾತಾರ್‌ಖಾನ್‌ನನ್ನು ತನ್ನ ಅಧೀನ ನಾಯಕನನ್ನಾಗಿ ಪುರಸ್ಕರಿಸಿ ತನ್ನ ಪ್ರಖ್ಯಾತ ಮಂಡಲೀಕರ ಸಾಲಿನಲ್ಲಿ ಸೇರಿಸಿಕೊಂಡ.

ಮೇವಾಡದ ಲೂಟಿಕೋರರ ಅಂತ್ಯ:

ಅಲ್ತಮಷ್‌ನ ವಂಶಸ್ಥರ ಕಾಲಾವಧಿಯಲ್ಲಿ ಮೇವಾಡದ ಒಂದು ತಂಡವು ದೆಹಲಿ ಸುತ್ತ ಮುತ್ತಲಿನ ಪ್ರದೇಶದ ಕಾಡುಮೇಡುಗಳಲ್ಲಿ ಅಡಗಿ ಕುಳಿತು ಕೊಲೆ ಮತ್ತು ಲೂಟಿಯ ಧಂದೆಯಲ್ಲಿ ನಿರತವಾಗಿತ್ತು ಎಂದು ಚರಿತ್ರೆಕಾರರು ದಾಖಲಿಸುತ್ತಾರೆ. ಆ ಲೂಟಿಕೋರರು ರಾತ್ರೆಯ ಹೊತ್ತಿನಲ್ಲಿ ಬಲಾತ್ಕಾರವಾಗಿ ಮನೆಗಳಿಗೆ ನುಗ್ಗುತ್ತಿದ್ದರು ಹಾಗೂ ಜನರ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದ್ದರು. ವ್ಯಾಪಾರಿಗಳು ಹಾಗೂ ವಾಣಿಜ್ಯದಲ್ಲಿ ತೊಡಗಿದ್ದ ಜನರಿಗೂ ಅವರಿಂದ ಯಾವುದೇ ರಕ್ಷಣೆ ಇರಲಿಲ್ಲ ಮತ್ತು ಮನೆಗಳಿಗೆ ನೀರು ತುಂಬಿಸುತ್ತಿದ್ದ ದಾಸಿಯರನ್ನು ಆ ಮೇವಾಡದ ಲೂಟಿಕೋರರು ಹಾಡು ಹಗಲೇ ಹೊತ್ತೊಯ್ದರು. ಅವರ ಭಯದಿಂದ ನಗರದ ಬಾಗಿಲನ್ನು ಸಂಜೆ ಹೊತ್ತಿಗೆ ಬಂದ್ ಮಾಡುತ್ತಿದ್ದರು ಅಸರ್ ನಮಾಜಿನ ನಂತರ (ಅಂದರೆ ಸಂಜೆ ೫ ರ ನಂತರ) ಯಾವನೇ ವ್ಯಕ್ತಿಯು ಖಬರಸ್ತಾನ್‌ವರೆಗೆ ಹೋಗುವ ಸಾಮರ್ಥ್ಯವನ್ನು ಹೊಂದಿರಲಿಲ್ಲ ಬಲ್ಬನ್ನನಿಗೆ ಈ ಮೇವಾಡದ ಲೂಟಿಕೋರರ ಬಗ್ಗೆ ಹಾಗೂ ಪ್ರಜೆಗಳ ನೋವು ಮತ್ತು ಯಾತನೆಯ ಬಗ್ಗೆ ತಿಳಿದು ಬಂದ ಕೂಡಲೇ ಆ ದುರುಳರನ್ನು ಅಡಗಿಸುವುದೇ ರಾಜ್ಯಾಡಳಿತದ ಆದ್ಯ ಕರ್ತವ್ಯವೆಂದು ನಿರ್ಧರಿಸಿದ. ಹಾಗೂ ಆ ದುಷ್ಟರನ್ನು ಎದುರಿಸುವ ಸಲುವಾಗಿ ದೆಹಲಿಯಿಂದ ಹೊರಟ ಬಲ್ಬನ್ನನು ಮೇವಾಡದ ಆ ಲೂಟಿಕೋರರರನ್ನು ಸದೆ ಬಡಿದ ಹಾಗೂ ಸುಮಾರು ಒಂದು ಲಕ್ಷದಷ್ಟಿದ್ದ ಅವರ ಮಾರಣ ಹೋಮವನ್ನು ಮಾಡಿದ. ತದ ನಂತರ ಆ ಲೂಟಿಕೋರರ ಆವಾಸಸ್ಥಾನವಾಗಿದ್ದ ಆ ಕಾಡನ್ನು ಸಂಪೂರ್ಣವಾಗಿ ಕಡಿದು ಹಾಕಿ ಆ ಜಮೀನನ್ನು ಕೃಷಿಕರ ನಡುವೆ ಹಂಚಿದ. ಆ ಸ್ಥಳದಲ್ಲಿ ಸಿಪಾಯಿಗಳ ಚೌಕಿಯನ್ನು ಕೂಡ ನಿರ್ಮಾಣ ಮಾಡಿದ ಹಾಗೂ ಆ ಚೌಕಿಗಳ ನಿರ್ವಹಣೆಗಾಗಿ ತನ್ನ ಕೆಲವು ನಂಬಿಗಸ್ತ ಸರದಾರರನ್ನು ನೇಮಿಸಿ ದೆಹಲಿಗೆ ಮರಳಿದ.

ವಿದ್ರೋಹಿಗಳ ಧ್ವಂಸ :

ಈ ಘಟನೆ ನಡೆದ ಮರು ವರ್ಷದಲ್ಲಿ ಬಲ್ಬನ್ನನು ಮಿಯಾಂದೋಆಬ್‌ನಲ್ಲಿ

ಬಂಡೆದ್ದವರನ್ನು ನಿಗ್ರಹಿಸಲು ನಿರ್ಧರಿಸಿದ. ಆ ಪ್ರದೇಶದ ಆಡಳಿತವನ್ನು ಸಮಚಿತ್ತದ ಸರದಾರರುಗಳಿಗೆ ಒಪ್ಪಿಸಿದ ಹಾಗೂ ಆ ವಿದ್ರೋಹಿಗಳ ಅಸ್ತಿತ್ವವೇ ಕೊನೆಗೊಳ್ಳುವಂತಹ ಕಠಿಣ ಶಿಕ್ಷೆಯನ್ನು ಅವರಿಗೆ ನೀಡಬೇಕೆಂದು ಆಜ್ಞೆ ಮಾಡಿದ. ಆ ಸರದಾರರು ರಾಜಾಜ್ಞೆಯನ್ನು ಪಾಲಿಸಿದರು ಹಾಗೂ ಮಿಯಾಂದೋಆಬ್‌ನ ಜನತೆಯ ಸಂಕಷ್ಟವನ್ನು ನಿವಾರಿಸಿದರು. ಆ ದುಷ್ಟರ ಸಂಹಾರವನ್ನು ಮಾಡಿದ ನಂತರ ಬಲ್ಬನ್ ಎರಡು ಸಾರಿ ಕಂಪಲ್, ಪಟಿಯಾಲಿ, ಮತ್ತು ಭೋಜ್‌ನ ಪ್ರಯಾಣ ಕೈಗೊಂಡ. (ಈ ಸ್ಥಳಗಳು ಹಾಲಿ ಬದಾಯೂನ್ ಮತ್ತು ಫರ್ಕಾಬಾದ್ ಜಿಲ್ಲೆಗಳಲ್ಲಿವೆ) ಮತ್ತು ಪ್ರತಿ ಸಾರಿಯೂ ಆ ಭಾಗದಲ್ಲಿ ಬಂಡೆದ್ದವರನ್ನು, ದುಷ್ಟರನ್ನು ಮತ್ತು ಲೂಟಿಕೋರರನ್ನು ನಾಶ ಮಾಡಿದ. ಆ ಕಿಡಿಗೇಡಿಗಳ ಪೈಕಿ ಲಕ್ಷಾಂತರ ಮಂದಿಯನ್ನು ವಧೆ ಮಾಡಲಾಯಿತು ಹಾಗೂ ಆ ವಿದ್ರೋಹಿಗಳನ್ನು ಅವರ ಸಂಸಾರ ಸಮೇತ ಬಂಧಿಸಿ ರಾಜನ ಗುಲಾಮಗಿರಿಗೆ ಸೇರಿಸಿಕೊಳ್ಳಲಾಯಿತು. ಆ ಭಾಗದ ವಿದ್ರೋಹಿಗಳು ಮತ್ತು ಕಳ್ಳರನ್ನು ಸದೆ ಬಡಿದ ನಂತರ ಅಖಿಲ ಹಿಂದೂಸ್ತಾನದಲ್ಲಿ (ಜೂನ್‌ಪುರ, ಬಿಹಾರ ಹಾಗೂ ಬಂಗಾಳ ಎಂದು ಅರ್ಥೈಸಿಕೊಳ್ಳಬೇಕು) ಎಲ್ಲಾ ವಿಪತ್ತುಗಳಿಂದ ರಕ್ಷಣೆ ದೊರಕಿತು ಹಾಗೂ ಪ್ರಯಾಣಿಕರು ನಿಶ್ಚಿಂತೆಯಿಂದ ಪ್ರಯಾಣ ಮಾಡಲಾರಂಭಿಸಿದರು. ಬಲ್ಬನ್ನನು ಕಂಪಲ್, ಭೋಜ್‌ಪುರ ಮತ್ತು ಪಟಿಯಾರಿಯಲ್ಲಿ ಮಸೀದಿ ಹಾಗೂ ಕೋಟೆಗಳನ್ನು ನಿರ್ಮಾಣ ಮಾಡಿದ. ಹಾಗೂ ಅಲ್ಲಿನ ಆಡಳಿತವನ್ನು ತನ್ನ ಸರದಾರ ವಶಕ್ಕೆ ನೀಡಿದ. ಮತ್ತು ಜಲಾಲಿಯ ಕೋಟೆಯನ್ನು ನಿರ್ಮಾಣ ಮಾಡಿ ಅವನು ದೆಹಲಿಗೆ ಮರಳಿದ.

ಅವನು ದೆಹಲಿಗೆ ಮರಳಿದ ಕೂಡಲೇ ಅವನಿಗೆ ಬದಾಯೂನ್ ಮತ್ತು ಅಮ್ರೋಹದ ಆಡಳಿತಗಾರನ ಕಡೆಯಿಂದ ಕೇಸ್ತರ್‌ನ ವಿದ್ರೋಹದ ಸುದ್ದಿ ದೊರಕಿತು. ಕೂಡಲೇ ಅವನು ಸನ್ನದ್ಧವಾಗಲು ಸೇನೆಗೆ ಆಜ್ಞೆಯನ್ನು ಮಾಡಿದ. ಬಾದಶಹನು ಕೋಹೆ ಪಾಯದ ಪ್ರಯಾಣ ಮಾಡುವನೆಂಬ ನಿರೀಕ್ಷೆ ಪ್ರಜೆಗಳಿಗೆ ಇತ್ತು. ಆದರೆ, ಕೆಂಬಣ್ಣದ ಡೇರೆಗಳ ರಾಜನ ವಿಶೇಷ ಪಡೆಯು ಬಾದಶಹನ ಮಹಲಿನಿಂದ ಹೊರಡುವುದಕ್ಕೆ ಮುನ್ನವೇ ಬಲ್ಬನ್ನನು ಐದು ಸಾವಿರ ಸವಾರರಿಂದ ಕೂಡಿದ ಅತಿ ಕಡಿಮೆ ಸಂಖ್ಯೆಯ ಸೈನ್ಯದ ಜೊತೆಯಲ್ಲಿ ಹೊರಟು ನಿಂತ. ಗಂಗಾ ನದಿಯನ್ನು ದಾಟುವಲ್ಲಿ ಎರಡು ದಿನಗಳು ಕಳೆದವು. ಮೂರನೆಯ ದಿನ ಮುಸಲ್ಮಾನರ ಸೇನೆಯು ಕೇಸ್ತರನ್ನು ತಲುಪಿತು. ಆ ಪಟ್ಟಣವನ್ನು ತಲುಪಿದ ಕೂಡಲೇ ಬಲ್ಬನ್ ಕಗ್ಗೊಲೆಯ ಆಜ್ಞೆಯನ್ನುಮಾಡಿದ. ಅವನ ಸೈನ್ಯವು ಅವನ ಆದೇಶವನ್ನು ಅಕ್ಷರಶಃ ಪಾಲಿಸಿತು. ಹಾಗೂ ಮನಸೋ ಇಚ್ಛೆ ಕೊಲೆ ಮತ್ತು ವಿನಾಶವು ವಿಜೃಂಭಿಸಿತು. ಮಹಿಳೆಯರು ಮತ್ತು ಮಕ್ಕಳನ್ನು ಹೊರತು ಪಡಿಸಿ ಯಾರೊಬ್ಬರೂ ಬದುಕಿ ಉಳಿಯಲಿಲ್ಲ ಗಯಾಸುದ್ದೀನ್ ಬಲ್ಬನ್ನನ ಕತ್ತಿಯು ವಿದ್ರೋಹಿಗಳಿಗೆ ಹೇಗೆ ನಿರ್ನಾಮ ಮಾಡಿತೆಂದರೆ, ಮತ್ತೆ ಜಲಾಲುದ್ದೀನ್ ಖಿಲ್ಜಿಯ ಆಡಳಿತಾವಧಿಯವರೆಗೂ ಬದಾಯೂನ್, ಸಂತಿಲ್ ಮತ್ತು ಅಮ್ರೋಹದ

ಭಾಗದಲ್ಲಿ ಯಾವುದೇ ವಿಚ್ಛಿದ್ರಕಾರಕ ಶಕ್ತಿಯ ಹೆಸರು ಕೂಡ ಕೇಳಿ ಬರಲಿಲ್ಲ. ಈ ಎಲ್ಲಾ ಗೊಂದಲವನ್ನು ಕೂಡ ಸಕ್ಷಮವಾಗಿ ನಿಭಾಯಿಸಿದ ನಂತರ ಬಲ್ಬನ್ ದೆಹಲಿಗೆ ಮರಳಿದ.

ಕೋಹೆಪಾಯದ ಪ್ರಯಾಣ:

ದೆಹಲಿ ತಲುಪಿದ ಬಲ್ಬನ್ ಕೆಲ ದಿನಗಳವರೆಗೆ ವಿಶ್ರಾಂತಿ ಪಡೆದ ನಂತರ ಕೋಹೆ ಪಾಯಕ್ಕೆ ಪ್ರಯಾಣ ಬೆಳೆಸಬೇಕೆಂದು ನಿರ್ಧರಿಸಿದ ಹಾಗೂ ಆ ಪ್ರಯಾಣವನ್ನು ಕೈಗೊಂಡು ವಿದ್ರೋಹಿಗಳನ್ನು ಬಂಡೆದ್ದವರನ್ನು ಮತ್ತು ಆತಂಕಕಾರಿಗಳ ಸದ್ದಡಗಿಸಿದ. ಅವನು ಕೊಲೆ ಮತ್ತು ವಿನಾಶದ ಕ್ರಿಯೆಯಲ್ಲಿ ಎಷ್ಟೊಂದು ತೊಡಗಿದನೆಂದರೆ, ಪೂರ್ತಿ ಎರಡು ವರ್ಷಗಳವರೆಗೆ ಅವನು ಕೋಹೆ ಪಾರಾದಲ್ಲೇ ಉಳಿದ. ಆ ಭಾಗದಿಂದ ಬಲ್ಬನ್‌ಗೆ ಬಹಳ ಹೆಚ್ಚು ಯುದ್ಧ ಸಂಪತ್ತು ಶೇಖರವಾಯಿತು ಹಾಗೂ ಮುಖ್ಯವಾಗಿ ಅನೇಕ ಕುದುರೆಗಳು ಅವನ ಕೈವಶವಾದವು. ಈ ಅರಾಜಕತೆಯಿಂದ ಅತ್ಯಂತ ಉತ್ತಮ ಕುಲದ ಕುದುರೆ ಕೂಡ ಮೂವತ್ತರಿಂದ ನಲವತ್ತು ತಂಗದ ಬೆಲೆಗಿಂತ ಕೇವಲ ಮಾರಾಟವಾಗುತ್ತಿತ್ತು. ಕೋಹೆ ಪಾಯದಲ್ಲಿ ವಿದ್ರೋಹಿಗಳ ಸದ್ದಡಗಿಸಿದ ನಂತರ ಬಲ್ಬನ್ ದೆಹಲಿಗೆ ಮರಳಿದ.

ಬಲ್ಬನ್‌ನ ಕಾಲದ ಸಂಪ್ರದಾಯವೇನೆಂದರೆ ಬಾದಶಹನು ಪ್ರಯಾಣದಿಂದ ದೆಹಲಿಗೆ ಮರಳಿದಾಗ ಎಲ್ಲಾ ಸರದಾರರು ಮತ್ತು ರಾಜ್ಯದ ಅಧಿಕಾರಿಗಳು ಸೇರಿ ಮೂರ್‍ನಾಲ್ಕು ಹರದಾರಿ ಹೋಗಿ ಬಾದಶಾಹನಿಗೆ ಸ್ವಾಗತಿಸುತ್ತಿದ್ದರು. ಹಾಗೂ ಬಾದಶಹನನ್ನು ತಮ್ಮ ಜೊತೆಯಲ್ಲಿ ಕರೆ ತಂದು ನಗರ ಪ್ರವೇಶಿಸುತ್ತಿದ್ದರು. ಆ ಸಂದರ್ಭಕ್ಕೆ ತಕ್ಕಂತೆ ನಗರವನ್ನು ವಿಶೇಷವಾಗಿ ಅಲಂಕರಿಸುತ್ತಿದ್ದರು ಹಾಗೂ ಬಾದಶಹನು ಸುರಕ್ಷಿತವಾಗಿ ಮರಳಿ ಬಂದ ಸಂತೋಷವನ್ನು ಸಡಗರದಿಂದ ಆಚರಿಸುತ್ತಿದ್ದರು. ಬಾದಶಹನ ಮೇಲಿನಿಂದ ನೀವಳಿಸಿದ ಹಣವನ್ನು ಶೇಖರಿಸಿ ಫಕೀರರು ಮತ್ತು ಬಡವರಿಗೆ ದಾನದ ರೂಪದಲ್ಲಿ ನೀಡುವ ಪದ್ಧತಿಯಂತೆ ಇತರೆ ಇಸ್ಲಾಮಿ ದೇಶಗಳಿಗೆ ದೇಣಿಗೆಯನ್ನು ಕಳಿಸಲಾಗುತ್ತಿತ್ತು.

ಲಾಹೋರ್‌ಗೆ ಪ್ರಯಾಣ:

ಕೋಹೆಪಾಯದಿಂದ ಮರಳಿದ ನಂತರ ಬಲ್ಬನ್ ಕೆಲದಿನಗಳ ಕಾಲ ದೆಹಲಿಯಲ್ಲಿ ವಿರಮಿಸಿ ಲಾಹೋರ್‌ಗೆ ಪ್ರಯಾಣವನ್ನು ಕೈಗೊಂಡ. ಲಾಹೋರ್ ತಲುಪಿದ ನಂತರ ಪಟ್ಟಣದ ಗೋಡೆಯನ್ನು ಹೊಸದಾಗಿ ನಿರ್ಮಿಸಿದ ಆ ಗೋಡೆಯು ಶಂಸಿ ಆಡಳಿತಗಾರರ ಕಾಲಾವಧಿಯಲ್ಲಿ ಮೊಘಲರ ಆಕ್ರಮಣಕ್ಕೆ ಬಲಿಯಾಗಿ ಶಿಥಿಲವಾಗಿತ್ತು ಆ ನಂತರದಲ್ಲಿ ಬಲ್ಬನ್ ಮೊಗಲರ ಆಕ್ರಮಣದಿಂದ ನಾಶವಾಗಿದ್ದ ಪಟ್ಟಣದಲ್ಲಿ ಹೊಸ ಪರಿಸರವನ್ನು ಸೃಷ್ಟಿಸಿದ ಹಾಗು ನಂತರ ದೆಹಲಿಗೆ ಮರಳಿದ.

ವೃದ್ಧ ಸೈನಿಕರ ವಜಾ:

ದೆಹಲಿ ತಲುಪಿದ ನಂತರ ಕೆಲವು ಸರದಾರರು, ಅನೇಕ ಸೈನಿಕರು ವೃದ್ಧರಾಗಿದ್ದು ಸೈನ್ಯಕ್ಕೆ ಉಪಯುಕ್ತರಾಗಿಲ್ಲ ಎಂಬ ಅಂಶವನ್ನು ಬಲ್ಬನ್‌ನ ಗಮನಕ್ಕೆ ತಂದರು. ಈ ಕಾರಣದಿಂದ ಆ ಸಿಪಾಯಿಗಳು ತಮ್ಮ ಸರದಾರರಿಗೆ ಒಂದಿಷ್ಟು ಹಣ ನೀಡಿ ತಮ್ಮ ಮನೆಯಲ್ಲಿ ಆರಾಮದಾಯಕವಾಗಿ ಕಾಲ ಕಳೆಯುತ್ತಾರೆ ಹಾಗೂ ಯುದ್ಧದಲ್ಲಿ ಭಾಗವಹಿಸುವುದಿಲ್ಲ ಎಂಬ ಮಾತನ್ನು ಕೂಡಾ ಆ ಸರದಾರರು ಬಾದಶಹನ ಗಮನಕ್ಕೆ ತಂದರು. ಈ ಮಾತನ್ನು ಕೇಳಿದ ನಂತರ ಸೈನ್ಯದಿಂದ ವೃದ್ಧ ಸೈನಿಕರನ್ನು ಬೇರ್ಪಡಿಸಬೇಕೆಂದು ಅವನು ಆಜ್ಞೆ ಮಾಡಿದ. ಹಾಗೂ ಅವರ ಸೇವೆಯನ್ನು ಪರಿಗಣಿಸಿ ಅವರಿಗೆ ಮೂವತ್ತು ತಂಗ ಹಣವನ್ನು ನೀಡಬೇಕೆಂತಲೂ ಹೆಚ್ಚಿನ ಹಣವನ್ನು ಅವರಿಂದ ವಸೂಲಿ ಮಾಡಿಕೊಳ್ಳಬೇಕೆಂತಲೂ ಅವನು ತನ್ನ ಆಜ್ಞೆಯಲ್ಲಿ ತಿಳಿಸಿದ. ರಾಜಾಜ್ಞೆಯ ದೆಸೆಯಿಂದ ಸೈನ್ಯದಲ್ಲಿ ತಳಮಳ ಆರಂಭವಾಯಿತು. ಆ ವಜಾಗೊಂಡ ಸೈನಿಕರ ಪೈಕಿ ಕೆಲವು ನಂಬಿಕೆಗೆ ಅರ್ಹ ವ್ಯಕ್ತಿಗಳು ಹಲವು ಅಮೂಲ್ಯ ಉಡುಗೊರೆಗಳನ್ನು ತೆಗೆದುಕೊಂಡು ಮುಲ್ಕ್ ಫಕ್ರುದ್ದೀನ್ ಕೊತ್ವಾಲ್‌ನ ಬಳಿ ತೆರಳಿ ತಮ್ಮ ಕರುಣಾಜನಕ ಪರಿಸ್ಥಿತಿಯ ಬಗ್ಗೆ ವಿಶದೀಕರಿಸಿದರು. ಮತ್ತು ನುಡಿದರು "ನಮ್ಮ ವೃದ್ಧಾಪ್ಯದಲ್ಲಿ ನಮಗೆ ಇಂತಹ ಆಪತ್ತು ಎದುರಾಗುವುದೆಂದು ನಮಗೆ ತಿಳಿದಿರಲಿಲ್ಲ. ನಮಗೆ ಈ ವಿಷಯ ಮೊದಲೇ ತಿಳಿದಿದ್ದರೆ ವೃದ್ಧಾಪ್ಯದಲ್ಲಿ ನಮಗೆ ಉಪಯುಕ್ತವಾಗುವ ಕೆಲಸವನ್ನು ನಾವು ನಮ್ಮ ಯೌವನದಲ್ಲಿಯೇ ಅವಲಂಬಿಸುತ್ತಿದ್ದೆವು. ಫಕ್ರುದ್ದೀನ್ ಕೋತ್ವಾಲ್‌ನು ಆ ಉಡುಗೊರೆಗಳನ್ನು ಸ್ವೀಕರಿಸಲಿಲ್ಲ ಮತ್ತು ಹೇಳಿದ, "ನಾನು ನಿಮ್ಮಿಂದ ಈ ಲಂಚವನ್ನು ಪಡೆದುಕೊಂಡಲ್ಲಿ ಬಾದಶಹನ ಮೇಲೆ ನನ್ನ ಈ ಶಿಫಾರಸು ಯಾವುದೇ ಪರಿಣಾಮವನ್ನು ಬೀರುವುದಿಲ್ಲ." ನಂತರ ಕೊತ್ವಾಲನು ಆ ಸೈನಿಕರನ್ನು ಬೀಳ್ಕೊಟ್ಟು ತನ್ನ ಮಾಮೂಲಿನಂತೆ ಬಾದಶಹನ ದರಬಾರಿಗೆ ಹಾಜರಾದ. ಹಾಗೂ ದರ್ಬಾರಿನಲ್ಲಿ ಅವನು ಉಪಸ್ಥಿತನಿದ್ದರೂ ಅತೀವ ಚಿಂತೆ ಮತ್ತು ಆತಂಕದಿಂದ ಕೂಡಿದ್ದ ಅವನ ಮೋರೆಯನ್ನು ನೋಡಿ ಬಲ್ಬನ್ ಅವನ ಆತಂಕದ ಕಾರಣವನ್ನು ಕೇಳಿದ ಆ ಅನುಭವೀ ಸರದಾರನು ಹೀಗೆಂದು ನುಡಿದ, "ಬಾದಶಹನ ದರ್ಬಾರಿನಲ್ಲಿ ವೃದ್ಧರ ಅಹವಾಲನ್ನು ಗಮನಿಸುವುದಿಲ್ಲವೆಂದು ನನಗೆ ತಿಳಿದಿದೆ. ಈ ಪರಿಸ್ಥಿಯನ್ನು ಕಂಡು ಅಂತಿಮ ನಿರ್ಣಾಯಕ ದಿನದಂದು ಅಲ್ಲಾಹನು ಕೂಡ ವೃದ್ಧರನ್ನು ತನ್ನ ಕರುಣೆಯಿಂದ ದೂರವಿಟ್ಟಲ್ಲಿ ನನ್ನಗತಿ ಏನಾಗಬಹುದು ಎಂದು ನನಗೆ ಗಾಬರಿಯಾಗುತ್ತಿದೆ" ಎಂದ ಫಕ್ರುದ್ದೀನನ ಸಂಜ್ಞೆ ಯಾವ ಕಡೆ ಇದೆ ಎಂಬುದನ್ನು ಅರಿತ ಬಲ್ಬನ್ ಕಣ್ಣೀರು ಹರಿಸಲಾರಂಭಿಸಿದ. ಅಷ್ಟೇ ಅಲ್ಲದೆ ವಜಾಗೊಳಿಸಿದ ಸೈನಿಕರಿಗೆ ಯಾವ ಕಡಿತವೂ ಮಾಡದಂತೆ ಅವರ ಸಂಪೂರ್ಣ ವೇತನವನ್ನು ನೀಡಬೇಕೆಂದು ಬಾದಶಹನು ತತ್‌ಕ್ಷಣ ಆದೇಶ ಮಾಡಿದ.

ಶೇರ್‌ಖಾನ್‌ನ ಸಾವು:

ಬಲ್ಬನ್ ಪಟ್ಟಾಭಿಷಿಕ್ತನಾದ ನಾಲ್ಕನೆಯ ವರ್ಷದಲ್ಲಿ ಅವನ ಚಿಕ್ಕಪ್ಪನ ಮಗನಾದ ಮೊಅಜ್ಜಿಮ್ ಶೇರ್‌ಖಾನ್ ಖ್ವಾಜಾತಾಷ್ ಮರಣ ಹೊಂದಿದ. ಸದರಿ ಶೇರ್ ಖಾನನು ಸುಲ್ತಾನ್ ನಾಸಿರುದ್ದೀನ್ ಮೆಹಮೂದ್‌ನ ಕಾಲಾವಧಿಯಿಂದಲೂ ಲಾಹೋರ್, ಮುಲ್ತಾನ್, ಬೆಹನೀರ್, ಸರ್‌ಹಿಂದ್, ದೇಬಾಲಪುರ ಮುಂತಾದ ಭಾಗಗಳ ಆಡಳಿತಗಾರನಾಗಿದ್ದ. ಭೂಭಾಗಗಳು ಮೊಘಲರ ಆಕ್ರಮಣಕ್ಕೆ ಈಡಾಗುವ ಗಡಿ ಭಾಗದಲ್ಲಿದ್ದವು. ಖುದ್ದು ಬಲ್ಬನ್ ಅವನಿಗೆ ವಿಷಪ್ರಾಶನ ಮಾಡಿಸಿ ಕೊಲೆಗೀಡು ಮಾಡಿದ್ದ ಎಂದು ಅನೇಕ ಇತಿಹಾಸಜ್ಞರು ಅಭಿಪ್ರಾಯ ಪಡುತ್ತಾರೆ. ಶೇರ್‌ಖಾನ್ ನಿರ್ಮಾಣ ಮಾಡಿದ್ದ ಗುಂಬದ್‌ವಾಖಿ ಬೆಹನೀರ್‌ನಲ್ಲಿ (ಬೆಹನೀರ್‌ನ ಗುಮ್ಮಟವೆಂಬ ಕಟ್ಟಡದಲ್ಲಿ) ಅವನ ಸಮಾಧಿ ಮಾಡಲಾಯಿತು. ಬಲ್ಬನ್ ಅವನ ಜಹಗೀರನ್ನು ವಿಂಗಡಿಸಿ ಸುನಾಮ್ ಸಮಾನ ಪ್ರದೇಶವನ್ನು ತುರ್ಕಾನೆ ಚೆಹಲ್‌ಗಾನಿಯ ಪ್ರತಿಷ್ಠಿತ ಸದಸ್ಯನಾಗಿದ್ದ ತೈಮೂರ್‌ಖಾನ್‌ನ ವಶಕ್ಕೆ ನೀಡಿದ. ಅಷ್ಟೇ ಅಲ್ಲದೆ ಉಳಿದ ಜಹಗೀರನ್ನು ಕೂಡ ಪ್ರತಿಷ್ಠಿತ ಸರದಾರರ ನಡುವೆ ಹಂಚಿದ. ಶೇರ್‌ಖಾನ್ ಜೀವಂತವಾಗಿರುವಷ್ಟು ಕಾಲಾವಧಿಯಲ್ಲಿ ಪಂಜಾಬ್‌ನ ಗಡಿಭಾಗವು ಮೊಘಲರ ದುರಾಕ್ರಮಣದಿಂದ ಸುರಕ್ಷಿತವಾಗಿತ್ತು ಆ ಸಿಂಹವು ಕಣ್ಣುಮುಚ್ಚಿದ ಕೂಡಲೇ ಆ ಭಾಗದಲ್ಲಿ ಪಿತೂರಿ ನಡೆಯಲಾರಂಭಿಸಿತು. ಮೊಘಲರು ಪ್ರಬಲರಾದರು ಹಾಗೂ ಲೂಟಿ ಮತ್ತು ದಂಗೆಗಳು ತಲೆ ಎತ್ತಿದವು.

ಬಲ್ಬನ್ನನು ತನ್ನ ಪುತ್ರನಾದ ಅಕ್ಬರ್ ಖಾನ್ ಅಲ್ ಮುಲ್ಕ್‌ಮೊಹಮ್ಮದ್ ಸುಲ್ತಾನ್‌ನನ್ನು (ಈತನು ಖಾನೆ ಶಹೀದ್‌ನ ಹೆಸರಿನಲ್ಲಿ ಪ್ರಖ್ಯಾತಿ ಪಡೆದಿದ್ದಾನೆ) ತನ್ನ ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಿದ. ಹಾಗೂ ಆತನಿಗೆ ಛತ್ರ ಚಾಮರ ಮೊದಲಾದ ರಾಜ ಲಾಂಛನಗಳನ್ನು ನೀಡಿ ಪುರಸ್ಕರಿಸಿದ. ತದನಂತರ ಆತನು ಖಾನೆ ಶಹೀದ್‌ನನ್ನು ಸೇರಿಯ ರಾಜನನ್ನಾಗಿ ಮಾಡಿ, ಆತನೊಡನೆ ತನ್ನ ಕೆಲವು ಯೋಗ್ಯ ಹಾಗೂ ನಂಬಿಗಸ್ಥ ಸರದಾರರ ಜೊತೆಯಲ್ಲಿ ಅಲ್ಲಿಗೆ ಕಳಿಸಿಕೊಟ್ಟ.

ಐಬಕ್ ಮೊಹಮ್ಮದ್ ಕಶೀಲ್‌ಖಾನ್ ಮತ್ತು ಅಲ್ಲಾವುದ್ದೀನ್:

ಫೈರೋಜ್‌ಶಾಹಿ ಇತಿಹಾಸ ಗ್ರಂಥದ ಕರ್ತೃವಿನ ದಾಖಲೆಯಂತೆ ಶಂಸುದ್ದೀನ್ ಅಲ್ತಮಷ್‌ನ ಕಾಲಾವಧಿಯ ಅನೇಕ ಸರದಾರರು ತಮ್ಮ ಪುತ್ರರನ್ನು "ಮೊಹಮ್ಮದ್" ನ ಪವಿತ್ರ ಹೆಸರಿನಿಂದ ನಾಮಕರಣ ಮಾಡಿದ್ದರು. ಆ ಸರದಾರರಿಗೆ ತಮ್ಮ ಉತ್ತಮ ನಂಬಿಕೆಯ ಫಲ ಪ್ರಾಪ್ತಿ ಏನು ದೊರಕಿತೆಂದರೆ ತಮ್ಮ ತಂದೆ ತಾಯಿಯರ ಪಾಲನೆ ಪೋಷಣೆ ಹಾಗೂ ಯೋಗ್ಯ ಗುರುಗಳ ಮಾರ್ಗದರ್ಶನ ಹಾಗೂ ಉತ್ತಮ ವಿದ್ಯಾಭ್ಯಾಸದ ದೆಸೆಯಿಂದ ಒಂದಲ್ಲ ಒಂದು ಅತ್ಯುತ್ತಮ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯಲ್ಲಿ ತೊಡಗಿದ್ದು ಇಂದಿನವರೆಗೂ ಅವರ ಹೆಸರು ಪ್ರಕಾಶಮಾನವಾಗಿ

ಮಿನುಗುತ್ತಿದೆ. ಇಂತಹವರ ಪೈಕಿ ಒಬ್ಬ ಐಬಕ್ ಮೊಹಮ್ಮದ್ ಕಶೀಲ್‌ಖಾನ್ ಒಬ್ಬನಾಗಿದ್ದಾನೆ. ಈ ಯುವ ಪುರುಷನು ಬಿಲ್ಲುವಿದ್ಯೆ ಭರ್ಚಿವಿದ್ಯೆಯಲ್ಲಿ ನಿಷ್ಣಾತನಾಗಿದ್ದು ದೂರ ದೂರದವರೆಗೂ ಅವನು ಖ್ಯಾತಿಯನ್ನು ಹೊಂದಿದ್ದು ಅವನ ಸಮಬಲರು ಇನ್ನೊಬ್ಬರು ಇರಲಿಲ್ಲ. ಕಶೀಲ್‌ಖಾನ್‌ನ ಈ ಉತ್ಕೃಷ್ಟ ಗುಣಗಳ ಕೇಳಿ ತಿಳಿದ ಅನೇಕ ರಾಜ ಮಹಾರಾಜರು ಮತ್ತು ಆಡಳಿತಗಾರರಿಗೆ ಈ ಸರದಾರನು ತಮ್ಮ ಆಸ್ಥಾನದ ಶೋಭೆ ಆದರೆ ಸಾಕೆಂದು ಹಂಬಲಿಸುತ್ತಿದ್ದರು. ಇಂತಹದೇ ಇನ್ನೊಬ್ಬ ವ್ಯಕ್ತಿಯೆಂದರೆ ಅಲ್ಲಾವುದ್ದೀನ್ ಮೊಹಮ್ಮದ್ ಐಜುದ್ದೀನ್ ಕಶೀಲ್‌ಖಾನ್ ಆಗಿದ್ದ. ಅವನು ಗಯಾಸುದ್ದೀನನ ಸಹೋದರನ ಮಗನಾಗಿದ್ದ. ಈ ಸರದಾರನು ಸಭೆಗೆ ಶೋಭಾಯಪ್ರಾಯನಾಗಿದ್ದು ದಾನ ಧರ್ಮದಲ್ಲಿ ಹಾತೀಮ್‌ನಂತೆ ಖ್ಯಶತಿಯನ್ನು ಹೊಂದಿದ್ದ. (ಅನೇಕ ದೇಶಗಳಿಂದ ಉದಾಹರಣೆಗೆ) ಈಜಿಪ್ಟ್, ಸಿರಿಯಾ, ರೋಮ್, ಬಗದಾದ್, ಇರಾಕ್, ಕುರಾಸಾನ್, ತುರ್ಕಿಸ್ತಾನ್ ಮತ್ತು ಮಾವರಾವುನ್ನಹರ್ ಮೊದಲಾದ ದೇಶಗಳಿಂದ ವಿದ್ವಾಂಸರು ಮತ್ತು ಕವಿಗಳು ಅವನ ದಾನ ಶೂರತ್ವದ ಖ್ಯಾತಿಯಿಂದ ಪ್ರಭಾವಿತರಾಗಿ ಹಿಂದೂಸ್ತಾನಕ್ಕೆ ಬರುತ್ತಿದ್ದರು ಹಾಗೂ ಅವನಿಂದ ಐಶ್ವರ್ಯ ಸಂಪನ್ನರಾಗಿ ಮರಳುತ್ತಿದ್ದರು. ಹೀಗಾಗಿ ಉದಾರತೆ ಮತ್ತು ದಾನ ಧರ್ಮಗಳಲ್ಲಿ ಎತ್ತಿದ ಕೈಯೆಂದು ಅವನು ಇಡಿ ವಿಶ್ವದಲ್ಲಿಯೇ ಖ್ಯಾತಿಯನ್ನು ಹೊಂದಿ ಜನಾದರಣೆಯನ್ನು ಪಡೆದ. ಬಲ್ಬನ್‌ಗೆ ಆ ಸರದಾರನ ಯೋಗ್ಯತೆ ಮತ್ತು ವಿಶೇಷತೆಗಳ ಬಗ್ಗೆ ಅರಿವಾದ ನಂತರ ಅವನು ಆ ಯುವಕನನ್ನು ಆತನ ತಂದೆಯಾದ ಅಲ್ಲಾವುದ್ದೀನನ ಜಹಗೀರಿನ ಜಹಗೀರುದಾರನಾಗಿ ನೇಮಕ ಮಾಡಿದ ಹಾಗೂ ಅವನನ್ನು ಬಾರ್‌ಬೇಕ್ (ಬಾದಶಹನ ಆಸ್ಥಾನದ ಗೌರವಾನ್ವಿತ ಹುದ್ದೆ) ಎಂದು ನೇಮಕ ಮಾಡಿ ಅಷ್ಟೈಶ್ವರ್ಯಗಳ ಬಳುವಳಿಯನ್ನು ಆತನಿಗೆ ನೀಡಿದ. ಹಾಗೂ ಇನ್ನಷ್ಟು ಉದಾರತೆಯನ್ನು ತೋರಿ ಅವನನ್ನು ಖೋಲ್‌ನ ಸುಬೇದಾರನನ್ನಾಗಿ ನೇಮಕ ಮಾಡಿದ ಹಾಗೂ ಅವನೊಂದಿಗೆ ಅತ್ಯಂತ ಗೌರವಾದರಗಳಿಂದ ವರ್ತಿಸುತ್ತಿದ್ದ.

ಅಲ್ಲಾವುದ್ದೀನನ ಉದಾರತೆ:

ಮುಲ್ಕ್ ಖುತ್ಬುದ್ದೀನ್ ಹಸನ್ ಘೋರಿಯ ಸಮೀಪ ಸಂಬಂಧಿಯಾದ ಖ್ವಾಜ ನಯೀಮುದ್ದೀನ್‌ನ ಸುಪುತ್ರನಾದ ಖ್ವಾಜ ಶಂಸುದ್ದೀನನು ಅಲ್ಲಾವುದ್ದೀನನನ್ನು ಅಭಿನಂದಿಸಿ ಕೆಲವು ಬಿಡಿ ಕವನಗಳನ್ನು ಬರೆದ ಹಾಗೂ ಬಲ್ಬನ್‌ನ ಸಮೀಪ ವರ್ತಿಗಳಿಗೆ ನೀಡಿದ ಹಾಗೂ ಸದರಿ ಕವನಗಳನ್ನು ನೌರೋಜ್ ಹಬ್ಬ ಅಂದರೆ ಹೊಸ ವರ್ಷದ ಆಚರಣೆಯ ಸಂದರ್ಭದಲ್ಲಿ ಎಲ್ಲಾ ಸರದಾರರು ಬಾದಶಹನ ದರ್ಬಾರಿನಲ್ಲಿ ಸೇರಿದಾಗ ಆ ಕವಿತೆಗಳನ್ನು ವಾಚನ ಮಾಡಬೇಕೆಂಬುದು ಅವನ ಆಶಯವಾಗಿತ್ತು. ಖ್ವಾಜಾ ಶಂಸುದ್ದೀನನ ಸೂಚನೆಯ ಮೇರೆಗೆ ಬಾದಶಹನ ದರ್ಬಾರಿನಲ್ಲಿ ಆ ಬಿಡಿಗವಿತೆಗಳ ವಾಚನ ಮಾಡಲಾಯಿತು. ಆ ಸಭೆಯಲ್ಲಿ

ಕಶೀಲ್‌ಖಾನ್ ಕೂಡ ಉಪಸ್ಥಿತನಿದ್ದ. ಅವನು ಈ ಕವನಗಳನ್ನು ಬರೆದದ್ದು ಯಾರು ಎಂದು ವಿಚಾರಿಸಿದ. ಖ್ವಾಜಾ ಶಂಸುದ್ದೀನನು ಇದರ ಕರ್ತೃ ಎಂಬ ಉತ್ತರ ದೊರಕಿತು. ಸಭೆಯು ಮುಕ್ತಾಯವಾದ ನಂತರ ಅಲ್ಲಾವುದ್ದೀನನು ತನ್ನ ಮನೆಗೆ ಬಂದ ಮತ್ತು ಖ್ವಾಜಾ ಶಂಸುದ್ದೀನ್‌ನನ್ನು ಕರೆದು ತನ್ನ ನೌರೋಜ್ ಸಭೆಯ ಎಲ್ಲಾ ಉಡುಗೊರೆಗಳನ್ನು ಅವನಿಗೆ ಕಾಣಿಕೆಯನ್ನಾಗಿ ಕೊಟ್ಟ. ಅವನ ಬಗ್ಗೆ ಇತಿಹಾಸಕಾರರು ದಾಖಲಿಸುವದೇನೆಂದರೆ ಆ ಮೇರು ವ್ಯಕ್ತಿತ್ವದ ಮತ್ತು ದಾನಶೂರ ಸರದಾರನು ಗಯಾಸುದ್ದೀನ್ ಬಲ್ಬನ್‌ನ ಆಡಳಿತಾವಧಿಯಲ್ಲಿ ತನ್ನ ಸರ್ವಸ್ವವನ್ನು ಇತರರಿಗೆ ದಾನ ಮಾಡಿದ ಹಾಗೂ ತಾನು ತೊಡುವ ಬಟ್ಟೆಯನ್ನು ಬಿಟ್ಟರೆ ಅವನ ಬಳಿ ಇನ್ನೊಂದು ವಸ್ತು ಇರಲಿಲ್ಲ.

ಖಾನ್ ಶಹೀದ್:

ಮೇಲ್ಕಂಡವರ ಪೈಕಿ ಗಮನಾರ್ಹ ವ್ಯಕ್ತಿತ್ವವನ್ನು ಹೊಂದಿದ್ದ ಮೂರನೆಯ ವ್ಯಕ್ತಿಯು ಮೊಹಮ್ಮದ್ ತಾತಾರ್‌ಖಾನ್ ಬಿನ್ ಅರ್‌ಸಲಾನ್‌ಖಾನ್ ಆಗಿದ್ದಾನೆ. ತನ್ನ ಪರಾಕ್ರಮ ಮತ್ತು ಉನ್ನತ ಚಾರಿತ್ರ್ಯದ ದೆಸೆಯಿಂದ ಇಡೀ ದೇಶದಲ್ಲಿ ಖ್ಯಾತಿಹೊಂದಿ ಜನರ ಒಲವನ್ನು ಗಳಿಸಿದ ನಂತರ ಅವನು ಲಖ್ನೋತಿಯಲ್ಲಿ ಅನೇಕ ಸಾರಿ ತನ್ನ ಹೆಸರಿನ ಶಾಸನ ಮತ್ತು ನಾಣ್ಯವನ್ನು ಜಾರಿಗೊಳಿಸಿದ . ಮೊಹಮ್ಮದ್‌ಎಂಬ ಹೆಸರಿನ ವ್ಯಕ್ತಿಗಳ ಪೈಕಿ ಎಲ್ಲರಿಗಿಂತ ಶ್ರೇಷ್ಠನಾದವನು ರಾಜಕುಮಾರ ಮೊಹಮ್ಮದ್ ಸುಲ್ತಾನ್‌ಖಾನ್ ಶಹೀದ್ ಆಗಿದ್ದಾನೆ. ಈ ರಾಜಕುಮಾರನು ಗಯಾಸುದ್ದೀನ್ ಬಲ್ಬನ್‌ನ ಪ್ರೀತಿ ಪಾತ್ರ ಪುತ್ರನಾಗಿದ್ದ ಹಾಗೂ ಒಬ್ಬ ರಾಜಕುಮಾರನಲ್ಲಿ ಇರಬೇಕಾದಂತಹ ಎಲ್ಲಾ ಸದ್ಗುಣಗಳು ಮತ್ತು ಪ್ರಿಯವಾದ ನಡವಳಿಕೆಗಳು ಖಾನ್ ಶಹೀದ್‌ನಲ್ಲಿ ತುಂಬಿದ್ದವು. ರಾಜಕುಮಾರನು ಬುದ್ಧಿಮತ್ತೆ ಮತ್ತು ತೀಕ್ಷ್ಣಮತಿಯಲ್ಲಿ ತನ್ನ ಕಾಲದ ಅತ್ಯಂತ ಉತ್ತಮ ವ್ಯಕ್ತಿಯಾಗಿದ್ದ. ಅವನ ಸಭೆಯಲ್ಲಿ ನಿರಂತರವಾಗಿ ಪ್ರಖ್ಯಾತ ವಿದ್ವಾಂಸರು, ಗಣ್ಯರು ಮತ್ತು ಕವಿಗಳು ಭಾಗವಹಿಸುತ್ತಿದ್ದರು ಮತ್ತು ಅವನು ತನ್ನ ಹಿತೈಷಿಗಳು ಮತ್ತು ಬೆಂಬಲಿಗರ ಬಗ್ಗೆ ಅತ್ಯಂತ ಆದರಪೂರ್ವಕವಾಗಿ ವರ್ತಿಸುತ್ತಿದ್ದ. ಅವನು ತನ್ನ ಸಮೀಪ ವರ್ತಿಗಳೊಡನೆ ಮಾತ್ರವಲ್ಲದೆ ಅಸಹಾಯಕರು ಹಾಗೂ ಬಡವರ ಬಗ್ಗೆಯು ಕೂಡ ತುಂಬಾ ಕಾಳಜಿಯನ್ನು ಹೊಂದಿದ್ದ. ಅಮೀರ್‌ಖುಸ್ರು ಮತ್ತು ಖ್ವಾಜಾ ಹಸನ್‌ನಂತಹ ಪವಿತ್ರ ವ್ಯಕ್ತಿಗಳು ಕೂಡ ಆ ರಾಜಕುಮಾರನ ಸಭೆಯ ಶೋಭೆಗಳಾಗಿದ್ದರು. ಆ ಇಬ್ಬರು ಮೇರು ವ್ಯಕ್ತಿತ್ವದವರು ಖಾನ್‌ಶಹೀದ್‌ನ ನೌಕರಿಯಲ್ಲಿ ಮುಲ್ತಾನ್‌ನಲ್ಲಿ ಐದು ವರ್ಷಗಳವರೆಗೆ ಇದ್ದರು. ಖಾನ್‌ಶಹೀದ್ ಅವರಿಬ್ಬರಿಗೂ ವಿಶೇಷ ಗೌರವವನ್ನು ನೀಡಿ ಅವರನ್ನು ಪ್ರೋತ್ಸಾಹಿಸುತ್ತಿದ್ದ. ಈ ರಾಜಕುಮಾರನು ಎಷ್ಟೊಂದು ಸುಸಂಸ್ಕೃತನಾಗಿದ್ದಾನೆಂದರೆ, ಇಡೀ ಹಗಲು ರಾತ್ರಿ ಸೇರಿದಂತೆ ನಿರಂತರವಾಗಿ ಒಂದು ಸಭೆಯಲ್ಲಿ ಉಪಸ್ಥಿತಿಯಲ್ಲಿದ್ದಾಗಲೂ ತನ್ನ

ತೊಡೆಯನ್ನು ಮೇಲಕ್ಕೆ ಎತ್ತುತ್ತಿರಲಿಲ್ಲ ಹಾಗೂ ಏನಾದರೂ ಒಮ್ಮೆ ಆಣೆ ಪ್ರಮಾಣ ಮಾಡಿದಲ್ಲಿ ಅವನ ನಾಲಿಗೆಯ ಮೇಲೆ "ಹಬ್ಬಾ" ಎಂಬ ಶಬ್ದವಿರುತ್ತಿತ್ತು. ಸಭಾ ನಡವಳಿಕೆ ಮತ್ತು ಮಾರ್ಯಾದೆಯ ಬಗ್ಗೆ ಆತ ಎಷ್ಟೊಂದು ಪ್ರಜ್ಞೆಯನ್ನು ಹೊಂದಿದ್ದನೆಂದರೆ ಕುಡಿತದ ಮತ್ತಿನಲ್ಲಿದ್ದಾಗಲೂ ಅವನ ನಾಲಿಗೆಯ ಮೇಲೆ ಅಸಭ್ಯ ಶಬ್ದಗಳು ಮೂಡಿ ಬರುತ್ತಿರಲಿಲ್ಲ. ಖಾನ್‌ಶಹೀದ್‌ನ ಸಭೆಯಲ್ಲಿ ಸೈದ್ಧಾಂತಿಕ ಚರ್ಚೆಗಳು ನಡೆಯುತ್ತಿದ್ದವು ಹಾಗೂ ಅಲ್ಲಿ ಖಾಖಾನಿ, ಅನ್ವರಿ, ಮೌಲಾನ, ನಿಜಾಮಿ ಮತ್ತು ಅಮೀರ್ ಖುಸ್ರುವಿನ ಕಾವ್ಯದ ಲಹರಿಯು ಪ್ರತಿಧ್ವನಿಸುತ್ತಿತ್ತು. ಖಾನ್‌ಶಹೀದನು (ಪ್ರತಿ ಕವನದ ಒಳಾರ್ಥವನ್ನು ಅರಿಯುತ್ತಿದ್ದ) ಮತ್ತು ಖಾನ್‌ಶಹೀದ್ ಆ ಕವನದ ಯೋಗ್ಯತೆಯ ಮೇರೆಗೆ ಪುರಸ್ಕಾರವನ್ನು ನೀಡುತ್ತಿದ್ದ. ಪ್ರಖ್ಯಾತ ಉಸ್ತಾದರು ಮತ್ತು ಭಾಷಾ ಪ್ರವೀಣರು ಅವನ ಭಾಷಾಜ್ಞಾನಕ್ಕೆ ಮನಸೋತಿದ್ದರು. ಒಮ್ಮೆ ಅಮೀರ್‌ಖುಸ್ರು ಹೀಗೆಂದು ಅಪ್ಪಣೆ ಕೊಡಿಸಿದರು, "ನಾನು ಭಾಷಾ ಜ್ಞಾನ ರಸಗ್ರಹಣ ಹಾಗೂ ಸದಭಿರುಚಿಯ ವಿಮರ್ಶೆ ಮತ್ತು ರಸಾಸ್ವಾದನೆಯ ಪಕ್ವತೆ ಹಾಗೂ ಎಲ್ಲಾ ಹೊಸ ಮತ್ತು ಹಳೆಯ ಕವಿಗಳ ಕಾವ್ಯವನ್ನು ನೆನಪಿನಲ್ಲಿಡುವಲ್ಲಿ ಖಾನ್‌ಶಹೀದ್‌ನಷ್ಟು ಸಮರ್ಥನಾದ ಇನ್ನೊಬ್ಬ ವ್ಯಕ್ತಿಯನ್ನು ನೋಡಿಲ್ಲ." ಒಂದು ಅದ್ವಿತೀಯ ಕವನ ಸಂಕಲನ

ಒಂದು ಅಪೂರ್ವ ಕವನ ಸಂಕಲನ

ಖಾನ್‌ಶಹೀದನು ಒಂದು ಲಿಖಿತ ಸಂಕಲನವನ್ನು ಸಿದ್ಧಗೊಳಿಸಿದ್ದ ಆ ಸಂಕಲನದಲ್ಲಿ ಎಲ್ಲಾ ಪ್ರಖ್ಯಾತ ಕವಿಗಳ ಸುಮಾರು ೨೦ ಸಾವಿರ ಕವನಗಳನ್ನು ಸುಂದರವಾದ ಅಕ್ಷರದಲ್ಲಿ ಬರೆದು ದಾಖಲಿಸಲಾಗಿತ್ತು. ಅಮೀರ್‌ಖುಸ್ರು ಮತ್ತು ಖ್ವಾಜ ಹಸನ್ ಇಬ್ಬರು ಕೂಡ ಖಾನ್‌ಶಹೀದ್‌ನ ಆಯ್ಕೆಯ ಕವನಗಳನ್ನು ತುಂಬಾ ಮೆಚ್ಚುತ್ತಿದ್ದರು ಮತ್ತು ಆತನ ಕಾವ್ಯಾಸಕ್ತಿ ಮತ್ತು ಸಹೃದಯತೆಯ ಬಗ್ಗೆ ಕೂಡ ಅಭಿಮಾನವನ್ನು ಹೊಂದಿದ್ದರು. ಖಾನ್‌ಶಹೀದ್‌ನ ಕೊಲೆಯಾದ ನಂತರ ಗಯಾಸುದ್ದೀನ್ ಬಲ್ಬನ್ನನು ಆ ಸಂಕಲನವನ್ನು ಅಮೀರ್‌ಅಲಿ ಜಾಮ್‌ದಾರ್‌ಗೆ ನೀಡಿದ ಮತ್ತು ಜಾಮ್‌ದಾರ್ ಅಮೀರ್‌ಖುಸ್ರುಗೆ ಹಸ್ತಾಂತರಿಸಿದ. ಅಂದಿನ ಸಮಕಾಲೀನ ಪ್ರಖ್ಯಾತ ಕವಿಗಳು ಆ ಕವನ ಸಂಕಲನವನ್ನು ನೋಡಿ ಆ ಕವನಗಳನ್ನು ತಮ್ಮ ಖಾಸಗಿ ಹೊತ್ತಿಗೆಗಳಲ್ಲಿ ನಕಲು ಮಾಡಿದರು ಮತ್ತು ಇಡೀ ಜನತೆಯು ಖಾನ್‌ಶಹೀದ್‌ನಂತಹ ವಿದ್ವಾಂಸ ಹಾಗೂ ಪುಸ್ತಕ ಪ್ರೇಮಿಯ ಅಕಾಲಿಕ ಮರಣದ ಬಗ್ಗೆ ಶೋಕತಪ್ತರಾದರು.

ಭಾವಪರವಶತೆಯ ಸಭೆ:

ಖಾನ್‌ಶಹೀದನು ಮುಲ್ತಾನ್‌ನಲ್ಲಿ ವಾಸ್ತವ್ಯವನ್ನು ಹೂಡಿದ್ದಾಗ ಆಧ್ಯಾತ್ಮಿಕವಾಗಿ ಅಪಾರ ಸಾಧನೆಯನ್ನು ಮಾಡಿದ್ದ ಶೇಖ್ ಉಸ್ತಾನ್ ತಿರಂದಿ ಎಂಬ ಪ್ರಖ್ಯಾತ

ವಿದ್ವಾಂಸರು ಆಕಸ್ಮಿಕವಾಗಿ ಆಗಮಿಸಿದರು. ಖಾನ್ ಶಹೀದನು ಸದರಿಯವರನ್ನು ಗೌರವಪೂರ್ಣವಾಗಿ ಸತ್ಕರಿಸಿದ ಮತ್ತು ಅವರ ಸಮ್ಮುಖದಲ್ಲಿ ಅಪಾರ ಕಾಣಿಕೆಗಳನ್ನು ಮತ್ತು ಅರ್ಪಣೆ ಮಾಡಿದ ಹಾಗೂ ಅತ್ಯಂತ ವಿನೀತನಾಗಿ ಅವರನ್ನು ಮುಲ್ತಾನ್‌ನಲ್ಲಿ ನೆಲೆಸುವಂತೆ ಬೇಡಿಕೊಂಡ. "ತಾವು ಇಲ್ಲಿ ನೆಲೆಸಲು ಇಚ್ಛಿಸುವುದಾದಲ್ಲಿ ರಾಜ ಖಜಾನೆಯ ವೆಚ್ಚದಿಂದ ಇಲ್ಲಿ ಗುರು ಭವನವೆಂಬ ಧಾರ್ಮಿಕ ಕೇಂದ್ರವನ್ನು ನಿರ್ಮಾಣ ಮಾಡಲಾಗುವುದು" ಎಂದು ಆಹ್ವಾನವನ್ನು ನೀಡಿದ. ಆದರೆ ಶೇಕ್ ಸಾಹೇಬರು ಶಾಶ್ವತವಾಗಿ ಮುಲ್ತಾನ್‌ನಲ್ಲಿ ನೆಲೆಸಲು ಇಚ್ಚಿಸಲಿಲ್ಲ ಹಾಗೂ ಮರಳಿ ಹೋದರು. ಶೇಕ್ ಸಾಹೇಬರು ಮುಲ್ತಾನ್‌ನಲ್ಲಿ ಉಳಿದಿದ್ದ ಸಂದರ್ಭದಲ್ಲಿ ಸದರಿಯವರು ಹಜರತ್ ಬಹಾವುದ್ದೀನ್ ಜಿಕ್‌ರಿಯಾ ಮುಲ್ತಾನಿಯವರ ಸುಪುತ್ರ ಮತ್ತು ವಾರೀಸುದಾರರಾದ ಹಜರತ್ ಶೇರ್‌ಸದ್ರುದ್ದೀನ್ ಅರೀಫ್‌ರವರ ಜೊತೆಯಲ್ಲಿ ಖಾನ್‌ಶಹೀದ್‌ರವರ ಸಭೆಯಲ್ಲಿ ಭಾಗವಹಿಸಿದ್ದರು. ಆ ಸಭೆಯಲ್ಲಿ ಅರಬ್ಬಿ ಕವನಗಳನ್ನು ವಾಚಿಸಲಾಗುತ್ತಿತ್ತು. ಒಂದು ಕವನದ ವಾಚನವಾಗುತ್ತಿದ್ದ ಸಂದರ್ಭದಲ್ಲಿ ಆ ಹಿರಿಯರ ಮೇಲೆ ಭಾವಾವೇಶವು ಮೂಡಿ ಬಂದಿತ್ತು. ಮತ್ತು ಅವರೊಡನೆ ಎಲ್ಲಾ ಸಭಿಕರು ಎದ್ದು ನಿಂತರು. ಖಾನ್‌ಶಹೀದ್ ಕೂಡ ಇಡೀ ಸಭಾಸದರ ಜೊತೆಯಲ್ಲಿ ಕೈಕಟ್ಟಿ ಎದ್ದು ನಿಂತ. ಆ ಹಿರಿಯ ಚೇತನಗಳ ಭಾವ ತೀವ್ರತೆಯು ಶಾಂತವಾಗುವರೆಗೂ ಖಾನ್‌ಶಹೀದ್ ಕೂಡ ವಿಹ್ವಲನಾಗಿ ನಿಂತಿದ್ದ ಮತ್ತು ಅವನ ಕಣ್ಣುಗಳು ಭಾವ ತೀವ್ರತೆಯಿಂದ ಕಂಬನಿಯಿಂದ ಕೂಡಿದ್ದವು.

ಶೇಕ್‌ಸಾದಿ ಬಗೆಗಿನ ಶ್ರದ್ದೆ:

ಯಾರಾದರೊಬ್ಬ ವ್ಯಕ್ತಿಯು ಖಾನ್‌ಶಹೀದ್‌ನ ಸಭೆಯಲ್ಲಿ ಸದ್ಗುಣಗಳನ್ನು ಉತ್ತೇಜಿಸುವಂತಹ ಕವನವನ್ನು ವಾಚಿಸಿದಲ್ಲಿ ಅವನು ಲೌಕಿಕ ಭಾವವನ್ನು ಬದಿಗೆ ತಳ್ಳಿ ಅತೀವ ಆಸಕ್ತಿಯಿಂದ ಆ ಕವನವನ್ನು ಆಲಿಸುತ್ತಿದ್ದ. ಹಾಗೂ ಅದರ ಒಳಾರ್ಥವನ್ನು ಅರಿತುಕೊಂಡು ಭಾವುಕನಾಗಿ ಕಣ್ಣೀರನ್ನು ಹರಿಸುತ್ತಿದ್ದ. ಖಾನ್ ಶಹೀದ್‌ನ ಪ್ರಬುದ್ಧತೆ, ಬುದ್ಧಿಮತ್ತೆ ಹಾಗೂ ಗೌರವದಿಂದ ಕೂಡಿದ ನಡವಳಿಕೆಯ ಪುರಾವೆಯಾಗಿ ಅವನು ಮುಲ್ತಾನಿನ ತನ್ನ ಅಧಿಕಾರಾವಧಿಯ ಕಾಲದಲ್ಲಿ ಎರಡು ಸಾರಿ ತನ್ನ ರಾಯಭಾರಿಯನ್ನು ಅತ್ಯಮೂಲ್ಯ ಉಡುಗೊರೆಗಳೊಂದಿಗೆ ಶೀರಾಜ್ ಪಟ್ಟಣಕ್ಕೆ ಕಳುಹಿಸಿಕೊಟ್ಟ. ಮತ್ತು ಹಜರತ್ ಷೇಕ್ ಮುಸಲುದ್ದೀನ್ ಸಾದಿಯವರ ಸಮ್ಮುಖದಲ್ಲಿ ಕೋರಿಕೆಯನ್ನು ಹೀಗೆಂದು ಸಲ್ಲಿಸಿದ, "ತಾವು ಇಲ್ಲಿಗೆ ಆಗಮಿಸಿ ನಮ್ಮನ್ನು ಉಪಕೃತರನ್ನಾಗಿ ಮಾಡಬೇಕು. ತಮಗಾಗಿ ಮುಲ್ತಾನಿನಲ್ಲಿ ಸೂಫಿಗಳ ಒಂದು ಧರ್ಮಕೇಂದ್ರವನ್ನು ಸ್ಥಾಪಿಸಲಾಗುವುದು. ಮತ್ತು ಅದರ ನಿರ್ವಹಣೆಗಾಗಿ ಕೆಲವು ಊರುಗಳನ್ನು ಮೀಸಲಾಗಿಡಲಾಗುವುದು" ಆದರೆ ಹಜರತ್ ಸಾದಿಯುವರು ವೃದ್ಧಾಪ್ಯದ ದೆಸೆಯಿಂದ ತುಂಬಾ ದುರ್ಬಲರಾಗಿದ್ದುದರಿಂದ ಅವರು ಮುಲ್ತಾನಿನ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲ. ಆದರೆ ಪ್ರತಿಬಾರಿಯೂ ತಮ್ಮ ಸ್ವಹಸ್ತಾಕ್ಷರದಲ್ಲಿ ತಮ್ಮ ಸ್ವಂತ ವಿರಚಿತ ಕವನಗಳನ್ನು ಮತ್ತು

ಗಜಲ್‌ಗಳನ್ನು ಬರೆದು ಖಾನ್‌ಶಹೀದನ ಸಮಕ್ಷಮಕ್ಕೆ ಉಡುಗೊರೆಯ ರೂಪದಲ್ಲಿ ಕಳಿಸಿಕೊಡುತ್ತಿದ್ದರು. ಮತ್ತು ಅಮೀರ್‌ಖುಸ್ರುವಿನ ಬಗ್ಗೆ ಶಿಫಾರಸ್ಸನ್ನು ಮಾಡಿದರು. ಖಾನ್‌ಶಹೀದನು ಮುಲ್ತಾನಿನ ಅಧಿಕಾರದಲ್ಲಿದ್ದಾಗ ಅವನು ಪ್ರತಿವರ್ಷವು ಕೂಡ ಅತ್ಯಂತ ಅಮೂಲ್ಯ ಮತ್ತು ಅಪೂರ್ವವಾದ ಉಡುಗೊರೆಗಳನ್ನು ತೆಗೆದುಕೊಂಡು ತನ್ನ ತಂದೆಯ ಸಮಕ್ಷಮದಲ್ಲಿ ಹಾಜರು ಪಡೆಸುತ್ತಿದ್ದ. ಮತ್ತು ಕೆಲವು ದಿನಗಳ ಕಾಲ ದೆಹಲಿಯಲ್ಲಿ ಉಳಿದಿದ್ದು ನಂತರ ಮರಳುತ್ತಿದ್ದ.

ಬಘ್ರಾಖಾನ್:

ಈ ಅವಧಿಯಲ್ಲಿ ಬಲ್ಬನ್ನನು ತನ್ನ ಕಿರಿಯ ಮಗನಾದ ಬಘ್ರಾಖಾನ್‌ನನ್ನು ನಾಸಿರುದ್ದೀನ್ ಎಂಬ ಬಿರುದಿನಿಂದ ಮನ್ನಣೆಯನ್ನು ನೀಡಿದ. ಹಾಗೂ ಸಮಾನಾ ಮತ್ತು ಸುನಾಮ್‌ನ ಜಹಗೀರ್‌ದಾರನನ್ನಾಗಿ ಅವನನ್ನು ನೇಮಕ ಮಾಡಿದ. ಬಘ್ರಾಖಾನ್ ತನ್ನ ಜಹಗೀರ್‌ಗೆ ಹೊರಡುವ ಸಂದರ್ಭದಲ್ಲಿ ಬಲ್ಬನ್ ಅವನಿಗೆ ಅನೇಕ ಮಾರ್ಗಸೂಚಿ ನಿರ್ದೇಶನಗಳನ್ನು ನೀಡಿದ. ಹಾಗೂ ತನ್ನ ಜಹಗೀರನ್ನು ತಲುಪಿದ ನಂತರ ತನ್ನ ಹಳೆಯ ಸೈನಿಕರ ವೇತನವನ್ನು ಹೆಚ್ಚಿಸಬೇಕೆಂತಲೂ ಹಾಗೂ ಅಗತ್ಯವಿದ್ದಲ್ಲಿ ಹೊಸ ಸೈನಿಕರನ್ನು ನೇಮಕ ಮಾಡಿಕೊಳ್ಳಬೇಕೆಂತಲೂ ತಿಳಿಸಿದ. ಅವನು "ಮೊಘಲರಿಂದ ಸದಾ ಎಚ್ಚರವಾಗಿರಬೇಕು" ಎಂದು ಕೂಡ ತಿಳಿಸಿದ. ಅಷ್ಟೇ ಅಲ್ಲದೆ ಅವನು "ನೀನು ರಾಜ್ಯದ ಪ್ರಮುಖ ವಿಚಾರಗಳ ಬಗ್ಗೆ ಯಾವಾಗಲೂ ಪ್ರಬುದ್ಧ ಸರದಾರರಿಂದ ಸಲಹೆಯನ್ನು ಪಡೆಯತಕ್ಕದ್ದು ಮತ್ತು ಹಾಗೂ ಯಾವುದಾದರೂ ಪ್ರಮುಖ ವಿಷಯವು ನಿನಗೆ ಕಾಡಿಸುತ್ತಿದ್ದರೆ ನೀನು ಕೂಡಲೇ ನನ್ನನ್ನು ಸಂಪರ್ಕಿಸತಕ್ಕದ್ದು ಹಾಗೂ ನಾನು ಇಲ್ಲಿಂದ ನಿನಗೆ ಕಳಿಸಿದ ಸಲಹೆಯನ್ನು ಪಾಲಿಸತಕ್ಕದ್ದು". ಎಂದು ತನ್ನ ಮಗನಿಗೆ ಸದಾ ಎಚ್ಚರಿಕೆಯನ್ನು ನೀಡುತ್ತಿದ್ದ. ಬಲ್ಬನ್ನನು ಕುಡಿತದ ವಿರುದ್ಧ ತೀವ್ರವಾದ ನಿಲುವನ್ನು ಹೊಂದಿದ್ದು ಒಂದು ವೇಳೆ ಬಘ್ರಾಖಾನ್ ಪಾನಮತ್ತನಾದಲ್ಲಿ, ತತ್‌ಕ್ಷಣವೇ ಅವನನ್ನು ಪದಚ್ಯುತಿಗೊಳಿಸಲಾಗುವುದು. ಹಾಗೂ ಮುಂದೆ ಅವನಿಗೆ ಯಾವುದೇ ಜವಾಬ್ದಾರಿಯುತ ಕೆಲಸವನ್ನು ನೀಡಲಾಗುವುದಿಲ್ಲ. ಹಾಗೂ ತನ್ನ ತಂದೆಯ ದೃಷ್ಟಿಯಲ್ಲಿ ಅವನು ಮೌಲ್ಯವನ್ನು ಕಳೆದುಕೊಂಡು ಕೀಳಾಗುವನು ಎಂದು ಕೂಡ ತಾಕೀತು ಮಾಡಿದ.

ಬಘ್ರಾಖಾನನು ತನ್ನ ತಂದೆಯ ಬುದ್ದಿವಾದ ಮತ್ತು ಮಾರ್ಗದರ್ಶನವನ್ನು ಚಾಚೂ ತಪ್ಪದೆ ಪರಿಪಾಲಿಸಿದ. ಆ ರಾಜಕುಮಾರನು ವಿಲಾಸೀ ಜೀವನದಲ್ಲಿ ಮಗ್ನನಾಗದೆ ಬುದ್ಧಿವಂತಿಕೆಯೊಂದಿಗೆ ಆಡಳಿತಾತ್ಮಕ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾರಂಭಿಸಿದ. ಹಾಗೂ ಹಿಂದೂಸ್ಥಾನವನ್ನು ಮೊಘಲರ ದುರಾಕ್ರಮಣದಿಂದ ರಕ್ಷಿಸಿದ. ಮೊಘಲರು ಹಿಂದೂಸ್ಥಾನದ ಮೇಲೆ ಸೇನೆಯನ್ನು ನುಗ್ಗಿಸಿದಲ್ಲಿ ಮುಲ್ತಾನಿನಿಂದ ಖಾನ್‌ಶಹೀದ್ ಹಾಗೂ ದೆಹಲಿಯಿಂದ ಮುಲ್ಕ್ ಬಾರ್‌ಬೇಕ್ ಮತ್ತು ಸಮಾನಾದಿಂದ

ಬಘ್ರಾಖಾನ್ ತಮ್ಮ ತಮ್ಮ ಸೈನ್ಯದೊಂದಿಗೆ ಕೂಡಿ ಅವರನ್ನು ಎದುರಿಸಬೇಕೆಂದು ಅವರಲ್ಲಿ ಪರಸ್ಪರ ಒಡಂಬಡಿಕೆಯಾಗಿತ್ತು. ಹಾಗೂ ಅವರೆಲ್ಲರೂ ಬಿಯಾಸ್ ನದಿಯ ತೀರದಲ್ಲಿ ಇರುವ ಹಾಲಿ ಸುಲ್ತಾನ್‌ಪುರ ಕಸಬದಲ್ಲಿ ಸಭೆ ಸೇರಿ ತಮ್ಮ ಎಲ್ಲರ ಒಗ್ಗಟ್ಟಿನ ಬಲದ ಮೇರೆಗೆ ಮೊಘಲರನ್ನು ಹೊಡೆದೊಡಿಸಬೇಕೆಂದು ಅವರು ತೀರ್ಮಾನವನ್ನು ಕೈಗೊಂಡಿದ್ದರು.

ತೊಘ್ರಲನ ವಿದ್ರೋಹ:

ಗಯಾಸುದ್ದೀನ್ ಬಲ್ಬನ್ನನ ರಾಜ್ಯವು ಸುಭದ್ರವಾಗಿದ್ದು ಬಾದಶಹನ ಆಳ್ವಿಕೆಯು ಶಾಂತಿ ಸುವ್ಯವಸ್ಥೆಯಿಂದ ಕೂಡಿದಾಗ ಒಂದು ಅಘಟಿತ ಘಟನೆಯು ನಡೆಯಿತು. ಲಖ್ನೋತಿಯ ಸುಬೇದಾರನೂ ಮತ್ತು ಬಲ್ಬನ್ನನ ಗುಲಾಮನೂ ಆಗಿದ್ದ ತೊಘ್ರಲ್, ಬಾದಶಹನೊಡನೆ ವಿದ್ರೋಹವನ್ನು ಎಸಗಿದ. ಹಿಜರಿ ಶಕೆ ೬೭೮ರಲ್ಲಿ ತೊಘ್ರಲ್ ತನ್ನ ಪೌರುಷ, ಉದಾರತೆ ಮತ್ತು ಬುದ್ಧಿವಂತಿಕೆಯ ಬಲದಿಂದ ಜಾಜ್ ನಗರದ ಮೇಲೆ ಯುದ್ಧ ಮಾಡಿದ. ಮತ್ತು ಅಲ್ಲಿನ ರಾಜನನ್ನು ಸೋಲಿಸಿ ಅಗಣಿತವಾದ ಯುದ್ಧ ಸಂಪತ್ತನ್ನು ಮತ್ತು ಅಪಾರ ಸಂಖ್ಯೆಯ ಆನೆಗಳನ್ನು ತನ್ನ ವಶಕ್ಕೆ ಪಡೆದುಕೊಂಡ. ಆ ಸಂದರ್ಭದಲ್ಲಿ ತುಘ್ರಲನ ಆಲೋಚನೆಯೇ ವಿದ್ರೋಹಾತ್ಮಕವಾಗಿತ್ತು. ಬಲ್ಬನ್ನನು ವೃದ್ಧನಾಗಿದ್ದು ಅವನ ಇಬ್ಬರು ಪುತ್ರರು ಕೂಡ ಮೊಘಲರೊಡನೆ ಬಿಡುವಿಲ್ಲದ ಯುದ್ಧದಲ್ಲಿ ತೊಡಗಿದ್ದುದರಿಂದ ತಾನು ಸರ್ವಾಧಿಕಾರಿಯಾಗಬಹುದು ಎಂದು ಎಣಿಸಿ ಅವನು ಬಾದಶಹನ ಹಿಸ್ಸೆಯ ಕಪ್ಪ ಕಾಣಿಕೆಯನ್ನು ತಾನೇ ಲಪಾಟಾಯಿಸಿದ. ಆ ಹೊತ್ತಿನಲ್ಲಿ ಬಲ್ಬನ್ ತೀವ್ರ ಅನಾರೋಗ್ಯಕ್ಕೆ ಈಡಾದ ಹಾಗೂ ಒಂದು ತಿಂಗಳ ಕಾಲದವರೆಗೆ ತನ್ನ ಮನೆಯಿಂದ ಹೊರಗೆ ಹೋಗದಷ್ಟು ದುರ್ಬಲನಾದ. ಹಾಗೂ ಬಾದಶಹನು ಮರಣ ಹೊಂದಿರುವನೆಂದು ಪ್ರಜೆಗಳ ನಡುವೆ ಪುಕಾರು ಹಬ್ಬಿತು. ಈ ಗಾಳಿ ಸುದ್ದಿಯನ್ನು ನಂಬಿದ ತೊಘ್ರಲ್ ಕೂಡಲೇ ತನ್ನ ವಿಶ್ವಾಸಘಾತಕತನದ ಪ್ರದರ್ಶನ ಮಾಡಿದ ಮತ್ತು ಒಂದು ಸಶಕ್ತ ಸೇನೆಯನ್ನು ಕಟ್ಟಿ ತಾನು ಲಖ್ನೋತಿಯ ಸ್ವತಂತ್ರ ರಾಜನೆಂದು ಘೋಷಿಸಿದ. ಆ ವಿಶ್ವಾಸ ದ್ರೋಹಿ ಗುಲಾಮನು ದೇಶವನ್ನು ಆಕ್ರಮಣ ಮಾಡಿಕೊಂಡ. ನಂತರ ಕೆಂಪು ಬಣ್ಣದ ಛತ್ರ ಚಾಮರವನ್ನು ತನ್ನ ಲಾಂಛನವಾಗಿ ಮಾಡಿಕೊಂಡು. ತನ್ನ ಹೆಸರನ್ನು ಸುಲ್ತಾನ್ ಮಗೀಸುದ್ದೀನ್ ಎಂದು ತನ್ನ ಹೆಸರಿಗೆ ಬಿರುದಾವಳಿಗಳನ್ನು ಅಂಟಿಸಿಕೊಂಡು ತಾನು ಲಖ್ನೋತಿಯ ಬಾದಶಹನೆಂದು ಘೋಷಿಸಿಕೊಂಡ. ಆ ಭಾಗದಲ್ಲಿ ತೊಘ್ರಲ್‌ನ ಹೆಸರಿನ ಶಾಸನ ಮತ್ತು ನಾಣ್ಯವು ಜಾರಿಯಾಯಿತು.

ಅಮೀನ್‌ಖಾನನ ಸೋಲು:

ತೊಘ್ರಲ್ ಸ್ವತಂತ್ರ ರಾಜನೆಂದು ಘೋಷಿಸಿಕೊಂಡ ಕೆಲವೇ ದಿನಗಳಲ್ಲಿ ಗಯಾಸುದ್ದೀನ್ ಬಲ್ಬನ್ ಆರೋಗ್ಯದಿಂದ ಇರುವನೆಂಬ ಸುದ್ದಿ ಲಖ್ನೋತಿಗೆ ತಲುಪಿತು.

ತನ್ನ ಒಡೆಯನು ಗುಣಮುಖನಾಗಿರುವುದನ್ನು ಕೇಳಿಯೂ ತೊಘ್ರಲ್ ಸರಿಯಾದ ತೀರ್ಮಾನವನ್ನು ಕೈಗೊಳ್ಳಲಿಲ್ಲ. ಹಾಗೂ ತನ್ನ ನಮಕ್ ಹರಾಮಿತನದ ಬಗ್ಗೆ ಲಜ್ಜಿತನಾಗದೆ ಅವನು ತನ್ನ ವಿದ್ರೋಹದ ಮನಃಸ್ಥಿತಿಯನ್ನು ಮುಂದುವರೆಸಿದ. ಈ ಎಲ್ಲಾ ಗೊಂದಲವನ್ನು ನಿವಾರಿಸುವ ಸಲುವಾಗಿ ಬಲ್ಬನ್ನನು ಮುಲ್ಕ್‌ಅಲಪ್ತಗೀನ್ ವೋಯೆದರಾಜುಲ್‌ಮುಖಾತಿಬ್ ಬಅಮಿನ್‌ಖಾನ್‌ನನ್ನು ಲಖ್ನೋತಿಯ ಸುಬೇದಾರನನ್ನಾಗಿ ನೇಮಕ ಮಾಡಿದ ಮತ್ತು ಅವನಿಗೆ ಒಂದು ಬಲಿಷ್ಠ ಸೇನೆಯ ನೆರವನ್ನು ನೀಡಿದ. ಆ ಸೇನೆಯ ಸರ್ದಾರನನ್ನಾಗಿ ಖ್ಯಾತ ವ್ಯಕ್ತಿಗಳಾದ, ಮುಲ್ಕ್ ತಾಜುದ್ದೀನ್, ಜಮಾಲುದ್ದೀನ್ ಕಂದಹಾರಿಯವರನ್ನು ತೊಘ್ರಲ್‌ನ ವಿಧ್ವಂಸಕ ಕೃತ್ಯಗಳನ್ನು ಮಟ್ಟಹಾಕಲು ಕಳಿಸಿಕೊಟ್ಟ ಅಮೀನ್‌ಖಾನನು ಸರಯೂ ನದಿಯನ್ನು (ಇದನ್ನು ಈಗ ಸರಹೂ ಎಂದು ಕರೆಯುತ್ತಾರೆ ಈ ನದಿಯು ಬೆಹರಾಯಿಚ್ ಜಿಲ್ಲೆಯಿಂದ ಹೊರಟು ಘಾಗ್ರ ಸಮುದ್ರದಲ್ಲಿ ಸೇರುತ್ತದೆ) ದಾಟಿ ಲಖ್ನೋತಿಯತ್ತ ಮುಖ ಮಾಡಿದ. ತೊಘ್ರಲ್ ತನ್ನ ಸೈನ್ಯದೊಂದಿಗೆ ಮುಂದೆ ಬಂದ. ಯುದ್ಧರಂಗದಲ್ಲಿ ತೊಘ್ರಲ್ ಬಿಲ್ಲು ಬಾಣ ಮತ್ತು ಕತ್ತಿಯಿಂದ ಯುದ್ಧ ಮಾಡುವುದಕ್ಕೆ ಬದಲಾಗಿ ಚಿನ್ನ ಬೆಳ್ಳಿಯ ಅಮಿಶಗಳನ್ನು ಒಡ್ಡಿದ. ಇದರ ಪರಿಣಾಮವಾಗಿ ಅಮೀರ್‌ಖಾನನ ಸೈನಿಕರ ಪೈಕಿ ಅತಿ ದೊಡ್ಡ ತಂಡವೊಂದು ಹಣದ ಅಮಿಶಕ್ಕೆ ಬಲಿಯಾಗಿ ತೊಘ್ರಲ್‌ನ ಸೈನ್ಯದೊಂದಿಗೆ ಹೋಗಿ ಸೇರಿಕೊಂಡಿತು. ನಂತರ ತೊಘ್ರಲ್ ನೈಜ ಯುದ್ಧವನ್ನು ಆರಂಭಿಸಿದ. ಅಮೀರ್‌ಖಾನ್‌ಗೆ ಸೋಲುಂಟಾಯಿತು. ಮತ್ತು ತೊಘ್ರಲ್ ನ ಸ್ವಾಧೀನಕ್ಕೆ ಅಪಾರ ಯುದ್ಧ ಸಂಪತ್ತು ಸೇರಿಕೊಂಡಿತು.

ಮುಲ್ಕ್ ತರ್‌ಜಿಯ ಸೋಲು:

ಅಮೀನ್‌ಖಾನನ ಸೋಲಿನ ಸುದ್ದಿಯನ್ನು ಅತಿ ಶೀಘ್ರವಾಗಿ ದೆಹಲಿಗೆ ತಲುಪಿಸಲಾಯಿತು. ಈ ಸುದ್ದಿಯಿಂದ ಬಲ್ಬನ್ ಅತೀವ ದುಃಖಿತನಾದ ಮತ್ತು ಕೋಪಾವೇಶದಿಂದ ತತ್ತರಿಸಿದ. ಬಲ್ಬನ್ನನು ಅಮೀನ್‌ಖಾನ್‌ಗೆ ಮರಣದಂಡನೆಯನ್ನು ವಿಧಿಸಿದ. ಹಾಗೂ ಮುಲ್ಕ್ ತರ್‌ಜಿ ತುರ್ಕನಿಗೆ ಒಂದು ಪ್ರಬಲ ಸೈನ್ಯದೊಡನೆ ತೊಘ್ರಲ್‌ನೊಡನೆ ಯುದ್ಧ ಮಾಡಲು ಕಳಿಸಿದ. ತೊಘ್ರಲ್ ಈ ಬಾರಿ ಕೂಡ ಮುಲ್ಕ್ ತರ್‌ಜೀಯನ್ನು ಹೀನಾಯವಾಗಿ ಸೋಲಿಸಿದ ಮತ್ತು ಅಪಾರ ಯುದ್ಧ ಸಂಪತ್ತನ್ನು ತನ್ನ ವಶಕ್ಕೆ ತೆಗೆದುಕೊಂಡ. ಮುಲ್ಕ್‌ತರ್‌ಜಿಯ ಸೋಲಿನ ಸುದ್ದಿಯನ್ನು ಕೇಳಿದಾಗ ಬಲ್ಬನ್ನನಿಗೆ ತಡೆಯಲು ಅಸಾಧ್ಯವಾಯಿತು. ಅವನು ಸ್ವತಃ ತನ್ನ ಎಲ್ಲಾ ಧೈರ್ಯವನ್ನು ಒಟ್ಟುಗೂಡಿಸಿ ತೊಘ್ರಲ್‌ನ ವಿರುದ್ಧ ಯುದ್ಧ ಸನ್ನದ್ದನಾದ . ಅವನು ಗಂಗಾ ನದಿಯಲ್ಲಿ ನಾವೆಗಳನ್ನು ತೇಲಿ ಬಿಡುವಂತೆ ಆಜ್ಞೆ ಮಾಡಿ ಅವನು ಸ್ವತಃ ಬೇಟೆಯ ನೆಪದಲ್ಲಿ ಪ್ರಯಾಣ ಬೆಳೆಸಿದ. ಸಮಾನಾವನ್ನು ತಲುಪಿದ ಬಲ್ಬನ್ ಅಲ್ಲಿನ ಅಧಿನಾಯಕನಾದ ಜಾಮ್‌ದಾರ್‌ನ ಪುತ್ರನಾದ ಸಿರಾಜ್‌ಗೆ ಅದನ್ನು ಒಪ್ಪಿಸಿದ

ಮತ್ತು ತನ್ನ ಕಿರಿಯ ಮಗನಾದ ಬಘ್ರಾಖಾನ್‌ನನ್ನು ಮತ್ತು ಅವನ ಸೈನ್ಯವನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಸಮಾನಾದಿಂದ ಹೊರಟ. ಅಲ್ಲಿಂದ ಮಿಯಾದೋ ಆಬ್ ತಲುಪಿದ ಬಲ್ಬನ್ ಮುಲ್ಕ್ ಫಕ್ರುದ್ದೀನ್ ಕೊತ್ವಾಲ್‌ನನ್ನು ತನ್ನ ಪ್ರತಿನಿಧಿಯನ್ನಾಗಿ ನೇಮಕ ಮಾಡಿ ದೆಹಲಿಯಲ್ಲಿ ಬಿಟ್ಟ. ಮತ್ತು ತಾನು ಸ್ವತಃ ಅಪಾರ ವೈಭವ ವಿಲಾಸವನ್ನು ಮೆರೆಸುತ್ತಾ ಗಂಗೆಯ ಮಾರ್ಗದಿಂದ ಲಖ್ನೋತಿಯ ಕಡೆಗೆ ಪ್ರಯಾಣ ಮಾಡಿದ. ಆಗ ಮಳೆಗಾಲವಿತ್ತು ಆದರೆ ಬಾದಶಹನ ಅಪಾರ ಪರಾಕ್ರಮದ ಎದುರಿಗೆ ಋತುವಿನ ಪ್ರತಾಪ ಅಡಗಿತು. ತೀವ್ರ ಮಳೆಗಾಲದ ದೆಸೆಯಿಂದ ಸೈನ್ಯವು ಮಾರ್ಗ ಮಧ್ಯದಲ್ಲಿ ಅಲ್ಲಲ್ಲಿಯೇ ವಿರಮಿಸಬೇಕಾಯಿತು. ಈ ಕಾರಣದಿಂದ ಲಖ್ನೋತಿಯನ್ನು ತಲುಪುವಲ್ಲಿ ಎಂದಿಗಿಂತ ಹೆಚ್ಚು ಸಮಯ ವ್ಯರ್ಥವಾಯಿತು. ಬಾದಶಹನ ಆಗಮನದ ಸುದ್ದಿಯು ತೊಘ್ರಲ್‌ಗೆ ತಿಳಿಯಿತು. ಅಷ್ಟರಲ್ಲಿಯೇ ಅವನು ಬಾದಶಹನ ಆಗಮನದ ವಿಳಂಬದ ದುರ್ಲಾಭವನ್ನು ಪಡೆದಾಗಿತ್ತು. ಅವನು ತನ್ನ ಸೈನ್ಯವನ್ನು ಸನ್ನದ್ಧಗೊಳಿಸಿ ಇಡೀ ಖಜಾನೆಯನ್ನು ತನ್ನೊಂದಿಗೆ ತೆಗೆದುಕೊಂಡು ಜಾಜ್ ನಗರದತ್ತ ಓಟ ಕಿತ್ತ.

ತೊಘ್ರಲ್‌ನ ಪರಾರಿ:

ತೊಘ್ರಲ್ ಯುದ್ಧದ ವಿಭಿನ್ನ ವ್ಯೂಹವನ್ನು ರಚನೆ ಮಾಡಿದ. ಅವನು ಜಾರ್ಜ್ ನಗರದ ಮೇಲೆ ಯುದ್ಧ ಮಾಡಿ ಅದನ್ನು ವಶಪಡಿಸಿಕೊಂಡು, ಕೆಲವು ದಿನಗಳ ಕಾಲ ಅಲ್ಲಿ ಉಳಿಯುವುದೆಂತಲೂ ಹಾಗೂ ಬಲ್ಬನ್ ಮರಳಿ ಹೋದ ಕೂಡಲೇ ಪುನಃ ಲಖ್ನೋತಿ ಮೇಲೆ ಆಕ್ರಮಣ ಮಾಡಿ ಅದನ್ನು ತನ್ನ ವಶಪಡಿಸಿಕೊಳ್ಳುವುದೆಂತಲೂ ಯೋಜನೆಯೊಂದನ್ನು ತಯಾರಿಸಿದ. ಬಲ್ಬನ್ನನು ಲಖ್ನೋತಿಯನ್ನು ತಲುಪಿ ಕೆಲದಿನಗಳ ವಿರಮಿಸಿದ. ತದ ನಂತರ ಸಾಲಾರ್ ಇಸಾಮುದ್ದೀನ್ ದಲಿಲ್ ಮತ್ತು ಬಾರ್ಬಕ್ ಬರ್ಲಾಸ್‌ನನ್ನು (ಈತ ತಾರೀಖೆ ಫೈರೋಜ್ ಶಾಹಿ ಗ್ರಂಥದ ಕರ್ತೃವಿನ ಅಜ್ಜ) ಲಖ್ನೋತಿಯ ಉದ್ದೇಶ ಸಾಧನೆಗಾಗಿ ಕಳಿಸಿಕೊಟ್ಟ ಮತ್ತು ತಾನು ಸ್ವತಃ ತೊಘ್ರಲ್‌ನನ್ನು ಬೆಂಬತ್ತಿ ಜಾಜ್ ನಗರದತ್ತ ಪ್ರಯಾಣ ಬೆಳೆಸಿದ. ಬಲ್ಬನ್ನನು ಸುನಾಮ್‌ನ ಗಡಿಯನ್ನು ತಲುಪಿದಾಗ ಅಲ್ಲಿನ ರಾಜನು ಬಲ್ಬನ್ನನ ಸೇವೆಯಲ್ಲಿ ಹಾಜರಾದ ಮತ್ತು ತನ್ನನ್ನು ಅವನ ಅಧೀನ ರಾಜನಾಗಿ ಗುರುತಿಸಿಕೊಂಡ. (ಇಲ್ಲಿ "ಸುನಾಮ್" ಎಂಬುದು ತಪ್ಪಾಗಿ ಉಲ್ಲೇಖವಾಗಿದೆ ಬೇರೆ ಇತಿಹಾಸದ ಗ್ರಂಥಗಳಲ್ಲಿ ದಾಖಲಾಗಿರುವುದರ ಪ್ರಕಾರ ಇದು "ಸುನಾರ್‌ಗಾಂವ್" ಎಂದಿರಬೇಕಿತ್ತು.

ಮತ್ತು ಆ ರಾಜನು ಬಲ್ಬನ್ನನನಿಗೆ ವಾಗ್ದಾನವನ್ನು ಮಾಡಿ ತೊಘ್ರಲ್‌ನು ಪರಾಜಯವನ್ನು ಹೊಂದಿ ಜಲಮಾರ್ಗದಿಂದ ಪರಾರಿಯಾಗುವ ಪ್ರಯತ್ನವನ್ನು ಮಾಡಿದಲ್ಲಿ ಅವನ ಉದ್ದೇಶ ಈಡೇರುವುದಿಲ್ಲ ಎಂದು ಖಚಿತಪಡಿಸಿದ. ಸುನಾಮ್‌ನ ಬಂದೋಬಸ್ತನ್ನು ಮಾಡಿ ಬಲ್ಬನ್ ಮುಂದುವರೆದ .ಮತ್ತು ಅವನು ತನ್ನ ಪ್ರಯಾಣದ ಮೂರ್ನಾಲ್ಕು ಘಟ್ಟಗಳನ್ನು ಕ್ರಮಿಸುವಷ್ಟರಲ್ಲಿ ತೊಘ್ರಲ್ ತಲೆ ಮರೆಸಿಕೊಂಡಿರುವ

ವಿಷಯ ಅವನಿಗೆ ತಿಳಿದು ಬಂದಿತು. ವ್ಯಾಪಕವಾಗಿ ಅವನ ಬಗ್ಗೆ ಪ್ರಶ್ನಿಸಲಾದರೂ ಯಾರಿಗೂ ಅವನ ಬಗ್ಗೆ ಸುಳಿವು ಇರಲಿಲ್ಲ. ಬಲ್ಬನ್ನನು ಮುಲ್ಕ್ ಬಾರ್ಬೆಕ್ ಬರ್ಲಾಸ್‌ನ ಬೆಂಗಾವಲಿನಲ್ಲಿ ಏಳು ಸಾವಿರ ಸೈನಿಕರನ್ನು ಹೊಂದಿಸಿ ಆ ಸೈನ್ಯವನ್ನು ತೊಘ್ರಲ್‌ನ ಪತ್ತೆಗಾಗಿ ರವಾನೆ ಮಾಡಿದ. ಆ ಸೈನ್ಯವು ಬಾದಶಾಹನಿಂದ ಹತ್ತು ಹನ್ನೆರಡು ಹರದಾರಿ ಮುಂದೆ ಹೊರಟು ತೊಘ್ರಲ್‌ನ ಪತ್ತೆ ಹಚ್ಚಲು ಅಪಾರವಾಗಿ ಶ್ರಮಿಸಿತು. ಆದರೆ ತೊಘ್ರಲ್‌ನ ಪತ್ತೆ ಆಗಲಿಲ್ಲ.

ತೊಘ್ರಲ್‌ನ ಪತ್ತೆ:

ಒಂದು ದಿನ ಸೈನ್ಯದ ಅಧಿಪತಿಯೂ ಮತ್ತು ಕೋಲ್‌ನ ಆಡಳಿತಾಧಿಕಾರಿಯೂ ಆದ ಮುಲ್ಕ್ ಮೊಹಮ್ಮದ್ ತೀರ್‌ಅಂದಾಜ್ ಮತ್ತು ಅವನ ಸಹೋದರನಾದ ಮುಲ್ಕ್ ಮೊಖದ್ದರ್ ಇಬ್ಬರೂ ಕೂಡಿ ಸುಮಾರು ಮೂವತ್ತು ನಲವತ್ತು ಮಂದಿ ಸೈನಿಕರೊಂದಿಗೆ ಪ್ರಯಾಣ ಮಾಡುತ್ತಿದ್ದರು. ಈ ತಂಡವು ಸೈನ್ಯದ ಪ್ರಯಾಣಕ್ಕೆ ಎದುರಾಗುವ ಅಡೆತಡೆಗಳನ್ನು ನಿವಾರಿಸುವ ಸಲುವಾಗಿ ಸೈನ್ಯದ ಮುಂಚೂಣಿಯಲ್ಲಿತ್ತು. ಚರಿತ್ರೆಯಲ್ಲಿ ಈ ಮುಲ್ಕ್ ಮೊಖದ್ದರ್‌ನನ್ನು "ತೊಘ್ರಲ್ ಸಂಹಾರಿ" ಎಂದು ಕರೆದಿದ್ದಾರೆ. ಆಗ ಮುಲ್ಕ್ ಮೊಖದ್ದರ್‌ನು ಕೆಲವು ವ್ಯಾಪಾರಿಗಳು ತನ್ನ ಎದುರಿನಿಂದ ಬರುತ್ತಿರುವುದನ್ನು ಕಂಡ. ಅವನು ಅವರನ್ನು ಬಂಧಿಸಿ ತೊಘ್ರಲ್‌ನ ಚಲನವಲನಗಳ ಬಗ್ಗೆ ಮಾಹಿತಿಯನ್ನು ಕೇಳಿದ. ಮತ್ತು ಅವರಿಂದ ಸೂಕ್ತ ಪ್ರತಿಕ್ರಿಯೆ ಬಾರದೆ ಇದ್ದಾಗ ಅವರನ್ನು ಬೆದರಿಸಿದ. ಆ ವ್ಯಾಪಾರಿಗಳಿಂದ ನಿರೀಕ್ಷಿತ ನೆರವು ದೊರಕದೆ ಇದುದ್ದರಿಂದ ಕುಪಿತನಾದ ಮುಲ್ಕ್ ಮೊಹಮ್ಮದನು ಒಬ್ಬ ವ್ಯಾಪಾರಿಯನ್ನು ಅವರ ಎದುರಿನಲ್ಲಿಯೇ ಕೊಲೆ ಮಾಡಿದ. ಈ ಸಜೆಯಿಂದ ಉಳಿದ ವ್ಯಾಪಾರಿಗಳು ಭಯಗ್ರಸ್ಥರಾದರು ಮತ್ತು ಹೇಳಿದರು, "ನೀವು ನಮ್ಮಿಂದ ಏನನ್ನು ಬೇಕಾದರೂ ಪಡೆದುಕೊಳ್ಳಿ; ಆದರೆ ನಮಗೆ ಪ್ರಾಣ ಭಿಕ್ಷೆಯನ್ನು ನೀಡಿ". ಮುಲ್ಕ್ ಮೊಖದ್ದರ್ ನುಡಿದ "ನಮ್ಮ ಉದ್ದೇಶವು ತೊಘ್ರಲ್‌ನನ್ನು ಪತ್ತೆ ಮಾಡುವುದಾಗಿದೆ. ನೀವು ನಮಗೆ ಈ ಬಗ್ಗೆ ನೆರವು ನೀಡಿದಲ್ಲಿ ನಿಮ್ಮ ಪ್ರಾಣಗಳು ಮತ್ತು ನಿಮ್ಮ ಸಂಪತ್ತು ಉಳಿಯುವುದು. ಇಲ್ಲವಾದಲ್ಲಿ ಉಂಟಾಗುವ ಪರಿಣಾಮಗಳಿಗೆ ನೀವೇ ಜವಾಬ್ದಾರರಾಗುತ್ತೀರಿ". ವ್ಯಾಪಾರಿಗಳಿಗೆ ಇಕ್ಕಟ್ಟಿನ ಪರಿಸ್ಥಿತಿ ಉಂಟಾಗಿ ಬಿಡುಗಡೆಯ ಯಾವ ಹಾದಿಯೂ ಕಂಡು ಬರದೆ ಹೀಗೆಂದು ನುಡಿದರು, "ನಾವು ತೊಘ್ರಲ್‌ನ ಸೈನ್ಯಕ್ಕೆ ದಿನಸಿಯನ್ನು ಸರಬರಾಜು ಮಾಡಿ ಮರಳುತ್ತಿದ್ದೇವೆ. ಹಾಗೂ ನಿಮ್ಮ ಮತ್ತು ತೊಘ್ರಲ್‌ನ ನಡುವೆ ಬರೀ ಒಂದು ಮೈಲಿಯ ಅಂತರ ಮಾತ್ರ ಬಾಕಿ ಇದೆ. ನೀವು ಕೂಡಲೇ ಅವನ ಬೆನ್ನಟ್ಟಿದರೆ ಅವನನ್ನು ಹಿಡಿಯಬಹುದು. ಇಲ್ಲವಾದರೆ ನಾಳೆ ಅವನು ಜಾಜ್ ನಗರವನ್ನು ತಲುಪುತ್ತಾನೆ" ಮುಲ್ಕ್ ಮೊಖದ್ದರನು ಆ ವ್ಯಾಪಾರಿಗಳನ್ನು ಕೂಡಲೇ ಇಬ್ಬರು ಸೈನಿಕರೊಂದಿಗೆ ಮುಲ್ಕ್ ಬರ್ಲಾಸ್‌ನ ಸನ್ನಿಧಿಗೆ ರವಾನೆ ಮಾಡಿದ. ಹಾಗೂ ಆ ವ್ಯಪಾರಿಗಳಿಂದ ಸಂಪೂರ್ಣ ವಿಷಯವನ್ನು

ಅರಿತುಕೊಂಡು ತೊಘ್ರಲ್‌ನನ್ನು ಬರ್ಲಾಸ್ ಹಿಂಬಾಲಿಸಲಿ ಎಂಬುದು ಮುಲ್ಕ ಮೊಖದ್ದರ್‌ನ ಆಲೋಚನೆಯಾಗಿತ್ತು. ಇಲ್ಲವಾದಲ್ಲಿ ತೊಘ್ರಲ್ ಜಾಜ್ ನಗರವನ್ನು ತಲುಪಿದಲ್ಲಿ ಅಲ್ಲಿನ ಪ್ರಜೆಗಳ ಪಿತೂರಿಯಿಂದ ಅವನು ಯಾವುದಾದರೂ ಕಾಡಿನಲ್ಲಿ ಅದೃಶ್ಯನಾದರೆ ತಮ್ಮ ಕೈಗೆ ಅವನು ಸಿಗುವುದಿಲ್ಲವೆಂಬುದು ಅವನ ಚಿಂತೆಯಾಗಿತ್ತು. ವ್ಯಾಪಾರಿಗಳನ್ನು ಸೂಕ್ತ ವ್ಯವಸ್ಥೆಯೊಂದಿಗೆ ಕಳುಹಿಸಿದ ನಂತರ ಮುಲ್ಕ್ ಮೊಖದ್ದರನು ಒಂದು ಎತ್ತರವಾದ ಪ್ರದೇಶದ ಮೇಲೆ ಏರಿದ ಹಾಗೂ ತೊಘ್ರಲ್‌ನ ಪತ್ತೆಗಾಗಿ ನಾಲ್ಕೂ ದಿಕ್ಕಿನತ್ತ ದೃಷ್ಟಿಯನ್ನು ಹಾಯಿಸಿದ. ಮೊಖದ್ದರ್‌ಗೆ ಒಂದು ಕಡೆ ತೊಘ್ರಲ್‌ನ ಡೇರೆ ಕಂಡು ಬಂದಿತು. ಹಾಗೂ ತೊಘ್ರಲ್‌ನ ಸೈನಿಕರು ಬಹಳ ನೆಮ್ಮದಿ ಹಾಗೂ ನಿಶ್ಚಿಂತೆಯಿಂದ ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನನಾಗಿರುವುದನ್ನು ಮತ್ತು ಸೈನ್ಯದ ಸವಾರಿಯ ಪ್ರಾಣಿಗಳು ಕಾಡಿನಲ್ಲಿ ಮೇಯುತ್ತಿದ್ದುದನ್ನು ಅವನು ಗಮನಿಸಿದ. ಈ ಸದವಕಾಶವನ್ನು ಕಳೆದುಕೊಳ್ಳಲು ಮುಲ್ಕ್ ಮೊಖದ್ದರ್ ತಯಾರಿರಲಿಲ್ಲ. ಅವನು ಆ ಎತ್ತರ ಪ್ರದೇಶದಿಂದ ಕೆಳಗೆ ತಲುಪಿದ ಕೂಡಲೇ ತೊಘ್ರಲ್‌ನ ಡೇರೆಯತ್ತ ಶರವೇಗದಿಂದ ಧಾವಿಸಿದ. ಅವನನ್ನು ಮತ್ತು ಅವನ ಸೈನ್ಯವನ್ನು ಕಂಡು ತೊಘ್ರಲ್‌ನ ಸೈನಿಕರು ಅದು ತಮ್ಮದೇ ಸೈನ್ಯವೆಂದು ಪರಿಭಾವಿಸಿದರು. ಹಾಗೂ ಯಾವುದೇ ತಡೆಯನ್ನು ಉಂಟುಮಾಡಲಿಲ್ಲ. ಮುಲ್ಕ್ ಮೊಖದ್ದರ್ ಮತ್ತು ಅವನ ಸಂಗಡಿಗರು ತಮ್ಮ ಕತ್ತಿಗಳನ್ನು ಝಳಪಿಸುತ್ತ ತೊಘ್ರಲ್‌ನ ಸೈನ್ಯದ ಮಾರಣಹೋಮವನ್ನು ಮಾಡುತ್ತ "ರಾಜ್ಯವು ಬಲ್ಬನ್ನನ ಹಿಸ್ಸೆ ಮಾತ್ರ" ಎಂದು ರಣಘರ್ಜನೆಯನ್ನು ಮಾಡುತ್ತ ಮುಂದುವರೆಯುತ್ತಿದ್ದರು. ಈ ಉದ್ಘೋಷಣೆಯನ್ನು ಕೇಳಿ, ಬಲ್ಬನ್ ಸ್ವತಃ ಸೈನ್ಯದೊಂದಿಗೆ ತನ್ನನ್ನು ಸುತ್ತುವರೆದಿದ್ದಾನೆಂದು ತೊಘ್ರಲ್ ತಪ್ಪಾಗಿ ಗ್ರಹಿಸಿದ. ಹೀಗಾಗಿ ಅವನು ವಿವಶನಾಗಿ ಶೌಚಾಲಯದ ಹಾದಿಯಿಂದ ಹೊರ ಹೊರಟು ಜೀನಿಲ್ಲದ ಒಂದು ಕುದುರೆಯ ಬೆನ್ನಿನ ಮೇಲೆ ಕುಳಿತು ಪರಾರಿಯಾದ.

ತೊಘ್ರಲ್‌ನ ಕೊಲೆ:

ತೊಘ್ರಲ್‌ನ ತಲೆಯ ಮೇಲೆ ವಿಶ್ವಾಸಘಾತಕತನದ ದುರಾದೃಷ್ಟವು ಸುಳಿದಾಡುತ್ತಿತ್ತು. ಹೀಗಾಗಿ ಅವನು ತನ್ನ ಸೈನ್ಯದತ್ತ ಓಡಲಿಲ್ಲ, ಬದಲಿಗೆ ಸಮೀಪದ ನದಿಯೊಂದರತ್ತ ಓಡಿದ. ಆ ನದಿಯನ್ನು ಈಜಿ ಆಚೆ ದಡದಲ್ಲಿದ್ದ ಜಾಜ್ ನಗರವನ್ನು ತಲುಪಬೇಕೆಂಬುದು ಅವನ ಉದ್ದೇಶವಾಗಿತ್ತು. ತೊಘ್ರಲ್ ಕಾಣೆಯಾಗಿದ್ದರಿಂದ ಅವನ ಸೈನ್ಯದಲ್ಲಿ ಅಪಾರ ಗೊಂದಲ ಹಾಗೂ ಅಶಾಂತಿಯು ಎದ್ದು ಕಾಣುತ್ತಿತ್ತು. ಅನಾಯಕತ್ವದ ದೆಸೆಯಿಂದ ಮನ ಬಂದತ್ತ ಸೈನಿಕರು ಓಡುತ್ತಿದ್ದರು. ತೊಘ್ರಲ್‌ನನ್ನು ಬೆಂಬತ್ತಿದ್ದ ಮುಲ್ಕ್ ಮೊಖದ್ದರ್ ಹೊಳೆಯ ಬದಿಗೆ ಬಂದು ತೊಘ್ರಲ್‌ನನ್ನು ಕಂಡವನೇ ಹರಿತವಾದ ಬಾಣದಿಂದ ಅವನನ್ನು ಹೊಡೆದುರುಳಿಸಿದ. ಕುದುರೆಯಿಂದ ಕೆಳಗುರುಳಿದ ತೊಘ್ರಲ್‌ನ ರುಂಡವನ್ನು ಮುಲ್ಕ್ ಮೊಖದ್ದರ್ ಒಂದೇ ಏಟಿಗೆ ಮುಂಡದಿಂದ ಬೇರ್ಪಡಿಸಿದ.

ತೊಘ್ರಲ್‌ನ ಸೈನಿಕರು ತಮ್ಮ ಒಡೆಯನನ್ನು ಹುಡುಕುತ್ತಾ ನಾಲ್ಕೂ ದಿಕ್ಕುಗಳಲ್ಲಿ ಚೆದರಿದ್ದರು ಆದ್ದರಿಂದ ಮುಲ್ಕ್ ಮೊಖದ್ದರನು ನದಿಯ ಉಸುಕಿನಲ್ಲಿ ಅವನ ತಲೆಯನ್ನು ಹೂತು ಹಾಕಿದ ಮತ್ತು ಮುಂಡವನ್ನು ನದಿಯ ನೀರಿನಲ್ಲಿ ಎಸೆದ ಮತ್ತು ಅವನು ಒಂದೆಡೆ ಕುಳಿತು ಹೊಳೆಯ ನೀರಿನಲ್ಲಿ ತನ್ನ ಬಟ್ಟೆಗಳನ್ನು ಒಗೆಯಲಾರಂಭಿಸಿದ. ಆಗ ತೊಘ್ರಲ್‌ನ ಸೈನಿಕರು ಅವನನ್ನು ಹುಡುಕುತ್ತಾ ಅಲ್ಲಿಗೆ ಬಂದರು ಹಾಗೂ "ಖುದಾವಂದೆ ಆಲಮ್" "ಖುದಾ ವಂದೆ ಆಲಮ್" ಎಂದು ಕೂಗುತ್ತಾ ಅಲ್ಲಿಂದ ಮುನ್ನಡೆದರು. ಅವರ ಆರ್ತನಾದಕ್ಕೆ ಯಾವುದೇ ಪ್ರತ್ಯುತ್ತರ ದೊರಕಲಿಲ್ಲ.

ಬಹುಮಾನ ಮತ್ತು ಗೌರವಾರ್ಪಣೆ:

ಆಗ ಮಲ್ಲಿಕ್ ಬಲ್ಬಾಸ್‌ನ ಸವಾರಿಯು ಬರುವುದು ದೂರದಿಂದ ಕಂಡು ಬಂದಿತು ಮುಲ್ಕ್ ಮೊಖದ್ದರ್ ಓಡೋಡುತ್ತಾ ಅವನ ಬಳಿ ಸಾರಿದ ಹಾಗೂ ಅವನಿಗೆ ವಿಜಯದ ಅಭಿನಂದನೆಗಳನ್ನು ಸಲ್ಲಿಸಿದ, ಮತ್ತು ಪೂರ್ಣ ವಿಷಯವನ್ನು ಅರುಹಿದ .ಮುಲ್ಕ್ ಬಲ್ಬಾಸನು ಮೊಖದ್ದರ್‌ನ ಬಗ್ಗೆ ಅತೀವ ಪ್ರಶಂಸೆಯನ್ನು ಮಾಡಿದ ಮತ್ತು ತೊಘ್ರಲ್‌ನ ತಲೆಯನ್ನು ವಿಜಯ ಪತ್ರದೊಂದಿಗೆ ಬಲ್ಬನ್ನನ ಸಮಕ್ಷಮ ಹಾಜರು ಪಡಿಸಿದ ಹಾಗು ತೊಘ್ರಲ್‌ನ ಮರಣದ ವೃತ್ತಾಂತವನ್ನು ಅರುಹಿದ. ಬಲ್ಬನ್ ಅವರಿಬ್ಬರೊಡನೆ ಕೋಪೋದ್ರಿಕ್ತನಾದ ಮತ್ತು ನುಡಿದ, "ನನ್ನ ವಿವೇಕವು ಜಾಗೃತವಾಗಿಲ್ಲದಿದ್ದಲ್ಲಿ ನಿಮ್ಮ ತಪ್ಪಿನ ದೋಷ ಪರಿಹಾರವಾಗುತ್ತಿರಲಿಲ್ಲ" ಎಂದು. ಆದರೆ ಕೊನೆಗೆ ಅವನು ಅವರಿಬ್ಬರ ನಿಸ್ವಾರ್ಥತೆ ಮತ್ತು ವಿಶ್ವಾಸಪೂರ್ವ ನಡವಳಿಕೆಯನ್ನು ಗಮನಿಸಿ ಅದರ ಹುದ್ದೆಯಲ್ಲಿ ಬಡ್ತಿಯನ್ನು ನೀಡಿದ. ಹಾಗೂ ಅವರಿಬ್ಬರಿಗೆ ರಾಜ ಪಾರಿತೋಷಕಗಳನ್ನು ನೀಡಿ ಗೌರವಿಸಿದ. ಹಾಗೂ ಮುಲ್ಕ್ ಮೊಖದ್ದರ್‌ಗೆ "ತೊಘ್ರಲ್ ಸಂಹಾರಿ"ಯ ಬಿರುದನ್ನು ನೀಡಿ ತನ್ನ ಸರದಾರರ ಸಾಲಿನಲ್ಲಿ ಸೇರಿಸಿಕೊಂಡ ಹಾಗೂ ತೊಘ್ರಲ್‌ಗೆ "ತೊಘ್ರಲ್ ನಮಕ್ ಹರಾಮ್" ಎಂಬ ಹೆಸರಿನಿಂದ ಕರೆಯಬೇಕೆಂದು ಆಜ್ಞೆ ಮಾಡಿದ.

ತೊಘ್ರಲ್‌ನ ಬೆಂಬಲಿಗರ ಕಗ್ಗೊಲೆ:

ತದ ನಂತರ ಬಲ್ಬನ್ ಲಖ್ನೋತಿಗೆ ಹೋಗಿ ಅಲ್ಲಿ ನಗರದ ಮಾರುಕಟ್ಟೆಯ ಎರಡು ಪಾರ್ಶ್ವಗಳಲ್ಲಿ ನೇಣುಗಂಬಗಳನ್ನು ನಿಲ್ಲಿಸುವಂತೆ ಆಜ್ಞೆ ಮಾಡಿದ. ಹಾಗೂ ತೊಘ್ರಲ್‌ನ ಎಲ್ಲಾ ಸಂಗಾತಿಗಳು, ಸ್ನೇಹಿತರು ಮತ್ತು ಬಂಧುಗಳು ಮೊದಲಾದವರನ್ನು ಬಂಧಿಸಿ ಮರಣ ದಂಡನೆಯನ್ನು ವಿಧಿಸುವಂತೆ ಆದೇಶಿಸಿದ. ರಾಜಾಜ್ಞೆಯನ್ನು ತತ್‌ಕ್ಷಣವೇ ಪಾಲಿಸಲಾಯಿತು. ಮತ್ತು ತೊಘ್ರಲ್‌ನ ಸೇವಕರನ್ನು ಕೊಲೆ ಮಾಡಲಾಯಿತು. ಆರೋಪಿಗಳ ಪತ್ನಿ ಮತ್ತು ಮಕ್ಕಳನ್ನು ಕೂಡ ನಿರ್ದಯವಾಗಿ ನೇಣಿಗೇರಿಸಲಾಯಿತು. ಇತಿಹಾಸಕಾರರ ಪ್ರಕಾರ ಬಲ್ಬನ್‌ಗಿಂತ ಮುಂಚಿತವಾಗಿ ದೆಹಲಿಯ ಯಾವ ಬಾದಶಹನು

ಕೂಡ ಆರೋಪಿಗಳ ಪತ್ನಿ ಮತ್ತು ಮಕ್ಕಳು ಹಾಗೂ ವೃದ್ಧರನ್ನು ರಾಜಕೀಯ ಅಪರಾಧಿಗಳೆಂದು ಪರಿಗಣಿಸಿ ಅವರನ್ನು ಹತ್ಯೆಗೀಡು ಮಾಡಿರಲಿಲ್ಲ. ತೊಘ್ರಲ್‌ನ ಬೆಂಬಲಿಗರಲ್ಲಿ "ಶಾಹೆ ಖಲಂದರ್" ಎಂದು ಕರೆಯಲ್ಪಡುತ್ತಿದ್ದ ಒಬ್ಬ ಫಕೀರನು ಕೂಡ ಇದ್ದ. ತೊಘ್ರಲ್ ಅವನನ್ನು ಅತೀವ ಗೌರವಾದರಗಳಿಂದ ಕಾಣುತ್ತಿದ್ದ. ತೊಘ್ರಲ್‌ನ ಅನುಯಾಯಿಗಳನ್ನು ಬಂಧಿಸಿ ಬಲ್ಬನ್ನನ ಎದುರಿಗೆ ಹಾಜರು ಪಡಿಸಿದವರ ಪೈಕಿ ಅವನೂ ಇದ್ದ.

ತೊಘ್ರಲ್ ಆ ಖಲಂದರ್‌ಗೆ "ವಿರಾಗಿಯ ಉಪಕರಣ"ಗಳನ್ನು ತಯಾರಿಸಲು ನೀಡಿದ್ದ ಮೂರು ಮಣ ಚಿನ್ನವನ್ನು ಬಲತ್ಕಾರವಾಗಿ ಹಿಂಪಡೆದ ಮತ್ತು ಅವನನ್ನು ನೇಣಿಗೇರಿಸಿದ. ತೊಘ್ರಲ್‌ನ ಉಳಿದ ಸೈನ್ಯವನ್ನು ದೆಹಲಿಗೆ ಕರೆದೊಯ್ಯುವಂತೆ ಆಜ್ಞೆ ಮಾಡಿದ. ಬಲ್ಬನ್ ಅಲ್ಲಿ ತಲುಪಿದ ನಂತರ ಉಳಿದವರಿಗೆ ನೀಡಿದ ಶಿಕ್ಷೆಯನ್ನೇ ಆ ಸೈನಿಕರಿಗೆ ದೆಹಲಿಯಲ್ಲಿ ನೀಡುವುದಾಗಿ ಪ್ರಕಟ ಪಡಿಸಿದ.

ಬಘ್ರಾಖಾನ್ ಲಖ್ನೋತಿಯ ಆಡಳಿತಾಧಿಕಾರಿ:

ಈ ಎಲ್ಲಾ ವಿಷಯಗಳಿಂದ ಸ್ವಲ್ಪ ವಿರಾಮ ದೊರಕಿದ ನಂತರ ಬಲ್ಬನ್ ಲಖ್ನೋತಿಯ ಆಡಳಿತವನ್ನು ತನ್ನ ಪುತ್ರನಾದ ಬಘ್ರಾಖಾನನ ವಶಕ್ಕೆ ಒಪ್ಪಿಸಿದ ಹಾಗೂ ಆನೆಗಳು ಮತ್ತು ಇಡೀ ಖಜಾನೆಯೊಂದಿಗೆ ಬಲ್ಬನ್‌ನ ಕೈವಶವಾಗಿದ್ದ ಅಪಾರ ಯುದ್ಧ ಸಂಪತ್ತನ್ನು ಕೂಡ ಅವನಿಗೆ ಒಪ್ಪಿಸಿದ. ಅದೇ ದಿನ ಬಘ್ರಾಖಾನ್‌ಗೆ ಬಲ್ಬನ್ನನು ಛತ್ರ ಚಾಮರಗಳನ್ನು ಕೂಡ ಕರುಣಿಸಿದ. ಮತ್ತು ಲಖ್ನೋತಿಯಲ್ಲಿ ಬಘ್ರಾಖಾನನ ಹೆಸರಿನ ಶಾಸನ ಮತ್ತು ನಾಣ್ಯವನ್ನು ಜಾರಿಗೊಳಿಸಲಾಯಿತು.

ಬಲ್ಬನ್ನನ ಹಿತವಚನ:

ಬಲ್ಬನ್ ಲಖ್ನೋತಿಯಿಂದ ದೆಹಲಿಗೆ ಮರುಳುವ ಸಂದರ್ಭದಲ್ಲಿ ತನ್ನ ಪುತ್ರನಾದ ಬಘ್ರಾಖಾನ್‌ಗೆ ಕೆಳಕಂಡಂತೆ ಹಿತವಚನವನ್ನು ಬೋಧಿಸಿದ.

೧) ದೆಹಲಿಯ ಬಾದಶಾಹನು ಲಖ್ನೋತಿಯ ಆಡಳಿತಗಾರನಿಗೆ ಸಂಬಂಧಿಯಾಗಿರಲಿ ಅಥವಾ ಇಲ್ಲದಿರಲಿ ಲಖ್ನೋತಿಯ ಆಡಳಿತಗಾರನು ದೆಹಲಿಯ ಬಾದಶಹನ ವಿರುದ್ಧ ಯಾವ ಕಾರಣಕ್ಕೂ ವಿದ್ರೋಹೀ ಚಟುವಟಿಕೆಯನ್ನು ನಡೆಸತಕ್ಕದಲ್ಲ. ಒಂದು ವೇಳೆ ದೆಹಲಿಯ ಬಾದಶಹನು ಲಖ್ನೋತಿಯ ಮೇಲೆ ಯುದ್ಧ ಆರಂಭಿಸಿದಲ್ಲಿ ಲಖ್ನೋತಿಯ ಆಡಳಿತಗಾರನು ಬೇರೆ ಎಲ್ಲಾದರೂ ಹೋಗಿ ರಕ್ಷಣೆ ಪಡೆಯತಕ್ಕದ್ದು ಹಾಗೂ ದೆಹಲಿಯ ಬಾದಶಹನು ಮರಳಿ ಹೋದ ನಂತರ ಲಖ್ನೋತಿಯ ಆಡಳಿತಗಾರನು ತನ್ನ ರಾಜ್ಯಕ್ಕೆ ಮರಳಿ ಹೋಗಿ ಆಡಳಿತವನ್ನು ನಿಭಾಯಿಸತಕ್ಕದ್ದು.

೨) ಪ್ರಜೆಗಳಿಂದ ತೆರಿಗೆ ಹಣವನ್ನು ವಸೂಲಿ ಮಾಡುವಾಗ ಮಧ್ಯಮ ಮಾರ್ಗವನ್ನು

ಅನುಸರಿಸಬೇಕು. ಜನತೆಯು ವಿದ್ರೋಹಿ ಮತ್ತು ಬಂಡಾಯದ ಕಿಡಿಗೇಡಿಗಳ ಚಟುವಟಿಕೆಯಲ್ಲಿ ತೊಡಗಲು ಅವರಿಗೆ ಸಂಪನ್ಮೂಲಗಳು ಕ್ರೋಢಿಕರಿಸಲು ಅನುಕೂಲವಾಗುವಂತೆ ಕಡಿಮೆ ತೆರಿಗೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ. ಮತ್ತು ಜನತೆಯು ತೀವ್ರ ಸಂಕಷ್ಟಕ್ಕೆ ಗುರಿಯಾಗುವಷ್ಟು ಹೆಚ್ಚಿನ ತೆರಿಗೆಯನ್ನು ಕೂಡಾ ಪಡೆಯತಕ್ಕದಲ್ಲ ಇಡೀ ವರ್ಷದ ಅಗತ್ಯ ವೆಚ್ಚಗಳನ್ನು ಪೂರೈಸುವಷ್ಟು ವೇತನವನ್ನು ನೌಕರರಿಗೆ ಕೊಡಬೇಕು ಹಾಗೂ ಅವರ ಜೀವನಾವಶ್ಯಕತೆಗೆ ಅಗತ್ಯವಾದಷ್ಟು ಹಣಕ್ಕಿಂತ ಕಡಿಮೆ ವೇತನವನ್ನು ನೀಡಿ ಅವರನ್ನು ಬಡತನ ಮತ್ತು ಕಷ್ಟಕಾರ್ಪಣ್ಯಗಳಿಗೆ ಗುರಿಯಾಗಿಸುವಂತದಲ್ಲ.

೩) ದೇಶದ ಯುದ್ಧದಂತಹ ಪ್ರಮುಖ ಕಾರ್ಯಗಳನ್ನು ಹಿತೈಷಿಗಳ ಸಲಹೆಯ ಮೇರೆಗೆ ಮಾಡತಕ್ಕದ್ದು. ರಾಜ್ಯದ ಕಾನೂನು ಪರಿಪಾಲನೆಯಲ್ಲಿ ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಪರಿಗಣಿಸತಕ್ಕದಲ್ಲ, ನ್ಯಾಯಪರತೆಯನ್ನು ಎತ್ತಿ ಹಿಡಿದು ತಮ್ಮ ವೈಯಕ್ತಿಕ ಹಿತಾಸಕ್ತಿಯ ಮೇಲೆ ಆದ್ಯತೆಯನ್ನು ನೀಡತಕ್ಕದ್ದು.

೪) ತಮ್ಮ ನೌಕರ ಚಾಕರರು ಹಾಗು ಗುಲಾಮರು ಆಡಳಿತದ ಅವಶ್ಯಕ ಘಟಕವಾಗಿದ್ದಾರೆ. ಅವರನ್ನು ಅನ್ಯೆಕ್ಯತೆಯ ಬಲಿಯಾಗಿಸಬಾರದು. ಅವರ ಪರಿಸ್ಥಿತಿಯ ಬಗ್ಗೆ ಸಂಪೂರ್ಣ ಅರಿವು ಇರಬೇಕು. ಅವರ ಅವಶ್ಯಕತೆಗಳ ಬಗ್ಗೆ ಸಂಪೂರ್ಣ ಉಪಬಂಧವನ್ನು ಮಾಡಬೇಕು. ಯಾರಾದರೂ ಇದಕ್ಕೆ ವಿರುದ್ಧವಾಗಿ ವರ್ತನೆ ಮಾಡಿದಲ್ಲಿ ಅವನನ್ನು ತನ್ನ ಶತ್ರುವೆಂದು ಪರಿಗಣಿಸಿ ಅವನ ಮಾತಿನಲ್ಲಿ ವಿಶ್ವಾಸವನ್ನು ಇಡತಕ್ಕದಲ್ಲ.

೫) ಲೌಕಿಕ ಜಗತ್ತಿನಿಂದ ವಿಮುಕ್ತನಾಗಿ ಅಲ್ಲಾಹನ ಅಸ್ತಿತ್ವದಲ್ಲಿ ವಿಶ್ವಾಸ ಇಟ್ಟಿರುವಂತಹ ವ್ಯಕ್ತಿಯನ್ನು ಸದಾಕಾಲವೂ ಬೆಂಬಲಿಸತಕ್ಕದ್ದು.

ದೆಹಲಿಗೆ ವಾಪಸ್ಸು:

ಬಲ್ಬನ್ ಈ ಅಮೂಲ್ಯವಾದ ಹಿತವಚನವನ್ನು ನೀಡಿದ ಬಳಿಕ ಪುತ್ರನಾದ ಬಘ್ರಾಖಾನ್‌ನಿಂದ ಬೀಳ್ಕೊಂಡು ದೆಹಲಿಗೆ ಮರಳಿದ ಹಾಗೂ ಹಂತ ಹಂತವಾಗಿ ಪ್ರಯಾಣ ಬೆಳೆಸುತ್ತಾ ಮೂರು ತಿಂಗಳ ನಂತರ ರಾಜಧಾನಿಯನ್ನು ತಲುಪಿದ. ಅಲ್ಲಿ ತಲುಪಿದ ನಂತರ ತನ್ನ ಗೈರು ಹಾಜರಿಯಲ್ಲಿ ಆಡಳಿತಾತ್ಮಕ ಬಿಕ್ಕಟ್ಟುಗಳನ್ನು ಅತ್ಯಂತ ಸಮಯೋಚಿತ ಮತ್ತು ಸಕ್ಷಮ ವಿಧಾನದಿಂದ ಬಗೆ ಹರಿಸಿದ್ದ ಫಕ್ರುದ್ದೀನ್ ಕೊತ್ವಾಲ್‌ಗೆ ಅನೇಕ ರಾಜ ಪಾರಿತೋಷಕಗಳನ್ನು ನೀಡಿದ. ಬಲ್ಬನ್ ಅವನಿಂದ ಎಷ್ಟು ಸಂತುಷ್ಟನಾಗಿದ್ದನೆಂದರೆ ತನ್ನ ನಿಲುವಂಗಿಯನ್ನು ತೆಗೆದು ಮುಲ್ಕ್ ಫಕ್ರುದ್ದೀನ್‌ಗೆ ನೀಡಿದ ಮತ್ತೆ ಅವನನ್ನು ತನ್ನ ಆತ್ಮೀಯ ಮಿತ್ರನೆಂದು ಪರಿಗಣಿಸಿದ. ಫಕ್ರುದ್ದೀನ್ ಅಲ್ಲದೆ ಇತರೆ ವಿಧೇಯ ಮತ್ತು ನಂಬಿಗಸ್ಥ ಸರದಾರರು ಮತ್ತು ರಾಜ್ಯದ ಅಧಿಕಾರಿಗಳಿಗೆ

ಅನೇಕ ಪಾರಿತೋಷಕಗಳನ್ನು ನೀಡಿ ಅವರೆಲ್ಲರಿಗೂ ಉತ್ತೇಜನವನ್ನು ನೀಡಿದ. ನಂತರ ಬಲ್ಬನ್ನನು ಫಕೀರರು ಮತ್ತು ವಿದ್ವಾಂಸರ ಹೊಸ್ತಿಲಿನ ಪ್ರದಕ್ಷಿಣೆಯನ್ನು ಆರಂಭಿಸಿದ. ಅವರೆಲ್ಲರ ಸನ್ನಿಧಿಯಲ್ಲಿ ಅನೇಕ ಕಾಣಿಕೆಗಳನ್ನು ಮತ್ತು ಗೌರವಗಳನ್ನು ಸಲ್ಲಿಸಿದ. ಹಾಗೂ ಸಿವಿಲ್ ಸ್ವರೂಪದ ವ್ಯಾಜ್ಯಗಳ ದೆಸೆಯಿಂದ ಯಾರು ಬಂಧನಕ್ಕೆ ಒಳಗಾಗಿರುವವರೋ ಅವರನ್ನು ಬಿಡುಗಡೆ ಮಾಡಬೇಕೆಂತಲೂ ಆಜ್ಞೆ ಮಾಡಿದ. ಅಷ್ಟೇ ಅಲ್ಲದೆ ಪ್ರಜೆಗಳು ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆಯನ್ನು ಕೂಡ ಮನ್ನಾ ಮಾಡಿದ. ನಂತರ ದೆಹಲಿಯ ಮಾರುಕಟ್ಟೆಯ ಪ್ರದೇಶದಲ್ಲಿ ನೇಣುಕಂಬಗಳನ್ನು ನೇತು ಹಾಕಬೇಕೆಂದು ಆದೇಶವನ್ನು ಮಾಡಿದ ಬಲ್ಬನ್ ಲಖ್ನೋತಿಯಿಂದ ಬಂಧಿಸಿ ಕರೆತಂದಿದ್ದ ಸೈನಿಕರನೆಲ್ಲಾ ನೇಣುಕಂಬಕ್ಕೇರಿಸಬೇಕೆಂದು ಆದೇಶ ಮಾಡಿದ. ಆ ಸೈನಿಕರ ಪೈಕಿ ಬಹಳಷ್ಟು ಜನರು ದೆಹಲಿಯ ಪ್ರಜೆಗಳ ಸಂಬಂಧಿಕರು ಮತ್ತು ಆಪ್ತೇಷ್ಟರಾಗಿದ್ದರು. ಹೀಗಾಗಿ ದೆಹಲಿಯ ಪ್ರಜೆಗಳೆಲ್ಲಾ ಈ ಸುದ್ದಿಯಿಂದ ತೀರಾ ಕ್ಷೋಭೆಗೆ ಒಳಗಾಗಿ ದುಃಖಿತರಾದರು. ನಗರದ ಖಾಜಿಗೆ ಅವರುಗಳ ದುಃಖ ಮತ್ತು ನೋವನ್ನು ಕಂಡು ಸಹಿಸದಾಯಿತು. ಆ ವ್ಯಕ್ತಿ ತುಂಬಾ ಧರ್ಮಿಷ್ಟ ಹಾಗೂ ಸಜ್ಜನನಾಗಿದ್ದ ಆತನು ತನ್ನ ಪ್ರಾಣವನ್ನು ಪಣಕ್ಕೆ ಒಡ್ಡಿ ಬಾದಶಹನ ಸನ್ನಿಧಿಯಲ್ಲಿ ಹಾಜರಾದ ಮತ್ತು ಅತ್ಯಂತ ವಿನಮ್ರತೆಯಿಂದ ಆ ಖೈದಿಗಳ ತಪ್ಪನ್ನು ಕ್ಷಮಿಸುವಂತೆ ಬೇಡಿಕೊಂಡ. ಆ ಖಾಜಿಯ ಸಂಭಾಷಣೆಯು ಬಲ್ಬನ್ನನ ಹೃದಯ ಮತ್ತು ಮನಸ್ಸಿನ ಮೇಲೆ ಅಪಾರ ಪರಿಣಾಮವನ್ನು ಬೀರಿತು ಮತ್ತು ಅವನು ಅಪಾರ ಕರುಣೆಯಿಂದ ಆ ಖೈದಿಗಳ ತಪ್ಪನ್ನು ಮನ್ನಿಸಿ ಅವರಿಗೆ ಪ್ರಾಣದಾನ ಮಾಡಿದ.

ದೆಹಲಿಗೆ ಖಾನ್‌ಶಹೀದ್‌ನ ಅಗಮನ:

ರಾಜಕುಮಾರ ಮೊಹಮ್ಮದ್ ಸುಲ್ತಾನನು (ಖಾನ್ ಶಹೀದ್) ತನ್ನ ತಂದೆಯಾದ ಬಲ್ಬನ್ ವಿಜಯ ಮಾಲೆ ಧರಿಸಿ ಮರಳಿದನೆಂಬ ಸುದ್ದಿಯನ್ನು ಕೇಳಿ ಅವನನ್ನು ಭೇಟಿಯಾಗಲು ಮುಲ್ತಾನಿನಿಂದ ದೆಹಲಿಗೆ ಬಂದ. ಅವನು ಅತ್ಯಂತ ಅಮೂಲ್ಯವಾದ ಮತ್ತು ಉತ್ಕೃಷ್ಟ ದರ್ಜೆಯ ಬಳುವಳಿಗಳನ್ನು ಬಲ್ಬನ್ನನ ಸನ್ನಿಧಿಗೆ ಅರ್ಪಿಸಿದ. ತನ್ನ ಪುತ್ರನ ವಿಧೇಯತೆ ಮತ್ತು ವಾತ್ಸಲ್ಯದಿಂದ ಸಂತುಷ್ಟನಾದ ಬಲ್ಬನ್ ಅವನೊಡನೆ ಅತ್ಯಂತ ಸಂತೋಷದ ಕ್ಷಣಗಳನ್ನು ಕಳೆದ ಖಾನ್‌ಶಹೀದ್ ಮೂರು ತಿಂಗಳ ಅವಧಿಯವರೆಗೆ ದೆಹಲಿಯಲ್ಲಿ ವಾಸ್ತವ್ಯವನ್ನು ಹೂಡಿದ. ಆ ಅವಧಿಯಲ್ಲಿ ತಂದೆ ಮಗ ಇಬ್ಬರೂ ಅತ್ಯಂತ ಸಂತೋಷದಿಂದ ದಿನ ಕಳೆದರು ಮತ್ತು ಒಬ್ಬನೊಬ್ಬರು ಬಿಟ್ಟಿರುತ್ತಿರಲಿಲ್ಲ, ಆ ಸಂದರ್ಭದಲ್ಲಿ ಮೊಘಲರ ಗಲಭೆಗಳ ಸುದ್ದಿಯು ತಲುಪಿತು. ಆದ್ದರಿಂದ ಬಲ್ಬನ್ನನು ಖಾನ್‌ಶಹೀದ್‌ನನ್ನು ಬೀಳ್ಕೊಟ್ಟ. ಖಾನ್‌ಶಹೀದನು ಮುಲ್ತಾನ್‌ಗೆ ತೆರಳಲು ಸಿದ್ಧತೆಯನ್ನು ಮಾಡುತ್ತಿದ್ದಾಗ ಬಲ್ಬನ್ ಅವನನ್ನು ಏಕಾಂತದಲ್ಲಿ ಕರೆದ

ಮತ್ತು ಹೀಗೆಂದು ನುಡಿದ, "ನನ್ನ ಬದುಕಿನ ಬಹುದೊಡ್ಡ ಕಾಲಾವಧಿಯು ಬಾದಶಾಹನಾಗಿ ಆಡಳಿತಾತ್ಮಕ ಕೆಲಸಗಳ ನಡುವೆ ಕಳೆದಿದೆ, ಆದ್ದರಿಂದ ನನ್ನ ಅನುಭವದ ವ್ಯಾಪ್ತಿ ಹಿರಿದಾಗಿದೆ. ಕಡ್ಡಾಯವಾಗಿ ಒಬ್ಬ ಆಡಳಿತಗಾರನು ನಿರ್ವಹಿಸಲೇಬೇಕಾದ ಕೆಲವು ಕರ್ತವ್ಯಗಳ ಬಗ್ಗೆ ನಿನಗೆ ಹಿತವಚನವನ್ನು ನೀಡಲು ನಾನು ಇಚ್ಛಿಸುತ್ತೇನೆ. ನನ್ನ ನಂತರ ಆ ಹಿತವಚನವು ನಿನಗೆ ಹೆಚ್ಚು ಉಪಯುಕ್ತವಾಗುತ್ತದೆ.

ಖಾನ್ ಶಹೀದ್‌ಗೆ ಹಿತವಚನ:

೧) ನೀನು ನಿನ್ನ ಹಿರಿಮೆ ಮತ್ತು ಆಡಳಿತದ ಘನತೆಯ ಕಡೆ ಸಂಪೂರ್ಣ ಗಮನವನ್ನು ಕೊಡಬೇಕು. ನಿನ್ನ ವೈಯಕ್ತಿಕ ಹಿತಾಸಕ್ತಿಯ ಪೂರೈಕೆಗಾಗಿ ಬಾದಶಹನ ಸ್ಥಾನ ಮಾನದ ದುರ್ಬಬಳಕೆಯನ್ನು ಮಾಡಿಕೊಳ್ಳಬೇಡ. ನೀನು ಯಾವ ಕೆಲಸವನ್ನು ಕೈಗೆತ್ತಿಕೊಂಡರೂ ಅಲ್ಲಾಹನ ಸಂಪ್ರೀತಿಗೋಸ್ಕರ ಮಾಡಬೇಕು. ಹಾಗೂ ರಾಜ ಖಜಾನೆಯು ದೇವರ ಕೊಡುಗೆಯಾಗಿರುವುದರಿಂದ ಅದನ್ನು ಎಂದಿಗೂ ಸತ್ಕಾರ್ಯದಲ್ಲಿ ವ್ಯಯ ಮಾಡಬೇಕು. ಹಾಗು ದೇವರ ಸೃಷ್ಟಿಯ ಒಳಿತಿಗಾಗಿ ಗಮನವನ್ನು ಕೇಂದ್ರೀಕರಿಸು. ಧರ್ಮದ್ರೋಹಿಗಳಿಗೆ ವೃದ್ಧಿಸಲು ಅವಕಾಶ ನೀಡಬೇಡ. ಮತ್ತು ಅವರು ಎಂದಿಗೂ ಕೀಳಾಗಿ ಇರುವಂತೆ ಅವರ ಮರ್ದನವನ್ನು ಮಾಡು.

೨) ಅಲ್ಲಾಹನು ಪ್ರಜೆಗಳ ನಿನ್ನನ್ನು ಪ್ರಜೆಗಳ ಸರದಾರನನ್ನಾಗಿ ಅಂದರೆ ಬಾದಶಹಗಿರಿಯ ಕೊಡುಗೆಯನ್ನು ನೀಡಿರುವಾಗ, ಈ ಅಧಿಕಾರವನ್ನು ಸುಲಭವಾಗಿ ಪರಿಗಣಿಸಬೇಡ. ಬಾದಶಹನ ಕರ್ತವ್ಯವನ್ನು ಅಲ್ಲಾಹನು ನೀಡಿರುವ ಪ್ರತಿನಿಧಿತ್ವ ಎಂದು ತಿಳಿಯಬೇಕು. ಮತ್ತು ಇದು ಕಷ್ಟಕರವಾದ ವಿಷಯವಾಗಿದೆ ನೀನು ಈ ಮಹತ್ವದ ಜವಾಬ್ದಾರಿಯನ್ನು ಅಸಭ್ಯ ಕೆಲಸಗಳಿಂದ ಮತ್ತು ಅಪ್ರಿಯವಾದ ನಡವಳಿಕೆಯಿಂದ ಕಲುಷಿತಗೊಳಿಸಬೇಡ. ದುರ್ಮಾಗಳು ಮತ್ತು ಕೀಳುಜನರ ಸಂಗದಿಂದ ದೂರವಿರು.

೩) ನಿನ್ನ ದೇಶದ ಪರಿಸ್ಥಿತಿ ಮತ್ತು ನೀನು ನೇಮಕ ಮಾಡಿರುವ ಆಡಳಿತಗಾರರ ಬಗ್ಗೆ ಸಂಪೂರ್ಣ ಅರಿವನ್ನು ಹೊಂದಿರತಕ್ಕದ್ದು ಮತ್ತು ಆ ಆಡಳಿತಗಾರರಿಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತ ಸತ್ಕಾರ್ಯಗಳಲ್ಲಿ ತೊಡಗುವಂತೆ ಮತ್ತು ಉತ್ತಮ ನಡವಳಿಕೆಯನ್ನು ಹೊಂದುವಂತೆ ನೋಡಿಕೊಳ್ಳತಕ್ಕದ್ದು.

೪) ನಿನ್ನ ರಾಜ್ಯದಲ್ಲಿ ಯಾವಾಗಲೂ ಧರ್ಮಿಷ್ಟ ಮತ್ತು ಸಜ್ಜನರನ್ನು ಖಾಜಿ (ನ್ಯಾಯಾಧೀಶ) ಹಾಗೂ ಆಡಳಿತಗಾರನನ್ನಾಗಿ ನೇಮಕ ಮಾಡಬೇಕು. ಹಾಗಾದಾಗ ಮಾತ್ರ ಪ್ರಜೆಗಳಲ್ಲಿ ಧಾರ್ಮಿಕತೆ ಮತ್ತು ನೆಮ್ಮದಿ ನೆಲೆಸುತ್ತದೆ.

೫) ರಾಜವೈಭವದ ಪ್ರದರ್ಶನ ಮತ್ತು ರಾಜ ದರ್ಪ ಹಾಗೂ ರಾಜ ಮಾರ್ಯದೆಯ ಎಲ್ಲಾ ಅಂಶಗಳನ್ನು ಏಕಾಂತದಲ್ಲಿ ಮತ್ತು ಸಾರ್ವಜನಿಕವಾಗಿ

ಎಲ್ಲಾ ಸಂದರ್ಭಗಳಲ್ಲಿಯೂ ಗಮನದಲ್ಲಿಡಬೇಕು. ಮತ್ತು ಎಂದೆಂದಿಗೂ ವಿಲಾಸೀ ಜೀವನದಲ್ಲಿ ಮತ್ತು ವ್ಯರ್ಥ ಕೆಲಸಗಳಲ್ಲಿ ಸಮಯವನ್ನು ವ್ಯರ್ಥಗೊಳಿಸಬಾರದು.

೬) ಪಾವಿತ್ರ್ಯವನ್ನು ಉಳಿಸಿಕೊಂಡಿರುವ ಮತ್ತು ಉನ್ನತ ಪರಾಕ್ರಮವನ್ನು ಮೈಗೂಡಿಸಿಕೊಂಡಿರುವ ಜನರಿಗೆ ಕಾಣಿಕೆ ಮತ್ತು ಬಳುವಳಿಗಳನ್ನು ನೀಡಿ ಐಶ್ವರ್ಯ ಸಂಪನ್ನರಾಗುವಂತೆ ನೋಡಿಕೊಳ್ಳಬೇಕು. ಮತ್ತು ಅವರಿಗೆ ಉತ್ತಮ ಆತಿಥ್ಯವನ್ನು ಒದಗಿಸಬೇಕು. ಬುದ್ಧಿವಂತ ಮತ್ತು ಕ್ರಿಯಾಶೀಲ ಜನರಿಗೆ ನೆರವು ನೀಡಿ ಅವರಿಗೆ ಉತ್ತೇಜನವನ್ನು ನೀಡಬೇಕು. ದುರಾಸೆ ಪೀಡಿತ ಕ್ರೂರ ಜನರಿಂದ ಯಾವುದೇ ಒಳಿತಿನ ನಿರೀಕ್ಷೆಯನ್ನು ಇಟ್ಟುಕೊಳ್ಳಬೇಡ. ದೇಶ ಮತ್ತು ಧರ್ಮದ ಒಳಿತಿಗಾಗಿ ಈ ಜನರನ್ನು ರಾಜ್ಯದ ಸುವ್ಯವಸ್ಥೆಯನ್ನು ಪಾಲಿಸುವ ಕೆಲಸ ಕಾರ್ಯಗಳಿಂದ ಹೊರಗಿಡಬೇಕು.

೭) ಧೈರ್ಯ ಪರಾಕ್ರಮಗಳು ಮತ್ತು ಬಾದಶಾಹತ್ವ ಇವೆರಡೂ ಕೂಡ ಒಂದಕ್ಕೊಂದು ಪರಸ್ಪರ ಪೂರಕ ಮತ್ತು ಪ್ರೇರಕವಾಗಿವೆ. ಪ್ರಪಂಚದ ಎಲ್ಲಾ ವಿವೇಕಿಗಳು ಮತ್ತು ಬುದ್ಧಿವಂತರು ಇವೆರಡನ್ನು ಅವಳಿ ಸಹೋದರರು ಎಂದು ಹೋಲಿಸಿದ್ದಾರೆ. ಮತ್ತು ಬಾದಶಹನ ಧೈರ್ಯವನ್ನು ಎಲ್ಲ ಧೈರ್ಯಗಳ ಬಾದಶಹ ಎಂದು ಪರಿಗಣಿಸು. ಏಕೆಂದರೆ ಒಂದು ವೇಳೆ ಬಾದಶಹನ ಧೈರ್ಯ ಸಾಹಸ ಮತ್ತು ಸಾಮಾನ್ಯ ಜನತೆಯ ಸಾಹಸದ ನಡುವೆ ಯಾವುದೇ ವ್ಯತ್ಯಾಸವಿಲ್ಲದಿದ್ದಲ್ಲಿ ಬಾದಶಹ ಮತ್ತು ಸಾಮಾನ್ಯ ಜನತೆಯ ನಡುವೆ ಕೂಡ ಯಾವುದೇ ವ್ಯತ್ಯಾಸವಿರುವುದಿಲ್ಲ. ಅಧೈರ್ಯ ಮತ್ತು ಬಾದಶಹನ ನಡುವೆ ಯಾವುದೇ ಸಂಬಂಧವಿಲ್ಲ.

೮) ಯಾವ ವ್ಯಕ್ತಿಯನ್ನು ನೀನು ಗೌರವಿಸುತ್ತಿಯೋ ಅವನ ಸಣ್ಣಪುಟ್ಟ ತಪ್ಪುಗಳ ದೆಸೆಯಿಂದ ಅವನನ್ನು ಕೀಳಾಗಿ ಕಾಣಬೇಡ. ನಿನ್ನ ಹಿತೈಷಿಗಳು ಮತ್ತು ಬೆಂಬಲಿಗರನ್ನು ದೇಶದ ತುರ್ತಿನ ವಿನಾಃ ಎಂದಿಗೂ ದುಃಖಿತರನ್ನಾಗಿ ಮಾಡಬೇಡ. ಹಾಗೂ ನಿನ್ನ ವರ್ತನೆಯಿಂದ ಶತ್ರುಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಪಡಬೇಡ. ಒಂದು ವೇಳೆ ನಿನ್ನ ಶತ್ರುವನ್ನು ರಾಜಕಾರಣದ ಮುಷ್ಟಿಯಲ್ಲಿ ಬಂಧಿಸಬೇಕಾದಲ್ಲಿ ಮೃದು ನುಡಿ ಮತ್ತು ದೂರದೃಷ್ಟಿಯನ್ನು ಯಾವಾಗಲೂ ಅನುಸರಿಸ ಬೇಡ. ಸಭ್ಯರಿಗೆ ಕಷ್ಟ ಅಥವಾ ಹಿಂಸೆಯನ್ನು ಮಾಡಬೇಕಾದಲ್ಲಿ ದುಡುಕಬೇಡ. ಏಕೆಂದರೆ ಅಂತಹ ಜನರ ಅಪಮಾನದ ಗಾಯವು ಶೀಘ್ರ ಗುಣವಾಗುವುದಿಲ್ಲ ಮತ್ತು ಅದರ ಪರಿಹಾರವು ಅತ್ಯಂತ ಕಷ್ಟಕರವಾಗುತ್ತದೆ.

೯) ಕೀಳು ನುಡಿಯುವ ಜನರನ್ನು ಎಂದಿಗೂ ನಂಬಬೇಡ ಮತ್ತು ಅವರೊಂದಿಗೆ ಹೆಚ್ಚು ಸಂಪರ್ಕವನ್ನು ಇಟ್ಟುಕೊಳ್ಳಬೇಡ ಏಕೆಂದರೆ, ಅಂತಹ ಜನರನ್ನು ನಂಬುವುದರಿಂದ ಮತ್ತು ಸಂಬಂಧವನ್ನು ಉಳಿಸುಕೊಳ್ಳುವುದರಿಂದ ಆಜ್ಞಾಧಾರಕ ಮತ್ತು ವಿಧೇಯ ಗುಲಾಮರು ಮತ್ತು ಬೆಂಬಲಿಗರ ಮನದಲ್ಲಿ ಭಯ ಮತ್ತು

ಆತಂಕ ಉತ್ಪನ್ನವಾಗುತ್ತದೆ. ಹಾಗೂ ಆಡಳಿತಾತ್ಮಕ ಕೆಲಸಗಳಲ್ಲಿ ವಿಘ್ನ ಉಂಟಾಗುತ್ತದೆ. ಯಾವ ಕೆಲಸವನ್ನು ಪೂರ್ಣಗೊಳಿಸುವಲ್ಲಿ ನಿನಗೆ ಶಂಕೆ ಇದೆಯೋ ಆ ಕೆಲಸದಲ್ಲಿ ಕೈಹಾಕಬೇಡ. ಏಕೆಂದರೆ ಯಾವುದೇ ಕೆಲಸವನ್ನು ಅಪೂರ್ಣವಾಗಿ ಬಿಡುವುದು ಬಾದಶಾಹನಿಗೆ ಅತ್ಯಂತ ಕೀಳು ಮತ್ತು ಅಪಮಾನ ಉಂಟು ಮಾಡುವಂತಹದಾಗಿದೆ.

೧೦) ವಿವೇಕಿಗಳು ಮತ್ತು ಅನುಭವಸ್ಥರ ಸಲಹೆ ಸೂಚನೆಗಳಿಲ್ಲದೆ ಯಾವ ಕೆಲಸವನ್ನು ಪೂರ್ತಗೊಳಿಸುವ ಪ್ರಯತ್ನವನ್ನು ಮಾಡಕೂಡದು. ತನ್ನ ಪ್ರಜೆಗಳ ಎಲ್ಲಾ ಒಳ್ಳೆಯ ಮತ್ತು ಕೆಟ್ಟ ಸಂಗತಿಗಳ ಬಗ್ಗೆ ಬಾದಶಹನಿಗೆ ಮಾಹಿತಿ ಇರಬೇಕಾದುದು ಅವಶ್ಯಕ. ಹೀಗಾಗಿ ಅವನು ಮಧ್ಯಮ ಮಾರ್ಗವನ್ನು ಅನುಸರಿಸತಕ್ಕದ್ದು. ಬಾದಶಾಹನು ಕೋಪದ ಆವೇಶವನ್ನು ತೋರಿಸಕೂಡದು ಏಕೆಂದರೆ ಅಂತಹ ಬಾದಶಾಹನಿಂದ ಜನರಿಗೆ ತಿರಸ್ಕಾರ ಮೂಡುತ್ತದೆ. ಅನವಶ್ಯಕ ಮೃದುತ್ವವನ್ನು ಕೂಡಾ ಒಬ್ಬ ಬಾದಶಹನು ತೋರಕೂಡದು; ಏಕೆಂದರೆ ಆ ಮೂಲಕ ವಿದ್ರೋಹಿ ಬಂಡುಕೋರರಿಗೆ ಧೈರ್ಯ ಮೂಡುತ್ತದೆ ಮತ್ತು ಜನತೆಯು ಅಶಾಂತಿಗೆ ಈಡಾಗುತ್ತದೆ. ಬಾದಶಾಹನು ಸದಾ ಕಾಲ ತನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕು; ಏಕೆಂದರೆ ಬಾದಶಹನ ಜೀವವು ಪ್ರಜೆಗಳಿಗೆ ಉತ್ತಮ ಗುರಾಣಿಯಂತೆ ಹಾಗೂ ಅವನನ್ನು ಎಲ್ಲಾ ಸಂಕಷ್ಟಗಳಿಂದ ಪಾರು ಮಾಡುತ್ತದೆ. ತನ್ನ ತಲೆ ಬಾಗಿಲಿನಲ್ಲಿ ಸದಾ ಕಾಲ ಸ್ನೇಹಮಯಿ ಮತ್ತು ನಂಬಿಗಸ್ಥ ಕಾವಲು ಭಟರನ್ನು ನೇಮಕ ಮಾಡಬೇಕು. ನಿನ್ನ ತನ್ನೊಡನೆ ಸದಾ ಕಾಲ ಪ್ರೀತಿಯಿಂದ ಮತ್ತು ಮೃದು ನುಡಿಯಿಂದ ವರ್ತಿಸಬೇಕು ಮತ್ತು ಅವನನ್ನು ತನ್ನ ಭುಜ ಮತ್ತು ಹಸ್ತಗಳೆಂದು ತಿಳಿಯಬೇಕು. ಅವನ ಜಹಗೀರನ್ನು ಇದೇ ರೀತಿಯಲ್ಲಿ ಕಾಪಾಡಬೇಕು ಮತ್ತು ಇತರೆಯವರ ಚಾಡಿ ಮಾತುಗಳಿಗೆ ಬಲಿಯಾಗಿ ಅವನ ವಿರುದ್ಧ ಯಾವುದೇ ಕಾರ್ಯಾಚರಣೆಯನ್ನು ನಡೆಸಕೂಡದು.

ತೈಮೂರ್‌ಖಾನ್‌ನಿಂದ ಆಕ್ರಮಣ:

ತನ್ನ ಪುತ್ರನಿಗೆ ಹಿತವಚನವನ್ನು ನೀಡಿ ಸದ್ವಿವೇಕವನ್ನು ಬೋಧಿಸಿ ಬಲ್ಬನ್ ಬೀಳ್ಕೊಟ್ಟ. ಖಾನ್‌ಶಹೀದನು ಮುಲ್ತಾನ್ ತಲುಪಿದ ನಂತರ ತನ್ನ ಗಡಿಭಾಗದಲ್ಲಿ ಲೂಟಿ ಮತ್ತು ವಿನಾಶದ ಹೀನ ಕೃತ್ಯದಲ್ಲಿ ತೊಡಗಿದ್ದ ಅಸಂಖ್ಯ ಮೊಘಲ್ ಡಕಾಯಿತರನ್ನು ವಧಿಸಿ ಅವರ ಹಿಡಿತದಿಂದ ತನ್ನ ದೇಶಕ್ಕೆ ಮುಕ್ತಿಯನ್ನು ದೊರಕಿಸಿದ. ಅದೇ ಸಂದರ್ಭದಲ್ಲಿ ಇರಾನ್‌ನ ಸಿಂಹಾಸನದ ಮೇಲೆ ಅರ್ಘೌನ್‌ಖಾನ್ ಬಿನ್ ಅಯಾಖ್‌ಖಾನ್ ಬಿನ್‌ಹಿಲಾಕುಖಾನ್ ಆಸೀನನಾಗಿದ್ದ ಮತ್ತು ಪ್ರಖ್ಯಾತ ಚೆಂಗೇಸ್ ವಂಶದ ಸರದಾರನಾದ ತೈಮೂರ್‌ಖಾನನು ಹೇರಾತ್, ಕಂದಹಾರ್, ಬಲಗ್, ಬಿದಕ್ಷಾನ್, ಘಜ್ನಿ ಮತ್ತು ಬಾಮಿಯಾನ್ ವಗೈರೆ ದೇಶಗಳ ಆಡಳಿತಗಾರನಾಗಿದ್ದ. (ಖಾನ್‌ಶಹೀದ್‌ನ ವಿರುದ್ಧದ ಯುದ್ಧದಲ್ಲಿ ಹತರಾಗಿದ್ದ ತನ್ನ ಸಂಬಂಧಿಗಳು ಮತ್ತು ದೇಶವಾಸಿಗಳ ಕೊಲೆಯ ಪ್ರತೀಕಾರವನ್ನು ತೆಗೆದುಕೊಳ್ಳುವ ಸಲುವಾಗಿ) ಇಪ್ಪತ್ತು

ಸಾವಿರ ಮೊಘಲರಿಂದ ಕೂಡಿದ್ದ ಬಲಾಢ್ಯ ಸೈನ್ಯದ ಜೊತೆಗೆ ಅವನು ಲಾಹೋರ್ ಮತ್ತು ದೇವಲಪುರದ ನಡುವಿನ ಸ್ಥಳಕ್ಕೆ ಬಂದ. ಅಲ್ಲಿ ಸಾಕಷ್ಟು ಲೂಟಿ ಮಾಡಿ ಕೊಳ್ಳೆಹೊಡೆದು ಮುಲ್ತಾನಿನತ್ತ ಮುಂದುವರೆದ. ತೈಮೂರ್‌ಖಾನನ ಆಗಮನದ ಸುದ್ದಿಯು ಖಾನ್‌ಶಹೀದ್‌ಗೆ ತಿಳಿದು ಬಂದ ಕೂಡಲೇ ಅವನು ಬೆಳ್ಳಂಬೆಳಗ್ಗೆ ಮುಲ್ತಾನ್‌ನಿಂದ ಹೊರಟ ಮತ್ತು ಮುಲ್ತಾನ್‌ನಲ್ಲಿ ಪ್ರವಹಿಸುವ ಲಾಹೋರ್ ನದಿಯ ದಂಡೆಯಲ್ಲಿ ಮಧ್ಯಾಹ್ನದ ಹೊತ್ತಿಗೆ ತೈಮೂರ್‌ಖಾನ ನೊಡನೆ ಯುದ್ದ ಮಾಡಬೇಕೆಂಬ ಸಂಕಲ್ಪವನ್ನು ಮಾಡಿದ.

ತೈಮೂರ್ ಮತ್ತು ಖಾನ್‌ಶಹೀದ್ ನಡುವೆ ಯುದ್ಧ:

ತೈಮೂರ್‌ಖಾನನು ಆ ಹೊಳೆಯನ್ನು ದಾಟಿದ ನಂತರ ತನ್ನ ಸೈನ್ಯವನ್ನು ಎಲ್ಲಾ ದಿಕ್ಕುಗಳಲ್ಲೂ ಹರಡುವಂತೆ ಸುಸ್ಪಷ್ಟ ನಿರ್ದೇಶನಗಳನ್ನು ನೀಡಿ ವ್ಯೂಹವನ್ನು ರಚಿಸಿದ ಮತ್ತು ಖಾನ್‌ಶಹೀದ್‌ನೊಡನೆ ಯುದ್ಧ ನಿರತನಾದ. ಖಾನ್‌ಶಹೀದ್‌ನ ಸೈನ್ಯವು ಕೂಡ ಅತ್ಯುತ್ತಮ ಯುದ್ಧ ನೈಪುಣ್ಯವನ್ನು ಪ್ರದರ್ಶಿಸಿತು ಹಾಗೂ ಕೆಲವು ಪ್ರಖ್ಯಾತ ಸರದಾರರನ್ನು ಕಗ್ಗೊಲೆ ಮಾಡಿತು ಹಾಗೂ ತೈಮೂರ್‌ಖಾನನನ್ನು ಪರಾಭವಗೊಳಿಸಿತು. ಮೊಘಲ್ ಸಿಪಾಯಿಗಳು ಯುದ್ಧ ಭೂಮಿಯಿಂದ ಪಲಾಯನ ಮಾಡತೊಡಗಿದಾಗ ಹಿಂದೂಸ್ತಾನಿ ಸೈನ್ಯವು ಅತ್ಯಂತ ಧೈರ್ಯಸಾಹಸ ಮತ್ತು ಮುಂದಾಲೋಚನೆಯಿಲ್ಲದೆ ಅವರನ್ನು ಬೆನ್ನಟ್ಟಿತು. ರಾಜಕುಮಾರ ಸುಲ್ತಾನ್ ಮೊಹಮ್ಮದ್ (ಖಾನ್‌ಶಹೀದ್)ನ ಆಹುತಿ:

ರಾಜಕುಮಾರ ಸುಲ್ತಾನ್ ಮೊಹಮ್ಮದ್‌ನ ಅಂತ್ಯ ಸಮೀಪಿಸಿತ್ತು ಸಹೃದಯಿ ರಾಜಕುಮಾರನು ಮಧ್ಯಾಹ್ನದ ನಮಾಜ್‌ನ ಸಲುವಾಗಿ ಹೊಳೆ ಬದಿಯಲ್ಲಿ ನಮಾಜಿನ ವಸ್ತ್ರವನ್ನು ಹರಡಿ ತನ್ನ ಐನೂರು ಮಂದಿ ಸೈನಿಕರೊಡನೆ ನಮಾಜ್ ಮಾಡುವುದರಲ್ಲಿ ನಿರತನಾಗಿದ್ದ. ಅಷ್ಟರಲ್ಲಿಯೇ ಅಲ್ಲಲ್ಲಿ ಅಡಗಿದ್ದ ಎರಡು ಸಾವಿರಷ್ಟು ಸಂಖ್ಯೆಯ ಒಂದು ತಂಡವು ಅವಕಾಶವನ್ನು ಸದುಪಯೋಗವನ್ನು ಪಡೆದುಕೊಂಡು ಖಾನ್‌ಶಹೀದ್‌ನ ಮೇಲೆ ಆಕ್ರಮಣ ಮಾಡಿತು. ಖಾನ್‌ಶಹೀದನು ತನ್ನ ಸೈನಿಕರ ನೆರವಿನಿಂದ ಮೊಘಲರ ಮೇಲೆ ಪ್ರತಿ ಆಕ್ರಮಣವನ್ನು ಮಾಡಿದ. ಖಾನ್‌ಶಹೀದ್‌ನ ಸೈನಿಕರು ಮತ್ತು ಸವಾರಿಯ ಕುದುರೆಗಳು ಆಯಾಸದಿಂದ ಸುಸ್ತಾಗಿದ್ದರು. ಆದರೆ ಕಣ್ಣ ಮುಂದೆ ಸಾವಿನ ನರ್ತನವನ್ನು ಕಂಡ ಖಾನ್‌ಶಹೀದ್ ಯುದ್ಧ ಮಾಡುವುದು ಅನಿವಾರ್ಯವಾಯಿತು. ಅವನು ಅನೇಕ ಬಾರಿ ಮೊಘಲರ ಮೇಲೆ ಆಕ್ರಮಣ ಮಾಡಿದ ಮತ್ತು ಅವರ ರುಂಡಗಳನ್ನು ಚೆಂಡಾಡಿದ. ಮೊಘಲರು ಯುದ್ಧ ರಂಗದಿಂದ ಪರಾರಿಯಾಗುವ ಸಂಭವವಿತ್ತು ಆದರೆ ಸಂಯೋಗವಶಾತ್ ಒಂದು ಪ್ರಾಣಾಂತಿಕ ಬಾಣವು ಖಾನ್‌ಶಹೀದ್‌ಗೆ ತಗಲಿತು ಮತ್ತು ಆ ಬಾಣದ ತೀವ್ರತೆಯನ್ನು ತಡೆಯಲಾರದೆ ಆತನು ತತ್‌ಕ್ಷಣವೇ ಮೃತ್ಯುವಶನಾದ. ಇದಾದ ನಂತರ ಮೊಘಲ್ ಸೈನಿಕರು

ಖಾನ್‌ಶಹೀದ್‌ನ ಸೈನ್ಯವನ್ನು ಅಟ್ಟಾಡಿಸ ತೊಡಗಿದರು. ಅವರು ಕುದುರೆಗಳು ಮತ್ತು ಇತರೆ ಯುದ್ಧ ಸಾಮಗ್ರಿಗಳನ್ನು ಲೂಟಿ ಹೊಡೆದರು ಮತ್ತು ಅಳಿದುಳಿದ ಸೈನಿಕರನ್ನು ಬಂಧಿಸಿ ಶತ್ರುವಿನ ಭಯದಿಂದ ಯುದ್ಧ ಭೂಮಿಯಿಂದ ಪರಾರಿಯಾದರು.

ಕೆಖುಸ್ರು ಮುಲ್ತಾನಿನ ಆಡಳಿತಗಾರ:

ಮೊಘಲರು ಬಂಧಿಸಿ ತಮ್ಮೊಡನೆ ಕರೆದೊಯ್ದ ಜನರಲ್ಲಿ ಹಜರತ್ ಅಮೀರ್ ಖುಸ್ರು ಕೂಡ ಸೇರಿದ್ದರು. ಅವರ ಬಿಡುಗಡೆಯ ವೃತ್ತಾಂತವನ್ನು ಅವರು ತಮ್ಮ ಗ್ರಂಥವಾದ "ಖಿಜರ್‌ಖಾನಿ" "ದೇವಲದಿ" ಗ್ರಂಥಗಳಲ್ಲಿ ಬರೆದಿದ್ದಾರೆ. ಖಾನ್‌ಶಹೀದ್‌ನ ಸಾವಿನ ಸುದ್ದಿಯನ್ನು ಕೇಳಿ ಬಲ್ಬನ್ ದುಃಖದ ಆವೇಗದಿಂದ ತತ್ತರಿಸಿದ. ಕೆಲವು ದಿನಗಳ ಕಾಲ ಪುತ್ರಶೋಕದಲ್ಲಿ ಸವೆದ ನಂತರ ಬಲ್ಬನ್ನನು ಖಾನ್‌ಶಹೀದ್‌ನ ಯುವ ಪುತ್ರನಾದ ಕೆಖುಸ್ರುಗೆ ಛತ್ರಚಾಮರ ಮೊದಲಾದ ಬಾದಶಹನ ಗೌರವಗಳನ್ನು ನೀಡಿ ಅವನ ತಂದೆಯ ಸ್ಥಾನದಲ್ಲಿ ಮುಲ್ತಾನ್‌ನ ಆಡಳಿತಗಾರನನ್ನಾಗಿ ನೇಮಕ ಮಾಡಿದ. ಕೆಖುಸ್ರು ಮುಲ್ತಾನ್ ತಲುಪಿ ತನ್ನ ತಂದೆಯ ಹಿತೈಷಿಗಳು ಮತ್ತು ಬೆಂಬಲಿಗರಿಗೆ ಗೌರವ ಕಾಣಿಕೆ ನೀಡಿದ. ಕೆಖುಸ್ರುವಿನ ಕೊಡುಗೆಗಳು ಮತ್ತು ಇನಾಮುಗಳು ಆತಂಕ ಮತ್ತು ಸಂಕಷ್ಟಕ್ಕೆ ಗುರಿಯಾಗಿದ್ದ ಪ್ರಜೆಗಳು ಮತ್ತು ಸೈನಿಕರಿಗೆ ಆಪತ್ಕಾಲದ ನೆರವಿನ ಹಸ್ತದಂತೆ ಕಂಡುಬಂದಿತು.

ಬಲ್ಬನ್ನನ ಅನಾರೋಗ್ಯ:

ಗಯಾಸುದ್ದೀನ್ ಬಲ್ಬನ್ ಎಂಬತ್ತರ ಗಡಿಯನ್ನು ತಲುಪಿದ. ಖಾನ್‌ಶಹೀದ್‌ನ ಅನಂತ ವಿರಹದಿಂದ ಅವನು ಅನಾರೋಗ್ಯಕ್ಕೆ ಈಡಾದ. ದೈವೇಚ್ಛೆಗೆ ನಾನು ತಲೆ ಬಾಗುತ್ತೇನೆ ಮತ್ತು ದೇವರ ಇಚ್ಛೆಗೆ ಅನುಗುಣವಾಗಿ ಸಂಭವಿಸಿದ ಖಾನ್‌ಶಹೀದ್‌ನ ಸಾವಿನ ದುಃಖ ತನಗೆ ಬಾಧಿಸುತ್ತಿಲ್ಲ ಎಂದು ಹೇಳಿದರೂ ಆತನು ಅಂತರಂಗದಲ್ಲಿ ತೀರಾ ದುಃಖಿತನಾಗಿದ್ದ. ಅವನು ಏಕಾಂತದಲ್ಲಿ ರಾತ್ರಿಯ ಹೊತ್ತು ಎದ್ದು ತನ್ನ ಮಗನನ್ನು ನೆನಸಿಕೊಂಡು ಧಾರಕಾರವಾಗಿ ಕಣ್ಣೀರು ಹರಿಸುತ್ತಿದ್ದ ಮತ್ತು ವಿಲಪಿಸುತ್ತಿದ್ದ. ಖಾನ್‌ಶಹೀದ್‌ನ ಸಾವಿನ ದುಃಖದಿಂದ ತನಗೆ ಬಿಡುಗಡೆಯಿಲ್ಲ ಎಂದು ಅರಿತ ಅವನು ತನ್ನ ಹಿರಿಯ ಪುತ್ರನಾದ ಬಘ್ರಾಖಾನ್‌ನನ್ನು ಲಖ್ನೋತಿಯಿಂದ ಕರೆಸಿದ. ಬಘ್ರಾಖಾನ್ ದೆಹಲಿಯತ್ತ ಹೊರಟ ಆದರೆ ಅವನು ಇನ್ನೂ ಮಾರ್ಗಮಧ್ಯದಲ್ಲಿಯೇ ಇರುವಾಗ ಬಲ್ಬನ್ನನ ದುರ್ಬಲ ದೇಹವು ತೀವ್ರ ಅನಾರೋಗ್ಯದ ರೂಪವನ್ನು ಧರಿಸಿತು ಹಾಗೂ ಕೆಲವೇ ದಿನಗಳಲ್ಲಿ ಅವನು ಹಾಸಿಗೆಯನ್ನು ಹಿಡಿದ. ಈ ಸುದ್ದಿಯನ್ನು ಕೇಳಿದೊಡನೆಯೇ ವೇಗವಾಗಿ ಪ್ರಯಾಣ ಮಾಡಿ ದೆಹಲಿಗೆ ತಲುಪಿದ ಬಘ್ರಾಖಾನ್ ತನ್ನ ಅಣ್ಣನಾದ ಖಾನ್ ಶಹೀದ್‌ನ ಸಾವಿಗೆ ಸಂತಾಪವನ್ನು ಸೂಚಿಸಿ ಅವನ ದುಃಖದಲ್ಲಿ ಸಹಭಾಗಿಯಾದ. ಬಘ್ರಾಖಾನ್‌ನೊಡನೆ ಬಲ್ಬನ್ ಹೀಗೆಂದು ನುಡಿದ,

"ನಿನ್ನ ಅಣ್ಣನ ಸಾವು ನನ್ನ ಎಲ್ಲ ಕಸುವನ್ನು ಕಸಿದುಕೊಂಡಿದೆ ಮತ್ತು ಮೃತ್ಯು ನನ್ನ ಸಮೀಪದಲ್ಲಿ ಸುಳಿದಾಡುತ್ತಿದೆ. ಮತ್ತು ನನ್ನ ಅಂತ್ಯವು ತೀರ ಸಮೀಪದಲ್ಲಿದೆ ಎಂದು ನನಗೆ ತಿಳಿದಿದೆ. ಖಾನ್‌ಶಹೀದ್‌ನ ನಂತರ ನಿನ್ನನ್ನು ಬಿಟ್ಟರೆ ನನಗೆ ಬೇರೆ ಯಾರೂ ವಾರಿಸುದಾರರಿಲ್ಲ. ಇಂತಹ ದುರ್ದೆಸೆಯಲ್ಲಿ ನೀನು ನನ್ನಿಂದ ದೂರದಲ್ಲಿರುವುದು ಸೂಕ್ತವಲ್ಲ. ನಿನ್ನ ಪುತ್ರನಾದ ಕೈಖಬಾದ್ ಮತ್ತು ಖಾನ್‌ಶಹೀದ್‌ನ ಮಗನಾದ ಕೆಖುಸ್ರ ಇನ್ನೂ ಯುವಕರಾಗಿದ್ದಾರೆ. ಇವರಿಬ್ಬರ ಪೈಕಿ ಯಾರ ಕೈಗೆ ಈ ದೇಶದ ಆಡಳಿತ ಸೇರಿದರೂ ಅವರ ಅನುಭವ ಮತ್ತು ಯೌವನದ ಹುಮ್ಮಸ್ಸಿನ ದೆಸೆಯಿಂದ ಏನು ಪರಿಣಾಮವಾಗುವುದೋ ತಿಳಿಯದು. ಲಖ್ನೋತಿಯ ಒಡೆಯನು ಎಲ್ಲಾ ಪ್ರಸಂಗದಲ್ಲಿಯೂ ದೆಹಲಿ ಬಾದಶಹನ ಅಧೀನನಾಗಿರಬೇಕು ಎಂಬುದನ್ನು ನೀನು ನೆನಪಿಟ್ಟಕೋ ಮತ್ತು ನೀನು ದೆಹಲಿಯ ಸುಲ್ತಾನನಾದಲ್ಲಿ ಲಖ್ನೋತಿಯ ಒಡೆಯನನ್ನು ನಿನ್ನ ಅಧೀನ ರಾಜನನ್ನಾಗಿ ಮಾಡಿಕೊಂಡು ನಿನಗೆ ಕಪ್ಪಕಾಣಿಕೆಯನ್ನು ಒಪ್ಪಿಸುವಂತೆ ನೋಡಿಕೋ ಈ ಎಲ್ಲ ವಿಷಯಗಳನ್ನು ಗಮನಿಸಿದಲ್ಲಿ ನೀನು ನನ್ನಿಂದ ದೂರ ಹೋಗಬೇಡ ಎಂದು ನಾನು ನಿನಗೆ ಮತ್ತೊಮ್ಮೆ ಹೇಳುತ್ತೇನೆ." ಬಘ್ರಾಖಾನ್ ಬಲ್ಬನ್ನನ ಈ ಮಾತಿನ ಪ್ರಾಮುಖ್ಯವನ್ನು ಅರಿತುಕೊಂಡು ದೆಹಲಿಯಲ್ಲಿಯೇ ವಾಸವಾದ.

ಕೆಖುಸ್ರು ಉತ್ತಾರಾಧಿಕಾರಿಯಾದದ್ದು:

ಕೆಲವು ದಿನಗಳ ನಂತರ ಬಲ್ಬನ್ನನ ಆರೋಗ್ಯ ಸುಧಾರಿಸಿತು ಮತ್ತು ಅವನ ಮೋರೆ ತುಂಬಾ ಕಾಂತಿಯುತವಾಯಿತು ಇದನ್ನು ಕಂಡು ಬಘ್ರಾಖಾನ್‌ಗೆ ತನ್ನ ತಂದೆಯ ಆರೋಗ್ಯದ ಬಗ್ಗೆ ನಿಶ್ಚಿಂತೆಯುಂಟಾಯಿತು. ಮತ್ತು ಅವನು ಬೇಟೆಯ ನೆಪದಲ್ಲಿ ಬಲ್ಬನ್ನನಿಂದ ಅಪ್ಪಣೆ ಪಡೆದು ಅವನಿಗೆ ಯಾವುದೇ ಮಾಹಿತಿಯನ್ನು ನೀಡದೆ ಲಖ್ನೋತಿಗೆ ಹೊರಟು ಹೋದ. ಬಘ್ರಾಖಾನ್‌ನ ಈ ರೀತಿಯ ನಿರ್ಗಮನವು ಬಲ್ಬನ್ನನ ಮೇಲೆ ಖಾನ್‌ಶಹೀದ್‌ನ ಸಾವಿಗಿಂತಲೂ ಹೆಚ್ಚಿನ ಪರಿಣಾಮವನ್ನು ಬೀರಿತು. ಬಘ್ರಾಖಾನ್ ಇನ್ನೂ ಲಖ್ನೋತಿಯನ್ನು ತಲುಪುವುದಕ್ಕೆ ಮುಂಚಿತವಾಗಿಯೇ ಬಲ್ಬನ್ನನ ರೋಗವು ಅವನ ಮೇಲೆ ತೀವ್ರವಾಗಿ ಮರು ಆಕ್ರಮಣ ಮಾಡಿತು ಮತ್ತು ತಾನಿನ್ನು ಬದುಕುವುದಿಲ್ಲ ಎಂಬುದು ಬಾದಶಹನಿಗೆ ಖಚಿತವಾಯಿತು. ಆದ್ದರಿಂದ ಅವನು ತನ್ನ ನಂಬಿಗಸ್ಥರ ಮೂಲಕ ಕೆಖುಸ್ರುವನ್ನು ತನ್ನ ಬಳಿ ಕರೆಸಿಕೊಂಡ ಹಾಗೂ ಕೆಖುಸ್ರು ದೆಹಲಿಗೆ ಬಂದ ನಂತರ ಬಲ್ಬನ್ ಅವನನ್ನು ತನ್ನ ಉತ್ತರಾಧಿಕಾರಿಯಾಗಿ ಘೋಷಿಸಿದ.

ಬಲ್ಬನ್ನನ ಸಾವು:

ಬಲ್ಬನ್ನನಿಗೆ ತನ್ನ ಸಾವು ಸಮೀಪವಾಗಿದೆ ಎಂದು ಅರಿವಾದ ನಂತರ ಅವನು ತನ್ನ ಪ್ರಖ್ಯಾತ ಸರದಾರರಾದ ವಸೀರ್‌ಉಲ್‌ಮುಲ್ಕ್, ರಾಜ್ಯದ ವಕೀಲ ಮತ್ತು ಫಕ್ರುದ್ದೀನ್ ಕೊತ್ವಾಲ್ ಮೊದಲಾದವರನ್ನು ತನ್ನ ಬಳಿ ಕರೆದು ನುಡಿದ "ನಿಮಗೆಲ್ಲಾ

ಚೆನ್ನಾಗಿ ತಿಳಿದಿರುವಂತೆ ನಾನು ರಾಜಕುಮಾರ ಬಘ್ರಾಖಾನ್‌ನಿಂದ ಸದಾಕಾಲ ಅಸಂತುಷ್ಟಿಯನ್ನು ಹೊಂದಿದ್ದು ದುಃಖಿತನಾಗಿದ್ದೇನೆ. ಇದಕ್ಕೆ ಭಿನ್ನವಾಗಿ ನಾನು ಖಾನ್‌ಶಹೀದ್‌ನಿಂದ ಸದಾಕಾಲವೂ ಸಂತುಷ್ಟನಾಗಿದ್ದೆ. ಇದಕ್ಕೆ ಕಾರಣವೇನೆಂದರೆ ಖಾನ್‌ಶಹೀದನು ನನ್ನ ಮಾತಿಗೆ ಬೆಲೆ ಕೊಡುತ್ತಿದ್ದ ಮತ್ತು ನನ್ನ ಪ್ರತಿಯೊಂದು ಆಜ್ಞೆಯನ್ನು ಪರಿಪಾಲನೆ ಮಾಡುತ್ತಿದ್ದ. ಅವನು ನನ್ನ ಆಜ್ಞೆಯನ್ನು ಪರಿಪಾಲಿಸುವಲ್ಲಿ ಒಂದಿನಿತು ಕೂಡ ಮೀನಾಮೇಷ ಎಣಿಸುತ್ತಿರಲಿಲ್ಲ ಆದರೆ ಬಘ್ರಾಖಾನ್ ನನ್ನ ಮಾತಿಗೆ ಯಾವುದೇ ಬೆಲೆ ಕೊಡಲಿಲ್ಲ ಮತ್ತು ಅವನು ನನ್ನ ಆಜ್ಞೆಯನ್ನು ನಿರಂತರವಾಗಿ ಉಲ್ಲಂಘಿಸುತ್ತಿದ್ದಾನೆ. ಅವನು ನನ್ನ ಮಾತನ್ನು ಅಪ್ಪಿ ತಪ್ಪಿ ಪಾಲಿಸಿದ್ದಾನೆಂದರೆ ಅದು ಖಾನ್‌ಶಹೀದ್‌ನ ಭಯದಿಂದ ಮಾತ್ರವಾಗಿದೆ. ಅವನು ನನ್ನನ್ನು ಪಿತೃ ಮತ್ತು ಆಜ್ಞಾಧಾರಕ ಎಂದು ಎಂದಿಗೂ ನನ್ನ ಮಾತನ್ನು ಗೌರವಿಸಲಿಲ್ಲ. ಈ ಎಲ್ಲಾ ಸಂಗತಿಗಳ ಹಿನ್ನಲೆ ಇದ್ದಾಗಿಯೂ ನಾನು ನನ್ನ ಅನಾರೋಗ್ಯ ಸಂದರ್ಭದಲ್ಲಿ ಬಘ್ರಾಖಾನ್‌ನನ್ನು ಲಖ್ನೋತಿಯಿಂದ ಕರೆಸಿ ಇಲ್ಲಿ ದೆಹಲಿಯಲ್ಲಿ ಉಳಿಯುವಂತೆ ತಾಕೀತು ಮಾಡಿದೆ ಮತ್ತು ಅವನನ್ನು ನನ್ನ ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಿದೆ ಆದರೆ ವಿಷಾದವೇನೆಂದರೆ, ಅವನು ನನ್ನ ಅಂತಿಮ ಆಜ್ಞೆಯ ಪಾಲನೆಯನ್ನು ಮಾಡಲಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಉತ್ತರಾಧಿಕಾರಿ ಸ್ಥಾನದಿಂದ ಬಘ್ರಾಖಾನ್‌ನನ್ನು ಪದಚ್ಯುತಿಗೊಳಿಸಿ ಕೆಖುಸ್ರುವನ್ನು ನನ್ನ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ. ನನ್ನ ನಂತರ ನೀವುಗಳು ಕೆಖುಸ್ರುವನ್ನು ನಿಮ್ಮ ಬಾದಶಹನನ್ನಾಗಿ ಆಯ್ಕೆ ಮಾಡಿಕೊಳ್ಳಿ ಮತ್ತು ಕೈಖಬಾದ್‌ನನ್ನು ಅವನ ತಂದೆಯ ಬಳಿ ಲಖ್ನೋತಿಗೆ ಕಳಿಸಿಬಿಡಿ." ಕೊತ್ವಾಲ್ ಫಕ್ರುದ್ದೀನ್ ಮತ್ತು ಇತರೆ ಸರದಾರರು ಬಾದಶಹನ ಈ ಮರಣ ಶಾಸನಕ್ಕೆ ಅನುಗುಣವಾಗಿ ನಡೆಯುವುದಾಗಿ ಪ್ರಮಾಣ ಮಾಡಿದರು ಈ ಘಟನೆಯು ನಡೆದ ಮೂರನೇ ದಿನ ೬೮೫ ನೇ ಇಸವಿಯ ಕೊನೆಯಲ್ಲಿ ಬಲ್ಬನ್ ಸಾವನ್ನಪ್ಪಿದ.

ಕೈಖಬಾದ್‌ನ ಪಟ್ಟಾಭಿಷೇಕ:

ಮಲ್ಲಿಕ್ ಫಕ್ರುದ್ದೀನ್ ಕೊತ್ವಾಲನು (ಕಾರಣಾಂತರದಿಂದ) ಖಾನ್‌ಶಹೀದ್‌ನಿಂದ ವಿಮುಖನಾಗಿದ್ದ .ಆದ್ದರಿಂದ ಅವನು ಖಾನ್‌ಶಹೀದ್‌ನ ಪುತ್ರನಾದ ಕೆಖುಸ್ರುವನ್ನು ಬಾದಶಹನ ಸ್ಥಾನದಲ್ಲಿ ನೋಡಲು ಇಷ್ಟಪಡಲಿಲ್ಲ. ದರಬಾರಿನ ಇತರೆ ಸರದಾರರೊಂದಿಗೆ ಶಾಮೀಲಾಗಿ ಅವನು ಕೆಖುಸ್ರುವನ್ನು ಪದಚ್ಯುತಿಗೊಳಿಸಿ ಅವನ ಸ್ಥಾನದಲ್ಲಿ ಬಘ್ರಾಖಾನ್‌ನ ಪುತ್ರನಾದ ಕೈಖಬಾದ್‌ನನ್ನು ಪಟ್ಟಾಭಿಷಿಕ್ತನಾಗಿ ಮಾಡುವ ಬಗ್ಗೆ ಸಂಚನ್ನು ರೂಪಿಸಿದ. ಫಕ್ರುದ್ದೀನ್ ಕೊತ್ವಾಲ್‌ನು ಆ ಸರದಾರರೊಡನೆ ನುಡಿದ, "ಕೆಖುಸ್ರು ತುಂಬಾ ಕೋಪದ ಸ್ವಭಾವದವನು. ರಾಜ್ಯದ ಆಡಳಿತ ಸೂತ್ರವು ಅವನ ವಶಕ್ಕೆ ಬರಕೂಡದು. ಅವನು ಸುಲ್ತಾನನಾದಲ್ಲಿ ನಾವು ಸುಖ ಸಂತೋಷ ಮತ್ತು

ನೆಮ್ಮದಿಯಿಂದ ಬದುಕನ್ನು ಸಾಗಿಸುವುದು ಕಷ್ಟಕರವಾಗುತ್ತದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಕೈಖಬಾದ್ ತುಂಬಾ ಉತ್ತಮ ಗುಣವನ್ನು ಹೊಂದಿದ್ದು ಸರಳಜೀವಿಯಾಗಿದ್ದಾನೆ. ಅವನು ಗಯಾಸುದ್ದೀನ್ ಬಲ್ಬನ್‌ನ ಪ್ರೀತಿಯ ಆಸರೆಯಲ್ಲಿ ಒಳ್ಳೆ ತರಬೇತಿಯನ್ನು ಪಡೆದಿದ್ದಾನೆ. ಆದ್ದರಿಂದ ಕೈಖಬಾದ್‌ನನ್ನು ಬಾದಶಹನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡುವುದೇ ಸೂಕ್ತವಾಗಿದೆ." ಆ ಬಡಪಾಯಿ ಅಮೀರ್‌ರಿಗೆ ಮುಂದಿನ ಪರಿಣಾಮವನ್ನು ವಿವೇಚಿಸುವಷ್ಟು ಅರಿವಿರಲಿಲ್ಲ ಹಾಗೂ ಕೈಖಬಾದ್‌ನ ಅಸ್ತಿತ್ವವು ಅನೇಕಾನೇಕ ಒಳ ಪಿತೂರಿಗಳು ಮತ್ತು ಸಂಚಿಗೆ ಕಾರಣವಾಗುವಂತದಾಗಿದೆ ಎಂಬುದು ಕೂಡ ಅವರ ಅರಿವಿಗೆ ನಿಲುಕಲಿಲ್ಲ. ದರ್ಬಾರಿನ ಎಲ್ಲ ಸರದಾರರು ಕೂಡ ಫಕ್ರುದ್ದೀನ್ ಕೊತ್ವಾಲ್‌ನ ಅಭಿಪ್ರಾಯಕ್ಕೆ ಸಹಮತವನ್ನು ವ್ಯಕ್ತಪಡಿಸಿದರು.

ಅವರುಗಳು ಕೆಖುಸ್ರುವನ್ನು ಮುಲ್ತಾನ್‌ಗೆ ವಾಪಸ್ ಕಳಿಸಿದರು ಮತ್ತು ಕೈಖಬಾದ್‌ನು ದೆಹಲಿಯ ಸಿಂಹಾಸನವನ್ನು ಆರೋಹಣ ಮಾಡಿದ.

ನಾವು ಗಯಾಸುದ್ದೀನ್‌ನ ಕಾಲಾವಧಿಯನ್ನು ಎಲ್ಲರಿಗಿಂತಲೂ ಉತ್ತಮವಾದ ಕಾಲಾವಧಿ ಎಂದು ಗುರುತಿಸಿದಲ್ಲಿ ತಪ್ಪಾಗುವುದಿಲ್ಲ. ಅವನ ಕಾಲಾವಧಿಯಲ್ಲಿ ಷೇಕ್ ಫರೀದುದ್ದೀನ್ ಶಕರ್‌ಗಂಜ್, ಷೇಕ್ ಐಶೋಕ್ ಹಜರತ್ ಬಹಾವುದ್ದೀನ್ ಜಿಕ್ರಿಯಾ ಮುಲ್ತಾನಿ ಮತ್ತು ಅವರ ಸತ್ಪುತ್ರರಾದ ಷೇಕ್ ಸುದ್ರುದ್ದೀನ್ ಆರಿಫ್, ಷೇಕ್ ಬದ್ರುದ್ದೀನ್ ಘಜ್ನವಿ, ಖಲೀಫಾ ಹಜರತ್ ಖ್ವಾಜ ಖುತ್ಬುದ್ದೀನ್ ಬಕ್ತಿಯಾರ್ ಕಾಕಿ ಮತ್ತು ಸಯ್ಯದ್ ಮೌಲ ರವರಂತಹ ಸಮಕಾಲೀನ ಅದ್ಭುತ ಚೇತನಗಳು ತಮ್ಮ ಆಧ್ಯಾತ್ಮಿಕ ಚೈತನ್ಯದಿಂದ ಹಿಂದೂಸ್ತಾನದ ನೆಲವನ್ನು ಸಂಪದ್ಭರಿತವಾಗಿರಿಸಿದ್ದರು. ಗಯಾಸುದ್ದೀನ್ ಬಲ್ಬನ್ ಇಪ್ಪತ್ತೆರಡು ವರ್ಷಗಳವರೆಗೆ ಆಡಳಿತವನ್ನು ನಡೆಸಿದ.

ಮಅಜುದ್ದೀನ್ ಕೈಖಬಾದ್

ಆರಂಭದ ಪರಿಸ್ಥಿತಿ :

ಗಯಾಸುದ್ದೀನ್ ಬಲ್ಬನ್ನನ ಮರಣದ ನಂತರ ಸರದಾರರು ಮತ್ತು ರಾಜ್ಯದ ಅಧಿಕಾರಿಗಳು ಸೇರಿ ಪರಸ್ಪರ ಸಮಾಲೋಚನೆಯನ್ನು ಮಾಡಿ ಬಘ್ರಾಖಾನನ ಪುತ್ರನಾದ ಕೈಖಬಾದ್‌ನಿಗೆ ಮಅಜುದ್ದೀನನ ಬಿರುದನ್ನು ಪ್ರದಾನ ಮಾಡಿ ಅವನನ್ನು ಬಲ್ಬನ್ನನ ಉತ್ತರಾಧಿಕಾರಿ ಹಾಗೂ ಯುವರಾಜನನ್ನಾಗಿ ಅಂಗೀಕರಿಸಿದ್ದರು. ಪಟ್ಟಾಭಿಷೇಕದ ಸಂದರ್ಭದಲ್ಲಿ ಕೈಖಬಾದನ ವಯಸ್ಸು ಹದಿನೆಂಟು ವರ್ಷವಾಗಿತ್ತು. ಅವನು ಸಂತುಲಿತ ಸ್ವಭಾವವನ್ನು ಹೊಂದಿದ್ದ. ಕಾವ್ಯದ ರಸಸ್ವಾದನೆ ಹಾಗೂ ಕಾವ್ಯ ಮಿಮಾಂಸೆಯಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದ ಹಾಗೂ ಇನ್ನೂ ಅನೇಕ ಸದ್ಗುಣಗಳ ಗಣಿಯಾಗಿದ್ದ. ಈ ಗುಣ ನಡತೆಗಳಲ್ಲದೆ ಅವನು ಅತ್ಯಂತ ಸ್ಫುರದ್ರೂಪಿ ಯುವಕನಾಗಿದ್ದ. ಅವನ

ಉತ್ತಮ ಕುಲವು ಅವನ ವೈಯಕ್ತಿಕ ಸಂಸ್ಕಾರ ಮತ್ತು ಅಂದ ಚಂದದ ಮೌಲ್ಯವನ್ನು ಇನ್ನಷ್ಟು ಕಳೆಗಟ್ಟಿಸಿತ್ತು. ಆ ಯುವ ರಾಜನು ತಂದೆಯ ಕಡೆಯಿಂದ ಬಲ್ಬನ್ನಿನ ಮೊಮ್ಮಗನಾಗಿದ್ದ ಮತ್ತು ತಾಯಿಯ ಕಡೆಯಿಂದ (ತನ್ನ ತಂದೆಯಂತೆ) ಸುಲ್ತಾನ್ ಶಂಸುದ್ದೀನ್ ಅಲ್ತಮಷ್‌ನ ವಂಶದೊಂದಿಗೆ ಸಂಬಂಧವನ್ನು ಹೊಂದಿದ್ದ. ಅವನು ನಾಸೀರುದ್ದೀನ್ ಮೊಹಮ್ಮದನ ಮೊಮ್ಮಗ ಅಂದರೆ ಮಗಳ ಮಗನಾಗಿದ್ದ. ಹಾಗೂ ಬಘ್ರಾಖಾನ್ ಮತ್ತು ಅಲ್ತಮಷ್‌ನ ಮಗಳ ವೈವಾಹಿಕ ಬಾಂಧವ್ಯದಿಂದ ಜನ್ಮ ತಳೆದಿದ್ದ.

ಭೋಗ ವಿಲಾಸ :

ಜನ್ಮ ತಳೆದಾಗಿನಿಂದ ಹಿಡಿದು ಪಟ್ಟಾಭಿಷೇಕದ ವರೆವಿಗೂ ಕೈಖಬಾದ್‌ನ ಪಾಲನೆ ಪೋಷಣೆಯು ಬಲ್ಬನ್ನನ ನಿಗಾವಣೆಯಲ್ಲಿ ನಡೆದಿತ್ತು ಮತ್ತು ಅವನ ಇಡೀ ಸಮಯವು ವಿದ್ಯಾರ್ಜನೆಗೆ ಮೀಸಲಾಗಿತ್ತು. ಉತ್ತಮ ಗುಣ ಸ್ವಭಾವವನ್ನು ಹೊಂದಿದ ಸನ್ನಡತೆಯ ಅಧ್ಯಾಪಕರು, ಒಳ್ಳೆಯ ಗೆಳೆಯರೊಡನೆ ಅವನು ಕಾಲ ಕಳೆಯುತ್ತಿದ್ದ. ಮತ್ತು ಅವರು ಅವನ ಎಲ್ಲಾ ಕೆಲಸಕಾರ್ಯಗಳ ನಿಗಾವಣೆಯನ್ನು ಮಾಡುತ್ತಿದ್ದರು. ಅವನು ತನ್ನ ಕಾರ್ಯಭಾರದಲ್ಲಿ ಎಷ್ಟೊಂದು ಮಗ್ನನಾಗಿದ್ದನೆಂದರೆ ವ್ಯರ್ಥವಾಗಿ ಅವನು ಒಂದು ನಿಮಿಷವನ್ನು ಕೂಡ ಕಳೆಯುತ್ತಿರಲಿಲ್ಲ. ಅವನ ಅದೃಷ್ಟದ ತಾರೆಯು ಮಿನುಗಿ ಅವನು ಯುವರಾಜನಿಂದ ಬಾದಶಹನ ಹುದ್ದೆಗೆ ಏರುತ್ತಿದ್ದುಂತೆಯೇ ಅವನು ತನ್ನ ಕಣ್ಗಾವಲಿನ ಪಹರೆಯಿಂದ ಮುಕ್ತನಾದ ಮತ್ತು ಅತ್ಯಂತ ನಿರ್ಯೋಜನೆಯಿಂದ ಸುಖಲೋಲುಪತೆ ಮತ್ತು ಭೋಗ ವಿಲಾಸದಲ್ಲಿ ಮುಳುಗೇಳ ತೊಡಗಿದ. ಅವನು ತನ್ನ ವಿಲಾಸೀ ಜೀವನದಲ್ಲಿ ಎಷ್ಟೊಂದು ಮಗ್ನನಾದನೆಂದರೆ ಅವನಿಗೆ ತನ್ನ ಇಂದ್ರಿಯ ಗ್ರಾಹ್ಯ ಸುಖದ ಎದುರು ಎಲ್ಲವೂ ಅಮುಖ್ಯವೆನಿಸತೊಡಗಿತು. ಗಾಯಕರು ವಿದೂಷಕರು ಶರಾಬಿಗಳು ಮತ್ತು ವಿಲಾಸೀ ಪುರುಷರ ಅದೃಷ್ಟದ ಬಾಗಿಲು ತೆರೆಯಿತು. ಬಾದಶಹನ ಅನುಕರಣೆ ಮಾಡುತ್ತಾ ಎಲ್ಲಾ ಸರ್ದಾರರು ಮತ್ತು ಶ್ರೀಮಂತರು ಕುಡಿತದ ದಾಸರಾದರು. ಗಲ್ಲಿಗಲ್ಲಿಗಳಲ್ಲಿ ಗೆಜ್ಜೆಯ ಝೇಂಕಾರ ಕೇಳಿ ಬರತೊಡಗಿತು. ಸಂಗೀತದ ಸಭೆಗಳು ಕಳೆಗಟ್ಟ ತೊಡಗಿದವು. ನಗರದ ವೃದ್ಧರು ಮಕ್ಕಳು ಮತ್ತು ಯುವಕರು ಎಲ್ಲರೂ ಒಂದೇ ವಿಲಾಸೀ ಭಾವದಲ್ಲಿ ತೇಲತೊಡಗಿದರು. ಮತ್ತು ದೆಹಲಿಯ ಮೇಲೆ ಮೂಲೆಯಿಂದಲೂ ಗಜಲ್ ಆಲಾಪನೆಯ ರಾಗಗಳು ಮೂಡತೊಡಗಿದವು. ಶರೀಯತ್ ಕಾನೂನಿನ ಪರಿವೆಯು ಯಾರಿಗೂ ಇರಲಿಲ್ಲ. ಶರಾಬಿನ ಶರಧಿಯಲ್ಲಿ ಅವರೆಲ್ಲರೂ ಮುಳುಗಿರುವಂತೆ ಕಂಡು ಬರುತ್ತಿತ್ತು. ನ್ಯಾಯಧೀಶ ಮತ್ತು ಧರ್ಮ ಶಾಸ್ತ್ರ ಪಾರಂಗತರು ಸೇರಿದಂತೆ ಎಲ್ಲರೂ ಆ ಪೈಶಾಚಿಕ ಕೃತ್ಯದಲ್ಲಿ ಭಾಗಿಯಾದರು. ಬಾದಶಹನ ಆಸ್ಥಾನದಲ್ಲಿ ವಿದೂಷಕರು ಮತ್ತು ಗಾಯಕರ ವಿನಾಃ ಬೇರೆ ಯಾರೂ ಕಂಡು ಬರುತ್ತಿರಲಿಲ್ಲ.

ಮಅಜುದ್ದೀನ್‌ನು ಜಮುನಾ ನದಿಯ ತೀರದಲ್ಲಿದ್ದ ಕೇಲೋಖರಿ ಎಂಬಲ್ಲಿ ಒಂದು ವೈಭವೋಪೇತ ಅರಮನೆಯ ನಿರ್ಮಾಣವನ್ನು ಮಾಡಿದ ಹಾಗೂ ವಿಸ್ತಾರವಾದ ಒಂದು ಸುಂದರ ತೋಟವನ್ನು ಕೂಡ ನಿರ್ಮಿಸಿದ. ಮತ್ತು ಅದನ್ನೇ ತನ್ನ ಅರಮನೆಯಾಗಿಸಿಕೊಂಡು ಅಲ್ಲಿಯೇ ರಾಜಧಾನಿಯ ಬುನಾದಿಯನ್ನು ರೂಪಿಸಿದ. ರಾಜನ ಆಸ್ಥಾನವು ಸುಂದರ ಗಾಯಕಿಯರಿಂದ ಕಳೆಗಟ್ಟ ತೊಡಗಿತು ಮತ್ತು ವಿದೂಷಕರು ಹಾಗೂ ರಸಿಕರ ಕೇಂದ್ರ ಸ್ಥಾನವಾಗಿ ಮಾರ್ಪಟ್ಟಿತು. ಕೈಖಾಬಾದ್ ಕುಡಿತದ ಚಟಕ್ಕೆ ಎಷ್ಟೊಂದು ತೀವ್ರವಾದ ದಾಸನಾದನೆಂದರೆ ಅವನು ಕುಡಿತವನ್ನು ಬಿಟ್ಟು ಒಂದು ಕ್ಷಣವೂ ಇರುತ್ತಿರಲಿಲ್ಲ. ಮತ್ತು ಸರ್ಕಾರಿ ಬೊಕ್ಕಸವನ್ನು ತೆರೆದು ಕೊಡುಗೈದಾನಿಯಾಗಿ ಜನರಿಗೆ ಧಾರೆ ಎರೆಯುತ್ತಿದ್ದ.

ರಾಜ್ಯದ ಆಡಳಿತ ವ್ಯವಸ್ಥೆ:

ಮುಲ್ಕ್ ಫಕ್ರುದ್ದೀನ್ ಕೊತ್ವಾಲ್‌ನ ಸಹೋದರನ ಮಗನಾಗಿದ್ದ ಹಾಗೂ ಆತನ ಅಳಿಯನಾಗಿದ್ದ ನಿಜಾಮುದ್ದೀನ್ ಕೈಖಬಾದ್ ಬಾದಶಹನ ಬಲಗೈ ಬಂಟನಾಗಿದ್ದ ಹಾಗೂ "ವಕೀಲ"ನ ಹುದ್ದೆಗೆ ನಿಯುಕ್ತಿಗೊಂಡಿದ್ದು ಮತ್ತು ರಾಜ್ಯದ ಒಳಿತು ಕೆಡುಕಿನ ಮಾಲೀಕನಾಗಿ ಕಂಗೊಳಿಸುತ್ತಿದ್ದ. ಆ ಕಾಲದ ವಿದ್ವಾಂಸರಾದ ಮುಲ್ಕ್ ಖವಾಮುದ್ದೀನ್‌ರನ್ನು "ರಾಜ್ಯದ ವಕೀಲರಾಗಿ" ನೇಮಕ ಮಾಡಲಾಯಿತು. ಎಲ್ಲಾ ಸರ್ದಾರರು ಹಾಗೂ ಉನ್ನತಾಧಿಕಾರಿಗಳೂ ಕೂಡ ರಾಜನ ಅರಮನೆಯ ಸುತ್ತ ಮುತ್ತ ಭವ್ಯ ಅರಮನೆಗಳ ನಿರ್ಮಾಣವನ್ನು ಮಾಡಿ ಹಗಲಿರುಳು ಭೋಗ ವಿಲಾಸದಲ್ಲಿ ಮಗ್ನರಾದರು. ಹಗಲು ರಾತ್ರಿ ಅವರಿಗೆ ಹಬ್ಬದ ಸಂಭ್ರಮವಾಗಿತ್ತು. ಪ್ರತಿ ಇರುಳು ಭೋಗದ ಚಂದಿರನ ಉದಯವಾಗುತ್ತಿತ್ತು. ಶರಾಬಿನ ಬೇಡಿಕೆ ಎಷ್ಟೊಂದು ತೀವ್ರವಾಗಿ ಏರಿತೆಂದರೆ ಅದರ ಬೆಲೆ ಹತ್ತು ಪಟ್ಟು ಹೆಚ್ಚಿತು. ಗಾಯಕರ ಬೇಡಿಕೆ ಎಷ್ಟೊಂದು ಏರಿತೆಂದರೆ ಅವರು ಅಲಭ್ಯವಾಗ ತೊಡಗಿದರು. ಮಸೀದಿಗಳು ಮತ್ತು ಸೂಫಿಗಳ ಧರ್ಮಕೇಂದ್ರಗಳು ಪಾಳು ಬಿದ್ದವು. ಅಲ್ಲಿ ಯಾವೊಬ್ಬನೂ ಕಂಡು ಬರುತ್ತಿರಲಿಲ್ಲ ಪಡಖಾನೆಗಳು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದ ತೊಡಗಿದವು.

ಮುಲ್ಕ್ ನಿಜಾಮುದ್ದೀನನ ಭ್ರಾಂತಿ:

ಕೈಖಬಾದನ ಸುಖಲೋಲುಪತೆ ಮತ್ತು ನಿರ್ಲಿಪ್ತತೆಯನ್ನು ಕಂಡ ಮುಲ್ಕ್ ನಿಜಾಮುದ್ದೀನನು ಬಾದಶಹನಾಗುವ ಕನಸು ಕಾಣ ತೊಡಗಿದ. ಹಾಗೂ ಬಾದಶಹನನ್ನು ಪದಚ್ಯುತಗೊಳಿಸುವುದು ಸುಲಭ ಎಂದು ಭಾವಿಸ ತೊಡಗಿದ. ಬಘ್ರಾಖಾನ್ ಲಖ್ನೋತಿಯ ಆಡಳಿತಕ್ಕೆ ತನ್ನ ವ್ಯಾಪ್ತಿಯನ್ನು ಮಿತಿಗೊಳಿಸಿಕೊಂಡು ಬಂಗಾಳದಲ್ಲಿ ಮೌನವಾಗಿ ಕುಳಿತಿದ್ದ. ಕೆಖುಸ್ರು ಒಬ್ಬನು ಮಾತ್ರ ನಿಜಾಮುದ್ದೀನನ ರಸ್ತೆಯ ಮುಳ್ಳಾಗಿದ್ದ. ಈ ಆಲೋಚನೆ ಬಂದ ಕೂಡಲೇ ಮುಲ್ಕ್ ನಿಜಾಮುದ್ದೀನನು ಎಲ್ಲರಿಗಿಂತ ಮೊದಲು ಕೆಖುಸ್ರುವಿನ ಚರಮ ಗೀತೆಯನ್ನು ಹಾಡಲು ಯೋಜನೆಯನ್ನು ಸಿದ್ಧ ಪಡಿಸಲಾರಂಭಿಸಿದ.

ಆ ವಿಶ್ವಾಸಘಾತುಕ ಸರದಾನು ಸೈನ್ಯದ ಇತರೆ ಸರದಾರರು ಹಾಗೂ ಉನ್ನತ ಅಧಿಕಾರಿಗಳೊಡನೆ ಸಂಪರ್ಕವನ್ನು ಸಾಧಿಸಿದ ಹಾಗೂ ಕೈಖಬಾದನ ಮೇಲೆ ಮುಲ್ಕ್ ನಿಜಾಮುದ್ದೀನನಿಗೆ ಅನೈತಿಕ ಮತ್ತು ಅತಿರೇಕದ ಪ್ರಭಾವವಿದೆಯೆಂದು ಅವರಿಗೆಲ್ಲಾ ಅರಿವಾಗಿತ್ತು. ಅವರು ಭಯಗ್ರಸ್ತರಾಗಿ ಅವನು ಹೇಳಿದಕ್ಕೆಲ್ಲಾ ಹೂಂಗುಟ್ಟತೊಡಗಿದರು. ತಪ್ಪು ಗ್ರಹಿಕೆಯ ಆಧಾರದ ಮೇರೆಗೆ ನಿಜಾಮುದ್ದೀನನು ಆ ಸರ್ದಾರರು ಮತ್ತು ಅಧಿಕಾರಿಗಳನ್ನು ತನ್ನ ಆಪ್ತ ಗೆಳೆಯರೆಂದು ಪರಿಭಾವಿಸಿ ತನ್ನ ಆಲೋಚನೆಯನ್ನು ಕಾರ್ಯಗತಗೊಳಿಸಲು ಮಗ್ನನಾದ.

ಕೆಖುಸ್ರುವಿನ ಸಂದೇಹ:

ಹಾಜಿ ಮೊಹಮ್ಮದ್ ಕಂದಹಾರಿಯು ತನ್ನ ಚರಿತ್ರೆಯ ಗ್ರಂಥದಲ್ಲಿ, ಹಾಗೂ ಪ್ರಖ್ಯಾತ ಕವಿಯಾದ ಆ ಸಾರಿಯು ತನ್ನ ವಿರಚಿತ ಗ್ರಂಥವಾದ "ಫತೂಹುಸ್ಸಲಾತೀನ್" ನಲ್ಲಿ ದಾಖಲಿಸಿರುವಂತೆ ಕೆಖುಸ್ರುಗೆ ತನ್ನ ಚಿಕ್ಕಪ್ಪನ ಮಗನಾದ ಕೈಖಬಾದ್ ಪಟ್ಟಾಭಿಷಿಕ್ತನಾದ ನಂತರ ಮುಲ್ಕ್ ನಿಜಾಮುದ್ದೀನನ ಅನೈತಿಕ ಪ್ರಭಾವಕ್ಕೊಳಗಾಗಿರುವ ಸುದ್ದಿಯು ತಿಳಿದು ಬಂದ ನಂತರ ಅವನು ಘಜ್ನಿಯ ಆಡಳಿತಗಾರನಾದ ತೈಮೂರ್‌ಖಾನ್‌ನೊಡನೆ ಸಂಪರ್ಕವನ್ನು ಸಾಧಿಸಿದ. ಮತ್ತು ಸ್ವತಃ ಘಜ್ನಿ ತಲುಪಿ ತೈಮೂರ್‌ಖಾನ್‌ನೊಡನೆ ಭೇಟಿಯಾಗಿ ಕೈಖಬಾದ್ ಮತ್ತು ನಿಜಾಮುದ್ದೀನ್‌ನನ್ನು ಎದುರಿಸಲು ಸೈನ್ಯದ ನೆರವನ್ನು ಕೋರಿದ. ಕೆಖುಸ್ರುವಿನ ನಿರೀಕ್ಷೆಯಂತೆ ಅವನಿಗೆ ಜವಾಬು ದೊರಕಲಿಲ್ಲ ಹಾಗೂ ತೈಮೂರ್‌ಖಾನನು ಅವನ ಪ್ರಸ್ತಾವನೆಯನ್ನು ಒಪ್ಪಲಿಲ್ಲ. ಕೆಖುಸ್ರು ದುಃಖಿತನಾಗಿ ಘಜ್ನಿಯಿಂದ ಮುಲ್ತಾನ್‌ಗೆ ಮರಳಿದ ಮತ್ತು ಮಲಜುದ್ದೀನ್ ಕೈಖಬಾದಗೆ ಈ ಸಂದೇಶವನ್ನು ಕಳಿಸಿದ "ಎಲ್ಲಾ ಸಂದರ್ಭಗಳಲ್ಲಿಯೂ ನಾನು ನಿನಗೆ ವಿಧೇಯನಾಗಿರುವುದು ಮತ್ತು ನಿನ್ನ ಆಜ್ಞಾಪಾಲನೆಯನ್ನು ಮಾಡುವುದು ನನ್ನ ಕರ್ತವ್ಯವಾಗಿದೆ".

ಹಾಗೂ ನನ್ನ ಮೇಲೆ ನಿನಗೆ ಸಹೋದರತ್ವದ ಪ್ರೇಮಭಾವ ಸ್ಥಿರವಾಗಿದೆ ಆದರೆ ನಿನ್ನ ದರ್ಬಾರಿನ ಕೆಲವು ದುಷ್ಟಶಕ್ತಿಗಳು ನಿನ್ನ ಮತ್ತು ನನ್ನ ನಡುವೆ ದ್ವೇಷದ ಬೀಜವನ್ನು ಬಿತ್ತುವ ಕೆಲಸದಲ್ಲಿ ನಿರತರಾಗಿದ್ದಾರೆ. ಈ ದುರುದ್ದೇಶ ಪೂರಿತ ಜನರು ನನ್ನ ವಿರುದ್ಧ ನಿನ್ನ ಮನಸ್ಸನ್ನು ವಿಷಯುಕ್ತಗೊಳಿಸುತ್ತಿದ್ದಾರೆ. ಹಾಗೂ ನಿನ್ನ ವಿರುದ್ಧ ನನಗೆ ಚಾಡಿ ಹೇಳುತ್ತಿದ್ದಾರೆ ಆದರೆ ನೀನು ನನ್ನನ್ನು ನಿನ್ನ ಹಿತಾಕಾಂಕ್ಷಿ ಮತ್ತು ನೈಜ ಹಿತೈಶಿ ಎಂದು ಪರಿಗಣಿಸಿದಲ್ಲಿ ನನ್ನ ತಂದೆಯ ರಾಜ್ಯವನ್ನು ನನ್ನ ವಶಕ್ಕೆ ವಹಿಸಿಕೊಟ್ಟಲ್ಲಿ ಭ್ರಾತೃತ್ವದ ಪ್ರೀತಿ ಮತ್ತು ವಾತ್ಸಲ್ಯಕ್ಕೆ ಅನುಗುಣವಾಗಿರುತ್ತದೆ.

ಕೆಖುಸ್ರುವಿನ ಕೊಲೆ:

ಆ ಸಂದೇಶಕ್ಕೆ ಪ್ರತ್ಯುತ್ತರವನ್ನು ಕೈಖಬಾದ್ ಹೀಗೆಂದು ಕಳಿಸಿದ "ನಿನಗಿಂತ

ಹೆಚ್ಚು ಯಾರನ್ನೂ ನಾನು ಈ ಪ್ರಪಂಚದಲ್ಲಿ ಪ್ರೀತಿಸಿಲ್ಲ. ಆಗಿದ್ದು ಆಗಿ ಹೋಯಿತು. ಅದನ್ನು ನಿನ್ನ ಮನಸ್ಸಿನಿಂದ ಕಿತ್ತು ಹಾಕು ಮತ್ತು ಯಾವುದೇ ಭಯ ಮತ್ತು ಉದ್ವೇಗವಿಲ್ಲದೆ ನೀನು ನನ್ನ ಬಳಿ ಬಾ. ಏಕೆಂದರೆ ಕುಕರ್ಮಿಗಳ ಬಾಯನ್ನು ಮುಚ್ಚಿಸಬೇಕಾಗಿದೆ. ಮತ್ತು ನಾನು ಗೌರವಾದರಗಳಿಂದ ಕೂಡಿ ನಿನ್ನನ್ನು ಮುಲ್ತಾನಿನ ಒಡೆಯನನ್ನಾಗಿ ನಿಯೋಜಿಸ ಬೇಕಾಗಿದೆ." ಉತ್ತರ ದೊರೆತೊಡನೆ ಕೆಖುಸ್ರು ದೆಹಲಿಯತ್ತ ಪ್ರಯಾಣ ಬೆಳೆಸಿದ. ಮುಲ್ಕ್ ನಿಜಾಮುದ್ದೀನ್ ಈ ಮೊದಲೇ ಬಲ್ಬನ್ನನ ವಂಶದ ನಾಶವನ್ನು ಬಯಸಿ ಸರ್ವಸನ್ನದ್ಧನಾಗಿದ್ದ. ಕೆಖುಸ್ರುವಿನ ಪ್ರಯಾಣದ ಸುದ್ದಿ ಸಿಕ್ಕೊಡನೆಯೇ ಅವನು ತನ್ನ ಸಂಚಿನ ಜಾಲವನ್ನು ಹೆಣೆದ ಮತ್ತು ಕೈಖುಬಾದ್‌ನೊಂದಿಗೆ ನುಡಿದ "ರಾಜಕುಮಾರ ಕೆಖುಸ್ರು ನಿನ್ನೊಡನೆ ರಾಜ್ಯದ ಪಾಲುದಾರನಾಗಿದ್ದಾನೆ ಮತ್ತು ಗಯಾಸುದ್ದೀನನ ಹಿರಿಮಗನ ಉತ್ತರಾಧಿಕಾರಿಯಾಗಿದ್ದಾನೆ. ಇಂತಿಂತಹ ಸರ್ದಾರರು ಅವನೊಡನೆ ರಹಸ್ಯ ಬಾಂಧವ್ಯವನ್ನು ಹೊಂದಿದ್ದಾರೆ. ಮತ್ತು ನಿನ್ನ ವಶದಿಂದ ಆಡಳಿತಾಧಿಕಾರವನ್ನು ಕಸಿದು ಅವನಿಗೆ ವಹಿಸಬೇಕೆಂದು ಇರಾದೆಯನ್ನು ಹೊಂದಿದವರಾಗಿದ್ದಾರೆ." ಆ ಸಂದರ್ಭದಲ್ಲಿ ಕೈಖುಬಾದ್ ಕುಡಿತದ ನಶೆಯಲ್ಲಿದ್ದ ಅಮಲೇರಿದ್ದನು. ಅವನು ಮುಲ್ಕ್ ನಿಜಾಮುದ್ದೀನನ ಮಾತುಗಳನ್ನು ನಂಬಿದ ಹಾಗೂ ಕೂಡಲೇ ಕೆಖುಸ್ರುವಿನ ಕೊಲೆ ಮಾಡುವ ಆಜ್ಞೆಯನ್ನು ಬರೆದು ನಿಜಾಮುದ್ದೀನನ ಕೈಗೆ ನೀಡಿದ. ಸದರಿ ಆದೇಶವು ಅವನ ಕೈಸೇರಿದೊಡನೆಯೇ ನಿಜಾಮುದ್ದೀನನು ಕೆಖುಸ್ರುವಿನ ತಲೆಯನ್ನು ಕಡಿದು ತರುವಂತೆ ತನ್ನ ಖಾಸಾ ಸರ್ದಾರರಿಗೆ ವಹಿಸಿದ. ಆ ಸರ್ದಾರರು ರೋಹ ಪ್ರದೇಶಕ್ಕೆ ತಲುಪಿ ಕೆಖುಸ್ರು ಮತ್ತು ಅವನ ಸಂಗಡಿಗರನ್ನು ಬಂಧಿಸಿ ಕೊಲೆ ಮಾಡಿದರು.

ಮುಲ್ಕ್ ನಿಜಾಮುದ್ದೀನನ ಉಛ್ರಾಯ ಸ್ಥಿತಿ:

ಮುಲ್ಕ್ ಖತೀರ್ ಬಾದಶಹನ ರಾಯಭಾರಿ ಮತ್ತು ಮಂತ್ರಿಯಾಗಿದ್ದ. ಅವನ ಮೇಲೆ ಕೂಡ ಮುಲ್ಕ್ ನಿಜಾಮುದ್ದೀನನು ರಾಜದ್ರೋಹದ ಆರೋಪವನ್ನು ಹೊರಿಸಿದ. ಮತ್ತು ಕತ್ತೆಯ ಮೇಲೆ ಕೂರಿಸಿ ಅತ್ಯಂತ ಅಪಮಾನಕಾರಿಯಾಗಿ ಪಟ್ಟಣದಿಂದ ಹೊರಗೋಡಿಸಿದ. ಅಷ್ಟೇ ಅಲ್ಲದೆ ಗಯಾಸುದ್ದೀನ್ ಬಲ್ಬನ್ನನ ಇನ್ನಿತರೆ ಅನೇಕ ಸರ್ದಾರರನ್ನು ಕೂಡ ಇದೇ ರೀತಿಯಲ್ಲಿ ಸಂಚಿನ ಆರೋಪದಡಿಯಲ್ಲಿ ಮರಣದಂಡನೆಗೆ ಗುರಿಯಾಗಿಸಿದ ಮತ್ತು ಅವರ ಶವಗಳನ್ನು ಯಮುನಾ ನದಿಯಲ್ಲಿ ಎಸೆಯಲಾಯಿತು. ಇದರ ಪರಿಣಾಮವಾಗಿ ದಶದಿಕ್ಕುಗಳಲ್ಲಿಯೂ ಮುಲ್ಕ್ ನಿಜಾಮುದ್ದೀನನ ದರ್ಪದ ಪ್ರತಾಪವು ಪ್ರಸರಿಸಿತು. (ಸರ್ದಾರರು ಕೂಡ ಅವನಿಂದ ಆತಂಕಕ್ಕೀಡಾದರು) ಮತ್ತು ಅವನ ವೈಭವವು ಮೊದಲಿಗಿಂತಲೂ ಹೆಚ್ಚಿತು.

ಅದೇ ದಿನಗಳಲ್ಲಿ ಮೊಘಲರ ಸೈನ್ಯವು ಲಾಹೋರ್‌ನ ಬಳಿ ತಲುಪಿತೆಂಬ ಸುದ್ದಿ ಬಂದಿತು. ಅವರನ್ನು ಎದುರಿಸಲು ಮುಲ್ಕ್ ಬಾರ್‌ಬೇಗ್ ಬರ್ಲಾಸ್ ಹಾಗೂ

ಖಾನ್ ಜಹಾಂಗೆ ಕಳಿಸಲಾಯಿತು. ಲಾಹೋರ್‌ನ ಸಮೀಪದ ಪ್ರದೇಶದಲ್ಲಿ ಉಭಯತ್ರರ ನಡುವೆ ಘನಘೋರ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಮೊಘಲರ ಅನೇಕ ಸರ್ದಾರರು ಹತರಾದರು ಮತ್ತು ಉಳಿದವರನ್ನು ಬಂಧಿಸಿ ದೆಹಲಿಗೆ ಕರೆ ತರಲಾಯಿತು.

ಸರ್ದಾರರ ಸರ್ವನಾಶ:

ತದ ನಂತರ ನಿಜಾಮುದ್ದೀನನು ಕುಟಿಲತೆ ಮತ್ತು ಚತುರತೆಯ ಇನ್ನೊಂದು ಜಾಲವನ್ನು ಹೆಣೆದ. ಒಂದು ದಿನ ಏಕಾಂತದಲ್ಲಿ ಅವನು ಕೈಖಬಾದಗೆ ನುಡಿದ "ಗಯಾಸುದ್ದೀನ್ ಬಲ್ಬನ್ನನ ಕಾಲದಿಂದ ದೆಹಲಿಯಲ್ಲಿ ವಾಸವಾಗಿರುವ ಮೊಘಲ್ ಸರ್ದಾರರು ತಮ್ಮ ಸಹ ಕೋಮಿನ ಮತ್ತು ಸ್ವಜನಾಂಗದೊಡನೆ ವಿಶಿಷ್ಟ ಸಂಬಂಧವನ್ನು ಹೊಂದಿದ್ದಾರೆ. ಭವಿಷ್ಯದಲ್ಲಿ ಎಂದಾದರೂ ಅವರು ನಿಮ್ಮ ಆಜ್ಞೆಯನ್ನು ಮೀರಿದಲ್ಲಿ ಅವರನ್ನು ಹದ್ದುಬಸ್ತಿನಲ್ಲಿಡುವುದು ಕಷ್ಟಕರವಾಗುತ್ತದೆ." ನಿಜಾಮುದ್ದೀನನ ಈ ಚಾಡಿ ಮಾತುಗಳಿಗೆ ಕೈಖಬಾದ್ ಬಲಿಯಾದ ಮತ್ತು ಅವನು ದೆಹಲಿಯ ಎಲ್ಲಾ ಮೊಘಲ್ ಸರ್ದಾರರ ಕೊಲೆಯ ಫರ್ಮಾನನ್ನು ಹೊರಡಿಸಿದ. ನಿಜಾಮುದ್ದೀನನು ಒಂದೇ ದಿನದಲ್ಲಿ ಆ ಸರ್ದಾರರ ಮಾರಣ ಹೋಮವನ್ನು ಮಾಡಿದ ಮತ್ತು ಅವರ ಇಡೀ ವಂಶವನ್ನು ನಿರ್ನಾಮ ಮಾಡಿದ. ಮೊಗಲ್ ಸರ್ದಾರರ ಬಂಧುಗಳಾಗಿದ್ದ ದೆಹಲಿಯ ಸರ್ದಾರರನ್ನು ಬಂಧಿಸಿ ದೂರದ ಊರುಗಳಿಗೆ ಕಳಿಸಲಾಯಿತು. ಮತ್ತು ಕೋಟೆಗಳಲ್ಲಿ ಗೃಹಬಂಧನಕ್ಕೆ ಒಳಪಡಿಸಲಾಯಿತು. ಪುರಾತನ ಸರ್ದಾರರ ಸಂಪೂರ್ಣ ವಿನಾಶವನ್ನು ಗೈದ ನಂತರ ಮುಲ್ಕ್ ನಿಜಾಮುದ್ದೀನನು ಇತರೆ ಸರ್ದಾರರ ಮೇಲೆ ಕಣ್ಣು ಹಾಕಿದ. ಹಾಗೂ ಅವನು ಮುಲ್ತಾನ್‌ನ ಆಡಳಿತಗಾರನಾದ ಮುಲ್ಕ್ ನಿಜಾಮ್‌ಬೇಗ್ ಮತ್ತು ಲಾಹೋರ್‌ನ ಒಡೆಯನಾದ ಮುಲ್ಕ್ ತುರ್ಕಿಯನ್ನು ಅಂತ್ಯ ಕಾಣಿಸುವ ನಿರ್ಧಾರ ಮಾಡಿದ ನಿಜಾಮುದ್ದೀನ್ (ಹಿಂದಿನಂತೆ) ಈ ಉದ್ದೇಶದಲ್ಲಿಯು ಸಫಲನಾದ ಹಾಗೂ ಇಡೀ ದೇಶವು ಅವನ ಶತ್ರುಗಳಿಂದ ಮುಕ್ತವಾಯಿತು.

ನಿಜಾಮುದ್ದೀನನ ತಪ್ಪು ಕಲ್ಪನೆ:

ಆ ಸರ್ದಾರರ ಸಂಪೂರ್ಣ ನಾಶವನ್ನು ಗೈದ ನಂತರ ಕೈಖಬಾದನು ಪೂರ್ಣವಾಗಿ ನಿಜಾಮುದ್ದೀನನ ಹಿಡಿತದಲ್ಲಿ ಸಿಲುಕಿಕೊಂಡನು. ಯಾರಾದರೂ ಬೆಂಬಲಿಗರು ಅಥವಾ ಹಿತೈಶಿಗಳು ನಿಜಾಮುದ್ದೀನನ ವಿರುದ್ದ ಮಾತನಾಡಿದಲ್ಲಿ ಕೈಖಬಾದನು ತತ್‌ಕ್ಷಣವೇ ನಿಜಾಮುದ್ದೀನ್‌ನಿಗೆ ತಿಳಿಸುತ್ತಿದ್ದ. ಅಥವಾ ಅವರನ್ನು ಬಂಧಿಸಿ ನಿಜಾಮುದ್ದೀನನ ವಶಕ್ಕೆ ನೀಡುತ್ತಿದ್ದ. ಮಲಿಕ್ ನಿಜಾಮುದ್ದೀನನ ಪತ್ನಿಯು ಮುಲ್ಕ್ ಫಕ್ರುದ್ದೀನ್ ಕೊತ್ವಾಲನ ಮಗಳಾಗಿದ್ದಳು. ಆಕೆ ಕ್ರಮೇಣ ರಾಜ ಬೀದಿಯ ಆಗುಹೋಗುಗಳಲ್ಲಿ ಆಸಕ್ತಿ ವಹಿಸತೊಡಗಿದಳು. ಆಕೆ ತನ್ನನ್ನು ತಾನೇ ಬಾದಶಹನ ಮಾತೆಯಂತೆ ಎಂದು ಹೇಳಿಕೊಂಡು ಬಾದಶಹನ ಪರಿವಾರಗಳಿದ್ದ ಮೊಹಲ್ಲಾಗಳಲ್ಲಿ

ಪ್ರಭಾವ ಬೀರತೊಡಗಿದಳು ಮತ್ತು ಎಲ್ಲಾ ಕಡೆಗಳಲ್ಲಿಯೂ ಆಕೆಯ ಮಾತೇ ವೇದ ವಾಕ್ಯವಾಗತೊಡಗಿತು. ಅಳಿದುಳಿದ ಸರ್ದಾರರು ಹಾಗೂ ನಿಜಾಮುದ್ದೀನನ ಆಸ್ಥಾನದ ದಾಸರಾದರು. ಹಾಗೂ ಆ ಕುಟಿಲ ಸರ್ದಾರನಿಂದ ರಕ್ಷಣೆ ಪಡೆಯುವ ಪ್ರಯತ್ನದಲ್ಲಿ ತೊಡಗಿದರು. ಇದರ ಪರಿಣಾಮವಾಗಿ ಬಾದಶಹನ ದರ್ಬಾರು ಕಳಾಹೀನವಾಯಿತು. ಬಾದಶಹನ ಆಸ್ಥಾನದ ಎಲ್ಲಾ ವೈಭವ ಮತ್ತು ಅಧಿಕಾರವು ನಿಜಾಮುದ್ದೀನನ ಅರಮನೆಯಲ್ಲಿ ಪ್ರತಿಫಲತೊಡಗಿತು. ಪ್ರಮುಖ ಸರ್ದಾರನಾಗಿದ್ದ ಮುಲ್ಕ್‌ಫಕ್ರುದ್ದೀನ್ ತೊಂಭತ್ತರ ವಯೋಮಾನದಲ್ಲಿದ್ದ. ಅವನಿಗೂ ತನ್ನ ಚಾಲಾಕಿ ಅಳಿಯನ "ಕುಟಿಲ ಕಾರಸ್ಥಾನಗಳ" ಸುದ್ದಿ ಸಿಕ್ಕಿತು. ಆ ವಯೋವೃದ್ಧ ಸರ್ದಾರನು ದೂರದೃಷ್ಟಿಯನ್ನು ಹೊಂದಿಲ್ಲದ ಮತ್ತು ಅಹಂಕಾರದಿಂದ ತುಂಬಿತುಳುಕುತ್ತಿದ್ದ ತನ್ನ ಅಣ್ಣನ ಮಗ ಹಾಗೂ ತನ್ನ ಅಳಿಯನಾದ ಅವನನ್ನು ಕರೆದು ಅನೇಕ ಉದಾಹರಣೆಗಳಿಂದ ವಿವರಿಸಿ ಬಾದಶಹನಾಗುವ ಕನಸು ನನಸಾಗುವುದಿಲ್ಲವೆಂದೂ ಅದನ್ನು ಮರೆತುಬಿಡಬೇಕೆಂದೂ ಬುದ್ಧಿವಾದವನ್ನು ಹೇಳಿದ. ಆದರೆ ಮುಲ್ಕ್ ನಿಜಾಮ್‌ನಿಗೆ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಯಿತು. ಹಾಗೂ ಅವನು ತನ್ನ ವಯೋವೃದ್ಧ ಚಿಕ್ಕಪ್ಪನಿಗೆ ನುಡಿದ "ತಮ್ಮ ಮಾತು ಸರಿ ಇರುತ್ತದೆ. ಮತ್ತು ತಮ್ಮ ಬುದ್ಧಿವಾದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದು ಅತ್ಯಂತ ಮೂರ್ಖತನದ ಕೆಲಸವಾಗುತ್ತದೆ. ಆದರೆ ಇದುವರೆಗೆ ನಾನು ಮಾಡಿರುವ ಕೃತ್ಯಗಳ ದೆಸೆಯಿಂದ ಬಹುತೇಕ ಜನರು ನನ್ನ ಕಡುವೈರಿಗಳಾಗಿ ಪರಿಣಮಿಸಿದ್ದಾರೆ. ಮತ್ತು ಎಲ್ಲಾ ಜನರೆದುರು ನನ್ನ ಉದ್ದೇಶವು ಸುಸ್ಪಷ್ಟವಾಗಿ ಬಿಟ್ಟಿದೆ. ಈಗ ನಾನು ನನ್ನ ಉದ್ದೇಶ ಸಾಧನೆಯಿಂದ ಹಿಂದೆಗೆದರೆ ಆ ಜನರೆಲ್ಲಾ ಒಟ್ಟಾಗಿ ಸೇರಿ ನನ್ನನ್ನು ಜೀವಸಹಿತ ಬಿಡುವುದಿಲ್ಲ." ಮುಲ್ಕ್ ಫಕ್ರುದ್ದೀನನು ಅವನ ಜವಾಬನ್ನು ಕೇಳಿ ಅವನಿಗೆ ಸಾಕಷ್ಟು ಬೈದ ಮತ್ತು ಶಾಪವನ್ನು ಹಾಕಿದ. ಹಾಗೂ ತನ್ನೆದುರಿಗೆ ಬಾರದಂತೆ ಅವನನ್ನು ಕಟ್ಟುನಿಟ್ಟು ಮಾಡಿದ. ದರಬಾರಿನ ಇತರೆ ಸರ್ದಾರರು ಮತ್ತು ಅಧಿಕಾರಿಗಳಿಗೆ ಈ ವಿಷಯ ತಿಳಿದು ಬಂದ ನಂತರ ವೃದ್ಧ ಸರ್ದಾರನ ಪ್ರೀತಿ ವಿಶ್ವಾಸವನ್ನು ಹೊಗಳಿದರು ಮತ್ತು ಅವನ ದೂರ ದೃಷ್ಟಿಯನ್ನು ಪ್ರಶಂಸೆ ಮಾಡಿದರು. ಹಾಗೂ ಆ ಸರ್ದಾರರು ಮುಲ್ಕ್ ಫಕ್ರುದ್ದೀನ್‌ನ ಕಡೆಯಿಂದ ನಿರಾತಂಕವಾದರು.

ಬಘ್ರಾಖಾನನ ಆಕ್ರಮಣ:

ಆ ದಿನಗಳಲ್ಲಿ ಬಘ್ರಾಖಾನ್‌ಗೆ ತನ್ನ ಯುವ ಪುತ್ರನ ಲೋಪಗಳು ಮತ್ತು ನಿಜಾಮುದ್ದೀನನ ಅಧಿಕಾರ ಲಾಲಸೆಯ ಬಗ್ಗೆ ಸಕಲ ಸಂಗತಿಗಳು ತಿಳಿದುಬಂದವು. ಅವನು ಕೈಖಬಾದನ ಹೆಸರಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ಪರೋಕ್ಷವಾಗಿ ನಿಜಾಮುದ್ದೀನನ ಕುಟಿಲತೆ ಮತ್ತು ಹೀನ ಕೃತ್ಯಗಳ ಬಗ್ಗೆ ಹಾಗೂ ಅವನ ಉದ್ದೇಶದ ಬಗ್ಗೆ ತಿಳಿಸಿ ಮಗನಿಗೆ ಎಚ್ಚರಿಕೆಯನ್ನು ನೀಡಿದ. ಆದರೆ ಕೈಖಬಾದನ ಮೇಲೆ ಆ

ಪತ್ರವು ಯಾವುದೇ ಪರಿಣಾಮವನ್ನು ಬೀರಿಲ್ಲವೆಂದು ಆತನಿಗೆ ಮನವರಿಕೆಯಾಯಿತು. ಹೀಗಾಗಿ ಕೈಖಬಾದನಿಗೆ ಎರಡು ವರ್ಷಗಳ ಕಾಲಾವಧಿಯನ್ನು ನೀಡಿ, ತದ ನಂತರ ದೆಹಲಿಯ ಮೇಲೆ ಆಕ್ರಮಣವನ್ನು ಮಾಡಿದ. ತನ್ನ ತಂದೆಯ ಸೈನ್ಯವು ಬಿಹಾರದವರೆಗೆ ತಲುಪಿದೆ ಎಂಬ ಅಂಶ ತಿಳಿದು ಬಂದ ನಂತರ ಅವನು ಕೂಡ ಯುದ್ಧ ಸನ್ನದ್ಧನಾಗಿ ಬಿಹಾರದತ್ತ ಹೊರಟ. ಅಗ ಬೇಸಿಗೆಯ ಕಾಲವಾಗಿದ್ದು ಖಕ್ಕರ್ ನದಿಯ ತೀರದಲ್ಲಿ ಅವನು ಬೀಡು ಬಿಟ್ಟ. ಬಘ್ರಾಖಾನ್ ಕೂಡ ಬಿಹಾರದಿಂದ ಮುಂದೆ ಪ್ರಯಾಣ ಮಾಡಿ ಸರಯೂ ನದಿ ತೀರದಲ್ಲಿ ಬೀಡುಬಿಟ್ಟ. ತಂದೆ ಮಗನ ಸೈನ್ಯಗಳು ಪರಸ್ಪರ ಮುಖಾಮುಖಿಯಾದ ನಂತರ ಬಘ್ರಾಖಾನ್ ದೆಹಲಿಯನ್ನು ವಶಪಡಿಸಿಕೊಳ್ಳುವ ಇಂಗಿತವನ್ನು ತ್ಯಜಿಸಿದ. ಹಾಗೂ ರಾಜಿ ಪ್ರಸ್ತಾವನೆಯ ಪತ್ರವನ್ನು ಕೈಖಬಾದಗೆ ಕಳಿಸಿದ ಮತ್ತು ಅವನನ್ನು ಮುಖತಃ ಭೇಟಿಯಾಗಬೇಕೆನ್ನುವ ತನ್ನ ಇರಾದೆಯನ್ನು ವ್ಯಕ್ತಪಡಿಸಿದ.

ತಂದೆ ಮಗನ ನಡುವೆ ರಾಜಿ:

ಮುಲ್ಕ್ ನಿಜಾಮುದ್ದೀನನು ಕೈಖಬಾದ್‌ನನ್ನು ಸಂಪೂರ್ಣವಾಗಿ ಆವರಿಸಿದ್ದ ಹಾಗೂ ತಂದೆ ಮಗನ ನಡುವೆ ವಿರಸ ಮುಂದುವರೆದಲ್ಲಿ ಮಾತ್ರ ಅವನ ಇಷ್ಟಾರ್ಥ ಪೂರೈಸುತ್ತಿತ್ತು. ಆದ್ದರಿಂದ ಅವನು ಕೈಖಬಾದ್‌ನನ್ನು ಸಂಧಿಯ ವಿರುದ್ಧವಾಗಿ ಪ್ರಚೋದಿಸಿದ ಹಾಗೂ ವಿವೇಚನಾರಹಿತನಾದ ಕೈಖಬಾದ್ ಅವನ ಚಿತಾವಣೆಯ ಮೇರೆಗೆ ತಂದೆಯ ವಿರುದ್ಧ ಯುದ್ಧಕ್ಕೆ ಅಣಿಯಾದ. ನಿರಂತರವಾಗಿ ಮೂರು ದಿನಗಳ ಕಾಲ ತಂದೆ ಮಗನ ನಡುವೆ ಪತ್ರ ವ್ಯವಹಾರವು ನಡೆಯಿತು. ರಾಜಕಾರಣದ ಶಿಸ್ತಿನ ಭಾಷೆಯು ಅವನ ಮೇಲೆ ಪರಿಣಾಮ ಬೀರುವುದಿಲ್ಲವೆಂದು ಅರಿತುಕೊಂಡ ಬಘ್ರಾಖಾನ್ ಕೂಡಲೇ ಪಿತೃವಾತ್ಸಲ್ಯದಿಂದ ಕೂಡಿದ ಭಾವನಾತ್ಮಕವಾದ ಪತ್ರವೊಂದನ್ನು ಬರೆದ "ನನ್ನ ಮಗನೇ ನಿನ್ನಿಂದ ದೂರವಾಗಿ ನಾನು ತುಂಬಾ ಚಿಂತೆಯಲ್ಲಿದ್ದು, ದುಃಖಿತನಾಗಿದ್ದೇನೆ ಹಾಗೂ ನಿನ್ನೊಡನೆ ಭೇಟಿಯಾಗಲು ಕಾತರಿಸುತ್ತಿದ್ದೇನೆ. ನಿನ್ನನ್ನು ಒಂದು ಕ್ಷಣ ನಾನು ಕಣ್ಣು ತುಂಬಾ ನೋಡಲು ನೀನು ವ್ಯವಸ್ಥೆ ಮಾಡುವುದಾದಲ್ಲಿ ನನಗೆ ತುಂಬಾ ಆನಂದವಾಗುತ್ತದೆ. ಮತ್ತು ನಿನ್ನ ಭೋಗವಿಲಾಸ ಹಾಗೂ ನೆಮ್ಮದಿಗೆ ಯಾವುದೇ ಭಂಗ ಬರುವುದಿಲ್ಲ. ಆ ಪತ್ರವು ಕೈಖಬಾದನ ಮೇಲೆ ಅಪಾರ ಪರಿಣಾಮವನ್ನು ಬೀರಿತು ಮತ್ತು ಅವನು ಯುದ್ಧದ ಆಲೋಚನೆಯನ್ನು ಕೈಬಿಟ್ಟು ಸಂಧಿಯ ತೀರ್ಮಾನಕ್ಕೆ ಬಂದ ಮತ್ತು ತಂದೆಯೊಡನೆ ಏಕಾಂತದಲ್ಲಿ ಭೇಟಿಯಾಗಬೇಕೆಂಬ ಸಹಜ ಭಾವವು ಅವನ ಮನದಲ್ಲಿ ಮೂಡಿತು. ಮುಲ್ಕ್ ನಿಜಾಮನು ಏಕಾಂತದಲ್ಲಿ ಅವರಿಬ್ಬರೂ ಭೇಟಿಯಾಗ ಕೂಡದೆಂದು ಅವನನ್ನು ತಡೆದ. ಕೈಖಬಾದನು ತನ್ನ ಸಕಲ ರಾಜ ವೈಭವದಿಂದ ಕೂಡಿ ಖಕ್ಕರ್ ನದಿ ತೀರದಿಂದ ಸರಯೂ ನದಿ ತೀರಕ್ಕೆ ಹೋಗಿ ಬೀಡು ಬಿಡುವುದೆಂತಲೂ ಮತ್ತು

ಬಘ್ರಾಖಾನನು ಬಾದಶಹನ ಘನತೆ, ಗೌರವವನ್ನು ಬದಿಗೆ ಸರಿಸಿ ಸರಯೂ ನದಿಯ ಇನ್ನೊಂದು ತೀರದಿಂದ ಪ್ರಯಾಣ ಮಾಡಿ ಕೈಖಬಾದ್‌ನನ್ನು ಭೇಟಿಯಾಗಲು ಆಗಮಿಸ ಬೇಕೆಂತಲೂ ತೀರ್ಮಾನವಾಯಿತು. ತಂದೆ ಮಗನ ಪುನರ್ಮಿಲನದ ಸಲುವಾಗಿ ಜ್ಯೋತಿಷಿಗಳು ಉತ್ತಮಕಾಲವನ್ನು ನಿರ್ಧರಿಸಿದರು. ಮತ್ತು ಬಘ್ರಾಖಾನ್ ಕೂಡಲೇ ನೌಕೆಯನ್ನು ಏರಿ ನದಿಯ ಇನ್ನೊಂದು ಬದಿಗೆ ಆಗಮಿಸಿದ. ಹೊಳೆ ದಾಟಿ ಅವನು ಬಾದಶಹ ಕೈಖಬಾದನ ನಿವಾಸದತ್ತ ಮುನ್ನಡೆದ ಹಾಗೂ ಏಕಾಂತದ ತಾಣಕ್ಕೆ ಹೋಗಿ ತಲುಪಿದೊಡನೆಯೇ ಮೂರು ಬಾರಿ ನೆಲವನ್ನು ಚುಂಬಿಸಿದ. ಇನ್ನು ಅವನು ಬಾದಶಹನತ್ತ ಹೋಗಲು ಉದ್ಯುಕ್ತನಾಗುವಷ್ಟರಲ್ಲಿಯೇ ಕೈಖಬಾದ್ ಸಿಂಹಾಸನದಿಂದ ಇಳಿದು ಬಂದು ತಂದೆಯ ಪಾದಗಳ ಮೇಲೆ ತಲೆಯನ್ನಿಟ್ಟ. ಇಬ್ಬರೂ ಪರಸ್ಪರ ಆಲಿಂಗನದಲ್ಲಿ ಮೈಮರೆತು ಧಾರಾಕಾರವಾಗಿ ಅಶ್ರು ಪೂರಿತರಾದರು. ಆ ಪ್ರೇಮಭರಿತ ಪರಿಸ್ಥಿತಿಯ ಪ್ರಭಾವವು ಅನೇಕ ಆಸ್ಥಾನಿಕರ ಮೇಲೆ ಕೂಡ ಆಯಿತು ಹಾಗೂ ಅವರ ಕಣ್ಣುಗಳು ಹನಿಗೂಡಿದವು.

ಅವರಿಬ್ಬರೂ ಮನಃಸ್ಫೂರ್ತಿಯಾಗಿ ಭೇಟಿಯಾದ ನಂತರ ಬಘ್ರಾಖಾನನು ತನ್ನ ಮಗನ ಕೈಹಿಡಿದು ಅವನನ್ನು ಸಿಂಹಾಸನದ ಮೇಲೆ ಕೂರಿಸಿದ. ಹಾಗೂ ತಾನು ಖುದ್ದು ಅತ್ಯಂತ ವಿನೀತನಾಗಿ ಸಿಂಹಾಸನದ ಎದುರಿಗೆ ಕೈಕಟ್ಟಿ ಕಂಕಣಬದ್ಧನಾಗಿ ನಿಂತ. ತಂದೆಯ ಈ ನಡವಳಿಕೆಯನ್ನು ಕಂಡ ಕೈಖಬಾದನು ತತ್‌ಕ್ಷಣವೇ ಸಿಂಹಾಸನದಿಂದ ಇಳಿದು ಕೆಳಗೆ ಬಂದ ಮತ್ತು ಬಘ್ರಾಖಾನನನ್ನು ಸಿಂಹಾಸನದ ಮೇಲೆ ಕೂರಿಸಿದ್ದು ತಾನು ಆತನ ಮುಂದೆ ಚಕ್ಕಳಮಕ್ಕಳ ಹಾಕಿ ಕುಳಿತುಕೊಂಡ. ಆ ಕ್ಷಣದಲ್ಲಿ ತಂದೆ ಮಕ್ಕಳ ಮೇಲಿನಿಂದ ರೂಪಾಯಿ ಮತ್ತು ಚಿನ್ನದ ವರಹಗಳು ತೂರಲ್ಪಟ್ಟವು. ಕವಿಗಳು ಆ ಕ್ಷಣವನ್ನು ಸಾಕ್ಷಿಭೂತಗೊಳಿಸಲು ಆಶು ಕವಿತೆಯ ರಚನೆಯನ್ನು ಮಾಡಿದರು. ಹಾಗೂ ಉದ್ಘೋಷಕಾರರು ಸ್ವಸ್ತಿಯ ಘೋಷಣೆ ಮಾಡಿದ್ದು ಅಭಿನಂದನೆಗಳ ಸುರಿಮಳೆಯನ್ನು ಮಾಡಲಾರಂಭಿಸಿದರು. ಬಾದಶಹನ ಆಸ್ಥಾನದ ಘನತೆಗೆ ತಕ್ಕಂತಹ ಆನಂದವು ಎಲ್ಲೆಡೆಯಿಂದ ವ್ಯಕ್ತವಾಗಲಾಂಭಿಸಿತು. ಅವರಿಬ್ಬರೂ ಪರಸ್ಪರ ಪ್ರೀತಿ ವಾತ್ಸಲ್ಯದ ಭಾವದಲ್ಲಿ ಮುಳುಗೇಳುತ್ತಾ ಮಾತುಕತೆಯನ್ನಾಡಿದರು. ಸ್ವಲ್ಪ ಹೊತ್ತಿನ ನಂತರ ಬಘ್ರಾಖಾನ್ ಮಗನಿಂದ ಬೀಳ್ಕೊಟ್ಟ ನದಿಯನ್ನು ದಾಟಿ ತನ್ನ ಬಿಡಾರವನ್ನು ಸೇರಿದ. ನಂತರ ಪರಸ್ಪರ ಉಭಯತ್ರರ ನಡುವೆ ಉಡುಗೊರೆಗಳ ವಿನಿಮಯವಾಯಿತು. ಹಾಗೂ ಅವರಿಬ್ಬರ ನಡುವೆ ಸ್ವಾದಭರಿತ ಖಾದ್ಯಗಳು ಮತ್ತು ರಸಭರಿತ ಪಾನೀಯಗಳ ವಿನಿಮಯವಾಯಿತು. ಹಾಗೂ ವಿರಸದ ಭಾವವನ್ನು ತೊರೆದು ಉಭಯ ಸೈನ್ಯದ ಸೈನಿಕರು ಪರಸ್ಪರ ಸ್ನೇಹ ಭಾವದಿಂದ ಭೇಟಿಯಾಗಬೇಕೆಂದು ಉಭಯ ಸೈನ್ಯದ ಸೈನಿಕರಿಗೆ ಆಜ್ಞೆ ಜಾರಿಯಾಯಿತು. ಕೆಲವು ದಿನಗಳವರೆಗೆ ಬಘ್ರಾಖಾನ್ ಮತ್ತು ಕೈಖಬಾದನ ಭೇಟಿಯ ಪರಿಕ್ರಮ ಜಾರಿಯಲ್ಲಿತ್ತು. ಬಘ್ರಾಖಾನ್ ಮಗನನ್ನು ಭೇಟಿಯಾಗಲು ಆಗಮಿಸುತ್ತಿದ್ದ. ಹಾಗೂ ಮಗ ಅವನ ಗೌರವಾರ್ಥ ವಿಶೇಷ

ಸತ್ಕಾರ್ಯಗಳನ್ನು ಆಯೋಜನೆ ಮಾಡುತ್ತಿದ್ದ. ಅವರಿಬ್ಬರಿಗೂ ಪರಸ್ಪರ ಭೇಟಿಯಾಗುವುದು ಹಾಗೂ ಸಂತೋಷ ಮತ್ತು ನೆಮ್ಮದಿಯಿಂದ ಕಾಲ ಕಳೆಯುವುದು ಮತ್ತು ಭೋಜನ ಕೂಟಗಳನ್ನು ಆಯೋಜಿಸುವುದರ ವಿನಾಃ ಅವರಿಬ್ಬರಿಗೆ ಬೇರೆ ಯಾವ ತುರ್ತು ಕೂಡ ಇರಲಿಲ್ಲ ತಮ್ಮ ಗ್ರಂಥವಾದ "ಕುರಾನುಲ್ ಸಅದೈನ್" ಎಂಬ ತಮ್ಮ ಗ್ರಂಥದಲ್ಲಿ ಹಜರತ್ ಅಮೀರ್ ಖುಸ್ರುರವರು ತಂದೆ ಮಗನ ಮೇಲ್ಕಂಡ ಭೇಟಿಯ ಬಗ್ಗೆ ಸವಿವರವಾಗಿ ದಾಖಲಿಸಿದ್ದಾರೆ.

ಅವರಿಬ್ಬರು ಕೂಡ ಕೆಲಕಾಲದ ನಂತರ ಬೇರ್ಪಡುವ ಸಂದರ್ಭವುಂಟಾಯಿತು. ಆಗ ಕೈಖಬಾದ್‌ನನ್ನು ಉದ್ದೇಶಿಸಿ ಬಘ್ರಾಖಾನನು ನುಡಿದ "ಜಮ್‌ಶೀದ್‌ನ ನುಡಿಯ ಅನುಸಾರ ಹೇಳುವುದಾದರೆ ತನ್ನ ಅನುವು ಆಪತ್ತಿಗೆ ಅಂದರೆ ಶತ್ರುವಿನ ಆಕ್ರಮಣದ ಸಂದರ್ಭದಲ್ಲಿ ಅವನನ್ನು ಎದುರಿಸಲು ತನ್ನ ಅನುಕೂಲಕ್ಕೆ ತಕ್ಕಂತೆ ವೆಚ್ಚ ಮಾಡಲು ಅಥವಾ ಬರಗಾಲ ಬಂದಲ್ಲಿ ತನ್ನ ಪ್ರಜೆಗಳ ನೆರವಿಗೆ ಬರಲು ಯಾವ ಬಾದಶಹನ ಖಜಾನೆಯಲ್ಲಿ ಹಣವಿರುವುದಿಲ್ಲವೋ ಅವನನ್ನು ವಿಶ್ವವಿಜೇತ ಎಂದು ಕರೆಯಲು ಸಾಧ್ಯವಿಲ್ಲ" ನಂತರ ಬಘ್ರಾಖಾನ್ ಮತ್ತೆ ನುಡಿದ "ನಿನಗೆ ಕೆಲವು ಬುದ್ಧಿ ಮಾತುಗಳನ್ನು ಹೇಳಬೇಕೆಂದು ಮನಸ್ಸಾಗುತ್ತಿದೆ. ನೀನು ಸ್ವಸ್ಥ ಮನಸ್ಸಿನಿಂದ ಈ ಮಾತುಗಳತ್ತ ಗಮನ ಕೊಡು ಹಾಗೂ ಅವುಗಳ ಮೇಲೆ ಕ್ರಿಯಾಶೀಲನಾಗು" ಅವನಿಗೆ ಕೈಖಬಾದ್ ಪ್ರತ್ಯುತ್ತರವನ್ನು ನೀಡಿದ. "ನೀವು ನನ್ನ ಹಿರಿಯರು ಹಾಗೂ ಹಿತೈಷಿಗಳಾಗಿದ್ದೀರಿ ಮತ್ತು ನನ್ನನ್ನು ನಿದ್ರಾಲೋಕದಿಂದ ಎಚ್ಚರಿಸಬೇಕೆಂದು ಬಯಸುತ್ತಿದ್ದೀರಿ. ನನ್ನ ಒಳಿತಿಗೆ ಬೇಕಾಗುವ ಎಲ್ಲಾ ಬುದ್ಧಿವಾದವನ್ನು ಕೂಡ ನೀವು ಯಾವುದೇ ರೀತಿಯಲ್ಲಿ ಭೇದಭಾವವಿಲ್ಲದೆ ನನಗೆ ಅಪ್ಪಣೆ ನೀಡಿ. ನಾನು ಅದನ್ನು ಅನುಷ್ಠಾನಕ್ಕೆ ತರುವ ಸರ್ವ ಪ್ರಯತ್ನವನ್ನು ಮಾಡುತ್ತೇನೆ". ಬಘ್ರಾಖಾನನ ಪಿತೃವಾತ್ಸಲ್ಯವು ಒಮ್ಮೆಲೇ ಉಕ್ಕೇರಿತು. "ನಾನು ಇಷ್ಟೊಂದು ದೂರದಿಂದ ಪ್ರಯಾಸಕರವಾದ ಪ್ರಯಾಣವನ್ನು ಮಾಡುತ್ತಾ ಇಲ್ಲಿಗೆ ಬಂದ ಉದ್ದೇಶವೇ ನಿನ್ನನ್ನು ಸರಿ ದಾರಿಗೆ ಹಚ್ಚುವ ನನ್ನ ಕರ್ತವ್ಯವನ್ನು ಪೂರೈಸುವ ಸಲುವಾಗಿ ಹಾಗೂ ಯೌವನದ ಲೋಪಗಳಿಂದ ನಿನ್ನನ್ನು ಹೊರತರುವ ಸಲುವಾಗಿ." ಹೀಗೆ ಹೇಳಿದ ನಂತರ ಬಘ್ರಾಖಾನನು ದರಬಾರನ್ನು ಬರಖಾಸ್ತುಗೊಳಿಸಿದ. ತದ ನಂತರ ಆತನು "ಮುಲ್ಕ್ ನಿಜಾಮುದ್ದೀನ್ ಹಾಗೂ ಖವಾಮುದ್ದೀನನ್ನು ಕೂಡಾ ಕರೆ ಕಳಿಸು. ನಾನು ಅವರ ಸಮ್ಮುಖದಲ್ಲಿ ಕೆಲವು ಮಾತುಗಳನ್ನಾಡಬೇಕಾಗಿದೆ" ಎಂದನು. ಅವರಿಬ್ಬರೂ ಕೂಡಲೇ ಹಾಜರಾದರು. ಬಘ್ರಾಖಾನನು ಕೈಖಬಾದ್‌ನೊಡನೆ ನುಡಿದ, "ನನ್ನ ತಂದೆಯ ಉತ್ತರಾಧಿಕಾರಿಯಾಗಿ ನೀನು ಅಧಿಕಾರ ಪಡೆದುಕೊಂಡಿದ್ದರ ಬಗ್ಗೆ ನೀನು ದೇವರಿಗೆ ಚಿರಋಣಿಯಾಗಿರಬೇಕು. ನಿನಗೆ ಈ ಅಧಿಕಾರ ದೊರಕಿದ್ದರಿಂದ ನನಗೆ ಅತೀವ ಸಂತೋಷವಾಗಿತ್ತು ಮತ್ತು ದೆಹಲಿಯ ಆಳ್ವಿಕೆ ನನ್ನ ಅಧೀನದಲ್ಲಿ ಇರುವಂತೆ ನನಗೆ ಭಾಸವಾಗಿತ್ತು. ಆದರೆ ನಿನ್ನ

ನಿರ್ಲಕ್ಷ್ಯದ ಸುದ್ದಿಯು ನನಗೆ ತಲುಪಿದಾಗ ನನಗೆ ಅತ್ಯಾಶ್ಚರ್ಯವಾಯಿತು. ಏಕೆಂದರೆ, ಇಂತಹ ಭೋಗ ವಿಲಾಸದ ನಡುವೆ ನೀನು ಜೀವಂತವಾಗಿದ್ದೀಯ ಎಂದು ನಾನಾದರೂ ಹೇಗೆ ಪರಿಭಾವಿಸಲಿ? ನಾನಂತೂ ಬಹಳ ಕಾಲದಿಂದ ನೀನು ಮತ್ತು ನಾನು ಜೀವಂತ ಶವಗಳೆಂದು ಪರಿಭಾವಿಸಿದ್ದೇನೆ. ಮತ್ತು ಬಹುಕಾಲದ ಹಿಂದೆಯೇ ನಾನು ಸಂತಾಪವನ್ನು ಕೂಡಾ ನನಗೇ ನಾನೇ ಸಲ್ಲಿಸಿಕೊಂಡಿದ್ದೇನೆ. ನಿನ್ನ ಈ ದುರವಸ್ಥೆಯನ್ನು ಕಂಡು ನಾನು ದೆಹಲಿ ಮತ್ತು ಲಖ್ನೋತಿಯ ರಾಜ್ಯಭಾರವನ್ನು ಅತ್ಯಂತ ವಿಪತ್ಕಾರಿ ಎಂದು ಭಾವಿಸುತ್ತಿದ್ದೇನೆ. ವಿಶೇಷತಃ ನೀನು ನನ್ನ ತಂದೆಯ ವಿಧೇಯ ಮತ್ತು ಪ್ರೀತಿ ಪಾತ್ರ ನಿರಪರಾಧಿ ಸರದಾರರನ್ನು ಕೊಲ್ಲಿಸಿದ ದಿನ ಈ ರಾಜ್ಯದ ಅಧಃಪತನದ ಬಗ್ಗೆ ನನಗೆ ಸಂಪೂರ್ಣ ಖಾತರಿಯಾಯಿತು. ಈ ಕ್ರೌರ್ಯ ಮತ್ತು ಹಿಂಸೆಯ ಬರ್ಬರತೆಯ ಫಲವಾಗಿ, ಅಪ್ರತಿಮ ಸರ್ದಾರರು ತಮ್ಮ ಜೀವನವನ್ನು ಕಳೆದುಕೊಂಡರು ಇನ್ನೊಂದೆಡೆ ಆ ನಿರಪರಾಧಿಗಳ ಅಮಾನುಷ ಸಾವನ್ನು ಕಂಡು ಇತರೆ ಉನ್ನತ ಅಧಿಕಾರಿಗಳು ಭಯಗ್ರಸ್ತರಾದರು, ಮತ್ತು ಅಸಹಾಯಕರಾದರು. ಇನ್ನು ಈ ದೇಶದ ಸಂತೋಷ ನೆಮ್ಮದಿ ಮತ್ತು ಏಳಿಗೆಯ ಬಗ್ಗೆ ನನಗೆ ಯಾವ ಭರವಸೆಯೂ ಉಳಿದಿಲ್ಲ. ನಾನು ಏನನ್ನು ಕಂಡಿದ್ದೇನೆಯೋ ಇದರ ಬಗ್ಗೆ ನಿನಗೆ ಯಾವುದೇ ಅರಿವಿಲ್ಲ. ನಿನ್ನ ಕಿವಿ ಕಿವುಡಾಗಿವೆ ಕಣ್ಣುಗಳು ಮಬ್ಬಾಗಿವೆ, ಸ್ವಲ್ಪ ನೆನಪಿಸಿಕೋ ನನ್ನ ಅಣ್ಣ ಈ ದೇಶದ ಯುವರಾಜನಾಗಿದ್ದು, ಅವನು ತನ್ನ ಏಕ ಮಾತ್ರ ಪುತ್ರನನ್ನು ಹೊಂದಿದ್ದ. ನನ್ನ ಅಣ್ಣ ನನ್ನ ತಂದೆ ಇರುವಾಗಲೇ ಸಾವನ್ನಪ್ಪಿದ. ಅವನ ಮಗ ಕೆಖುಸ್ರು ಸರ್ವವಿಧದಲ್ಲಿಯೂ ರಾಜ್ಯದ ಹಕ್ಕುದಾರನಾಗಿದ್ದ. ಮತ್ತು ನಿನ್ನ ಬಲ ಭುಜದಂತಿದ್ದ. ಆದರೆ ಸ್ವಾರ್ಥಿ ಸರದಾರರು ಮತ್ತು ಸ್ನೇಹಿತರ ಹೇಳಿಕೆಯ ಮೇರೆಗೆ ನಿನ್ನ ಕ್ರೌರ್ಯಕ್ಕೆ ಬಲಿಯಾದ. ಈ ಸಂಚುಕೋರರು ಮತ್ತು ಭ್ರಷ್ಟರು ಹಾಗೂ ದ್ರೋಹಿಗಳ ಉದ್ದೇಶವೇನೆಂದರೆ, ಕೆಖುಸ್ರುವಿನ ನಂತರ ನಿನ್ನನ್ನು ಬಲಿಪಶುವನ್ನಾಗಿ ಮಾಡಬೇಕೆಂದು ಹಾಗೂ ಬಲ್ಬನ್ ವಂಶವನ್ನು ನಿರ್ನಾಮ ಮಾಡಿ ಈ ದುಷ್ಟರು ತಾವೇ ಸಿಂಹಾಸನವನ್ನು ಏರಬೇಕೆಂದು ಅವರ ದುರುದ್ದೇಶವಾಗಿದೆ. ನಿನಗೆ ನಿನ್ನ ಯೌವನದ ಪರಿವೆ ಇಲ್ಲದೆ ಇದ್ದಲ್ಲಿ ನಿನ್ನ ಮಕ್ಕಳು ಮತ್ತು ನಿನ್ನ ಅವಲಂಬಿತರ ಮೇಲೆ ಆದರೂ ಕರುಣೆಯನ್ನು ತೋರಿಸು ನಿನ್ನ ಈ ಮರವೆಯ ನಿದ್ರಾಲೋಕದಿಂದ ಎಚ್ಚರವಾಗು ಮತ್ತು ನಿನ್ನ ರಕ್ಷಣೆಯನ್ನು ಸ್ವತಃ ನೀನು ಮಾಡಿಕೋ. ಇವು ನನ್ನ ನಾಲ್ಕು ಬುದ್ದಿ ಮಾತುಗಳು, ಇದರ ಮೇಲೆ ನಿಗಾವಹಿಸು.

ಬುದ್ಧಿವಾದ:

೧. ನಿನ್ನ ಆರೋಗ್ಯ ಮತ್ತು ಜೀವದ ಕಡೆ ಗಮನ ನೀಡು ಹಾಗೂ ಚಿಕಿತ್ಸೆ ಮತ್ತು ಆರೋಗ್ಯ ರಕ್ಷಣೆಯತ್ತ ಕಾಳಜಿ ವಹಿಸತಕ್ಕದ್ದು. ನಿನ್ನ ಮುಖವನ್ನು ಒಮ್ಮೆ ಕನ್ನಡಿಯಲ್ಲಿ ನೋಡಿಕೋ. ಹಿಂದೆ ಗುಲಾಬಿ ಹೂವಿನಂತೆ ತಾಜಾ ಮತ್ತು ಸ್ನಿಗ್ಧತೆಯಿಂದ ಕೂಡಿತ್ತು.

ಇದೀಗ ಯೌವನದ ದುರ್ಬಳಕೆಯ ದೆಸೆಯಿಂದ ಕೋಲಿನಂತೆ ಶುಷ್ಕವಾಗಿ ಹಳದಿ ಬಣ್ಣಕ್ಕೆ ತಿರುಗಿದೆ. ವ್ಯಭಿಚಾರವು ನಿನ್ನನ್ನು ದುರ್ಬಲನನ್ನಾಗಿಸಿ ನಿರ್ವೀರ್ಯನನ್ನಾಗಿಸಿದೆ. ಈ ದುರ್ಗುಣವನ್ನು ತ್ಯಜಿಸು. ಏಕೆಂದರೆ ನಿನ್ನ ಜೀವಕ್ಕೆ ನೆಮ್ಮದಿ ಇಲ್ಲವಾದಲ್ಲಿ ಐಹಿಕ ಸುಖವನ್ನು ಹೇಗೆ ಆಸ್ವಾದಿಸುತ್ತೀಯಾ?

೨. ಈಗ ನಿನ್ನ ಸರದಾರರು ಮತ್ತು ರಾಜರ ಕಗ್ಗೊಲೆಗಳಿಗೆ ವಿರಾಮ ಹಾಕಿದಲ್ಲಿ ಹಿತಾಕಾಂಕ್ಷಿಗಳು ನಿನ್ನ ಮೇಲೆ ನಂಬಿಕೆಯನ್ನು ಹೊಂದುತ್ತಾರೆ. ಮತ್ತು ಇಲ್ಲಿ ನಿಂತಿರುವ ಸರದಾರರಾದ ಮುಲ್ಕ್ ನಿಜಾಮುದ್ದೀನ್ ಹಾಗೂ ಖವಾಮುದ್ದೀನ್‌ಗೆ ಬೇಸರವನ್ನುಂಟು ಮಾಡಬೇಡ. ಅವರು ಅನುಭವಿಗಳು ಹಾಗೂ ದೂರ ದೃಷ್ಟಿಯುಳ್ಳವರಾಗಿದ್ದಾರೆ. ಪಕ್ವತೆಯನ್ನು ಹೊಂದಿರುವ ಅನುಭವಿ ಸರದಾರರ ಪೈಕಿ ಇಬ್ಬರನ್ನು ನಿನ್ನ ಆಪ್ತ ಸಲಹೆಗಾರರಾಗಿ ಆಯ್ಕೆ ಮಾಡಿಕೋ. ಈ ನಾಲ್ಕು ಮಂದಿ ಸರದಾರರನ್ನು ರಾಜ್ಯದ ನಾಲ್ಕು ಆಧಾರ ಸ್ತಂಬಗಳೆಂದು ತಿಳಿದುಕೋ. ಒಬ್ಬನಿಗೆ ಮಂತ್ರಿಗಿರಿ, ಇನ್ನೊಬ್ಬನಿಗೆ ಧಾರ್ಮಿಕ ದತ್ತಿ ವ್ಯವಹಾರಗಳನ್ನು, ಮೂರನೆಯವನಿಗೆ ಸಿವಿಲ್ ವ್ಯವಹಾರಗಳ ಹಾಗೂ ನಾಲ್ಕನೆಯವನಿಗೆ ವಿದ್ಯಾಭ್ಯಾಸ ಕ್ಷೇತ್ರದ ಮಂತ್ರಿಗಳ ಹುದ್ದೆಯನ್ನು ನೀಡಿ ಅವರಿಗೆ ಉತ್ತೇಜನವನ್ನು ನೀಡು. ಮತ್ತು ಪ್ರತಿಯೊಂದು ನಿರ್ಧಾರವನ್ನು ಕೈಗೊಳ್ಳುವ ಮೊದಲು ಅವರೊಡನೆ ಸಮಾಲೋಚನೆಯನ್ನು ನಡೆಸು. ಅದರ ಸಾಮರ್ಥ್ಯಕ್ಕೆ ಅನುಗುಣವಾದ ಹುದ್ದೆ ಅವರಿಗೆ ದೊರಕದೆ ಇರಬಹುದು. ಆದ್ದರಿಂದ ಅವರ ಪೈಕಿ ಯಾರೊಬ್ಬನಿಗೂ ಇನ್ನೊಬ್ಬರ ಮೇಲೆ ಹೆಚ್ಚಿನ ಮಹತ್ವವನ್ನು ನೀಡಬೇಡ. ಹಾಗೆ ಮಾಡಿದ್ದಲ್ಲಿ ವಿದ್ರೋಹ ಮತ್ತು ಪಿತೂರಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

೩. ಯಾವುದಾದರೂ ರಹಸ್ಯವನ್ನು ಹೊರಗೆಡುವ ಬೇಕಾದಲ್ಲಿ. ಆ ನಾಲ್ಕು ಮಂದಿಯು ಸಮ್ಮುಖದಲ್ಲೇ ಹೇಳುವಂತನಾಗು. ಯಾರದರು ಒಬ್ಬನಿಗೆ ಮಾತ್ರ ನೀನು ಆ ಮಾತನ್ನು ಹೇಳಿದಲ್ಲಿ ಉಳಿದ ಮೂವರು ನಿನ್ನನ್ನು ವಿಶ್ವಾಸಕ್ಕೆ ಅರ್ಹನೆಂದು ತಿಳಿಯುವುದಿಲ್ಲ ಮತ್ತು ನಿನ್ನನ್ನು ಅನುಮಾನದಿಂದ ನೋಡಲಾರಂಭಿಸುತ್ತಾರೆ.

೪. ನಮಾಜ್ ಮತ್ತು ಉಪವಾಸ ವ್ರತವನ್ನು ನಿಷ್ಠೆಯಿಂದ ಆಚರಿಸಬೇಕು. ಈ ಕಡ್ಡಾಯ ಕರ್ಮಗಳನ್ನು ನೀನು ಕಡೆಗಣಿಸಿ, ಇಹಲೋಕ ಮತ್ತು ಪರಲೋಕದಲ್ಲಿ ಭ್ರಷ್ಟನಾಗಬೇಡ. ನಿನಗೆ ಕೆಲವು ಮುಲ್ಲಾಗಳು ನೆಪಗಳನ್ನು ಸೃಷ್ಟಿಸಿಕೊಟ್ಟದ್ದು, ಈ ಕಡ್ಡಾಯ ಉಪವಾಸದ ವ್ರತದಿಂದ ನಿನಗೆ ವಿನಾಯತಿಯನ್ನು ಒದಗಿಸಿ ಕೊಟ್ಟಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಪ್ರತಿದಿನ ನೀನು ಒಬ್ಬ ಗುಲಾಮನಿಗೆ ಸ್ವಾತಂತ್ರ್ಯ ನೀಡಿ ಬಿಡುಗಡೆ ಮಾಡಿದ್ದಲ್ಲಿ ಅಥವಾ ಅರವತ್ತು ಮಂದಿ ಅಸಹಾಯಕರಿಗೆ ಅನ್ನ ಸಂತರ್ಪಣೆ ಮಾಡಿದ್ದಲ್ಲಿ ನಿನಗೆ ರಂಜಾನಿನ ಉಪವಾಸ ಕಡ್ಡಾಯವಿಲ್ಲ ಎಂದು ನಿನಗೆ ಅವರು ದುರ್ಬೋಧನೆಯನ್ನು ಮಾಡಿದ್ದಾರೆ. ನೀನು ಆ ತತ್ತ್ವವನ್ನು ಅನುಸರಿಸುತ್ತಿದ್ದೀಯಾ ಎಂದು ನನಗೆ ತಿಳಿದು ಬಂದಿದೆ. ನನ್ನ ಪ್ರಿಯಸುತನೇ,

ಮತ ಪಂಡಿತರ ಮಾತು ಮತ್ತು ಕೃತಿಯಿಂದ ನೀನು ದೂರವಿದ್ದರೆ ನಿನಗೆ ಕ್ಷೇಮ. ಪ್ರಾಪಂಚಿಕ ಆಕರ್ಷಣೆಗೆ ಗುರಿಯಾಗಿ ದುರಾಶೆಗೆ ಬಲಿಯಾಗಿರುವ ಮತ ಪಂಡಿತರ ಬಳಿ ಧಾರ್ಮಿಕ ವಿಷಯಗಳ ಬಗ್ಗೆ ಅಭಿಪ್ರಾಯವನ್ನು ಕೋರಬಾರದು. ಆದರೆ ಪ್ರಪಂಚವನ್ನು ತೃಣ ಸಮಾನ ಎಂದು ಭಾವಿಸಿರುವ ಪ್ರಾಪಂಚಿಕ ಆಕರ್ಷಣೆಗಳನ್ನು ಮೀರಿರುವ ಉನ್ನತ ಚಾರಿತ್ಯವನ್ನು ಹೊಂದಿರುವ ಮತ ಪಂಡಿತರ ಬಳಿ ಧಾರ್ಮಿಕ ವಿಚಾರಗಳ ಬಗ್ಗೆ ಚರ್ಚೆ ನಡೆಸಬೇಕು.

ಬಘ್ರಾಖಾನನ ನಿರ್ಗಮನ:

ಮಗನನ್ನು ಉದ್ದೇಶಿಸಿ ಮೇಲ್ಕಂಡಂತೆ ಬುದ್ದಿವಾದವನ್ನು ನೀಡಿದ ಬಘ್ರಾಖಾನನು ಅಶ್ರುಪೂರಿತನಾದ. ಹಾಗೂ ಪುತ್ರ ವಾತ್ಸಲ್ಯದಿಂದ ಆವೇಗಕ್ಕೊಳಗಾಗಿ ಕೈಖಬಾದ್‌ನನ್ನು ಆಲಂಗಿಸಿದ ಹಾಗೂ ಅವನ ಕಿವಿಯಲ್ಲಿ ಅತ್ಯಂತ ಕೆಳದನಿಯಲ್ಲಿ ಹೇಳತೊಡಗಿದ. "ನಿನಗೆ ಅವಕಾಶ ಸಿಕ್ಕ ತಕ್ಷಣವೇ ನೀನು ಮುಲ್ಕ್ ನಿಜಾಮುದ್ದೀನ್‌ನನ್ನು ಸಾವಿಗಟ್ಟುವುದು ಆದ್ಯ ಕರ್ತವ್ಯವಾಗಿದೆ. ಇಲ್ಲವಾದಲ್ಲಿ ಅವನಿಗೆ ಅವಕಾಶ ದೊರೆತ ಕೂಡಲೇ ಅವನು ನಿನ್ನ ಜೀವ ಹರಣಮಾಡುವನು." ಹೀಗೆ ಮಗನಿಗೆ ಎಲ್ಲಾ ರೀತಿಯಲ್ಲಿಯೂ ಬೋಧನೆ ಮಾಡಿದ ಬಘ್ರಾಖಾನ್.

ತನ್ನ ರಾಜ್ಯಕ್ಕೆ ಮರಳಿದ. ಆ ಅನುಭವಿ ತಂದೆಗೆ ತನ್ನ ಮಗನ ಭವಿಷ್ಯತ್ತಿನ ಬಗ್ಗೆ (ಹಾಗೂ ಹಾಲಿ ಅವನ ವರ್ತಮಾನದ ಪರಿಸ್ಥಿತಿಯ ಬಗ್ಗೆ) ಎಂತಹಾ ತೀವ್ರ ಆತಂಕವಾಗಿತ್ತೆಂದರೆ ಆ ದಿನ ಪೂರ್ತಾ ಅವನು ಅನ್ನಾಹಾರವನ್ನು ಮುಟ್ಟಲಿಲ್ಲ. ಮತ್ತು ತನ್ನ ದರಬಾರಿಗಳೊಡನೆ ಹೀಗೆಂದು ನುಡಿದ, "ಇಂದು ನಾನು ದೆಹಲಿ ಮತ್ತು ನನ್ನ ಮಗನಿಂದ ಅಂತಿಮ ವಿದಾಯವನ್ನು ಹೊಂದಿ ಮರಳಿದ್ದೇನೆ." ಮಗನನ್ನು ಅವನ ಪಾಡಿಗೆ ಅವನನ್ನು ಬಿಟ್ಟು, ಬಘ್ರಾಖಾನನು ತಾನು ದೆಹಲಿ ಸಿಂಹಾಸನದ ಆಜ್ಞಾಧಾರಕನಾಗಿರುವುದೇ ತನಗೆ ಸೂಕ್ತ ಎಂದು ನಿರ್ಧರಿಸಿದ. ಹಾಗೂ ತನ್ನ ನಿರ್ಧಾರಕ್ಕೆ ಅನುಗುಣವಾಗಿ ನಡೆದುಕೊಂಡ. ಖಿಲ್ಜಿ ವಂಶದ ಆಳ್ವಿಕೆಯು ಆರಂಭಗೊಂಡ ನಂತರ ಬಘ್ರಾಖಾನನು ತನ್ನ ನಿರ್ಧಾರದ ರೀತ್ಯಾ ಜಲಾಲುದ್ದೀನ್ ಖಿಲ್ಜಿ, ಅಲ್ಲಾವುದ್ದೀನ್ ಮತ್ತು ಖುತ್ಬುದ್ದೀನ್ ಮೊದಲಾದ ರಾಜರ ಆಜ್ಞಾಧಾರಕನಾಗಿಯೇ ಉಳಿದ. ಹಾಗೂ ಸ್ವತಂತ್ರ ರಾಜನಾಗಬೇಕೆಂದು ಹಂಬಲವನ್ನು ತೊರೆದು, ಇತರೆ ಸಾಮಂತ ರಾಜರಂತೆ ದೆಹಲಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸುತ್ತಿದ್ದ. ಸುಲ್ತಾನ್ ತೊಘುಲಕ್ ಬಂಗಾಳಕ್ಕೆ ಹೋದಾಗ ಅವನನ್ನು ಬಘ್ರಾಖಾನ್ ಅತ್ಯಂತ ವೈಭವೋಪೇತವಾಗಿ ಸ್ವಾಗತಿಸಿದ. ಹಾಗೂ ಅವನ ಸನ್ನಿಧಿಯಲ್ಲಿ ಅತ್ಯಂತ ಅಮೂಲ್ಯವಾದ ಉಡುಗೊರೆಗಳನ್ನು ಒಪ್ಪಿಸಿದ. ತೊಘುಲಕ್ ಕೂಡಾ ಅವನನ್ನು ಗೌರವಾದರಗಳಿಂದ ಕಂಡು ಅವನನ್ನು ಲಖ್ನೋತಿ ಹಾಗೂ ಬಂಗಾಳದ ಒಡೆಯನೆಂದು ನೇಮಕ ಮಾಡಿದ್ದು, ಛತ್ರ ಚಾಮರಗಳ ರಾಜ ಮನ್ನಣೆಯನ್ನು ನೀಡಿದ,

ಕೈಖಬಾದನ ತಾತ್ಕಾಲಿಕ "ಸದಾಚಾರ":

ಸುಲ್ತಾನ್ ಮಅಜುದ್ದೀನ್ ಕೈಖಬಾದನು ತನ್ನ ತಂದೆಯಾದ ಬಘ್ರಾಖಾನ್‌ನನ್ನು ಭೇಟಿಯಾದ ನಂತರ ದೆಹಲಿಗೆ ಮರಳಿದ. ಆ ಯುವ ಬಾದಶಹನು ಕೆಲವು ದಿನಗಳ ಕಾಲ ತನ್ನ ತಂದೆಯ ಎಚ್ಚರದ ನುಡಿಗಳ ಅನುಸಾರ ನಡೆದುಕೊಂಡ. ಮತ್ತು ಭೋಗ ವಿಲಾಸದ ಬದುಕು ಹಾಗೂ ವಿಲಾಸೀ ವಿಹಾರಗಳಿಂದ ದೂರ ಉಳಿದ. ಆದರೆ ಈ ಪರಿಸ್ಥಿತಿ ಬಹುದಿನ ಉಳಿಯಲಿಲ್ಲ. ಕೈಖಬಾದನ ರಸಿಕತೆ ಮತ್ತು ಅವನ ವಿಲಾಸೀ ನಡವಳಿಕೆಗಳ ಖ್ಯಾತಿ ದಶದಿಕ್ಕುಗಳಲ್ಲಿಯೂ ಹರಡಿತ್ತು, ಸುಂದರಿಯರು ಮತ್ತು ವಾರಾಂಗನೆಯರು ಅವನ ಸುತ್ತಮುತ್ತ ಸುಳಿದಾಡುತ್ತಿದ್ದರು. ಮನಮೋಹಕ ಬೆಡಗಿಯರು ಮತ್ತು ಮಾಂತ್ರಿಕ ಆಕರ್ಷಣೆಯ ಲಲನೆಯರು ಶೃಂಗಾರ ಪೂರಿತವಾಗಿ ಅಲಂಕರಿಸಿಕೊಂಡು ಕೈಖಬಾದ್‌ನನ್ನು ಭೇಟಿಯಾಗಲು ಆಗಮಿಸುತ್ತಿದ್ದರು. ಹಾಗೂ ಅವನ ಅರಮನೆಯ ಬಾಗಿಲಲ್ಲಿ ಅವನಿಗಾಗಿ ಕಾದಿರುತ್ತಿದ್ದರು. ಅವನ ಪ್ರವೃತ್ತಿಯೇ ಶೃಂಗಾರ ಲೋಲುಪತೆ ಆಗಿದ್ದರಿಂದ ಅವನು ಅವರ ಮೇಲೆ ಪ್ರಸನ್ನನಾಗಿ ಅವರೊಡನೆ ಪ್ರೀತಿ ಪೂರ್ವಕವಾಗಿ ವರ್ತಿಸುತ್ತಿದ್ದ ಹಾಗೂ ಅವರಿಗೆ ಸರ್ವವಿಧದಲ್ಲಿ ಉತ್ತೇಜನವನ್ನು ನೀಡುತ್ತಿದ್ದ.

ಮಾಯಗಾತಿ ಮಹಿಳೆ :

ಒಂದು ದಿನ ಒಬ್ಬ ಸುಂದರ ಕನ್ಯೆಯು ತನ್ನ ಅಪರಿಮಿತ ಸೌಂದರ್ಯವನ್ನು ಮೆರೆಸುತ್ತಾ ಚಿನ್ನದ ಎಳೆಗಳ ಕಸೂತಿಯಿಂದ ಹೆಣೆದ ಜರಿಯ ಮೇಲು ವಸ್ತ್ರವನ್ನು ಉಟ್ಟು ಒಂದು ಇರಾಕಿ ಅಶ್ವದ ಮೇಲೆ ಆರೂಢಳಾಗಿ ಬಾದಶಹನು ಹೊರಡುವ ವೇಳೆಗೆ ಅವನೆದುರಿಗೆ ಬಂದಳು. ರಾಜನ ಛತ್ರ ಚಾಮರದ ಬಳಿ ಆಕೆ ತಲುಪಿ ಆ ಸಂಚುಗಾರ್ತಿಯು ತನ್ನ ಹಾವಭಾವಗಳಿಂದ ಆಕರ್ಷಿಸುತ್ತಾ ಸುಮಧುರ ಕಂಠದಿಂದ ಕವನವನ್ನು ವಾಚಿಸಿದಳು.

"ನಿಮ್ಮ ಪ್ರತಿ ಹೆಜ್ಜೆಗಳು ನನ್ನ ಕಣ್ಣಮೇಲೆ ಇಡಬೇಕೆಂದರೆ
ನಾನು ನಿಮ್ಮ ದಾರಿಯಲ್ಲಿ ನನ್ನ ಕಣ್ಣುಗಳನ್ನು ಹಾಸುವೆ. ನಿಮ್ಮ
ಹೆಜ್ಜೆಗಳು ಅವುಗಳ ಮೇಲೆ ಹಾದು ಹೋಗಲಿ."

ಆ ಕವನವನ್ನು ವಾಚಿಸಿದ ನಂತರ ಆ ವಿಪತ್ಕಾರೀ ಯುವತಿಯು ಗಜಲ್‌ನ ಮುಕ್ತಕವನ್ನು ಪ್ರಸ್ತುತ ಪಡಿಸಲು ಕೈಖಬಾದನ ಅನುಮತಿಯನ್ನು ಕೋರಿದಳು.

"ತಾವು ತಮ್ಮ ಜೀವವನ್ನು ಮರಭೂಮಿಯಲ್ಲಿ ತೆಗೆದುಕೊಂಡು
ಹೋಗುತ್ತಿರುವಿರಿ. ಅಲ್ಲಿ ಒಳ್ಳೇಯದೂ ಇದೆ ಕೆಟ್ಟದ್ದೂ ಇದೆ."

ಅವಳ ಅಂದ ಚೆಂದವನ್ನು ಕಂಡು ಮಾರು ಹೋಗಿದ್ದ ಕೈಖಬಾದನು ಆಕೆಯ

ಹಾವ ಭಾವಗಳಿಂದ ಮಂತ್ರ ಮಗ್ನನಾಗಿ ಅವಳ ದಾಸನಾದ. ಅವನ ತಂದೆಯ ಬುದ್ಧಿವಾದವು ಅವಳ ನೋಟ ಮಾತ್ರದಿಂದಲೇ ಕಣ್ಮರೆಯಾಗಿ ಹೋಯಿತು. ಅವನು ಅಲ್ಲಿಯೇ ರಸ್ತೆ ಬದಿಯಲ್ಲಿ ನಿಂತು ಅವಳಿಗಾಗಿ ಈ ಕವನವನ್ನು ವಾಚಿಸಿದ.

"ಚಂಚಲ ಮತ್ತು ಸುಮಧುರವಾಣಿಯ ಈ ಹುಡುಗಿಯರು ನಮ್ಮ
ಮೇಲೆ ಸಮಸ್ಯೆಗಳನ್ನು ಸೃಷ್ಟಿಸಿದ್ದಾರೆ. ಉಪವಾಸೀ ಜನರು
ಊಟದ ಹಾಸಿಗೆಯ ಮೇಲೆ ಮುಗಿ ಬೀಳುವಂತೆ
ನಮ್ಮ ಮನಸ್ಸಿನ ಸಹನಶಕ್ತಿ ಕಳೆದುಹೋಗಿದೆ."

ಈ ಕಾವ್ಯವನ್ನು ಉದ್ಧರಿಸಿದ ನಂತರ ಕೈಖಬಾದನು ಕುದುರೆಯ ಬೆನ್ನಿನಿಂದ ಕೆಳಗಿಳಿದ ಮತ್ತು ಅದೇ ಸ್ಥಳದಲ್ಲಿ ತನ್ನ ಬಿಡಾರವನ್ನು ಹೂಡಿದ. ಹಾಗೂ ಆ ಬೆಡಗಿಯಿಂದ ಗಾಯನವನ್ನು ಮತ್ತು ನರ್ತನವನ್ನು ಆಸ್ವಾದಿಸುವುದರಲ್ಲಿ ಮಗ್ನನಾದ. ಮತ್ತು ಅವನು ಈ ಕವನವನ್ನು ಉದ್ಧರಿಸಿದ

"ರಾತ್ರಿಯಲ್ಲಿ ನಾನು ಮದ್ಯಕುಡಿಯಬಾರದೆಂದು ಶಪಥ ಮಾಡಿದ್ದೆ.
ಆದರೆ ಈ ಹುಡುಗಿಯರ ಕಣ್ಣು, ತುಟಿಗಳು
ಮತ್ತು ಗಲ್ಲಗಳನ್ನು ನೋಡುತ್ತಿದ್ದಂತೆ ನನ್ನಲ್ಲಿ ಅಮಲು ಏರಿದೆ."

ಆ ಚಂಚಲ ಕನ್ಯೆಯು ಬಾದಶಹನಿಂದ ಆ ದ್ವಿಪದಿಯನ್ನು ಕೇಳಿ ಅದೇ ಲಯ, ಪ್ರಾಸ ಮತ್ತು ಬಂಧದಲ್ಲಿ ತಾನೊಂದು ದ್ವಿಪದಿಯನ್ನು ಹೇಳಿದಳು.

"ಶತಮಾನದಿಂದ ಸತತ ದೇವರ ಸ್ತುತಿಮಾಡುವವರೂ ನನ್ನನ್ನು
ಕಂಡ ತಕ್ಷಣ ತಮ್ಮ ತಲೆಯ ಕೂದಲುಗಳನ್ನು ಜಗ್ಗಿ ನನ್ನ ಮುಂದೆ ಬೀಳುತ್ತಾರೆ."

ಕೈಖಬಾದನು ಆ ವೈಯಾರಿಯ ಚತುರೋಕ್ತಿ, ಮಧುರ ಸಂಭಾಷಣೆ ಮೊದಲಾದುದವನ್ನು ಕಂಡು ದಂಗು ಬಡಿದು ಹೋದ. ಹಾಗೂ ಆಕೆಯನ್ನು ತನ್ನ ಪಾನಗೋಷ್ಠಿಯ ಸಾಕಿ (ಸಖಿ)ಯನ್ನಾಗಿ ನೇಮಕ ಮಾಡಿದ. ಆ ಸಂಚು ಪ್ರೇರಿತ ವಿಷಕನ್ಯೆಯು ಶರಾಬಿನ ಗಾಜಿನ ಲೋಟವನ್ನು ತುಂಬಿಸಿ ಬಾದಶಹನ ಸನ್ನಿಧಿಯಲ್ಲಿ ಅರ್ಪಿಸಿದಳು. ಪ್ರೇಮ ಪಾಶದಲ್ಲಿ ಬಂದಿಯಾದ ಬಾದಶಹನು ಆ ಮಧು ಪಾತ್ರೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡ ಮತ್ತು ಗೋಷ್ಠಿಯು ರಂಗೇರ ತೊಡಗಿತು. ಸರದಾರರು ಗಣ್ಯರು, ಕುಲೀನರು, ಮತ್ತು ಅಧಿಕಾರಿಗಳೆಲ್ಲರೂ ತಮ್ಮ ಬಾದಶಹನನ್ನು ಅನುಸರಿಸಿದರು. ಮತ್ತು ಬಾದಶಹನ ಡೇರೆಯ ಬಳಿಯಲ್ಲಿಯೇ ತಮ್ಮ ತಮ್ಮ ಪಾನಗೋಷ್ಠಿಗಳನ್ನು ಆಯೋಜಿಸಿದರು. ಹಗಲು ರಾತ್ರಿ ಎನ್ನದೆ ಆ ಪಾನಗೋಷ್ಠಿಗಳು ರಂಗೇರ ತೊಡಗಿದವು

ಪಥಭ್ರಷ್ಟತೆ ಮತ್ತು ರೋಗ:

ಕೈಖಬಾದನ ದೂರದೃಷ್ಟಿಯ ಕೊರತೆ ಮತ್ತು ಯೌವ್ವನದ ಪಥಭ್ರಷ್ಟತೆಯು

ಹಿಂದಿನಂತೆಯೇ ಮುಂದುವರೆಯಿತು. ಮತ್ತು ಅವನ ಸಮಯವೆಲ್ಲಾ ಸಂಪೂರ್ಣವಾಗಿ ಸೌಂಧರ್ಯದ ಆರಾಧನೆಯಲ್ಲಿ ಮತ್ತು ಪಾನಮತ್ತತೆಯಲ್ಲಿ ಕಳೆಯಲಾರಂಭಿಸಿತು. ಯಥಾ ರಾಜ ತಥಾ ಪ್ರಜಾ ಎಂಬಂತೆ ಜನತೆಯು ಕೂಡ ಬೀದಿ ಬೀದಿಯಲ್ಲಿ ಬಹಿರಂಗವಾಗಿ ಮದಿರೆಯ ದಾಸರಾಗಿ ಓಲಾಡತೊಡಗಿದರು. ರಾಜ ಮತ್ತು ಪ್ರಜೆಗಳಿಬ್ಬರೂ ಮುಂದಿನ ಪರಿಣಾಮದಿಂದ ವಿಮುಖರಾಗಿ ಭೋಗವಿಲಾಸದಲ್ಲಿ ಮುಳುಗೇಳ ತೊಡಗಿದರು. ಎಲ್ಲರ ಬುದ್ದಿಗೆ ಮಂಕು ಕವಿಯಿತು. ಇನ್ನೂ ಕೆಲವು ದಿನಗಳು ಅವರುಗಳು ಇದೇ ರೀತಿಯ ನಶೆಯಲ್ಲಿ ಕಳೆದರು. ಅನಿಯಮಿತ ಭೋಗ ವಿಲಾಸದ ಪರಿಣಾಮವಾಗಿ ಬಾದಶಹನ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಯಿತು ಮತ್ತು ಅವನು ತೀವ್ರ ದುರ್ಬಲನಾಗಿ ಹಾಸಿಗೆ ಹಿಡಿದ.

ಅಂತ್ಯ :

ಅವನ ಅತ್ಯಂತ ದುರಾದೃಷ್ಟ ಪರಿಸ್ಥಿತಿಯಲ್ಲಿ ಅವನಿಗೆ ತನ್ನ ತಂದೆಯ ಬುದ್ಧಿವಾದ ನೆನಪಿಗೆ ಬಂದಿತು. ಅವನು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಮಲ್ಲಿಕ್ ನಿಜಾಮುದ್ದೀನ್‌ಗೆ ಅಂತ್ಯ ಕಾಣಿಸುವುದು ಅಗತ್ಯವೆಂದು ಭಾವಿಸಿದ. ಅನಾರೋಗ್ಯದ ದೆಸೆಯಿಂದ ಕೈಖಬಾದನ ಮಾನಸಿಕ ಸ್ಥಿತಿಯು ಕೂಡ ಏರುಪೇರಾಗಿತ್ತು ಹೀಗಾಗಿ ಅವನು ಮಲ್ಲಿಕ್ ನಿಜಾಮ್‌ನನ್ನು ಸೂಕ್ತ ಕಾರಣದಿಂದ ಹಾಗೂ ಯೋಗ್ಯ ಕ್ರಮದಿಂದ ತನ್ನಿಂದ ದೂರ ಕಳಿಸಲು ಸಾಧ್ಯವಾಗಲಿಲ್ಲ ಬದಲಿಗೆ ಕೋಪ ಮತ್ತು ವಿರೋಧದ ಮಾರ್ಗವನ್ನು ಅವನು ಅನುಸರಿಸಿದ. ಮುಲ್ತಾನಿಗೆ ಹೋಗಿ ಅಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಅವನು ಮಲ್ಲಿಕ್ ನಿಜಾಮಗೆ ಆದೇಶ ನೀಡಿದ. ಬಾದಶಹನು ತನ್ನನ್ನು ದೂರ ಕಳಿಸುವ ಸಂಚನ್ನು ಹೂಡಿದ್ದಾನೆ ಎಂದು ಮಲ್ಲಿಕ್ ನಿಜಾಮ್‌ನಿಗೆ ಅರಿವಾಯಿತು. ಆದ್ದರಿಂದ ಅವನು ವಿಳಂಬ ನೀತಿಯನ್ನು ಅನುಸರಿಸತೊಡಗಿದ. ಅನೇಕ ನೆಪಗಳನ್ನು ಹೂಡಿ ಅವನ ಆಜ್ಞೆಯನ್ನು ಮೀರತೊಡಗಿದ. ಆಡಳಿತದಲ್ಲಿ ಪ್ರಮುಖ ಅಧಿಕಾರವನ್ನು ಪಡೆದಿದ್ದ ಅಧಿಕಾರಿಗಳು ಮತ್ತು ದರ್ಬಾರಿನ ಸರ್ದಾರರುಗಳು ಬಾದಶಹನ ಇಂಗಿತವನ್ನು ಅರ್ಥ ಮಾಡಿಕೊಂಡರು. ಹಾಗೂ ಮಲ್ಲಿಕ್ ನಿಜಾಮನು ಬಾದಶಹನ ದೃಷ್ಟಿಯಲ್ಲಿ ಕಳಂಕಿತ ವ್ಯಕ್ತಿಯಾಗಿದ್ದು ಅವನ ಬಗ್ಗೆ ಬಾದಶಹನಿಗೆ ತೀರಾ ಅಸಹನೆ ಇದೆ ಎಂಬುದು ಮನೆ ಮಾತಾಯಿತು. ದರ್ಬಾರಿನ ಸರ್ದಾರರ ಪೈಕಿ ಅನೇಕರು ಅವನಿಂದ ಈ ಹಿಂದೆ ಅನೇಕ ಸಂಕಷ್ಟಗಳಿಗೆ ಈಡಾಗಿದ್ದರು ಹೀಗಾಗಿ ಈ ಸದವಕಾಶವನ್ನು ಬಳಸಿಕೊಂಡು ಮತ್ತು ಕೈಖಬಾದನ ಮನಃಸ್ಥಿತಿಯನ್ನು ಬಳಸಿಕೊಂಡು ಕೆಲವು ಸರ್ದಾರರು ಯೋಜನೆಯೊಂದನ್ನು ರೂಪಿಸಿ ಮಲ್ಲಿಕ್ ನಿಜಾಮಗೆ ವಿಷಪ್ರಾಶಣ ಮಾಡಿ ಅವನ ಕೊಲೆ ಮಾಡಿದರು.

ಮಲ್ಲಿಕ್ ನಿಜಾಮ್‌ನ ಮರಣದ ನಂತರ ಕೈಖಬಾದನು ಮೀರ್ ಜಾಮ್‌ದಾರ್ ಮತ್ತು ಸಮಾನಾದ ರಾಜ ಪ್ರತಿನಿಧಿಯಾಗಿದ್ದ ಮಲ್ಲಿಕ್ ಜಲಾಲುದ್ದೀನ್ ಫೈರೋಜ್

ಬಿನ್ ಮುಲ್ಕ್ ಯಗ್ರಸ್ ಖಿಲ್ಜಿಯನ್ನು ಸಮಾನಾದಿಂದ ವಾಪಸ್ ಕರೆಸಿದ ಮತ್ತು ಅವನಿಗೆ ಶಾಯಸ್ತಖಾನ್ ಎಂಬ ಬಿರುದನ್ನು ನೀಡಿ "ಆರಿಜೇ ಮುವಾಲಿಕ್" (ಅಂದರೆ ಸೈನ್ಯದ ಶಿಸ್ತು ಮತ್ತು ವ್ಯವಸ್ಥೆಯನ್ನು ನಿರ್ವಹಣೆ ಮಾಡುವ ಹುದ್ದೆ) ಹುದ್ದೆಯನ್ನು ನೀಡಿದ ಹಾಗೂ ಅವನಿಗೆ ಬರನ್‌ನ ಜಹಗೀರನ್ನು ಬಳುವಳಿಯಾಗಿ ನೀಡಿದ.

ಕೇವಮರಸ್‌ನ ಪಟ್ಟಾಭಿಷೇಕ:

ಬಾದಶಹನ ಅನಾರೋಗ್ಯ ದಿನೇ ದಿನೇ ಹೆಚ್ಚುತ್ತಲೇ ಹೋಯಿತು ಮತ್ತು ಅವನಿಗೆ ಲಕ್ವಾ ಮತ್ತು ಪಾರ್ಶ್ವವಾಯು ಉಂಟಾಗಿ ಅವನು ಹಾಸಿಗೆ ಹಿಡಿದು ನರಳತೊಡಗಿದ. ಅವನ ಈ ದುರವಸ್ಥೆಯಿಂದ ಇತರೆ ಸರ್ದಾರರುಗಳ ಬಾದಶಹನ ಅಧಿಕಾರ ಹಿಡಿಯುವ ಕನಸು ಗರಿಗೆದರ ತೊಡಗಿತು. ಈ ಪರಿಸ್ಥಿತಿಯನ್ನು ಅವಲೋಕಿಸಿದ ಕೆಲವು ಗಣ್ಯ ಅಧಿಕಾರಿಗಳು ಆತನ ಮಗನಾದ ಕೇವಮರಸ್‌ನನ್ನು ರಾಜ್ಯದ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದು ಆಲೋಚಿಸಿದರು. ಹಾಗೂ ಕೇವಮರಸ್‌ಗೆ ಸುಲ್ತಾನ್ ಶಂಸುದ್ದೀನ್ ಎಂಬ ಬಿರುದನ್ನು ಕೂಡ ನೀಡಬೇಕೆಂಬುದು ಅವರ ಆಲೋಚನೆಯಾಗಿತ್ತು ಆಗ ಕೇವಮರಸ್ ಮೂರು ವರ್ಷ ವಯಸ್ಸಿನವನಾಗಿದ್ದ.

ಸಂಚು ಮತ್ತು ದಂಗೆ:

ಬಾದಶಹನ ಸರ್ದಾರರುಗಳು ಎರಡು ಗುಂಪುಗಳಲ್ಲಿ ವಿಂಗಡಣೆಯಾದರು. ಒಂದು ಗುಂಪು ಖಿಲ್ಜಿ ಸರ್ದಾರರುಗಳಿಂದ ಕೂಡಿದ್ದು ಅವರುಗಳು ಜಲಾಲುದ್ದೀನ್ ಫೈರೋಜ್‌ಗೆ ವಿಧೇಯರಾಗಿದ್ದು ಅವನನ್ನು ಬಾದಶಹನನ್ನಾಗಿ ಮಾಡಬೇಕೆಂಬ ಇರಾದೆಯುಳ್ಳವರಾಗಿದ್ದರು. ಹಾಗೂ ಅವನೊಡನೆ ಬಹಾದ್ದೂರ್ ಪುರದಲ್ಲಿ ವಾಸವಾಗಿದ್ದರು. ಇನ್ನೊಂದು ಗುಂಪು ತುರ್ಕಿ ಸರ್ದಾರರುಗಳದಾಗಿತ್ತು. ಈ ಗುಂಪು ಮುಲ್ಕ್ ಎತ್‌ಮರ್ಕಚನ್ ಮತ್ತು ಮುಲ್ಕ್ ಎತ್‌ಮರ್‌ಸರ್ಖರವರುಗಳ ಪ್ರಭಾವಕ್ಕೆ ಒಳಗಾಗಿದ್ದು ಸದರಿಯವರು ಕೇವಮರಸ್‌ನ ಬೆಂಬಲಿಗರಾಗಿದ್ದರು. ಈ ಗುಂಪಿನ ಆವಾಸ ಸ್ಥಾನವು ನಾಸೀರಿ ವೇದಿಕೆಯ ಬಳಿಯ ಮೈದಾನದಲ್ಲಿತ್ತು. ಕೈಖಬಾದನು ಕೇಲೋಖರಿಯ ಅರಮನೆಯಲ್ಲಿ ಕಾಯಿಲೆಯಿಂದ ಜರ್ಝರಿತನಾಗಿದ್ದು ಅಸಹಾಯಕನಾಗಿ ನರುಳುತ್ತಾ ಬಿದ್ದಿದ್ದ. ರಾಜಸೇವಕರು ಅವನ ಜೊತೆಯಲ್ಲಿದ್ದರು ಮತ್ತು ಅವನ ಚಿಕಿತ್ಸೆ ಮತ್ತು ಸೇವೆಯಲ್ಲಿ ನಿರತರಾಗಿದ್ದರು. ಇಂತಹ ಪ್ರಸಂಗವು ಏರ್ಪಟ್ಟಾಗ ರಾಜ್ಯದ ಶಾಂತಿ ಮತ್ತು ನೆಮ್ಮದಿಗೆ ಭಂಗ ಬರುತ್ತದೆ ಮತ್ತು ಅನೇಕಾನೇಕ ಸಂಚುಗಳು ಮತ್ತು ಕ್ಷೋಭೆಗಳು ಮೂಡುತ್ತವೆ. ಅಂತೆಯೇ ಅಲ್ಲಿಯೂ ಕೂಡ ವಿವಿಧ ರೀತಿಯಲ್ಲಿ ವ್ಯಾಜ್ಯಗಳು ಸೃಷ್ಟಿಯಾದವು ಮತ್ತು ಒಂದು ಬಣವು ಇನ್ನೊಂದು ಬಣದ ತೀವ್ರ ವಿರೋಧಿಗಳಾಗಿ ಪರಿಣಮಿಸಿದರು. ತುರ್ಕಿ ಸರ್ದಾರರುಗಳು ಸಕ್ರಿಯವಾಗಿ ಕೇವುಮರ್‌ಸ್‌ನನ್ನು ತಮ್ಮ ಸಾಧೀನದಲ್ಲಿಟ್ಟುಕೊಂಡು ಅವನನ್ನು ತಮ್ಮ ನಾಮಕಾವಸ್ಥೆಯ

ಒಂದು ಕಾರಣದಿಂದ ತೀವ್ರ ವಿರಸವನ್ನು ಹೊಂದಿದ್ದ. ಆದರೆ ಅವನು ಚೆಂಗೇಸ್‌ಖಾನ್‌ನ ಭಯದ ದೆಸೆಯಿಂದ ಈ ವಿರಸವನ್ನು ಬಹಿರಂಗಗೊಳಿಸಿರಲಿಲ್ಲ. ಆದ್ದರಿಂದ ಅವನು ಬಹಿರಂಗವಾಗಿ ತನ್ನ ಪತ್ನಿಯನ್ನು ಅತ್ಯಂತ ಸಂತೋಷದಲ್ಲಿ ಇಡಲು ಪ್ರಯತ್ನ ಮಾಡುತ್ತಿದ್ದ. ಆದರೆ ಅಂತರಂಗದಲ್ಲಿ ಅವನು ತನಗಾಗಿ ಬೇರೆ ಒಂದು ಸೂಕ್ತ ವಾಸ್ತವ್ಯದ ಹುಡುಕಾಟವನ್ನು ನಡೆಸಿದ್ದ. ಆದರೆ ಅವನಿಗೆ ಮುಂದೇನು ಮಾಡಬೇಕೆಂಬ ವಿಷಯವೇ ತೋಚಲಿಲ್ಲ. ಅಂತೂ ಕಾಲ ಕೂಡಿ ಬಂದು ಅವನಿಗೆ ಸುಸಂಧಿಯೊಂದು ಒದಗಿಬಂದಿತು. ಸಿಂಧ್ ನದಿಯ ತೀರದಲ್ಲಿ ಚಂಗೇಸ್‌ಖಾನನು ಸುಲ್ತಾನ್ ಜಲಾಲುದ್ದೀನ್ ಖವಾರ್‌ಜಮಯನ್ನು ನಾಶ ಮಾಡುವ ಪ್ರಕ್ರಿಯೆಯಲ್ಲಿ ನಿರತನಾಗಿದ್ದ. ಅವನು ನಂತರ ಇರಾನ್ ಮತ್ತು ತವರಾನ್‌ನ ಯುದ್ಧಗಳಲ್ಲಿ ಜಯಶಾಲಿಯಾಗಿ ತನ್ನ ಸ್ವದೇಶಕ್ಕೆ ಮರಳಿದ. ಖಾಲೀಜ್‌ಖಾನ್‌ನು ಚಂಗೇಸ್‌ಖಾನ್‌ನ ದೀರ್ಘಕಾಲದ ಗೈರು ಹಾಜರಿಯ ಸದುಪಯೋಗವನ್ನು ಪಡೆದುಕೊಂಡ ಮತ್ತು ಘೌರ್ ಮತ್ತು ಜರ್ಜಸ್‌ಸ್ತಾನ್‌ನ ಪರ್ವತ ಪ್ರದೇಶಗಳ ಸಮೀಕ್ಷೆಯನ್ನು ಮಾಡಿದ. ಹಾಗೂ ಆ ಪ್ರದೇಶದ ಬಲಿಷ್ಠತೆ ಮತ್ತು ದೃಢತೆಯ ಬಗ್ಗೆ ಅವನು ಸಂಪೂರ್ಣವಾಗಿ ಪರಿಚಯವನ್ನು ಮಾಡಿಕೊಂಡ. ಖಾಲೀಜ್‌ಖಾನನು ಒಂದು ದಿನ ಹೊಂಚು ಹಾಕಿ ತನ್ನ ಪತ್ನಿ ಮತ್ತು ಮಕ್ಕಳು ಹಾಗೂ ತನ್ನ ಸುಮಾರು ಇಪ್ಪತ್ತು ಸಾವಿರ ಮಂದಿಯೊಂದಿಗೆ ಕೂಡಿದ್ದ ತನ್ನ ಇಡೀ ಬುಡಕಟ್ಟಿನ ಜೊತೆಯಲ್ಲಿ ಅವನು ಚೆಂಗೇಸ್‌ಖಾನ್‌ನಿಂದ ಬೇರ್ಪಟ್ಟು, ಆ ಪರ್ವತ ಪ್ರದೇಶದತ್ತ ಪರಾರಿಯಾದ. ಅಲ್ಲಿ ಅವನು ತನ್ನ ಖಾಯಂ ನಿವಾಸವನ್ನು ಕಂಡುಕೊಂಡ ಹಾಗೂ ಕೆಲವೇ ದಿನಗಳಲ್ಲಿ ಖಾಲೀಜ್‌ಖಾನ್‌ನು ಅತ್ಯಂತ ಬಲಾಢ್ಯನಾಗಿ ಹೊರಹೊಮ್ಮಿದ. ಚೆಂಗೇಸ್‌ಖಾನನ ಮರಣದ ನಂತರ ಅವನ ವಾರೀಸುದಾರರು ಯಾರೂ ಕೂಡ ಖಾಲೀಜ್‌ನತ್ತ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಲಿಲ್ಲ. ಮತ್ತು ಇದರ ಫಲವಾಗಿ ಖಾಲೀಜ್‌ಖಾನನ ಸಂತತಿ ಹಾಗೂ ಅವನ ಬುಡಕಟ್ಟಿನ ಶಕ್ತಿ ಸಾಮರ್ಥ್ಯ ಮತ್ತು ಅಧಿಕಾರದ ಪ್ರಭಾವ ವಲಯವು ದಿನೇ ದಿನೇ ಹೆಚ್ಚಾಗ ತೊಡಗಿತು.

ಖಿಲ್ಜಿ ಪದದ ವ್ಯುತ್ಪತ್ತಿ:

ಘೋರಿ ರಾಜರು ಮತ್ತು ಅವರಿಂದ ಶೋಷಣೆಗೊಳಗಾದ ಗುಲಾಮರು ಹಿಂದೂಸ್ಥಾನದಲ್ಲಿ ವಿಜಯಿಗಳಾಗಿ ಬೇರೂರಿದಾಗ ಖಿಲ್ಜಿ ಬುಡಕಟ್ಟಿನ ಜನರು ತಂಡೋಪತಂಡವಾಗಿ ಹಿಂದೂಸ್ಥಾನವನ್ನು ಪ್ರವೇಶಿಸಿ ರಾಜನ ಬಳಿ ಪ್ರಮುಖ ಹುದ್ದೆಗಳಲ್ಲಿ ನೇಮಕಗೊಂಡರು. ಆ ಖಿಲ್ಜಿಗಳ ಪೈಕಿ ಅನೇಕ ವ್ಯಕ್ತಿಗಳು ತುಂಬಾ ಹೆಚ್ಚಿನ ಅಧಿಕಾರಯುತ ಮತ್ತು ಪ್ರಭಾವೀ ಹುದ್ದೆಗಳಲ್ಲಿ ನಿರತರಾಗಿ ರಾಜನ ಬಳಿ ಸರ್ದಾರರಾಗಿ ಮತ್ತು ಉನ್ನತ ಹುದ್ದೆಗಳಲ್ಲಿ ಕರ್ಮಚಾರಿಗಳಾಗಿ ನೇಮಕಗೊಂಡರು. ಈ ಪ್ರಮುಖ ಖಿಲ್ಜಿ ಸರ್ದಾರರ ಪೈಕಿ ಸುಲ್ತಾನ್ ಜಲಾಲುದ್ದೀನ್ ಫೈರೋಜ್ ಶಾಹ

ಮತ್ತು ಸುಲ್ತಾನ್ ಮೆಹಮೂದ್ ಖಿಲ್ಜಿ ಮಂದವಿ ಎಂಬುವವನ ತಂದೆ ಕೂಡ ಸೇರಿದ್ದರು. ಮೇಲೆ ಹೇಳಿದ ಇತಿಹಾಸಕಾರನ ದಾಖಲಾತಿಯ ಪ್ರಕಾರ ಖಾಲೀಜ್‌ಖಾನ್‌ನ ಬಗ್ಗೆ ಈ ಸರ್ದಾರರುಗಳು ಖಾಲೀಜ್‌ಖಾನ್‌ನ ಬಾಂಧವ್ಯದ ದೆಸೆಯಿಂದ ಈ ಸರ್ದಾರರುಗಳನ್ನು ಸಾಮಾನ್ಯವಾಗಿ ಜನರು ಖಾಲೀಜ್ ಎಂದು ಕರೆಯುತ್ತಿದ್ದರು. ಜನಬಳಕೆಯಲ್ಲಿ ಖಾಲೀಜ್ ಎನ್ನುವಂತಹ ಶಬ್ದವು ಅಪಭ್ರಂಶಹೊಂದಿ ಖಿಲ್ಜಿ ಎಂದು ಬೇರೆಯ ರೂಪವನ್ನು ತಾಳಿತು. ಆದರೆ "ತಾರೀಕೆ ಸರ್‌ಜೋಖಿಯಾನ್" ಗ್ರಂಥಕರ್ತನ ಅಭಿಪ್ರಾಯವು ಇದಕ್ಕಿಂತ ಭಿನ್ನವಾಗಿದೆ. ಅವನ ಹೇಳಿಕೆಯ ಪ್ರಕಾರ ತುರ್ಕ್‌ಬಿನ್ ಯಾಫತ್‌ನ ಹನ್ನೊಂದು ಮಂದಿ ಪುತ್ರರ ಪೈಕಿ ಒಬ್ಬನ ಹೆಸರು ಖಿಲ್ಜಿ ಎಂದು ಇತ್ತು. ಖಿಲ್ಜಿ ಆತನ ಸಂತತಿಯ ಹೆಸರಾಗಿ ಪ್ರಸಿದ್ಧಿ ಹೊಂದಿತು. ಇತಿಹಾಸಕಾರ ಫರಿಷ್ತ ಕೂಡ ಇದೇ ಅಭಿಪ್ರಾಯವು ಸರಿಯೆಂದು ಒಪ್ಪುತ್ತಾನೆ. ಏಕೆಂದರೆ ನಿಜಾಮುದ್ದೀನ್ ಇತಿಹಾಸಕಾರನ ಹೇಳಿಕೆಯನ್ನು ಒಪ್ಪುವುದಾದಲ್ಲಿ ಖಿಲ್ಜಿಗಳ ಅವನ ಹೇಳಿಕೆಯ ತುರ್ಕ್ ಬಿನ್ ಯಾಫತ್‌ನ ಮಂದಿ ಪುತ್ರರ ಪೈಕಿ ಒಬ್ಬನ ಹೆಸರು ಖಿಲ್ಜಿ ಎಂದಾಗಿತ್ತು, ಆತನ ಸಂತತಿಯು ಮುಂದುವರೆದು ಖಿಲ್ಜಿ ಎಂಬ ಹೆಸರಿನಿಂದ ಪ್ರಖ್ಯಾತಿಯನ್ನು ಹೊಂದಿತು ಇತಿಹಾಸಕಾರ ಫರಿಷ್ತ ಕೂಡ ಇದೇ ಮಾತನ್ನು ಸರಿಯೆಂದು ಒಪ್ಪುತ್ತಾನೆ. ಏಕೆಂದರೆ ಒಂದು ವೇಳೆ ನಿಜಾಮುದ್ದೀನ್ ಇತಿಹಾಸಕಾರರ ಹೇಳಿಕೆಯನ್ನು ಒಪ್ಪುವುದಾದಲ್ಲಿ ಮತ್ತೆ ಖಿಲ್ಜಿಗಳ ಅಸ್ತಿತ್ವವು ಚೆಂಗೇಸ್ ಕಾಲಾವಧಿಯ ನಂತರ ಎಂದು ಸಾಬೀತಾಗುತ್ತದೆ. ಮತ್ತು ಈ ಅಂಶವು ಸಂಪೂರ್ಣವಾಗಿ ತಪ್ಪು ಗ್ರಹಿಕೆಯಿಂದ ಕೂಡಿದೆ. ಏಕೆಂದರೆ ಅನೇಕ ಇತಿಹಾಸ ಗ್ರಂಥಗಳ ಅವಲೋಕನದಿಂದ ತಿಳಿದು ಬಂದಿರುವ ವಿಷಯವೇನೆಂದರೆ, ಅಮೀರ್ ನಾಸೀರುದ್ದೀನ್ ಮತ್ತು ಸುಲ್ತಾನ್ ಮೆಹಮೂದ್ ಘಜ್ನವಿಯ ಅನೇಕ ಮಂದಿ ಸರ್ದಾರರು ಖಿಲ್ಜಿಗಳೆಂದು ಕರೆಯಲ್ಪಡುತ್ತಿದ್ದರು. ಮತ್ತು ಈ ಇಬ್ಬರು ರಾಜರುಗಳು ಕೂಡ ಚೆಂಗೇಸ್‌ಖಾನ್‌ನ ಕಾಲಾವಧಿಗಿಂತ ಮುಂಚಿತವಾಗಿ ಆಳ್ವಿಕೆಯನ್ನು ನಡೆಸಿದ್ದಾರೆ ಮತ್ತು ಖಾಲೀಜ್‌ಖಾನನು ಸ್ವತಃ ಖಿಲ್ಜಿ ವಂಶಸ್ಥರಿಂದ ಬಾಂಧವ್ಯವನ್ನು ಹೊಂದಿದ್ದು ಖಿಲ್ಜಿ ವಂಶಸ್ಥನಾಗಿದ್ದ ಎಂಬ ಅನುಮಾನ ಕೂಡ ಈ ಮೂಲಕ ಕಂಡುಬರುತ್ತದೆ. ಹಾಗೂ ಸುಲ್ತಾನ್ ಜಲಾಲುದ್ದೀನ್ ದೆಹಲ್ವಿ ಮತ್ತು ಸುಲ್ತಾನ್ ಮೆಹಮೂದ್ ಮಂದವಿ ಕೂಡ ಆತನ ವಂಶಸ್ಥರಾಗಿದ್ದಾರೆ.

ಒಟ್ಟಾರೆ ಹೇಳುವುದಾದಲ್ಲಿ ಜಲಾಲುದ್ದೀನ್ ಖಿಲ್ಜಿ ಮಹಾನ್ ವೈಭವ ಮತ್ತು ಅಟ್ಟಹಾಸದಿಂದ ಬಹದ್ದೂರಪುರದಿಂದ ಕೆಲೋಖರಿಗೆ ಆಗಮಿಸಿದ. ಕೆಲವು ದಿನಗಳ ತನಕ ಆತನು ಸುಲ್ತಾನ್ ಶಂಸುದ್ದೀನ್‌ನನ್ನು ಸಿಂಹಾಸನದ ಮೇಲೆ ಕೂರಿಸಿದ್ದು ಸ್ವತಃ ಆತನ ಪ್ರತಿನಿಧಿಯಾಗಿ ಕರ್ತವ್ಯವನ್ನು ನಿರ್ವಹಿಸಿದ. ಆದರೆ ೬೮೮ನೇ ಇಸವಿಯಲ್ಲಿ ಆತನು ಶಂಸುದ್ದೀನ್‌ನ ಸಂಹಾರವನ್ನು ಮಾಡಿದ ಮತ್ತು ತನ್ನನ್ನೇ ತಾನು ಬಾದಶಹನೆಂದು ಘೋಷಿಸಿಕೊಂಡ. ಸಿಂಹಾಸನವನ್ನು ಏರುವ ಸಂದರ್ಭದಲ್ಲಿ ಅವನ

ವಯಸ್ಸು ೭೦ ವರ್ಷವಾಗಿತ್ತು. ಹಿಂದಿನ ರಾಜ ಮಹಾರಾಜರ ಸಂಪ್ರದಾಯಕ್ಕೆ ವಿರೋಧವಾಗಿ ಜಲಾಲುದ್ದೀನನು ಛತ್ರ ಚಾಮರಗಳ ಬಣ್ಣವನ್ನು ಕೆಂಬಣ್ಣದ ಬದಲಾಗಿ ಶ್ವೇತವರ್ಣದ ಛತ್ರ ಚಾಮರಗಳನ್ನು ಸ್ವೀಕರಿಸಿದ. ಹಾಗೂ ಅವನು ಕ್ರೌರ್ಯ ಮತ್ತು ಹಿಂಸೆಯನ್ನು ಬದಿಗೆ ಸರಿಸಿ ಆತನು ಪ್ರೀತಿ, ದಯೆ ಮತ್ತು ಕರುಣೆಯ ಮನೋಭಾವವನ್ನು ತನ್ನದಾಗಿಸಿದ. ಈ ಗುಣಗಳನ್ನು ಅವನು ಸಂಪೂರ್ಣವಾಗಿ ಅಂತರ್ಗತ ಮಾಡಿಕೊಂಡಿದ್ದು ಇಡೀ ಜೀವನಾದ್ಯಂತ ಯಾರಿಗೂ ಒಂದಿಷ್ಟು ಕೂಡ ನೋವನ್ನು ಉಂಟುಮಾಡದೆ ಸುವ್ಯವಸ್ಥಿತವಾಗಿ ರಾಜ್ಯಭಾರವನ್ನು ನಡೆಸಿದ. ಜಲಾಲುದ್ದೀನ್‌ನಿಗೆ ಅಖಂಡ ದೆಹಲಿಯ ಮೇಲೆ ಸಂಪೂರ್ಣವಾಗಿ ನಂಬಿಕೆ ಇರಲಿಲ್ಲ ಅವನು ಕೆಲವು ಕೇಲೋಖರಿಯನ್ನು ತನ್ನ ಅಧಿಕೃತ ವಾಸ್ತವ್ಯವೆಂದು ನಿರ್ಧರಿಸಿ ಅಲ್ಲಿ ಅವನು ಶಾಶ್ವತವಾಗಿ ನೆಲಸಿದ. ಹಾಗೂ ಮಲಿಜುದ್ದೀನನು ಅಲ್ಲಿ ಈ ಹಿಂದೆ ಆರಂಭಿಸಿದ್ದ ನಿರ್ಮಾಣ ಕಾರ್ಯವನ್ನು ಸಂಪೂರ್ಣಗೊಳಿಸಿದ.

ನವನಗರದ ನಿರ್ಮಾಣ:

ಜಲಾಲುದ್ದೀನನು ಜಮುನಾ ನದಿಯ ತೀರದಲ್ಲಿ ಒಂದು ಅತ್ಯಂತ ಸುಂದರವಾದ ತೋಟದ ನಿರ್ಮಾಣವನ್ನು ಕೈಗೊಂಡ. ಮತ್ತು ಆ ತೋಟದ ಸುತ್ತಮುತ್ತಲಿನಲ್ಲಿ ಕಲ್ಲು ಹಾಗೂ ಸುಣ್ಣ ಮಿಶ್ರಿತ ಒಂದು ಗೋಡೆಯ ನಿರ್ಮಾಣವನ್ನು ಕೂಡ ಕೈಗೊಂಡ. ಅವನು ತನ್ನ ಸರ್ದಾರರು ಮತ್ತು ಗಾಳಿ ಸೇವನೆ ಮಾಡ ಬಯಸುವವರನ್ನು ಸದಾ ಕಾಲ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕೆಂದು ತಾಕೀತು ಮಾಡುತ್ತಿದ್ದ. ಜಲಾಲುದ್ದೀನ್ ಕೇಲೋಖರಿಯಲ್ಲಿ ಮಸೀದಿಗಳು ಹಾಗೂ ಬಜಾರಿನ ಒಂದು ಅತ್ಯಂತ ಸುಂದರವಾದ ಸಂಕೀರ್ಣವನ್ನು ನಿರ್ಮಾಣ ಮಾಡಿ ಆ ಪಟ್ಟಣವನ್ನು "ನವನಗರ" ಎಂಬ ಹೆಸರಿನಿಂದ ಕರೆದ. (ಕೇಲೋಖರಿಯಲ್ಲಿ ಬಾದಶಹನ ವಾಸ್ತವ್ಯದ ಪರಿಣಾಮವಾಗಿ ಎಲ್ಲ ಜನರು ಕೂಡ ಅದೇ ಪಟ್ಟಣದಲ್ಲಿ ಬಂದು ವಾಸ ಮಾಡತೊಡಗಿದರು). ಸರ್ದಾರರು ಬಾದಶಹನ ಅರಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ತಮ್ಮ ತಮ್ಮ ಮೊಹಲ್ಲಾಗಳ ನಿರ್ಮಾಣವನ್ನು ಕೈಗೊಂಡರು ಕ್ರಮೇಣ ದೆಹಲಿಯ ಪುರಾತನ ನಗರವು ಹಾಳು ಸುರಿಯತೊಡಗಿತು.

ಆಡಳಿತಾತ್ಮಕ ವ್ಯವಸ್ಥೆ:

ಜಲಾಲುದ್ದೀನ್ ತನ್ನ ಆಡಳಿತಾವಧಿಯ ಆರಂಭದ ದಿನಗಳಲ್ಲಿ ರಾಜ್ಯಭಾರದತ್ತ ಗಮನವನ್ನು ನೀಡಿದ ಹಾಗೂ ತನ್ನ ರಾಜ್ಯದ ಸುವ್ಯವಸ್ಥೆಯನ್ನು ಕಾಪಾಡುವ ದೆಸೆಯಲ್ಲಿ ಅವನು ರಾಜಕಾರಣದ ಮೂಲಕ ಕೂಡ ಚತುರೋಪಾಯಗಳನ್ನು ರೂಪಿಸಿದ. ಅವನು ಬಲ್ಬನ್ನನ ಸಹೋದರನ ಮಗನಾದ ಮುಲ್ಕ್ ಚಜು (ಬಿನ್ ಕಷ್ಲೀಲ್‌ಖಾನ್) ನನ್ನು ಖಡಾನ ರಾಜನನ್ನಾಗಿ ನೇಮಕ ಮಾಡಿದ. ಹಾಗೂ ಅವನನ್ನು ಅವಧ್‌ಗೆ ಕಳಿಸಿಕೊಟ್ಟ ಹಾಗೂ ತನ್ನ ಸಹೋದರನನ್ನು ಮಂತ್ರಿಯ ಹುದ್ದೆಗೆ ಏರಿಸಿದ

ಹಾಗೂ ಅವನಿಗೆ ಯಗರ್‌ಮಶ್‌ಖಾನ್ ಎಂಬ ಬಿರುದನ್ನು ನೀಡಿದ. ಅವನು ತನ್ನ ಮೂವರು ಪುತ್ರರಿಗೆ ಬಿರುದುಗಳನ್ನು ಪ್ರದಾನ ಮಾಡಿದ. ಹಾಗೂ ಹಿರಿಯ ಮಗನಿಗೆ ಇಖ್ತಿಯಾರುದ್ದೀನ್ ಖಾನೆಖಾನಾನ್, ಮಧ್ಯದವನಿಗೆ ಅರ್ಕಲಿಖಾನ್ ಹಾಗೂ ಕಿರಿಯವನಿಗೆ ಖದರ್‌ಖಾನ್‌ನ ಬಿರುದುಗಳನ್ನು ನೀಡಿದ. ಮತ್ತು ಪ್ರತಿಯೊಬ್ಬರಿಗೂ ಜಹಗೀರುಗಳನ್ನು ನೀಡಿದ. ಜಲಾಲುದ್ದೀನ್‌ನು ಶಹಾಬುದ್ದೀನ್ ಮಸೂದ್‌ನ ಪುತ್ರರಿಗೆ ಅಂದರೆ ತನ್ನ ಸಹೋದರನ ಮಕ್ಕಳಿಗೂ ಅನೇಕ ರಾಜ ಪುರಸ್ಕಾರಗಳನ್ನು ನೀಡಿದ. ಅಲ್ಲಾವುದ್ದೀನ್ ಮತ್ತು ಅಲ್ಮಾಸ್‌ಖಾನ್ (ಅವನು ನಂತರ ಅಲಘ್‌ಖಾನ್‌ನ ಹೆಸರಿನಿಂದ ಪ್ರಖ್ಯಾತಿಯನ್ನು ಹೊಂದಿದ) ರವರನ್ನು ಅವನೇ ಪೋಷಣೆ ಮಾಡಿದ. ಅಲ್ಲಾವುದ್ದೀನ್‌ನನ್ನು ತನ್ನ ಸರ್ದಾರರುಗಳ ಪೈಕಿ ಉನ್ನತ ಪದವಿಯನ್ನು ನೀಡಿದ್ದು ಅಲ್ಮಾಸ್‌ಬೇಗ್‌ನನ್ನು ಅಶ್ವಾರೋಹಿ ದಳದ ಅಧಿಪತಿಯನ್ನಾಗಿ ನೇಮಕ ಮಾಡಿದ. ಜಲಾಲುದ್ದೀನ್‌ನು ತನ್ನ ಸಹೋದರನ ಮಗ ಮುಲ್ಕ್ ಅಹಮ್ಮದ್ ಹಬೀಬ್‌ನನ್ನು "ಬಾರ್ಬೆಕ್" ಮತ್ತು ಮುಲ್ಕ್ ಖುರ್ರಮ್‌ನನ್ನು ಸರ್ದಾರರುಗಳ ಮುಖ್ಯಸ್ಥನ ಹುದ್ದೆಗೆ ನೇಮಕ ಮಾಡಿದ. ಹಾಗೂ ಖ್ವಾಜಾ ಖತೀರ್‌ನನ್ನು ಹಣಕಾಸಿನ ಸಚಿವನನ್ನಾಗಿ ಮತ್ತು ಅಮೀರುಲ್ ಉಮ್ರಾ ಮುಲ್ಕ್ ಫಕ್ರುದ್ದೀನ್‌ನನ್ನು ಕೊತ್ವಾಲನನ್ನಾಗಿ ನೇಮಕ ಮಾಡಿದ.

ಪುರಾತನ ದೆಹಲಿಯಲ್ಲಿ ಬಾದಶಹನ ಆಗಮನ :

ಜಲಾಲುದ್ದೀನ್‌ನ ದಯೆ ಮತ್ತು ಕರುಣೆಯು ಜನಜನಿತವಾದ ನಂತರ ಆ ಮಹಾರಾಜನು ತನ್ನ ಹೃದಯ ವೈಶಾಲ್ಯ ಮತ್ತು ವಿಶಿಷ್ಟ ಗುಣಗಳ ದೆಸೆಯಿಂದ ಜನರಲ್ಲಿ ಹೆಚ್ಚು ಮನ್ನಣೆಯನ್ನು ಪಡೆದ. ದೆಹಲಿಯ ಪುರಾತನ ಮತ್ತು ಪ್ರಖ್ಯಾತವಾದಂತಹ ವಂಶಸ್ಥರು ಕಳೆದ ಅರವತ್ತು ವರ್ಷಗಳಿಂದ ತುರ್ಕಿ ವಂಶಸ್ಥ ಬಾದಶಹನಿಗೆ ಸೇವೆಯನ್ನು ಸಲ್ಲಿಸಿದ್ದರು. ಹಾಗೂ ಅವರು ಖಿಲ್ಜಿಗಳ ಎದುರಿಗೆ ಪ್ರಣಾಮ ಮಾಡುವುದನ್ನು ತಮ್ಮ ಅವಹೇಳನ ಹಾಗೂ ಅವಮಾನಕಾರೀ ಕೃತ್ಯವೆಂದು ತಿಳಿಯುತ್ತಿದ್ದರು. ನಂತರದಲ್ಲಿ ಅವರುಗಳು ದೆಹಲಿಯಿಂದ ನವನಗರಕ್ಕೆ ಆಗಮಿಸಿದರು ಅವರುಗಳೆಲ್ಲರೂ ಅತ್ಯಂತ ಪ್ರೀತಿ, ವಿಶ್ವಾಸ, ಸೌಹಾರ್ದ ಮತ್ತು ನಂಬಿಕೆಯಿಂದ ಜಲಾಲುದ್ದೀನ್‌ನ ಅಧೀನತೆಯನ್ನು ಒಪ್ಪಿಕೊಂಡರು. ಹಾಗೂ ಅವನ ಹಿತೈಷಿಗಳ ಗುಂಪಿನಲ್ಲಿ ಅವರು ಕೂಡ ಸೇರಿಕೊಂಡರು. ಜಲಾಲುದ್ದೀನನು ಎಲ್ಲಾ ವಿಧದ ಜನರು ತನ್ನಿಂದ ಸಾಕಷ್ಟು ನೆಮ್ಮದಿ ಮತ್ತು ಸಂತೃಪ್ತಿಯನ್ನು ಹೊಂದಿದ್ದಾರೆ ಎಂಬುದನ್ನು ಕಂಡುಕೊಂಡ. ನಂತರ ಎಲ್ಲೆಡೆಯಲ್ಲಿಯೂ ಶಾಂತಿ ಮತ್ತು ಸುವ್ಯವಸ್ಥೆಯು ನೆಲೆಸಿರುವುದನ್ನು ಕಂಡಾಗ ಅವನು ಕೇಲೋಖರಿಯ ಅರಮನೆಯನ್ನು ತೊರೆದು ಪುರಾತನ ದೆಹಲಿಯ ಬಾದಶಹನ ಅರಮನೆಯ ಬಳಿ ತಲುಪಿದನು. ಅವನು ಅಲ್ಲಿ ನಮಾಜಿನ ವಿಧಿಯನ್ನು ಪೂರೈಸಿದ ಹಾಗೂ ದೆಹಲಿಯ ಬಾದಶಹನ ಸಿಂಹಾಸನದ

ಮೇಲೆ ಆಸೀನನಾದ. ಬಾದಶಹನ ಸಿಂಹಾಸನದ ಮೇಲೆ ಅವನು ಆಸೀನನಾದ ನಂತರ ಜಲಾಲುದ್ದೀನನು ಉನ್ನತವಾದ ಸ್ವರದಲ್ಲಿ ನುಡಿದ "ನಾನು ಅಲ್ಲಾಹನಿಗೆ ಕೃತಜ್ಞತೆಯನ್ನು ಹೇಗೆ ಸಮರ್ಪಿಸಲಿ ಎಂದು ಆಲೋಚನೆ ಮಾಡುತ್ತಿದ್ದೇನೆ. ಆ ಒಂದು ಕಾಲವನ್ನು ನಾನು ಕಂಡಿದ್ದೇನೆ, ಅಂದಿನ ದಿನಗಳಲ್ಲಿ ನಾನು ಇದೇ ಸಿಂಹಾಸನದ ಎದುರಿಗೆ ಕೈಕಟ್ಟಿ ನಿಂತು ನೆಲದವರೆಗೂ ಕೂಡ ಬಗ್ಗಿ ನಮಸ್ಕರಿಸುತ್ತಿದ್ದೆ. ಮತ್ತು ಇಂದು ನಾನು ಸ್ವತಃ ಈ ಸಿಂಹಾಸನದ ಮೇಲೆ ಆಸೀನನಾಗಿದ್ದೇನೆ ಮತ್ತು ನನಗಿಂತ ಉತ್ತಮರಾದಂತಹ ಬಂಧುಗಳು ಮತ್ತು ಹಿತೈಷಿಗಳು ಇಂದು ನನಗೆ ಗೌರವವನ್ನು ಸಲ್ಲಿಸಲು ನನ್ನೆದುರಿಗೆ ನಿಂತಿದ್ದಾರೆ." ರಾಜ ಸಿಂಹಾಸನದ ಮೇಲೆ ಕೆಲಕಾಲ ಆಸೀನನಾದ ನಂತರ ಜಲಾಲುದ್ದೀನನು ಗಯಾಸುದ್ದೀನ್ ಬಲ್ಬನ್ನನ ಖಾಸಾ ಅರಮನೆಯಾದ "ಕೆಂಪಿನರಮನೆಯ" ಬಳಿ ತಲುಪಿದ. ನಂತರ ಅವನು ತನ್ನ ಎಂದಿನ ನಡವಳಿಕೆಯಂತೆ ಕುದುರೆಯಿಂದ ಕೆಳಗೆ ಇಳಿದ. ಜಲಾಲುದ್ದೀನನು ಕುದುರೆಯಿಂದ ಕೆಳಗೆ ಇಳಿದಿದ್ದುದನ್ನು ಕಂಡ ಮುಲ್ಕ್ ಹಬೀಬ್ ಅಹಮ್ಮದನು ಕೂಡಲೇ ನುಡಿದ "ಈಗ ಈ ಮಹಲು ತಮ್ಮ ಒಡೆತನದಲ್ಲಿದೆ. ತಮ್ಮ ಖಾಸಾ ಅರಮನೆಯಲ್ಲಿ ತಾವು ಯಾರಿಗೂ ರಾಜ ಮರ್ಯಾದೆಯನ್ನು ತೋರಿಸುವ ಅಗತ್ಯವಿಲ್ಲ. ತಮ್ಮ ಈ ನಡವಳಿಕೆಯು ಅರ್ಥಹೀನವಾಗುತ್ತದೆ" ಜಲಾಲುದ್ದೀನನು ಉತ್ತರಿಸಿದ "ನಮ್ಮ ಹಿಂದಿನ ಒಡೆಯರಿಗೆ ಮತ್ತು ಹಿರಿಯರಿಗೆ ಸೂಕ್ತ ಗೌರವವನ್ನು ಸಲ್ಲಿಸುವುದು ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕೃತಜ್ಞತಾಪೂರ್ವಕ ಕರ್ತವ್ಯವಾಗಿದೆ" ಮುಲ್ಕ್ ಹಬೀಬ್ ಅಹಮದನು ನುಡಿದ "ಈಗ ಹುಜೂರ್‌ರವರು ಇದೇ ಮಹಲಿನಲ್ಲಿ ವಾಸ್ತವ್ಯವನ್ನು ಹೂಡುವುದು ಸೂಕ್ತ".ಜಲಾಲುದ್ದೀನನು ಉತ್ತರಿಸಿದ, "ದಿವಂಗತ ಸುಲ್ತಾನ್‌ರವರು ಈ ರಾಜ್ಯದಲ್ಲಿ ಸರ್ದಾರರ ಹುದ್ದೆಯನ್ನು ಅಲಂಕರಿಸಿದಾಗ ತಮ್ಮ ವೈಯಕ್ತಿಕ ವೆಚ್ಚ ಮಾಡಿ ಈ ಮಹಲಿನ ನಿರ್ಮಾಣವನ್ನು ಮಾಡಿದ್ದರು. ಆದ್ದರಿಂದ ಈ ಮಹಲಿನ ಮಾಲೀಕರು ಗಯಾಸುದ್ದೀನನ ವಾರೀಸುದಾರರಾಗಿರುತ್ತಾರೆ ಹೊರೆತು ನಾನಲ್ಲ." ತದ ನಂತರ ಮುಲ್ಕ್ ಹಬೀಬ್ ಅಹಮದನು ನುಡಿದ "ರಾಜ್ಯದ ಆಡಳಿತಾತ್ಮಕ ದೃಷ್ಟಿಯ ಹಿನ್ನಲೆಯಲ್ಲಿ ಇಂತಹ ಮುನ್ನೆಚ್ಚರಿಕೆಯನ್ನು ಕೈಗೊಳ್ಳುವುದು ಸೂಕ್ತವಲ್ಲ" ಈ ಮಾತಿಗೆ ಜಲಾಲುದ್ದೀನನು ಹೀಗೆಂದು ಉತ್ತರಿಸಿದ "ನನ್ನ ಈ ಬದುಕಿನ ತಾತ್ಕಲಿಕ ಸಂತೋಷ ಮತ್ತು ಏಳಿಗೆಯ ಸಲುವಾಗಿ ಇಸ್ಲಾಮಿ ಶರೀಯತ್‌ನ ಆದೇಶಗಳ ವಿರುದ್ದವಾಗಿ ನಡೆದುಕೊಳ್ಳಲು ನಾನು ಇಷ್ಟಪಡುವುದಿಲ್ಲ" ನಂತರ ಜಲಾಲುದ್ದೀನನು ಕಾಲ್ನಡಿಗೆಯಲ್ಲಿ ಕೆಂಪಿನ ಅರಮನೆಯೊಳಗೆ ಪ್ರವೇಶಿಸಿದ. ಆ ಮಹಲಿನ ಒಳಭಾಗದಲ್ಲಿ ಗಯಾಸುದ್ದೀನ್ ಬಲ್ಬನ್ನನು ಜೀವಂತವಾಗಿದ್ದಾಗ ಯಾವ ಸ್ಥಳದಲ್ಲಿ ಆಸೀನನಾಗುತ್ತಿದ್ದನೋ ಆ ಜಾಗದಲ್ಲಿ ಜಲಾಲುದ್ದೀನನು ತನ್ನ ಕಾಲನ್ನು ಇಡಲಿಲ್ಲ. ಬದಲಿಗೆ ಬಲ್ಬನ್ನನ ಆಡಳಿತಾವಧಿಯಲ್ಲಿ ಆತನ ಸರ್ದಾರರು ಮತ್ತು ರಾಜ ಕರ್ಮಚಾರಿಗಳು ಆಸೀನರಾಗುತ್ತಿದ್ದ ಚಾವಡಿಯಲ್ಲಿ ಅವನು ವಿರಮಿಸಿದ.

ಜಲಾಲುದ್ದೀನನು ತನ್ನ ಸರ್ದಾರರನ್ನು ಉದ್ದೇಶಿಸಿ ನುಡಿದ "ಅಲ್ಲಾಹನು ನನ್ನ ಕೊಲೆಯ ಇರಾದೆಯನ್ನು ಹೊತ್ತ ಏತಾಮರ್ ಕಚನ್ ಮತ್ತು ಏತಾಮರ್ ಸರ್ಖಿಯನ್ನು ನಾಶ ಮಾಡಲಿ. ಹಾಗೂ ನಾನು ನನ್ನ ಪ್ರಾಣರಕ್ಷಣೆಯ ಅಪಾಯದ ಹಿನ್ನಲೆಯಲ್ಲಿ ಈ ಬಲಾಢ್ಯ ಮತ್ತು ವೈಭವೋಪೇತ ಬಾದಶಹನ ಹೊರೆಯನ್ನು ನನ್ನ ಭುಜಗಳ ಮೇಲೆ ಹೊತ್ತಿರುವೆನು ನನ್ನ ಭವಿಷ್ಯತ್ತು ಏನಾಗುವುದೋ ಎಂಬುದರ ಬಗ್ಗೆ ನನಗೂ ಅರಿವಿಲ್ಲ. ಇಷ್ಟೊಂದು ವೈಭವ, ದರ್ಪ, ಆಡಂಬರ ಮತ್ತು ಅಪಾರ ಸರ್ದಾರರುಗಳು ಮತ್ತು ರಾಜ ಕರ್ಮಚಾರಿಗಳು ಹಾಗೂ ಸೇವಕರಿಂದ ಕೂಡಿದ ಈ ವಿಶಾಲ ದೇಶವು ಗಯಾಸುದ್ದೀನ್ ಬಲ್ಬನ್ನನ ವಿಧಿಯನ್ನು ತಪ್ಪಿಸಲು ಸಾಧ್ಯವಾಗಲಿಲ್ಲ, ಹಾಗೂ ಆ ಬಾದಶಹನು ಕಣ್ಣುಮುಚ್ಚಿದ ಕೂಡಲೇ ಅವನ ಸಂತತಿಯು ನಿರ್ನಾಮವಾಯಿತು. ಹೀಗಾದಲ್ಲಿ ನನ್ನ ನಂತರ ನನ್ನ ಸಂತತಿಯ ಪರಿಸ್ಥಿತಿ ಏನಾಗುವುದೋ ದೇವರೇ ಬಲ್ಲ. ನನ್ನ ನಂತರ ನನ್ನ ವಾರೀಸುದಾರರೊಡನೆ ವಿಧಿಯಾಟ ಏನಿರುತ್ತದೋ ಬಲ್ಲವರ್‍ಯಾರು? ಭವಿಷ್ಯದಲ್ಲಿ ನನ್ನ ಸಂತತಿಯೊಡನೆ ಕಾಲವು ಹೇಗೆ ವರ್ತಿಸುವುದೋ ಯಾರು ಅರಿತವರು?" ಬಾದಶಹನು ವ್ಯಕ್ತಪಡಿಸಿದ ಅನಿಸಿಕೆಯಿಂದ ಅಲ್ಲಿ ನೆರೆದಿದ್ದ ವಿವೇಕಿ ಮತ್ತು ಅನುಭವಿಗಳು ಬಹಳ ಪ್ರಭಾವಿತರಾದರು. ಯೌವನದ ಮದದಲ್ಲಿ ಮತ್ತರಾಗಿದ್ದ ಇನ್ನೂ ಕೆಲವು ಯುವ ದರ್ಬಾರಿಗಳು ತಮ್ಮ ತಮ್ಮಲ್ಲೇ ಪಿಸುಗುಟ್ಟ ತೊಡಗಿದರು. ಮತ್ತು ಬಾದಶಹನ ಬಗ್ಗೆ ಕೇವಲವಾಗಿ ಮಾತನಾಡತೊಡಗಿದರು. ಬಾದಶಹನು ರಾಜ್ಯದ ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಂಡ ದಿನವೇ ತನ್ನ ಅವನತಿಯ ದೃಶ್ಯವನ್ನು ಕಾಣತೊಡಗಿದ್ದಾನೆ. ಅಷ್ಟೇ ಅಲ್ಲದೆ ಮೊದಲ ದಿನವೇ ಬಾದಶಹನ ಈ ಅವಸ್ಥೆಯಾದಲ್ಲಿ ರಾಜ್ಯಾಡಳಿತದ ಮೂಲಗುಣವಾದ ರಾಜಕೀಯ ಕ್ರೌರ್ಯದ ಮುಂದಿನ ದಿನಗಳನ್ನು ಅವನು ಹೇಗೆ ನಿಭಾಯಿಸುವನೋ ಎಂದು ಅವರ ಅಲೋಚನೆಯಾಗಿತ್ತು.

ಸಂಜೆಯ ನಂತರ ಜಲಾಲುದ್ದೀನನು ಕೆಂಪಿನ ಅರಮನೆಯಿಂದ ದೆಹಲಿಗೆ ಮರಳಿದ ನಂತರ ಅವನು ದೆಹಲಿಯಲ್ಲಿ ಅತ್ಯಂತ ವೈಭವದಿಂದ ಕೂಡಿದ ಸಂತೋಷಕೂಟವನ್ನು ಏರ್ಪಡಿಸಿ ಸಂಭ್ರಮಾಚರಣೆಯನ್ನು ಮಾಡಿದ. ಹಾಗೂ ಅಪೂರ್ವ ಸುಂದರಿಯಾಗಿದ್ದ ತನ್ನ ಮಗಳ ಮದುವೆಯನ್ನು ಅಲ್ಲಾವುದ್ದೀನ್ ಖಿಲ್ಜಿಯೊಂದಿಗೆ ನೆರವೇರಿಸಿದ. ಹಾಗೂ ಇನ್ನೊಬ್ಬ ಮಗಳ ಮದುವೆಯನ್ನು ಅಲ್ಮಾಸ್‌ಬೇಗ್ ಅಲಫ್‌ಖಾನ್‌ನೊಂದಿಗೆ ನೆರವೇರಿಸಿದ.

ಜಲಾಲುದ್ದೀನನ ವ್ಯಕ್ತಿತ್ವ ಮತ್ತು ನಡತೆ:

ಜಲಾಲುದ್ದೀನನು ತುಂಬಾ ಸಾತ್ವಿಕ ಸ್ವಭಾವದ ಸಜ್ಜನ ಮತ್ತು ಉತ್ತಮ ಗುಣನಡತೆಯ ಮಾಲೀಕನಾಗಿದ್ದ. ಆ ಬಾದಶಹನು ಯೋಗ್ಯರನ್ನು ಗುರುತಿಸುವುದರಲ್ಲಿ ಪರಿಣಿತನಾಗಿದ್ದ ಹಾಗೂ ಸತ್ಯದ ಪಕ್ಷಪಾತಿಯಾಗಿದ್ದ. ಯಾರಿಗಾದರೂ ಒಬ್ಬರಿಗೆ

ಜಹಗೀರನ್ನು ಕರುಣಿಸಿದಲ್ಲಿ ಮತ್ತೆ ಅದರಲ್ಲಿ ಯಾವುದೇ ಬದಲಾವಣೆಯನ್ನು ಮಾಡುತ್ತಿರಲಿಲ್ಲ. ಸರ್ದಾರರು ಮತ್ತು ರಾಜಕರ್ಮಚಾರಿಗಳಿಂದ ಏನಾದರೂ ಪ್ರಮಾದ ಘಟಿಸಿದಲ್ಲಿ ಹೃದಯ ವೈಶಾಲ್ಯವನ್ನು ಮೆರೆದು ಅದನ್ನು ಮನ್ನಿಸುತ್ತಿದ್ದ. ದುಷ್ಕೃತ್ಯ ನಡೆಸಿದ್ದವರನ್ನು ಕೀಳಾಗಿ ಕಂಡು ಅವರ ಅಪಮಾನವನ್ನು ಮಾಡುತ್ತಿರಲಿಲ್ಲ. ಕ್ರೂರಿ ಮತ್ತು ದ್ವೇಷ ಸಾಧನೆಯ ಬಾದಶಹನಂತೆ ದುರಾಶೆ, ಕ್ರೌರ್ಯ ಮತ್ತು ನಿಷ್ಠುರತೆಯಿಂದ ಅವನು ಎಂದಿಗೂ ನಡೆದುಕೊಳ್ಳುತ್ತಿರಲಿಲ್ಲ. ಪಾನಗೋಷ್ಠಿಗಳಲ್ಲಿ ಸಹಪಂಕ್ತಿಯಲ್ಲಿ ಇದ್ದವರ ಜೊತೆಯಲ್ಲಿ ಮೇಲು ಕೀಳು ಎನ್ನದೆ ಸಮಭಾವದಿಂದ ನಡೆದುಕೊಳ್ಳುತ್ತಿದ್ದ. ಇಂತಹ ಪಾನಗೋಷ್ಠಿಗಳಲ್ಲಿ ಸಾಮಾನ್ಯವಾಗಿ ಮುಲ್ಕ್ ತಾಜುದ್ದೀನ್ ಕೋಚಿ, ಮುಲ್ಕ್ ಐಸುದ್ದೀನ್ ಘೌರಿ, ಮುಲ್ಕ್ ಖಿರಾಬೇಗ್, ಮುಲ್ಕ್ ಮುಸರತ್, ಮುಲ್ಕ್ ಹಬೀಬ್, ಮುಲ್ಕ್ ಕಮಾಲುದ್ದೀನ್ ಅಬುಲ್ ಮಾಲಿ, ಮುಲ್ಕ್ ನಸೀರುದ್ದೀನ ಕೆಹಾರಾಸ್ ಮತ್ತು ಮುಲ್ಕ್ ಸಾದುದ್ದೀನ್ ಮುಂತಖಿ ಅವನ ಜೊತೆಯಲ್ಲಿ ಭಾಗಿಗಳಾಗುತ್ತಿದ್ದರು. ಈ ಎಲ್ಲಾ ಜನರು ತಮ್ಮ ನಡೆನುಡಿ, ಧೈರ್ಯ ಮತ್ತು ಪರಾಕ್ರಮ ಸೌಜನ್ಯ ಹಾಗೂ ಸಜ್ಜನತೆಯಿಂದ ಆ ಕಾಲದ ಅತ್ಯಂತ ಉತ್ತಮ ಮತ್ತು ಸಭ್ಯ ವ್ಯಕ್ತಿಗಳ ಸಾಲಿನಲ್ಲಿ ಗುರುತಿಸಲ್ಪಟ್ಟಿದರು.

ಈ ಸರ್ದಾರರುಗಳ ಜೊತೆಯಲ್ಲಿ ತಾಜುದ್ದೀನ್ ಇರಾಖಿ, ಅಮೀರ್ ಖುಸ್ರು, ಖ್ವಾಜ ಹಸನ್, ಮವೇದ್ ಜರ್ಜಾನಿ, ಮವೇದ್ ದಿವಾನಾ, ಅಮೀರ್ ಅರ್‌ಸಲಾನ್ ಕಲಾಮಿ, ಇಖ್ತಿಯಾರುದ್ದೀನ್ ಬಾಗಿ ಮತ್ತು ಇನ್ನುಳಿದ ಅನೇಕ ಪ್ರವಚನಕಾರರು ಬಾದಶಹನ ಖಾಸಾ ಸಂಗಾತಿಗಳಾಗಿದ್ದರು. ಅವರ ಪೈಕಿ ಪ್ರತಿಯೊಬ್ಬ ವ್ಯಕ್ತಿಯೂ ಕವಿಯಾಗಿದ್ದ ಮತ್ತು ಅನೇಕ ಮೇಲ್ಕಂಡ ವಿದ್ವಾಂಸರು ಇತಿಹಾಸದ ಬಗ್ಗೆ ವಿಶೇಷ ಪರಿಣಿತಿಯನ್ನು ಪಡೆದಿದ್ದವರಾಗಿದ್ದರು. ಹಾಗೂ ಆ ಕಾಲದ ಅತ್ಯುತ್ತಮ ಗುರುಗಳಾಗಿದ್ದರು. ಬಾದಶಹನ ಆಸ್ಥಾನದಲ್ಲಿ ಉತ್ತಮ ದರ್ಜೆಯ ಕಲಾಕಾರರು ಉಪಸ್ಥಿತರಿದ್ದರು. ಉದಾಹರಣೆಗೆ ಅಮೀರ್ ಖಾಸಾ ಮತ್ತು ಹಮೀದ್ ರಾಜನಂತಹ ಅದ್ಭುತ ಗಾಯಕರು ಹಬೀಬ್‌ಖಾನ್ ಮತ್ತು ನಿಜಾಮ್ ಖರೀತಾನ ಪುತ್ರ ದಿಲ್‌ರುಬ ವಾದ್ಯವನ್ನು ಅದ್ಭುತವಾಗಿ ನುಡಿಸುತ್ತಿದ್ದರು. ಮೊಹಮ್ಮದ್ ಶಾ ಚುಂಗಿ, ಫತುಖಾನ್, ನಸೀರ್‌ಖಾನ್ ಮತ್ತು ಬೆಹರೋಸ್ ಮೊದಲಾದವರು ಅದ್ವಿತೀಯ ಕಲಾಕಾರರಾಗಿದ್ದರು. ಈ ಎಲ್ಲಾ ಕಲಾವಿದರು ಬಾದಶಹನ ಆಸ್ಥಾನದ ಅರ್ನಘ್ಯ ರತ್ನಗಳಾಗಿದ್ದರು ಅಮೀರ್ ಖುಸ್ರು ಪ್ರತಿದಿನ ತಾಜ ಗಜಲ್‌ಗಳನ್ನು ವಾಚಿಸುತ್ತಿದ್ದರು. ಮತ್ತು ಬಾದಶಹನು ಅವರಿಗೆ ಪ್ರತಿದಿನ ಇನಾಮುಗಳನ್ನು ನೀಡುತ್ತಿದ್ದನು. ಜಲಾಲುದ್ದೀನನು ಮೀರ್ ಜಾಮ್‌ದಾರಿಯ ಹುದ್ದೆಯಿಂದ ಬಡ್ತಿ ಪಡೆದು ಹಣಕಾಸು ಸಚಿವನ ಹುದ್ದೆಗೆ ಏರಿದಾಗ ಅಮೀರ್ ಖುಸ್ರು ಅವನ ಅಧೀನತೆಯಲ್ಲಿ ನೌಕರಿಯನ್ನು ಪಡೆದುಕೊಂಡರು. ಜಲಾಲುದ್ದೀನನು ಖುಸ್ರುವಿನ ಅಭಿಮಾನಿಯಾಗಿದ್ದ ಹಾಗೂ ಅವರಿಗೆ ಸೂಕ್ತ ವೇತನವನ್ನು ನೀಡುತ್ತಿದ್ದ. ಒಂದು ಘಟನೆಯನ್ನು ಉಲ್ಲೇಖಿಸುವುದಾದಲ್ಲಿ ಒಮ್ಮೆ

ಜಲಾಲುದ್ದೀನನು ಅಮೀರ್ ಖುಸ್ರುವಿನಿಂದ ತುಂಬಾ ಸಂಪ್ರೀತನಾದ ಮತ್ತು ತನ್ನ ಖಾಸಾ ನಿಲುವಂಗಿಯನ್ನು ಉಡುಗೊರೆಯ ರೂಪದಲ್ಲಿ ನೀಡಿದ. ಜಲಾಲುದ್ದೀನನು ಸಿಂಹಾಸನವನ್ನು ಏರಿದ ನಂತರ ಅಮೀರ್‌ಖುಸ್ರುವಿಗೆ ಅತ್ಯಧಿಕ ಉತ್ತೇಜನವನ್ನು ನೀಡಿದ. ಮತ್ತು ಅವರನ್ನು ತಮ್ಮ ಖಾಸಾ ಗೆಳೆಯರ ಬಳಗದಲ್ಲಿ ಸೇರಿಸಿಕೊಂಡ. "ಮಸ್‌ಹಫ್‌ದಾರಿ" ಎಂಬ ಬಿರುದನ್ನು ಅವರಿಗೆ ದಯಪಾಲಿಸಿದ. ಅಷ್ಟೇ ಅಲ್ಲದೆ ಜಲಾಲುದ್ದೀನನು ಅಮೀರ್‌ಖುಸ್ರುವಿಗೆ ನಿಲುವಂಗಿ ಮತ್ತು ಶ್ವೇತ ಸೊಂಟ ಪಟ್ಟಿಯನ್ನು ನೀಡಿ ಅವರನ್ನು ಸರ್ದಾರರುಗಳ ಪೈಕಿ ಮುಖ್ಯ ಹುದ್ದೆಗೆ ಏರಿಸಿದ.

ಮುಲ್ಕ್ ಚಜುವಿನೊಡನೆ ಯುದ್ಧ:

ಜಲಾಲುದ್ದೀನನು ಸಿಂಹಾಸನವನ್ನು ಏರಿದ ಎರಡನೇ ವರ್ಷದಲ್ಲಿ ಸುಲ್ತಾನ್ ಗಯಾಸುದ್ದೀನನ ಸಹೋದರನ ಪುತ್ರನಾದ ಮುಲ್ಕ್ ಚಜು ಅವಧ್‌ನ ರಾಜನಾದ. ಅಮೀರ್ ಅಲಿ ಜಾಮ್‌ದಾರ್‌ನ ನೆರವು ಮತ್ತು ಬೆಂಬಲದಿಂದ ಖಡಾದಲ್ಲಿ ತನ್ನ ಹೆಸರಿನ ನಾಣ್ಯ ಮತ್ತು ಶಾಸನವನ್ನು ಅವನು ಜಾರಿಗೊಳಿಸಿದ. ಹಾಗೂ ಸುಲ್ತಾನ್ ಮೊಗೈಸುದ್ದೀನ್‌ನ ಬಿರುದನ್ನು ಘೋಷಿಸಿಕೊಂಡು ಇಡೀ ಅವಧ್‌ನ ಸ್ವತಂತ್ರ ರಾಜನೆಂದು ತನ್ನನ್ನು ಬಿಂಬಿಸಿಕೊಂಡ. ಆ ಪ್ರದೇಶದ ಎಲ್ಲಾ ಸರ್ದಾರರುಗಳು ಕೂಡ ಮುಲ್ಕ್ ಚಜುಗೆ ಬೆಂಬಲವನ್ನು ನೀಡಿದರು. ಮತ್ತು ಅವನು ತನ್ನೊಡನೆ ಒಂದು ಬಲಿಷ್ಠ ಸೈನ್ಯವನ್ನು ಕಟ್ಟಿಕೊಂಡು ದೆಹಲಿಯತ್ತ ಹೊರಟ. ಜಲಾಲುದ್ದೀನ್‌ನಿಗೆ ಈ ವಿಷಯವು ತಿಳಿದು ಬಂದ ನಂತರ ಅವನು ತತ್‌ಕ್ಷಣವೇ ಬಹುದೊಡ್ಡ ಸೈನ್ಯದ ಸರ್ದಾರನನ್ನಾಗಿ ಅರ್ಕಲಿಖಾನ್‌ನನ್ನು ನೇಮಕ ಮಾಡಿದ್ದು. ಸುಲ್ತಾನ್ ಮೊಗೈಸುದ್ದೀನ್ (ಮುಲ್ಕ್ ಚಜು)ನ ವಿರುದ್ದ ಯುದ್ಧ ಮಾಡಲು ಕಳಿಸಿದ. ಮತ್ತು ಸ್ವತಃ ಅವನು ಕೂಡ ಒಂದು ಅಸೀಮ ಸೈನ್ಯದೊಡನೆ ಕೂಡಿ ಅರ್ಕಲಿಖಾನ್‌ನಿಂದ ಹನ್ನೆರಡು ಹರದಾರಿ ದೂರದಲ್ಲಿ ಅವನ ಹಿಂದೆ ಬಾದಶಹನು ಕೂಡ ಹೋದ. ಅರ್ಕಲಿಖಾನನು ಅತಿ ಶೀಘ್ರವಾಗಿ ಮಾರ್ಗವನ್ನು ಕ್ರಮಿಸುತ್ತಾ ಮುಲ್ಕ್ ಚಜುವನ್ನು ಯುದ್ಧರಂಗದಲ್ಲಿ ಎದುರಿಸಿದ. ಉಭಯತ್ರರ ನಡುವೆ ಯುದ್ಧ ಆರಂಭವಾಯಿತು. ಅರ್ಕಲಿಖಾನನ ಸೈನ್ಯವು ಧೀರೋದಾತ್ತವಾಗಿ ಸೆಣಸಾಡಿ ವಿರೋಧಿ ಸೈನ್ಯವನ್ನು ನುಚ್ಚು ನೂರು ಮಾಡಿತು. ಮುಲ್ಕ್ ಚಜು ಅಪಾಯುವನ್ನು ಅರಿತು ತನ್ನ ಸೈನ್ಯದೊಡನೆ ಕೂಡಿ ಯುದ್ಧಭೂಮಿಯಿಂದ ಪರಾರಿಯಾದ. ಅರ್ಕಲಿಖಾನನು ಶತ್ರುವಿನ ಬೆನ್ನಟ್ಟಿದ ಮತ್ತು ಅಮೀರ್ ಅಲಿ ಜಾಮ್‌ದಾರ್ ಮತ್ತು ಇನ್ನಿತರೆ ಬಲ್ಬನ್ ಸರ್ದಾರರುಗಳನ್ನು ಸೆರೆ ಹಿಡಿದ. ಅರ್ಕಲಿಖಾನನು ಆ ಖೈದಿಗಳ ಕುತ್ತಿಗೆಯಲ್ಲಿ ಕವೆಗೋಲುಗಳನ್ನು ಸಿಗಿಸಿ ಅವರುಗಳನ್ನು ಒಂಟೆಗಳ ಮೇಲೆ ಕೂರಿಸಿ ಸುಲ್ತಾನ್ ಜಲಾಲುದ್ದೀನ್ ಖಿಲ್ಜಿಯ ಬಳಿ ಕಳಿಸಿದ. ಆ ಖೈದಿಗಳನ್ನು ಜಲಾಲುದ್ದೀನನ ಸಮ್ಮುಖದಲ್ಲಿ ಹಾಜರು ಪಡಿಸಿದಾಗ ಆ ಕರುಣಾಮಯಿ ಬಾದಶಹನು ತನ್ನ ನೋಟವನ್ನು ಕೆಳಗೆ ಹರಿಸಿದ ಮತ್ತು ಎತ್ತರದ

ಧ್ವನಿಯಲ್ಲಿ ನುಡಿದ "ಇದೆಂತಹ ಕ್ರೌರ್ಯ ನಡೆದಿದೆ? ಈ ಗೌರವಾನ್ವಿತ ಮತ್ತು ಸಜ್ಜನ ಸರ್ದಾರರನ್ನು ಈ ದುರ್ಗತಿಗೆ ದೂಡಿದವರ್ಯಾರು" ಹೀಗೆ ನುಡಿದವನೇ ಜಲಾಲುದ್ದೀನನು ತತ್‌ಕ್ಷಣವೇ ಆ ಸರ್ದಾರರುಗಳನ್ನು ಒಂಟೆಗಳ ಮೇಲಿನಿಂದ ಕೆಳಗಿಳಿಸುವಂತೆ ಆದೇಶ ಮಾಡಿದ. ಹಾಗೂ ಅವರ ಕೊರಳುಗಳಲ್ಲಿ ಸಿಗಿಸಿದ್ದ ಕವೆಗೋಲುಗಳನ್ನು ಅವರಿಂದ ಬೇರ್ಪಡಿಸಲಾಯಿತು. ಆ ಸೆರೆಯಾಳುಗಳ ಪೈಕಿ ಅನೇಕ ಸರ್ದಾರರುಗಳು ಸುಲ್ತಾನ್ ಗಯಾಸುದ್ದೀನನ ದರ್ಬಾರಿನಲ್ಲಿ ಅತ್ಯಂತ ಪ್ರಖ್ಯಾತಿಯನ್ನು ಹೊಂದಿದ್ದು ಆತನಿಂದ ಗೌರವಾದರಗಳನ್ನು ಕೂಡ ಪಡೆದಿದ್ದರು. ಜಲಾಲುದ್ದೀನನು ಅಂತಹ ಎಲ್ಲಾ ಸರ್ದಾರರುಗಳನ್ನು ಕೂಡ ಕೂಡಲೇ ಹಮಾಮ್‌ಗೆ (ಬಚ್ಚಲು ಮನೆಗೆ) ಕಳಿಸಿದ. ಅವರಿಗೆ ವಿಶೇಷವಾದ ಚಿನ್ನದ ನೂಲಿನ ಜರಿಯಿಂದ ಅಲಂಕೃತವಾದ ಉಡುಗೆಗಳನ್ನು ನೀಡಿದ (ಸ್ನಾನಾದಿಗಳನ್ನು ಮುಗಿಸಿಕೊಂಡು ಆ ಸರ್ದಾರರುಗಳು ಮರಳಿ ಬಂದ ನಂತರ) ಜಲಾಲುದ್ದೀನನು ಅವರುಗಳನ್ನು ತನ್ನ ಖಾಸಾ ಗೋಷ್ಠಿಯಲ್ಲಿ ಭಾಗವಹಿಸುವಂತೆ ಆಹ್ವಾನಿಸಿದ ಮತ್ತು ಅತ್ತರ್‌ನ ಸುಗಂಧ ಹಾಗೂ ವೀಳ್ಯ ಮೊದಲಾದವುಗಳನ್ನು ನೀಡಿ ಅವರ ಆತಿಥ್ಯವನ್ನು ನಿರ್ವಹಿಸಿದ. ಆ ಗೋಷ್ಠಿಯಲ್ಲಿ ಪಾನೀಯದ ಸರಬರಾಜು ಆದಾಗ ಜಲಾಲುದ್ದೀನನು ಆ ಸರ್ದಾರುಗಳಿಗೆ ತುಂಬಾ ಪ್ರೀತಿಯಿಂದ ಆದರಾತಿಥ್ಯವನ್ನು ನೀಡಿದ. ಆ ಸೆರೆಯಾಳು ಸರ್ದಾರರುಗಳಿಗೆ ಜಲಾಲುದ್ದೀನನು ಎಷ್ಟೊಂದು ಅಭಿಮಾನ ಪೂರ್ವಕವಾಗಿ ಅತಿಥ್ಯವನ್ನು ನೀಡುತ್ತಿದ್ದನೋ ಆ ಸೆರೆಯಾಳುಗಳು ಅಷ್ಟೇ ತೀವ್ರವಾಗಿ ಲಜ್ಜಿತರಾಗಿ ಭೂಮಿಗಿಳಿದು ಹೋದರು. ಆ ವಿಷಯವನ್ನು ಮನಗಂಡ ಜಲಾಲುದ್ದೀನನು ಆ ಸರ್ದಾರರುಗಳನ್ನು ಕುರಿತು ನುಡಿದ "ತಾವು ಏಕೆ ಇಷ್ಟೊಂದು ಲಜ್ಜಿತರಾಗುತ್ತೀರಿ. ತಮ್ಮ ವಿದ್ರೋಹದ ನಡುವಳಿಕೆಯನ್ನು ನಾನು ಸ್ವಾಮಿದ್ರೋಹದ ಕೃತ್ಯವೆಂದು ಹೇಗೆ ಪರಿಭಾವಿಸಲಿ? ನೀವು ಯಾರೂ ಈ ಹಿಂದೆ ನನ್ನ ಸೇವಕರಾಗಿರಲಿಲ್ಲ. ಬದಲಿಗೆ ನೀವುಗಳೆಲ್ಲರೂ ಗೌರವಾನ್ವಿತ ವ್ಯಕ್ತಿಗಳಾಗಿದ್ದಿರಿ. ಮತ್ತು ನೀವುಗಳು ನಿಮ್ಮ ಒಡೆಯನ ಬಗ್ಗೆ ಸಂಪೂರ್ಣವಾಗಿ ಸ್ವಾಮಿ ನಿಷ್ಠೆಯನ್ನು ತೋರಿದ್ದೀರಿ ಮತ್ತು ನಿಮ್ಮ ಒಡೆಯನ ಉಪ್ಪಿನ ಋಣವನ್ನು ತೀರಿಸಿದ್ದೀರಿ. ಬಾದಶಹನ ಸ್ಥಾನವು ನಿಮ್ಮ ಒಡೆಯನಾದ ಸುಲ್ತಾನ್ ಗಯಾಸುದ್ದೀನನ ವಂಶಸ್ಥರ ವ್ಯಾಪ್ತಿಯಿಂದ ಹೊರಹೋಗಕೂಡದೆಂಬ ನಿಮ್ಮ ಪ್ರಯತ್ನವು ನ್ಯಾಯಬದ್ಧವಾಗಿದೆ. ಆದರೆ ನಿಮ್ಮ ನಿರ್ಧಾರಕ್ಕೆ ವಿರುದ್ಧವಾಗಿ ದೈವೇಚ್ಛೆ ಇರುವುದರಿಂದ ಮನುಷ್ಯ ಪ್ರಯತ್ನ ಸಾಗದು ನಿಮ್ಮ ಪ್ರಯತ್ನವು ಸಫಲವಾಗಲಿಲ್ಲ. ಹೀಗಾಗಿ ಬಾದಶಹನ ಹೊಣೆಗಾರಿಕೆಯು ಈ ವೃದ್ಧಾಪ್ಯದಲ್ಲಿ ನನ್ನ ಹೆಗಲೇರಿದೆ. ನನಗೆ ತಿಳಿದಿರುವಂತೆ ನೀವುಗಳೆಲ್ಲಾ ಸಜ್ಜನರು ಮತ್ತು ಉನ್ನತ ಹುದ್ದೆಯಲ್ಲಿ ಇದ್ದಂತಹವರು. ಸುಲ್ತಾನ್ ಗಯಾಸುದ್ದೀನ್ ಬಲ್ಬನ್ನನ ಆಡಳಿತಾವಧಿಯಲ್ಲಿ ನಿಮ್ಮ ಪೈಕಿ ಯಾರಾದರೂ ಮುಗುಳ್ನಗೆಯೊಡನೆ ನನ್ನೊಡನೆ ಮಾತನಾಡಿದಲ್ಲಿ ನಾನು ಸಂತೋಷದಿಂದ ಹುಚ್ಚನಾಗುತ್ತಿದ್ದೆ. ಮತ್ತು ನಿಮ್ಮ ಈ ಕೃಪೆಯ ಬಗ್ಗೆ ನಾನು ನನ್ನ ಸಂಗಾತಿಗಳೊಡನೆ ತುಂಬಾ ಅಹಂಕಾರದಿಂದ ಪ್ರಸ್ತಾಪ ಮಾಡುತ್ತಿದ್ದೆ".

ಜಲಾಲುದ್ದೀನನು ಹೀಗೆ ಅತ್ಯಂತ ಪ್ರೀತಿ ಮತ್ತು ಗೌರವಾದರಗಳೊಡನೆ ಆ ಸರ್ದಾರರುಗಳೊಡನೆ ವರ್ತಿಸಿದ. ಆದರೆ ಮುಲ್ಕ್ ಚಜುವಿದನದು ಬೇರೆಯದೇ ಪರಿಸ್ಥಿತಿ ಆಯಿತು. ಅರ್ಕಲಿಖಾನ್‌ನಿಂದ ಬಚಾವಾಗಲು ಅವನು ಆ ಪ್ರದೇಶದ ಒಬ್ಬ ಜಮೀನ್ದಾರನ ಮನೆಯಲ್ಲಿ ರಕ್ಷಣೆ ಪಡೆದ. ಆ ಜಮೀನ್ದಾರನು ಶರಣಾದವನಿಗೆ ರಕ್ಷಣೆ ನೀಡುವ ಕನಿಷ್ಠ ಉದಾರತೆಯನ್ನು ಪ್ರದರ್ಶಿಸಲಿಲ್ಲ ಅಷ್ಟೇ ಅಲ್ಲದೆ ದೈವಭಯವು ಕೂಡ ಅವನನ್ನು ಕಾಡಲಿಲ್ಲ ಮತ್ತು ಅವನು ಉಪ್ಪಿನ ಋಣವನ್ನು ತೀರಿಸಲಿಲ್ಲ, ಬದಲಿಗೆ ಮುಲ್ಕ್ ಚಜುವನ್ನು ಬಂಧಿಸಿ ಜಲಾಲುದ್ದೀನ್ ಖಿಲ್ಜಿಯ ಬಳಿ ಕಳಿಸಿದ. ಜಲಾಲುದ್ದೀನನು ಮುಲ್ಕ್ ಚಜುಗೆ ವಿಶೇಷವಾದ ಅತಿಥ್ಯವನ್ನು ನೀಡಿದ ಮತ್ತು ಅವನನ್ನು ರಾಜ ಮರ್ಯಾದೆಯೊಡನೆ ಮುಲ್ತಾನ್‌ಗೆ ಕಳಿಸಿಕೊಟ್ಟ.ಮುಲ್ತಾನಿನ ರಾಜನ ಹೆಸರಿಗೆ ಜಲಾಲುದ್ದೀನನು ಒಂದು ಪತ್ರವನ್ನು ರವಾನೆ ಮಾಡಿದ ಹಾಗೂ ಆ ಪತ್ರದಲ್ಲಿ ಹೀಗೆಂದು ಒಕ್ಕಣೆಯನ್ನು ಬರೆದಿದ್ದ "ಮುಲ್ಕ್ ಚಜುವನ್ನು ಅವನ ಕುಟುಂಬ ಸಮೇತ ಅತ್ಯಂತ ಉತ್ತಮವಾದ ಒಂದು ಮನೆಯಲ್ಲಿ ಕ್ಷೇಮವಾಗಿ ನೆಲೆಸುವಂತೆ ವ್ಯವಸ್ಥೆ ಮಾಡುವುದು. ಹಾಗೂ ಅವನಿಗೆ ಎಲ್ಲಾ ರೀತಿಯ ರಾಜ ವೈಭೋಗದ ವಸ್ತುಗಳನ್ನು ಒದಗಿಸುವುದು. ಮತ್ತು ಅವನಿಗೆ ಸೂಕ್ತ ಗೌರವಗಳನ್ನು ಸಲ್ಲಿಸುತ್ತ ಅವನ ಅತಿಥ್ಯವನ್ನು ಅತ್ಯಂತ ಉತ್ತಮವಾಗಿ ನಿರ್ವಹಿಸತಕ್ಕದ್ದು".

ಮುಲ್ಕ್ ಹಬೀಬ್ ಅಹಮ್ಮದ್ ಮತ್ತು ಇನ್ನಿತರೆ ಖಿಲ್ಜಿ ಸರ್ದಾರರುಗಳು ಜಲಾಲುದ್ದೀನನ ಸೌಮ್ಯ ಹೃದಯ ಮತ್ತು ಕರುಣೆಯ ವರ್ತನೆಯಿಂದ ಅತ್ಯಂತ ದುಃಖಿತರಾದರು. ಮತ್ತು ಮುಲ್ಕ್ ಚಜುವಿನಂತಹ ಶತ್ರುವನ್ನು ಮತ್ತು ಅವನ ಸಂಗಡಿಗರಿಗೆ ನೀಡಿದ ವಿವಿಧ ರೀತಿಯ ಕೊಡುಗೆ ಮತ್ತು ಇನಾಮುಗಳನ್ನು ಕಂಡು ಅವರು ಅಂತರಂಗದಲ್ಲಿಯೇ ಅತ್ಯಂತ ಕ್ರುದ್ಧರಾದರು. ಮತ್ತು ಆ ಸರ್ದಾರರುಗಳು ಜಲಾಲುದ್ದೀನನೊಡನೆ ನುಡಿದರು "ಹುಜೂರ್ ಕೊಲೆಯಾಗಲು ಅರ್ಹರಾಗಿದ್ದಂತಹ ಈ ಸರ್ದಾರರುಗಳ ಮೇಲೆ ತಾವು ಯಾವ ರೀತಿಯ ಕರುಣೆ ಮತ್ತು ದಯೆಯನ್ನು ತೋರಿದ್ದೀರೋ ಆ ಕೃತ್ಯವು ಲೌಕಿಕ ದೃಷ್ಟಿಯಿಂದ ಮತ್ತು ಆಡಳಿತಾತ್ಮಕ ಸಂಹಿತೆಗೆ ಮತ್ತು ರಾಜಕಾರಣದ ನೀತಿ ನಿಯಮಗಳಿಗೆ ವಿರುದ್ಧವಾಗಿವೆ. ಗಯಾಸುದ್ದೀನ್ ಬಲ್ಬನ್ನನು ತನ್ನ ಕಾಲಾವಧಿಯಲ್ಲಿ ತನಗೆ ವಿದ್ರೋಹ ಮತ್ತು ಸಂಚು ನಡೆಸಿದ್ದವರ ಮೇಲೆ ಯಾವ ಯಾವ ರೀತಿಯ ಸಜೆಯನ್ನು ನೀಡಿದ್ದರೋ ಆ ವಿಷಯ ತಮಗೆ ತಿಳಿದದ್ದೇ ಆಗಿದೆ. ನಮ್ಮ ಅಭಿಪ್ರಾಯವೇನೆಂದರೆ ಆ ವಿದ್ರೋಹಿಗಳಿಗೆ ಕ್ಷಮೆಯನ್ನು ನೀಡಬೇಡಿ. ಮತ್ತು ಮುಲ್ಕ್ ಚಜುವಿನ ಕೊಲೆಯನ್ನು ಮಾಡದೇ ಇದ್ದರೂ ಪರ್ವಾಗಿಲ್ಲ ಆದರೆ ಅತ್ಯಂತ ಸೌಮ್ಯವಾದ ಶಿಕ್ಷೆಯನ್ನಾದರೂ ಆತನಿಗೆ ನೀಡಿ. ಅವನ ಕಣ್ಣುಗಳಲ್ಲಿ ಕಬ್ಬಿಣದ ಸೂಜಿಗಳನ್ನು ಚುಚ್ಚಿ ಅವನನ್ನು ಅಂಧನನ್ನಾಗಿ ಮಾಡಿದಲ್ಲಿ ಬೇರೆಯವರಿಗೆ ಇದರಿಂದ ಎಚ್ಚರಿಕೆಯನ್ನು ನೀಡಿದಂತಾಗುತ್ತದೆ. ಮತ್ತು ಮುಂದಿನ ದಿನಗಳಲ್ಲಿ ಯಾವ ವ್ಯಕ್ತಿಯೂ ಇಂತಹ ಕೃತ್ಯದಲ್ಲಿ ತೊಡಗುವ ಧೈರ್ಯವನ್ನು ಮಾಡುವುದಿಲ್ಲ.

ಮತ್ತು ದೇಶದಲ್ಲಿ ಯಾವ ರೀತಿಯ ಗಲಭೆ ಮತ್ತು ದಂಗೆಗಳು ಕೂಡ ಏಳುವುದಿಲ್ಲ" ಜಲಾಲುದ್ದೀನನು ಆ ಸರ್ದಾರರುಗಳಿಗೆ ಹೀಗೆಂದು ಉತ್ತರವನ್ನು ನೀಡಿದ "ನೀವುಗಳು ಯಾವ ಸಲಹೆಯನ್ನು ನೀಡುತ್ತಿದ್ದೀರೋ ಅದು ಸೂಕ್ತವಾಗಿದೆ. ಆದರೆ ನಾನು ಯಾವ ಮುಸಲ್ಮಾನನ ಕೊಲೆಯಿಂದಲೂ ನನ್ನ ಕೈಗಳಿಗೆ ರಕ್ತವನ್ನು ಅಂಟಿಸಿಕೊಳ್ಳಲು ಇಷ್ಟಪಡುವುದಿಲ್ಲ. ಈಗ ನನ್ನ ವಯಸ್ಸು ಎಪ್ಪತ್ತು ವರ್ಷಗಳಾಗಿವೆ. ಇದುವರೆವಿಗೂ ನಾನು ಯಾವುದೇ ಒಬ್ಬ ಮುಸಲ್ಮಾನನ ಪ್ರಾಣಹತ್ಯೆಯನ್ನು ಮಾಡಿಲ್ಲ. ಅಗಿದ್ದ ಮೇಲೆ ಈ ನನ್ನ ಅಂತಿಮ ದಿನಗಳಲ್ಲಿ ಅಂತಹ ಕೃತ್ಯವನ್ನು ಖಂಡಿತವಾಗಿಯೂ ನಾನು ಎಸಗುವುದಿಲ್ಲ. ಒಂದು ವೇಳೆ ನಾನು ಆ ಜನರ ಕೈಯಲ್ಲಿ ಸೆರೆಯಾಳಾಗಿ ಬಂಧಿತನಾಗಿದ್ದಲ್ಲಿ ಅವರು ನನ್ನ ಕೊಲೆಯನ್ನು ಮಾಡುತ್ತಿದ್ದರು. ಆಗ ಅವರು ನಿರ್ಣಾಯಕ ದಿನದಂದು ದೇವರಿಗೆ ಈ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತಿತ್ತು. ನಾನು ಹಲವಾರು ವರ್ಷಗಳವರೆಗೆ ಸುಲ್ತಾನ್ ಗಯಾಸುದ್ದೀನ್‌ರವರ ಉಪ್ಪನ್ನು ತಿಂದಿದ್ದೇನೆ ಮತ್ತು ಈಗ ಆ ಬಾದಶಹನ ಸರ್ದಾರರುಗಳು ಮತ್ತು ವಂಶಸ್ಥರ ಕೊಲೆಯನ್ನು ಮಾಡುವಂತಹದು ನನಗೆ ಶೋಭಾಯ ಮಾನವಾದುದಲ್ಲ, ಮತ್ತು ಅಂತಹ ಕೃತ್ಯವನ್ನು ಎಸಗಿದಲ್ಲಿ ನಾನು ದ್ರೋಹ ಎಸಗಿದಂತೆ." ಒಟ್ಟಾರೆ ಜಲಾಲುದ್ದೀನನು ತನ್ನ ಸರ್ದಾರರ ತಕರಾರಿನ ಬಗ್ಗೆ ಯಾವುದೇ ರೀತಿಯ ನಿರೀಕ್ಷಿತ ಪ್ರತಿಕ್ರಿಯೆಯನ್ನು ನೀಡಲಿಲ್ಲ. ಮತ್ತು ಅವರೊಡನೆ ಈ ರೀತಿಯ ಸನ್ಯಾಸಿಯಂತಹ ಮಾತುಗಳನ್ನು ಆಡಿ ಬೀಳ್ಕೊಟ್ಟ ಮತ್ತು ಈ ಸರ್ದಾರರು ವೃದ್ಧ ಮತ್ತು ಕರುಣಾಳು ಬಾದಶಹನ ಅನಗತ್ಯ ಸೌಮ್ಯತೆಯಿಂದ ತೀವ್ರವಾಗಿ ನೊಂದುಕೊಂಡು ಮನಸ್ಸಿನಾಳದಲ್ಲಿ ಆತನ ಬಗ್ಗೆ ವ್ಯತಿರಿಕ್ತ ಭಾವನೆಯನ್ನು ಹೊಂದಿದ್ದು ಅವನಿಂದ ಬೀಳ್ಕೊಂಡರು.

ಇತಿಹಾಸಕಾರ ಫರಿಶ್ತಾ ಅರಿಕೆ ಮಾಡುವುದೇನೆಂದರೆ ಆ ಸರ್ದಾರರುಗಳು ನ್ಯಾಯೋಚಿತವಾದಂತಹ ನಿಲುವನ್ನು ಹೊಂದಿದ್ದರು. ವಿವೇಕಿಗಳ ಉವಾಚವೇನೆಂದರೆ ಯಾವುದೇ ದೇಶ ಮತ್ತು ಆಡಳಿತದ ಇತಿಹಾಸವು ಎರಡು ಮೂಲಭೂತ ಬುನಾದಿಗಳಿಂದ ಕೂಡಿದೆ. ಅವು ಯಾವುವೆಂದರೆ ಒಂದು ಸೌಮ್ಯತೆ ಮತ್ತು ಇನ್ನೊಂದು ಅಂಶ ಕ್ರೌರ್ಯ ಎನ್ನುವುದು. ಈ ಎರಡು ವಿಷಯ ವಸ್ತುಗಳ ಬಗ್ಗೆ ಯಾವುದಾದರೂ ಒಂದು ವಿಷಯಲ್ಲಾದರೂ ಹೆಚ್ಚು ಕಡಿಮೆ ಆದಲ್ಲಿ ಆ ದೇಶದ ಅಧಃಪತನವು ನಿಶ್ಚಿತವಾಗಿದೆ.

ಸಮಾಜದಲ್ಲಿ ತಳಮಳ:

ಮುಲ್ಕ್ ಚಜುವಿನ ಸಮಸ್ಯೆಯನ್ನು ಬಗೆಹರಿಸಿದ ನಂತರ ಜಲಾಲುದ್ದೀನನು ಬದಾಯೂನ್‌ನಿಂದ ದೆಹಲಿಯತ್ತ ಪ್ರಯಾಣ ಬೆಳೆಸಿದ. ದೆಹಲಿಯನ್ನು ತಲುಪಿದ ನಂತರ ಅವನು ಖಡಾದ ಆಡಳಿತವನ್ನು ತನ್ನ ಸಹೋದರನ ಮಗನಾದ ಅಲ್ಲಾವುದ್ದೀನ್ ಖಿಲ್ಜಿಗೆ ಹಸ್ತಾಂತರ ಮಾಡಿದ. ತದ ನಂತರ ಜಲಾಲುದ್ದೀನನು ಸಿಪಾಯಿಗಳಿಗೆ

ನೆಮ್ಮದಿಯನ್ನು ನೀಡಿ ಇಡೀ ದೇಶದ ಜನತೆಯು ಸುಖ ಮತ್ತು ಸಂಪದ್ಭರಿತವಾಗಿ ಇರುವಂತೆ ತನ್ನ ಎಲ್ಲಾ ಲಕ್ಷ್ಯವನ್ನು ರಾಜ್ಯದ ಅಭಿವೃದ್ಧಿಯತ್ತ ಕೇಂದ್ರೀಕರಿಸಿದ. ಅವನು ಯಾವುದೇ ರೀತಿಯಲ್ಲಿಯೂ ಯಾರ ಮೇಲೂ ಕೂಡ ಕ್ರೌರ್ಯ ಮತ್ತು ಕಾಠಿಣ್ಯದ ವರ್ತನೆಯನ್ನು ತೋರಲಿಲ್ಲ. ಆದರೆ ಕ್ರೌರ್ಯ ಮತ್ತು ಕಾಠಿಣ್ಯವನ್ನೇ ಒಬ್ಬ ಬಾದಶಹನ ನಿಜವಾದಂತಹ ಅಗತ್ಯದ ಅಂಶಗಳೆಂದು ಭಾವಿಸಲಾಗುತ್ತದೆ. ಆದರೆ ಜಲಾಲುದ್ದೀನನು ಸೌಮ್ಯತೆ ಮತ್ತು ಮೃದುತ್ವ ಹಾಗೂ ಸಭ್ಯತೆಯನ್ನು ತನ್ನ ಮತ್ತು ತನ್ನ ರಾಜ್ಯದ ಮೂಲಭೂತ ಗುಣಲಕ್ಷಣಗಳನ್ನಾಗಿ ಮೈಗೂಡಿಸಿಕೊಂಡ. ಈ ವರ್ತನೆಯ ಪರಿಣಾಮ ಏನಾಯಿತೆಂದರೆ ಕಳ್ಳಕಾಕರು ಮತ್ತು ದರೋಡೆಕೋರರಿಗೆ ಅತೀವ ಸ್ವಾತಂತ್ರ್ಯ ದೊರಕಿದಂತಾಯಿತು. ದೇಶದ ಎಲ್ಲಾ ಮೂಲೆ ಮೂಲೆಯಲ್ಲಿಯೂ ಕೂಡ ಕಳವು ದರೋಡೆ ಮತ್ತು ಲೂಟಿ ಮುಂತಾದವು ದಿನನಿತ್ಯದ ಘಟನೆಗಳಾಗ ತೊಡಗಿದವು. ಈ ನಿಟ್ಟಿನಲ್ಲಿ ಅಪರಾಧಿಗಳನ್ನು ಬಂಧಿಸುತ್ತಲೇ ಇರಲಿಲ್ಲ ಮತ್ತು ಒಂದು ವೇಳೆ ಯಾರನ್ನಾದರೂ ಬಂಧಿಸಿದರೂ ಕೂಡ ಬಾದಶಹನ ಸಮ್ಮುಖದಲ್ಲಿ ಅವರನ್ನು ಹಾಜರು ಪಡಿಸಿದಂತಹ ಸಂದರ್ಭದಲ್ಲಿ ಸಭ್ಯ ಬಾದಶಹನು ಅವರಿಂದ ನಡೆದ ಅಕ್ರಮ ಕೃತ್ಯದ ಬಗ್ಗೆ ಅವರಿಂದ ಪಶ್ಚಾತ್ತಾಪದ ಆಣೆ ಪ್ರಮಾಣಗಳನ್ನು ಮಾಡಿಸಿ ಮುಂದೆ ಎಂದಿಗೂ ಇಂತಹ ಅಕ್ರಮ ಕೃತ್ಯವನ್ನು ಎಸಗದಂತೆ ಅವರಿಂದ ವಾಗ್ದಾನವನ್ನು ಪಡೆದು ಅವರನ್ನು ಬಿಡುಗಡೆ ಮಾಡುತ್ತಿದ್ದ. ಜಲಾಲುದ್ದೀನನ ಇಂತಹ ವರ್ತನೆಯಿಂದ ಖಿಲ್ಜಿ ಸರ್ದಾರರು ಅವನಿಂದ ದೂರವಾಗ ತೊಡಗಿದರು. ಮತ್ತು ಬಹಿರಂಗವಾಗಿಯೇ ಬಾದಶಹನ ಈ ವರ್ತನೆಯನ್ನು ಟೀಕಿಸತೊಡಗಿದರು. ಜಲಾಲುದ್ದೀನನು ಆ ಸರ್ದಾರರ ಎಲ್ಲಾ ಮಾತನ್ನು ಕೇಳುತ್ತಾ ಅವರೊಂದಿಗೆ ಯಾವುದೇ ರೀತಿಯ ದುರ್ವರ್ತನೆಯನ್ನು ಮಾಡದೆ ಮೌನವಾಗಿ ಸಹಿಸುತ್ತಿದ್ದ "ಪಾನ ಮತ್ತರಾಗಿರುವವರು ಹೆಚ್ಚು ಪಾನೀಯವನ್ನು ಸ್ವೀಕರಿಸಿದಾಗ ಆ ನಶೆಯ ಮತ್ತಿನಲ್ಲಿ ಏನನ್ನು ನುಡಿಯುತ್ತಾರೋ ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬಾರದು." ಎಂದು ಅವನು ಅನ್ನುತ್ತಿದ್ದ. ಈ ಸರ್ದಾರರುಗಳು ಅವನ ಮುಂದುವರೆದ ಈ ವರ್ತನೆಯನ್ನು ಕಂಡು ಆ ಬಾದಶಹನು ದೇಶದ ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ನಿರಂತರವಾಗಿ ವಿಫಲನಾಗುತ್ತಿರುವ ಚಿಂತಾಕ್ರಾಂತರಾದರು ಅವನನ್ನು ಯಾವುದೇ ರೀತಿಯಲ್ಲಿ ಸರಿ ದಾರಿಗೆ ತರುವಂತಹ ಕ್ರಮ ಕಾಣದಂತಾಗಿ ಅವರುಗಳು ಆತಂಕಕ್ಕೆ ಈಡಾದರು. ಅಂತೂ ಕೊನೆಗೆ ಅವರುಗಳು ಒಟ್ಟಾಗಿ ಸೇರಿ ಅವನನ್ನು ಪದಚ್ಯುತಿಗೊಳಿಸಬೇಕೆಂಬ ಸಲಹೆಯ ಬಗ್ಗೆ ಚರ್ಚೆ ಮಾಡತೊಡಗಿದರು. ಆ ಸರ್ದಾರರುಗಳ ಒಟ್ಟಾರೆ ಅಭಿಪ್ರಾಯವೇನಿತ್ತೆಂದರೆ ಜಲಾಲುದ್ದೀನನ ಪರಾಕ್ರಮ ಮತ್ತು ಧೈರ್ಯದ ನಡವಳಿಕೆಯಲ್ಲಿ ಯಾವುದೇ ರೀತಿಯ ಸಂದೇಹ ಇಲ್ಲ. ಆದರೆ ಅವನು ತನ್ನ ಯೌವನದಲ್ಲಿ ಅನೇಕ ಮೊಘಲರ ವಿರುದ್ಧ ಅತ್ಯಂತ ಧೀರೋದಾತ್ತವಾಗಿ ಅನೇಕ ಯುದ್ಧಗಳನ್ನು ಮಾಡಿದ್ದು ಆ ಯುದ್ಧಗಳಲ್ಲಿ ಗೆಲುವನ್ನು ಕೂಡ ಹೊಂದಿದ್ದಾನೆ.

ಈಗ ವೃದ್ಧಾಪ್ಯದ ದೆಸೆಯಿಂದ ಅವನಿಗೆ ಕಾವ್ಯವಾಚನ ಮಾಡುವುದು ಮತ್ತು ಆಲಿಸುವುದು ಹಾಗೂ ಚದುರಂಗದಾಟ ಆಡುವುದರ ವಿನಾಃ ಬೇರೆ ಯಾವುದೇ ಕೆಲಸದಲ್ಲಿ ಆಸಕ್ತಿ ಉಳಿದಿಲ್ಲ. ಆದ್ದರಿಂದ ಅವನನ್ನು ಪದಚ್ಯುತಿಗೊಳಿಸಿ ಮುಲ್ಕ್ ತಾಜುದ್ದೀನ್ ಕೋಚಿಯನ್ನು ಬಾದಶಹನನ್ನಾಗಿ ಮಾಡಬೇಕೆಂದು ಅವರುಗಳೆಲ್ಲರೂ ಸೇರಿ ನಿಶ್ಚಯಿಸಿದರು.

ಸರ್ದಾರರುಗಳ ಸಂಚು:

ಮೇಲ್ಕಂಡ ರೀತಿಯಲ್ಲಿ ನಿಶ್ಚಯ ಕೈಗೊಂಡ ನಂತರ ಆ ಸರ್ದಾರರುಗಳೆಲ್ಲಾ ಮುಲ್ಕ್ ತಾಜುದ್ದೀನ್ ಕೋಚಿಯ ಮನೆಯಲ್ಲಿ ಒಂದು ಪಾನಗೋಷ್ಠಿಯನ್ನು ಆಯೋಜಿಸಿದರು. ಮತ್ತು ಅವರೆಲ್ಲರೂ ಸೇರಿ ಪಾನೀಯವನ್ನು ಸೇವನೆ ಮಾಡುತ್ತಾ ಅಮಲೇರಿದಂತಾಗಿ ಬಾಯಿಗೆ ಬಂದಂತೆ ಮಾತನಾಡ ತೊಡಗಿದರು ಒಬ್ಬ ನುಡಿದ "ಜಲಾಲುದ್ದೀನ್ ಖಿಲ್ಜಿಯು ರಾಜ್ಯಾಡಳಿತವನ್ನು ನಡೆಸಲು ಯಾವುದೇ ಸಾಮರ್ಥ್ಯವನ್ನು ಹೊಂದಿಲ್ಲ" ಇನ್ನೊಬ್ಬನು ನುಡಿದ "ನಾನು ನನ್ನ ಬಾಕುವಿನಿಂದಲೇ ಅವನನ್ನು ಸಾವಿಗಂಚಿಗೆ ದೂಡಬಹುದು" ಮೂರನೆಯವನು ಹೀಗೆಂದು ನುಡಿದ "ನಾನು ನನ್ನ ಕತ್ತಿಯ ಮೊನೆ ಮಾತ್ರದಿಂದಲೇ ಅವನನ್ನು ಎರಡು ತುಂಡುಗಳನ್ನಾಗಿ ಕಡಿದು ಎಸೆಯಬಲ್ಲೆ" ಒಟ್ಟಾರೆ ಆ ಪಾನಗೋಷ್ಠಿಯಲ್ಲಿ ಆ ಸರ್ದಾರರುಗಳು ಮನಸೋ ಇಚ್ಛೆ ಆಪದ್ಧವನ್ನು ನುಡಿಯಲಾರಂಭಿಸಿದರು. ಆ ಸರ್ದಾರರುಗಳ ಪೈಕಿ ಇದ್ದ ವ್ಯಕ್ತಿಯೊಬ್ಬ ಈ ಎಲ್ಲಾ ಘಟನಾವಳಿಗಳನ್ನು ಜಲಾಲುದ್ದೀನ್ ಖಿಲ್ಜಿವರೆಗೆ ತಲುಪಿಸಿದ. ಈ ಮಾತುಗಳನ್ನು ಆಲಿಸಿದ ಜಲಾಲುದ್ದೀನನು ಆ ಸರ್ದಾರರ ಮನಸೋ ಇಚ್ಛೆ ವರ್ತನೆಯನ್ನು ಕಂಡು ಗಾಬರಿಗೆ ಒಳಗಾಗಲಿಲ್ಲ. ಆದರೆ ಅವರ ಇಂಗಿತವನ್ನು ಅರಿತು ಅವನು ದುಃಖಿತನಾದ. ಮತ್ತು ತಕ್ಷಣ ಒಬ್ಬ ಸೇವಕನನ್ನು ಕಳಿಸಿ ಅವರೆಲ್ಲರನ್ನೂ ತನ್ನ ಬಳಿಗೆ ಕರೆಸಿಕೊಂಡ. ಆ ಎಲ್ಲ ಸರ್ದಾರರುಗಳು ಬಾದಶಹನ ಸಮ್ಮುಖದಲ್ಲಿ ಹಾಜರಾದಾಗ ಬಾದಶಹನು ಅವರೆಲ್ಲರ ಪರೀಕ್ಷೆಯನ್ನು ಮಾಡುವ ಸಲುವಾಗಿ ತನ್ನ ಕತ್ತಿಯನ್ನು ಒರೆಯಿಂದ ತೆಗೆದು ಅವರ ಮುಂದೆ ಇಟ್ಟ ಮತ್ತು ನುಡಿದ "ನಾನು ಈಗ ಸಂಪೂರ್ಣವಾಗಿ ನಿರಾಯುಧನಾಗಿದ್ದೇನೆ ನನ್ನ ಬಳಿ ಯಾವುದೇ ಅಸ್ತ್ರವಿಲ್ಲ. ನಿಮ್ಮ ಪೈಕಿ ಯಾವ ವ್ಯಕ್ತಿಯು ತನ್ನನ್ನು ತಾನೇ ಬಹಳ ಪರಾಕ್ರಮಿಯೆಂದು ಭಾವಿಸುತ್ತಾನೋ ಆತನು ಎದ್ದು ಈ ನನ್ನ ಕತ್ತಿಯಿಂದಲೇ ನನ್ನ ತಲೆಯನ್ನು ಹಾರಿಸಲಿ. ಹೀಗಾದಾಗ ನಾನು ನಿಜವಾಗಿಯೂ ನಿಮ್ಮ ಪೈಕಿ ಒಬ್ಬ ವೀರನಿದ್ದಾನೆ ಎಂದು ಮತ್ತು ನಿಮ್ಮಿಂದ ನಿಜವಾಗಿಯೂ ಯಾವುದೇ ಒಂದು ಕೆಲಸವು ಸಾಧ್ಯವೆಂದು ನಂಬುತ್ತೇನೆ". ಜಲಾಲುದ್ದೀನನು ತನ್ನ ಆ ಸರ್ದಾರರುಗಳೊಡನೆ ಇದೇ ರೀತಿಯಲ್ಲಿ ಮಾತನ್ನು ಮುಂದುವರೆಸಿದ. ಅವರುಗಳೆಲ್ಲರೂ ಲಜ್ಜಿತರಾಗಿ ತಲೆತಗ್ಗಿಸಿ ಕುಳಿತಿದ್ದರು. ಬಾದಶಹನು ತನ್ನ ಮನಸ್ಸಿನಾಳದ ಎಲ್ಲಾ ಕಹಿಯನ್ನು ಕಕ್ಕಿದ ನಂತರ ಅವನ ಕೋಪ

ಒಂದಿಷ್ಟು ತಣಿಯಿತು. ಆಗ ಮುಲ್ಕ್ ಮುಸರತ್ ಎಂಬ ಒಬ್ಬ ಸರ್ದಾರನು ಮಾತನಾಡಲು ಎದ್ದು ನಿಂತ. ಅವನು ಮೇಲೆ ಹೇಳಿದ ಪಾನಗೋಷ್ಠಿಯಲ್ಲಿ ಎಲ್ಲರಿಗಿಂತ ಹೆಚ್ಚು ಕುಡಿದಿದ್ದು, ಮನಸೋ ಇಚ್ಛೆ ನಾಲಿಗೆ ಹರಿಬಿಟ್ಟಿದ್ದ ವ್ಯಕ್ತಿಯಾಗಿದ್ದ. ಅವನು ಜಲಾಲುದ್ದೀನನ ಮುಂದೆ ಬಂದು ನಿಂತ ಮತ್ತು ಹಾಸ್ಯದ ಭಾವದಲ್ಲಿ ನುಡಿಯ ತೊಡಗಿದ "ಶರಾಬಿನ ನಶೆಯಲ್ಲಿ ಕುಡಿದವರು ಮನಸೋ ಇಚ್ಛೆ ಲಂಗುಲಗಾಮಿಲ್ಲದೆ ಮಾತನಾಡುತ್ತಾರೆ ಎಂಬ ವಿಷಯದ ಬಗ್ಗೆ ಹುಜೂರ್‌ರವರಿಗೆ ತಿಳಿದೇ ಇದೆ. ತಮ್ಮಂತಹ ಒಡೆಯರು ನಮ್ಮನ್ನು ಸ್ವಂತ ಪುತ್ರರಂತೆ ಪೋಷಣೆ ಮಾಡಿದ್ದೀರಿ ತಮ್ಮಂತಹ ವ್ಯಕ್ತಿಗೆ ನಾವು ಏನಾದರೂ ಹಾನಿಯನ್ನು ಉಂಟುಮಾಡಿದಲ್ಲಿ ತಮ್ಮಂತಹ ದಯಮಯನಾದ ಮಾಲೀಕರು ನಮಗೆ ಇನ್ನೆಲ್ಲಿ ಸಿಗಲು ಸಾಧ್ಯ? ಒಂದು ವೇಳೆ ಹುಜೂರ್‌ರವರು ನಮ್ಮಂತಹ ಉಪ್ಪಿನ ಋಣ ತೀರಿಸುವ ಮನಃಸ್ಥಿತಿಯ ಪುತ್ರರ ಬಗ್ಗೆ ಕೋಪಗೊಂಡಲ್ಲಿ ನಮ್ಮಂತಹ ನಂಬಿಕಸ್ಥ ಪುತ್ರರು ತಮಗೆ ಎಲ್ಲಿ ದೊರಕಲು ಸಾಧ್ಯ?" ಮುಲ್ಕ್ ಮುಸರತ್‌ನ ಈ ಮಾತುಗಳನ್ನು ಕೇಳಿ ಜಲಾಲುದ್ದೀನನು ನಗತೊಡಗಿದ ಮತ್ತು ಅವನ ಕ್ರೋಧವೆಲ್ಲವೂ ಮಾಯವಾಯಿತು. ಮತ್ತು ಅವನು ತನ್ನ ಕೈಗಳಿಂದ ಶರಾಬಿನ ಬಟ್ಟಲುಗಳನ್ನು ತುಂಬಿ ಆ ಸರ್ದಾರರುಗಳಿಗೆ ನೀಡತೊಡಗಿದ. ಮತ್ತು ನುಡಿದ "ನನ್ನ ಜಾಗದಲ್ಲಿ ಒಂದು ವೇಳೆ ಬೇರೆ ಯಾರದರೂ ಬಾದಶಹನು ಇರುತ್ತಿದ್ದಲ್ಲಿ ಅವನು ಕೂಡಲೇ ನಿಮ್ಮನ್ನು ನಿರ್ದಯವಾಗಿ ಕೊಲೆ ಮಾಡುತ್ತಿದ್ದ. ಆದರೆ ಈ ವೃದ್ಧಾಪ್ಯದಲ್ಲಿ ಕ್ರೋಧ ಮತ್ತು ಕ್ರೌರ್ಯದಿಂದ ನಾನು ದೂರ ಸರಿದಿದ್ದೇನೆ ನಾನು ನಿಮ್ಮೆಲ್ಲರನ್ನು ಚೆನ್ನಾಗಿ ಬಲ್ಲೆ. ನೀವುಗಳು ಶರಾಬಿನ ಮತ್ತಿನಲ್ಲಿ ಮರೆತು ಸುಖಲೋಲುಪತೆಯಲ್ಲಿ ಮಗ್ನರಾಗಿದ್ದೀರಿ. ನಿಮಗೆ ಬೇರೆ ಯಾವುದೇ ಕೆಲಸವು ನೆನಪಿನಲ್ಲಿ ಉಳಿದಿಲ್ಲ ಮತ್ತು ನೀವು ನಿಮ್ಮ ಕರ್ತವ್ಯ ಪ್ರಜ್ಞೆಯ ವಲಯದಲ್ಲಿ ಇರುವುದಿಲ್ಲ. ಎಲ್ಲಿ ನೀವು ಮತ್ತು ಎಲ್ಲಿ ಯುದ್ಧಗಳು? ಎಲ್ಲವೂ ಕೂಡ ನಿಮ್ಮ ಬಾಯಿಮಾತಿನ ಪೌರುಷವಾಗಿದೆ. ನಿಮ್ಮಂತಹ ಜನರಿಂದ ಯುದ್ಧಕಲೆಯ ಪರಾಕ್ರಮವು ಸಾಧ್ಯವಾಗದ ವಿಷಯವಾಗಿದೆ. ನಿಮ್ಮೆಲ್ಲರನ್ನು ಕೂಡ ನಾನು ಈ ಸಾರಿ ಮಾಫ್ ಮಾಡಿದ್ದೇನೆ ಮತ್ತು ನಾನು ನಿಮಗೆ ಆಜ್ಞೆಯನ್ನು ಮಾಡುತ್ತಿದ್ದೇನೆ. ತತ್‌ಕ್ಷಣ ನೀವುಗಳೆಲ್ಲರು ನಿಮ್ಮ ನಿಮ್ಮ ಜಹಗೀರಿಗೆ ಹೊರಟು ಹೋಗತಕ್ಕದ್ದು ಮತ್ತು ನಾನು ಎಲ್ಲಿಯವರೆಗೆ ಕರೆಯುವುದಿಲ್ಲವೋ ಅಲ್ಲಿಯವರೆಗೂ ಕೂಡ ನೀವು ಇಲ್ಲಿಗೆ ಬರತಕ್ಕದ್ದಲ್ಲ ಕೂಡಲೇ ಹೊರಡಿ." ಎಂದು ಆಜ್ಞೆ ಮಾಡಿದ.

ಮೌಲಾನ ಸಿರಾಜುದ್ದೀನ್ ಸಾನಿ ಎಂಬವನ ಘಟನೆ:

ಇತಿಹಾಸಕಾರರ ವರದಿಯ ಪ್ರಕಾರ ಗಯಾಸುದ್ದೀನ್ ಬಲ್ಬನ್ ಬಾದಶಹನಾಗಿದ್ದ ಕಾಲಾವಧಿಯಲ್ಲಿ ಜಲಾಲುದ್ದೀನ್ ಖಿಲ್ಜಿಯು ಮಿರ್ ಜಾಮ್‌ದಾರನ ಹುದ್ದೆಗೆ ನೇಮಕವಾಗಿದ್ದ. ಸಮಾನಾದ ಜಹಗೀರು ಆತನ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತಿತ್ತು.

ಆ ದಿನಗಳಲ್ಲಿ ಅತ್ಯಂತ ಖ್ಯಾತ ಕವಿಯಾಗಿದ್ದ ಮೌಲಾನ ಸಿರಾಜುದ್ದೀನ್ ಸಾನಿಯು ಸಮಾನಾದ ಒಂದು ಭಾಗದ ಮೋಜಣಿದಾರನಾಗಿದ್ದ. ಜಲಾಲುದ್ದೀನನು ಕಾನೂನಿನ ರೀತ್ಯಾ ಆ ಮೌಲಾನಾದಿಂದ ತೆರಿಗೆ ವಸೂಲಾತಿಗೆ ನಿಂತ. ತನ್ನಿಂದ ತೆರಿಗೆ ಬಾಕಿಯನ್ನು ವಸೂಲಿ ಮಾಡುತ್ತಿರುವುದರಿಂದ ಸದರಿ ಮೌಲಾನಾಗೆ ತುಂಬಾ ಬೇಸರವಾಯಿತು. ಹೀಗಾಗಿ ಗಯಾಸುದ್ದೀನ್ ಬಲ್ಬನ್‌ನನ್ನು ಹೊಗಳಿ ಮೌಲಾನಾ ಒಂದು ಕಾವ್ಯವನ್ನು ರಚಿಸಿ ಆ ಕಾವ್ಯದಲ್ಲಿ ರಾಜ್ಯದ ಆಡಳಿತ ನಿರ್ವಹಣೆಯ ಬಗ್ಗೆ ತೀವ್ರ ಟೀಕೆಯನ್ನು ಮಾಡಿದ್ದನು. ರಾಜಕಾರಣದಲ್ಲಿ ನಿರತನಾಗಿದ್ದ ಜಲಾಲುದ್ದೀನ್‌ನಿಗೆ ಆ ಕಾವ್ಯವನ್ನು ಓದಲು ಬಿಡುವು ದೊರಕಿರಲಿಲ್ಲ. ಮೌಲಾನಾ ಇನ್ನೊಂದು ಕಾವ್ಯವನ್ನು ಜಲಾಲುದ್ದೀನನ ಗೌರವಾರ್ಥ ರಚಿಸಿ ಅದಕ್ಕೆ "ಖಿಲ್ಜಿನಾಮ" ಎಂದು ಹೆಸರಿಟ್ಟರು. ಜಲಾಲುದ್ದೀನ್ ಆ ಕಾವ್ಯವನ್ನು ಅವಲೋಕಿಸಿದ. ಈ ಕಾರಣದಿಂದ ಮೌಲಾನಾಗೆ ಜಲಾಲುದ್ದೀನನಿಂದ ಹೆದರಿಕೆ ಉಂಟಾಯಿತು. ನಂತರ ಜಲಾಲುದ್ದೀನನ ಕೋಪತಾಪಕ್ಕೆ ಬೆದರಿ ಮೌಲಾನ ಸಮಾನಾವನ್ನು ತೊರೆದು ಬೇರೆ ಕಡೆ ಹೊರಟು ಹೋಗಿದ್ದರು.

ಅದೇ ಕಾಲಾವಧಿಯಲ್ಲಿ ನಡೆದಿದ್ದ ಇನ್ನೊಂದು ಘಟನೆ ಎಂದರೆ ಒಂದು ದಿನ ಜಲಾಲುದ್ದೀನನು ಮಂದಾ ಹರಾಯಿಯ ಹಳ್ಳಿಗಳ ಪೈಕಿ ಒಂದು ಹಳ್ಳಿಯನ್ನು ಲೂಟಿ ಮಾಡುತ್ತಿದ್ದ. ಆಗ ಮಂದಾಹರಾಯಿಯು ಜಲಾಲುದ್ದೀನನ ಮೇಲೆ ಕತ್ತಿಯನ್ನು ಬೀಸಿದ ಹಾಗೂ ಅದರ ಫಲವಾಗಿ ಜಲಾಲುದ್ದೀನನ ಮೋರೆಯ ಮೇಲೆ ಆಳವಾದ ಗಾಯವುಂಟಾಯಿತು. ಆ ಗಾಯದ ಕಲೆಯು ಜಲಾಲುದ್ದೀನನ ಮೋರೆಯ ಮೇಲೆ ಶಾಶ್ವತವಾಗಿ ಮೂಡಿತ್ತು. ತದ ನಂತರ ಜಲಾಲುದ್ದೀನನು ಸಿಂಹಾಸನವನ್ನು ಏರಿದಾಗ ಮೌಲಾನ ಸಿರಾಜುದ್ದೀನ್ ಸಾನಿ ಹಾಗೂ ಮಂದಾಹರಾಯಿ ಇಬ್ಬರೂ ಕೂಡ ತೀವ್ರವಾಗಿ ಚಿಂತಾಕ್ರಾಂತರಾದರು. ಮತ್ತು ಜಲಾಲುದ್ದೀನ್ ಅವರಿಬ್ಬರನ್ನು ಸೆರೆ ಹಿಡಿದು ಪ್ರತೀಕಾರವನ್ನು ಕೈಗೊಳ್ಳುವನೆಂದು ಭಯಗ್ರಸ್ಥರಾದರು ಅವರಿಗೆ ನೆಲೆ ನಿಲ್ಲಲು ಯಾವುದೇ ತಾಣವು ಕಂಡು ಬಾರದೇ ಇದುದ್ದರಿಂದ ಅವರಿಬ್ಬರೂ ತಮ್ಮ ತಮ್ಮ ಪಗಡಿಗಳನ್ನು ಕೊರಳಿನಲ್ಲಿ ಇಳಿ ಬಿದ್ದು (ಆರೋಪಿಗಳ ರೀತಿಯಲ್ಲಿ) ಜಲಾಲುದ್ದೀನನ ಸಮ್ಮುಖದಲ್ಲಿ ಹಾಜರಾದರು. ಅವರಿಬ್ಬರ ಆಗಮನದ ಸುದ್ದಿ ತಿಳಿದೊಡನೆಯೇ ಬಾದಶಹನು ಅವರನ್ನು ಕರೆ ಕಳಿಸಿದ. ಹಾಗೂ ಅವರಿಬ್ಬರನ್ನು ಕಂಡ ಕೂಡಲೇ ಎದ್ದುನಿಂತು ಮೌಲಾನ ಸಿರಾಜುದ್ದೀನ್‌ನನ್ನು ಆಲಂಗಿಸಿದ ಮತ್ತು ಅವರಿಗೆ ಇನಾಮು ಮತ್ತು ಖಿಲ್ಲತ್ತುಗಳನ್ನು ನೀಡಿದ ಮತ್ತು ಅವರ ಸಂಭಾವನೆಯನ್ನು ಕೂಡ ನಿಗದಿಗೊಳಿಸಿದ. ಹಾಗೂ ಇತರೆ ಗಣ್ಯ ಸರ್ದಾರರ ರೀತಿಯಲ್ಲಿ ಅವರು ಆಸ್ಥಾನದಲ್ಲಿ ಉಪಸ್ಥಿತರಿದ್ದು ಆಸ್ಥಾನದ ಸಭಾ ಮರ್ಯಾದೆಗನುಗುಣವಾಗಿ ನಡೆದುಕೊಳ್ಳಲು ಅವರಿಗೆ ನೆರವನ್ನು ನೀಡಿದ. ಜಲಾಲುದ್ದೀನನು ಮಂದಾಹರಾಯಿಯನ್ನು ಕೂಡ ಗೌರವಿಸಿ ಅಪಾರ ಧನಕನಕದಿಂದ ಕೂಡಿದ ಕಾಣಿಕೆಯನ್ನಿತ್ತ.

ಅಲ್‌ಮುಜಾಹಿದ್ ಫೀಸಬೀಲುಲ್ಲಾ ಎಂಬ ಬಿರುದು:

ಜಲಾಲುದ್ದೀನನ ಸನ್ನಡತೆ ಮತ್ತು ಪವಿತ್ರ ಮಾನಸಿಕ ಸ್ಥಿತಿಯ ಬಗ್ಗೆ ಅನೇಕ ದಂತಕಥೆಗಳು ಮೂಡಿದವು. ಅವುಗಳ ಪೈಕಿ ಒಂದು ಪ್ರಸಂಗ ಏನೆಂದರೆ ಒಂದು ಸಾರಿ ಜಲಾಲುದ್ದೀನನ ಮನಸ್ಸಿನಲ್ಲಿ ಒಂದು ಆಲೋಚನೆಯೊಂದು ಮೂಡಿತು. ಮುಸ್ಲಿಮೇತರ ಮೊಘಲರೊಡನೆ ಅನೇಕ ಯುದ್ಧಗಳನ್ನು ಮಾಡಿದ್ದ ಮತ್ತು ಮುಸ್ಲಿಮರನ್ನು ಅವರ ಕ್ರೌರ್ಯ ಮತ್ತು ಹಿಂಸೆಯಿಂದ ರಕ್ಷಣೆಯನ್ನು ನೀಡಿದ್ದ. ಆದ್ದರಿಂದ ಮಸೀದಿಗಳಲ್ಲಿ ಪ್ರಾರ್ಥನೆಗಳನ್ನು ನಡೆಸುವ ಗುರುಗಳು ಪ್ರಾರ್ಥನಾ ವೇದಿಕೆಯಿಂದ ಅವನನ್ನು "ಅಲ್‌ಮುಜಾಹಿದ್‌ಫೀಸಬೀಲುಲ್ಲಾ" (ಅಲ್ಲಾಹನ ಹಾದಿಯ ವೀರಯೋಧ) ಎಂಬ ಬಿರುದಿನಿಂದ ಸಂಬೋಧಿಸಿದಲ್ಲಿ ತನಗೆ ಸೂಕ್ತ ಗೌರವವನ್ನು ಸಲ್ಲಿಸಿದಂತಾಗುತ್ತದೆ ಎಂಬ ಆಲೋಚನೆ ಅವನ ಮನದಲ್ಲಿ ಮೂಡಿತು ಈ ಆಲೋಚನೆ ಮೂಡಿದ ಕೂಡಲೇ ಜಲಾಲುದ್ದೀನನು ತನ್ನ ಪತ್ನಿಯಾದ ಮಲ್ಲಿಕಾ ಜಹಾನ್‌ನೊಂದಿಗೆ ನುಡಿದ "ಯಾವುದಾದರೂ ಒಂದು ಪವಿತ್ರ ಸಂದರ್ಭದಲ್ಲಿ ಧಾರ್ಮಿಕ ವಿದ್ವಾಂಸರು ಮತ್ತು ಗುರುಗಳು ಇಲ್ಲಿಗೆ ಆಗಮಿಸಿದಾಗ ನೀನು ಅವರ ಬಳಿ ಯಾರಾದರೂ ಒಬ್ಬ ವ್ಯಕ್ತಿಯನ್ನು ಕಳುಹಿಸಿ ಅವನ ಮೂಲಕ ಶುಕ್ರವಾರದಂದು ಮಸೀದಿಯಲ್ಲಿ ನಡೆಯುವ ಪ್ರವಚನಗಳಲ್ಲಿ ನನ್ನನ್ನು "ಅಲ್ಲಮುಜಾಹಿದ್ ಫೀಸಬೀಲುಲ್ಲಾ" (ಅಲ್ಲಾಹನ ಹಾದಿಯ ವೀರಯೋಧ) ಎಂಬ ಬಿರುದಿನಿಂದ ಸಂಬೋಧಿಸಬೇಕೆಂದು ಆ ಪಂಡಿತರು ಮತ್ತು ಗುರುಗಳಿಗೆ ಹೇಳಿಸು" ಅವನು ಹೀಗೆ ಆಲೋಚನೆ ಮಾಡಿದ ಕೆಲವೇ ದಿನಗಳ ನಂತರ ಸುಲ್ತಾನ್ ಮುಅಜುದ್ದೀನ್ ಕೈಖಬಾದನ ಮಗಳ ಮದುವೆಯು ರಾಜಕುಮಾರ ಖದರ್‌ಖಾನ್‌ನೊಂದಿಗೆ ನಿಶ್ಚಯವಾಯಿತು ಸಂಪ್ರದಾಯದ ರೀತ್ಯಾ ಎಲ್ಲಾ ಮತ ಪಂಡಿತರು, ಗುರುಗಳು, ವಿದ್ವಾಂಸರು ಶುಭಾಷಯಗಳನ್ನು ಹೇಳಲು ಬಾದಶಹನ ಸನ್ನಿಧಿಯಲ್ಲಿ ಹಾಜರಾದರು. ಆಗ ಜಲಾಲುದ್ದೀನನ ನಿರ್ದೇಶನದ ರೀತ್ಯಾ ಆತನ ರಾಣಿಯಾದ ಮಲ್ಲಿಕಾ ಜಹಾನ್ ಆ ಮತ ಪಂಡಿತರು ಮತ್ತು ಗುರುಗಳನ್ನು ಕಂಡು ತನ್ನ ಕೋರಿಕೆಯನ್ನು ಅವರ ಮುಂದೆ ಸಲ್ಲಿಸಿದಳು. ರಾಣಿಯ ಸದರಿ ಕೋರಿಕೆಯನ್ನು ಆಲಿಸಿದ ಎಲ್ಲಾ ಧರ್ಮ ಗುರುಗಳು ಮತ್ತು ವಿದ್ವಾಂಸರು ಆಕೆಯ ಸಲಹೆಯನ್ನು ಒಮ್ಮತದಿಂದ ಸ್ವೀಕರಿಸಿದರು ಹಾಗೂ ಬಾದಶಹನಿಗೆ ಸದರಿ ಬಿರುದಿನಿಂದ ಪ್ರವಚನಗಳಲ್ಲಿ ಸಂಬೋಧಿಸುವುದು ಅತ್ಯಂತ ಸೂಕ್ತವಾಗಿದೆ ಎಂದು ನಿರ್ಧರಿಸಿದರು.

ತಿಂಗಳ ಮೊದಲನೆಯ ತಾರೀಕಿನಿಂದ ಈ ಧರ್ಮಗುರುಗಳು ಮತ್ತು ವಿದ್ವಾಂಸರ ತಂಡವು ಬಾದಶಹನೊಂದಿಗೆ ಸಮಾಲೋಚನೆಗಾಗಿ ಹಾಜರಾದರು. ಆಗ ಆ ಧರ್ಮಗುರುಗಳ ತಂಡದ ನಾಯಕರಾಗಿದ್ದ ಖಾಜಿ ಫಕ್ರುದ್ದೀನ್ ನಾಫಿಲರವರು ಬಾದಶಹನ ಎದುರು ಒಂದು ಕೋರಿಕೆಯನ್ನು ಇಟ್ಟರು "ಎಲ್ಲಾ ವಿದ್ವಾಂಸರು ಖಾಜಿಗಳು ಮತ್ತು ಮುಫ್ತಿಗಳಾದ ನಮ್ಮಗಳ ಇಚ್ಛೆ ಏನೆಂದರೆ ತಾವು ಅನೇಕ ಬಾರಿ

ಮುಸ್ಲಿಮೇತರೊಂದಿಗೆ ಯುದ್ಧ ಮಾಡಿದ್ದೀರಿ ಆದ್ದರಿಂದ ತಮ್ಮ ಹೆಸರಿನ ಜೊತೆಯಲ್ಲಿ ಎಲ್ಲಾ ಪ್ರವಚನಗಳಲ್ಲಿಯೂ "(ಅಲ್‌ಮುಜಾಹಿದ್ ಫೀಸಬೀಲುಲ್ಲಾ) ಎಂಬ ಬಿರುದಿನ ಮೂಲಕ ತಮಗೆ ಗೌರವವನ್ನು ನೀಡಲು ನಿರ್ಧರಿಸಿದ್ದೇವೆ." ಅವರ ಈ ಕೋರಿಕೆಯನ್ನು ಕೇಳಿದೊಡನೆಯೇ ಬಾದಶಹನು ರೋದಿಸತೊಡಗಿದ. ಮತ್ತು ನುಡಿದ "ಮಲ್ಲಿಕಾ ಜಹಾನ್ ಮಹಾರಾಣಿಯವರನ್ನು ನಾನೇ ಈ ವಿಷಯದ ಕಡೆ ಗಮನವನ್ನು ಸೆಳೆದಿದ್ದೆ ಮತ್ತು ಆಕೆಯು ನನ್ನ ಪ್ರೇರೇಪಣೆಯ ಮೇರೆಗೆ ಈ ಕೋರಿಕೆಯನ್ನು ತಮ್ಮ ಎದುರಿಗೆ ಇಟ್ಟಿದ್ದರು ಆದರೆ ಈ ಸಲಹೆಯನ್ನು ಮಹಾರಾಣಿಯ ಎದುರಿಗೆ ಪ್ರಸ್ತಾಪ ಮಾಡಿದ ನಂತರ ನನ್ನ ಈ ಇರಾದೆಯ ಬಗ್ಗೆ ಗಮನವನ್ನು ಕೇಂದ್ರೀಕರಿಸಿದಾಗ ನನಗೆ ತೀರಾ ಲಜ್ಜೆ ಉಂಟಾಯಿತು. ನಾನು ಎಂದಿಗೂ ಈ ಬಿರುದನ್ನು ಹೊಂದಲು ಯೋಗ್ಯನೆಂದು ಪರಿಭಾವಿಸುವುದಿಲ್ಲ. ನಾನು ಇದುವರೆಗೂ ಮಾಡಿರುವ ಯುದ್ಧಗಳ ಪೈಕಿ ಒಂದೇ ಒಂದು ಯುದ್ಧವು ಕೂಡ ಅಲ್ಲಾಹನ ಹಾದಿಯಲ್ಲಿ ನಾನು ಬಲಿಯಾಗುವ ಸಲುವಾಗಿ ಆಗಲಿ ಅಥವಾ ಇಸ್ಲಾಂ ಧರ್ಮದ ಮೇಲ್ಮೆಗಾಗಿ ಮಾಡಿದುದು ಅಲ್ಲ. ಬದಲಿಗೆ ನಾನು ಪ್ರತಿಯೊಂದು ಯುದ್ಧವನ್ನು ಕೂಡ ನನ್ನ ವೈಯಕ್ತಿಕ ಕಾರಣಗಳಿಗಾಗಿ ಅಂದರೆ ನಾನು ಹೆಸರುವಾಸಿಯಾಗಲು ಮತ್ತು ರಾಜ ಮನ್ನಣೆಯನ್ನು ಪಡೆಯಲು ಮಾಡಿದುದಾಗಿದೆ. ಅಲ್ಲಿ ನೆರೆದಿದ್ದ ಎಲ್ಲಾ ವಿದ್ವಾಂಸರು ಜಲಾಲುದ್ದೀನನ ಈ ಪ್ರತಿರೋಧವನ್ನು ದೂರಮಾಡಲು ಇನ್ನಿಲ್ಲದ ಪ್ರಯತ್ನವನ್ನು ಮಾಡಿದರು ಹಾಗೂ ಮೇಲೆ ಹೇಳಿದ ಬಿರುದಿನಿಂದ ಸಂಬೋಧಿಸಲು ಅವನ ಅಪ್ಪಣೆಯನ್ನು ಕೋರಿದರು. ಆದರೆ ಜಲಾಲುದ್ದೀನನು ಅವರ ಯಾವುದೇ ಅನುರೋಧದ ಪ್ರಯತ್ನದಿಂದಲೂ ಪ್ರಭಾವಿತನಾಗಲಿಲ್ಲ ಅವರುಗಳು ನಿರಾಶರಾಗಿ ಮರಳಿದರು.

ಸೈಯದಿ ಮೌಲಾ :

ಈ ಸಭ್ಯ ನಡವಳಿಕೆಯ ಸಜ್ಜನ ಬಾದಶಹನ ಕಾಲಾವಧಿಯಲ್ಲಿ ಘಟಿಸಿದ ಇನ್ನೊಂದು ಉಲ್ಲೇಖನಾರ್ಹ ಘಟನೆ ಎಂದರೆ ಸೈಯಾದಿ ಮೌಲಾ ಎಂಬ ಹೆಸರಿನ ಒಬ್ಬ ಹಿರಿಯ ವ್ಯಕ್ತಿಯ ಕೊಲೆಯ ಘಟನೆಯಾಗಿದೆ. ಇದರ ಬಗ್ಗೆ ವಿವರವಾಗಿ ಇತಿಹಾಸಕಾರರಾದ ಬರ್ನಿ ಮತ್ತು ಸದರ್ ಜಹಾನ್ ಗುಜರಾತಿ ತಮ್ಮ ಇತಿಹಾಸ ಗ್ರಂಥಗಳಲ್ಲಿ ವರದಿ ಮಾಡಿದ್ದಾರೆ. ಪ್ರಖ್ಯಾತ ಸರ್ದಾರನಾದ ಫಕ್ರುದ್ದೀನ್‌ನ ಕೊತ್ವಾಲನ ಸಾವು ಸಂಭವಿಸಿದ ನಂತರ ಗಯಾಸುದ್ದೀನ್ ಬಲ್ಬನ್ನನ ಕಾಲಾವಧಿಯ ಎಲ್ಲಾ ಸರ್ದಾರರು ಅತ್ಯಂತ ಚಿಂತಾಕ್ರಾಂತರಾದರು. ಆ ಸರ್ದಾರರುಗಳು ಫಕ್ರುದ್ದೀನ್ ಕೊತ್ವಾಲನ ನೆರವಿನ ಮೇಲೆ ತಮ್ಮ ಬದುಕನ್ನು ಸಾಗಿಸುತ್ತಿದ್ದರು. ಹೀಗಾಗಿ ಅವನ ಸಾವಿನ ಸುದ್ದಿಯನ್ನು ಕೇಳಿದ ಕೂಡಲೇ ಇವರೆಲ್ಲರೂ ಕಂಗೆಟ್ಟು ಹೋದರು. ಅದೇ ರೀತಿಯಲ್ಲಿ ಹನ್ನೆರಡು ಸಾವಿರ ಹಾಫೀಸ್ – ಎ–ಕುರಾನ್ (ಕುರಾನನ್ನು ಕಂಠ ಪಾಠ ಮಾಡಿದ್ದವರನ್ನು ಹಾಫೀಸ್–ಎ–ಕುರಾನ್ ಎನ್ನುತ್ತಾರೆ.) ಪ್ರತಿದಿನ ಒಂದು ಸಾವಿರ

ಕುರಾನಿನ ಪಠಣವನ್ನು ಮಾಡಿದ್ದವರು ಕೂಡ ನಿರುದ್ಯೋಗಿಗಳಾಗಿ ಜೀವನ ನಿರ್ವಹಣೆಗಾಗಿ ಪ್ರಯಾಸ ಪಡತೊಡಗಿದರು. ಮತ್ತು ಸಾವಿರಾರು ಸಿಪಾಯಿಗಳು ಮತ್ತು ಶಿಷ್ಯಗಣದವರಿಗೆ ಮುಲ್ಕ್ ಫಕ್ರುದ್ದೀನನು ಆಶ್ರಯದಾತನಾಗಿದ್ದ ಒಂದೊಂದು ಅನ್ನದ ಅಗುಳಿಗೂ ಯಾಚಿಸತೊಡಗಿದರು. ಈ ಎಲ್ಲಾ ದಿಕ್ಕೆಟ್ಟವರು ಸಯ್ಯದಿ ಮೌಲಾನ ಆಶ್ರಮದಲ್ಲಿ ಆಶ್ರಯವನ್ನು ಪಡೆದರು.

'ಮುಲ್‌ಹಕಾತೆ – ತಬ್‌ಖಾತೆ ನಾಸಿರಿ' ಎಂಬ ಗ್ರಂಥದಲ್ಲಿ ಶೇಕ್ ಐನುದ್ದೀನ್ ಬಿಜಾಪುರಿಯವರು ಸಯ್ಯದಿ ಮೌಲಾನ ಬಗ್ಗೆ ವಿವರಗಳನ್ನು ದಾಖಲಿಸಿದ್ದಾರೆ. ಸಯ್ಯದಿ ಮೌಲಾ ಫಕೀರರ ವೇಷಭೂಷಣದಲ್ಲಿ ಜರ್ಜಾನಿನಿಂದ ಪಶ್ಚಿಮ ದೇಶಕ್ಕೆ ಆಗಮಿಸಿದ್ದು ಅಲ್ಲಿ ದರವೇಷ ಮತ್ತು ಸೂಫಿಗಳ ಸಂಘದಲ್ಲಿ ಉಳಿದು ಸುದೀರ್ಘಕಾಲದವರೆಗೂ ದೈವ ಸಾಕ್ಷಾತ್ಕಾರದ ಸಿದ್ಧಿಯಲ್ಲಿ ತೊಡಗಿದ್ದರು. ಅಲ್ಲಿ ಸಿದ್ಧಿಯನ್ನು ಪಡೆದ ನಂತರ ತನ್ನ ಸ್ವದೇಶವಾದ ಜರ್ಜಾನ್‌ಗೆ ಮರಳಿದರು. ಜರ್ಜಾನಿನಲ್ಲಿ ಕೆಲವು ದಿನಗಳ ಕಾಲ ನೆಲೆಸಿದ ನಂತರ ಅವರಿಗೆ ಹಜರತ್ ಶೇಕ್ ಫರಿದುದ್ದೀನ್ ಗಂಜ್ ಶಕರ್‌ರವರನ್ನು ಭೇಟಿಯಾಗಬೇಕೆಂಬ ಬಯಕೆ ಉಂಟಾಯಿತು. ಈ ಬಗ್ಗೆ ಹಜರತ್ ಫರೀದ್ ಗಂಜ್ ಶಕರ್‌ರವರ ಬಳಿ ಅನುಮತಿಯನ್ನು ಕೋರಿದಾಗ ಸದರಿಯವರು ಅವರ ಕೋರಿಕೆಯನ್ನು ಮನ್ನಿಸಿ ಅನುಮತಿಯನ್ನು ನೀಡಿದರು. ಮತ್ತು ಸಯ್ಯದಿ ಮೌಲಾ ದೆಹಲಿಗೆ ಆಗಮಿಸಿ ಅಲ್ಲಿಯೇ ನೆಲೆಸಿದರು. ತದ ನಂತರ ಸಯ್ಯದಿ ಮೌಲಾರವರು ಅಜೋಧನ್‌ನಲ್ಲಿ ವಾಸ್ತವ್ಯವನ್ನು ಹೂಡಿದರು. ಆಗ ಹಜರತ್ ಗಂಜ್ ಶಕರ್‌ರವರು ಅವರಿಗೆ ಅಪ್ಪಣೆಯನ್ನು ನೀಡಿ ಅವರ ಬಯಕೆಯಂತೆ ದೆಹಲಿಗೆ ಹೋಗಿ ದೆಹಲಿಯಲ್ಲಿ ಜನರೊಡನೆ ಸಂಪರ್ಕವನ್ನು ಸಾಧಿಸಿ ನಂತರ ತಮ್ಮ ಆಶ್ರಮವೊಂದನ್ನು ಅಲ್ಲಿಯೇ ಸ್ಥಾಪಿಸುವಂತೆ ಆದೇಶವನ್ನು ನೀಡಿದರು. ಮತ್ತು ಅಲ್ಲಿ ಫಕೀರರು ಮತ್ತು ದರ್ವೇಶರ ಅಗತ್ಯವನ್ನು ಪೂರೈಸುವಂತೆ ತಿಳಿಸಿದರು. ಅಷ್ಟೇ ಅಲ್ಲದೆ "ಈ ಬಗ್ಗೆ ನಾನು ಒಂದು ಹಿತವಚನವನ್ನು ನುಡಿಯುತ್ತೇನೆ ದೆಹಲಿ ತಲುಪಿದ ನಂತರ ಸರ್ದಾರರು ಮತ್ತು ಆಡಳಿತಗಾರರೊಡನೆ ಹೆಚ್ಚಿನ ಸಂಪರ್ಕವನ್ನು ಸಾಧಿಸುವುದು ಬೇಡ ಹಾಗೂ ಅವರ ಸಂಪರ್ಕವನ್ನು ತ್ಯಜಿಸಬೇಕು. ಏಕೆಂದರೆ ಅಧಿಕಾರ ಸ್ಥಾನದಲ್ಲಿರುವ ಸರ್ದಾರರೊಡನೆ ಸಂಪರ್ಕವನ್ನು ಬೆಳೆಸಿದಲ್ಲಿ ದರ್ವೇಶರು ಮತ್ತು ಫಕೀರರಿಗೆ ಯಾವಾಗಲೂ ನಷ್ಟವುಂಟಾಗುತ್ತದೆ. ಅಷ್ಟೇ ಅಲ್ಲದೆ ಅಂತಹ ಅಧಿಕಾರಸ್ಥರ ಗೆಳೆತನವು ತಮ್ಮಂತಹವರ ಮರಣಕ್ಕೂ ಕಾರಣೀ ಭೂತವಾಗುತ್ತದೆ".

ದಾನ ಧರ್ಮ ಮತ್ತು ಅನ್ನದಾನ:

ಸಯ್ಯದಿ ಮೌಲಾ ದೆಹಲಿ ತಲುಪಿದ ನಂತರ ದೆಹಲಿಯಲ್ಲಿ ಬೃಹತ್ತಾದ ಒಂದು ಆಶ್ರಮವನ್ನು ನಿರ್ಮಾಣ ಮಾಡಿದರು. ಹಾಗೂ ಯಾಚಕ ಫಕೀರರು ಮೊದಲಾದವರಿಗೆ ಅವಶ್ಯಕ ಅನ್ನ, ಬಟ್ಟೆ ಮೊದಲಾದವುಗಳನ್ನು ಒದಗಿಸ ತೊಡಗಿದರು. ಪ್ರಯಾಣಿಕರು

ಮತ್ತು ಬಡವರು ಪ್ರತಿನಿತ್ಯ ಮಠಕ್ಕೆ ಹೋಗುತ್ತಿದ್ದು ತಮ್ಮ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದರು ಶುಕ್ರವಾರದ ಮಧ್ಯಾಹ್ನದ ನಮಾಜಿಗೆ ಸಯ್ಯದಿ ಮೌಲಾ ಮಸೀದಿಗೆ ಹೋಗುತ್ತಿರಲಿಲ್ಲ. ಬದಲಿಗೆ ತಮ್ಮ ಮನೆಯಲ್ಲಿ ಏಕಾಂಗಿಯಾಗಿ ನಮಾಜನ್ನು ನಿರ್ವಹಿಸುತ್ತಿದ್ದರು. ಅವರು ಹಿರಿಯ ದೈವಭಕ್ತರು ಮತ್ತು ಸೂಫಿ ಸಂತರ ರೀತಿಯಲ್ಲಿ ಸಂಘಟಿತವಾಗಿ ಜಮಾತ್‌ನ ಜೊತೆಯಲ್ಲಿ ನಮಾಜನ್ನು ನಿರ್ವಹಿಸುತ್ತಿರಲಿಲ್ಲ. ಆದರೆ ತಮ್ಮ ವೈಯಕ್ತಿಕ ಸಿದ್ಧಿಯ ಮೂಲಕ ಆತ್ಮಸಾಕ್ಷಾತ್ಕಾರವನ್ನು ಕಂಡುಕೊಂಡಿದ್ದರು. ಒಂದು ಚಾದರ ಮಾತ್ರ ಅವರ ಉಡುಪು ಆಗಿತ್ತು. ಬಹಳ ಸರಳವಾದ ಆಹಾರ ಅಭ್ಯಾಸವನ್ನು ರೂಢಿಸಿಕೊಂಡಿದ್ದರು. ಮಠದ ಪಾಕಶಾಲೆಯಲ್ಲಿ ಅತ್ಯಂತ ರುಚಿಕಟ್ಟಾದ ಭಕ್ಷ್ಯಭೋಜನಗಳು ತಯಾರಾಗುತ್ತಿದ್ದವು. ಆದರೆ ಅವರು ಮಾತ್ರ ಅಕ್ಕಿಯ ರೊಟ್ಟಿಯನ್ನು ನೀರಿನಲ್ಲಿ ನೆನೆಸಿ ತಿನ್ನುತ್ತಿದ್ದರು. ಅವರ ಸೇವೆಗಾಗಿ ಯಾವ ದಾಸಿಯಾಗಲೀ ಅಥವಾ ಅವರ ದೈಹಿಕ ವಾಂಛೆಯನ್ನು ಪೂರೈಸುವ ಸಲುವಾಗಿ ಯಾವ ಮಹಿಳೆಯೂ ಅವರೊಡನೆ ವಾಸಿಸುತ್ತಿರಲಿಲ್ಲ. ಅವರು ಎಂದಿಗೂ ತಮ್ಮ ದೈಹಿಕ ಬಯಕೆಯನ್ನು ತಲೆ ಎತ್ತಲು ಅವಕಾಶವೇ ನೀಡುತ್ತಿರಲಿಲ್ಲ. ಅವರು ಯಾರಿಂದಲೂ ಯಾವುದೇ ಉಡುಗೊರೆಯಾಗಲಿ, ಅಥವಾ ಕಾಣಿಕೆಯನ್ನಾಗಲಿ ಪಡೆಯುತ್ತಿರಲಿಲ್ಲ. ಆದರೆ ಅತೀವ ದಾನ ಧರ್ಮಾದಿಗಳನ್ನು ಮಾಡುತ್ತಿದ್ದರು. ಸಯ್ಯದಿ ಮೌಲಾರವರ ದಿನನಿತ್ಯದ ಖರ್ಚುವೆಚ್ಚಗಳನ್ನು ಕಂಡ ದೆಹಲಿಯ ಜನತೆಗೆ ಅವರು ರಸವಿದ್ಯೆಯನ್ನು ಕರಗತ ಮಾಡಿಕೊಂಡಿರುವ ಗುಮಾನಿ ಮೂಡಿತ್ತು.

ಗಯಾಸುದ್ದೀನ್ ಬಲ್ಬನ್ನನ ನಂತರ ಕೈಖಬಾದನ ಆಡಳಿತಾವಧಿಯು ವಿಸ್ಮೃತಿಯ ಕಾಲವಾಗಿತ್ತು. ಸಯ್ಯದಿ ಮೌಲಾನ ಖರ್ಚುವೆಚ್ಚಗಳು ಮೊದಲಿಗಿಂತಲೂ ಹೆಚ್ಚಾಗಿ ಕಂಡು ಬರತೊಡಗಿದವು ಮತ್ತು ಎಂದಿಗಿಂತಲೂ ಹೆಚ್ಚಾಗಿ ಅವರು ದಾನಧರ್ಮಾದಿಗಳಲ್ಲಿ ತೊಡಗಿಕೊಂಡರು. ಈ ಕಾಲಾವಧಿಯಲ್ಲಿ ಸಯ್ಯದಿ ಮೌಲಾನು ಹಜರತ್ ಫರೀದ್‌ರವರ ಬುದ್ಧಿವಾದವನ್ನು ಕಡೆಗಣಿಸಿದರು ಮತ್ತು ಸರ್ದಾರರು ಹಾಗೂ ಉನ್ನತರಾಧಿಕಾರಿಗಳು ಮತ್ತು ಅಧಿಕಾರಸ್ಥರೊಡನೆ ತುಂಬಾ ಗೆಳೆತನವನ್ನು ಹೊಂದಿದರು. ಆ ದಿನಗಳಲ್ಲಿ ಅವರು ನೀಡುತ್ತಿದ್ದ ಭಕ್ಷಿಸು ಮತ್ತು ದಾನಧರ್ಮಾದಿಗಳ ಪರಿಕ್ರಮ ಹೇಗಿತ್ತೆಂದರೆ ಆ ನಗರದ ಗಣ್ಯರು ಮತ್ತು ಉನ್ನತ ಅಧಿಕಾರಸ್ಥರ ಒಂದೊಂದು ಭೇಟಿಯ ಸಂದರ್ಭದಲ್ಲಿಯೂ ಸಯ್ಯದಿ ಮೌಲಾ ಎರಡರಿಂದ ಮೂರು ಸಾವಿರ ಚಿನ್ನದ ವರಹಗಳನ್ನು ಇನಾಮಿನ ರೂಪದಲ್ಲಿ ನೀಡುತ್ತಿದ್ದರು. ಆ ಆಶ್ರಮದ ಮೃಷ್ಟಾನ್ನ ಭೋಜನವು ವರ್ಣನಾತೀತವಾಗಿತ್ತು. ಅವರ ಆಶ್ರಮದಲ್ಲಿ ಸರ್ದಾರರು ಮತ್ತು ನವಾಬರ ಸಲುವಾಗಿ ಸದಾ ಕಾಲವು ಅತ್ಯಂತ ಉತ್ಕೃಷ್ಟ ಭೋಜನ ಮತ್ತು ಸ್ವಾದಭರಿತ ಪೇಯಗಳು ಸಿದ್ಧವಾಗಿರುತ್ತಿದ್ದವು. ಅವರ ಮಠದ ಭೋಜನದ ಎದುರಿಗೆ ಬಾದಶಹನ ಅರಮನೆಯ ಅಡುಗೆಯು ಸ್ವಾದರಹಿತವಾಗಿ ಕಂಡು ಬರುತ್ತಿತ್ತು. ಒಂದೊಂದು ದಿನದ ಭೋಜನದ ತಯಾರಿಯ ಸಲುವಾಗಿ ಒಂದು ಸಾವಿರ ಮಣ ಮೈದಾ,

ನಲವತ್ತು ಮಣ ಸಕ್ಕರೆ, ನಲವತ್ತು ಮಣ ಬೆಲ್ಲ, ಐನೂರು ಮಣ ಮಾಂಸ ಮತ್ತು ಅನೇಕ ಅನೇಕ ಮಣ ತುಪ್ಪವು ಅವರ ಪಾಕಶಾಲೆಗೆ ಬೇಕಾಗುತ್ತಿತ್ತು. ಯಾರಿಗಾದರೂ ಏನನ್ನಾದರೂ ನೀಡಬೇಕೆಂದು ಅವರ ಇಚ್ಛೆ ಉಂಟಾದಾಗ ಅವರು ಇಂತಿಂತಹ ಜಾಗದಲ್ಲಿ ಅಥವಾ ಇಂತಹ ಕಲ್ಲಿನ ಅಡಿಯಲ್ಲಿ ಎಷ್ಟು ಚಿನ್ನ ಬೆಳ್ಳಿ ಅಥವಾ ಚಿನ್ನದ ವರಹಗಳು ಸಿಗುತ್ತವೆಯೋ ಅವನ್ನು ನೀನು ತೆಗೆದುಕೋ ಎಂದು ಹೇಳುತ್ತಿದ್ದರು. ಅವರ ಮಾತಿನ ರೀತ್ಯಾ ಆ ಚಾಪೆ ಅಥವಾ ಕಲ್ಲನ್ನು ಸರಿಸಿದಾಗ ಸಯ್ಯದಿ ಮೌಲಾ ಭವಿಷ್ಯ ನುಡಿದಂತೆಯೇ ಆ ವ್ಯಕ್ತಿಗಳಿಗೆ ಸಂಪತ್ತು ದೊರಕುತ್ತಿತ್ತು ಆ ಹಣ ಅಥವಾ ಚಿನ್ನದ ವರಹಗಳನ್ನು ಕಂಡಾಗ ಆಗ ತಾನೇ ಟಂಕಸಾಲೆಯಿಂದ ಅಚ್ಚಾಗಿ ಹೊರಬಂದ ನಾಣ್ಯಗಳಂತೆ ಹೊಳೆಯುತ್ತಿದ್ದವು.

ಆಡಳಿತದ ಲಗಾಮು ಖಿಲ್ಜಿಗಳ ಕೈಸೇರಿ ಜಲಾಲುದ್ದೀನನು ಪಟ್ಟಾಭಿಷಿಕ್ತನಾದ ನಂತರ ಸಯ್ಯದಿ ಮೌಲಾನ ಆಶ್ರಮಕ್ಕೆ ಜನಸಾಗರವೇ ಹರಿದು ಬರತೊಡಗಿತು. ಬಾದಶಹನ ಹಿರಿಯ ಮಗನಾದ ಖಾನೆಖಾನಾನ್ ಸಯ್ಯದಿ ಮೌಲಾನ ಶಿಷ್ಯವರ್ಗದಲ್ಲಿ ಸೇರಿ ಹೋದ ಮತ್ತು ಸಯ್ಯದಿ ಮೌಲಾನನ್ನು ತನ್ನ ದತ್ತು ತಂದೆ ಎಂದು ಭಾವಿಸಿದ ಮತ್ತು ಪ್ರತಿ ದಿನ ಅಲ್ಲಿಗೆ ಭೇಟಿ ನೀಡತೊಡಗಿದ. ಖಾನೆಖಾನಾನ್ ಅಲ್ಲದೆ ಇನ್ನಿತರೆ ಅನೇಕ ಅನೇಕ ಸರ್ದಾರರು ಮತ್ತು ಗಣ್ಯರು ಕೂಡ ಅವರ ಸನ್ನಿಧಿಯಲ್ಲಿ ಹಾಜರಾಗತೊಡಗಿದರು. ಮತ್ತು ಆಶ್ರಮದ ಭೋಜನವು ಅವರಿಗೆ ವಿಶೇಷ ಆಕರ್ಷಣೆಯನ್ನು ಒದಿಗಿಸತೊಡಗಿತು. ಅಂತಹ ಮೃಷ್ಟಾನ್ನ ಭೋಜನವು ಅವರ ಮನೆಗಳಲ್ಲಿಯೂ ಅವರಿಗೆ ಅಲಭ್ಯವಾಗಿತ್ತು. ಈ ಸಂದರ್ಭದಲ್ಲಿ ಸರ್ದಾರ್ ಮುಲ್ಕ್ ಫಕ್ರುದ್ದೀನ್ ಕೊತ್ವಾಲನ ಸಾವು ಸಂಭವಿಸಿತು. ಮತ್ತು ಮೃತನ ಎಲ್ಲಾ ಅವಲಂಬಿತರು ಸಯ್ಯದಿ ಮೌಲಾನ ಆಶ್ರಮದಲ್ಲಿ ಆಶ್ರಯ ಪಡೆದರು. ಆ ಜನರೆಲ್ಲರೂ ಸಯ್ಯದಿ ಮೌಲಾನ ಆಶ್ರಮದ ಪಾಕಶಾಲೆಯ ಅನ್ನವನ್ನು ಉಣ್ಣುತ್ತಿದ್ದರು ಮತ್ತು ಸಯ್ಯದಿ ಮೌಲಾನ ಎಂದಿನ ಇನಾಮಿನ ಭಕ್ಷೀಸಿನ ಕ್ರಮದ ರೀತ್ಯಾ ಪೊದೆಗಳು ಮತ್ತು ಕಲ್ಲಿನ ಅಡಿಯಿಂದ ಚಿನ್ನ ಬೆಳ್ಳಿ ಮತ್ತು ಚಿನ್ನದ ವರಹಗಳನ್ನು ಪಡೆದು ಕೊಂಡು ಐಶ್ವರ್ಯ ಮತ್ತು ಸಂಪತ್ತಿನಿಂದ ಕೂಡಿ ದಿನ ಕಳೆಯ ತೊಡಗಿದರು.

ಸಯ್ಯದಿ ಮೌಲಾನ ಅಧಿಕಾರದ ಕನಸು:

ಈ ಕಾಲಾವಧಿಯಲ್ಲಿ ನಡೆದ ಒಂದು ಘಟನೆಯ ಬಗ್ಗೆ ಹೇಳುವುದಾದರೆ ಒಬ್ಬ ಕುಟಿಲ ಮತ್ತು ಸಂಚುಕೋರ ಸರ್ದಾರನಾದ ಖಾಜಿ ಜಲಾಲುದ್ದೀನ್ ಕಾಶಾನಿಯು ಸಯ್ಯದಿ ಮೌಲಾನ ಆಪ್ತ ವರ್ಗದಲ್ಲಿ ಸೇರಿ ಹೋದ ಮತ್ತು ತನ್ನ ಕುಟಿಲೋಪಾಯ ಉಪಾಯದಿಂದ ಸಯ್ಯದಿ ಮೌಲಾನನ್ನು ಮರಳುಗೊಳಿಸಿದ. ಸಯ್ಯದಿ ಮೌಲಾ ಅವನನ್ನು ತಮ್ಮ ಆಪ್ತ ಗೆಳೆಯನೆಂದು ಪರಿಗಣಿಸಿದರು. ಖಾಜಿ ಕಾಶಾನಿಯು ಸಯ್ಯದಿ ಮೌಲಾನ ಆಶ್ರಮದಲ್ಲಿ ಮೂರು ನಾಲ್ಕು ದಿನಗಳವರೆಗೆ ಅವರ ಅತಿಥಿಯಾಗಿ

ಉಳಿಯುತ್ತಿದ್ದ. ಅವರಿಗೆ ಬಾದಶಹನಾಗುವ ಕನಸನ್ನು ಬಿತ್ತತೊಡಗಿದ. ಖಾಜಿ ಕಾಶಾನಿಯ ಅವರೊಂದಿಗೆ ನುಡಿದ "ಅಲ್ಲಾಹನು ಈ ಸಾಮರ್ಥ್ಯವನ್ನು ತಮಗೆ ನೀಡಿರುವುದು ಏಕೆಂದರೆ ತಾವು ಜನಸಾಮಾನ್ಯರೊಡನೆ ಕರುಣೆ ಮತ್ತು ದಯಾಪರತೆಯಿಂದ ನಡೆದುಕೊಳ್ಳಿ ಎಂದು ಮತ್ತು ರಾಜ್ಯದ ಬಾದಶಹನ ಸ್ಥಾನವು ಅಲ್ಲಾನ ಪ್ರಾತಿನಿಧ್ಯತೆಯಾಗಿದೆ. ದುಷ್ಟರು ಮತ್ತು ಕ್ರೂರಿಗಳಿಂದ ರಾಜ್ಯಾಡಳಿತವನ್ನು ತಾವು ಪಡೆದುಕೊಂಡು ತಮ್ಮ ಸ್ವಾಧೀನವನ್ನು ಹೊಂದಿ ಅಖಂಡ ಜನತೆಗೆ ಅಲ್ಲಾಹ್ ಮತ್ತು ಅವನ ಪೈಗಂಬರ್‌ರವರ ಮಾರ್ಗದರ್ಶನದಿಂದ ರೀತ್ಯಾ ಬದುಕನ್ನು ನಡೆಸಲು ಅವಕಾಶ ಮಾಡಿಕೊಡಿ. ಒಂದು ವೇಳೆ ನೀವು ಆ ಅಧಿಕಾರವನ್ನು ಪಡೆಯುವಲ್ಲಿ ಹಿಂಜರಿದರೆ ನಾಳೆ ಪ್ರಳಯದ ದಿನದಂದು ನೀವು ನಿಮ್ಮ ಕರ್ತವ್ಯ ಲೋಪದ ಬಗ್ಗೆ ಅಲ್ಲಾಹನಿಗೆ ಉತ್ತರವನ್ನು ನೀಡಬೇಕಾಗುತ್ತದೆ." ಶರೀಯತ್‌ನ ಉಪಬಂಧಗಳನ್ನು ಉದ್ಧರಿಸಿ ಆ ಸರ್ದಾರನು ಸಯ್ಯದಿ ಮೌಲಾಗೆ ಎಚ್ಚರಿಸಿದಾಗ ಸಯ್ಯದಿ ಮೌಲಾರವರು ಅದನ್ನು ವಾಸ್ತವತೆ ಎಂದು ಪರಿಗಣಿಸಿ ತಾವು ಅಲ್ಲಾಹನಿಂದ ನಿರ್ದೇಶಿತವಾದ ಕರ್ತವ್ಯವನ್ನು ನಿರ್ವಹಿಸುವ ಸಲುವಾಗಿ ಬಾದಶಹನಾಗಬೇಕೆಂದು ನಿಶ್ಚಯಿಸಿದರು. ಮತ್ತು ಆ ಅಧಿಕಾರವನ್ನು ಪಡೆದುಕೊಳ್ಳುವ ಸಲುವಾಗಿ ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡರು. ಸಯ್ಯದಿ ಮೌಲಾರವರು ರಹಸ್ಯವಾಗಿ ತಮ್ಮ ಪ್ರತಿಯೊಬ್ಬ ಶಿಷ್ಯರಿಗೂ ಬಿರುದು ಬಾವಲಿಗಳನ್ನು ನೀಡತೊಡಗಿದರು. ಮತ್ತು ಬಾದಶಹನ ಅಧಿಕಾರವನನ್ನು ಪಡೆದುಕೊಳ್ಳುವ ಸಲುವಾಗಿ ಪೂರ್ವಯೋಜಿತ ಸಂಚೊಂದನ್ನು ರೂಪಿಸಲಾಯಿತು. ಅದರ ಪ್ರಕಾರ ಸಯ್ಯದಿ ಮೌಲಾರವರ ಶಿಷ್ಯರ ಪೈಕಿ ಇಬ್ಬರು ಪ್ರಮುಖ ಶಿಷ್ಯಂದಿರಾದ ಬಿರಂಜನ್ ಮತ್ತು ಕೊತ್ವಾಲ ನಥಾಯಿ ಪೈಲ್‌ವಾನ್ ಇಬ್ಬರ ಮೇಲೆ ಸಯ್ಯದಿ ಮೌಲಾರವರ ಅಪಾರ ಋಣಗಳಿದ್ದವು. ಶುಕ್ರವಾರದ ದಿನದಂದು ಬಾದಶಹನ ಸವಾರಿಯು ಮಸೀದಿಗೆ ತಲುಪಿದಾಗ ಅವನ ಕೊಲೆಯನ್ನು ಮಾಡುವುದೆಂತಲೂ ಮತ್ತು ಸಯ್ಯದ್ ಸಾಹೇಬರೊಂದಿಗೆ ಅತೀವ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದ ಅವರ ಹತ್ತು ಸಾವಿರ ಮಂದಿ ಶಿಷ್ಯವರ್ಗದವರು ಕೂಡಲೇ ಅವರ ಅಧಿಕಾರವನ್ನು ಒಪ್ಪಿಕೊಂಡು ಅವರ ಹಸ್ತವನ್ನು ಚುಂಬಿಸುವುದರ ಮೂಲಕ ಅವರನ್ನು ಬಾದಶಹನೆಂದು ಘೋಷಿಸಬೇಕೆಂತಲೂ ನಿರ್ಧಾರವಾಯಿತು.

ಸಯ್ಯದಿ ಮೌಲಾನ ಪರೀಕ್ಷೆ:

ಸಯ್ಯದ್ ಸಾಹೇಬರ ಅಂತ್ಯವು ಸಮೀಪಿಸಿತ್ತು ಆದ್ದರಿಂದ ಮೇಲ್ಕಂಡ ಯೋಜನೆಯು ಕಾರ್ಯಗತವಾಗುವ ಮುನ್ನವೇ ಅವರ ಶಿಷ್ಯವೃಂದದ ಪೈಕಿ ಒಬ್ಬನು ದ್ರೋಹ ಬಗೆದು ಬಾದಶಹನಿಗೆ ಸಕಲ ವಿಷಯಗಳನ್ನು ಅರುಹಿದ. ಬಾದಶಹನು ತತ್‌ಕ್ಷಣವೇ ಸಯ್ಯದಿ ಮೌಲಾ ಮತ್ತು ಖಾಜಿ ಕಾಶಾನಿಯನ್ನು ತನ್ನ ಸಮ್ಮುಖದಲ್ಲಿ ಬರಮಾಡಿಕೊಂಡು ಈ ಸಂಚಿನ ಬಗ್ಗೆ ತನಿಖೆಯನ್ನು ಆರಂಭಿಸಿದ. ಅವರಿಬ್ಬರು

ಮತ್ತು ಅವರ ಬೆಂಬಲಿಗರೆಲ್ಲರೂ ಕೂಡಿ ಆ ವಿಷಯವು ಸುಳ್ಳೆಂದು ಸಾಧಿಸಿದರೂ ಬಾದಶಹನು ತರಹೇವಾರಿ ಪ್ರಶ್ನೆಗಳನ್ನು ಕೇಳಿದ. ಆದರೆ ಅವರ್‍ಯಾರೂ ಕೂಡ ತಮ್ಮ ತಪ್ಪನ್ನು ಒಪ್ಪಿಕೊಳ್ಳಲಿಲ್ಲ. ಅವರ ತಪ್ಪನ್ನು ಸಾಬೀತುಗೊಳಿಸಲು ಬಾದಶಹನ ಬಳಿ ಕೂಡ ಯಾವುದೇ ಸಧೃಡವಾದ ಸಾಕ್ಷ್ಯ ಇರಲಿಲ್ಲ. ಹೀಗಾಗಿ ಅವನು ಬಹದ್ದೂರ್‌ಪುರದ ಕಾಡಿನಲ್ಲಿ ಬೃಹತ್ತಾದ ಕೆಂಡದ ಹೊಂಡವನ್ನು ಸಿದ್ಧಗೊಳಿಸಿದ ಮತ್ತು ಸಯ್ಯದಿ ಮೌಲಾ, ಖಾಜಿ ಕಾಶಾನಿ, ಬಿರಂಜನ್ ಕೊತ್ವಾಲ್ ಮತ್ತು ನಥಾಯಿ ಪೈಲ್‌ವಾನ್ ಇವರುಗಳು ಬರಿಗಾಲಿನಲ್ಲಿ ಆ ಕೆಂಡವನ್ನು ಹಾಯಬೇಕೆಂದು ಆದೇಶಿಸಿದ. ತಾವು ಸತ್ಯವಂತರೆಂದು ಸಾಬೀತುಗೊಳಿಸಲು ಕೆಂಡ ಹಾಯುವ ಅಗ್ನಿ ಪರೀಕ್ಷೆಯನ್ನು ಮುಂದಿಟ್ಟ ಬಾದಶಹನ ಆಜ್ಞೆಯ ಮೇರೆಗೆ ತತ್‌ಕ್ಷಣವೇ ಕೆಂಡದ ಹೊಂಡ ಸಿದ್ದವಾಯಿತು. ಜಲಾಲುದ್ದೀನನು ಮತ್ತು ಅವನ ಬೆಂಬಲಿಗರು ಮತ್ತು ಸೈನ್ಯಧಿಕಾರಿಗಳು ಹಾಗೂ ಸರ್ದಾರರುಗಳು ಎಲ್ಲರೂ ಸೇರಿ ಕೆಂಡದ ಹೊಂಡದ ಸಮೀಪ ನಿರ್ಮಿಸಿದ ಒಂದು ಗುಡಾರದಲ್ಲಿ ಪ್ರತ್ಯಕ್ಷದರ್ಶಿಗಳಾಗಿ ನೆರೆದರು. ಎಲ್ಲಾ ಆರೋಪಿಗಳು ಅಲ್ಲಾಹನ ಹೆಸರಿನ ಸ್ಮರಣೆಯನ್ನು ಮಾಡುತ್ತ ಕೆಂಡ ಹಾಯಲು ಸಿದ್ಧರಾದಾಗ ಜಲಾಲುದ್ದೀನ್ ಖಿಲ್ಜಿಗೆ ಅವರ ಮೇಲೆ ದಯೆ ಮೂಡಿತು ಹಾಗೂ ಅವನು ಅವರನ್ನು ತಡೆದು ಈ ಬಗ್ಗೆ ಧಾರ್ಮಿಕ ಪಂಡಿತರಿಂದ ಧರ್ಮಸೂಕ್ಷ್ಮವನ್ನು ಕೇಳಿದ. ಆಗ ಎಲ್ಲಾ ವಿದ್ವಾಂಸರು ಕೂಡ ಒಕ್ಕೊರಳಿನಿಂದ ನುಡಿದರು "ಸುಡುವುದು ಅಗ್ನಿಯ ಮೂಲ ಸ್ವಭಾವವಾಗಿದೆ. ಯಾರಾದರೂ ಒಬ್ಬ ವ್ಯಕ್ತಿಯು ಸತ್ಯವಂತನಿರಲಿ ಅಥವಾ ಸುಳ್ಳು ನುಡಿಯುವವನಿರಲಿ ಅವನು ಕೆಂಡದ ಮೇಲೆ ಕಾಲಿಟ್ಟಾಗ ಬೆಂಕಿಯ ಅವನನ್ನು ಸುಡುತ್ತದೆ. ಈ ರೀತಿಯ ಸಮಸ್ಯೆಗಳ ತೀರ್ಮಾನವನ್ನು ಕೆಂಡ ಹಾಯುವುದರ ಮೂಲಕ ನಿರ್ಧರಿಸುವಲ್ಲಿ ಇಸ್ಲಾಂ ಅನುಮತಿಯನ್ನು ನೀಡುವುದಿಲ್ಲ". ಈ ಮಾತನ್ನು ಕೇಳಿ ಜಲಾಲುದ್ದೀನನು ತನ್ನ ನಿರ್ಧಾರವನ್ನು ತ್ಯಜಿಸಿದ ಮತ್ತು ಬೆಂಕಿಯನ್ನು ನಂದಿಸುವಂತೆ ಆದೇಶವನ್ನು ನೀಡಿದ.

ಸಯ್ಯದಿ ಮೌಲಾನ ಕೊಲೆ:

ಜಲಾಲುದ್ದೀನ್‌ನು ಖಾಜಿ ಜಲಾಲ್ ಕಾಶಾನಿಯನ್ನು ಬದಾಯೂನಿನ ನ್ಯಾಯಧೀಶನನ್ನಾಗಿ ನೇಮಕ ಮಾಡಿ ಅವನನ್ನು ದೆಹಲಿಯಿಂದ ಹೊರಗೆ ಕಳುಹಿಸಿದ. ಮತ್ತು ಇನ್ನಿತರೆ ಅನೇಕ ಬಲ್ಬನ್ ವಂಶಸ್ಥ ಸರ್ದಾರರನ್ನು ಕೂಡ ದೆಹಲಿಯಿಂದ ದೂರ ಕಳುಹಿಸಿದ ಹಾಗೂ ಬಾದಶಹನ ಕೊಲೆಯನ್ನು ಮಾಡುವ ಸಲುವಾಗಿ ನೇಮಿಸಿದ್ದ ಇಬ್ಬರು ಕೊತ್ವಾಲರ ಕೊಲೆ ಮಾಡಿಸಿದ. ಮತ್ತು ಜಲಾಲುದ್ದೀನ್‌ನು ಸಯ್ಯದಿ ಮೌಲಾನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಕೆಂಪಿನ ಅರಮನೆಯ ಕಡೆ ಹಿಂದುರುಗಿದ. ಬಾದಶಹನು ಅರಮನೆಯೊಳಗಡೆ ಹೋಗಿ ಅಲ್ಲಿ ವಿಶ್ರಾಂತಿಯನ್ನು ಪಡೆದ ಮತ್ತು ಸಯ್ಯದಿ ಮೌಲಾನನ್ನು ಕೆಂಪಿನ ಅರಮನೆಯ ಬಳಿ ಕೈಕಟ್ಟಿ ನಿಲ್ಲುವಂತೆ

ಆದೇಶ ಮಾಡಿದ. ಜಲಾಲುದ್ದೀನ್‌ನು ಮೇಲ್ಕಂಡ ಸಂಚಿನ ಬಗ್ಗೆ ಸಯ್ಯದ್ ಸಾಹೇಬರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ. ಆ ಪ್ರಶ್ನಾವಳಿಗಳಿಗೆ ಉತ್ತರವನ್ನು ಸಯ್ಯದ್ ಸಾಹೇಬರು ಅತ್ಯಂತ ಧೈರ್ಯ ಮತ್ತು ತಾಳ್ಮೆಯಿಂದ ನೀಡಿದರು. ಶರೀಯತ್‌ನ ಪ್ರಕಾರವಾಗಲಿ ಅಥವಾ ಕಾನೂನು ರೀತ್ಯಾವಾಗಲೀ ಯಾವುದೇ ರೀತಿಯಲ್ಲಿಯೂ ಸಯ್ಯದಿ ಮೌಲಾನ ಸಂಚನ್ನು ಸಾಬೀತು ಪಡಿಸಲು ಬಾದಶಹನಿಗೆ ಸಾಧ್ಯವಾಗಲಿಲ್ಲ. ಆದರೆ ಬಾದಶಹನಿಗೆ ಅವರ ಅಸ್ತಿತ್ವವು ಅಪಾಯಕಾರಿಯೆಂದು ಭಾಸವಾಯಿತು. ಅವನು ಶೇಕ್ ಅಬು ಬಕ್ಕರ್ ತೋಸಿ ಹೈದರಿ ಮತ್ತು ಇನ್ನಿತರೆ ಹೈದರಿ ದರ್ವೇಶರನ್ನು ಕೆಂಪಿನ ಅರಮನೆಯ ಬಳಿ ಕರೆಸಿದ ಮತ್ತು ನುಡಿದ "ದರ್ವೇಶ್ ಸಂತನಾದ ಸಯ್ಯದಿ ಮೌಲಾನು ನನ್ನ ಜೊತೆ ಹೇಗೆ ವರ್ತಿಸಿದ್ದಾನೆ ನೋಡಿ; ನನ್ನ ದೇಶದಲ್ಲಿ ಅಶಾಂತಿ ಮತ್ತು ಪಿತೂರಿಯನ್ನು ಹರಡಲು ಎಂತಹ ಯೋಜನೆಯನ್ನು ತಯಾರಿಸಿದ್ದಾನೆ. ನಾನು ನ್ಯಾಯ ತೀರ್ಮಾನವನ್ನು ನಿಮ್ಮ ಕೈಯಲ್ಲಿ ನೀಡುತ್ತಿದ್ದೇನೆ. ನಿಮಗೆ ಹೇಗೆ ಸರಿ ಕಾಣುತ್ತದೋ ಆ ರೀತ್ಯಾ ನ್ಯಾಯ ತೀರ್ಮಾನವನ್ನು ಮಾಡಿ ಮತ್ತು ನನಗೆ ನೆಮ್ಮದಿಯನ್ನು ಮಾಡಿಕೊಡಿ" ಬಾದಶಹನ ಮಾತು ಮುಗಿಯುವಷ್ಟರಲ್ಲಿಯೇ ಸಂಜರಿ ಎಂಬ ಹೆಸರಿನ ಒಬ್ಬ ದರ್ವೇಶನು ಮುಂದೆ ಬಂದ. ಆತನ ಮೇಲೆ ಬಾದಶಹನ ಅನಂತ ಉಪಕಾರಗಳಿದ್ದವು. ಅವನು ಬಾದಶಹನ ಋಣವನ್ನು ತೀರಿಸಿದ ಮತ್ತು ಸಯ್ಯದಿ ಮೌಲಾನ ಮೇಲೆ ಆವೇಶಭರಿತನಾಗಿ ಎರಗಿದ ಹಾಗೂ ಅವನ ಬಳಿ ಇದ್ದ ಚಾಕು ಮತ್ತು ದಬ್ಬಳದಿಂದ ಸಯ್ಯದ್ ಸಾಹೇಬರ ದೇಹದ ಮೇಲೆ ಅನೇಕ ಕಡೆಗಳಲ್ಲಿ ಆಕ್ರಮಣವನ್ನು ಮಾಡಿದ. ಅವನು ಮಾಡಿದ ದೈಹಿಕ ಆಕ್ರಮಣಗಳಿಂದ ತತ್ತರಿಸಿದ ಸಯ್ಯದಿ ಮೌಲಾ ಎತ್ತರದ ಧ್ವನಿಯಲ್ಲಿ ಹಾಹಾಕಾರ ಮಾಡತೊಡಗಿದ "ನಾನು ನನ್ನ ಸಾವಿನಿಂದ ಭಯಗ್ರಸ್ತನಾಗಿಲ್ಲ ನನ್ನನ್ನು ಕೂಡಲೇ ನನ್ನ ಅಸಲಿ ವಿಶ್ರಾಂತಿಯ ತಾಣಕ್ಕೆ ತಲುಪಿಸಿ ಬಿಡು" ಎಂದು ಅವನು ಮೃದು ಕಂಠದಿಂದ ನುಡಿಯುತ್ತಾ ಬಾದಶಹನತ್ತ ತಿರುಗಿ ಕೋರಿದ "ನನ್ನ ಸಾವಿಗಾಗಿ ನಾನು ದುಃಖ ಪಡುತ್ತಿಲ್ಲ ಆದರೆ ನೀನು ನೆನಪಿನಲ್ಲಿಡು, ನನ್ನ ರಕ್ತವು ಒಂದಲ್ಲ ಒಂದು ದಿನ ತನ್ನ ಪ್ರತೀಕಾರವನ್ನು ತೆಗೆದುಕೊಳ್ಳುತ್ತದೆ. ನನ್ನ ಸಾವಿನ ಋಣವು ನಿನ್ನ ಮೇಲೆ ಮತ್ತು ನಿನ್ನ ಸಂತತಿಯ ಮೇಲೆ ಎರಗುವುದು. ದರ್ವೇಶನನ್ನು ಈ ರೀತಿ ಹಿಂಸೆಗೆ ಗುರಿ ಪಡಿಸುವುದು ಒಳ್ಳೆಯದಲ್ಲ ಎಂದು ನಿನಗೆ ಮನದಟ್ಟಾಗಬೇಕಾಗಿದೆ." ಆತನನ್ನು ಕೊಲೆ ಮಾಡುವುದು ಜಲಾಲುದ್ದೀನ್‌ನಿಗೆ ಬೇಕಿರಲಿಲ್ಲ ಈ ಬಗ್ಗೆ ಆತನು ಒಂದಿಷ್ಟು ವಿಳಂಬ ಧೋರಣೆಯನ್ನು ಅನುಸರಿಸುತ್ತಿರುವಾಗಲೇ ಅರ್ಕಲಿಖಾನ್‌ನು ಮುಂದೆ ಬಂದ. ಆತನ ಅಣ್ಣನಾದ ಖಾನೆಖಾನಾನ್ ಸಯ್ಯದಿ ವಮೌಲಾನ ಬಗ್ಗೆ ಅತೀವ ಭಯಭಕ್ತಿಯಿಂದ ನಡೆದುಕೊಳ್ಳುವುದು ಮತ್ತು ಆತನ ಮಾನಸಿಕ ಪುತ್ರ ಎಂದು ಹೇಳಿಕೊಳ್ಳುತ್ತಿದುದರಿಂದ ಆತನ ಮೇಲೆ ಅರ್ಕಲಿಖಾನ್‌ನಿಗೆ ಅತೀವ ಕೋಪವಿತ್ತು. ಆದ್ದರಿಂದ ಅವನು ಕೆಂಪಿನ ಅರಮನೆಯ ಮೇಲ್ಭಾಗದಿಂದ ಮಾವುತನಿಗೆ ಸನ್ನೆ ಮಾಡಿದ ಮತ್ತು ಆ

ಸನ್ನೆಯ ಮೂಲಕ ಅನುಮತಿ ದೊರೆತ ಕೂಡಲೇ ಮಾವುತನು ತನ್ನ ಮದಿಸಿದ ಆನೆಯನ್ನು ಸಯ್ಯದಿ ಮೌಲಾನ ಮೇಲೆ ಎರಗಿಸಿದ. ಆ ದೈತ್ಯ ಪ್ರಾಣಿಯು ಒಮ್ಮೆಲೇ ಸಯ್ಯದಿ ಮೌಲಾನನ್ನು ತುಳಿದು ಛಿದ್ರಗೊಳಿಸಿತು.

ಕಪ್ಪು ಬಿರುಗಾಳಿ:

ಅಲ್ಲಮಾ ಜಿಯಾವುದ್ದೀನ್ ಬರ್ನಿಯು 'ತಾರೀಕೆ ಫೈರೋಜ್ ಶಾಹಿ' ಎಂಬ ಇತಿಹಾಸ ಗ್ರಂಥದ ಕರ್ತೃವಾಗಿದ್ದು , ಆ ಸಂದರ್ಭದ ಅನೇಕ ಘಟನಾವಳಿಗಳನ್ನು ದಾಖಲಿಸಿದ್ದಾನೆ. ಸಯ್ಯದಿ ಮೌಲಾನ ಕೊಲೆಯ ನಂತರದ ಘಟನೆಗಳನ್ನು ಸದರಿ ಕರ್ತೃವು ಈ ರೀತಿಯಲ್ಲಿ ದಾಖಲಿಸುತ್ತಾರೆ "ಸಯ್ಯದಿ ಮೌಲಾನನ್ನು ಕೊಲೆ ಮಾಡಿದ ಸಂದರ್ಭದಲ್ಲಿ ನಾನು ದೆಹಲಿಯಲ್ಲಿದ್ದೆ ಹಾಗೂ ನಾನು ಕಣ್ಣಾರೆ ಕಂಡ ಪ್ರಸಂಗವೆಂದರೆ ಸದರಿ ಕೊಲೆಯ ನಂತರ ಅತ್ಯಂತ ಬೀಭತ್ಸವಾದ ಕಪ್ಪು ಬಿರುಗಾಳಿಯೊಂದು ನಗರದಲ್ಲಿ ಬೀಸತೊಡಗಿತು ಮತ್ತು ಇಡೀ ನಗರವು ಅಂಧಕಾರದಲ್ಲಿ ಮುಳುಗಿತು. ಆ ಅಂಧಕಾರವು ಎಷ್ಟೊಂದು ಗಾಢವಾಗಿತ್ತೆಂದರೆ ನಗರದ ಯಾವುದೇ ವಸ್ತುವು ಕೂಡ ಗೋಚರವಾಗುತ್ತಿರಲಿಲ್ಲ ಮತ್ತು ದೆಹಲಿಯ ನಿವಾಸಿಗಳು ಒಬ್ಬರು ಮತ್ತೊಬ್ಬರ ಮೋರೆಯನ್ನು ಕೂಡ ನೋಡಲು ಸಾಧ್ಯವಾಗುತ್ತಿರಲಿಲ್ಲ. ಈ ಬಿರುಗಾಳಿಯ ನಂತರ ದೆಹಲಿ ಮತ್ತು ಸವಾಲಿಕ್‌ನಲ್ಲಿ ಒಂದು ಭೀಕರವಾದ ಕ್ಷಾಮ ಉಂಟಾಯಿತು. ಆ ಕ್ಷಾಮದ ಭೀಕರತೆಯನ್ನು ಮತ್ತು ಕಷ್ಟಗಳನ್ನು ತಡೆಯಲಾರದೆ ಹಿಂದೂಗಳ ಒಂದು ದೊಡ್ಡ ತಂಡವು ಜಮುನಾ ನದಿಯಲ್ಲಿ ಮುಳುಗಿ ಪ್ರಾಣಾರ್ಪಣೆಯನ್ನು ಮಾಡಿತು.

ರಾಜಕುಮಾರ ಖಾನೆಖಾನಾನ್‌ನ ಸಾವು:

ಸಯ್ಯದಿ ಮೌಲಾನ ಕೊಲೆಯ ನಂತರವೇ ಜಲಾಲುದ್ದೀನ್‌ನ ಅವನತಿಯ ಎಲ್ಲಾ ಲಕ್ಷಣಗಳು ಗೋಚರವಾಗ ತೊಡಗಿದವು. ಹಾಗೂ ಅವನ ಅಧಿಕಾರದ ನಾವೆಯು ಮುಳಗತೊಡಗಿತು. ದೇಶದ ಆಡಳಿತ ವ್ಯವಸ್ಥೆಯು ಛಿದ್ರವಾಯಿತು ಮತ್ತು ಪ್ರತಿದಿನವೂ ಕೂಡ ಅನೇಕಾನೇಕ ವಿಚಿತ್ರ ಮತ್ತು ಅಪಾಯಕಾರಿ ಘಟನೆಗಳು ಜರುಗ ತೊಡಗಿದವು. ಸಯ್ಯದಿ ಮೌಲಾನ ಸಾವಿನ ನಂತರ ಘಟಿಸಿದ ಅತ್ಯಂತ ದುರದೃಷ್ಟಕರವಾದ ಸಂಗತಿಯೆಂದರೆ ಜಲಾಲುದ್ದೀನ್‌ನ ಕಿರಿಯ ಮಗನಾದ ಖಾನೆಖಾನಾನ್‌ನ ಸಾವು. ಆ ದುರ್ಘಟನೆಯು ಇಡೀ ಬಾಳಿನುದ್ದಕ್ಕೂ ಬಾದಶಹನು ರಕ್ತತರ್ಪಣವನ್ನು ನೀಡುವಂತಾಯಿತು. ಇಕ್ತಿಯಾರುದ್ದೀನ್ ಖಾನೆಖಾನಾನ್ ಅತ್ಯಂತ ವಿನಯವಂತ ಮತ್ತು ಸುಶೀಲ ರಾಜಕುಮಾರನಾಗಿದ್ದ. ಅತ್ಯಂತ ವಿವೇಕಮತಿಯಾಗಿದ್ದ ಆತನ ಮೊರೆಯ ಮೇಲೆ ಚಕ್ರವರ್ತಿಯಾಗುವ ಲಕ್ಷಣಗಳು ಎದ್ದು ಕಾಣುತ್ತಿದ್ದವು. ರಾಜಕಾರಣದ ಪ್ರಭಾವ ಮತ್ತು ದರ್ಪವು ಅವನಲ್ಲಿ ಎಷ್ಟರಮಟ್ಟಿಗೆ ಇತ್ತೆಂದರೆ ಶತ್ರುವಾಗಲೀ ಅಥವಾ ಮಿತ್ರನಾಗಲೀ ಅವನ ಆಜ್ಞೆಯನ್ನು ಧಿಕ್ಕರಿಸುವ ಧೈರ್ಯ

ಯಾರಿಗೂ ಇರಲಿಲ್ಲ. ಸಯ್ಯದಿ ಮೌಲಾನನ್ನು ಕೊಲೆ ಮಾಡಿದ ರಾತ್ರಿಯೇ ಆ ರಾಜಕುಮಾರನು ತೀವ್ರವಾಗಿ ಅನಾರೋಗ್ಯ ಪೀಡಿತನಾದ ಮತ್ತು ಆತನ ಅನಾರೋಗ್ಯವು ದಿನೇ ದಿನೇ ಉಲ್ಬಣವಾಗತೊಡಗಿತು. ಅವನ ಆರೋಗ್ಯ ಸ್ಥಿತಿಯು ತೀವ್ರವಾಗಿ ಹದಗೆಟ್ಟು ಅವನು ಹಾಸಿಗೆ ಹಿಡಿದ. ದೇಶದ ಉನ್ನತ ಮತ್ತು ಅನುಭವಿ ವೈದ್ಯರು ಸಂಪೂರ್ಣವಾಗಿ ಲಕ್ಷ್ಯವನ್ನು ನೀಡಿ ಅವನಿಗೆ ಚಿಕಿತ್ಸೆಯನ್ನು ನೀಡಿದರು. ಆದರೆ ಯಾವ ಚಿಕಿತ್ಸೆಯು ಕೂಡ ಫಲಿಸಲಿಲ್ಲ ಮತ್ತು ಅವನು ದಯನೀಯವಾಗಿ ಮರಣವನ್ನಪ್ಪಿದ.

ರಣಥಂಬೂರ್‌ನ ಮೇಲೆ ಆಕ್ರಮಣ:

ಸಯ್ಯದಿ ಮೌಲಾನ ಕೊಲೆಯಾದ ನಂತರ ಅದೇ ವರ್ಷದಲ್ಲಿ ಜಲಾಲುದ್ದೀನನು ರಣಥಂಬೂರ್‌ನ ಮೇಲೆ ಆಕ್ರಮಣವನ್ನು ಮಾಡಿದ ಮತ್ತು ತನ್ನ ಎರಡನೆಯ ಮಗನಾದ ಅರ್ಕಲಿಖಾನ್‌ನನ್ನು ತನ್ನ ಯುವರಾಜನನ್ನಾಗಿ ನೇಮಕ ಮಾಡಿ ರಾಜ ಮರ್ಯಾದೆಗಳನ್ನು ಸಲ್ಲಿಸಿದ. ಅರ್ಕಲಿಖಾನ್‌ನನ್ನು ದೆಹಲಿಗೆ ಕಳುಹಿಸಿದ ಜಲಾಲುದ್ದೀನ್‌ನು ತಾನು ರಣಥಂಬೂರ್‌ನತ್ತ ಪ್ರಯಾಣ ಬೆಳೆಸಿದ. ಅಲ್ಲಿಗೆ ತಲುಪಿದ ನಂತರ ಆ ಕೋಟೆಯು ಬಲಾಢ್ಯವಾಗಿದೆ ಮತ್ತು ಸಧೃಡವಾಗಿದೆ ಎಂಬ ವಿಷಯವು ಅವನಿಗೆ ತಿಳಿಯಿತು. ಈ ವಿಷಯದ ಅರಿವು ಅವನಿಗೆ ಆಗುತ್ತಿದ್ದಂತೆಯೇ ಅವನು ಕೋಟೆಯನ್ನು ವಶಪಡಿಸಿಕೊಳ್ಳುವ ಆಲೋಚನೆಯನ್ನು ಕೈಬಿಟ್ಟು ಜಹಾಯನ್‌ನತ್ತ ಪ್ರಯಾಣ ಬೆಳೆಸಿದ.

ಜಲಾಲುದ್ದೀನ್‌ನು ಜಹಾಯನ್‌ನನ್ನು ಗೆದ್ದುಕೊಂಡ ನಂತರ ಅಸಂಖ್ಯ ಶಸ್ತ್ರಾಸ್ತ್ರಗಳು ಮತ್ತು ಯುದ್ಧ ಸಂಪತ್ತನ್ನು ಪಡೆದುಕೊಂಡು ಮಾಳವದ ಮಂದಿರಗಳನ್ನು ನಾಶ ಪಡಿಸುತ್ತ ದೆಹಲಿಯತ್ತ ಪ್ರಯಾಣವನ್ನು ಮುಂದುವರೆಸಿದ. ಮಾರ್ಗಮಧ್ಯದಲ್ಲಿ ಜಲಾಲುದ್ದೀನನು ತನ್ನ ಪ್ರಯಾಣವನ್ನು ಮುಂದುವರೆಸುತ್ತ ರಣಥಂಬೂರ್‌ನಿಂದ ಮುಂದುವರೆದಾಗ ಅಲ್ಲಿನ ರಾಜನು ಮತ್ತೆ ಜಲಾಲುದ್ದೀನ್‌ನ ಅಧೀನತೆಯನ್ನು ಒಪ್ಪಲು ನಿರಾಕರಿಸಿದ. ಅವನ ನಿರಾಕರಣೆಯಿಂದ ಕೋಪಗೊಂಡ ಬಾದಶಹನು ಕೂಡಲೇ ಅಲ್ಲಿಯೇ ಬಿಡಾರ ಹೂಡುವಂತೆ ಆಜ್ಞೆ ಮಾಡಿದ. ತದ ನಂತರ ಅವನು ಒಂದಿಷ್ಟು ಆಲೋಚನೆಯನ್ನು ಮಾಡಿ ತನ್ನ ಆಜ್ಞೆಯನ್ನು ರದ್ದುಗೊಳಿಸಿದ ಮತ್ತು ಪ್ರಯಾಣವನ್ನು ಮುಂದುವರೆಸುವಂತೆ ಆದೇಶ ನೀಡಿದ. ತದ ನಂತರ ಬಾದಶಹನು ತನ್ನ ಸೈನ್ಯದ ಸರ್ದಾರರೊಡನೆ ನುಡಿದ "ನಾನು ಈ ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂದು ಈ ಮೊದಲು ತೀರ್ಮಾನ ಮಾಡಿದ್ದೆ .ಆದರೆ ನಾನು ನಂತರದಲ್ಲಿ ಈ ನಿರ್ಧಾರದ ಬಗ್ಗೆ ಮರು ಆಲೋಚನೆ ಮಾಡಿದಾಗ ಅಸಂಖ್ಯ ಮುಸ್ಲಿಮರ ಪ್ರಾಣಗಳನ್ನು ಬಲಿಕೊಡದೆ ಈ ಕೋಟೆಯನ್ನು ವಶಪಡಿಸಿಕೊಳ್ಳುವುದು ಅಸಂಭವವೆಂದು ನನಗೆ ಅರಿವಾಗಿದೆ. ಈ ಕೋಟೆಯ ಸಲುವಾಗಿ ಮುಸಲ್ಮಾನರ

ರಕ್ತವನ್ನು ವ್ಯರ್ಥವಾಗಿ ಚೆಲ್ಲಲು ನಾನು ಇಷ್ಟಪಡುವುದಿಲ್ಲ. ಹೀಗಾಗಿ ನನ್ನ ಮೊದಲಿನ ನಿರ್ಧಾರದಿಂದ ಹಿಂದೆಗೆಯುವುದೇ ಸೂಕ್ತವೆಂದು ಭಾವಿಸಿದ್ದೇನೆ." ಬಾದಶಹನ ಈ ಭಾಷಣವನ್ನು ಆಲಿಸಿದ ಬಾದಶಹನ ಅತ್ಯಂತ ಪ್ರಭಾವೀ ಮಿತ್ರನಾದ ಮುಲ್ಕ್ ಹಬೀಬ್ ಅಹಮ್ಮದ್‌ನು ಬಾದಶಹನೊಂದಿಗೆ ನುಡಿದ "ರಾಜ್ಯದ ಯುದ್ಧಗಳನ್ನು ನಿರ್ವಹಿಸುವಾಗ ಸಿಪಾಯಿಗಳ ಪ್ರಾಣದ ಬಗ್ಗೆ ಚಿಂತೆಯನ್ನು ಮಾಡುವುದು ರಾಜ್ಯದ ಆಡಳಿತದ ಸುವ್ಯವಸ್ಥೆಯ ವಿರುದ್ಧವಾಗಿ ಕೈಗೊಂಡ ತೀರ್ಮಾನವಾಗಿದೆ. ರಣಥಂಬೂರ್‌ನ ರಾಜನನ್ನು ಈ ಸಂದರ್ಭದಲ್ಲಿ ಮಣಿಸದೆ ಇದ್ದಲ್ಲಿ ನಾವು ದುರ್ಬಲರಾಗಿದ್ದೇವೆ ಎಂದು ಸಾಬೀತುಗೊಳಿಸಿದಂತಾಗುತ್ತದೆ. ಮತ್ತು ಈ ಕ್ರಮವು ಮುಂದಿನ ಸಂಚು ಮತ್ತು ದಂಗೆಗಳ ಹೆಚ್ಚಳಕ್ಕೆ ಕಾರಣಕರ್ತವಾಗುತ್ತದೆ." ಮುಲ್ಕ್ ಹಬೀಬ್‌ನ ಈ ಸಲಹೆಯು ಬಾದಶಹನಿಗೆ ಅಪ್ರಿಯವಾಯಿತು ಮತ್ತು ಅವನು ಅತ್ಯಂತ ದುಃಖಿತನಾಗಿ ಮುಲ್ಕ್ ಅಹಮ್ಮದ್‌ನೊಡನೆ ನುಡಿದ "ನನಗೆ ರಾಜ್ಯದ ಕರ್ತವ್ಯಗಳ ಬಗ್ಗೆ ಯಾವುದೇ ಅರಿವಿಲ್ಲವೆಂದು ನೀನು ಭಾವಿಸುವೆಯಾ? ಅನೇಕ ಬಾದಶಹರು ರಾಜ್ಯದ ಕರ್ತವ್ಯವೆಂಬ ದುರಾಶೆಯ ಅಲೆಯಲ್ಲಿ ಮುಳುಗಿ ಮುಸಲ್ಮಾನರ ಅಮೂಲ್ಯ ಜೀವಗಳ ಬಗ್ಗೆ ನಿರ್ಲಕ್ಷಿಸುತ್ತಾರೆ ಎಂಬ ಅಂಶ ನನಗೆ ತಿಳಿದಿದೆ. ಆದರೆ ಎಲ್ಲಾ ಬಾದಶಹರುಗಳು ಒಂದೇ ರೀತಿಯಲ್ಲಿ ಇರುವುದಿಲ್ಲ. ಯಾವ ಬಾದಶಹನು ನಿಷ್ಠಾವಂತ ಮುಸಲ್ಮಾನನಾಗಿರುತ್ತಾನೋ ಮತ್ತು ತಾನು ಒಂದು ದಿವಸ ಅಲ್ಲಾಹ್ ಹಾಗೂ ಆತನ ರಸೂಲ್‌ರವರಿಗೆ ಮುಖವನ್ನು ತೋರಿಸಬೇಕೆಂಬ ಅರಿವು ಇರುತ್ತದೆಯೋ ಅಂತವರು ಮುಸಲ್ಮಾನರ ಪ್ರಾಣಕ್ಕೆ ಪ್ರಾಶಸ್ತ್ಯ ಕೊಡುತ್ತಾರೆ. ಹಾಗೂ ದೇಶದ ರಾಜಕಾರಣದ ಸಲುವಾಗಿ ತಮ್ಮ ಮತ ಬಾಂಧವರ ರಕ್ತವನ್ನು ಹರಿಸಲು ಇಷ್ಟಪಡುವುದಿಲ್ಲ. ನಾನು ಈಗಾಗಲೇ ಹಲವಾರು ಬಾರಿ ನನಗೆ ವಯಸ್ಸಾಗಿದೆ ಎಂದು ನಿಮ್ಮೆದುರಿಗೆ ಹೇಳಿದ್ದೇನೆ ಮತ್ತು ನನ್ನ ಅಂತ್ಯಕಾಲದಲ್ಲಿ ನನಗೆ ಫಿರ್‌ಔನ್ ಮತ್ತು ನಮ್ರೂದ್ ತೋರಿದ ಹಾದಿಯಲ್ಲಿ ನಡೆಯಲು ಇಷ್ಟವಿಲ್ಲ. ಸಾವಿರಾರು ಮುಸ್ಲಿಂ ಮಹಿಳೆಯರು ವಿಧವೆಯರಾಗುವ ಹಾಗೂ ಅವರ ಮಕ್ಕಳು ಅನಾಥರಾಗುವಂತಹ ಯಾವ ಕೃತ್ಯವು ಕೂಡ ನನಗೆ ಸಹನೀಯವಲ್ಲ" ಅತ್ಯಂತ ಗಂಭೀರ ಭಾವದಿಂದ ಜಲಾಲುದ್ದೀನನು ಈ ಮಾತುಗಳನ್ನು ನುಡಿದು ದೆಹಲಿಗೆ ಮರಳಿದ.

ಮೊಘಲರ ಆಕ್ರಮಣ:

೬೯೧ನೇ ಇಸವಿಯಲ್ಲಿ ಹಿಲಾಕೋಖಾನ್‌ನ ಒಬ್ಬ ಸಂಬಂಧಿಯು ಅಪಾರ ಸೈನ್ಯದೊಡನೆ ಕೂಡಿ ಹಿಂದೂಸ್ಥಾನದ ಮೇಲೆ ಆಕ್ರಮಣವನ್ನು ಮಾಡಿದ. ಆ ಸೈನ್ಯವು ಹತ್ತು "ತಮನ್" ನಿಂದ ಕೂಡಿತ್ತು (ಒಂದು ತಮನ್ ಎಂದರೆ ಹತ್ತು ಸಾವಿರ ಸಿಪಾಯಿಗಳಾಗುತ್ತಾರೆ). ಜಲಾಲುದ್ದೀನ್‌ನಿಗೆ ಈ ವಿಷಯವು ತಿಳಿದು ಬಂದಾಗ

ಅವನು ಕೂಡ ಒಂದು ಬಲಾಢ್ಯ ಸೇನೆಯಿಂದ ಕೂಡಿ ಶತ್ರುವಿನ ವಿರುದ್ಧ ಹೋರಾಡಲು ಅಣಿಯಾದ. ಬೆಹ್ರಾಂನ ಹತ್ತಿರದ ಪ್ರದೇಶದಲ್ಲಿ ಉಭಯ ಸೈನ್ಯಗಳ ನಡುವೆ ಘೋರ ಯುದ್ಧ ನಡೆಯಿತು. ಉಭಯ ಬಣದ ಸೇನೆಗಳು ನದಿಯ ಎರಡು ಬದಿಗಳಲ್ಲಿ ತಮ್ಮ ತಮ್ಮ ಡೇರೆಗಳನ್ನು ಹಾಕಿದ್ದರು ಹಾಗೂ ಯುದ್ಧದ ಸಲುವಾಗಿ ಅತಿದೊಡ್ಡ ಮೈದಾನವನ್ನು ಆಯ್ಕೆ ಮಾಡಲಾಗಿತ್ತು. ಅವರಿಬ್ಬರ ನಡುವೆ ನಡೆದ ಘನ ಘೋರ ಯುದ್ಧದಲ್ಲಿ ಅನೇಕ ಸೈನಿಕರ ಪ್ರಾಣಗಳು ಆಹುತಿಯಾದವು. ಒಂದು ದಿನ ಉಭಯ ಸೇನೆಗಳ ಮಧ್ಯದ ತುಕಡಿಗಳ ನಡುವೆ ತೀವ್ರ ಯುದ್ಧ ನಡೆಯಿತು. ಖಿಲ್ಜಿಗಳು ಅತ್ಯಂತ ಪರಾಕ್ರಮದಿಂದ ಹೋರಾಡಿದರು ಮತ್ತು ಕೊನೆಗೂ ಯುದ್ಧದಲ್ಲಿ ವಿಜಯಿಗಳಾದರು. ಅಸಂಖ್ಯ ಮೊಘಲ್ ಸರ್ದಾರರು ಯುದ್ಧ ಭೂಮಿಯಲ್ಲಿ ಶವಗಳಾದರು ಎರಡು ಸಾವಿರ ಮೊಘಲ್ ಸರ್ದಾರರು ಮತ್ತು ಕೆಲವು ಮಂದಿ ಪ್ರಖ್ಯಾತ ಮುಖಂಡರನ್ನು ಜೀವಂತವಾಗಿ ಸೆರೆ ಹಿಡಿಯಲಾಯಿತು. ಈ ನಡುವೆ ಕೆಲವರು ಉಭಯತ್ರರ ನಡುವೆ ಸಂಧಿ ಮಾಡುವ ಪ್ರಸ್ತಾಪವನ್ನು ಮುಂದಿಟ್ಟರು ಹಾಗೂ ಈ ಮಾತು ಕಥೆಯು ಸಫಲವಾಯಿತು. ಆ ಮೇರೆಗೆ ಜಲಾಲುದ್ದೀನ್ ಖಿಲ್ಜಿಯು ಮೊಘಲ್ ಸರ್ದಾರನನ್ನು "ಮಗನೇ" ಎಂದು ಸಂಬೋಧಿಸಿದ ಮತ್ತು ಆತನು ಜಲಾಲುದ್ದೀನ್‌ನಿಗೆ "ತಂದೆಯೆ" ಎಂದು ಪಡಿ ನುಡಿದ. ಅವರಿಬ್ಬರ ನಡುವೆ ನದಿಯು ಹರಿಯುತ್ತಿದ್ದುದ್ದರಿಂದ ಅವರು ತಮ್ಮ ಅಂತರವನ್ನು ಕಾದುಕೊಂಡಿದ್ದರು, ಮತ್ತು ವೈಯಕ್ತಿಕವಾಗಿ ಭೇಟಿಯಾಗಲು ಸಾಧ್ಯವಾಗಲಿಲ್ಲ. ಆದರೆ ಅವರಿಬ್ಬರು ಪರಸ್ಪರರನ್ನು ನೋಡಿದರು, ಉಭಯತ್ರರ ನಡುವೆ ಉಡುಗೊರೆಗಳ ವಿನಿಮಯವಾಯಿತು. ಹಾಗೂ ಮೊಘಲರ ಸೈನ್ಯವು ತನ್ನ ದೇಶಕ್ಕೆ ಮರಳಿ ಹೋಯಿತು.

ಮೇಲ್ಕಂಡ ಘಟನೆಯ ನಂತರ ಅಲಘೌಖಾನ್ ಎಂಬ ಚಂಗೇಸ್‌ಖಾನ್‌ನ ಮೊಮ್ಮಗನು ತನ್ನ ಸೈನಿಕರೊಡನೆ ಕೂಡಿ ಇಸ್ಲಾಂಗೆ ಮತಾಂತರವನ್ನು ಹೊಂದಿದ ಹಾಗೂ ಜಲಾಲುದ್ದೀನ್‌ನು ಅವನೊಡನೆ ತನ್ನ ಮಗಳ ವಿವಾಹವನ್ನು ನೆರವೇರಿಸಿದ. ನಂತರ ಬಾದಶಾಹನು ತನ್ನ ಮಗನಾದ ಅರ್ಕಲಿಖಾನ್‌ನನ್ನು ಮುಲ್ತಾನ್ ಮತ್ತು ಸಿಂಧ್‌ನ ಬಾದಶಹನನ್ನಾಗಿ ನೇಮಕ ಮಾಡಿದ ಮತ್ತು ಅವನು ದೆಹಲಿಗೆ ಮರಳಿದ. ಅಲಘೌಖಾನ್ ಮತ್ತು ಅವನ ಸಹಚರರು "ನವ ಮುಸ್ಲಿಮರು" ಎಂಬ ಬಿರುದಿನಿಂದ ಖ್ಯಾತಿಯನ್ನು ಹೊಂದಿದರು. ಹಾಗೂ ಅವರುಗಳು ಹಜರತ್ ಶೇಕ್ ನಿಜಾಮುದ್ದೀನ್ ಔಲಿಯಾರವರು ವಾಸ್ತವ್ಯವನ್ನು ಹೂಡಿದ್ದ ಗಯಾಸ್‌ಪುರ ಎಂಬ ಪ್ರದೇಶದಲ್ಲಿ ನೆಲೆಸಿದ್ದು ಆ ಪ್ರದೇಶಕ್ಕೆ ಮೊಘಲ್‌ಪುರ ಎಂಬ ಹೊಸ ಹೆಸರು ಪ್ರಾಪ್ತವಾಯಿತು.

೬೯೨ನೇ ಇಸವಿಯಲ್ಲಿ ಜಲಾಲುದ್ದೀನ್ ಖಿಲ್ಜಿಯು ಮಂದೋರ್‌ನ ಕೋಟೆಯ ಮೇಲೆ ಆಕ್ರಮಣವನ್ನು ಮಾಡಿದ ಮತ್ತು ಆ ಪಟ್ಟಣವನ್ನು ಮನಸೋ ಇಚ್ಛೆ ಲೂಟಿ ಹೊಡೆದ. ಅದೇ ವರ್ಷದಲ್ಲಿ ಖಡಾದ ರಾಜನಾದ ಮುಲ್ಕ್ ಅಲ್ಲಾವುದ್ದೀನನು

ತಹಾಸದ ಮೇಲೆ ಯುದ್ಧ ಮಾಡಲು ಅನುಮತಿಯನ್ನು ಕೋರಿದ. ("ತಹಾಸ" ಎಂಬುದು ಸರಿಯಲ್ಲ ಇಲ್ಲಿ "ಭಯಾಸಾ ಎಂದಿರಬೇಕಿತ್ತು. ಇದು ಭೂಪಾಲದ ಹತ್ತಿರದ ಪ್ರದೇಶವಾಗಿದೆ") ಬಾದಶಹನು ಅವನಿಗೆ ಅನುಮತಿಯನ್ನು ನೀಡಿದ ಅಲ್ಲಾವುದ್ದೀನ್‌ನು ತಹಾಸದ ಮೇಲೆ ಯುದ್ಧ ಮಾಡಿ ಆ ಪಟ್ಟಣವನ್ನು ವಿನಾಶದ ಅಂಚಿಗೆ ತಂದಿಟ್ಟ. ಅಲ್ಲಿಂದ ಅವನು ಅಪಾರವಾಗಿ ಯುದ್ಧ ಸಂಪತ್ತನ್ನು ಪಡೆದುಕೊಂಡು ಬಾದಶಹನ ಸನ್ನಿಧಿಯಲ್ಲಿ ಹಾಜರಾದ ಹಾಗೂ ಅಲ್ಲಿನ ಎರಡು ವಿಗ್ರಹಗಳನ್ನು ತಂದು ಬದಾಯೂನ್ ಬಾಗಿಲಿನಲ್ಲಿ ಹಾಕಿದ. ಜಲಾಲುದ್ದೀನ್‌ನಿಗೆ ಅಲ್ಲಾವುದ್ದೀನ್‌ನ ಈ ಸೇವೆಯು ತುಂಬಾ ಪ್ರಿಯವಾಯಿತು. ಮತ್ತು ಅವನು ಅಲ್ಲಾವುದ್ದೀನ್‌ನನ್ನು ರಾಜ ಮರ್ಯಾದೆಗಳಿಂದ ಸತ್ಕರಿಸಿದ್ದು ಅವನನ್ನು ಅವಧ್‌ನ ರಾಜನನ್ನಾಗಿ ನೇಮಕ ಮಾಡಿದ. ತನ್ನ ಮೇಲೆ ಬಾದಶಹನು ಅಪಾರವಾಗಿ ಪ್ರಸನ್ನವಾಗಿರುವುದನ್ನು ಕಂಡು ಅವನು ಒಂದು ಕೋರಿಕೆಯನ್ನು ಸಲ್ಲಿಸಿದ "ಚಂದೇರಿಯಾ ಸುತ್ತಮುತ್ತಲಿನ ಪ್ರದೇಶದಲ್ಲಿ ಅನೇಕ ಶ್ರೀಮಂತ ಹಿಂದೂ ರಾಜರು ಪ್ರವರ್ಧಮಾನಕ್ಕೆ ಬಂದಿದ್ದಾರೆ. ನಾನು ನನ್ನ ಜಹಗೀರಿನ ಆದಾಯದಿಂದ ಒಂದು ಹೊಸ ಸೈನ್ಯವನ್ನು ತಯಾರು ಮಾಡುತ್ತೇನೆ ಮತ್ತು ನನ್ನ ಅಧೀನದಲ್ಲಿರುವ ಹಳೆಯ ಮತ್ತು ಹೊಸ ಸೈನ್ಯವನ್ನು ಒಟ್ಟುಗೂಡಿಸಿ ಆ ರಾಜರುಗಳನ್ನು ಸೋಲಿಸಿ ಅವರ ಸಂಪತ್ತನ್ನು ಬಾದಶಹನ ಖಜಾನೆಗೆ ಸಮರ್ಪಿಸಲು ಅನುಮತಿಯನ್ನು ನೀಡಬೇಕು". ಜಲಾಲುದ್ದೀನನು ದುರಾಶೆಯಿಂದ ಪ್ರೇರಿತನಾಗಿ ಯಾವುದೇ ವಿವೇಚನೆಯನ್ನು ಮಾಡದೆ ಅಲ್ಲಾವುದ್ದೀನನಿಗೆ ಅನುಮತಿಯನ್ನು ನೀಡಿದ ಹಾಗೂ ಅಲ್ಲಾವುದ್ದೀನ್‌ನ ಸದರಿ ಕೋರಿಕೆಯ ಹಿನ್ನೆಲೆಯಲ್ಲಿ ದುರುದ್ದೇಶವು ಅಡಗಿದೆ ಎಂಬ ವಿಷಯವು ಅವನ ಗಮನಕ್ಕೆ ಬರಲಿಲ್ಲ. ಎಷ್ಟು ಸಾಧ್ಯವೋ ಅಷ್ಟರವರೆಗೆ ಅವನು ಚಕ್ರವರ್ತಿನಿಯಾದ ಮಲ್ಲಿಕಾ ಜಹಾನ್‌ಳ ಪ್ರಭಾವ ವಲಯದಿಂದ ಸುರಕ್ಷಿತವಾಗಿ ದೆಹಲಿಯಿಂದ ದೂರ ಉಳಿದು ದೂರ ದೂರದ ಪ್ರದೇಶಗಳಲ್ಲಿ ಪ್ರಯಾಣವನ್ನು ಮಾಡುತ್ತಿದ್ದ. ಅಸಲಿಗೆ ವಿಷಯವೇನೆಂದರೆ ಜಲಾಲುದ್ದೀನ್ ಖಿಲ್ಜಿಯ ಮೇಲೆ ಆತನ ಪತ್ನಿಯಾದ ಮಲ್ಲಿಕಾ ಜಹಾನ್ ವಿಶೇಷ ಪ್ರಭಾವವನ್ನು ಬೀರುತ್ತಿದ್ದಳು. ಅಲ್ಲಾವುದ್ದೀನನು ತನಗೆ ಯೋಗ್ಯವಾಗಿ ಕಂಡ ಯಾವುದೇ ವಿಚಾರವನ್ನು ಬಾದಶಹನೊಂದಿಗೆ ಚರ್ಚೆಯನ್ನು ಕೂಡ ಮಾಡಲು ಸಾಧ್ಯವಾಗದಂತೆ ಅವಳು ಬಾದಶಹನನ್ನು ಆವರಿಸಿದ್ದಳು ಹಾಗೂ ಸಾಧ್ಯವಾಗುವುದಾದಲ್ಲಿ ತಾನು ದೆಹಲಿಯಿಂದ ದೂರವಾದ ಯಾವುದಾದರೂ ಒಂದು ಪ್ರದೇಶದಲ್ಲಿ ನೆಲೆಸಬೇಕೆಂಬುದು ಅವನ ಆಲೋಚನೆಯಾಗಿತ್ತು.

ದೇವಗಡದ ವಿಜಯ ಪ್ರಾಪ್ತಿ:

ಹಿಜರಿ ಶಕೆ ೬೯೩ರಲ್ಲಿ ಜಲಾಲುದ್ದೀನನ ಅನುಮತಿಯ ಮೇರೆಗೆ ಅಲ್ಲಾವುದ್ದೀನನು ಖಡಾದ ಪ್ರಯಾಣವನ್ನು ಆರಂಭಿಸಿದ ಮತ್ತು ನಿರುದ್ಯೋಗಿಗಳಾಗಿದ್ದು ಅತೀವ ಸಂಕಷ್ಟದಲ್ಲಿ ಸಿಲುಕಿದ್ದ ಮುಲ್ಕ್ ಚಜುನ ಸೇವಕರನ್ನು ಮತ್ತು ಇನ್ನಿತರೆ ಬಲ್ಬನ್

ಸರ್ದಾರರುಗಳನ್ನು ತನ್ನ ಸೇವೆಯಲ್ಲಿ ನಿಯುಕ್ತಿಗೊಳಿಸಿದ. ಅಷ್ಟರಲ್ಲೇ ದಖ್ಖನಿನ ರಾಜನಾದ ರಾಮದೇವನ ಬಳಿ ಅಪಾರ ಸಂಪತ್ತು ಕ್ರೋಡೀಕರಣಗೊಂಡಿದೆ ಎಂತಲೂ ಮತ್ತು ಸದರಿ ಸಂಪತ್ತು ಆನುವಂಶಿಕವಾಗಿ ಆತನಿಗೆ ಪ್ರಾಪ್ತಿಯಾಗಿದೆ ಎಂತಲೂ ಅಲ್ಲಾವುದ್ದೀನನಿಗೆ ಮಾಹಿತಿ ದೊರಕಿತು. ಅಷ್ಟೇ ಅಲ್ಲದೆ ರಾಮದೇವನ ಬಳಿ ಸಂಗ್ರಹವಾಗಿರುವ ಐಶ್ವರ್ಯವು ಅದುವರೆಗೂ ದೆಹಲಿಯನ್ನು ಆಳಿದ ಯಾವ ಸುಲ್ತಾನರು ಕೂಡ ಹೊಂದಿರಲಿಲ್ಲ ಎಂಬ ವಿಷಯವು ಕೂಡ ಅವನಿಗೆ ತಿಳಿದುಬಂದಿತು. ಅಲ್ಲಾವುದ್ದೀನನು ಏಳರಿಂದ ಎಂಟು ಸಾವಿರವರೆಗಿನ ಸೈನಿಕರ ದಂಡಿನೊಡನೆ ಕೂಡಿ ಚಂದೇರಿಯನ್ನು ಲೂಟಿ ಹೊಡೆಯುವ ಸಲುವಾಗಿ ಹೊರಟ. ಹಿಜರಿ ಶಕೆ ೬೯೪ ನೇ ಇಸವಿಯ ಈ ಘಟನೆಯು ನಡೆಯುವಾಗ ಅಲ್ಲಾವುದ್ದೀನನು ವೇಗವಾಗಿ ತನ್ನ ಗಮ್ಯಸ್ಥಾನವನ್ನು ತಲುಪುವ ಸಲುವಾಗಿ ದುರ್ಗಮ ಕಾಡಿನ ನಡುವೆ ಪ್ರಯಾಣವನ್ನು ಬೆಳೆಸಿದ. ಅದು ವಿವೇಕಯುತ ತೀರ್ಮಾನವಾಗಿರಲಿಲ್ಲ; ಆದರೆ ಅದೃಷ್ಟ ಅವನ ಜೊತೆಗಿತ್ತು. ಎಲಚಪುರದಿಂದ ಹೊರಟ ಅಲ್ಲಾವುದ್ದೀನನು ವಿಶ್ರಮಿಸಿಕೊಳ್ಳುವ ಸಲುವಾಗಿ ಎರಡು ದಿನಗಳ ಕಾಲ ಒಂದು ತಾಣದಲ್ಲಿ ತಂಗಿದ. ನಂತರ ದೇವಗಡದತ್ತ ಪ್ರಯಾಣವನ್ನು ಬೆಳೆಸಿದ. ರಾಮದೇವನು ಯಾವುದೋ ಕಾರ್ಯ ನಿಮಿತ್ತ ತನ್ನ ಪುತ್ರನೊಂದಿಗೆ ಕೂಡಿ ದೇವಗಡದಿಂದ ಬಹಳ ದೂರ ಪ್ರಯಾಣ ಬೆಳೆಸಿದ್ದ. ಅಲ್ಲಾವುದ್ದೀನನು ದೇವಗಡದ ವ್ಯಾಪ್ತಿಯಲ್ಲಿ ಯುದ್ಧದ ಸಲುವಾಗಿ ಸನ್ನದ್ಧನಾಗಿದ್ದಾನೆ ಎಂಬ ವಿಷಯ ಅವನಿಗೆ ತಿಳಿದುಬಂದಾಗ ಅವನು ತನ್ನ ಸರ್ದಾರರು ಮತ್ತು ನಾಯಕರು ಹಾಗೂ ಸೈನ್ಯದೊಡನೆ ಕೂಡಿ ಅಲ್ಲಾವುದ್ದೀನನೊಡನೆ ಯುದ್ಧಕ್ಕೆ ಅನುವಾದ. ಆದರೆ ಅಲ್ಲಾವುದ್ದೀನ್‌ನು ಅವನನ್ನು ಸೋಲಿಸಿ ದೇವಗಡವನ್ನು ತನ್ನದಾಗಿಸಿಕೊಂಡ.

"ಮುಲ್‌ಖಾತೇ ತಬ್‌ಖಾತೇ ನಾಸಿರಿ" ಎಂಬ ಗ್ರಂಥದ ಕರ್ತೃ ಖಿಲ್ಜಿ ರಾಜರ ಸಮಕಾಲೀನನಾಗಿದ್ದ ಅವನು ದಾಖಲಿಸಿರುವ ಪ್ರಕಾರ ಅಲ್ಲಾವುದ್ದೀನನು ಖಡಾದಿಂದ ಹೊರಟು ಒಂದು ದಿಕ್ಕಿನಲ್ಲಿ ಪ್ರಯಾಣ ಬೆಳೆಸಿದ. ದಾರಿಯುದ್ದಕ್ಕೂ ಅವನು ಬೇಟೆಯಲ್ಲಿ ನಿರತನಾಗಿದ್ದ ಹಾಗೂ ಇದೇ ಕ್ರಮದಲ್ಲಿ ಅವನು ತನ್ನ ಪ್ರಯಾಣವನ್ನು ಮುಂದುವರೆಸಿದ. ಮಾರ್ಗಮಧ್ಯದಲ್ಲಿ ಅವನಿಗೆ ಹಿಂದೂಗಳ ಅನೇಕ ಚಿಕ್ಕ ಚಿಕ್ಕ ರಾಜ್ಯಗಳು ಎದುರಾದವು. ಆದರೆ ಅವನು ಯಾರೊಡನೆಯೂ ಕೂಡ ಸಂಘರ್ಷಕ್ಕೆ ಇಳಿಯಲಿಲ್ಲ. ಅಲ್ಲಾವುದ್ದೀನ್‌ನ ಅಸಲಿ ಇರಾದೆ ಏನಾಗಿತ್ತು? ಇದರ ಬಗ್ಗೆ ಅವನ ಆಪ್ತವರ್ಗದ ಕೆಲವೇ ಮಂದಿಯನ್ನು ಬಿಟ್ಟರೆ ಉಳಿದವರಿಗೆ ಯಾವ ಸುಳಿವು ಕೂಡ ಇರಲಿಲ್ಲ. ಎರಡು ತಿಂಗಳ ನಂತರ ಅವನು ದಖ್ಖನಿನ ಪ್ರಖ್ಯಾತ ಪಟ್ಟಣವಾದ ಎಲಚುರ್‌ನ್ನು ತಲುಪಿದ ಮತ್ತು ಅಲ್ಲಿ ಅವನು ಗಾಳಿ ಸುದ್ದಿಯೊಂದನ್ನು ತೇಲಿಬಿಟ್ಟ. ದೆಹಲಿಯ ಒಬ್ಬ ಪ್ರಭಾವಿ ಸರ್ದಾರನಾದ ಅಲ್ಲಾವುದ್ದೀನನು ಬಾದಶಹನೊಂದಿಗೆ ಮನಸ್ತಾಪವನ್ನು ಹೊಂದಿದ್ದು, ಬಾದಶಹನ ಸೇವೆಯನ್ನು ತೊರೆದು ಅಲ್ಲಿಗೆ ಬಂದಿರುವನೆಂತಲೂ ಮತ್ತು ತೆಲಂಗಾಣ ರಾಜನಾದ ರಾಜಮಂದ್ರಿಯ ಬಳಿ ತಲುಪಿ ಅವನ ಸೇವೆಯಲ್ಲಿ ಉದ್ಯೋಗವನ್ನು ಪಡೆಯಲು

ಪ್ರಯತ್ನ ಮಾಡುತ್ತಿರುವನೆಂತಲೂ ಅವನು ಪುಕಾರನ್ನು ಹರಡಿದ. ಈ ಗಾಳಿ ಸುದ್ದಿಯನ್ನು ಹರಡಿದ ನಂತರ ಅಲ್ಲಾವುದ್ದೀನನು ಅದೇ ರಾತ್ರಿಯಂದು ಎಲಚೂರ್‌ನಿಂದ ಹೊರಟು ತೀವ್ರ ವೇಗದಿಂದ ಪ್ರಯಾಣ ಮಾಡಿ ದೇವಗಡವನ್ನು ತಲುಪಿ ಯುದ್ಧವನ್ನು ಮಾಡಿದ. ರಾಜ ರಾಮದೇವನ ರಾಣಿ ಮತ್ತು ಆತನ ಪುತ್ರನು ದೇವರ ದರ್ಶನಕ್ಕೆಂದು ದೇವಗಡದಿಂದ ಹೊರಗೆ ಹೋಗಿದ್ದರು ಹಾಗೂ ಖುದ್ದು ಆ ರಾಜನಿಗೆ ಈ ಸುದ್ದಿಯು ತಿಳಿದಿರಲಿಲ್ಲ ಮತ್ತು ಆತನು ದೇವಗಡದ ಕೋಟೆಯೊಳಗೆ ಉಳಿದಿದ್ದ. ಅಲ್ಲಾವುದ್ದೀನನ ಆಕ್ರಮಣದ ಸುದ್ದಿಯು ತಿಳಿದು ಬರುತ್ತಿದ್ದಂತೆಯೇ ಆ ರಾಜನು ಆ ಸಂದರ್ಭದಲ್ಲಿ ತನ್ನ ಬಳಿ ಇದ್ದ ಸುಮಾರು ಎರಡರಿಂದ ಮೂರು ಸಾವಿರ ಸಿಪಾಯಿಗಳಿಂದ ಕೂಡಿದ ಸೈನ್ಯವನ್ನು ಯುದ್ಧಕ್ಕೆ ಕಳುಹಿಸಿದ. ದೇವಗಡದಿಂದ ಎರಡು ಹರದಾರಿ ದೂರದಲ್ಲಿ ಇದ್ದ ಅಲ್ಲಾವುದ್ದೀನ್‌ನ ಸೈನ್ಯವನ್ನು ದೇವಗಡದ ಸೈನಿಕರು ಎದುರಿಸಿದರು. ಅವರಿಬ್ಬರ ನಡುವೆ ಯುದ್ಧ ನಡೆಯಿತು. ದಖ್ಖನ್ನಿನ ಹಿಂದುಗಳಿಗೆ ಮುಸ್ಲಿಮರ ಯುದ್ಧ ತಂತ್ರಗಳು ಅಪರಿಚಿತವಾಗಿದ್ದವು. ಆದ್ದರಿಂದ ದೇವಗಡದ ಸೈನಿಕರು ಮುಸ್ಲಿಮ್ ಸೈನಿಕರ ಕತ್ತಿ ವರಸೆ ಹಾಗೂ ಬಿಲ್ಲುಬಾಣದ ಚಮತ್ಕಾರಗಳಿಂದ ಗಾಬರಿಗೊಂಡು ಯುದ್ಧ ಆರಂಭವಾಗುತ್ತಿದ್ದಂತೆಯೇ ಪಲಾಯನ ಮಾಡಿ, ದೇವಗಡದತ್ತ ಓಡಿದರು. ಮುಸ್ಲಿಂ ಸೈನಿಕರು ಅವರ ಬೆನ್ನಟ್ಟಿದರು. ಈ ಬೆಳವಣಿಗೆಯಿಂದ ರಾಜನು ತೀವ್ರವಾಗಿ ದಿಕ್ಕೆಟ್ಟ ಮತ್ತು ದೇವಗಡದ ಕೋಟೆಯೊಳಗಡೆ ರಕ್ಷಣೆ ಪಡೆದ, ಆದರೆ ಆ ಕೋಟೆಯು ಸಾಕಷ್ಟು ಬಲಿಷ್ಠವಾಗಿರಲಿಲ್ಲ.

ಕಾಫಿರ್‌ಗಳ ದುರಾದೃಷ್ಟ:

ಈ ಘಟನೆ ನಡೆಯುವುದಕ್ಕಿಂತ ಕೆಲವು ದಿನಗಳ ಮುಂಚೆ ದೇವಗಡದ ಕೆಲವು ವ್ಯಾಪಾರಿಗಳು ಎರಡರಿಂದ ಮೂರು ಸಾವಿರ ಉಪ್ಪಿನ ಮೂಟೆಗಳನ್ನು ಕೊಂಕಣದಿಂದ ತಂದಿದ್ದರು. ಆ ವ್ಯಾಪಾರಿಗಳು ಉಪ್ಪಿನ ಮೂಟೆಗಳನ್ನು ಕೋಟೆಯ ಬಳಿ ಬಿಟ್ಟು ಎಲ್ಲೋ ಓಡಿ ಹೋಗಿದ್ದರು. ರಾಜನ ಸಹಚರರು ಆ ಉಪ್ಪಿನ ಮೂಟೆಗಳನ್ನು ದಿನಸಿ ಸಾಮಗ್ರಿಯ ಮೂಟೆಗಳೆಂದು ತಪ್ಪಾಗಿ ಭಾವಿಸಿ ಅವುಗಳನ್ನು ಎತ್ತಿಕೊಂಡು ಕೋಟೆಯೊಳಗಡೆ ಹೋದರು. ದೇವಗಡದ ಶ್ರೀಮಂತ ವರ್ತಕರು ಮತ್ತು ಜನ ಸಾಮಾನ್ಯರನ್ನು ಓಡಿಹೋಗಲು ಅಲ್ಲಾವುದ್ದೀನನು ಯಾವುದೇ ಅವಕಾಶವನ್ನು ನೀಡಲಿಲ್ಲ. ಬದಲಿಗೆ ಪಟ್ಟಣದೊಳಗೆ ಪ್ರವೇಶಿಸಿ ಅವನು ವರ್ತಕರನ್ನು ಮತ್ತು ಇತರೆ ನಾಗರೀಕರನ್ನು ಬಂಧಿಸಿದ ಮತ್ತು ಮನಸೋ ಇಚ್ಛೆ ಪಟ್ಟಣವನ್ನು ಕೊಳ್ಳೆ ಹೊಡೆದ. ಅಲ್ಲಾವುದ್ದೀನನು ನಲವತ್ತು ಆನೆಗಳನ್ನು ಮತ್ತು ಸಾವಿರಾರು ಕುದುರೆಗಳನ್ನು ಕೂಡ ವಶಡಿಸಿಕೊಂಡ ಮತ್ತು ಮುಸ್ಲಿಮ್ ಸೈನಿಕರ ಇನ್ನೊಂದು ಬಲಿಷ್ಠ ತಂಡವು ಕೂಡ ನಿರ್ದಿಷ್ಟ ಮಾರ್ಗದ ಮೂಲಕ ಸದ್ಯದಲ್ಲಿಯೇ ಆಗಮಿಸುತ್ತಿದೆ ಎಂದು ಸುಳ್ಳು ಸುದ್ದಿಯನ್ನು ಕೂಡ ಹರಡಿದ. ಸಾವಿರಾರು ವರ್ಷಗಳಿಂದ ದೇವಗಡದ ಭೂಮಿಯು ಯಾವುದೇ

ಆಕ್ರಮಣಕಾರರ ಕುದುರೆ ಗೊರಸಿನ ಶಬ್ದವನ್ನು ಕೇಳಿರಲಿಲ್ಲ. ಅಂತಹ ಸಂಪದ್ಭರಿತ ಪಟ್ಟಣವನ್ನು ಅಲ್ಲಾವುದ್ದೀನನು ದೋಚಿದ ನಂತರ ಕೋಟೆಗೆ ಮುತ್ತಿಗೆಯನ್ನು ಹಾಕಿದ. ಮುಸ್ಲಿಮ್ ಸೈನ್ಯವು ತನ್ನ ದೇಶವನ್ನು ಲೂಟಿ ಹೊಡೆಯಲು ಆಗಮಿಸಿದೆ ಎಂದು ಅರಿತ ರಾಮದೇವನು ಅವನ ಇನ್ನೊಂದು ತುಕಡಿ ಆಗಮಿಸುವುದಕ್ಕಿಂತ ಮುಂಚಿತವಾಗಿ ಅಲ್ಲಾವುದ್ದೀನನೊಡನೆ ಸಂಧಿಯನ್ನು ಮಾಡಿಕೊಳ್ಳುವುದು ಸೂಕ್ತ ಎಂದು ನಿರ್ಧರಿಸಿದ. ಹೀಗಾಗಿ ರಾಜನು ತನ್ನ ಆಪ್ತವರ್ಗದ ಕೆಲವು ಬ್ರಾಹ್ಮಣರನ್ನು ಅಲ್ಲಾವುದ್ದೀನನ ಬಳಿ ಕಳುಹಿಸಿದ ಮತ್ತು ಹೀಗೆಂದು ಸಂದೇಶವನ್ನು ಕಳುಹಿಸಿದ, "ಈ ಪಟ್ಟಣದೊಳಗೆ ನಿನ್ನ ಆಗಮನವು ಯುಕ್ತಿ, ದೂರದೃಷ್ಟಿ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸೂಕ್ತವಾಗಿಲ್ಲ. ಹಾಲಿ ನಮ್ಮ ಪಟ್ಟಣವು ಸೈನ್ಯವಿಲ್ಲದೆ ಖಾಲಿಯಾಗಿದೆ. ಆದ್ದರಿಂದ ಈ ಅವಕಾಶವನ್ನು ಬಳಸಿಕೊಂಡು ನೀನು ನಿನ್ನ ಉದ್ದೇಶವನ್ನು ಈಡೇರಿಸಿಕೊಂಡಿದ್ದೀಯಾ. ಆದರೆ ಈ ವಿಜಯವು ಲಭಿಸಿರುವುದಕ್ಕಾಗಿ ನೀನು ಅಹಂಕಾರ ಪಡಬೇಡ ಏಕೆಂದರೆ ಹತ್ತಿರದ ಪ್ರದೇಶಗಳಿಂದ ಅನತಿ ಕಾಲದಲ್ಲಿಯೇ ನಮ್ಮ ಅಸಂಖ್ಯ ಸೈನಿಕರಿಂದ ಕೂಡಿದ ಬಲಾಢ್ಯ ಸೇನೆಯು ಜಮಾವಣೆಯಾಗಲಿದೆ. ಮತ್ತು ದೇವಗಡವನ್ನು ತಲುಪಿ ನಿನಗೆ ತಕ್ಕ ಶಾಸ್ತಿಯನ್ನು ಮಾಡಲಿದೆ. ನಿಮ್ಮ ಪೈಕಿ ಯಾರೊಬ್ಬರೂ ಕೂಡ ಜೀವಂತವಾಗಿ ಉಳಿಯುವುದಿಲ್ಲ. ಅದೃಷ್ಟವಶಾತ್ ನೀನು ಈ ಸೈನ್ಯದ ಹಿಡಿತದಲ್ಲಿ ಸಿಲುಕಿಕೊಳ್ಳುವುದಿಲ್ಲವೆಂದು ಭಾವಿಸಿದಾಗ್ಯೂ ನಲವತ್ತು ಸಾವಿರ ಸೈನಿಕರ ಬಲಿಷ್ಠ ಸೈನ್ಯವನ್ನು ಹೊಂದಿರುವ ಮಾಳವದ ರಾಜ ಹಾಗೂ ಖಾನ್‌ದೇಸ್ ಮತ್ತು ಕೊಂಡವಾಡದ ಪ್ರಬಲ ರಾಜರುಗಳು ನಿನ್ನನ್ನು ಮಾರ್ಗಮಧ್ಯದಲ್ಲಿಯೇ ನಾಶಮಾಡಲಿದ್ದಾರೆ. ಮತ್ತು ನಿನ್ನ ಸೈನ್ಯವನ್ನು ಚಿಂದಿ ಮಾಡಲಿದ್ದಾರೆ. ಆದ್ದರಿಂದ ಹಿಂದೂ ರಾಜರುಗಳು ಒಟ್ಟುಗೂಡಿ ನಿನ್ನ ಮೇಲೆ ದಾಳಿ ಮಾಡುವುದಕ್ಕೆ ಮುನ್ನ ನೀನು ಇಲ್ಲಿಂದ ತೆರಳುವುದೇ ಸೂಕ್ತ. ನೀನು ಸೆರೆ ಹಿಡಿದಿರುವ ನಮ್ಮ ಜನರನ್ನು ಮತ್ತು ವರ್ತಕರನ್ನು ಕೂಡ ಪರಿಹಾರದ ಹಣವನ್ನು ಪಡೆದು ಸೆರೆಮನೆಯಿಂದ ಬಿಡುಗಡೆ ಮಾಡುವುದು."

ದೂರದೃಷ್ಟಿ ಮತ್ತು ಎಚ್ಚರಿಕೆಯಿಂದ ವರ್ತಿಸಿದ ಅಲ್ಲಾವುದ್ದೀನನು ರಾಜನ ಶರತ್ತುಗಳನ್ನು ಒಪ್ಪಿದ ಮತ್ತು ಐವತ್ತು ಮಣ ಚಿನ್ನ ಅನೇಕ ಮಣ ತೂಕದ ಮುತ್ತುಗಳು ಮತ್ತು ಉತ್ಕೃಷ್ಟ ಹಾಗೂ ಬೆಲೆ ಬಾಳುವ ಬಟ್ಟೆಗಳನ್ನು ಪಡೆದುಕೊಂಡು ದೇವಗಡವನ್ನು ಪ್ರವೇಶ ಮಾಡಿದ ಹದಿನೈದನೇ ದಿನದಂದು ಬೆಳಗ್ಗೆ ಖೈದಿಗಳನ್ನು ಬಿಡುಗಡೆ ಮಾಡಿ ಅವನು ದೇವಗಡದಿಂದ ನಿರ್ಗಮಿಸುವುದೆಂದು ನಿರ್ಧಾರ ಮಾಡಿದ.

ರಾಮದೇವನ ಹಿರಿಯ ಮಗನಿಗೆ ಈ ಎಲ್ಲಾ ವಿಷಯಗಳ ಮಾಹಿತಿಯು ದೊರಕಿತು ಅವನು ತನ್ನ ಸೈನ್ಯವನ್ನು ದೇವಗಡದಿಂದ ಮೂರು ಹರದಾರಿ ದೂರದಲ್ಲಿ ನಿಲ್ಲಿಸಿ ಯುದ್ಧ ಮಾಡುವ ಸಲುವಾಗಿ ಅಲ್ಲಾವುದ್ದೀನನ ಸೈನ್ಯದ ನಿರೀಕ್ಷೆ ಮಾಡತೊಡಗಿದ.

ರಾಮದೇವನಿಗೆ ತನ್ನ ಮಗನ ಈ ಪ್ರಯತ್ನಗಳ ಬಗ್ಗೆ ತಿಳಿದುಬಂದಿತು. ಆಗ ಅವನು ತನ್ನ ನಂಬಿಕೆಯ ಸಹಚರನನ್ನು ಮಗನ ಬಳಿ ಕಳುಹಿಸಿ ಹೇಳಿದ "ನಮ್ಮ ಅದೃಷ್ಟದಲ್ಲಿ ಇದ್ದಂತೆ ಆಗಿದೆ. ದೇವರ ದಯೆಯಿಂದ ನಮಗೆ ಯಾವುದೇ ಹಾನಿ ಉಂಟಾಗಿಲ್ಲ. ಆದರೆ ಜನತೆಯ ಮೇಲೆ ತೀರಾ ಹಿಂಸೆ ಉಂಟಾಗಿರುವುದು ನಿಜ. ಈ ವಿಷಯದ ಬಗ್ಗೆ ನೀನು ತೀರಾ ಬೇಸರ ಪಡಬೇಡ ಈ ನೋವನ್ನು ಪರಿಹಾರ ಮಾಡಲಾಗುವುದು. ಈ ಸಂದರ್ಭದಲ್ಲಿ ಮುಸಲ್ಮಾನರೊಡನೆ ಯುದ್ಧ ಮಾಡುವುದು ಸೂಕ್ತವಲ್ಲ ಅದೊಂದು ವಿಚಿತ್ರವಾದ ಯುದ್ಧದಾಹೀ ಜನಾಂಗವಾಗಿದೆ. ಅವರ ವಿರುದ್ದ ಸೆಣಸಾಡುವುದು ಬೇಡ." ರಾಮದೇವನ ಪುತ್ರನು ತನ್ನ ದ್ವಿಗುಣ ಸಂಖ್ಯೆಯ ಸೈನ್ಯವನ್ನು ಮತ್ತು ಇನ್ನಿತರೆ ರಾಜರುಗಳ ನೆರವಿನ ನಿರೀಕ್ಷೆಯ ಮೇರೆಗೆ ಅಹಂಕಾರದಿಂದ ವರ್ತಿಸಿ ತಂದೆಯಾದ ರಾಮದೇವನ ಮಾತಿಗೆ ಬೆಲೆಕೊಡಲಿಲ್ಲ ಮತ್ತು ಅಲ್ಲಾವುದ್ದೀನನೊಡನೆ ಯುದ್ಧ ಮಾಡಲೇಬೇಕೆಂಬ ನಿರ್ಧಾರವನ್ನು ಕೈಗೊಂಡ. ಆ ರಜಪೂತ ಯುವರಾಜನು ಅಲ್ಲಾವುದ್ದೀನನಿಗೆ ಸಂದೇಶವನ್ನು ಕಳುಹಿಸಿದ " ನೀನು ನಮ್ಮ ಗೈರುಹಾಜರಿಯಲ್ಲಿ ನಮ್ಮ ಜನತೆಯಿಂದ ಬಲಾತ್ಕಾರವಾಗಿ ಲೂಟಿ ಹೊಡೆದಿರುವ ಎಲ್ಲಾ ಸಂಪತ್ತನ್ನು ಕೂಡ ಹಿಂದಿರುಗಿಸಿದಲ್ಲಿ ನಿನಗೆ ಕ್ಷೇಮ. ನಮ್ಮ ಸಂಪತ್ತನ್ನು ನಮಗೆ ಮರಳಿ ಕೊಟ್ಟು ನಿನ್ನ ದೇಶಕ್ಕೆ ಮರಳಿ ಹೋಗುವುದು." ಈ ಮಾತನ್ನು ಕೇಳಿ ಅಲ್ಲಾವುದ್ದೀನನು ಅಪಾರವಾಗಿ ಕೋಪಗೊಂಡ ಮತ್ತು ಅವನು ರಾಮದೇವನ ಮಗನ ರಾಯಭಾರಿಯ ಮೋರೆಗೆ ಕಪ್ಪು ಬಳಿದು ಇಡೀ ಪಟ್ಟಣದಲ್ಲಿ ಮೆರವಣಿಗೆ ಮಾಡಿದ.

ದೈವಹಸ್ತದ ನೆರವು:

ಅಲ್ಲಾವುದ್ದೀನನು ಒಂದು ಸಾವಿರ ಸೈನಿಕರಿಂದ ಕೂಡಿದ ಸೈನ್ಯದೊಂದಿಗೆ ಮುಲ್ಕ್ ನುಸರತ್‌ನನ್ನು ಕೋಟೆಗೆ ಲಗ್ಗೆ ಹಾಕುವ ಸಲುವಾಗಿ ನಿಯುಕ್ತಿಗೊಳಿಸಿ ತಾನು ಉಳಿದ ಸೈನ್ಯದೊಂದಿಗೆ ಹಿಂದು ರಾಜರೊಡನೆ ಯುದ್ಧ ನಡೆಸುವ ಸಲುವಾಗಿ ಹೊರಟ. ಉಭಯ ಸೈನ್ಯಗಳ ನಡುವೆ ಯುದ್ಧ ಆರಂಭವಾಯಿತು ಮತ್ತು ಕಾಳಗವು ತೀವ್ರವಾಯಿತು ಹಿಂದೂಗಳ ಸೈನ್ಯವು ಅಪಾರ ಸಂಖ್ಯೆಯಿಂದ ಕೂಡಿತ್ತು ಹಾಗೂ ಅವರುಗಳು ತಮ್ಮ ಜೀವದ ಹಂಗನ್ನು ತೊರೆದು ಹೋರಾಡುತ್ತಿದ್ದರು. ಅವರ ಈ ಆವೇಶವನ್ನು ಕಂಡು ಮುಸ್ಲಿಮರ ಸ್ಥೈರ್ಯವು ಕುಂದಿತು. ಮುಸ್ಲಿಮರ ಸೈನ್ಯವು ಯುದ್ಧರಂಗವನ್ನು ತೊರೆದು ಪಲಾಯನಗೈಯುವ ಸ್ಥಿತಿಯಲ್ಲಿದ್ದಾಗ ನುಸ್ರತ್ ಮುಲ್ಕ್ ತನ್ನ ಒಂದು ಸಾವಿರ ಸೈನಿಕರೊಡನೆ ರಣರಂಗವನ್ನು ಪ್ರವೇಶಿಸಿದ. ಅವನ ಸೈನ್ಯವನ್ನು ಕಂಡ ಕೂಡಲೇ ಅವರ ಬೆಂಬಲಕ್ಕೆ ಬಂದ ಸೈನ್ಯವು ಈ ಹಿಂದೆ ಮುಸ್ಲಿಮರು ಹರಡಿದ್ದ ಸುದ್ದಿಯಂತೆ ಬಂದಿರುವ ಅಪಾರ ಸಂಖ್ಯೆಯ ಹೊಸ ಸೇನೆ ಎಂದು ಹಿಂದೂಗಳು ಪರಿಭಾವಿಸಿದರು ಹಾಗೂ ಅವರು ದಿಗಿಲುಗೊಂಡರು. ಈ ಮನಃಸ್ಥಿತಿಯ ಪರಿಣಾಮವಾಗಿ ಅವರು ಯುದ್ಧರಂಗವನ್ನು ತೊರೆದು ಪಲಾಯನ

ಮಾಡತೊಡಗಿದರು. ಅಲ್ಲಾವುದ್ದೀನನಿಗೆ ವಿಜಯ ಪ್ರಾಪ್ತಿಯಾಯಿತು. ಈ ಮೇಲ್ಕಂಡ ವಿಜಯ ಪ್ರಾಪ್ತಿಯಾದ ನಂತರ ಅವನು ಮತ್ತೆ ಕೋಟೆಗೆ ಮುತ್ತಿಗೆಯನ್ನು ಹಾಕಿದ ಮತ್ತು ಅದರ ತೀವ್ರತೆಯನ್ನು ಹೆಚ್ಚಿಸತೊಡಗಿದ. ಅಲ್ಲಾವುದ್ದೀನನು ಅಪಾರ ಸಂಖ್ಯೆಯ ಮಹಾಜನ ಎಂಬ ವ್ಯಾಪಾರಿಗಳನ್ನು ಹಾಗೂ ಬ್ರಾಹ್ಮಣ ಖೈದಿಗಳನ್ನು ಕೊಲೆ ಮಾಡಿದ ಹಾಗೂ ಉಳಿದ ರಾಮದೇವನ ಸಂಬಂಧಿಗಳನ್ನು ಸೆರೆ ಹಿಡಿದು ಅವರ ಕಾಲುಗಳಲ್ಲಿ ಸರಪಳಿ ಹಾಗೂ ಕೊರಳುಗಳಲ್ಲಿ ಸರಪಳಿಯನ್ನು ಹಾಕಿ ಕೋಟೆಯ ಮುಂಭಾಗದಲ್ಲಿ ನಿಲ್ಲಿಸಿದ. ರಾಮದೇವನು ತನ್ನ ಖಾಸಾ ಬೆಂಬಲಿಗರೊಡನೆ ಸಲಹೆಯನ್ನು ಪಡೆದ ಹಾಗೂ ಗುಲ್ಬರ್ಗಾ, ಖಾಂದೇಸ್, ಮಾಳವ ಹಾಗೂ ತೆಲಂಗಾಣದ ರಾಜರುಗಳಿಂದ ನೆರವನ್ನು ಪಡೆಯಬೇಕೆಂಬ ತನ್ನ ಇಚ್ಛೆಯನ್ನು ವ್ಯಕ್ತ ಪಡಿಸಿದ. ಅದೇ ಸಂದರ್ಭದಲ್ಲಿ ಅತನಿಗೆ ಇನ್ನೊಂದು ಆಘಾತ ಕಾದಿತ್ತು. ಕೋಟೆಯೊಳಗಡೆ ಆಹಾರ ಸಾಮಗ್ರಿ ಇಲ್ಲ ಹಾಗೂ ಕೋಟೆಯೊಳಗಡೆ ದಿನಸಿ ಎಂದು ಭಾವಿಸಿ ತಂದಿದ್ದ ಚೀಲಗಳು ಉಪ್ಪಿನ ಮೂಟೆಗಳು ಎಂದು ಅವನಿಗೆ ತಿಳಿದುಬಂದಿತು. ಕೋಟೆಯ ಒಳಗಿದ್ದವರಿಗೆ ಮುಸ್ಲಿಮರನ್ನು ಎದುರಿಸುವ ಸಾಮರ್ಥ್ಯವಿರಲಿಲ್ಲ ಅಂದ ಮೇಲೆ ದಿನಸಿಯ ಕೊರತೆಯನ್ನು ಹೇಗೆ ಸರಿದೂಗಿಸುವುದೆಂಬ ಚಿಂತೆಯಾಯಿತು. ಚಿಂತಾಕ್ರಾಂತನಾದ ರಾಮದೇವನು ಈ ವಿಷಯವನ್ನು ಅಡಗಿಸಿದ ಹಾಗೂ ಅಲ್ಲಾವುದ್ದೀನನ ಹೆಸರಿಗೆ ಒಂದು ಪತ್ರವನ್ನು ಬರೆದ "ಈ ಯುದ್ಧದಲ್ಲಿ ನನ್ನ ಯಾವುದೇ ಪಾತ್ರವಿಲ್ಲ ಎಂಬುದು ತಮಗೆ ಮನವರಿಕೆಯಾಗಿರಬಹುದು. ನನ್ನ ಮಗನು ಯೌವನದ ಮದ ಮತ್ತು ಅಹಂಕಾರದಿಂದ ಪ್ರೇರಿತನಾಗಿ ಈ ಯುದ್ಧವನ್ನು ಮಾಡಿರುತ್ತಾನೆ. ಮಗನ ತಪ್ಪುಗಳ ಶಿಕ್ಷೆಯನ್ನು ತಾವು ನನಗೆ ನೀಡುವುದಿಲ್ಲವೆಂದು ಭಾವಿಸಿದ್ದೇನೆ" ರಾಮದೇವನು ಆ ಪತ್ರವನ್ನು ಒಬ್ಬ ರಾಯಭಾರಿಯ ಹಸ್ತ ಕಳಿಸಿಕೊಟ್ಟ ಹಾಗೂ ಹಾಗೆ ಅವನನ್ನು ಕಳುಹಿಸುವಾಗ ಅತ್ಯಂತ ಗೌಪ್ಯತೆಯಿಂದ ತನ್ನ ರಹಸ್ಯವನ್ನು ಆ ರಾಯಭಾರಿಗೆ ಉಸುರಿದ ಮತ್ತು ನುಡಿದ, "ಕೋಟೆಯಲ್ಲಿ ದಿನಸಿ ಇಲ್ಲದೆ ಇರುವುದರಿಂದ ಈ ಯುದ್ಧವು ತತ್‌ಕ್ಷಣವೇ ಅಂತ್ಯಕಾಣಬೇಕಾಗಿದೆ. ಮೂರ್ನಾಲ್ಕು ದಿನಗಳ ಕಾಲ ಈ ಯುದ್ಧವು ಮುಂದುವರೆದದ್ದೇ ಆದಲ್ಲಿ ಕೋಟೆಯೊಳಗಿನ ಜನರು ಉಪವಾಸದಿಂದ ಸಾಯುತ್ತಾರೆ. ಆದ್ದರಿಂದ ಒಂದೆರಡು ದಿನಗಳಲ್ಲಿಯೇ ಸಂಧಿಯಾಗುವಂತೆ ನೀನು ಎಲ್ಲಾ ಪ್ರಯತ್ನವನ್ನು ಮಾಡು. ಆದರೆ ಯಾವ ಕಾರಣಕ್ಕೂ ಆಹಾರ ಧಾನ್ಯಗಳ ಕೊರತೆಯ ವಿಷಯವನ್ನು ಅಲ್ಲಾವುದ್ದೀನನ ಗಮನಕ್ಕೆ ತರಕೂಡದು." ರಾಮದೇವನ ರಾಯಭಾರಿಯು ಅಲ್ಲಾವುದ್ದೀನನ ಬಳಿ ತಲುಪಿದ ಮತ್ತು ಅವನಿಗೆ ತನ್ನ ರಾಜನ ಪತ್ರವನ್ನು ನೀಡಿದ. ಆದರೆ ಈ ವೇಳೆಗಾಗಲೇ ಅಲ್ಲಾವುದ್ದೀನನಿಗೆ ಕೋಟೆಯೊಳಗಿನ ರಹಸ್ಯವು ತಿಳಿದು ಹೋಗಿತ್ತು. ಆದ್ದರಿಂದ ಅವನು ಕಾಲ ವಿಳಂಬಾತಿಯನ್ನು ಮಾಡಿದ ಅಂತೂ ಕೊನೆಗೆ ಆ ರಾಜನ ರಾಯಭಾರಿಗಳು ಅಲ್ಲಾವುದ್ದೀನನ ಬಳಿ ಅತ್ಯಂತ ವಿನಯದಿಂದ ಕೋರಿಕೆಯನ್ನು ಸಲ್ಲಿಸಿದರ ಮೇರೆಗೆ

ಅಲ್ಲಾವುದ್ದೀನನು ಅಸಾಧ್ಯ ಮತ್ತು ಅಸಮಾನ್ಯ ಶರತ್ತುಗಳನ್ನು ಮುಂದೊಡ್ಡಿದ ಆ ಮೇರೆಗೆ ರಾಮದೇವನು ೬೦೦ ಮಣ ಚಿನ್ನ, ಏಳು ಮಣ ತೂಕದ ಮುತ್ತು, ಎರಡು ಮಣ ತೂಕದ ಕೆಂಪಿನ ಹರಳು, ವಜ್ರಗಳು ಮತ್ತು ಪಚ್ಚೆ ಹಾಗೂ ಒಂದು ಸಾವಿರ ಮಣ ತೂಕದ ಬೆಳ್ಳಿ, ನಾಲ್ಕು ಸಾವಿರ ರೇಷ್ಮೆ ಉಡುಪುಗಳು ಮತ್ತು ಇನ್ನೂ ಅನೇಕಾನೇಕ ವಸ್ತುಗಳನ್ನು ನೀಡಬೇಕೆಂಬ ಶರತ್ತುಗಳನ್ನು ಒಡ್ಡಿದ. ಅವುಗಳೊಡನೆ ಏಲ್‌ಚೂರ್ ಪಟ್ಟಣವನ್ನು ಕೂಡ ಆತನಿಗೆ ಒಪ್ಪಿಸಬೇಕೆಂದು ಮಾತುಕತೆಯಾಯಿತು. ಒಂದು ವೇಳೆ ರಾಮದೇವನು ಏಲ್‌ಚೂರು ಪಟ್ಟಣವನ್ನು ಆತನ ವಶಕ್ಕೆ ಒಪ್ಪಿಸದೆ ಇದ್ದಲ್ಲಿ ಆ ಪಟ್ಟಣದ ವಾರ್ಷಿಕ ಕರವನ್ನು ಪ್ರತಿ ವರ್ಷ ಖಡಾಗೆ ಕಳಿಸಿಕೊಡತಕ್ಕದ್ದು ಎಂದು ಒಪ್ಪಂದವಾಯಿತು. ಈ ಎಲ್ಲಾ ಕಪ್ಪಕಾಣಿಕೆಗಳನ್ನು ಒಪ್ಪಿಕೊಂಡು ಅಲ್ಲಾವುದ್ದೀನನು ಎಲ್ಲಾ ಹಿಂದೂ ಖೈದಿಗಳನ್ನು ಬಿಡುಗಡೆ ಮಾಡುವುದಾಗಿ ಒಪ್ಪಿಕೊಂಡನು. ಹಾಗೂ ದಖ್ಖನ್ನನ್ನು ಗೆಲ್ಲಲು ದೆಹಲಿಯಿಂದ ಹೊರಟಿರುವ ಸೈನ್ಯವನ್ನು ಕೂಡ ಹಾಗೆಯೇ ಮರಳಿ ಕಳಿಸುವುದಾಗಿ ಅಲ್ಲಾವುದ್ದೀನನು ಒಪ್ಪಿಕೊಂಡ. ಹಾಗೂ ಜಲಾಲುದ್ದೀನ್ ಮತ್ತು ರಾಮದೇವನ ನಡುವೆ ಸಂಧಿಯನ್ನು ಏರ್ಪಡಿಸಿ ಸುಭದ್ರ ಸಂಬಂಧವನ್ನು ಉಭಯ ದೇಶಗಳ ನಡುವೆ ಏರ್ಪಡಿಸಿ ಮುಂದೆ ಯಾವುದೇ ಯುದ್ಧವಾಗದಂತೆ ನೋಡಿಕೊಳ್ಳಬೇಕೆಂದು ಅವರು ಪರಸ್ಪರ ತೀರ್ಮಾನವನ್ನು ಮಾಡಿಕೊಂಡರು. ಅಲ್ಲಾವುದ್ದೀನನು ಮೇಲೆ ಹೇಳಿದ ಎಲ್ಲಾ ಕಾಣಿಕೆಗಳನ್ನು ಒಪ್ಪಿಕೊಂಡು ಹಿಂದೂ ಖೈದಿಗಳನ್ನು ಬಿಡುಗಡೆ ಮಾಡಿ ಆ ಕೋಟೆಯ ಮುತ್ತಿಗೆಯ ೨೫ ನೇ ದಿನದಂದು ಮುತ್ತಿಗೆಯನ್ನು ಹಿಂದೆಗೆದುಕೊಂಡು ಹೊರಟ. ದೆಹಲಿಯ ಯಾವ ರಾಜನ ಬೊಕ್ಕಸಕ್ಕೆ ಕೂಡ ಸೇರದೆ ಇದ್ದಷ್ಟು ಧನಕನಕ, ಮುತ್ತು, ರತ್ನ, ಆನೆ, ಕುದುರೆ ಮೊದಲಾದವುಗಳನ್ನು ಪಡೆದುಕೊಂಡು ಮುಂದೆ ಪ್ರಯಾಣ ಬೆಳೆಸಿದ.

ಸೂಕ್ಷ್ಮ ದೃಷ್ಟಿಯುಳ್ಳವರು ಲೌಖಿಕ ಆಗು ಹೋಗುಗಳ ಬಗ್ಗೆ ಸಾಕಷ್ಟು ಅರಿವನ್ನು ಹೊಂದಿದವರಾಗಿದ್ದು ಚರಿತ್ರೆಯ ಪುಟಗಳನ್ನು ತಿರುವಿದಾಗ ಅನೇಕ ಸಂದರ್ಭಗಳಲ್ಲಿ ದೈವ ಸಹಾಯವು ಒದಗಿ ಬರುವುದನ್ನು ಕಂಡಿದ್ದಾರೆ. ಮತ್ತು ವಿವೇಕಿಗಳ ಅದೃಷ್ಟಕ್ಕೆ ಪವಾಡ ಸದೃಶ್ಯ ಘಟನೆಗಳು ಕೂಡ ಸಂಭವಿಸಿವೆ ಆದರೆ ಪ್ರಕೃತಿಯು ಅಲ್ಲಾವುದ್ದೀನನಿಗೆ ನೀಡಿದಂತಹ ನೆರವು ಇಡೀ ಚರಿತ್ರೆಯಲ್ಲಿ ಹುಡುಕಿದರೂ ಕೂಡ ಸಿಗಲು ಕಷ್ಟ ಸಾಧ್ಯವಿದೆ. ಅವನ ಅದೃಷ್ಟಕ್ಕೆ ದೊರಕಿದ ಸಂಪತ್ತು ಇನ್ನು ಯಾರಿಗೂ ದೊರಕಿರಲಿಲ್ಲ. ಖಡಾದಿಂದ ದೇವಗಡಕ್ಕೆ ಅತ್ಯಂತ ಹೆಚ್ಚಿನ ಅಂತರವಿದ್ದು ಆ ಅಂತರವನ್ನು ಕ್ರಮಿಸುವುದು ಬಹಳ ಪ್ರಯಾಸದ ಕೆಲಸವಾಗಿತ್ತು ಮತ್ತು ಮಾಳವ ಕೊಂಡವಾಡ ಮತ್ತು ಖಾಂದೇಸ್ ಮುಂತಾದ ಬಲಿಷ್ಠ ರಾಜರನ್ನು ಎದುರಿಸಿ ವಿಜಯಿಯಾಗಿ ಹೊರ ಹೊಮ್ಮುವುದು ಕೂಡ ಒಳ್ಳೆಯ ಅದೃಷ್ಟದ ಗುರುತಾಗಿದೆ. ಅಷ್ಟೇ ಅಲ್ಲದೆ ದೇವಗಡದಲ್ಲಿ ಶತ್ರುಗಳು ಉಪ್ಪಿನ ಮೂಟೆಗಳನ್ನು ದಿನಸಿ ಮೂಟೆಗಳೆಂದು ತಪ್ಪಾಗಿ ಗ್ರಹಿಸಿ ಕೋಟೆಯೊಳಗಡೆ ಕೊಂಡೊಯ್ಯುವುದು ಹಾಗೂ ಅತ್ಯಲ್ಪ ಕಾಲದಲ್ಲಿಯೇ ಅಪಾರ ಸಂಪತ್ತನ್ನು

ಪಡೆದುಕೊಳ್ಳುವುದು ಹಾಗೂ ಆ ಶತ್ರುಗಳ ಮಧ್ಯದಿಂದ ಸುರಕ್ಷಿತವಾಗಿ ಹೊರಬರುವುದು ಮತ್ತು ಈ ಎಲ್ಲಾ ಕಷ್ಟ ಕೋಟಲೆಗಳನ್ನು ಅನುಭವಿಸಿ ಹಿಂದೂಸ್ಥಾನದ ಸಿಂಹಾಸನವನ್ನು ಅಲಂಕರಿಸುವುದು ಸಾಮಾನ್ಯ ಮತ್ತು ಸುಲಭದ ಮಾತಾಗಿರಲಿಲ್ಲ.

ಅಲ್ಲಾವುದ್ದೀನನ ಪಟ್ಟಾಭಿಷೇಕದ ಬಗ್ಗೆ ವಿವರಗಳು:

ಹಿಂದೂಸ್ಥಾನದ ಸಿಂಹಾಸನವನ್ನು ಅಲ್ಲಾವುದ್ದೀನನು ಆರೋಹಣ ಮಾಡಿದ ಬಗ್ಗೆ ವಿವರಗಳು ಇಂತಿವೆ; ಅಲ್ಲಾವುದ್ದೀನನು ದೇವಗಡದ ಪ್ರಯಾಣವನ್ನು ಆರಂಭಿಸಿದ ನಂತರ ದೀರ್ಘಾವಧಿಯವರೆಗೆ ದೆಹಲಿಯ ಬಾದಶಹನಾದ ಜಲಾಲುದ್ದೀನ್ ಖಿಲ್ಜಿಗೆ ಅಲ್ಲಾವುದ್ದೀನನ ಯಾವುದೇ ಸುದ್ದಿಯು ದೊರಕಲಿಲ್ಲ. ಆದರೆ ಅವನ ಗೈರು ಹಾಜರಿಯಲ್ಲಿ ಅವನ ಪ್ರತಿನಿಧಿಯಾಗಿದ್ದು ಖಡಾದ ಆಡಳಿತವನ್ನು ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದವನು ಆಗಾಗ್ಗೆ ಬಾದಶಹನ ಸನ್ನಿಧಿಗೆ ವರದಿಗಳನ್ನು ಕಳುಹಿಸಿ ಅಲ್ಲಾವುದ್ದೀನನು ಚಂದೇರಿಯ ಯುದ್ಧದಲ್ಲಿ ಮಗ್ನನಾಗಿದ್ದಾನೆಂತಲೂ ಮತ್ತು ಸದ್ಯದಲ್ಲಿಯೇ ಆತನೇ ಖುದ್ದು ಆ ಯುದ್ಧದ ವಿವರಗಳನ್ನು ಸನ್ನಿಧಾನಕ್ಕೆ ಸಲ್ಲಿಸುವುದಾಗಿಯೂ ವರದಿ ಮಾಡುತ್ತಿದ್ದ. ಸುಮಾರು ಆರು ತಿಂಗಳ ಅವಧಿಯು ಮುಕ್ತಾಯವಾದರೂ ಅಲ್ಲಾವುದ್ದೀನನ ಒಂದೇ ಒಂದು ಪತ್ರವು ಕೂಡ ಬಾದಶಹನಿಗೆ ತಲುಪಲಿಲ್ಲ. ಆ ಹೊತ್ತಿನಲ್ಲಿ ಅಲ್ಲಾವುದ್ದೀನನು ಬಂಡಾಯ ಹೂಡಿರುವನೆಂಬ ಗಾಳಿ ಸುದ್ದಿಯು ದೆಹಲಿಯ ಮೂಲೆ ಮೂಲೆಯಲ್ಲಿಯೂ ಹರಡಿತು ತನ್ನ ಪತ್ನಿಯೂ ಮತ್ತು ಚಕ್ರವರ್ತಿನಿಯೂ ಆಗಿದ್ದ ಮಲ್ಲಿಕಾ ಜಹಾನ್ ಮತ್ತು ಅಲ್ಲಾವುದ್ದೀನನ ನಡುವೆ ಮೂಡಿದ್ದ ವಿರಸದ ಬಗ್ಗೆ ಕೂಡ ಬಾದಶಹನಿಗೆ ತಿಳಿದಿತ್ತು. ಆದರೆ ಆ ಸಭ್ಯ, ಸಜ್ಜನ ಮತ್ತು ಕರುಣಾಮಯಿ ಬಾದಶಹನು ಅಲ್ಲಾವುದ್ದೀನನ ಬಗ್ಗೆ ಯಾವುದೇ ಸಂದೇಹವನ್ನು ತಾಳಲಿಲ್ಲ. ಹಿಜರಿ ಶಕೆ ೬೫೫ ನೇ ಇಸವಿಯ ಆರಂಭದಲ್ಲಿ ಜಲಾಲುದ್ದೀನನು ಬೇಟೆಯಾಡುವ ಸಲುವಾಗಿ ಗ್ವಾಲಿಯರ್‌ಗೆ ಹೋದ ಹಾಗೂ ಹಲವು ತಿಂಗಳ ಕಾಲ ಅಲ್ಲಿಯೇ ವಾಸವಾದ ಮತ್ತು ಅಲ್ಲಿ ಅತ್ಯಂತ ಎತ್ತರದ ಗುಮ್ಮಟವನ್ನು ಮತ್ತು ವೇದಿಕೆಯನ್ನು ನಿರ್ಮಾಣ ಮಾಡಿದ. ಜಲಾಲುದ್ದೀನನು ಒಂದು ಕವಿತೆಯನ್ನು ರಚಿಸಿ ಆ ಗುಮ್ಮಟದ ಮುಂಭಾಗದಲ್ಲಿ ಕೊರೆಸಿದ.

ಆ ಸಂದರ್ಭದಲ್ಲಿ ಅಲ್ಲಾವುದ್ದೀನನು ದೇವಗಡವನ್ನು ಗೆದ್ದು ಕೊಂಡಿರುತ್ತಾನೆಂಬ ವರ್ತಮಾನವು ಬಾದಶಹನಿಗೆ ಅನಧಿಕೃತ ಮೂಲಗಳಿಂದ ದೊರಕಿತು. ಆದರೆ ಅಲ್ಲಾವುದ್ದೀನನು ಈ ಕುರಿತು ಯಾವುದೇ ಮಾಹಿತಿಯನ್ನು ಬಾದಶಹನಿಗೆ ನೀಡಲಿಲ್ಲ ಅಷ್ಟೇ ಅಲ್ಲದೆ ದೇವಗಡದ ವಿಜಯ ಪ್ರಾಪ್ತಿಯಿಂದ ಅಲ್ಲಾವುದ್ದೀನನಿಗೆ ಅಪಾರ ಸಂಪತ್ತು ದೊರಕಿದ್ದು ಆತನು ದೆಹಲಿಯ ಬಾದಶಹನಿಗಿಂತಲೂ ಸಿರಿವಂತನಾಗಿರುವನೆಂಬ ವಿಷಯವು ಅವನಿಗೆ ತಿಳಿದು ಬಂದಿತು. ಖಡಾದಿಂದ ಅಲ್ಲಾವುದ್ದೀನನು ದೆಹಲಿಯ ದಿಕ್ಕಿನಲ್ಲಿ ಪ್ರಯಾಣ ಬೆಳೆಸಿದಾಗ ಜಲಾಲುದ್ದೀನನಿಗೆ

ಅಪಾರ ಸಂತೋಷವಾಯಿತು. ಮತ್ತು ಅವನು ಅಲ್ಲಾವುದ್ದೀನನ ವಿವೇಚನೆ ಮತ್ತು ವಿಧೇಯತೆಯನ್ನು ತನ್ನ ಘನತೆಗೆ ಸಿಕ್ಕ ಗೌರವವೆಂದು ಭಾವಿಸಿದ. ಆದರೆ ಬಾದಶಹನ ಆಪ್ತರು ಮತ್ತು ದೂರ ದೃಷ್ಟಿಯನ್ನು ಹೊಂದಿದ ಇತರೆ ರಾಜಕಾರಣಿಗಳು ಈ ಎಲ್ಲಾ ಸಂದರ್ಭಗಳನ್ನು ವಿಭಿನ್ನ ರೀತಿಯಲ್ಲಿ ಅವಲೋಕನ ಮಾಡಿದರು. ಚಕ್ರವರ್ತಿನಿ ಮತ್ತು ಅಲ್ಲಾವುದ್ದೀನನ ನಡುವೆ ಇದ್ದ ವಿರಸ ಒಂದೆಡೆಯಾದರೆ ಬಾದಶಹನ ಅನುಮತಿಯಿಲ್ಲದೆ ಅಲ್ಲಾವುದ್ದೀನನ ದಖ್ಖನ್‌ನ ಯುದ್ಧವನ್ನು ಮಾಡಿ ಅಪಾರ ಸಂಪತ್ತನ್ನು ಹೊಂದಿದ ಅಂಶವೂ ಕೂಡ ಪ್ರಮುಖವಾಗಿತ್ತು. ಈ ಎಲ್ಲಾ ಅಂಶಗಳು ಸೇರಿಸಿಕೊಂಡು ಅಲ್ಲಾವುದ್ದೀನನು ಬಂಡಾಯವೇಳುವ ಸಂದರ್ಭವು ಹತ್ತಿರದಲ್ಲೇ ಇದೆ ಎಂದು ಅವರು ಗ್ರಹಿಸಿದರು. ಆದರೆ ಈ ಬಗ್ಗೆ ಯಾರೊಬ್ಬರು ಕೂಡ ಬಾದಶಹನ ಎದುರಿಗೆ ಈ ಬಗ್ಗೆ ಪ್ರಸ್ತಾಪವನ್ನು ಮಾಡಲಿಲ್ಲ.

ಅಲ್ಲಾವುದ್ದೀನನ ಬಗ್ಗೆ ಸಲಹೆ ಸೂಚನೆಗಳು:

ಒಂದು ದಿನ ಜಲಾಲುದ್ದೀನನು ತನ್ನ ಆಪ್ತ ಬೆಂಬಲಿಗರನ್ನು ಮತ್ತು ಹಿತಾಕಾಂಕ್ಷಿಗಳನ್ನು ಕರೆದು ಏಕಾಂತದಲ್ಲಿ ಸಮಾಲೋಚನೆಯನ್ನು ನಡೆಸಿದ, "ಅಲ್ಲಾವುದ್ದೀನನು ದೇವಗಡದಿಂದ ಅಪಾರ ಸಂಪತ್ತು ಮತ್ತು ಯುದ್ಧ ಸಂಪತ್ತನ್ನು ತೆಗೆದುಕೊಂಡು ಬರುತ್ತಿದ್ದಾನೆ. ಈಗ ನಾನು ಯಾವ ರಾಜನೀತಿಯನ್ನು ಅನುಸರಿಸ ಬೇಕು? ಮುಂದೆ ಹೋಗಿ ಅವನ ಸ್ವಾಗತವನ್ನು ಮಾಡಲೇ ಅಥವಾ ನನ್ನ ಸ್ಥಾನದಲ್ಲಿ ನಾನು ಮೌನವಾಗಿದ್ದು ತಣ್ಣನೆಯ ಪ್ರತಿಕ್ರಿಯೆಯನ್ನು ನೀಡಲೇ?" ಅತ್ಯಂತ ಜ್ಞಾನಿಯೂ ಬುದ್ಧಿವಂತನೂ ಆಗಿದ್ದ ಮುಲ್ಕ್ ಹಬೀಬ್ ಅಹಮದನು ಬಾದಶಹನೊಂದಿಗೆ ಹೀಗೆಂದು ನುಡಿದ "ಧನಕನಕ ಮತ್ತು ಸೈನ್ಯದ ಸಂಪತ್ತು ಯಾವಾಗಲೂ ಬಂಡಾಯ ಮತ್ತು ವಿದ್ರೋಹಕ್ಕೆ ಕಾರಣೀಭೂತವಾಗುತ್ತದೆ. ಮುಲ್ಕ್ ಚಜುವಿನ ಮೇಲೆ ಅಕ್ರಮ ಪ್ರಭಾವವನ್ನು ಬೀರಿ ಬಾದಶಹನ ವಿರುದ್ಧ ಬಂಡಾಯವೇಳುವಂತೆ ಯಾರು ಅವನನ್ನು ಪ್ರಚೋದಿಸಿದರೋ ಆ ವ್ಯಕ್ತಿಗಳೇ ಇಂದು ಅಲ್ಲಾವುದ್ದೀನನ ಸುತ್ತಮುತ್ತ ಸೇರಿಕೊಂಡಿದ್ದಾರೆ ಮತ್ತು ಸದರಿ ವ್ಯಕ್ತಿಗಳ ಸಲಹೆ ಸೂಚನೆಗಳ ಮೇರೆಗೆ ಅಲ್ಲಾವುದ್ದೀನನು ರಾಜಾಜ್ಞೆಯನ್ನು ಕಾಯದೆ ದಖ್ಖನ್‌ನ ಯುದ್ಧವನ್ನು ಕೈಗೊಂಡಿದ್ದಾನೆ. ಈ ಬಗ್ಗೆ ಅಲ್ಲಾವುದ್ದೀನನ ಉದ್ದೇಶ ಏನಾಗಿದೆ ಎಂಬುದರ ಬಗ್ಗೆ ಯಾರೂ ಏನನ್ನೂ ಕೂಡ ಹೇಳಲು ಸಾಧ್ಯವಿಲ್ಲ. ನನ್ನ ಅಭಿಪ್ರಾಯದ ಮೇರೆಗೆ ಬಾದಶಹರವರು ಚಂದೇರಿಯವರಿಗೆ ಪ್ರಯಾಣ ಮಾಡಿ ಆತನನ್ನು ಸ್ವಾಗತಿಸುವುದು ಅತ್ಯಂತ ಸೂಕ್ತವಾಗಿದೆ. ಅಲ್ಲಾವುದ್ದೀನನಿಗೆ ಬಾದಶಹನ ಸೈನ್ಯದ ಆಗಮನದ ಸುದ್ದಿ ತಲುಪಿದಲ್ಲಿ, ಅವನು ಅನೇಕ ವಿಷಯಗಳ ಬಗ್ಗೆ ಆಲೋಚನೆ ಮಾಡಿ ಸೂಕ್ತ ನಿಲುವನ್ನು ಹೊಂದ ಬೇಕಾಗುತ್ತದೆ. ತನ್ನ ಸೈನ್ಯವು ದೂರ ದೇಶದ ಯುದ್ಧಗಳನ್ನು ಮುಗಿಸಿ ಸ್ವದೇಶಕ್ಕೆ ಮರಳುತ್ತಿರುವುದು ಮತ್ತು ಇಡೀ ಸೈನ್ಯವು ಧನಕನಕಾದಿಗಳಿಂದ ತುಂಬಿ ಹೋಗಿರುವುದು ಹಾಗೂ ಪ್ರತಿಯೊಬ್ಬ ಸೈನಿಕನು

ಕೂಡ ತನ್ನ ಬಂಧು ಬಾಂಧವರನ್ನು ಕಾಣುವ ತವಕದಲ್ಲಿದ್ದು ಯುದ್ಧದಿಂದ ಸಾಕಷ್ಟು ಬಳಲಿದ್ದಾರೆ. ಹಾಗೂ ಆನೆಗಳು ಮತ್ತು ಇನ್ನಿತರೆ ಯುದ್ಧ ಸಾಮಗ್ರಿಗಳ ದೆಸೆಯಿಂದ ವೇಗವಾಗಿ ಪ್ರಯಾಣ ಮಾಡುವುದು ಮತ್ತು ಉದ್ದೇಶಪೂರ್ವಕವಾಗಿ ಪರ್ವತಶ್ರೇಣಿಯ ಪ್ರದೇಶಗಳಲ್ಲಿ ಕೆಲವು ದಿನಗಳ ಕಾಲ ಮೊಕ್ಕಾಮು ಹೂಡುವುದು ಕೂಡ ಅಸಂಭವವಾಗಿದೆ. ಈ ಎಲ್ಲಾ ಕಾರಣದಿಂದ ಅಲ್ಲಾವುದ್ದೀನನಿಗೆ ಬಾದಶಹರವರ ಸಮ್ಮುಖದಲ್ಲಿ ಹಾಜರಾಗಿ ದೇವಗಡದಿಂದ ತಾನು ತಂದಿರುವ ಸಂಪತ್ತು ಮತ್ತು ಅಷ್ಟೈಶ್ವರ್ಯವನ್ನು ಬಾದಶಹರವರ ಸನ್ನಿಧಿಗೆ ಒಪ್ಪಿಸದೆ ಬೇರೆ ಮಾರ್ಗವಿರುವುದಿಲ್ಲ. ಆಸಂದರ್ಭದಲ್ಲಿ ಬಾದಶಹರವರು ನಗದು ಮತ್ತು ಇತರೆ ಸಂಪತ್ತು ಹಾಗೂ ಆನೆಗಳನ್ನು ಖುದ್ದು ಒಪ್ಪಿಸಿಕೊಳ್ಳಬೇಕು. ಏಕೆಂದರೆ ಈ ವಸ್ತುಗಳು ರಾಜಧನದ ವ್ಯಾಪ್ತಿಯಲ್ಲಿ ಬರುತ್ತವೆ. ಉಳಿದ ಎಲ್ಲಾ ಸಂಪತ್ತು ಮತ್ತು ಸಾಮಗ್ರಿಗಳನ್ನು ಅಲ್ಲಾವುದ್ದೀನನಿಗೆ ಕಾಣಿಕೆಯೆಂದು ಆತನಲ್ಲಿಯೇ ಬಿಡಬೇಕು. ನಂತರ ಬಾದಶಹರವರು ಮುಲ್ಕ್ ಚಜು ಮತ್ತು ಮುಲ್ಕ್ ಫಕ್ರುದ್ದೀನ್ ಕೊತ್ವಾಲನ ಸ್ವೇಚ್ಛಾಚಾರಿ ಮತ್ತು ಸಂಚುಕೋರ ಬೆಂಬಲಿಗರು ಸಯ್ಯದಿ ಮೌಲಾನ ಕೊಲೆಯ ಘಟನೆಯ ನಂತರ ಅಲ್ಲಾವುದ್ದೀನನ ಸುತ್ತಮುತ್ತ ಸೇರಿಕೊಂಡಿದ್ದಾರೆ. ಅವರುಗಳನ್ನು ಅಲ್ಲಾವುದ್ದೀನನಿಂದ ಬೇರ್ಪಡಿಸಿ ದೂರ ದೂರದ ದೇಶಗಳಿಗೆ ಕಳುಹಿಸಿದರೆ ಸೂಕ್ತ ಮತ್ತು ಅಲ್ಲಾವುದ್ದೀನನ ಜಹಗೀರಿನಲ್ಲಿ ಸೂಕ್ತ ಹೆಚ್ಚಳವನ್ನು ಮಾಡಿ ಅವನನ್ನು ನೆಮ್ಮದಿಯಿಂದ ಇರುವಂತೆ ನೋಡಿಕೊಳ್ಳಬೇಕು. ಇದರ ನಂತರ ಬಾದಶಹರವರಿಗೆ ಒಪ್ಪಿಗೆಯಾದಲ್ಲಿ ಅವನನ್ನು ಖಡಾಗೆ ಹೋಗಲು ಅನುಮತಿ ನೀಡಬಹುದು ಇಲ್ಲವಾದಲ್ಲಿ ಇಲ್ಲಿಯೇ ದೆಹಲಿಯಲ್ಲಿ ಉಳಿಸಿಕೊಳ್ಳಬಹುದು. ಇನ್ನೊಂದು ಪ್ರಮುಖ ಅಂಶದ ಕಡೆ ಗಮನ ಹರಿಸಬೇಕಾದ ಅಗತ್ಯವಿದೆ; ಅದೇನೆಂದರೆ ಚಕ್ರವರ್ತಿನಿ ಮಲ್ಲಿಕಾ ಜಹಾನ್ ಮತ್ತು ಅಲ್ಲಾವುದ್ದೀನನ ನಡುವೆ ಮೂಡಿರುವ ವಿರಸವು ಸಾರ್ವಜನಿಕವಾಗಿ ಚರ್ಚೆಗೆ ಬಂದಿಲ್ಲ. ಆದರೆ ರಾಜ ಕುಟುಂಬದ ಈ ಕಲಹವು ಯಾವ ಹಂತಕ್ಕೆ ಬಂದಿದೆ ಎಂದರೆ ಅಲ್ಲಾವುದ್ದೀನನು ಸ್ವತಃ ಈ ಕಲಹದ ದೆಸೆಯಿಂದ ದೆಹಲಿಯಲ್ಲಿ ಉಳಿಯಲು ಇಷ್ಟ ಪಡುತ್ತಿಲ್ಲ. ಮತ್ತು ದೂರದ ದೇಶದಲ್ಲಿ ವಾಸ್ತವ್ಯವನ್ನು ಹೂಡಬೇಕೆಂದು ಆಲೋಚಿಸಿದ್ದಾನೆ. ಇಂತಹ ಪ್ರಬಲ ವ್ಯಕ್ತಿಯನ್ನು ರಾಜ ಕುಟುಂಬದ ಕಲಹದ ದೆಸೆಯಿಂದ ನಿರ್ಲಕ್ಷಿಸುವುದು ಅತ್ಯಂತ ಅಪಾಯಕಾರಿ ವಿಷಯವಾಗಿದೆ. ಬಾದಶಹರವರು ಇದೊಂದು ಕ್ಷುಲ್ಲಕ ವಿಷಯವೆಂದು ಭಾವಿಸಿ ಅಲ್ಲಾವುದ್ದೀನ್‌ನನ್ನು ನಿರ್ಲಕ್ಷಿಸಿ ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳದೆ ದೆಹಲಿಗೆ ಮರಳಿ ಹೋದಲ್ಲಿ ಮತ್ತು ಅಲ್ಲಾವುದ್ದೀನನು ತನ್ನ ಅಪಾರವಾದ ಖಜಾನೆ ಆನೆಗಳು ಮತ್ತು ಇನ್ನಿತರೆ ಸಾಮಗ್ರಿಗಳೊಂದಿಗೆ ಖಡಾವನ್ನು ತಲುಪಿದಲ್ಲಿ ಇದರ ಪರಿಣಾಮ ನೆಟ್ಟಗಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಮೇಲೆ ಹೇಳಿದಂತಹ ನಿಲುವನ್ನು ತಳೆದಲ್ಲಿ ಬಾದಶಹರವರು ಸ್ವತಃ ತಮ್ಮ ಕೈಯಾರೆ ತನ್ನ ಅವನತಿಯನ್ನು ಅಹ್ವಾನಿಸಿದಂತೆ ಮತ್ತು ತಮ್ಮ ಕುಟುಂಬದ ನಾಶವನ್ನು ತಾವೇ ಮಾಡಿದಂತಾಗುತ್ತದೆ." ಮುಲ್ಕ್

ಹಬೀಬ್ ಅಹಮದ್‌ನ ಈ ಸುದೀರ್ಘ ಭಾಷಣವು ಸಮರ್ಪಕವಾಗಿದ್ದು ಸುಸಂಬಂಧವಾಗಿದೆ ಎಂದು ಮುಲ್ಕ್ ಫಕ್ರುದ್ದೀನ್ ಕೋಚಿಗೆ ಒಪ್ಪಿಗೆಯಾಯಿತು. ಆದರೆ ಈ ವಿಷಯದಲ್ಲಿ ಬಾದಶಹನ ಸಹಮತ ಇಲ್ಲ ಎಂಬುದನ್ನು ಅರಿತ ಆತನು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ ಬದಲಿಗೆ ಹೀಗೆಂದು ನುಡಿದ "ಇದುವರೆವಿಗೂ ಅಲ್ಲಾವುದ್ದೀನನು ಇತ್ತ ಬರುತ್ತಿದ್ದಾನೆ ಎಂಬುದರ ಬಗ್ಗೆ ಯಾವುದೇ ನಿಶ್ಚಿತ ಮಾಹಿತಿಯೂ ದೊರಕಿಲ್ಲ ಮತ್ತು ಅವನು ಅಪಾರ ಧನಕನಕ ಮತ್ತು ಸಾಮಗ್ರಿಗಳನ್ನು ಹೊಂದಿದ್ದಾನೆ ಎಂಬುದರ ಬಗ್ಗೆಯೂ ಯಾವುದೇ ಸುದ್ದಿ ಇಲ್ಲ. ಹೀಗಾಗಿ ಈ ವಿಷಯಗಳ ಬಗ್ಗೆ ಸ್ಪಷ್ಟ ಚಿತ್ರಣವು ದೊರಕುವವರೆಗೂ ಈ ವಿಷಯದ ಬಗ್ಗೆ ಆಲೋಚನೆ ಮಾಡುವುದು ಮತ್ತು ತೀರ್ಮಾನ ಕೈಗೊಳ್ಳುವುದು ವ್ಯರ್ಥವಾಗಿದೆ .ಮತ್ತು ಈ ಸುದ್ದಿಯ ಸತ್ಯಾಸತ್ಯತೆಯು ತಿಳಿದು ಬಂದಲ್ಲಿ ನಾವು ತಮ್ಮ ಸೈನ್ಯದ ನೆರವಿನಿಂದ ಅವನನ್ನು ಮಾರ್ಗ ಮಧ್ಯದಲ್ಲಿಯೇ ತಡೆಯಬಹುದು. ಏಕೆಂದರೆ ಅಲ್ಲಾವುದ್ದೀನನು ರಾಜಾಜ್ಞೆಯನ್ನು ಪಡೆಯದೇ ಪ್ರಯಾಣ ಮಾಡಿದ್ದಾನೆ ಹೀಗಾಗಿ ಅವನು ನಮ್ಮ ಸೈನ್ಯವನ್ನು ಕಂಡ ಕೂಡಲೇ ಅಲ್ಲಿಂದಲೇ ಮರಳುತ್ತಾನೆ ಮತ್ತು ಯಾವ ದಿಕ್ಕಿನತ್ತ ಅವನು ಹೊರಳುತ್ತಾನೋ ಅದೇ ದಿಕ್ಕಿನಲ್ಲಿ ಹೋಗಿ ನೆಲೆಸುತ್ತಾನೆ .ಈ ಮಳೆಗಾಲದಲ್ಲಿ ನಾವು ಅವನನ್ನು ಹಿಂಬಾಲಿಸುವುದು ಸೂಕ್ತವಲ್ಲ ಅವನು ಎತ್ತ ಹೋಗುತ್ತಾನೋ ಅತ್ತ ಕಡೆ ಹೋಗಲು ಅವನಿಗೆ ಅವಕಾಶ ಕೊಡಬೇಕು; ನೀರಿನ ತನಕ ತಲುಪುವ ಮೊದಲು ಚಪ್ಪಲಿಯನ್ನು ಬಿಡಬಾರದು ಎಂಬ ಉದಾಹರಣೆಯ ಮೇರೆಗೆ ನಾವು ನಡೆದುಕೊಳ್ಳಬೇಕು. ಒಂದು ವೇಳೆ ಅಲ್ಲಾವುದ್ದೀನನು ಎಲ್ಲಾ ವಸ್ತು ಸಾಮಗ್ರಿಗಳೊಡನೆ ಖಡಾವನ್ನು ತಲುಪಿದ್ದು ಅವನು ನಮಗೆ ವಂಚನೆ ಮಾಡಿರುವನೆಂಬ ಅಂಶವು ವ್ಯಕ್ತವಾದಲ್ಲಿ ನಾವು ಒಂದೇ ಆಕ್ರಮಣದಲ್ಲಿ ಅವನನ್ನು ಅಂತ್ಯಗೊಳಿಸಬಹುದು.

ಮುಲ್ಕ್ ಫಕ್ರುದ್ದೀನ್ ಕೋಚಿಯಂತಹ ಅನುಭವಿ ಮತ್ತು ವಿವೇಕಿ ವ್ಯಕ್ತಿಯಿಂದ ಈ ಮಾತನ್ನು ಕೇಳಿ ಮುಲ್ಕ್ ಹಬೀಬ್ ಅಹಮದ್‌ಗೆ ತುಂಬಾ ಕೋಪ ಬಂದಿತು ಮತ್ತು ಅವನು ಮುಲ್ಕ್ ಕೋಚಿಗೆ ನುಡಿದ "ಅಲ್ಲಾಹನಾಣೆ ನೀನು ವಿವೇಚನೆಯನ್ನು ತೊರೆದು ಆಲಸ್ಯ ಪೂರಿತನಾಗಿ ವ್ಯವಹರಿಸ ಬೇಡ. ಇಲ್ಲವಾದಲ್ಲಿ ಕಾಲವೇ ನಮಗೆ ಮೋಸ ಮಾಡುತ್ತದೆ. ಎಲ್ಲಕ್ಕಿಂತ ಮುಂಚಿತವಾಗಿ ನೀನು ನನಗೆ ಒಂದು ಮಾತಿಗೆ ಜವಾಬು ಕೊಡು. ಅಲ್ಲಾವುದ್ದೀನನು ಬಾದಶಹನಂತಹ ದರ್ಪ ಮತ್ತು ವೈಭವದಿಂದ ಖಡಾವನ್ನು ತಲುಪಿ ಲಖ್ನೋತಿಯ ಮೇಲೆ ಆಕ್ರಮಣವನ್ನು ಮಾಡಿದಾಗ ನೀನು ಅವನ ವಿರುದ್ಧ ವಿಜಯಿಯಾಗುತ್ತೀಯೋ ಅಥವಾ ವಿಫಲನಾಗುತ್ತೀಯೋ"? ಬಾದಶಹನು ಹಬೀಬ್‌ನ ಎಲ್ಲಾ ಮಾತನ್ನು ಗಮನವಿಟ್ಟು ಕೇಳುತ್ತಿದ್ದ ಮತ್ತು ಅವನಿಂದ ದುಃಖಿತನಾಗುತ್ತಿದ್ದ ಮತ್ತು ಅವನನ್ನು ಸ್ವಾರ್ಥಿ ಎಂದು ಸಂಬೋಧಿಸುತ್ತಾ ಹೀಗೆಂದು ನುಡಿದ "ನೀನು ಸದಾ ಕಾಲ ಅಲ್ಲಾವುದ್ದೀನ್‌ನನ್ನು ಸಂದೇಹದಿಂದಲೇ ಕಾಣುತ್ತಾ ಬಂದಿದ್ದೀಯ. ನಾನು ಅವನನ್ನು ನನ್ನ ತೋಳು ತೆಕ್ಕೆಯಲ್ಲಿ ಆಡಿಸಿದ್ದೇನೆ ಮತ್ತು

ಅವನನ್ನು ನನ್ನ ಮಗನೆಂದು ಆದರಿಸಿದ್ದೇನೆ. ನನ್ನ ಸ್ವಂತ ಪುತ್ರರು ಒಂದು ವೇಳೆ ನನ್ನ ವಿರುದ್ಧ ನಿಲ್ಲಬಹುದು, ಆದರೆ ಅಲ್ಲಾವುದ್ದೀನನು ನನಗೆ ವಿದ್ರೋಹವನ್ನು ಎಸಗುವುದು ಅಸಂಭವ" ಬಾದಶಹನ ಮೇಲ್ಕಂಡ ಮಾತುಗಳನ್ನು ಕೇಳಿ ಮುಲ್ಕ್ ಹಬೀಬ್‌ಗೆ ಅಪಾರ ನೋವುಂಟಾಯಿತು ಮತ್ತು ಮತ್ತೆ ಅವನು ಏನನ್ನೂ ನುಡಿಯದೆ ಮೌನವಾಗಿ ರಾಜಸಭೆಯಿಂದ ಎದ್ದು ಹೊರ ನಡೆದ. ಹೊರ ಬಂದ ಮುಲ್ಕ್ ಹಬೀಬ್ ಬಾದಶಹನ ಅವಸ್ಥೆಯ ಬಗ್ಗೆ ಬೇಸರ ಪಟ್ಟುಕೊಂಡ ಹಾಗೂ ಮನದಲ್ಲಿಯೇ ಅಂದುಕೊಂಡ "ಈ ಮೂರ್ಖ ಬಾದಶಹನು ತನ್ನ ಕೈಯಾರೆ ತನ್ನ ಗೋರಿಯನ್ನು ತೋಡುತ್ತಿದ್ದಾನೆ ಅವನ ಗತಿ ಏನಾಗುತ್ತದೆಯೋ ದೇವರಿಗೆ ಗೊತ್ತು" ಜಲಾಲುದ್ದೀನ್ ಖಿಲ್ಜಿಯು ಮುಲ್ಕ್ ಫಕ್ರುದ್ದೀನ್ ಕೋಚಿಯನ್ನು ತುಂಬಾ ಹೊಗಳಿದ ಮತ್ತು ದೆಹಲಿಗೆ ಮರಳಿದ.

ಅಲ್ಲಾವುದ್ದೀನನ ಪತ್ರ:

ಜಲಾಲುದ್ದೀನನು ದೆಹಲಿ ತಲುಪುವಷ್ಟರಲ್ಲಿಯೇ ಅಲ್ಲಾವುದ್ದೀನನಿಂದ ಕಳಿಸಲಾದ ಒಂದು ಪತ್ರವು ಅವನಿಗೆ ತಲುಪಿತು. ಅದರ ಸಾರಾಂಶ ಹೀಗಿತ್ತು "ಯುದ್ಧದ ಸಂದರ್ಭದಲ್ಲಿ ನನ್ನ ಕೈ ವಶವಾಗಿರುವಂತಹ ಮೂವತ್ತೊಂದು ಆನೆಗಳು ಮತ್ತು ಉತ್ತಮ ತಳಿಯ ಅಮೂಲ್ಯ ಕುದುರೆಗಳು, ಅಸಂಖ್ಯ ವಸ್ತು ಸಾಮಗ್ರಿಗಳು, ಮುತ್ತು ರತ್ನಗಳು ಹಾಗೂ ರೇಷ್ಮೆ ಬಟ್ಟೆ ಮೊದಲಾದವುಗಳನ್ನು ನಾನು ಬಾದಶಹರವರ ಸೇವೆಯಲ್ಲಿ ಅರ್ಪಿಸ ಬೇಕೆಂದಿದ್ದೇನೆ. ನಾನು ಬಹಳ ದೀರ್ಘಾವಧಿಯಿಂದ ಹುಜೂರ್‌ರವರಿಂದ ಬೇರ್ಪಟ್ಟು ದೂರವಿದ್ದೇನೆ. ಹಾಗೂ ಪ್ರಯಾಣದ ಸುದೀರ್ಘ ಅಂತರ ಮತ್ತು ರಸ್ತೆಗಳು ಬಂದ್ ಆಗಿದ್ದರಿಂದ ಸಂಪರ್ಕ ಸಾಧನಗಳು ಕೂಡ ತಪ್ಪಿವೆ. ಆದ್ದರಿಂದ ನಾನು ಮತ್ತು ನನ್ನ ಸಹಚರರು ರಾಜಕ್ರೋಧದ ಭಯದಲ್ಲಿ ತುಂಬಾ ಚಿಂತಾಕ್ರಾಂತರಾಗಿದ್ದೇವೆ. ಈ ಪರಿಸ್ಥಿತಿಯಲ್ಲಿ ಬಾದಶಹರವರು ತಮ್ಮ ಖಾಸಗಿ ಲೇಖನಿಯಿಂದ ಒಂದು ಆಜ್ಞೆಯನ್ನು ಹೊರಡಿಸಿ ನನಗೆ ಮತ್ತು ನನ್ನ ಸಹಚರರ ಹೆಸರಿಗೆ ಕಳುಹಿಸಿಕೊಟ್ಟಲ್ಲಿ ಅಪಾರ ಕೃಪೆ ಮಾಡಿದಂತಾಗುತ್ತದೆ. ತದ ನಂತರ ನಾನು ಅಪಾರ ವಿನಯ ಮತ್ತು ಪ್ರೀತಿಯಿಂದ ಬಾದಶಹರವರ ಸನ್ನಿಧಿಗೆ ಹಾಜರಾಗಿ ಎಲ್ಲಾ ವಸ್ತು ಸಾಮಗ್ರಿಗಳನ್ನು ಮತ್ತು ಐಶ್ವರ್ಯವನ್ನು ಹುಜೂರ್‌ರವರ ಸನ್ನಿಧಿಯಲ್ಲಿ ಅರ್ಪಿಸುವೆನು". ಅಲ್ಲಾವುದ್ದೀನನ ಮೇಲ್ಕಂಡ ಪತ್ರವನ್ನು ಓದಿದ ಜಲಾಲುದ್ದೀನನು ಖಿಲ್ಜಿಯ ಕುತಂತ್ರವನ್ನು ಅರಿಯದೆ ಆತನ ವಂಚನೆಯ ಜಾಲದಲ್ಲಿ ಬಂದಿಯಾದ ಮತ್ತು ಆತನ ಪ್ರೀತಿ ವಾತ್ಸಲ್ಯದಲ್ಲಿ ಹಿಂದಿಗಿಂತಲೂ ಹೆಚ್ಚಾಗಿ ಆವೃತನಾದ. ಆ ಕಾಲಾವಧಿಯಲ್ಲಿ ಅಲ್ಲಾವುದ್ದೀನನು ಲಖ್ನೋತಿಗೆ ಹೊರಡುವ ಸಿದ್ಧತೆಯಲ್ಲಿ ತೊಡಗಿದ ಮತ್ತು ಅವನು ಜಫರ್‌ಖಾನ್‌ನನ್ನು ಅವಧ್‌ಗೆ ಕಳಿಸಿ ಸರಯೂ ನದಿಯ ತೀರದಲ್ಲಿ ನಾವೆಗಳನ್ನು ನಿರ್ಮಾಣ ಮಾಡುವ ಕೆಲಸವನ್ನು ಆರಂಭಿಸಿದ. ಬಾದಶಹನು

ಖಡಾಗೆ ಎಂದು ಹೊರಟಾಗ ತಾನು ಲಖ್ನೋತಿಯನ್ನು ತಲುಪಿ ಜಲಾಲುದ್ದೀನ್ ಖಿಲ್ಜಿಯ ವಿರುದ್ಧ ಬಂಡಾಯವೆದ್ದು ಅದನ್ನು ಸಿಂಹಾಸನವನ್ನು ವಶ ಪಡಿಸಿಕೊಂಡು ನಂತರ ಜನತೆಯ ನಡುವೆ ಪ್ರಚಾರಪಡಿಸಬೇಕೆಂಬುದು ಅಲ್ಲಾವುದ್ದೀನನ ಇರಾದೆಯಾಗಿತ್ತು.

ಅಲ್ಲಾವುದ್ದೀನನ ಅಪೇಕ್ಷೆಯ ಮೇರೆಗೆ ಜಲಾಲುದ್ದೀನನು ಪ್ರೀತಿ ಮತ್ತು ವಾತ್ಸಲ್ಯದಿಂದ ಕೂಡಿದ ಒಂದು ಪತ್ರವನ್ನು ಬರೆದು ತನ್ನ ಇಬ್ಬರು ಖಾಸಾ ಸೇವಕರ ಹಸ್ತ ಅಲ್ಲಾವುದ್ದೀನನಿಗೆ ತಲುಪಿಸಲೆಂದು ಖಡಾಗೆ ಅವರನ್ನು ಕಳಿಸಿಕೊಟ್ಟ. ಆ ಇಬ್ಬರು ಸಂದೇಶವಾಹಕರು ಖಡಾವನ್ನು ತಲುಪಿದಾಗ ಅಲ್ಲಾವುದ್ದೀನನು ಮತ್ತು ಅವನ ಎಲ್ಲಾ ಸಹಚರರು ಕೂಡ ಸಂಪೂರ್ಣವಾಗಿ ವಿದ್ರೋಹದ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾರೆ ಎಂಬ ವಿಷಯವು ಅವರಿಗೆ ತಿಳಿದು ಬಂದಿತು ಹಾಗೂ ಅವರೆಲ್ಲರೂ ಜಲಾಲುದ್ದೀನ್ ಖಿಲ್ಜಿಗೆ ವಿರೋಧವಾಗಿದ್ದರು. ಅಲ್ಲಾವುದ್ದೀನನು ಆ ಇಬ್ಬರು ಸಂದೇಶವಾಹಕರನ್ನು ತೀವ್ರವಾದ ಪಹರೆಯಲ್ಲಿ ಇಟ್ಟ ಹಾಗೂ ಇಲ್ಲಿನ ಯಾವ ಬೆಳವಣಿಗೆಯೂ ಕೂಡ ಜಲಾಲುದ್ದೀನ್ ಖಿಲ್ಜಿಯವರೆಗೆ ತಲುಪದಂತೆ ವ್ಯವಸ್ಥೆಯನ್ನು ಮಾಡಿದ. ಹೀಗಾಗಿ ಬಾದಶಹನಿಗೆ ವಾಸ್ತವ ಸಂಗತಿಗಳೊಂದು ಕೂಡ ತಿಳಿಯಲಿಲ್ಲ. ಆ ಸಂದರ್ಭದಲ್ಲಿ ಅಲ್ಲಾವುದ್ದೀನನ ಸಹೋದರನು ಮತ್ತು ಬಾದಶಹನ ಅಳಿಯನೂ ಆಗಿದ್ದ ಅಲ್ಮಾಸನು ಅತ್ಯಂತ ಕುಟಿಲತೆಯಿಂದ ಬಾದಶಹನ ಮನಸ್ಸಿನಲ್ಲಿ ಅಲ್ಲಾವುದ್ದೀನನ ಪ್ರೀತಿಯ ಪ್ರಭಾವವು ಅಳಿಯದೆ ಪುಟಿದೇಳುವಂತೆ ನೋಡಿಕೊಂಡ. ಅವನು ಬಾದಶಹನೊಂದಿಗೆ ಮತ್ತೆ ಮತ್ತೆ ನುಡಿಯುತ್ತಿದ್ದ "ಬಾದಶಹನ ಮತ್ತು ಅಲ್ಲಾವುದ್ದೀನನ ನಡುವೆ ವಿರಸ ಮೂಡಿದೆ ಎಂಬ ಅಂಶವು ಜನಜನಿತವಾಗಿದೆ. ಆದ್ದರಿಂದ ಈ ರೀತಿಯ ಕುಪ್ರಚಾರದ ದೆಸೆಯಿಂದ ವಿಚಲಿತನಾಗಿ ನನ್ನ ಸಹೋದರನಾದ ಅಲ್ಲಾವುದ್ದೀನನು ಎಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೋ ಎಂಬ ಭಯವು ನನ್ನನ್ನು ಕಾಡಿಸುತ್ತಿದೆ. ಬಾದಶಹರವರ ಅಪ್ಪಣೆ ಪಡೆಯದೆ ತಾನು ದೇವಗಡಕ್ಕೆ ಹೋದದ್ದು ಮತ್ತು ಅಲ್ಲಿಂದ ಅಪಾರ ಧನಕನಕವನ್ನು ವಶಪಡಿಸಿಕೊಂಡಿದ್ದು ದೊಡ್ಡ ಅಪರಾಧವೆಂದು ಅವನು ಸ್ವತಃ ಭಾವಿಸಿದ್ದಾನೆ." ಅಲ್ಮಾಸ್‌ಬೇಗ್‌ನ ಇಂತಹ ಭಾವುಕ ಮಾತುಗಳ ಪರಿಣಾಮ ಬಾದಶಹನ ಮೇಲೆ ತೀವ್ರವಾಗಿ ಉಂಟಾಯಿತು ಅದೇ ಸಂದರ್ಭದಲ್ಲಿ ಅಲ್ಲಾವುದ್ದೀನನು ಅಲ್ಮಾಸ್‌ಬೇಗ್‌ಗೆ ಒಂದು ಪತ್ರವನ್ನು ಕಳುಹಿಸಿದ ಆ ಪತ್ರದಲ್ಲಿ ಮೇಲೆ ಹೇಳಿದ ರೀತ್ಯಾ ವಿಚಾರಗಳ ಪ್ರಸ್ತಾಪವಾಗಿತ್ತು "ನನ್ನ ಮೇಲೆ ಬಾದಶಹನ ಎಷ್ಟೊಂದು ಉಪಕಾರಗಳಿವೆ ಎಂದರೆ ನಾನು ಅದನ್ನು ಲೇಖನಿಯ ಮೂಲಕ ದಾಖಲಿಸಲು ಅಸಾಧ್ಯವಾಗಿದೆ. ಬಾದಶಹರವರು ಬರೀ ನನ್ನ ಚಿಕ್ಕಪ್ಪ ಮಾತ್ರ ಆಗಿಲ್ಲ ಬದಲಿಗೆ ನನ್ನ ತಂದೆಯಾಗಿದ್ದಾರೆ ಹಾಗೂ ನನ್ನ ಪ್ರಾಣದ ಒಡೆಯನಾಗಿದ್ದಾರೆ. ಬಾದಶಹರವರ ಕೋಪದಿಂದ ನನ್ನ ಬದುಕು ನನ್ನ ಮೇಲೆ ಹೊರೆಯಾಗಿ ಬಿಟ್ಟಿದೆ. ಒಂದು ವೇಳೆ ನಿನಗೆ ಈ ವಿಷಯದ ಬಗ್ಗೆ ಸ್ಪಷ್ಟ ಮಾಹಿತಿ

ಇದ್ದು ಬಾದಶಹನು ನನ್ನ ಜೀವವನ್ನು ಅಪಹರಿಸುವ ಶತ್ರುವಾಗಿದ್ದಾನೆಂದು ಮನದಟ್ಟಾಗಿದ್ದರೆ, ಈ ಕೂಡಲೇ ನನಗೆ ಈ ಬಗ್ಗೆ ತಿಳಿಸು ಮತ್ತು ನನ್ನ ಬಳಿ ಸದಾಕಾಲ ಇಟ್ಟುಕೊಂಡಿರುವ ವಿಷಸೇವನೆಯನ್ನು ಮಾಡುತ್ತೇನೆ ಅಥವಾ ನಾನು ಯಾವುದಾದರೂ ದೂರದೇಶಕ್ಕೆ ಹೋಗಿ ನನ್ನ ತಲೆ ಮರೆಸಿಕೊಳ್ಳುತ್ತೇನೆ".

ಅಲ್ಮಾಸ್‌ಬೇಗನು ಸಮಯ ಸಂದರ್ಭವನ್ನು ನೋಡಿ ಆ ಪತ್ರವನ್ನು ಜಲಾಲುದ್ದೀನನಿಗೆ ತೋರಿಸಿದ ಮತ್ತು ಬಾದಶಹನನ್ನು ಸಂತುಷ್ಟಗೊಳಿಸುವ ಸಂಭಾಷಣೆಯಲ್ಲಿ ತೊಡಗಿದ. ಆ ಮೂಲಕ ಬಾದಶಹನಿಗೆ ಅಲ್ಲಾವುದ್ದೀನನ ಪತ್ರದ ಬಗ್ಗೆ ಮತ್ತು ಅವನ ಬಗ್ಗೆ ಸಂಪೂರ್ಣ ನಂಬಿಕೆ ಉಂಟಾಯಿತು. ಅಲ್ಲಾವುದ್ದೀನನು ಇನ್ನೊಂದು ರಹಸ್ಯಪತ್ರವನ್ನು ಕೂಡ ಅಲ್ಮಾಸ್‌ಬೇಗ್‌ನ ಹೆಸರಿಗೆ ಬರೆಸಿದ್ದನು ಮತ್ತು ಅದರಲ್ಲಿ ಹೀಗೆಂದು ತಿಳಿಸಿದ್ದನು "ಒಂದು ವೇಳೆ ಬಾದಶಹನು ಸಂಪತ್ತನ್ನು ಪಡೆದುಕೊಳ್ಳುವ ದುರಾಶೆಯಿಂದ ಒಬ್ಬನೇ ಏಕಾಂಗಿಯಾಗಿ ಇಲ್ಲಿಗೆ ಬಂದಲ್ಲಿ ನಮ್ಮ ಕೆಲಸವು ಕೈಗೂಡುತ್ತದೆ" ಆ ಪತ್ರದಲ್ಲಿ ಅಲ್ಲಾವುದ್ದೀನನು ನೀಡಿದ್ದ ಸಲಹೆಯ ಮೇಲೆ ಅಲ್ಮಾಸ್‌ಬೇಗನು ಅಶ್ರುಪೂರಿತನಾಗಿ ಬಾದಶಹನೊಂದಿಗೆ ನುಡಿದ "ಹುಜೂರ್‌ರವರು ಏಕಾಂಗಿಯಾಗಿ ಖಡಾದ ಪ್ರಯಾಣವನ್ನು ಕೈಕೊಂಡಲ್ಲಿ ತುಂಬಾ ಒಳ್ಳೆಯದಾಗುತ್ತದೆ. ಏಕೆಂದರೆ ನನ್ನ ಸಹೋದರನು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಉದ್ದೇಶದಲ್ಲಿದ್ದಾನೆ ಇಲ್ಲವೇ ಯಾವುದಾದರೂ ದೂರ ದೇಶದಲ್ಲಿ ತಲೆಮರೆಸಿಕೊಳ್ಳುವವನಿದ್ದಾನೆ. ತಾವು ಅಲ್ಲಿಗೆ ತಲುಪಿ ಅವನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ ತಾವು ಹೀಗೆ ಮಾಡಿದಲ್ಲಿ ತಮಗಾಗಿ ಪ್ರಾಣವನ್ನು ಅರ್ಪಿಸಲು ಸಿದ್ಧವಾಗಿರುವ ನಾವು ನಮ್ಮ ಬದುಕಿನ ಇನ್ನುಳಿದ ಕಾಲವನ್ನು ಕೂಡ ತಮ್ಮ ಸೇವೆಗೆ ಸಮರ್ಪಿಸುತ್ತೇವೆ". ಅಲ್ಮಾಸ್‌ಬೇಗನ ಈ ನಾಟಕೀಯ ಮಾತುಗಳಿಗೆ ಜಲಾಲುದ್ದೀನನು ಮನಸೋತ ಮತ್ತು ಈ ಬಗ್ಗೆ ಯಾವುದೇ ಮರು ಆಲೋಚನೆಯನ್ನು ಮಾಡದೆ ಯಾರಿಂದಲೂ ಕೂಡ ಯಾವುದೇ ಸಲಹೆ ಸೂಚನೆಯನ್ನು ಪಡೆಯದೆ ಅಲ್ಮಾಸ್‌ಬೇಗ್‌ನೊಂದಿಗೆ ನುಡಿದ "ನೀನು ಶೀಘ್ರವೇ ಖಡಾಗೆ ಹೊರಡು ಮತ್ತು ಅಲ್ಲಿ ತಲುಪಿದ ನಂತರ ಅಲ್ಲಾವುದ್ದೀನನಿಗೆ ನನ್ನ ಕಡೆಯಿಂದ ರಕ್ಷಣೆಯ ಭರವಸೆಯನ್ನು ಕೊಡು ಮತ್ತು ಅವನನ್ನು ನೆಮ್ಮದಿಯಾಗಿ ಇರುವಂತೆ ತಿಳಿಸು. ಯಾವುದೇ ಕಾರಣಕ್ಕೂ ಅವನು ಅತ್ಮಹತ್ಯೆ ಮಾಡಿಕೊಳ್ಳದಂತೆ ನೀನು ತಡೆಯಬೇಕು ಮತ್ತು ಯಾವುದೇ ದೇಶಕ್ಕೂ ಅವನು ದೇಶಾಂತರ ಹೋಗದಂತೆ ನೋಡಿಕೊಳ್ಳುವ ಕರ್ತವ್ಯ ಕೂಡ ನಿನ್ನದಾಗಿದೆ! ನೀನು ಕೂಡಲೇ ಖಡಾದತ್ತ ಪ್ರಯಾಣವನ್ನು ಹೊರಡು ಮತ್ತು ನಾನು ಕೂಡ ಅತಿ ಶೀಘ್ರದಲ್ಲಿಯೇ ಅಲ್ಲಿಗೆ ಬಂದು ಸೇರುತ್ತೇನೆ."

ಬಾದಶಹನ ಆಜ್ಞೆಯ ಮೇರೆಗೆ ಅಲ್ಮಾಸ್‌ಬೇಗನು ತತ್‌ಕ್ಷಣವೇ ನಾವೆಯಲ್ಲಿ ಪ್ರಯಾಣ ಬೆಳೆಸಿ ಖಡಾದತ್ತ ಹೊರಟ .ಏಳು ದಿನಗಳ ನಿರಂತರ ಪ್ರಯಾಣದ

ನಂತರ ಅವನು ತನ್ನ ಗಮ್ಯಸ್ಥಾನವನ್ನು ತಲುಪಿದ. ಅಲ್ಲಿ ಉಭಯ ಸಹೋದರರು ಕೂಡ ಪರಸ್ಪರ ಭೇಟಿಯಾದರು ಅಲ್ಲಿ ಅಲ್ಮಾಸ್‌ಬೇಗನು ಅಲ್ಲಾವುದ್ದೀನನಿಗೆ ಶುಭಾಶಯಗಳನ್ನು ಕೋರುತ್ತ ನುಡಿದ "ದೇವರ ದಯೆ ನಮ್ಮ ಮೇಲೆ ಇದೆ. ಬಾಣವು ತನ್ನ ಗುರಿಯನ್ನು ಮುಟ್ಟಿದೆ." ಅಲ್ಲಾವುದ್ದೀನನ ಸಂತೋಷಕ್ಕೆ ಪಾರವೇ ಇರಲಿಲ್ಲ ಮುಂದೆ ಲಖ್ನೋತಿಯ ಪ್ರಯಾಣವನ್ನು ಕೈಗೊಳ್ಳಬೇಕೆ ಬೇಡವೇ ತಾನು ಖಡಾದಲ್ಲಿ ಉಳಿದರೆ ಕ್ಷೇಮವೇ ಮುಂತಾಗಿ ಅವನು ಅಲ್ಮಾಸ್‌ಬೇಗ್‌ನೊಂದಿಗೆ ಸಮಾಲೋಚನೆಯನ್ನು ಮಾಡಿದ. ಆ ಸಂದರ್ಭದಲ್ಲಿ ಅಲ್ಲಾವುದ್ದೀನನ ಅನೇಕ ಹಿತಚಿಂತಕರು ಕೂಡ ಅಲ್ಲಿ ಉಪಸ್ಥಿತರಿದ್ದರು. ಅವರೆಲ್ಲರೂ ಅಲ್ಲಾವುದ್ದೀನನು ಸದ್ಯದ ಪರಿಸ್ಥಿತಿಯಲ್ಲಿ ಲಖ್ನೋತಿಗೆ ಹೋಗ ಕೂಡದೆಂಬ ತಮ್ಮ ಅಭಿಪ್ರಾಯವನ್ನು ಪುನರುಚ್ಚರಿಸಿದರು. ಸಂಪತ್ತಿನ ದುರಾಶೆಯಲ್ಲಿ ಬಾದಶಹನು ಏಕಾಂಗಿಯಾಗಿ ಅಲ್ಲಿಗೆ ಬರುವುದರಿಂದ ಮೊಟ್ಟ ಮೊದಲಿಗೆ ಬಾದಶಹನನ್ನು ಯಮಪುರಿಗೆ ಅಟ್ಟುವುದು ಸೂಕ್ತ ಎಂದು ಅವರುಗಳು ನಿರ್ಧರಿಸಿದರು. ತದನಂತರ ಅರ್ಕಲಿಖಾನನು ಸಿಂಹಾಸನವನ್ನೇರಿ ರಾಜ್ಯದ ಆಡಳಿತ ವ್ಯವಸ್ಥೆಯ ಕಡೆಗೆ ಗಮನವನ್ನು ಕೊಡುತ್ತಾನೆ ಆಗ ನಾವು ಲಖ್ನೋತಿಯ ಮೇಲೆ ಸೈನ್ಯವನ್ನು ನುಗ್ಗಿಸಿ ಬಂಗಾಳವನ್ನು ನಮ್ಮ ವಶಕ್ಕೆ ಪಡೆದುಕೊಳ್ಳೋಣ ನಂತರ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸದೃಢತೆಯಿಂದ ಕೂಡಿ ಸಾಮ್ರಾಟನ ಬಾವುಟವನ್ನು ಹಾರಿಸೋಣ ಎಂಬ ಷಡ್ಯಂತ್ರವನ್ನು ಅವರು ರೂಪಿಸಿದರು. ಅಲ್ಲಾವುದ್ದೀನನಿಗೆ ಮೇಲ್ಕಂಡ ಅಭಿಪ್ರಾಯವು ಪ್ರಿಯವಾಯಿತು ಮತ್ತು ಅವನು ಖಡಾದಲ್ಲಿಯೇ ಉಳಿದ.

ಜಲಾಲುದ್ದೀನನ ಖಡಾದತ್ತ ಪ್ರಯಾಣ:

ಜಲಾಲುದ್ದೀನನ ಬದುಕಿನ ಮೇಲೆ ಸಾವಿನ ಕರಿನೆರಳು ಚಾಚಿತ್ತು ಧನಕನಕದ ದುರಾಶೆಯಲ್ಲಿ ಅವನು ತನ್ನ ವಿವೇಚನೆಯನ್ನು ಕಳೆದುಕೊಂಡಿದ್ದ. ಅವನು ತನ್ನ ಯಾವುದೇ ಸಹಚರರ ಮತ್ತು ಬೆಂಬಲಿಗರ ಅಭಿಪ್ರಾಯವನನು ಗಣನೆಗೆ ತೆಗೆದುಕೊಳ್ಳದೆ ಖಡಾದ ಪ್ರಯಾಣವನ್ನು ಮಾಡುವ ಇರಾದೆಯನ್ನು ಕೈಗೊಂಡ. ಅಲ್ಲಾವುದ್ದೀನನು ಒಂದು ವೇಳೆ ಲಖ್ನೋತಿಗೆ ಹೊರಟು ಹೋದಲ್ಲಿ ಅವನ ಬಳಿ ಇರುವ ಧನಕನಕ ಮುತ್ತು ರತ್ನಗಳು ಯಾವ ಕಾರಣಕ್ಕೂ ತನಗೆ ದೊರಕುವುದಿಲ್ಲವೆಂದು ಬಾದಶಹನಿಗೆ ಅಪನಂಬಿಕೆ ಇತ್ತು. ಹೀಗಾಗಿ ಜಲಾಲುದ್ದೀನನು ಕೇವಲ ೫೦೦ ಮಂದಿ ಸವಾರರೊಡನೆ ಕೂಡಿ ನಾವೆಯ ಮೂಲಕ ಪ್ರಯಾಣ ಹೊರಟ ಹಾಗೂ ಸೈನ್ಯವನ್ನು ತನ್ನ ನಾಯಕತ್ವದಲ್ಲಿ ಹೊರಡಿಸಿಕೊಂಡು ನೆಲಮಾರ್ಗದಿಂದ ಖಡಾವನ್ನು ತಲುಪಬೇಕೆಂದು ಅವನು ಮುಲ್ಕ್ ಹಬೀಬ್ ಅಹಮದ್‌ಗೆ ಆಜ್ಞೆಯನ್ನು ಮಾಡಿದ. ಬಾದಶಹನ ಆಗಮನ ಸುದ್ದಿಯು ತಲುಪಿದೊಡನೆಯೇ ಅಲ್ಲಾವುದ್ದೀನನು ಗಂಗಾ ನದಿಯ ತೀರದಲ್ಲಿ ಇಳಿದು ಮಾಣಿಕ್ಯಪುರದ ಸ್ಥಳದಲ್ಲಿ ತನ್ನ ಸೈನ್ಯದೊಂದಿಗೆ ಬಿಡಾರವನ್ನು ಹೂಡಿದ.

ರಂಜಾನ್ ತಿಂಗಳಿನ ೧೭ನೆಯ ತಾರೀಕಿನಂದು ಬಾದಶಹನ ಛತ್ರಿ ಚಾಮರಗಳು ಜಲಮಾರ್ಗದಲ್ಲಿ ಕಂಡು ಬಂದವು. ಅದನ್ನು ಕಂಡಕೂಡಲೇ ಬಾದಶಹನಿಗೆ ಗೌರವ ಸೂಚಿಸಲು ಎಂಬಂತೆ ಅಲ್ಲಾವುದ್ದೀನನ ಸೈನ್ಯವು ಬಹಿರಂಗವಾಗಿ ಶಸ್ತ್ರಸಜ್ಜಿತವಾಗಿ ಶಿಸ್ತಿನಿಂದ ನಿಂತು ಸನ್ನದ್ಧವಾಯಿತು. ಆದರೆ ಅಂತರಂಗದಲ್ಲಿ ಆ ಸೈನ್ಯಕ್ಕೆ ಬೇರೆಯದೇ ಉದ್ದೇಶವಿತ್ತು. ಅಲ್ಲಾವುದ್ದೀನನು ಬಾದಶಹನನ್ನು ಸ್ವಾಗತಿಸುವ ಸಲುವಾಗಿ ತನ್ನ ಸಹೋದರನಾದ ಅಲ್ಮಾಸ್‌ಬೇಗ್‌ನನ್ನು ಕಳುಹಿಸಿಕೊಟ್ಟ ಮತ್ತು ಹೇಗಾದರೂ ಮಾಡಿ ಬಾದಶಹನನ್ನು ಅವನ ಸಹಚರರಿಂದ ಪ್ರತ್ಯೇಕಗೊಳಿಸಿ ಅವನನ್ನು ಏಕಾಂಗಿಯನ್ನಾಗಿ ನದಿಯ ತೀರದಲ್ಲಿ ಕರೆತರುವಂತೆ ಆಜ್ಞೆ ಮಾಡಿದ. ಅಲ್ಮಾಸ್‌ಬೇಗ್ ಕೂಡಲೇ ಈ ಕೈಂಕರ್ಯಕ್ಕೋಸ್ಕರ ಹೊರಟು ನಿಂತ. ಹಾಗೂ ಬಾದಶಹನ ಸನ್ನಿಧಿಯಲ್ಲಿ ಹಾಜರಾಗಿ ಮತ್ತು ತನ್ನ ಕೋರಿಕೆಯೊಂದನ್ನು ಮಂಡಿಸಿದ "ನಾನು ಒಂದು ವೇಳೆ ಒಂದೇ ಒಂದು ದಿನ ತಡವಾಗಿ ಖಡಾವನ್ನು ತಲುಪಿದ್ದರೂ ಈ ವೇಳೆಗಾಗಲೇ ಅಲ್ಲಾವುದ್ದೀನನು ಆತ್ಮಹತ್ಯೆಯನ್ನು ಮಾಡಿಕೊಂಡಾಗುತ್ತಿತ್ತು. ನಾನು ಇಲ್ಲಿಗೆ ಬಂದ ನಂತರ ಅವನಿಗೆ ಚೆನ್ನಾಗಿ ತಿಳಿವಳಿಕೆಯನ್ನು ನೀಡಿದ್ದೇನೆ ಮತ್ತು ಸಮಾಧಾನ ಪಡಿಸಿದ್ದೇನೆ. ಆದರೂ ಕೂಡ ಅವನು ಅಂತರಂಗದಲ್ಲಿ ಭಯಗ್ರಸ್ತನಾಗಿದ್ದಾನೆ. ತಮ್ಮ ಜೊತೆಯಲ್ಲಿ ತಮ್ಮ ಸೈನ್ಯ ಮತ್ತು ಸಹಚರರನ್ನು ಕಂಡು ಅವನು ಭಯಗ್ರಸ್ತನಾಗಿ ಇಲ್ಲಿಂದಲೂ ಓಡಿ ಹೋಗಿ ಬೇರೆ ಯಾವುದಾದರೂ ದೇಶದಲ್ಲಿ ಅವನು ತಲೆಮರೆಸಿಕೊಳ್ಳುವ ಸಾಧ್ಯತೆ ಇದೆ" ಈ ಮಾತನ್ನು ಕೇಳಿ ಜಲಾಲುದ್ದೀನನು ತನ್ನ ನಾವೆಗಳಲ್ಲಿ ಪ್ರಯಾಣ ಮಾಡುತ್ತಿರುವ ತನ್ನ ಸೈನಿಕರೆಲ್ಲರೂ ನಾವೆಯಲ್ಲಿಯೇ ಉಳಿಯಬೇಕೆಂದು ಆಜ್ಞೆ ಮಾಡಿದ ಮತ್ತು ಬಾದಶಹನು ಬೆರಳೆಣಿಕೆಯಷ್ಟು ತನ್ನ ಸಹಚರರೊಡನೆ ಮುಂದುವರೆದ.

ಜಲಾಲುದ್ದೀನನು ಒಂದಿಷ್ಟು ದೂರ ಕ್ರಮಿಸಿದಾಗ ಅಲ್ಮಾಸ್‌ಬೇಗನು ಇನ್ನೊಂದು ತಂತ್ರವನ್ನು ಹೂಡಿದ ಮತ್ತು ನುಡಿದ "ನನ್ನ ಸಹೋದರನು ಈಗ ನಿಮ್ಮ ತುಂಬಾ ಸಮೀಪಕ್ಕೆ ಬಂದಿದ್ದಾನೆ ಆದ್ದರಿಂದ ನಿಮ್ಮ ಶಸ್ತ್ರಸಜ್ಜಿತ ಬೆಂಗಾವಲಿನ ಪಡೆಯನ್ನು ದೂರ ಸರಿಸಿದರೆ ಉತ್ತಮವಾಗುತ್ತದೆ. ಇಲ್ಲವಾದಲ್ಲಿ ಅಲ್ಲಾವುದ್ದೀನನು ಅವರನ್ನು ಕಂಡು ಅಪಾಯದ ಗುಮಾನಿಯನ್ನು ಹೊಂದಿ ತಮ್ಮ ಕೃಪಕಟಾಕ್ಷದಿಂದ ನಿರಾಶೆಯನ್ನು ಹೊಂದುವ ಸಾಧ್ಯತೆ ಇದೆ" ಈ ಮಾತನ್ನು ಕೇಳಿದ ಬಾದಶಹನು ಶಸ್ತ್ರಗಳನ್ನು ತೊರೆಯುವಂತೆ ತನ್ನ ಪಹರೆ ದಳದವರಿಗೆ ಆದೇಶ ನೀಡಿದ. ಬಾದಶಹನ ನಾವೆಯು ದಡವನ್ನು ಸೇರಿದಾಗ ಅಲ್ಲಾವುದ್ದೀನನು ಶಸ್ತ್ರಸಜ್ಜಿತನಾಗಿ ಸ್ವಾಗತವನ್ನು ಕೋರಲು ಬರುತ್ತಿದ್ದುದನ್ನು ಬಾದಶಹನ ಸಹಚರರು ಕಂಡರು. ಮತ್ತು ಅಲ್ಲಾವುದ್ದೀನನ ಇರಾದೆಯು ಅವರಿಗೆ ಸ್ಪಷ್ಟವಾಯಿತು ಮತ್ತು ಅವರುಗಳು ಅಲ್ಮಾಸ್‌ಬೇಗನ ಕಪಟ ಮತ್ತು ಮೋಸವನ್ನು ಅರಿತರು. ಒಬ್ಬ ಸರ್ದಾರನಾದ ಮುಲ್ಕ್ ಕುರ್ರಮ್ ರಕೀಕ್ ಎಂಬುವವನು ಅಲ್ಮಾಸ್‌ಬೇಗ್‌ನೊಡನೆ ನುಡಿದ "ನಿನ್ನ ಇಚ್ಛೆಯ ಮೇರೆಗೆ ನಾವುಗಳು ಇಲ್ಲಿಯವರೆಗೆ ಸಂಪೂರ್ಣವಾಗಿ ನಿರಾಯುಧರಾಗಿ ಬಂದಿದ್ದೇವೆ. ಆದರೆ ನೀವೆಲ್ಲರೂ ಶಸ್ತ್ರಸಜ್ಜಿತರಾಗಿದ್ದು

ಯುದ್ಧ ಮಾಡುವ ಸಿದ್ಧತೆಯನ್ನು ಮಾಡಿಕೊಂಡಿರುವುದು ಕಂಡುಬರುತ್ತಿದೆ" ಅಲ್ಮಾಸ್‌ಬೇಗನು ಉತ್ತರಿಸಿದ "ನನ್ನ ಸಹೋದರನ ಅಪೇಕ್ಷೆ ಏನೆಂದರೆ ಅವನು ತನ್ನ ಸೈನ್ಯವನ್ನು ಶಸ್ತ್ರಸಜ್ಜಿತವಾಗಿ ಅಲಂಕರಿಸಿ ಬಾದಶಹರವರ ಪರೀಶೀಲನೆಗೆ ಒಳಪಡಿಸಿ ತಾನು ಖುದ್ದು ಅವರ ಸೇವೆಯಲ್ಲಿ ಗೌರವ ಸಲ್ಲಿಸಬೇಕೆಂಬ ಇರಾದೆಯು ಅವನಿಗೆ ಇದೆ" ಈ ಎಲ್ಲಾ ಬೆಳವಣಿಗೆಯನ್ನು ಕಂಡರೂ ಕೂಡ ಜಲಾಲುದ್ದೀನ್ ಖಿಲ್ಜಿಯ ಮೇಲೆ ಯಾವುದೇ ಪರಿಣಾಮ ಉಂಟಾಗಲಿಲ್ಲ ಮರಣ ಸಮೀಪಿಸಿದಾಗ ಮನುಷ್ಯನು ಕುರುಡನಾಗುತ್ತಾನೆಂಬ ಗಾದೆಯಂತೆ ಅಲ್ಮಾಸ್‌ಬೇಗನ ಕುಟಿಲತೆ ಮತ್ತು ಮೋಸವನ್ನು ಬಾದಶಹನು ಅರಿತುಕೊಳ್ಳಲಿಲ್ಲ. ಬರೀ ಇಷ್ಟನ್ನು ಮಾತ್ರ ನುಡಿದ "ನಾನು ಇಷ್ಟೊಂದು ದೂರದ ಪ್ರಯಾಣವನ್ನು ಮಾಡಿ ಬಳಲಿದ್ದೇನೆ. ಈ ಹೊತ್ತಿನಲ್ಲಿ ಉಪವಾಸ ವ್ರತವನ್ನು ಕೂಡ ಆಚರಿಸುತ್ತಿದ್ದೇನೆ. ಅವನು ಕೂಡ ನಾವೆಯ ಮೂಲಕ ಪ್ರಯಾಣ ಮಾಡಿ ನನ್ನ ಸ್ವಾಗತವನ್ನು ಕೋರುವ ಬಗ್ಗೆ ಆಲೋಚನೆಯನ್ನಾದರೂ ಮಾಡಬೇಕಿತ್ತು" ಅಲ್ಮಾಸ್‌ಬೇಗನು ಉತ್ತರಿಸಿದ "ಬರೀ ಕೈಯಲ್ಲಿ ಖಾವಂದರ ಭೇಟಿಯನ್ನು ಮಾಡಬೇಕೆಂದು ನನ್ನ ಸಹೋದರ ಇಚ್ಛಿಸುವುದಿಲ್ಲ. ಅವನು ಅಮೂಲ್ಯವಾದ ವಸ್ತು ಸಾಮಗ್ರಿಗಳು ಹಾಗೂ ಯಾರೂ ಕಂಡರಿಯದ ಮುತ್ತುರತ್ನಗಳು ಮತ್ತು ಉತ್ತಮ ಕುಲದ ಆನೆ ಕುದುರೆಗಳನ್ನು ತಮ್ಮೆದುರು ಕಾಣಿಕೆಯಾಗಿ ಸಲ್ಲಿಸಿ ತಮ್ಮ ಪಾದಧೂಳಿಯನ್ನು ಪಡೆಯಲು ಬರುತ್ತಿದ್ದಾನೆ. ಅಲ್ಲಾವುದ್ದೀನನು ತಮಗಾಗಿ ಉಪವಾಸ ವ್ರತವನ್ನು ಬಿಡುವ ಸಂದರ್ಭದ ಉಪಹಾರವಾದ ಇಫ್ತಾರ್ ಕೂಟವನ್ನು ಕೂಡ ಆಯೋಜಿಸಿದ್ದಾನೆ. ಹಾಗೂ ತಾವು ತಮ್ಮ ಪಿತೃ ವಾತ್ಸಲ್ಯವನ್ನು ಸೂಸುತ್ತ ಅವನ ಮನೆಗೆ ಆಗಮಿಸಿ ಇಫ್ತಾರ್‌ನ್ನು ಮಾಡಿ ಅವನನ್ನು ಆಶೀರ್ವದಿಸಬೇಕೆಂಬ ನಿರೀಕ್ಷೆಯನ್ನು ಹೊಂದಿದ್ದಾನೆ. ಆ ನಿರೀಕ್ಷೆಯಲ್ಲಿ ಅವನು ಸಫಲನಾದರೆ, ತನಗೆ ದೊರೆತ ಮನ್ನಣೆಯಿಂದ ಅವನು ತನ್ನ ಸಹಚರರ ನಡುವೆ ಅಹಂಕಾರದಿಂದ ಬೀಗುತ್ತಾನೆ.

ಜಲಾಲುದ್ದೀನನ ಕೊಲೆ:

ಜಲಾಲುದ್ದೀನ್ ಖಿಲ್ಜಿಯು ನಾವೆಯಲ್ಲಿ ಪ್ರಯಾಣ ಮಾಡುತ್ತ ಕುರಾನ್ ಪಠನವನ್ನು ಮಾಡುತ್ತಿದ್ದ. ಸಂಜೆಯ ನಮಾಜಿನ ಹೊತ್ತಿಗೆ ಆ ನಾವೆಯು ದಡವನ್ನು ಸೇರಿತು. ಬಾದಶಹನು ನಾವೆಯಿಂದ ಕೆಳಗಿಳಿದ ಕೂಡಲೇ ಅಲ್ಲಾವುದ್ದೀನನು ಮುಂದೆ ಬಂದು ಬಾದಶಹನಿಗೆ ಸ್ವಾಗತವನ್ನು ಕೋರಿದ ಹಾಗೂ ಆತನ ಪಾದಗಳ ಮೇಲೆ ತನ್ನ ತಲೆಯನ್ನಿಟ್ಟು ಪ್ರಣಾಮ ಮಾಡಿದ. ಜಲಾಲುದ್ದೀನನು ಪ್ರೀತಿಯ ಭಾವದಿಂದ ತುಂಬಿ ಆತನ ಕೆನ್ನೆಯ ಮೇಲೆ ಲಘುವಾದ ಒಂದು ಏಟನ್ನು ಕೊಟ್ಟ ಮತ್ತು ಅತ್ಯಂತ ವಾತ್ಸಲ್ಯಭರಿತ ಧ್ವನಿಯಲ್ಲಿ ನುಡಿದ "ನಾನು ನಿನ್ನನ್ನು ಅತ್ಯಂತ ಪ್ರೀತಿಯಿಂದ ಸಾಕಿ ಸಲಹಿ ಸುಯೋಗ್ಯನನ್ನಾಗಿ ಮಾಡಿದ್ದೇನೆ ಮತ್ತು ನನ್ನ ಪುತ್ರರಿಗಿಂತಲೂ ಹೆಚ್ಚಿನ ಆಪ್ತತೆಯನ್ನು ನಿನ್ನೊಡನೆ ಹೊಂದಿದ್ದೇನೆ. ನಿನ್ನ ಬಾಲ್ಯದ ಸುಗಂಧವು ಇನ್ನೂ ನನ್ನ

ವಸ್ತ್ರಗಳಿಂದ ಮರೆಯಾಗಿಲ್ಲ. ಹೀಗಿರುವಾಗ ನಾನು ನಿನ್ನ ವಿರೋಧಿಯಾಗಿದ್ದೇನೆಂಬ ಮತ್ತು ನಿನಗೆ ಕೆಡಕನ್ನು ಬಯಸುತ್ತೇನೆಂಬ ಆಲೋಚನೆಯಾದರೂ ನಿನ್ನ ಮನಸ್ಸಿನಲ್ಲಿ ಹೇಗೆ ಮೂಡಿತು?" ಈ ಮಾತನ್ನು ಆಡುತ್ತಾ ಬಾದಶಹನು ಅಲ್ಲಾವುದ್ದೀನನ ಕೈಯನ್ನು ಹಿಡಿದು ಅವನನ್ನು ತನ್ನೊಡನೆ ಕರೆದುಕೊಂಡು ನಾವೆಯತ್ತ ಮುನ್ನಡೆದ. ಅಲ್ಲಾವುದ್ದೀನನು ಆ ಸಂದರ್ಭದ ಸದುಪಯೋಗವನ್ನು ಮಾಡಿಕೊಂಡು ಬಾದಶಹನ ಕೊಲೆಗಾಗಿ ನಿಯೋಜಿಸಲಾಗಿದ್ದ ಜನರಿಗೆ ಸನ್ನೆಯನ್ನು ಮಾಡಿದ. ಮೆಹಮೂದ್ ಬಿನ್ ಸಾಲೀಮ್ ಎಂಬ ಹೆಸರಿನ ಸಮಾನಾ ಪ್ರಾಂತ್ಯದ ಒಬ್ಬ ನೀಚ ಸಿಪಾಯಿಯು ಬಾದಶಹನ ಮೇಲೆ ಕತ್ತಿಯನ್ನು ಬೀಸಿದ. ಬಾದಶಹನಿಗೆ ತೀವ್ರಗಾಯವುಂಟಾಯಿತು. ಆದರೂ ಅವನು ಏಳುತ್ತಾ ಬೀಳುತ್ತಾ ನಾವೆಯತ್ತ ಓಡಿದ ಮತ್ತು ನುಡಿದ "ಓ ದರಿದ್ರ ಅಲ್ಲಾವುದ್ದೀನನೆ! ನೀನು ಇದೇನನ್ನು ಮಾಡಿದೆ" ಜಲಾಲುದ್ದೀನನು ನಾವೆಯ ಬಳಿ ತಲುಪುವಷ್ಟರಲ್ಲಿ ಇಕ್ತಿಯಾರುದ್ದೀನನು ಅವನತ್ತ ಓಡಿದ. ಇಕ್ತಿಯಾರುದ್ದೀನನು ಜಲಾಲುದ್ದೀನನು ಪಾಲನೆ ಪೋಷಣೆ ಮಾಡಿದ ಒಬ್ಬ ಗುಲಾಮನಾಗಿದ್ದ. ಅವನು ಬಾದಶಹನನ್ನು ಒಂದೇ ಏಟಿಗೆ ತರಿದು ಅವನ ತಲೆಯನ್ನು ಕತ್ತರಿಸಿದ. ಆ ಸಂದರ್ಭದಲ್ಲಿ ಸೂರ್ಯ ಮುಳುಗುವ ಹೊತ್ತಾಗಿತ್ತು. ಬಾದಶಹನ ತಲೆಯನ್ನು ಹಿಡಿದುಕೊಂಡು ಇಕ್ತಿಯಾರುದ್ದೀನನು ಅಲ್ಲಾವುದ್ದೀನನ ಸಮ್ಮುಖದಲ್ಲಿ ಹಾಜರಾದ. ಅಷ್ಟೇ ಅಲ್ಲದೆ ಮುಲ್ಕ್ ಖುರ್ರಮ್ ಮೊದಲಾದ ಬಾದಶಹನ ಸಹಚರ ಸರ್ದಾರರನ್ನು ಕೂಡ ಅಲ್ಲಾವುದ್ದೀನನ ಸೇವಕರು ಸಾವಿಗಟ್ಟಿದರು.

ಜಲಾಲುದ್ದೀನನ ತಲೆಯ ಪ್ರದರ್ಶನ:

ಕೊಲೆಗಡುಕರು ಜಲಾಲುದ್ದೀನ್ ಖಿಲ್ಜಿಯ ತಲೆಯನ್ನು ಭರ್ಜಿಯ ಮೊನೆಗೆ ಅಂಟಿಸಿ ಖಡಾ ಮತ್ತು ಮಾಣಿಕ್ಯ ಪುರದ ಗಲ್ಲಿಗಲ್ಲಿಗಳಲ್ಲಿ ಮೆರವಣಿಗೆಯನ್ನು ನಡೆಸಿದರು .ತದ ನಂತರ ಅವಧ್‌ನ ಗಲ್ಲಿಗಲ್ಲಿಯೂ ಕೂಡ ಅದರ ಮೆರವಣಿಗೆಯನ್ನು ಮಾಡಿದರು. ಆ ಮೂಲಕ ಈ ಐಹಿಕ ಪ್ರಪಂಚದ ದಾಸನಿಗೆ ಇದೇ ತಕ್ಕ ಶಿಕ್ಷೆ ಎಂಬ ಸಂದೇಶವನ್ನು ಸಾರಿದಂತೆ ಅವರು ಆ ಮೆರವಣಿಗೆಯನ್ನು ಮುಂದುವರೆಸುತ್ತಲೇ ಇದ್ದರು. ಪುತ್ರರು ಮತ್ತು ಬಂಧುಗಳನ್ನು ಅಪಾರ ಪ್ರೀತಿಯಿಂದ ಸಾಕಿ ಸಲಹಿ ಸಾವಿರಾರು ಸವಾಲುಗಳಿಗೆ ಎದೆ ಒಡ್ಡಿದ ವ್ಯಕ್ತಿಯು ದುರಾಶೆಯಿಂದ ಕೂಡಿದ ಭೂಮಿಯಲ್ಲಿ ಹೂಗಳ ಬೀಜವನ್ನು ಬಿತ್ತಿದ. ಕೊಲೆಯಾದವನ ಶಿರದ ಪ್ರದರ್ಶನದ ಮೂಲಕ ಈ ನಶ್ವರ ಜಗತ್ತನ್ನು ಅಪೇಕ್ಷಿಸಿದ ವ್ಯಕ್ತಿಗೆ ಇದೇ ಸಜೆ ತಕ್ಕದ್ದು ಎಂಬ ಸಂದೇಶವನ್ನು ಸಾರುತ್ತಿದ್ದಾರೆಯೋ ಎಂಬಂತೆ ಅವರು ವರ್ತಿಸುತ್ತಿದ್ದರು. ಪುತ್ರರು ಮತ್ತು ಬಂಧುಗಳ ಮೂಲಕ ಸಾಕಷ್ಟು ಬಲ ಪಡೆದು ಸಾವಿರಾರು ಎಡರು ತೊಡರುಗಳನ್ನು ಎದುರಿಸಿ ಅವರ ಪಾಲನೆ ಪೋಷಣೆಯನ್ನು ಮಾಡಿ ಯಾವ ವ್ಯಕ್ತಿಯು ಅನೇಕಾನೇಕ ಬಯಕೆಗಳೊಂದಿಗೆ ದುರಾಶೆ ಮತ್ತು ದುಷ್ಪ್ರೇರಣೆಯ ಬಂಜರು

ಭೂಮಿಯಲ್ಲಿ ಪುಷ್ಪಗಳ ಬೀಜವನ್ನು ನೆಡುತ್ತಾನೋ ಅವನು ಹೂವಿನ ಬದಲಿಗೆ ಮುಳ್ಳನ್ನು ಆಯ ಬೇಕಾಗುತ್ತದೆ. ಮತ್ತು ಯಾವ ವ್ಯಕ್ತಿಯು ಈ ಪ್ರಪಂಚದಿಂದ ಒಳಿತಿನ ನಿರೀಕ್ಷೆಯನ್ನು ಮಾಡುತ್ತಾನೋ ಅವನ ಕಣ್ಣುಗಳಲ್ಲಿ ಕುಟಿಲತೆ ಮತ್ತು ವಂಚನೆಯ ಧೂಳನ್ನು ಎರಚಲಾಗುತ್ತದೆ. ಯಾವ ವ್ಯಕ್ತಿಯು ಕೆಡುಕಿನ ಬಾಗಿಲನ್ನು ತನ್ನ ಹಸ್ತದಿಂದ ತಟ್ಟುತ್ತಾನೆಯೋ ಅವನು ಕ್ಷಣ ಕಾಲವೂ ನೆಮ್ಮದಿಯಿಂದ ನಿದ್ರಿಸಲಾರ. ಅಂತಹ ವ್ಯಕ್ತಿಯು ಸ್ಥಗಿತಗೊಂಡಿರುವ ವಿದ್ರೋಹವನ್ನು ಕೂಡ ಎಚ್ಚರಿಸಿ ತನ್ನ ಇಹಲೋಕ ಮತ್ತು ಪರಲೋಕಗಳೆರಡನ್ನು ಕೂಡ ನಾಶ ಪಡಿಸಿಕೊಳ್ಳುತ್ತಾನೆ. ಗರಗಸದ ಹಲ್ಲುಗಳು ಜಮ್‌ಶೀದ್‌ನ ಮಾಂಸವನ್ನು ತಿನ್ನುತ್ತಿವೆ ಎಂಬುದು ಸರಿ ಆದರೆ ಜೆಹಾಕ್‌ನ ಶರೀರದ ಪ್ರತಿಯೊಂದು ರೋಮವು ಕೂಡ ಫರೀದೋನನ ಹೆಸರಿನಿಂದ ಭಯಗ್ರಸ್ತವಾಗಿ ಸರ್ಪದಂತೆ ಸ್ವತಃ ತನಗೆ ತಾನೇ ಕಚ್ಚುತ್ತಿದೆ ಎಂಬುದು ಕೂಡಾ ವಾಸ್ತವತೆಯಾಗಿದೆ. ಏರಜ್‌ನ ತಲೆ ಕಡಿದು ಕಾಲಬುಡದಲ್ಲಿ ಬಿದ್ದಲ್ಲಿ ಮನೋಚಹರ್ ಕೂಡ ಕೈಯಲ್ಲಿ ಕತ್ತಿಯನ್ನು ಹಿರಿದು ಸಲಮ್ ಮತ್ತು ತೂರ್‌ನ ಮೇಲೆ ಪ್ರತೀಕಾರವನ್ನು ಕೈಗೊಳ್ಳಲು ಅದರ ತಲೆಯ ಮೇಲೆ ನಿಂತಿದ್ದಾನೆ. ಏರಜ್‌ನ ತಲೆಯನ್ನು ತಟ್ಟೆಯಲ್ಲಿ ಇಡಲಾಗಿದೆ ಆದರೆ ಲಾಲಾನ ಹಸ್ತಗಳು ರಕ್ತಸಿಕ್ತವಾಗಿವೆ. ದಾರಾ ತನ್ನ ಉಪ್ಪು ತಿಂದವರ ಕತ್ತಿಯ ಏಟಿಗೆ ಬಲಿಯಾಗಿದ್ದಲ್ಲಿ ಅವನ ಕೊಲೆಗಾರರ ತಲೆಗಳ ಮೇಲೆ ಅಲೆಗ್ಸಾಂಡರ್‌ನ ಕತ್ತಿಯು ನೇತಾಡುತ್ತಿದೆ. ರಕ್ತಬೆರೆತ ಮಣ್ಣಿನಲ್ಲಿ ಖುಸ್ರು ನಿರ್ಜೀವವಾಗಿ ಬಿದ್ದಿರುವಲ್ಲಿ ಶೇರೋಯ ಕೂಡ ದುರವಸ್ಥೆಯಲ್ಲಿ ಹಣ್ಣಾಗಿದ್ದಾನೆ. ಸುಲ್ತಾನ್ ಮಅಜುದ್ದೀನ್ ಕೈಖಬಾದ್ ನೆತ್ತರ ಮಡುವಿನಲ್ಲಿ ಸಚೇಲ ಸ್ನಾನ ಮಾಡುತ್ತಿರುವಲ್ಲಿ ಗಂಗೆಯ ಜಲ ಕೂಡ ಜಲಾಲುದ್ದೀನ್ ಖಿಲ್ಜಿಯ ರಕ್ತದಿಂದ ಕೆಂಬಣ್ಣಕ್ಕೆ ತಿರುಗಿದೆ.

ಅಲ್ಲಾವುದ್ದೀನನ ಪಟ್ಟಾಭಿಷೇಕ:

ಬಲ್ಲ ಮೂಲಗಳಿಂದ ತಿಳಿದು ಬರುವುದೇನೆಂದರೆ ಜಲಾಲುದ್ದೀನ್ ಖಿಲ್ಜಿಯು ಕಥಾದ ಕಡೆ ಪ್ರಯಾಣ ಬೆಳೆಸುತ್ತಿದ್ದಾಗ ಅವನು ಕಥಾದ ಖ್ಯಾತ ದರವೇಶ ಸಂತನಾದ ಖ್ವಾಜಾ ಗರ್ಗ್‌ನ ಸಮ್ಮುಖದಲ್ಲಿ ಹಾಜರಾಗಿ ಅವರ ಕೃಪಾ ಭಿಕ್ಷೆಯನ್ನು ಬೇಡಿದ ಖ್ವಾಜಾ ಸಾಹೇಬರು ಅಲ್ಲಾವುದ್ದೀನನತ್ತ ನೋಡಿ ಹೀಗೆಂದು ನುಡಿದರು, "ಯಾವನು ನಿನ್ನ ಜೊತೆಗೆ ಯುದ್ಧ ಮಾಡಲು ಬರುತ್ತಾನೋ, ಆತನು ತನ್ನ ತಲೆಯನ್ನು ಸ್ವತಃ ಕತ್ತರಿಸಿಕೊಂಡು ಕೈಯಲ್ಲ ಹಿಡಿದುಕೊಂಡು ಹೋಗುತ್ತಾನೆ."

ಒಟ್ಟಾರೆ ಕೊಲೆಯಾದ ಬಾದಶಹ ಜಲಾಲುದ್ದೀನನ ಛತ್ರಚಾಮರವು ಅಲ್ಲಾವುದ್ದೀನ್ ಖಿಲ್ಜಿಯ ತಲೆಯ ಮೇಲೆ ಮೆರೆಯಿತು. ಮತ್ತು ಇಡೀ ಪಟ್ಟಣದಲ್ಲಿ ಅವನ ಪಟ್ಟಾಭಿಷೇಕದ ಬಗ್ಗೆ ಡಂಗೂರ ಸಾರಿಸಲಾಯಿತು ಜಲಾಲುದ್ದೀನನ ಕೊಲೆಯ ಪಿತೂರಿಯಲ್ಲಿ ಭಾಗಿಯಾಗಿದ್ದ ಅಲ್ಲಾವುದ್ದೀನನ ಎಲ್ಲಾ ಬೆಂಬಲಿಗರನ್ನು ಅವನು ಹತ್ಯೆ ಮಾಡಿದ. ಮೆಹಮೂದ್ ಬಿನ್ ಸಾಲಿಮ್ ಒಂದು ವರ್ಷದ ನಂತರ ತೊನ್ನಿನ ರೋಗಕ್ಕೆ

ಗುರಿಯಾದ. ಅವನ ಶರೀರದ ಮಾಂಸ ಖಂಡಗಳು ಛಿದ್ರ ಛಿದ್ರವಾಗಿ ಕಳಚಿ ನೆಲಕ್ಕೆ ಬೀಳತೊಡಗಿದವು. ಇಕ್ತಿಯಾರುದ್ದೀನ್ ಹುಚ್ಚನಾದ ಹಾಗೂ ಮತಿಭ್ರಮಣೆಯನ್ನು ಹೊಂದಿ ಮನೋವೈಕಲ್ಯಕ್ಕೆ ಗುರಿಯಾದ ಆತನು ಎತ್ತರದ ಧ್ವನಿಯಲ್ಲಿ ಚೀರಾಡುತ್ತಾ ಜಲಾಲುದ್ದೀನ್ ಖಿಲ್ಜಿಯು ಕೈಯಲ್ಲಿ ಖಡ್ಗ ಹಿಡಿದು ತನ್ನ ತಲೆಯನ್ನು ತರಿಯುತ್ತಿದ್ದಾನೆ ಎಂದು ಬೊಬ್ಬೆ ಇಡುತ್ತಿದ್ದ. ಅಲ್ಮಾಸ್‌ಬೇಗ್ ಮತ್ತು ಇನ್ನಿತರೆ ಅಪರಾಧಿಗಳು ಮೂರ್‍ನಾಲ್ಕು ವರ್ಷಗಳ ಅಂತರದಲ್ಲಿಯೇ ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತಾವಧಿಯ ಆರಂಭದಲ್ಲಿಯೇ ನಾಮಾವಶೇಷವಾದರು.

ಅಲ್ಲಾವುದ್ದೀನನು ಕೆಲಕಾಲದವರೆಗೆ ಅತ್ಯಂತ ವಿಲಾಸೀ ಜೀವನವನ್ನು ನಡೆಸಿದ ಆದರೆ ಅಂತಿಮವಾಗಿ ಅವನ ಬದುಕು ಕೂಡಾ ದಯನೀಯವಾಯಿತು ಹಾಗೂ ಅವನ ವಂಶವು ಸ್ವತಃ ಅವನ ಕೈಯಿಂದಲೇ ನಾಶವಾಯಿತು. ಅವನು ತನ್ನ ಸಹೋದರರು ಮತ್ತು ಅವರ ಪುತ್ರರನ್ನು ಗೃಹ ಬಂಧನಕ್ಕೆ ಒಳಪಡಿಸಿದ ಮತ್ತು ತನಗೆ ಅತ್ಯಂತ ನಂಬಿಕಸ್ತರಾಗಿದ್ದ ಸಹಚರರು ಮತ್ತು ದರ್ಬಾರಿಗಳನ್ನು ಮೃತ್ಯು ಕೂಪಕ್ಕೆ ತಳ್ಳಿದ. ಅಲ್ಲಾವುದ್ದೀನನ ಗುಲಾಮರು ಹಾಗೂ ಸೇವಕರು ಅವನ ಜೀವಿತಾವಧಿಯಲ್ಲಿಯೇ ಅವನ ಪುತ್ರರು ಮತ್ತು ಕುಟುಂಬದ ಸದಸ್ಯರ ಮೇಲೆ ನಡೆಸಿದ ಕ್ರೌರ್ಯವು ಇನ್ಯಾವುದೇ ಇತಿಹಾಸದ ಪುಟಗಳಲ್ಲಿ ದೊರಕುವುದಿಲ್ಲ.

ಜಲಾಲುದ್ದೀನ್ ಖಿಲ್ಜಿಯ ಸರದಾರನಾದ ಮುಲ್ಕ್ ಅಹಮದ್ ಹಬೀಬನು ಬಾದಶಹನಾಗಿದ್ದ ಜಲಾಲುದ್ದೀನ್ ಖಿಲ್ಜಿಯ ಆದೇಶದ ಮೇರೆಗೆ ನೆಲಮಾರ್ಗದಿಂದ ಕಢಾಗೆ ಹೊರಟಿದ್ದನು. ಮಾರ್ಗಮಧ್ಯದಲ್ಲಿಯೇ ಅವನಿಗೆ ಸದರಿ ಬಾದಶಹನ ಕೊಲೆಯ ವಿಷಯ ತಿಳಿದು ಬಂದಿದ್ದರಿಂದ ಅವನು ಮರಳಿ ದೆಹಲಿ ಸೇರಿದ. ಜಲಾಲುದ್ದೀನನ ಪತ್ನಿಯಾಗಿದ್ದ ಮಲ್ಲಿಕಾ ಜಹಾಂ ಆ ಸಂದರ್ಭದಲ್ಲಿ ದುರದೃಷ್ಟಕರವಾದ ತೀರ್ಮಾನವನ್ನು ಕೈಗೊಂಡಳು ಆ ಸಂದರ್ಭದಲ್ಲಿ ಯುವರಾಜನಾಗಿದ್ದ ಅರ್ಕಲಿಖಾನ್ ಮುಲ್ತಾನ್‌ನಲ್ಲಿದ್ದ ಆ ಚಕ್ರವರ್ತಿನಿಯು ಯಾರೊಂದಿಗೂ ಸಮಾಲೋಚನೆ ನಡೆಸದೆ ತನ್ನ ಕಿರಿಯ ಮಗನಾದ ರಾಜಕುಮಾರ ರುಕ್ನುದ್ದೀನ್ ಇಬ್ರಾಹಿಮ್‌ನ ಪಟ್ಟಾಭಿಷೇಕವನ್ನು ಮಾಡಿ ಅವನನ್ನು ಸಿಂಹಾಸನಾರೂಢನನ್ನಾಗಿ ಮಾಡಿದಳು. ರಾಜಕುಮಾರನು ಅತ್ಯಂತ ಕಿರಿಯ ವಯಸ್ಸಿನವನಾಗಿದ್ದು ಅಪ್ರಬುದ್ಧ ಹಾಗೂ ಅನನುಭವಿಯಾಗಿದ್ದನು ಮತ್ತು ರಾಜ್ಯಾಡಳಿತದ ಬಗ್ಗೆ ಯಾವುದೇ ಅನುಭವವನ್ನು ಅವನು ಹೊಂದಿರಲಿಲ್ಲ. ಸಾಮ್ರಾಜ್ಞಿಯಾದ ಮಲ್ಲಿಕಾ ಜಹಾಂ ಕೇಲೋಖರಿಯಿಂದ ದೆಹಲಿಗೆ ಆಗಮಿಸಿ ಪಚ್ಚೆಯರಮನೆಯಲ್ಲಿ ಬಿಡಾರವನ್ನು ಹೂಡಿದಳು ಹಾಗೂ ಸರದಾರರ ನಡುವೆ ಉನ್ನತ ಹುದ್ದೆಗಳನ್ನು ಮತ್ತು ಜಹಗೀರನ್ನು ಕೊಡುಗೆಯಾಗಿ ನೀಡಿದಳು. ಸಾಮ್ರಾಜ್ಯದ ಅಧಿಕೃತ ಉತ್ತರಾಧಿಕಾರಿಯಾಗಿದ್ದ ಅರ್ಕಲಿಖಾನನು ಈ ಬೆಳವಣಿಗೆಗಳಿಂದ ದುಃಖಿತನಾದ ಹಾಗೂ ಆತನು ಮುಲ್ತಾನಿನಲ್ಲಿಯೇ ಉಳಿದ ಅಲ್ಲಾವುದ್ದೀನನು

ಮೊದಲಿಗೆ ಲಖ್ನೋತಿಯ ಮೇಲೆ ಯುದ್ಧ ಮಾಡಬೇಕೆಂದು ತೀರ್ಮಾನಿಸಿದ್ದ ಆದರೆ ಅರ್ಕಲಿಖಾನ್ ಮತ್ತು ಆತನ ತಾಯಿಯಾದ ಸಾಮ್ರಾಜ್ಞಿಯ ನಡುವೆ ಮೂಡಿದ ವಿರಸವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ನಿರ್ಧರಿಸಿದ. ದೆಹಲಿಯ ಸಿಂಹಾಸನವನ್ನು ಬಾಲಕನೊಬ್ಬನು ಏರಿದ್ದನ್ನು ಕಂಡು ತಾನೇ ಬಾದಶಹನಾಗಬೇಕೆಂಬ ತೀವ್ರ ಬಯಕೆ ಅವನಲ್ಲಿ ಮೂಡಿತು ಮಳೆಗಾಲದಲ್ಲಿಯೇ ಅಲ್ಲಾವುದ್ದೀನನು ಆಗ್ರಾದಿಂದ ದೆಹಲಿಗೆ ಪ್ರಯಾಣ ಬೆಳೆಸಿದ ಮತ್ತು ತನ್ನ ನಿರ್ಧಾರವನ್ನು ಕಾರ್ಯಗತಗೊಳಿಸಿದ. ಜಲಾಲುದ್ದೀನ್ ಖಿಲ್ಜಿಯು ಏಳು ವರ್ಷಗಳಿಗಿಂತ ಕೊಂಚ ಅಧಿಕ ಕಾಲಾವಧಿಯವರೆಗೆ ರಾಜ್ಯವನ್ನಾಳಿದ.

ಅಲ್ಲಾವುದ್ದೀನ್ ಖಿಲ್ಜಿ

ಜಲಾಲುದ್ದೀನ್ ಖಿಲ್ಜಿಯ ಕೊಲೆಯ ನಂತರ ರಾಜ್ಯದ ಆಡಳಿತದ ಕಾನೂನು ಮತ್ತು ಸುವ್ಯವಸ್ಥೆಯನ್ನು ಬಿಗಿ ಮಾಡಿ ಒಂದು ಬಲಿಷ್ಠವಾದ ರಾಜ್ಯವನ್ನು ನಿರ್ಮಾಣ ಮಾಡುವುದು ಅಲ್ಲಾವುದ್ದೀನಗೆ ಸವಾಲಿನ ಕೆಲಸವಾಗಿತ್ತು. ಸದಾ ಕಾಲ ಅವನು ಇದೇ ಆಲೋಚನೆಯಲ್ಲಿ ಮಗ್ನನಾಗಿರುತ್ತಿದ್ದ. ಒಂದು ದಿನ ಅವನು ತನ್ನ ಸರದಾರರೊಡನೆ ಈ ಬಗ್ಗೆ ನುಡಿದ, "ಈ ಹೊತ್ತಿನಲ್ಲಿ ರಾಜ್ಯದ ಬುನಾದಿಯನ್ನು ಬಲಿಷ್ಠವಾಗಿ ಮತ್ತು ಬಿಗಿಯಾಗಿ ಇರಿಸಲು ನನ್ನ ಬಳಿ ಎರಡು ಯೋಜನೆಗಳಿವೆ ನೀವುಗಳೆಲ್ಲಾ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ಆ ಪೈಕಿ ಯಾವ ಯೋಜನೆಯನ್ನು ಪಾಲಿಸಬಹುದು ಎಂಬುದರ ಬಗ್ಗೆ ನನಗೆ ಸಲಹೆ ಸೂಚನೆಗಳನ್ನು ಕೊಡಿ. ಮೊದಲನೆಯ ಆಲೋಚನೆ ಏನೆಂದರೆ, ಲಖ್ನೋತಿಯ ಮೇಲೆ ಯುದ್ಧ ಮಾಡಿ ಬಂಗಾಳದವರೆಗಿನ ಪ್ರದೇಶವನ್ನು ನಾವು ವಶಪಡಿಸಕೊಳ್ಳತಕ್ಕದ್ದು ಮತ್ತು ಎರಡನೇ ಆಲೋಚನೆ ಏನೆಂದರೆ, ಕಥಾ, ಮಾಂಕ್‌ಪುರದಲ್ಲಿ ವಾಸ್ತವ್ಯವನ್ನು ಹೂಡಿ ಅಲ್ಲಿಂದಲೇ ರಾಜ್ಯದ ಬುನಾದಿಯನ್ನು ಬಿಗಿ ಮಾಡುವ ಕ್ರಿಯಾ ಯೋಜನೆಯನ್ನು ಜಾರಿಗೊಳಿಸುವುದು." ಎಲ್ಲಾ ಸರದಾರರು ಸೇರಿ ಒಮ್ಮತದ ಅಭಿಪ್ರಾಯವನ್ನು ನೀಡಿದ್ದೇನೆಂದರೆ, " ರಾಜಕುಮಾರ ಅರ್ಕಲಿಖಾನನು ಅತೀವ ಪರಾಕ್ರಮಿ ಮತ್ತು ಯುದ್ಧದಲ್ಲಿ ನೈಪುಣ್ಯವನ್ನು ಹೊಂದಿದವನಾಗಿದ್ದಾನೆ. ಈ ಮೂಲ ವ್ಯಕ್ತಿತ್ವವನ್ನು ಹೊಂದುವುದರ ಜೊತೆಯಲ್ಲಿ ಸೈನ್ಯದ ನಿರ್ವಹಣೆ ಮತ್ತು ಯುದ್ಧತಂತ್ರಗಳು ಮತ್ತು ಕಾನೂನುಗಳು ಹಾಗೂ ಆಡಳಿತಾತ್ಮಕ ನಿಬಂಧನೆಗಳ ಬಗ್ಗೆ ಕೂಡ ಅವನು ಅರಿತಿದ್ದಾನೆ. ಅರ್ಕಲಿಖಾನ್ ಮತ್ತು ಅವನ ತಾಯಿಯಾದ ರಾಣಿ ಮಲ್ಲಿಕಾ ಜಹಾನ್ ಇಬ್ಬರೂ ಸೇರಿ ಜಲಾಲುದ್ದೀನ್ ಖಿಲ್ಜಿಯ ರಕ್ತಪಾತದ ಪ್ರತೀಕಾರವನ್ನು ಪಡೆಯುವ ಸಲುವಾಗಿ ಯುದ್ಧ ಮಾಡುವ ಸಂಭವವಿದೆ. ಮತ್ತು ಅವರುಗಳು ಎಲ್ಲಕ್ಕಿಂತ ಮುಂಚಿತವಾಗಿ ಕೊಲೆಗೀಡಾದ ಬಾದಶಹನ ಕೊಲೆಗಾರರಿಗೆ ಸಜೆ ನೀಡುವ ಪ್ರಯತ್ನವನ್ನು ಮಾಡುತ್ತಾರೆ. ಸಂದರ್ಭ ಹೀಗಿರುವಲ್ಲಿ ನಮ್ಮ ಅಭಿಪ್ರಾಯವೇನೆಂದರೆ ಹುಜೂರ್‌ರವರು ಹಾಲಿ ಕಥಾದಲ್ಲಿಯೇ ನೆಲೆಸುವುದು ಸೂಕ್ತ. ಮತ್ತು ಪ್ರಬಲ

ಸೈನ್ಯವನ್ನು ಮುಲ್ಕ್ ಹಜ್ಬರುದ್ದೀನನ ನೇತೃತ್ವದಲ್ಲಿ ಲಖ್ನೋತಿಗೆ ಕಳಿಸತಕ್ಕದ್ದು. ಈ ಬಗ್ಗೆ ಯಾವುದೇ ರೀತಿಯಲ್ಲಿ ವಿಳಂಬ ಮಾಡುವಂತಹದಲ್ಲ ಮತ್ತು ಈ ಮಳೆಗಾಲದಲ್ಲಿಯೇ ಸೈನ್ಯವನ್ನು ಕಳಿಸುವುದು ಸೂಕ್ತ. ಹಾಗೆ ಮಾಡಿದಲ್ಲಿ ಈ ಸೈನ್ಯವು ಬಂಗಾಳದ ಭಾಗದ ಎಲ್ಲಾ ಪಿತೂರಿ ಮತ್ತು ದೊಂಬಿಗಳನ್ನು ದಮನ ಮಾಡಿ ಆ ಪ್ರದೇಶದಲ್ಲಿ ಹುಜೂರ್‌ರವರ ಆಡಳಿತವನ್ನು ಸ್ಥಾಪನೆ ಮಾಡಬಹುದು. ಒಂದು ವೇಳೆ ರಾಜಕುಮಾರ ಅರ್ಕಲಿಖಾನ್‌ನು ದೆಹಲಿಯಿಂದ ಹೊರಟು ನಮ್ಮ ಸೈನ್ಯದೊಂದಿಗೆ ಯುದ್ಧ ಮಾಡುವ ನಿರ್ಧಾರವನ್ನು ಕೈಗೊಂಡಲ್ಲಿ, ಮತ್ತು ಆತನ ಈ ಯೋಜನೆಯ ಬಗ್ಗೆ ಯುದ್ಧ ನಡೆಸದ ವಿನಹ ಬೇರೆ ದಾರಿಯಿಲ್ಲ ಎಂದು ನಮಗೆ ಕಂಡು ಬಂದಲ್ಲಿ ನಾವುಗಳೆಲ್ಲರೂ ಸಯೇಲ್ ನಕ್ಷತ್ರ ಕಂಡುಬರುವವರೆಗೂ ಕಾಯುವುದು ಉತ್ತಮ. ನಂತರ ಹೊಳೆಯ ನೀರಿನ ಪಾತ್ರ ತುಂಬಾ ಕಡಿಮೆಯಾಗುತ್ತದೆ. ನಾವು ಹೊಳೆಯ ಪಾತ್ರದಲ್ಲಿ ಇಳಿದು ಅತಿ ಶೀಘ್ರವಾಗಿ ಬಂಗಾಳ ಮತ್ತು ಲಖ್ನೋತಿಯನ್ನು ತಲುಪಬಹುದು ಮತ್ತು ಅರ್ಕಲಿಖಾನ್‌ನ ಜೊತೆಯಲ್ಲಿ ಯುದ್ಧ ಮಾಡಬಹುದು."

ಅಲ್ಲಾವುದ್ದೀನನಿಗೆ ತನ್ನ ಸರದಾರರ ಈ ಅಭಿಪ್ರಾಯ ಸಮಂಜಸವಾಗಿ ಕಂಡು ಬಂದಿತು ಮತ್ತು ಅವನು ಆ ಸಲಹೆಯ ಮೇರೆಗೆ ಕಾರ್ಯಾಚಾರಣೆಯನ್ನು ನಡೆಸಲು ನಿಶ್ಚಯಿಸಿದ. ಅಲ್ಲಾವುದ್ದೀನನು ಹಜ್ಬರುದ್ದೀನ್‌ನನ್ನು ಲಖ್ನೋತಿಗೆ ಕಳಿಸುವ ಬಗ್ಗೆ ಸಿದ್ಧತೆಯಲ್ಲಿ ತೊಡಗಿರುವಷ್ಟರಲ್ಲಿಯೇ ಅವನಿಗೆ ಒಂದು ಸುದ್ದಿ ತಲುಪಿತು. ಅದೇನೆಂದರೆ, ಸರ್ದಾರರು ಮತ್ತು ರಾಜ್ಯದ ಉನ್ನತ ಅಧಿಕಾರಿಗಳೊಡನೆ ಸಲಹೆ ಪಡೆದುಕೊಳ್ಳದೆ ರಾಣಿ ಜಹಾನ್‌ಳು ರಾಜಕುಮಾರ ಖದರ್‌ಖಾನ್‌ನನ್ನು ಸುಲ್ತಾನ್ ರುಕ್ನುದ್ದೀನ್ ಇಬ್ರಾಹಿಂ ಶಾಹ್ ಎಂಬ ಬಿರುದನ್ನು ನೀಡಿ ದೆಹಲಿಯ ಸಿಂಹಾಸನದ ಮೇಲೆ ಕೂರಿಸಿ ಆತನ ಪಟ್ಟಾಭಿಷೇಕವನ್ನು ಮಾಡಿದ್ದಾಳೆ ಎಂಬುದು. ಮತ್ತು ರಾಣಿ ಜಹಾನಳ ಮೇಲ್ಕಂಡ ಕ್ರಮದಿಂದ ಎಲ್ಲಾ ಸರ್ದಾರರು ಮತ್ತು ಗಣ್ಯರು ಆಕೆಯಿಂದ ದುಃಖಿತರಾಗಿದ್ದಾರೆ ಹಾಗೂ ಅವರಲ್ಲಿ ಅನೇಕರು ಒಟ್ಟುಗೂಡಿ ರಾಣಿಯ ವಿರುದ್ಧ ಸಂಚಿನ ಜಾಲವನ್ನು ಹೆಣೆದಿದ್ದಾರೆ ಎಂಬ ಸುದ್ದಿಯು ಕೂಡ ಅವನಿಗೆ ತಲುಪಿತು. ಈ ಸುದ್ದಿಯು ಸಿಕ್ಕಿದೊಡನೆಯೇ ಅಲ್ಲಾವುದ್ದೀನನು ತನ್ನ ಯೋಜನೆಯಲ್ಲಿ ಬದಲಾವಣೆಯನ್ನು ಮಾಡಿದ ಮತ್ತು ಇಡೀ ಹಿಂದೂಸ್ಥಾನದ ಬಾದಶಹ ಆಗಬೇಕೆಂಬ ದೃಢ ನಿಶ್ಚಯವನ್ನು ಮಾಡಿದ. ತದ ನಂತರ ಅಲ್ಲಾವುದ್ದೀನನು ತನ್ನ ರಾಜಧಾನಿಯ ಸುತ್ತಮುತ್ತಲಿನ ಎಲ್ಲಾ ಭೂಭಾಗವನ್ನು ವಶಪಡಿಸಿಕೊಂಡು ತನ್ನ ಸರ್ದಾರರು ಮತ್ತು ಆಸ್ಥಾನಿಕರಿಗೆ ಪಾರಿತೋಷಕಗಳು ಮತ್ತು ಬಿರುದಾವಳಿಗಳಿಂದ ಸಂತುಷ್ಟರನ್ನಾಗಿ ಮಾಡಿದ. ಅಲ್ಮಾಸ್‌ಬೇಗನಿಗೆ ಅಲಫ್‌ಖಾನ್, ಮುಲ್ಕ್ ಮುಸರತ್ ಜಾಲೇರಸಿಗೆ ನುಸರತ್‌ಖಾನ್ ಮತ್ತು ಮುಲ್ಕ್ ಹಜ್ಬರುದ್ದೀನನಿಗೆ ಜಫರ್‌ಖಾನ್ ಎಂಬ ಅದ್ವಿತೀಯ ಬಿರುದಾವಳಿಗಳನ್ನು ನೀಡಿದ. ಮತ್ತು ಸರದಾರರ ಹುದ್ದೆಗೆ ಸೇರದೆ ಇದ್ದ ತನ್ನ ಬೆಂಬಲಿಗರನ್ನು ಸರದಾರರ

ಹುದ್ದೆಗೆ ನಿಯುಕ್ತಿಗೊಳಿಸಿದ ಹಾಗೂ ಉಳಿದ ಇತರೆ ಸರದಾರರು ಮತ್ತು ಜಾಗೀರುದಾರರ ಆಡಳಿತದ ವ್ಯಾಪ್ತಿಯಲ್ಲಿ ಯೋಗ್ಯವಾದ ಮತ್ತು ಅವಶ್ಯಕವಾದ ಹೆಚ್ಚುವರಿ ಕೊಡುಗೆಗಳನ್ನು ನೀಡಿದ. ಅವನ ಷಡ್ಡಕ ಹಾಗೂ ಅವನ ದರ್ಬಾರಿನ ಸರದಾರನು ಆಗಿದ್ದ ಸಂಜರ್‌ಗೆ ಅಲ್ಲಾವುದ್ದೀನನು "ಅಲಪ್‌ಖಾನ್"ನ ಬಿರುದನ್ನು ನೀಡಿದ. ಒಟ್ಟಾರೆ ಅಲ್ಲಾವುದ್ದೀನನು ತನ್ನ ಸರ್ದಾರರಿಗೆ ಅತೀವ ಉತ್ತೇಜನವನ್ನು ನೀಡಿದ್ದೂ ಅಲ್ಲದೆ ನಂತರ ತನಗೆ ಬಾದಶಹ ಎಂಬ ಬಿರುದನ್ನು ಘೋಷಿಸಿಕೊಂಡ.

ದೆಹಲಿಗೆ ಪ್ರಯಾಣ:

ಈ ಎಲ್ಲಾ ಘಟನೆಗಳ ನಂತರ, ದೇವಗಡದಿಂದ ಪಡೆದುಕೊಂಡಿದ್ದ ಸಕಲ ಸಂಪತ್ತಿನೊಡನೆ ಅಲ್ಲಾವುದ್ದೀನನು ಮಳೆಗಾಲದಲ್ಲಿ ದೆಹಲಿಯ ಕಡೆ ಪ್ರಯಾಣ ಬೆಳೆಸಿದ. ಈ ಪ್ರಯಾಣದ ಸಂದರ್ಭದಲ್ಲಿ ಅಲ್ಲಾವುದ್ದೀನನು ತನ್ನ ಸಂಗಡಿರೊಡನೆ ತುಂಬಾ ಉದಾರತೆಯಿಂದ ವರ್ತಿಸಿದ ಹಾಗೂ ಅನೇಕ ಕೊಡುಗೆಗಳನ್ನು ನೀಡಿದ. ಅವನು ನುಸರತ್‌ಖಾನನ ಸಲಹೆಯ ಮೇರೆಗೆ ಪ್ರತಿದಿನ ಜನತೆಗೆ ದರ್ಶನವನ್ನು ನೀಡುತ್ತಿದ್ದ. ಮತ್ತು ಪ್ರತಿಯೊಬ್ಬ ಸಾಮಾನ್ಯ ಜನರಿಂದ ಹಿಡಿದು ಗಣ್ಯವ್ಯಕ್ತಿಗಳವರೆಗೆ ಭೇಟಿ ಮಾಡುತ್ತಿದ್ದ. ಅವನ ದಾನ ಧರ್ಮ ಮತ್ತು ಕೊಡುಗೆಗಳ ವೈಖರಿ ಹೇಗಿತ್ತೆಂದರೆ ಚಿನ್ನದ ವರಹಗಳಿಂದ ತುಂಬಿದ್ದ ಚೀಲಗಳು ಮತ್ತು ಅಮೂಲ್ಯ ಒಂಟೆಗಳ ಮೇಲೆ ತುಂಬಿಸಿದ ಸಾಲು ಸಾಲು ಒಂಟೆಗಳನ್ನು ಪ್ರಜೆಗಳಿಗೆ ಉಡುಗೊರೆಯ ರೂಪದಲ್ಲಿ ನೀಡುತ್ತಿದ್ದ. ಕರುಣಾಮಯಿ ವರ್ತನೆ ಮತ್ತು ಕೊಡುಗೆಗಳ ವಿಚಾರದಲ್ಲಿ ಅವನು ಯಾವುದೇ ರೀತಿಯಲ್ಲಿಯೂ ಜಿಪುಣತನವನ್ನು ತೋರಲಿಲ್ಲ. ಇತಿಹಾಸಕಾರರ ಪ್ರಕಾರ ರಾಜನ ಆಸ್ಥಾನದ ಬಳಿ ಅವನು ಒಂದು ತಕ್ಕಡಿಯನ್ನು ತೂಗು ಹಾಕಿದ್ದ ಹಾಗೂ ಅವನ ಆದೇಶದ ಪ್ರಕಾರ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಐದು ಮಣ ಹಣ ಮತ್ತು ಚಿನ್ನದ ವರಹಗಳನ್ನು ತೂಕ ಮಾಡಿ ಪ್ರಜೆಗಳ ನಡುವೆ ಹಂಚಲಾಗುತ್ತಿತ್ತು. ಅಲ್ಲಾವುದ್ದೀನನ ಈ ದತ್ತಿದಾನಗಳ ಪ್ರಚಾರ ದೂರ ದೂರದವರೆಗೆ ತಲುಪಿತು ಮತ್ತು ಸುತ್ತಮುತ್ತಲ ಪ್ರದೇಶದ ಜನರು ತಂಡೋಪ ತಂಡವಾಗಿ ಆಶ್ರಯ ಕೋರಿ ಅವನ ಬಳಿ ಬಂದರು. ಅಲ್ಲಾವುದ್ದೀನನು ತನ್ನ ಸಂಗಡಿಗರು ಮತ್ತು ಸೈನ್ಯದೊಂದಿಗೆ ಜೊತೆಗೂಡಿ ಬದಾಯೂನ್ ಪಟ್ಟಣವನ್ನು ತಲುಪಿದಾಗ ಸುಲ್ತಾನ್ ರುಕ್ನುದ್ದೀನ್ ಇಬ್ರಾಹಿಮನು ತೀರ ಅನನುಭವಿಯಾಗಿ ಮತ್ತು ಒಣ ಪ್ರತಿಷ್ಠೆಯ ನಡತೆಯನ್ನು ಪ್ರದರ್ಶಿಸಿದ. ಖುದ್ದು ತಾನು ಯುದ್ಧದಲ್ಲಿ ಭಾಗವಹಿಸದೆ ತನ್ನ ಸರದಾರರು ಮತ್ತು ರಾಜ್ಯದ ಅಧಿಕಾರಿಗಳೊಡನೆ ಒಂದು ಬಲಾಢ್ಯ ಸೈನ್ಯವನ್ನು ಯುದ್ಧ ರಂಗಕ್ಕೆ ಕಳಿಸಿಕೊಟ್ಟ. ಆ ಸರ್ದಾರರು ಮತ್ತು ಅಧಿಕಾರಿಗಳು ಸುಲ್ತಾನ್ ರುಕ್ನುದ್ದೀನ್ ಇಬ್ರಾಹಿಂ ಶಾಹ್‌ನ ಬೆಂಬಲಿಗರಾಗಿರಲಿಲ್ಲ ಆದ್ದರಿಂದ ಅವರು ಕೂಡಲೇ ಅಲ್ಲಾವುದ್ದೀನನ

ಪರವಾಗಿ ನಿಂತರು ಮತ್ತು ಅವನ ಸೈನ್ಯದೊಂದಿಗೆ ಸೇರಿಕೊಂಡರು. ಅಲ್ಲಾವುದ್ದೀನನು ಅವರ ಮೇಲೆ ಸಂಪತ್ತಿನ ಮಳೆಗರೆದ ಮತ್ತು ಆ ಸೈನಿಕರು ಮತ್ತು ಸರದಾರರು ಅವನ ಕಟ್ಟಾ ಬೆಂಬಲಿಗಾದರು. ಇದರ ಪರಿಣಾಮವಾಗಿ ಅಲ್ಲಾವುದ್ದೀನನ ಸೈನ್ಯದಲ್ಲಿ ಅರವತ್ತು ಸಾವಿರ ಸೈನಿಕರ ಹೆಚ್ಚಳವಾಯಿತು. ನಂತರ ಅವನು ಬದಾಯೂನ್‌ನಿಂದ ಮುಂದೆ ಪ್ರಯಾಣ ಬೆಳೆಸಿದ. ಮಲ್ಲಿಕಾ ಜಹಾನ್‌ಗೆ ಈ ಎಲ್ಲಾ ಸಂಗತಿಗಳ ಬಗ್ಗೆ ತಿಳಿದು ಬಂದಾಗ ಆಕೆಯು ತೀವ್ರ ಆತಂಕಕ್ಕೆ ಈಡಾಗಿ ಒಬ್ಬ ವ್ಯಕ್ತಿಯನ್ನು ಮುಲ್ತಾನ್‌ಗೆ ಕಳುಹಿಸಿ ಅರ್ಕಲಿಖಾನ್ ಮತ್ತು ಅಲಫ್‌ಖಾನ್‌ನನ್ನು ತನ್ನ ಜೊತೆಯಲ್ಲಿ ದೆಹಲಿಗೆ ಕರೆ ತರುವಂತೆ ಆಜ್ಞೆ ಮಾಡಿದಳು. ಅರ್ಕಲಿಖಾನನು ನೀಡಿದ ಉತ್ತರವೇನೆಂದರೆ, "ಈಗ ಕಾಲ ಮಿಂಚಿಹೋಗಿದೆ. ಸೈನ್ಯವು ಶತ್ರುವಿನೊಂದಿಗೆ ಶಾಮೀಲಾಗಿದೆ. ರಾಜ ಖಜಾನೆಯಲ್ಲಿ ಸಾಕಷ್ಟು ಸಂಪತ್ತಿಲ್ಲ ಹೀಗಾಗಿ ಸೈನಿಕರಿಗೆ ಆರು ತಿಂಗಳ ಮುಂಗಡ ವೇತನವನ್ನು ನೀಡಲು ಸಾಧ್ಯವಿಲ್ಲ. ಈ ಪರಿಸ್ಥಿತಿಯಲ್ಲಿ ನಾನು ಬಂದಲ್ಲಿ ಕೂಡ ಏನೂ ಪ್ರಯೋಜನವಾಗದು." ಅಲ್ಲಾವುದ್ದೀನನಿಗೆ ಈ ವಿಷಯವು ತಿಳಿದು ಬಂದಾಗ ಅವನು ಶರವೇಗದಿಂದ ದೆಹಲಿಯನ್ನು ತಲುಪಿದ. ಅವನು ತುರ್ತಾಗಿ ಯಮುನಾ ನದಿಯನ್ನು ದಾಟಿ "ಜೌದ್‌ತೋಟ"ದ (ಜೌದ್‌ತೋಟ ಎಂಬುದು ಪುರಾತನ ದೆಹಲಿಯ ಒಂದು ಪ್ರಖ್ಯಾತ ತೋಟವಾಗಿದೆ) ಕಡೆಯ ಬಾಗಿಲಿನ ಮುಂಭಾಗದಲ್ಲಿ ತೋಟ ಮತ್ತು ಹೊಳೆಯ ನಡುವಿನ ಮೈದಾನದಲ್ಲಿ ಶಿಬಿರವನ್ನು ಹೂಡಿದ. ಸುಲ್ತಾನ್ ಇಬ್ರಾಹಿಂ ರುಕ್ನುದ್ದೀನನು ವಿಚಿತ್ರ ತಳಮಳದಿಂದ ವಿವಶನಾದ. ಆದರೂ ಅವನು ತನ್ನ ಇದ್ದ ಬದ್ದ ಧೈರ್ಯ ಮತ್ತು ಸೈನ್ಯವನ್ನು ಒಟ್ಟುಗೂಡಿಸಿ ಅಲ್ಲಾವುದ್ದೀನ್‌ನನ್ನು ಎದುರಿಸಲು ಹೊರಟು ನಿಂತ. ಆದರೆ ತಾನು ಅಲ್ಲಾವುದ್ದೀನ್‌ನನ್ನು ಎದುರಿಸಲು ಸಮರ್ಥನಲ್ಲವೆಂದು ಅರಿವಾಗಿ ಅವನು ಅಸಹಾಯಕತೆಯಿಂದ ಮರಳಿ ದೆಹಲಿ ನಗರದೊಳಗೆ ಪ್ರವೇಶಿಸಿ ನಗರದ ಕೋಟೆಬಾಗಿಲನ್ನು ಹಾಕಿದ. ಅದೇ ರಾತ್ರಿಯಂದು ಜಲಾಲುದ್ದೀನ್ ಖಿಲ್ಜಿಯ ಕಾಲಾವಧಿಯ ಅನೇಕ ಸರದಾರರು ರುಕ್ನುದ್ದೀನನ ಸಂಗವನ್ನು ತೊರೆದು ಅಲ್ಲಾವುದ್ದೀನ್‌ನೊಡನೆ ಸೇರಿಕೊಂಡರು. ಆಗ ರುಕ್ನುದ್ದೀನನಿಗೆ ಪರಾರಿ ಆಗಿ ಜೀವ ಉಳಿಸಿಕೊಳ್ಳುವುದರ ವಿನಹ ಬೇರೆ ಯಾವ ಬಿಡುಗಡೆಯ ಮಾರ್ಗವು ಇರಲಿಲ್ಲ. ಆದ್ದರಿಂದ ಅವನು ತನ್ನ ತಾಯಿ, ಸಹೋದರಿಯರು ಮತ್ತು ಖಜಾನೆಯ ಒಂದಿಷ್ಟು ಭಾಗವನ್ನು ತನ್ನೊಡನೆ ತೆಗೆದುಕೊಂಡು ಮುಲ್ಕ್ ಹಬೀಬ್ ಅಹಮದ್, ಮುಲ್ಕ್ ಕುತುಬ್ ಅಲ್ವಿ ಮತ್ತು ಅಮೀರ್‌ಜಲಾಲ್ ತೆಲಂಗಾಣಿಯ ಜೊತೆಯಲ್ಲಿ ಮುಲ್ತಾನ್‌ನತ್ತ ಹೊರಟ. ಅಲ್ಲಾವುದ್ದೀನನು ಸೈರಿಯ ಅರಣ್ಯದಲ್ಲಿ ವಾಸ್ತವ್ಯವನ್ನು ಹೂಡಿದ್ದ ಮತ್ತು ಅವನ ಸೈನ್ಯವು ಅಲ್ಲಿಯೇ ನೆಲೆಸಿತು. ರುಕ್ನುದ್ದೀನನ ನಿರ್ಗಮನದ ನಂತರ ನಗರದ ಎಲ್ಲಾ ಗಣ್ಯರು ಮತ್ತು ನಿವಾಸಿಗಳು ಅಲ್ಲಾವುದ್ದೀನನ ಸನ್ನಿಧಿಯಲ್ಲಿ ಹಾಜರಾದರು. ಅಲ್ಲಾವುದ್ದೀನನ ಹೆಸರಿನ ನಾಣ್ಯ ಮತ್ತು ಶಾಸನವು ಜಾರಿಯಾಯಿತು. ಮತ್ತು ಎಲ್ಲಾ ರಾಜಸಂಪ್ರದಾಯಗಳನ್ನು ಪಾಲಿಸಲಾಯಿತು.

ಭೋಗ ವಿಲಾಸದ ಉತ್ತುಂಗ:

ಹಿಜರಿ ಶಕೆ ೬೯೬ ನೇ ಇಸವಿಯ ಕೊನೆಯ ಭಾಗದಲ್ಲಿ ಅಲ್ಲಾವುದ್ದೀನನು ಸಂಭ್ರಮ ಮತ್ತು ವೈಭವೋಪೇತವಾಗಿ ದೆಹಲಿಯನ್ನು ಪ್ರವೇಶಿಸಿದ ಮತ್ತು ರಾಜ ಸಿಂಹಾಸನದ ಮೇಲೆ ವಿರಾಜಮಾನನಾದ. ಪಟ್ಟಾಭಿಷೇಕವಾದ ನಂತರ ಅವನು ಕೆಂಪಿನರಮನೆಗೆ ಹೋದ ಮತ್ತು ಅದನ್ನು ತನ್ನ ಅಧಿಕೃತ ನಿವಾಸವನ್ನಾಗಿ ಘೋಷಿಸಿದ. ಮತ್ತು ಸಂಭ್ರಮದ ಸಮಾರಂಭವೊಂದನ್ನು ಆಯೋಜಿಸಿದ. (ಮೇಲ್ಕಂಡ ದಿನಾಂಕವು ಸರಿಯಿಲ್ಲ ಇದು ಇತಿಹಾಸಕಾರ ಫರಿಶ್ತಾನ ತಪ್ಪು ಗ್ರಹಿಕೆಯಾಗಿದೆ. ಅಲ್ಲಾವುದ್ದೀನನ ದೆಹಲಿ ಪ್ರವೇಶದ ಸರಿಯಾದ ದಿನಾಂಕವು ಹಿಜರಿ ಶಕೆ ೬೯೫ನೇ ಇಸವಿಯ ಜಿಲ್ ಹಜ್ಜ ತಿಂಗಳ ೨೨ ನೇ ತಾರೀಕು ಆಗಿದೆ). ಸದರಿ ಸಮಾರಂಭವು ನಿರಂತರವಾಗಿ ಮೂರು ದಿನಗಳವರೆಗೆ ನಡೆಯಿತು. ಪ್ರಜೆಗಳು ಆ ಸಂತೋಷದಲ್ಲಿ ಭಾಗಿಯಾದರು ಮತ್ತು ನಗರವನ್ನು ಶೃಂಗರಿಸಿ ಶೃಂಗಾರ ವಿಲಾಸದ ಸಭೆಗಳನ್ನು ನಡೆಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ದೆಹಲಿಯ ಎಲ್ಲಾ ಬೀದಿ ಬೀದಿಗಳಲ್ಲಿಯೂ ಶರಾಬಿನ ವಿತರಣಾ ಕೇಂದ್ರಗಳನ್ನು ತೆರೆಯಲಾಯಿತು ಮತ್ತು ನಾಲ್ಕು ದಿಕ್ಕುಗಳಲ್ಲೂ ಶೃಂಗಾರ ವಿಲಾಸವು ಉಕ್ಕುತ್ತಿತ್ತು. ಅಲ್ಲಾವುದ್ದೀನನು ಕೂಡ ತೆರೆದ ಹೃದಯದಿಂದ ಈ ಶೃಂಗಾರ ವಿಲಾಸದ ಸಭೆಗಳಲ್ಲಿ ಪಾಲ್ಗೊಂಡ. ಮತ್ತು ಜನತೆಯನ್ನು ತನ್ನ ಪ್ರಭಾವ ವಲಯದೊಳಗೆ ಸೆಳೆದುಕೊಂಡ. ಅವರ ಮನಸ್ಸಿನಿಂದ ನಿರಪರಾಧಿ ಜಲಾಲುದ್ದೀನ್ ಖಿಲ್ಜಿಯ ಸಾವಿನ ಕಾರ್ಮೋಡವು ಚೆದರ ತೊಡಗಿತು. ಈ ಉತ್ಸವದ ಪ್ರಭಾವವು ತಿಳಿಯಾಗುತ್ತಿದ್ದಂತೆಯೇ ಅಲ್ಲಾವುದ್ದೀನನು ಸರ್ದಾರರು ದರ್ಬಾರಿಗಳು ಮತ್ತು ಸಂಗಡಿಗರತ್ತ ಗಮನ ಕೇಂದ್ರೀಕರಿಸಿದ. ಮತ್ತು ಅವರೆಲ್ಲರಿಗೂ ಅನೇಕ ಜವಾಬ್ದಾರಿಗಳನ್ನು ವಹಿಸಿಕೊಟ್ಟ ಮತ್ತು ಬಿರುದಾವಳಿಗಳಿಂದ ಅವರನ್ನು ಪ್ರಸನ್ನಗೊಳಿಸಿದ. ತನ್ನ ಸದ್ಗುಣಗಳಿಂದ ಮತ್ತು ಸತ್ಕರ್ಮಗಳಿಂದ ಖ್ಯಾತನಾಗಿದ್ದ ಖ್ವಾಜಾ ಕಥೀರ್‌ಗೆ ಅವನು ಹಣಕಾಸಿನ ಸಚಿವನ ಹುದ್ದೆಯನ್ನು ನೀಡಿದ ಸದರೆಜಾಹ್ ಎಂಬ ಬಿರುದಿನಿಂದ ಪ್ರಖ್ಯಾತಿಯನ್ನು ಹೊಂದಿದ್ದ ಖಾಜಿ ಸದರುದ್ದೀನನ್ನು ಮುಖ್ಯ ನ್ಯಾಯಾದೀಶ ಹಾಗೂ ಧಾರ್ಮಿಕ ಪ್ರವಚನಕಾರನನ್ನಾಗಿ ನೇಮಕ ಮಾಡಿದ. ಮತ್ತು ಅವರಿಗೆ "ಸೈಯದ್ ಅಜಲ್ ಶೇಕುಲ್ ಇಸ್ಲಾಂ" ಎಂಬ ಬಿರುದು ನೀಡಿ ಗೌರವಿಸಲಾಯಿತು. ಉಮ್‌ದತುಲ್ ಮುಲ್ಕ್, ಮುಲ್ಕ್ ಹಮೀದುದ್ದೀನ್ ಮತ್ತು ಮುಲ್ಕ್ ಐಜುದ್ದೀನ್‌ಗೆ ವಿದ್ಯಾ ಇಲಾಖೆಯನ್ನು ನೀಡಲಾಯಿತು. ಮುಲ್ಕ್ ಐಜುದ್ದೀನ್ ತನ್ನ ವೈಯಕ್ತಿಕ ವೈಶಿಷ್ಟತೆಗಳಿಂದ ತುಂಬಾ ಪ್ರವರ್ಧಮಾನಕ್ಕೆ ಬಂದಿದ್ದರಿಂದ ಅಲ್ಲಾವುದ್ದೀನ್ ಆತನನ್ನು ತನ್ನ ಆಪ್ತ ಸಲಹೆಗಾರರ ವಲಯದಲ್ಲಿ ಶಾಮೀಲು ಮಾಡಿಕೊಂಡ ನುಸರತ್‌ಖಾನ್ ನಾಯೀಬ್ ಮುಲ್ಕ್‌ರನ್ನು ನಗರದ ಕೊತ್ವಾಲನನ್ನಾಗಿ ನೇಮಕ ಮಾಡಿದ. ಫಕ್ರುದ್ದೀನ್ ಕೋಚಿ, ಜಫರ್‌ಖಾನ್ ಮತ್ತು ಮುಲ್ಕ್ ಅಬು ಜಲಾಲುದ್ದೀನನಿಗೆ ಮತ್ತು ಮುಲ್ಕ್ ಬರಂಗ್‌ಗೆ ರಾಜ್ಯದ ಅತ್ಯಂತ ಉನ್ನತ ಹುದ್ದೆಗಳಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರನ್ನಾಗಿ ನೇಮಕ

ಮಾಡಲಾಯಿತು. ಜಿಯಾಯೆ ಬರ್ನಿಯ ಚಿಕ್ಕಪ್ಪನಾದ ಮುಲ್ಕ್ ಅಲ್ಲಾವುದ್ದೀನನಿಗೆ ಕಥಾ ಮತ್ತು ಅವಧ್‌ನ ಜಹಗೀರದಾರನನ್ನಾಗಿ ಮತ್ತು ಮುಲ್ಕ್ ಜೋನಾನನ್ನು ಉಪ ವಕೀಲನನ್ನಾಗಿ ನೇಮಕ ಮಾಡಲಾಯಿತು. ಜಿಯಾಯೆ ಬರ್ನಿಗೆ ಕಸಬಾ ಬರನ್‌ನ ವಿಭಾಗದ ಉಪನಾಯಕ ಮತ್ತು ಖ್ವಾಜಾ ಆಗಿ ನೇಮಕ ಮಾಡಲಾಯಿತು.

ಜಲಾಲುದ್ದೀನನ ಸಂತತಿಯ ಅವನತಿ:

ಅಲ್ಲಾವುದ್ದೀನನು ಧಾರ್ಮಿಕ ದತ್ತಿಯಾದ ವಕ್ಫ್‌ನ ಆದಾಯವನ್ನು ಫಲಾನುಭವಿಗಳಿಗೆ ನೀಡಿ ಅವರನ್ನು ಸಂತೋಷ ಪಡಿಸಿದ. ರಾಜನ ಎಲ್ಲಾ ಪರಿವಾರದವರು ಮತ್ತು ಸೇವಕರಿಗೆ ಆರು ತಿಂಗಳ ಮುಂಗಡ ವೇತನವನ್ನು ನೀಡಿದ. ಅಲ್ಲದೆ ಅವರುಗಳಿಗೆ ಅನೇಕಾನೇಕ ಇನಾಮುಗಳನ್ನು ನೀಡಲಾಯಿತು. ಈ ಎಲ್ಲಾ ಕೆಲಸ ಕಾರ್ಯಗಳಿಂದ ಬಿಡುಗಡೆ ಹೊಂದಿದ ನಂತರ ಅಲ್ಲಾವುದ್ದೀನನು ಜಲಾಲುದ್ದೀನ್ ಖಿಲ್ಜಿಯ ಸಂತತಿಯ ವಿನಾಶದತ್ತ ಗಮನವನ್ನು ಕೇಂದ್ರೀಕರಿಸಿದ ಹಾಗೂ ಅಲ್ಮಾಸ್‌ಬೇಗ್ ಮತ್ತು ಮುಲ್ಕ್ ಜಫರ್‌ಖಾನ್ ೬೯೫ನೇ ಇಸವಿಯ ಜಿಲ್ ಹಜ್ಜ ತಿಂಗಳ ೧೯ನೇ ತಾರೀಕಿನಂದು ನಲವತ್ತು ಸಾವಿರ ಸವಾರರಿಂದ ಕೂಡಿದ ಸೈನ್ಯದೊಡನೆ ಮುಲ್ತಾನ್‌ನತ್ತ ಹೊರಡಿಸಿದ. ಆ ಸರ್ದಾರರು ಮುಲ್ತಾನ್ ತಲುಪಿ ಆ ಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿದರು. ಎರಡು ತಿಂಗಳವರೆಗೆ ಈ ಮುತ್ತಿಗೆ ನಡೆಯಿತು. ತದ ನಂತರ ಮುಲ್ತಾನ್‌ನ ಸಮಸ್ತರು ಮತ್ತು ಮುಲ್ತಾನಿ ಸೈನ್ಯವು ಅರ್ಕಲಿಖಾನ್ ಮತ್ತು ರುಕ್ನುದ್ದೀನನ ಸಂಗವನ್ನು ತೊರೆದು ಅಲ್ಲಾವುದ್ದೀನನ ಸರ್ದಾರರ ಜೊತೆಯಲ್ಲಿ ಸೇರಿಕೊಂಡರು ಈ ಬೆಳವಣಿಗೆಯಿಂದ ಅರ್ಕಲಿಖಾನ್ ಮತ್ತು ರುಕ್ನುದ್ದೀನ್ ತುಂಬಾ ಭಯಬೀತರಾದರು. ಮತ್ತು ಆ ಇಬ್ಬರು ಸಹೋದರರು ಅಸಹಾಯಕರಾಗಿ ಹಜರತ್ ಶೇಖ್ ರುಕ್ನುದ್ದೀನ್‌ರವರ ಮಧ್ಯಸ್ಥಿಕೆಯ ಮೂಲಕ ಅಲ್ಮಾಸ್‌ಬೇಗ್‌ನಿಂದ ತಮ್ಮ ರಕ್ಷಣೆಯ ವಾಗ್ದಾನದ ಕರಾರನ್ನು ಪಡೆದುಕೊಂಡು ಅವನನ್ನು ಭೇಟಿಯಾದರು. ಅಲ್ಮಾಸ್‌ಬೇಗನು ಆ ಉಭಯ ಸಹೋದರರನ್ನು ಗೌರವಾದರಗಳಿಂದ ಕಂಡು ತನ್ನ ಆಸ್ಥಾನದಲ್ಲಿ ತನ್ನ ಆಸನದ ಬಳಿ ಅವರಿಗೆ ಆಸನವನ್ನು ನೀಡಿದ. ಇದರ ನಡುವೆ ಅಲ್ಮಾಸ್‌ಬೇಗನು ತನ್ನ ವೇಗಿ ಸಂದೇಶವಾಹಕರೊಡನೆ ವಿಜಯದ ಓಲೆಯನ್ನು ಅಲ್ಲಾವುದ್ದೀನನ ಬಳಿ ಕಳಿಸಿಕೊಟ್ಟ. ಈ ವಿಜಯದ ಓಲೆಯನ್ನು ದೆಹಲಿಯ ಎಲ್ಲಾ ಮಸೀದಿಗಳಲ್ಲಿ ಓದಿ ಹೇಳಲಾಯಿತು ಮತ್ತು ಇಡೀ ಪಟ್ಟಣವನ್ನು ವಧುವಿನಂತೆ ಸಿಂಗರಿಸಿ ಸಂತೋಷವನ್ನು ಆಚರಿಸಲಾಯಿತು. ವಿಜಯದ ಓಲೆಯನ್ನು ದೆಹಲಿಗೆ ಕಳುಹಿಸಿದ ನಂತರ ಅಲ್ಮಾಸ್‌ಬೇಗ್ ಜಲಾಲುದ್ದೀನ್ ಖಿಲ್ಜಿಯ ಕುಟುಂಬದವರು ಮತ್ತು ಸರ್ದಾರರೊಂದಿಗೆ ದೆಹಲಿಗೆ ಹೋದ. ಮಾರ್ಗ ಮಧ್ಯದಲ್ಲಿ ಆ ತಂಡದೊಂದಿಗೆ ಮುಲ್ಕ್ ನುಸರತುದ್ದೀನ್ ಕೊತ್ವಾಲ್ ಕೂಡ ಬಂದು ಸೇರಿಕೊಂಡ. ಅವನನ್ನು ದೆಹಲಿಯಿಂದ ಕಳುಹಿಸಿಕೊಡಲಾಗಿತ್ತು. ಅಲ್ಮಾಸ್‌ಬೇಗನು ಜಲಾಲುದ್ದೀನ್ ಖಿಲ್ಜಿಯ ಪುತ್ರರು ಮತ್ತು ಅಳಿಯನಾದ ಅಲಘ್‌ಖಾನ್ (ಇವನು

ಚೆಂಗೇಸ್‌ಖಾನನ ಮಗಳ ಮಗ) ರವರ ಕಣ್ಣುಗಳಲ್ಲಿ ಕಬ್ಬಿಣದ ಸೂಜಿಗಳನ್ನು ತೂರಿ, ಅವರನ್ನು ಅಂಧರನ್ನಾಗಿ ಮಾಡಲಾಯಿತು. ಮುಲ್ಕ್ ಅಹಮದ್ ಹಬೀಬ್ ಉಪ ಸಿಬ್ಬಂದಿ ಸಚಿವನ ಜೊತೆಯಲ್ಲಿಯೂ ಹೀಗೆಯೇ ನಡೆದುಕೊಳ್ಳಲಾಯಿತು. ಮುಲ್ಕ್ ನುಸರತ್ ಆ ಜನರ ಎಲ್ಲಾ ಸಂಪತ್ತು ಮತ್ತು ಸಾಮಗ್ರಿಗಳನ್ನು ತನ್ನ ವಶಕ್ಕೆ ಪಡೆದುಕೊಂಡ ಮತ್ತು ಜಲಾಲುದ್ದೀನನ ಇಬ್ಬರು ನಿರಪರಾಧಿ ಪುತ್ರರನ್ನು ಕೂಡ ಹಾಂಸಿಯ ಕೋಟೆಯಲ್ಲಿ ಸೆರೆಮನೆಗೆ ಅಟ್ಟಿದ. ಅರ್ಕಲಿಖಾನನ ಇಬ್ಬರು ಪುತ್ರರ ಕೊಲೆ ಮಾಡಿದ. ಮುಲ್ಕ್ ಅಹಮದ್ ಹಬೀಬ್, ಜಲಾಲುದ್ದೀನ್ ಖಿಲ್ಜಿ ಮೊದಲಾದವರ ಪತ್ನಿಯರು ಮತ್ತು ಸೊಸೆಯಂದಿರನ್ನು ರಾಣಿ ಜಹಾನ್‌ಳ ಸಮೇತ ಬಂಧಿಸಿ ದೆಹಲಿಯ ಕಾರಾಗೃಹದಲ್ಲಿ ಇಡಲಾಯಿತು.

ತನ್ನ ಪಟ್ಟಾಭಿಷೇಕವಾದ ಎರಡು ವರ್ಷಗಳ ನಂತರ ಅಲ್ಲಾವುದ್ದೀನನು ಮುಲ್ಕ್ ನುಸರತ್ ಖಾನ್‌ನನ್ನು ಮಂತ್ರಿಯನ್ನಾಗಿ ನೇಮಕ ಮಾಡಿದ. ಮುಲ್ಕ್ ನುಸರತ್‌ಖಾನ್ ಈ ಹುದ್ದೆಯಲ್ಲಿ ನಿಯುಕ್ತಿಗೊಂಡ ಕೂಡಲೇ ಜಲಾಲುದ್ದೀನ್ ಖಿಲ್ಜಿಯ ಸರ್ದಾರರು ಮತ್ತು ಆಸ್ಥಾನಿಕರಿಗೆ ಅಲ್ಲಾವುದ್ದೀನ್ ತನ್ನ ರಾಜ್ಯಭಾರದ ಆರಂಭದಲ್ಲಿ ರಾಜಕೀಯ ಉದ್ದೇಶದ ಸಲುವಾಗಿ ದೆಹಲಿಯ ಕಡೆ ಬರುತ್ತಿದ್ದ ಜನರ ನಡುವೆ ವಿತರಣೆ ಮಾಡಿದ್ದ ಎಲ್ಲಾ ಸಂಪತ್ತು ಮತ್ತು ಐಶ್ವರ್ಯವನ್ನು ಕೈದುಗೊಳಿಸಿ ತನ್ನ ವಶಕ್ಕೆ ಮರಳಿ ಪಡೆದುಕೊಂಡ. ಆ ಎಲ್ಲಾ ಸಂಪತ್ತನ್ನು ಒಟ್ಟುಗೂಡಿಸಿ ಬಾದಶಹನ ಖಜಾನೆಯಲ್ಲಿ ಜಮಾ ಮಾಡಲಾಯಿತು. ಮುಲ್ಕ್ ಅಲ್ಲಾವುದ್ದೀನನು ಕಥಾದಿಂದ ಅಲ್ಲಾವುದ್ದೀನ್ ಖಿಲ್ಜಿಯ ಸಕಲ ಸಂಪತ್ತನ್ನು ದೆಹಲಿಗೆ ತಂದ. ಅವನಿಗೆ ಜಲಾಲುದ್ದೀನ್ ಮುಲ್ಕ್ ಎಂಬ ಬಿರುದನ್ನು ನೀಡಲಾಯಿತು ಮತ್ತು ದೆಹಲಿಯ ಕೊತ್ವಾಲನನ್ನಾಗಿ ನೇಮಕ ಮಾಡಲಾಯಿತು.

ಮೊಘಲರ ಆಕ್ರಮಣ:

ಅದೇ ವರ್ಷದಲ್ಲಿ ಮಾವರ ಉನ್ನಹರ್ ಒಡೆಯನಾದ ವಿದಾಖಾನನು ಒಂದು ಲಕ್ಷ ಮೊಘಲ್ ಸಿಪಾಯಿಗಳಿಂದ ಕೂಡಿದ ಸೈನ್ಯವನ್ನು ಹಿಂದೂಸ್ತಾನದತ್ತ ಕಳಿಸಿದ. ಪಂಜಾಬ್ ಮತ್ತು ಲಾಹೋರನ ವಿಜಯ ಅವರ ಗುರಿಯಾಗಿತ್ತು ಮೊಗಲರ ಆ ಬಲಾಢ್ಯ ಸೈನ್ಯವು ಸಿಂಧ್ ನದಿಯನ್ನು ದಾಟಿ ಲೂಟಿ ಮತ್ತು ಕೊಳ್ಳೆ ಹೊಡೆಯಲಾರಂಭಿಸಿತು. ಮತ್ತು ಅವರು ಆ ಸಂಪೂರ್ಣ ಪ್ರದೇಶವನ್ನು ನಾಶ ಮಾಡತೊಡಗಿದರು. ಅಲ್ಲಾವುದ್ದೀನನಿಗೆ ಈ ಸಂಗತಿ ತಿಳಿದು ಬಂದಾಗ ಅವನು ಅಲ್ಮಾಸ್‌ಬೇಗ್ ಮತ್ತು ಜಫರ್‌ಖಾನನ ನೇತೃತ್ವದಲ್ಲಿ ಅತಿ ದೊಡ್ಡ ಸೈನ್ಯವನ್ನು ಕಳುಹಿಸಿ ಮೊಘಲರ ದಮನ ಮಾಡಬೇಕೆಂಬ ಆಜ್ಞೆಯನ್ನು ನೀಡಿದ. ಲಾಹೋರನ ಹದ್ದುಬಸ್ತಿನಲ್ಲಿ ಆ ಉಭಯ ಸೈನ್ಯಗಳ ನಡುವೆ ಜಿದ್ದಾಜಿದ್ದಿ ಯುದ್ಧ ನಡೆಯಿತು ಮತ್ತು ಮೊಘಲರಿಗೆ ಸೋಲುಂಟಾಯಿತು. ಮೊಗಲರ ಸೈನ್ಯದ ಹನ್ನೆರಡು ಸಾವಿರ ಸೈನಿಕರು ಕೊಲೆಯಾದರು

ಮತ್ತು ಬಹುತೇಕ ಮೊಘಲ್ ಸರ್ದಾರರು ಸೆರೆಸಿಕ್ಕರು. ಆ ಖೈದಿಗಳಿಗೆ ಚಿತ್ರಹಿಂಸೆಯನ್ನು ನೀಡಿ ಕೊಲೆ ಮಾಡಲಾಯಿತು. ಅಲಫ್‌ಖಾನನು ಆ ಸರ್ದಾರರ ಕಡಿದ ತಲೆಗಳನ್ನು ಮತ್ತು ಅವರ ಪತ್ನಿಯರು ಮತ್ತು ಮಕ್ಕಳನ್ನು ದೆಹಲಿಗೆ ಕಳುಹಿಸಿದ.

ಜಲಾಲುದ್ದೀನನ ಸರದಾರ ಮೇಲೆ ಘೋರ ಶಿಕ್ಷೆ:

ಜಲಾಲುದ್ದೀನ್ ಖಿಲ್ಜಿಯ ಪುತ್ರರ ಸೆರೆ ಹಾಗೂ ಮೊಘಲರ ಸೋಲಿನ ದೆಸೆಯಿಂದ ಅಲ್ಲಾವುದ್ದೀನನ ಮನ್ನಣೆ ಹೆಚ್ಚಿತು. ಮತ್ತು ಅವನ ಪ್ರತಾಪದ ಹೆಗ್ಗುರುತು ಎಲ್ಲರ ಮನದಲ್ಲಿ ಮನೆ ಮಾಡಿತು. ಸುತ್ತಮುತ್ತ ಪ್ರದೇಶದ ಸರ್ದಾರರು ಮತ್ತು ಇತರೆ ಪ್ರಾಂತ್ಯಗಳ ಒಡೆಯರು ಅವನ ಹೆಸರು ಮಾತ್ರದಿಂದಲೇ ಕಂಪಿಸತೊಡಗಿದರು. ಅಲ್ಲಾವುದ್ದೀನ್ ಸೈನ್ಯ ಎತ್ತಮುಖ ಮಾಡಿದರೂ ಅವನಿಗೆ ವಿಜಯಮಾಲೆ ಪ್ರಾಪ್ತಿಯಾಗುತ್ತಿತ್ತು. ತದ ನಂತರ ತನ್ನ ಸಹೋದರನಾದ ಅಲಫ್‌ಖಾನನ ಸಲಹೆಯ ಮೇರೆಗೆ ಜಲಾಲುದ್ದೀನ್ ಖಿಲ್ಜಿಯು ಹಿಂದಿನ ಎಲ್ಲಾ ಸರ್ದಾರರು ಮತ್ತು ಗಣ್ಯರ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದ. ಅವರುಗಳು ದುರಾಸೆ ಮತ್ತು ದುರ್ಲಾಭದಿಂದ ಪ್ರೇರಿತರಾಗಿ ಜಲಾಲುದ್ದೀನ್ ಖಿಲ್ಜಿಯ ಪುತ್ರರೊಂದಿಗೆ ವಿಶ್ವಾಸಘಾತಕತನವನ್ನು ಎಸಗಿದ್ದು, ತಮ್ಮ ಸ್ವಾರ್ಥಸಾಧನೆಗಾಗಿ ಪರಲೋಕ ಮತ್ತು ಇಹಲೋಕ ಎರಡನ್ನು ಕೂಡ ನಾಶ ಮಾಡಿಕೊಂಡಿದ್ದರು. ಅಂತಹ ಎಲ್ಲ ವಿಶ್ವಾಸದ್ರೋಹಿ ಸರ್ದಾರರನ್ನು ಬಂಧಿಸಲಾಯಿತು. ಬಹುತೇಕ ಬಂಧಿತರ ಕಣ್ಣುಗಳಲ್ಲಿ ಕಾದ ಸೂಜಿಗಳನ್ನು ತೂರಿಸಲಾಯಿತು. ಮತ್ತು ಇನ್ನೂ ಅನೇಕ ಜನರನ್ನು ವಿವಿಧ ಕೋಟೆಗಳಲ್ಲಿ ಸೆರೆಮನೆಯಲ್ಲಿಡಲಾಯಿತು. ಆ ಎಲ್ಲಾ ಸರ್ದಾರರ ಐಶ್ವರ್ಯವನ್ನು ಸರ್ಕಾರಕ್ಕೆ ವಶಪಡಿಸಿಕೊಂಡು ಸುಮಾರು ಒಂದು ಕೋಟಿ ರೂಪಾಯಿಗಳನ್ನು ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಲಾಯಿತು. ಜಲಾಲುದ್ದೀನ್ ಖಿಲ್ಜಿಯ ಸರ್ದಾರರುಗಳ ಪೈಕಿ ಮುಲ್ಕ್ ಖುತ್ಬುದ್ದೀನ್ ಅಲ್ವಿ, ಮುಲ್ಕ್ ನಸೀರುದ್ದೀನ್, ಶಮಂದ ಮಲ್‌ಪಲ್, ಮುಲ್ಕ್ ಜಲಾಲುದ್ದೀನ್‌ರವರ ಮೇಲೆ ಯಾವುದೇ ಕ್ರಮವನ್ನು ಜರುಗಿಸಲಿಲ್ಲ. ಏಕೆಂದರೆ ಆ ಸರ್ದಾರಗಳು ಜಲಾಲುದ್ದೀನ್ ಖಿಲ್ಜಿಯ ಪುತ್ರರೊಂದಿಗೆ ಯಾವುದೇ ವಿಶ್ವಾಸಘಾತಕತನವನ್ನು ಎಸಗಿರಲಿಲ್ಲ ಮತ್ತು ಅಲ್ಲಾವುದ್ದೀನ್‌ನಿಂದ ಈ ಬಗ್ಗೆ ಯಾವುದೇ ಪ್ರತಿಫಲ ಅಥವಾ ಸಂಭಾವನೆಯನ್ನು ಪಡೆದಿರಲಿಲ್ಲ. ಈ ಮೂವರು ಸರ್ದಾರರು ಕೂಡ ಆಜೀವ ಪರ್ಯಂತ ಗೌರವ ಮತ್ತು ನೆಮ್ಮದಿಯಿಂದ ಬದುಕಿದರು.

ಗುಜರಾತ್‌ನ ಮೇಲೆ ವಿಜಯ:

ಹಿಜರಿ ಶಕೆ ೬೯೦ನೇ ಇಸವಿಯ ಆರಂಭದಲ್ಲಿ ಅಲ್ಲಾವುದ್ದೀನನು ಅಲ್ಮಾಸ್‌ಬೇಗ್ ಮತ್ತು ನುಸರತ್‌ಖಾನ್‌ರವರ ಆಧಿಪತ್ಯದಲ್ಲಿ ಇತರೆ ಅನೇಕ ದೆಹಲಿಯ ಸರ್ದಾರರು ಮತ್ತು ಸಿಂಧಿ ಸೈನ್ಯದೊಂದಿಗೆ ಗುಜರಾತನ್ನು ಮಣಿಸಲು ಯುದ್ಧದ ಸಲುವಾಗಿ

ಕಳಿಸಿಕೊಟ್ಟ. ಅವರುಗಳು ನೆಹರ್‌ವಾಲ ಮತ್ತು ಗುಜರಾತ್‌ನ ಸಂಪೂರ್ಣ ಪ್ರದೇಶದ ವಿನಾಶಗೈದು ಆ ಪ್ರದೇಶಗಳನ್ನು ಗೆದ್ದುಕೊಂಡರು. ನೆಹರ್‌ವಾಲದ ಒಡೆಯನಾದ ರಾಜ ರಾಯಕರಣ್, ದಖ್ಖನ್ನಿನ ಒಡೆಯನಾದ ರಾಜ ರಾಮದೇವನ ಬಳಿ ಶರಣಾಗತನಾದ. ಕೆಲವು ದಿನಗಳ ನಂತರ ರಾಯಕರಣ್, ರಾಮದೇವನ ನೆರವಿನಿಂದ ಗುಜರಾತ್‌ನ ಒಂದು ವಿಭಾಗವಾದ ಬಕಲಾನದಲ್ಲಿ ನೆಲೆ ನಿಂತ. (ಬಕಲಾನ ನಾಸಿಕ್ ಜಿಲ್ಲೆಯ ಒಂದು ಭಾಗವಾಗಿದೆ. ಆ ದಿನಗಳಲ್ಲಿ ಈ ಪ್ರದೇಶವು ಗುಜರಾತ್‌ನಲ್ಲಿ ಸೇರಿಕೊಂಡಿತ್ತು) ಈ ವಿಭಾಗವು ಗುಜರಾತ್ ಮತ್ತು ದಕ್ಷಿಣದ ಗಡಿಭಾಗದಲ್ಲಿದೆ. ಅಲ್ಲಾವುದ್ದೀನ್ ಖಿಲ್ಜಿಯ ಸರ್ದಾರರು ರಾಜ ರಾಯೆಕರಣ್‌ನ ರಾಣಿಯರನ್ನು (ಇವರ ಪೈಕಿ ಬಹಳ ಮುಖ್ಯವಾದ ರಾಣಿಯೆಂದರೆ ಕಮಲಾದೇವಿ ಆಗಿದ್ದಳು) ಮತ್ತು ಅವನ ಖಜಾನೆ ಮತ್ತು ಆನೆಗಳು ವಗೈರೆಯನ್ನು ವಶಪಡಿಸಿಕೊಂಡರು. ಗುಜರಾತ್‌ನಲ್ಲಿ ಒಂದು ಪ್ರಖ್ಯಾತ ವಿಗ್ರಹವಿತ್ತು ಅದು ಸೋಮನಾಥನ ಹೆಸರನ್ನೇ ಹೊಂದಿದ್ದು ಅಂತಹದೇ ವೈಶಿಷ್ಟ ಹೊಂದಿದೆ ಎಂದು ಹೇಳಲಾಗುತ್ತದೆ. ಮುಸಲ್ಮಾನರು ಆ ವಿಗ್ರಹವನ್ನು ದೆಹಲಿಗೆ ಕಳಿಸಿದರು. ಮುಲ್ಕ್ ನುಸರತ್‌ಖಾನನು ಗುಜರಾತ್‌ನಿಂದ ಮರಳುತ್ತಾ ಕಂಪಾಯತ್ ತಲುಪಿದ ಮತ್ತು ಆ ಪ್ರದೇಶದ ನಿವಾಸಿಗಳಿಂದ ಅಪಾರ ಸಂಪತ್ತನ್ನು ವಶಪಡಿಸಿಕೊಂಡ. ಹಾಗೂ ಅವನು ಮಲ್ಲಿಕ್ ಕಾಫುರ್ ಹಜಾರ್ ದಿನಾರಿಯನ್ನು ಅವನ ಒಡೆಯನಿಂದ ಒತ್ತಾಯಪೂರ್ವಕವಾಗಿ ಕಸಿದುಕೊಂಡ (ಮಲ್ಲಿಕ್ ಕಾಫೂರ್‌ನನ್ನು ನಂತರ ಅಲ್ಲಾವುದ್ದೀನ್ ನಾಯಿಬ್‌ಉಲ್ ಮುಲ್ಕ್ ಹುದ್ದೆ ಪ್ರದಾನ ಮಾಡಿದ್ದು ಮುಲ್ಕ್ ನಾಯೀಬನ ಬಿರುದನ್ನು ನೀಡಿದ್ದ.) ಈ ಎಲ್ಲಾ ಕರ್ತವ್ಯಗಳನ್ನು ನಿರ್ವಹಣೆ ಮಾಡಿದ ಅಲ್ಮಾಸ್‌ಬೇಗ್ ಮತ್ತು ಮುಲ್ಕ್ ನುಸರತ್ ಇಬ್ಬರು ಕೂಡ ನಾಶವಾದ ಗುಜರಾತ್‌ನ್ನು ಕೆಲವು ನಂಬಿಗಸ್ತ ಸರ್ದಾರರ ವಶಕ್ಕೆ ನೀಡಿ ಸ್ವತಃ ಅಗಣಿತ ಚಿನ್ನ, ವಜ್ರ, ವೈಡೂರ್ಯ ಮೊದಲಾದ ಯುದ್ಧ ಸಂಪತ್ತಿನೊಡನೆ ಮರಳಿದರು.

ಮುಸ್ಲಿಮ್ ಮೊಘಲರ ವಿದ್ರೋಹ ಬಾದಶಹನ ಸೈನ್ಯದಲ್ಲಿ ಬಿರುಕು:

ಈ ಸರ್ದಾರರು ಜಾಲೂರ್ ಕೋಟೆಯ ಬಳಿ ತಲುಪಿದಾಗ ಅವರು ತಮ್ಮ ಸೈನಿಕರಿಗೆ ಯುದ್ಧ ಸಂಪತ್ತಿನ ೧/೫ ಭಾಗವನ್ನು ಪಡೆದುಕೊಳ್ಳುವಲ್ಲಿ ಅಡ್ಡಿ ಮಾಡಿದರು. (ಜಾಲೂರ್ ಎಂಬುದು ಪಶ್ಚಿಮ ರಾಜಪುತಾನೆಯ ಪ್ರಖ್ಯಾತ ವಿಭಾಗವಾಗಿದ್ದು ಹಿಂದೂಸ್ಥಾನದ ರಾಜ್ಯವಾದ ಜೋಧ್‌ಪುರದಲ್ಲಿ ಸೇರಿದೆ) ಅಲ್ಮಾಸ್‌ಬೇಗ್ ಮತ್ತು ಮುಲ್ಕ್ ನುಸರತ್ ಇಬ್ಬರು ಈ ವಿಷಯದಲ್ಲಿ ಅತ್ಯಂತ ಕಠಿಣ ನಿಲುವನ್ನು ತಳೆದರು. ಈ ಕಾರಣದಿಂದ ಅನೇಕ ನವ ಮುಸ್ಲಿಂ ಮೊಘಲ್ ಸೈನಿಕರು ತಮ್ಮ ಸರ್ದಾರನಾದ ಮೊಹಮದ್ ಶಾಹನ ನೇತೃತ್ವದಲ್ಲಿ ಒಟ್ಟುಗೂಡಿದರು ಹಾಗೂ ಅತ್ಯಂತ ಕೋಪೋದ್ರಿಕ್ತರಾದರು. ಅವರುಗಳು ಸೈನ್ಯದ ಇತರೆ ಸೈನಿಕರನ್ನು ತಮ್ಮ ಸಹಮತಕ್ಕೆ ಬರುವಂತೆ ಒಲಿಸಿಕೊಂಡು ಸಾಕಷ್ಟು ಶಕ್ತಿಯನ್ನು ಕ್ರೋಡಿಕರಿಸಿಕೊಂಡು ಮುಲ್ಕ್

ನುಸರತ್ ಮತ್ತು ಐಜುದ್ದೀನ್ ಬರ್ ಹಾಗೂ ಅಲ್ಮಾಸ್‌ಬೇಗ್‌ನ ಮೇಲೆ ಆಕ್ರಮಣ ಮಾಡಿದರು. ಮೊಘಲರು ಐಜುದ್ದೀನನ ಕೊಲೆಯನ್ನು ಮಾಡಿದ ನಂತರ ಅಲ್ಮಾಸ್‌ಬೇಗನ ಡೇರೆಯತ್ತ ನುಗ್ಗಿದರು. ಅವನ ಅದೃಷ್ಟ ಚೆನ್ನಾಗಿತ್ತು ಮತ್ತು ಬದುಕಿ ಉಳಿಯಬೇಕೆಂಬುದು ದೇವರ ಇಚ್ಛೆಯಾಗಿತ್ತು ಹೀಗಾಗಿ ಅವನು ಡೇರೆಯ ಇನ್ನೊಂದು ಭಾಗದಿಂದ ಹೊರಗೋಡಿದ ಮತ್ತು ನುಸರತ್‌ಖಾನನ ಡೇರೆಯನ್ನು ತಲುಪಿದ. ವಿದ್ರೋಹಿಗಳು ಅಲ್ಲಾವುದ್ದೀನನ ಸೋದರಳಿಯನನ್ನು ಅಲ್ಮಾಸ್‌ಬೇಗ್ ಎಂದು ತಪ್ಪಾಗಿ ತಿಳಿದು ಅವನ ಕೊಲೆ ಮಾಡಿದರು. ಮುಲ್ಕ್ ನುಸರತ್‌ನು ಈ ಪರಿಸ್ಥಿತಿಯನ್ನು ಕಂಡ ಕೂಡಲೇ ಯುದ್ಧದ ನಗಾರಿಯನ್ನು ಮೊಳಗಿಸಿದ. ನಗಾರಿಯ ಸದ್ದನ್ನು ಕೇಳಿದೊಡನೆಯೇ ಇಡೀ ಸೈನ್ಯವು ಜಾಲೂರ್‌ನ ರಾಜ ಅಥವಾ ಇನ್ನು ಬೇರೆ ಯಾವುದೋ ಶತ್ರು ತಮ್ಮ ಮೇಲೆ ಆಕ್ರಮಣ ಮಾಡಿದ್ದಾನೆ ಎಂದು ಗ್ರಹಿಸಿದರು. ಆ ಸೈನ್ಯವು ಮೇಲ್ಕಂಡಂತೆ ಆಲೋಚಿಸಿ ತತ್‌ಕ್ಷಣವೇ ಯುದ್ಧದ ತಯಾರಿಯನ್ನು ಮಾಡಿಕೊಂಡಿದ್ದು ಇಡೀ ಸೈನ್ಯವು ವಿದ್ರೋಹಿಗಳ ಹುಟ್ಟಡಗಿಸಲು ನುಸರತ್‌ಖಾನನ ಡೇರೆಯತ್ತ ಓಡಿದರು. ವಿದ್ರೋಹಿಗಳು ಚೆಲ್ಲಾಪಿಲ್ಲಿಯಾಗಿ ಪರಾರಿಯಾದರು. ಮುಲ್ಕ್ ನುಸರತ್ ಮತ್ತು ಅಲ್ಮಾಸ್ ಅವರ ಬೆನ್ನಟ್ಟಿದರು. ಅವರು ಹಿಂಬಾಲಿಸಿದ್ದರಿಂದ ತೀವ್ರವಾಗಿ ಕಂಗೆಟ್ಟ ಆ ವಿದ್ರೋಹಿಗಳು ಕೆಲದಿನಗಳ ನಂತರ ರಣಥಂಬೂರ್‌ನ ರಾಜನಾದ ಹಮೀರ್‌ದೇವನ (ಈತ ಅಜ್ಮೀರ್‌ನ ರಾಜನಾದ ನಥುರಾಯನ ಮೊಮ್ಮಗನಾಗಿದ್ದ) ಬಳಿ ಶರಣಾದರು. ಅಲ್ಮಾಸ್‌ಬೇಗ್ ಮತ್ತು ನುಸರತ್ ಬೇಗ್ ಕೂಡ ಇನ್ನು ಆ ವಿದ್ರೋಹಿಗಳ ಬೆನ್ನಟ್ಟುವುದು ಸೂಕ್ತವಲ್ಲವೆಂದು ನಿರ್ಧರಿಸಿ ಯುದ್ಧ ಸಂಪತ್ತು, ಆನೆಗಳು ಮತ್ತು ಖೈದಿಗಳನ್ನು ಜೊತೆಯಲ್ಲಿ ಕರೆದುಕೊಂಡು ದೆಹಲಿಗೆ ಪ್ರಯಾಣ ಬೆಳೆಸಿದರು.

ಅಮಾನವೀಯ ಸಜೆಗಳು :

ಅಲ್ಲಾವುದ್ದೀನನು ರಾಜ ರಾಯೆಕರಣ್‌ನ ರಾಣಿಯಾದ ಕಮಲಾದೇವಿಯ ಮೇಲೆ ಮೋಹಿತನಾದ. ಆಕೆ ಸುಂದರಿಯಾಗಿದ್ದು, ಸುಸಂಸ್ಕೃತ ನಡವಳಿಕೆಯನ್ನು ಹೊಂದಿದ್ದು ಮಧುರ ಭಾಷಿಣಿ ಮತ್ತು ಗುಣಸಂಪನ್ನಳಾಗಿದ್ದಳು. ಅಲ್ಲಾವುದ್ದೀನನು ಅವಳನ್ನು ಮುಸ್ಲಿಮ್ ಆಗಿ ಮತಾಂತರಗೊಳಿಸಿ ಅವಳೊಡನೆ ವಿವಾಹ ಮಾಡಿಕೊಂಡ. ಮಲ್ಲಿಕಾಫರ್‌ಹಜಾರ್ ದಿನಾರಿಯು ಅಲ್ಲಾವುದ್ದೀನನಿಗೆ ತುಂಬಾ ಪ್ರಿಯವಾದ. ಮತ್ತು ಅವನು ಆ ಗುಲಾಮನ ಪ್ರೀತಿಯಲ್ಲಿ ಎಷ್ಟೊಂದು ವಿವಶನಾದನೆಂದರೆ, ಅವನೆದುರಿಗೆ ಆ ಗುಲಾಮನ ಪ್ರತಿಯಾಗಿ ಇಡೀ ವಿಶ್ವವೇ ತೃಣ ಸಮಾನವಾಗಿತ್ತು. ಅವನ ಪ್ರೇಮಪಾಶದಲ್ಲಿ ಸಿಲುಕಿ ಅಲ್ಲಾವುದ್ದೀನನು ವಿವೇಕ ಮತ್ತು ವಿವೇಚನೆಯನ್ನು ಕಳೆದುಕೊಂಡ ಹಾಗೂ ಧರ್ಮದ ಕಟ್ಟುಪಾಡುಗಳನ್ನು ಕೂಡ ಲೆಕ್ಕಿಸಲಿಲ್ಲ. ಅಲ್ಲಾವುದ್ದೀನನು ಜಾಲೂರಿನ ಮೊಘಲ್ ವಿದ್ರೋಹಿಗಳನ್ನು ಕೂಡ ಸೆರೆ ಹಿಡಿದ

ಮತ್ತು ಅವರಿಗೆ ಸಜೆಯನ್ನು ನೀಡಲು ಮುಲ್ಕ್ ನುಸರತ್‌ನ ವಶಕ್ಕೆ ನೀಡಿದ. ಮುಲ್ಕ್ ನುಸರತ್‌ನು ತನ್ನ ಸಹೋದರನ ಕೊಲೆಗಾರರ ವಿರುದ್ಧ ಅತ್ಯಂತ ಕ್ರೂರ ರೀತಿಯಲ್ಲಿ ಸೇಡನ್ನು ತೀರಿಸಿಕೊಂಡ. ಅವರುಗಳ ಹೆಂಗಸರು ಮತ್ತು ಮಕ್ಕಳನ್ನು ಪೌರ ಕಾರ್ಮಿಕರ ವಶಕ್ಕೆ ನೀಡಿದ. ಅವರ ಹಾಲೂಡುವ ಶಿಶುಗಳನ್ನು ಅವರ ತಾಯಂದಿರು ಮತ್ತು ಸಹೋದರಿಯರ ತಲೆಗಳ ಮೇಲೆ ಕಲ್ಲಿನೋಪಾದಿಯಲ್ಲಿ ಹೊಡೆದು, ಆ ಮಕ್ಕಳು ಸಾಯುವವರೆಗೂ ಹೊಡೆಯುವಂತೆ ಆಜ್ಞೆ ಮಾಡಿದ. ಅವನ ಆಜ್ಞೆಯನ್ನು ಪಾಲಿಸಲಾಯಿತು ಮತ್ತು ಆ ಮಕ್ಕಳು ಹಿಂಜಿದ ಅರಳೆಯಂತೆ ಛಿದ್ರ ಛಿದ್ರವಾಗಿ ಮರಣವನ್ನು ಅಪ್ಪಿದರು. ನಂತರ ಆ ಮಹಿಳೆಯರನ್ನು ಮಾರುಕಟ್ಟೆಯಲ್ಲಿ ಅತ್ಯಂತ ಅಶ್ಲೀಲವಾಗಿ ನಡೆಸಿಕೊಂಡು ಅವರನ್ನು ಹಿಂದೂಗಳ ವಶಕ್ಕೆ ಒಪ್ಪಿಸಲಾಯಿತು. ಅಲ್ಲಿಯವರೆಗೆ ದೆಹಲಿಯಲ್ಲಿ, ಅಪರಾಧಿಗಳ ಸಂಬಂಧಿಗಳಿಗೆ ಸಜೆ ನೀಡುವ ಪದ್ಧತಿಯು ಇರಲಿಲ್ಲ.

ಸೇವಸ್ಥಾನಿನ ಮೇಲೆ ಆಕ್ರಮಣ:

ಅದೇ ವರ್ಷದಲ್ಲಿ ಸೈನ್ಯವು ದೆಹಲಿ, ಗುಜರಾತ್ ಮೊದಲಾದವುಗಳ ವಿಜಯ ಪ್ರಾಪ್ತಿಯಲ್ಲಿ ತೊಡಗಿದ್ದಾಗ ಖಿಲ್ಜಿ ಎಂಬ ಹೆಸರಿನ ಒಬ್ಬ ಮೊಘಲನು ತನ್ನ ಸಹೋದರನ ನೆರವಿನಿಂದ ಸೇವಸ್ಥಾನವನ್ನು ಆಕ್ರಮಿಸಿಕೊಂಡ. (ಸೇವಸ್ಥಾನ ಅಂದರೆ ಸಿಂಧ್‌ನ ಭಾಗವಾದ ಸೆಹವಾನ್) ಅಲ್ಲಾವುದ್ದೀನನು ತುಂಬಾ ವೈಭವ ಮತ್ತು ಅದ್ಧೂರಿತನದಿಂದ ಆತನನ್ನು ದಮನ ಮಾಡಲು ಜಫರ್‌ಖಾನ್‌ನನ್ನು ಕಳಿಸಿಕೊಟ್ಟ. ಜಫರ್‌ಖಾನನು ಸೇವಸ್ತಾನಿನ ಮುತ್ತಿಗೆಯನ್ನು ಹಾಕಿದ ಮತ್ತು ಕಲವೇ ದಿನಗಳಲ್ಲಿ ಸೇವಸ್ತಾನಿನಲ್ಲಿ ಅಲ್ಲಾವುದ್ದೀನನ ವಿಜಯದ ಬಾವುಟವನ್ನು ಹಾರಿಸಿದ. ಅವನು ಚಲ್ದಿ ಅವನ ಸಹೋದರ ಮತ್ತು ಅವನ ಅನೇಕ ಬೆಂಬಲಿಗರನ್ನು ಬಂಧಿಸಿದ. ಹೆಂಗಸರು ಮತ್ತು ಮಕ್ಕಳನ್ನು ಹೊರತು ಪಡಿಸಿ ಆ ಜನಗಳ ಸಂಖ್ಯೆ ೧೭೦೦ ಮಂದಿ ಆಗಿತ್ತು. ಆ ಜನರನ್ನು ಸರಪಣಿಯಲ್ಲಿ ಬಂಧಿಸಿ ದೆಹಲಿಗೆ ಅಟ್ಟಲಾಯಿತು. ಮತ್ತು ಜಫರ್‌ಖಾನ್ ಕೂಡ ಶೀಘ್ರವಾಗಿ ದೆಹಲಿ ತಲುಪಿದ.

ಈ ಘಟನೆಯ ನಂತರ ಜಫರ್‌ಖಾನನ ಧೈರ್ಯ, ಸಾಹಸದ ಬಗ್ಗೆ ತುಂಬಾ ಪ್ರಶಂಸೆ ವ್ಯಕ್ತವಾಯಿತು. ಇದನ್ನು ಕಂಡು ಅಲ್ಲಾವುದ್ದೀನನ ಹೃದಯದಲ್ಲಿ ಜಫರ್‌ಖಾನನ ಬಗ್ಗೆ ಆಶಂಕೆ ಮತ್ತು ಅನುಮಾನ ಮೂಡಿತು.

ಖತಲಖ್‌ಖ್ವಾಜ ಮೊಘಲ್‌ನ ಆಕ್ರಮಣ:

ಅದೇ ವರ್ಷ ಕೊನೆಯ ಭಾಗದಲ್ಲಿ ವಿದಾಖಾನನ ಪುತ್ರನಾದ ಖತಲಖ್‌ಖ್ವಾಜ ೨೦ ತಮನ್ ಅಂದರೆ ಎರಡು ಲಕ್ಷ ಮೊಘಲ್ ಸೈನಿಕರ ಜೊತೆಗೂಡಿ ಹಿಂದೂಸ್ಥಾನವನ್ನು ಗೆದ್ದುಕೊಳ್ಳುವ ಇರಾದೆಯಿಂದ ಮಾವರ ಉನ್ನಹರ್ ತಲುಪಿದ. ಅವನು ಸಿಂಧ್

ನದಿಯನ್ನು ದಾಟಿ ಮಾರ್ಗಮಧ್ಯದಲ್ಲಿ ಸಿಗುವ ಎಲ್ಲಾ ಪಟ್ಟಣ ಮತ್ತು ಗ್ರಾಮಗಳನ್ನು ತನ್ನ ಖಾಸಾ ಆಸ್ತಿ ಎಂದು ಭಾವಿಸಿ ಅವುಗಳ ಮೇಲೆ ಯಾವುದೇ ಆಕ್ರಮಣವನ್ನು ಮಾಡದೇ ವೇಗವಾಗಿ ಪ್ರಯಾಣ ಬೆಳಸುತ್ತಾ ಯಮುನಾ ನದಿಯ ದಡವನ್ನು ತಲುಪಿ, ಅಲ್ಲಿ ತನ್ನ ಬಿಡಾರವನ್ನು ಹೂಡಿದ. ಖತಲಖ್‌ಖಾನನು ದೆಹಲಿಯ ಮೇಲೆ ಮುತ್ತಿಗೆಯನ್ನು ಹಾಕಿದ. ಮೊಘಲರ ಆಕ್ರಮಣದಿಂದ ಭಯಗ್ರಸ್ತರಾಗಿದ್ದ ದೆಹಲಿಯ ಸುತ್ತಮುತ್ತಲ ಪ್ರದೇಶದ ಅಸಂಖ್ಯಾತ ಜನರು ದೆಹಲಿಯಲ್ಲಿ ಆಶ್ರಯ ಪಡೆದಿದ್ದರು. ಹೀಗಾಗಿ ದೆಹಲಿಯ ಜನಸಂಖ್ಯೆ ಅಪಾರವಾಗಿ ಹೆಚ್ಚಳಗೊಂಡಿತ್ತು. ಬೀದಿ ಬೀದಿಗಳಲ್ಲಿ ಜನದಟ್ಟಣೆ ಅಪಾರವಾಗಿದ್ದು ಮಸೀದಿ, ಛತ್ರ ಎಲ್ಲವೂ ಕೂಡ ಜನಸಾಗರದಿಂದ ತುಂಬಿ ತುಳುಕಾಡುತ್ತಿದ್ದವು. ದೆಹಲಿಯ ಶಾಶ್ವತ ನಿವಾಸಿಗಳು ಈ ಜನದಟ್ಟಣೆಯಿಂದ ಗಾಬರಿಗೊಳಗಾದರು ಮತ್ತು ಈ ಕಾರಣದಿಂದ ತಿರುಗಾಡುವ ಹಾಗೂ ಸರಕು ಸಾಗಾಣಿಕೆಯ ಮಾರ್ಗಗಳು ಬಂದ್ ಆದವು. ಪಟ್ಟಣದಲ್ಲಿ ಜೀವನಾವಶ್ಯಕ ಬೆಲೆಗಳು ಧಿಡೀರನೆ ಏರಿತು ಹಾಗೂ ಪ್ರಜೆಗಳ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿತ್ತು. ಅಲ್ಲಾವುದ್ದೀನನು ತನ್ನ ಸರದಾರರು ಮತ್ತು ರಾಜ್ಯದ ಅಧಿಕಾರಿಗಳನ್ನು ಕರೆದು ಅವರೊಡನೆ ಸಮಾಲೋಚನೆ ನಡೆಸಿದ ಮತ್ತು ಸೈನ್ಯದ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡ. ಅನೇಕ ಸರದಾರರು ಅಲ್ಲಾವುದ್ದೀನನಿಗೆ ಯುದ್ಧ ಕೂಡದು ಎಂಬ ಸಲಹೆಯನ್ನು ನೀಡಿದ್ದೂ ಅಲ್ಲದೆ ಹಿಂದೂಸ್ಥಾನಿ ಸೈನ್ಯದ ದೌರ್ಬಲ್ಯಗಳನ್ನು ಅವನೆದುರಿಗೆ ಬಿಚ್ಚಿಟ್ಟು ಯುದ್ಧದಲ್ಲಿ ಜಯಾಪಜಯಗಳ ಸಾಧ್ಯತೆ ಇದೆ ಎಂದು ಸೂಕ್ಷ್ಮವಾಗಿ ತಿಳಿಸಿದರು. ಆದರೆ ಅಲ್ಲಾವುದ್ದೀನನು ಅವರೊಡನೆ ಅಭಿಪ್ರಾಯ ಭೇದವನ್ನು ಹೊಂದಿದ್ದು ಅದ್ವಿತೀಯ ಬಾದಶಹನಿಗೆ ಯುದ್ಧದಿಂದ ಭಯಭೀತನಾಗುವುದು ಸಮಂಜಸವಲ್ಲವೆಂದು ಅಭಿಪ್ರಾಯಪಟ್ಟನು.

ಅಲ್ಲಾವುದ್ದೀನನು ದೆಹಲಿ ಪಟ್ಟಣ, ತನ್ನ ಅರಮನೆ ಮತ್ತು ಖಜಾನೆಯ ರಕ್ಷಣೆಯನ್ನು ಉಮ್‌ದತುಲ್‌ಮುಲ್ಕ್ ಕೊತ್ವಾಲ್‌ನ ಜವಾಬ್ದಾರಿಗೆ ವಹಿಸಿದ ಹಾಗೂ ಬದಾಯೂನ್ ಹೆಬ್ಬಾಗಿಲನ್ನು ಬಿಟ್ಟು ಬಾಕಿ ಎಲ್ಲಾ ಬಾಗಿಲುಗಳನ್ನು ಬಂದ್ ಮಾಡಿದ. ಇತಿಹಾಸಕಾರರ ದಾಖಲಾತಿಗಳ ಮೇರೆಗೆ ಹೇಳುವುದಾದಲ್ಲಿ ಅಲ್ಲಾವುದ್ದೀನನು ಮೂರು ಲಕ್ಷ ಸೈನಿಕರು ಮತ್ತು ಎರಡು ಸಾವಿರದ ಏಳು ನೂರು ಆನೆಗಳ ಸೈನ್ಯದೊಂದಿಗೆ ವೈಭವದಿಂದ ಕೂಡಿ ಪಟ್ಟಣದಿಂದ ಹೊರ ನಡೆದ. ಕೇಕಿ ಮೈದಾನದಲ್ಲಿ ಉಭಯ ಸೇನೆಗಳು ಎದುರಾದವು. ಉಭಯ ಸೇನೆಗಳು ತಮ್ಮ ತಮ್ಮ ಸೈನಿಕರ ಸರದಿಯ ಸಾಲುಗಳ ವ್ಯೂಹವನ್ನು ರಚಿಸಿದರು ಮತ್ತು ರಕ್ತಪಾತಕ್ಕೆ ಸಿದ್ಧರಾದರು. ಹಿಂದೂಸ್ತಾನದಲ್ಲಿ ಮುಸ್ಲಿಮರ ರಾಜ್ಯಾಭಾರವು ಆರಂಭವಾಗಿದ್ದನಿಂದ ಹಿಡಿದು ಈ ಗ್ರಂಥದ ರಚನೆಯ ಕಾಲದವರೆಗೂ ಅಂದರೆ ಹಿಜರಿ ಶಕೆ ೧೧೫ ನೇ ಇಸವಿಯವರೆವಿಗೂ ಇಂತಹ ಅಸೀಮ ಮತ್ತು ಬಲಾಢ್ಯ ಸೈನ್ಯಗಳು ಪರಸ್ಪರ ಎದುರುಬದುರಾಗಿರಲಿಲ್ಲ. ಅಲ್ಲಾವುದ್ದೀನನು ತನ್ನ ಸೈನ್ಯದ ವ್ಯೂಹವನ್ನು ಹೇಗೆ ರಚನೆ ಮಾಡಿದನೆಂದರೆ, ಸೇನೆಯ ಬಲಭಾಗದಲ್ಲಿ ಆ

ಕಾಲಾವಧಿಯ ಅತ್ಯಂತ ಪ್ರಖ್ಯಾತ ಮತ್ತು ವೀರ ಪರಾಕ್ರಮಿ ಸೈನಿಕರು ಮತ್ತು ಮುಲ್ಕ್ ಹಜಬರುದ್ದೀನ್ ಜಫರ್‌ಖಾನ್ (ಸಮಾನಾ, ಪಂಜಾಬ್ ಮತ್ತು ಮುಲ್ತಾನ್‌ನ ಜಾಗೀರುದಾರ)ನನ್ನು ನೇಮಕ ಮಾಡಿದ. ಎಡಭಾಗದಲ್ಲಿ ತನ್ನ ಸಹೋದರನಾದ ಅಲ್ಮಾಸ್‌ಬೇಗ್ ಮತ್ತು ರುಕುನ್‌ಖಾನ್‌ನನ್ನು ನೇಮಕ ಮಾಡಿ ಅಭೇಧ್ಯ ತಾಣವನ್ನಾಗಿ ಮಾಡಿದ ಮತ್ತು ಸ್ವತಃ ಅವನು ಮುಲ್ಕ್ ನುಸರತ್‌ಖಾನ್ ಹನ್ನೆರಡು ಸಾವಿರ ಪೌರುಷದಿಂದ ಕೂಡಿದ ಸೈನಿಕರು ಮತ್ತು ಮದವೇರಿದ ಅಸಂಖ್ಯ ಆನೆಗಳೊಡನೆ ಸೈನ್ಯದ ಹೃದಯ ಭಾಗದಲ್ಲಿ ನಿಂತುಕೊಂಡ. ಅಷ್ಟೇ ಅಲ್ಲದೆ ಅಲ್ಲಾವುದ್ದೀನನು ತನ್ನ ಅನೇಕ ಸರ್ದಾರರನ್ನು ಸೂಕ್ತ ಮತ್ತು ಪ್ರಮುಖ ಜಾಗಗಳಲ್ಲಿ ನೇಮಕ ಮಾಡಿದ. ಎಲ್ಲರಿಗಿಂತ ಮೊದಲು ಮುಲ್ಕ್ ಹಜಬರ್‌ವುದ್ದೀನ್ ಜಫರ್‌ಖಾನನು ತನ್ನ ಎದುರಿನಲ್ಲಿದ್ದ ಶತ್ರು ಸೈನ್ಯದ ಮೇಲೆ ಯುದ್ಧವನ್ನು ಆರಂಭಿಸಿದ. ಮತ್ತು ಮದವೇರಿದ ಆನೆಗಳು ಹಾಗೂ ಬಾಣಗಳಿಂದ ಶತ್ರು ಸೈನ್ಯವನ್ನು ಇಕ್ಕಟ್ಟಿಗೆ ಸಿಲುಕಿಸಿದ. ನಂತರ ಇನ್ನುಳಿದ ಸರ್ದಾರರು ತಮ್ಮ ತಮ್ಮ ದಿಕ್ಕಿನಲ್ಲಿದ್ದ ಶತ್ರು ಸೈನ್ಯದ ಮೇಲೆ ಆಕ್ರಮಣ ಮಾಡತೊಡಗಿದರು, ಜಫರ್‌ಖಾನನ ಆ ಅಪ್ರತಿಮ ಹೋರಾಟದ ದೆಸೆಯಿಂದ ಶತ್ರು ಪಾಳಯದಲ್ಲಿ ಗೊಂದಲ ಉಂಟಾಗಿ ಮೊಘಲ್ ಸೈನಿಕರ ಶವಗಳಿಂದ ಯುದ್ಧ ಭೂಮಿ ತುಂಬಿ ಹೋಯಿತು. ಜಫರ್‌ಖಾನನ ಧೈರ್ಯ ಮತ್ತು ಪರಾಕ್ರಮದಿಂದ ಕಾದಾಡಿದ್ದರಿಂದ ಮೊಘಲರ ಸೈನ್ಯವು ದಿಕ್ಕೆಟ್ಟು ಯುದ್ಧಭೂಮಿಯಿಂದ ಓಡತೊಡಗಿತು. ಅವನು ಹದಿನೆಂಟು ಹರದಾರಿ ದೂರದವರೆಗೂ ಮೊಗಲರನ್ನು ಬೆನ್ನಟ್ಟಿದ. ಅಲ್ಮಾಸ್‌ಬೇಗನು ಜಫರ್‌ಖಾನನ ಜೊತೆಯಲ್ಲಿ ಅಂತರಂಗದಲ್ಲಿ ವೈರತ್ವವನ್ನು ಹೊಂದಿದ್ದ ಹಾಗೂ ಅವನನ್ನು ಶತ್ರುವಿನಂತೆ ಕಾಣುತ್ತಿದ್ದ. ಆದ್ದರಿಂದ ಅವನು ಜಫರ್‌ಖಾನನ ಬೆಂಬಲಕ್ಕೆ ಹೋಗಲಿಲ್ಲ ಮತ್ತು ಅವನನ್ನು ಏಕಾಂಗಿಯಾಗಿ ಬಿಟ್ಟ.

ಜಫರ್‌ಖಾನನ ಕೊಲೆ:

ಮೊಘಲರ ಸೈನ್ಯದ ಎಡಭಾಗದ ಮುಂಚೂಣಿಯ ಸರದಾರನಾದ ಒಬ್ಬ ತುರ್ಕಿಯು ಹಳ್ಳದಲ್ಲಿ ಕುಳಿತಿದ್ದ. ಏಕಾಂಗಿಯಾಗಿ ಬರುತ್ತಿದ್ದ ಜಫರ್‌ಖಾನ್‌ನನ್ನು ಅವನು ಕಂಡ ಮತ್ತು ಜಫರ್‌ಖಾನನ ಹಿಂದೆ ಅವನ ನೆರವಿನ ಸೈನ್ಯ ಇಲ್ಲ ಎಂಬುದು ಅವನಿಗೆ ತಿಳಿಯಿತು. ತುರ್ಕಿಯ ಆ ಸರ್ದಾರನಿಗೆ ಆಕ್ರಮಣ ಮಾಡುವ ಸದವಕಾಶ ದೊರಕಿತು ಅವನು ತನ್ನ ತಾಣದಿಂದ ಹೊರಬಂದು ಜಫರ್‌ಖಾನನ ಬೆನ್ನ ಹಿಂದಿನಿಂದ ಆಕ್ರಮಣ ಮಾಡಿದ ಮತ್ತು ಅವನ ಕುದುರೆಯ ಕಾಲುಗಳನ್ನು ಕತ್ತರಿಸಿದ. ಈ ಆಕ್ರಮಣದ ದೆಸೆಯಿಂದ ಜಫರ್‌ಖಾನ್ ಪದಾತಿ ಸೈನಿಕನಂತಾದ ಮತ್ತು ಅವನು ಬಾಣ ಬಿಡ ತೊಡಗಿದ ಮತ್ತು ಶತ್ರುಗಳ ಕಗ್ಗೊಲೆಯನ್ನು ಮಾಡ ತೊಡಗಿದ. ಆಗ ಮೊಘಲರ ಸರದಾರನಾದ ಖತಲಖ್‌ಖಾನ್ ಖ್ವಾಜನು ಜಫರ್‌ಖಾನ್‌ಗೆ ಹೀಗೆಂದು ನುಡಿದ, "ನೀನು ನಿನ್ನ ಬಾಣಗಳನ್ನು ನಿನ್ನ ಬತ್ತಳಿಕೆಯಲ್ಲಿಡು ಮತ್ತು ನನ್ನ ಬಳಿಗೆ ಬಾ. ನಿನ್ನ

ಹಾಲಿ ಹುದ್ದೆಗಿಂತಲೂ ಉನ್ನತವಾದ ಹುದ್ದೆಯನ್ನು ನಾನು ನಿನಗೆ ನೀಡುತ್ತೇನೆ". ಜಫರ್‌ಖಾನನು ಈ ಸಂದೇಶಕ್ಕೆ ಯಾವ ಪ್ರಾಮುಖ್ಯತೆಯನ್ನು ನೀಡಲಿಲ್ಲ ಮತ್ತು ಹಿಂದಿನಂತೆಯೇ ಬಾಣಗಳನ್ನು ಬಿಡುವುದರಲ್ಲಿ ನಿರತನಾದ. ಮೊಗಲರು ಕೊನೆಗೆ ತಮ್ಮ ಸರ್ದಾರರನ ಆಣತಿಯ ಮೇರೆಗೆ ಜಫರ್‌ಖಾನನ ಮೇಲೆ ಬಾಣಗಳ ಸುರಿಮಳೆಗೈದರು ಹೀಗೆ ಅವನು ಸಾವನ್ನಪ್ಪಿದ. ಜಫರ್‌ಖಾನನ ಜೊತೆಯಲ್ಲಿ ದೆಹಲಿಯ ಕೆಲವು ಮುಖಂಡರು ಕೂಡ ಮೊಘಲರಿಂದ ಹತರಾದರು.

ಆ ದಿನದ ಹಿಂದೂಸ್ತಾನಿ ಯೋಧರ ಯುದ್ಧದ ತೀವ್ರತೆಯನ್ನು ಕಂಡು ಭಯಗ್ರಸ್ತನಾದ ಖತಲಖ್‌ಖಾನನು ಉಸಿರು ಬಿಗಿ ಹಿಡಿದು ಮೂವತ್ತು ಹರದಾರಿಯ ದೂರದವರೆಗೂ ಓಡುತ್ತಲೇ ಇದ್ದ. ಅಂತೂ ಕೊನೆಗೆ ಹಂತ ಹಂತವಾಗಿ ಪ್ರಯಾಣ ಬೆಳೆಸುತ್ತ ತನ್ನ ದೇಶವನ್ನು ತಲುಪಿದ. ಜಫರ್‌ಖಾನನ ಧೈರ್ಯ ಮತ್ತು ಸಾಹಸ ಹಾಗೂ ಅಪ್ರತಿಮ ಹೋರಾಟದ ಪ್ರತಿಮೆಯು ಮೊಗಲರ ಹೃದಯದ ಮೇಲೆ ಸ್ಥಾಪಿತವಾಯಿತು. ಅವನ ಪ್ರಭಾವವು ಆ ಮೊಘಲರ ಮೇಲೆ ಎಷ್ಟು ತೀವ್ರ ಪರಿಣಾಮವನ್ನು ಬೀರಿತೆಂದರೆ ಅವನನ್ನು ಉದಾಹರಣೆಯನ್ನಾಗಿ ಸ್ವೀಕರಿಸಿದರು. ಯಾವಾಗಲೂ ಒಬ್ಬ ಮೊಗಲ್ ಸಿಪಾಯಿಯ ಕುದುರೆಯು ನೀರನ್ನು ಕುಡಿಯಲು ನಿರಾಕರಿಸಿದಾಗ ಆ ಮೊಘಲರವನು ತನ್ನ ಕುದುರೆಯನ್ನು ಕೇಳುವುದೇನೆಂದರೆ 'ನೀನು ಜಫರ್‌ಖಾನ್‌ನನ್ನು ನೋಡಿರುವೆಯಾ?' ಜಫರ್‌ಖಾನನ ಧೈರ್ಯ, ಸಾಹಸದ ದೆಸೆಯಿಂದ ಅವನನ್ನು ದೊಡ್ಡ ಗಂಡಾಂತರವೆಂದು ಅಲ್ಲಾವುದ್ದೀನನು ಪರಿಗಣಿಸಿದ್ದ. ಹೀಗಾಗಿ ಅವನಿಗೆ ಜಫರ್‌ಖಾನನ ಸಾವಿನ ಸುದ್ದಿ ತಲುಪಿದಾಗ ಅದು ತನಗೆ ಸಿಕ್ಕ ಎರಡನೇ ವಿಜಯ ಎಂದು ಅವನು ನೆಮ್ಮದಿ ಹೊಂದಿದ.

ಮೊಘಲರನ್ನು ಸೋಲಿಸಿದ ನಂತರ ಅಲ್ಲಾವುದ್ದೀನನು ಕೇಕಿಯಿಂದ ದೆಹಲಿಗೆ ಮರಳಿದ ಮತ್ತು ಸಂತೋಷ, ಸಮಾರಂಭಗಳನ್ನು ವ್ಯವಸ್ಥೆ ಮಾಡಿದ ಹಾಗೂ ಯುದ್ಧದಲ್ಲಿ ಧೈರ್ಯ, ಸಾಹಸಗಳನ್ನು ಮೆರೆದ ಮುಖಂಡರಿಗೆ ಮಾನ ಸನ್ಮಾನಗಳನ್ನು ಮಾಡಿದ. ಒಬ್ಬ ಸರದಾರನು ಯುದ್ಧಭೂಮಿಯಿಂದ ಹೋಗಿ ದೆಹಲಿಯಲ್ಲಿ ಅಡಗಿಕೊಂಡಿದ್ದ. ಅಲ್ಲಾವುದ್ದೀನನು ಆ ಸರ್ದಾರನನ್ನು ಕತ್ತೆಯ ಮೇಲೆ ಕೂರಿಸಿ ಇಡೀ ಪಟ್ಟಣದಲ್ಲಿ ಮೆರವಣಿಗೆ ಮಾಡಿಸಿದ.

ಅಲ್ಲಾವುದ್ದೀನನ ದುಷ್ಟ ಆಲೋಚನೆಗಳು:

ಇತಿಹಾಸಕಾರರ ಅಭಿಪ್ರಾಯದಂತೆ ಅಲ್ಲಾವುದ್ದೀನನು ಪಟ್ಟಾಭಿಷಿಕ್ತನಾದ ನಂತರ ಮೂರು ವರ್ಷಗಳವರೆಗೂ ಅವನ ಎಲ್ಲಾ ಯೋಜನೆಗಳಲ್ಲಿಯೂ ಸಂಪೂರ್ಣವಾಗಿ ಸಫಲನಾದ. ಮತ್ತು ಅಸಂಖ್ಯ ಸ್ತ್ರೀಯರನ್ನು ತನ್ನ ಅಂತಃಪುರದಲ್ಲಿ ಸೇರಿಸಿಕೊಂಡಿದ್ದರಿಂದ ಅವನ ಮಕ್ಕಳ ಸಂಖ್ಯೆಯು ಅಪಾರವಾಗಿ ವೃದ್ಧಿಗೊಂಡಿತು. ಗುಜರಾತ್ ದೇಶವು

ಕೂಡ ಅವನ ಆಳ್ವಿಕೆಗೆ ಒಳಪಟ್ಟಿತು. ಇಡೀ ದೇಶವು ಅಲ್ಲಾವುದ್ದೀನನ ಶತ್ರುಗಳಿಂದ ಮುಕ್ತಿಗೊಂಡಿತು. ಈ ಎಲ್ಲಾ ಸಫಲತೆಗಳು ಮತ್ತು ವಿಜಯಗಳ ನಂತರ ಅಲ್ಲಾವುದ್ದೀನನ ಮನಸ್ಸಿನಲ್ಲಿ ಅನೇಕ ಚಿತ್ರವಿಚಿತ್ರ ಆಲೋಚನೆಗಳು ಮೂಡತೊಡಗಿದವು. ಈ ಆಲೋಚನೆಗಳ ಪೈಕಿ ಒಂದು ಆಲೋಚನೆ ಎಂದರೆ, "ಯಾವ ರೀತಿಯಲ್ಲಿ ಹಜರತ್ ಮೊಹಮ್ಮದ್ ಸಲ್ಲಮ್ ಪ್ರವಾದಿಯವರು ತಮ್ಮ ಶಕ್ತಿ ಸಾಮರ್ಥ್ಯದಿಂದ ಶರೀಯತ್‌ನ್ನು ಜಾರಿಗೊಳಿಸಿದರೋ ಮತ್ತು ಅವರ ನಾಲ್ವರು ಖಲೀಫಾಗಳು ಆ ಶರೀಯತ್‌ನ ಬುನಾದಿಯನ್ನು ಭದ್ರಗೊಳಿಸಿದರೋ ಅದೇ ರೀತಿಯಲ್ಲಿ ನಾನು ಕೂಡ ನನ್ನ ನಾಲ್ಕು ಮಂದಿ ಸರ್ದಾರರರಾದ ಅಲ್ಮಾಸ್‌ಬೇಗ್, ಅಲಫ್‌ಖಾನ್, ಮುಲ್ಕ್ ಹಜಬರುದ್ದೀನ್ ಜಫರ್‌ಖಾನ್, ಮುಲ್ಕ್ ನುಸರತ್‌ಖಾನ್ ಮತ್ತು ಸಂಜರಾ ಅಲಪ್ತ್‌ಖಾನನ ಶಕ್ತಿ, ಸಾಮರ್ಥ್ಯದ ಬೆಂಬಲದೊಂದಿಗೆ ಒಂದು ಹೊಸ ಮತಧರ್ಮವನ್ನು ಜಾರಿ ಮಾಡಿದಲ್ಲಿ ಖಂಡಿತವಾಗಿಯೂ ಪ್ರಳಯದ ದಿನದವರೆಗೂ ನನ್ನ ಹೆಸರು ಪ್ರಪಂಚದಲ್ಲಿ ಶಾಶ್ವತವಾಗಿ ಉಳಿಯುವುದು" ಅಲ್ಲಾವುದ್ದೀನನು ಶರಾಬಿನ ನಶೆಯಲ್ಲಿ ತೂರಾಡುತ್ತ ತನ್ನ ಈ ಆಲೋಚನೆಯನ್ನು ಜಗಜ್ಜಾಹೀರುಗೊಳಿಸುತ್ತಿದ್ದ ಹಾಗೂ ತನ್ನ ಬೆಂಬಲಿಗರೊಂದಿಗೆ ಸಮಾಲೋಚನೆಯನ್ನು ನಡೆಸುತ್ತಿದ್ದ. ಯಾವ ವಿಧಾನವನ್ನು ಬಳಸಿದಲ್ಲಿ ನಾನು ಜಾರಿ ಮಾಡಿದ ಹೊಸ ಧಾರ್ಮಿಕ ಮತ ಧರ್ಮವು ಮತಪಂಡಿತರು ಮತ್ತು ಮುಲ್ಲಾಗಳು ಹಾಗೂ ವಿದ್ವಾಂಸರ ದೃಷ್ಟಿಯಲ್ಲಿ ಮಾನ್ಯತೆಯನ್ನು ಪಡೆಯುತ್ತದೆ ಎಂದು ಅವನು ಅವರುಗಳೊಡನೆ ಚರ್ಚಿಸುತ್ತಿದ್ದ. ಅಲ್ಲಾವುದ್ದೀನನ ಎರಡನೆಯ ದುರ್ಬಲ ಆಲೋಚನೆ ಏನಾಗಿತ್ತೆಂದರೆ ರಾಜ ಖಜಾನೆಯಲ್ಲಿ ಅಪಾರ ಸಂಪತ್ತು ಕ್ರೋಢೀಕರಣಗೊಂಡಿದ್ದು ಆನೆ ಕುದುರೆ ಮೊದಲಾದವುಗಳು ಕೂಡ ಅಸಂಖ್ಯವಾಗಿರುವುದರಿಂದ ದೆಹಲಿಯ ಆಡಳಿತವನ್ನು ಯಾರಾದರೂ ಒಬ್ಬ ನಂಬಿಗಸ್ಥ ಸರ್ದಾರನ ವಶಕ್ಕೆ ಒಪ್ಪಿಸಿ ಸ್ವತಃ ಅಲೆಗ್ಸಾಂಡರ್‌ನಂತೆ ಇಡೀ ವಿಶ್ವವನ್ನು ಜಯಿಸಲು ಹೊರಡಬೇಕು ಎಂಬುವುದಾಗಿತ್ತು. ಎಲ್ಲಕ್ಕಿಂತ ಮೊದಲು ಖಿರಾಸಾನ್. ಮಾವರ ಉನ್ನೇಹರ್ ಮತ್ತು ತುರ್ಕಿಸ್ಥಾನವನ್ನು ಗೆದ್ದುಕೊಂಡು ಅಲ್ಲಿನ ಪ್ರಜೆಗಳಲ್ಲಿ ತನ್ನ ಹೊಸ ಧರ್ಮದ ಪ್ರಚಾರವನ್ನು ಮಾಡಿ ಅವರನ್ನು ತನ್ನ ಧರ್ಮದ ಅನುಯಾಯಿಗಳನ್ನಾಗಿ ಮಾಡಿಕೊಂಡು ನಂತರ ಇದೇ ರೀತಿಯಲ್ಲಿ ವಿಜಯಯಾತ್ರೆಯನ್ನು ಮುಂದುವರೆಸಬೇಕು ಎಂಬುದು ಅವನ ಇರಾದೆಯಾಗಿತ್ತು. ರೋಮ್, ಫಾರಸ್, ಇರಾಕ್, ಅರಬ್, ಅಜಮ್, ಈಜಿಪ್ಟ್, ಗುಲಿಸ್ತಾನ್, ಆಫ್ರಿಕಾ ಮೊದಲಾದ ದೇಶಗಳ ಮೇಲೆ ತನ್ನ ವಿಜಯದ ಬಾವುಟವನ್ನು ಹಾರಿಸಿ ಅಲ್ಲಿ ತನ್ನ ಹೊಸ ಧರ್ಮವನ್ನು ಸ್ಥಾಪಿಸಬೇಕು ಹಾಗೂ ಅಲೆಗ್ಸಾಂಡರ್‌ನಂತೆ ತನ್ನ ಧೈರ್ಯ ಪರಾಕ್ರಮಗಳ ಚರ್ಚೆಯಾಗಬೇಕು ಅಲ್ಲಾವುದ್ದೀನನು ತನ್ನ ಈ ವಿಲಕ್ಷಣ ವಿಚಾರಗಳ ಪ್ರಸ್ತಾಪವನ್ನು ತನ್ನ ಸರದಾರರು ಮತ್ತು ಉನ್ನತ ಅಧಿಕಾರಿಗಳ ಬಗ್ಗೆ ಮಾಡಿದಾಗ ಅವನ ಸ್ವಭಾವ ವೈಪರೀತ್ಯಗಳನ್ನು ಅರಿತಿದ್ದ ಅವರುಗಳು ಅವನ ನಿರೀಕ್ಷಿತ ಉತ್ತರವನ್ನು

ನೀಡಿ ಜಾರಿಕೊಳ್ಳುತ್ತಿದ್ದರು. ಅಲ್ಲಾವುದ್ದೀನನ ಸೈನ್ಯವು ಎರಡು ಲಕ್ಷ ವೀರರಿಂದ ಕೂಡಿದ್ದ ಖತಲಖ್‌ಖಾನ್ ಸೇನಾಪತಿಯ ಸೈನ್ಯವನ್ನು ಮಣಿಸಿದ ನಂತರ ಆ ವಿಜಯವು ಅಲ್ಲಾವುದ್ದೀನನ ನೆತ್ತಿಗೇರಿತು. ಅವನ ಅಹಂಕಾರ ಮತ್ತು ದರ್ಪಕ್ಕೆ ಕೊನೆಯೇ ಇರಲಿಲ್ಲ ಮತ್ತು ರಾಜ್ಯದಲ್ಲಿ ಜಾರಿಯಾಗುವ ಶಾಸನಗಳಲ್ಲಿ ಮತ್ತು ಪ್ರವಚನಗಳಲ್ಲಿ ಅವನ ಹೆಸರಿನ ಜೊತೆಯಲ್ಲಿ “ಸಿಕಂದರೇಸಾನಿ” (ಮತ್ತೊಬ್ಬ ಅಲೆಗ್ಸಾಂಡರ್)ನ ಬಿರುದನ್ನು ಸೇರಿಸಬೇಕೆಂದು ಅವನು ಆಜ್ಞೆ ಮಾಡಿದ. ನಾಣ್ಯ ಮತ್ತು ಫಲಕಗಳ ಮೇಲೆ ಕೂಡ ಅವನು ಈ ಬಿರುದನ್ನು ಅಚ್ಚು ಹಾಕಿಸಿದ ಹಾಗೂ ಇಡೀ ವಿಶ್ವವನ್ನೇ ಜಯಿಸುವ ಮತ್ತು ಹೊಸ ಧರ್ಮ ಸಂಸ್ಥಾಪನೆ ಮಾಡುವ ಪ್ರಯತ್ನವನ್ನು ತೀವ್ರಗತಿಯಲ್ಲಿ ಮಾಡತೊಡಗಿದ.

ಅಲ್ಲಾವುದ್ದೀನನು ಸಂಸ್ಕೃತಿಹೀನನಾಗಿದ್ದ ಅವನ ಇಡೀ ಬದುಕು ಸಂಸ್ಕೃತಿ ಹೀನ ಖಿಲ್ಜಿಗಳೊಡನೆ ಕಳೆದಿತ್ತು. ಅಕ್ಷರ ಜ್ಞಾನ ಅವನಿಗೆ ಕಿಂಚಿತ್ತು ಕೂಡ ಇರಲಿಲ್ಲ ಉದ್ಧಟತನ ಮತ್ತು ಮೃಗೀಯ ನಡವಳಿಕೆಯು ಅವನ ಸ್ವಭಾವವಾಗಿತ್ತು ಈ ಕಾರಣದಿಂದ ಆಸ್ಥಾನಿಕರು ಅವನಿಗೆ ಎಂದಿಗೂ ಬುದ್ಧಿವಾದವನ್ನು ಹೇಳುತ್ತಿರಲಿಲ್ಲ. ಬಾದಶಹನು ತನ್ನ ಮೇಲ್ಕಂಡ ವಿಲಕ್ಷಣ ಆಲೋಚನೆಗಳ ಬಗ್ಗೆ ಚರ್ಚೆ ನಡೆಸಿದಾಗ ಅನೇಕ ಸಭಾಸದರು ಸಂಪೂರ್ಣ ಮೌನವನ್ನು ಆಚರಿಸುತ್ತಿದ್ದರು. ಹಾಗೂ ಕೆಲವೊಂದು ತುಂಟ ಮತ್ತು ನಿರಾಳ ವ್ಯಕ್ತಿತ್ವದ ಸಭಿಕರು ಅವನೊಡನೆ ಸಹಮತ ವ್ಯಕ್ತಪಡಿಸಿ ತಲೆದೂಗುತ್ತಿದ್ದರು. ಬಾದಶಹನ ಈ ಆಲೋಚನೆಗಳು ವ್ಯರ್ಥವಾದವು ಎಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ಹಾಗಿದ್ದರೂ ಅವರುಗಳು ಅಲ್ಲಾವುದ್ದೀನನ ಪರಾಕ್ರಮ ಮತ್ತು ಸದ್ಗುಣ ಸಂಪನ್ನತೆಯ ಬಗ್ಗೆ ಅವನನ್ನು ಅಟ್ಟಕ್ಕೇರಿಸಿ ತಪ್ಪು ಗ್ರಹಿಕೆಗಳನ್ನು ಮತ್ತು ಗೊಂದಲವನ್ನು ಮೂಡಿಸುವುದರಲ್ಲಿ ನಿಷ್ಣಾತರಾಗಿದ್ದರು. ಮುಸ್ಲಿಮ್ ಪ್ರಜೆಗಳು ಮತ್ತು ಧಾರ್ಮಿಕ ಮತ ಪಂಡಿತರು ಅಲ್ಲಾವುದ್ದೀನನ ಈ ರೀತಿಯ ಮಾತುಗಳನ್ನು ಕೇಳಿ ತೀರಾ ದುಃಖಿತರಾಗಿದ್ದರು. ಈ ಎಲ್ಲಾ ಜನರು ಮತ್ತು ವಿಶೇಷವಾಗಿ ಹಜರತ್ ಸುಲ್ತಾನ್, ನಿಜಾಮುದ್ದೀನ್ ಔಲಿಯಾರವರಂತಹ ಸೂಫಿಗಳು ಮತ್ತು ಇತರೆ ಹಿರಿಯ ಧಾರ್ಮಿಕ ವ್ಯಕ್ತಿಗಳು ಬಾದಶಹನ ಈ ರೀತಿಯ ಪೈಶಾಚಿಕ ಆಲೋಚನೆಗಳಿಂದ ಮುಕ್ತಿ ಹೊಂದಲು ಮತ್ತು ಇಸ್ಲಾಂ ಧರ್ಮವನ್ನು ನಿಷ್ಠೆಯಿಂದ ಪಾಲಿಸಲು ಅವಕಾಶವಾಗುವಂತೆ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು.

ಅಲಾಉಲ್‌ಮುಲ್ಕ್ ಕೋತ್ವಾಲನ ಬುದ್ಧಿವಂತಿಕೆ :

ದೆಹಲಿಯ ಕೋತ್ವಾಲನಾದ ಮುಲ್ಕ್ ಅಲ್ಲಾವುದ್ದೀನ್ ಅಲಿಯಾಸ್ ಅಲಾಉಲ್‌ಮುಲ್ಕ್ ತುಂಬಾ ಬೊಜ್ಜಿನಿಂದ ಕೂಡಿದ್ದ. ಆದ್ದರಿಂದ ಅವನು ಪ್ರತಿ ತಿಂಗಳ ಮೊದಲನೇ ತಾರೀಕಿನಂದು ಮಾತ್ರ ಬಾದಶಹನ ಸೇವೆಯಲ್ಲಿ ಹಾಜರಾಗಿ ಅವನಿಗೆ ವಿಧ್ಯುಕ್ತ ಗೌರವವನ್ನು ಸಲ್ಲಿಸಿ ಬಾದಶಹನ ಪಾನಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದ.

ಎಂದಿನಂತೆ ಒಂದು ಬಾರಿ ಅವನು ಪಾನಗೋಷ್ಠಿಯಲ್ಲಿ ಪಾಲ್ಗೊಂಡ. ಅಲ್ಲಾವುದ್ದೀನನು ಮೇಲ್ಕಂಡ ತನ್ನ ಎರಡು ವಿಚಿತ್ರ ಆಲೋಚನೆಗಳ ಬಗ್ಗೆ ಚರ್ಚೆ ಮಾಡಲಾರಂಭಿಸಿದ. ಅಲಾಉಲ್‌ಮುಲ್ಕ್‌ನು ನಿಷ್ಠಾವಂತ ಮುಸಲ್ಮಾನನಾಗಿದ್ದು ಧಾರ್ಮಿಕ ವಿಚಾರಗಳ ಬಗ್ಗೆ ಒಂದಿಷ್ಟು ಅರಿವನ್ನು ಹೊಂದಿದ್ದ. ಹೀಗಾಗಿ ತನಗೆ ಸಾವು ಸನ್ನಿಹತವಾಗಿದೆ ಕೆಲ ದಿನಗಳ ಬದುಕಿಗಾಗಿ ಬಾದಶಹನನ್ನು ಓಲೈಸುವುದು ಮತ್ತು ಸತ್ಯ ಸಂಗತಿಗಳನ್ನು ಮರೆ ಮಾಡುವುದು ಯಾವುದೇ ರೀತಿಯಲ್ಲಿ ಸೂಕ್ತವಲ್ಲವೆಂದು ಅವನು ತನ್ನ ಮನದಲ್ಲಿ ಆಲೋಚನೆ ಮಾಡಿದ. ಹಾಗೂ ಅವನು ಆ ಸಂದರ್ಭದಲ್ಲಿ ಬಾದಶಹನ ಕೋಪಕ್ಕೆ ಹೆದರಕೂಡದೆಂತಲೂ ಮತ್ತು ತನ್ನ ಬದುಕಿನ ಕೊನೆಗಾಲದಲ್ಲಿ ಧರ್ಮದ ಸಲುವಾಗಿ ತಾನು ಹುತಾತ್ಮನಾದರೂ ಪರ್ವಾಗಿಲ್ಲ ಎಂದು ಅವನ ಮನದಲ್ಲಿ ಒಂದು ಭಾವ ಸುಳಿಯಿತು. ಈ ಆಲೋಚನಾ ಧಾರೆಯ ಹಿನ್ನೆಲೆಯಲ್ಲಿ ಅಲಾಉಲ್‌ಮುಲ್ಕ್‌ನು ಬಾದಶಹನೊಂದಿಗೆ ನುಡಿದ, "ಈ ಸಭೆಯಲ್ಲಿ ಕುಡಿತದ ಪರಿಕ್ರಮವನ್ನು ಸ್ವಲ್ಪ ತಡೆಹಿಡಿದಲ್ಲಿ ಮತ್ತು ಸಭೆಯನ್ನು ಪಾನಮತ್ತರಿಂದ ಖಾಲಿ ಮಾಡಿಸಿದಲ್ಲಿ ಈ ಸೇವಕನು ತನ್ನ ಅಭಿಪ್ರಾಯವನ್ನು ತಮ್ಮ ಮುಂದೆ ಇಡುವ ಧೈರ್ಯವನ್ನು ಮಾಡುತ್ತಾನೆ. ಒಂದು ವೇಳೆ ನನ್ನ ಅಹವಾಲನ್ನು ಮನ್ನಿಸಿದಲ್ಲಿ ನಾನೇ ಅದೃಷ್ಟಶಾಲಿ, ಇಲ್ಲವಾದಲ್ಲಿ ವೃದ್ಧಾಪ್ಯದ ದೆಸೆಯಿಂದ ದಿನೇ ದಿನೇ ಬುದ್ಧಿ ಕ್ಷಯವಾಗುತ್ತಿರುವ ಈ ವಯೋವೃದ್ಧ ಗುಲಾಮನ ಮಾತನ್ನು ಮನ್ನಿಸಿ" ಬಾದಶಹನು ಅಲಾಉಲ್‌ಮುಲ್ಕ್‌ನ ಕೋರಿಕೆಯನ್ನು ಒಪ್ಪಿದ ಮತ್ತು ತತ್‌ಕ್ಷಣವೇ ಆ ಸಭೆಯಿಂದ ಪಾನೀಯ ಮತ್ತು ಪರಿಕರಗಳನ್ನು ತೊಲಗಿಸಿದ. ಅಲ್ಲಿ ಕೆಲವೇ ಮಂದಿ ವಿಶೇಷ ವ್ಯಕ್ತಿಗಳಾದ ಮಲ್ಲಿಕ್ ಅಲ್ಮಾಸ್‌ಬೇಗ್ ಮುಲ್ಕ್ ನುಸರತ್‌ಖಾನ್ ಮುಲ್ಕ್ ಸಂಜರ್ ಆಲಪ್‌ಖಾನ್ ಮತ್ತು ಖಾಜಿ ಮುಲ್ಕ್ ಜವಾನಾನನ್ನು ಹೊರತು ಇನ್ಯಾರು ಉಳಿದಿರಲಿಲ್ಲ. ಅಲಾಉಲ್‌ಮುಲ್ಕ್‌ನು ಕೈಕಟ್ಟಿಕೊಂಡು ಅತ್ಯಂತ ವಿನೀತವಾಗಿ ಹೇಳಿದ, "ಶರೀಯತ್‌ನ ಸಂಬಂಧವು ಪ್ರವಾದಿಗಳ ಮೂಲದಿಂದ ಉಗಮವಾಗಿದೆ. ಮತ್ತು ಅವರ ಪ್ರವಾದಿತ್ವವು ದಿವ್ಯ ವಾಣಿಯೊಂದಿಗೆ ಪ್ರಾಪ್ತಿಯಾಗಿದೆ ಹಾಗೂ ಪ್ರವಾದಿತ್ವವು ಹಜರತ್‌ಮೊಹಮ್ಮದ್ ಸಲ್ಲಂರವರಿಂದ ಮುಕ್ತಾಯಗೊಂಡಿದೆ. ತಾವು ಯಾವುದೇ ಹೊಸ ಧರ್ಮ ಸಂಸ್ಥಾಪನೆಯ ಘೋಷಣೆಯನ್ನು ಮಾಡಿದಲ್ಲಿ ಎಲ್ಲ ಮುಸಲ್ಮಾನರು ತಮ್ಮ ವಿರೋಧಿಗಳಾಗುತ್ತಾರೆ ಹಾಗೂ ಇಡೀ ದೇಶದಲ್ಲಿ ಪಿತೂರಿ, ಸಂಚು ಮತ್ತು ದಂಗೆಯ ಹೆಬ್ಬಾಗಿಲು ತೆರೆದಂತಾಗುತ್ತದೆ. ನನ್ನಂತಹ ಅವಿವೇಕಿಯ ಅಹವಾಲು ಏನೆಂದರೆ, ತಾವು ಈ ರೀತಿಯ ಆಲೋಚನೆಗಳನ್ನು ಎಂದೆಂದಿಗೂ ನಿಮ್ಮ ಮನದಲ್ಲಿ ಮೂಡಲು ಅವಕಾಶವನ್ನು ಮಾಡಿಕೊಡಬೇಡಿ. ಏಕೆಂದರೆ, ಯಾವನೇ ಒಬ್ಬ ಮನುಷ್ಯನಿಗೂ ಅಂತಹ ಉನ್ನತ ಸ್ಥಾನವು ದೊರಕುವುದು ಅಸಂಭವವಾಗಿದೆ. ಚೆಂಗೇಸ್‌ಖಾನ್ ಮತ್ತು ಅವನ ಸಂತತಿಯವರು ಅನೇಕ ವರ್ಷಗಳಿಂದ ಇಸ್ಲಾಂ ಧರ್ಮವನ್ನು ನಾಶಮಾಡಲು ಮತ್ತು ಸಾವಿರಾರು ವರ್ಷಗಳ ಹಿಂದಿನಿಂದಲೂ

ತುರ್ಕಿಸ್ಥಾನದಲ್ಲಿ ಪ್ರಚಲಿತವಾಗಿರುವ ತಮ್ಮ ಧರ್ಮವನ್ನು ಜಾರಿ ಮಾಡಲು ಅವಿರತ ಪ್ರಯತ್ನ ನಡೆಸುತ್ತಿರುವುದನ್ನು ಮತ್ತು ಈ ಉದ್ದೇಶ ಸಾಧನೆಗಾಗಿ ಅಸಂಖ್ಯಾ ಮುಸ್ಲಿಮರ ಕೊಲೆ ನಡೆಸುತ್ತಿರುವುದನ್ನು ಹುಜೂರ್‌ರವರಾದ ತಮಗೆ ಚೆನ್ನಾಗಿ ತಿಳಿದಿದೆ. ಆದರೆ ಈ ನಿಟ್ಟಿನಲ್ಲಿ ಅವರಿಗೆ ಯಾವುದೇ ಗೆಲುವು ಸಿಗಲಿಲ್ಲ ಕೊನೆಗೂ ಇಸ್ಲಾಂ ಧರ್ಮದ ಪಾವಿತ್ರ್ಯತೆ ಮತ್ತು ಭದ್ರ ಬುನಾದಿಯು ಆ ಶತ್ರುಗಳ ಹೃದಯದಲ್ಲಿ ಸ್ಥಾನವನ್ನು ಪಡೆಯಿತು. ಮತ್ತು ಅವರ ಪೂರ್ತ ಜನಾಂಗವು ಈಗ ಇಸ್ಲಾಂ ಧರ್ಮದ ಪರಿಪಾಲನೆ ಮಾಡುತ್ತಿದೆ. ಆ ಧರ್ಮದ ಗೌರವ ಮತ್ತು ಮರ್ಯಾದೆಯನ್ನು ಕಾಪಾಡುವ ಸಲುವಾಗಿ ಆ ಜನರು ಅನೇಕ ಬಾರಿ ಕಾಫಿರ್‌ರೊಡನೆ ಯುದ್ಧ ಮಾಡಿದ್ದಾರೆ" ಕೋತ್ವಾಲ್‌ನ ಈ ಮಾತುಗಳನ್ನು ಕೇಳಿ ಅಲ್ಲಾವುದ್ದೀನನು ಕೆಲಹೊತ್ತಿನವರೆಗೆ ಮೌನವಾದ ನಂತರ ಅವನೊಂದಿಗೆ ನುಡಿದ, "ನೀನು ಏನನ್ನು ನುಡಿದಿದ್ದಿಯೋ ಅದು ಸತ್ಯವಾದ ಮಾತಾಗಿದೆ ಇನ್‌ಷಾ ಅಲ್ಲಾಹ ಮುಂದೆ ಎಂದಿಗೂ ನಾನು ಈ ರೀತಿಯ ಮಾತುಗಳನ್ನು ಆಡುವುದಿಲ್ಲ ಆದರೆ ನನ್ನ ಇನ್ನೊಂದು ಆಲೋಚನೆಯ ಬಗ್ಗೆ ನಿನ್ನ ಅಭಿಪ್ರಾಯವೇನು"? ಅಲಾಉಲ್‌ಮುಲ್ಕ್ ಕೊತ್ವಾಲನು ಉತ್ತರಿಸಿದ, "ಜಹಾಪನ ತಮ್ಮ ಎರಡನೆಯ ಆಲೋಚನೆಯು ಸಮರ್ಪಕವಾಗಿದೆ. ನಿಮ್ಮ ಧೈರ್ಯ ಸಾಹಸ ಪರಾಕ್ರಮಗಳ ಹಿನ್ನೆಲೆಯಲ್ಲಿ ಈ ಆಲೋಚನೆಯು ಮೂಡಿ ಬಂದಿದೆ. ಇಂತಹ ವಿಶ್ವ ವಿಜೇತನಾಗುವ ಆಲೋಚನೆಯು ಹಿಂದಿನ ಅನೇಕ ಬಾದಶಹನ ಮುಂದೆಯೂ ಬಂದಿತ್ತು. ಹಾಗೂ ಬಾದಶಹರವರ ಪರಾಕ್ರಮಿ ವ್ಯಕ್ತಿತ್ವ ಧೈರ್ಯ ಸಾಹಸ ಮತ್ತು ರಾಜ ಖಜಾನೆಯ ಸಂಪನ್ಮೂಲಗಳು ಮತ್ತು ಸೈನ್ಯ ಮೊದಲಾದ ಎಲ್ಲಾ ಅಂಶಗಳನ್ನು ಗಮನಿಸಿದಲ್ಲಿ ತಾವು ಕೂಡ ವಿಶ್ವ ವಿಜೇತರಾಗುವುದು ಕಷ್ಟಸಾಧ್ಯವೇನಲ್ಲ. ಬಾದಶಹರವರು ರಾಜಧಾನಿಯಿಂದ ದೂರ ಹೋಗಿ ಬೇರೆ ದೇಶಗಳ ಮೇಲೆ ಯುದ್ಧ ಸಾರುತ್ತ ಬಹು ದೀರ್ಘಾವಧಿಯವರೆಗೆ ವಿದೇಶಗಳಲ್ಲಿ ನೆಲೆಸಿದಾಗ ಇಲ್ಲಿ ಬಾದಶಹರ ಗೈರು ಹಾಜರಿಯಲ್ಲಿ ರಾಜ್ಯದ ಕರ್ತವ್ಯಗಳನ್ನು ನಿರ್ವಹಿಸಬಲ್ಲ ಯುವ ಬಹದ್ದೂರ್ ಸರ್ದಾರರು ಇಲ್ಲಿದ್ದಾರೆ. ಅಷ್ಟೇ ಅಲ್ಲದೆ ಬಾದಶಹರವರು ಬೇರೆ ದೇಶವನ್ನು ಗೆದ್ದ ನಂತರ ಅಲ್ಲಿ ತಮ್ಮ ಪ್ರತಿನಿಧಿಯನ್ನು ನೇಮಕ ಮಾಡಿ ಖುದ್ದು ದೆಹಲಿ ಅಥವಾ ಇನ್ನು ಬೇರೆ ಯಾವುದಾದರೂ ದೇಶದತ್ತ ಹೋದ ನಂತರ ಅವರ ಬೆನ್ನ ಹಿಂದೆ ಆ ಪ್ರತಿನಿಧಿಯು ಬಾದಶಹರ ಆಜ್ಞೆಯನ್ನು ಧಿಕ್ಕರಿಸುವ ಸಂಭವವು ಕೂಡ ಇದೆ. ಏಕೆಂದರೆ, ಇಂದಿನ ಕಾಲವು ಅಲೆಗ್ಸಾಂಡರ್‌ನ ಅವಧಿಗಿಂತ ತೀರಾ ಭಿನ್ನವಾಗಿದೆ. ಅಲೆಗ್ಸಾಂಡರ್‌ನ ಕಾಲಾವಧಿಯಲ್ಲಿ ವಾಗ್ದಾನ ಭಂಗ, ಮೋಸ ಮತ್ತು ವಿಶ್ವಾಸಘಾತಕತನ ಮೊದಲಾದ ಕೆಟ್ಟ ಸಂಪ್ರದಾಯಗಳು ತೀರಾ ಕಡಿಮೆ ಇದ್ದವು. ಅಂದಿನ ಜನರು ತಮ್ಮ ವಾಗ್ದಾನಕ್ಕೆ ನಿಷ್ಠರಾಗಿ ಇರುತ್ತಿದ್ದರು ಮತ್ತು ತಮ್ಮ ವಾಗ್ದಾನವನ್ನು ಪ್ರಾಣ ಕೊಟ್ಟಾದರೂ ಪಾಲಿಸುತ್ತಿದ್ದರು. ಹಾಗೂ ಅಲೆಗ್ಸಾಂಡರ್‌ನ ಜೊತೆಯಲ್ಲಿ ಅರಿಸ್ಟಾಟಲ್‌ನಂತಹ ಅದ್ಭುತ ವೈಚಾರಿಕತೆಯ ಮತ್ತು ಬುದ್ಧಿ ಮತ್ತೆಯ ಮಂತ್ರಿ ಇದ್ದ ಎಂಬುದನ್ನು ನಾವು

ಮನಗಾಣ ಬೇಕಾಗಿದೆ. ಹಾಗೂ ಅಲೆಗ್ಸಾಂಡರ್‌ನನ್ನು ಅತ್ಯಂತ ಮಾನ್ಯತೆಯಿಂದ ಕಂಡು ಅವನ ಆಜ್ಞಾ ಪರಿಪಾಲನೆಯು ತಮ್ಮ ಕಡ್ಡಾಯ ಕರ್ತವ್ಯವೆಂಬ ವಿಚಾರವು ರೋಮನಂತಹ ವಿಶಾಲ ಹಾಗೂ ಮಹಾನ್ ದೇಶದ ಪ್ರಜೆಗಳು ತಕರಾರಿಲ್ಲದೆ ಒಪ್ಪುವಲ್ಲಿ ಅರಿಸ್ಟಾಟಲ್‌ನ ವೈಚಾರಿಕತೆ ಮತ್ತು ಬುದ್ಧಿವಂತ ತಂತ್ರಗಾರಿಕೆಯ ಫಲವಾಗಿದೆ. ಅಲೆಗ್ಸಾಂಡರ್‌ನು ಸಂಪೂರ್ಣವಾಗಿ ಮೂವತ್ತೆರಡು ವರ್ಷಗಳವರೆಗೆ ತನ್ನ ದೇಶದಿಂದ ಹೊರಗಿದ್ದು ತನ್ನ ವಿಜಯದ ವರ್ತುಲವನ್ನು ವಿಸ್ತಾರಗೊಳಿಸುತ್ತಿದ್ದ ಆದರೆ ಅವನ ಗೈರು ಹಾಜರಿಯ ಕಾರಣದಿಂದ ರಾಜ್ಯದ ಸುವ್ಯವಸ್ಥೆಯಲ್ಲಿ ಯಾವುದೇ ಲೋಪವುಂಟಾಗಲಿಲ್ಲ. ಇಡೀ ವಿಶ್ವವನ್ನು ಜಯಿಸಿ ಅಲೆಗ್ಸಾಂಡರನು ತನ್ನ ದೇಶಕ್ಕೆ ಮರಳಿ ಹೋದಾಗ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಅವನು ತನ್ನ ಒಬ್ಬ ಪ್ರಾಮಾಣಿಕ ಆಜ್ಞಾಧಾರಕನನ್ನು ಕಂಡ. ಒಂದು ವೇಳೆ ಹುಜೂರ್ ಬಾದಶಹರವರಿಗೂ ತಮ್ಮ ಪ್ರಜೆಗಳು ಮತ್ತು ಸರ್ದಾರರ ಮೇಲೆ ಇದೇ ರೀತಿಯಲ್ಲಿ ಅಂದರೆ ಅಲೆಗ್ಸಾಂಡರ್‌ಗೆ ತನ್ನ ಪ್ರಜೆಗಳು ಮತ್ತು ಸರ್ದಾರರ ಮೇಲೆ ಇದ್ದಂತಹ ನಂಬಿಕೆ ಇದ್ದಲ್ಲಿ ಹುಜೂರ್‌ರವರ ತಮ್ಮ ಇರಾದೆಯಂತೆ ನಡೆದುಕೊಳ್ಳಬಹುದು. ಈ ವಿಷಯದಲ್ಲಿ ತಮಗೆ ವಿರೋಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸೂಕ್ತವಲ್ಲ". ತನ್ನ ಹೆಸರನ್ನು ಹೋಲುತ್ತಿದ್ದ ಹೆಸರನ್ನು ಹೊಂದಿದ್ದ. ಕೋತ್ವಾಲನ ಪ್ರವಚನವನ್ನು ಬಾದಶಹನು ಅತ್ಯಂತ ಗಂಭೀರವಾಗಿ ಆಲಿಸಿದ ಮತ್ತು ಹೇಳಿದ, "ನೀನು ಪ್ರಸ್ತಾಪಿಸುತ್ತಿರುವ ಅಡೆತಡೆಗಳನ್ನು ನಾನು ಗಂಭೀರವಾಗಿ ಆಲೋಚಿಸಿದಲ್ಲಿ ನಾನು ವಿಶ್ವ ವಿಜೇತನಾಗುವ ನನ್ನ ಇರಾದೆಯನ್ನು ಕೈಬಿಡಬೇಕಾಗುತ್ತದೆ. ಮತ್ತು ನಾನು ಬರೀ ದೆಹಲಿಯ ಬಾದಶಹತ್ವದ ಮೇಲೆ ಮಾತ್ರ ತೃಪ್ತಿ ಪಟ್ಟಿಕೊಳ್ಳಬೇಕಾಗುತ್ತದೆ. ಹೀಗಾದಲ್ಲಿ ನನ್ನ ಈ ಆಡಂಬರ, ವೈಭವ ಈ ಗುಲಾಮರು ಸೇವಕರು, ಈ ತುಂಬಿರುವ ಖಜಾನೆಗಳು ಮತ್ತು ನಗನಾಣ್ಯಗಳು ಯಾವ ಪುರುಷಾರ್ಥಕ್ಕೆ? ಮತ್ತು ಇಡೀ ಪ್ರಪಂಚವನ್ನು ವಶಪಡಿಸಿಕೊಳ್ಳುವ ನನ್ನ ಇಚ್ಛೆ ಯಾವ ರೀತಿಯಲ್ಲಿ ಪೂರೈಸಬಹುದು?"

ಬಾದಶಹನ ಮಾತಿಗೆ ಅಲಾಉಲ್‌ಮುಲ್ಕ್‌ನು ಹೀಗೆಂದು ಉತ್ತರಿಸಿದ, "ಈ ಹೊತ್ತಿನಲ್ಲಿ ಹುಜೂರ್‌ರವರ ದೃಷ್ಟಿಯಲ್ಲಿ ಇರುವ ಎರಡು ಯುದ್ಧಗಳ ವೆಚ್ಚವು ಇಡೀ ತಮ್ಮ ಖಜಾನೆಯನ್ನು ಕಬಳಿಸುವ ಸಾಧ್ಯತೆಯಿದೆ. ಮೊದಲ ಯುದ್ಧದ ರೂಪು ರೇಷೆಯೆನೆಂದರೆ, ಹಿಂದೂಸ್ಥಾನದ ಗಡಿಭಾಗದ ಎಲ್ಲಾ ಪಟ್ಟಣಗಳನ್ನು ಗೆಲ್ಲಬೇಕೆಂಬುದು. ದಕ್ಷಿಣ ಭಾಗದಲ್ಲಿ ರಣಥಂಬೂರ್, ಜಾಲೂರ್ ಮತ್ತು ಚಂದೇರಿ ಪಶ್ಚಿಮದಲ್ಲಿ ಮುಹೀತ್‌ವರೆಗಿನ ಪ್ರದೇಶ ಉತ್ತರದಲ್ಲಿ ಬಲ್ಕಾನ್ ಮತ್ತು ಕಾಬೂಲ್‌ವರೆಗಿನ ಭೂಭಾಗವನ್ನು ಗೆದ್ದುಕೊಂಡು ಈ ಯೋಜನೆಯನ್ನು ಪೂರೈಸಬಹುದಾಗಿದೆ. ಮತ್ತು ವಿದ್ರೋಹಿ ಹಾಗೂ ಕಿಡಿಗೇಡಿಗಳ ಕೇಂದ್ರಸ್ಥಾನವಾಗಿರುವ ಪ್ರದೇಶಗಳಲ್ಲಿ ವಿಜಯ ಪ್ರಾಪ್ತಿಯಾದಲ್ಲಿ ಹಿಂದೂಸ್ಥಾನವು ಎಲ್ಲಾ ರೀತಿಯ ಪಿತೂರಿ ಮತ್ತು ದಂಧೆಗಳಿಂದ ಮುಕ್ತವಾಗುತ್ತದೆ. ಎರಡನೆಯ ಯೋಜನೆ ಎಂದರೆ ಮೊಘಲರ ಆಕ್ರಮಣಗಳನ್ನು

ದಮನ ಮಾಡುವುದರ ಬಗ್ಗೆ ಆಗಿದೆ. ಮೊಘಲರ ಆಕ್ರಮಣದ ಮಾರ್ಗಕ್ಕೆ ಬಂಡೆಯಂತೆ ಅಚಲವಾಗಿ ಅಡ್ಡವಾಗಿ ನಿಂತಿರುವ ದೇವಾಲಪುರ ಮತ್ತು ಮುಲ್ತಾನ್‌ನಂತಹ ಸರಹದ್ದಿನ ಪಟ್ಟಣಗಳ ಕೋಟೆಗಳನ್ನು ಅತ್ಯಂತ ಬಲಾಢ್ಯ ಮತ್ತು ಬಲಿಷ್ಠವಾಗಿ ಮಾಡುವುದು ಮತ್ತು ಸದಾಕಾಲ ಅವುಗಳ ನಿಗಾವಣೆಯನ್ನು ಮಾಡಬೇಕಾದುದು ಹುಜೂರ್‌ರವರ ಆದ್ಯ ಕರ್ತವ್ಯವಾಗಿದೆ. ಹೀಗಾಗಿ ಈ ಎರಡು ಮಹಾನ್ ಯೋಜನೆಗಳನ್ನು ಕಾರ್ಯಗತಗೊಳಿಸಿದ ನಂತರ ಹುಜೂರ್‌ರವರು ರಾಜಧಾನಿಯಲ್ಲಿ ಶಾಂತಿ ಮತ್ತು ನೆಮ್ಮದಿಯಿಂದ ರಾಜ್ಯಾಡಳಿತವನ್ನು ನಡೆಸಬಹುದಾಗಿದೆ ಹಾಗೂ ತಮ್ಮ ನಂಬಿಗಸ್ಥ ಸರ್ದಾರರನ್ನು ಬಲಿಷ್ಠ ಮತ್ತು ಮಹಾನ್ ಸೈನ್ಯದೊಡನೆ ನಾಲ್ಕು ದಿಕ್ಕುಗಳಲ್ಲಿರುವ ದೂರ ದೇಶಗಳಿಗೆ ಕಳುಹಿಸಬಹುದಾಗಿದೆ. ಹೀಗೆ ಮಾಡುವುದರ ಮೂಲಕ ಹುಜೂರ್‌ರವರ ಯುದ್ಧ ನೈಪುಣ್ಯದ ಬಾವುಟವನ್ನು ಮೇಲಕ್ಕೆ ಏರಿಸುತ್ತಾ ಲೋಕದ ಒಡೆಯನ ಹೆಸರನ್ನು ಚಿರಸ್ಥಾಯಿಯಾಗಿ ಮಾಡಬಹುದು. ಆದರೆ ಈ ಎಲ್ಲಾ ಉದ್ದೇಶ ಸಾಧನೆಯ ಸಲುವಾಗಿ ಹುಜೂರ್‌ರವರು ಕುಡಿತದ ಅಭ್ಯಾಸವನ್ನು ಮತ್ತು ಭೋಗವಿಲಾಸದ ಜೀವನವನ್ನು ಮತ್ತು ಬೇಟೆ ವಿಹಾರವನ್ನು ಅದಷ್ಟು ಕಡಿಮೆ ಮಾಡಿ ಈ ಯುದ್ಧಗಳ ಯೋಜನೆಗಳ ಬಗ್ಗೆ ಖುದ್ದು ಆಸಕ್ತಿಯನ್ನು ವಹಿಸಬೇಕು." ತನ್ನ ಅನುಭವಿ ಹಾಗೂ ರಾಜಕಾರಣದಲ್ಲಿ ಚತುರನಾದ ಸರದಾರನ ವಿಚಾರ ಪ್ರಚೋದಕ ಪ್ರವಚನವನ್ನು ಕೇಳಿದ ಅಲ್ಲಾವುದ್ದೀನನು ತುಂಬಾ ಪ್ರಭಾವಿತನಾದ. ಮತ್ತು ಅವನು ಅಲಾಉಲ್‌ಮುಲ್ಕ್‌ನ ವಿವೇಕ ಮತ್ತು ಪ್ರಜ್ಞೆಯ ಬಗ್ಗೆ ತುಂಬಾ ಪ್ರಶಂಸೆಯನ್ನು ಮಾಡಿದ. ಹಾಗೂ ಅವನಿಗೆ ಚಿನ್ನದ ಎಳೆಗಳಿಂದ ತಯಾರಿಸಿದ ಜರ್‌ದೋಜಿಯ ವಸ್ತ್ರಗಳು ಹಾಗೂ ಅದರ ಮೇಲೆ ಸಿಂಹದ ಮುಖವನ್ನು ಕಸೂತಿ ಮಾಡಿದ ಬಟ್ಟೆ ಮತ್ತು ಹತ್ತು ಸಾವಿರ ತಂಗ ಮತ್ತು ಜೀನು ಹಾಗೂ ಲಗಾಮುಗಳಿಂದ ಶೋಭಿತವಾದ ಎರಡು ಕುದುರೆಗಳನ್ನು ಬಳುವಳಿಯಾಗಿ ನೀಡಿದ. ಅಲ್ಲಿ ಸೇರಿದ್ದ ಉಳಿದ ಸಭಾಸದರು ಕೂಡ ಅಲಾಉಲ್‌ಮುಲ್ಕ್‌ನ ಮೇಲ್ಕಂಡ ಸಂಭಾಷಣೆಯಿಂದ ಅತ್ಯಂತ ಸಂಪ್ರೀತರಾದರು ಮತ್ತು ಪ್ರತಿಯೊಬ್ಬ ಸರ್ದಾರನು ಕೂಡ ಅವನಿಗೆ ಸಾವಿರಾರು ತಂಗೆ ಹಣವನ್ನು ಮತ್ತು ಎರಡು ಕುದುರೆಗಳನ್ನು ಉಡುಗೊರೆಯ ರೂಪದಲ್ಲಿ ಅವನಿಗೆ ನೀಡಿದರು ಹಜರತ್‌ಶೇಕ್ ನಿಜಾಮುದ್ದೀನ್ ಔಲಿಯಾ ಅವರು ಕೂಡ ಅವನಿಗೆ ಶುಭವನ್ನು ಕೋರಿ ಆರ್ಶಿವಚನವನ್ನು ನೀಡಿದರು.

ರಣಥಂಬೂರ್ ಮೇಲೆ ಆಕ್ರಮಣ:

ಅಲಾಉಲ್‌ಮುಲ್ಕ್‌ನ ಸಲಹೆಯ ಮೇರೆಗೆ ಅಲ್ಲಾವುದ್ದೀನ್ ಖಿಲ್ಜಿಯು ಹಿಂದೂಸ್ಥಾನದ ಜಮೀನ್ದಾರರು ಮತ್ತು ರಾಜರನ್ನು ಸರಿದಾರಿಗೆ ತರುವ ಇರಾದೆಯನ್ನು ಮಾಡಿದ. ಅವನು ಸಮಾನಾದ ಒಡೆಯನಾದ ಅಲ್ಮಾಸ್‌ಬೇಗ್ ಮತ್ತು ಕಥಾದ ಒಡೆಯನಾದ ನುಸರತ್‌ಖಾನ್‌ನನ್ನು ದೆಹಲಿಗೆ ಕರೆಸಿದ್ದು ಅವರಿಬ್ಬರ ನೇತೃತ್ವದಲ್ಲಿ

ಬಲಾಢ್ಯ ಸೇನೆಯೊಂದನ್ನು ಹೊರಡಿಸಿ ರಣಥಂಬೂರ್‌ನ ಕೋಟೆಯನ್ನು ವಶಪಡಿಸಿಕೊಳ್ಳಲು ಆಜ್ಞೆ ಮಾಡಿದ. ರಣಥಂಬೂರ್‌ನ ರಾಜನು ದೆಹಲಿಯ ಪುರಾತನ ರಾಜ ವಂಶದ ಕುಡಿಯಾಗಿದ್ದ ಹಾಗು ದಕ್ಷಿಣದ ರಾಜ್ಯದಲ್ಲಿ ಅತ್ಯಂತ ವಿವೇಕದಿಂದ ರಾಜ್ಯಭಾರವನ್ನು ನಡೆಸುತ್ತಿದ್ದ. ಅಲ್ಲಾವುದ್ದೀನ್ ಖಿಲ್ಜಿಯ ಸರ್ದಾರರು ಮೊದಲು ಜಹಾಯನ್‌ನ ಕೋಟೆಯನ್ನು ವಶಪಡಿಸಿಕೊಂಡರು. ನಂತರ ರಣಥಂಬೂರ್‌ನ ಕೋಟೆಗೆ ಮುತ್ತಿಗೆ ಹಾಕಿದರು. ಒಂದು ದಿನ ಕೋಟೆಯ ಗೋಡೆಯ ಬಳಿ ತಲುಪಿದ ನುಸರತ್ ಬತೇರಿಯನ್ನು ಕಟ್ಟತೊಡಗಿದ. ಏಕಾ ಏಕೀ ಕೋಟೆಯ ಗೋಡೆಯ ಒಳಗಿನಿಂದ ಮ್ಯಾಂಗನೀಸ್‌ನ ಒಂದು ಕಲ್ಲು ಬಂದು ನುಸರತ್‌ಗೆ ತಗುಲಿತು. ಆ ಕಲ್ಲಿ ಏಟನಿಂದ ಅವನಿಗೆ ಹೆಚ್ಚಿನ ಗಾಯವೇನೂ ಆಗಲಿಲ್ಲ ಈ ಘಟನೆ ನಡೆದ ಎರಡು, ಮೂರು ದಿನಗಳೊಳಗೆ ಆ ಕೋಟೆಯನ್ನು ವಶಪಡಿಸಿಕೊಳ್ಳಲಾಯಿತು. ರಣಥಂಬೂರ್‌ನ ರಾಜನಾದ ಹಮೀರ್‌ದೇವನು ಅವಕಾಶವನ್ನು ಹೊಂಚು ಹಾಕಿ ಎರಡು ಲಕ್ಷ ಸೈನಿಕರೊಂದಿಗೆ ಕೂಡಿ ಯುದ್ಧ ಮಾಡುವ ಸಲುವಾಗಿ ಕೋಟೆಯಿಂದ ಹೊರಗೆ ಬಂದ. ಅಲ್ಮಾಸ್‌ಬೇಗನು ಆ ಹೊತ್ತಿನಲ್ಲಿ ಯುದ್ಧ ಮಾಡುವುದು ಸೂಕ್ತವಲ್ಲವೆಂದು ನಿರ್ಧರಿಸಿ ಮುತ್ತಿಗೆಯಿಂದ ಹಿಂದಕ್ಕೆ ಸರಿದು ಜಹಾಯನ್‌ನ ಕೋಟೆಯಲ್ಲಿ ಆಶ್ರಯವನ್ನು ಪಡೆದ. ಅಲ್ಮಾಸ್‌ಬೇಗನು ಈ ಎಲ್ಲಾ ಸಂಗತಿಗಳನ್ನು ಅಲ್ಲಾವುದ್ದೀನ್‌ಗೆ ತಿಳಿಸಿದ. ಈ ಸಂಗತಿ ತಿಳಿದ ಕೂಡಲೇ ಕೋಪೋದ್ರಿಕ್ತನಾದ ಅಲ್ಲಾವುದ್ದೀನನು ಖುದ್ದು ವೈಭವ ಮತ್ತು ಆಡಂಬರದೊಡನೆ ಜಹಾಯನ್‌ನ ಕೋಟೆಯತ್ತ ಹೊರಟ. ಅವನು ತಲ್‌ನಿಯತ್ ಎಂಬ ಸ್ಥಳವನ್ನು ತಲುಪಿದಾಗ ಅಲ್ಲಿ ಕೆಲದಿನಗಳ ಕಾಲ ನೆಲಸಿದ (ಮೇಲೆ "ತಲನಿಯತ್" ಎಂಬ ಶಬ್ದವು ತಪ್ಪಾಗಿದೆ ಇದರ ನಿಜವಾದ ಹೆಸರು "ತಲಪತ್" ಎಂದಾಗಿದ್ದು ಈ ಸ್ಥಳವು ದೆಹಲಿಯಿಂದ ಹದಿನೆಂಟು ಹರದಾರಿ ದೂರದಲ್ಲಿದೆ) ಅಲ್ಲಾವುದ್ದೀನನು ಪ್ರತಿದಿನವು ಕೂಡ "ಖಮರಗ" ಶಿಕಾರಿಯನ್ನು ನಡೆಸುವ ಹವ್ಯಾಸವನ್ನು ಹೊಂದಿದ್ದ. ("ಖಮರಗ" ಎಂದರೆ ಒಂದು ವಿಶೇಷ ವ್ಯವಸ್ಥೆಯ ಶಿಕಾರಿ ತಾಣವಾಗಿದೆ. ಸರ್ದಾರರು ಮತ್ತು ಬಾದಶಹ ಮೊದಲಾದವರು ಒಂದು ದೊಡ್ಡ ಮೈದಾನದಲ್ಲಿ ಜಿಂಕೆ ಅಥವಾ ಕೃಷ್ಣಮೃಗ ಮೊದಲಾದವುಗಳನ್ನು ಹೊರಗಟ್ಟಿ ನಂತರ ಅದರ ಬೇಟೆಯಾಡುತ್ತಾರೆ) ದಿನನಿತ್ಯದ ಅಭ್ಯಾಸದಂತೆ ಅಂದು ಕೂಡ ಅವನು ಶಿಕಾರಿಗೆ ಹೊರಟ. ಆದರೆ ಎಂದಿನಂತೆ ಅವನು ರಾತ್ರಿ ತನ್ನ ಬಿಡಾರಕ್ಕೆ ಮರಳಿ ಬರಲಿಲ್ಲ. ಬದಲಿಗೆ ಇಡೀ ರಾತ್ರಿ ಅವನು ಶಿಕಾರಿ ತಾಣದಲ್ಲಿ ಕಳೆದಿದ್ದ. ಮಾರನೇ ದಿನ ಎಲ್ಲರೂ ಸೇರಿ ಸೂರ್ಯೋದಯಕ್ಕಿಂತ ಮುಂಚಿತವಾಗಿಯೇ ಖಮರಗ ಶಿಕಾರಿ ತಾಣದಲ್ಲಿ ಬೇಟೆಯಾಡಬೇಕೆಂದು ಅಲ್ಲಾವುದ್ದೀನನು ಆಜ್ಞೆ ಮಾಡಿದ. ಮತ್ತು ಸ್ವತಃ ತನ್ನ ಕೆಲವು ಸಂಗಾತಿಗಳೊಂದಿಗೆ ಒಂದು ಎತ್ತರವಾದ ಸ್ಥಳದಲ್ಲಿ ಕುಳಿತು ಖಮರಗದ ಸಿದ್ಧತೆಯ ನಿರೀಕ್ಷೆಯನ್ನು ಮಾಡಲಾರಂಭಿಸಿದ. ಸಿದ್ಧತೆಯಾದ ಕೂಡಲೇ ಬೇಟೆಯಾಡಬಹುದೆಂದು ಅವನ ಎಣಿಕೆಯಾಗಿತ್ತು.

ಅಲ್ಲಾವುದ್ದೀನನ ಕೊಲೆಯ ವಿಫಲ ಪ್ರಯತ್ನ:

ಸುಲೇಮಾನ್ ಶಾಹ ಎಂಬುವಾತನು ಅಲ್ಲಾವುದ್ದೀನ್ ಖಿಲ್ಜಿಯ ಅಣ್ಣನ ಮಗನಾಗಿದ್ದ. ಅವನಿಗೆ "ರಾಕೆಟ್‌ಖಾನ್" ಎಂಬ ಬಿರುದನ್ನು ನೀಡಲಾಗಿತ್ತು. ಮತ್ತು ಅವನು ದೇಶದ ವಕೀಲನ ಹುದ್ದೆಯಲ್ಲಿ ನಿಯುಕ್ತನಾಗಿದ್ದ. ಅಲ್ಲಾವುದ್ದೀನನನ್ನು ಕೊಲೆ ಮಾಡಿ ರಾಜ್ಯದ ಆಡಳಿತವನ್ನು ತಾನೇಕೆ ಪಡೆದುಕೊಳ್ಳಬಾರದು ಎಂಬ ಆಲೋಚನೆಯು ಅವನ ಮನದಲ್ಲಿ ಮೂಡಿತು. ಈ ಆಲೋಚನೆಯ ಅವನ ಮನದಲ್ಲಿ ಮೂಡಿದ ನಂತರ ಅವನು ತನ್ನ ನೂರು ಮಂದಿ ನವ ಮುಸ್ಲಿಮರಾಗಿದ್ದ ಹಳೆಯ ಸೇವಕರನ್ನು ತನ್ನೊಡನೆ ಕರೆದುಕೊಂಡು ಖಮರಗದ ನಿರೀಕ್ಷೆಯಲ್ಲಿ ಕುಳಿತಿದ್ದ ಅಲ್ಲಾವುದ್ದೀನನು ಕಂಡ. ಎತ್ತರದ ಜಾಗದಲ್ಲಿ ಕುಳಿತಿದ್ದ ಅಲ್ಲಾವುದ್ದೀನನ ಬಳಿ ತಲುಪಿದ ಸುಲೇಮಾನ್ ಶಾಹ ಮತ್ತು ಅವನ ಸೇವಕರು ಅಲ್ಲಾವುದ್ದೀನನ ಮೇಲೆ ಏಕಾ ಏಕೀ ಬಾಣ ಬಿಡಲಾರಂಭಿಸಿದರು. ಅಲ್ಲಾವುದ್ದೀನನು ಕೆಲಹೊತ್ತಿನವರೆಗೆ ಸೆಣಸಾಡುತ್ತ ಆ ಬಾಣಗಳಿಂದ ತನ್ನನ್ನು ರಕ್ಷಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದ. ಆದರೂ ಅವನ ಭುಜಗಳ ಮೇಲೆ ಎರಡು ಗಾಯಗಳಾದವು ಕೂಡಲೇ ಅವನು ನಾಟಕ ಮಾಡಿ ಸತ್ತವನಂತೆ ನಟಿಸುತ್ತ ಕೆಳಗೆ ಬಿದ್ದ. ಇದನ್ನು ಕಂಡ ಆ ಸುಲೇಮಾನ್ ಶಾಹ್ ಕುದುರೆಯಿಂದ ಇಳಿದವನೇ ಅವನ ತಲೆಕಡೆಯಲು ಮುಂದಾದ. ಸೈನಿಕರ ಒಂದು ತಂಡವು ಸುಲೇಮಾನ್ ಶಾಹನನ್ನು ಸುತ್ತುವರೆದರು ಮತ್ತು ಅವರುಗಳು ಅಲ್ಲಾವುದ್ದೀನ್ ಈಗಾಗಲೇ ಸಾವನ್ನಪ್ಪಿರುವುದರಿಂದ ಸುಲೇಮಾನ್ ಶಾಹನ ಆಜ್ಞೆಯನ್ನು ಪಾಲಿಸುವುದಾಗಿ ಅವನಿಗೆ ಬೆಂಬಲವನ್ನು ಸೂಚಿಸಿದರು. ಸುಲೇಮಾನ್ ಶಾಹನು ಆ ಸೈನಿಕರ ಮಾತನ್ನು ನಂಬಿ ಕುದುರೆಯ ಮೇಲೆ ಕುಳಿತ ಹಾಗೂ ರಾಜನ ಸಿಂಹಾಸನದ ಬಳಿ ತಲುಪಿದ ಮತ್ತು ಸಿಂಹಾಸನದ ಮೇಲೆ ಅಸೀನನಾದ. ಇಡೀ ಸೈನ್ಯದಲ್ಲಿ ತಾನು ಅಲ್ಲಾವುದ್ದೀನನನ್ನು ಕೊಲೆ ಮಾಡಿ ರಾಜ್ಯದ ಪತೋಟಿಯನ್ನು ಪಡೆದಿರುವುದಾಗಿ ಅವನು ಪ್ರಚಾರ ಪಡಿಸಿದ. ಸೈನ್ಯಕ್ಕೆ ಅವನ ಪ್ರಚಾರದ ವೈಖರಿಯ ಮೇಲೆ ನಂಬಿಕೆ ಬಂದಿತು ಮತ್ತು ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ಥಾನ ಮಾನದ ರೀತ್ಯಾ ಸುಲೇಮಾನನ ಸನ್ನಿಧಿಗೆ ಹಾಜರಾದರು. ಮತ್ತು ಅವನಿಗೆ ಅಭಿನಂದನೆಗಳನ್ನು ಸಲ್ಲಿಸಿ ಅವನನ್ನು ರಾಜನೆಂದು ಅಂಗೀಕರಿಸಿದರು. ಉದ್ಘೋಷಕರು ಅಭಿನಂದನೆಗಳ ಘೋಷಣೆಗಳನ್ನು ಮಾಡಲಾರಂಭಿಸಿದರು ಮತ್ತು ಪ್ರವಚನಕಾರರು ಕುರಾನಿನ ಪಠನವನ್ನು ಆರಂಭಿಸಿದರು. ಹಾಗೂ ಗಾಯಕರು ಸಂಭ್ರಮದ ಗೀತೆಗಳನ್ನು ಹಾಡಲಾರಂಭಿಸಿದರು. ಸುಲೇಮಾನ್ ರಾಕೆಟ್‌ಖಾನನು ಅನನುಭವಿ ಮತ್ತು ದುಡುಕು ಸ್ವಭಾವವನ್ನು ಹೊಂದಿದ್ದ. ಅವನು ತತ್‌ಕ್ಷಣವೇ ರಾಜನ ಅರಮನೆಗೆ ಪ್ರವೇಶಿಸಲು ಮನಸ್ಸು ಮಾಡಿ ಅರಮನೆಯ ದ್ವಾರದ ಬಳಿ ತಲುಪಿದ. ಖೋಜಗಳ ಸರದಾರನಾಗಿ ಮಲ್ಲಿಕ್ ದಿನಾರ್ ಹರಮಿಯು ತನ್ನ ಸಶಸ್ತ್ರ ತಂಡದೊಂದಿಗೆ ಅರಮನೆಯ ರಕ್ಷಣೆಯನ್ನು ಮಾಡುತ್ತಿದ್ದ. ಅವನು ಸುಲೇಮಾನ್ ಶಾಹನನ್ನು ತಡೆದ ಹಾಗೂ ತಾನು ಬಾದಶಹ ಅಲ್ಲಾವುದ್ದೀನನ ಕಡಿದ

ತಲೆಯನ್ನು ನೋಡುವವರೆಗೂ ಸುಲೇಮಾನ್ ಶಾಹ್‌ನನ್ನು ಅರಮನೆಯ ಒಳಗಡೆ ಪ್ರವೇಶಿಸಲು ಅವಕಾಶ ನೀಡುವುದಿಲ್ಲವೆಂದು ಸ್ಪಷ್ಟ ಪಡಿಸಿದ.

ಇತ್ತ ಅಲ್ಲಾವುದ್ದೀನನಿಗೆ ಪ್ರಜ್ಞೆಯು ಮರುಕಳಿಸಿದ ನಂತರ ಅವನು ತನ್ನ ಗಾಯಗಳ ಮೇಲೆ ಪಟ್ಟಿಯನ್ನು ಕಟ್ಟಿದ ಹಾಗೂ ಸುಲೇಮಾನ್ ಶಾಹ ತನ್ನ ಮೇಲೆ ನಡೆಸಿರುವ ಮಾರಣಾಂತಿಕ ಹಲ್ಲೆಯ ಹಿನ್ನೆಲೆಯಲ್ಲಿ ತನ್ನ ರಾಜ್ಯದ ಇನ್ನೂ ಇತರೆ ಸರ್ದಾರರ ಕೈವಾಡವಿದೆಯೋ ಎಂಬ ಸಂದೇಹ ಅವನ ಮನದಲ್ಲಿ ಹಾದು ಹೋಯಿತು. ಅವನು ತನ್ನೊಡನೆ ಸೇರಿದ್ದ ಸುಮಾರು ಐವತ್ತರಿಂದ ಅರವತ್ತು ಮಂದಿ ಸೈನಿಕರ ತಂಡದೊಂದಿಗೆ ಕೂಡಿ ಅಲ್ಮಾಸ್‌ಬೇಗನ ಬಳಿ ಜಹಾಯನ್‌ಗೆ ಹೋಗಬೇಕೆಂದು ನಿಶ್ಚಯಿಸಿದ. ಆದರೆ ಅಲ್ಲಾವುದ್ದೀನನ ಖಾಸಾ ಸಂಗಾತಿಯಾದ ಮಲ್ಲಿಕ್ ಹಮೀದುದ್ದೀನ್ ಬಿನ್ ಉಮ್‌ದತುಲ್ ಮುಲ್ಕ್‌ನು ಅವನ ಈ ನಿರ್ಧಾರವನ್ನು ವಿರೋಧಿಸಿದ ಮತ್ತು ಹೇಳಿದ, "ಹುಜೂರ್‌ರವರು ಈ ಸಂದರ್ಭದಲ್ಲಿ ರಾಜನ ಅರಮನೆಯತ್ತ ನಡೆಯುವುದು ಸೂಕ್ತ. ಏಕೆಂದರೆ ಸುಲೇಮಾನ್ ಶಾಹನ ಹಿಡಿತ ಇನ್ನೂ ಬಿಗಿಯಾಗಿಲ್ಲ. ಆದ್ದರಿಂದ ನಿಮ್ಮ ಹಳೆಯ ಸೈನಿಕರು ನಿಮ್ಮ ಛತ್ರಿ ಚಾಮರಗಳನ್ನು ಕಂಡೊಡನೆಯೇ ನಿಮ್ಮ ನೆರವಿಗೆ ಧಾವಿಸುವರು ಎಂಬ ನಿರೀಕ್ಷೆ ನನಗೆ ಇದೆ. ಹೀಗಾಗಿ ಸುಲೇಮಾನ್ ಶಾಹನ ಸಂಪೂರ್ಣ ಯೋಜನೆಯು ತಲೆ ಕೆಳಗಾಗುವುದರಲ್ಲಿ ಯವುದೇ ಸಂಶಯವಿಲ್ಲ. ಆದರೆ ಈಗ ಅವನಿಗೆ ಕಾಲಾವಕಾಶ ಸಿಕ್ಕಿದಲ್ಲಿ ಮಾತ್ರ ಅವನು ಬಲಿಷ್ಠನಾಗುತ್ತಾನೆ." ಹಮೀದನ ಈ ಸಲಹೆಯು ಅಲ್ಲಾವುದ್ದೀನನಿಗೆ ಸಮಂಜಸವೆನಿಸಿತು. ಅವನು ಕೂಡಲೇ ಸವಾರಿಯನ್ನು ಏರಿದ ಮತ್ತು ಕಾಡಿನಲ್ಲಿ ಬಿದ್ದಿದ್ದ ಛತ್ರಿ ಚಾಮರವನ್ನು ಕೂಡಲೇ ಹುಡುಕಿ ತರಲಾಯಿತು. ಅಲ್ಲಾವುದ್ದೀನನು ಅತ್ಯಂತ ನೆಮ್ಮದಿಯಿಂದ ಮತ್ತು ಸಾವಧಾನದಿಂದ ಕೂಡಿ ದರ್ಬಾರ್ ಸಭಾಂಗಣದ ಕಡೆಗೆ ನಡೆದ. ಮಾರ್ಗ ಮಧ್ಯದಲ್ಲಿ ಯಾವ ಸೈನಿಕರ ದೃಷ್ಟಿಯು ಅವನ ಮೇಲೆ ಬಿದ್ದರೂ ಅವನು ತತ್‌ಕ್ಷಣ ವಿಧೇಯತೆಯಿಂದ ಬಾದಶಹನನ್ನು ಹಿಂಬಾಲಿಸ ತೊಡಗುತ್ತಿದ್ದ. ಹೀಗಾಗಿ ಅವರು ದರ್ಬಾರ್ ಸಭಾಂಗಣವನ್ನು ತಲುಪುವ ವೇಳೆಗೆ ಸುಮಾರು ಐನೂರು ಮಂದಿ ಸೈನಿಕರು ಅಲ್ಲಾವುದ್ದೀನನ ಜೊತೆಗೂಡಿದ್ದರು. ಅಲ್ಲಾವುದ್ದೀನನು ಒಂದು ಎತ್ತರದ ಜಾಗವನ್ನು ಏರಿ ರಾಜ ಲಾಂಛನಗಳಾದ ಛತ್ರಿ ಚಾಮರಗಳನ್ನು ಎದ್ದು ಕಾಣುವಂತೆ ಪ್ರದರ್ಶಿಸಿದ. ಅದನ್ನು ಕಾಣುತ್ತಲೇ ಇಡೀ ಸೈನ್ಯವು ಅಲ್ಲಾವುದ್ದೀನ್‌ನತ್ತ ದೌಡಾಯಿಸಿತು ಮತ್ತು ಸುಲೇಮಾನ್ ಶಾಹನ ಆಸ್ಥಾನವು ಅಸ್ತವ್ಯಸ್ತವಾಯಿತು. ಕುದುರೆಯ ಸವಾರರು ಮತ್ತು ಆನೆಯ ಮಾವುತರು ತಮ್ಮ ತಮ್ಮ ಕುದುರೆ ಮತ್ತು ಆನೆಗಳನ್ನು ಸುಲೇಮಾನ್ ಶಾಹನ ಸನ್ನಿಧಿಯಲ್ಲಿ ಹಾಜರುಪಡಿಸಿದರು. ಅಲ್ಲಾವುದ್ದೀನನ ಶ್ವೇತವರ್ಣದ ಛತ್ರಿಗಳನ್ನು ಕಂಡೊಡನೆಯೇ ತಮ್ಮ ಎಲ್ಲಾ ಕುದುರೆ ಮತ್ತು ಆನೆಗಳೊಡನೆ ಅಲ್ಲಾವುದ್ದೀನನ ಕಡೆ ನಡೆದರು. ಸುಲೇಮಾನ್ ಶಾಹ ಏಕಾಂಗಿಯಾದ ಮತ್ತು ಅವನು ಗಾಬರಿಗೊಂಡು ಆಫ್ಘಾನ್ ಪುರದತ್ತ ಪಲಾಯನ ಮಾಡಲು ನಿರ್ಧರಿಸಿದ. ಅಲ್ಲಾವುದ್ದೀನನು ಎತ್ತರದ

ಸ್ಥಾನದಿಂದ ಕೆಳಗಿಳಿದು ಬಂದ ಮತ್ತು ತನ್ನ ದರ್ಬಾರನ್ನು ನಡೆಸಲು ತೊಡಗಿದ ಸೈನಿಕರ ಒಂದು ತಂಡವು ಸುಲೇಮಾನ್ ಶಾಹನನ್ನು ಹಿಂಬಾಲಿಸಿತು. ಆ ಸೈನಿಕರು ಆಫ್ಘಾನ್‌ಪುರವನ್ನು ತಲುಪಿ ಸುಲೇಮಾನ್‌ನನ್ನು ಸೆರೆ ಹಿಡಿದರು ಅವನ ತಲೆಯನ್ನು ಕಡಿದು ಅಲ್ಲಾವುದ್ದೀನನ ಸನ್ನಿಧಿಯಲ್ಲಿ ಹಾಜರು ಪಡಿಸಲಾಯಿತು. ಅಲ್ಲಾವುದ್ದೀನನ ಆಜ್ಞೆಯ ಮೇರೆಗೆ ಆ ತಲೆಯನ್ನು ಇಡೀ ಶಹರದೊಳಗೆ ಮೆರವಣಿಗೆ ಮಾಡಲಾಯಿತು. ಹಾಗೂ ಅಲಫ್‌ಖಾನ್ ಮತ್ತು ಇನ್ನಿತರೆ ಸರ್ದಾರರ ಹೆಸರಿನಲ್ಲಿ ವಿಜಯನಾಮೆಯನ್ನು ಜಾರಿಗೊಳಿಸಲಾಯಿತು. ಸುಲೇಮಾನ್ ಶಾಹನ ಸಹೋದರನಾದ ಖತಲಖ್‌ಖಾನ್‌ನನ್ನು ಕೂಡ ಅವನ ಸಂಗಡಿಗರೊಡನೆ ಹತ್ಯೆಗೈಯಲಾಯಿತು.

ರಣಥಂಬೂರ್‌ಕ್ಕೆ ಆಗಮನ :

ಸದರಿ ಗಾಯಗಳಿಂದ ಅಲ್ಲಾವುದ್ದೀನನು ಗುಣಮುಖನಾದ ನಂತರ ಅವನು ತಲಪತ್‌ನಿಂದ ರಣಥಂಬೂರ್‌ಗೆ ಬಂದ. ಅಲ್ಮಾಸ್‌ಬೇಗನು ಬಾದಶಹನೊಂದಿಗೆ ಭೇಟಿಯಾದ. ಅಲ್ಮಾಸ್‌ಬೇಗನು ಈಗಾಗಲೇ ರಣಥಂಬೂರ್‌ನ ಕೋಟೆಗೆ ಮುತ್ತಿಗೆಯನ್ನು ಹಾಕಿದ್ದ. ಆದರೆ ಈಗ ಬಾದಶಹನ ಆಜ್ಞೆಯ ಮೇರೆಗೆ ಮುತ್ತಿಗೆಯನ್ನು ತೀವ್ರಗೊಳಿಸಿದ ಹಾಗೂ ಕೋಟೆಯೊಳಗಿನ ಜನರನ್ನು ತೀವ್ರ ಸಂಕಷ್ಟಕ್ಕೆ ಗುರಿ ಪಡಿಸಿದ. ರಜಪೂತರು ಪ್ರತಿದಿನ ಕೋಟೆಯ ಮೇಲಿನಿಂದ ಕಲ್ಲು ಮತ್ತು ಬೆಂಕಿಯ ಉಂಡೆಗಳನ್ನು ಎಸೆಯುತ್ತಿದ್ದರು. ಈ ಕಾರಣದಿಂದ ಅನೇಕ ಸೈನಿಕರು ಮರಣವನ್ನಪ್ಪುತ್ತಿದ್ದರು. ಮುಸ್ಲಿಮರ ಸೈನ್ಯವು ಕನ್ನಕೊರೆತ ಮೊದಲಾದ ಕ್ರಮಗಳಿಂದ ಕೋಟೆಯಲ್ಲಿದ್ದವರಿಗೆ ಸಂಕಷ್ಟಗಳನ್ನು ನೀಡುವುದನ್ನು ಮುಂದುವರೆಸಿದರು. ಮುಸ್ಲಿಮರ ಸೈನ್ಯವು ಅಕ್ಕಪಕ್ಕದ ರಜಪೂತ ಸರ್ದಾರರ ರಾಜ್ಯಗಳಿಗೆ ಹೋಗಿ ತೀವ್ರ ನಾಶವನ್ನು ಉಂಟು ಮಾಡಿದರು. ಮುಸಲ್ಮಾನರ ಈ ಯುದ್ಧ ತಂತ್ರಗಳಿಂದ ದಿನೇ ದಿನೇ ರಜಪೂತರ ಧೈರ್ಯವು ಕುಸಿಯಲಾರಂಭಿಸಿತು.

ಅವಧ್ ಮತ್ತು ಬದಾಯೂನಿನ ಒಡೆಯರ ವಿದ್ರೋಹ:

ಮೇಲ್ಕಂಡ ಮುತ್ತಿಗೆಯು ಸುಧೀರ್ಘವಾದದ್ದರಿಂದ ಅವಧ್ ಮತ್ತು ಬದಾಯೂನ್‌ನ ಒಡೆಯರು ಮತ್ತು ಅಲ್ಲಾವುದ್ದೀನನ ಸೋದರಳಿಯಂದಿರು ಆದ ಅಮೀರ್ ಉಮ್ರು ಮತ್ತು ಮಂಕುಖಾನ್ ಎಂಬುವವರು ವಿದ್ರೋಹದ ಬಾವುಟವನ್ನು ಹಾರಿಸಿದರು. ಅವರ ಈ ಕೃತ್ಯದ ದೆಸೆಯಿಂದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಈ ಪರಿಸ್ಥಿತಿಯಲ್ಲಿ ಅಲ್ಲಾವುದ್ದೀನನು ಮೇಲ್ಕಂಡ ಸ್ಥಳಗಳ ಸರ್ದಾರರ ಹೆಸರಿನಲ್ಲಿ ಫರ್ಮಾನನ್ನು ಜಾರಿಗೊಳಿಸಿ ಆ ಇಬ್ಬರ ವಿದ್ರೋಹವನ್ನು ಬುಡ ಸಮೇತ ನಾಶ ಮಾಡಬೇಕೆಂದು ಆಜ್ಞೆ ಮಾಡಿದ. ಆ ಸರ್ದಾರರು ಬಾದಶಹನ ಆಜ್ಞೆಯನ್ನು ಜಾರಿಗೊಳಿಸಿದರು ಮತ್ತು ತಮ್ಮ ಸಂಘಟಿತ ಸೈನ್ಯದ ನೆರವಿನಿಂದ ವಿದ್ರೋಹಿಗಳ

ಹುಟ್ಟಡಗಿಸಿದರು. ಉಮ್ರು ಮತ್ತು ಮಂಕುನನ್ನು ಸೆರೆ ಹಿಡಿದು ಬಾದಶಹನ ಬಳಿ ಕಳಿಸಲಾಯಿತು. ಮತ್ತು ಅವರ ಸಂಗಡಿಗರು ಮತ್ತು ಬೆಂಬಲಿಗರ ಒಂದು ಅಪಾರ ಸಂಖ್ಯೆಯ ಜನರ ಗುಂಪನ್ನು ಕೊಲ್ಲಲಾಯಿತು. ಅಲ್ಲಾವುದ್ದೀನನು ರಣಥಂಬೂರ್‌ನ ಕೋಟೆಯ ಕೆಳಗೆ ಉಮ್ರು ಮತ್ತು ಮಂಕುಗೆ ಸಜೆಯನ್ನು ನೀಡಿದ. ಮೊದಲಿಗೆ ಅವರ ಕಣ್ಣುಗಳನ್ನು ಕೀಳಲಾಯಿತು. ಮತ್ತು ನಂತರ ಅವರಿಗೆ ಚಿತ್ರಹಿಂಸೆಯನ್ನು ನೀಡಿ ಕೊಲೆ ಮಾಡಲಾಯಿತು. ಈ ಕ್ರೂರ ಕ್ರಮಗಳನ್ನು ಕೈಗೊಂಡರೂ ಸಂಚಿನ ಜ್ವಾಲೆಯು ಆರಲಿಲ್ಲ. ಈ ಪಿತೂರಿಯನ್ನು ಅಡಗಿಸುವಷ್ಟರಲ್ಲಿ ಇನ್ನೊಂದು ಹೊಸ ಸಂಚು ಪ್ರಕಟವಾಯಿತು.

ಹಾಜಿ ಮೌಲಾನ ವಿದ್ರೋಹ:

ಅದೇ ದಿನಗಳಲ್ಲಿ ದೇಶದ ಒಬ್ಬ ಸರ್ದಾರನು ಮತ್ತು ಮುಲ್ಕ್ ಫಕ್ರುದ್ದೀನ್ ಕೊತ್ವಾಲ್‌ನ ಗುಲಾಮನು ಆದ ಹಾಜಿ ಮೌಲಾ ಎಂಬುವವನ ಸಾಮರ್ಥ್ಯವು ವೃದ್ಧಿಸಿತು. ಈ ವ್ಯಕ್ತಿಯು ಸುಲ್ತಾನ್ ಜಲಾಲುದ್ದೀನ್ ಖಿಲ್ಜಿಯ ಕಾಲದಲ್ಲಿ ದೆಹಲಿಯ ಮೇಲಧಿಕಾರಿಯಾಗಿದ್ದ. ಅವನು ಪರಿಸ್ಥಿಯನ್ನು ಅವಲೋಕಿಸಿದಾಗ ಅಲ್ಲಾವುದ್ದೀನನು ಬಹುಕಾಲದವರೆಗೆ ರಣಥಂಬೂರ್‌ನ ಮುತ್ತಿಗೆಯಲ್ಲಿ ನಿರತನಾಗಿದ್ದು ದೆಹಲಿಯಿಂದ ದೂರವಾಗಿರುವ ಅಂಶವು ತನಗೆ ನೆರವಾಗುವುದೆಂದು ಮನಗಂಡ. ಅಷ್ಟೇ ಅಲ್ಲದೆ ಮುಲ್ಕ್ ಅಲ್ಲಾವುದ್ದೀನ್ ಕೂಡ ಬಾದಶಹನ ಜೊತೆಯಲ್ಲಿ ಆ ಮುತ್ತಿಗೆಯಲ್ಲಿ ನಿರತನಾಗಿದ್ದ ಹಾಗೂ ದೆಹಲಿಯ ಆಡಳಿತ ವ್ಯವಸ್ಥೆಯಲ್ಲಿ ಅಪಾರ ಲೋಪಗಳಿದ್ದವು. ದೆಹಲಿಯ ಹಾಲಿ ಕೊತ್ವಾಲನಾಗಿದ್ದ ಬಾಯಜೀದನು ಪಟ್ಟಣದಿಂದ ಹೊರಗೆ ಬಂದು ಜಗುಲಿಯ ಮೇಲೆ ತನ್ನ ಸಭೆಗಳನ್ನು ನಡೆಸುತ್ತಿದ್ದ. ಅವನಿಂದ ದೆಹಲಿಯ ಜನತೆ ದುಃಖಿತರಾಗಿದ್ದು ಅಸಂತುಷ್ಟರಾಗಿದ್ದರು. ಹೀಗಾಗಿ ಯಾವುದಾದರೂ ವಿಪತ್ತು ಉಂಟಾದಲ್ಲಿ ಪಟ್ಟಣದ ಜನತೆ ಆ ಕೋತ್ವಾಲನಿಗೆ ನೆರವು ನೀಡುವುದಿಲ್ಲ ಎಂದು ಮುಂತಾಗಿ ಅವನು ಆಲೋಚನೆಯನ್ನು ಮಾಡಿದ. ಹೀಗಾಗಿ ಅವನು ಒಂದು ದಿನ ನಡುಮಧ್ಯಾಹ್ನದ ಹೊತ್ತಿನಲ್ಲಿ ಎಲ್ಲ ಜನರು ತಮ್ಮ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ತನ್ನ ಸಂಚನ್ನು ಕಾರ್ಯರೂಪಕ್ಕೆ ಇಳಿಸಿದ. ಎಲ್ಲಕ್ಕಿಂತ ಮೊದಲಿಗೆ ಬಾಯಜೀದ್ ಕೋತ್ವಾಲನ ಮನೆಗೆ ಹೋದ ಹಾಜಿ ಮೌಲಾನು ಬಾದಶಹನಿಂದ ಒಂದು ತುರ್ತು ಸಂದೇಶ ಬಂದಿದೆ ಎಂದು ಹೇಳಿದ. ಇದನ್ನು ಕೇಳಿದೊಡನೆಯೇ ಬಾಯೇಜಿದ್‌ನು ತನ್ನ ಮನೆಯಿಂದ ಹೊರಗೆ ಬಂದ ಕೂಡಲೇ ಹಾಜಿ ಮೌಲಾ ಸನ್ನೆ ಮಾಡಿದ. ಅವನ ಆದೇಶವನ್ನು ಪಾಲಿಸಿದ ಅವನ ಸಂಗಡಿಗರು ಬಾಯಜೀದ್‌ನ ಮೇಲೆ ಆಕ್ರಮಣ ಮಾಡಿ ಅವನ ದೇಹವನ್ನು ಕೊಚ್ಚಿ ಹಾಕಿದರು. ಕೂಡಲೇ ಹಾಜಿ ಮೌಲಾನು ಬಾಯಜೀದ್‌ನ ಕೊಲೆಯು ಬಾದಶಹನ ಆಜ್ಞೆಯ ಮೇರೆಗೆ ನಡೆದಿದೆ ಎಂದು ಜನರನ್ನು ನಂಬಿಸಿದ. ನಂತರ ಅವನು ಪಟ್ಟಣದ ಬಾಗಿಲುಗಳನ್ನು ಹಾಕುವಂತೆ

ತನ್ನ ಸೇವಕರಿಗೆ ಆಜ್ಞೆ ಮಾಡಿದ ಮತ್ತು ಒಬ್ಬ ವ್ಯಕ್ತಿಯನ್ನು ನವನಗರದ ಕೋತ್ವಾಲನಾದ ಅಲ್ಲಾವುದ್ದೀನ್ ಅಯಾಜ್‌ನ ಬಳಿ ಕಳಿಸಲಾಯಿತು. ಹಾಗೂ ಅವನಿಗೂ ಕೂಡ ಬಾದಶಹನ ತುರ್ತು ಸಂದೇಶ ಇದೆ ಎಂದು ಹೇಳಲಾಯಿತು. ಆದರೆ ಆದಾಗಲೇ ಅಯಾಜ್‌ಗೆ ಸಕಲ ಸುದ್ದಿಗಳು ತಲುಪಿದ್ದವು. ಅವನು ತನ್ನ ಸೈನ್ಯವನ್ನು ಒಟ್ಟುಗೂಡಿಸಿ ಹೊಸ ದೆಹಲಿಯ ಬಾಗಿಲುಗಳನ್ನು ಬಂದ್ ಮಾಡಿದ. ಹಾಜಿ ಮೌಲಾ ತನ್ನ ಸಂಗಡಿಗಳರೊಡನೆ ಕೆಂಪು ಅರಮನೆಗೆ ಹೋದ. ಅವನು ಅಲ್ಲಿದ್ದ ಎಲ್ಲಾ ಖೈದಿಗಳನ್ನು ಬಿಡುಗಡೆ ಮಾಡಿ ಅಲ್ಲಿದ್ದ ಎಲ್ಲಾ ಆಯುಧಗಳು ಕುದುರೆ ಮತ್ತು ಖಜಾನೆ ಮುಂತಾದವುಗಳನ್ನು ಅವರ ನಡುವೆ ಹಂಚಿ ಅವರುಗಳನ್ನು ತನ್ನೊಡನೆ ಕರೆದುಕೊಂಡ. ತದ ನಂತರ ಹಾಜಿ ಮೌಲಾನು ಅಲ್ವೀ ಎಂಬ ಹೆಸರಿನ ಒಬ್ಬ ವ್ಯಕ್ತಿಯನ್ನು ಬಲತ್ಕಾರದಿಂದ ಕೆಂಪಿನ ಅರಮನೆಯ ರಾಜ ಸಿಂಹಾಸನದ ಮೇಲೆ ಕೂರಿಸಿದ. ಅಲ್ವಿಉ ಸುಲ್ತಾನ್ ಶಂಸುದ್ದೀನ್ ಅಲ್ತಮಷ್‌ನ ಸಂತತಿಗೆ ಸೇರಿದವನಾಗಿದ್ದ. ಮತ್ತು ಅವನನ್ನು "ಶಾಹಿನ್‌ಶಾಹ್" ಎಂಬ ಬಿರುದಿನಿಂದ ಕರೆಯುತ್ತಿದ್ದರು. ದೆಹಲಿ ಪಟ್ಟಣದ ಎಲ್ಲಾ ಸರ್ದಾರರು ಮತ್ತು ಗಣ್ಯ ವ್ಯಕ್ತಿಗಳನ್ನು ಕರೆದು ಹಾಜಿ ಮೌಲಾನು ಅಲ್ವಿಯನ್ನು ಬಾದಶಹನನ್ನಾಗಿ ಅಂಗೀಕರಿಸುವಂತೆ ಒತ್ತಾಯಿಸಿದನು.

ಹಾಜಿ ಮೌಲಾನ ಕೊಲೆ:

ರಣಥಂಬೂರ್‌ನಲ್ಲಿದ್ದ ಅಲ್ಲಾವುದ್ದೀನ್‌ಗೆ ಮೇಲ್ಕಂಡ ವಿದ್ಯಮಾನಗಳು ತಿಳಿದು ಬಂದಾಗ ಅವನು ಮೌನವಾಗಿದ್ದ. ಅವನು ಈ ವಿಷಯವನ್ನು ಸಾಮಾನ್ಯ ಜನತೆಯವರೆಗೆ ತಲುಪಲು ಅವಕಾಶ ಕೊಡಲಿಲ್ಲ. ಹಾಗೂ ಕೋಟೆಯ ಮುತ್ತಿಗೆಯನ್ನು ದಿನೇ ದಿನೇ ತೀವ್ರಗೊಳಿಸತೊಡಗಿದ. ಅಲ್ವಿಯ ಪಟ್ಟಾಭಿಷೇಕವಾದ ನಂತರ ಒಂದು ವಾರ ಕಳೆಯುವಷ್ಟರಲ್ಲಿ ಮುಲ್ಕ್ ಹಮಿದುದ್ದೀನ್ ಕೋಕಾ ಬದಾಯೂನ್‌ಬಾಗಿಲನ್ನು ತೆರೆದು ಪಟ್ಟಣದಿಂದ ಹೊರಗೆ ಬಂದ. ಅವನ ಜೊತೆಯಲ್ಲಿ ಅವನ ಪುತ್ರರು ಕೂಡ ಇದ್ದರು. ಅವನ ಪುತ್ರರು ಒಬ್ಬೊಬ್ಬರು ಕೂಡ ವೀರಾಧಿವೀರರಾಗಿದ್ದರು. ಹಮೀದುದ್ದೀನ್ ಕೋಕಾನು ನಾಲ್ಕು ದಿಕ್ಕಿನಿಂದಲೂ ಜನರನ್ನು ಒಟ್ಟುಗೂಡಿಸಿದ. ಮತ್ತು ಮುಲ್ಕ್ ಹಜ್ಬರುದ್ದೀನ್ ಜಫರ್‌ಖಾನನ ಅಪಾರ ಸಂಖ್ಯೆಯ ಸೇವಕರನ್ನು ಜೊತೆಯಲ್ಲಿ ಕರೆದುಕೊಂಡ. ಆ ಜನರು ಅಮ್ರೋಹದಿಂದ ತೆರಿಗೆ ಸಂಗ್ರಹಿಸಲು ಅಲ್ಲಿಗೆ ಬಂದಿದ್ದರು. ಅವರೆಲ್ಲರನ್ನೂ ತನ್ನೊಡನೆ ಕರೆದುಕೊಂಡು ಮುಲ್ಕ್ ಹಮಿದುದ್ದೀನನು ಘಜ್ನಿ ಹೆಬ್ಬಾಗಿಲಿನಿಂದ ಪಟ್ಟಣ ಪ್ರವೇಶಿಸಿದ. ನಹಿಂದ್ ಹೆಬ್ಬಾಗಿಲ ಬಳಿ ಅವನು ಹಾಜಿ ಮೌಲಾಗೆ ಎದುರುಬದುರಾದ ಮತ್ತು ಉಭಯತ್ರರ ನಡುವೆ ಯುದ್ಧ ತೀವ್ರವಾಯಿತು. ಮುಲ್ಕ್ ಹಮೀದುದ್ದೀನನು ಅತೀವ ಪರಾಕ್ರಮವನ್ನು ಮೆರೆದ. ಅವನು ತನ್ನ ಕುದುರೆಯಿಂದ ಇಳಿದು ಹಾಜಿ ಮೌಲಾನನನ್ನು ಬಲವಾಗಿ ಹಿಡಿದುಕೊಂಡು ಅವನನ್ನು ಕುದುರೆಯ ಮೇಲಿನಿಂದ ಕೆಳಗೆ ಬಿಳಿಸಿ ಅವನ ಎದೆಯ ಮೇಲೆ ಏರಿ ಕುಳಿತ. ಆಗ

ಹಾಜಿ ಮೌಲಾನ ಸಂಗಡಿಯರು ಹಮೀದುದ್ದೀನ್‌ನನ್ನು ಕೊಲೆ ಮಾಡಲು ಸಕಲ ಪ್ರಯತ್ನವನ್ನು ಮಾಡಿದರು. ಆ ಪ್ರಯತ್ನದಲ್ಲಿ ಅವನು ತೀವ್ರವಾಗಿ ಗಾಯಗೊಂಡ. ಆದರೆ ಅವನು ಹಾಜಿ ಮೌಲಾನ ತಲೆಯನ್ನು ಕಡಿಯುವವರೆಗೂ ಅವನನ್ನು ಬಿಡಲಿಲ್ಲ. ಹಾಜಿ ಮೌಲಾನ ಕೊಲೆ ಮಾಡಿದ ನಂತರ ಹಮೀದುದ್ದೀನನು ಕೋಶಕ್‌ಲಾಲ್ ಎಂದು ಕರೆಯಲಾಗುತ್ತಿದ್ದ ಕೆಂಪಿನ ಅರಮನೆಗೆ ಬಂದ ಮತ್ತು ಅಲ್ವಿಯನ್ನು ಕೊಲೆ ಮಾಡಿ ಅವನ ತಲೆಯನ್ನು ಒಂದು ಭರ್ಜಿಯ ಮೇಲೆ ಎತ್ತಿ ಹಿಡಿದು ಇಡೀ ಪಟ್ಟಣದ ಗಲ್ಲಿಗಲ್ಲಿಗಳಲ್ಲಿ ಮೆರವಣಿಗೆ ಮಾಡಿದ. ತದ ನಂತರ ಹಮೀದುದ್ದೀನನು ಅಲ್ವಿಯ ತಲೆ ಮತ್ತು ವಿಜಯನಾಮೆಯನ್ನು ಅಲ್ಲಾವುದ್ದೀನನ ಸನ್ನಿಧಿಗೆ ಕಳಿಸಿಕೊಟ್ಟ. ಅಲ್ಲಾವುದ್ದೀನನು ಅಲ್ಮಾಸ್‌ಬೇಗ್ ಮತ್ತು ಅಲಫ್‌ಖಾನ್‌ನನ್ನು ದೆಹಲಿಗೆ ಕಳಿಸಿ ಅಪರಾಧಿಗಳಿಗೆ ಸೂಕ್ತ ಶಿಕ್ಷೆಗಳನ್ನು ನೀಡಬೇಕೆಂದು ಅಜ್ಞಾಪಿಸಿದ. ಮುಲ್ಕ್ ಫಕ್ರುದ್ದೀನ್ ಕೋತ್ವಾಲ್‌ನ ಪುತ್ರರನ್ನು ಕೂಡ ಕೊಲೆ ಮಾಡಲಾಯಿತು. ಅವರು ವಿದ್ರೋಹಿಗಳ ಜೊತೆಗೆ ಇರಲಿಲ್ಲ. ಆದರೆ ಹಾಜಿ ಮೌಲಾ ಫಕ್ರುದ್ದೀನ್ ಕೋತ್ವಾಲ್‌ನ ಪಾಲನೆ ಪೋಷನೆಯನ್ನು ಪಡೆದಿದ್ದು ಅವನಿಂದ ತರಬೇತಿಯನ್ನು ಹೊಂದಿದ್ದ ಕಾರಣದಿಂದ ನಿರಪರಾಧಿಗಳ ಮನೆ ಮಾರುಗಳನ್ನು ಹಾಳುಗೆಡುವಲಾಯಿತು.

ಅಲ್ಲಾವುದ್ದೀನನು ಒಂದು ವರ್ಷದ ಅವಧಿಯಲ್ಲಿ ಅಥವಾ ಇನ್ನೊಂದು ಐತಿಹ್ಯದ ಪ್ರಕಾರ ಮೂರು ವರ್ಷದ ಒಳಗಾಗಿ ಸುತ್ತಮುತ್ತಲಿನ ಸ್ಥಳಗಳಿಂದ ಒಂದು ಬಹು ದೊಡ್ಡ ಸೈನ್ಯವನ್ನು ಸಿದ್ದಗೊಳಿಸಿ ತನ್ನ ಸೈನಿಕರ ಬಳಿ ಚೀಲಗಳನ್ನು ಹಂಚಿದ. ಪ್ರತಿಯೊಬ್ಬನು ತನ್ನ ಚೀಲಗಳಲ್ಲಿ ಮರಳನ್ನು ತುಂಬಿಸಿ "ರನ್" ಎಂಬ ಕೊಳ್ಳದಲ್ಲಿ ಅದನ್ನು ಎಸೆಯಲಾರಂಭಿಸಿದರು. ಅವರುಗಳ ಮರಳಿನಿಂದ ಕೂಡಿದ ಚೀಲಗಳ ಎಸೆಯುವಿಕೆಯಿಂದ ಆ ಕೊಳ್ಳವು ತುಂಬಿಹೋಯಿತು ಮತ್ತು ಎತ್ತರಕ್ಕೇರಿತು. ಆ ಎತ್ತರದ ಮೂಲಕ ಮುಸ್ಲಿಮರು ಕೋಟೆಯೊಳಗಡೆ ಪ್ರವೇಶಿಸಿದರು ಹಾಗೂ ಕೋಟೆಯನ್ನು ಹಾಳುಗೆಡವಿದರು. ಹೀಗೆ ಕೋಟೆಯನ್ನು ಗೆದ್ದುಕೊಂಡರು ರಾಜ ಹಮೀರ್‌ದೇವ್‌ನನ್ನು ಅವನ ಕುಟುಂಬ ಸಮೇತ ಕೊಲೆ ಮಾಡಲಾಯಿತು. ಇತಿಹಾಸಕಾರರ ಪ್ರಕಾರ ಮೀರ್‌ಮೊಹಮ್ಮದ್ ಶಾಹ ಮತ್ತು ಅವನ ಸೈನಿಕರ ತಂಡವು ಜಾಲೂರ್‌ನಿಂದ ಪರಾರಿಯಾಗಿ ರಣಥಂಬೂರ್‌ನಲ್ಲಿ ಶರಣಾರ್ಥಿಗಳಾಗಿದ್ದರು. ರಣಥಂಬೂರಿನ ವಿಜಯ ಪ್ರಾಪ್ತಿಯಾದ ನಂತರ ಅಸಂಖ್ಯ ಮೊಘಲರ ಕೊಲೆಯನ್ನು ಮಾಡಲಾಯಿತು. ಮೀರ್‌ಮೊಹಮ್ಮದ್ ಶಾಹಗೆ ಕೂಡ ಯುದ್ಧರಂಗದಲ್ಲಿ ತೀವ್ರ ಸ್ವರೂಪದ ಗಾಯಗಳುಂಟಾದವು. ಮತ್ತು ಅವನು ಒಂದು ಕಡೆ ನೆಲದ ಮೇಲೆ ಬಿದ್ದಿದ್ದ. ಅವನ ಈ ಪರಿಸ್ಥಿತಿಯನ್ನು ಕಂಡಾಗ ಅಲ್ಲಾವುದ್ದೀನನಿಗೆ ಕರುಣೆ ಉಕ್ಕಿತು. ಅಲ್ಲಾವುದ್ದೀನನು ಅವನೊಡನೆ ಕೇಳಿದ, "ಒಂದು ವೇಳೆ ನಾನು ನಿನಗೆ ಸೂಕ್ತ ಔಷಧೋಪಚಾರವನ್ನು ನಡೆಸಿ ನಿನ್ನನ್ನು ಸಾವಿನ ಕರಾಳ ಹಸ್ತದಿಂದ ರಕ್ಷಿಸಿದಲ್ಲಿ ನೀನು ಗುಣಮುಖನಾದ ಮೇಲೆ ನನ್ನೊಡನೆ ಹೇಗೆ ವರ್ತಿಸುವೇ"? ಆಗ

ಮೀರ್‌ಮೊಹಮ್ಮದ್ ನುಡಿದ, "ನಾನು ಒಂದು ವೇಳೆ ಗುಣಮುಖನಾದಲ್ಲಿ ನಿನ್ನ ಕೊಲೆ ಮಾಡಿ ರಣಥಂಬೂರ್‌ನ ಆಳ್ವಿಕೆಯನ್ನು ರಾಜ ಹಮೀರ್‌ದೇವನ ಪುತ್ರರ ಸುಪರ್ದಿಗೆ ಕೊಡುತ್ತೇನೆ." ಈ ಉತ್ತರವನ್ನು ಕೇಳಿ ಅಲ್ಲಾವುದ್ದೀನನಿಗೆ ಅಪಾರ ಕೋಪ ಉಕ್ಕಿ ಬಂದಿತು. ಅವನು ಆನೆಗಳ ಕಾಲಿನ ಅಡಿಯಲ್ಲಿ ಮೀರ್‌ಮೊಹಮ್ಮದನ್ನು ತುಳಿಸಿ ಅವನ ಕೊಲೆ ಮಾಡಿಸಿದ. ತದ ನಂತರ ಅಲ್ಲಾವುದ್ದೀನನಿಗೆ ಮೀರ್‌ಮೊಹಮ್ಮದ್‌ನ ಪರಾಕ್ರಮ ಮತ್ತು ತನ್ನ ಒಡೆಯನ ಮೇಲೆ ಅವನಿಗೆ ಇದ್ದ ವಿಶ್ವಾಸವನ್ನು ಕಂಡು ಅವನ ಬಗ್ಗೆ ಗೌರವ ಮೂಡಿತು. ಕೂಡಲೇ ಅವನ ಶವವನ್ನು ಸಕಲ ವಿಧಿವಿಧಾನಗಳೊಡನೆ ದಫನ್ ಮಾಡಬೇಕೆಂದು ಆಜ್ಞೆ ಮಾಡಿದ. ಈ ಕಾರ್ಯಗಳಿಂದ ಪುರುಸತ್ತು ಆದ ನಂತರ ಅಲ್ಲಾವುದ್ದೀನನು ರಾಜಾ ಹಮೀರ್‌ದೇವನ ವಿಶ್ವಾಸದ್ರೋಹಿ ಸೇವಕನತ್ತ ತನ್ನ ಗಮನವನ್ನು ಕೇಂದ್ರೀಕರಿಸಿದ. ಹಾಗೂ ಅವನ ಎಲ್ಲಾ ಸೇವಕರ ಮಾರಣಹೋಮವನ್ನು ಮಾಡಿದ ಮತ್ತು ಅವರುಗಳು ತಮ್ಮ ಒಡೆಯನಿಗೆ ವಿಶ್ವಾಸಘಾತಕತನವನ್ನು ಮಾಡಿರುವಾಗ ತನ್ನೊಡನೆ ಅವರು ಹೇಗೆ ಸರಿಯಾಗಿ ನಡೆದುಕೊಳ್ಳಬಲ್ಲರು ಎಂದು ತೀರ್ಮಾನಿಸಿ ಅಪರಾಧಿಗಳಿಗೆ ಶಿಕ್ಷೆಯನ್ನು ನೀಡಿದ. ನಂತರ ಅಲ್ಲಾವುದ್ದೀನನು ಕೋಟೆಯೊಳಗೆ ಪ್ರವೇಶ ಮಾಡಿದ. ಆ ಕೋಟೆಯೊಳಗಡೆ ಅಗಣಿತವಾದ ಸಂಪತ್ತು ದೊರಕಿತು. ಅಲ್ಲಾವುದ್ದೀನನು ಆ ಸಂಪೂರ್ಣ ಸಂಪತ್ತು ಮತ್ತು ಕೋಟೆ ಹಾಗೂ ಕೋಟೆಯ ಆಳ್ವಿಕೆಯನ್ನು ಅಲ್ಮಾಸ್‌ಬೇಗನ ವಶಕ್ಕೆ ನೀಡಿದ ಮತ್ತು ಖುದ್ದು ದೆಹಲಿಗೆ ಮರಳಿದ. ಈ ಘಟನೆಯ ಐದಾರು ತಿಂಗಳ ನಂತರ ಅಲ್ಮಾಸ್‌ಬೇಗ್ ಕಾಯಿಲೆ ಬಿದ್ದ. ಆ ಅನಾರೋಗ್ಯದ ನಡುವೆಯೇ ಅವನು ದೆಹಲಿಯತ್ತ ಪ್ರಯಾಣ ಬೆಳೆಸಿದ. ಆದರೆ ಮಾರ್ಗ ಮಧ್ಯದಲ್ಲಿಯೇ ಅವನು ಕಾಯಿಲೆಯ ದೆಸೆಯಿಂದ ಸಾವನ್ನಪ್ಪಿದ.

ವಿದ್ರೋಹಿಗಳನ್ನು ತಡೆಯಲು ಪ್ರಯತ್ನ:

ಆ ದಿನಗಳಲ್ಲಿ ಅಲ್ಲಾವುದ್ದೀನನು ಸರದಾರರ ಗಲಭೆಗಳಿಂದ ಬಹಳ ಭಯಗೊಂಡಿದ್ದ ಆದ್ದರಿಂದ ಅವನು ವಿಶೇಷ ಅನುಭವ ಮತ್ತು ಜ್ಞಾನವನ್ನು ಪಡೆದಿದ್ದ ತನ್ನ ಆಪ್ತವಲಯದ ಸರ್ದಾರರೊಡನೆ ಸಮಾಲೋಚನೆಯನ್ನು ನಡೆಸಿದ. ಹಾಗೂ ಈ ರೀತಿಯ ಗಲಭೆಗಳನ್ನು ತಡೆಯಲು ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿಚಾರಿಸಿದ. ಆ ಸರ್ದಾರರು ಕೆಳಕಂಡಂತೆ ಉತ್ತರಿಸಿದರು, ಗಲಭೆಗಳು ಮತ್ತು ವಿದ್ರೋಹಾತ್ಮಕ ಚಟುವಟಿಕೆಗಳು ಸಾಮಾನ್ಯವಾಗಿ ನಾಲ್ಕು ಸಂಗತಿಗಳಿಂದ ಜರುಗುತ್ತವೆ.

ಪ್ರಥಮ: ಬಾದಶಹನು ಜನತೆಯ ಬಗ್ಗೆ ಸಂಪರ್ಕ ಹೊಂದದೆ ಇರುವುದು ಹಾಗೂ ಅವರ ಒಳಿತು ಮತ್ತು ಕೆಡುಕಿನ ಪರಿವೆ ಇಲ್ಲದೆ ಇರುವುದು.

ದ್ವಿತೀಯ: ದೇಶದಲ್ಲಿ ಮಾದಕದ್ರವ್ಯಗಳ ಸೇವನೆ ಸರ್ವೇ ಸಾಮಾನ್ಯವಾಗುವುದು ಮಾದಕ ದ್ರವ್ಯಗಳ ಸೇವನೆಯಿಂದ ಮನುಷ್ಯನ ಇಂದ್ರಿಯ ಬಯಕೆಗಳು ತೀವ್ರ ಸ್ವರೂಪವನ್ನು ಪಡೆದು ಅವನ ದುಷ್ಟ ಅಲೋಚನೆಗಳಿಗೆ ಬಲ ಬರುವುದು. ಹಾಗೂ ಮಾನವನು ಕುಡಿತದ ಅಮಲಿನಲ್ಲಿ ತನ್ನ ತೃಪ್ತಿಗಾಗಿ ಅನೇಕ ರೀತಿಯ ಕ್ರಿಯೆಗಳಲ್ಲಿ ತೊಡಗುತ್ತಾನೆ ಇದರ ಪರಿಣಾಮವಾಗಿ ಜನರು ಇನ್ನೊಬ್ಬರ ಇಂಗಿತವನ್ನು ಅರ್ಥಮಾಡಿಕೊಳ್ಳುತ್ತಾರೆ. ಹಾಗೂ ಪರಸ್ಪರ ಕೂಡಿ ದೇಶದ ಗಲಭೆಗಳು ಮತ್ತು ದೊಂಬಿಯ ಜ್ವಾಲೆಯನ್ನು ಪ್ರಜ್ವಲಿಸುವಂತೆ ಮಾಡುತ್ತಾರೆ.

ತೃತೀಯ: ಸರ್ದಾರರು ಮತ್ತು ರಾಜ್ಯದ ಅಧಿಕಾರಿಗಳು ಪರಸ್ಪರ ಉತ್ತಮ ಸಂಬಂಧಗಳನ್ನು ಹೊಂದಿರುವುದು; ಸರ್ದಾರರು ಪರಸ್ಪರ ಹಾಲು ಸಕ್ಕರೆಯಂತೆ ಬೆರೆತರೆ, ಅವರ ಪೈಕಿ ಯಾರಾದರೂ ಒಬ್ಬನು ಯಾವುದಾದರೂ ಕೃತ್ಯದಲ್ಲಿ ಭಾಗಿಯಾದರೆ ಉಳಿದವರು ಕೂಡ ಅವನನ್ನು ಬೆಂಬಲಿಸುತ್ತಾರೆ.

ಚತುರ್ಥ: ಹಣ ಮತ್ತು ಸಂಪತ್ತಿನ ಲಭ್ಯತೆ; ಕೀಳು ಮತ್ತು ನೀಚ ಜನರಿಗೆ ಅವರ ಯೋಗ್ಯತೆಗಿಂತ ಹೆಚ್ಚು ಶ್ರೀಮಂತಿಕೆ ಬಂದಲ್ಲಿ ಅವರು ತಮ್ಮ ಎಲ್ಲೆಯನ್ನು ಮೀರುತ್ತಾರೆ. ಅವರ ಮನದಲ್ಲಿ ವಿಭಿನ್ನ ಆಲೋಚನೆಗಳು ಮೂಡುತ್ತವೆ. ಮತ್ತು ಅವರು ಎಲ್ಲಾ ಕ್ಷೇತ್ರಗಳನ್ನು ತಮ್ಮ ವಶಪಡಿಸಿಕೊಳ್ಳಲು ಹವಣಿಸುತ್ತಾರೆ. ಹಾಗೂ ಅವರ ದುರಾಶೆಪೂರಿತ ನೇತ್ರಗಳು ರಾಜ್ಯದ ಸಿಂಹಾಸನದ ಮೇಲೆ ಕೂಡ ಬೀಳುತ್ತವೆ.

ಗುಪ್ತಚರ ಸುದ್ದಿಯ ವ್ಯವಸ್ಥೆ:

ಅಲ್ಲಾವುದ್ದೀನನಿಗೆ ತನ್ನ ಅಧಿಕಾರಿಗಳ ಮೇಲ್ಕಂಡ ಸಲಹೆಗಳು ಪ್ರಿಯವಾದವು ಮತ್ತು ಅವನು ಆ ಲೋಪ ದೋಷಗಳನ್ನು ಸರಿಪಡಿಸಬೇಕೆಂದು ನಿಶ್ಚಯಿಸಿದ. ಜನತೆಯ ಪರಿಸ್ಥಿತಿಯನ್ನು ಅರಿಯುವ ಸಲುವಾಗಿ ಅಲ್ಲಾವುದ್ದೀನನು ಎಲ್ಲಾ ದಿಕ್ಕುಗಳಲ್ಲಿಯೂ ನಂಬಿಗಸ್ಥ ಪತ್ತೇದಾರರ ನೇಮಕಾತಿಯನ್ನು ಮಾಡಿದ. ಮತ್ತು ಗುಪ್ತ ಇಲಾಖೆಯನ್ನು ಎಷ್ಟೊಂದು ಬಿಗಿಗೊಳಿಸಿದನೆಂದರೆ, ದೇಶದ ಎಲ್ಲಾ ವಿಧದ ಸಂಗತಿಗಳ ಸುದ್ದಿಯು ಅವನಿಗೆ ತಲುಪ ತೊಡಗಿತು. ಸರ್ದಾರರು ಮತ್ತು ರಾಜ್ಯದ ಅಧಿಕಾರಿಗಳು ರಾತ್ರಿ ಹೊತ್ತಿನಲ್ಲಿ ವಿರಾಮದ ವೇಳೆಯಲ್ಲಿ ತಮ್ಮ ಮನೆಗಳಲ್ಲಿ ತಮ್ಮ ಕುಟುಂಬ ವರ್ಗದವರೊಡನೆ ಆಡುತ್ತಿದ್ದ ಮಾತುಗಳೆಲ್ಲವು ಬಾದಶಹನಿಗೆ ತಿಳಿದುಬರುತ್ತಿತ್ತು. ಬೆಳಗಾದ ನಂತರ ಯಾರಾದರೂ ಒಬ್ಬ ಸರ್ದಾರನು ಬಾದಶಹನ ಸಮ್ಮುಖದಲ್ಲಿ ಆಗಮಿಸಿದಾಗ ಅವನು ಕಳೆದ ರಾತ್ರಿ ತನ್ನ ಕುಟುಂಬ ವರ್ಗದವರೊಡನೆ ನಡೆಸಿದ ಸಂಭಾಷಣೆಯ ವರದಿಯನ್ನು ಬಾದಶಹನು ಅವನೆದುರಿಗೆ ಇಡುತ್ತಿದ್ದ. ಆ ವರದಿಯನ್ನು ಓದಿದ ಸರ್ದಾರನು ಆಪಾದಮಸ್ತಕ ನಡಗುತ್ತಿದ್ದ. ಏಕೆಂದರೆ ಆ ವರದಿಯಲ್ಲಿ ಕಾಣಿಸಿದ್ದ ಅನೇಕ ಸಂಗತಿಗಳು ನಿಜವಾಗಿರುತ್ತಿದ್ದವು. ಇದರ ಪರಿಣಾಮವಾಗಿ ಜನರು ಪರಸ್ಪರ ತಮ್ಮ ತಮ್ಮಲ್ಲಿಯೇ ಖಾಸಗಿಯಾಗಿ ಮಾತನಾಡಲು

ಕೂಡ ಹೆದರಲಾರಂಭಿಸಿದರು. ತಮ್ಮ ಕುಟುಂಬದಲ್ಲಿಯು ಆ ಜನರು ಮಾತನಾಡಲು ಸಾಧ್ಯವಾಗದೆ ಆತಂಕಕ್ಕೀಡಾದರು ಮತ್ತು ಜನರು ಸನ್ನೆಗಳ ಮೂಲಕ ಮಾತನಾಡಲಾಂಭಿಸಿದರು. ಈ ಪರಿಸ್ಥಿತಿಯ ದೆಸೆಯಿಂದ ದೇಶದ ಉದ್ದಗಲಕ್ಕೂ ಶಾಂತಿ ನೆಲೆಸಿತು. ಶೋರ್ ನದಿಯ ತೀರದಿಂದ ಹಿಡಿದು ಬಂಗಾಳದ ರಸ್ತೆಗಳು, ತೆಲಂಗಾಣ ಮತ್ತು ಮಲಬಾರ್‌ವರೆಗೆ ಸಿಂಧ್ ಮತ್ತು ಗುಜರಾತ್‌ನ ಹಾದಿ ಬೀದಿಗಳು ಕಾಬೂಲ್ ಮತ್ತು ಕಾಶ್ಮೀರದವರೆಗೆ ಲಾಹೋರ್‌ನ ರಸ್ತೆಗಳು ಎಷ್ಟೊಂದು ಶಾಂತಿಯುತವಾದವೆಂದರೆ, ಅವು ದೆಹಲಿ ಮತ್ತು ಸೇರಿಯ ರಸ್ತೆಗಳೇನೋ ಎನ್ನುವಂತೆ ಅನಿಸುತ್ತಿತ್ತು. ಪ್ರಯಾಣಿಕರು ತಮಗೆ ಬೇಕೆನಿಸಿದಷ್ಟು ವಸ್ತುಗಳನ್ನು ತಮ್ಮೊಡನೆ ತೆಗೆದುಕೊಂಡು ಹೋಗುತ್ತಿದ್ದರು ರಸ್ತೆ ಮತ್ತು ಕಾಡುಗಳಲ್ಲಿ ಅವರು ಡಕಾಯಿತರು ಮತ್ತು ಕಳ್ಳಕಾಕರು ವಗೈರೆಯವರಿಂದ ಸಂಪೂರ್ಣವಾಗಿ ಭಯಮುಕ್ತರಾಗಿದ್ದರು. ಜನರು ರಾತ್ರಿಯ ಹೊತ್ತು ನೆಮ್ಮದಿಯಿಂದ ನಿದ್ರೆ ಮಾಡುತ್ತಿದ್ದರು. ಹಾಗೂ ಅವರ ಸಂಪೂರ್ಣ ಸ್ವತ್ತುಗಳು ಅವರ ಕಾಲ ಬುಡದಲ್ಲಿ ಬಿದ್ದಿರುತ್ತಿತ್ತು. ಪ್ರಯಾಣದ ಸಂದರ್ಭದಲ್ಲಿ ಅವರು ಯಾವುದೇ ಊರಿನಿಂದ ಹಾದು ಹೋದರೂ ಕೂಡ ಅಲ್ಲಿನ ಚೌಧರಿ ಅವರಿಗೆ ಅತಿಥಿ ಸತ್ಕಾರ್ಯವನ್ನು ನೀಡುತ್ತಿದ್ದ.

ಮಾದಕ ದ್ರವ್ಯಗಳ ಮೇಲೆ ಪ್ರತಿಬಂಧ:

ಎರಡನೇ ಸಲಹೆಯು ಮಾದಕ ದ್ರವ್ಯ ಸೇವನೆಯ ಪ್ರತಿ ಬಂಧದ ಬಗ್ಗೆ ಮಾಡಿದ ಆದೇಶವಾಗಿತ್ತು. ಈ ಬಗ್ಗೆ ಅಲ್ಲಾವುದ್ದೀನನು ಎಲ್ಲಕ್ಕಿಂತ ಮೊದಲು ಕೈಗೊಂಡ ಕ್ರಮವೇನೆಂದರೆ, ಅವನು ಬಹಿರಂಗವಾಗಿ ಶರಾಬು ಕುಡಿಯುವುದನ್ನು ಪ್ರತಿಬಂಧಿಸಿದ. ಹೀಗಾಗಿ ಪಾನ ಗೋಷ್ಠಿಗಳ ಆಯೋಜನೆಗಳು ಅಂತ್ಯಕಂಡವು ಮತ್ತು ಭೋಗ ವಿಲಾಸದ ಗೋಷ್ಠಿಗಳು ನಾಶವಾದವು. ಬದಾಯೂನ್ ಹೆಬ್ಬಾಗಿಲ ಬಳಿ ಶರಾಬಿನ ಅನೇಕ ಮಡಿಕೆಗಳು ಮಣ್ಣುಗೂಡಿದವು. ಮಧುಪಾತ್ರೆ ಹಾಗೂ ಮಧುವಿನಿಂದ ಕೂಡಿದ ಹೂಜಿಗಳನ್ನು ಚೂರು ಚೂರು ಮಾಡಿ ಎಸೆಯಲಾಯಿತು. ಪಾನಗೋಷ್ಠಿಗಳಲ್ಲಿ ಬಳಸುತ್ತಿದ್ದ ಚಿನ್ನ ಮತ್ತು ಬೆಳ್ಳಿಯ ಪಾತ್ರೆಗಳನ್ನು ಕರಗಿಸಿ ನಾಣ್ಯಗಳನ್ನಾಗಿ ಎರಕ ಹೊಯ್ದು ರಾಜನ ಖಜಾನೆಯಲ್ಲಿ ಭರ್ತಿಮಾಡಲಾಯಿತು. ಬಾದಶಹನು ಮಾದಕ ದ್ರವ್ಯಗಳ ಸೇವನೆಯನ್ನು ನಿಲ್ಲಿಸಿದಾನೆಂತಲೂ ಯಾವ ವ್ಯಕ್ತಿಯು ಶರಾಬನ್ನು ಕುಡಿಯುತ್ತಾನೋ ಅಥವಾ ಮಾರುತ್ತಾನೋ ಅವನಿಗೆ ಕಠಿಣ ಶಿಕ್ಷೆಯನ್ನು ನೀಡಲಾಗುವುದು ಎಂದು ಪಟ್ಟಣದಲ್ಲಿ ಡಂಗುರ ಹೊಡೆಯಲಾಯಿತು. ಎಲ್ಲಾ ಆಕ್ರಮಿತ ಪ್ರದೇಶಗಳಲ್ಲಿಯೂ ಅವನು ಇದೇ ರೀತಿಯ ಫರ್ಮಾನನ್ನು ಹೊರಡಿಸಿದ ಹಾಗೂ ಜನರು ರಾಜಾಜ್ಞೆಯನ್ನು ಅತ್ಯಂತ ವಿಧೇಯತೆಯಿಂದ ಪಾಲಿಸುವ ಸಲುವಾಗಿ ತಮ್ಮ ಮನೆಗಳಿಂದ ಶರಾಬನ್ನು ರಸ್ತೆಗೆ ಎಸೆದರು. ರಾಜಾಜ್ಞೆಯ ನಂತರ ರಸ್ತೆ ಮತ್ತು ಗಲ್ಲಿಗಳಲ್ಲಿ ಎಸೆಯಲಾದ ಶರಾಬಿನ ದೆಸೆಯಿಂದ ಮಳೆಗಾಲದ ಸಂದರ್ಭದಲ್ಲಿ ಉಂಟಾದ

ರೀತಿಯಲ್ಲಿ ಕೊಚ್ಚೆಯುಂಟಾಯಿತೆಂದು ಹೇಳಲಾಗುತ್ತದೆ. ಕುಡಕರು ಅತ್ಯಂತ ಆಸೆಯ ನೋಟದಿಂದ ಆ ಘಟನೆಯನ್ನು ನೋಡುತ್ತ "ನಾನು ಮಣ್ಣಾದರೂ ಆಗಿದ್ದರೆ ಚೆನ್ನಾಗಿತ್ತು" ಎಂದು ಉದ್ಗರಿಸುತ್ತಿದ್ದರು. ಪಟ್ಟಣದ ಒಳಗಡೆ ಒಂದೇ ಒಂದು ಶರಾಬಿನ ಪಾತ್ರೆ ಕೂಡ ಹೋಗದಂತೆ ಚೌಕಿದಾರರು ಎಚ್ಚರಿಕೆಯಿಂದ ತನಿಖೆ ನಡೆಸುತ್ತಿದ್ದರು. ಯಾರಾದರೂ ಒಬ್ಬ ವ್ಯಕ್ತಿಯು ಹುಲ್ಲು, ಸೌದೆ ಅಥವಾ ಇನ್ನಿತರೆ ಸಾಮಾನಿನ ಒಳಗಡೆ ಶರಾಬಿನ ಪಾತ್ರೆಯನ್ನು ಅವಿತಿಟ್ಟು ಪಟ್ಟಣದೊಳಗಡೆ ತೆಗೆದುಕೊಂಡು ಹೋಗಲು ಪ್ರಯತ್ನ ಪಟ್ಟಲ್ಲಿ ಅವನ ಆ ಪ್ರಯತ್ನವು ವಿಫಲವಾಗುತ್ತಿತ್ತು. ಅಂತಹ ಆರೋಪಿಗಳನ್ನು ಚೌಕಿದಾರರು ಪತ್ತೆಹಚ್ಚಿ ಸರ್ಕಾರದ ಆಜ್ಞೆಯ ಮೇರೆಗೆ ಆ ಶರಾಬನ್ನು ಜಪ್ತಿಮಾಡುತ್ತಿದ್ದರು. ಹೀಗೆ ಜಪ್ತಿಮಾಡಿದ ಶರಾಬನ್ನು ಬಾದಶಹನ ಆನೆಯ ಲಾಯಕ್ಕೆ ಕಳುಹಿಸಿ ಅದನ್ನು ಮುಕ್ತವಾಗಿ ಆನೆಗಳಿಗೆ ಕುಡಿಸಲಾಗುತ್ತಿತ್ತು. ಆ ಅವಧಿಯ ಆನೆಗಳ ಜೀವನವು ಸಾಕಷ್ಟು ಸುಖಕರವಾಗಿತ್ತು ಅವುಗಳಿಗೆ ಕುಡಿಯಲು ಶರಾಬು ದೊರಕುತ್ತಿತ್ತು. ಮತ್ತು ಅವುಗಳಿಗೆ ಅತ್ಯಂತ ನೆಮ್ಮದಿಯ ಬದುಕು ಸಿಗುತ್ತಿತ್ತು. ಇಷ್ಟೆಲ್ಲಾ ಪ್ರತಿಬಂಧಕ ವ್ಯವಸ್ಥೆ ಇದ್ದರೂ ಕೆಲವು ಜನರು ಹೇಗೊ ಕಣ್ಣು ತಪ್ಪಿಸಿ ಶರಾಬನ್ನು ಪಟ್ಟಣದೊಳಗಡೆ ಸಾಗಿಸುತ್ತಿದ್ದರು. ಮತ್ತು ತಮ್ಮ ಮನೆಗಳಲ್ಲಿ ಪಾನಗೋಷ್ಠಿಗಳ ಸುಖವನ್ನು ಸವಿಯುತ್ತಿದ್ದರು. ಆ ಕುಡಕರಿಗೆ ಕಾರಾಗೃಹ ವಾಸದಂತಹ ಕೀಳು ಶಿಕ್ಷೆಯ ಪರಿವೆ ಕೂಡ ಇರಲಿಲ್ಲ, ಸದಾ ಕುಡಿತದ ಮತ್ತಿನಲ್ಲಿರುತ್ತಿದ್ದರು. ಬಾದಶಹನಿಗೆ ಅವರುಗಳ ಈ ವರ್ತನೆಯ ಬಗ್ಗೆ ತಿಳಿದುಬಂದಾಗ ಅವನು ಬದಾಯೂನ್ ಬಾಗಿಲ ಬಳಿ ರಾಜಬೀದಿಯ ಪಕ್ಕದಲ್ಲಿ ಒಂದು ಭಾವಿಯನ್ನು ತೋಡುವಂತೆ ಆಜ್ಞೆ ಮಾಡಿದ. ಹಾಗೂ ಪಾನ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದವರನ್ನು ಆ ಭಾವಿಯೊಳಗಡೆ ಇಳಿಸುವಂತೆ ಆದೇಶ ಮಾಡಿದ. (ಅವನ ಆಜ್ಞೆಯನ್ನು ಪರಿಪಾಲಿಸಲಾಯಿತು ಅನೇಕಾನೇಕ ಜನರನ್ನು ಆ ಭಾವಿಯೊಳಗಡೆ ಬಂಧಿಸಿ ಇಡಲಾಯಿತು. ಆ ಭಾವಿಯ ಅನೇಕ ಮಂದಿ ಖೈದಿಗಳು ತಮ್ಮ ಸೆರೆವಾಸದ ಅವಧಿಯಲ್ಲಿಯೇ ಕೊನೆಯುಸಿರೆಳೆದರು). ಆ ಸೆರೆಯಿಂದ ಬಿಡುಗಡೆಗೊಂಡ ಖೈದಿಗಳು ಎಷ್ಟೊಂದು ಅನಾರೋಗ್ಯ ಪೀಡಿತರಾಗಿದ್ದರೆಂದರೆ ಹಲವಾರು ವರ್ಷಗಳ ಕಾಲ ಚಿಕಿತ್ಸೆಗೊಳಪಟ್ಟ ನಂತರ ಅವರು ಗುಣಮುಖರಾಗುತ್ತಿದ್ದರು. ತನ್ನ ರಾಜ್ಯದಲ್ಲಿ ಸಂಪೂರ್ಣವಾಗಿ ಪಾನ ಪ್ರತಿಬಂಧಕಾಜ್ಞೆಯು ಜಾರಿಯಲ್ಲಿ ಇದೆ ಎಂಬುದನ್ನು ಖಚಿತಪಡಿಸಿಕೊಂಡ ಅಲ್ಲಾವುದ್ದೀನನ ನಂತರದಲ್ಲಿ ಈ ಬಗ್ಗೆ ಸ್ವಲ್ಪ ಮೃದು ಧೋರಣೆಯನ್ನು ತಳೆದ ಸರ್ದಾರರು ಹಾಗೂ ಅಧಿಕಾರಿಗಳು ತಮ್ಮ ಮನೆಯೊಳಗಡೆ ಏಕಾಂತದಲ್ಲಿ ಕುಡಿಯುವುದಾದಲ್ಲಿ ಅಭ್ಯಂತರವಿಲ್ಲವೆಂದು ಆದೇಶ ಮಾಡಿದ.

ಸರ್ದಾರರ ಪರಸ್ಪರ ಬಾಂಧವ್ಯದ ಮೇಲೆ ಪ್ರತಿಬಂಧ:

ಅಲ್ಲಾವುದ್ದೀನನ ವಿಶೇಷ ಆಪ್ತ ಸರ್ದಾರರು ನೀಡಿದ್ದ ಮೂರನೆಯ ಸಲಹೆಯು

ಈ ರೀತಿಯಲ್ಲಿ ಕಾರ್ಯಗತವಾಯಿತು. ಸರ್ದಾರರು ಮತ್ತು ದರಬಾರಿಗಳ ನಡುವೆ ಬಾದಶಹನ ಆಜ್ಞೆಯ ಹೊರತು ಪರಸ್ಪರ ತಮ್ಮ ತಮ್ಮಲ್ಲಿ ಯಾವುದೇ ಬಾಂಧವ್ಯಗಳನ್ನು ಹೊಂದುವುದರ ವಿರುದ್ಧ ನಿರ್ಬಂಧವನ್ನು ರಾಜಾಜ್ಞೆಯ ಮೂಲಕ ಜಾರಿಗೊಳಿಸಲಾಯಿತು. ಅಷ್ಟೇ ಅಲ್ಲದೆ ಪರಸ್ಪರರು ನೀಡುತ್ತಿದ್ದ ಔತಣ ಕೂಟಗಳನ್ನು ಕೂಡ ನಿರ್ಬಂಧಿಸಲಾಯಿತು. ಈ ಆಜ್ಞೆಯನ್ನು ಕೂಡಲೇ ಜಾರಿಗೊಳಿಸಲಾಯಿತು ಇದರ ಪರಿಣಾಮವಾಗಿ ಸರ್ದಾರರು ಮತ್ತು ರಾಜ್ಯದ ಉನ್ನತಾಧಿಕಾರಿಗಳು ಪರಸ್ಪರ ಅಪರಿಚಿತರಾದರು. ಯಾರಾದರೂ ಒಬ್ಬ ಸರ್ದಾರರ ಮನೆಗೆ ಇನ್ನೊಬ್ಬರು ಅತಿಥಿಯಾಗಿ ಆಗಮಿಸಿದ ಸಂದರ್ಭದಲ್ಲಿ ಕೂಡಲೇ ರಾಜನ ವಿಶೇಷ ಅನುಮತಿಯನ್ನು ಪಡೆಯಬೇಕಿತ್ತು. ಮತ್ತು ಯಾರಾದರೂ ಸರ್ದಾರನು ಇನ್ನೊಬ್ಬ ಸರ್ದಾರನ ಮನೆಯಲ್ಲಿ ವೈವಾಹಿಕ ಸಂಬಂಧವನ್ನು ಬೆಳೆಸಬೇಕಿದ್ದಲ್ಲಿ ಅವನು ರಾಜನ ಅನುಮತಿಯನ್ನು ಪಡೆಯಬೇಕಿತ್ತು. ಇಂತಹ ವಿಶೇಷ ಅನುಮತಿಯನ್ನು ನೀಡುವ ಸಲುವಾಗಿ ಒಂದು ಇಲಾಖೆಯನ್ನೇ ಸೃಷ್ಟಿಸಿ ಸೈಯದ್‌ಖಾನ್ ಎಂಬ ಮಂತ್ರಿಯನ್ನು ನೇಮಕ ಮಾಡಲಾಗಿತ್ತು. ಆತನನ್ನು "ಪಿತೂರಿಗಾರ" ಎಂಬ ಬಿರುದಿನಿಂದ ನೆನಪಿಸಿಕೊಳ್ಳಲಾಗುತ್ತಿತ್ತು. ಆತನಿಗೆ ಪತ್ರ ಮುಖೇನ ಅಹವಾಲನ್ನು ಸಲ್ಲಿಸಿ, ನಂತರ ಅವನನ್ನು ಸಂಪ್ರೀತಗೊಳಿಸಿ ಅವನ ಮೂಲಕ ಬಾದಶಹನ ವಿಶೇಷ ಅನುಮತಿಯನ್ನು ಪಡೆದುಕೊಳ್ಳಲಾಗುತ್ತಿತ್ತು.

ಸಂಪತ್ತಿನ ಬಿಗಿ ಹಿಡಿತ:

ನಾಲ್ಕನೆಯ ಸಲಹೆಯು ಸಂಪತ್ತಿನ ಹರಿವನ್ನು ತಡೆಹಿಡಿಯುವುದರ ಬಗ್ಗೆ ಆಗಿತ್ತು. ಅದನ್ನು ಕೆಳಕಂಡಂತೆ ಕಾರ್ಯಗತಗೊಳಿಸಲಾಯಿತು. ವಿವಿಧ ಧಾರ್ಮಿಕ ದತ್ತಿ ಮತ್ತು ಸಾಮಾಜಿಕ ಕಾರ್ಯಗಳ ಸಲುವಾಗಿ ಅಥವಾ ಇನ್ನಿತರೆ ಕಾರಣದ ಪ್ರಯುಕ್ತ ಅನೇಕ ಜನರ ವಶದಲ್ಲಿದ್ದ ಗ್ರಾಮಗಳನ್ನು ಮತ್ತು ಜಮೀನನ್ನು ರಾಜನ ವಶಕ್ಕೆ ಪಡೆದುಕೊಳ್ಳಲಾಯಿತು. ಬಾದಶಹನು ಪ್ರತಿಯೊಬ್ಬ ಸರ್ದಾರ, ಬಡವ ಹಾಗೂ ಬಲ್ಲಿದರ ಮೇಲೆ ಕ್ರಮವಾಗಿ ಮತ್ತು ಅಕ್ರಮವಾದ ಎಲ್ಲಾ ರೀತಿಯ ಪ್ರಭಾವವನ್ನು ಬೀರಿ ಅವನಿಂದ ಅವನ ಎಲ್ಲಾ ಸಂಪತ್ತನ್ನು ವಶಪಡಿಸಿಕೊಂಡು ತನ್ನ ಖಜಾನೆಯಲ್ಲಿ ಜಮಾ ಮಾಡಿಕೊಂಡ. ಇದರ ಪರಿಣಾಮವಾಗಿ ಜನರು ದಿನನಿತ್ಯದ ಊಟೋಪಚಾರಗಳಿಗೂ ಪರದಾಡುವಂತಾಯಿತು. ಹಾಗೂ ನೌಕರಿಯ ಬೇಟೆಯಲ್ಲಿ ಹೋರಾಡತೊಡಗಿದರು. ಪಿತೂರಿ ಮತ್ತು ಸಂಚನ್ನು ರೂಪಿಸಲು ಅವರಿಗೆ ತ್ರಾಣವೇ ಉಳಿಯಲಿಲ್ಲ. ಹೊಟ್ಟೆಪಾಡಿಗಾಗಿ ಹಗಲು ಮತ್ತು ರಾತ್ರಿ ಶ್ರಮಿಸುವಂತಾಯಿತು.

ಸಮಾನತೆ:

ಮೇಲ್ಕಂಡ ಕ್ರಮಗಳನ್ನು ಕೈಗೊಂಡ ನಂತರ ಅಲ್ಲಾವುದ್ದೀನ್ ಖಿಲ್ಜಿಯು ಸಮಾನತೆಯನ್ನು ಸಾಧಿಸುವ ಕಾನೂನು ಜಾರಿಯಾಗಬೇಕೆಂದು ನಿಶ್ಚಯಿಸಿದ. ದುರ್ಬಲರು ಮತ್ತು ಬಲಾಢ್ಯರ ನಡುವೆ ಯಾವುದೇ ವ್ಯತ್ಯಾಸವು ಇರಕೂಡದು

ಮತ್ತು ಗ್ರಾಮಗಳ ಮುಖ್ಯಸ್ಥರು ಹಾಗೂ ಚೌಧರಿಗಳಿಗೆ ಸಾಮಾನ್ಯ ಜನತೆಗಿಂತ ಹೆಚ್ಚಿನ ಸ್ಥಾನಮಾನವನ್ನು ನೀಡದೆ ಅದನ್ನು ಕೊನೆಗೊಳಿಸಬೇಕು ಎಂಬ ಅವನ ಅಲೋಚನೆಯನ್ನು ಕಾರ್ಯಗತಗೊಳಿಸಲು ಬಾದಶಹನು ಜಮೀನಿನ ಅಳತೆ ಮಾಡಬೇಕೆಂದು ಆಜ್ಞೆ ಮಾಡಿದ. ಹಾಗೂ ಬೆಳೆಯ ಅರ್ಧಭಾಗವನ್ನು ರಾಜನ ಖಜಾನೆಗೆ ತುಂಬ ಬೇಕೆಂದು ಆಜ್ಞೆ ಮಾಡಿದ. ಈ ಆಜ್ಞೆಯನ್ನು ಗ್ರಾಮದ ಮುಖ್ಯಸ್ಥ, ಚೌಧರಿ ಮತ್ತು ಸಾಮಾನ್ಯ ಜನತೆ ಎಂಬ ಯಾವುದೇ ವ್ಯತ್ಯಾಸವಿಲ್ಲದೆ ಎಲ್ಲರ ಮೇಲೂ ಸಮಾನವಾಗಿ ಜಾರಿಗೊಳಿಸಲಾಯಿತು. ಗ್ರಾಮದ ಮುಖ್ಯಸ್ಥ ಮತ್ತು ಚೌಧರಿಗೆ ಸಲ್ಲಬೇಕಾಗಿದ್ದ ಹಿಸ್ಸೆಯನ್ನು ಕೂಡ ವಸೂಲಿ ಮಾಡಿ ರಾಜನ ಭಂಡಾರಕ್ಕೆ ತುಂಬಿಸಲಾಯಿತು. ಜನತೆಯು ಸಾಕುವ ಪ್ರಾಣಿಗಳ ಮೇಲೆ ಕೂಡ ಮಿತಿಯನ್ನು ಹೇರಲಾಯಿತು. ಕೃಷಿ ಚಟುವಟಿಕೆಯ ಸಲುವಾಗಿ ನಾಲ್ಕು ಹಸು ಅಥವಾ ಎತ್ತುಗಳು ಹಾಗೂ ಗೃಹಬಳಕೆಯ ಉಪಯೋಗಕ್ಕಾಗಿ ಎರಡು ಎಮ್ಮೆಗಳು ಎರಡು ಹಸುಗಳು ಹಾಗೂ ಹನ್ನೆರಡು ಮೇಕೆ ಅಥವಾ ಕುರಿಗಳ ಸಂಖ್ಯೆಯನ್ನು ನಿಗದಿಗೊಳಿಸಲಾಯಿತು. ಆ ಜಾನುವಾರುಗಳ ಮೇಲಿನ ತೆರಿಗೆಯೆಂದು ಆ ಜಾನುವಾರುಗಳ ಮಾಲೀಕರಿಂದ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಮೇವಿನ ತೆರಿಗೆಯನ್ನು ವಸೂಲಿ ಮಾಡಲಾಗುತ್ತಿತ್ತು. ರಾಜನ ನೌಕರರು ಮತ್ತು ಸಿಬ್ಬಂದಿ ವರ್ಗಕ್ಕೆ ಅತ್ಯಂತ ಪ್ರಾಮಾಣಿಕತೆಯಿಂದ ಹಾಗೂ ಬಾದಶಹನ ಆಜ್ಞೆಗೆ ಅನುಗುಣವಾಗಿ ಕರ್ತವ್ಯವನ್ನು ನಿರ್ವಹಿಸಬೇಕೆಂದು ಕಠಿಣವಾದ ಆದೇಶವನ್ನು ಮಾಡಲಾಗಿತ್ತು. ಹಾಗೂ ಜನತೆಯೊಡನೆ ಶಾಮೀಲಾಗಿ ಅಪ್ರಾಮಾಣಿಕತೆಯಿಂದ ಒಂದೇ ಒಂದು ಬಿಡಿಗಾಸನ್ನು ಕೂಡ ತಮಗಾಗಿ ಪಡೆಯತಕ್ಕದಲ್ಲ ಎಂದು ಬಿಗಿಮಾಡಲಾಗಿತ್ತು. ಆ ಸಿಬ್ಬಂದಿ ವರ್ಗದವರು ದೈನಂದಿನ- ಮೇಲ್ಕಂಡ ತೆರಿಗೆಯನ್ನು ಬಿಟ್ಟು ಬೇರೆ ತೆರಿಗೆಯನ್ನು ವಸೂಲು ಮಾಡುವವನೇನೋ ಎಂದು ಕಂಡು ಹಿಡಿಯಲು ಪಟವಾರಿಯ ಕಾರ್ಯಾಲಯದ ಪರಿವೀಕ್ಷಣೆಯನ್ನು ನಡೆಸಲಾಗುತ್ತಿತ್ತು. ಹಾಗೂ ಯಾವನಾದರೂ ವ್ಯಕ್ತಿಯ ಹೆಸರಿನಲ್ಲಿ ಹೆಚ್ಚಿನ ತೆರಿಗೆ ಎಂದು ಕಂಡು ಬಂದಲ್ಲಿ ತತ್‌ಕ್ಷಣವೇ ಅವನಿಂದ ನಿರ್ದಾಕ್ಷಿಣ್ಯವಾಗಿ ಸದರಿ ತೆರಿಗೆಯನ್ನು ವಸೂಲು ಮಾಡಲಾಗುತ್ತಿತ್ತು.

ಈ ಎಲ್ಲಾ ಕ್ರಮಗಳ ಫಲವಾಗಿ ಅನೇಕ ಜಾರಿ ಸಿಬ್ಬಂದಿ ಮತ್ತು ತೆರಿಗೆ ವಸೂಲಿ ಸಿಬ್ಬಂದಿಗೆ ತಮ್ಮ ಉದ್ಯೋಗದಲ್ಲಿ ಯಾವುದೇ ಲಾಭ ಕಂಡುಬರಲಿಲ್ಲ. ಹಾಗೂ ಅವರುಗಳು ಆ ಕೆಲಸವನ್ನು ತೊರೆದರು. ಗ್ರಾಮದ ಚೌಧರಿಯ ಬದುಕಿನ ಕ್ರಮವೇ ಅಸ್ತವ್ಯಸ್ತವಾಯಿತು. ಈ ಹಿಂದೆ ಅವರುಗಳು ಶ್ರೀಮಂತಿಕೆಯ ವೈಭವದಲ್ಲಿ ಮುಳುಗಿ ಕ್ಷಣಕ್ಷಣಕ್ಕೂ ವಿಲಾಸೀ ಬದುಕಿನ ವ್ಯವಸ್ಥೆಯನ್ನು ತಮ್ಮದಾಗಿಸಿಕೊಂಡಿದ್ದರು. ಕಾಲ ಹೇಗೆ ಬದಲಾಯಿತೆಂದರೆ ಅವರ ಮನೆಯ ಮಹಿಳೆಯರು ಇತರೆ ಶ್ರೀಮಂತರ ಮನೆಯಲ್ಲಿ ಮನೆಗೆಲಸದ ಸೇವಕಿಯರಾಗಿ ಉದ್ಯೋಗವನ್ನರಸಿ ತಮ್ಮ ಕುಟುಂಬವನ್ನು ಸಲಹುವ ದುರ್ಗತಿ ಬಂದೊದಗಿತು.

ದುಷ್ಟ ಆಲೋಚನೆ ಮತ್ತು ಅವುಗಳ ಸುಧಾರಣೆ:

ರಾಜ್ಯದ ಆಡಳಿತ ಮತ್ತು ಬಾದಶಹನ ಕರ್ತವ್ಯ ಮುಂತಾದ ವ್ಯವಸ್ಥೆಗಳು ಬರೀ ಬಾದಶಹನ ಅಭಿಪ್ರಾಯ ಮತ್ತು ತಂತ್ರಗಾರಿಕೆಯ ಅನುಗುಣವಾಗಿ ಮಾತ್ರ ನಡೆಯತಕ್ಕದೆಂದು ಸುಲ್ತಾನ್ ಅಲ್ಲಾವುದ್ದೀನ್ ಖಿಲ್ಜಿಯು ತನ್ನ ವಿಚಾರಧಾರೆಯನ್ನು ಆಗಾಗ್ಗೆ ಪ್ರಕಟ ಪಡಿಸುತ್ತಿದ್ದ. ಈ ರಾಜಕೀಯ ಕರ್ತವ್ಯಗಳಿಗೂ ಅಲ್ಲಾಹನ ಶರೀಯತ್‌ಗೂ ಯಾವುದೇ ಸಂಬಂಧವಿಲ್ಲ ಹಾಗೂ ಧಾರ್ಮಿಕ ಪಂಡಿತರ ಕೆಲಸವು ವಿವಿಧ ರೀತಿಯ ಮೊಕದ್ದಮೆಗಳ ನ್ಯಾಯ ನಿರ್ಣಯವನ್ನು ಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ. ಅವರುಗಳು ಜನರ ನಡುವಿನ ಕೌಟುಂಬಿಕ ಮತ್ತು ಆಸ್ತಿ ಪಾಸ್ತಿಯ ವ್ಯಾಜ್ಯಗಳನ್ನು ತೀರ್ಮಾನ ಮಾಡುವುದು ಹಾಗೂ ದೈವ ಭಕ್ತಿಯ ವಿವಿಧ ವಿಧಾನಗಳನ್ನು ಜನತೆಗೆ ಪರಿಚಯಿಸುವುದು ಮಾತ್ರ ಧಾರ್ಮಿಕ ಪಂಡಿತರ ಕರ್ತವ್ಯವಾಗಿದೆ ಎಂಬುದು ಅವನ ಗ್ರಹಿಕೆಯಾಗಿತ್ತು. ತನ್ನ ಈ ದೋಷಪೂರಿತ ವಿಚಾರಧಾರೆಗೆ ಅನುಗುಣವಾಗಿ ಅಲ್ಲಾವುದ್ದೀನನು ಸದಾ ಕಾರ್ಯಮಗ್ನನಾಗುತ್ತಿದ್ದ ಹಾಗೂ ಯಾವುದೇ ಸಮಸ್ಯೆಯನ್ನು ಬಗೆಹರಿಸಬೇಕಾದರೂ ಅವನು ಶರೀಯತ್‌ನ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಅಂದಿನ ಕಾಲದ ಮೌಲ್ವಿಗಳ ಪೈಕಿ ಖಾಜಿ ಜಿಯಾವುದ್ದೀನ್ ಬಯಾನ್‌ವಿ ಮತ್ತು ಮೌಲಾನ ಜಹೀರ್ ಲಿಂಗ್ ಮುರ್ಷಿದ್ ಕೊಹಾರಾಮಿ ಯವರು ರಾಜನ ಅರಮನೆಗೆ ಭೇಟಿ ಕೊಡುವ ಕ್ರಮವಿತ್ತು ಹಾಗೂ ಅವರುಗಳು ಬಾದಶಹನ ಅರಮನೆಯ ಹೊರಗೆ ಸರದಾರರ ಆತಿಥ್ಯವನ್ನು ಕೂಡ ಸ್ವೀಕರಿಸುತ್ತಿದ್ದರು ಆದರೆ ಖಾಜಿ ಮೊಗೈಸುದ್ದೀನ್‌ರವರು ಬಾದಶಹನ ಆಪ್ತವಲಯಕ್ಕೆ ಸೇರಿದವರಾಗಿದ್ದರು. ಅವರು ಆ ಕಾಲದ ಅತ್ಯಂತ ವಿವೇಕಯುತ ವ್ಯಕ್ತಿಯಾಗಿದ್ದರು. ಅಲ್ಲಾವುದ್ದೀನನು ಅನಕ್ಷರಸ್ಥ ಎಂದು ಅವರಿಗೆ ಚೆನ್ನಾಗಿ ತಿಳಿದಿತ್ತು. ರಾಜನ ಗುಮಾಸ್ತರು ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಟಿಪ್ಪಣಿಗಳನ್ನು ಬಾದಶಹನ ಸನ್ನಿಧಿಯಲ್ಲಿ ಹಾಜರು ಮಾಡಲು ಆರಂಭಿಸಿದ ನಂತರ ಬಾದಶಹನಿಗೆ ಓದು ಬರಹದ ಅವಶ್ಯಕತೆಯ ತೀವ್ರವಾಗಿ ಕಂಡು ಬರತೊಡಗಿತು. ಅವನು ಅದರತ್ತ ಗಮನವನ್ನು ಕೇಂದ್ರೀಕರಿಸಿದ ಅವನು ಅತ್ಯಂತ ಪರಿಶ್ರಮದಿಂದ ಆ ಬರಹಗಳನ್ನು ಓದುವಷ್ಟು ಅಕ್ಷರ ಜ್ಞಾನವನ್ನು ಪಡೆದುಕೊಂಡ. ಈ ನಿಟ್ಟಿನಲ್ಲಿ ಬಾದಶಹನು ಪರ್ಶಿಯನ್ ಭಾಷೆಯ ಕೆಲವು ಗ್ರಂಥಗಳ ಅವಲೋಕನವನ್ನು ಮಾಡಿದ ಹಾಗೂ ಪಂಡಿತರೊಡನೆ ಧಾರ್ಮಿಕ ವಿಷಯಗಳ ಬಗ್ಗೆ ಚರ್ಚೆಯನ್ನು ಕೂಡ ಮಾಡಲಾರಂಭಿಸಿದ. ಇದರ ಪರಿಣಾಮವಾಗಿ ಅವನ ದೋಷಪೂರಿತ ಆಲೋಚನೆಗಳು ಸುಧಾರಣೆಗೆ ಒಳಪಟ್ಟವು. ಹಾಗೂ ಧಾರ್ಮಿಕ ವಿದ್ವಾಂಸರು ಮತ್ತು ಖಾಜಿಗಳು ಒಳ್ಳೆಯ ಮನೋಭಾವದವರು ಹಾಗೂ ಪವಿತ್ರ ಮನಸ್ಸಿನವರು ಎಂದು ಅವನಿಗೆ ಅರಿವಾಯಿತು. ಆ ಜನರು ಲೌಖಿಕ ಲಾಭದ ದುರಾಸೆಯಿಂದ ಪ್ರೇರಿತರಾಗಿ ಧಾರ್ಮಿಕ ಸಮಸ್ಯೆಗಳನ್ನು ಸೃಷ್ಟಿಮಾಡುವುದಿಲ್ಲವೆಂಬುದು ಕೂಡ ಅವನ ಗಮನಕ್ಕೆ ಬಂದಿತು.

ಅವನ ವಿಚಾರ ಧಾರೆಯಲ್ಲಿ ಸ್ಪಷ್ಟ ಬದಲಾವಣೆಯಾದ ನಂತರ ಅಲ್ಲಾವುದ್ದೀನನು ಆಗಾಗ್ಗೆ ಆ ವಿದ್ವಾಂಸರ ಸಭೆಯಲ್ಲಿ ಭಾಗ ವಹಿಸುತ್ತಿದ್ದ ಹಾಗೂ ಅವರೊಡನೆ ಶರೀಯತ್‌ನ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಿದ್ದ .

ಖಾಜಿ ಮೊಗೈಸುದ್ದೀನ್‌ನೊಡನೆ ಬಾದಶಹನ ಚರ್ಚೆ:

ಒಮ್ಮೆ ಬಾದಶಹನು ಖಾಜಿ ಮೊಗೈಸುದ್ದೀನ್ ಬಯಾನ್‌ವಿಯೊಂದಿಗೆ ಹೀಗೆಂದು ನುಡಿದ, "ನಾನು ನಿಮ್ಮೊಂದಿಗೆ ಕೆಲವು ವಿಚಾರಗಳ ಬಗ್ಗೆ ಚರ್ಚಿಸಿ ಸ್ಪಷ್ಟತೆಯನ್ನು ಹೊಂದಬೇಕಾಗಿದೆ." ಅಲ್ಲಾವುದ್ದೀನನು ತನ್ನ ಇಡೀ ಜೀವನದಲ್ಲಿ ಎಂದಿಗೂ ಯಾವುದೇ ವಿಷಯದ ಬಗ್ಗೆ ಮತಪಂಡಿತರೊಡನೆ ಚರ್ಚೆಯನ್ನು ನಡೆಸಿರಲಿಲ್ಲ. ಮತ್ತು ಸದಾ ಅವರನ್ನು ಸ್ವಾರ್ಥಿಗಳು ಮತ್ತು ಮೋಸಗಾರರು ಎಂದು ಪರಿಭಾವಿಸಿದ್ದ. ಹೀಗಾಗಿ ಅವನು ಅವರಿಂದ ಯಾವುದೇ ಸಲಹೆ ಸೂಚನೆಗಳನ್ನು ಕೂಡ ಸ್ವೀಕರಿಸಿರಲಿಲ್ಲ. ಅದ್ದರಿಂದ ಬಾದಶಹನ ಈ ಮಾತನ್ನು ಕೇಳಿ ಖಾಜಿ ಸಾಹೇಬರು ಆತಂರ್ಯದಲ್ಲಿ ವಿಚಲಿತರಾಗಿ ಇನ್ನು ನನಗೆ ಯಾವ ದುರ್ಗತಿ ಕಾದಿದೆಯೋ ದೇವರೆ ಬಲ್ಲ ಎಂದು ಚಿಂತಿತರಾದರು. ಅವರು ಕೈಕಟ್ಟಿ ನಿಂತು ಬಾದಶಹನೊಂದಿಗೆ ವಿನಂತಿಸಿಕೊಂಡರು "ಹುಜೂರ್ ನನ್ನ ಅಂತ್ಯಕಾಲ ಸಮೀಪಿಸಿದೆ ಎಂದು ನನಗೆ ಭಾಸವಾಗುತ್ತಿದೆ ಆದ್ದರಿಂದ ತಾವು ಯಾವುದೇ ವಿಚಾರವನ್ನು ನನ್ನಿಂದ ಕೇಳುವ ಶ್ರಮವಹಿಸಬೇಡಿ. ಅದಕ್ಕೆ ಬದಲಾಗಿ ರಾಜಭಟರನ್ನು ಕರೆಸಿ ಈ ಕೂಡಲೇ ನನ್ನ ಕತ್ತನ್ನು ಕತ್ತರಿಸಬೇಕೆಂದು ಆಜ್ಞೆ ಮಾಡಿ" ಖಾಜಿ ಸಾಹೇಬರ ಈ ಹೆದರಿಕೆಗೆ ಕಾರಣವೇನೆಂದು ಬಾದಶಹ ಕೇಳಿದ, "ಹುಜೂರ್‌ರವರೆ ತಾವು ನನ್ನಿಂದ ಯಾವ ಧರ್ಮಸೂಕ್ಷ್ಮದ ವಿವರಣೆಯನ್ನು ಕೇಳುವಿರೋ ನಾನು ಅದಕ್ಕೆ ಸೂಕ್ತ ಧಾರ್ಮಿಕ ಪರಿಹಾರವನ್ನು ತಮ್ಮ ಎದುರಿಗೆ ಇಡುತ್ತೇನೆ. ನನ್ನ ಈ ಉತ್ತರವು ಹುಜೂರ್‌ರವರ ಮರ್ಜಿಗೆ ವಿರೋಧವಾಗಿದ್ದಲ್ಲಿ ನಾನು ಜೀವಂತವಾಗಿರುವುದು ಕಷ್ಟ ಸಾಧ್ಯ ವಿಷಯವಾಗಿದೆ. ನಾನು ತಮ್ಮ ಮನೋಭಿಲಾಷೆಯಂತೆ ತಮ್ಮನ್ನು ಖುಷಿ ಪಡಿಸಲು ತಪ್ಪು ಉತ್ತರವನ್ನು ನೀಡಿದಲ್ಲಿ, ತದ ನಂತರ ತಾವು ಇತರೆ ಧಾರ್ಮಿಕ ಪಂಡಿತರ ಬಳಿ ನನ್ನ ಅಭಿಪ್ರಾಯದ ಬಗ್ಗೆ ಸ್ಪಷ್ಟೀಕರಣ ಪಡೆದಲ್ಲಿ ನನ್ನ ಮೇಲೆ ಸುಳ್ಳು ಹೇಳಿದ ಆರೋಪವು ಸಾಬೀತಾಗುವುದು. ಆ ಸಂದರ್ಭದಲ್ಲಿ ಕೂಡ ನನ್ನ ಗತಿಯು ಈ ಮೊದಲು ಹೇಳಿದಂತೆ ದುರ್ಗತಿಗೆ ಕಾರಣವಾಗುವುದು"ಎಂದು ಖಾಜಿ ಸಾಹೇಬರು ಹತಾಶೆಯಿಂದ ನುಡಿದರು. ಈ ಮಾತನ್ನು ಕೇಳಿ ಅಲ್ಲಾವುದ್ದೀನನು ಮುಗುಳ್ನಗೆಯನ್ನು ಬೀರಿದ ಮತ್ತು ಖಾಜಿ ಸಾಹೇಬರಿಗೆ ನುಡಿದ, "ನಾನು ನಿಮ್ಮಲ್ಲಿ ಪ್ರಸ್ತಾಪಿಸಿದ ವಿಷಯಗಳಿಗೆ ಇಸ್ಲಾಂ ಶರೀಯತ್‌ನ ಅನುಗುಣವಾಗಿ ಉತ್ತರವನ್ನು ನೀಡಿ ಹಾಗೂ ಸತ್ಯ ನುಡಿದಿದ್ದಕ್ಕೆ ನಿಮಗೆ ಯಾವುದೇ ಲುಕ್ಸಾನು ಉಂಟಾಗುವುದಿಲ್ಲ" ಇದರ ನಂತರ ಬಾದಶಹನು ಖಾಜಿ ಸಾಹೇಬರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ ಮತ್ತು ಖಾಜಿ ಸಾಹೇಬರು

ಅವನಿಗೆ ತೃಪ್ತಿಕರವಾದ ಉತ್ತರಗಳನ್ನು ನೀಡಿದರು ಆ ಪ್ರಶ್ನೋತ್ತರಗಳು ಕೆಳಕಂಡಂತೆ ಇವೆ.

ಪ್ರಶ್ನೆ–೧: ಇಸ್ಲಾಂ ಶರೀಯತ್‌ನ ಉಪಬಂಧಗಳ ರೀತ್ಯಾ ಹಿಂದೂವಿಗೆ ದಿಮಿ ಮತ್ತು ತೆರಿಗೆ ಪಾವತಿದಾರ ಎಂದು ಹೇಳಬಹುದೇ?

ಖಾಜಿ ಸಾಹೇಬರ ಉತ್ತರ: ಇಸ್ಲಾಮಿ ಧರ್ಮದ ರೀತ್ಯಾ ಇಸ್ಲಾಮೀ ರಾಜನ ಕಾರ್ಯಭಾರಿಗಳ ಬೇಡಿಕೆಯ ಮೇರೆಗೆ ಯಾವುದೇ ರೀತಿಯಲ್ಲಿ ಪ್ರತಿಭಟನೆ ಮಾಡದೆ ಹಣ ಮತ್ತು ಕಾಣಿಕೆಯನ್ನು ನೀಡುವ ಮುಸ್ಲಿಮೇತರರಿಗೆ ದಿಮಿ ಎಂದು ಕರೆಯಲಾಗುತ್ತದೆ. ಹಾಗೂ ಬೇಡಿದಷ್ಟು ಹಣದಲ್ಲಿ ಯಾವುದೇ ಕಡಿತವನ್ನು ಮಾಡುವಂತದಲ್ಲ ಹಾಗೂ ಹಜರತ್ ಇಮಾಮೆ ಆಜಾಮ್ ಅಬುಹನೀಫರವರು ಮುಸ್ಲಿಮೇತರರನ್ನು ಕೊಲೆ ಮಾಡುವುದನ್ನು ನಿರ್ಬಂಧಿಸಿದ್ದಾರೆ ಹಾಗೂ ಅದರ ಬದಲಿಗೆ ಜೆಜಿಯಾವನ್ನು ವಸೂಲಿ ಮಾಡಬಹುದೆಂದು ಆಜ್ಞೆ ಮಾಡಿದ್ದಾರೆ. ಆದ್ದರಿಂದ ಮುಸ್ಲಿಮೇತರರಿಂದ ಜೆಜಿಯಾ ತೆರಿಗೆಯನ್ನು ಕಠಿಣ ಕ್ರಮಗಳಿಂದ ವಸೂಲಿ ಮಾಡಬೇಕು. ಈ ಉತ್ತರವನ್ನು ಕೇಳಿ ಅಲ್ಲಾವುದ್ದೀನನು ಮುಗುಳ್ನಗೆಯನ್ನು ಬೀರಿದ ಮತ್ತು ಹೇಳಿದ "ನೀವು ಏನನ್ನು ಹೇಳುತ್ತಿದ್ದೀರೋ ಅದಕ್ಕೆ ಕುರಾನ್ ಗ್ರಂಥದ ಆಧಾರವಿದೆ. ಆದರೆ ನಾನು ನನ್ನ ವೈಯಕ್ತಿಕ ಆಲೋಚನೆಗಳಿಂದ ಪ್ರೇರಿತನಾಗಿ ಯಾವ ಕ್ರಮವನ್ನು ಅನುಸರಿಸಿದ್ದೆನೋ ಅದು ಇದೇ ಆಗಿದೆ. ಮತ್ತು ನಾನು ಮುಸ್ಲಿಮೇತರರೊಡನೆ ಇದೇ ರೀತಿಯ ವರ್ತನೆಯನ್ನು ಮಾಡುತ್ತೇನೆ.

ಪ್ರಶ್ನೆ–೨: ಅನೇಕ ಸಂದರ್ಭಗಳಲ್ಲಿ ಬಾದಶಹನ ಅಧಿಕಾರಿ ವರ್ಗದವರು ಜನತೆಯಿಂದ ಲಂಚದ ರೂಪದಲ್ಲಿ ಒಂದಿಷ್ಟು ಹಣವನ್ನು ಪಡೆಯುತ್ತಾರೆ. ಈ ಕ್ರಮವನ್ನು ಕಳವು ಎಂದು ಭಾವಿಸುವುದು ಸೂಕ್ತವೇ? ಹಾಗೂ ಲಂಚ ರುಷುವತ್ತನ್ನು ಪಡೆದುಕೊಳ್ಳುವವರಿಗೆ ಕಳ್ಳರಿಗೆ ನೀಡುವ ಸಜೆಯನ್ನು ನೀಡಬಹುದೇ?

ಉತ್ತರ: ತಮ್ಮ ಅವಶ್ಯಕತೆಗೆ ಸಾಲುವಷ್ಟು ವೇತನವನ್ನು ಪಡೆದುಕೊಳ್ಳುವ ರಾಜನ ಅಧಿಕಾರಿ ವರ್ಗದವರು ಭ್ರಷ್ಟಾಚಾರವನ್ನು ಎಸಗಿ ಲಂಚದ ರೂಪದಲ್ಲಿ ಪಡೆಯುವ ಹಣವನ್ನು ಅವರಿಂದ ಅತ್ಯಂತ ಕಠಿಣ ಕ್ರಮಗಳಿಂದ ಬಾದಶಹ ವಾಪಸ್ಸು ಪಡೆದುಕೊಳ್ಳಬೇಕು. ಆದರೆ ಕಳ್ಳರಿಗೆ ನೀಡುವ ಕೈಯನ್ನು ಕತ್ತರಿಸುವ ಸಜೆಯು ಅವರ ಮೇಲೆ ಜಾರಿಯಾಗತಕ್ಕದಲ್ಲ". ಖಾಜಿ ಮೊಗೈಸುದ್ದೀನನ ಉತ್ತರವನ್ನು ಕೇಳಿ ಬಾದಶಹನು ಹೀಗೆಂದು ಪ್ರತಿಕ್ರಿಯೆ ನೀಡಿದ, "ನಾನು ಕೂಡ ಸಜೆಯ ಇದೇ ಕಾನೂನನ್ನು ಜಾರಿಯಲ್ಲಿ ಇಟ್ಟಿದ್ದೇನೆ. ರಾಜನ ಅಮಲದಾರಿ ಅಧಿಕಾರಿಗಳು ಅಪ್ರಾಮಾಣಿಕತೆಯ ಮೂಲಕ ಪಡೆದುಕೊಳ್ಳುವ ಹಣವನ್ನು ನಾನು ಕಠಿಣ ಕ್ರಮಗಳಿಂದ ಮರಳಿ ಪಡೆಯುತ್ತಿದ್ದೇನೆ. ದುರಾಶೆ ಮತ್ತು ದೌರ್ಜನ್ಯದಿಂದ ಕೂಡಿದ ಆ ಅಧಿಕಾರಿಗಳು

ಜನತೆಯನ್ನು ಕಾಡಿಸದಂತೆ ನೋಡಿಕೊಳ್ಳುತ್ತೇನೆ. ಹಾಗೂ ಲಂಚ ರುಷುವತ್ತಿನ ಸಂಪ್ರದಾಯವು ಈ ಮೂಲಕ ಕೊನೆಯಾಗಬಹುದು."

ಪ್ರಶ್ನೆ–೩: ನಾನು ನನ್ನ ಅಧಿಕಾರಾವಧಿಯಲ್ಲಿ ದೇವಗಡದಿಂದ ಪಡೆದುಕೊಂಡ ಸಂಪತ್ತಿನ ಮೇಲೆ ಯಾರ ಹಕ್ಕು ಸ್ಥಾಪಿತವಾಗುತ್ತದೆ? ನನ್ನ ಹಕ್ಕಿಗೆ ಒಳಪಡುತ್ತದೆಯೋ ಅಥವಾ ಜನತೆಯ ಹಕ್ಕಿಗೆ ಒಳ ಪಡುತ್ತದೆಯೋ? ಹಾಗೂ ಅದು ನನ್ನ ವೈಯಕ್ತಿಕ ಸಂಪತ್ತಿಗೆ ಸೇರುತ್ತದೆಯೋ ಅಥವಾ ಯುದ್ಧಸಂಪತ್ತಿನ ಇಡಗಂಟು ಆಗುತ್ತದೆಯೋ?

ಉತ್ತರ: "ಈ ಎಲ್ಲಾ ಸಂಪತ್ತಿನ ಪೈಕಿ ನಿಮ್ಮ ಹಕ್ಕು ಎಷ್ಟಿರುತ್ತದೆ ಎಂದರೆ ಅದನ್ನು ಪಡೆದುಕೊಳ್ಳುವಲ್ಲಿ ನಿಮಗೆ ನೆರವು ನೀಡಿದವರ ಸಂಪತ್ತು ಕೂಡ ಅಷ್ಟೇ ಇರುತ್ತದೆ." ಈ ಉತ್ತರ ಬಾದಶಹನಿಗೆ ಇಷ್ಟವಾಗಲಿಲ್ಲ ಮತ್ತು ಅವನು ನುಡಿದ "ಇದು ಹೇಗಾಗುತ್ತೆ? ನನ್ನ ಅಧಿಕಾರಾವಧಿಯಲ್ಲಿ ನಾನು ಪಡೆದುಕೊಂಡ ಆ ಸಂಪತ್ತನ್ನು ರಾಜನ ಖಜಾನೆಯಲ್ಲಿ ಜಮಾ ಮಾಡಿಲ್ಲ. ಅದು ಹೇಗೆ ಯುದ್ಧ ಸಂಪತ್ತಿನ ಇಡಗಂಟು ಎಂದು ಪರಿಗಣಿಸಲಾಗುತ್ತದೆ?" ಎಂದು ಮರುಪ್ರಶ್ನೆ ಮಾಡಿದ ಇದಕ್ಕೆ ಪ್ರತಿಯಾಗಿ ಖಾಜಿ ಸಾಹೇಬರು ನುಡಿದರು, "ಬಾದಶಹ ತನ್ನ ವೈಯಕ್ತಿಕ ಪ್ರಯತ್ನ ಮತ್ತು ಶ್ರಮದಿಂದ ಯಾವುದನ್ನು ಗಳಿಸುತ್ತಾನೆಯೋ ಅದರಲ್ಲಿ ಬೇರೆ ಯಾರ ಪಾಲು ಕೂಡ ಇಲ್ಲ. ಆದರೆ ಇಸ್ಲಾಮಿ ಸೈನ್ಯದ ನೆರವಿನಿಂದ ಬಾದಶಹನು ಯಾವ ಸಂಪತ್ತನ್ನು ಅರ್ಜಿಸುತ್ತಾನೆಯೋ ಅದರಲ್ಲಿ ಆತನ ಹಿಸ್ಸೆಯು ಒಬ್ಬ ಸಾಮಾನ್ಯ ಸೈನಿಕರ ಹಿಸ್ಸೆಯಷ್ಟು ಮಾತ್ರ ಆಗಿರುತ್ತದೆ."

ಪ್ರಶ್ನೆ–೪: ಇಸ್ಲಾಮೀ ಸೈನ್ಯದ ನೆರವಿನಿಂದ ಯಾವ ಸಂಪತ್ತನ್ನು ಪಡೆದುಕೊಳ್ಳಲಾಗಿದೆಯೋ ಅದರಲ್ಲಿ ನನ್ನ ಮತ್ತು ನನ್ನ ಪುತ್ರರ ಹಿಸ್ಸೆ ಎಷ್ಟಾಗಿರುತ್ತದೆ.?

ಉತ್ತರ: ಆ ಪ್ರಶ್ನೆಗೆ ಉತ್ತರಿಸುತ್ತಾ ಖಾಜಿ ಸಾಹೇಬರು ಹೀಗೆಂದರು, "ಈಗ ನನ್ನ ಸಾವು ನನ್ನ ಕಣ್ಣೆದುರಿಗೆ ನಿಂತಿರುವಂತೆ ನನಗೆ ಭಾಸವಾಗುತ್ತಿದೆ. ನಾನು ಈ ಮೊದಲು ನೀಡಿದ ಉತ್ತರ ಕೂಡ ತಮಗೆ ಇಷ್ಟವಾಗಿರಲಿಲ್ಲ. ಈಗಂತೂ ನಾನು ನೀಡುವ ಉತ್ತರವು ನಿಮಗೆ ಇನ್ನಷ್ಟು ಅಪ್ರಿಯವಾಗುತ್ತದೆ. ಇದನ್ನು ಕೇಳಿ ಅಲ್ಲಾವುದ್ದೀನನು ನುಡಿದ, "ನೀನು ನನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳು, ಮತ್ತು ನಿನ್ನ ಪ್ರಾಣಕ್ಕೆ ಸಂಪೂರ್ಣ ರಕ್ಷಣೆಯನ್ನು ನೀಡಿದ್ದೇನೆ."

ಖಾಜಿ ಮೊಗೈಸುದ್ದೀನ್ ನುಡಿದ, "ಇಂತಹ ಪ್ರಸಂಗದಲ್ಲಿ ಮೂರು ವಿಭಿನ್ನ ರೀತಿಯ ಕ್ರಮವನ್ನು ಅನುಸರಿಸಬಹುದಾಗಿದೆ. ಹಾಗೆ ನೋಡಿದಲ್ಲಿ ನ್ಯಾಯಪರತೆಯಿಂದ ನಡೆದುಕೊಳ್ಳುವುದಾದಲ್ಲಿ ಮತ್ತು ಇಸ್ಲಾಮಿನ ಖಲೀಫಾರವರ ನಡವಳಿಕೆಗಳನ್ನು ಅನುಕರಿಸಿದಾದಲ್ಲಿ ಈ ರೀತಿ ಅರ್ಜಿಸಲಾದ ಸಂಪತ್ತಿನಿಂದ ಬಾದಶಹನು ಪಡೆದುಕೊಳ್ಳುವ ಪಾಲು ಒಬ್ಬ ಸಾಮಾನ್ಯ ಮುಸಲ್ಮಾನನಿಗೆ ಸಿಗುವ ಪಾಲಿನಷ್ಟೇ ಆಗಿರುತ್ತದೆ. ಒಂದು

ವೇಳೆ ಮಧ್ಯಮ ಮಾರ್ಗವನ್ನು ಅನುಸರಿಸಿದಾದಲ್ಲಿ ಹೆಚ್ಚು ಪಾಲು ದೊರಕಿದ ಸರದಾರರ ಪಾಲಿನಷ್ಟು ಹಿಸ್ಸೆಯನ್ನು ಬಾದಶಹನು ಪಡೆದುಕೊಳ್ಳಬಹುದು. ಒಂದು ವೇಳೆ ರಾಜ್ಯದ ಹಿತದೃಷ್ಟಿ ಮತ್ತು ರಾಜಕೀಯದ ಆಚಾರಸಂಹಿತೆಯನ್ನು ಪರಿಗಣಿಸಿದಲ್ಲಿ (ಹೇಗೆಂದರೆ ಸಾಮಾನ್ಯವಾಗಿ ವಿದ್ವಾಂಸರು, ವೃದ್ಧರು ಮೊದಲಾದವರು ಆಸರೆಗಾಗಿ ಬಾದಶಹನನ್ನು ಅವರ ಪೋಷಕನನ್ನಾಗಿ ಪರಿಗಣಿಸಲಾಗುತ್ತದೆ) ಬಾದಶಹನು ಸರ್ದಾರರ ಪಾಲಿಗಿಂತ ಒಂದಿಷ್ಟು ಹೆಚ್ಚಿನ ಹಿಸ್ಸೆಯನ್ನು ಪಡೆಯಬಹುದಾಗಿದೆ. ಈ ಮೂಲಕ ಬಾದಶಹ ಮತ್ತು ಸಾಮಾನ್ಯ ಸರ್ದಾರರ ಸ್ಥಾನದ ನಡುವೆ ಸ್ವಲ್ಪ ಅಂತರ ಕಂಡುಬರುತ್ತದೆ ಹಾಗೂ ರಾಜನ ಪ್ರತಿಷ್ಠೆಯು ಉಳಿಯುತ್ತದೆ. ಇದಕ್ಕಿಂತ ಹೆಚ್ಚಿನ ಹಿಸ್ಸೆಯನ್ನು ಬಾದಶಹನು ಪಡೆಯುವುದು ಯಾವ ರೀತಿಯಲ್ಲಿಯೂ ಯೋಗ್ಯವಾಗಿಲ್ಲ. ಬಾದಶಹನ ಪುತ್ರರ ಹಕ್ಕು ಸರದಾರರು ಮತ್ತು ಮುಸಲ್ಮಾನರಿಗೆ ಸರಿಸಮವಾಗಿರಬೇಕಾಗುತ್ತದೆ" ಈ ಮಾತನ್ನು ಕೇಳಿ ಅಲ್ಲಾವುದ್ದೀನನು ತುಂಬಾ ಕೋಪಗೊಂಡ ಮತ್ತು ನುಡಿದ "ಇದರ ಅರ್ಥ ನನ್ನ ಅಂತಃಪುರದ ರಾಣಿವಾಸ ಮತ್ತಿತರೆ ಅನೇಕ ದಿಕ್ಕಿನಲ್ಲಿ ವೆಚ್ಚವಾಗುವ ಹಣವನ್ನು ನೀನು ಅಕ್ರಮವೆಂದು ಅಭಿಪ್ರಾಯ ಪಡುತ್ತಿದ್ದೀಯೇನು?" ಖಾಜಿಯು ಉತ್ತರ ನೀಡಿದ, "ಹುಜೂರ್‌ರವರು ನನಗೆ ಶರೀಯತ್‌ನ ಧರ್ಮಸೂಕ್ಷ್ಮದ ಹಿನ್ನೆಲೆಯಲ್ಲಿ ಪ್ರಶ್ನೆಗಳನ್ನು ಕೇಳಿದ್ದೀರಿ, ಮತ್ತು ನಾನು ಎಲ್ಲಾ ಉತ್ತರಗಳನ್ನು ಕೂಡ ಶರೀಯತ್‌ನ ಬೆಳಕಿನಲ್ಲಿ ನೀಡಿದ್ದೇನೆ. ಆದರೆ ರಾಜ್ಯದ ಆಚಾರ ಸಂಹಿತೆ ಕಾಪಾಡುವ ಸಲುವಾಗಿ ಮತ್ತು ರಾಜಕೀಯದ ಅವಶ್ಯಕತೆಗಳ ಹಿನ್ನೆಲೆಯಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಕೇಳುವುದಾದಲ್ಲಿ ಹುಜೂರ್‌ರವರು ಜಾರಿಗೊಳಿಸುತ್ತಿರುವ ಕ್ರಮವು ಸರಿಯಾಗಿದೆ. ಬಾದಶಹರವರ ಘನತೆ ಮತ್ತು ಪ್ರತಿಷ್ಠೆ ಹಾಗೂ ಮರ್ಯಾದೆಯನ್ನು ಉಳಿಸುವ ಸಲುವಾಗಿ ಎಷ್ಟು ಸಂಪತ್ತು ವ್ಯಯವಾಗುತ್ತದೆಯೋ ಅದೆಲ್ಲವನ್ನು ರಾಜ್ಯದ ಆಡಳಿತ ವ್ಯವಸ್ಥೆಯ ವೆಚ್ಚಗಳೆಂದು ಪರಿಗಣಿಸಬೇಕಾಗುತ್ತದೆ."

ಪ್ರಶ್ನೆ–೫: ಅಲ್ಲಾವುದ್ದೀನ್ ಪ್ರಶ್ನಿಸಿದ, "ಯಾವ ಸೈನಿಕನು ಅವಶ್ಯಕತೆ ಬಿದ್ದಾಗ ಹಾಜರಿರುವುದಿಲ್ಲವೋ ಅವನಿಗೆ ಸಜೆಯ ರೂಪದಲ್ಲಿ ನಾನು ಮೂರು ವರ್ಷಗಳ ವೇತನವನ್ನು ಅವನಿಂದ ವಾಪಸ್ಸು ಪಡೆದುಕೊಳ್ಳುತ್ತೇನೆ. ವಿದ್ರೋಹಿಗಳು ಪಿತೂರಿಗಾರರು ಮತ್ತು ಸಂಚುಕೋರರಿಗೆ ನಾನು ಅವರ ಸಂಗಡಿಗರು, ಬೆಂಬಲಿಗರು ಮತ್ತು ಹೆಂಡತಿ, ಮಕ್ಕಳ ಸಮೇತ ಮರಣ ದಂಡನೆಯನ್ನು ನೀಡುತ್ತೇನೆ. ಹಾಗೂ ಅಂತಹ ಅಪರಾಧಿಗಳ ಎಲ್ಲಾ ಸಂಪತ್ತನ್ನು ವಶಪಡಿಸಿಕೊಂಡು ರಾಜಭಂಡಾರಕ್ಕೆ ಸೇರಿಸಿಕೊಳ್ಳುತ್ತೇನೆ. ವಿದ್ರೋಹಿಗಳಿಗೆ ನಾನು ಯಾವ ರಿಯಾಯಿತಿಯನ್ನು ಕೂಡ ತೋರುವುದಿಲ್ಲ ಅವರ ನಾಮಾಶೇಷವನ್ನು ಮಾಡಿದ್ದು ರಾಜ್ಯದಲ್ಲಿ ಶಾಂತಿ ಮತ್ತು ಸುರಕ್ಷತೆಯ ವಾತಾವರಣವನ್ನು ಸ್ಥಾಪಿಸುತ್ತೇನೆ. ಕುಡುಕರು, ದುಷ್ಟರು, ಕಳ್ಳಕಾಕರು ಮೊದಲದವರಿಗೆ ತೀವ್ರತರದ ಶಿಕ್ಷೆಯನ್ನು ನೀಡುತ್ತೇನೆ. ನೀವು ಈ ಎಲ್ಲಾ ಸಂಗತಿಗಳನ್ನು ಖಿದ್ದು ಇಸ್ಲಾಮಿ ಶರೀಯತ್‌ಗೆ ವಿರೋಧವಾಗಿವೆ ಎಂದು ಹೇಳಬಹುದೆಂದು ನನಗನಿಸುತ್ತದೆ."

ಈ ಮಾತುಗಳನ್ನು ಕೇಳಿ ಖಾಜಿ ಸಾಹೇಬರು ತಮ್ಮ ಸ್ಥಾನದಿಂದ ಎದ್ದು ನಿಂತರು. ಮತ್ತು ಒಂದು ಮೂಲೆಗೆ ಹೋಗಿ ತಮ್ಮ ತಲೆಯನ್ನು ಕೈಗಳಲ್ಲಿ ಹಿಡಿದು ನೆಲದ ಮೇಲೆ ದೀರ್ಘದಂಡ ಪ್ರಮಾಣವನ್ನು ಮಾಡಿ ಅತ್ಯಂತ ಗೌರವದಿಂದ ಬಾದಶಹನಿಗೆ ಹೀಗೆಂದು ಉತ್ತರಿಸಿದರು, "ಹುಜೂರ್‌ರವರು ಯಾವ ಸಂಗತಿಗಳನ್ನು ಪ್ರಸ್ತಾಪ ಮಾಡಿದ್ದೀರೋ ಅವುಗಳು ಶರೀಯತ್‌ನ ಆದೇಶಗಳಿಗೆ ವಿರೋಧವಾಗಿವೆ" ಈ ಜವಾಬನ್ನು ಕೇಳಿ ಬಾದಶಹನು ಸಿಡಿಮಿಡಿಗೊಂಡ ಮತ್ತು ಅವಕ್ಕಾಗಿ ರಾಣಿ ವಾಸದತ್ತ ನಡೆದ.

ಖಾಜಿ ಸಾಹೇಬರು ಕೂಡ ಅತ್ಯಂತ ಶೀಘ್ರವಾಗಿ ಅಲ್ಲಿಂದ ನಿರ್ಗಮಿಸಿದರು. ಮತ್ತು ತರಾತುರಿಯಲ್ಲಿ ತಮ್ಮ ಮನೆಯನ್ನು ತಲುಪಿದರು. ತಮ್ಮ ಜೀವದ ಬಗ್ಗೆ ಅವರಿಗೆ ಯಾವುದೇ ವಿಶ್ವಾಸವು ಉಳಿಯಲಿಲ್ಲ ತಮ್ಮ ಕುಟುಂಬದ ಸದಸ್ಯರಿಗೆ ಅಂತಿಮ ವಿದಾಯವನ್ನು ಹೇಳಿದರು, ಹಾಗೂ ತಮ್ಮ ಕಗ್ಗೊಲೆಯ ಬಗ್ಗೆ ಬಾದಶಹನ ಆಜ್ಞೆಯನ್ನು ಎದುರು ನೋಡತೊಡಗಿದರು. ಅವರು ಇದೇ ನಿರೀಕ್ಷೆಯಲ್ಲಿ ಅಲ್ಲಾಹನ ನಾಮವನ್ನು ಸ್ಮರಿಸುತ್ತಿದ್ದರು. ಮರುದಿನ ಅಲ್ಲಾವುದ್ದೀನನು ಅವನನ್ನು ದರ್ಬಾರಿಗೆ ಕರೆಸಿದ ಹಾಗೂ ನಿರೀಕ್ಷೆಗೆ ವಿರೋಧವಾಗಿ ಅವರಿಗೆ ರಾಜ ಪುರಸ್ಕಾರವನ್ನು ನೀಡಿ ಸನ್ಮಾನಿಸಿದ. ಚಿನ್ನದ ನೂಲಿನಿಂದ ನೇಯ್ದ ನಿಲುವಂಗಿ ಮತ್ತು ಒಂದು ಸಾವಿರ ತಂಗವನ್ನು ಬಹುಮಾನದ ರೂಪದಲ್ಲಿ ನೀಡಿದ ಮತ್ತು ಅಲ್ಲಾವುದ್ದೀನನು ಖಾಜಿ ಸಾಹೇಬರಿಗೆ ನುಡಿದ, "ನಾನು ನಿರಕ್ಷರಿ ಮತ್ತು ಶರೀಯತ್‌ನ ಸಂಗತಿಗಳಿಂದ ಸಂಪೂರ್ಣವಾಗಿ ಅರಿವು ಇಲ್ಲದೆ ಇರುವವನು. ಆದರೆ ನಾನೊಬ್ಬ ಮುಸಲ್ಮಾನನ ಪುತ್ರನಾಗಿದ್ದೇನೆ ನೀವು ಹೇಳಿರುವ ವಿಚಾರವು ಸಂಪೂರ್ಣ ಸತ್ಯದಿಂದ ಕೂಡಿದೆ ಎಂದು ನನಗೆ ತಿಳಿದಿದೆ. ಆದರೆ ಪ್ರಪಂಚದ ಸಂಗತಿಗಳು ಮತ್ತು ವಿಶೇಷವಾಗಿ ಹಿಂದೂಸ್ಥಾನದ ಯುದ್ಧಗಳನ್ನು ಕೇವಲ ಶರೀಯತ್‌ನ ಕಾನೂನಿಗೆ ಒಳಪಟ್ಟು ಜಾರಿಗೊಳಿಸುವುದು ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗೆ ಬಾದಶಹನು ರಾಜಕಾರಣದ ತೀವ್ರತರವಾದ ತಂತ್ರಗಾರಿಕೆಯಿಂದ ಕ್ರಿಯಾಶೀಲವಾಗುವುದಿಲ್ಲವೋ ಅಲ್ಲಿಯವರೆಗೆ ರಾಜ್ಯದಲ್ಲಿ ಶಾಂತಿ ಮತ್ತು ಸಂರಕ್ಷಣೆ ನೆಲೆಸುವುದು ಅತ್ಯಂತ ಕಠಿಣವಾಗುತ್ತದೆ. ನನ್ನ ಅಭಿಪ್ರಾಯವೇನೆಂದರೆ ಕೇವಲ ಧಾರ್ಮಿಕ ಪ್ರವಚನ ಮತ್ತು ಬುದ್ಧಿವಾದದಿಂದ ಈ ಕಾಲದ ಜನರು ನೇರ ಹಾದಿಯನ್ನು ಹಿಡಿಯುವುದಿಲ್ಲ. ದ್ರೋಹಿಗಳು ಮತ್ತು ದುಷ್ಟರು ವ್ಯಭಿಚಾರ ಮೊದಲಾದ ಅನಿಷ್ಟ ನಡವಳಿಕೆಯನ್ನು ತಮ್ಮದಾಗಿಸಿಕೊಂಡಿದ್ದಾರೆ ಎಂಬುದು ಈ ಬೆಳಕಿನಷ್ಟೇ ಪ್ರಖರವಾಗಿದೆ. ಕೋಪ, ಕಾರಾಗೃಹ ವಾಸ ಮತ್ತು ಹೊಡೆತ ಬಡಿತಗಳಿಂದ ಈ ಜನರು ಈ ದುಷ್ಟ ಪ್ರವೃತ್ತಿಯಿಂದ ಪಶ್ಚಾತ್ತಾಪವನ್ನು ಪಡುವುದಿಲ್ಲ. ಇಂತಹ ಜನರಿಗೆ ಪಾಠ ಕಲಿಸುವ ದೃಷ್ಟಿಯಿಂದ ಅವರ ಪೈಕಿ ಕೆಲವರನ್ನು ನಾನು ಅಪ್ರಯೋಜಕರನ್ನಾಗಿ ಮಾಡುತ್ತೇನೆ. ಹೀಗಾಗಿ ರಾಜ್ಯದಲ್ಲಿ ದುಷ್ಟರ ಸಾಮರ್ಥ್ಯ ಕುಗ್ಗುತ್ತಿದೆ. ನನ್ನ ಸದ್ಭಾವನೆಯು ಪಾರದರ್ಶಕವಾಗಿದೆ. ದೇವರ ಸರ್ವಸೃಷ್ಟಿಯು

ಶಾಂತಿ ಮತ್ತು ನೆಮ್ಮದಿಯಿಂದ ಜೀವಿಸಬೇಕೆಂಬುದೇ ನನ್ನ ಉದ್ದೇಶವಾಗಿದೆ. ಅಲ್ಲಾಹನ ಕರುಣೆಯ ದ್ವಾರವು ಸದಾ ತೆರದಿರುತ್ತದೆ. ಆದ್ದರಿಂದ ಅಲ್ಲಾಹನು ನನ್ನ ಸರ್ವ ಅಪರಾಧಗಳನ್ನು ಮನ್ನಿಸುವವನೆಂಬ ಪೂರ್ತಾ ನಂಬಿಕೆ ನನಗಿದೆ."

ಚಿತ್ತೂರಿನ ಕೋಟೆಯ ವಿಜಯ:

ಕೆಲಕಾಲದ ನಂತರ ಅಲ್ಲಾವುದ್ದೀನನು ತೆಲಂಗಾಣದ ಪ್ರಸಿದ್ದ ಸ್ಥಳವಾದ ವಾರಂಗಲ್ಲಿನ ವಿಜಯವನ್ನು ಹೊಂದುವ ಸಲುವಾಗಿ ಆಗಾಧವಾದ ಸೈನ್ಯವನ್ನು ಬಂಗಾಳದ ಮಾರ್ಗದಿಂದ ಕಳಿಸಿಕೊಟ್ಟ, ಹಾಗೂ ಸ್ವತಃ ಒಂದು ಬಲಾಢ್ಯ ಸೇನೆಯೊಂದಿಗೆ ಚಿತ್ತೂರಿನ ಕೋಟೆಯತ್ತ ಮುನ್ನಡೆದ. ಸದರಿ ಕೋಟೆಯನ್ನು ಅಂದಿನವರೆಗೂ ಯಾವ ಮುಸಲ್ಮಾನ ಬಾದಶಹನು ಕೂಡ ಗೆದ್ದುಕೊಂಡಿರಲಿಲ್ಲ. ಅಲ್ಲಾವುದ್ದೀನನು ಸಂಪೂರ್ಣವಾಗಿ ಆರು ತಿಂಗಳವರೆಗೆ ಕೋಟೆಯ ಮುತ್ತಿಗೆಯನ್ನು ಮುಂದುವರೆಸಿದ ಮತ್ತು ಕೊನೆಗೆ ೭೦೩ನೇ ಇಸವಿಯ ಮೊಹರಂ ತಿಂಗಳಲ್ಲಿ ಕೋಟೆಯನ್ನು ಗೆದ್ದುಕೊಂಡ. ಬಾದಶಹನು ಆ ಕೋಟೆಯನ್ನು ತನ್ನ ಹಿರಿಯ ಮಗನಾದ ಖಿಜರ್‌ಖಾನನ ವಶಕ್ಕೆ ನೀಡಿದ ಮತ್ತು ಅದರ ಹೆಸರನ್ನು "ಖಿಜರಾಬಾದ್" ಎಂದಿಟ್ಟ. ಕೋಟೆಯ ಬಳಿ ಇದ್ದ ಒಂದು ಬೃಹತ್ ಮೈದಾನದಲ್ಲಿ ಅಲ್ಲಾದ್ದೀನನು ವಿಜೋತ್ಸವವನ್ನು ಆಯೋಜಿಸಿದ ಹಾಗೂ ಖಿಜರ್‌ಖಾನ್‌ಗೆ ಛತ್ರ, ಚಾಮರಗಳ ಕೊಡುಗೆಗಳನ್ನು ನೀಡಿ ತನ್ನ ಉತ್ತರಾಧಿಕಾರಿಯೆಂದು ನೇಮಕ ಮಾಡಿದ.

ಮೊಗಲರ ಆಕ್ರಮಣ:

ಅಲ್ಲಾವುದ್ದೀನನ ಈ ಪ್ರಯಾಣದ ಸುದ್ದಿಯು ಮಾವರ ಉನ್ನೆಹರ್‌ವರೆಗೂ ತಲುಪಿತು. ಹಾಗೂ ಆ ದೂರ ಪ್ರಯಾಣದಿಂದ ಮರಳಬೇಕಾದಲ್ಲಿ ಬಾದಶಹನಿಗೆ ದೀರ್ಘಾವಧಿಯ ಕಾಲ ಬೇಕಾಗುವುದೆಂದು ಅಲ್ಲಿನ ನಿವಾಸಿಗಳು ಭಾವಿಸಿದರು. ಈ ದುರಾಲೋಚನೆಯ ಹಿನ್ನೆಲೆಯಲ್ಲಿ ಮೊಗಲರ ಒಂದು ಸೈನ್ಯವು ಕರ್ಘಿ ಎಂಬ ಹೆಸರಿನ ಮೊಘಲ ಸರ್ದಾರನ ಮುಂದಾಳತ್ವದಲ್ಲಿ ಹಿಂದೂಸ್ಥಾನವನ್ನು ಲೂಟಿ ಮಾಡಿ ಕೊಳ್ಳೆ ಹೊಡೆಯುವ ಸಲುವಾಗಿ ತಮ್ಮ ದೇಶದಿಂದ ಹೊರಡಿತು. ಅಲ್ಲಾವುದ್ದೀನ್‌ನಿಗೆ ಈ ವಿಷಯ ತಿಳಿದು ಬಂದಾಗ ಅವನು ಅತಿವೇಗವಾಗಿ ಪ್ರಯಾಣದ ಅಂತರವನ್ನು ಕ್ರಮಿಸುತ್ತ ದೆಹಲಿಯನ್ನು ತಲುಪಿದ. ಮೊಘಲರ ಸೈನ್ಯವು ಅಲ್ಲಾವುದ್ದೀನನ ಸೈನ್ಯವು ದೆಹಲಿಯನ್ನು ತಲುಪಿದ ಒಂದು ತಿಂಗಳ ನಂತರ ದೆಹಲಿಯ ಸಮೀಪ ಬಂದು ತಲುಪಿ ಯಮುನಾ ನದಿಯ ತೀರದಲ್ಲಿ ಬಿಡಾರವನ್ನು ಹೂಡಿತ್ತು. ಆ ಸೈನ್ಯವು ಒಂದು ಲಕ್ಷ ಇಪ್ಪತ್ತು ಸಾವಿರ ಸೈನಿಕರಿಂದ ಕೂಡಿತ್ತು ಆ ಸಂದರ್ಭದಲ್ಲಿ ಅಲ್ಲಾವುದ್ದೀನನ ಸೈನ್ಯದ ಹೆಚ್ಚಿನ ಭಾಗವು ದಕ್ಷಿಣದಲ್ಲಿ ವಾರಂಗಲ್‌ನಲ್ಲಿ ಯುದ್ಧ ನಿರತವಾಗಿತ್ತು. ಮತ್ತು ಬಹುತೇಕ ಸರ್ದಾರರು ತಮ್ಮ ತಮ್ಮ ಜಹಗೀರ್‌ನಲ್ಲಿದ್ದರು.

ಹೀಗಾಗಿ ಮೊಘಲರನ್ನು ಎದುರಿಸುವುದು ಸ್ವಲ್ಪ ಕಷ್ಟವಾಗಬಹುದೆಂದು ಅಲ್ಲಾವುದ್ದೀನ್‌ನಿಗೆ ಕಂಡು ಬಂದಿತು. ಅವನು ತನ್ನ ಮುಂದಿನ ಕ್ರಮದ ಬಗ್ಗೆ ಚಿಂತೆಗೊಳಗಾದ, ಆದರೂ ಧೈರ್ಯ ಮಾಡಿ ಅವನು ದೆಹಲಿಯಿಂದ ಸೇರಿಗೆ ಬಂದ. ಅಲ್ಲಾವುದ್ದೀನನು ತನ್ನ ಸೈನ್ಯದ ನಾಲ್ಕು ದಿಕ್ಕುಗಳಲ್ಲಿಯೂ ಕಂದಕಗಳನ್ನು ಅಗೆಸಿದ ಮತ್ತು ಸೈನ್ಯದ ತಾಣದ ಸುತ್ತಮುತ್ತ ತಂತಿ ಬೇಲಿಯನ್ನು ಹಾಕಿಸಿ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿಸಿದ ಹಾಗೂ ತನ್ನ ಸರ್ದಾರರ ಆಗಮನದ ನಿರೀಕ್ಷೆಯನ್ನು ಮಾಡತೊಡಗಿದ. ಮೊಘಲರು ದೆಹಲಿಯ ಸುತ್ತಮುತ್ತಲಿನ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದು ಆ ಗಡಿಗಳನ್ನು ಭದ್ರಗೊಳಿಸಿಕೊಂಡಿದ್ದರು ಇದರಿಂದ ಕೋಲ್ ಮತ್ತು ಬರನ್‌ನಲ್ಲಿ ನೆಲೆಸಿದ್ದ ಅವನ ಸರ್ದಾರರು ಅಲ್ಲಾವುದ್ದೀನನ ನೆರವಿಗೆ ಬರಲು ಸಾಧ್ಯವಾಗಲಿಲ್ಲ. ಮೊಗಲರ ಕೈವಾಡವು ತೀವ್ರವಾಗಿ ಹೆಚ್ಚುತ್ತ ಹೋಗಿ ಅವರು ಅನೇಕ ಸಲ ದೆಹಲಿ ಪಟ್ಟಣದೊಳಗೆ ಕೂಡ ಪ್ರವೇಶಿಸಿದರು ಹಾಗೂ ದಿನಸಿ ಮೊದಲಾದವುಗಳನ್ನು ಎತ್ತಿಕೊಂಡು ಹೋದರು. ಅದೇ ರೀತಿಯಲ್ಲಿ ಅವರು ರಾಜನ ಸೈನ್ಯದ ಮೇಲೆ ಕೂಡ ಯುದ್ಧ ಮಾಡಿ ಅನೇಕರನ್ನು ಕೊಲೆ ಮಾಡಿದರು. ಈ ರೀತಿಯ ಸಂಕಷ್ಟಗಳ ದೆಸೆಯಿಂದ ದೆಹಲಿಯ ಜನತೆಯು ಕಂಗಾಲಾದರು. ಅಲ್ಲಾವುದ್ದೀನನು ಕೂಡ ಧೃತಿಗೆಟ್ಟ. ಆಗ ಅವನು ಸಂತರಾದ ಹಜರತ್ ನಿಜಾಮುದ್ದೀನ ಔಲಿಯಾರವರ ನೆರವನ್ನು ಕೋರಿದ ಮತ್ತು ಈ ಸಂಕಷ್ಟ ನಿವಾರಣೆಗಾಗಿ ಪ್ರಾರ್ಥಿಸಬೇಕೆಂದು ಅವರನ್ನು ಕೋರಿದ. ಇತಿಹಾಸಕಾರರ ದಾಖಲೆಯ ಪ್ರಕಾರ ಅದೇ ಇರುಳಿನಂದು ಕರ್ಘಿಯ ಮನಸ್ಸಿನಲ್ಲಿ ಏನೋ ಮೂಡಿತೋ, ತಟಕ್ಕನೇ ಅವನು ಕಳೆದ ಎರಡು ತಿಂಗಳ ಮುತ್ತಿಗೆಯನ್ನು ಏಕಾಏಕೀ ಹಿಂದೆಗೆದುಕೊಂಡ ಮತ್ತು ತನ್ನ ಸೈನ್ಯದೊಡನೆ ತನ್ನ ದೇಶಕ್ಕೆ ಮರಳಿದ. ಈ ಸಂಕಷ್ಟ ಪರಿಹಾರವಾದದ್ದು ಒಂದು ಪವಾಡವೇ ಆಗಿತ್ತು ಹಾಗೂ ಆ ಘಟನೆಯನ್ನು ಜನರು ಅದ್ಭುತ ಪವಾಡವೆಂದೇ ಭವಿಸಿದರು ಮತ್ತು ಅದನ್ನು ಜನರು ಹಜರತ್ ನಿಜಾಮುದ್ದೀನ್ ಔಲಿಯಾರವರ ದೈವಿಶಕ್ತಿಯ ಪ್ರಭಾವವೆಂದು ಪರಿಭಾವಿಸಿದರು. ಈ ಘಟನೆಯಿಂದ ಅಲ್ಲಾವುದ್ದೀನನು ಜೀವನದ ಅಮೂಲ್ಯ ಪಾಠವನ್ನು ಕಲಿತ ಹಾಗೂ ಅಲೆಗ್ಸಾಂಡರ್‌ನಂತೆ ಇಡೀ ವಿಶ್ವವನ್ನು ಜಯಿಸುವ ಕನಸನ್ನು ಕಾಣುವುದು ತಪ್ಪು ನಿರ್ಧಾರವೆಂದು ಅವನಿಗೆ ಅರಿವಾಯಿತು. ರಾಜಧಾನಿಯಲ್ಲಿ ಭದ್ರವಾಗಿ ನೆಲೆನಿಂತು ವಿದೇಶೀ ಆಕ್ರಮಣಕಾರರ ದಂಗೆ ಮತ್ತು ಗಲಭೆಗಳನ್ನು ಕೊನೆಗೊಳಿಸುವುದರ ಮೂಲಕ ರಾಜ್ಯದ ಗಡಿಗಳ ರಕ್ಷಣೆಯನ್ನು ಮಾಡಬೇಕಾದುದು ಆದ್ಯ ಕರ್ತವ್ಯವೆಂದು ಅವನು ನಿರ್ಧರಿಸಿದ.

ಜೀವನಾವಶ್ಯಕ ವಸ್ತುಗಳ ಲಭ್ಯತೆ:

ಅಲ್ಲಾವುದ್ದೀನನು ಸೇರಿಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಹಾಗೂ ಸಾವಿರ ಕಂಬಗಳು ಮತ್ತು ಇತರೆ ಭವ್ಯ ಕಟ್ಟಡಗಳ ನಿರ್ಮಾಣ ಕಾರ್ಯವನ್ನು

ಕೂಡ ಹೊಸದಾಗಿ ಕೈಗೊಂಡ. ಮೊಘಲರು ದಾಳಿಯ ಸಂದರ್ಭದಲ್ಲಿ ಬಳಸುತ್ತಿದ್ದ ಮಾರ್ಗದಲ್ಲಿದ್ದ ತನ್ನ ಕೋಟೆಗಳನ್ನು ಬಲಾಢ್ಯವಾಗಿ ಮರು ನಿರ್ಮಿಸಿದ. ಅನುಭವಿ ಮತ್ತು ಧೀರ ಸರ್ದಾರರನ್ನು ಆ ಕೋಟೆಗಳ ರಕ್ಷಣೆಯ ಸಲುವಾಗಿ ನೇಮಕ ಮಾಡಿದ. ಮೊಘಲರನ್ನು ಎದುರಿಸಲು ಅವಶ್ಯಕವಾದ ಸೈನ್ಯವನ್ನು ರಾಜಧಾನಿಯಲ್ಲಿ ಇರಿಸಲು ವ್ಯವಸ್ಥೆ ಮಾಡಿದ. ಹೊಸದಾಗಿ ಸೈನಿಕರನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ ಅವನಿಗೆ ಅಪಾರ ಹಣದ ಅಗತ್ಯವಿತ್ತು. ರಾಜನ ಖಜಾನೆಯಲ್ಲಿದ್ದ ಹಣವು ಸೈನಿಕರ ವೇತನ ಮತ್ತು ಇನ್ನಿತರೆ ವೆಚ್ಚಗಳನ್ನು ಐದಾರು ವರ್ಷಗಳವರೆಗೆ ಭರಿಸಲು ಸಾಕಾಗುವಷ್ಟಿತ್ತು. ಈ ವಿಷಮ ಪರಿಸ್ಥಿತಿಯಲ್ಲಿ ಬಾದಶಹನು ತನ್ನ ತೀರಾ ಆಪ್ತನಾದ ಮತ್ತು ನಂಬಿಕೆಗೆ ಅರ್ಹನಾದ ಮುಲ್ಕ್ ಖತೀರುದ್ದೀನ್ ಎಂಬ ಸರ್ದಾರನೊಂದಿಗೆ ಸಲಹೆಯನ್ನು ಪಡೆದ. ಬಾದಶಹನು ಆ ಸರ್ದಾರರೊಡನೆ ಕೇಳಿದ, "ಸೈನ್ಯದ ಸಂಖ್ಯೆಯನ್ನು ಯಾವ ರೀತಿಯಲ್ಲಿ ಹೆಚ್ಚಿಸಬಹುದು? ನನ್ನ ಅಭಿಪ್ರಾಯವೇನೆಂದರೆ ಚಂಗೇಸ್‌ಖಾನನ ಸೈನ್ಯ ಮತ್ತು ಇತರೆ ರಾಜ ಮಹಾರಾಜರನ್ನು ಅನುಕರಿಸಿ ಸೈನಿಕರ ವೇತನದಲ್ಲಿ ಕಡಿತ ಮಾಡ ಬಹುದೇ?" ಸರ್ದಾರನು ಉತ್ತರಿಸಿದ, "ಹುಜೂರ್‌ರವರ ಉದ್ದೇಶವು ಈಡೇರಬೇಕಾದಲ್ಲಿ ಜೀವನಾವಶ್ಯಕ ವಸ್ತುಗಳು ಕಡಿಮೆ ದರದಲ್ಲಿ ಮಾರಾಟವಾಗಬೇಕು ಹಾಗೂ ಕುದುರೆಗಳು, ಆಯುಧಗಳು ಮತ್ತು ಯುದ್ಧ ಸಾಮಗ್ರಿ ಮೊದಲಾದವುಗಳ ದರವನ್ನು ಕೂಡ ಕಡಿಮೆ ಮಾಡಬೇಕು. ಈ ರಿಯಾಯಿತಿಯ ದೆಸೆಯಿಂದ ಸೈನಿಕರಿಗೆ ವೇತನ ಕಡಿತಗೊಳಿಸಿದರೂ ಅದರ ಬಿಸಿ ತಗಲುವುದಿಲ್ಲ" ಆತನ ಈ ಸಲಹೆಯು ಅಲ್ಲಾವುದ್ದೀನ್‌ನಿಗೆ ಒಪ್ಪಿಗೆಯಾಯಿತು. ಸುಲ್ತಾನನು ತನ್ನ ಅಧಿಕಾರಿಗಳ ನೆರವಿನಿಂದ ಕೆಲ ಹೊಸ ಕಾನೂನುಗಳನ್ನು ರಚಿಸಿದ್ದರಿಂದ ಜೀವನಾವಶ್ಯಕ ವಸ್ತುಗಳ ಬೆಲೆಯಲ್ಲಿ ಕಡಿತ ಉಂಟಾಯಿತು ಬಾದಶಹನ ಉದ್ದೇಶವು ಈಡೇರಿತು.

ಕಾಯ್ದೆ ಸಂಖ್ಯೆ ಒಂದು (ದಿನಸಿಗೆ ಸಂಬಂಧಿಸಿದಂತೆ):

ದಿನಸಿ ಧಾನ್ಯದ ತೂಕವನ್ನು ರಾಜ್ಯದ ಆಡಳಿತದ ಕಡೆಯಿಂದ ನಿಗದಿಗೊಳಿಸಲಾಯಿತು. ಆ ಅಳತೆ ಮತ್ತು ತೂಕದಲ್ಲಿ ಕಡಿಮೆ ಮಾಡುವ ಹಕ್ಕು ವ್ಯಾಪಾರಿಗಳಿಗೆ ಇರಲಿಲ್ಲ. ದಿನಸಿಯ ಬೆಲೆ ದೆಹಲಿಯಲ್ಲಿ ಏನಿತ್ತೋ ಅದೇ ಬೆಲೆಯು ರಾಜ್ಯದ ಇತರೆ ಭಾಗಗಳಲ್ಲಿಯೂ ನಿಗದಿಯಾಯಿತು. ಆ ತೂಕ ಮತ್ತು ಅಳತೆ ಹಾಗೂ ಬೆಲೆಗಳ ವಿವರಗಳು ಕೆಳಕಂಡಂತಿವೆ,

ಒಂದು ಮಣ ಗೋಧಿ	ಏಳೂವರೆ ಜೇತಲ್
ಒಂದು ಮಣ ಜವೆ	ನಾಲ್ಕು ಜೇತಲ್
ಒಂದು ಮಣ ಕಡ್ಲೆಕಾಳು	ಐದು ಜೇತಲ್

ಒಂದು ಮಣ ಭತ್ತ	ಐದು ಜೇತಲ್
ಒಂದು ಮಣ ಉದ್ದು	ಐದು ಜೇತಲ್
ಒಂದು ಮಣ ಮೋಟ್	ಮೂರು ಜೇತಲ್

ಅಲ್ಲಾವುದ್ದೀನ್ ಖಿಲ್ಜಿಯ ಇಡೀ ಆಡಳಿತ ವ್ಯಾಪ್ತಿಯ ಪ್ರದೇಶದಲ್ಲಿ ಇದೇ ಬೆಲೆ ನಿಗದಿಯಾಯಿತು. ಮಳೆ ಕಡಿಮೆಯಾದಾಗ ಅಥವಾ ಯಾವುದಾದರೂ ಕಾರಣದಿಂದ ಕಡಿಮೆ ಬೆಳೆ ಉತ್ಪತ್ತಿಯಾದಾಗ ಸದರಿ ಬೆಲೆಯಲ್ಲಿ ಒಂದಿಷ್ಟು ವ್ಯತ್ಯಾಸವಾಗುತ್ತಿತ್ತು. ಬೆಲೆ ನಿಗದಿಯು ಅಲ್ಲಾವುದ್ದೀನನ ಕಾಲದ ಆಶ್ಚರ್ಯಜನಕವಾದ ಆವಿಷ್ಕಾರವಾಗಿದ್ದು ಅವನ ಕಾಲಾವಧಿಗಿಂತ ಮುಂಚಿತವಾಗಿ ಯಾರೂ ಇದನ್ನು ಜಾರಿಗೊಳಿಸಿರಲಿಲ್ಲ. ಈ ನಿಟ್ಟಿನಲ್ಲಿ ಬಾದಶಹನು ಕೆಲವು ಸಕ್ಷಮ ಕ್ರಮಗಳನ್ನು ಕೈಗೊಂಡಿದ್ದು ಅವುಗಳ ವಿವರ ಕೆಳಕಂಡಂತೆ ಇದೆ.

ಕ್ರಮ–೧: ಜಾಬಿತಾದಾರ್ ಮುಲ್ಕ್ ಖುಬೂಲ್‌ನನ್ನು ಮಾರುಕಟ್ಟೆ (ಮಂಡಿ)ಯ ಕೋತ್ವಾಲನನ್ನಾಗಿ ನೇಮಕಮಾಡಲಾಯಿತು. ಅಳತೆ ಮತ್ತು ತೂಕ ಹಾಗೂ ಬೆಲೆಯ ಮೇಲೆ ಎಚ್ಚರ ವಹಿಸಿದ್ದು ಯಾವ ವಸ್ತುವಿನ ಬೆಲೆಯು ಕೂಡ ಹೆಚ್ಚು ಮತ್ತು ಕಡಿಮೆ ಆಗದಂತೆ ನಿಗಾವಣೆ ಮಾಡುವುದು ಅವನ ಕರ್ತವ್ಯವಾಗಿತ್ತು.

ಕ್ರಮ–೨: ಬಾದಶಹನ ಹಿಸ್ಸೆಯಲ್ಲಿ ತೆರಿಗೆಯ ಪಾಲಿನ ಬದಲಿಗೆ ದಿನಸಿಯನ್ನು ಪಡೆಯಬೇಕು ಹಾಗೂ ಆ ದಿನಸಿಯನ್ನು ಗ್ರಾಮಗಳಲ್ಲಿ ಶೇಖರಿಸಬೇಕೆಂದು ಅಲ್ಲಾವುದ್ದೀನನು ಆಜ್ಞೆ ಮಾಡಿದ. ಒಂದು ವೇಳೆ ಮಾರುಕಟ್ಟೆಯಲ್ಲಿ ದಿನಸಿಯ ಅವಕದ ಪ್ರಮಾಣವು ತಗ್ಗಿದಲ್ಲಿ ಆ ಶೇಖರಿಸಲ್ಪಟ್ಟ ದಿನಸಿಯನ್ನು ತಂದು ರಾಜನು ಈಗಾಗಲೇ ನಿರ್ಧರಿಸುವ ಬೆಲೆಗೆ ಮಾರಾಟ ಮಾಡಬೇಕೆಂದು ಆಜ್ಞೆ ಮಾಡಿದ.

ಕ್ರಮ–೩: ಇಡೀ ದೇಶದ ದಿನಸಿ ಬೆಳೆಯು ಒಂದೇ ಕಡೆ ಶೇಖರವಾಗಲು ಅನುಕೂಲವಾಗುವಂತೆ ಎಲ್ಲಾ ದಿನಸಿ ವ್ಯಾಪಾರಿಗಳಿಗೆ ಕೂಡ ಯಮುನಾ ನದಿಯ ದಡದಲ್ಲಿ ವಸತಿ ಸಂಕೀರ್ಣಗಳನ್ನು ಒದಗಿಸುವಂತೆ ಬಾದಶಹನು ಮಲ್ಲಿಕ್ ಕುಬೂಲ್‌ಗೆ ಆಜ್ಞೆ ಮಾಡಿದ ಹಾಗೂ ಸದರಿ ದಿನಸಿಯನ್ನು ರಾಜನು ನಿರ್ಧರಿಸಿದ ಬೆಲೆಗೆ ಅನುಗುಣವಾಗಿ ಮಾರಾಟ ಮಾಡಬಹುದು. ಮತ್ತು ಆ ವ್ಯಾಪಾರಿಗಳಿಂದ ರಾಜಾಜ್ಞೆಯನ್ನು ಸಂಪೂರ್ಣವಾಗಿ ಪಾಲಿಸುವುದಾಗಿ ಲಿಖಿತ ಪ್ರಮಾಣ ಪತ್ರಗಳನ್ನು ಪಡೆಯುಬೇಕೆಂತಲೂ ಅವನು ಆದೇಶ ಮಾಡಿದ.

ಕ್ರಮ–೪: ವೃತ್ತಿಪರ ವ್ಯಾಪಾರಿಗಳು ಸಾಮಾನ್ಯವಾಗಿ ದಿನಸಿಯನ್ನು ದಾಸ್ತಾನು ಮಾಡಿದ್ದು. ತದ ನಂತರ ರಾಜ್ಯದಲ್ಲಿ ದಿನಸಿಯ ಕೊರತೆವುಂಟಾದಾಗ ತಮ್ಮ ದಾಸ್ತಾನನ್ನು ಹೆಚ್ಚುವರಿ ಬೆಲೆಗೆ ಮಾರಾಟ ಮಾಡುತ್ತಿದ್ದರು. ಅಲ್ಲಾವುದ್ದೀನನು ವ್ಯಾಪಾರಿಗಳ ಈ

ಕ್ರಮವನ್ನು ತೀವ್ರವಾಗಿ ನಿಗ್ರಹಿಸಿದ ಹಾಗೂ ಯಾರಾದರೂ ವ್ಯಾಪಾರಿ ಈ ಉದ್ದೇಶಕ್ಕೋಸ್ಕರ ದಿನಸಿಯ ದಾಸ್ತಾನನ್ನು ಮಾಡಿದ್ದಾನೆಂದು ಅವನಿಗೆ ತಿಳಿದು ಬಂದಲ್ಲಿ, ಅವನು ಕೂಡಲೇ ಆ ದಾಸ್ತಾನನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದ ಆ ದಾಸ್ತಾನನ್ನು ಸರ್ಕಾರದ ಆಜ್ಞೆಯ ಮೇರೆಗೆ ರಾಜನ ಖಜಾನೆಗೆ ಜಮಾ ಮಾಡಲಾಗುತ್ತಿತ್ತು ಮತ್ತು ಅವನಿಗೆ ದಂಡವನ್ನು ವಿಧಿಸಲಾಗುತ್ತಿತ್ತು.

ಕ್ರಮ-೫: ರೈತರು ತಮ್ಮ ಅವಶ್ಯಕತೆಗಿಂತ ಹೆಚ್ಚಾಗಿ ಬೆಳೆದ ಬೆಳೆಯನ್ನು ತಮ್ಮ ಜಮೀನಿನಲ್ಲಿಯೇ ಮಾರಾಟ ಮಾಡಬೇಕೆಂತಲೂ ಹಾಗೂ ತಮ್ಮ ವೈಯಕ್ತಿಕ ಅವಶ್ಯಕತೆಗಿಂತ ಹೆಚ್ಚಾಗಿ ಒಂದು ಕಾಳನ್ನು ಹೆಚ್ಚಿಗೆ ಇಟ್ಟುಕೊಳ್ಳಬಾರದೆಂತಲೂ ಆಜ್ಞೆ ಮಾಡಲಾಯಿತು. ಹಾಗೂ ಜಮೀನಿನಲ್ಲಿಯೇ ಮಾಲನ್ನು ಪಡೆದುಕೊಂಡು ಅಲ್ಲಿಯೇ ರೈತರಿಗೆ ಬೆಲೆಯನ್ನು ಕೂಡ ಪಾವತಿಸಬೇಕೆಂತಲೂ ಹಾಗೂ ಆತನ ಅವಶ್ಯಕತೆಗಿಂತ ಹೆಚ್ಚಿಗೆ ಒಂದೇ ಒಂದು ಕಾಳನ್ನು ನೀಡಕೂಡದೆಂದು ಆಜ್ಞೆ ಮಾಡಲಾಗಿತ್ತು. ಇದರಿಂದ ಕಾಳಸಂತೆಯ ಅಧ್ಯಾಯ ಕೊನೆಗೊಂಡಿತು.

ಕ್ರಮ-೬: ಪ್ರತಿದಿನ ಮಾರುಕಟ್ಟೆಯ ಬೆಲೆಗಳ ಹಾಗೂ ಇನ್ನಿತರೆ ಸಂಗತಿಗಳ ವರದಿಯನ್ನು ಬಾದಶಹನಿಗೆ ನೀಡಬೇಕೆಂದು ಅವನು ಆಜ್ಞೆ ಮಾಡಿದ್ದ. ಈ ಆಜ್ಞೆಯಲ್ಲಿ ಒಂದಿನಿತು ಲೋಪ ಉಂಟಾದರೂ ಕೂಡ ಮಾರುಕಟ್ಟೆಯ ವ್ಯವಸ್ಥಾಪಕರು ಮತ್ತು ಅಧಿಕಾರಿಗಳಿಗೆ ಕಠಿಣ ಶಿಕ್ಷೆ ನೀಡಲಾಗುತ್ತಿತ್ತು.

ಕ್ಷಾಮ ಉಂಟಾದ ಕಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಕೂಡ ತನ್ನ ಅವಶ್ಯಕತೆಗೆ ಅನುಗುಣವಾಗಿ ಮಾತ್ರ ದಿನಸಿಯನ್ನು ಖರೀದಿಸಬೇಕೆಂತಲೂ ಹಾಗೂ ಅವಶ್ಯಕತೆಗಿಂತ ಹೆಚ್ಚಾಗಿ ಅರ್ಧಸೇರು ದಿನಸಿಯನ್ನು ಕೂಡ ಖರೀದಿಸಬಾರದೆಂದು ಆಜ್ಞೆ ಮಾಡಲಾಗಿತ್ತು. ಇಂತಹ ವಿಷಯಗಳ ಬಗ್ಗೆ ತನಿಖೆ ನಡೆಸಲು ಅಧಿಕಾರಿಗಳು ನಿಯುಕ್ತಿಗೊಂಡಿದ್ದರು. ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತಿದ್ದರು. ಬಾದಶಹನ ಬೇಹುಗಾರಿಕೆ ದಳದವರು ಕೂಡ ವಿಚಕ್ಷಣತೆಯಿಂದ ಬಜಾರಿನ ವಸ್ತು ಸ್ಥಿತಿಗಳ ಬಗ್ಗೆ ಅರಿವನ್ನು ಹೊಂದಿರುತ್ತಿದ್ದರು ಮತ್ತು ಬಾದಶಹನಿಗೂ ಸಕಲ ವಿಷಯಗಳ ಮಾಹಿತಿಗಳನ್ನು ನೀಡುತ್ತಿದ್ದರು. ಈ ಎಲ್ಲಾ ವ್ಯವಸ್ಥೆಯ ಪರಿಣಾಮವಾಗಿ ದಿನಸಿಯ ಸಾಮಗ್ರಿಗಳ ಬೆಲೆಯನ್ನು ಅರ್ಧಜೇತಲ್‌ನಷ್ಟು ಹೆಚ್ಚು ಕಡಿಮೆ ಮಾಡುವ ಸಾಮರ್ಥ್ಯ ಕೂಡ ಯಾರಿಗೂ ಇರಲಿಲ್ಲ.

ನಿಯಮ-೨: (ಬಟ್ಟೆಯ ಬಗ್ಗೆ)

ಹೊಸ ಹೊಸ ನಿಯಮಗಳನ್ನು ಮತ್ತು ಕಾನೂನುಗಳನ್ನು ರೂಪಿಸುತ್ತಿದ್ದ ಬಾದಶಹ ಅಲ್ಲಾವುದ್ದೀನನು ಉತ್ತಮ ಮತ್ತು ದಿನಬಳಕೆಯ ಹಾಗೂ ಎಲ್ಲಾ ವಿಧದ ಮತ್ತು ನಮೂನೆಯ ಬಟ್ಟೆಗಳನ್ನು ಖುದ್ದು ಪರೀಕ್ಷೆ ಮಾಡಿ ಅವುಗಳ ಸೂಕ್ತ ಬೆಲೆಯನ್ನು

ನಿರ್ಧರಿಸಿದ. ದೆಹಲಿಯಲ್ಲಿ ನಿಗದಿಯಾದ ಬೆಲೆಯನ್ನು ತನ್ನ ಎಲ್ಲಾ ಆಕ್ರಮಿತ ದೇಶಗಳಲ್ಲೂ ನಿಗದಿಗೊಳಿಸಿದ.

ಚೀರ್ ದೆಹಲಿ	೧೬ ತಂಗಾ
ಚೀರ್ ಕೊಮಕ	೬ ತಂಗಾ
ಸೇರಿಸಾಫ್ ಉತ್ತಮ	೫ ತಂಗಾ
ಸೇರಿಸಾಫ್ ಮಧ್ಯಮ	೩ ತಂಗಾ
ಸೇರಿಸಾಫ್ ಕೆಳದರ್ಜೆ	೨ ತಂಗಾ
ಉತ್ತಮ ಹೊಲಿಗೆ	೪ ತಂಗಾ
ಮಧ್ಯಮ ಹೊಲಿಗೆ	೩ ತಂಗಾ
ಕೆಳದರ್ಜೆ ಹೊಲಿಗೆ	೨ ತಂಗಾ
ಕಿರ್‌ಪಾಸ್ ಉತ್ತಮ ೨೦ ಗಜ	೧ ತಂಗಾ
ಕಿರ್‌ಪಾಸ್ ಮಧ್ಯಮ ೩೦ ಗಜ	೧ ತಂಗಾ
ಕಿರ್‌ಪಾಸ್ ಕೆಳದರ್ಜೆ ೪೦ ಗಜ	೧ ತಂಗಾ
ಕಿರ್‌ಪಾಸ್ ಸಾದ	೧೦ ಜೇತಲ್

ನಿಬಂಧನೆ–೧: ಬದಾಯೂನ್ ಬಾಗಿಲುಗಳಲ್ಲಿ ಒಂದು ಬೃಹತ್ತಾದ ಸಂಕೀರ್ಣವನ್ನು ನಿರ್ಮಾಣ ಮಾಡಿ ಅದಕ್ಕೆ "ಸರಾಯೇ ಅದಲ್" (ನ್ಯಾಯ ಸಂಕೀರ್ಣವೆಂದು ಹೆಸರಿಡಲಾಯಿತು) ನಾಲ್ಕು ದಿಕ್ಕುಗಳಿಂದಲೂ ಜವಳಿಯನ್ನು ತಂದು ಇಲ್ಲಿ ಮಾರಾಟ ಮಾಡಬೇಕೆಂದು ಅಲ್ಲಾವುದ್ದೀನನ ಆಜ್ಞೆಯಾಗಿತ್ತು. ಯಾರೂ ಕೂಡ ತಮ್ಮ ಮನೆಗಳಲ್ಲಿ ಅಥವಾ ಇನ್ನಿತರೆ ಮಾರುಕಟ್ಟೆಯಲ್ಲಿ ಜವಳಿಯನ್ನು ಕ್ರಯವಿಕ್ರಯ ಮಾಡಲು ಅನುಮತಿಯಿರಲಿಲ್ಲ. ಜವಳಿಯ ಈ ಮಾರುಕಟ್ಟೆಯ ಬಾಗಿಲು ಮುಂಜಾವಿನ ನಮಾಜಿನ ವೇಳೆಗೆ ತೆರೆಯಲಾಗುತ್ತಿತ್ತು ಹಾಗೂ ಮಧ್ಯಾಹ್ನದ ನಮಾಜಿನ ಹೊತ್ತಿಗೆ ಮುಚ್ಚಲಾಗುತ್ತಿತ್ತು. ನಿಗದಿತ ವೇಳೆಗಿಂತ ಮೊದಲು ಅಥವಾ ನಂತರ ಯಾರಾದರೂ ಅಂಗಡಿ ತೆರೆಯುವುದಾಗಲಿ ಅಥವಾ ಬಂದ್ ಮಾಡುವುದಾಗಲಿ ಮಾಡಿದಲ್ಲಿ ಅವನಿಗೆ ಶಿಕ್ಷೆಯನ್ನು ನೀಡಲಾಗುತ್ತಿತ್ತು.

ನಿಬಂಧನೆ–೨: ದಿಲ್ಲಿ ಶಹರು ಮತ್ತು ಇನ್ನಿತರೆ ಪ್ರದೇಶದ ಎಲ್ಲಾ ವ್ಯಾಪಾರಿಗಳು ಜವಳಿ ವ್ಯಾಪಾರಿಗಳೆಂದು ಸರ್ಕಾರಿ ಕಾರ್ಯಾಲಯದಲ್ಲಿ ತಮ್ಮ ಹೆಸರನ್ನು ದಾಖಲೆ ಮಾಡಿಕೊಳ್ಳಬೇಕೆಂದು ಅಲ್ಲಾವುದ್ದೀನನು ಹುಕುಮ್ ಹೊರಡಿಸಿದ್ದು ಅಲ್ಲದೆ ಅವರುಗಳು

ತಮ್ಮ ಮಾಲನ್ನು ಸರಾಯೇ ಅದಲ್‌ಗೆ ತಂದು ಅಲ್ಲಿ ಸರ್ಕಾರಿ ನಿಗದಿತ ಬೆಲೆಯಲ್ಲಿ ಮಾರಾಟ ಮಾಡಬೇಕೆಂದು ಅವರಿಗೆ ಸೂಚನೆಯನ್ನು ನೀಡಲಾಗಿತ್ತು.

ನಿಬಂಧನೆ–೩: ಸರ್ದಾರರು ಮತ್ತು ಪಟ್ಟಣದ ಗಣ್ಯ ವ್ಯಕ್ತಿಗಳ ಪೈಕಿ ಯಾರಿಗಾದರೂ ಬೆಲೆ ಬಾಳುವ ಬಟ್ಟೆಯನ್ನು ಖರೀದಿ ಮಾಡಬೇಕಾದಲ್ಲಿ ಆತನು ಮೊದಲು ಗಣ್ಯರ ಮಾರುಕಟ್ಟೆಯಿಂದ ಅನುಮತಿ ಪತ್ರವನ್ನು ಪಡೆಯಬೇಕಿತ್ತು. ಯಾವುದೇ ವ್ಯಾಪಾರಿಯು ಸರಾಯೇ ಅದಲ್‌ನಿಂದ ಬೆಲೆ ಬಾಳುವ ಬಟ್ಟೆಯನ್ನು ಖರೀದಿ ಮಾಡಿ ಬೇರೆ ಪಟ್ಟಣದಲ್ಲಿ ಬೆಲೆ ಏರಿಕೆ ಮಾಡಿ ಮಾರಾಟ ಮಾಡಕೂಡದೆಂದು ಈ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

ನಿಬಂಧನೆ–೪: ಮುಲ್ತಾನ್‌ದ ವ್ಯಾಪಾರಿಗಳಿಗೆ ಬಾದಶಹನ ಖಜಾನೆಯಿಂದ ಇಪ್ಪತ್ತು ಲಕ್ಷ ತಂಗಾ ಹಣವನ್ನು ನೀಡಲಾಗಿದ್ದು. ಆ ಹಣದಿಂದ ಬೆಲೆ ಬಾಳುವ ಬಟ್ಟೆಯನ್ನು ಮತ್ತು ಇನ್ನಿತರೆ ಪರಿಕರಗಳನ್ನು ಖರೀದಿಸಿ ತಂದು ಸರಾಯೇ ಅದಲ್‌ನಲ್ಲಿ ಸರ್ಕಾರದಿಂದ ನಿಗದಿತವಾದ ಬೆಲೆಯಲ್ಲಿ ಮಾರಾಟ ಮಾಡಬೇಕೆಂದು ವ್ಯವಸ್ಥೆ ಮಾಡಲಾಯಿತು.

ನಿಯಮ–೩: (ಕುದುರೆಗಳ ಬಾಬ್ತು)

ಅಲ್ಲಾವುದ್ದೀನನು ಸ್ವತಃ ಸಂಪೂರ್ಣವಾಗಿ ತನಿಖೆ ಮಾಡಿದ ನಂತರ ಎಲ್ಲಾ ವಿಧದ ಕುದುರೆಗಳ ಬೆಲೆಯನ್ನು ನಿಗದಿ ಪಡಿಸಿದ ಹಾಗೂ ಬೇರೆ ಪ್ರದೇಶಗಳಲ್ಲೂ ಕೂಡ ಕೆಳಕಂಡ ಬೆಲೆಗಳಿಗೆ ಅನುಗುಣವಾಗಿ ಮೌಲ್ಯವನ್ನು ನಿರ್ಧರಿಸಲಾಯಿತು.

ಒಂದನೇ ದರ್ಜೆಯ ಕುದುರೆ	೧೦೦–೧೨೦ ತಂಗಾ
ಎರಡನೇ ದರ್ಜೆಯ ಕುದುರೆ	೮೦–೯೦ ತಂಗಾ
ಮೂರನೇ ದರ್ಜೆ ಕುದುರೆ	೬೫–೭೦ ತಂಗಾ
ಬಡಕಲು ಕುದುರೆ	೧೨–೨೦ ತಂಗಾ

ಈ ಬೆಲೆಗಳ ಬಗ್ಗೆ ಉಸ್ತುವಾರಿ ನಡೆಸಲು ಕೆಳಕಂಡ ನಿಬಂಧನೆಗಳನ್ನು ರೂಪಿಸಲಾಯಿತು.

ನಿಬಂಧನೆ–೧: ಪಟ್ಟಣದ ಸ್ಥಳೀಯ ವ್ಯಾಪಾರಿಗಳಿಂದ ಕುದುರೆಗಳನ್ನು ಖರೀದಿಸಬಾರದೆಂತೂ ಮತ್ತು ಬಾದಶಹನು ನಿಗದಿ ಪಡಿಸಿದ ಮಾರುಕಟ್ಟೆ ಮೂಲಕವೇ ಕುದುರೆಗಳ ಕ್ರಯವಿಕ್ರಯ ನಡೆಯಬೇಕೆಂತಲೂ ಅಲ್ಲಾವುದ್ದೀನನು ರಾಜಾಜ್ಞೆಯನ್ನು ಮಾಡಿದ್ದ. ಮೇಲ್ಕಂಡ ನಿಬಂಧನೆಯನ್ನು ಪಾಲಿಸುವುದಾಗಿ ಕ್ರಯಕ್ಕೆ ಪಡೆಯುವ ಮತ್ತು ಕ್ರಯಕ್ಕೆ ನೀಡುವ ವ್ಯಾಪಾರಿಗಳ ಬಳಿ ವಾಗ್ದಾನವನ್ನು ಪಡೆದನು. ಸ್ವಲ್ಪ

ದಿನಗಳ ನಂತರ ಸ್ಥಳೀಯ ವ್ಯಾಪಾರಿಗಳು ಕುದುರೆಗಳನ್ನು ಕಡಿಮೆ ಬೆಲೆಗೆ ಪಡೆದು ಹೆಚ್ಚಿನ ಬೆಲೆಗೆ ಮಾರುವ ಅಭ್ಯಾಸದಲ್ಲಿ ನಿರತರಾಗಿದ್ದಾರೆ ಎಂಬ ವಿಷಯವು ಬಾದಶಹನಿಗೆ ತಿಳಿದುಬಂದಿತು. ಆ ಜನರಿಗೆ ಎಚ್ಚರಿಕೆಯನ್ನು ನೀಡಲಾಯಿತು ಆದರೂ ಅವರು ತಮ್ಮ ಅಕ್ರಮ ವ್ಯಾಪಾರ ವಹಿವಾಟನ್ನು ನಿಲ್ಲಿಸಲಿಲ್ಲ. ಆಗ ಅಂತವರ ಪೈಕಿ ಕೆಲವರನ್ನು ರಾಜಾಜ್ಞೆಯ ಮೂಲಕ ಮರಣದಂಡನೆಯನ್ನು ವಿಧಿಸಲಾಯಿತು ಮತ್ತು ಕೆಲವರನ್ನು ಪಟ್ಟಣದಿಂದ ಹೊರ ಹಾಕಲಾಯಿತು.

ನಿಂಬಧನೆ–೨: ಒಂದೇ ಒಂದು ಕುದುರೆಯನ್ನಾದರೂ ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟವಾಗಿದೆಯೆಂದು ತಿಳಿದು ಬಂದಲ್ಲಿ, ಕೋತ್ವಾಲರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿತ್ತು. ಹಾಗೂ ಅಪರಾಧಿಗಳು ಹಾಗೂ ನಿರಪರಾಧಿಗಳೊಡನೆ ಸಮಾನವಾಗಿ ವರ್ತಿಸಲಾಗುತ್ತಿತ್ತು.

ನಿಬಂಧನೆ–೩: ಪ್ರತಿ ತಿಂಗಳು ಕೂಡ ಕುದುರೆಯ ನಮೂನೆ ಮತ್ತು ಬೆಲೆ ಹಾಗೂ ಮಧ್ಯವರ್ತಿಗಳ ಪಾತ್ರದ ಬಗ್ಗೆ ತನಿಖೆ ಮಾಡಲಾಗುತ್ತಿತ್ತು. ರಾಜಾಜ್ಞೆಯ ವಿರುದ್ಧ ಯಾರಾದರೂ ಒಬ್ಬ ದಲ್ಲಾಳಿಯು ವರ್ತಿಸಿದಲ್ಲಿ ಎಲ್ಲಾ ದಲ್ಲಾಳಿಗಳಿಗೂ ಸಜೆ ನೀಡಲಾಗುತ್ತಿತ್ತು.

ನಿಯಮ–೪: ಗುಲಾಮರು ಮತ್ತು ದಾಸಿಗಳ ಬಗ್ಗೆ ಅಲ್ಲಾವುದ್ದೀನನು ದಾಸಿಯರು ಮತ್ತು ಗುಲಾಮರ ಬೆಲೆಯನ್ನು ಕೆಳಕಂಡಂತೆ ನಿಗದಿ ಪಡಿಸಿದ.

ಮೊದಲ ದರ್ಜೆ	೧೦೦–೨೦೦ ತಂಗಾ
ಎರಡನೇ ದರ್ಜೆ	೨೦–೪೦ ತಂಗಾ
ಮೂರನೇ ದರ್ಜೆ	೫–೧೦ ತಂಗಾ

ನಿಯಮ–೫: ಹಸು, ಎಮ್ಮೆ, ಒಂಟೆ, ಕುರಿ ಮೊದಲಾದವುಗಳನ್ನು ಕುರಿತು ಸದರಿ ಜಾನುವಾರುಗಳ ಬೆಲೆಯನ್ನು ಅಂದಿನ ಕಾಲಾಮಾನದ ರೀತ್ಯಾ ಸೂಕ್ತ ಮತ್ತು ಯೋಗ್ಯ ಬೆಲೆಯನ್ನು ನಿಗದಿಗೊಳಿಸಲಾಯಿತು. ಮತ್ತು ಈ ಬಗ್ಗೆ ಕೂಡ ಕುದುರೆಗಳ ಕ್ರಯವಿಕ್ರಯದ ರೀತ್ಯಾ ನಿಬಂಧನೆಗಳನ್ನು ಜಾರಿಗೊಳಿಸಲಾಯಿತು. ಮಾರುಕಟ್ಟೆಯ ದಿನನಿತ್ಯದ ಪರಿಸ್ಥಿತಿಯನ್ನು ಒಂದು ದಿನಪತ್ರಿಕೆಯ ಸ್ವರೂಪದಲ್ಲಿ ಲಿಖಿತವಾಗಿ ದಾಖಲುಮಾಡಲಾಗುತ್ತಿತ್ತು. ಮಂಡಿಯವರ ಪರಿಸ್ಥಿತಿಯ ನಿಗಾವಣೆಗಾಗಿ ರಾಜನ ಬೇಹುಗಾರಿಕೆ ಕಡೆಯವರು ಅತ್ಯಂತ ವಿಚಕ್ಷಣೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಯಾರಾದರೂ ಅಧಿಕಾರಿ ವರ್ಗದವರು ಮತ್ತು ಗುಮಾಸ್ತರು ಆ ದಿನ ಪತ್ರಿಕೆಯಲ್ಲಿ ಯಾವುದಾದರೂ ಸುಳ್ಳು ಘಟನೆ ಅಥವಾ ಹುಸಿ ಮಾಹಿತಿಯನ್ನು ನೀಡಿದ್ದಾರೆಂದು ಗೊತ್ತಾದಲ್ಲಿ ಅವರನ್ನು ಕಠಿಣ ಶಿಕ್ಷೆಗೆ ಒಳಪಡಿಸಲಾಗುತ್ತಿತ್ತು.

ಮಾರುಕಟ್ಟೆಯಲ್ಲಿ ಯಾವ ವಸ್ತುವಿನ ಮಾರಾಟದ ಅಗತ್ಯವಿದೆಯೋ ಅದರ ಬೆಲೆಯನ್ನು ಅಲ್ಲಾವುದ್ದೀನನು ಸ್ವತಃ ನಿರ್ಧರಿಸುತ್ತಿದ್ದ. ಯಾವುದೇ ವಸ್ತುವನ್ನು ಕನಿಷ್ಠತಮವೆಂದು ಭಾವಿಸಿ ಉಪೇಕ್ಷೆ ಮಾಡದೆ ಪ್ರತಿ ವಸ್ತುವಿನ ಬೆಲೆಯನ್ನು ನಿಗದಿ ಮಾಡದೆ ಮಾರುಕಟ್ಟೆಗೆ ಬಿಡುತ್ತಿರಲಿಲ್ಲ. ಸೂಜಿ, ಬಾಚಣಿಗೆ, ಪಾದರಕ್ಷೆ ಮತ್ತು ಮಣ್ಣಿನ ಗೃಹಬಳಕೆಯ ವಸ್ತುಗಳ ಬೆಲೆಯನ್ನು ಕೂಡ ನಿಗದಿ ಮಾಡಲಾಗಿತ್ತು. ಒಣರೊಟ್ಟಿಯಿಂದ ಹಿಡಿದು ಉತ್ತಮ ಖಾದ್ಯದವರೆಗೆ ಮತ್ತು ಹಲ್ವಾದಿಂದ ಹಿಡಿದು ಕೆನೆ ಹಾಲಿನವರೆಗೆ ಮತ್ತು ಪುದೀನಾಂದ ಹಿಡಿದು ವೀಳ್ಯದೆಲೆವರೆಗೆ ಪ್ರತಿಯೊಂದು ವಸ್ತುವಿನ ಬೆಲೆಯನ್ನು ಅಲ್ಲಾವುದ್ದೀನ್ ಸ್ವತಃ ನಿರ್ಧರಿಸುತ್ತಿದ್ದ. ಮತ್ತು ಲಿಖಿತ ಮೂಲಕ ಜನತೆಗೆ ಪ್ರಚಾರ ಪಡಿಸುತ್ತಿದ್ದ. ದೆಹಲಿ ಜನತೆಯ ದಿನಬಳಕೆಯ ಇನ್ನಿತರೆ ವಸ್ತುಗಳ ಬೆಲೆಯನ್ನು ಕೂಡ ನಿಗದಿಗೊಳಿಸಲಾಗಿತ್ತು.

ಕಲ್ಲು ಸಕ್ಕರೆ ಒಂದು ಸೇರು	ಎರಡು ಜೇತಲ್
ಬಿಳಿ ಸಕ್ಕರೆ ಒಂದು ಸೇರು	ಒಂದು ಜೇತಲ್
ಕೆಂಪು ಸಕ್ಕರೆ ಒಂದು ಸೇರು	ಒಂದು ಜೇತಲ್
ಎಳ್ಳೆಣ್ಣೆ ಒಂದು ಸೇರು	ಒಂದು ಜೇತಲ್
ಸತೂರ್ ಎಣ್ಣೆ ಒಂದು ಸೇರು	ಅರ್ಧ ಜೇತಲ್
ಉಪ್ಪು ಐದು ಸೇರು	ಒಂದು ಜೇತಲ್

ಮಂಡಿಯವರ ಪರಿಸ್ಥಿತಿ ಮತ್ತು ವಸ್ತುಗಳ ಬೆಲೆಯ ಬಗ್ಗೆ ಬಾದಶಹನಿಗೆ ಸದಾ ತಾಜಾ ಸುದ್ದಿ ಸಿಗುತ್ತಿತ್ತು. ಅವನಿಗೆ ಮೂರು ವಿವಿಧ ಮೂಲಗಳಿಂದ ಸುದ್ದಿ ತಲುಪುವ ವ್ಯವಸ್ಥೆ ಇತ್ತು. ಮೊದಲನೆಯದಾಗಿ ಕೋತ್ವಾಲನ ಮೂಲಕ ಎರಡನೆಯದಾಗಿ ಮಾರುಕಟ್ಟೆಯ ಗಣ್ಯರು ತಮ್ಮ ತಮ್ಮ ಅರ್ಜಿಗಳನ್ನು ಬಾದಶಹನ ಅವಗಾಹನೆಗೆ ಪ್ರತಿದಿನ ಕಳಿಸುತ್ತಿದ್ದರು. ಮೂರನೆಯದಾಗಿ ಬಾದಶಹನ ಬೇಹುಗಾರರು ಎಲ್ಲಾ ವಿಷಯಗಳ ಸವಿಸ್ತಾರ ವೃತ್ತಾಂತವನ್ನು ಬಾದಶಹನ ಸಮ್ಮುಖದಲ್ಲಿ ಅರಹುತ್ತಿದ್ದರು. ಇಷ್ಟೆಲ್ಲಾ ವ್ಯವಸ್ಥೆಯ ಮೂಲಕ ಸುದ್ದಿಯನ್ನು ಪಡೆದರೂ ಅಲ್ಲಾವುದ್ದೀನನಿಗೆ ನೆಮ್ಮದಿಯಾಗುತ್ತಿರಲಿಲ್ಲ. ಅವನು ಅಂಗಡಿಯವರು ಮತ್ತು ವ್ಯಾಪಾರಿಗಳು ಮೊದಲಾದವರನ್ನು ಪರೀಕ್ಷೆ ಮಾಡುವ ಸಲುವಾಗಿ ಚಿಕ್ಕಮಕ್ಕಳ ಕೈಯಲ್ಲಿ ಹಣ ನೀಡಿ ಪೇಟೆಗೆ ಕಳಿಸಿ, ಅವರ ಮೂಲಕ ಖರೀದಿ ನಡೆಸುತ್ತಿದ್ದ. ಆ ಮಕ್ಕಳು ಮಾರುಕಟ್ಟೆಯಿಂದ ವಸ್ತುಗಳನ್ನು ಖರೀದಿಸಿ ಬಾದಶಹನ ಸಮ್ಮುಖದಲ್ಲಿ ಹಾಜರು ಪಡಿಸಿದಾಗ ಅವನು ಅವರಿಂದ ಬೆಲೆ ಮತ್ತು ತೂಕ ಮೊದಲಾದವುಗಳ ಬಗ್ಗೆ ಪ್ರಶ್ನಿಸುತ್ತಿದ್ದ. ಹೀಗಾದಾಗ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಸಂಬಂಧಪಟ್ಟ

ಅಂಗಡಿಯಾತನಿಗೆ ಕಠಿಣ ಶಿಕ್ಷೆಯನ್ನು ನೀಡುತ್ತಿದ್ದ. ಅವರಿಗೆ ನೀಡುತ್ತಿದ್ದ ಕಡಿಮೆ ಶಿಕ್ಷೆ ಎಂದರೆ ಅವರ ಮೂಗು ಅಥವಾ ಕಿವಿಯ ಅಂಗ ಛೇದನವನ್ನು ಮಾಡಲಾಗುತ್ತಿತ್ತು.

"ಮುಲಹ್‌ಖಾತ್" ಗ್ರಂಥದ ಕರ್ತೃವಿನ ಹೇಳಿಕೆಯ ಪ್ರಕಾರ ಒಬ್ಬ ಹಸನ್ಮುಖಿ ಮತ್ತು ವಿಲಾಸೀ ಪ್ರವೃತ್ತಿಯ ದರ್ಬಾರಿಯು ಅಲ್ಲಾವುದ್ದೀನನು ಸಂತಸದ ಭಾವದಲ್ಲಿ ಇದ್ದಂತಹ ಸಂದರ್ಭವನ್ನು ನೋಡಿ ಹೀಗೆಂದು ನಿವೇದಿಸಿದ, "ಹುಜೂರ್‌ರವರು ಎಲ್ಲಾ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ನಿಗದಿಗೊಳಿಸಿದ್ದೀರಿ. ಆದರೆ ಅತ್ಯಂತ ಅವಶ್ಯಕ ಮತ್ತು ಮುಖ್ಯವಾಗಿರುವ ವಸ್ತು ಒಂದಿದೆ. ಅದರತ್ತ ಹುಜೂರ್‌ರವರು ಇದುವರೆವಿಗೂ ಯಾವುದೇ ಗಮನವನ್ನು ಹರಿಸಿರುವುದಿಲ್ಲ. ಅಲ್ಲಾವುದ್ದೀನನು ಆ ವಸ್ತುವಿನ ಬಗ್ಗೆ ವಿವರಣೆಯನ್ನು ಕೇಳಿದ, "ಬೆಲೆವೆಣ್ಣುಗಳ ದೆಸೆಯಿಂದ ದೇಶದ ಯುವಕರು ಮತ್ತು ಸೈನಿಕರು ನಾಶವಾಗುತ್ತಿದ್ದಾರೆ. ಹಿಂದಿನಿಂದ ಇದುವರೆಗೂ ಈ ಹೆಣ್ಣುಗಳು ತಮ್ಮ ಮನಸೋ ಇಚ್ಛೆ ನಡೆದುಕೊಳ್ಳುತ್ತಿದ್ದಾರೆ ಮತ್ತು ಅವರ ಯಾವುದೇ ಬೆಲೆಯು ನಿರ್ಧಾರವಾಗಿಲ್ಲ." ಬಾದಶಹನು ಮುಗುಳ್ನಗೆಯನ್ನು ಬೀರಿದ ಮತ್ತು ನುಡಿದ "ಚಿಂತೆಮಾಡಬೇಡ ನಿನ್ನ ಸಲುವಾಗಿ ನಾನು ಅದರತ್ತ ಕೂಡ ಗಮನವನ್ನು ಕೊಡುತ್ತೇನೆ" ಎಂದು ಹೇಳಿದ. ತದ ನಂತರ ಬಾದಶಹನು ಕೊತ್ವಾಲನನ್ನು ಕರೆಸಿದ ಮತ್ತು ಅವನೊಂದಿಗೆ ನುಡಿದ "ಬೆಲೆವೆಣ್ಣುಗಳು ಮತ್ತು ಪಕ್ಕ ವಾದ್ಯದವರಿಗೆ ಈ ಕೂಡಲೇ ಈ ವಿಷಯವನ್ನು ತಿಳಿಸಿಹೇಳು, ಅವರುಗಳು ಬಾದಶಹನು ನಿರ್ಧರಿಸಿದ ಬೆಲೆಗಿಂತ ಒಂದು ಪೈಸೆ ಹಣವನ್ನು ಕೂಡ ಹೆಚ್ಚಿಗೆ ಪಡೆಯಕೂಡದು ಇಲ್ಲವಾದಲ್ಲಿ ಅವರಿಗೆ ಕಠಿಣ ಸಜೆಯನ್ನು ನೀಡಲಾಗುವುದು."

ಅಲ್ಲಾವುದ್ದೀನನು ಈ ಬೆಲೆವೆಣ್ಣುಗಳ ಅಂದ, ಚಂದ ಮತ್ತು ನೃತ್ಯಗಾಯನ ಮತ್ತು ಇನ್ನಿತರೆ ಕುಶಲತೆಗೆ ಅನುಸಾರವಾಗಿ ಮೂರು ವರ್ಗಗಳಲ್ಲಿ ವಿಂಗಡಿಸಿದ. ಮತ್ತು ಪ್ರತಿಯೊಂದು ವರ್ಗದ ಬೆಲೆವೆಣ್ಣುಗಳ ಬೆಲೆಯನ್ನು ನಿಗದಿಪಡಿಸಿದ. ವಸ್ತುಗಳಿಗೆ ನಿಗದಿ ಪಡಿಸಿದ ಬೆಲೆಯ ಕ್ರಮವು ಜಾರಿಗೊಂಡ ನಂತರ ವ್ಯಾಪಾರಿಗಳು ಸರಾಯೇ ಅದಲ್ (ನ್ಯಾಯಸಂಕೀರ್ಣ)ವನ್ನು ಹೊರತು ಪಡಿಸಿದಂತೆ ಇನ್ನಿತರೆ ಮಾರುಕಟ್ಟೆಗಳಲ್ಲಿಯೂ ವ್ಯಾಪಾರವನ್ನು ಮಾಡಬಹುದೆಂದು ಅಲ್ಲಾವುದ್ದೀನ್ ಆಜ್ಞೆ ಮಾಡಿದ. ಆದರೆ ರಾಜನು ನಿಗದಿಪಡಿಸಿದ ಬೆಲೆಯನ್ನು ಪಾಲಿಸತಕ್ಕದ್ದು ಎಂದು ಕಠೋರ ಶಾಸನವನ್ನು ಮಾಡಿದ್ದ. ಮತ್ತು ಆ ವ್ಯಾಪಾರಿಗಳಿಗೆ ಸೂಚನೆಯನ್ನು ಆತನು ನೀಡಿದ್ದು, ಮೊದಲ ದರ್ಜೆಯ ಇರಾಕ್‌ನ ಅಥವಾ ಅರಬ್ಬಿ ಕುದುರೆ ಅಥವಾ ತುರ್ಕಿಯ ಅಥವಾ ಇನ್ನಿತರೆ ಯಾವುದೇ ಹೊರದೇಶದ ಉನ್ನತ ದರ್ಜೆಯ ಸರಕನ್ನು ಹೊಂದಿದ್ದಲ್ಲಿ ಮತ್ತು ಆ ವ್ಯಾಪಾರಿಯು ಸದರಿ ಸರಕು ಅಥವಾ ಪ್ರಾಣಿಯನ್ನು ಸರಾಯೇ ಅದಲ್‌ನಲ್ಲಿ ಮಾರಾಟ ಮಾಡಲು ಇಷ್ಟಪಡದಿದ್ದಲ್ಲಿ

ಅವನು ತನ್ನ ಸರಕನ್ನು ಮೊಟ್ಟಮೊದಲಿಗೆ ಬಾದಶಹನ ಸನ್ನಿಧಿಯಲ್ಲಿ ಹಾಜರುಪಡಿಸಬೇಕೆಂತಲೂ ಹಾಗೂ ಆ ವಸ್ತುಗಳ ಪೈಕಿ ಬಾದಶಹನು ಸ್ವಂತ ಉಪಯೋಗಕ್ಕೆ ಯಾವುದಾದರೂ ಖರೀದಿ ಮಾಡದಿದ್ದಲ್ಲಿ ಅದನ್ನು ಬಾದಶಹನು ಸನ್ನೆಯ ಮೂಲಕ ಸೂಚಿಸಿದ ಸರದಾರನಿಗೆ ಅದನ್ನು ಮಾರಾಟ ಮಾಡಬಹುದೆಂದು ಅನುಮತಿಯನ್ನು ಕೊಟ್ಟಿದ್ದ.

ಅಲ್ಲಾವುದ್ದೀನನ ಅವಧಿಯ ನಾಣ್ಯಗಳು:

ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತಾವಧಿಯಲ್ಲಿ ತಂಗಾದ ತೂಕವು ಒಂದು ತೊಲವಾಗಿತ್ತು. ಈ ನಾಣ್ಯವನ್ನು ಚಿನ್ನ ಮತ್ತು ಬೆಳ್ಳಿ ಇವೆರಡೂ ಧಾತುಗಳಿಂದಲೂ ತಯಾರಿಸಲಾಗುತ್ತಿತ್ತು. ಚಿನ್ನದ ತಂಗಕ್ಕೆ "ತಂಗಾ ತಲಾಯಿ" ಮತ್ತು ಬೆಳ್ಳಿಯ ನಾಣ್ಯಕ್ಕೆ "ತಂಗಾ ನರ್ಕಾ" ಎನ್ನಲಾಗುತ್ತಿತ್ತು. ಒಂದು ತಂಗಾ ನರ್ಕಾದ ಮೌಲ್ಯವು ೫೦ ಜೇತಲ್ ಆಗಿತ್ತು. ಜೇತಲ್‌ನ ತೂಕವು ಕೂಡ ಒಂದು ಮುಕ್ಕಾಲು ತೊಲವಾಗಿತ್ತು. ಅಲ್ಲಾವುದ್ದೀನ್ ಕಾಲಾವಧಿಯ ಒಂದು ಮಣವೆಂದರೆ, ೪೦ ಸೇರು ಹಾಗೂ ಒಂದು ಸೇರು ಎಂದರೆ ೨೪ ತೊಲದ ಲೆಕ್ಕವಾಗಿತ್ತು. ಕೆಳಕಂಡಂತೆ ಕಾಣಿಸಿರುವಲ್ಲಿ ಬೆಳ್ಳಿಯ ಒಂದು ತೊಲದ ತೂಕದ ನಾಣ್ಯ ಎಂದರ್ಥ ಮಾಡಿಕೊಳ್ಳತಕ್ಕದ್ದು. ಜೀವನಾವಶ್ಯಕ ವಸ್ತುಗಳು ಮತ್ತು ಸೈನ್ಯದ ಪರಿಕರಗಳ ಸೂಕ್ತ ಬೆಲೆ ಪರಿಷ್ಕರಣೆಯನ್ನು ಮಾಡಿದ ನಂತರ ಅಲ್ಲಾವುದ್ದೀನನು ಸೈನಿಕರ ವೇತನವನ್ನು ನಿಗದಿಗೊಳಿಸುವತ್ತ ಗಮನ ಹರಿಸಿದ. ಈ ನಿಟ್ಟಿನಲ್ಲಿ ಅವನು ಕೆಳಕಂಡ ದರ್ಜೆಗಳನ್ನು ಗುರುತಿಸಿದ.

ಮೊದಲ ದರ್ಜೆ	೨೪೦ ತಂಗಾ ವಾರ್ಷಿಕ
ಎರಡನೇ ದರ್ಜೆ	೧೫೬ ತಂಗಾ ವಾರ್ಷಿಕ
ಮೂರನೇ ದರ್ಜೆ	೭೭ ತಂಗಾ ವಾರ್ಷಿಕ

ಈ ರೀತಿಯಲ್ಲಿ ವೇತನ ಹೆಚ್ಚಳವಾದುದರಿಂದ ಸೈನ್ಯದಲ್ಲಿ ಅಪಾರ ಸಂಖ್ಯೆಯ ಜನರು ನೇಮಕವಾದರು ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಸೈನಿಕರಿಂದ ಕೂಡಿದ ಸಂಖ್ಯೆಯ ಬಲಿಷ್ಠ ಸೈನ್ಯವು ಸದಾ ಸನ್ನದ್ಧವಾಗಿ ಸಂಚಲನವನ್ನು ಮೂಡಿಸಿದ್ದರಿಂದ ಮೊಘಲರ ದುರಾಕ್ರಮಣಗಳು ಮತ್ತು ಗಲಭೆಗಳು ಕೊನೆಗೊಂಡವು. ಮತ್ತು ಇಡೀ ದೇಶದಲ್ಲಿ ಶಾಂತಿ ಮತ್ತು ನೆಮ್ಮದಿ ನೆಲೆಸಿತು. ಮೊಗಲರು ಸ್ವತಃ ಮೇಲ್ಕಂಡ ಸೈನ್ಯದ ಹೆಚ್ಚಳದಿಂದ ಭೀತರಾದರು ಮತ್ತು ಅವರುಗಳು ತಮ್ಮ ವಿನಾಶಕಾರೀ ಕೃತ್ಯಗಳಿಂದ ಹಿಂಜರಿದರು. ದುರದೃಷ್ಟವಶಾತ್ ಮೊಗಲರ ಯಾವುದಾದರು ಒಂದು ಗುಂಪು ಹಿಂದೂಸ್ತಾನವನನು ಪ್ರವೇಶಿಸಿದಲ್ಲಿ ಆ ಗುಂಪಿನ ಪ್ರತಿಯೊಬ್ಬ ವ್ಯಕ್ತಿಯು ಕೊಲೆಗೀಡಾಗುತ್ತಿದ್ದ ಇಲ್ಲವೇ ಸೆರೆಯಾಳಾಗುತ್ತಿದ್ದ.

ಮೊಘಲರ ಆಕ್ರಮಣ:

ಹಿಜರಿ ಶಕೆ ೭೦೪ರಲ್ಲಿ ಖ್ವಾಜ ತಿರ್ಪಾಲ್ ಮತ್ತು ಚೆಂಗೇಸ್‌ಖಾನನ ಮೊಮ್ಮಗನು ಪರಸ್ಪರ ಶಾಮೀಲಾಗಿ ಹಿದೂಸ್ತಾನದ ಮೇಲೆ ಆಕ್ರಮಣವನ್ನು ಮಾಡಿದರು. ಮೊಗಲರು ಕೋಹೆ ಸವಾಲಿಕ್‌ನ ಕಬ್ಜೆಯನ್ನು ತಮ್ಮ ವಶಕ್ಕೆ ಪಡೆದುಕೊಂಡರು ಮತ್ತು ಅಮ್‌ರೋಹಾದವರೆಗೆ ಇದ್ದಂತಹ ಎಲ್ಲಾ ಪ್ರದೇಶವನ್ನು ಧ್ವಂಸ ಮಾಡಲಾರಂಭಿಸಿದರು. ಹಾಗೂ ಈ ನಿಟ್ಟಿನಲ್ಲಿ ಅಲ್ಲಾವುದ್ದೀನನು ಮುಲ್ಕ್ ನಾಯಬ್ ಮತ್ತು ಘಾಜಿ ಮುಲ್ಕ್ ತುಗಲಕ್‌ನನ್ನು ಮೊಘಲರ ದಮನ ಮಾಡುವ ಸಲುವಾಗಿ ರವಾನೆ ಮಾಡಿದ. ಆ ಇಬ್ಬರು ಸರದಾರರು ಕೂಡ ಬಲಾಢ್ಯ ಸೇನೆಯೊಂದಿಗೆ ಕೂಡಿ ಮೊಘಲರ ಸಮೀಪ ತಲುಪಿದರು. ಮೊಗಲರ ಕಗ್ಗೊಲೆಯನ್ನು ನಿರ್ದಯವಾಗಿ ಮಾಡಬೇಕೆಂತಲೂ ಮತ್ತು ಅವರನ್ನು ನಾಶಪಡಿಸುವುದರಲ್ಲಿ ಜೀವದ ಹಂಗನ್ನು ತೊರೆದು ಹೋರಾಡಬೇಕೆಂತಲೂ ಹಾಗೂ ಮೊಘಲರ ಸೇನೆಯ ಪೈಕಿ ಯಾರೊಬ್ಬರು ಸಹ ಜೀವ ಸಹಿತ ಉಳಿದು ಮರಳಿ ಹೋಗ ಕೂಡದಂತೆಲೂ ಅಲ್ಲಾವುದ್ದೀನನು ಅವರಿಬ್ಬರಿಗೆ ಅದೇಶವನ್ನು ಮಾಡಿದ್ದ. ಮುಲ್ಕ್ ನಾಯಬ್ ಮತ್ತು ಮುಲ್ಕ್ ಘಾಜಿಯು ಅವನ ಆದೇಶವನ್ನು ಅಕ್ಷರಶಃ ಪಾಲಿಸಿ ಜೀವದ ಹಂಗನ್ನು ತೊರೆದು ಹೋರಾಟ ಮಾಡಿದರು ಮತ್ತು ಅಮ್‌ರೋಹಾದಲ್ಲಿ ಮೊಘಲರನ್ನು ಸೋಲಿಸಿದರು ಅವರ ಅಸಂಖ್ಯ ಸೈನಿಕರನ್ನು ಕಗ್ಗೊಲೆ ಮಾಡಿ ತಮ್ಮ ಕತ್ತಿಯ ಅಲುಗಿಗೆ ರಕ್ತಸಿಂಚನವನ್ನು ಮಾಡಿದರು ಹಾಗೂ ಉಳಿದವರನ್ನು ಸೆರೆ ಹಿಡಿದರು. ಅಲಿಬೇಗ್ ಮತ್ತು ಖ್ವಾಜ ತರ್ಪಾಲ್‌ನ್ನು ಕೂಡ ಜೀವಂತವಾಗಿ ಸೆರೆ ಹಿಡಿದರು. ಮುಲ್ಕ್ ನಾಯಬ್ ಮತ್ತು ಘಾಜಿ ಮುಲ್ಕ್ ಇಪ್ಪತ್ತು ಸಾವಿರ ಕುದುರೆಗಳು ಮತ್ತು ಸೆರೆಯಾಳುಗಳ ಬೃಹತ್ ಗುಂಪಿನೊಂದಿಗೆ ಅಲ್ಲಾವುದ್ದೀನನ ಸನ್ನಿಧಿಯಲ್ಲಿ ಹಾಜರಾದರು. ಆ ದಿನ ಅಲ್ಲಾವುದ್ದೀನನು ನವನಗರದಿಂದ ಹೊರಬಂದು ಸುಬಹಾನಿ ವೇದಿಕೆಯಲ್ಲಿ ದರ್ಬಾರನ್ನು ಆಯೋಜಿಸಿದ. ಬಾದಶಹನ ಸಿಂಹಾಸನದಿಂದ ಹಿಡಿದು ಇಂದ್ರಪ್ರಸ್ಥದವರೆಗೂ ರಸ್ತೆಯ ಇಕ್ಕೆಲದಲ್ಲಿ ಸೈನಿಕರು ನಿಂತಿದ್ದರು ಹಾಗೂ ಆ ಸಂದರ್ಭದಲ್ಲಿ ಅಲಿಬೇಗ್ ಮತ್ತು ಖ್ವಾಜಾ ತ್ರಿಪಾಲ್‌ನನ್ನು ಬಾದಶಹನ ಹುಜೂರ್ ಸನ್ನಿಧಿಯಲ್ಲಿ ಹಾಜರು ಪಡಿಸಲಾಯಿತು. ಬಾದಶಹನು ಆ ಇಬ್ಬರು ಮೊಘಲ ಸರ್ದಾರರನ್ನು ಆನೆಗಳ ಪಾದಗಳ ಅಡಿಯಲ್ಲಿ ಹಾಕಿ ಕೊಲೆ ಮಾಡಿದ ಹಾಗೂ ಮೊಗಲ್ ಸೈನ್ಯದ ಸೆರೆಯಾಳುಗಳನ್ನು ಕೂಡ ಕೊಲ್ಲಿಸಿದ. ಇತಿಹಾಸದಲ್ಲಿ ದಾಖಲಾಗಿರುವಂತೆ ಆ ಸಂದರ್ಭದಲ್ಲಿ ಎಷ್ಟೊಂದು ದಟ್ಟವಾಗಿ ಜನಜಂಗುಳಿಯು ಸೇರಿತ್ತೆಂದರೆ ಇಪ್ಪತ್ತು ಜೇತಲ್ ಮತ್ತು ಅರ್ಧ ಬೆಳ್ಳಿಯ ತಂಗಾ ನೀಡಿದರೂ ಒಂದು ಲೋಟ ನೀರು ದೊರಕುವುದು ದುರ್ಲಭವಾಗಿತ್ತು. ಮೊಘಲರಿಂದ ಪಡೆದುಕೊಂಡಿದ್ದ ಕುದುರೆಗಳನ್ನು ಅಲ್ಲಾವುದ್ದೀನನು ತನ್ನ ಸರ್ದಾರರ ನಡುವೆ ಹಂಚಿದ. ಆ ಸಂದರ್ಭದಲ್ಲಿ ಸೇರಿ ಪಟ್ಟಣದ ಹೊಸ ಬುರುಜುಗಳು ನಿರ್ಮಾಣವಾಗುತ್ತಿದ್ದವು. ಆ ಬುರುಜುಗಳ ನಿರ್ಮಾಣದಲ್ಲಿ ಉಪಯೋಗಿಸುತ್ತಿದ್ದ ಕಲ್ಲು ಮತ್ತು ಇಟ್ಟಿಗೆಗಳ ಜಾಗದಲ್ಲಿ ಕೊಲೆಗೀಡಾದ

ಎಂಟು ಸಾವಿರ ಮಂದಿ ಮೊಘಲರ ತಲೆಗಳನ್ನು ಬಳಸಿ ನಿರ್ಮಾಣ ಕಾರ್ಯವನ್ನು ಮುಂದುವರೆಸಬೇಕೆಂದು ಅವನು ಆದೇಶ ನೀಡಿದ.

ಘಾಜಿ ಮುಲ್ಕ್‌ನನ್ನು ಅಲ್ಲಾವುದ್ದೀನ್‌ನು ಹಿಂದಿಗಿಂತಲೂ ಹೆಚ್ಚಿನ ರೀತಿಯಲ್ಲಿ ಉಡುಗೊರೆಗಳನ್ನು ನೀಡಿ ಗೌರವಿಸಿದ ಮತ್ತು ಅವನನ್ನು ಪಂಜಾಬ್‌ನ ರಾಜನನ್ನಾಗಿ ನೇಮಕ ಮಾಡಿದ. ರಾಕೆಟ್ ಖಾನನನ್ನು ಗುಜರಾತ್‌ನ ಉನ್ನತ ಸರ್ದಾರನನ್ನಾಗಿ ನೇಮಕ ಮಾಡಿ ಒಂದು ಬೃಹತ್ತಾದ ಸೇನೆಯ ಜೊತೆಗೆ ಅಲ್ಲಿಗೆ ಕಳಿಸಿಕೊಟ್ಟ.

ಮಾಳವ ಮತ್ತು ಉಜ್ಜಯನಿ ಮೊದಲಾದ ವಿಜಯಗಳು:

ಅಲ್ಲಾವುದ್ದೀನನು ಐನುಲ್‌ಮುಲ್ಕ್ ಮುಲ್ತಾನಿಗೆ ಒಂದು ಬೃಹತ್ ಸೈನ್ಯದ ಸರ್ದಾರನನ್ನಾಗಿ ನೇಮಕ ಮಾಡಿದ ಮತ್ತು ಅವನನ್ನು ಮಾಳವ, ಉಜ್ಜಯನಿ ಚಂದೇರಿ ಮತ್ತು ಜಾಲೂರನ್ನು ವಶಪಡಿಸಿಕೊಳ್ಳುವ ಸಲುವಾಗಿ ದೆಹಲಿಯಿಂದ ಬೀಳ್ಕೊಟ್ಟ. ಐನುಲ್ ಮುಲ್ಕ್ ಮಾಳವ ತಲುಪಿದಾಗ ಅಲ್ಲಿನ ರಾಜನಾದ ಕೋಕಾ ನಲವತ್ತು ಸಾವಿರ ಕುದುರೆ ಸವಾರರು ಹಾಗೂ ಒಂದು ಲಕ್ಷ ಕಾಲಾಳುಗಳ ಜೊತೆಯಲ್ಲಿ ಐನುಲ್‌ಮುಲ್ಕ್‌ನನ್ನು ಎದುರಿಸಿದ. ಉಭಯತ್ರರ ನಡುವೆ ಘೋರ ಯುದ್ಧ ನಡೆಯಿತು. ಇದರ ಪರಿಣಾಮವಾಗಿ ರಾಜ ಕೋಕಾ ಸೋತು ಯುದ್ಧರಂಗದಿಂದ ಪರಾರಿಯಾದ. ೮೦೪ನೇ ಇಸವಿಯ ಜಮಾದಿಯುಲ್ ಅವ್ವಲ್ ಹತ್ತನೆಯ ತಾರೀಕಿನಂದು ಐನುಲ್‌ಮುಲ್ಕನು ಉಜ್ಜಯನಿ, ಮಂದೋ, ಧಾರಾನಗರಿ ಮತ್ತು ಚಂದೇರಿಯ ಮೇಲೆ ಆಕ್ರಮಣ ಮಾಡಿ ವಿಜಯಿಯಾದ ಹಾಗೂ ಅಲ್ಲಾವುದ್ದೀನನ ಕೃಪಾಕಟಾಕ್ಷಕ್ಕಾಗಿ ವಿಜಯನಾಮೆಯನ್ನು ಕಳಿಸಿಕೊಟ್ಟ. ರಾಜಧಾನಿ ದೆಹಲಿಯಲ್ಲಿ ಸಂಭ್ರಮ ಮತ್ತು ಉತ್ಸಾಹದಿಂದ ವಿಜಯೋತ್ಸವವನ್ನು ಆಚರಿಸಲಾಯಿತು. ಒಂದು ವಾರದ ಕಾಲ ಹಗಲಿರುಳು ನಿರಂತರವಾಗಿ ಸಂತೋಷದ ಹೊನಲು ಮತ್ತು ವಿಲಾಸದ ಗೋಷ್ಠಿಗಳು ನಡೆದವು. ಇಡೀ ಪಟ್ಟಣದಲ್ಲಿ ಸಿಹಿಯನ್ನು ಹಂಚಲಾಯಿತು ಮತ್ತು ಜಾಲೂರಿನ ರಾಜನಾದ ಕಾತ್ರದೇವನು ರಾಜ ಕೋಕಾನ ದುರಂತವನ್ನು ಕಂಡಿದ್ದರಿಂದ ಐನುಲ್‌ಮುಲ್ಕ್‌ನ ಕಡೆಯಿಂದ ಶರಣಾಗತಿಯ ಆಶ್ವಾಸನೆಯನ್ನು ಪಡೆದ ಮತ್ತು ಅಲ್ಲಾವುದ್ದೀನನ ಸನ್ನಿಧಿಗೆ ಹಾಜರಾಗಿ ಬಾದಶಹನ ಉನ್ನತ ಸರದಾರರ ಗುಂಪಿನಲ್ಲಿ ಸೇರಿ ಹೋದ.

ಪದ್ಮಿನಿಯ ಪ್ರಸಂಗ–ರಾಜ ರತನ್ ಸೇನ್‌ನ ಬಿಡುಗಡೆ:

ಇದೇ ಅವಧಿಯಲ್ಲಿ ಚೈತೂರ್ ಕೋಟೆಯ ರಾಜನಾದ ರತನ್‌ಸೇನ್‌ನು ಒಂದು ಸೆರೆಮನೆಯಲ್ಲಿ ಕಾರಾಗೃಹವಾಸವನ್ನು ಅನುಭವಿಸುತ್ತಿದ್ದ ಹಾಗೂ ಅವನು ಒಂದು ವಿಲಕ್ಷಣ ರೀತಿಯಲ್ಲಿ ಕಾರಾಗೃಹದಿಂದ ಬಿಡುಗಡೆ ಹೊಂದಿದ. ಆ ರಾಜನು ಸ್ವತಂತ್ರನಾದ ವಿವರವಾದ ವೃತ್ತಾಂತ ಹೀಗಿದೆ: ರಾಜನು ಸೆರೆಮನೆಯಲ್ಲಿ ಇದ್ದ ದೀರ್ಘ ಅವಧಿಯ

ನಂತರ ಆ ರಾಜನ ಪತ್ನಿಯರ ಪೈಕಿ ಪದ್ಮಿನಿ ಎಂಬ ರಾಣಿಯು ಕೂಡ ಇದ್ದಾಳೆ ಎಂಬ ವಿಷಯವು ಅಲ್ಲಾವುದ್ದೀನನಿಗೆ ತಿಳಿದು ಬಂದಿತು. ಆಕೆಯು ಸುರಸುಂದರಿಯಾಗಿದ್ದು ಅನೇಕ ವೈಶಿಷ್ಟ್ಯಪೂರ್ಣ ಗುಣಗಳ ಆಗರವಾಗಿದ್ದಳು. ಅಲ್ಲಾವುದ್ದೀನನು ರಾಜ ರತನ್‌ಸೇನ್‌ಗೆ ಸಂದೇಶವನ್ನು ಕಳಿಸಿ ಆತನು ಸ್ವತಂತ್ರನಾಗಲು ಇಷ್ಟಪಟ್ಟಲ್ಲಿ ಆತನು ರಾಣಿ ಪದ್ಮಿನಿಯನ್ನು ಆತನಿಗೆ ಭೇಟಿಯಾಗಲು ಅವಕಾಶ ನೀಡಬೇಕೆಂದು ತಿಳಿಸಿದ. ರಾಜನು ಈ ಶರತ್ತನ್ನು ಒಪ್ಪಿದ. ಮತ್ತು ತನ್ನ ಕೆಲವು ನಂಬಿಕಸ್ಥ ಬೆಂಬಲಿಗರನ್ನು ಕೋಹೆಸ್ಥಾನ್‌ಗೆ ಕಳಿಸಿದ. ಹಾಗೂ ರಾಣಿ ಪದ್ಮಿನಿ ಮತ್ತು ತನ್ನ ಮಕ್ಕಳನ್ನು ಕರೆತರಬೇಕೆಂದು ಅವರಲ್ಲಿ ಕೋರಿದ. ರಾಜನ ಬಂಧುಗಳು ರಜಪೂತ ವಂಶಸ್ಥರಾಗಿದ್ದರು ಮತ್ತು ರಾಜನ ಸದರಿ ನಿರ್ಣಯದಿಂದ ಅವರಿಗೆ ಅಭಿಮಾನಭಂಗವುಂಟಾಯಿತು. ಈ ರೀತಿಯ ಕೃತ್ಯವನ್ನು ಎಸಗಿದ ಕಾರಣಕ್ಕಾಗಿ ರಾಜನನ್ನು ವಿಷಪ್ರಾಶಣ ಮಾಡಿಸಿ ಹತ್ಯೆಗೈಯುವ ನಿಶ್ಚಯ ಮಾಡಿದರು. ತಮ್ಮ ವಂಶದ ಮರ್ಯಾದೆಯನ್ನು ಉಳಿಸಲು ಅವರಿಗೆ ಅದೊಂದೇ ಮಾರ್ಗ ಉಳಿದಿತ್ತು. ರಾಜ ರತನ್‌ಸೇನ್‌ನ ಮಗಳು ಅತ್ಯಂತ ಬುದ್ಧಿಮತ್ತೆಯನ್ನು ಹೊಂದಿದ್ದು ವಿವೇಕಿಯಾಗಿದ್ದಳು ಹಾಗೂ ಚತುರೆಯಾಗಿದ್ದಳು. ಅವಳು ಅಪಾರ ಜನಮನ್ನಣೆಯನ್ನು ಹೊಂದಿದ್ದಳು ತನ್ನ ಬಂಧುಗಳ ಕೋಪವನ್ನು ಕಂಡು ಒಂದು ಉಪಾಯವನ್ನು ಆಲೋಚಿಸಿದಳು, "ನನಗೆ ಒಂದು ಉಪಾಯವು ಹೊಳೆಯುತ್ತಿದೆ. ಅದನ್ನು ಕಾರ್ಯಗತ ಮಾಡಿದಲ್ಲಿ ನನ್ನ ತಂದೆಯ ಪ್ರಾಣ ಮತ್ತು ವಂಶದ ಗೌರವ ಇವೆರಡನ್ನು ಕೂಡ ಉಳಿಸಬಹುದಾಗಿದೆ. ಅದೇನೆಂದರೆ ರಜಪೂತ ಯೋಧರ ಒಂದು ಸಶಸ್ತ್ರ ತಂಡವು ದೆಹಲಿಗೆ ತೆರಳಿ ರಾತ್ರಿಯ ಒಂದು ಜಾವ ಮುಗಿದ ನಂತರ ದೆಹಲಿಯನ್ನು ಪ್ರವೇಶಿಸಲಿ ಮತ್ತು ರಾಣಿ ಪದ್ಮಿನಿಯು ತನ್ನ ಬಂಧುಗಳೊಂದಿಗೆ ಬಂದಿದ್ದಾಳೆ ಹಾಗೂ ರಾಜನ ಸನ್ನಿಧಿಯಲ್ಲಿ ಹಾಜರಾಗುತ್ತಿದ್ದಾಳೆ ಎಂಬ ಸುದ್ದಿಯನ್ನು ಹರಡಲಿ. ಬಂದೀಖಾನೆಯ ಬಳಿ ತಲುಪಿ ರಜಪೂತ ಯೋಧರು ತಮ್ಮ ಕತ್ತಿಗಳನ್ನು ಸೆಳೆದು ಬಂದೀಖಾನೆಯ ಮೇಲೆ ಆಕ್ರಮಣ ಮಾಡಲಿ. ಹಾಗೂ ಆ ಸೆರೆಮನೆಯ ರಕ್ಷಕ ಭಟರನ್ನು ಕೊಲೆ ಮಾಡಿ ನನ್ನ ತಂದೆಯನ್ನು ಅಲ್ಲಿಂದ ಬಿಡಿಸಿ ಒಂದು ಕುದುರೆಯ ಮೇಲೆ ಸವಾರಿ ಮಾಡಿಸಿ ಅವನನ್ನು ತತ್‌ಕ್ಷಣ ನಮ್ಮ ರಾಜ್ಯದ ದಿಕ್ಕಿನತ್ತ ಓಡಿಸಬೇಕು." ರಜಪೂತ ಸರ್ದಾರರಿಗೆ ಆ ಯುವತಿಯ ಸಲಹೆಯು ಸಮಯೋಚಿತವಾಗಿ ಕಂಡುಬಂದಿತು ಮತ್ತು ಆ ಸಲಹೆಯನ್ನು ಕಾರ್ಯಗತ ಮಾಡಬೇಕೆಂದು ಅವರು ಆಲೋಚಿಸಿದರು.

ರಜಪೂತ ಯೋಧರ ಒಂದು ಸಶಸ್ತ್ರ ಗುಂಪು ಪಲ್ಲಕ್ಕಿಗಳಲ್ಲಿ ಕುಳಿತು ದೆಹಲಿಯತ್ತ ಹೊರಟಿತು. ದೆಹಲಿಯಲ್ಲಿ ಬಂದಿಖಾನೆಯ ಬಳಿಗೆ ತೆರಳಿದ ಆ ಯೋಧರು ಬಂದಿಖಾನೆಯ ಮೇಲೆ ಆಕ್ರಮಣವನ್ನು ಮಾಡಿದರು. ಅಲ್ಲಿನ ದರ್ಬಾನ ಮತ್ತು ರಕ್ಷಕ ಭಟರನ್ನು ಕೊಲೆ ಮಾಡಿ ಆ ಯೋಧರು ರಾಜ ರತನ್‌ಸೇನ್‌ನನ್ನು ಸೆರೆಮನೆಯಿಂದ ಹೊರ ತಂದು ಶರವೇಗದ ಕುದುರೆಯ ಮೇಲೆ ಅವನನ್ನು ಕೂರಿಸಿ

ಕೋಹೆಸ್ಥಾನದತ್ತ ಕಳಿಸಿದರು. ಬಾದಶಹನ ಸೈನ್ಯದ ಸವಾರರು ಆ ರಜಪೂತರನ್ನು ಹಿಂಬಾಲಿಸಿದರು. ಮಾರ್ಗಮಧ್ಯದಲ್ಲಿ ಅನೇಕ ಚಿಕ್ಕಪುಟ್ಟ ಘರ್ಷಣೆಗಳು ನಡೆದವು ಹಾಗೂ ಈ ಘರ್ಷಣೆಗಳ ಫಲವಾಗಿ ಅನೇಕ ರಜಪೂತ ಸಿಪಾಯಿಗಳು ಹತರಾದರು. ಆದರೆ ರಾಜ ರತನ್‌ಸೇನ್‌ನು ತನಗೆ ಎದುರಾದ ಎಲ್ಲಾ ಅಡೆತಡೆಗಳನ್ನು ನಿವಾರಿಸಿಕೊಂಡು ತನ್ನ ಕುಟುಂಬವನ್ನು ಸೇರಿಕೊಂಡ. ತನ್ನ ಮಕ್ಕಳ ಬುದ್ಧಿ ಚಾತುರ್ಯ ಮತ್ತು ಯುಕ್ತಿಯ ದೆಸೆಯಿಂದ ಬಿಡುಗಡೆ ಹೊಂದಿದ ಅವನು ತನ್ನ ಸುತ್ತಲೂ ರಕ್ಷಣೆಯನ್ನು ಬಲಪಡಿಸಿಕೊಂಡು ಜೇತೂರ್ ಕೋಟೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಲೂಟಿ ಮಾಡಲಾರಂಭಿಸಿದ ಹಾಗೂ ವಿನಾಶಕಾರಿ ಕೃತ್ಯಗಳಲ್ಲಿ ತೊಡಗಿದ .ಈ ಪರಿಸ್ಥಿತಿಯನ್ನು ಗಮನಿಸಿದ ಅಲ್ಲಾವುದ್ದೀನನು ಯುಕ್ತಿಪೂರ್ವಕವಾಗಿ ಕೋಟೆಯ ಆಡಳಿತವನ್ನು ಖಿಜರ್‌ಖಾನ್‌ನಿಂದ ವಾಪಸು ಪಡೆದುಕೊಂಡು ಹಿಸಾರ್‌ನ ಆಳ್ವಿಕೆಯನ್ನು ರಾಜ ರತನ್‌ಸೇನ್‌ನ ಸೋದರಳಿಯನ ವಶಕ್ಕೆ ನೀಡಿದ. ಆ ಸಂದರ್ಭದಲ್ಲಿ ರತನ್‌ಸೇನ್‌ನ ಸೋದರಳಿಯನು ರಾಜನ ನೌಕರಿಯಲ್ಲಿದ್ದ ಮತ್ತು ಸದಾ ಕಾಲವು ಅವನು ಬಾದಶಹನ ಅಧೀನತೆಯನ್ನು ಒಪ್ಪಿಕೊಂಡು ವಿಧೇಯತೆಯಿಂದಿದ್ದ. ವಿವೇಚನಾಯುಕ್ತ ದೂರ ದೃಷ್ಟಿಯನ್ನು ಹೊಂದಿದ್ದ ಆ ರಾಜನು ಅತಿಕಡಿಮೆ ಅವಧಿಯಲ್ಲಿ ತನ್ನ ಅಧಿಕಾರದ ವ್ಯಾಪ್ತಿಯನ್ನು ವಿಸ್ತರಿಸಿದ ಹಾಗೂ ಎಲ್ಲಾ ರಜಪೂತರು ಕೂಡ ಅವನಿಗೆ ವಿಧೇಯರಾಗಿ ಅವನ ಅಜ್ಞಾಪಾಲಕರಾದರು. ಈ ರಾಜನು ತನ್ನ ಆಯಸ್ಸಿನ ಕೊನೆಯ ಕ್ಷಣದವರೆಗೂ ಅಲ್ಲಾವುದ್ದೀನ್‌ನ ಸಾಮಂತ ರಾಜನ್ನಾಗಿ ಉಳಿದ ಮತ್ತು ಪ್ರತಿವರ್ಷವು ಕೂಡ ತನ್ನ ರಾಜ್ಯದಿಂದ ಅತ್ಯುತ್ತಮ ಉಡುಗೊರೆಗಳು ಮತ್ತು ಕಪ್ಪ ಕಾಣಿಕೆಯನ್ನು ತೆಗೆದುಕೊಂಡು ಬಾದಶಹನ ಸನ್ನಿಧಿಯಲ್ಲಿ ಹಾಜರಾಗುತ್ತಿದ್ದ. ಕುದುರೆಗಳು ಮತ್ತು ಖಿಲ್ಲತ್ತು ಮೊದಲಾದವುಗಳ ಉಡುಗೊರೆಗಳನ್ನು ಪಡೆದು ತನ್ನ ರಾಜ್ಯಕ್ಕೆ ಮರಳಿ ಹೋಗುತ್ತಿದ್ದ. ಆ ರಾಜನಿಗೆ ಯಾವುದಾದರೂ ಯುದ್ಧದಲ್ಲಿ ಭಾಗಿಯಾಗುವಂತೆ ಆದೇಶ ನೀಡಿದಾಗ ಐದು ಸಾವಿರ ಕುದುರೆ ಸವಾರರು ಮತ್ತು ಹತ್ತು ಸಾವಿರ ಕಾಲಾಳುಗಳ ಸೈನ್ಯದೊಂದಿಗೆ ಅವನು ಯುದ್ಧದಲ್ಲಿ ಭಾಗಿಯಾಗುತ್ತಿದ್ದ ಮತ್ತು ಬಾದಶಹನೊಂದಿಗೆ ಕೊನೆಯವರೆಗೂ ಪ್ರಾಮಾಣಿಕನಾಗಿ ಉಳಿದ.

ಮೊಗಲರ ಹೊಸ ಆಕ್ರಮಣ:

ಮೊಗಲರ ಸರ್ದಾರರಾದ ತ್ರಿಪಾಲ್ ಮತ್ತು ಅಲಿಬೇಗ್‌ನ ರಕ್ತಪಾತದ ಪ್ರತೀಕಾರವನ್ನು ತೀರಿಸುವ ಸಲುವಾಗಿ ವಿದಾಖಾನ್‌ಗೆ ಸೇರಿದ ಗಂಗ್ ಹೆಸರಿನ ಒಬ್ಬ ಪ್ರಮುಖ ಸರದಾರನು ೮೦೫ನೇ ಇಸವಿಯಲ್ಲಿ ಹಿಂದೂಸ್ತಾನದ ಮೇಲೆ ಆಕ್ರಮಣ ಮಾಡಿದ. ಮುಲ್ತಾನ್‌ನ ಕಡೆಯಿಂದ ಪ್ರಯಾಣ ಮಾಡುತ್ತ ಗಂಗ್ ಸವಾಲಿಕ್ ತಲುಪಿದ. ಆತನನ್ನು ಎದುರಿಸಲು ಘಾಜಿ ಮುಲ್ಕ್ ಕೂಡ ತನ್ನ ಸೈನ್ಯದೊಡನೆ ಹೊರಟು ಸಿಂಧು ನದಿಯ ದಡದಲ್ಲಿ ಬಿಡಾರ ಹೂಡಿದ. ಮೊಗಲರು ಮಾರ್ಗಮಧ್ಯದಲ್ಲಿ ಸಿಕ್ಕ

ನಗರ ಪಟ್ಟಣಗಳನ್ನು ಲೂಟಿ ಹೊಡಿಯುತ್ತಾ ಬೇಸಿಗೆ ಕಾಲದಲ್ಲಿ ಸಿಂಧು ನದಿಯ ದಡವನ್ನು ತಲುಪಿದರು. ಅಲ್ಲಿಗೆ ಬಂದ ನಂತರ ಚೇನಾಬ್ ನದಿಯು ಶತ್ರುಗಳ ವಶದಲ್ಲಿದೆ ಎಂದು ಅವರಿಗೆ ತಿಳಿದು ಬಂದಿತು. ಮೊಘಲರು ಹಿಂದಿ ಸೈನ್ಯದೊಂದಿಗೆ ಯುದ್ಧ ಮಾಡುವ ನಿರ್ಧಾರವನ್ನು ತಳೆದರು. ಆ ಯುದ್ಧದಲ್ಲಿ ಅವರಿಗೆ ಯಾವುದೇ ಲಾಭವಾಗಲಿಲ್ಲ ಬದಲಿಗೆ ಅವರ ಅನೇಕ ಸಿಪಾಯಿಗಳ ಮಾರಣ ಹೋಮವಾಯಿತು. ಬಾದಶಹನ ಸೈನಿಕರು ಜೀವಂತ ಗಂಗ್‌ನನ್ನು ಸೆರೆಹಿಡಿದರು. ಪ್ರಾಣ ಉಳಿಸಿಕೊಳ್ಳುವ ಸಲುವಾಗಿ ಯುದ್ಧರಂಗದಿಂದ ಪಲಾಯನ ಮಾಡಿದ ಮೊಘಲ ಸೈನಿಕರು ಕಾಡಿನಲ್ಲಿ ಅಲೆದಾಡಿ ಹಸಿವು ಮತ್ತು ಬಾಯಾರಿಕೆಯಿಂದ ನರಳಿ ಸತ್ತರು. ಮೊಘಲರ ಹೆಂಡತಿ ಮಕ್ಕಳನ್ನು ಸೆರೆ ಹಿಡಿಯಲಾಯಿತು. ಆ ಜನರ ಮೇಲೆ ಎಂತಹ ತೀವ್ರ ಸಂಕಷ್ಟಗಳು ಎದುರಾದವೆಂದರೆ, ಐವತ್ತು ಸಾವಿರ ಜನರ ಪೈಕಿ ಸುಮಾರು ಮೂರ್ನಾಲ್ಕು ಸಾವಿರ ಸೈನಿಕರು ಬದುಕಿ ಉಳಿದರು. ಈ ಸಫಲತೆ ಮತ್ತು ವಿಜಯದ ದೆಸೆಯಿಂದ ಘಾಜಿಮುಲ್ಕ್‌ನ ಹೆಸರಿನ ದುಂಧುಬಿ ರಾಜ್ಯದ ಎಲ್ಲೆಡೆ ಮೊಳಗತೊಡಗಿತು. ಘಾಜಿಯು ಗಂಗ್ ಮತ್ತು ಅವನ ಸಂಗಡಿಗ ಖೈದಿಗಳನ್ನು ಅಲ್ಲಾವುದ್ದೀನ್‌ನ ಸನ್ನಿಧಿಗೆ ರವಾನೆ ಮಾಡಿದ. ಅಲ್ಲಾವುದ್ದೀನನು ಸಾವಿರ ಕಂಬಗಳ ಅರಮನೆಯ ಮುಂದೆ ಅವರೆಲ್ಲರನ್ನು ಆನೆಗಳ ಪಾದಗಳ ಅಡಿಯಲ್ಲಿ ಹಾಕಿ ಕೊಲ್ಲಿಸಿದ. ಹಾಗೂ ಕೊಲೆಗೀಡಾದವರ ತಲೆಗಳಿಂದ ಬದಾಯೂನ್ ಬಾಗಿಲ ಬಳಿಯ ಕಾಡಿನಲ್ಲಿ ಒಂದು ಬುರುಜಿನ ನಿರ್ಮಾಣವನ್ನು ಮಾಡಿದ ಆ ಬುರುಜಿನ ಕುರುಹುಗಳು ಇದುವರೆಗೂ ಬಾಕಿ ಇವೆ ಎನ್ನಲಾಗಿದೆ. ಮೊಗಲರ ಸೆರೆಯಾಳು ಹೆಂಡತಿ ಮಕ್ಕಳನ್ನು ಇಡೀ ರಾಜ್ಯದಲ್ಲಿ ಗುಲಾಮರಂತೆ ಕ್ರಯವಿಕ್ರಯ ಮಾಡಲಾಯಿತು.

ಮೊಗಲರ ಮತ್ತೊಂದು ಅಕ್ರಮಣ:

ಕೆಲವು ದಿನಗಳ ನಂತರ ಇಕ್ಬಾಲ್‌ಮಂದ್ ಎಂಬ ಹೆಸರಿನ ಒಬ್ಬ ಸರ್ದಾರನು ಒಂದು ಬಲಾಢ್ಯ ಸೇನೆಯೊಂದಿಗೆ ಹಿಂದೂಸ್ತಾನದ ಕಡೆ ಬಂದ ಹಾಗೂ ಎಲ್ಲಾ ಪಟ್ಟಣಗಳನ್ನು ಲೂಟಿ ಮಾಡತೊಡಗಿದ. ಘಾಜಿ ಮುಲ್ಕ್‌ನು ಅವನನ್ನು ಎದುರಿಸಿದ. ಇಕ್ಬಾಲ್‌ನ ದುರಾದೃಷ್ಟ ಅವನ ಬೆನ್ನಿಗೇರಿತ್ತು. ಆದ್ದರಿಂದ ಅಸಂಖ್ಯ ಬೆಂಬಲಿಗರೊಡನೆ ಅವನ ಕೊಲೆಯನ್ನು ಮಾಡಲಾಯಿತು ಹಾಗೂ ಅನೇಕ ಮೊಗಲರನ್ನು ಸೆರೆಯಾಳುಗಳನ್ನಾಗಿ ದೆಹಲಿಗೆ ಕಳುಹಿಸಿಕೊಡಲಾಯಿತು. ಅವರಿಗೂ ಆನೆಯ ಪಾದವೇ ಗತಿಯಾಯಿತು ಇಕ್ಬಾಲ್‌ನ ದುರಂತವನ್ನು ಕಂಡು ಮೊಘಲರ ಸ್ಥೈರ್ಯ ಕುಂದಿತು. ಹೀಗಾಗಿ ಅವರು ಅನೇಕಾನೇಕ ವರ್ಷಗಳವರೆಗೆ ಹಿಂದೂಸ್ತಾನಿನ ಸಿರಿ ಭೂಮಿಯತ್ತ ಕಣ್ಣೆತ್ತಿಯೂ ನೋಡಲಿಲ್ಲ. ಸುಲ್ತಾನ್ ಖುತ್ಬುದ್ದೀನ ಕಾಲದ ಅವಧಿಯವರೆಗೂ ಹಿಂದೂಸ್ತಾನವು ಮೊಘಲರ ಹಲ್ಲೆ, ಲೂಟಿ ಮತ್ತು ಆಕ್ರಮಣಗಳಿಂದ ಮುಕ್ತವಾಗಿತ್ತು.

ಅಲ್ಲಾವುದ್ದೀನನ ಸಫಲತೆಯ ರಹಸ್ಯ:

ಘಾಜಿ ಮುಲ್ಕ್‌ನ ಶಾಶ್ವತ ನಿವಾಸವು ದೇವಾಲಪುರದಲ್ಲಿತ್ತು. ಆದರೆ ಅವನು ಪ್ರತಿವರ್ಷವೂ ಕಾಬೂಲ್, ಕಂದಹಾರ, ಘಜ್ನಿ ಮತ್ತು ಗರಮ್‌ಸೇರ್‌ನ ಮೇಲೆ ಯುದ್ಧ ಮಾಡಿ ಆ ದೇಶಗಳು ತಲೆ ಎತ್ತದಂತೆ ಮಾಡಿದ. ಮತ್ತು ಆ ರಾಜ್ಯಗಳಿಂದ ತೆರಿಗೆಯನ್ನು ವಸೂಲಿ ಮಾಡಿ ತನ್ನ ದೇಶಕ್ಕೆ ಮರಳುತ್ತಿದ್ದ. ಮೇಲೆ ಹೇಳಿದ ನಿರಂತರವಾದ ಸೋಲುಗಳ ದೆಸೆಯಿಂದ ಘಾಜಿ ಮುಲ್ಕ್‌ನ ಆಕ್ರಮಣಗಳಿಂದ ತಮ್ಮ ಗಡಿಯನ್ನು ರಕ್ಷಿಸಿಕೊಳ್ಳುವ ಶಕ್ತಿ ಮೊಗಲರಿಗೆ ಇರಲಿಲ್ಲ. ಮೊಘಲರ ಆಕ್ರಮಣಗಳ ಪ್ರಯತ್ನಗಳು ಕೊನೆಗೊಳ್ಳುತ್ತಿದ್ದಂತೆಯೇ ಈ ಹಿಂದೆ ಮೊಘಲರ ಸ್ವಾಧೀನದಲ್ಲಿದ್ದ ಹಿಂದೂಸ್ತಾನದ ಅನೇಕ ಪಟ್ಟಣಗಳು ಬಾದಶಹನ ಆಳ್ವಿಕೆಗೆ ಒಳಪಟ್ಟವು. ಪಿತೂರಿಗಾರರು ಮತ್ತು ಸಂಚುಕೋರರು ಹಾಗೂ ಯುದ್ದ ಕೋರರ ದುರಾಶೆಯಿಂದ ಮಾಳವವು ಎಷ್ಟೊಂದು ಮುಕ್ತಿಹೊಂದಿತೆಂದರೆ ಬರ ಹೋಗುವ ಎಲ್ಲಾ ಮಾರ್ಗಗಳು ಕೂಡ ತೆರೆದುಕೊಂಡವು. ವ್ಯಾಪಾರಿಗಳು ಮತ್ತು ಇನ್ನಿತರೆ ವೃತ್ತಿಪರರಿಗೆ ಸ್ವತಂತ್ರವಾಗಿ ತಮ್ಮ ತಮ್ಮ ವ್ಯಾಪಾರ ವಹಿವಾಟನ್ನು ಅಡೆತಡೆಯಿಲ್ಲದೆ ನಡೆಸುವ ಅವಕಾಶ ದೊರಕಿತು. ದೇಶವು ಸಂಪೂರ್ಣವಾಗಿ ಶಾಂತಿ ಮತ್ತು ನೆಮ್ಮದಿಯಿಂದ ಕಂಗೊಳಿಸತೊಡಗಿತು. ಹಾಗೂ ಅಲ್ಲಾವುದ್ದೀನ್ ಖಿಲ್ಜಿಯು ದೆಹಲಿಯಲ್ಲಿ ತನ್ನ ಸಿಂಹಾಸನದ ಮೇಲೆ ಆಸೀನನಾಗಿ ದೂರ ದೂರದ ದೇಶಗಳಲ್ಲಿ ತನ್ನ ವಿಜಯ ಪತಾಕೆಯನ್ನು ಕಾಣತೊಡಗಿದ. ಅಲ್ಲಾವುದ್ದೀನನು ಯಾವ ರಾಜ್ಯದ ಮೇಲೆ ತನ್ನ ನೋಟವನ್ನು ಬೀರಿದನೋ ಆ ರಾಜ್ಯದ ವಿಜಯಮಾಲೆ ಅವನ ಕೊರಳಿಗೆ ಬೀಳುತಿತ್ತು ಮತ್ತು ಯಾವ ದೇಶವು ಅವನಿಗೆ ಇಷ್ಟವಾಗುತ್ತಿತ್ತೋ ಅದನ್ನು ಯಾವುದೇ ಶ್ರಮವಿಲ್ಲದೆ ತನ್ನ ಸ್ವಾಧೀನಕ್ಕೆ ಪಡೆದುಕೊಳ್ಳುತ್ತಿದ್ದ. ಅಲ್ಲಾವುದ್ದೀನನು ಹೇಗೆ ತನ್ನ ನಿರ್ಧಾರ ಮತ್ತು ಉದ್ದೇಶಗಳಲ್ಲಿ ಸಫಲತೆಯನ್ನು ಪಡೆದ ಮತ್ತು ವಿವಿಧ ಯುದ್ದಗಳಲ್ಲಿ ಯಾವ ಯೋಗಬಲದಿಂದ ಅದೃಷ್ಟಲಕ್ಷ್ಮಿಯು ಅವನಿಗೆ ಒಲಿದಳೋ ಇದನ್ನು ಕಂಡು ಅನೇಕ ಜನರು ಅವನಲ್ಲಿ ಪವಾಡ ಸದೃಶ ಶಕ್ತಿ ಇದೆಯೆಂದು ನಂಬಿ ಅವನಿಗೆ ವಿಧೇಯರಾದರು. ಹಾಗೂ ಅವನ ಇರಾದೆಗಳಿಗೆ ದೈವ ಪ್ರೇರಣೆಯ ಬೆಂಬಲವಿದೆ ಎಂದು ಭಾವಿಸತೊಡಗಿದರು. ಅನೇಕ ಜನರು ಬಾದಶಹನ ಎಲ್ಲಾ ಸಫಲತೆ ಮತ್ತು ವಿಜಯಗಳನ್ನು ಬಾದಶಹನ ಬದುಕಿನ ಪರೀಕ್ಷೆ ಎಂದು ಪರಿಗಣಿಸಿದರು. ಬಹುತೇಕ ಜನರು ಅವನ ಗೆಲುವಿನ ಸಿದ್ದಿಯನ್ನು ಹಜರತ್ ಸುಲ್ತಾನುಲ್ ಮಷಾಯಿಕ್ ನಿಜಾಮುದ್ದೀನ್ ಮೆಹಬೂಬ್ ಇಲಾಹಿ ರೆಹಮತುಲ್ಲಾ, ಅಲೈಹಿಯವರ ಕೃಪಾಕಟಾಕ್ಷದ ಬಲ ಎಂದು ನಂಬಿದರು.

ದಖ್ಖನ್ನಿನ ಮೇಲೆ ಆಕ್ರಮಣ:

ದೇವಗಡದ ರಾಜನಾದ ರಾಜ ರಾಮದೇವನು ಮೂರು ವರ್ಷಗಳಿಂದ ಕಪ್ಪ ಕಾಣಿಕೆಯನ್ನು ಸಲ್ಲಿಸದೆ ತಪ್ಪಿಸಿಕೊಂಡಿದ್ದ. ಮತ್ತು ಅವನ ನಡವಳಿಕೆ ಹಾಗೂ ಕೃತ್ಯಗಳ

ದೆಸೆಯಿಂದ ವಿದ್ರೋಹದ ವಾಸನೆ ಬರತೊಡಗಿತು .ಮಲ್ಲಿಕ್ ನಾಯಬ್ ಕಾಫೂರ್ ಹಜಾರ್ ದೀನಾರಿಯನ್ನು ಅನೇಕ ಖ್ಯಾತವಿಖ್ಯಾತ ಸರ್ದಾರರ ಜೊತೆಯಲ್ಲಿ ಅಲ್ಲಾವುದ್ದೀನನು ದಕ್ಷಿಣದ ಭೂಭಾಗದ ವಿಜಯ ಪ್ರಾಪ್ತಿಯ ಸಲುವಾಗಿ ಕಳುಹಿಸಿಕೊಟ್ಟ. ಈ ಭಾಗವನ್ನು ಹಿಂದೂಸ್ತಾನದ ಜನರು ದಖ್ಖನ್ ಎಂದು ಕರೆಯುತ್ತಿದ್ದರು. ಬಾದಶಹನು ಮಲ್ಲಿಕ್‌ನನ್ನು ಪ್ರಾಣಕ್ಕಿಂತ ಪ್ರಿಯವಾಗಿ ಪ್ರೀತಿಸುತ್ತಿದ್ದ ಹಾಗೂ ಅವನು ಬಾದಶಹನಿಗೆ ತುಂಬಾ ಹತ್ತಿರದವನಾಗಿದ್ದ. ಹೀಗಾಗಿ ಅವನೊಡನೆ ಯುದ್ದ ರಂಗಕ್ಕೆ ಹೊರಟಿದ್ದ ಉಳಿದ ಸರ್ದಾರರ ಎದುರಿನಲ್ಲಿ, ವಿಶಿಷ್ಟ ಮತ್ತು ಎದ್ದು ಕಾಣುವಂತೆ ಅವನಿಗೆ ವಿಶೇಷ ಸ್ಥಾನಮಾನವನ್ನು ನೀಡುವುದು ಅಗತ್ಯವೆಂದು ಬಾದಶಹನಿಗೆ ಅನ್ನಿಸಿತು. ಹೀಗೆ ಮಾಡುವುದರಿಂದ ಮಲ್ಲಿಕ್ ನಾಯಬನ ಸಂಗಡಿಗರು ಅವನಿಂದ ಪ್ರಭಾವಿತನಾಗಿ ಅವನ ಆದೇಶಗಳನ್ನು ಚಾಚುತಪ್ಪದೆ ಪಾಲಿಸುತ್ತಾರೆ ಎಂಬ ಈ ಆಲೋಚನೆಯಿಂದ ಅಲ್ಲಾವುದ್ದೀನನು ಬಾದಶಹನಿಗೆ ಮಾತ್ರ ಮೀಸಲಾಗಿದ್ದ ಛತ್ರ ಚಾಮರ ಮೊದಲಾದ ರಾಜ ಲಾಂಛನಗಳನ್ನು ನೀಡಿದ ಹಾಗೂ ಪ್ರಯಾಣದ ಸಂದರ್ಭದಲ್ಲಿ ಪ್ರತಿಯೊಬ್ಬ ಸರ್ದಾರ ಮತ್ತು ದರ್ಬಾರಿಯು ಪ್ರತಿನಿತ್ಯ ಮಲ್ಲಿಕ್ ನಾಯಬ್‌ನ ಸನ್ನಿಧಿಯಲ್ಲಿ ಹಾಜರಾಗಿ ಅವನಿಗೆ ಗೌರವವನ್ನು ಅರ್ಪಿಸಬೇಕೆಂತಲೂ ಆದೇಶ ಮಾಡಿದ. ಅಷ್ಟೇ ಅಲ್ಲದೆ ಎಲ್ಲಾ ಕೆಲಸ ಕಾರ್ಯಗಳು ಕೂಡ ಮಲ್ಲಿಕ್‌ನ ಆಜ್ಞೆಯ ಮೇರೆಗೆ ಜಾರಿಯಾಗತಕ್ಕದೆಂದು ಆದೇಶವನ್ನು ಮಾಡಿದ. ಖ್ವಾಜಾ ಹಾಜಿ ಎಂಬ ಅತ್ಯಂತ ಸಂಭಾವಿತ ಮತ್ತು ಪವಿತ್ರಾತ್ಮಹೊಂದಿದ್ದ ಪ್ರಭಾವೀ ವ್ಯಕ್ತಿಯೊಬ್ಬ ಬಾದಶಹನ ಪ್ರತಿನಿಧಿಯಾಗಿದ್ದ ಹಾಗೂ ಅವನು ಹಣಕಾಸಿನ ಮೇಲ್ವಿಚಾರಣೆಯನ್ನು ಮಾಡುತ್ತಿದ್ದ. ಅವನನ್ನು ಮಲ್ಲಿಕ್‌ನಾಯಬ್‌ನ ಜೊತೆಯಲ್ಲಿ ಕಳಿಸಿಕೊಡಲಾಯಿತು. ಖ್ವಾಜಾ ಹಾಜಿಗೆ ಯುದ್ಧ ಸಂಪತ್ತಿನ ರಕ್ಷಣೆ ಮತ್ತು ಸೈನ್ಯದ ಮೇಲ್ವಿಚಾರಣೆಯ ಕರ್ತವ್ಯವನ್ನು ವಹಿಸಿಕೊಡಲಾಯಿತು. ಒಟ್ಟಿನಲ್ಲಿ ಅಲ್ಲಾವುದ್ದೀನನು ಅಪಾರ ಸೈನ್ಯದೊಡನೆ ಅವರಿಬ್ಬರನ್ನು ಕೂಡ ಅತ್ಯಂತ ಸಡಗರ ಮತ್ತು ಸಂಭ್ರಮಗಳಿಂದ ಬೀಳ್ಕೊಟ್ಟ. "ತಾರೀಕ್-ಎ-ಜಹಾನ್ ಆರಾ"ದ ಗ್ರಂಥಕರ್ತ ಖಾಜಿ ಅಹಮದ್ ಗಫಾರಿಯ ಉಲ್ಲೇಖದ ಪ್ರಕಾರ ಅಲ್ಲಾವುದ್ದೀನನು ಮಲ್ಲಿಕ್ ನಾಯಬ್ ಮತ್ತು ಖ್ವಾಜಾ ಹಾಜಿಯನ್ನು ಹಿಜರಿ ಶಕೆ ೮೦೬ನೇ ಆರಂಭದಲ್ಲಿ ಒಂದು ಲಕ್ಷ ಕುದುರೆ ಸವಾರರೊಡನೆ ಬೀಳ್ಕೊಟ್ಟ. ಹಾಗೂ ಮಾಳವದ ರಾಜನಾದ ಐನುಲ್‌ಮುಲ್ಕ್ ಮುಲ್ತಾನಿ ಮತ್ತು ಗುಜರಾತ್‌ನ ರಾಜನಾದ ಅಲಫ್‌ಖಾನ್‌ನ ಹೆಸರಿಗೆ ಬಾದಶಹನು ಪತ್ರಗಳನ್ನು ಕಳಿಸಿ, ಮಲ್ಲಿಕ್ ನಾಯಬ್‌ನಿಗೆ ಎಲ್ಲಾ ವಿಧದಲ್ಲಿಯೂ ನೆರವನ್ನು ನೀಡಬೇಕೆಂದು ಆಜ್ಞೆ ಮಾಡಿದ. ಹಾಗೂ ಅವನ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸಬೇಕೆಂತಲೂ ಮತ್ತು ಮಲ್ಲಿಕ್ ನಾಯಬ್ ಮತ್ತು ಅವನ ಸಂಗಡಿಗರಿಗೆ ಆಕ್ಷೇಪವುಂಟಾಗುವಂತಹ ಯಾವುದೇ ಕೆಲಸವನ್ನು ಮಾಡ ಬಾರದೆಂತಲೂ ಆಜ್ಞೆ ಮಾಡಿದ.

ದೇವಲದಿಯ ಕಥೆ:

ಇದೇ ದಿನಗಳಲ್ಲಿ ಅಸದೃಶ ರೂಪವತಿ ಮತ್ತು ಬುದ್ಧಿವಂತೆಯಾಗಿದ್ದ ಕಮಲಾದೇವಿಯು ಬಾದಶಹನೊಂದಿಗೆ ನುಡಿದಳು,

"ನನ್ನ ಇಬ್ಬರು ಪುತ್ರಿಯರು ನನ್ನೊಡನೆ ರಾಜ ರಾಯೆಕರಣ್‌ನ ಅರಮನೆಯಲ್ಲಿ ಪಾಲನೆಪೋಷಣೆಯನ್ನು ಪಡೆಯುತ್ತಿದ್ದರು ನಾನಂತೂ ಹುಜೂರ್‌ರವರ ಅಂತಃಪುರವನ್ನು ಸೇರಿಕೊಂಡೆ. ಆದರೆ ನನ್ನ ಇಬ್ಬರು ಪುತ್ರಿಯರು ರಾಯೆಕರಣ್‌ನ ಅರಮನೆಯಲ್ಲಿಯೇ ಇದ್ದಾರೆ. ನನ್ನ ಹಿರಿಯ ಪುತ್ರಿಯು ಮರಣ ಹೊಂದಿದ್ದಾಳೆಂದು ತಿಳಿದು ಬಂದಿದೆ. ಆದರೆ ನನ್ನ ಕಿರಿಯ ಪುತ್ರಿಯಾದ ದೇವಲದಿಯನ್ನು ನಾನು ಬಿಟ್ಟು ಬಂದಾಗ ಆಕೆಯು ನಾಲ್ಕು ವರ್ಷದವಳಾಗಿದ್ದಳು ಮತ್ತು ಆಕೆಯು ಜೀವಂತವಾಗಿದ್ದಾಳೆ." ಹೀಗೆಂದು ಕಮಲಾದೇವಿಯು ತನ್ನ ಪುತ್ರಿಯ ವಿರಹ ಯಾತನೆಯನ್ನು ಅಲ್ಲಾವುದ್ದೀನ್‌ನೊಡನೆ ತೋಡಿಕೊಂಡು ಮತ್ತೆ ನುಡಿದಳು, "ಯಾವ ರೀತಿಯಲ್ಲಾದರೂ ನನ್ನ ಮಗಳಾದ ದೇವಲದಿಯನ್ನು ತಂದು ನನಗೆ ಒಪ್ಪಿಸಿ. ಆಕೆಯನ್ನು ನೋಡುವುದರಿಂದಲೇ ನನ್ನ ಕಣ್ಣಿಗೆ ಬೆಳಕು ಮೂಡುತ್ತದೆ." ಕಮಲಾದೇವಿಯ ಈ ಕೋರಿಕೆಯನ್ನು ಕೇಳಿದೊಡನೆಯೇ ಅಲ್ಲಾವುದ್ದೀನನು ಮಲ್ಲಿಕ್ ನಾಯಬ್ ಮತ್ತು ಅಲಫ್‌ಖಾನ್‌ಗೆ ಆಜ್ಞೆಯನ್ನು ಮಾಡಿ ದಕ್ಷಿಣದ ಖ್ಯಾತ ದೊರೆಯಾದ ರಾಯೆಕರಣ್‌ನ ಮಗಳಾದ ದೇವಲದಿಯನ್ನು ತತ್‌ಕ್ಷಣವೇ ತನ್ನ ಬಳಿ ಕಳಿಸತಕ್ಕದ್ದು. ಈ ನಿಟ್ಟಿನಲ್ಲಿ ಮೃದು ಮಾತಿನ ಪ್ರಯೋಗವಾದರೂ ಸರಿ ಅಥವಾ ಯಾವುದೇ ಕಠಿಣ ಕ್ರಮವನ್ನಾದರೂ ನಡೆಸಬಹುದು, ಆದರೆ ಈ ಕೆಲಸವು ಸಫಲವಾಗತಕ್ಕದ್ದು" ಎಂಬ ಬಾದಶಹನ ಆಜ್ಞೆಯನ್ನು ಕೇಳಿದ ಕೂಡಲೇ ಮಲ್ಲಿಕ್ ನಾಯಬ್‌ನು ದಖ್ಖನ್ನಿನಿಂದ ಮಾಳವವನ್ನು ತಲುಪಿದ. ಮತ್ತು ಅವನು ಬಾದಶಹನ ಸಂದೇಶವನ್ನು ರಾಮ್‌ದೇವ್, ರಾಜ್‌ಕರಣ್ ಮತ್ತು ಇನ್ನಿತರೆ ದಕ್ಷಿಣದ ರಾಜರ ಹೆಸರಿಗೆ ಕಳಿಸಿದ "ಮುಲಹಕಾತ್"ನ ಬರಹಗಳ ಮೂಲಕ ತಿಳಿದು ಬರುವುದೇನೆಂದರೆ ನದರ್‌ಬಾರ್ ಮತ್ತು ಸುಲ್ತಾನ್‌ಪುರ ಕಸಬಾಗಳು ಆ ಕಾಲದಲ್ಲಿಯೇ ಜನವಸತಿಯಿಂದ ಕೂಡಿದ್ದವು ಎಂದು ಮೇಲೆ ಹೇಳಿದ ರಾಜರುಗಳು ಬಾದಶಹನ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದರು. ಮಲ್ಲಿಕ್ ನಾಯಬ್‌ನು ಸುಲ್ತಾನ್‌ಪುರದಿಂದ ಹೊರಟು ದಕ್ಷಿಣದ ಗಡಿಯನ್ನು ತಲುಪಿದ ಮತ್ತು ಅಲಫ್‌ಖಾನ್ ಕೂಡ ಗುಜರಾತ್‌ನಿಂದ ಒಂದು ಬಲಾಢ್ಯ ಸೈನ್ಯದೊಂದಿಗೆ ಬಕಲಾನ್‌ದ ಕಡೆ ಹೊರಟ ರಾಜ ರಾಯೆಕರಣ್ ತನ್ನ ಪ್ರದೇಶದಲ್ಲಿ ಬಲಿಷ್ಠ ಸೈನ್ಯವನ್ನು ನೇಮಿಸಿ ಅನೇಕ ರಕ್ಷಣಾತ್ಮಕ ಕ್ರಮಗಳನ್ನು ಕೂಡ ಕೈಗೊಂಡಿದ್ದ. ಅಲಫ್‌ಖಾನ್ ಮತ್ತು ರಾಜಕರಣ್‌ನ ನಡುವೆ ಯುದ್ಧ ನಡೆಯಿತು ಹಾಗೂ ರಾಜನು ಪ್ರತಿಯೊಂದು ಯುದ್ಧದಲ್ಲಿಯೂ ಪರಾಕ್ರಮದಿಂದ ಹೋರಾಡಿದ ಮತ್ತು ಪ್ರತಿಸಾರಿಯೂ ಕೂಡ ಸೋಲನ್ನೊಪ್ಪದೆ ಕಾದಾಡಿದ. ರಾಮದೇವನ ಮಗ ಮಂಗಳದೇವನು ದೇವಲದಿಯನ್ನು

ಪ್ರೇಮಿಸುತ್ತಿದ್ದ ಹಾಗೂ ಆಕೆಯನ್ನು ಮದುವೆಯಾಗಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದ. ಅವನು ಮರಾಠ ಜಾತಿಯವನಾಗಿದ್ದರಿಂದ ರಾಮದೇವನಿಗೆ ರಜಪೂತ ವಂಶದ ವಧುವು ತನ್ನ ಮನೆಯ ಸೊಸೆಯಾಗಿ ಬರುವುದು ಇಷ್ಟವಿರಲಿಲ್ಲ. ಹೀಗಾಗಿ ಅವನು ಮಂಗಳದೇವನ ಕೋರಿಕೆಗೆ ಸ್ಪಷ್ಟ ಉತ್ತರವನ್ನು ನೀಡುತ್ತಿರಲಿಲ್ಲ. ಮಂಗಳದೇವನು ಈ ಎಲ್ಲಾ ಗೊಂದಲದ ಲಾಭವನ್ನು ಪಡೆದುಕೊಳ್ಳಬೇಕೆಂದು ನಿಶ್ಚಯಿಸಿ ತನ್ನ ತಂದೆಯ ಅನುಮತಿಯನ್ನು ಪಡೆಯದೇ ತನ್ನ ಸಹೋದರನಾದ ಭೀಮದೇವನೊಡನೆ ಅಮೂಲ್ಯವಾದ ಉಡುಗೊರೆ ಮತ್ತು ಕಾಣಿಕೆಗಳೊಡನೆ ರಾಜಕರಣ್‌ನ ಬಳಿ ಕಳುಹಿಸಿದ ಮತ್ತು ಒಂದು ಸಂದೇಶವನ್ನು ನೀಡಿದ, "ಮುಸಲ್ಮಾನರ ಮತ್ತು ಹಿಂದೂಗಳ ನಡುವೆ ಜಾತಿಯ ಹಿನ್ನೆಲೆಯಲ್ಲಿ ಮೂಡಿರುವ ದ್ವೇಷವು ಸುಸ್ಪಷ್ಟವಾಗಿದೆ. ಆದ್ದರಿಂದ ಈ ಎಲ್ಲಾ ಕ್ಷೋಭೆಗೆ ಕಾರಣಕರ್ತಳಾಗಿರುವ ನಿಮ್ಮ ಮಗಳನ್ನು ನನ್ನೊಡನೆ ಮದುವೆ ಮಾಡಿ ಕನ್ಯಾದಾನವನ್ನು ಮಾಡಿ. ಹೀಗಾದಲ್ಲಿ ಮುಸಲ್ಮಾನರು ಅಸಹಾಯಕರಾಗಿ ಯುದ್ಧವನ್ನು ತ್ಯಜಿಸುತ್ತಾರೆ ಮತ್ತು ತಮ್ಮ ದೇಶಕ್ಕೆ ಮರಳಿ ಹೋಗುತ್ತಾರೆ" ರಾಯೆಕರಣನು ರಾಮ್‌ದೇವನ ನೆರವಿನ ಆಕಾಂಕ್ಷಿಯಾಗಿದ್ದ. ಹೀಗಾಗಿ ಅವನು ತೀರಾ ಅಸಹಾಯಕನಾಗಿ ಮಂಗಳದೇವನ ಕೋರಿಕೆಯನ್ನು ಒಪ್ಪಿಕೊಂಡ ಹಾಗೂ ದೇವಲದಿಯಂತಹ ದೇವಕನ್ಯೆಯನ್ನು ಒಬ್ಬ ರಾಕ್ಷಸನಿಗೆ ಮದುವೆ ಮಾಡಿಕೊಡಲು ಸನ್ನದ್ಧನಾದ. ಹಾಗು ತನ್ನ ಮಗಳನ್ನು ಭೀಮದೇವನೊಡನೆ ದೇವಗಡಕ್ಕೆ ಕಳುಹಿಸಿಕೊಡಲು ವ್ಯವಸ್ಥೆ ಮಾಡಿದ. ಈ ಎಲ್ಲಾ ವಿಷಯವು ಅಲಫ್‌ಖಾನ್‌ಗೆ ತಿಳಿದುಬಂದ ನಂತರ ಅವನು ಅಲ್ಲಾವುದ್ದೀನನ ಭಯದಿಂದ ಥರಥರ ನಡುಗತೊಡಗಿದ. ಅವನು ಕೂಡಲೇ ಸಲಹಾಸಮಿತಿಯ ಸಭೆಯನ್ನು ಕರೆದು ತನ್ನ ಸಂಗಡಿಗರೊಡನೆ ನುಡಿದ, "ದೇವಲದಿ ಇನ್ನೂ ಇಲ್ಲಿಯೇ ಇದ್ದಾಳೆ ಅವಳನ್ನು ಇನ್ನೆಲ್ಲಿಯೂ ಸ್ಥಳಾಂತರಿಸಿಲ್ಲ. ನನ್ನ ಸಲಹೆ ಏನೆಂದರೆ, ನಾವುಗಳು ನಮ್ಮ ಸಂಪೂರ್ಣ ಶಕ್ತಿಸಾಮರ್ಥ್ಯವನ್ನು ಒರೆಗೆ ಹಚ್ಚಿ ಆ ಸುಂದರಿಯನ್ನು ಹಿಂದೂಗಳಿಂದ ಕಸಿದುಕೊಳ್ಳೋಣ. ನಾವು ಹೀಗೆ ಮಾಡದೆ ಇದ್ದಲ್ಲಿ ನಮ್ಮ ಮೋರೆಯನ್ನು ಬಾದಶಹನಿಗೆ ತೋರಿಸದಂತೆ ಈ ಸ್ವರ್ಣಭೂಮಿಯಲ್ಲಿ ನಮ್ಮ ರಕ್ತ ಸಿಂಚನವನ್ನು ಮಾಡಬೇಕಾಗಿದೆ."

ರಾಜ ರಾಯೆಕರಣ್‌ನೊಡನೆ ಯುದ್ದ:

ಎಲ್ಲಾ ಸರ್ದಾರರು ಸೇರಿ ಅಲಫ್‌ಖಾನ್‌ನ ಈ ಅಭಿಪ್ರಾಯದೊಂದಿಗೆ ಸಹಮತವನ್ನು ಸೂಚಿಸಿದರು ಮತ್ತು ಅವರೆಲ್ಲಾ ದೈವಭಕ್ತರು ಒಂದು "ಅಪ್ರತಿಮ ಸುಂದರಿಯ" ಸಲುವಾಗಿ ಸಾವು ಬದುಕಿನ ಹೋರಾಟ ನಡೆಸಲು ಸಿದ್ದರಾದರು. ಅಲಫ್‌ಖಾನ್ ಮತ್ತು ಅವನ ಎಲ್ಲಾ ಸಂಗಡಿಗರು ಸೇರಿ ಕೋಹಿಸ್ಥಾನವನ್ನು ಪ್ರವೇಶಿಸಿದರು ಮತ್ತು ಹಿಂದೂಗಳೊಡನೆ ಯುದ್ದ ಮಾಡಲಾರಂಭಿಸಿದರು. ಆ ಯುದ್ದದಲ್ಲಿ ರಾಯೆಕರಣ್‌ಗೆ ಸೋಲುಂಟಾಯಿತು ಮತ್ತು ಅವನು ಯುದ್ದಭೂಮಿಯಿಂದ

ದೇವಗಡದತ್ತ ಪರಾರಿಯಾದ. ಅಲಫ್‌ಖಾನನು ಅವನ ಎಲ್ಲಾ ಒಡವೆ ವಸ್ತುಗಳನ್ನು ಆನೆ ಮೊದಲಾದವುಗಳನ್ನು ತನ್ನ ಹತೋಟಿಗೆ ಪಡೆದ ಮತ್ತು ಅವನನ್ನು ಬೆನ್ನಟ್ಟಿದ. ಅಲಫ್‌ಖಾನ್‌ನು ಕಾಡುಮೇಡುಗಳನ್ನು ಕ್ರಮಿಸುತ್ತ ಸಿಡಿಲಿನ ವೇಗದಲ್ಲಿ ರಾಯೆಕರಣ್‌ನನ್ನು ಹಿಂಬಾಲಿಸುತ್ತಿದ್ದ ಹಾಗೂ ಒಂದು ದಿನದ ಪ್ರಯಾಣದ ನಂತರ ದೇವಗಡವನ್ನು ತಲುಪಿದ. ಅಲ್ಲಿ ತಲುಪಿದ ನಂತರ ಕೂಡ ಅವನಿಗೆ ರಾಯೆದೇವ ಮತ್ತು ದೇವಲದಿಯ ಯಾವುದೇ ಸುದ್ದಿ ಸಿಗಲಿಲ್ಲ.

ದೇವಲದಿಯ ಭೇಟಿ:

ಅಲಫ್‌ಖಾನ್ ತೀರಾ ನಿರಾಶೆ ಹೊಂದಿದ, ಆದರೆ ಆಕಸ್ಮಿಕವಾಗಿ ಆ ನಿರಾಶೆಯ ಅಂಧಕಾರದ ಅಂಗಳದಲ್ಲಿ ಅವನಿಗೆ ಭರವಸೆಯ ಬೆಳಕು ಮೂಡಿತು ಹಾಗೂ ದೇವಲದಿಯು ಒಂದು ಅನಿರೀಕ್ಷಿತ ಘಟನೆಯ ಮೂಲಕ ಅಲಫ್‌ಖಾನ್‌ನ ಕೈ ಸೇರಿದಳು. ಇದನ್ನು ಕೂಡ ಜನತೆಯು ಅಲ್ಲಾವುದ್ದೀನನ ದೈವೀ ಶಕ್ತಿಯ ಪವಾಡ ಎಂದು ಪರಿಭಾವಿಸಿದರು ಹಾಗೂ ಅಲ್ಲಾವುದ್ದೀನನ ಅಭ್ಯುದಯಕ್ಕಾಗಿ ಇನ್ನಷ್ಟು ಪ್ರಾರ್ಥನೆಗಳನ್ನು ಸಲ್ಲಿಸತೊಡಗಿದರು. ಆ ಕಥೆಯ ಮುಂದಿನ ಹಂತವೆಂದರೆ ವಿಶ್ವ ಪ್ರಯತ್ನ ಪಟ್ಟ ಅಲಫ್‌ಖಾನನ ಯೋಜನೆಯು ವಿಫಲಗೊಂಡು ರಾಯೆಕರಣ್ ಮತ್ತು ದೇವಲದಿ ಅವನಿಂದ ಕಣ್ಮರೆಯಾದ ಘಟನೆ ನಡೆದ ನಂತರ ಎರಡು ದಿನಗಳವರೆಗೆ ಅವನು ನದಿಯ ತೀರದಲ್ಲಿ ಬಿಡಾರ ಹೂಡಿದ. ಇಸ್ಲಾಮಿ ಸೈನ್ಯದ ಕೆಲವು ಸಿಪಾಯಿಗಳಿಗೆ ಎಲ್ಲೋರದ ವಿಹಾರದ ಆಸೆಯಾಯಿತು. ಸುಮಾರು ಮೂರರಿಂದ ನಾಲ್ಕು ಸಾವಿರದವರೆಗಿನ ಸಿಪಾಯಿಗಳು ಅಲಫ್‌ಖಾನ್‌ನಿಂದ ಅನುಮತಿಯನ್ನು ಪಡೆದು, ಆ ವೈಶಿಷ್ಟ್ಯಪೂರ್ಣ ತಾಣವನ್ನು ನೋಡಲು ಹೋದರು. ಆ ಸೈನಿಕರಿಗೆ ದೂರದಿಂದ ದಖ್ಖನ್ನಿನ ಒಂದು ಸೈನ್ಯ ಕಂಡು ಬಂದಿತು. ಬಹುಶಃ ಅದು ದೇವರಾಯನ ಸೈನ್ಯದ ಒಂದು ತುಕಡಿಯಾಗಿದ್ದು ತಮ್ಮ ಮೇಲೆ ಯುದ್ದ ಮಾಡಲು ಬರುತ್ತಿದ್ದಾರೆ ಎಂದು ಅವರು ಊಹಿಸಿದರು. ಹಾಗೂ ಮುಸ್ಲಿಮರ ಸೈನಿಕರು ಕೂಡಲೇ ಒಟ್ಟುಗೂಡಿ ಶತ್ರುಗಳ ಮೇಲೆ ಆಕ್ರಮಣ ಮಾಡಲು ಸನ್ನದ್ಧರಾದರು. ಆದರೆ ವಿಚಿತ್ರ ಸಂಯೋಗದಿಂದ ಆ ಸೈನ್ಯವು ಭೀಮದೇವನ ಸೈನ್ಯವಾಗಿದ್ದು ರಾಯೆಕರಣ್‌ನಿಂದ ದೇವಲದಿಯನ್ನು ಜೊತೆಯಲ್ಲಿ ಕರೆದುಕೊಂಡು ಅವರು ದೇವಗಡಕ್ಕೆ ಹೋಗುತ್ತಿದ್ದರು.

ಉಭಯ ಸೈನ್ಯಗಳು ಪರಸ್ಪರ ಆವೇಶದಿಂದ ಹೋರಾಡಿದರು. ಆ ಯುದ್ಧದಲ್ಲಿ ಮುಸ್ಲಿಮರ ಸೈನ್ಯದ ಕೈಮೇಲಾಯಿತು ಮತ್ತು ಭೀಮದೇವನ ಸೈನ್ಯವು ಯುದ್ಧ ರಂಗದಿಂದ ಪಲಾಯನ ಮಾಡಿತು. ಅದೇ ಸಂದರ್ಭದಲ್ಲಿ ದೇವಲದಿ ಸವಾರಿ ಮಾಡುತ್ತಿದ್ದ ಕುದುರೆಗೆ ಒಂದು ಬಾಣ ನಾಟಿತು ಆ ಕುದುರೆಯು ನಿಶ್ಶಕ್ತಿಗೊಂಡು ನೆಲಕ್ಕೆ ಕುಸಿಯಿತು. ಮುಸ್ಲಿಮ್ ಸೈನಿಕರ ಒಂದು ತುಕಡಿಯು ಆ ಕುದುರೆಯ ಬಳಿ ಹೋಗಿ ದೇವಲದಿಯನ್ನು ಹುಡುಕಲಾರಂಭಿಸಿದರು. ಈ ಘಟನೆಯನ್ನು ವೀಕ್ಷಿಸುತ್ತಿದ್ದ

ಒಬ್ಬ ಸೇವಕಿಯು ಭಯಗ್ರಸ್ತಳಾಗಿ ಎತ್ತರದ ಧ್ವನಿಯಲ್ಲಿ ಕೂಗಾಡತೊಡಗಿದಳು. "ಅವಳಿಗೆ ಗೌರವ ಕೊಡಿ. ಆಕೆ ರಾಣಿ ದೇವಲದಿಯಾಗಿದ್ದಾಳೆ ಮತ್ತು ಆಕೆಯನ್ನು ನಿಮ್ಮ ಸರ್ದಾರನ ಬಳಿ ಕರೆದುಕೊಂಡು ಹೋಗಿ" ದೇವಲದಿಯ ಹೆಸರನ್ನು ಕೇಳಿದ ಕೂಡಲೇ ಅವರು ಆಕೆಯನ್ನು ಸರ್ದಾರ್ ಅಲಫ್‌ಖಾನ್‌ನ ಬಳಿಗೆ ಕರೆದುಕೊಂಡು ಹೋದರು. ದೇವಲದಿಯನ್ನು ಕಂಡ ಅಲಫ್‌ಖಾನ್‌ನ ಸಂತೋಷಕ್ಕೆ ಪಾರವೇ ಇರಲಿಲ್ಲ ಅವನು ತನ್ನ ದೈವವನ್ನು ನೆನೆಸುತ್ತಾ ತತ್‌ಕ್ಷಣವೇ ಗುಜರಾತ್‌ನತ್ತ ಮುನ್ನಡೆದ.

ಅಲಫ್‌ಖಾನ್‌ನು ದೇವಲದಿಯನ್ನು ಒಂದು ಪಲ್ಲಕ್ಕಿಯಲ್ಲಿ ಕೂರಿಸಿ ದೆಹಲಿಗೆ ಕಳಿಸಿಕೊಟ್ಟ . ಹಿಜರಿ ಶಕೆ ೮೦೬ನೇ ಇಸವಿಯ ಕೊನೆಯ ಭಾಗದಲ್ಲಿ ದೇವಲದಿ ಅಲ್ಲಾವುದ್ದೀನ್‌ನ ಬಳಿ ತಲುಪಿದಳು. ದೇವಲದಿಯ ತಾಯಿಯಾದ ಕಮಲಾದೇವಿ ತನ್ನ ಮಗಳನ್ನು ಕಂಡು ಹಿಗ್ಗಿದಳು. ಖಿಜರ್‌ಖಾನ್‌ನ ಭಾವಾವೇಗವನ್ನು ಕಂಡ ಅಲ್ಲಾವುದ್ದೀನನಿಗೆ ಆತನು ದೇವಲದಿಯ ಸೌಂದರ್ಯದ ಆರಾಧಕನಾಗಿದ್ದಾನೆಂಬ ವಿಷಯವು ಖಚಿತವಾಯಿತು. ಆದ್ದರಿಂದ ಅವನು ನ್ಯಾಯಪರತೆ ದೃಷ್ಟಿಯಿಂದ ದೇವಲದಿಯನ್ನು ಅವನಿಗೆ ಒಪ್ಪಿಸಿದ. ತಮ್ಮ ಪ್ರಖ್ಯಾತ ಕಾವ್ಯವಾದ "ಖಿಜರ್‌ಖಾನಿ ವ ದೇವಲದಿ" ಎನ್ನುವ ಗ್ರಂಥದಲ್ಲಿ ಅಮೀರ್‌ಖುಸ್ರುರವರು ಅವರಿಬ್ಬರ ಪ್ರೇಮಗಾಥೆಯನ್ನು ಸವಿವರವಾಗಿ ದಾಖಲಿಸಿದ್ದಾರೆ. ಓದುಗರು ಆ ಗ್ರಂಥವನ್ನು ಆಸ್ವಾದಿಸಬಹುದಾಗಿದೆ.

ದೇವಗಡದ ಗೆಲುವು:

ದಖ್ಖನ್ನ್ ತಲುಪಿದ ಮುಲ್ಕ್ ನಾಯಬನು ಆ ಸ್ಥಳದ ಆಡಳಿತವನ್ನು ತನ್ನ ಕೈವಶ ಪಡಿಸಿಕೊಂಡನು ಹಾಗೂ ಅತ್ಯಂತ ಸೂಕ್ಷ್ಮತೆಯಿಂದ ವಿವಿಧ ಸಮಸ್ಯೆಗಳನ್ನು ಬಗೆಹರಿಸಿ ಸರ್ವರಿಗೂ ನೆಮ್ಮದಿಯ ವಾತಾವರಣವನ್ನು ಮೂಡಿಸಿದನು. ಮಲ್ಲಿಕ್ ನಾಯಬನು ಉತ್ತಮ ಮಾರ್ಗೋಪಾಯದಿಂದ ಸಕ್ರಿಯನಾಗಿ ತನ್ನ ದಾನ ಧರ್ಮಾದಿಗಳ ಮೂಲಕ ಪ್ರತಿಯೊಬ್ಬನ ಬೇಡಿಕೆಯನ್ನು ಪೂರೈಸಿದ. ಈ ರೀತಿಯಲ್ಲಿ ಅವನು ಸೈನ್ಯ ಮತ್ತು ಜನತೆ ಉಭಯತ್ರರನ್ನು ಸಂತೃಪ್ತಿ ಪಡಿಸಿದ. ಅವನು ಆಡಳಿತದಲ್ಲಿ ಸುವ್ಯವಸ್ಥೆಯನ್ನು ತಂದು ಆ ಬಗ್ಗೆ ಸಂಪೂರ್ಣವಾಗಿ ತೃಪ್ತಿಯಾದ ನಂತರ ಅವನು ಮರಾಠವಾಡವನ್ನು ತನ್ನ ಸರ್ದಾರರಲ್ಲಿ ವಿಂಗಡನೆ ಮಾಡಿದ ಹಾಗು ಅವನು ದೌಲತಾಬಾದ್ ಎಂಬ ಹೆಸರಿನಿಂದ ಈಗ ಪ್ರಚಲಿತವಾಗಿರುವ ದೇವಗಡ ಕೋಟೆಯನ್ನು ತನ್ನ ವಸಪಡಿಸಿಕೊಳ್ಳುವ ಸಲುವಾಗಿ ಮುನ್ನಡೆದ. ದೇವಗಡದ ರಾಜನಾದ ರಾಜ ರಾಮದೇವನಿಗೆ ತನ್ನ ರಾಜ್ಯವು ಅಪಾಯದಲ್ಲಿದೆಯೆಂದು ಕಂಡು ಬಂದಾಗ ಅವನು ತನ್ನ ಹಿರಿಯ ಪುತ್ರನಾದ ಮಂಗಳದೇವನನ್ನು ಕೋಟೆಯಲ್ಲಿಯೇ ಬಿಟ್ಟು ಸ್ವತಃ ತನ್ನ ಬಂಧುಗಳು ಪುತ್ರರು ಮತ್ತು ಸಂಗಡಿಗರು ಮುಂತಾದವರೊಂದಿಗೆ ಮಲ್ಲಿಕ್ ನಾಯಬ್‌ನ ಸನ್ನಿಧಿಯಲ್ಲಿ ಹಾಜರಾದ. ಅವನು ತನ್ನೊಡನೆ ಅಮೂಲ್ಯವಾದ ಮತ್ತು ಬೆಲೆ ಬಾಳುವ ಉಡುಗೊರೆ ಮತ್ತು ಕಾಣಿಕೆಗಳನ್ನು ಕೂಡ ತೆಗೆದುಕೊಂಡು ಹೋದ.

ಮಲ್ಲಿಕ್ ನಾಯಬ್‌ನು ಕೂಡಲೇ ವಿಜಯನಾಮೆಯನ್ನು ದೆಹಲಿಗೆ ಕಳುಹಿಸಿದ ಮತ್ತು ನಂತರ ತಾನೇ ಸ್ವತಃ ರಾಮದೇವನನ್ನು ಜೊತೆಯಲ್ಲಿ ಕರೆದುಕೊಂಡು ಅವನು ನೀಡಿದ ಉಡುಗೊರೆಗಳು ಹಾಗೂ ಹದಿನೇಳು ಆನೆಗಳೊಂದಿಗೆ ದೆಹಲಿಯತ್ತ ಪ್ರಯಾಣ ಮಾಡಿದ.

ರಾಮದೇವನಿಗೆ ಗೌರವ:

ಮಲ್ಲಿಕ್ ನಾಯಬ್‌ನು ಬಾದಶಹನ ಸನ್ನಿಧಿಯಲ್ಲಿ ಹಾಜರಾದ ಮತ್ತು ಅಲ್ಲಾವುದ್ದೀನ್‌ನು ಆತನ ಕಾರ್ಯಾಚರಣೆಯಿಂದ ತುಂಬಾ ಸಂತುಷ್ಟನಾದ ಹಾಗೂ ಅವನ ಸ್ಥಾನಮಾನವನ್ನು ಮೊದಲಿಗಿಂತ ಹತ್ತು ಪಟ್ಟು ಹೆಚ್ಚಿಸಿದ. ರಾಮದೇವನಿಗೆ ಮಲ್ಲಿಕ್‌ನಾಯಬ್‌ನೊಡನೆ ಅಪಾರ ಪ್ರೀತಿವಿಶ್ವಾಸದ ಬಾಂಧವ್ಯವಿತ್ತು. ಹೀಗಾಗಿ ಅಲ್ಲಾವುದ್ದೀನನ ಸಮ್ಮುಖದಲ್ಲಿ ಮಲ್ಲಿಕ್‌ನಾಯಬನು ಸದಾ ಕಾಲ ರಾಮದೇವನ ಪ್ರೀತಿವಿಶ್ವಾಸದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದ. ಅಲ್ಲಾವುದ್ದೀನನು ಕೂಡ ರಾಮದೇವನನ್ನು ಅತ್ಯಂತ ಗೌರವಾದರಗಳಿಂದ ಕಾಣುತ್ತಿದ್ದ ಹಾಗೂ ಮಲ್ಲಿಕ್ ನಾಯಬನ ನಿರಂತರವಾದ ಶಿಫಾರಸ್ಸಿನ ದೆಸೆಯಿಂದ ಕೂಡ ಅಲ್ಲಾವುದ್ದೀನನು ಅವನನ್ನು ವಿಶೇಷ ಗೌರವದಿಂದ ಕಾಣುತ್ತಿದ್ದ ಹಾಗೂ ಅವನು ರಾಮದೇವನಿಗೆ ರಾಜ ಲಾಂಛನದ ಶ್ವೇತಛತ್ರಿಯನ್ನು ದಯಪಾಲಿಸಿದ ಮತ್ತು "ರಾಯೆರಾಯಾನ್ (ರಾಜರ ರಾಜ)" ಎಂಬ ಬಿರುದನ್ನು ಕೂಡ ಪ್ರದಾನ ಮಾಡಿದ. ಅಷ್ಟೇ ಅಲ್ಲದೆ ದೇವಗಡ ಮತ್ತು ಇನ್ನಿತರೆ ಪುರಾತನವಾದ ರಾಜ್ಯಗಳ ಆಳ್ವಿಕೆಯನ್ನು ಕೂಡ ಅವನಿಗೆ ನೀಡಿದ್ದು ನಂತರ ಗುಜರಾತ ಮತ್ತು ನವಸಾರಿಯನ್ನು ಕೂಡ ಉಡುಗೊರೆಯ ರೂಪದಲ್ಲಿ ರಾಮದೇವನಿಗೆ ನೀಡಿದ ಅಲ್ಲಾವುದ್ದೀನನು ರಾಜ ಮತ್ತು ಆತನ ಪುತ್ರರು ಮತ್ತು ಬಂಧುಗಳಿಗೆ ಒಂದು ಲಕ್ಷ ತಂಗ ಹಣವನ್ನು ಉಡುಗೊರೆಯ ರೂಪದಲ್ಲಿ ನೀಡಿ ಅತ್ಯಂತ ಗೌರವ ಮತ್ತು ಆದರಪೂರ್ವಕವಾಗಿ ಅವರನ್ನು ಬೀಳ್ಕೊಟ್ಟ. ರಾಮದೇವನು ತನ್ನ ರಾಜ್ಯಕ್ಕೆ ಮರಳಿದ ಮತ್ತು ಅಲ್ಲಾವುದ್ದೀನನು ದಯಪಾಲಿಸಿದ ರಾಜ್ಯಗಳ ಆಳ್ವಿಕೆಯನ್ನು ನಿರ್ವಹಿಸತೊಡಗಿದ. ರಾಮದೇವನು ಜೀವಂತವಾಗಿರುವವರೆಗೂ ಅವನು ಅಲ್ಲಾವುದ್ದೀನನ ಅಧೀನತೆಯಲ್ಲಿದ್ದು ಅತ್ಯಂತ ವಿಧೇಯನಾಗಿದ್ದ.

ಸೈವಾನ ಕೋಟೆಯ ಮೇಲೆ ಆಕ್ರಮಣ:

ಮಲ್ಲಿಕ್ ನಾಯಬ್‌ನು ದಕ್ಷಿಣದ ಮೇಲೆ ಲಗ್ಗೆ ಇಟ್ಟ ದಿನಗಳಲ್ಲಿ ಅಲ್ಲಾವುದ್ದೀನನು ಸೈವಾನದ ಕೋಟೆಯ ಮೇಲೆ ಯುದ್ಧ ಸಾರಿದ. ಈ ಕೋಟೆಯು ದೆಹಲಿಯ ದಕ್ಷಿಣ ಭಾಗಕ್ಕಿದ್ದು ದೆಹಲಿಯ ಸೈನ್ಯವು ಆ ಕೋಟೆಯನ್ನು ವಶಪಡಿಸಿಕೊಳ್ಳಲು ಅನೇಕ ವರ್ಷಗಳವರೆಗೆ ಮುತ್ತಿಗೆಯನ್ನು ಹಾಕಿದರೂ, ಅವರಿಗೆ ವಿಜಯ ಪ್ರಾಪ್ತಿಯಾಗಿರಲಿಲ್ಲ. ಅಲ್ಲಾವುದ್ದೀನನು ಅತ್ಯಂತ ಕಠಿಣ ಸ್ವರೂಪದಲ್ಲಿ ಆ ಕೋಟೆಗ

ನಾಲ್ಕು ಕಡೆಗಳಿಂದ ದಿಗ್ಬಂಧನವನ್ನು ಹೇರಿದ ಮತ್ತು ಕೋಟೆಯೊಳಗಿನ ಜನರ ಬದುಕನ್ನು ಅಸಹನೀಯಗೊಳಿಸಿದ. ಸೈವಾನ ರಾಜ್ಯದ ರಾಜನಾದ ರಾಜ್ಯ ಶೀತಲದೇವನಿಗೆ ಬಿಡುಗಡೆಯ ಯಾವುದೇ ಹಾದಿಯು ಕಂಡುಬರಲಿಲ್ಲವಾದ್ದರಿಂದ ಅವನು ಒಂದು ಉಪಾಯವನ್ನು ಆಲೋಚಿಸಿದ. ಅವನು ತನ್ನದೊಂದು ವಿಗ್ರಹವನ್ನು ಚಿನ್ನದಲ್ಲಿ ತಯಾರು ಮಾಡಿಸಿದ ಹಾಗೂ ಅದರ ಕೊರಳಿನಲ್ಲಿ ಒಂದು ಚಿನ್ನದ ಹಗ್ಗವನ್ನು ಹಾಕಿ ಆ ವಿಗ್ರಹವನ್ನು ಅಲ್ಲಾವುದ್ದೀನನ ಬಳಿಗೆ ಕಳುಹಿಸಿದ. ಈ ಕೃತ್ಯದ ಮೂಲಕ ಅವನು ಸಾಂಕೇತಿಕವಾಗಿ ಅಲ್ಲಾವುದ್ದೀನನಿಗೆ ಶರಣಾದ. ಆ ವಿಗ್ರಹದೊಂದಿಗೆ ಶೀತಲದೇವನು ನೂರು ಆನೆಗಳು ಮತ್ತು ಇನ್ನೂ ಅನೇಕ ಅಮೂಲ್ಯ ಮತ್ತು ಅಪೂರ್ವವಾದ ವಸ್ತುಗಳನ್ನು ಕೂಡ ಅಲ್ಲಾವುದ್ದೀನನ ಸಮಕ್ಷಮಕ್ಕೆ ಕಳುಹಿಸಿಕೊಟ್ಟ ಮತ್ತು ತನ್ನ ತಪ್ಪಿಗೆ ಕ್ಷಮೆಯಾಚಿಸಿದ. ಅಲ್ಲಾವುದ್ದೀನನು ಸದ್ಭಾವನೆಯ ಪ್ರತೀಕವಾಗಿ ಆ ಮೂರ್ತಿಯನ್ನು ಪರಿಗ್ರಹಿಸಿದ ಹಾಗೂ ರಾಜನಿಗೆ ಸಂದೇಶವನ್ನು ಕಳಿಸಿ, "ನೀನು ಸ್ವತಃ ಹಾಜರಾಗದೆ ಇದ್ದಲ್ಲಿ ಯಾವುದೇ ಮಾತುಕತೆ ನಡೆಯುವುದಿಲ್ಲ" ಎಂದು ತಿಳಿಸಿದ.

ಈ ಉತ್ತರವನ್ನು ಕೇಳಿದ ನಂತರ ಶೀತಲದೇವನು ಅಸಹಾಯಕನಾಗಿ ಕೋಟೆಯಿಂದ ಹೊರ ಬಂದ ಮತ್ತು ಅಲ್ಲಾವುದ್ದೀನನ ಸಮಕ್ಷಮದಲ್ಲಿ ಹಾಜರಾದ. ಬಾದಶಹನು ಕೋಟೆಯೊಳಗಿದ್ದ ಚಾಕು ಮತ್ತು ಸೂಜಿಗಳನ್ನು ಸೇರಿದಂತೆ ಸಮಸ್ತ ಅಸ್ತ್ರಗಳನ್ನು ಜಪ್ತಿ ಮಾಡಿದ. ಹೀಗೆ ಜಪ್ತಿಯಾದ ವಸ್ತುಗಳ ಪೈಕಿ ಅಮೂಲ್ಯವಾದಂತಹವುಗಳನ್ನು ಬಾದಶಹನು ತನ್ನ ಸ್ವಂತ ಉಪಯೋಗದ ಸಲುವಾಗಿ ಮುಡುಪಾಗಿಟ್ಟ ಹಾಗೂ ಉಳಿದಂತಹ ಎಲ್ಲ ವಸ್ತುಗಳನ್ನು ಸೈನಿಕರು ಮತ್ತು ಇನ್ನಿತರೆ ಅಧಿಕಾರಿ ವರ್ಗಗಳ ನಡುವೆ ಹಂಚಿದ. ಅಲ್ಲಾವುದ್ದೀನನು ಸೈವಾನವನ್ನು ಸರದಾರರ ಮಧ್ಯೆ ಜಹಾಗೀರ್‌ನ ರೂಪದಲ್ಲಿ ಹಂಚಿದ ಮತ್ತು ಖಾಲಿ ಕೋಟೆಯ ಆಡಳಿತವನ್ನು ಶೀತಲದೇವನಿಗೆ ವಹಿಸಿಕೊಟ್ಟ.

ಜಾಲೂರು ಕೋಟೆಯ ಗೆಲುವು:

ಇದೇ ಕಾಲಾವಧಿಯಲ್ಲಿ ಜಾಲೂರ್ ಕೋಟೆಯ ವಿಜಯವು ಕೂಡ ಪ್ರಾಪ್ತವಾಯಿತು. ಇತಿಹಾಸಕಾರರ ಹೇಳಿಕೆಯ ಪ್ರಕಾರ ಜಾಲೂರಿನ ರಾಜನಾದ ಖಾನೆರದೇವನು ಅಲ್ಲಾವುದ್ದೀನ್‌ನೊಡನೆ ಭೇಟಿಯಾಗಲು ದೆಹಲಿಗೆ ಆಗಮಿಸಿದ್ದ ಒಂದು ದಿನ ಬಾದಶಹನು ಆತನೊಡನೆ ಮಾತನಾಡುತ್ತಾ "ಈಗ ಹಿಂದೂಸ್ತಾನದ ಯಾವ ರಾಜನಲ್ಲಿಯೂ ನನ್ನ ಸೈನ್ಯದೊಂದಿಗೆ ಹೋರಾಡುವ ಸಾಮರ್ಥ್ಯವು ಉಳಿದಿಲ್ಲ" ಎಂದು ಹೇಳಿದ. ಆ ಸಂದರ್ಭದಲ್ಲಿ ಖಾನೇರ್‌ದೇವ್‌ನು ಬಾದಶಹನ ದರ್ಬಾರಿನಲ್ಲಿ ಉಪಸ್ಥಿತನಿದ್ದ. ಅಲ್ಲಾವುದ್ದೀನ್‌ನ ಸದರಿ ಹೇಳಿಕೆಗೆ ರಾಜನು "ನಾನು ತಮ್ಮೊಂದಿಗೆ ಯುದ್ಧ ಮಾಡಿ ಅದರಲ್ಲಿ ನನಗೆ ವಿಜಯ ಪ್ರಾಪ್ತಿಯಾಗದಿದ್ದಲ್ಲಿ ನಾನು

ಜೀವಂತವಾಗಿರಲು ಇಷ್ಟಪಡುವುದಿಲ್ಲ" ಎಂದು ಹೇಳಿದ. ರಾಜನ ಈ ಮಾತು ಅಲ್ಲಾವುದ್ದೀನ್‌ನಿಗೆ ಅಪ್ರಿಯವೆನಿಸಿತು. ಆಗ ಆ ಸಂದರ್ಭದಲ್ಲಿ ಅವನು ಆ ರಾಜನಿಗೆ ಯಾವುದೇ ಪ್ರತ್ಯುತ್ತರವನ್ನು ನೀಡಲಿಲ್ಲ ಮತ್ತು ಕೆಲವು ದಿನಗಳ ನಂತರ ಅವನು ರಾಜನನ್ನು ಜಾಲೂರಿಗೆ ಬೀಳ್ಕೊಟ್ಟ, ಎರಡು ಮೂರು ತಿಂಗಳ ನಂತರ ಅಲ್ಲಾವುದ್ದೀನನು ತನ್ನ ಸಾಮರ್ಥ್ಯದ ಪ್ರದರ್ಶನವನ್ನು ವಿಲಕ್ಷಣ ರೀತಿಯಲ್ಲಿ ಮಾಡಿದ. ಗುಲ್‌ಬಿಹಿಶ್ತ್ ಎಂಬ ಹೆಸರಿನ ದಾಸಿಯನ್ನು ಅವನು ಸೈನ್ಯದೊಂದಿಗೆ ಜಾಲೂರಿಗೆ ಕಳುಹಿಸಿದ. ಗುಲ್‌ಬಿಹಿಶ್ತ್ ದಾಸಿಯು ಜಾಲೂರನ್ನು ತಲುಪಿ ಕೋಟೆಗೆ ಮುತ್ತಿಗೆಯನ್ನು ಹಾಕಿದಳು ಮತ್ತು ಅತ್ಯಂತ ಪರಾಕ್ರಮದಿಂದ ರಾಜನ ಸೈನ್ಯದೆದುರು ಹೋರಾಡಿದಳು. ಮತ್ತು ರಾಜನ ಸೈನ್ಯವನ್ನು ನಾಶ ಮಾಡತೊಡಗಿದಳು. ಇಡೀ ಕೋಟೆ ಮುತ್ತಿಗೆಯ ತೀವ್ರತೆಯನ್ನು ತಾಳಲಾರದೆ ಸೋಲಿನಂಚಿಗೆ ತಲುಪಿತು. ಆದರೆ ಆ ತೀವ್ರ ಹೋರಾಟದ ಸಂದರ್ಭದಲ್ಲಿ ಗುಲ್‌ಬಿಹಿಶ್ತ್ ತೀವ್ರ ರೀತಿಯಲ್ಲಿ ಕಾಯಿಲೆಗೆ ತುತ್ತಾದಳು. ಆ ಕಾಯಿಲೆಯಿಂದ ಗುಣಮುಖವಾಗದೆ ಆಕೆ ಸಾವಿಗೀಡಾದಳು. ಅವಳ ಮರಣದ ನಂತರ ಆಕೆಯ ಮಗನಾದ ಶಾಹೀನ್ ತನ್ನ ತಾಯಿಯ ಸ್ಥಾನವನ್ನು ತುಂಬಿದ ಮತ್ತು ಅವಳ ಪರಾಕ್ರಮದ ಹಾದಿಯಲ್ಲಿ ಮುನ್ನಡೆದು ಕೋಟೆಯೊಳಗಿನ ರಾಜನ ಬದುಕನ್ನು ಅಸಹನೀಗೊಳಿಸಿದ.

ಖಾನೇರ್‌ದೇವನ ಕೊಲೆ:

ಅಲ್ಲಾವುದ್ದೀನ್‌ನ ಸ್ವಭಾವ ಕಾಠಿಣ್ಯವನ್ನು ಖಾನೇರ್‌ದೇವ್ ಚೆನ್ನಾಗಿ ಅರಿತಿದ್ದ. ಅವನು ಎಲ್ಲಾ ಸಲಹೆಗಳನ್ನು ಬದಿಗೊತ್ತಿ ತನ್ನ ಬಂಧುಗಳ ಸಮೇತ ಸೈನ್ಯದೊಡನೆ ಕೋಟೆಯಿಂದ ಹೊರಗೆ ಬಂದ. ಖಾನೇರ್‌ದೇವ್ ಮತ್ತು ಶಾಹೀನ್ ಪರಸ್ಪರ ಮುಖಾಮುಖಿಯಾದರು. ಉಭಯತ್ರರ ನಡುವೆ ಘೋರ ಯುದ್ಧ ನಡೆಯಿತು. ಆ ಕದನದಲ್ಲಿ ಶಾಹೀನ್ ಮರಣವನ್ನಪ್ಪಿದ. ಬಾದಶಹನ ಉಳಿದ ಸರ್ದಾರರು ಕೂಡ ಖಾನೇರ್‌ದೇವ್‌ನ ವಿರುದ್ಧ ನಿಲ್ಲಲು ಅಸಮರ್ಥರಾದರು ಹಾಗೂ ಅನೇಕ ಹಂತಗಳವರೆಗೆ ಹಿಮ್ಮೆಟ್ಟಿದರು. ಈ ಎಲ್ಲಾ ಸುದ್ದಿಯೂ ಅಲ್ಲಾವುದ್ದೀನನಿಗೆ ತಲುಪಿದಾಗ ಅವನು ಕೋಪಾವಿಷ್ಟನಾದ ಮತ್ತು ಅವನು ಕಮಾಲುದ್ದೀನ್ ಹೆಸರಿನ ವ್ಯಕಿಯ್ತ ನ್ಯಾಯಕತ್ವದಲ್ಲಿ ಬಲಾಢ್ಯ ಸೇನೆಯನ್ನು ಸೈವಾನದತ್ತ ಕಳಿಸಿದ. ಕಮಾಲುದ್ದೀನನು ಅತ್ಯಂತ ಪೌರುಷ ಮತ್ತು ವೀರಾವೇಷದಿಂದ ಕಾದಾಡಿ ಕೋಟೆಯನ್ನು ವಶಪಡಿಸಿಕೊಂಡ ಹಾಗೂ ಖಾನೇರ್‌ದೇವ್ ಮತ್ತು ಅವನ ಸಂಗಡಿಗರು ಹಾಗೂ ಬಂಧುಗಳು ಮೊದಲಾದವರನ್ನು ಕೊಲೆ ಮಾಡಿದ. ನಂತರ ಖಾನೇರ್‌ದೇವನ ಖಜಾನೆಯನ್ನು ಸ್ವಾಧೀನ ಪಡಿಸಿಕೊಂಡ ಅವನು ವಿಜಯಿಯಾಗಿ ದೆಹಲಿ ತಲುಪಿದಾಗ ಜನತೆಯ ಸಂತೋಷಕ್ಕೆ ಪಾರವೇ ಇರಲಿಲ್ಲ.

ವಾರಂಗಲ್‌ನ ಗೆಲುವಿನ ಇರಾದೆ:

ಅಲ್ಲಾವುದ್ದೀನನು ಕೆಲವು ದಿನಗಳ ಹಿಂದೆ ಒಂದು ಸೈನ್ಯವನ್ನು ಬಂಗಾಳದ ಮೂಲಕ ವಾರಂಗಲ್‌ಗೆ ಕಳುಹಿಸಿದ್ದ. ಆದರೆ ಆ ಸೈನ್ಯವು ಯಾವುದೇ ನಿರ್ಣಾಯಕ ಫಲಿತಾಂಶವನ್ನು ತಾರದೇ ಅಸ್ತವ್ಯಸ್ತ ಪರಿಸ್ಥಿತಿಯಲ್ಲಿ ದೆಹಲಿಗೆ ಮರಳಿತ್ತು .ಈ ಕಾರಣದಿಂದ ಅಲ್ಲಾವುದ್ದೀನ್‌ನು ಹಿಜರಿ ಶಕೆ ೮೦೯ರಲ್ಲಿ ಇನ್ನೊಂದು ಬಲಿಷ್ಠ ಸೈನ್ಯವನ್ನು ಮಲ್ಲಿಕ್ ನಾಯಬ್‌ನ ಮುಂದಾಳತ್ವದಲ್ಲಿ ವಾರಂಗಲ್‌ಗೆ ಕಳಿಸಿಕೊಟ್ಟಿದ್ದ. ಮಲ್ಲಿಕ್ ನಾಯಬ್‌ನನ್ನು ಯುದ್ಧಕ್ಕೆ ಬೀಳ್ಕೊಡುವ ಸಂದರ್ಭದಲ್ಲಿ ಬಾದಶಹನು ಅವನಿಗೆ ತಾಕೀತು ಮಾಡಿ "ವಾರಂಗಲ್‌ನ ರಾಜನಾದ ಲದರ್‌ದೇವನು ಸಂಪತ್ತು, ವಸ್ತುಗಳು ಮತ್ತು ಆನೆಯ ಕಾಣಿಕೆಗಳನ್ನು ನೀಡಿ ಪ್ರತಿವರ್ಷವು ಕಪ್ಪಕಾಣಿಕೆಗಳನ್ನು ನೀಡುವ ವಾಗ್ದಾನ ಮಾಡಿದಲ್ಲಿ ಅದನ್ನು ಒಪ್ಪಿಕೊಂಡು ವಿಷಯವನ್ನು ಮುಗಿಸತಕ್ಕದ್ದು. ವಿಷಯವನ್ನು ಮುಂದುವರೆಸಿದಲ್ಲಿ ಯಾವುದೇ ಲಾಭವಿಲ್ಲ. ತೆಲಂಗಾಣದ ರಾಜ್ಯವನ್ನು ಜಯಗೊಳಿಸುವಲ್ಲಿ ಮತ್ತು ವಾರಂಗಲ್‌ನ ಕೋಟೆಯನ್ನು ಗೆದ್ದುಕೊಳ್ಳುವಲ್ಲಿ ಇನ್ನು ಹೆಚ್ಚಿನ ಪ್ರಾಣ ಮತ್ತು ಸ್ವತ್ತನ್ನು ಹಾಳು ಮಾಡುವುದು ಸೂಕ್ತವಲ್ಲ. ಈ ಎಲ್ಲಾ ತೀರ್ಮಾನವನ್ನು ಕೈಗೊಳ್ಳಬೇಕಾದಲ್ಲಿ ಖ್ವಾಜ ಹಾಜಿಯ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ಪಡೆದುಕೋ, ಮತ್ತು ಚಿಕ್ಕ ಪುಟ್ಟ ತಪ್ಪುಗಳಿಗೆ ಸರ್ದಾರಿಗೆ ಶಿಕ್ಷೆಯನ್ನು ಕೊಡಬೇಡ. ಯುದ್ಧದಲ್ಲಿ ಯಾರಾದರೂ ಸೈನಿಕರ ಕುದುರೆಯು ಅನುಪಯುಕ್ತವಾದಲ್ಲಿ ಅಥವಾ ಯಾರಾದರೂ ಕಳವು ಮಾಡಿದಲ್ಲಿ ಅಥವಾ ಇನ್ನು ಯಾವುದಾದರೂ ಕಾರಣದಿಂದ ಕುದುರೆಯು ಉಪಯುಕ್ತವಾಗಿಲ್ಲದಿದ್ದಲ್ಲಿ ನೀನು ಆ ಸಿಪಾಯಿಗೆ ನಮ್ಮ ಸೈನ್ಯದ ಕುದುರೆಯನ್ನು ಕೊಡು" ಎಂದು ಮಾರ್ಗಸೂಚಿ ಉಪದೇಶವನ್ನು ನೀಡಿದ.

ರಾಜರಾಮ್‌ದೇವನ ಅತಿಥಿ ಸತ್ಕಾರ:

ಮಲ್ಲಿಕ್ ನಾಯಬ್ ಮತ್ತು ಖ್ವಾಜ ಹಾಜಿ ಅತಿವೇಗವಾಗಿ ತಮ್ಮ ಪ್ರಯಾಣವನ್ನು ಮುಂದುವರೆಸುತ್ತಾ ದೇವಗಡವನ್ನು ತಲುಪಿದರು. ರಾಮ್‌ದೇವನು ಆ ಸರ್ದಾರರನ್ನು ವೈಭವೋಪೇತವಾಗಿ ಸ್ವಾಗತಿಸಿದ ಹಾಗೂ ಅನೇಕ ಅನೇಕ ಉಡುಗೊರೆಗಳನ್ನು ಆತನ ಸನ್ನಿಧಿಗೆ ಅರ್ಪಿಸಿದ. ಆತನು ಬಾದಶಹನ ಸೈನ್ಯಕ್ಕೆ ಕೂಡ ಈ ಅತಿಥಿ ಸತ್ಕಾರವನ್ನು ವಿಸ್ತರಿಸಿದ. ಮಲ್ಲಿಕ್ ನಾಯಬ್‌ನು ತನ್ನ ಪ್ರಯಾಣವನ್ನು ಮುಂದುವರೆಸಿದಾಗ ತನ್ನ ಸೈನ್ಯ ಮತ್ತು ಮಂಡಿಯನ್ನು ಕೂಡ ಅವನ ಜೊತೆಯಲ್ಲಿ ಕಳಿಸಿಕೊಟ್ಟ ಹಾಗೂ ಪನ್ಸಾರಿ ಅಂಗಡಿಯವರು ಮತ್ತು ಇನ್ನಿತರೆ ವ್ಯಾಪಾರಿಗಳಿಗೆ ಬಾದಶಹನ ನಿರ್ಧರಿತ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡಬೇಕೆಂದು ಆದೇಶ ನೀಡಿದ. ರಾಜನು ಪ್ರತಿದಿನ ಮಲ್ಲಕ್ ನಾಯಬ್‌ನ ಅರಮನೆಗೆ ಭೇಟಿ ನೀಡಿ ತನ್ನ ಪಾಲಿನ ಸೇವೆಯನ್ನು ಸಲ್ಲಿಸುತ್ತಿದ್ದ. ಮಲ್ಲಿಕ್ ನಾಯಬ್‌ನು ದೇವಗಡದಿಂದ ತೆಲಂಗಾಣದ

ಕಡೆಗೆ ಹೊರಟಾಗ ರಾಜ ರಾಮದೇವನು ಸ್ವಲ್ಪ ದೂರದವರೆಗೆ ಅವನ ಜೊತೆಯಲ್ಲಿ ಹೋದ ಮತ್ತು ಅಪಾರ ಸಂಖ್ಯೆಯ ಕುದುರೆ ಸವಾರರು ಮತ್ತು ಕಾಲಾಳುಗಳನ್ನು ದಿನಸಿಯ ಭಂಡಾರದ ರಕ್ಷಣೆಗಾಗಿ ಮತ್ತು ಪ್ರಯಾಣದ ಮಾರ್ಗ-ದರ್ಶನದ ಸಲುವಾಗಿ ಬಿಟ್ಟು ಅವನು ಮಲ್ಲಿಕ್ ನಾಯಬ್‌ನ ಅನುಮತಿಯನ್ನು ಪಡೆದು ಮರಳಿದ. ಹಾಗೇ ಮರಳುವ ಸಂದರ್ಭದಲ್ಲಿಯೂ ಕೂಡ ರಾಜನು ತನ್ನ ವ್ಯಾಪಾರಿಗಳು, ವಹಿವಾಟುದಾರರನ್ನು ಕಂಡು ದಿನಸಿ ಮತ್ತು ಅವಶ್ಯಕ ವಸ್ತುಗಳನ್ನು ಸೈನ್ಯಕ್ಕೆ ಸಕ್ಷಮವಾಗಿ ಸರಬರಾಜು ಮಾಡಬೇಕೆಂದು ಆದೇಶವನ್ನು ನೀಡಿದ ಹಾಗೂ ಅಲ್ಲಾವುದ್ದೀನ್ ಸೈನ್ಯಕ್ಕೆ ಯಾವುದೇ ರೀತಿಯ ಕಷ್ಟ ಕೋಟಲೆಯಾಗದಂತೆ ನೋಡಿಕೊಳ್ಳಬೇಕೆಂತಲೂ ಅವನು ಅವರಿಗೆ ಆದೇಶ ನೀಡಿದ.

ಬೈರೋನಿ ಕೋಟೆಯ ವಿಜಯ:

ಮಲ್ಲಿಕ್ ನಾಯಬ್‌ನು ತೆಲಂಗಾಣದ ಗಡಿಭಾಗವನ್ನು ಅಂದರೆ ಇಂದೂರ್ ಪಟ್ಟಣದ ಬಳಿ ತಲುಪಿದ ಕೂಡಲೇ ವಿನಾಶಕಾರಿ ಕೃತ್ಯದಲ್ಲಿ ತೊಡಗಿ ಅನೇಕ ಜನರನ್ನು ಕೊಲೆ ಮಾಡಿದ. ಈ ರೀತಿಯ ಕಗ್ಗೊಲೆಗಳು ಇಂದೂರ್‌ನ ಜನತೆಯನ್ನು ಭಯಬೀತರನ್ನಾಗಿ ಮಾಡಿತು. ಸುತ್ತಮುತ್ತಲಿನ ರಾಜರು ಮುಸಲ್ಮಾನರ ಸೈನ್ಯದಿಂದ ಭಯಗ್ರಸ್ತರಾಗಿ ರಾಜ ಲೆದರ್‌ದೇವನ ಬಳಿ ಆಶ್ರಯ ಪಡೆದರು. ಮುಸಲ್ಮಾನರ ಸೈನ್ಯವು ಲೆದರ್‌ದೇವ್‌ನ ಬಳಿ ತಲುಪಿದ ಕೂಡಲೇ ಅವನು ಕಲ್ಲು ಕಟ್ಟಡಗಳಿಂದ ನಿರ್ಮಾಣವಾಗಿದ್ದ ವಾರಂಗಲ್ ಕೋಟೆಯೊಳಗಡೆ ಸೇರಿಕೊಂಡ. ಉಳಿದ ರಾಜರು ಪಟ್ಟಣದ ಹೊರಗಡೆ ಇದ್ದ ವಿಶಾಲವಾದ ಕಚ್ಚಾ ಕೋಟೆಯಲ್ಲಿ ಉಳಿದುಕೊಂಡರು. ಮಲ್ಲಿಕ್ ನಾಯಬ್‌ನು ಕೋಟೆಯ ಸುತ್ತಲೂ ದಿಗ್ಬಂಧನವನ್ನು ಹಾಕಿ ಕೋಟೆಗೆ ಇದ್ದ ಎಲ್ಲಾ ಮಾರ್ಗಗಳನ್ನು ಕೂಡ ಬಂದ್ ಮಾಡಿದ.

ಹಿಂದೂಗಳು ಮುಸಲ್ಮಾನರ ಸೈನ್ಯದೊಂದಿಗೆ ಹೋರಾಟ ಮಾಡಿದರು ಮತ್ತು ಪ್ರತಿದಿನ ಸಾವಿರಾರು ಸೈನಿಕರು ವೀರಮರಣವನ್ನು ಅಪ್ಪಿದರು. ಇಷ್ಟೆಲ್ಲಾ ಆದರೂ ಆ ಕೋಟೆಯು ಹಿಂದೂಗಳ ಸ್ವಾಧೀನದಲ್ಲಿ ಉಳಿಯಲಿಲ್ಲ ಮತ್ತು ಆ ಕೋಟೆಯ ಮೇಲೆ ಮುಸಲ್ಮಾನರು ವಿಜಯಪತಾಕೆಯನ್ನು ಹಾರಿಸಿದರು. ಅನೇಕಾನೇಕ ಹಿಂದೂ ರಾಜರುಗಳನ್ನು ಮುಸಲ್ಮಾನರು ಕುಟುಂಬ ಸಮೇತವಾಗಿ ಬಂಧಿಸಿದರು ಮತ್ತು ಅನೇಕ ಸಿಪಾಯಿಗಳ ಮಾರಣ ಹೋಮವನ್ನು ಮಾಡಿದರು.

ಲೆದರ್‌ದೇವ್‌ನ ಅಧೀನತೆ:

ಬೆರೋನಿ ಕೋಟೆಯ ಅವಸಾನವನ್ನು ಕೇಳಿದ ರಾಜ ಲೆದರ್‌ದೇವ್‌ನ ಸ್ಥೈರ್ಯ ಕುಗ್ಗಿತು ಹಾಗೂ ಅವನು ಸಾಮಂತ ರಾಜನಾಗುವುದೇ ಲೇಸೆಂದು ನಿರ್ಧರಿಸಿದ. ಲೆದರ್‌ದೇವ್‌ನು ಮೂನ್ನೂರು ಆನೆಗಳು ಏಳು ಸಾವಿರ ಕುದುರೆಗಳು ಮತ್ತು

ಅಪಾರ ಸಂಪತ್ತು, ನಗ, ನಾಣ್ಯ ಮುಂತಾದವನ್ನು ಮಲ್ಲಿಕ್ ನಾಯಬ್‌ನ ಸಮಕ್ಷಮ ಹಾಜರು ಪಡಿಸಿದ ಮತ್ತು ಪ್ರತಿವರ್ಷವು ಕಪ್ಪಕಾಣಿಕೆಯನ್ನು ನೀಡುವುದಾಗಿ ವಾಗ್ದಾನ ಮಾಡಿ ಸಂಧಿಯನ್ನು ಮಾಡಿಕೊಂಡ. ಮಲ್ಲಿಕ್ ನಾಯಬ್‌ನು ಈ ಎಲ್ಲಾ ವಸ್ತುಗಳು ಮತ್ತು ಸಂಪತ್ತನ್ನು ತನ್ನೊಡನೆ ತೆಗೆದುಕೊಂಡು ದೆಹಲಿ ತಲುಪಿದ. ಅಲ್ಲಾವುದ್ದೀನನು ಈ ವಿಜಯದ ಸುದ್ದಿಯನ್ನು ಕೇಳಿ ಅಲ್ಲಾಹನಿಗೆ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಿದ ಮತ್ತು ಈ ಸಂತೋಷದ ಹಿನ್ನೆಲೆಯಲ್ಲಿ ವಿಜಯದುಂದುಭಿಯನ್ನು ಮೊಳಗಿಸಿದ. ವಿಜಯನಾಮೆಯನ್ನು ಗಲ್ಲಿಗಲ್ಲಿಗಳಲ್ಲಿಯೂ ಸಾರಿ ಡಂಗುರ ಹೊಡೆಸಿದ. ಮಲ್ಲಿಕ್ ನಾಯಬ್‌ನ ಆಗಮನದ ನಂತರ ಅಲ್ಲಾವುದ್ದೀನನು ಪಟ್ಟಣದಿಂದ ಹೊರಗೆ ಬಂದು ಬದಾಯೂನ್ ಹೆಬ್ಬಾಗಿಲ ಬಳಿ ಇದ್ದ ನಾಸರಿ ವೇದಿಕೆಯನ್ನೇರಿ ಮೆರವಣಿಗೆ ಹೊರಡಿಸಿದ. ಮಲ್ಲಿಕ್ ನಾಯಬ್‌ನು ಎಲ್ಲಾ ಯುದ್ಧ ಸಂಪತ್ತನ್ನು ಬಾದಶಹನ ಸನ್ನಿಧಿಯಲ್ಲಿ ಹಾಜರು ಪಡಿಸಿದ. ಇದೆಲ್ಲವನ್ನು ಕಂಡು ಬಾದಶಹನು ಅವನ ಮೇಲೆ ಮೊದಲಿಗಿಂತಲೂ ಹೆಚ್ಚು ಪ್ರಸನ್ನನಾಗಿ ಅವನಿಗೆ ಅಪಾರವಾದ ರಾಜ ಪಾರಿತೋಷಕಗಳನ್ನು ಮತ್ತು ಗೌರವಾದರಗಳನ್ನು ನೀಡಿದ.

ಅಂಚೆಯ ವ್ಯವಸ್ಥೆ:

ಇತಿಹಾಸಕಾರರು ದಾಖಲಿಸಿರುವ ಪ್ರಕಾರ ಅಲ್ಲಾವುದ್ದೀನನು ತನ್ನ ಸೈನ್ಯವನ್ನು ಯುದ್ಧ ರಂಗಕ್ಕೆ ಕಳುಹಿಸಿದ ನಂತರ ಅಲ್ಲಿಂದ ಸೈನ್ಯದ ಕೇಂದ್ರಸ್ಥಾನದವರೆಗೂ ಅಂಚೆಯ ಚೌಕಿಯನ್ನು ಏರ್ಪಾಡು ಮಾಡುತ್ತಿದ್ದ. ಈ ವ್ಯವಸ್ಥೆಯನ್ನು ಪುರಾತನ ಕಾಲದ ಜನರು "ಬಾಮ್" ಎಂದು ಕರೆಯುತ್ತಿದ್ದರು.

ಪ್ರತಿಯೊಂದು ಹರದಾರಿ ದೂರದಲ್ಲಿಯೂ ಇಬ್ಬರು ಕಾಲಾಳುಗಳು ನೇಮಕವಾಗುತ್ತಿದ್ದರು. ಅವರನ್ನು ಹಿಂದಿಯಲ್ಲಿ "ಪಾಯಕ್" ಎಂದು ಕರೆಯಲಾಗುತ್ತಿತ್ತು. ಆ ಮಾರ್ಗದ ಎಲ್ಲಾ ಹಳ್ಳಿ ಮತ್ತು ಪಟ್ಟಣಗಳಲ್ಲಿ ಸುದ್ದಿ ಸಂಗ್ರಹಕಾರರನ್ನು ನೇಮಕ ಮಾಡಲಾಗುತ್ತಿತ್ತು ಪ್ರತಿದಿನ ಯುದ್ಧರಂಗದ ಸುದ್ದಿಯನ್ನು ಲಿಖಿತ ಮೂಲಕ ಪಡೆಯಲು ಈ ವ್ಯವಸ್ಥೆಯನ್ನು ಮಾಡಲಾಗಿತ್ತು ಮಲ್ಲಿಕ್ ನಾಯಬ್‌ನು ವಾರಂಗಲ್ ಮೇಲೆ ಯುದ್ದ ಮಾಡುತ್ತಿದ್ದ ಸಂದರ್ಭದಲ್ಲಿ ಆ ಮಾರ್ಗದ ಉದ್ದಕ್ಕೂ ತೆಲಂಗಾಣದ ಯೋಧರು ನಿರಂತರವಾಗಿ ಪರಿಭ್ರಮಣ ಮಾಡುತ್ತಿದುದ್ದರಿಂದ ಪ್ರಯಾಣದ ಮಾರ್ಗಗಳು ಅಸುರಕ್ಷಿತವಾಗಿದ್ದವು ಹಾಗೂ ಬಾದಶಹನ ಠಾಣೆಗಳ ವ್ಯವಸ್ಥೆಯು ಅಸ್ತವ್ಯಸ್ತವಾಗತೊಡಗಿತ್ತು. ಈ ಪರಿಸ್ಥಿತಿಯ ದೆಸೆಯಿಂದ ಅಲ್ಲಾವುದ್ದೀನನಿಗೆ ಕೆಲವು ಕಾಲದವರೆಗೆ ತನ್ನ ಸೈನ್ಯದ ಸುದ್ದಿಯು ತಲುಪದೆ ಅವನು ಚಿಂತಾಕ್ರಾಂತನಾಗಿದ್ದ.

ಹಜರತ್ ಮೆಹಬೂಬ್ ಎ ಇಲಾಹಿಯ ವಚನ:

ಕೊನೆಗೂ ದಾರಿ ಕಾಣದೆ ಬಾದಶಹನು ಖಾಜಿ ಮೊಗೈಸುದ್ದೀನ್ ಮತ್ತು ಮುಲ್ಕ್

ಖಿರಾಬೇಗ್‌ನನ್ನು ಹಜರತ್ ಖ್ವಾಜ ನಿಜಾಮುದ್ದೀನ್ ಔಲಿಯರವರ ಸನ್ನಿಧಿಗೆ ರವಾನೆ ಮಾಡಿದ ಮತ್ತು ಕೆಳಕಂಡಂತೆ ಸಂದೇಶವನ್ನು ಕಳುಹಿಸಿದ. "ಇಸ್ಲಾಮ್ ಧರ್ಮದ ಬಗ್ಗೆ ಹುಜೂರ್‌ರವರಿಗೆ ನನಗಿಂತ ಹೆಚ್ಚು ಕಾಳಜಿ ಇದೆ. ಒಂದು ವೇಳೆ ತಮ್ಮ ಆತ್ಮಶಕ್ತಿಯಿಂದ ತಮಗೆ ಇಸ್ಲಾಮಿ ಸೈನ್ಯದ ಪರಿಸ್ಥಿತಿಯ ಬಗ್ಗೆ ತಿಳಿದುಬಂದಲ್ಲಿ ದಯಾಮಾಡಿ ನನಗೂ ಆ ಬಗ್ಗೆ ತಿಳಿಸುವುದು. ವಾರಂಗಲ್‌ನ ಕಡೆ ರವಾನೆಯಾಗಿರುವ ಸೈನ್ಯದ ಪರಿಸ್ಥಿತಿಯ ಬಗ್ಗೆ ನನಗೆ ಯಾವ ಸುದ್ದಿಯು ಕೂಡ ತಿಳಿದುಬಂದಿಲ್ಲ, ಈ ಕಾರಣದಿಂದ ನಾನು ತುಂಬ ಚಿಂತೆಯಲ್ಲಿದ್ದೇನೆ." ಅಲ್ಲವುದ್ದೀನನು ಖಾಜಿ ಮೊಗೈಸುದ್ದೀನ್‌ಗೆ ತಾಕೀತು ಮಾಡಿದ್ದು ಹಜರತ್ ನಿಜಾಮುದ್ದೀನ್ ಔಲಿಯರವರು ಉತ್ತರಪೂರ್ವಕವಾಗಿ ಏನನ್ನು ನುಡಿಯುತ್ತಾರೋ ಅದನ್ನು ಹೆಚ್ಚು ಕಡಿಮೆಯಾಗದಂತೆ ಯಥಾವತ್ತಾಗಿ ತನ್ನ ಎದುರು ವರದಿ ನೀಡಬೇಕೆಂದು ತಿಳಿಸಿದನು. ಖಾಜಿ ಮೊಗೈಸ್ ಮತ್ತು ಮಲ್ಲಿಕ್ ಖಿರಾಬೇಗ್ ರಾಜಾಜ್ಞೆಯ ಪ್ರಕಾರ ಹಜರತ್ ಮೆಹಬೂಬ್ ಇಲಾಹಿಯ ಸನ್ನಿಧಿಯಲ್ಲಿ ಹಾಜರಾದರು ಮತ್ತು ಬಾದಶಹನ ಸಂದೇಶವನ್ನು ಅವರ ಸಮ್ಮುಖದಲ್ಲಿ ನುಡಿದರು. ಪ್ರತ್ಯುತ್ತರವಾಗಿ ಅವರು ಪುರಾತನ ಕಾಲದ ಒಬ್ಬ ಬಾದಶಹನ ವಿಜಯದ ಕಥೆಯನ್ನು ಹೇಳಿದರು ಮತ್ತು ಅದರೊಡನೆ ಹೀಗೆಂದು ನುಡಿದರು, "ಇದರ ಜೊತೆಯಲ್ಲಿ ಇನ್ನೂ ಅನೇಕ ವಿಜಯದ ಸರಮಾಲೆಗಳ ನಿರೀಕ್ಷೆಯು ಅಲ್ಲಾಹನ ಕರುಣೆಯಿಂದ ಸಿಗಲಿದೆ" ಖಾಜಿ ಮೊಗೈಸ್ ಮತ್ತು ಮಲ್ಲಿಕ್ ಖಿರಾಬೇಗ್, ಹಜರತ್ ಮೆಹಬೂಬ ಎ ಇಲಾಹಿಯವರಿಂದ ಬೀಳ್ಕೊಟ್ಟು ಅಲ್ಲಾವುದ್ದೀನನ ಸಮಕ್ಷಮ ಹಾಜರಾಗಿ ಅಲ್ಲಿ ನಡೆದಿದ್ದುದೆಲ್ಲವನ್ನು ಅಕ್ಷರಶಃ ಬಾದಶಹನ ಗಮನಕ್ಕೆ ತಂದರು. ಅಲ್ಲಾವುದ್ದೀನನು ಹಜರತ್ ಮೆಹಬೂಬ್ ಎ ಇಲಾಹಿಯ ಸಂಭಾಷಣೆಯನ್ನು ಕೇಳಿ ತುಂಬಾ ಸಂತೋಷಪಟ್ಟ ಮತ್ತು ವಾರಂಗಲ್‌ನ ವಿಜಯವು ತನಗೆ ಪ್ರಾಪ್ತಿಯಾಯಿತೆಂದು ಅವನಿಗೆ ಖಚಿತವಾಯಿತು.

ಹಜರತ್ ಮೆಹಬೂಬ ಎ ಇಲಾಹಿಯವರೊಂದಿಗೆ ಶ್ರದ್ಧೆ :

ದೇವರ ಅದ್ಭುತ ಪವಾಡದಂತೆ ಅದೇ ದಿನ ಸಂಜೆಯ ವೇಳೆಗೆ ಸಂದೇಶವಾಹಕರು ಬಂದರು ಮತ್ತು ಅವರುಗಳು ವಾರಂಗಲ್‌ನ ವಿಜಯನಾಮೆಯನ್ನು ಅಲ್ಲಾವುದ್ದೀನ್‌ನ ಸಮಕ್ಷಮದಲ್ಲಿ ಹಾಜರು ಪಡಿಸಿದರು. ಈ ಘಟನೆಯ ಪರಿಣಾಮವಾಗಿ ಹಜರತ್ ಮೆಹಬೂಬ್ ಎ ಇಲಾಹಿಯವರ ದೈವಿಕ ಶಕ್ತಿಯ ಬಗ್ಗೆ ಅಲ್ಲಾವುದ್ದೀನನು ಮೊದಲಿಗಿಂತ ಹೆಚ್ಚು ಪ್ರಭಾವಿತನಾದ. ಅಲ್ಲಾವುದ್ದೀನನು ಹಜರತ್ ಮೆಹಬೂಬ್ ಎ ಇಲಾಹಿಯವರನ್ನು ಎಂದಿಗೂ ಭೇಟಿಯಾಗಿರಲಿಲ್ಲ. ಆದರೆ ಅವರೊಡನೆ ನಿರಂತರವಾಗಿ ಪತ್ರ ವ್ಯವಹಾರವನ್ನು ಜಾರಿಯಲ್ಲಿಟ್ಟಿದ್ದ ಮತ್ತು ತನ್ನ ಪತ್ರಗಳ ಮುಖೇನ ಸದಾ ಕಾಲ ಅವರೊಡನೆ ತನಗಿದ್ದ ಪ್ರೀತಿ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದ ಮತ್ತು ಅವರ ಅಂತರಂಗದ ಆತ್ಮಶಕ್ತಿಯ ನೆರವನ್ನು ಯಾಚಿಸುತ್ತಿದ್ದ.

ಅಲ್ಲಾವುದ್ದೀನ್‌ನ ರಾಜ್ಯದ ಗಡಿಗಳು ಕಾಬೂಲ್ ಮತ್ತು ಸಿಂಧ್‌ನ ಸರಹದ್ದುಗಳಿಂದ ಬಂಗಾಳ, ದಖ್ಖನ್ ಮತ್ತು ಗುಜರಾತ್‌ನವರೆಗೂ ವಿಸ್ತಾರವಾದವು ಮತ್ತು ಅಖಂಡ ಹಿಂದೂಸ್ತಾನದ ಪಟ್ಟಣ ಮತ್ತು ಪ್ರದೇಶಗಳು ಹಾಗೂ ರಾಜರುಗಳ ಅರಮನೆಗಳು ಮತ್ತು ಖಜಾನೆಗಳು ಬಾದಶಹನ ಕಬ್ಜೆಗೆ ಸೇರಿಕೊಂಡವು. ಇಡೀ ಹಿಂದೂಸ್ತಾನದಲ್ಲಿ ಅಲ್ಲಾವುದ್ದೀನ್‌ನ ಹೆಸರಿನ ಶಾಸನ ಮತ್ತು ನಾಣ್ಯದ ಜಾರಿಯಾಗದೆ ಹತ್ತು ಭೀಗ ಜಮೀನು ಕೂಡ ಇರಲಿಲ್ಲ. ಹೀಗಾಗಿ ಅವನು ತನ್ನ ರಾಜ್ಯವನ್ನು ಇನ್ನಷ್ಟು ವಿಸ್ತಾರ ಮಾಡಲು ಆಲೋಚಿಸಿದ. ಅವನ ಧೈರ್ಯಸಾಹಸಗಳು ವೃದ್ಧಿಯಾದವು ಮತ್ತು ಅವನು ಅಮಾನ್ ನದಿಯ ತೀರ ಪ್ರದೇಶ ಹಾಗೂ ದಕ್ಷಿಣದ ಅಂಚಿನ ಗಡಿ ಪ್ರದೇಶದ ಭೂಭಾಗದತ್ತ ತನ್ನ ಗಮನವನ್ನು ಕೇಂದ್ರೀಕರಿಸಿದ.

ದ್ವಾರಸಮುದ್ರ ಮತ್ತು ಮಾಬಾರ್ ವಿಜಯ:

೮೧೦ನೇ ಇಸವಿಯಲ್ಲಿ ಅಲ್ಲಾವುದ್ದೀನ್‌ನು ದ್ವಾರಸಮುದ್ರ ಮತ್ತು ಮಿಸ್‌ಬರ್‌ನ ಭೂಭಾಗದಲ್ಲಿ ವಿಜಯವನ್ನು ಹೊಂದುವ ಸಲುವಾಗಿ ಮಲ್ಲಿಕ್ ನಾಯಬ್ ಮತ್ತು ಖ್ವಾಜಾ ಹಾಜಿಯನ್ನು ರವಾನೆ ಮಾಡಿದ. ಆ ಭಾಗದ ದೇವಾಲಯಗಳು ಉತ್ಕೃಷ್ಟವಾದ ವಜ್ರವೈಢೂರ್ಯಗಳಿಂದ ತುಂಬಿದ್ದವು ಮತ್ತು ಅಲ್ಲಿನ ರಾಜರು ನಿರ್ಮಾಣ ಮಾಡಿದ ಕಟ್ಟಡಗಳು ಇಡೀ ಹಿಂದೂಸ್ತಾನದಲ್ಲಿ ಪ್ರಸಿದ್ಧಿ ಪಡೆದಿದ್ದವು. ಮಲ್ಲಿಕ್ ನಾಯಬ್ ಮತ್ತು ಖ್ವಾಜಾ ಹಾಜಿಯು ದೇವಗಡವನ್ನು ತಲುಪಿದಾಗ ರಾಮದೇವನು ಸಾವನ್ನಪ್ಪಿದಾನೆಂದು ತಿಳಿದುಬಂದಿತು ಹಾಗೂ ಅವನ ಮಗನು ತಂದೆಯ ಸ್ಥಾನವನ್ನು ತುಂಬಿದ್ದಾನೆಂಬ ವಿಷಯವು ಕೂಡ ಅವರಿಗೆ ತಿಳಿದುಬಂದಿತು. ಅಷ್ಟೇ ಅಲ್ಲದೆ ರಾಮದೇವನ ಮಗನು ತಂದೆಯ ಸಂಪ್ರದಾಯದಂತೆ ಅಲ್ಲಾವುದ್ದೀನನ ಆಧಿಪತ್ಯವನ್ನು ಒಪ್ಪಿಕೊಳ್ಳಲು ತಯಾರಿಲ್ಲ ಎಂಬ ವಿಷಯವು ಅವರಿಗೆ ಸ್ಫುಟವಾಯಿತು. ಸಾಕಷ್ಟು ಮುಂಜಾಗ್ರತೆಯನ್ನು ತೆಗೆದುಕೊಂಡ ಮಲ್ಲಿಕ್‌ನಾಯಬ್‌ನು ತನ್ನ ಒಬ್ಬ ನಂಬಿಕಸ್ಥ ಸರ್ದಾರನನ್ನು ಗಂಗಾನದಿ ತೀರದಲ್ಲಿರುವ ಜಾಲನ್‌ಪುರ ಎಂಬ ಹೆಸರಿನ ಪ್ರದೇಶದ ಸರ್ದಾರನನ್ನಾಗಿ ನೇಮಕ ಮಾಡಿದ ಹಾಗೂ ಸ್ವತಃ ತನ್ನ ಪ್ರಯಾಣವನ್ನು ಮುಂದುವರೆಸಿದ. ಈ ಬಾರಿಯ ಪ್ರಯಾಣದಲ್ಲಿ ಮಲ್ಲಿಕ್‌ನಾಯಬ್‌ನು ಮುಸ್ಲಿಮೇತರರ ಕೊಲೆ ಮತ್ತು ವಿನಾಶಕಾರಿ ಕೃತ್ಯದಲ್ಲಿ ಹೆಚ್ಚಿಗೆ ತೊಡಗಿಸಿಕೊಂಡ. ಮೂರು ತಿಂಗಳ ನಂತರ ಅವನು ಮೇಲೆ ಹೇಳಿದ ತೀರ ಪ್ರದೇಶಗಳನ್ನು ತಲುಪಿದ ಮಲ್ಲಿಕ್ ನಾಯಬ್‌ನು ಕರ್ನಾಟಕದ ರಾಜನಾದ ಬಲ್ಲಾಳದೇವನನ್ನು ಬಂಧಿಸಿದ ಹಾಗೂ ಅವನ ರಾಜ್ಯವನ್ನು ಲೂಟಿ ಹೊಡೆದ ಮತ್ತು ಅತ್ಯಂತ ಉತ್ಕೃಷ್ಟವಾದ ವಜ್ರ ವೈಡೂರ್ಯಗಳನ್ನು ತನ್ನ ವಶಪಡಿಸಿಕೊಂಡ. ಮುಸ್ಲಿಂ ಸರ್ದಾರರು ಆ ಭಾಗದಲ್ಲಿ ಬಳಪದ ಕಲ್ಲನ್ನು ಉಪಯೋಗಿಸಿ ಒಂದು ಮಸೀದಿಯನ್ನು ನಿರ್ಮಾಣ ಮಾಡಿದರು ಹಾಗೂ ಆ ಮಸೀದಿಯಲ್ಲಿ ಅಲ್ಲಾವುದ್ದೀನ್‌ನ ಹೆಸರಿನ ಪ್ರವಚನವನ್ನು ನೀಡಿ ಶಾಸನವನ್ನು ಜಾರಿಗೊಳಿಸಿದರು.

ಈ ಮಸೀದಿಯು ಹಾಲಿ ಬಂದ್ ರಾಮೇಸರ್‌ನ ಬಳಿ ಅಸ್ತಿತ್ವದಲ್ಲಿದೆ ಹಾಗೂ "ಇಲಾಹಿ ಮಸೀದಿ"ಯು ಹೆಸರಿನಿಂದ ಪ್ರಖ್ಯಾತವಾಗಿದೆ. ಈ ಸ್ಥಳದಿಂದ ತಿಳಿದುಬರುವುದೇನೆಂದರೆ ದ್ವಾರಸಮುದ್ರವು ಅಮಾನ್ ನದಿಯ ತೀರದಲ್ಲಿದ್ದು ಈಗ ಪ್ರವಾಹದಿಂದ ನಾಶವಾಗಿದೆ ಎಂಬುದು. ಹಿಂದೂಗಳು ಮಸೀದಿಯ ಪಾವಿತ್ರ್ಯದ ರಕ್ಷಣೆ ಮಾಡುತ್ತ ಆ ಮಸೀದಿಯನ್ನು ಇದುವರೆಗೂ ಕೂಡ ಉಳಿಸಿಕೊಂಡು ಬಂದಿದ್ದಾರೆ ಎಂದು ಬಹುತೇಕ ಜನರ ಅಭಿಪ್ರಾಯವಾಗಿದೆ. ಇನ್ನೂ ಅನೇಕರ ಅಭಿಪ್ರಾಯದ ರೀತ್ಯಾ ಹಿಂದೂಗಳ ಧಾರ್ಮಿಕ ಮುಖಂಡರ ಸಲಹೆಯ ಮೇರೆಗೆ ಸದರಿ ಮಸೀದಿಯನ್ನು ರಕ್ಷಿಸಲಾಗಿದೆಯೆಂದು ಹೇಳಲಾಗಿದೆ.

ಅಷ್ಟೈಶ್ವರ್ಯದ :

ಮಲ್ಲಿಕ್ ನಾಯಬ್‌ನು ಮೇಲೆ ಹೇಳಿದ ಬಂದರುಗಳ ಎಲ್ಲಾ ಐಶ್ವರ್ಯ ಮತ್ತು ನಗನಾಣ್ಯಗಳನ್ನು ತನ್ನ ವಶಕ್ಕೆ ಪಡೆದುಕೊಂಡು ಮರಳುವ ಇರಾದೆಯನ್ನು ಮಾಡಿದ. ಅವನು ಮರಳಿ ಹೋಗಬೇಕೆಂದು ನಿಶ್ಚಯಿಸಿದ ಹಿಂದಿನ ರಾತ್ರಿಯಂದು ಮುಸಲ್ಮಾನರಿಗೆ ಬೆಂಬಲ ನೀಡುವರೆಂದು ಘೋಷಿಸಿದ್ದ ಬ್ರಾಹ್ಮಣರ ಒಂದು ಗುಂಪಿನ ನಡುವೆ ವ್ಯಾಜ್ಯ ಉಂಟಾಯಿತು. ದೇವಸ್ಥಾನಗಳ ನೆಲಮಾಳಿಗೆಯಲ್ಲಿ ಅಡಗಿಸಲಾಗಿದ್ದ ನಿಧಿಯನ್ನು ಹಂಚಿಕೊಳ್ಳುವುದರ ಬಗ್ಗೆ ಆ ಬ್ರಾಹ್ಮಣರ ನಡುವೆ ಜಗಳವಾಗಿತ್ತು. ಬ್ರಾಹ್ಮಣರು ಏರುಧ್ವನಿಯಲ್ಲಿ ಪರಸ್ಪರ ಜಗಳವಾಡಲಾರಂಭಿಸಿದ್ದನ್ನು ಒಬ್ಬ ಮುಸಲ್ಮಾನ್ ಸಿಪಾಯಿಯು ಕೇಳಿಸಿಕೊಂಡ. ಆ ಸಿಪಾಯಿಯು ಪಟ್ಟಣದ ಕೋತ್ವಾಲನಿಗೆ ಸಮಸ್ತ ಸಂಗತಿಯನ್ನು ತಿಳಿಸಿದ ಮತ್ತು ಕೋತ್ವಾಲನು ಆ ಬ್ರಾಹ್ಮಣರನ್ನು ಬಂಧಿಸಿ ಮಲ್ಲಿಕ್ ನಾಯಬ್‌ನ ವಶಕ್ಕೆ ನೀಡಿದ. ಬ್ರಾಹ್ಮಣರು ಮಲ್ಲಿಕ್ ನಾಯಬ್‌ನ ಉಪಾಯದ ತಂತ್ರಗಾರಿಕೆಗೆ ಶರಣಾಗಿದ್ದರು. ಹೀಗಾಗಿ ಅವನ ಕೋಪತಾಪಗಳಿಗೆ ಹೆದರಿ ಅ ನಿಧಿಯಿಂದ ತಾವು ಪಡೆದಿದ್ದ ಭಾಗವನ್ನು ಮಲ್ಲಿಕ್‌ನಾಯಬ್‌ನ ಸಮಕ್ಷಮದಲ್ಲಿ ಕಾಣಿಕೆಯ ರೂಪದಲ್ಲಿ ಹಾಜರುಪಡಿಸಿದರು. ಅಷ್ಟೇ ಅಲ್ಲದೆ ಕಾಡಿನ ಮಧ್ಯೆ ಅಡಗಿಸಿ ಇಡಲಾಗಿದ್ದ ಇನ್ನೂ ಆರು ನಿಧಿ ತಾಣಗಳ ಗುರುತನ್ನು ಕೂಡ ಅವನಿಗೆ ನೀಡಿದರು. ಮಲ್ಲಿಕ್ ನಾಯಬ್‌ನು ಆ ನಿಧಿಯನ್ನು ಕೂಡ ಪಡೆದುಕೊಂಡನು ಮತ್ತು ಈ ರೀತಿಯಲ್ಲಿ ಅಪಾರ ಸಂಪತ್ತು ಅವನ ವಶವಾಯಿತು ಇಲ್ಲಿಂದ ಅವನು ಮಲಬಾರ್ ತಲುಪಿದ ಮತ್ತು ಅಲ್ಲಿಯೂ ಅಪಾರ ಸಂಪತ್ತನ್ನು ವಶಪಡಿಸಿಕೊಂಡು ಮರಳಿದ.

ಅಲ್ಲಾವುದ್ದೀನನ ಭಕ್ಷೀಸು:

ಹಿಜರಿ ಶಕೆ ೮೧೧ರಲ್ಲಿ ಮಲ್ಲಿಕ್ ನಾಯಬನು ದೆಹಲಿಯನ್ನು ತಲುಪಿದ. ಅವನು ಸಾವಿರ ಕಂಬಗಳ ಅರಮನೆಯ ಮುಂಭಾಗದಲ್ಲಿ ಬಾದಶಹನ ವೀಕ್ಷಣೆಯ ಸಲುವಾಗಿ ಯುದ್ಧ ಸಂಪತ್ತಿನ ಪ್ರದರ್ಶನವನ್ನು ಏರ್ಪಡಿಸಿದ್ದ. ಆಸಂಪತ್ತು ಮುನ್ನೂರ

ಹನ್ನೆರಡು ಆನೆಗಳು, ಇಪ್ಪತ್ತು ಸಾವಿರ ಕುದುರೆಗಳು, ತೊಂಭತ್ತಾರು ಮಣ ಚಿನ್ನ (ಅದರ ಮೌಲ್ಯ ಸುಮಾರು ಹತ್ತು ಕೋಟಿ ತಂಗಾ ಬೆಲೆ ಬಾಳುವಂತಹದು) ಹಾಗೂ ಅಗಣಿತ ಚಿನ್ನದ ನಾಣ್ಯಗಳು ಮತ್ತು ಮುತ್ತು, ರತ್ನಗಳಿಂದ ಕೂಡಿದ್ದಾಗಿತ್ತು. ಪರ್ವಿಜ್ ಮತ್ತು ದಾರಾನ ಖಜಾನೆಯನ್ನು ಕೂಡ ನಾಚಿಸುವಂತೆ ಇದ್ದ ಅಲಭ್ಯ, ಅಪೂರ್ವ, ಅಪಾರ ಮತ್ತು ಅಗಣಿತ ಸಂಪತ್ತನ್ನು ಕಂಡ ಬಾದಶಹನು ತುಂಬ ಸಂತೋಷ ಪಟ್ಟ. ಅವನು ಎಂದಿನ ಸಂಪ್ರದಾಯಕ್ಕಿಂತ ಭಿನ್ನವಾಗಿ ಆ ಖಜಾನೆಗಳ ತುಂಬಿದ್ದ ಪೆಟ್ಟಿಗೆಯ ಮುಚ್ಚಳವನ್ನು ತೆರೆದು ತನ್ನ ಸರ್ದಾರರ ನಡುವೆ ಹಂಚಿದ. ಒಬ್ಬರಿಗೆ ಹತ್ತು ಮಣ ಇನ್ನೊಬ್ಬರಿಗೆ ಐದು ಮಣ ಮುಂತಾಗಿ ಸರ್ವರಿಗೂ ತೃಪ್ತಿಕರವಾಗಿ ಸಂಪತ್ತಿನ ವಿಂಗಡಣೆಯನ್ನು ಮಾಡಿದ ಹಾಗೂ ಉಳಿದಂತಹ ಚಿನ್ನವನ್ನು ತನ್ನ ಹೆಸರಿನ ಚಿನ್ನದ ವರಹಗಳಾಗಿ ಮಾರ್ಪಡಿಸಿ ತನ್ನ ಖಜಾನೆಗೆ ಸೇರಿಸಿಕೊಂಡ.

ಕರ್ನಾಟಕದ ಯುದ್ಧದಲ್ಲಿ ಆತನಿಗೆ ದೊರೆತ ಬೆಳ್ಳಿಯ ಬಗ್ಗೆ ಯಾವ ಇತಿಹಾಸಕಾರರು ಕೂಡ ಪ್ರಸ್ತಾಪವನ್ನು ಮಾಡಿಲ್ಲ ಆ ಕಾಲದಲ್ಲಿ ಬೆಳ್ಳಿಯ ಮೌಲ್ಯ ಅಷ್ಟೇನೂ ಹೆಚ್ಚಾಗಿರಲಿಲ್ಲ. ಅಂದಿನ ಕಾಲಮಾನದ ಪದ್ಧತಿಯ ಪ್ರಕಾರ ಚಿನ್ನ ಮಾತ್ರ ಲೇವಾದೇವಿ ಹಾಗೂ ವ್ಯಾಪಾರ ವಹಿವಾಟಿನ ಮೂಲಾಧಾರವಾಗಿತ್ತು. ಕರ್ನಾಟಕದ ಕಡುಬಡವರು ಕೂಡ ಬೆಳ್ಳಿಯ ಬಳಕೆಯು ತಮ್ಮ ಘನತೆಗೆ ತಕ್ಕದ್ದಲ್ಲವೆಂದು ಭಾವಿಸುತ್ತಿದ್ದರು. ಹಾಗಿರುವಾಗ ಗಣ್ಯರು ಬೆಳ್ಳಿಯನ್ನು ಬಳಸುವುದು ಅವರ ಘನತೆಗೆ ತಕ್ಕ ವಿಷಯವಾಗಿರಲಿಲ್ಲ. ಅಲ್ಲಿನ ಮಧ್ಯಮವರ್ಗದ ಜನರು ಚಿನ್ನದ ತಟ್ಟೆಯಲ್ಲಿ ಉಣ್ಣುತ್ತಾರೆ.

ನವ ಮುಸ್ಲಿಮರ ಕೊಲೆ:

ಅಲ್ಲಾವುದ್ದೀನನ ಕಾಲಾವಧಿಯ ಅಂತಿಮ ದಿನಗಳಲ್ಲಿ ನಡೆದ ಅತ್ಯಂತ ಆಶ್ಚರ್ಯಜನಕವಾದ ಘಟನೆ ಎಂದರೆ ನವ ಮುಸ್ಲಿಮ್ ಮೊಘಲರ ಕಗ್ಗೊಲೆಯ ವಿಷಯವಾಗಿದೆ. ಅದರ ವಿವರಗಳು ಇಂತಿವೆ: ನವ ಮುಸ್ಲಿಮ್ ಮೊಗಲರನ್ನು ನೌಕರಿಯಿಂದ ಹೊರಗಿಡಬೇಕೆಂದು ಅಲ್ಲಾವುದ್ದೀನನ ಮನಸ್ಸಿನಲ್ಲಿ ಅಲೋಚನೆಯೊಂದು ಮೂಡಿತು. ಈ ಆಲೋಚನೆಯ ಹಿನ್ನೆಲೆಯಲ್ಲಿ ಅವನು ನವಮುಸ್ಲಿಮ್ ಮೊಘಲರನ್ನು ತನ್ನ ನೌಕರಿಯಿಂದ ವಜಾ ಮಾಡುವುದಾಗಿಯೂ ಯಾರಿಗಾದರೂ ಆಸಕ್ತಿಯಿದ್ದಲ್ಲಿ ಅವರುಗಳು ಇನ್ನಿತರೆ ಸರ್ದಾರರ ಮತ್ತು ಗಣ್ಯರ ಮನೆಯಲ್ಲಿ ಸೇವೆ ಸಲ್ಲಿಸಬಹುದೆಂತೆಲೂ ಅವನು ರಾಜಾಜ್ಞೆಯನ್ನು ಘೋಷಿಸಿದ. ಹಾಗೂ ಈ ವ್ಯವಸ್ಥೆಗೆ ಬದ್ಧರಾಗದ ನವ ಮೊಘಲರು ತಮಗೆ ಇಷ್ಟವಾದ ಬೇರೆ ರಾಜ್ಯಗಳಿಗೆ ಹೋಗಬಹುದೆಂದು ಅವನು ಅವಕಾಶವನ್ನು ಕೂಡ ನೀಡಿದ. ಈ ಫರ್ಮಾನನ್ನು ಅವನು ಹೊರಡಿಸಿದ ಬಳಿಕ ಅನೇಕ ಮೊಘಲರು ಬಾದಶಹನ ಬಳಿ ನೌಕರಿಯನ್ನು ತೊರೆದು ಸರ್ದಾರುಗಳ ಬಳಿ ನೌಕರಿಯನ್ನು ಕಂಡುಕೊಂಡರು. ಅದರೆ ಅನೇಕರು ಸರ್ದಾರರ ಬಳಿ ಸೇವೆ ಸಲ್ಲಿಸುವುದು

ತಮ್ಮ ಅಂತಸ್ತಿಗೆ ತಕ್ಕದಲ್ಲವೆಂದು ಭಾವಿಸಿದರು. ಹಾಗೂ ಬಾದಶಹನ ಸೇವೆಯಿಂದ ವಜಾಗೊಂಡ ನಂತರವೂ ದೆಹಲಿಯಲ್ಲಿಯೇ ತಮ್ಮ ವಾಸವನ್ನು ಮುಂದುವರೆಸಿದರು. ಕೆಲಕಾಲದ ನಂತರ ಈ ಎರಡನೇ ಗುಂಪಿನವರು ಕಡಿಮೆ ಸಂಬಳದ ಮೇರೆಗೆ ಬಾದಶಹನ ಬಳಿ ಉದ್ಯೋಗವನ್ನು ಕಂಡುಕೊಂಡು ತಮ್ಮ ಜೀವನವನ್ನು ನಡೆಸತೊಡಗಿದರು. ಹಾಗೂ ಅಲ್ಲಾವುದ್ದೀನನು ಮುಂದೆ ಬರುವ ದಿನಗಳಲ್ಲಿ ತಮಗೆ ತಮ್ಮ ಹಿಂದಿನ ಉದ್ಯೋಗವನ್ನು ಮರಳಿ ನೀಡಬಹುದೆಂಬ ನಿರೀಕ್ಷೆಯಲ್ಲಿದ್ದರು. ಈ ಘಟನೆ ನಡೆದು ಬಹು ದೀರ್ಘ ಕಾಲಾವಧಿಯು ಗತಿಸಿತ್ತು. ಆದರೆ ಅಲ್ಲಾವುದ್ದೀನನು ಅವರ ಕಡೆ ಯಾವುದೇ ಗಮನವನ್ನು ನೀಡಲಿಲ್ಲ. ಬಡತನದ ಕ್ರೂರ ಅಟ್ಟಹಾಸದಿಂದ ಕಂಗೆಟ್ಟ ಈ ಸಂಚುಕೋರ ಮೊಘಲರು ಬಾದಶಹನು ಶಿಕಾರಿಗೆ ಹೋಗುವಾಗ ಅವನ ಕೊಲೆ ಮಾಡಬೇಕೆಂದು ಸಂಚನ್ನು ರೂಪಿಸಿದರು. ದುರಾದೃಷ್ಟವಶಾತ್ ಅಲ್ಲಾವುದ್ದೀನನಿಗೆ ಅವರ ಸಂಚಿನ ಸುಳಿವು ದೊರಕಿತು. ಅವನು ರಾಜಕಾರಣದ ಚದುರಂಗದಾಟದಲ್ಲಿ ತನ್ನ ಅತ್ಯಂತ ಸಮೀಪ ಸಂಬಂಧಿಗಳಿಗೂ ಕ್ಷಮೆ ನೀಡುವ ಮನಃಸ್ಥಿತಿಯನ್ನು ಹೊಂದಿರಲಿಲ್ಲ. ತನ್ನ ತಂದೆ ಅಥವಾ ಮಗನಿಗೆ ಆದರೂ ಅವನು ರಿಯಾಯಿತಿಯನ್ನು ನೀಡುವ ಧೋರಣೆಯನ್ನು ಹೊಂದಿರಲಿಲ್ಲ. ದಯೆ ಅಥವಾ ಕರುಣೆಯ ಲವಲೇಷ ಅಂಶವೂ ಅವನಿಂದ ಬಹು ದೂರವಾಗಿತ್ತು. ಅಂತಹ ಸಂದರ್ಭಗಳಲ್ಲಿ ಅವನು ನಿರ್ದಯಿಯಾಗಿ ಸಂಬಂಧಪಟ್ಟವರನ್ನು ಘೋರ ಶಿಕ್ಷೆಗೆ ಗುರಿಪಡಿಸುತ್ತಿದ್ದ. ಶರೀಯತ್‌ನ ಉಪಬಂಧಗಳನ್ನು ಕೂಡ ಅವನು ಲೆಕ್ಕಿಸುತ್ತಿರಲಿಲ್ಲ. ಹೀಗಾಗಿ ಅವನು ಮೊಘಲರನ್ನು ಕೊಲೆ ಮಾಡಬೇಕೆಂದು ಆಜ್ಞೆ ಮಾಡಿದ. ಮೊಘಲರನ್ನು ಕಂಡ ಕೂಡಲೇ ಎಲ್ಲೆಂದರಲ್ಲಿ ಕೊಲೆ ಮಾಡುವುದಕ್ಕೆ ಯಾವುದೇ ಅಡೆತಡೆ ಇರಲಿಲ್ಲ. ದೆಹಲಿಯಲ್ಲದೆ ಉಳಿದ ರಾಜ್ಯಗಳಲ್ಲೂ ಇದೇ ಆಜ್ಞೆ ಜಾರಿಯಾಯಿತು. ಒಟ್ಟಿನಲ್ಲಿ ಅವನ ಆಳ್ವಿಕೆಯ ಎಲ್ಲಾ ಪ್ರದೇಶಗಳಿಗೂ ಈ ಆಜ್ಞೆಯು ಅನ್ವಯಿಸಿತು. ಹಾಗೂ ಮೊಘಲರ ಕಗ್ಗೊಲೆಯು ನ್ಯಾಯೋಚಿತವಾದುದು ಎಂದು ನಿರ್ಧರಿಸಿ ಕೊಲೆಯಾದವನ ಸಮಸ್ತ ಆಸ್ತಿಯು ಕೂಡ ಕೊಲೆ ಮಾಡಿದವನ ಒಡೆತನಕ್ಕೆ ಸೇರತಕ್ಕದ್ದೆಂಬ ಆಜ್ಞೆಯು ಕೂಡ ಜಾರಿಯಾಯಿತು. ಈ ಆಜ್ಞೆಯನ್ನು ಕೇಳಿದ ಕೂಡಲೇ ಸಭ್ಯರು, ಕಳ್ಳಕಾಕರು, ನೀಚರು ಮತ್ತು ಸಿಪಾಯಿಗಳು ಮೊದಲಾದವರುಗಳು ತಮ್ಮ ಕೈಗಳಲ್ಲಿ ಕತ್ತಿಯನ್ನು ಹಿಡಿದು ಸುತ್ತಾಡತೊಡಗಿದರು. ಬಾದಶಹನ ಆಜ್ಞೆಯನ್ನು ಜಾರಿ ಮಾಡುವ ಹುಮ್ಮಸ್ಸಿನಲ್ಲಿ ಮತ್ತು ಮೊಘಲರ ಸಂಪತ್ತನ್ನು ದೋಚಿಕೊಳ್ಳುವ ಹವಣಿಕೆಯಲ್ಲಿ ಮೊಘಲರನ್ನು ಕಗ್ಗೊಲೆಗೆ ಈಡು ಮಾಡಿ ಅವರ ವಂಶಗಳನ್ನು ಹೆಸರಿಲ್ಲದಂತೆ ನಾಶ ಮಾಡಲಾಯಿತು. ಅವನ ಆಳ್ವಿಕೆಯ ಪರಿಧಿಯಲ್ಲಿ ಸುಮಾರು ಹದಿನಾಲ್ಕರಿಂದ ಹದಿನೈದು ಸಾವಿರ ಮೊಘಲರ ಕಗ್ಗೊಲೆ ಮಾಡಲಾಯಿತು. ಅವರ ಸಂಪತ್ತನ್ನು ದೋಚಲಾಯಿತು ಅವರ ಕುಟುಂಬದ ಸದಸ್ಯರ ಸರ್ವನಾಶ ಮಾಡಲಾಯಿತು. ಒಟ್ಟಾರೆ ಹಿಂದೂಸ್ತಾನದಲ್ಲಿ ಮೊಘಲರ ಸಂತತಿಯನ್ನು ಸಂಪೂರ್ಣವಾಗಿ ನಾಶ ಮಾಡಲಾಯಿತು.

ಬುಡಕಟ್ಟು ಜನಾಂಗದವರ ಕೊಲೆ:

ಈ ಕಾರಣದಿಂದ ಅಲ್ಲಾವುದ್ದೀನನ ಕಾಲಾವಧಿಯ ಕೃತ್ಯಗಳನ್ನು ಫಿರೌನ್ ಮತ್ತು ಜೆಹಾಕ್‌ನ ರಾಜಕೀಯ ದೌರ್ಜನ್ಯಕ್ಕಿಂತಲೂ ಘೋರ ಎಂದು ಭಾವಿಸಲಾಗಿದೆ. ಮತಾಂತರಗೊಂಡಿದ್ದ ನವ ಮುಸ್ಲಿಮ್ ಮೊಘಲರ ಕಗ್ಗೊಲೆಯಾದ ವರ್ಷವೇ ಬುಡಕಟ್ಟು ಜನಾಂಗದವರ ಒಂದು ಗುಂಪು ದೆಹಲಿಗೆ ಆಗಮಿಸಿದೆ ಎಂಬ ಸುದ್ದಿಯು ಅಲ್ಲಾವುದ್ದೀನನಿಗೆ ತಲುಪಿತು. ಅವರುಗಳು ತಮ್ಮ ಸಂಪ್ರದಾಯಕ ಆಚರಣೆಯ ಮೇರೆಗೆ ವಾರ್ಷಿಕವಾಗಿ ಒಂದು ಸಾರಿ ಸಂತೋಷ ಸಮಾರಂಭವನ್ನು ಆಚರಿಸುತ್ತಾರೆಂತಲೂ ಮತ್ತು ಆ ದಿನದಂದು ತಾಯಿ ಮತ್ತು ಸಹೋದರಿಯಂತಹ ಸಂಬಂಧಿಗಳ ಜೊತೆಯಲ್ಲಿ ಸಮಾಗಮ ನಡೆಸಲು ಖುಲ್ಲಾ ಅನುಮತಿಯಿದೆ ಎಂತಲೂ ಅವನಿಗೆ ತಿಳಿದು ಬಂದಿತು. ಅಲ್ಲಾವುದ್ದೀನನು ಆ ಗುಂಪಿನ ಕೊಲೆಗೆ ಆಜ್ಞೆಯನ್ನು ಮಾಡಿದ. ಅವನ ಈ ಆಜ್ಞೆಯ ಮೇರೆಗೆ ಸದರಿ ಗುಂಪಿನ ಸಂತತಿಯ ಸರ್ವನಾಶವನ್ನು ಮಾಡಲಾಯಿತು.

ನಡೆ–ನುಡಿ:

ಈಗಾಗಲೇ ಹೇಳಿರುವಂತೆ ಅಲ್ಲಾವುದ್ದೀನನು ತುಂಬಾ ಶೀಘ್ರ ಕೋಪಿಯಾಗಿದ್ದ. ಆದ್ದರಿಂದ ಯಾವನೇ ಅಪರಾಧಿ ಅಥವಾ ಪಾಪಿಯ ಪರವಾಗಿ ಬಾದಶಹನ ಬಳಿ ಶಿಫಾರಸ್ಸು ಮಾಡಲು ಯಾವ ಆಸ್ಥಾನಿಕನು ಅಥವಾ ಗಣ್ಯವ್ಯಕ್ತಿಗಳಿಗೆ ಆಗಲೀ ಸಾಮರ್ಥ್ಯವಿರಲಿಲ್ಲ. ಯಾವನೇ ಒಬ್ಬ ವ್ಯಕ್ತಿಯಿಂದ ಬೇಸರ ಉಂಟಾದರೆ ಜೀವಮಾನದುದ್ದಕ್ಕೂ ಆ ವ್ಯಕ್ತಿಯೊಂದಿಗೆ ಅವನು ಮಾತನಾಡುತ್ತಿರಲಿಲ್ಲ, ಹಾಗೂ ಅವನೊಂದಿಗೆ ವೈರತ್ವವನ್ನು ಉಳಿಸಿಕೊಳ್ಳುತ್ತಿದ್ದ. ತನ್ನ ಆಳ್ವಿಕೆಯ ಆರಂಭದ ದಿನಗಳಲ್ಲಿ ಅಲ್ಲಾವುದ್ದೀನನು ಆಡಳಿತದ ನಿರ್ವಹಣೆಯ ಸಂದರ್ಭದಲ್ಲಿ ಇತರೆಯವರಿಂದ ಸಲಹೆ ಸೂಚನೆಗಳನ್ನು ಪಡೆದುಕೊಳ್ಳುತ್ತಿದ್ದ ಮತ್ತು ಕೆಲವು ಸರ್ದಾರರು ಅವನ ಕಾರ್ಯತಂತ್ರದಲ್ಲಿ ಸಹಭಾಗಿಗಳಾಗಿರುತ್ತಿದ್ದರು. ಆದರೆ ಆಳ್ವಿಕೆಯ ಕೊನೆಯ ಭಾಗದಲ್ಲಿ (ಅವನು ಹಿಂದೂಸ್ಥಾನದ ಎಲ್ಲಾ ರಾಜ್ಯಗಳಲ್ಲಿಯೂ ವಿಜಯವನ್ನು ಹೊಂದಿದ ಬಳಿಕ) ಅವನ ಅಹಂಕಾರ ಮತ್ತು ಕ್ರೌರ್ಯಕ್ಕೆ ಮಿತಿಯೇ ಇರಲಿಲ್ಲ ಹಾಗೂ ಅವನು ತನ್ನ ಸರ್ದಾರರಿಂದ ಸಲಹೆ ಸೂಚನೆಗಳನ್ನು ಪಡೆಯುವ ಕ್ರಮವನ್ನು ಕೈಬಿಟ್ಟಿದ್ದ.

ಅಲ್ಲಾವುದ್ದೀನ್ ಖಿಲ್ಜಿಗೆ ಹಿಂದೂಸ್ಥಾನದಲ್ಲಿ ಎಷ್ಟೊಂದು ವಿಜಯಲಕ್ಷ್ಮಿ ಒಲಿದಿದ್ದಳೆಂದರೆ ಬೇರೆ ಯಾವ ರಾಜನಿಗೂ ಈ ಅದೃಷ್ಟ ಒಲಿದಿರಲಿಲ್ಲ ಎಂಬುದು ಇತಿಹಾಸಕಾರರ ಅಭಿಮತವಾಗಿದೆ. ಹಾಗೂ ಅವನು ನಿರ್ಮಾಣ ಮಾಡಿದ ಪ್ರಮಾಣದ ಮಸೀದಿಗಳು ಮತ್ತು ಕೆರೆಕಟ್ಟೆಗಳು, ಛತ್ರಗಳು, ಸೂಫಿಗಳ ಧಾರ್ಮಿಕ ಕೇಂದ್ರಗಳು ಆಶ್ರಮಗಳು ಮತ್ತು ಕೋಟೆ ಕೊತ್ತಲಗಳು ಮೊದಲಾದವುಗಳನ್ನು ಇನ್ನು ಯಾವ

ಬಾದಶಹನು ಕೂಡ ನಿರ್ಮಾಣ ಮಾಡಲಿಲ್ಲ. ಎಲ್ಲಾ ಜ್ಞಾನ ಶಾಖೆಯ ಅಪಾರ ಕಲಾವಿದರು ಮತ್ತು ವಿದ್ವಾಂಸರು ಅವನ ಕಾಲಾವಧಿಯಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು. ಅಷ್ಟೊಂದು ಸಂಖ್ಯೆಯ ವಿದ್ವಾಂಸರು ಮತ್ತು ಕಲಾವಿದರು ಇನ್ನು ಯಾವ ಬಾದಶಹನ ಕಾಲದಲ್ಲಿಯೂ ಇರಲಿಲ್ಲ. ಅಲ್ಲಾವುದ್ದೀನನ ಕಾಲದಲ್ಲಿ ನ್ಯಾಯಪರತೆ ಮತ್ತು ಸತ್ಯಸಂಧತೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ವಿಧೇಯತೆ ಮತ್ತು ಅಧೀನತೆಯ ಮೂಲಕ ಅವನು ಚಕ್ರಾಧಿಪತಿಯಾಗಿ ಮೆರೆದ. ಹಾಗೂ ವಿದ್ರೋಹ ಮತ್ತು ಸಂಚು, ಪಿತೂರಿಯನ್ನು ಅವನು ಬಗ್ಗು ಬಡಿದಂತಹ ಘಟನೆಗಳು ಇನ್ನು ಯಾವ ಬಾದಶಹನ ಕಾಲದಲ್ಲಿಯೂ ಸಿಗುವುದಿಲ್ಲ.

ಧಾರ್ಮಿಕ ಮುಖಂಡರು:

ಅಂತೆಯೇ ಅವನ ಕಾಲಾವಧಿಯಲ್ಲಿ ಸಂತರು, ಸೂಫಿಗಳು, ವಿದ್ವಾಂಸರು ಹಾಗೂ ಫಕೀರರು ಮೊದಲಾದ ಧಾರ್ಮಿಕ ಗುಂಪಿಗೆ ಸೇರಿದಂಥವರು ಮತ್ತು ವಿವಿಧ ಪಂಥಗಳು ಅಧಿಕ ಸಂಖ್ಯೆಯಲ್ಲಿದ್ದವು. ಅಂತಹ ಪವಿತ್ರ ವ್ಯಕ್ತಿಗಳು ಮತ್ತು ತಂಡಗಳು ಇನ್ನು ಯಾವ ಕಾಲಮಾನದಲ್ಲಿಯೂ ದೆಹಲಿಯಲ್ಲಿ ಒಟ್ಟುಗೂಡಿರಲಿಲ್ಲ. ಆ ಸೂಫಿಗಳ ಪೈಕಿ ಇಡೀ ಪ್ರಪಂಚದಲ್ಲಿಯೇ ಪ್ರಖ್ಯಾತವಾಗಿರುವ ಪವಿತ್ರ ಸೂಫಿಸಂತರಾದ ಹಜರತ್, ಶೇಕುಲ್ ನಿಜಾಮುದ್ದೀನ್ ಔಲಿಯಾ ಕೂಡಾ ಒಬ್ಬರು. ಸದರಿ ಸೂಫಿಯವರು ಅಲ್ಲಾವುದ್ದೀನನ ಕಾಲಾವಧಿಯಲ್ಲಿ ತಮ್ಮ ಅಂತರಂಗದ ಆತ್ಮಶಕ್ತಿಯಿಂದ ಜನತೆಗೆ ಮಾರ್ಗದರ್ಶನವನ್ನು ನೀಡುತ್ತಿದ್ದರು. ಪ್ರತಿವರ್ಷದ ಮೊಹರಂ ತಿಂಗಳ ೫ನೇ ದಿನದಿಂದ ೧೦ ದಿನದವರೆಗೂ ಸದರಿ ಸೂಫಿಯವರ ಧಾರ್ಮಿಕ ಕೇಂದ್ರದಲ್ಲಿ ಸದರಿಯವರ ಗುರುಗಳಾದ ಹಜರತ್ ಶೇಕ್ ಫರೀದುದ್ದೀನ್ ಗಂಜ್ ಶಕರ್‌ರವರ ಉರುಸ್ ಆಚರಣೆಯನ್ನು ನಡೆಸಲಾಗುತ್ತಿತ್ತು. ಆ ಉರುಸ್‌ನ ಆಚರಣೆಯ ಸಂದರ್ಭದಲ್ಲಿ ಹಿಂದೂಸ್ತಾನದ ಮೂಲೆ ಮೂಲೆಗಳಿಂದ ಜನರು ಬಂದು ಭಾಗವಹಿಸುತ್ತಿದ್ದರು. ಆ ಪವಿತ್ರ ಸಮಾರಂಭದಲ್ಲಿ ದೈವಭಕ್ತಿಯ ಅವೇಶಭರಿತವಾದ ಉದ್ಘೋಷಗಳು ಇಡೀ ವಾತಾವರಣವನ್ನು ತನ್ಮಯಗೊಳಿಸುತ್ತಿದ್ದವು. ಆ ಅವಧಿಯ ಇನ್ನೊಬ್ಬ ಪ್ರಖ್ಯಾತ ಸೂಫಿ ದಿವ್ಯಚೇತನವಾಗಿದ್ದವರು ಹಜರತ್ ಶೇಕ್ ಅಲ್ಲಾವುದ್ದೀನ್ ಆಗಿದ್ದರು. ಸದರಿಯವರು ಹಜರತ್ ಫರೀದುದ್ದೀನ್ ಗಂಜ್ ಶಕರ್‌ರವರ ಮೊಮ್ಮಗನಾಗಿದ್ದರು. ಸದರಿಯುವರು ಅಜೋಧನ್ ಕಸಬಾ ಆಶ್ರಮದ ಆಡಳಿತಗಾರರಾಗಿದ್ದು ಅತ್ಯಂತ ಧರ್ಮಭೀರು ಮತ್ತು ಪವಿತ್ರ ವ್ಯಕ್ತಿತ್ವವನ್ನು ಹೊಂದಿದ್ದರು. ಸದರಿಯವರ ಭಕ್ತಿ ಮತ್ತು ಪ್ರಾರ್ಥನೆಗೆ ಎಲ್ಲೆಯೇ ಇರಲಿಲ್ಲ. ಭಕ್ತಿ ರಸದಲ್ಲಿ ಇಹಪರವನ್ನು ಮರೆಯುತ್ತಿದ್ದ ಅವರ ಭಾವಸಮಾಧಿಯನ್ನು ಕಂಡು ಅವರಿಗೆ "ದೇವದೂತನ ಗುಣ" ಎಂದು ಕರೆಯುತ್ತಿದ್ದರು.

ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯ ಮೂರನೇ ಮತ್ತು ಬಹು ಮುಖ್ಯ

ಧಾರ್ಮಿಕ ವ್ಯಕ್ತಿಯು ಮೌಲಾನ ರುಕ್ನುದ್ದೀನ್ ಬಿನ್ ಶೇಕ್ ಸದ್ರುದ್ದೀನ್ ಆರೀಫ್ ಆಗಿದ್ದರು. ಸದರಿಯವರು ಮುಲ್ತಾನಿನಲ್ಲಿ ಸತ್ಯಾರ್ಥಿಗಳ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಮುಲ್ತಾನ್ ಮತ್ತು ಔಛ್‌ನ ಜನತೆಯು ಸದರಿಯವರ ಆಶೀರ್ವಾದದಿಂದ ಧಾರ್ಮಿಕ ಪ್ರೇರಣೆಯನ್ನು ಪಡೆದುಕೊಳ್ಳುತ್ತಿದ್ದರು. ಹಾಗೂ ಸದರಿಯವರ ಮಾರ್ಗದರ್ಶನದ ಮೇರೆಗೆ ಕ್ರಿಯಾಶೀಲರಾಗಿ ಲೌಕಿಕ ಮತ್ತು ಅಲೌಕಿಕ ಲೋಕಗಳ ದಿವ್ಯತೆಯ ಅನುಭವವನ್ನು ಪಡೆಯುತ್ತಿದ್ದರು. ಹಜರತ್ ಶೇಕ್ ಸದ್ರುದ್ದೀನ್ ಆರೀಫ್‌ರವರು ಸೂಫಿಗಳಾಗಿದ್ದರು ಆದರೆ ದಾನಧರ್ಮದಲ್ಲಿ ಅವರದು ಎತ್ತಿದ ಕೈಯಾಗಿತ್ತು. ಸದರಿಯವರಿಗೆ ಅವರ ತಂದೆಯ ವಾರೀಸುದಾರಿಯ ಮೂಲಕ ಅಪಾರ ಧನಕನಕಗಳು ಪ್ರಾಪ್ತಿಯಾಗಿದ್ದವು. ಅಷ್ಟೇ ಅಲ್ಲದೆ ಅಪಾರ ಕಾಣಿಕೆಗಳು ಕೂಡ ಅವರ ಆಶ್ರಮಕ್ಕೆ ಬಂದು ಬೀಳುತ್ತಿದ್ದವು. ತಮಗೆ ದೊರಕಿದ ಎಲ್ಲಾ ಐಶ್ವರ್ಯವನ್ನು ಕೂಡ ಅವರು ದಾನ ಧರ್ಮ ಮತ್ತು ಜನತೆಗಾಗಿ ವಿನಿಯೋಗಿಸುತ್ತಿದ್ದರು. ಸದರಿಯವರು ತಮ್ಮ ಬದುಕನ್ನು ಸಾಲಗಾರರಾಗಿಯೇ ಕಳೆದರು. ಆ ಕಾಲಾವಧಿಯ ಮತ್ತೊಬ್ಬ ಅತ್ಯಂತ ಧಾರ್ಮಿಕ ಮತ್ತು ಪ್ರಭಾವೀ ವ್ಯಕ್ತಿತ್ವವೆಂದರೆ ಸೈಯದ್ ತಾಜುದ್ದೀನ್ ಬಿನ್ ಸೈಯದ್ ಖುತ್ಬುದ್ದೀನ್ ಆಗಿದ್ದರು. ಸದರಿಯವರು ಬಹುಕಾಲದವರೆಗೂ ಬದಾಯೂನಿನ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು. ಅಪಾರ ವಿದ್ವತ್ತು ಮತ್ತು ಇನ್ನೂ ಅನೇಕ ಕಲೆಗಳಲ್ಲಿ ಪಾರಂಗತರಾಗಿದ್ದ ಅವರ ವ್ಯಕ್ತಿತ್ವಕ್ಕೆ ಸಾಟಿಯಾದ ಇನ್ನೊಬ್ಬರು ಇರಲಿಲ್ಲ. ಸದರಿಯವರ ತಮ್ಮನಾದ ಸೈಯದ್ ರುಕ್ನುದ್ದೀನ್ ಸಾಹೇಬರು ಕಥಾದ ನ್ಯಾಯಾಧೀಶರಾಗಿದ್ದು ಎಲ್ಲಾ ವರ್ಗದ ಜನರಲ್ಲಿಯೂ ಅಪಾರ ಮನ್ನಣೆಯನ್ನು ಗಳಿಸಿದ್ದರು. ಸಾದಾತ್ ಕಹೇಲ್ (ಸಾದಾತ್ ಕಹೇಲ್ ಎಂಬುದು ಮುದ್ರಣ ದೋಷವಾಗಿದೆ. ಇಲ್ಲಿ ಸಾದಾತ್ ಕೇತಲ್ ಎಂದಾಗಿರಬೇಕಿತ್ತು) ಸಾದಾತ್ ಕೇತಲ್‌ನಲ್ಲಿ ಸೈಯದ್ ನಜೀಬುದ್ದೀನ್ ಮತ್ತು ಅವರ ಸಹೋದರರಾದ ಸೈಯದ್ ಮೊಗೈಸುದ್ದೀನ್ ಇಬ್ಬರು ಕೂಡ ತಮ್ಮ ಉನ್ನತ ಚಾರಿತ್ರ್ಯದ ಹಾಗೂ ಧಾರ್ಮಿಕ ಮನೋಭಾವದ ವಿಚಾರದಲ್ಲಿ ಖ್ಯಾತನಾಮರಾಗಿದ್ದಾರೆ. ಆ ಹಿರಿಯ ಚೇತನಗಳನ್ನು ಜನಬಳಕೆಯಲ್ಲಿ ಸಾದಾತ್ ನವಾಯತ ಎಂದು ಕರೆಯಲಾಗುತ್ತದೆ.

ವಿದ್ವಾಂಸ ಗುರುಗಳು:

ಮೇಲೆ ಹೇಳಿದ ಅದ್ಭುತ ಧಾರ್ಮಿಕ ಹಿರಿಯರು ಸೇರಿದಂತೆ ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯಲ್ಲಿ ಸತ್ಯಸಂಧರಾದ ಕರುಣಾಮಯಿಗಳು ಮತ್ತು ಧಾರ್ಮಿಕ ಮುಖಂಡರು ಇನ್ನೂ ಅಪಾರ ಸಂಖ್ಯೆಯಲ್ಲಿದ್ದು ಅವರ ವಿವರಗಳನ್ನು ಪ್ರಸ್ತಾಪಿಸಿದಲ್ಲಿ ಸುದೀರ್ಘವಾಗುತ್ತದೆ. ಆ ವಿಶಿಷ್ಟ ವ್ಯಕ್ತಿಗಳ ಪೈಕಿ ಖಾಜಿ ಸದ್ರುದ್ದೀನ್ ಆರೀಫುಲ್ ಮುಮಾಲಿಕುಲ್ ಮೊಕಾತಿಬ್ ಬಾ ಸದರ್ ಜಹಾನ್ ಬಹಳ ವೈಶಿಷ್ಟ್ಯಪೂರ್ಣವಾದ ವ್ಯಕ್ತಿಯಾಗಿದ್ದರು. ಅವರ ನಂತರ ಖಾಜಿ ಜಲಾಲುದ್ದೀನ್‌ರವರು ದೇಶದ ಮುಖ್ಯ

ನ್ಯಾಯಾಧೀಶರಾಗಿ ನೇಮಕಗೊಂಡರು ಮತ್ತು ಮೌಲಾನ ಜಿಯಾವುದ್ದೀನ್ ಬಯಾನವಿ ಮತ ಪಂಡಿತರಾಗಿ ನೇಮಕವಾದರು. ಅಲ್ಲಾವುದ್ದೀನ್ ಖಿಲ್ಜಿಯ ಕೊನೆಗಾಲದಲ್ಲಿ ಮುಲ್ಕ್ ಇಫ್ತಿಖಾರ್ ಹಮೀದುದ್ದೀನ್ ಮುಲ್ತಾನಿಗೆ ನ್ಯಾಯಾಧೀಶರ ಹುದ್ದೆಯಲ್ಲಿ ನೇಮಕ ಮಾಡಲಾಯಿತು ಮೇಲ್ಕಂಡ ಹಿರಿಯ ಧಾರ್ಮಿಕ ವಿದ್ವಾಂಸರಲ್ಲದೆ ನಲವತ್ತಾರು ಮಂದಿ ಅಪ್ರತಿಮ ಜ್ಞಾನಿಗಳಾದ ಘನ ವಿದ್ವಾಂಸರು ತಮ್ಮ ಜ್ಞಾನ ಮತ್ತು ಧಾರ್ಮಿಕ ಪ್ರಜ್ಞೆಯಿಂದ ದೇಶಕ್ಕೆ ನೈತಿಕವಾದ ಭದ್ರ ಬುನಾದಿಯನ್ನು ರೂಪಿಸಿಕೊಡುವಲ್ಲಿ ಶ್ರಮಿಸಿದ್ದಾರೆ. ಆ ಸುಜ್ಞಾನಿಗಳ ನಾಮಾವಳಿಗಳು ಕೆಳಕಂಡಂತೆ ಇವೆ:

೧. ಖಾಜಿ ಫಕ್ರುದ್ದೀನ್ ನಾಫಿಲ
೨. ಖಾಜಿ ಫಕ್ರುದ್ದೀನ್ ಕೀರ್ಮಾನಿ
೩. ಮೌಲಾನ ನಸೀರುದ್ದೀನ್ ಘನಿ
೪. ಮೌಲಾನ ತಾಜುದ್ದೀನ್ ಮುಕದ್ದಮ್
೫. ಖಾಜಿ ಜಿಯಾವುದ್ದೀನ್ ಬಯಾನವಿ
೬. ಖಾಜಿ ಜೈನುದ್ದೀನ್ ನಾಫಿಲ
೭. ಮೌಲಾನ ಜಹೀರುದ್ದೀನ್ ಲಿಂಗ್
೮. ಮೌಲಾನ ಜಹೀರುದ್ದೀನ್ ಬೆಹ್ಕರಿ
೯. ಮೌಲಾನ ಶರಾಕತಿ
೧೦. ಮೌಲಾನ ನಸೀರುದ್ದೀನ್ ರಾಜಿ
೧೧. ಮೌಲಾನ ಅಲ್ಲಾವುದ್ದೀನ್ ಸದರ್ ಶರೀಫ್
೧೨. ಮೌಲಾನ ಮೀರಾನ್ ಬಾಹಕ್
೧೩. ಮೌಲಾನ ಬಖ್ತಿಯಾರುದ್ದೀನ್ ಬಯಾನವಿ
೧೪. ಮೌಲಾನ ಶಂಸುದ್ದೀನ್
೧೫. ಮೌಲಾನ ಸದ್ರುದ್ದೀನ್
೧೬. ಮೌಲಾನ ಅಲ್ಲಾವುದ್ದೀನ್ ಲಾಹೋರಿ
೧೭. ಖಾಜಿ ಶಂಸುದ್ದೀನ್ ಕಾರ್‌ಜೋಯಿ
೧೮. ಮೌಲಾನ ಶಂಸುದ್ದೀನ್ ಬಕ್ಷಿ
೧೯. ಮೌಲಾನ ಶಂಸುದ್ದೀನ್
೨೦. ಮೌಲಾನ ಸದ್ರುದ್ದೀನ್ ಯಾವ
೨೧. ಮೌಲಾನ ಮೊಯಿನುದ್ದೀನ್ ನೋಲ್ವಿ

೨೨. ಮೌಲಾನ ಇಫ್ತಿಕಾರುದ್ದೀನ್ ರಾಜಿ
೨೩. ಮೌಲಾನ ಮೊಯೀನುದ್ದೀನ್ ಪಹೇತಿ
೨೪. ಮೌಲಾನ ನಜ್ಮುದ್ದೀನ್ ಇಂತೆಶಾಲ್
೨೫. ಮೌಲಾನ ಹಮೀದುದ್ದೀನ್ ಬಹೂರಿ
೨೬. ಮೌಲಾನ ಅಲ್ಲಾವುದ್ದೀನ್ ಗರ್ಗ್
೨೭. ಮೌಲಾನ ಹಿಸಾಮುದ್ದೀನ್ ಸಾವ
೨೮. ಮೌಲಾನ ಮೊಹಿಯುದ್ದೀನ್ ಕಾಶಾನಿ
೨೯. ಮೌಲಾನ ಕಮಾಲುದ್ದೀನ್ ಕೋಲ್ವಿ
೩೦. ಮೌಲಾನ ವಜಹ್‌ವುದ್ದೀನ್ ಕಾಬೂಲಿ
೩೧. ಮೌಲಾನ ಮಿನ್ ಹಾಜುದ್ದೀನ್
೩೨. ಮೌಲಾನ ನಿಜಾಮುದ್ದೀನ್ ಕಲಾತಿ
೩೩. ಮೌಲಾನ ನಸೀರುದ್ದೀನ್ ಕಥಿ
೩೪. ಮೌಲಾನ ನಸೀರುದ್ದೀನ್ ಸದ್ವೋನಿ
೩೫. ಮೌಲಾನ ಅಲ್ಲಾವುದ್ದೀನ್ ತಾಜಿರ್
೩೬. ಮೌಲಾನ ಕರೀಮುದ್ದೀನ್ ಜೌಹರಿ
೩೭. ಮೌಲಾನ ಮುಹಿಬ್ಬೆ ಮುಲ್ತಾನಿ
೩೮. ಮೌಲಾನ ಹಮೀದುದ್ದೀನ್ ಮುಖ್ಲಿಸ್
೩೯. ಮೌಲಾನ ಬುರ್ಹಾನುದ್ದೀನ್ ಬೆಹ್ಕರಿ
೪೦. ಮೌಲಾನ ಇಫ್ತಿಕಾರುದ್ದೀನ್ ಬರ್ನಿ
೪೧. ಮೌಲಾನ ಹಮೀದುದ್ದೀನ್ ಮುಲ್ತಾನಿ
೪೨. ಮೌಲಾನ ಗುಲ್‌ಮೊಹಮ್ಮದ್ ಶೀರಾಜಿ
೪೩. ಮೌಲಾನ ಹಿಸಾಮುದ್ದೀನ್ ಸರ್ಖ
೪೪. ಮೌಲಾನ ಶಿಹಬುದ್ದೀನ್ ಮುಲ್ತಾನಿ
೪೫. ಮೌಲಾನ ಫಕ್ರುದ್ದೀನ್ ಹಾಂಸ್‌ವಿ
೪೬. ಮೌಲಾನ ಫಕ್ರುದ್ದೀನ್ ಶೆಫಾಕಲಿ

ಕುರಾನ್ ಪಠನ ಮತ್ತು ಪ್ರವಚನಕಾರರು:

ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತದ ಕೊನೆಯ ಅವಧಿಯಲ್ಲಿ ಹಜರತ್ ಶೇಕ್

ಬಹಾವುದ್ದೀನ್ ಜಿಕ್ರಿಯಾ ಮುಲ್ತಾನಿಯವರ ಮೊಮ್ಮಗನಾದ ಮೌಲಾನ ಅಲೀಮುದ್ದೀನ್ ಮುಲ್ತಾನಿಯವರು ದೆಹಲಿಗೆ ಆಗಮಿಸಿದರು. ಅಪಾರ ವಿದ್ವತ್ತು ಮತ್ತು ಪ್ರಖರ ಪಾಂಡಿತ್ಯವನ್ನು ಹೊಂದಿದ್ದ ಸದರಿಯವರು ದೆಹಲಿಯಲ್ಲಿ ಧಾರ್ಮಿಕ ವಿದ್ಯೆಯನ್ನು ಧಾರೆಯೆರೆಯಲಾರಂಭಿಸಿದರು. ಮೌಲಾನ ನಿಶಾತಿಯವರು ಕುರಾನನ್ನು ಸುಶ್ರಾವ್ಯವಾಗಿ ಗಮಕದ ಮೂಲಕ ಪ್ರಸ್ತುತ ಪಡಿಸುವುದರಲ್ಲಿ ಅಪಾರ ಕಲಾಗಾರಿಕೆಯನ್ನು ಹೊಂದಿದವರು. ಈ ನಿಟ್ಟಿನಲ್ಲಿ ಸದರಿಯವರು ಒಂದು ಗ್ರಂಥವನ್ನು ಕೂಡ ರಚಿಸಿದ್ದು ಸದರಿ ಗ್ರಂಥವು ಅಪಾರ ಜನಮನ್ನಣೆಯನ್ನು ಪಡೆಯಿತು. ಮೌಲಾನ ಅಲ್ಲಾವುದ್ದೀನ್ ಸಂಕರಿ ಮತ್ತು ಖ್ವಾಜಾ ಜಕೀ (ಹಜರತ್ ಶೇಕ್ ಹಸನ್ ಬಸ್ರಿಯ ಸೋದರಳಿಯ) ಕೂಡ ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯಲ್ಲಿ ಕುರಾನ್ ಗಮಕ, ವಿದ್ಯೆಯ ನುರಿತ ವಿಧ್ವಾಂಸರಾಗಿದ್ದರು. ಧಾರ್ಮಿಕ ಪ್ರವಚನಕಾರರ ಗುಂಪಿನಲ್ಲಿ ಮೌಲಾನ ಇಸಾಮುದ್ದೀನ್ ದರ್ವೇಶ್ ಮತ್ತು ಅವರ ಸಹೋದರರಾದ ಮೌಲಾನ ಜಲಾಲುದ್ದೀನ್ ಹಾಗೂ ಮೌಲಾನ ಶಹಾಬುದ್ದೀನ್ ಜಲೀಲಿ ಮತ್ತು ಮೌಲಾನ ಕರೀಮ್ ಮೊದಲಾದವರು ಆ ಅವಧಿಯ ಖ್ಯಾತ ಪ್ರವಚನಕಾರರೆಂದು ಪರಿಗಣಿಸಲ್ಪಟ್ಟಿದ್ದರು.

ಸ್ನೇಹಿತರು ಮತ್ತು ಅನುಯಾಯಿಗಳು:

ಬಾದಶಹನ ಸ್ನೇಹಿತರು ಮತ್ತು ಅನುಯಾಯಿಗಳ ಪೈಕಿ ತಾಜುದ್ದೀನ್ ಇರಾಕಿ ಸೇನಾಪತಿ, ಖುದಾವಂದ ಜಾದ ಚಾಶ್ನಿಗೇರ್ ನಬ್ರಾ, ಹಿರಿಯ ಬಲ್ಬನ್, ಮುಲ್ಕ್ ರುಕ್ನುದ್ದೀನ್, ಮುಲ್ಕ್ ಐಜುದ್ದೀನ್ ತಘಾಲ್‌ಖಾನ್ ಮತ್ತು ನಸೀರುದ್ದೀನ್ ನೂರ್‌ಖಾನ್ ನಂತಹ ಉತ್ತಮ ದರ್ಜೆಯ ವ್ಯಕ್ತಿಗಳು ಇದ್ದರು. ಮೇಲೆ ಹೇಳಿದ ವ್ಯಕ್ತಿಗಳು ಬಾದಶಹನ ಸಂಗಾತಿಗಳು ಮತ್ತು ಸ್ನೇಹಿತರಾಗಿದ್ದರು.

ಕವಿಪುಂಗವರು :

ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯಲ್ಲಿ ಇದ್ದಂತಹ ಕವಿಶ್ರೇಷ್ಠರ ಭಾಷೆಯ ಮೃದುತ್ವ, ಕಾವ್ಯದ ಗುಣ ಮತ್ತು ಉನ್ನತ ವಿಚಾರಧಾರೆಯು ದೆಹಲಿಗೆ ಮಾತ್ರ ಸೀಮಿತವಾಗದೆ ಇಡೀ ಭಾರತದಾದ್ಯಂತ ಪ್ರಶಂಸೆಯನ್ನು ಪಡೆದಿದ್ದವು. ಅವರ ಅಭಿವ್ಯಕ್ತಿಯ ಮಾಧುರ್ಯವು ಮನಮೋಹಕವಾಗಿದ್ದು ಆ ಕಾವ್ಯವು ತನ್ನ ಗೇಯತೆಯ ಗುಣಗಳಿಂದ ಹಿಂದೂಸ್ಥಾನದ ಮೂಲೆ ಮೂಲೆಯಲ್ಲಿಯೂ ಅನುರಣಿಸುತ್ತಿತ್ತು. ಆ ಮಹಾ ಕವಿಗಳ ಪೈಕಿ ಅನೇಕರು ದೆಹಲಿಯ ನಿವಾಸಿಗಳಾಗಿದ್ದು ಬಾದಶಹನ ದರ್ಬಾರಿನೊಂದಿಗೆ ಸಂಬಂಧವನ್ನು ಹೊಂದಿದ್ದರು.

ಅಮೀರ್ ಖುಸ್ರು :

ದರ್ಬಾರಿನಲ್ಲಿದ್ದ ಕವಿವರ್ಯರ ಪೈಕಿ ಮುಕುಟ ಪ್ರಾಯರಾಗಿದ್ದವಂತವರು ಅಮೀರ್ ಖುಸ್ರುರವರು ಆಗಿದ್ದರು. ಸದರಿಯವರು ಕಾವ್ಯದ ಕಲೆಗಾರಿಕೆಯಲ್ಲಿ

ಅಪಾರ ಸೃಜನ ಶೀಲತೆಯನ್ನು ಹೊಂದಿದ್ದರು. ಕಾವ್ಯದ ಅಭಿವ್ಯಕ್ತಿಯ ಅನುಪಮ ಶೈಲಿಯನ್ನು ಹೊಂದಿದ್ದ ಅಮೀರ್‌ಖುಸ್ರುರವರು ವಿಶೇಷವಾದ ಅರ್ಥಾನ್ವಯ ಮಾಡುವುದರಲ್ಲಿ ಪಳಗಿದ್ದರು. ಖುಸ್ರುರವರ ಕಲೆಗಾರಿಕೆಯು ಜನರ ಹೃದಯ ಮತ್ತು ಮನಸ್ಸುಗಳಲ್ಲಿ ಚಿರಪರಿಚಿತವಾಗಿದೆ. ಅವರ ಅನುಪಮ ಕಾವ್ಯ ಸೃಷ್ಟಿಯ ಹೆಗ್ಗುರುತು ಕಾವ್ಯ ಮತ್ತು ಗದ್ಯದ ಅದ್ಭುತ ಸಂಯೋಜನೆಯಿಂದ ಕೂಡಿದೆ. ಕಾವ್ಯ ಕಟ್ಟುವ ಕಸುಬುದಾರಿಕೆಯ ಜೊತೆಯಲ್ಲಿ ಅಮೀರ್‌ಖುಸ್ರುರವರು ಭವ್ಯ ದಾರ್ಶನಿಕ ಸೂಫಿ ಮತ್ತು ಅತ್ಯಂತ ಭಾವುಕ ವ್ಯಕ್ತಿತ್ವವನ್ನು ಹೊಂದಿದ್ದರು. ಅವರ ಬಹುತೇಕ ಸಮಯವನ್ನು ಭಕ್ತಿ ಅಂದರೆ ನಮಾಜ್, ಉಪವಾಸ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ದೈವ ಪ್ರೀತಿಯೊಂದಿಗೆ ಲೌಕಿಕ ವ್ಯವಹಾರದ ಪ್ರೀತಿಪ್ರೇಮಗಳ ಮೇಲೆ ಕೂಡ ಅವರಿಗೆ ಆಸಕ್ತಿ ಇತ್ತು. ಹಾಗೂ ಪ್ರೀತಿಪ್ರೇಮದ ಆಸ್ವಾದನೆಯಲ್ಲಿ ಅವರಿಗೆ ಆಸಕ್ತಿ ಇತ್ತು. ಒಟ್ಟಾರೆ ಹೇಳುವುದಾದಲ್ಲಿ ಹಿಂದೂಸ್ಥಾನದ ಮಣ್ಣಿನಲ್ಲಿ ಅಂತಹ ಇನ್ನೊಬ್ಬ ವ್ಯಕ್ತಿಯು ಜನ್ಮತಾಳಿಲ್ಲ. ಅಮೀರ್ ಖುಸ್ರುಗೆ ರಾಜನ ಖಜಾನೆಯಿಂದ ಪ್ರತಿ ತಿಂಗಳು ಒಂದು ಸಾವಿರ ತಂಗಾ ಹಣವು ಸಂಭಾವನೆಯ ರೂಪದಲ್ಲಿ ದೊರಕುತ್ತಿತ್ತು.

ಹಸನ್ ಸಂಜರಿ:

ಇನ್ನೊಬ್ಬ ಅತ್ಯಂತ ಗೌರವಾನ್ವಿತ ಅಸ್ಥಾನ ಕವಿಯು ಹಜರತ್ ಹಸನ್ ಸಂಜರಿ ಆಗಿದ್ದರು. ಅವರ ಕಾವ್ಯವು ಅತ್ಯಂತ ಧ್ವನಿಪೂರ್ಣವಾಗಿದ್ದು ಸಹೃದಯರಿಗೆ ರಸದೂತಣವನ್ನು ನೀಡುತ್ತಿತ್ತು. ಅವರ ಸರಳ ನಿರೂಪಣೆ, ಭವ್ಯತೆಯಿಂದ ಕೂಡಿದ ಕಾವ್ಯವು ವಿಚಾರದ ಪಕ್ವತೆಯಿಂದ ಕೂಡಿದೆ. ವೈಚಾರಿಕವಾಗಿ ಅತ್ಯಂತ ಉನ್ನತ ಮಟ್ಟದಲ್ಲಿದ್ದ ಅವರ ಕಾವ್ಯಗಳ ಖ್ಯಾತಿ ಇಡೀ ಪ್ರಪಂಚದಲ್ಲಿಯೇ ಹರಡಿತು. ಅವರನ್ನು "ಹಸನ್ ಸಂಜರಿ ಸಾದಿ ಹಿಂದೂಸ್ಥಾನ್" ಎಂದು ಕರೆಯುತ್ತಿದ್ದರು. ಮಿತವ್ಯಯ, ಏಕಾಂತ ಮತ್ತು ಸುಖಭೋಗದಿಂದ ವಿಮುಖತೆ ಹಾಗೂ ಉನ್ನತ ಗುಣ ಸ್ವಭಾವಗಳಿಂದ ಕೂಡಿದ ಸದರಿಯವರಿಗೆ ಸರಿಸಾಟಿಯಾದ ವ್ಯಕ್ತಿತ್ವವುಳ್ಳ ಕವಿ ಇನ್ನೊಬ್ಬನಿಲ್ಲ. ಹಜರತ್ ಹಸನ್‌ರವರಿಗೆ ಸುಲ್ತಾನುಲ್ ಔಲಿಯಾ ನಿಜಾಮುದ್ದೀನ್‌ರವರಿಂದ ದೀಕ್ಷೆ ಪ್ರಾಪ್ತಿಯಾಗಿತ್ತು. ಸದರಿಯವರು ಸುಲ್ತಾನುಲ್ ಔಲಿಯರವರ ಶಿಷ್ಯರಾಗಿದ್ದಾಗ ಅವರ ಸೂಕ್ತಿಗಳನ್ನು ಸಂಗ್ರಹಿಸಿ "ಫಾಯೀದುಲ್ ಫವಾದ್" ಎಂಬ ಗ್ರಂಥವನ್ನು ದಾಖಲಿಸಿದರು. ಆ ಗ್ರಂಥವಲ್ಲದೇ ಹಜರತ್ ಹಸನ್‌ರವರು ಇನ್ನು ಅನೇಕ ಕಾವ್ಯ ಮತ್ತು ಗದ್ಯದ ಸ್ವರೂಪದಲ್ಲಿ ಅಭಿವ್ಯಕ್ತಿಸಿದ್ದು ಸದರಿಯವರ ಕಲಾತ್ಮಕತೆಗೆ ಇಂದಿಗೂ ಜೀವಂತ ಉದಾಹರಣೆ ಆಗಿದೆ.

ಇನ್ನಿತರೆ ಕವಿಗಳು:

ಅಮೀರ್‌ಖುಸ್ರು ಮತ್ತು ಹಜರತ್ ಹಸನ್ ಸಂಜರಿಯವರ ಜೊತೆಗೆ ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯಲ್ಲಿ ಸದ್ರುದ್ದೀನ್ ಆಲಿ ಮತ್ತು ಫಕ್ರುದ್ದೀನ್ ಕವಾಜ್,

ಹಮೀದುದ್ದೀನ್ ರಾಜ, ಮೌಲಾನ ಆರೀಫ್ ಅಬ್ದುಲ್ ಹಕೀಮ್ ಮತ್ತು ಶಹಾಬುದ್ದೀನ್ ಸದರ್ ನಶೀರ್ ನಂತಹ ಅದ್ಭುತ ಕವಿಗಳು ಇದ್ದರು. ಹಾಗೂ ಅಲ್ಲಾವುದ್ದೀನನ ಕಲೆ ಮತ್ತು ವಿದ್ಯೆಯ ಪ್ರೋತ್ಸಾಹದಿಂದ ಪ್ರಯೋಜನವನ್ನು ಪಡೆಯುತ್ತಿದ್ದರು. ಆ ಕವಿಗಳು ತಮ್ಮ ಕಲೆಗಾರಿಕೆಯ ವೈಶಿಷ್ಟ್ಯತೆಯಿಂದ ವೈಯಕ್ತಿಕವಾದ ಹೆಜ್ಜೆಗುರುತುಗಳನ್ನು ಬಿಟ್ಟಿದ್ದಾರೆ.

ಇತಿಹಾಸಕಾರರು ಮತ್ತು ವೈದ್ಯರು:

ಅಲ್ಲಾವುದ್ದೀನನ ಆಡಳಿತಾವಧಿಯಲ್ಲಿ ಅತೀವ ವಿದ್ವತ್ತಿನಿಂದ ಕೂಡಿದ ಇತಿಹಾಸಕಾರರು ಕೂಡ ಇದ್ದರು. ಅವರು ಚರಿತ್ರೆಯನ್ನು ದಾಖಲು ಮಾಡುವುದರಲ್ಲಿ ಸಿದ್ಧ ಹಸ್ತರಾಗಿದ್ದರು. ವೈದ್ಯಲೋಕದ ಅತ್ಯಂತ ಖ್ಯಾತಿ ಹೊತ್ತ ಹೆಸರೆಂದರೆ ಮೌಲಾನ ಬದ್ರುದ್ದೀನ್ ದಮಶ್ಕಿ ಅವರು ತಮ್ಮ ಕ್ಷೇತ್ರದಲ್ಲಿ ಎಷ್ಟೊಂದು ಪರಿಣಿತರಾಗಿದ್ದರೆಂದರೆ ಒಂದೇ ಪಾತ್ರೆಯಲ್ಲಿ ಅನೇಕ ಪ್ರಾಣಿಗಳ ಮೂತ್ರದ ಮಿಶ್ರಣವನ್ನು ಇರಿಸಿದಲ್ಲಿ ಸದರಿ ಹಕೀಮ್ ಸಾಹೇಬರು ಇಂತಿಂತಹ ಪ್ರಾಣಿಗಳ ಮೂತ್ರದ ಮಿಶ್ರಣವೆಂದು ಪತ್ತೆ ಹಚ್ಚುತ್ತಿದ್ದರು. ಅವರು ಬಹುದೊಡ್ಡ ಸೂಫಿಯಾಗಿದ್ದರೆಂಬ ವಿಷಯವನ್ನು ಇತಿಹಾಸಕಾರನಾದ ಪರಿಶ್ತಾ ವಿನಮ್ರತೆಯಿಂದ ದಾಖಲಿಸುತ್ತಾನೆ. ಹೀಗಾಗಿ ತಮ್ಮ ಅಂತರಂಗದ ಆತ್ಮಬಲದಿಂದ ಈ ರೀತಿಯಲ್ಲಿ ಮೂತ್ರ ಪರೀಕ್ಷೆ ಮಾಡುವುದು ಅವರಿಗೆ ಬಹು ಸುಲಭವಾಗಿತ್ತು. ಕೇವಲ ವೈದ್ಯ ವಿದ್ಯೆಯ ದೆಸೆಯಿಂದ ಈ ರೀತಿ ಪತ್ತೆ ಮಾಡುವುದು ಅಸಂಭವವಾಗಿರುತ್ತದೆ. ಆ ಕಾಲಾವಧಿಯಲ್ಲಿ ಜ್ಯೋತಿಷಿಗಳು ಮತ್ತು ಭವಿಷ್ಯ ಹೇಳುವವರು ಕೂಡ ಇದ್ದರು ಅವರುಗಳು ಕೂಡ ತಮ್ಮ ಕಾರ್ಯಕ್ಷೇತ್ರದಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ್ದರು. ಭವಿಷ್ಯವಾಣಿಯನ್ನು ನುಡಿಯುವುದರಲ್ಲಿ ಹಾಗೂ ಮನಸ್ಸಿನ ಆಳದಲ್ಲಿ ಹುದುಗಿದ್ದ ಅಂತರಂಗದ ವಿಷಯಗಳನ್ನು ಬಯಲು ಮಾಡುವುದರಲ್ಲಿ ವಿಶೇಷ ಪರಿಣತಿಯನ್ನು ಹೊಂದಿದ್ದರು. ಹಾಗೂ ಮಾಂತ್ರಿಕ ಶಕ್ತಿ ಇರುವಂತೆ ಕಂಡು ಬರುತ್ತಿದ್ದರು. ಅಷ್ಟೇ ಅಲ್ಲದೆ ಗಾಯಕರು, ವಿದೂಷಕರು ಮತ್ತು ಇನ್ನಿತರೆ ಕಲಾವಿದರು ಅಧಿಕ ಸಂಖ್ಯೆಯಲ್ಲಿದ್ದರು ಇಂತಹ ಸಂಕ್ಷಿಪ್ತ ಗ್ರಂಥದಲ್ಲಿ ಅವರೆಲ್ಲರ ಬಗ್ಗೆ ವಿವರಗಳನ್ನು ದಾಖಲಿಸುವುದಕ್ಕೆ ಅಸಾಧ್ಯವಾಗಿರುವುದರ ಬಗ್ಗೆ ನನಗೆ ವಿಷಾದವಿದೆ.

ಅಲ್ಲಾವುದ್ದೀನನ ಅಧಃಪತನ:

ಅಲ್ಲಾವುದ್ದೀನನು ಬಹುಕಾಲದವರೆಗೆ ವಿಜಯದ ಮೇಲೆ ವಿಜಯವನ್ನು ಗಳಿಸುತ್ತಾ ಅತ್ಯಂತ ಅದೃಷ್ಟಶಾಲಿಯಾಗಿದ್ದ. ಹಾಗೂ ಅವನ ಅದೃಷ್ಟ ನಕ್ಷತ್ರವು ಪ್ರಕಾಶಮಾನವಾಗಿ ಬೆಳಗುತ್ತಿತ್ತು. ಆದರೆ ಮೇಲೇರಿದವನು ಕೆಳಗೆ ಇಳಿಯಲೇಬೇಕು ಎನ್ನುವಂತೆ ಅವನ ಅಧಃಪತನದ ಗಳಿಗೆಯೂ ಹತ್ತಿರ ಬಂದಿತ್ತು. ಅವನ ದುರ್ದಿನಗಳು ಸಮೀಪಿಸಿರುವಂತೆಯೇ ಅವನಿಂದ ಅನೇಕ ಲೋಪಗಳು ಘಟಿಸಲಾರಂಭಿಸಿದವು.

ಹಾಗೂ ಅವನ ಕೃತ್ಯಗಳು ಆಡಳಿತಾತ್ಮಕ ದೃಷ್ಟಿಯಿಂದ ಅತ್ಯಂತ ಕಂಟಕ ಪ್ರಾಯವೆಂದು ಸಾಬೀತಾದವು.

ಒಬ್ಬ ಪ್ರತಿನಿಧಿಯೊಡನೆ ಪ್ರೇಮ:

ಅಲ್ಲಾವುದ್ದೀನ್ ಅಧಃಪತನದ ಅತ್ಯಂತ ಮುಖ್ಯ ಕಾರಣವೆಂದರೆ ಅವನು ಮಲ್ಲಿಕ್ ನಾಯಬ್‌ನ ಮೇಲೆ ಹುಚ್ಚು ಪ್ರೀತಿಯನ್ನು ಹೊಂದಿದ್ದು, ರಾಜ್ಯಾಡಳಿತದ ಎಲ್ಲಾ ಪ್ರಮುಖ ನಿರ್ಧಾರಗಳನ್ನು ಅವನಿಗೆ ಬಿಟ್ಟುಕೊಟ್ಟಿದ್ದ. ಅವನು ಮಲ್ಲಿಕ್ ನಾಯಬ್‌ನೊಡನೆ ಎಂತಹ ಪ್ರೀತಿಯನ್ನು ಹೊಂದಿದ್ದನೆಂದರೆ ಅವನು ದೇಶದ ಪ್ರಮುಖ ಕರ್ತವ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿಯೂ ಕೂಡ ಮಲ್ಲಿಕ್ ನಾಯಬ್‌ನ ಅತಿಥ್ಯದ ಬಗ್ಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದ. ಹಾಗೂ ಮಲ್ಲಿಕ್ ನಾಯಬ್‌ನ ಪ್ರತಿಯೊಂದು ನಿರ್ಧಾರವನ್ನು ಕೂಡ ಕಾರ್ಯಗತಗೊಳಿಸುತ್ತಿದ್ದ. ಮಲ್ಲಿಕ್ ನಾಯಬ್‌ನ ವತಿಯಿಂದ ಎಂತಹ ಮೂರ್ಖ ಮತ್ತು ಅಸಮರ್ಪಕ ಮತ್ತು ಅಯೋಗ್ಯ ನಿರ್ಧಾರ ಪ್ರಸ್ತಾಪವಾದರೂ ಅದನ್ನು ಅವನು ಚಾಚೂ ತಪ್ಪದೆ ಕಾರ್ಯಗತಗೊಳಿಸುತ್ತಿದ್ದ.

ಪುತ್ರರ ತರಬೇತಿಯ ಕಡೆ ನಿರ್ಲಕ್ಷ:

ಅಲ್ಲಾವುದ್ದೀನನ ಅಧಃಪತನದ ಇನ್ನೊಂದು ಮುಖ್ಯ ಕಾರಣವೇನೆಂದರೆ ಅವನು ತನ್ನ ಪುತ್ರರಿಗೆ ಒಳ್ಳೆಯ ವಿದ್ಯೆ, ಬುದ್ಧಿ ಮತ್ತು ತರಬೇತಿಯನ್ನು ನೀಡುವತ್ತ ಗಮನವನ್ನು ಹರಿಸಲಿಲ್ಲ. ಮತ್ತು ಅವರಿಗೆ ಸೂಕ್ತ ಜ್ಞಾನ ಮತ್ತು ನಯವಿನಯವನ್ನು ಕಲಿಸುವ ಮೊದಲೇ ಅವರನ್ನು ಅಂತಃಪುರದಿಂದ ಹೊರತಂದು ಅವರನ್ನು ಆಡಳಿತಾತ್ಮಕ ಉನ್ನತ ಹುದ್ದೆಗಳಿಗೆ ಏರಿಸಿದ. ರಾಜಕುಮಾರ ಖಿಜರ್‌ಖಾನನ ಸಾಮರ್ಥ್ಯವನ್ನು ಅಳೆಯುವುದಕ್ಕಿಂತ ಮುಂಚಿತವಾಗಿಯೇ ಅವನಿಗೆ ಛತ್ರ ಚಾಮರದ ರಾಜ ಗೌರವಗಳನ್ನು ನೀಡಿದ ಮತ್ತು ಯುವರಾಜನನ್ನಾಗಿ ನೇಮಕ ಮಾಡಿದ. ಅಲ್ಲಾವುದ್ದೀನನು ಯೋಗ್ಯ ಮತ್ತು ಅನುಭವಿ ಗುರುಗಳನ್ನು ತನ್ನ ಪುತ್ರರ ವಿದ್ಯಾಭ್ಯಾಸದ ಸಲುವಾಗಿ ನೇಮಕ ಮಾಡಲಿಲ್ಲ. ಹಾಗೂ ಅವರ ಗುಣನಡತೆಗಳ ಬಗ್ಗೆ ಪ್ರಭಾವ ಬೀರಲು ಯಾವುದೇ ಉನ್ನತ ಚಾರಿತ್ರ್ಯದ ವ್ಯಕ್ತಿಗಳನ್ನು ನೇಮಕ ಮಾಡಲಿಲ್ಲ. ವ್ಯಭಿಚಾರ ಮತ್ತು ಭೋಗ ವಿಲಾಸದಿಂದ ತನ್ನ ಪುತ್ರರನ್ನು ಸಂರಕ್ಷಿಸುವ ಸಲುವಾಗಿ ಅವನು ಯಾವುದೇ ಸೂಕ್ತ ಏರ್ಪಾಟನ್ನು ಮಾಡಲಿಲ್ಲ.

ತೆಲಂಗಾಣದ ರಾಜನ ಪತ್ರ:

ಈ ಹೊತ್ತಿನಲ್ಲಿ ತೆಲಂಗಾಣದ ರಾಜನು ಇಪ್ಪತ್ತು ಆನೆಗಳ ಉಡುಗೊರೆಯೊಂದಿಗೆ ಒಂದು ಪತ್ರವನ್ನು ಅಲ್ಲಾವುದ್ದೀನನಿಗೆ ಕಳುಹಿಸಿದ. ಆ ಪತ್ರದಲ್ಲಿ ರಾಜನು ಹೀಗೆಂದು ಬರೆದಿದ್ದ "ನಾನು ಸಾಯಬಾನ್ ಅರಮನೆಯ ಮುಂದೆ ಮಲ್ಲಿಕ್ ನಾಯಬ್‌ನ ಜೊತೆಯಲ್ಲಿ ಮಾಡಿರುವ ವಾಗ್ದಾನಕ್ಕೆ ಇಂದಿಗೂ ಬದ್ಧನಾಗಿದ್ದೇನೆ. ಮೇಲ್ಕಂಡ

ವಾಗ್ದಾನಕ್ಕೆ ಅನುಸಾರವಾಗಿ ನಾನು ಒಂದು ಕರಾರು ಪತ್ರವನ್ನು ಬರೆದು ಮಲ್ಲಿಕ್ ನಾಯಬ್‌ನ ಹಸ್ತ ಈಗಾಗಲೇ ನೀಡಿರುತ್ತೇನೆ. ಆ ಕರಾರಿನ ರೀತ್ಯಾ ನಾನು ಏನನ್ನು ಪಾವತಿಸಬೇಕಾಗಿದೆಯೋ ಅದನ್ನು ಹಾಜರು ಪಡಿಸಲು ನಾನು ತಯಾರಾಗಿದ್ದೇನೆ. ತಾವು ಈ ಕಾರ್ಯದ ಅನುಷ್ಠಾನದ ಸಲುವಾಗಿ ಯಾರನ್ನು ನಿಯುಕ್ತಿಗೊಳಿಸುವರೋ ನಾನು ಅವನ ಸುಪರ್ದಿಗೆ ಬಾದಶಹರವರಿಗೆ ನೀಡಬೇಕಾದ ಕಾಣಿಕೆಯನ್ನು ಸಲ್ಲಿಸುತ್ತೇನೆ. ಮತ್ತು ನನ್ನ ಕರ್ತವ್ಯವನ್ನು ಪೂರೈಸಲು ಬದ್ಧನಾಗಿದ್ದೇನೆ" ಮೇಲ್ಕಂಡ ರಾಜನ ಪತ್ರವು ತಲುಪಿದೊಡನೆಯೇ ಮಲ್ಲಿಕ್ ನಾಯಬ್‌ನು ಕ್ರಿಯಾಶೀಲನಾದ. ಅವನು ಖಿಜರ್‌ಖಾನ್ ಮತ್ತು ಮಲ್ಲಿಕಾ ಜಹಾನ್‌ನಿಂದ ವಿರಸವನ್ನು ಹೊಂದಿದ್ದು ಅವರುಗಳ ಬಗ್ಗೆ ಮನಸ್ಸಿನಲ್ಲಿಯೇ ಭಯಗ್ರಸ್ತನಾಗಿದ್ದ. ಅವನು ಅಲ್ಲಾವುದ್ದೀನ್‌ನೊಡನೆ ಸಮಾಲೋಚನೆ ಮಾಡಿ ತೆಲಂಗಾಣ ರಾಜನಿಂದ ಬಾದಶಹನ ಕಾಣಿಕೆಯನ್ನು ಪಡೆಯುವ ಕರ್ತವ್ಯಗಳನ್ನು ತನಗೆ ವಹಿಸಿಕೊಡಬೇಕೆಂದು ಕೇಳಿಕೊಂಡ. ಹಾಗೂ ತೆಲಂಗಾಣದ ರಾಜನಿಂದ ಬಾಕಿ ಇರುವ ಹಲವಾರು ವರ್ಷಗಳ ಕಪ್ಪಕಾಣಿಕೆಗಳನ್ನು ವಸೂಲಿ ಮಾಡಿಕೊಂಡು ದಕ್ಷಿಣದ ಕಡೆಯಿಂದ ತಾನು ಮರು ಪ್ರಯಾಣ ಮಾಡಿ ದೆಹಲಿ ತಲುಪುವುದಾಗಿಯೂ ಮತ್ತು ರಾಮದೇವನ ಮರಣದ ನಂತರ ಯುವರಾಜನಾಗಿರುವ ಅವನ ಮಗನ ಉದ್ಧಟತನ ಮತ್ತು ಅವಿಧೇಯತೆಗಾಗಿ ಅವನಿಗೆ ಶಿಕ್ಷೆ ನೀಡಿ ಇನ್ನಿತರೆ ಸಂಚುಕೋರರು ಮತ್ತು ವಿದ್ರೋಹಿಗಳನ್ನು ನಾಶ ಮಾಡಿ ದಕ್ಷಿಣದ ಭಾಗವನ್ನು ಪಿತೂರಿಯಿಂದ ರಕ್ಷಣೆ ಮಾಡಲು ಅನುಕೂಲವಾಗುತ್ತದೆಯೆಂದು ಅವನು ಅಲ್ಲಾವುದ್ದೀನ್‌ನನ್ನು ನಂಬಿಸಿದ.

ಮಲ್ಲಿಕ್ ನಾಯಬ್‌ನ ದಖ್ಖನ್ನಿನ ಯುದ್ಧ:

ಅಲ್ಲಾವುದ್ದೀನ್ ಖಿಲ್ಜಿಯು ಮಲ್ಲಿಕ್ ನಾಯಬ್‌ನ ಕೋರಿಕೆಯನ್ನು ಮನ್ನಿಸಿದ ಮತ್ತು ಹಿಜರಿ ಶಕೆ ೭೧೨ರಲ್ಲಿ ನಾಲ್ಕನೇ ಬಾರಿಗೆ ಅವನು ದಖ್ಖನ್ನಿನ ಮೇಲೆ ಯುದ್ಧ ಮಾಡಲು ಹೊರಟ. ಮಲ್ಲಿಕ್ ನಾಯಬ್‌ನು ದೇವಗಡವನ್ನು ತಲುಪಿದ ಮತ್ತು ಅವನು ರಾಜ ರಾಮದೇವನ ಅವಿಧೇಯ ಮತ್ತು ವಿದ್ರೋಹಿ ಪುತ್ರನನ್ನು ಬಂಧಿಸಿ ಅವನ ಕೊಲೆ ಮಾಡಿದ. ಮಲ್ಲಿಕ್ ನಾಯಬ್‌ನು ಮರಾಠವಾಡದ ಅನೇಕ ಪಟ್ಟಣಗಳನ್ನು ಗುಲ್ಬರ್ಗಾ ಮತ್ತು ರಾಯಚೂರಿನ ಗಡಿಭಾಗದವರೆಗೂ ಪ್ರಯಾಣ ಬೆಳೆಸಿ ರಾಜ್ಯವನ್ನು ಶತ್ರುಗಳಿಂದ ಸಂರಕ್ಷಿಸಿದ. ಮತ್ತು ಕರ್ನಾಟಕದ ಪ್ರಖ್ಯಾತ ನಗರಗಳಾದ ತಲಂಗ್, ದಬಲ್, ಜಪೂರ್, ದ್ವಾರಸಮುದ್ರ ಮೊದಲಾದವುಗಳನ್ನು ಹಿಂದೂ ರಾಜರಿಂದ ತನ್ನ ವಶಪಡಿಸಿಕೊಂಡ. ಹಾಗೂ ಆ ಕೋಟೆಗಳನ್ನು ಜಯಿಸಿ ಇನ್ನು ಯಾರೂ ಕೂಡ ವಿದ್ರೋಹವನ್ನು ಬಗೆಯದಂತೆ ಮತ್ತು ತಲೆ ಎತ್ತದಂತೆ ಕಠಿಣ ಕ್ರಮಗಳನ್ನು ಕೈಗೊಂಡ. ಈ ಕರ್ತವ್ಯಗಳನ್ನು ನಿರ್ವಹಿಸಿದ ನಂತರ ಮಲ್ಲಿಕ್ ನಾಯಬ್‌ನು ದೇವಗಡದಲ್ಲಿ ಮೊಕ್ಕಾಮ್ ಹೂಡಿ ಕರ್ನಾಟಕ ಮತ್ತು ತೆಲಂಗಾಣದ

ರಾಜಮಹಾರಾಜರುಗಳಿಂದ ವಸೂಲಿ ಮಾಡಿದ ಕಪ್ಪ ಕಾಣಿಕೆ ಮತ್ತು ಹಣವನ್ನು ಅಲ್ಲಾವುದ್ದೀನನ ಸಮಕ್ಷಮಕ್ಕೆ ಕಳಿಸಿಕೊಟ್ಟ. ಮಲ್ಲಿಕ್ ನಾಯಬ್‌ನು ಅಲ್ಪ ಅವಧಿಯಲ್ಲಿಯೇ ಕರ್ನಾಟಕ ಮತ್ತು ಮಲಬಾರಿನ ರಾಜರುಗಳನ್ನು ತನ್ನ ಚಾತುರ್ಯದಿಂದ ಬಾದಶಹನ ಸಾಮಂತ ರಾಜನನ್ನಾಗಿ ಪರಿವರ್ತಿಸಿದ.

ಅಲ್ಲಾವುದ್ದೀನ್ ಖಿಲ್ಜಿಯ ಅನಾರೋಗ್ಯ:

ಇದೇ ಸಂದರ್ಭದಲ್ಲಿ ಭೋಗ ವಿಲಾಸ ಮತ್ತು ಅನಿಯಂತ್ರಿತ ಸ್ವೇಚ್ಛಾಚಾರದ ದೆಸೆಯಿಂದ ಬಾದಶಹನು ಕಾಯಿಲೆ ಬಿದ್ದ. ಖಿಜರ್‌ಖಾನ್ ಮತ್ತು ಮಲ್ಲಿಕಾ ಜಹಾನ್ ತಮ್ಮ ತಮ್ಮ ಸಭೆ ಸಮಾರಂಭ ಗೋಷ್ಠಿಗಳು ಮತ್ತು ಭೋಗ ವಿಲಾಸದಲ್ಲಿ ಮಗ್ನರಾಗಿದ್ದರು. ತಮ್ಮ ತಮ್ಮದೇ ಲೋಕದಲ್ಲಿ ಮುಳುಗಿದ್ದ ಅವರು ಬಾದಶಹನ ಅನಾರೋಗ್ಯದತ್ತ ಯಾವುದೇ ಗಮನವನ್ನು ನೀಡಲಿಲ್ಲ. ತನ್ನ ಪತ್ನಿ ಮತ್ತು ಪುತ್ರನಿಗೆ ತನ್ನ ಬಗ್ಗೆ ಯಾವುದೇ ಪರಿವೇ ಇಲ್ಲದೆ ಇರುವುದನ್ನು ಕಂಡು ಅಲ್ಲಾವುದ್ದೀನನು ತೀರಾ ದುಃಖಿತನಾದ. ಮತ್ತು ತನ್ನ ಕಾಯಿಲೆಯು ಉಲ್ಬಣವಾಗಲು ಅವರಿಬ್ಬರ ನಿರ್ಲಕ್ಷ್ಯವೇ ಕಾರಣ ಎಂದು ನಿರ್ಧರಿಸಿದ. ಪ್ರತಿದಿನ ಖಿಜರ್‌ಖಾನ್ ಮತ್ತು ಮಲ್ಲಿಕಾ ಜಹಾನ್‌ಳೊಡನೆ ಅವನಿಗೆ ವಾಗ್ಯುದ್ಧ ನಡೆಯುತ್ತಿತು. ಮತ್ತು ಅವರ ಈ ನಡವಳಿಕೆಯಿಂದ ಅಲ್ಲಾವುದ್ದೀನನು ದಿನೇ ದಿನೇ ಅವರ ಮೇಲಿನ ನಂಬಿಕೆಯನ್ನು ಕಳೆದುಕೊಂಡ.

ಮಲ್ಲಿಕಾ ಜಹಾನ್ ಮತ್ತು ಖಿಜರ್‌ಖಾನ್‌ನ ಅಯೋಗ್ಯ ನಡವಳಿಕೆ:

ಆ ದಿನಗಳಲ್ಲಿ ಖಿಜರ್‌ಖಾನನಿಗೆ ಪಾನಗೋಷ್ಠಿಗಳನ್ನು ಆಯೋಜನೆ ಮಾಡುವುದು, ಶರಾಬಿನ ಸೇವನೆ ಮತ್ತು ಗಾಯನ ಹಾಗೂ ಮನರಂಜನೆಗಳನ್ನು ಹೊರತು ಪಡಿಸಿ ಉಳಿದ ಯಾವುದೇ ಕೆಲಸ ಕಾರ್ಯಗಳಿಗೆ ಪುರುಸೊತ್ತು ಇರಲಿಲ್ಲ. ಅವನು ಈ ಕ್ರಿಯೆಗಳಲ್ಲಿ ಮುಳುಗಿದ್ದು ಅವನಿಗೆ ಸುತ್ತಲಿನ ಪರಿವೆಯೇ ಇರಲಿಲ್ಲ. ಪೋಲೋ ಸ್ಪರ್ಧೆ ಮತ್ತು ಆನೆಗಳ ಕದನವನ್ನು ನೋಡುವುದು ಅವನ ಅತ್ಯಂತ ಆಸಕ್ತಿಯ ವಿಷಯಗಳಾಗಿದ್ದವು. ಹಾಗೂ ಅವನು ಆ ಹವ್ಯಾಸಗಳಲ್ಲಿ ತಲ್ಲೀನನಾದ.

ಮಲ್ಲಿಕಾ ಜಹಾನ್‌ಳಿಗಂತೂ ತನ್ನ ಪುತ್ರರ ಮದುವೆಯ ಸಮಾರಂಭಗಳು ಮೊಮ್ಮಕ್ಕಳ ಅಕೀಕಾ (ತಲೆಗೂದಲು ತೆಗೆಸುವ ಸಮಾರಂಭ) ಹಾಗೂ ಖತ್ನಾ (ಸುಂತಿ) ಮೊದಲಾದ ಸಮಾರಂಭ ಮತ್ತು ಶಾಸ್ತ್ರಗಳಲ್ಲಿ ತೊಡಗುವುದೊಂದು ಬಿಟ್ಟರೆ ಬೇರೆ ಯಾವುದೇ ಆಲೋಚನೆಯು ಅವಳ ಹತ್ತಿರ ಸುಳಿಯುತ್ತಿರಲಿಲ್ಲ. ಸದಾ ಕಾಲ ಆಕೆಯು ಈ ಸಮಾರಂಭಗಳಲ್ಲಿ ಮಗ್ನಳಾಗಿರುತ್ತಿದ್ದಳು. ಒಟ್ಟಾರೆ ಹೇಳುವುದಾದಲ್ಲಿ ಅವರಿಬ್ಬರಿಗೂ ಅಲ್ಲಾವುದ್ದೀನನ ಕಾಯಿಲೆಯ ವಿಷಯವೊಂದನ್ನು ಬಿಟ್ಟರೆ ಉಳಿದ ಎಲ್ಲಾ ವಿಷಯಗಳ ಬಗ್ಗೆ ನೆನಪಿತ್ತು ಮತ್ತು ಹಗಲಿರುಳು ತಮ್ಮ ತಮ್ಮ ವಿಲಾಸೀ ಬದುಕಿನಲ್ಲಿ ಅವರಿಬ್ಬರೂ ಆಳವಾಗಿ ಮುಳುಗಿದ್ದರು.

ತನ್ನ ಪತ್ನಿ ಮತ್ತು ಪುತ್ರನ ಈ ಅವಸ್ಥೆಯನ್ನು ಕಂಡ ಅಲ್ಲಾವುದ್ದೀನ್ ಖಿಲ್ಜಿಯು ದಖ್ಖನ್ನಿನಿಂದ ಮಲ್ಲಿಕ್‌ನಾಯಬ್‌ನನ್ನು ಮತ್ತು ಗುಜರಾತ್‌ನಿಂದ ಅಲಫ್‌ಖಾನ್‌ನನ್ನು ಕರೆಸಿದ. ಅವರಿಬ್ಬರೂ ರಾಜಾಜ್ಞೆಯ ಮೇರೆಗೆ ಅತಿ ಶೀಘ್ರವಾಗಿ ದೆಹಲಿಯನ್ನು ತಲುಪಿದರು. ಅವರಿಬ್ಬರನ್ನು ಕಂಡು ಬಾದಶಹನು ತುಂಬಾ ಸಂತೋಷಪಟ್ಟ ಮತ್ತು ಅವನು ಮಲ್ಲಿಕ್ ನಾಯಬ್‌ನನ್ನು ಏಕಾಂತದಲ್ಲಿ ಕರೆಸಿ ತನ್ನ ಪುತ್ರನಾದ ಖಿಜರ್‌ಖಾನ್ ಮತ್ತು ಪತ್ನಿಯಾದ ಮಲ್ಲಿಕಾ ಜಹಾನ್‌ಳ ನಿರ್ಲಕ್ಷ್ಯದ ಬಗ್ಗೆ ದೂರಿದ. ಆದರೆ ಆ ಹೊತ್ತಿಗಾಗಲೇ ಮುಲ್ಕ್ ನಾಯಬ್‌ನು ತನ್ನನ್ನು ತಾನೇ ಬಾದಶಹನ ಸ್ಥಾನದಲ್ಲಿ ಕಲ್ಪಿಸಿಕೊಂಡು ಕನಸು ಕಾಣತೊಡಗಿದ. ಹೀಗಾಗಿ ಆಯಾಚಿತವಾಗಿ ತನಗೆ ಒದಗಿಬಂದ ಸದವಾಕಾಶದಿಂದ ಸಂತುಷ್ಟನಾಗಿ ಅವನು ಬಾದಶಹನಿಗೆ ನುಡಿದ "ಈ ಎಲ್ಲಾ ವಿಷಯಗಳ ಹಿನ್ನೆಲೆಯಲ್ಲಿ ನಾನು ಒಂದು ಖಚಿತ ಅಭಿಪ್ರಾಯಕ್ಕೆ ತಲುಪಿದ್ದೇನೆ. ಖಿಜರ್‌ಖಾನ್, ಮಲ್ಲಿಕಾ ಜಹಾನ್ ಮತ್ತು ಅಲಫ್‌ಖಾನ್ ಈ ಮೂವರು ಕೂಡ ಬಾದಶಹನ ವಂಶಸ್ಥರು ಮತ್ತು ಸಮೀಪ ಸಂಬಂಧಿಗಳಾಗಿದ್ದಾರೆ. ನಿಮ್ಮ ಇರುವಿಕೆ ಅವರಿಗೆ ಸರಿ ಕಂಡು ಬರುತ್ತಿಲ್ಲ. ಆದ್ದರಿಂದ ಅವರು ಹೃದಯಾಂತರಾಳದಿಂದ ನಿಮ್ಮ ಸಾವನ್ನು ಬಯಸುತ್ತಿದ್ದಾರೆ".

ಖಿಜರ್‌ಖಾನನನ್ನು ಅಮ್ರೋಹಾಗೆ ಕಳುಹಿಸಿದ್ದು:

ಬಾದಶಹ ಮತ್ತು ಮುಲ್ಕ್ ನಾಯಬ್‌ನ ನಡುವೆ ಇನ್ನೂ ಈ ಸಂಭಾಷಣೆಯು ನಡೆಯುತ್ತಿರುವಾಗಲೇ ಮಲ್ಲಿಕಾ ಜಹಾನ್‌ಗೆ ಸಂತೋಷ ಸಮಾರಂಭವನ್ನು ಆಚರಿಸುವ ಬಗ್ಗೆ ಒಂದು ಹೊಸ ನೆಪ ದೊರಕಿತು. ಮತ್ತು ಅವಳು ಅಲ್ಲಾವುದ್ದೀನನ್ನು ಕಂಡು ರಾಜಕುಮಾರ ಶಾದಿಖಾನ್‌ನನ್ನು ಅಲಫ್‌ಖಾನ್‌ನ ಪುತ್ರಿಯೊಡನೆ ಮದುವೆ ಮಾಡುವ ಸಲುವಾಗಿ ಬಾದಶಹನ ಅನುಮತಿಯನ್ನು ಕೋರಿದಳು. ಈ ಮಾತನ್ನು ಕೇಳಿದ ಮಲ್ಲಿಕ್ ನಾಯಬ್‌ನಿಗೆ ಬಾದಶಹನ ಕಿವಿಯೂದುವ ಒಂದು ಹೊಸದಾದ ವಿಶಿಷ್ಟ ಅವಕಾಶವು ಲಭಿಸಿತು. ಅವನು ಲೋಕಭಿರಾಮವಾಗಿ ಮಾತಾನಾಡುತ್ತ, ಅವನ ಪತ್ನಿ ಮತ್ತು ಪುತ್ರರ ಬಗ್ಗೆ ಬಾದಶಹನ ಮನಸ್ಸಿನಲ್ಲಿ ಇನ್ನಷ್ಟು ವಿಷಬೀಜವನ್ನು ಬಿತ್ತಿದ. ಅಲ್ಲಾವುದ್ದೀನನು ಈ ಬಗ್ಗೆ ತುಂಬಾ ಆಲೋಚನೆ ಮಾಡಿದ ನಂತರ ಅತ್ಯಂತ ಎಚ್ಚರಿಕೆಯ ಹೆಜ್ಜೆಯನ್ನು ಇಡುತ್ತ ಶಿಕಾರಿಯ ನೆಪದಲ್ಲಿ ಖಿಜರ್‌ಖಾನ್‌ನನ್ನು ಅಮ್ರೋಹದ ಕಡೆಗೆ ಕಳಿಸಿದ. ಅವನನ್ನು ಬೀಳ್ಕೊಡುವಾಗ ಅಲ್ಲಾವುದ್ದೀನನು ನಾನು ಗುಣಮುಖನಾದ ನಂತರ ನಿನ್ನನ್ನು ಕರೆಸಿಕೊಳ್ಳುತ್ತೇನೆಂದು ನುಡಿದ. ಖಿಜರ್‌ಖಾನನು ಆಗ ಹರಕೆಯನ್ನು ಹೊತ್ತ ಮತ್ತು ಅಲ್ಲಾವುದ್ದೀನನು ಗುಣಮುಖನಾದಲ್ಲಿ ತಾನು ಅಮ್ರೋಹಾದಿಂದ ದೆಹಲಿಯವರೆಗೆ ಸಂತರ ದರ್ಶನಕ್ಕಾಗಿ ಕಾಲುನಡಿಗೆಯಲ್ಲಿ ಬರುವುದಾಗಿ ಅವನು ಹರಕೆ ಮಾಡಿದ.

ಖಿಜರ್‌ಖಾನ್ ಮರಳಿ ಬಂದದ್ದು:

ಬಾದಶಹನು ಗುಣಮುಖನಾಗುತ್ತಿದ್ದಾನೆ ಎಂಬ ಸುದ್ದಿಯು ಖಿಜರ್‌ಖಾನನಿಗೆ ಸಿಕ್ಕಿದಾಗ ಅವನು ತನ್ನ ಖಾಸಾ ಸೈನ್ಯದೊಂದಿಗೆ ಅಮ್ರೋಹಾದಿಂದ ದೆಹಲಿಯವರೆಗೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಿ ತನ್ನ ಹರಕೆಯನ್ನು ಪೂರೈಸಿದ. ಮಲ್ಲಿಕ್ ನಾಯಬ್‌ಗೆ ಈ ವಿಷಯವು ತಿಳಿದು ಬಂದಾಗ ಅವನು ಬಾದಶಹನ ಬಳಿ ಮತ್ತೆ ಚಾಡಿ ಹೇಳಿದ "ರಾಜಕುಮಾರನು ತಮ್ಮ ಅಪ್ಪಣೆ ಪಡೆಯದೆ ರಾಜಧಾನಿಯನ್ನು ಪ್ರವೇಶಿಸಿದ್ದಾನೆ. ಆದ್ದರಿಂದ ಅವನ ಬಗ್ಗೆ ತಾವು ಎಚ್ಚರಿಕೆಯಿಂದ ಇರಬೇಕು ಆತನು ಎಲ್ಲಾದರೂ ಇತರೆ ಸರ್ದಾರರ ಜೊತೆ ಸೇರಿ ಸಂಚನ್ನು ಮಾಡಿದರೆ ತಮಗೆ ಅಪಾಯ ಉಂಟಾಗುತ್ತದೆ ಮತ್ತು ಯಾವುದಾದರೂ ಹೊಸ ಆಪತ್ತು ಎದುರಾಗುತ್ತದೆ". ಅಲ್ಲಾವುದ್ದೀನನು ಮುಲ್ಕ್ ನಾಯಬ್‌ನ ಈ ಮಾತನ್ನು ನಂಬಲಿಲ್ಲ ಮತ್ತು ಅವನು ಖಿಜರ್‌ಖಾನನನ್ನು ಕರೆದು ಅವನನ್ನು ಆಲಂಗಿಸಿದ ಅವನ ನೆತ್ತಿ ಮತ್ತು ಕಣ್ಣುಗಳನ್ನು ಚುಂಬಿಸಿದ ಹಾಗೂ ಅಂತಃಪುರದೊಳಗೆ ಹೋಗಿ ತನ್ನ ತಾಯಿ ಮತ್ತು ಸಹೋದರಿಯರನ್ನು ಭೇಟಿಯಾಗಲು ಅನುಮತಿಯನ್ನು ನೀಡಿದ.

ಖಿಜರ್‌ಖಾನ್ ಮತ್ತು ಶಾದಿಖಾನನ ಬಂಧನ:

ಕೆಲವು ದಿನಗಳ ನಂತರ ಖಿಜರ್‌ಖಾನನ ಮೇಲೆ ಹಿಂದಿನಂತೆಯೇ ವಿಸ್ಮೃತಿಯ ಛಾಯೆ ಮೂಡಿತು. ಮತ್ತು ಅವನು ನಿಯಮಿತವಾಗಿ ದರ್ಬಾರಿನಲ್ಲಿಯೂ ಕೂಡ ಹಾಜರಾಗುತ್ತಿರಲಿಲ್ಲ. ಈ ಸಂಗತಿಯ ದುರ್ಬಳಕೆಯನ್ನು ಮಾಡಿಕೊಂಡ ಮಲ್ಲಿಕ್ ನಾಯಬ್ ಮತ್ತೆ ಬಾದಶಹನ ತಲೆಯಲ್ಲಿ ಇಲ್ಲಸಲ್ಲದ ವಿಚಾರಗಳನ್ನು ತುಂಬಿಸಿದ ಹಾಗೂ ತಂದೆ ಮಕ್ಕಳ ನಡುವೆ ವಿರಸವನ್ನು ಮೂಡಿಸುವಲ್ಲಿ ಯಸಸ್ವಿಯಾದ. ಅಷ್ಟೇ ಅಲ್ಲದೆ ಖಿಜರ್‌ಖಾನನು ಬಾದಶಹನ ಇನ್ನೊಬ್ಬ ಮಗನಾದ ಶಾದಿಖಾನ್‌ನೊಡನೆ ಶರೀಕಾಗಿ ಇಂತಿಂತಹ ವ್ಯಕ್ತಿಗಳ ಜೊತೆಯಲ್ಲಿ ಸೇರಿಕೊಂಡು ಬಾದಶಹನ ವಿರುದ್ಧ ಸಂಚನ್ನು ರೂಪಿಸುತ್ತಿದ್ದಾನೆಂತಲೂ ಶೀಘ್ರದಲ್ಲಿಯೇ ಅವನು ಬಾದಶಹನ ಪ್ರಾಣಹತ್ಯೆ ಮಾಡುವ ಸಂಭವವಿದೆಯೆಂತಲೂ ಅವನು ಬಾದಶಹನಿಗೆ ತಿಳಿಸಿದ. ಹಾಗೂ ತನ್ನ ಮಾತಿಗೆ ಪುಷ್ಟಿಯನ್ನು ನೀಡುವ ಸಲುವಾಗಿ ಮಲ್ಲಿಕ್ ನಾಯಬ್‌ನು ಮೋಸ ಮತ್ತು ವಂಚನೆಯಿಂದ ಕೆಲವು ಗುಲಾಮರ ಸುಳ್ಳು ಸಾಕ್ಷಿಗಳನ್ನು ಕೂಡ ಬಾದಶಹನ ಮುಂದಿಟ್ಟ ಹಾಗೂ ಬಾದಶಹನನ್ನು ತಪ್ಪು ದಾರಿಗೆಳೆದು ಅವನಿಂದ ಖಿಜರ್‌ಖಾನ್ ಮತ್ತು ಶಾದಿಖಾನ್‌ನ ಬಂಧನದ ಫರ್ಮಾನನ್ನು ಹೊರಡಿಸಿದ.

ವಿದ್ರೋಹದ ಸಂಚುಗಳು:

ಮಲ್ಲಿಕ್ ನಾಯಬ್‌ನು ಆ ಇಬ್ಬರು ರಾಜಕುಮಾರನ್ನು ಕೂಡ ಗ್ವಾಲಿಯರ್ ಕೋಟೆಯಲ್ಲಿ ಬಂಧನದಲ್ಲಿಟ್ಟ ಹಾಗೂ ಮಲ್ಲಿಕಾ ಜಹಾನ್‌ಳನ್ನು ಅರಮನೆಯಿಂದ

ಹೊರಡಿಸಿ, ಹಳೆ ದೆಹಲಿಯ ಮನೆಯೊಂದರಲ್ಲಿ ಗೃಹ ಬಂಧನದಲ್ಲಿರಿಸಿದ. ಮಲ್ಲಿಕ್ ನಾಯಬ್‌ನು ಬಾದಶಹನಿಂದ ಅಲಫ್‌ಖಾನ್‌ನ ಮರಣದಂಡನೆಯ ಆಜ್ಞೆಯನ್ನು ಜಾರಿಗೊಳಿಸಿದ. ಖಿಜರ್‌ಖಾನ್ ಮತ್ತು ಶಾದಿಖಾನ್‌ನ ಚಿಕ್ಕಪ್ಪನಾಗಿದ್ದ ಅಂದರೆ (ಅವರ ತಾಯಿಯ ತಂಗಿಯ ಪತಿ) ಅಲಫ್‌ಖಾನ್‌ನು ಗುಜರಾತ್‌ನಿಂದ ಆಗ ತಾನೇ ಆಗಮಿಸಿದ್ದು ಮುಲ್ಕ್ ನಾಯಬ್‌ನ ಮೋಸದಿಂದ ತನ್ನ ಪ್ರಾಣಕ್ಕೆ ಎರವಾದ. ಅಷ್ಟೇ ಅಲ್ಲದೆ ಮುಲ್ಕ್ ನಾಯಬ್‌ನು ಸಯ್ಯದ್ ಕಮಾಲುದ್ದೀನ್ ಕಿರ್ಕ್‌ನನ್ನು ಬಾದಶಹ ಆಜ್ಞೆಯ ಮೇರೆಗೆ ಜಾಲೂರಿಗೆ ಕಳುಹಿಸಿದ. ಜಾಲೂರ್‌ನ ಒಡೆಯನು ಮತ್ತು ಅಲಫ್‌ಖಾನನ ಸಹೋದರನೂ ಆಗಿದ್ದ ನಿಜಾಮುದ್ದೀನನನ್ನು ಕೊಲೆ ಮಾಡುವ ಸಲುವಾಗಿ ಅವನನ್ನು ಕಳಿಸಲಾಗಿತ್ತು. ಖಿಜರ್‌ಖಾನ್ ಮತ್ತು ಶಾದಿಖಾನ್‌ನ ಬಂಧನ ಮತ್ತು ಅಲಫ್‌ಖಾನ್ ಮತ್ತು ಅವನ ಸಹೋದರ ನಿಜಾಮುದ್ದೀನನ ಕೊಲೆಯಿಂದ ದೇಶದಾದ್ಯಂತ ತಳಮಳ ಆರಂಭವಾಯಿತು. ತಣ್ಣಗಾಗಿದ್ದ ಗಲಭೆಗಳು ಹೊಸದಾಗಿ ಭುಗಿಲೆದ್ದವು. ಗುಜರಾತ್‌ನ ಸೈನ್ಯವು ಬಂಡಾಯವನ್ನು ಆರಂಭಿಸಿತು ಹಾಗೂ ಇಡೀ ದೇಶದಾದ್ಯಂತ ಪಿತೂರಿ ಮತ್ತು ದಂಗೆಗಳು ತಾಂಡವಾಡತೊಡಗಿದವು.

ಅಲ್ಲಾವುದ್ದೀನನ ಮರಣ:

ಗುಜರಾತ್‌ನ ವಿದ್ರೋಹವನ್ನು ದಮನ ಮಾಡುವ ಸಲುವಾಗಿ ಬಾದಶಹನು ಮುಲ್ಕ್ ನಾಯಬ್‌ನ ಸಲಹೆಯ ಮೇರೆಗೆ ಸೈಯದ್ ಕಮಾಲುದ್ದೀನ್‌ನನ್ನು ಅಲ್ಲಿಗೆ ಕಳಿಸಿದ. ಆದರೆ ಅಲಫ್‌ಖಾನ್‌ನ ಬೆಂಬಲಿಗರು ಮತ್ತು ಅನುಯಾಯಿಗಳು ಕಮಾಲುದ್ದೀನ್‌ನನ್ನು ಹಿಡಿದು ಚಿತ್ರಹಿಂಸೆ ನೀಡಿ ಅವನ ಕೊಲೆ ಮಾಡಿದರು. ಜೈತ್‌ಪುರದ ಸಾಮಂತ ರಾಜನು ಕೂಡ ವಿದ್ರೋಹದ ಮೂಂಚೂಣಿಯಲ್ಲಿದ್ದು ಬಾದಶಹನ ನೌಕರರ ಕೈಕಾಲುಗಳನ್ನು ಕಟ್ಟಿ ಅವರುಗಳನ್ನು ಕೋಟೆಯಿಂದ ಕೆಳಗೆ ಎಸೆದ. ದಖ್ಖನ್ನಿನಲ್ಲಿ ರಾಮ್‌ದೇವನ ಅಳಿಯನಾದ ಹರಪಾಲ್‌ದೇವನು ಗಲಭೆಯನ್ನು ಆರಂಭಿಸಿದ ಮತ್ತು ಅಸಂಖ್ಯ ಬಾದಶಹನ ಠಾಣೆಗಳನ್ನು ನಾಶ ಮಾಡಿದ. ಈ ಸುದ್ದಿಯನ್ನೆಲ್ಲಾ ಕೇಳಿದ ಅಲ್ಲಾವುದ್ದೀನನು ಅತ್ಯಂತ ವ್ಯಗ್ರನಾದ. ದುಃಖ ಮತ್ತು ಯಾತನೆಯಿಂದ ಅತೀವ ನೋವಿಗೊಳಗಾದ ಅವನ ಆರೋಗ್ಯವು ತೀವ್ರವಾಗಿ ಹದಗೆಡತೊಡಗಿತು. ಹಾಗೂ ಹಿಜರಿ ಶಕೆ ೭೧೬ರ ಶವ್ವಾಲ್ ತಿಂಗಳ ೬ ನೇ ತಾರೀಖಿನ ರಾತ್ರಿಯಂದು ಅವನ ಪ್ರಾಣಪಕ್ಷಿಯು ಹಾರಿಹೋಯಿತು.

ಮೆಹಮೂದ್ ಘಜ್ನಿಗೂ ಲಭ್ಯವಾಗದ ಅಗಣಿತವಾದ ನಗನಾಣ್ಯ ಮತ್ತು ಅರ್ನಘ್ಯ ರತ್ನಗಳು ಹಾಗೂ ಅಪಾರ ಸಂಪತ್ತನ್ನು ಅಲ್ಲಾವುದ್ದೀನನು ಅತ್ಯಂತ ಸಾಹಸದಿಂದ ಒಟ್ಟುಗೂಡಿಸಿದ್ದ. ಅದನ್ನು ಬೇರೆಯವರ ಪಾಲಿಗೆ ಬಿಟ್ಟು ಅವನು ಬರಿಗೈಯಲ್ಲಿ ನಡೆದ. ವಿಷಪ್ರಾಶನದಿಂದ ಕೊಲೆ ಮಾಡುವುದರ ಮೂಲಕ ಬಾದಶಹನ ಸಾವು ಉಂಟಾಯಿತೆಂದು ಬಹಳ ಜನರ ಅಭಿಪ್ರಾಯವಾಗಿತ್ತು. ಮಲ್ಲಿಕ್ ನಾಯಬ್‌ನು

ಅವನನ್ನು ವಿಷಪ್ರಾಶನದ ಮೂಲಕ ಕೊಲೆ ಮಾಡಿದ. ಇತಿಹಾಸಕಾರರು ದಾಖಲಿಸಿರುವಂತೆ ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯಲ್ಲಿ ಎಂಭತ್ತ ನಾಲ್ಕು ದೊಡ್ಡ ಹಾಗೂ ಸಣ್ಣ ಯುದ್ಧಗಳು ನಡೆದಿದ್ದವು. ಮತ್ತು ಪ್ರತಿಯುದ್ಧದಲ್ಲೂ ಆ ಸಮರ್ಥ ಬಾದಶಹನು ಸಫಲನಾಗಿ ವಿಜಯಿಯಾಗಿದ್ದನು. ಅಲ್ಲಾವುದ್ದೀನನ ಆಡಂಬರ ಮತ್ತು ವೈಭವದ ಹೆಗ್ಗುರುತು ಹೇಗೆ ಕಂಡುಬರುತ್ತದೆ ಎಂದರೆ ಅವನ ದರ್ಬಾರಿನಲ್ಲಿ ಎಪತ್ತು ಸಾವಿರ ನೌಕರರಿದ್ದರು. ಆ ಪೈಕಿ ಏಳು ಸಾವಿರ ಮಂದಿ ನುರಿತ ಕಟ್ಟಡ ನಿರ್ಮಾಪಕರಿದ್ದು ಸದರಿಯವರು ಅತ್ಯಂತ ಬೃಹತ್ ಕಟ್ಟಡವನ್ನು ಕೂಡ ಎರಡು ವಾರಗಳಲ್ಲಿ ನಿರ್ಮಾಣ ಮಾಡುವಂತಹ ಕಲೆಗಾರಿಕೆಯನ್ನು ಹೊಂದಿದ್ದರು. ಹಾಗೂ ಚಿಕ್ಕ ಕಟ್ಟಡಗಳನ್ನು ಎರಡು, ಮೂರು ದಿನಗಳಲ್ಲಿ ನಿರ್ಮಾಣ ಮಾಡುವಷ್ಟು ಸಾಮರ್ಥ್ಯವನ್ನು ಹೊಂದಿದ್ದರು. ಕಟ್ಟಡ ನಿರ್ಮಾಣದ ಸಲುವಾಗಿ ಬಾದಶಹನು ಯಾವ ಗಡುವನ್ನು ನಿರ್ಧರಿಸಿದ್ದೇನೋ ಆ ಗಡುವಿನಿಂದ ಒಂದು ಕ್ಷಣವೂ ಕೂಡ ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳದೆ ಸದರಿಯವರು ನಿರ್ಮಾಣ ಕಾರ್ಯವನ್ನು ಪೂರೈಸುತ್ತಿದ್ದರು ಅನೆಯ ಮೇಲೆ ಅಂಬಾರಿಯನ್ನು ಇಟ್ಟು ಆ ಅಂಬಾರಿಯಲ್ಲಿ ವಿರಾಜಮಾನನಾದ ಮೊದಲ ವ್ಯಕ್ತಿಯು ಅಲ್ಲಾವುದ್ದೀನ್ ಆಗಿದ್ದಾನೆ. ಅಲ್ಲಾವುದ್ದೀನನು ಇಪ್ಪತ್ತು ವರ್ಷಕ್ಕಿಂತ ಸ್ವಲ್ಪ ಹೆಚ್ಚಿನ ಅವಧಿಗೆ ರಾಜ್ಯಾಡಳಿತವನ್ನು ನಿರ್ವಹಿಸಿದ.

■

*

ಶಹಾಬುದ್ದೀನ್ ಉಮರ್ ಬಿನ್ ಅಲ್ಲಾವುದ್ದೀನ್ ಖಿಲ್ಜಿ

ಅಲ್ಲಾವುದ್ದೀನ್ ವಂಶಸ್ಥರ ಮೇಲೆ ಕ್ರೌರ್ಯ ಹಾಗೂ ಹಿಂಸೆ:

ಅಲ್ಲಮ ಸದರ್‌ಜಹಾನ್ ಗುಜರಾತಿಯವರು ಬರೆದಿರುವ ಇತಿಹಾಸದ ಗ್ರಂಥದಲ್ಲಿ ದಾಖಲಿಸಿರುವ ಪ್ರಕಾರ ಅಲ್ಲಾವುದ್ದೀನ್ ಖಿಲ್ಜಿಯ ಸಾವಿನ ಮರುದಿನ ಮುಲ್ಕ್ ನಾಯಬ್‌ನು ಎಲ್ಲಾ ಸರ್ದಾರರರು ಮತ್ತು ರಾಜ್ಯದ ಅಧಿಕಾರಿಗಳ ಸಭೆ ಸೇರಿಸಿದ. ಮತ್ತು ದಿವಂಗತ ಬಾದಶಹನ ಉಯಿಲನ್ನು ಓದಿ ಹೇಳಿದ. ಖಿಲ್ಜಿಯ ಉಯಿಲು ಹೀಗಿತ್ತು "ನಾನು ನನ್ನ ಹಿರಿಯ ಮಗನಾದ ಖಿಜರ್‌ಖಾನ್‌ನನ್ನು ನನ್ನ ವಾರೀಸುದಾರಿಕೆ ಮತ್ತು ಯುವರಾಜನ ಹುದ್ದೆಯಿಂದ ವಜಾಗೊಳಿಸುತ್ತಿದ್ದೇನೆ. ಮತ್ತು ಆತನ ಸ್ಥಾನದಲ್ಲಿ ನನ್ನ ಕಿರಿಯ ಮಗನಾದ ಶಹಾಬುದ್ದೀನ್ ಉಮರ್‌ನನ್ನು ನನ್ನ ರಾಜ್ಯದ ಉತ್ತರಾಧಿಕಾರಿಯಾಗಿ ನೇಮಕ ಮಾಡುತ್ತೇನೆ". ಮುಲ್ಕ್ ನಾಯಬ್‌ನು ಏಳು ವರ್ಷ ವಯಸ್ಸಿನ ರಾಜಕುಮಾರ ಶಹಾಬುದ್ದೀನ್‌ನನ್ನು ಪಟ್ಟಾಭಿಷಿಕ್ತನನ್ನಾಗಿ ಮಾಡಿದ ಮತ್ತು ಆ ಕಿರಿಯ ವಯಸ್ಸಿನ ಬಾದಶಹನ ಪ್ರತಿನಿಧಿಯಾಗಿ ತಾನೇ ಸ್ವತಃ ವಿರಾಜಮಾನನಾದ. ಮುಲ್ಕ್ ನಾಯಬ್‌ನು ಅಲ್ಲಾವುದ್ದೀನ್‌ನ ಸರ್ದಾರರರನ್ನು ತನ್ನ ಸಮಾನ ಮನಸ್ಕರೆಂದು ಭಾವಿಸಿದ. ಅದು ಆತನ ಬಹು ದೊಡ್ಡ ಲೋಪವಾಗಿ ಪರಿಣಮಿಸಿತು. ಮೆರವಣಿಗೆಯ ಮೊದಲ ದಿನವೇ ಮುಲ್ಕ್ ನಾಯಬ್‌ನು ಮುಲ್ಕ್ ಸುಹೇಲ್‌ನನ್ನು ಬಾರ್‌ಬೇಕಿಯ ಹುದ್ದೆಗೆ ಏರಿಸಿದ ಹಾಗೂ ಖಿಜರ್‌ಖಾನ್ ಮತ್ತು ಶಾದಿಖಾನ್‌ನನ್ನು ಅಂಧರನ್ನಾಗಿ ಮಾಡುವ ಸಲುವಾಗಿ ಗ್ವಾಲಿಯರ್‌ಗೆ ರವಾನೆ ಮಾಡಿದ. ಆ ಕೃತಘ್ನನು ದಿವಂಗತ ಬಾದಶಹನು ತನ್ನ ಮೇಲೆ ತೋರಿದ ದಯೆ,ಕರುಣೆ ಮತ್ತು ಕೊಡುಗೆಗಳ ಬಗ್ಗೆ ಒಂದಿನಿತು ಕೂಡ ಆಲೋಚಿಸಲಿಲ್ಲ. ಹಾಗೂ ಆ ಇಬ್ಬರು ರಾಜಕುಮಾರರ ಕಣ್ಣುಗಳಲ್ಲಿಯೂ ಲೋಹದ ಸೂಜಿಗಳನ್ನು ಚುಚ್ಚಿ ಅವರನ್ನು ಅಂಧರನ್ನಾಗಿ ಮಾಡಿದ. ಮತ್ತು ಅವನು ಅವರ ತಾಯಿಯಾದ ಮಲ್ಲಿಕಾ ಜಹಾನ್‌ಳನ್ನು ಕಾರಾಗೃಹಕ್ಕೆ ಅಟ್ಟಿದ. ಆ ದ್ರೋಹಿಯು ಅಷ್ಟಕ್ಕೆ ನಿಲ್ಲದೆ ಶಹಾಬುದ್ದೀನನ ತಾಯಿಯೊಡನೆ ನಿಖಾ ಮಾಡಿಕೊಂಡ.

ಶೇಕ್ ನಜ್‌ಮುದ್ದೀನ್‌ರವರ ಆತ್ಮ ಜ್ಞಾನದ ಬೆಳಕು:

ಮುಲ್ಕ್ ನಾಯಬ್‌ನು ಖಿಜರ್‌ಖಾನ್ ಮತ್ತು ಶಾದಿಖಾನ್‌ರವರನ್ನು ಅಂಧರನ್ನಾಗಿ ಮಾಡಿದಂತೆ ಮುಬಾರಕಖಾನನನ್ನು ಕೂಡ ಅಂಧನನ್ನಾಗಿ ಮಾಡಿ ತಾನು ಸ್ವತಃ ಆಡಳಿತದ ಎಲ್ಲಾ ಸೂತ್ರಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂದು ಯೋಜನೆಯೊಂದನ್ನು ರೂಪಿಸಿದ್ದ. ರಾಜಕುಮಾರ ಮುಬಾರಕ್‌ನ ತಾಯಿಯಾದ ಬೀಬಿ ಮಾಲಿಕ್ ಒಬ್ಬ ವ್ಯಕ್ತಿಯನ್ನು ಹಜರತ್ ನಜಮುದ್ದೀನರವರ ಸನ್ನಿಧಿಗೆ ಕಳುಹಿಸಿದಳು. ಶೇಕ್ ನಜಮುದ್ದೀನರವರು ಹಜರತ್ ಶೇಕ್ ಅಹಮ್ಮದಜಾಮರವರ ಪುತ್ರರ ಪೈಕಿ ಬಹು ಪ್ರಮುಖರಾಗಿದ್ದು ಆತ್ಮಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಯಾಗಿದ್ದರು. ಬೀಬಿಮಾಲಿಕ್ ಶೇಕ್ ಸಾಹೇಬರ ಬಳಿ ನೆರವನ್ನು ಯಾಚಿಸಿದಳು. ಶೇಕ್ ಸಾಹೇಬರು ಆಕೆಗೆ ಉತ್ತರವನ್ನು ನೀಡಿದರು "ನೀನು ಯಾವುದೇ ಚಿಂತೆಯನ್ನು ಮಾಡಬೇಡ. ದೈವ ಬಲದ ನಿರೀಕ್ಷೆಯನ್ನು ಮಾಡು". ಈ ಮಾತನ್ನು ನುಡಿದ ಶೇಕ್‌ಸಾಹೇಬರು ತಮ್ಮ ತಲೆಯಿಂದ ಟೋಪಿಯನ್ನು ತೆಗೆದರು ಮತ್ತು ಅದನ್ನು ಉಲ್ಟಾ ಮಾಡಿ ಮತ್ತೆ ಅದನ್ನು ತಮ್ಮ ತಲೆಯ ಮೇಲೆ ಧರಿಸಿದರು ಮತ್ತು ನುಡಿದರು "ಮುಬಾರಕ್ ಶಾ ಸಿಂಹಾಸನದ ಮೇಲೆ ಆಸೀನನಾದ ನಂತರ ಈ ಟೋಪಿಯನ್ನು ಸರಿಯಾಗಿ ಧರಿಸುತ್ತೇನೆ".

ಮುಲ್ಕ್ ನಾಯಬ್‌ನ ನಿರ್ಧಾರಗಳು:

ಮುಲ್ಕ್ ನಾಯಬ್‌ನು ತನ್ನದೇ ಆದ ಕೆಲವು ಸಂಪ್ರದಾಯಗಳನ್ನು ಅನುಸರಿಸುತ್ತಿದ್ದನು. ಅವನು ಪ್ರತಿದಿನವೂ ತಪ್ಪದೇ ಕೆಲಕಾಲದವರೆಗೆ ಶಹಾಬುದ್ದೀನ್ ಉಮರ್‌ನನ್ನು ಅರಮನೆಯಿಂದ ಹೊರ ತಂದು ಸಾವಿರ ಕಂಬಗಳ ದರ್ಬಾರ್ ಹಾಲ್‌ನಲ್ಲಿ ರಾಜ ಸಿಂಹಾಸನದ ಮೇಲೆ ಕೂರಿಸುತ್ತಿದ್ದ. ಮತ್ತು ಎಲ್ಲಾ ಸರ್ದಾರರು ಮತ್ತು ಅಧಿಕಾರಿಗಳಿಗೆ ಬಾದಶಹನಿಗೆ ಸಾಲು ಸಾಲಿನಲ್ಲಿ ನಿಂತು ಕೈಕಟ್ಟಿ ಮುಜರೆಯನ್ನು ಒಪ್ಪಿಸಬೇಕೆಂದು ಆಜ್ಞೆಮಾಡುತ್ತಿದ್ದ. ದರ್ಬಾರು ಕೊನೆಗೊಂಡಾಗ ಮುಲ್ಕ್ ನಾಯಬ್‌ನು ಶಹಾಬುದ್ದೀನ್ ಉಮರ್‌ನನ್ನು ಅರಮನೆಯೊಳಗಿದ್ದ ಆತನ ತಾಯಿಯ ಬಳಿ ಕಳುಹಿಸುತ್ತಿದ್ದ ಹಾಗೂ ಅವನು ಸಾವಿರ ಕಂಬಗಳ ಸಭಾಭವದಲ್ಲಿ ನಿರ್ಮಿಸಲಾಗಿದ್ದ ಡೇರೆಯೊಳಗಡೆ ಕುಳಿತು ರಾಜಭಟರುಗಳ ಜೊತೆಯಲ್ಲಿ ಚದುರಂಗದಾಟವನ್ನು ಆಡುತ್ತಾ ಅದರಲ್ಲಿಯೇ ತಲ್ಲೀನನಾಗುತ್ತಿದ್ದ. ಮುಲ್ಕ್ ನಾಯಬ್‌ನು ಸದಾಕಾಲವೂ ಅಲ್ಲಾವುದ್ದೀನ್ ಖಿಲ್ಜಿಯ ವಂಶಸ್ಥರ ವಿನಾಶದ ಬಗ್ಗೆ ಯೋಜನೆಗಳನ್ನು ತಯಾರಿಸುತ್ತಿದ್ದು. ಈ ಬಗ್ಗೆ ನಿರಂತರವಾಗಿ ಅವರುಗಳೊಡನೆ ಚರ್ಚೆ ಮಾಡುತ್ತಿದ್ದ.

ರಾಜಕುಮಾರ ಮುಬಾರಕ್‌ನ ಕೊಲೆಯ ಪ್ರಯತ್ನ:

ಒಂದು ಇರುಳಿನಂದು ಮುಲ್ಕ್ ನಾಯಬ್‌ನು ಸಾವಿರ ಕಂಬಗಳ ಅರಮನೆಯ

ರಕ್ಷಣೆಗೆ ನಿಯೋಜಿತರಾಗಿದ್ದ ರಾಜಭಟರನ್ನು ರಹಸ್ಯವಾಗಿ ಮುಬಾರಕ ಶಾನ ಕೊಲೆ ಮಾಡಲು ಕಳಿಸಿಕೊಟ್ಟ. ಆ ರಾಜಭಟರು ಮುಬಾರಕ್ ಶಾನ ಬಳಿ ಹೋದಾಗ ಆ ರಾಜಕುಮಾರನು ತನ್ನ ಕೊರಳಿನಲ್ಲಿದ್ದ ಬೆಲೆ ಬಾಳುವ ಮುತ್ತು ರತ್ನ ಖಚಿತ ಬಂಗಾರದ ಸರವನ್ನು ಅವರಿಗೆ ನೀಡಿ ತನ್ನ ತಂದೆಯ ಕರುಣೆ ಮತ್ತು ದಯೆಯಿಂದ ಕೂಡಿದ ಆಡಳಿತದ ಬಗ್ಗೆ ನೆನಪಿಸಿದ. ಆ ರಾಜಕುಮಾರನ ಸಂಭಾಷಣೆಯಿಂದ ಆ ರಾಜಭಟರು ತುಂಬಾ ಲಜ್ಜಿತರಾದರು, ಮತ್ತು ತಮ್ಮ ಆಲೋಚನೆಯನ್ನು ಕೈಬಿಟ್ಟರು. ಮತ್ತು ಹೇಗೆ ಹೋಗಿದ್ದರೋ ಹಾಗೆಯೇ ಮರಳಿದರು. ಮರಳಿ ಬಂದ ಅವರುಗಳು ತಮ್ಮ ಸರ್ದಾರರಾದ ಬಷೀರ್ ಮತ್ತು ಮುಬಷಿರ್ ಎಂಬುವವರೊಡನೆ ಎಲ್ಲಾ ವೃತ್ತಾಂತವನ್ನು ಅರುಹಿದರು.ಹಾಗೂ ರಾಜಕುಮಾರನ ರತ್ನ ಖಚಿತ ಕಂಠೀಹಾರರವನ್ನು ಅವರಿಗೆ ಒಪ್ಪಿಸಿದರು. ಮುಬಾರಕ್ ಶಾನ ಅದೃಷ್ಟದಲ್ಲಿ ಬಾದಶಹನಾಗುವ ಯೋಗವಿತ್ತು ಹೀಗಾಗಿ ಬಷೀರ್ ಮತ್ತು ಮುಬಷಿರ್ ಮತ್ತು ಅವರ ಇತರೆ ಬೆಂಬಲಿಗರು ರಾಜಕುಮಾರನ ಮೇಲ್ಕಂಡ ವೃತ್ತಾಂತದಿಂದ ತುಂಬಾ ಪ್ರಭಾವಿತರಾದರು. ಹಾಗೂ ಮುಬಾರಕ್ ಶಾನ ಶತ್ರುಗಳನ್ನು ತತ್‌ಕ್ಷಣವೇ ಕೊಲೆಮಾಡಬೇಕೆಂದು ನಿಶ್ಚಯಿಸಿದರು.

ಮುಲ್ಕ್ ನಾಯಬ್‌ನ ಕೊಲೆ:

ರಾತ್ರಿಯ ಅನೇಕ ಜಾವಗಳು ಕಳೆಯುತ್ತಿದ್ದಂತೆಯೇ ಎಲ್ಲಾ ಜನರು ನಿದ್ರಾದೇವತೆಯ ಆಲಿಂಗನಕ್ಕೆ ಶರಣಾದರು. ಬಾದಶಹನ ಅರಮನೆಯ ಎಲ್ಲಾ ಬಾಗಿಲುಗಳು ಬಂದ್ ಆದವು. ಆಗ ಬಷೀರ್ ಮತ್ತು ಮುಬಷಿರ್ ಮುಲ್ಕ್ ನಾಯಬ್‌ನ ಶಯನಗೃಹದೊಳಗೆ ಪ್ರವೇಶಿಸಿದರು ಮತ್ತು ಮುಲ್ಕ್ ನಾಯಬ್ ಮತ್ತು ಅವನ ಸಂಗಡಿಗರನ್ನು ಕೊಲೆ ಮಾಡಿದರು. ಅಲ್ಲಾವುದ್ದೀನ್ ಖಿಲ್ಜಿಯ ಸಾವಿನ ಮೂವತ್ತೈದು ದಿನಗಳ ನಂತರ ಮೇಲ್ಕಂಡ ಘಟನೆಯು ಸಂಭವಿಸಿತು. ಮುಲ್ಕ್ ನಾಯಬ್‌ನ ಕೊಲೆಯಾದ ನಂತರ ಆ ರಾಜಭಟರು ಮುಬಾರಕ್‌ನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದರು ಹಾಗೂ ಅವನನ್ನು ಶಹಾಬುದ್ದೀನ್ ಉಮರ್‌ನ ರಾಜಪ್ರತಿನಿಧಿಯಾಗಿ ನೇಮಕ ಮಾಡಿದರು.

ಮುಬಾರಕ್ ಶಾಹನು ಎರಡು ತಿಂಗಳವರೆಗೆ ತನ್ನ ತಮ್ಮನ ರಾಜಪ್ರತಿನಿಧಿಯಾಗಿ ಕೆಲಸ ನಿರ್ವಹಿಸಿದನು. ತದ ನಂತರ ಅವನು ಮುಖಂಡರು ಸರ್ದಾರರು ಮತ್ತು ರಾಜಕರ್ಮಚಾರಿಗಳೊಡನೆ ಸಮಾಲೋಚನೆ ನಡೆಸಿ ಅವರುಗಳ ಸಲಹೆಯ ಮೇರೆಗೆ ಶಹಾಬುದ್ದೀನ್ ಉಮರ್‌ನನ್ನು ಬಾದಶಹನ ಸ್ಥಾನದಿಂದ ಪದಚ್ಯುತಿಗೊಳಿಸಿದ ಹಾಗೂ ರಾಜ್ಯದ ಇಡೀ ಆಡಳಿತ ಸೂತ್ರವನ್ನು ತನ್ನ ವಶಕ್ಕೆ ತೆಗೆದುಕೊಂಡು ತನ್ನ ಬಾದಶಹತ್ವವನ್ನು ಘೋಷಿಸಿದ.

ಮುಬಾರಕ್ ಶಾಹನು ಶಹಾಬುದ್ದೀನ್ ಉಮರ್‌ನ ಕಣ್ಣುಗಳಲ್ಲಿ ಲೋಹದ ಸೂಜಿಗಳನ್ನು ಚುಚ್ಚಿಸಿದ ಮತ್ತು ಅವನನ್ನು ಗ್ವಾಲಿಯರ್‌ನ ಕೋಟೆಯಲ್ಲಿ ಬಂಧನದಲ್ಲಿಟ್ಟ.

ಶಹಾಬುದ್ದೀನ್ ಉಮರ್‌ನು ಮೂರು ತಿಂಗಳಗಿಂತ ಸ್ವಲ್ಪ ಹೆಚ್ಚಿನ ಕಾಲ ಆಡಳಿತ ನಡೆಸಿದ. ಅಲ್ಲಾವುದ್ದೀನ್ ಖಿಲ್ಜಿಯ ಸಂತತಿಯ ಮೇಲೆ ತನ್ನವರಿಂದ ಮತ್ತು ಪರರ ಕಡೆಯಿಂದ ನಿರಂತರವಾಗಿ ಕ್ರೌರ್ಯ ಮತ್ತು ಹಿಂಸೆಯು ಉಂಟಾಗುತ್ತಿದ್ದ ಆ ಸಂದರ್ಭದಲ್ಲಿ ಶೇಕ್ ಬಷೀರ್ ಮಜ್ ಜೂಬ್ ಸೂಫಿಯ ಬಳಿ ಒಬ್ಬ ವ್ಯಕ್ತಿಯು ಹೀಗೆಂದು ಪ್ರಶ್ನಿಸಿದ "ಅಲ್ಲಾವುದ್ದೀನ್ ಖಿಲ್ಜಿಯ ವಂಶಸ್ಥರ ವಿನಾಶದ ಕಾರಣವೇನು"? ಆಗ ಬಷೀರ್ ಮಜಜೂಬ್ ಉತ್ತರಿಸಿದ್ದೇನೆಂದರೆ, "ಅಲ್ಲಾವುದ್ದೀನ್ ಖಿಲ್ಜಿಯು ತನ್ನ ಚಿಕ್ಕಪ್ಪ ಮತ್ತು ಕರುಣಾಳು ಒಡೆಯನಾದ ಜಲಾಲುದ್ದೀನ್ ಖಿಲ್ಜಿಯೊಂದಿಗೆ ನಡೆಸಿದ ಹಿಂಸೆ ಮತ್ತು ದುಷ್ಕೃತ್ಯದ ಮತ್ತು ಕೃತಘ್ನತೆಯ ಫಲವನ್ನು ಅವನ ವಂಶಸ್ಥರು ಅನುಭವಿಸುತ್ತಿದ್ದಾರೆ" ಎಂದು ನುಡಿದರು.

ಖುತ್ಬುದ್ದೀನ್ ಮುಬಾರಕ್ ಶಾ ಖಿಲ್ಜಿ:

ಹಿಜರಿ ಶಕೆ ೭೧೭ರ ಮೊಹರಂ ತಿಂಗಳ ೮ ನೇ ತಾರೀಕಿನಂದು ಖುತ್ಬುದ್ದೀನ್ ಮುಬಾರಕ್ ಶಾಹನು ಸಿಂಹಾಸನವನ್ನು ಏರಿದ. ಮುಲ್ಕ್ ನಾಯಬ್‌ನ ಕೊಲೆಯಾದ ನಂತರ ರಕ್ಷಕ ಭಟರ ಮುಖಂಡರಾಗಿದ್ದ ಬಷೀರ್ ಮತ್ತು ಮುಬಷಿರ್‌ರವರು ತಮಗೆ ದೊರೆತ ಪ್ರಾಮುಖ್ಯತೆಯ ದೆಸೆಯಿಂದ ಅತೀವ ಪೀಡಕರಾಗಿ ಪರಿಣಮಿಸಿದರು. ಹಾಗೂ ಆ ಅಧಿಕ ಪ್ರಸಂಗಿಗಳಿಂದ ನಡೆದ ತೀರಾ ಅಮಾನವೀಯ ಕೃತ್ಯಗಳಿಂದ ಅಸಹಾಯಕನಾದ ಮುಬಾರಕ್ ಶಾಹನು ಅವರುಗಳನ್ನು ಕೊಲ್ಲಿಸಿದ. ಹಾಗೂ ಅವರ ಸಂಗಡಿಗರನ್ನು ರಾಜ್ಯದ ದೂರ ದೂರದ ಪ್ರದೇಶಗಳಲ್ಲಿ ನೇಮಕಾತಿ ಮಾಡಿ ಅವರ ಒಗ್ಗಟ್ಟಿನ ಶಕ್ತಿಯನ್ನು ನಾಶ ಮಾಡಿದ. ಆ ರಕ್ಷಕ ಭಟರ ಗೊಂದಲಗಳಿಂದ ಮುಕ್ತಿಯನ್ನು ಪಡೆದ ನಂತರ ಮುಬಾರಕ್ ಶಾಹನು ಮುಖಂಡರು ಮತ್ತು ಕರ್ಮಚಾರಿಗಳನ್ನು ತನ್ನವರನ್ನಾಗಿ ಮಾಡಿಕೊಳ್ಳುವ ಪ್ರಯತ್ನವನ್ನು ಆರಂಭಿಸಿದ. ಅವರವರ ದರ್ಜೆಗೆ ಅನುಗುಣವಾಗಿ ಅವನು ಎಲ್ಲಾ ಸರ್ದಾರರುಗಳಿಗೂ ಚಿನ್ನದ ರೇಖುಗಳ ಅಂಗವಸ್ತ್ರಗಳನ್ನು ಮತ್ತು ಇನಾಮುಗಳನ್ನು ನೀಡಿದ ಹಾಗೂ ಇನ್ನಿತರೆಯವರಿಗೂ ಅವರವರ ಅಪೇಕ್ಷೆಗೆ ಅನುಗುಣವಾಗಿ ಅನೇಕ ಕೊಡುಗೆಗಳನ್ನು ನೀಡಿದ. ಮುಬಾರಕ್ ಶಾಹನು ತನ್ನ ಹಳೆಯ ನಂಬಿಕಸ್ಥರ ಹಿಂದಿನ ಸೇವೆಗಳನ್ನು ಗುರುತಿಸಿ ಅವರುಗಳಿಗೂ ಜಹಗೀರು ಮುಂತಾದವುಗಳನ್ನು ನೀಡಿದ.

ಬಿರುದು ಮತ್ತು ಹುದ್ದೆಗಳ ಕೊಡುಗೆ:

ತದ ನಂತರ ಮುಬಾರಕ್ ಶಾಹನು ಸರ್ದಾರುಗಳ ನಡುವೆ ಬಿರುದು ಬಾವಲಿಗಳನ್ನು ಹಂಚಿದ. ಮುಲ್ಕ್ ದಿನಾರ್ ಶೆಹನಪೈಲ್‌ಗೆ "ಜಫರ್‌ಖಾನ್" ಎಂಬ ಬಿರುದನ್ನು ನೀಡಿದ. ಮುಬಾರಕ್ ಶಾನ ಚಿಕ್ಕಪ್ಪನಾದ ಮೊಹಮ್ಮದ್ ಮೌಲಾಯಿಗೆ "ಶೇರ್ ಶಾ" ಮತ್ತು ಮೌಲಾನ ಶಹಾಬುದ್ದೀನ್‌ನ ಪ್ರಖ್ಯಾತ ಪುತ್ರನಾದ ಮೌಲಾನ

ಜಿಯಾವುದ್ದೀನ್‌ಗೆ "ಸದರ್‌ಜಹಾನ್"ನ ಬಿರುದನ್ನು ನೀಡಿದ. ಮುಲ್ಕ್ ಖಿರಾಬೇಗ್‌ನನ್ನು ಮುಬಾರಕ್ ಶಾಹನು ತನ್ನ ಖಾಸಾ ಗೆಳೆಯನನ್ನಾಗಿ ಮಾಡಿಕೊಂಡ. ಪರಿವಾರ್ ಜನಾಂಗದ ಗುಜರಾತ್‌ನ ಒಬ್ಬ ಖ್ಯಾತ ಪೈಲ್‌ವಾನ್‌ನಾಗಿದ್ದ ಹಸನ್ ಎಂಬ ಹೆಸರಿನ ವ್ಯಕ್ತಿಯ ಮೇಲೆ ಬಾದಶಹನ ವಿಶೇಷ ಕೃಪಾದೃಷ್ಟಿ ಬಿತ್ತು ಅಲ್ಲಾವುದ್ದೀನ್ ಖಿಲ್ಜಿಯ ಪಾಲನೇ ಪೋಷಣೆಯಲ್ಲಿದ್ದ. ವಿಶೇಷ ಪ್ರತಿನಿಧಿಯಾಗಿದ್ದ ಮುಲ್ಕ್ ಶಾದಿಗೆ "ಖುಸ್ರುಖಾನ್" ಎಂಬ ಬಿರುದನ್ನು ನೀಡಿದ. ಮುಬಾರಕ್ ಶಾಹನು ಹಸನ್ ಮೇಲೆ ತುಂಬಾ ಕೃಪೆ ಬೀರಿದ. ಹಾಗೂ ಅವನನ್ನು ಅಪಾರವಾಗಿ ಪ್ರೀತಿಸ ತೊಡಗಿದ ಮತ್ತು ಅವನಿಗೆ ಅತ್ಯಂತ ಅಮೂಲ್ಯ ಮತ್ತು ಅಸದೃಶ್ಯ ನಗ,ನಾಣ್ಯಗಳನ್ನು ನೀಡಿದ ಮತ್ತು ವಿಶೇಷ ಗೌರವಾದರಗಳಿಂದ ಅವನನ್ನು ಕಾಣುತ್ತಿದ್ದ. ಹಾಗೂ ಮಂತ್ರಿಗಿರಿಯನ್ನು ನಿಭಾಯಿಸುವ ಸಾಮರ್ಥ್ಯವು ಅವನಿಗೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಕೂಡ ಪರಿಶೀಲನೆ ಮಾಡದೆ ಅವನಿಗೆ ಮಂತ್ರಿಗಿರಿಯ ಪ್ರಮುಖ ಹುದ್ದೆಯನ್ನು ನೀಡಿದ.

ಖೈದಿಗಳೊಡನೆ ಸಹಾನುಭೂತಿ:

ಖುತ್ಬುದ್ದೀನ್ ಮುಬಾರಕ್ ಶಾಹನ ಬದುಕಿನ ಆರಂಭದ ದಿನಗಳು ಬಂದಿಖಾನೆಯಲ್ಲಿ ಕಳೆದಿದ್ದ ಆ ಸಮಯದಲ್ಲಿ ಅವನು ಸದಾ ಕಾಲವು ತನ್ನ ಪ್ರಾಣಭೀತಿಯಲ್ಲಿಯೇ ಸಮಯವನ್ನು ಕಳೆದಿದ್ದ. ತದ ನಂತರ ಅವನು ರಾಜ್ಯದ ಆಡಳಿತ ಸೂತ್ರವನ್ನು ತನ್ನ ವಶಕ್ಕೆ ತೆಗೆದುಕೊಂಡ ನಂತರ ಅವನಿಗೆ ಖೈದಿಗಳ ಮೇಲೆ ಅಪಾರ ಸಹಾನುಭೂತಿ ಉಂಟಾಯಿತು. ಹೀಗಾಗಿ ಅವನು ತನ್ನ ರಾಜ್ಯದ ಜನತೆಯೊಡನೆ ಮತ್ತು ರಾಜಕರ್ಮಚಾರಿಗಳೊಡನೆ ಅತೀವ ಕರುಣೆ ಮತ್ತು ಸಹೃದಯತೆಯಿಂದ ನಡೆದುಕೊಳ್ಳುತ್ತಿದ್ದ. ಅವನು ಸಿಂಹಾಸನವನ್ನೇರಿದ ಕೂಡಲೇ ಎಪ್ಪತ್ತು ಸಾವಿರ ಖೈದಿಗಳನ್ನು ಬಿಡುಗಡೆ ಮಾಡುವಂತೆ ಆಜ್ಞೆ ನೀಡಿದ. ಜಲಾಲುದ್ದೀನ್ ಖಿಲ್ಜಿಯ ಸಂತತಿಯು ರಾಜ್ಯಾದ್ಯಂತ ಅಲ್ಲಲ್ಲಿ ಚೆದರಿತ್ತು ಅವನು ಅವರೆಲ್ಲರನ್ನು ಗುರುತಿಸಿ ತನ್ನ ಬಳಿ ಕರೆಸಿದ್ದು ಅವರೆಲ್ಲರಿಗೂ ಅಮೂಲ್ಯ ಕೊಡುಗೆಗಳನ್ನು ಮತ್ತು ವಿಶ್ರಾಂತಿ ವೇತನಗಳನ್ನು ನೀಡಿದ. ಅವನು ತನ್ನ ಎಲ್ಲಾ ಸೇವಕರಿಗೂ ಮತ್ತು ಉಳಿದವರಿಗೂ ಇನಾಮಿನ ರೂಪದಲ್ಲಿ ಆರು ತಿಂಗಳ ವೇತನವನ್ನು ನೀಡಿದ.

ಜನತೆಯ ಮೇಲೆ ಪ್ರೀತಿ ಮತ್ತು ಉದಾರತೆ:

ಮುಬಾರಕ್ ಶಾಹನು ಮುಖಂಡರು ಸರ್ದಾರರು ಹಾಗೂ ಸಾಮಂತ ರಾಜರಿಗೆ ಸೂಕ್ತವಾದ ಜಹಗೀರುಗಳನ್ನು ನೀಡಿದ್ದೂ ಅಲ್ಲದೆ ಅವರ ಜಹಗೀರುಗಳನ್ನು ಕೂಡ ಹೆಚ್ಚಿಸಿದ. ಬಡತನ ಮತ್ತು ಅಸಹಾಯಕತೆಯಿಂದ ಭಿಕ್ಷೆ ಬೇಡುತ್ತಿದ್ದವರ ಮೇಲೆ ರಾಜನು ಅತೀವವಾಗಿ ಕೃಪಕಟಾಕ್ಷವನ್ನು ಬೀರಿ ಅವರನ್ನು ಸ್ಥಿತಿವಂತರ ದರ್ಜೆಗೆ ಏರಿಸಿದ. ದೀರ್ಘಕಾಲದ ನಂತರ ಜನತೆಯು ಶ್ರೀಮಂತಿಕೆ ಅನುಭವವನ್ನು ಪಡೆದರು.

ಯಾಚಕರು ಬಾದಶಹನ ಸೇವೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸುತ್ತಿದ್ದರು ಹಾಗೂ ಬಾದಶಹನು ಸದರಿ ಅರ್ಜಿಗಳನ್ನು ಪರಾಮರ್ಶೆ ಮಾಡಿ ಅವರುಗಳ ಅವಶ್ಯಕತೆಯನ್ನು ಪೂರೈಸುತ್ತಿದ್ದ. ಪಂಡಿತರು, ವಿಧ್ವಾಂಸರು, ಸೂಫಿಗಳು ಮತ್ತು ದರ್ವೇಶರು ಹಾಗೂ ಫಕೀರರು ಮುಂತಾದವರುಗಳ ಅವಶ್ಯಕತೆಗಳನ್ನು ಪೂರೈಸಲಾಯಿತು. ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯಲ್ಲಿ ಅವರ ಆದಾಯ ಮೂಲಗಳನ್ನು ತಮ್ಮ ಜಮೀನನ್ನು ಹಾಗೂ ಜಹಗೀರುಗಳನ್ನು ಮುಟ್ಟುಗೋಲು ಹಾಕಿಕೊಂಡು ಬಾದಶಹನ ಖಾಸಗಿ ವ್ಯಾಪ್ತಿಗೆ ಸೇರಿಸಿಕೊಂಡಿದ್ದ ಎಲ್ಲಾ ಆಸ್ತಿಪಾಸ್ತಿಗಳನ್ನು ಮತ್ತೆ ಹಿಂದಿನ ರೈತರು ಜಮೀನ್ದಾರರು ಮತ್ತು ಜಹಗೀರುದಾರರಿಗೆ ಮರಳಿ ನೀಡಲಾಯಿತು. ಅಲ್ಲಾವುದ್ದೀನನ ಕಾಲದಲ್ಲಿ ಅತೀವವಾಗಿ ಹೆಚ್ಚಳವಾಗಿದ್ದ ತೆರಿಗೆ ಪದ್ಧತಿಯನ್ನು ಅವನು ಕೊನೆಗೊಳಿಸಿದ. ಸಂಬಂಧಗಳು ಮತ್ತೆ ಹೊಸದಾಗಿ ಮೂಡಿದವು. ಐಹಿಕವಾದ ಸುಖಭೋಗಗಳನ್ನು ಅಲ್ಲಾವುದ್ದೀನನು ತನ್ನ ಕಠಿಣ ಕ್ರಮಗಳಿಂದ ನಿಷೇಧಿಸಿದ್ದ ಆದರೆ ಮುಬಾರಕ್ ಶಾಹನ ಕಾಲದಲ್ಲಿ ಆ ಐಹಿಕ ಸುಖಭೋಗಗಳು ಮತ್ತೆ ಮರುಹುಟ್ಟು ಪಡೆದವು. ಹೀಗೆ ಮುಬಾರಕ್ ಶಾಹನು ತನ್ನ ತಂದೆಯ ಕಾಲಾವಧಿಯಲ್ಲಿ ಜಾರಿಯಾಗಿದ್ದ ಎಲ್ಲಾ ಕಠಿಣ ಕ್ರಮಗಳನ್ನು ತನ್ನ ಮೃದು ಧೋರಣೆಯಿಂದ ಪಲ್ಲಟಗೊಳಿಸಿದ.

ಈಗಾಗಲೇ ಪ್ರಸ್ತಾಪ ಮಾಡಿರುವಂತೆ ಅಲ್ಲಾವುದ್ದೀನ್ ಖಿಲ್ಜಿಯು ರಾಜ್ಯದ ಸುವ್ಯವಸ್ಥೆಯ ಕಾರಣಕ್ಕಾಗಿ ದಿನಸಿ ಧಾನ್ಯ ಮತ್ತಿತರೆ ಎಲ್ಲಾ ವಸ್ತುಗಳ ಬೆಲೆಯನ್ನು ಸರ್ಕಾರಿ ದರದ ಮೂಲಕ ನಿಗದಿಪಡಿಸುತ್ತಿದ್ದ. ಸದರಿ ವ್ಯವಸ್ಥೆಯನ್ನು ಮುಬಾರಕ್ ಶಾಹನು ಕೈಬಿಟ್ಟ. ಹೊರನೋಟಕ್ಕೆ ಪಾನ ನಿಷೇಧ ಜಾರಿಯಲ್ಲಿದ್ದರೂ ಕೂಡ ಅದನ್ನು ಕಠಿಣವಾಗಿ ಪರಿಪಾಲಿಸುತ್ತಿರಲಿಲ್ಲ. ಬಾದಶಹನು ಕೂಡ ತನ್ನ ಖಾಸಗಿ ಪಾನಗೋಷ್ಠಿಯನ್ನು ಆಯೋಜನೆ ಮಾಡುತ್ತಿದ್ದು ಜನತೆಯು ಬಾದಶಹನ ಅನುಕರಣೆಯನ್ನು ಮಾಡುತ್ತಾ ಕಂಡೂಕಾಣದಂತೆ ಪಾನಗೋಷ್ಠಿಗಳಲ್ಲಿ ನಿರತರಾಗಿದ್ದರು. ಶರೀಯತ್‌ನ ಹೆಸರಿನಲ್ಲಿ ಅಲ್ಲಾವುದ್ದೀನನು ಕೈಗೊಂಡಿದ್ದ ಕಠಿಣ ಕ್ರಮಗಳೆಲ್ಲವೂ ಮೂಲೆ ಗುಂಪಾದವು.

ಗುಜರಾತ್‌ನಲ್ಲಿ ನಡೆದ ವಿದ್ರೋಹ:

ಈ ಕಾಲಾವಧಿಯಲ್ಲಿ ಗುಜರಾತ್‌ನ ಘಟನೆಯು ಸಂಭವಿಸಿತು. ಈ ಭಾಗದ ಎಲ್ಲಾ ಪ್ರದೇಶಗಳಲ್ಲಿಯೂ ವಿದ್ರೋಹವು ಭುಗಿಲೆದ್ದಿತು. ಆ ದಂಗೆಗಳನ್ನು ಅಡಗಿಸುವುದು ತೀರಾ ಅವಶ್ಯಕವಾಗಿತ್ತು. ಇಲ್ಲವಾದಲ್ಲಿ ರಾಜ್ಯದ ಆಡಳಿತ ವ್ಯವಸ್ಥೆಯು ಕುಸಿದು ಬೀಳುವ ಅಪಾಯವಿತ್ತು. ಅಲ್ಲಾವುದ್ದೀನ್ ಖಿಲ್ಜಿಯ ಕಾಲಾವಧಿಯ ನಂಬಿಗಸ್ಥ ಸರ್ದಾರನಾದ ಐನುಲ್ ಮುಲ್ಕ್ ಮುಲ್ತಾನಿಯ ನಾಯಕತ್ವದಲ್ಲಿ ಬಲಾಢ್ಯ ಸೇನೆಯೊಂದನ್ನು ಮುಬಾರಕ್ ಶಾಹನು ಗುಜರಾತ್‌ಗೆ ಕಳುಹಿಸಿದ. ಸದರಿ ಐನುಲ್ ಮುಲ್ಕ್‌ನು ಅಲ್ಲಾವುದ್ದೀನ್‌ನ ಆಳ್ವಿಕೆಯ ಕಾಲಾವಧಿಯಲ್ಲಿ ದೊಡ್ಡ ದೊಡ್ಡ ಯುದ್ಧಗಳಲ್ಲಿ

ಭಾಗವಹಿಸಿ ಜಯಶಾಲಿಯಾಗಿದ್ದ. ಅವನು ಗುಜರಾತ್ ತಲುಪಿದ್ದು ದಂಗೆ ಎದ್ದವರನ್ನು ಸದೆ ಬಡಿದು ನೆಹರ್‌ವಾಲ ಮತ್ತು ಗುಜರಾತ್ ಪ್ರದೇಶಗಳನ್ನು ಮತ್ತೆ ಮುಬಾರಕ್ ಶಾಹನ ಆಳ್ವಿಕೆಗೆ ಒಳಪಡಿಸಿದ. ಈ ಪ್ರದೇಶ ಹಾಗೂ ಸುತ್ತಮುತ್ತಲಿನ ಜಮೀನ್ದಾರರನ್ನು ಬಾದಶಹನ ಅಧಿಕಾರದ ವ್ಯಾಪ್ತಿಯಲ್ಲಿ ತಂದ ನಂತರ ಐನುಲ್ ಮುಲ್ಕ್‌ನು ದೆಹಲಿಗೆ ಮರಳಿದ.

ಐನುಲ್ ಮುಲ್ಕ್ ಮರಳಿ ಬಂದ ನಂತರ ಖುತ್ಬುದ್ದೀನ್ ಮುಬಾರಕ್ ಶಾಹನು ಜಫರ್‌ಖಾನ್‌ನ ಮಗಳೊಡನೆ ಮದುವೆಯನ್ನು ಮಾಡಿಕೊಂಡ ಹಾಗೂ ಜಫರ್‌ಖಾನ್‌ನನ್ನು ಗುಜರಾತ್‌ನ ಸುಬೇದಾರನನ್ನಾಗಿ ನೇಮಕ ಮಾಡಿದ. ಜಫರ್‌ಖಾನ್‌ನು ಗುಜರಾತನ್ನು ತಲುಪಿದ ಮೂರು ನಾಲ್ಕು ತಿಂಗಳ ಅವಧಿಯೊಳಗಾಗಿ ಎಲ್ಲಾ ದಂಗೆಕೋರರು ಮತ್ತು ಸಂಚುಕೋರರನ್ನು ಸದೆ ಬಡಿದು ಅವರ ನಾಮಾಶೇಷವನ್ನು ಮಾಡಿದ. ಜಫರ್‌ಖಾನ್‌ನು ತಾನು ಆಕ್ರಮಿಸಿದ ಪ್ರದೇಶಗಳ ಎಲ್ಲಾ ರಾಜರುಗಳು ಮತ್ತು ಜಮೀನ್ದಾರರಿಂದ ಅಪಾರ ನಗ, ನಾಣ್ಯ, ಮುತ್ತು, ವಜ್ರ, ವೈಢೂರ್ಯಗಳು ಹಾಗೂ ಸಂಪತ್ತನ್ನು ಪಡೆದುಕೊಂಡ. ಮತ್ತು ಆ ಸಂಪೂರ್ಣವಾದ ಸಂಪತ್ತನ್ನು ಬಾದಶಹನ ಯುದ್ಧ ಸಂಪತ್ತಿನ ಇಲಾಖೆಗೆ ಕಳಿಸಿಕೊಟ್ಟ. ಅಲ್ಲಾವುದ್ದೀನ್‌ನ ಮರಣದ ನಂತರ ರಾಜ ರಾಮದೇವನ ಅಳಿಯನಾದ ಹರಪಾಲ್‌ದೇವನು ದಖ್ಖನ್ನಿನ ಸಣ್ಣಪುಟ್ಟ ರಾಜರುಗಳನ್ನು ಸಂಘಟಿಸಿ ಮರಾಠವಾಡವನ್ನು ತನ್ನ ವಶಕ್ಕೆ ಪಡೆದುಕೊಂಡಿದ್ದ. ಮರಾಠವಾಡವನ್ನು ವಶಪಡಿಸಿಕೊಂಡ ನಂತರ ಹರಪಾಲ್‌ದೇವನು ಬಾದಶಹನ ಕರ್ಮಚಾರಿಗಳನ್ನು ತನ್ನ ಪಟ್ಟಣದಿಂದ ಓಡಿಸಿದ್ದು ದೇವಗಡದ ಕೋಟೆಯನ್ನು ತಾನೇ ವಶಪಡಿಸಿಕೊಳ್ಳುವ ಸಲುವಾಗಿ ಅದಕ್ಕೆ ಮುತ್ತಿಗೆಯನ್ನು ಹಾಕಿದ.

ದೇವಗಡದ ಮೇಲೆ ಆಕ್ರಮಣ:

ಖುತ್ಬುದ್ದೀನ್ ಮುಬಾರಕ್ ಶಾಹಗೆ ಹರಪಾಲ್‌ದೇವನ ಮೇಲ್ಕಂಡ ರಾಜದ್ರೋಹದ ವರ್ತನೆಯ ಬಗ್ಗೆ ತಿಳಿದುಬಂದಾಗ ಅವನು ತನ್ನ ಬಳಗದಲ್ಲಿದ್ದ ಒಬ್ಬ ವಿವೇಕಶಾಲಿಯಾದ ಶಾಹೀನ್ ಎಂಬ ಹೆಸರಿನ ಗುಲಾಮ ಯುವಕನಿಗೆ "ವಫಾಬೇಗ್" ಎಂಬ ಬಿರುದನ್ನು ನೀಡಿದ. ಹಾಗೂ ಅವನನ್ನು ತನ್ನ ಪ್ರತಿನಿಧಿಯನ್ನಾಗಿ ನೇಮಕ ಮಾಡಿ ದೆಹಲಿಯ ರಕ್ಷಣೆಯನ್ನು ಅವನಿಗೆ ವಹಿಸಿಕೊಟ್ಟು ತಾನು ಅತ್ಯಂತ ಬಲಿಷ್ಠ ಸೇನೆಯೊಂದಿಗೆ ಕೂಡಿ ದೇವಗಡಕ್ಕೆ ಲಗ್ಗೆಯನ್ನು ಇಟ್ಟ. ಈ ಘಟನೆಯು ಮುಬಾರಕ್ ಶಾಹನ ಪಟ್ಟಾಭಿಷೇಕದ ಎರಡನೇ ವರ್ಷದಲ್ಲಿ ನಡೆಯಿತು. ಬಾದಶಹನ ಸೈನ್ಯವು ದೇವಗಡದ ಸಮೀಪ ತಲುಪಿದಾಗ ಹಿಂದೂಗಳು ಅಗಾಧವಾದ ಇಸ್ಲಾಮಿ ಸೈನ್ಯವನ್ನು ಮತ್ತು ಯುದ್ಧ ಸಾಮಗ್ರಿಗಳ ಸರಕನ್ನು ಕಂಡು ದಿಗ್ಭ್ರಾಂತಿ ಹೊಂದಿದರು. ಹರಪಾಲ್‌ದೇವ ಮತ್ತು ಆತನ ಬೆಂಬಲಿಗರು ಬಾದಶಹನ ಪರಾಕ್ರಮದ ಎದುರು ನಿಲ್ಲದೆ ಅತ್ತ ಇತ್ತ

ಚೆದರಿ ಹೋದರು. ಶತ್ರು ಸೈನ್ಯವು ಯುದ್ಧರಂಗದಿಂದ ನಿರ್ಗಮಿಸಿರುವುದನ್ನು ಕಂಡ ಮುಬಾರಕ್ ಶಾಹನು ತನ್ನ ಕೆಲವು ಸರ್ದಾರರನ್ನು ಹಿಂದೂ ರಾಜರುಗಳ ಬೆನ್ನಟ್ಟುವಂತೆ ಆಜ್ಞೆ ಮಾಡಿದ. ಆ ಸರ್ದಾರರುಗಳು ತಮ್ಮ ಅತೀವ ಪರಿಶ್ರಮದ ಮೂಲಕ ಪಲಾಯನ ಗೈಯುತ್ತಿದ್ದ ಹಿಂದೂಗಳ ಸೈನ್ಯದ ಕಗ್ಗೊಲೆಯನ್ನು ಮಾಡಿದರು ಹಾಗೂ ಹರಪಾಲ್‌ದೇವನನ್ನು ಜೀವಂತವಾಗಿ ಸೆರೆ ಹಿಡಿದು ಮುಬಾರಕ್ ಶಾಹನ ಸನ್ನಿಧಿಯಲ್ಲಿ ಹಾಜರು ಪಡಿಸಿದರು. ಹರಪಾಲ್‌ದೇವನ ಚರ್ಮವನ್ನು ಸುಲಿದು ಅವನ ತಲೆಯನ್ನು ದೇವಗಡದ ಕೋಟೆಯ ಬಾಗಿಲಿಗೆ ನೇತು ಹಾಕುವಂತೆ ಬಾದಶಹನು ಆಜ್ಞೆ ನೀಡಿದ.

ಖುಸ್ರುಖಾನ್‌ಗೆ ರಾಜಮನ್ನಣೆ:

ಬಾದಶಹನು ದೇವಗಡವನ್ನು ಗೆದ್ದುಕೊಂಡ ಸಂದರ್ಭದಲ್ಲಿ ಮಳೆಗಾಲವು ಆರಂಭವಾಯಿತು. ಮತ್ತು ಮುಬಾರಕ್ ಶಾಹನು ಕೆಲಕಾಲದವರೆಗೆ ದೇವಗಡದಲ್ಲಿಯೇ ಬಿಡಾರ ಹೂಡುವುದು ಅನಿವಾರ್ಯವಾಯಿತು. ಬಾದಶಹನು ಅಲ್ಲಿ ಬಿಡಾರ ಹೂಡಿದ ಸಂದರ್ಭದ ಸದುಪಯೋಗವನ್ನು ಮಾಡುತ್ತ ಮರಾಠವಾಡವನ್ನು ಸಂಪೂರ್ಣವಾಗಿ ತನ್ನ ತೆಕ್ಕೆಗೆ ತೆಗೆದುಕೊಂಡ ಮತ್ತು ದೇವಗಡದಲ್ಲಿ ವೈಭವೋಪೇತವಾದ ಒಂದು ಮಸೀದಿಯನ್ನು ನಿರ್ಮಾಣ ಮಾಡಿದ ಹಾಗೂ ಆ ಮಸೀದಿ ಇಂದಿಗೂ ಉಳಿದುಕೊಂಡಿದೆ. ಗುಲ್ಬರ್ಗಾ, ದಸೂರ ಮತ್ತು ಸಮಂದೋ ಮೊದಲಾದ ಪ್ರಖ್ಯಾತ ಪಟ್ಟಣಗಳ ಮೇಲೆ ಬಾದಶಹನು ತನ್ನ ಬೆಂಬಲಿಗರ ಪಹರೆಯನ್ನು ಹಾಕಿದ. ಹಾಗೂ ಅಲಾವುದ್ದೀನ್‌ನ ಪ್ರಮುಖ ಗುಲಾಮರ ಪೈಕಿ ಇದ್ದಂತಹ ಮುಲ್ಕ್ ಬೇಗ್‌ಲಿಕೀಯನ್ನು (ಬೇಗ್‌ಲಿಕೀ ಎಂಬ ಶಬ್ದವು ತಪ್ಪಾಗಿ ಮುದ್ರಿತವಾಗಿದೆ "ಯಕ್‌ಲಿಖಿ" ಎಂಬ ಪದ ಪ್ರಯೋಗ ಸೂಕ್ತವಾಗಿದೆ) ದಖ್ಖನ್ನಿನ ಸೇನಾಪತಿಯಾಗಿ ನೇಮಕ ಮಾಡಿದ. ತದ ನಂತರ ಮುಬಾರಕ್ ಶಾಹನು ಮರಾಠವಾಡವನ್ನು ತನ್ನ ಸರ್ದಾರುಗಳಿಗೆ ಜಹಗೀರಿನ ಸ್ವರೂಪದಲ್ಲಿ ಹಂಚಿದ. ಮತ್ತು ತನ್ನ ತಂದೆಯಂತೆಯೇ ಪ್ರೇಮ ವ್ಯವಹಾರದಲ್ಲಿ ಮಗ್ನನಾಗಿ ಖುಸ್ರುಖಾನ್‌ನ ಪ್ರೇಮಪಾಶದಲ್ಲಿ ಬಂಧಿತನಾದ. ಮುಬಾರಕ್ ಶಾಹನು ಸದರಿ ಖುಸ್ರುಖಾನ್‌ಗೆ ರಾಜ ಮರ್ಯಾದೆಯ ಲಾಂಛನಗಳಾದ ಛತ್ರ, ಛಾಮರ ಮೊದಲಾದವುಗಳನ್ನು ಕೊಡುಗೆಯಾಗಿ ನೀಡಿದ ಹಾಗೂ ತನ್ನ ನಂಬಿಕಸ್ಥ ಮುಖಂಡರುಗಳ ಸರ್ದಾರರನ್ನಾಗಿ ಅವನನ್ನು ನೇಮಕ ಮಾಡಿ ತರುವಾಯ ಅವನನ್ನು ಮಲಬಾರ್‌ನತ್ತ ಬೀಳ್ಕೊಟ್ಟ ಮತ್ತು ತಾನು ದೆಹಲಿ ಕಡೆ ಮರಳಿದ.

ಕೊಲೆಯ ಸಂಚು:

ದೆಹಲಿಗೆ ಮರಳುವ ಪ್ರಯಾಣದ ಸಂದರ್ಭದಲ್ಲಿ ಬಾದಶಹನು ಶರಾಬಿನಲ್ಲಿ ಮುಳುಗೇಳಲಾರಂಭಿಸಿದ ಮತ್ತು ಈ ಪಾನಮತ್ತತೆಯ ದೆಸೆಯಿಂದ ಅವನು ತನ್ನ ಜೀವ ಹಾಗೂ ಧನ ಕನಕಗಳಿಂದ ಸಂಪೂರ್ಣವಾಗಿ ವಿಮುಖನಾಗಿ ತನ್ನದೇ ಆದ

ವಿಸ್ಮೃತಿಯ ಬದುಕಿನಲ್ಲಿ ಕಳೆದು ಹೋದ. ಬಾದಶಹನ ಕರ್ತವ್ಯಗಳನ್ನು ಸಂಪೂರ್ಣವಾಗಿ ಮರೆತ ಅವನ ಈ ಲೋಲುಪತೆಯನ್ನು ಕಂಡ ಅಲ್ಲಾವುದ್ದೀನನ ಚಿಕ್ಕಪ್ಪನ ಮಗನಾದ ಮುಲ್ಕ್ ಅಸುದುದ್ದೀನನ ಮನದಲ್ಲಿ ಬಾದಶಹನಾಗುವ ಆಲೋಚನೆಯು ಮೂಡಿತು. ಮತ್ತು ಆ ಕನಸನ್ನು ನನಸು ಮಾಡುವಲ್ಲಿ ಕ್ರಿಯಾಶೀಲನಾದ ಅವನು ಬಾದಶಹನ ಅಂಗರಕ್ಷಕರೊಂದಿಗೆ ಸಂಚನ್ನು ಮಾಡಿದ ಮತ್ತು ಮುಬಾರಕ್ ಶಾಹನು ಪ್ರಯಾಣವನ್ನು ಮುಂದುವರೆಸುತ್ತಾ ಕಾತಿ ಸಾಗೋನ್‌ನಿಂದ ಹರಮ್‌ಸರವನ್ನು ಪ್ರವೇಶ ಮಾಡುವ ಸಂದರ್ಭದಲ್ಲಿ ಅವನ ಕೊಲೆ ಮಾಡಬೇಕೆಂದು ಯೋಜನೆಯೊಂದನ್ನು ರೂಪಿಸಿದ. ಬಾದಶಹನು ಹರಮ್‌ಸರದಲ್ಲಿ ಪ್ರವೇಶ ಮಾಡುವಾಗ ಅವನ ಜೊತೆಯಲ್ಲಿ ಯಾವ ರಾಜಭಟರಾಗಲೀ ಅಥವಾ ಅಂಗರಕ್ಷಕರಾಗಲೀ ಇರುತ್ತಿರಲಿಲ್ಲ ಆ ಪರಿಸ್ಥಿತಿಯಲ್ಲಿ ಅವನನ್ನು ಸುಲಭವಾಗಿ ಮುಗಿಸಬಹುದೆಂಬುದು ಅವನ ಕಾರ್ಯತಂತ್ರವಾಗಿತ್ತು ಆದರೆ ಬಾದಶಹನು ಕಾತಿ ಸಾಗೋನ್‌ನಿಂದ ತನ್ನ ಪ್ರಯಾಣವನ್ನು ಕ್ರಮಿಸುತ್ತಿರುವಾದ ಆ ಇರುಳಿನಂದೇ ಮುಲ್ಕ್ ಅಸದುದ್ದೀನ್‌ನೊಡನೆ ಭಾಗಿಯಾಗಿದ್ದ ಸಂಚುಕೋರನೊಬ್ಬನು ಎಲ್ಲಾ ವಿಷಯವನ್ನು ಬಾದಶಹನಿಗೆ ತಿಳಿಸಿದ ಹಾಗೂ ಸಂಚಿನ ವಿವರಗಳೆಲ್ಲಾ ಬಯಲುಗೊಂಡವು. ತತ್‌ಕ್ಷಣವೇ ಬಾದಶಹನು ಸಮಗ್ರ ಪ್ರಕರಣದ ತನಿಖೆಯ ಆದೇಶವನ್ನು ಮಾಡಿದ. ಸದರಿ ಮಾಹಿತಿಯು ಸತ್ಯವೆಂದು ಮುಬಾರಕ್ ಶಾಹಗೆ ಮನವರಿಕೆಯಾಯಿತು ಮತ್ತು ಅವನು ಕೂಡಲೇ ಕಾರ್ಯ ಪ್ರವೃತ್ತನಾಗಿ ಅಸದುದ್ದೀನ್‌ನನ್ನು ಬಂಧಿಸಿ ಕೊಲೆ ಮಾಡುವಂತೆ ಆಜ್ಞೆ ಮಾಡಿದ. ಅಷ್ಟೇ ಅಲ್ಲದೆ ಅವನೊಡನೆ ಸಂಚಿನಲ್ಲಿ ಭಾಗವಹಿಸಿದ್ದ ಇನ್ನೂ ಇಪ್ಪತ್ತು ಮಂದಿಯನ್ನು ಕೂಡ ಕೊಲೆ ಮಾಡಲಾಯಿತು. ಆ ಪೈಕಿ ಅನೇಕರು ನಿರಪರಾಧಿಗಳಾಗಿದ್ದು ದೆಹಲಿಯಿಂದ ಹೊರಗೆ ಕಾಲಿಟ್ಟಿರಲಿಲ್ಲ.

ರಾಜಕುಮಾರರ ಕೊಲೆ:

ಅಪರಾಧಿಗಳಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಿದ ನಂತರ ಮುಬಾರಕ್ ಶಾಹನು ಕಾತಿ ಸಾಗೋನ್‌ನ ಪ್ರಯಾಣವನ್ನು ಮುಂದುವರೆಸಿದ ಹಾಗೂ ಜಾಯನ್ ತಲುಪಿದ. ತದ ನಂತರ ಬಾದಶಹನು ಸರ್ದಾರ್ ಶಾದಿಕೆಹ್ನನನ್ನು ಗ್ವಾಲಿಯರ್‌ನತ್ತ ರವಾನೆ ಮಾಡಿದ. ಗ್ವಾಲಿಯರನ್ನು ತಲುಪಿದ ಶಾದಿಕೆಹ್ನನು ರಾಜಾಜ್ಞೆಯ ಮೇರೆಗೆ ಅಂಧತ್ವವನ್ನು ಹೊಂದಿದ್ದ ರಾಜಕುಮಾರ ಖಿಜರ್‌ಖಾನ್ ಮತ್ತು ಶಾದಿಖಾನ್ ಹಾಗೂ ಮುಲ್ಕ್ ಶಹಾಬುದ್ದೀನ್‌ರವರ ಕೊಲೆ ಮಾಡಿದ, ಹಾಗೂ ಅವರ ವಿಧವೆ ಪತ್ನಿಯರು ಮತ್ತು ಮಕ್ಕಳ ಸಮೇತ ದೆಹಲಿಯನ್ನು ತಲುಪಿದ. ಖಿಜರ್‌ಖಾನ್‌ನ ಪತ್ನಿಯಾದ ದೇವಲದಿಯನ್ನು (ಆಕೆಯ ಪ್ರಸಂಗವನ್ನು ಈಗಾಗಲೇ ಹೇಳಲಾಗಿದೆ) ಮುಬಾರಕ್ ಶಾಹನ ಅಂತಃಪುರದಲ್ಲಿ ಸೇರಿಸಿಕೊಳ್ಳಲಾಯಿತು.

ಮುಬಾರಕ್ ಶಾಹನ ದೂರದೃಷ್ಟಿಯ ಕೊರತೆ:

ಮುಬಾರಕ್ ಶಾಹಗೆ ಅತೀವ ನೆಮ್ಮದಿ ಉಂಟಾಗಿದ್ದು ಗುಜರಾತ್ ಮತ್ತು ದಖ್ಖನ್ ಸಮೇತ ಇಡೀ ಹಿಂದೂಸ್ಥಾನವು ಅವನ ಆಳ್ವಿಕೆಗೆ ಒಳಪಟ್ಟಿದ್ದು. ಎಲ್ಲಾ ಸರ್ದಾರರು ಮತ್ತು ಸಾಮಂತ ರಾಜರು ಅವನ ಅಧಿಕಾರವನ್ನು ಒಪ್ಪಿಕೊಂಡು ಅಧೀನ ರಾಜರಾಗಿದ್ದರು ಹಾಗೂ ಅವನ ರಾಜ್ಯದ ಎಲ್ಲಾ ಶತ್ರುಗಳನ್ನು ನಿರ್ದಯವಾಗಿ ಕೊಲ್ಲಿಸಲಾಗಿತ್ತು. ಮುಬಾರಕ್ ಶಾಹನ ಶತ್ರುಗಳು ಹತರಾಗಿದ್ದರಿಂದ ಅವನು ನಿರ್ಯೋಚನೆಯಿಂದ ಆಡಳಿತ ನಡೆಸ ತೊಡಗಿದ. ಬಾದಶಹನಿಗೆ ಇರಬೇಕಾದ ದೂರದೃಷ್ಟಿಯಿಂದ ವಿಮುಖನಾಗಿ ಮತ್ತೆ ತನ್ನ ವಿಸ್ಮೃತಿಯ ಲೋಕಕ್ಕೆ ಜಾರಿಕೊಂಡು ಸುಖಲೋಲುಪತೆಯಲ್ಲಿ ಮೈಮರೆತ. ಶರಾಬು ಮತ್ತು ಪ್ರತಿಷ್ಠೆಯ ಮದದಲ್ಲಿ ಮತ್ತನಾದ ಅವನಿಗೆ ತನ್ನ ಸುತ್ತಮುತ್ತಲಿನ ಪರಿವೆಯೇ ಇರಲಿಲ್ಲ. ಅವನು ತನ್ನ ಬೆಂಬಲಿಗ ಹಿತೈಷಿಗಳ ಸಲಹೆಗಳನ್ನು ನಿರ್ಲಕ್ಷ್ಯ ಮಾಡಿದ ಮತ್ತು ವಿಧೇಯ ಸರ್ದಾರರ ಕೋರಿಕೆಗಳನ್ನು ಮೂಲೆ ಗುಂಪು ಮಾಡಿದ. ತನ್ನೊಡನೆ ಅಭಿಪ್ರಾಯಭೇದವನ್ನು ಹೊಂದಿದ ಪ್ರಮುಖರನ್ನು ಅವನು ತರಾಟೆಗೆ ತೆಗೆದುಕೊಂಡು ಅವರ ವಿರುದ್ಧ ಬೈದಾಟವನ್ನು ಆರಂಭಿಸುತ್ತಿದ್ದ. ಅವನ ಈ ವರ್ತನೆಯಿಂದ ಘಾಸಿಗೊಂಡ ಸ್ನೇಹಿತರು ಹಿತೈಷಿಗಳು ಬಳಗದವರು ಎಲ್ಲರೂ ಕೂಡ ಸಾಂಕೇತಿಕವಾಗಿ ಕೂಡ ಅವನನ್ನು ಎಚ್ಚರಿಸಲು ಹಿಂಜರಿದರು.

ನಿರಪರಾಧಿಗಳ ಮೇಲೆ ಕ್ರೌರ್ಯ:

ಒಟ್ಟಾರೆ ಮುಬಾರಕ್ ಶಾಹನು ತನ್ನ ಸದ್ಗುಣಗಳ ಮುಖವಾಡವನ್ನು ಒಂದೇ ಏಟಿನಲ್ಲಿ ಕಿತ್ತು ಹಾಕಿದ. ಮತ್ತು ಅವುಗಳ ಸ್ಥಾನದಲ್ಲಿ ದುರ್ಗುಣಗಳನ್ನು ಮೈಗೂಡಿಸಿಕೊಂಡ. ಅವನ ಕೋಪ ಮತ್ತು ಕ್ರೌರ್ಯದ ಸ್ವಭಾವಗಳು ಮತ್ತೆ ತಲೆ ಎತ್ತಿದವು ಹಾಗೂ ತನ್ನ ತಂದೆಯಂತೆಯೇ ಅವನು ನಿರಪರಾಧಿಗಳ ಮೇಲೆ ಅತೀವ ಕ್ರೌರ್ಯ ಮತ್ತು ಅಮಾನವೀಯ ಹಿಂಸೆಗಳನ್ನು ನೀಡಲಾರಂಭಿಸಿದ. ಗುಜರಾತ್‌ನ ಒಡೆಯನಾದ ಜಫರ್‌ಖಾನ್ ಅವನ ಆಡಳಿತದ ಪ್ರಮುಖ ಆಧಾರಸ್ಥಂಭವಾಗಿದ್ದು ವಿನಾಕಾರಣ ಅವನು ಮರಣ ಹೊಂದಿದ. ತದ ನಂತರ ಮುಲ್ಕ್ ಶಾಹೀನ್‌ಗೆ ದುರ್ದೆಶೆ ಆರಂಭವಾಯಿತು. ಈ ಹಿಂದೆ ಮುಬಾರಕ್ ಶಾಹನು ಅವನಿಗೆ "ವಫಾಬೇಗ್" ಎಂಬ ಬಿರುದನ್ನು ನೀಡಿ ಮನ್ನಣೆಯನ್ನು ಕೊಟ್ಟಿದ್ದ. ಚಾಡಿಕೋರರು ಅವನ ವಿರುದ್ಧ ಬಾದಶಹನ ಮನಸ್ಸನ್ನು ಕೆಡಿಸಿ ಮುಬಾರಕ್ ಶಾಹನ ಆಜ್ಞೆಯ ಮೇರೆಗೆ ಅವನನ್ನು ಕೂಡಾ ಕೊಲ್ಲಿಸಿದರು. ಒಟ್ಟಾರೆ ಬಾದಶಹನ ಪ್ರತಿಯೊಂದು ಕೆಲಸ ಕಾರ್ಯದ ಮೂಲಕ ಅವನ ಅಧಃಪತನದ ಮುನ್ನುಡಿಯು ಬರೆಯಲ್ಪಟ್ಟಿತು.

ಹಜತರ್ ಮೆಹಬೂಬ್ ಎ ಇಲಾಹಿಯವರ ಮೇಲೆ ದ್ವೇಷ:

ಮುಬಾರಕ್ ಶಾಹನು ಹಜರತ್ ಮೆಹಬೂಬ್ ಎ ಇಲಾಹಿಯ ಮೇಲೆ ಕೂಡ ದ್ವೇಷ ಕಾರತೊಡಗಿದ. ಇದಕ್ಕೆ ಮುಖ್ಯ ಕಾರಣವೆಂದರೆ ಮುಬಾರಕ್ ಶಾಹನಿಂದ ಕೊಲೆಗೀಡಾದ ಅವನ ಅಣ್ಣನಾದ ಖಿಜರ್‌ಖಾನನು ಹಜರತ್ ಮೆಹಬೂಬ್ ಎ ಇಲಾಹಿಯವರ ಬಗ್ಗೆ ಅತೀವ ಗೌರವಾದರಗಳನ್ನು ಮತ್ತು ನಂಬಿಕೆ ಹಾಗೂ ಶ್ರದ್ಧೆಯನ್ನು ಹೊಂದಿದ್ದ. ಮುಬಾರಕ್ ಶಾಹನು ಗುರುಗಳ ಗೌರವಕ್ಕೆ ಚ್ಯುತಿ ಬರುವಂತೆ ನಡೆದುಕೊಳ್ಳತೊಡಗಿದ. ಅವನು ಶೇರ್‌ಜಾದ ಜಾಮ್‌ರವರನ್ನು ತನ್ನ ಆಪ್ತ ವಲಯದಲ್ಲಿ ಶಾಮೀಲು ಮಾಡಿಕೊಂಡ. ಸದರಿ ಶೇರ್‌ಜಾದಜಾಮ್‌ರವರು ಹಜರತ್ ಮೆಹಬೂಬ್ ಎ ಇಲಾಹಿಯ ವಿರೋಧಿ ಬಣದಲ್ಲಿ ಇದ್ದಂತಹವರು. ಸದರಿ ಮೆಹಬೂಬ್ ಎ ಇಲಾಹಿಯವರ ಮಹತ್ವವನ್ನು ಕುಂಠಿತಗೊಳಿಸುವ ಸಲುವಾಗಿ ಶೇರ್‌ಜಾದಜಾಮ್‌ನ ಕೋರಿಕೆಯ ಮೇರೆಗೆ ಮುಬಾರಕ್ ಶಾಹನು ಹಜರತ್ ರುಕ್ನುದ್ದೀನ್‌ರವರನ್ನು ಮುಲ್ತಾನ್‌ನಿಂದ ಕರೆಸಿದ. ಅವರು ಆಗಮಿಸಿದಾಗ ರಾಜನ ದರ್ಬಾರಿನಲ್ಲಿ ಅವರನ್ನು ವಿಶೇಷ ಗೌರವಾದರಗಳಿಂದ ಬರಮಾಡಿಕೊಳ್ಳಲಾಯಿತು.

ಕೀಳು ಸ್ತ್ರೀಯರ ಹೆಚ್ಚಳ:

ಮುಬಾರಕ್ ಶಾಹನ ಕೀಳು ಅಭಿರುಚಿಯು ಕ್ರಮೇಣ ಹೆಚ್ಚಾಗತೊಡಗಿತು ಅನೇಕ ವೇಳೆ ಅವನು ಮಹಿಳೆಯರ ರೀತಿಯಲ್ಲಿ ಒಡವೆಗಳನ್ನು ಧರಿಸುತ್ತಿದ್ದ. ಮತ್ತು ಅದೇ ಸ್ವರೂಪದಲ್ಲಿ ಅವನು ಜನತೆಯ ಮುಂದೆ ಬಂದು ಅವರೊಡನೆ ಸಂಭಾಷಣೆ ಮಾಡುತ್ತಿದ್ದ. ಕೀಳು ಮಟ್ಟದ ಮತ್ತು ವೇಶ್ಯಾಸ್ತ್ರೀಯರು ಬಾದಶಹನ ಮಹಲನ್ನು ಸದಾ ಕಾಲ ತಮ್ಮ ಆವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದರು. ಮತ್ತು ಬಾದಶಹನ ಪ್ರೋತ್ಸಾಹದ ಮೇರೆಗೆ ಐನುಲ್ ಮುಲ್ಕ್ ಮತ್ತು ಖಿರಾಬೇಗ್ ನಂತಹ ಪ್ರಖ್ಯಾತ ಮತ್ತು ಗಣ್ಯ ಸರ್ದಾರರೊಡನೆ ನಗೆ ಚಾಟಿಕೆಗಳನ್ನು ಹಾರಿಸುತ್ತಾ ಅವರಿಗೆ ಅಗೌರವವನ್ನು ಉಂಟುಮಾಡುತ್ತಿದ್ದರು. ತನ್ನ ಸರ್ದಾರರನ್ನು ಈ ರೀತಿಯಲ್ಲಿ ಅಪಮಾನ ಮಾಡಿ ಅವನು ಅಪಾರ ಸಂತೋಷವನ್ನು ಪಡೆಯುತ್ತಿದ್ದ. ಮುಬಾರಕ್ ಶಾಹನ ಆಡಳಿತವು ಅಂತ್ಯವಾಗಲು ಮತ್ತು ಅವನ ವಂಶದ ವಿನಾಶವಾಗುವತ್ತ ಈ ಮಹಿಳೆಯರು ಬಹು ಮುಖ್ಯ ಕಾರಣಕರ್ತರಾಗಿದ್ದಾರೆ.

ಹಿಸಾಮುದ್ದೀನ್ ಗುಜರಾತ್‌ನ ಒಡೆಯನಾಗಿ ನೇಮಕ:

ಜಫರ್‌ಖಾನ್‌ನನ್ನು ಕೊಲೆ ಮಾಡಿದ ನಂತರ ಗುಜರಾತ್‌ನ ಆಡಳಿತವನ್ನು ಹಿಸಾಮುದ್ದೀನ್‌ನ ವಶಕ್ಕೆ ನೀಡಲಾಯಿತು ಹಿಸಾಮುದ್ದೀನ್‌ನು ಖುಸ್ರುಖಾನ್‌ನ ಅಣ್ಣನಾಗಿದ್ದ ಹಾಗೂ ತನ್ನ ಸಹೋದರನಂತೆ ಹಿಸಾಮುದ್ದೀನ್‌ನು ಕೂಡ ಬಾದಶಹನ ಅನುಗ್ರಹಕ್ಕೆ ಬಹುಬೇಗನೇ ಪಾತ್ರನಾದ. ಖುಸ್ರುಖಾನ್ ಸ್ಥಳದಲ್ಲಿ ಇಲ್ಲದೆ ಇದ್ದಾಗ

ಅವನ ಸ್ಥಳದಲ್ಲಿ ಹಿಸಾಮುದ್ದೀನ್‌ನು ಬಾದಶಹನ ಮನಸ್ಸನ್ನು ಸಂತೋಷಗೊಳಿಸುತ್ತಿದ್ದ. ಹಿಸಾಮುದ್ದೀನನು ಗುಜರಾತ್ ತಲುಪಿದ ನಂತರ ಅವನ ಬಂಧು ಬಳಗದವರು ಮತ್ತು ಹಿತೈಷಿಗಳು ದೂರ ದೂರದ ಊರುಗಳಿಂದ ಬಂದು ಅವನ ಸುತ್ತ ನೆರೆದರು. ಆಗ ಅವನ ಮನಸ್ಸಿನಲ್ಲಿ ವಿಚಿತ್ರ ಆಲೋಚನೆಗಳು ಉಂಟಾಗಿ, ಅವನು ಗುಜರಾತ್‌ನ ರಾಜ ಕರ್ಮಚಾರಿಗಳ ವಿರೋಧವನ್ನು ಕಟ್ಟಿಕೊಂಡ. ಆ ಸರ್ದಾರರು ಮತ್ತು ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಗಳು ಉಂಟಾಗಿರಲಿಲ್ಲ ಆದ್ದರಿಂದ ಅವರುಗಳು ಹಿಸಾಮುದ್ದೀನನ ಅಧಿಕಾರದ ದುರ್ಬಳಕೆಯನ್ನು ಮತ್ತು ವಿರೋಧವನ್ನು ಸಹಿಸಲು ಸಾಧ್ಯವಾಗದೆ ಅವರೆಲ್ಲರೂ ಪರಸ್ಪರ ಒಟ್ಟುಗೂಡಿ ಹಿಸಾಮುದ್ದೀನ್‌ನನ್ನು ಬಂಧಿಸಿದರು. ಹಾಗೂ ಅವನನ್ನು ಬಾದಶಹನ ಬಳಿ ಕಳಿಸಿಕೊಟ್ಟರು. ಬಂಧನದ ಅವಸ್ಥೆಯಲ್ಲಿಯೇ ಖೈದಿಯ ಸ್ವರೂಪದಲ್ಲಿ ಹಿಸಾಮುದ್ದೀನನ್ನು ಬಾದಶಹನ ದರ್ಬಾರಿನಲ್ಲಿ ಹಾಜರು ಪಡಿಸಲಾಯಿತು. ಅವನ ಮೇಲೆ ಕಣ್ಣೋಟ ಬಿದ್ದ ಕೂಡಲೇ ಬಾದಶಹನ ಹೃದಯವು ಅವನಿಗಾಗಿ ತುಡಿಯತೊಡಗಿತು. ಅತ್ಯಂತ ಪ್ರೇಮ ಭಾವದಿಂದ ಕೂಡಿದ ಬಾದಶಹನು ತತ್‌ಕ್ಷಣವೇ ಹಿಸಾಮುದ್ದೀನನ್ನು ಬಿಡುಗಡೆಗೊಳಿಸಿದ ಹಿಸಾಮುದ್ದೀನ್‌ನನ್ನು ತನಿಖೆಗೆ ಒಳಪಡಿಸಬೇಕಾದುದು ಸೂಕ್ತವಾದ ಮಾರ್ಗವಾಗಿತ್ತು.

ಆದರೆ ಅವನು ಅವನ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳದೆ ಅವನಿಗೆ ವಿಶೇಷವಾದ ರಾಜ ಮರ್ಯಾದೆಗಳನ್ನು ನೀಡಿ ಅವನ ಗೌರವವನ್ನು ಹೆಚ್ಚಿಸಿದ. ಹಾಗೂ ಗುಜರಾತ್‌ನ ಸರ್ದಾರರು ನಿಜಾಮುದ್ದೀನ್ ಬಗ್ಗೆ ನೀಡಿದ ಫಿರ್ಯಾದನ್ನು ಗಮನಕ್ಕೆ ತೆಗೆದುಕೊಳ್ಳದೆ ನಿರ್ಲಕ್ಷಿಸಿದ. ಗುಜರಾತಿ ಸರ್ದಾರರುಗಳಿಗೆ ಬಾದಶಹನ ನಡವಳಿಕೆ ಬಗ್ಗೆ ಸಮಗ್ರ ವಿಷಯವು ತಿಳಿದು ಬಂದಾಗ ಅವರುಗಳು ಅವನ ಶೋಚನೀಯ ಪರಿಸ್ಥಿತಿಯನ್ನು ಕಂಡು ತುಂಬಾ ಬೇಸರ ಪಟ್ಟುಕೊಂಡರು. ಹಿಸಾಮುದ್ದೀನನ ನಂತರ ಮುಲ್ಕ್ ವಜೀಹುದ್ದೀನ್ ಖುರೇಷಿಯನ್ನು ಗುಜರಾತ್‌ನ ಸಾಮಂತನನ್ನಾಗಿ ನೇಮಕ ಮಾಡಲಾಯಿತು. ಗುಜರಾತ್‌ನ ಆಡಳಿತ ವ್ಯವಸ್ಥೆಯನ್ನು ಸಮಗ್ರವಾಗಿ ಸರಿಪಡಿಸುವ ದಿಕ್ಕಿನಲ್ಲಿ ಮತ್ತು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಮುಲ್ಕ್ ಖುರೇಷಿಗೆ ಅನೇಕ ಸಮಸ್ಯೆಗಳು ಮತ್ತು ಸವಾಲುಗಳು ಎದುರಾದವು. ಆದರೂ ಅವನು ಶಕ್ತಿಮೀರಿ ಪ್ರಯತ್ನ ಪಟ್ಟು ತನ್ನ ಸಾಮರ್ಥ್ಯವನ್ನು ಒರೆಗೆ ಹಚ್ಚಿ ತನ್ನ ಕೆಲಸದಲ್ಲಿ ಸಫಲನಾದ ಹಾಗೂ ಮತ್ತೆ ಗುಜರಾತ್ ಶಾಂತಿಯ ಬೀಡಾಯಿತು.

ದಖ್ಖನ್ನಿನಲ್ಲಿ ವಿಧ್ವಂಸಕತೆ:

ಆ ದಿನಗಳಲ್ಲಿ ದಖ್ಖನ್ನಿನಲ್ಲಿ ಮುಲ್ಕ್ ಬೇಗ್‌ಲಿಖಿಯು ಬಾದಶಹನ ವಿರುದ್ಧ ಬಂಡಾಯದ ಬಾವುಟವನ್ನು ಹಾರಿಸಿದ್ದಾನೆ ಎಂಬ ವಿಷಯವು ತಿಳಿದು ಬಂದಿತು. ತನ್ನ ಯೋಗ್ಯ ಮತ್ತು ಸಮರ್ಥ ಸರ್ದಾರರುಗಳ ನೇತೃತ್ವದಲ್ಲಿ ಅವನು ಒಂದು ಬಲಾಢ್ಯ ಸೇನೆಯನ್ನು ದೇವಗಡಕ್ಕೆ ಕಳಿಸಿದ್ದು ಮುಲ್ಕ್‌ಬೇಗ್ ಲಿಖಿಯನ್ನು ಬಂಧಿಸುವಂತೆ

ರಾಜನು ಆಜ್ಞೆ ನೀಡಿದ. ಆ ಸರ್ದಾರರುಗಳು ತುಂಬಾ ಧೈರ್ಯದಿಂದ ತಮ್ಮ ಕೆಲಸದಲ್ಲಿ ತೊಡಗಿಕೊಂಡರು ಮತ್ತು ಮುಲ್ಕ್ ಬೇಗ್‌ಲಿಖಿ ಹಾಗೂ ಇತರೆ ದಂಗೆಕೋರರನ್ನು ಜೀವಂತವಾಗಿ ಸೆರೆಹಿಡಿದು ಬಾದಶಹನ ಸನ್ನಿಧಿಯಲ್ಲಿ ಹಾಜರು ಪಡಿಸಿದರು. ಬಾದಶಹನು ಮುಲ್ಕ್ ಬೇಗ್‌ನ ಕಿವಿಗಳನ್ನು ಕತ್ತರಿಸಿ ಅವನನ್ನು ಬಿಡುಗಡೆ ಮಾಡಿದ, ಆದರೆ ಅವನ ಸಂಗಡಿಗರನ್ನು ಅತೀವ ಚಿತ್ರಹಿಂಸೆಗೆ ಒಳಪಡಿಸಿ ಅವರ ಕೊಲೆಯನ್ನು ಮಾಡಿದ.

ಮುಲ್ಕ್‌ಬೇಗ್‌ನ ಅಂಕವನ್ನು ಸಮಾಪ್ತಿಗೊಳಿಸಿದ ನಂತರ ಮುಬಾರಕ್ ಶಾಹನು ದೇವಗಡದ ಆಡಳಿತವನ್ನು ಐನುಲ್ ಮುಲ್ಕ್ ಮುಲ್ತಾನಿಯ ವಶಕ್ಕೆ ನೀಡಿದ ಹಾಗೂ ಮುಲ್ಕ್ ತಾಜುದ್ದೀನ್ ಇಬ್ನೆ ಖ್ವಾಜ ಅಲ್ಲಾವುದ್ದೀನ್‌ನನ್ನು ಆ ಕ್ಷೇತ್ರದ ಮುಖ್ಯಸ್ಥನನ್ನಾಗಿ ನೇಮಕ ಮಾಡಿದ. ಮುಬಾರಕ್ ಶಾಹನು ಮುಲ್ಕ್ ವಜೀಹುದ್ದೀನ್‌ನನ್ನು ಗುಜರಾತ್‌ನಿಂದ ವಾಪಸ್ ಕರೆಸಿ "ತಾಜುಲ್‌ಮುಲ್ಕ್" ಎಂಬ ಬಿರುದನ್ನು ನೀಡಿ ಅವನನ್ನು ತನ್ನ ಮಂತ್ರಿಯನ್ನಾಗಿ ನೇಮಕ ಮಾಡಿದ.

ಖುಸ್ರುಖಾನ್ ಮಲಬಾರನ್ನು ತಲುಪಿದ್ದು:

ಖುಸ್ರುಖಾನನು ಮಲಬಾರನ್ನು ತಲುಪಿದಾಗ ಅಲ್ಲಿನ ರಾಜನು ಬಾದಶಹನ ಸೈನ್ಯವನ್ನು ಎದುರಿಸುವ ಸಾಮರ್ಥ್ಯವಿಲ್ಲದೆ ತನ್ನ ಖಜಾನೆ ಮತ್ತು ಸಂಪತ್ತನ್ನು ತೆಗೆದುಕೊಂಡು ಪರಾರಿಯಾದ. ಮಲಬಾರನ ರಾಜನ ಆಶ್ರಯದಲ್ಲಿ ಅಲಿನಖಿ ಎಂಬ ಹೆಸರಿನ ಒಬ್ಬ ವ್ಯಾಪಾರಿ ಇದ್ದ. ಆತನು ತನ್ನ ಸ್ಥಳವನ್ನು ಬಿಟ್ಟು ಕದಲಲಿಲ್ಲ. ಬಾದಶಹನ ಸೇನೆಯು ಮುಸಲ್ಮಾನರಾಗಿದ್ದು ಸೇನಾಪತಿ ಕೂಡ ಮುಸ್ಲಿಮನಾಗಿದುದ್ದರಿಂದ ತನಗೆ ಅವರು ಯಾವುದೇ ರೀತಿಯಲ್ಲಿ ಹಿಂಸೆ ನೀಡುವುದಿಲ್ಲವೆಂದು ಅವನು ಭಾವಿಸಿದ್ದ. ಆದರೆ ಅವನ ಈ ನಿರೀಕ್ಷೆಯು ಹುಸಿಯಾಯಿತು ಖುಸ್ರುಖಾನನು ಅವನಿಂದ ಬಲಾತ್ಕಾರವಾಗಿ ಅಪಾರ ಸಂಪತ್ತನ್ನು ವಶಪಡಿಸಿಕೊಂಡ ಮತ್ತು ನಂತರ ಅವನ ಕೊಲೆ ಮಾಡಿದ. ಮಲಬಾರ್‌ನಿಂದ ಬಾದಶಹನ ಸೈನ್ಯವು ತೆಲಂಗಾಣವನ್ನು ತಲುಪಿತು.

ತೆಲಂಗಾಣದ ರಾಜನ ಮೇಲೆ ಕ್ರೌರ್ಯವನ್ನು ಎಸಗಿದ್ದು:

ಬಾದಶಹನ ಅಪಾರ ಸೈನ್ಯವನ್ನು ತೆಲಂಗಾಣದ ರಾಜನು ಎದುರಿಸಲು ಅಸಮರ್ಥನಾದ ಹಾಗೂ ಅವನು ಕೋಟೆಯೊಳಗಡೆ ಸೇರಿಕೊಂಡು ಕೋಟೆಯ ಹೆಬ್ಬಾಗಿಲನ್ನು ಬಂದ್ ಮಾಡಿದ. ಖುಸ್ರಖಾನನು ಕೋಟೆಗೆ ಮುತ್ತಿಗೆಯನ್ನು ಹಾಕಿದ ಮತ್ತು ಕೋಟೆಯೊಳಗಿದ್ದ ಜನತೆಗೆ ವಿವಿಧ ರೀತಿಯಲ್ಲಿ ಸಂಕಷ್ಟಗಳನ್ನು ನೀಡತೊಡಗಿದ. ಖುಸ್ರುಖಾನ್‌ನ ಒತ್ತಡ ತಂತ್ರವು ಅಸಹನೀಯವಾದಾಗ ತೆಲಂಗಾಣದ ರಾಜನು ಉಪಾಯವಿಲ್ಲದೆ ಒಂದು ನೂರು ಆನೆಗಳು ಮತ್ತು ಇನ್ನೂ ಅನೇಕ ಅಮೂಲ್ಯವಾದ

ಬಹುಮಾನಗಳನ್ನು ಖುಸ್ರುಖಾನನ ಸಮಕ್ಷಮದಲ್ಲಿ ಹಾಜರು ಪಡಿಸಿ ತನ್ನ ಮತ್ತು ತನ್ನ ಜನತೆಯ ಪ್ರಾಣರಕ್ಷಣೆಯನ್ನು ಮಾಡಿಕೊಂಡ. ತೆಲಂಗಾಣದಿಂದ ಖುಸ್ರುಖಾನನು ಕತಲಿಯ ಕಡೆ ಪ್ರಯಾಣ ಮಾಡಿದ ಮತ್ತು ಅಲ್ಲಿಂದಲೂ ಆರು ಸೇರು ತೂಕದ ವಜ್ರ ಮತ್ತು ಇಪ್ಪತ್ತು ಆನೆಗಳನ್ನು ಪಡೆದುಕೊಂಡು ಪುನಃ ಮಲಬಾರನ್ನು ತಲುಪಿದ. ಆ ವೇಳೆಗಾಗಲೇ ಮಳೆಗಾಲವು ಆರಂಭವಾಗಿತ್ತು ಖುಸ್ರುಖಾನನು ಆ ಮಳೆಗಾಲ ಪೂರ್ತ ಅಲ್ಲಿಯೇ ಮಕ್ಕಾಂ ಹೂಡಿದ.

ಖುಸ್ರುಖಾನ್‌ನ ದೋಷಪೂರಿತ ಆಲೋಚನೆಗಳು:

ಮಲಬಾರಿನ ತನ್ನ ವಾಸ್ತವ್ಯದ ಸಂದರ್ಭದಲ್ಲಿ ಖುಸ್ರುಖಾನನು ಬಾದಶಹನ ಹುದ್ದೆಯ ಕನಸು ಕಾಣಲಾರಂಭಿಸಿದ. ಹಾಗೂ ವಿದ್ರೋಹ ಮತ್ತು ಸಂಚಿನ ರೂಪುರೇಷೆಯ ಅವನ ಮನದಲ್ಲಿ ಮೂಡತೊಡಗಿತು. ಅವನು ತನ್ನ ಎಲ್ಲಾ ಪ್ರಮುಖ ಸರ್ದಾರರ ಕೊಲೆಯನ್ನು ಮಾಡಿ ಅಧಿಕಾರದ ಲಗಾಮನ್ನು ತನ್ನ ಹಿಡಿತದಲ್ಲಿ ತೆಗೆದುಕೊಂಡು ಇಡೀ ರಾಜ್ಯವನ್ನು ಆಕ್ರಮಣ ಮಾಡಬೇಕೆಂಬ ಯೋಜನೆಯನ್ನು ರೂಪಿಸತೊಡಗಿದ. ಆದರೆ ಅವನು ತನ್ನ ಆಲೋಚನೆಯನ್ನು ಕಾರ್ಯಗತಗೊಳಿಸುವ ಮುನ್ನವೇ ಅನೇಕ ಪ್ರಮುಖ ಸರ್ದಾರರು ಮತ್ತು ಮುಖಂಡರುಗಳಿಗೆ ಅದರ ಸುಳಿವು ಸಿಕ್ಕಿತು. ಗೋದಾ ಎಂಬ ಹೆಸರಿನ ದ್ವೀಪದ ರಾಜನಾದ ಮುಲ್ಕ್ ತಲೀಫ, ಚಂದೇರಿಯ ಒಡೆಯನಾದ ಮುಲ್ಕ್ ತೈಮೂರ್ ಮತ್ತು ಮುಲ್ಕ್ ಕುಲ್ ಆಫ್ಘಾನ್ ಮೊದಲಾದ ಖ್ಯಾತ ಸರ್ದಾರರುಗಳು ಒಟ್ಟಾಗಿ ಸೇರಿ ಪರಸ್ಪರ ಸಮಲೋಚನೆಯನ್ನು ನಡೆಸಿ ಖುಸ್ರುಖಾನನಿಗೆ ಒಂದು ಸಂದೇಶವನ್ನು ಕಳಿಸಿ ಈ ಅಸಂಭವ ಆಲೋಚನೆಯನ್ನು ಕೈಬಿಟ್ಟು ಅವನು ತನ್ನ ಗುಟ್ಟುರಟ್ಟಾಗುವುದಕ್ಕೆ ಮುನ್ನಾ ದೆಹಲಿಗೆ ಮರಳಬೇಕೆಂದು ತಿಳಿಸಿದರು. ತನ್ನ ರಹಸ್ಯವು ಬಯಲಾದುದನ್ನು ಕಂಡು ಅವನು ಕ್ರೋಧಾವಿಷ್ಟನಾದ ಮತ್ತು ಇನ್ನು ಮಲಬಾರ್‌ನಲ್ಲಿ ತನಗೆ ಉಳಿಗಾಲವಿಲ್ಲವೆಂದು ಅರಿತುಕೊಂಡ ಅವನು ಅಲ್ಲಿನ ಆಡಳಿತವನ್ನು ಕೆಲವು ವೀರರ ನಡುವೆ ಹಂಚಿ ದೆಹಲಿಯತ್ತ ನಡೆದ. ಮಲಬಾರಿನ ಸರ್ದಾರರುಗಳು ತಮ್ಮ ಈ ಸಕ್ಷಮ ಮತ್ತು ಸಮಯೋಚಿತ ನೆರವಿನಿಂದ ಬಾದಶಹನು ತಮ್ಮಿಂದ ಸಂತುಷ್ಟನಾಗುತ್ತಾನೆ ಎಂದು ಎಣಿಸಿ ಅಲ್ಲಿನ ಸರ್ವಸಂಗತಿಗಳನ್ನು ಬರೆದು ಮುಬಾರಕ್ ಶಾಹನ ಸನ್ನಿಧಿಗೆ ಕಳುಹಿಸಿಕೊಟ್ಟರು. ಆದರೆ ಅವರ ನಿರೀಕ್ಷೆಗೆ ವಿರುದ್ಧವಾಗಿ ಮುಬಾರಕ್ ಶಾಹನು ಖುಸ್ರುಖಾನಿನ ಪ್ರೀತಿಯಲ್ಲಿ ಅರೆಹುಚ್ಚನಾಗಿದ್ದ ಹಾಗೂ ಸದರಿ ಸರ್ದಾರುಗಳ ಪತ್ರವನ್ನು ಓದುತ್ತಲೇ ಅವನು ಪ್ರತ್ಯುತ್ತರವನ್ನು ಬರೆದು ಖುಸ್ರುಖಾನ್ ಎಲ್ಲಿರುವನೋ ಅಲ್ಲಿನಿಂದ ಅವನನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಮುಂದಿನ ಹಂತದವರೆಗೆ ಕಳಿಸಿಕೊಡಬೇಕೆಂತಲೂ ಅವನನ್ನು ಶೀಘ್ರವಾಗಿ ದೆಹಲಿ ತಲುಪುವಂತೆ ನೋಡಿಕೊಳ್ಳಬೇಕೆಂತಲೂ ಆಜ್ಞೆ ಮಾಡಿದ.

ಖುಸ್ರುಖಾನಿನ ಮೋಸ:

ಎಲ್ಲಾ ಸರ್ದಾರರು ಬಾದಶಹನ ಆಜ್ಞೆಯನ್ನು ಪೂರೈಸಲು ತುದಿಗಾಲಲ್ಲಿ ನಿಂತರು ಹಾಗೂ ಖುಸ್ರುಖಾನ್‌ನನ್ನು ಏಳು ದಿನಗಳ ಒಳಗಾಗಿ ದೇವಗಡದಿಂದ ದೆಹಲಿಗೆ ತಲುಪಿಸಲಾಯಿತು. ಖುಸ್ರುಖಾನನು ಬಾದಶಹನೊಡನೆ ಭೇಟಿಯಾದಾಗ ಬಾದಶಹನು ಮೊದಲಿನಂತೆಯೇ ಅವನೊಡನೆ ಅತ್ಯಂತ ಪ್ರೇಮಭಾವದಿಂದ ಇರುವನು ಎಂಬುದು ಅವನಿಗೆ ಖಚಿತವಾಯಿತು ಹಾಗೂ ಅವನು ಕೂಡಲೇ ಕರುಣಾಜನಕವಾಗಿ ರೋದಿಸತೊಡಗಿದ. ಮತ್ತು ನುಡಿದ "ತಾವು ನನ್ನ ಮೇಲೆ ಕರುಣೆ ಇಟ್ಟು ನನಗೆ ನೀಡಿದ ಸ್ಥಾನಮಾನಗಳಿಂದ ಆ ಸರ್ದಾರರುಗಳು ತಮ್ಮ ಗೌರವಕ್ಕೆ ಕುಂದುಂಟಾಯಿತು ಎಂದು ಭಾವಿಸಿದರು. ಹೀಗಾಗಿ ಅವರುಗಳು ನನ್ನನ್ನು ತುಚ್ಛವಾಗಿ ಮತ್ತು ಕೀಳಾಗಿ ಕಾಣುವ ಸಲುವಾಗಿ ನನ್ನ ಮೇಲೆ ಸ್ವಾಮಿ ದ್ರೋಹದ ಅರೋಪವನ್ನು ತಂದಿದ್ದಾರೆ". ಖುಸ್ರುಖಾನನ ಪ್ರೇಮದಲ್ಲಿ ಅಂಧನಾಗಿದ್ದ ಮುಬಾರಕ್ ಶಾಹನು ಅವನ ಸುಳ್ಳನ್ನು ಯಾವುದೇ ವಿವೇಚನೆಯಿಲ್ಲದೆ ನಂಬಿದ. ಮತ್ತು ತನ್ನ ಹಿತೈಷಿ ಸರ್ದಾರರುಗಳ ಮೇಲೆ ಮುನಿಸಿಕೊಂಡ. ಖುಸ್ರುಖಾನನು ದೆಹಲಿಯನ್ನು ತಲುಪಿದ ಒಂದೆರಡು ದಿನಗಳ ನಂತರ ಆ ಸರ್ದಾರರುಗಳ ಕೂಡ ದೆಹಲಿ ತಲುಪಿದರು ಮತ್ತು ಬಾದಶಹನ ದರ್ಬಾರಿನಲ್ಲಿ ಹಾಜರಿದ್ದರು. ಆ ಸರ್ದಾರರುಗಳು ಖುಸ್ರುಖಾನಿನ ವಿಶ್ವಾಸದ್ರೋಹದ ಸಂಚಿನ ಆಲೋಚನೆಗಳನ್ನು ಬಾದಶಹನ ಗಮನಕ್ಕೆ ತಂದರು ಮತ್ತು ತಮ್ಮ ವಾದಕ್ಕೆ ಪುಷ್ಟಿಯಾಗಿ ಅನೇಕ ಸಾಕ್ಷಿಗಳನ್ನು ಕೂಡ ಹಾಜರು ಪಡಿಸಿದರು. ಆದರೆ ಬಾದಶಹನು ಆ ಸ್ವಾಮಿನಿಷ್ಠ ಸರ್ದಾರರ ಮಾತಿಗೆ ಯಾವುದೇ ಬೆಲೆಯನ್ನು ನೀಡಲಿಲ್ಲ, ಬದಲಿಗೆ ಅವರೊಡನೆ ವಿನಾಕಾರಣ ಜಗಳವಾಡಲಾರಂಭಿಸಿದ. ಆ ಸರ್ದಾರರುಗಳಿಂದ ತೀರಾ ವಿಮುಖನಾದ ಬಾದಶಹನು ಸರ್ದಾರರುಗಳ ಜಹಗೀರುಗಳನ್ನು ಮುಟ್ಟುಗೋಲು ಹಾಕಿಕೊಂಡ ಮತ್ತು ಅವರೊಡನೆ ಎಲ್ಲಾ ಸಂಬಂಧವನ್ನು ಕೂಡ ಕಡಿದುಕೊಂಡ.

ಸರ್ದಾರರುಗಳ ಮೇಲೆ ಸಿಟ್ಟು :

ಚಂದೇರಿಯ ರಾಜನನ್ನು ಅವನ ಸುಬೇದಾರಿಕೆಯಿಂದ ಬಾದಶಹನು ನಿವೃತ್ತಿಗೊಳಿಸಿದ ಮತ್ತು ಅವನ ಸ್ಥಾನದಲ್ಲಿ ಅವನ ಮಗನನ್ನು ಚಂದೇರಿಯ ಒಡೆಯನನ್ನಾಗಿ ನೇಮಕ ಮಾಡಿದ. ಮುಲ್ಕ್ ತಲೀಫನ ಎಲ್ಲಾ ಜಹಗೀರನ್ನು ಜಪ್ತಿ ಮಾಡಿಕೊಂಡ ಬಾದಶಹನು ಅವನನ್ನು ಕಾರಾಗೃಹಕ್ಕೆ ತಳ್ಳಿದ. ಖುಸ್ರುಖಾನಿನ ವಿರುದ್ದ ಸಾಕ್ಷಿ ನುಡಿದಿದ್ದವರೆಲ್ಲರಿಗೂ ಶಿಕ್ಷೆಯನ್ನು ನೀಡಿದ. ಮತ್ತು ಅವರನ್ನು ತನ್ನ ಮನಸೋ ಇಚ್ಛೆ ಅನೇಕ ರೀತಿಯಲ್ಲಿ ಅವರನ್ನು ಅವಮಾನಕ್ಕೆ ಈಡು ಮಾಡಿದ. ಈ ಘಟನೆಯ ಹಿನ್ನೆಲೆಯಲ್ಲಿ ಇಡೀ ರಾಜ್ಯದ ಜನತೆಗೆ ಒಂದು ಮಾತಂತೂ ಸ್ಪಷ್ಟವಾಯಿತು. ಅದೇನೆಂದರೆ ಖುಸ್ರುಖಾನಿನ ವಿರುದ್ಧ ಒಂದೇ ಒಂದು ನುಡಿಯನ್ನು ನುಡಿಯುವುದು ಕೂಡಾ ಅತ್ಯಂತ ಅಪಾಯಕಾರಿ ವಿಷಯವೆಂದು ಎಲ್ಲರಿಗೂ ಮನವರಿಕೆಯಾಯಿತು.

ಖುಸ್ರುಖಾನಿನ ಕೃತ್ಯಗಳು:

ಮುಬಾರಕ್ ಶಾಹನು ಇಹದ ಪರಿವೆಯನ್ನು ಮರೆತು ಖುಸ್ರುಖಾನನ ಪ್ರೀತಿಯಲ್ಲಿ ಹುಚ್ಚನಾದ. ಖುಸ್ರುಖಾನ್ ಇಲ್ಲದೆ ಅವನು ಅರೆಗಳಿಗೆಯೂ ಇರುತ್ತಿರಲಿಲ್ಲ. ಬಾದಶಹನು ಈ ರೀತಿಯಲ್ಲಿ ತನ್ನ ಪ್ರೇಮಪಾಶದಲ್ಲಿ ಬಂಧಿತರಾಗಿರುವುದನ್ನು ಕಂಡ ಖುಸ್ರುಖಾನನ ಮನಸ್ಸಿನಲ್ಲಿ ಬಾದಶಹನಾಗುವ ಆಲೋಚನೆಯು ಮರುಹುಟ್ಟನ್ನು ಪಡೆಯಿತು. ಹಾಗೂ ಆ ಆಲೋಚನೆಯನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಅವನು ತತ್‌ಕ್ಷಣವೇ ಕಾರ್ಯ ಪ್ರವೃತ್ತನಾದ. ಈ ನಿಟ್ಟಿನಲ್ಲಿ ಬಹಾವುದ್ದೀನ್‌ಜಬೀರ್ ಎಂಬುವಾತನು ಖುಸ್ರುಖಾನ್‌ಗೆ ಎಲ್ಲಾ ನೆರವನ್ನು ಕೂಡ ನೀಡಿದ. ಈ ಬಹಾವುದ್ದೀನ್ ಜಬೀರ್ ಎಂಬ ಸರ್ದಾರನಿಗೆ ಬಾದಶಹನು ಈ ಹಿಂದೆ ಅಗೌರವವನ್ನು ಸೂಚಿಸಿದ್ದೂ ಅಲ್ಲದೆ ಅವನ ಅವಹೇಳನವನ್ನು ಕೂಡ ಮಾಡಿದ್ದ. ಹೀಗಾಗಿ ಅವನು ಖುಸ್ರುಖಾನನೊಡನೆ ಕೈಜೋಡಿಸಿದ. ಬಾದಶಹನೊಡನೆ ಏಕಾಂತದಲ್ಲಿರುವಾಗ ಖುಸ್ರುಖಾನ್‌ನು ಅವನೊಂದಿಗೆ ನುಡಿದ "ಹುಜೂರ್‌ರವರು ನನ್ನ ಮೇಲೆ ಅಪಾರ ನಂಬಿಕೆಯನ್ನು ಇಟ್ಟಿದ್ದು ನನ್ನನ್ನು ದೂರದ ಪ್ರಾಂತ್ಯಗಳ ವಿಜಯ ಪ್ರಾಪ್ತಿಗಳಂತಹ ಬಹು ಮುಖ್ಯವಾದ ಜವಾಬ್ದಾರಿಯನ್ನು ನನಗೆ ವಹಿಸಿರುತ್ತೀರಿ ಮತ್ತು ಈ ರೀತಿಯ ಯುದ್ಧಗಳಲ್ಲಿ ಈ ಸೇವಕನನ್ನು ಸೈನ್ಯದ ಸೇನಾಪತಿಯನ್ನಾಗಿ ನೇಮಕ ಮಾಡಿರುತ್ತೀರಿ. ಆದರೆ ಅನೇಕ ಮಂದಿ ದರ್ಬಾರಿಗಳು ಮತ್ತು ಸರ್ದಾರರು ತಮ್ಮ ಸುಸಂಸ್ಕೃತ ಮನೆತನದ ಹಾಗೂ ವಂಶಾವಳಿಯ ಹಿನ್ನೆಲೆಯಲ್ಲಿ ನನ್ನ ಮುಖಂಡತ್ವವನ್ನು ಒಪ್ಪುವುದು ತಮಗೆ ಹೀನಾಯವೆಂದು ಪರಿಗಣಿಸುತ್ತಾರೆ. ಹುಜೂರ್‌ರವರು ಈ ಕಾರಣಕ್ಕಾಗಿ ನನಗೆ ಅನುಮತಿಯನ್ನು ನೀಡಿದಲ್ಲಿ ನಾನು ನನ್ನ ವಂಶದ ಅಸಂಖ್ಯ ಜನರನ್ನು ಒಟ್ಟುಗೂಡಿಸಿ ಒಂದು ಬಲಾಢ್ಯ ಸೇನೆಯನ್ನು ಕಟ್ಟುತ್ತೇನೆ ಆ ಸೈನ್ಯವು ತನ್ನ ಅಧೀನತೆಯನ್ನು ಸಂತೋಷದಿಂದ ಒಪ್ಪಿಕೊಂಡು ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಣೆಯನ್ನು ಮಾಡುತ್ತದೆ".

ಖುಸ್ರುಖಾನ್‌ನ ಬಲಾಬಲಗಳು:

ಖುಸ್ರುಖಾನ್‌ನ ಪ್ರಸ್ತಾವನೆಯನ್ನು ಮುಬಾರಕ್ ಶಾಹನು ತತ್‌ಕ್ಷಣದಲ್ಲಿ ಅತ್ಯಂತ ಪ್ರೀತಿಯಿಂದ ಒಪ್ಪಿಕೊಂಡನು. ತದ ನಂತರ ಖುಸ್ರುಖಾನನು ಗುಜರಾತ್‌ನ ಅಸಂಖ್ಯ ಬುಡಕಟ್ಟು ಜನಾಂಗದ ಹಿಂದೂಗಳನ್ನು ಇನಾಮು ಮತ್ತು ಉತ್ತಮ ಸಂಬಳದ ಲಾಲಸೆಯನ್ನು ತೋರಿಸಿ ಅವರನ್ನು ತನ್ನ ಸೈನ್ಯದಲ್ಲಿ ಭರ್ತಿ ಮಾಡಿಕೊಂಡ. ಅವನು ಇಪ್ಪತ್ತು ಸಾವಿರ ಮಂದಿ ಗುಜರಾತಿಗಳಿಂದ ಕೂಡಿದ ಒಂದು ಬಲಾಢ್ಯ ಸೈನ್ಯವನ್ನು ತಯಾರು ಮಾಡಿದ. ಹಾಗೂ ತಾನು ಇದುವರೆಗೂ ಗಳಿಸಿದ್ದ ಹಣವನ್ನು ವಿನಿಯೋಗಿಸಿ ಸೈನ್ಯದ ಉಪಯೋಗಕ್ಕೆಂದು ಕುದುರೆಗಳು ಹಾಗೂ ಯುದ್ಧ ಸಾಮಗ್ರಿಗಳನ್ನು ಖರೀದಿಸಿದ. ಹಾಗೂ ಸೂಕ್ತ ಸದವಕಾಶದ ನಿರೀಕ್ಷೆ ಮಾಡತೊಡಗಿದ. ಆ ಗುಜರಾತಿಗಳಲ್ಲದೆ

ಖುಸ್ರುಖಾನಿನ ಸುತ್ತಮುತ್ತಲೂ ಅಪಾರ ಸಂಖ್ಯೆಯ ಅವನ ಬೆಂಬಲಿಗರು ಹಿತಾಕಾಂಕ್ಷಿಗಳು ಮತ್ತು ಬಂಧುಗಳು ಕೂಡ ಸೇರಿಕೊಂಡು ಅವನ ಸೈನ್ಯವು ನಲವತ್ತು ಸಾವಿರ ಸಿಪಾಯಿಗಳ ಸಂಖ್ಯೆಗೆ ಏರಿತು.

ಯೂಸೂಫ ಸೂಫಿಯ ಸಲಹೆ:

ಖುಸ್ರುಖಾನ್‌ನು ಖುಮ್ರ ಖುಮಾರ್ ಮತ್ತು ಯೂಸೂಫ್ ಸೂಫಿಯಂತಹ ದೆಹಲಿಯ ರೌಡಿಗಳನ್ನು ತನ್ನ ಜೊತೆಯಲ್ಲಿ ಒಟ್ಟುಗೂಡಿಸಿಕೊಂಡು ಮುಬಾರಕ್ ಶಾಹನ ಕೊಲೆಯನ್ನು ಮಾಡಲು ಪಕ್ಕಾ ಇರಾದೆಯನ್ನು ಮಾಡಿಕೊಂಡ. ಆ ದಿನಗಳಲ್ಲಿ ಬಾದಶಹನು ಶಿಕಾರಿಯ ಸಲುವಾಗಿ ಸೇರ್‌ಸಾದ ಠಾಣಕ್ಕೆ ಹೋದ. ಖುಸ್ರುಖಾನನು ಈ ಅವಕಾಶವನ್ನು ಬಳಸಿಕೊಂಡು ತನ್ನ ಯೋಜನೆಯನ್ನು ಕಾರ್ಯಗೊಳಿಸಬೇಕೆಂದು ನಿರ್ಧರಿಸಿದ ಹಾಗೂ ಆ ಶಿಕಾರಿಯ ಪ್ರದೇಶದಲ್ಲಿಯೇ ಅವನ ಕೊಲೆಯನ್ನು ಮಾಡಬೇಕೆಂದು ಕೂಡ ನಿರ್ಧರಿಸಿದ. ಆದರೆ ಯೂಸೂಫ್ ಸೂಫಿಯು ಈ ಸಲಹೆಯನ್ನು ವಿರೋಧಿಸಿದ ಮತ್ತು ನುಡಿದ "ನಾವು ಈ ರೀತಿಯಲ್ಲಿ ಮಾರ್ಗಮಧ್ಯದಲ್ಲಿ ಬಾದಶಹನ ಕೊಲೆಯನ್ನು ಮಾಡಿದಲ್ಲಿ ರಾಜನ ಸೈನ್ಯವು ನಮಗೆ ವಿರೋಧಿಯಾಗುತ್ತದೆ ಮತ್ತು ನಮ್ಮನ್ನು ನಾಶ ಮಾಡುವವರೆಗೂ ಬಿಡುವುದಿಲ್ಲ. ಇದಕ್ಕಿಂತ ಒಳ್ಳೆಯ ಅವಕಾಶವೆಂದರೆ ನಾವು ಬಾದಶಹನನ್ನು ಅವನ ಅರಮನೆಯೊಳಗಡೆ ಕೊಲೆಯನ್ನು ಮಾಡಿದಲ್ಲಿ ಸೂಕ್ತವಾಗುತ್ತದೆ. ನಂತರ ನಾವು ಎಲ್ಲಾ ಸರ್ದಾರರುಗಳನ್ನು ಕೂಡ ಕರೆದು ಅವರನ್ನು ಗೃಹಬಂಧನದಲ್ಲಿ ಇರಿಸಬಹುದು.

ಒಂದು ವೇಳೆ ಈ ಸರ್ದಾರರುಗಳು ಬಾದಶಹನ ರಕ್ತದ ಪ್ರತೀಕಾರವನ್ನು ತೆಗೆದುಕೊಳ್ಳಲು ಬಯಸದೆ ನಮ್ಮ ಅಧೀನತೆಯನ್ನು ಒಪ್ಪಿಕೊಂಡಲ್ಲಿ ನಾವು ಅವರ ಪ್ರಾಣವನ್ನು ಉಳಿಸಬಹುದು. ಇಲ್ಲವಾದಲ್ಲಿ ಅವರನ್ನು ಕೂಡ ಬಾದಶಹನಂತೆ ಕಗ್ಗೊಲೆ ಮಾಡಬಹುದು.

ಒಂದು ಹೊಸ ಯೋಜನೆ:

ಯೂಸೂಫ ಸೂಫಿಯ ಈ ಸಲಹೆಯು ಖುಸ್ರುಖಾನ್‌ಗೆ ತುಂಬಾ ಇಷ್ಟವಾಯಿತು. ಹಾಗೂ ಅವನು ಈ ಯೋಜನೆಯನ್ನು ಸಫಲಗೊಳಿಸುವತ್ತ ಶ್ರಮಿಸತೊಡಗಿದ. ಖುತ್ಬುದ್ದೀನನು ಶಿಕಾರಿಯಿಂದ ಮರಳಿದ ನಂತರ ಯಥಾ ಪ್ರಕಾರ ಸುಖಲೋಲುಪತೆಯಲ್ಲಿ ಮತ್ತು ಭೋಗ ವಿಲಾಸದಲ್ಲಿ ಮಗ್ನನಾದ. ಖುಸ್ರುಖಾನ್‌ನು ಯಾವುದೇ ಅಸಂಬದ್ಧ ಪ್ರಸ್ತಾವನೆಯನ್ನು ಸಲ್ಲಿಸಿದರೂ ಬಾದಶಹನು ಚಕಾರವೆತ್ತದೆ ಒಪ್ಪಿಕೊಳ್ಳುತ್ತಿದ್ದ. ಒಂದು ದಿನ ಖುಸ್ರುಖಾನನು ಬಾದಶಹನೊಂದಿಗೆ ನುಡಿದ "ನಾನು ಅನೇಕ ಸಂದರ್ಭಗಳಲ್ಲಿ ತಡ ರಾತ್ರಿಯವರೆಗೂ ಹುಜೂರ್‌ರವರ ಜೊತೆಯಲ್ಲಿರುತ್ತೇನೆ ಮತ್ತು ಹುಜೂರ್‌ರವರಿಂದ ನನಗೆ ಅನುಮತಿ ದೊರೆತ ನಂತರ ನಾನು ನನ್ನ

ಮನೆಗೆ ಹೋಗಿ ಸೇರುವುದು ಬಹಳ ಕಷ್ಟದ ವಿಷಯವಾಗಿ ಪರಿಣಮಿಸುತ್ತದೆ. ಆದ್ದರಿಂದ ನಾನು ಅಸಹಾಯಕನಾಗಿ ಇಲ್ಲಿಯೇ ಹುಜೂರ್‌ರವರ ಅರಮನೆಯ ಒಂದು ಮೂಲೆಯಲ್ಲಿ ಬಿದ್ದಿರುತ್ತೇನೆ ಮತ್ತು ಇರುಳಿನ ಉಳಿದ ಭಾಗವನ್ನು ಅಲ್ಲಿಯೇ ಕಳೆಯುತ್ತೇನೆ. ನನ್ನ ಬಂಧುಗಳು ಮತ್ತು ಸ್ನೇಹಿತರು ನನ್ನೊಡನೆ ಭೇಟಿಯಾಗಲು ಮತ್ತು ನನ್ನನ್ನು ನೋಡುವ ಸಲುವಾಗಿ ದೂರ ದೂರದ ಪ್ರದೇಶಗಳಿಂದ ಇಲ್ಲಿಗೆ ಅಗಮಿಸುತ್ತಾರೆ ಮತ್ತು ಅನೇಕ ಅನೇಕ ದಿನಗಳವರೆಗೆ ನನ್ನ ನಿರೀಕ್ಷೆಯನ್ನು ಮಾಡುತ್ತ ಕಳೆಯುತ್ತಾರೆ. ಆದರೂ ನಾನು ಅವರೊಡನೆ ಭೇಟಿ ಮಾಡಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಹುಜೂರ್‌ರವರು ನನಗೆ ಅನುಮತಿಯನ್ನು ನೀಡಿ ನನ್ನನ್ನು ಭೇಟಿಯಾಗಲು ಬರುವವರು ರಾತ್ರಿಯ ಹೊತ್ತು ಯಾವುದೇ ಅಡೆತಡೆಯಿಲ್ಲದೆ ಅರಮನೆಯ ಅಂತಃಪುರದಲ್ಲಿ ಪ್ರವೇಶಿಸಲು ಅವಕಾಶ ಮಾಡಿಕೊಟ್ಟಲ್ಲಿ ನಾನು ಕೃತಾರ್ಥನಾಗುತ್ತೇನೆ. ಹೀಗೆ ಅವಕಾಶವಾದಲ್ಲಿ ನಾನು ಇಡೀ ರಾತ್ರಿ ಹುಜೂರ್‌ರವರ ಸನ್ನಿಧಿಯಲ್ಲಿ ಹಾಜರಾಗಿ ಕಾಲಕಳೆಯಬಹುದಾಗಿದೆ". ಖುತ್ಬುದ್ದೀನನು ಯಾವುದೇ ವಿವೇಚನೆಯನ್ನು ಮಾಡದೆ ಆತನ ಕೋರಿಕೆಯನ್ನು ಮಂಜೂರು ಮಾಡಿದ ಮತ್ತು ತನ್ನ ಅಂತಃಪುರದ ಬೀಗದ ಕೈಗಳನ್ನು ಖುಸ್ರುಖಾನನ ವಶಕ್ಕೆ ಒಪ್ಪಿಸಿದ ಮತ್ತು ನುಡಿದ "ನಿನ್ನಿಂದ ಮತ್ತು ನಿನ್ನ ಬಾಂಧವ್ಯ ಹೊಂದಿರುವ ಯುವಕರಿಂದ ಹೆಚ್ಚಾಗಿ ನನಗೆ ನಂಬಿಗಸ್ಥ ಜನರು ಇನ್ಯಾರಿದ್ದಾರೆ? ಇಂದಿನಿಂದ ನಾನು ಈ ಅರಮನೆಯ ಎಲ್ಲಾ ವ್ಯವಸ್ಥೆಯನ್ನು ನಿನ್ನ ಸುರ್ಪದಿಗೆ ಒಪ್ಪಿಸುತ್ತೇನೆ". ಬಾದಶಹನ ಅಂತಃಪುರದ ಬಾಗಿಲುಗಳ ಬೀಗದ ಕೈಗಳನ್ನು ಪಡೆದುಕೊಂಡ ಕೂಡಲೇ ಖುಸ್ರುಖಾನನ ಸಂತೋಷಕ್ಕೆ ಎಲ್ಲೆಯೇ ಇರಲಿಲ್ಲ ಹಾಗೂ ಸಿಂಹಾಸನವನ್ನು ಏರುವ ದಿನಗಳು ಸಮೀಪಿಸಿವೆ ಎಂದು ಅವನಿಗೆ ಖಾತ್ರಿಯಾಯಿತು. ರಾಜನ ಅಂತಃಪುರವು ಸಂಪೂರ್ಣವಾಗಿ ಖುಸ್ರುಖಾನನ ಹತೋಟಿಗೆ ಬಂದ ನಂತರ ಅವನ ಬಂಧುಗಳು ಮತ್ತು ಸ್ನೇಹಿತರುಗಳು ತಂಡೋಪತಂಡವಾಗಿ ಶಸ್ತ್ರಸಜ್ಜಿತವಾಗಿ ಹಗಲಿರುಳು ಬಾದಶಹನ ಶಯ್ಯಾಗೃಹದ ಸುತ್ತ ಓಡಾಡ ತೊಡಗಿದರು. ಬಾದಶಹನ ಹಿತೈಷಿಗಳು ಮತ್ತು ಬೆಂಬಲಿಗರು ಖುಸ್ರುಖಾನಿನ ದುರುದ್ದೇಶವನ್ನು ಗ್ರಹಿಸಿದರು. ಆದರೆ ಈ ಬಗ್ಗೆ ಚಕಾರವೆತ್ತುವ ಧೈರ್ಯ ಕೂಡ ಯಾರಿಗೂ ಉಳಿದಿರಲಿಲ್ಲ. ಯಾಕೆಂದರೆ ಪ್ರತಿಯೊಬ್ಬರಿಗೂ ಕೂಡ ಬಾದಶಹನು ಖುಸ್ರುಖಾನನ ಪ್ರೀತಿಯಲ್ಲಿ ಸಂಪೂರ್ಣವಾಗಿ ಕುರುಡಾಗಿರುವ ವಿಷಯವು ತಿಳಿದಿತ್ತು. ಹಾಗೂ ಖುಸ್ರುಖಾನನ ವಿರುದ್ಧ ಅವನು ಯಾರ ಮಾತನ್ನು ಕೇಳಲು ತಯಾರಿರಲಿಲ್ಲ ಎಂಬ ವಿಷಯವು ಕೂಡ ಜನಜನಿತವಾಗಿತ್ತು.

ಖಾಜಿಖಾನನ ಸತ್ಯದ ನುಡಿ:

ಈ ಅಪಾಯಕಾರೀ ವಾತಾವರಣವು ಸಂಪೂರ್ಣವಾಗಿ ಉಸಿರುಗಟ್ಟುವಂತೆ ದಟ್ಟವಾಗಿ ಗೋಚರವಾಗುತ್ತಿದ್ದಂತೆಯೇ ಬಾದಶಹನ ಕೊಲೆಗೆ ಇನ್ನು ಎರಡು ದಿನಗಳು

ಬಾಕಿ ಇರುವಾಗ ಖಾಜಿಖಾನನು ಬಾದಶಹನೊಂದಿಗೆ ಭೇಟಿ ಮಾಡಿದರು. ಖಾಜಿಖಾನ್ ತನ್ನ ವಿದ್ವತ್ತು ಹಾಗೂ ಪಾಂಡಿತ್ಯದ ದೆಸೆಯಿಂದ ಇಡೀ ರಾಜ್ಯದಲ್ಲಿಯೇ ಗಣನೀಯ ಗೌರವಾದರದ ಸ್ಥಾನವನ್ನು ಪಡೆದಂತವರು ಮತ್ತು ಅವರ ಬಗ್ಗೆ ಜನರಲ್ಲಿ ಅತ್ಯಂತ ಪ್ರೀತಿ ಮತ್ತು ಆದರಗಳು ಮನೆ ಮಾಡಿದ್ದವು ಹಾಗೂ ಅವರು ಮುಬಾರಕ್ ಶಾಹನ ಗುರುಗಳು ಕೂಡ ಆಗಿದ್ದರು. ಅವರು ರಾಜನ ಅಂತಃಪುರದ ಒಳಗಿನ ಹಾಗೂ ಹೊರಗಿನ ಬಾಗಿಲುಗಳ ರಕ್ಷಣಾ ವ್ಯವಸ್ಥೆಯ ಮುಖ್ಯಸ್ಥರಾಗಿ ಇದುವರೆವಿಗೂ ಕಾರ್ಯನಿರ್ವಹಿಸಿದ್ದರು. ಅವರು ತಮ್ಮ ಪ್ರಾಣಕ್ಕೆ ಎದುರಾಗಿರುವ ಅಪಾಯವನ್ನು ಕೂಡ ಲೆಕ್ಕಿಸದೆ ಬಾದಶಹನ ಸನ್ನಿಧಿಯಲ್ಲಿ ಹಾಜರಾಗಿ ನುಡಿದರು "ಖುಸ್ರುಖಾನನ ಮೋಸ ಮತ್ತು ಅವನ ಸಂಚಿನ ಯೋಜನೆಗಳನ್ನು ಇದೇ ದರ್ಬಾರಿನ ಆಸ್ಥಾನಿಕರು ಸಂಪೂರ್ಣವಾಗಿ ತಿಳಿದುಕೊಂಡಿದ್ದಾರೆ. ಬಾದಶಹನ ಹಿತೈಷಿಗಳಾದ ನಮ್ಮ ಇಚ್ಛೆ ಏನೆಂದರೆ ಹುಜೂರ್‌ರವರು ಈ ನಮ್ಮ ಸಲಹೆಯ ಬಗ್ಗೆ ತನಿಖೆಯನ್ನು ಮಾಡಬೇಕಾಗಿದೆ. ಒಂದು ವೇಳೆ ನಮ್ಮ ಹೇಳಿಕೆಯು ಸುಳ್ಳಾದಲ್ಲಿ ಖುಸ್ರುಖಾನನ ಸ್ಥಾನಮಾನದಲ್ಲಿ ಇನ್ನೂ ಹೆಚ್ಚಿನ ಮನ್ನಣೆಯನ್ನು ತಾವು ನೀಡಬಹುದು; ಆದರೆ ಒಂದು ವೇಳೆ ನಿಮಗಾಗಿ ಪ್ರಾಣವನ್ನು ಅರ್ಪಿಸಲು ತಯಾರಾಗಿರುವ ನಮ್ಮ ಮಾತು ಸತ್ಯವಾದಲ್ಲಿ ತಾವು ದಯಮಾಡಿ ತಮ್ಮ ಸ್ಥಾನದ ರಕ್ಷಣೆಯನ್ನು ಮಾಡಿಕೊಳ್ಳಿ. ರಾಜ್ಯದ ವ್ಯವಸ್ಥೆಯು ಎಚ್ಚರಿಕೆ ಮತ್ತು ದೂರದೃಷ್ಟಿಯಿಲ್ಲದೆ ಸಂಪೂರ್ಣವಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಖುಸ್ರುಖಾನನು ಸದಾ ಕಾಲ ಹುಜೂರ್‌ರವರ ಸನ್ನಿಧಿಯಲ್ಲಿ ಜೊತೆಗಿರುತ್ತಾನೆ ಮತ್ತು ಈ ಕಾರಣದಿಂದ ಹುಜೂರ್‌ರವರು ತಮ್ಮ ಭವಿಷ್ಯತ್ತಿನ ಬಗ್ಗೆ ಸಂಪೂರ್ಣವಾಗಿ ನಿಶ್ಚಿಂತೆಯಿಂದ ಕೂಡಿದ್ದು ಮುಂದಿನ ಪರಿಣಾಮಗಳ ಬಗ್ಗೆ ತಾವು ಯೋಚನೆ ಮಾಡುತ್ತಿಲ್ಲ. ಇದು ಅಪಾಯಕಾರಿ ಸನ್ನಿವೇಶವಾಗಿದೆ." ಖಾಜಿ ಸಾಹೇಬರು ಅತ್ಯಂತ ವಿನಯಪೂರ್ವಕವಾಗಿ ಬಾದಶಹನಿಗೆ ಸಂಪೂರ್ಣ ವಿಷಯವನ್ನು ಮನವರಿಕೆ ಮಾಡಿಕೊಟ್ಟರು. ಆದರೆ ಈ ಬಗ್ಗೆ ಬಾದಶಹನ ಮೇಲೆ ಯಾವುದೇ ಪರಿಣಾಮವಾಗಲಿಲ್ಲ ಅವನು ಖಾಜಿ ಸಾಹೇಬರ ಮಾತಿಗೆ ಬೆಲೆ ನೀಡಲಿಲ್ಲ ಬದಲಿಗೆ ಅತ್ಯಂತ ಕ್ರೂರವಾಗಿ ಅವನು ಅವರನ್ನು ಗದರಿದ.

ಈ ಹಂತದಲ್ಲಿ ಖುಸ್ರುಖಾನನು ಮಹಿಳೆಯ ವೇಷವನ್ನು ಧರಿಸಿ ಬಾದಶಹನ ಮುಂದೆ ಬಂದ. ಖಾಜಿ ಸಾಹೇಬರು ಅತ್ಯಂತ ವ್ಯಗ್ರರಾಗಿ ಅಸಹಾಯಕತೆಯಿಂದ ಬಾದಶಹನ ಸಮ್ಮುಖದಿಂದ ಹೊರನಡೆದಿದ್ದರು ಮತ್ತು ಬಾದಶಹನು ಸಂಪೂರ್ಣ ವೃತ್ತಾಂತವನ್ನು ಖುಸ್ರುಖಾನ್‌ಗೆ ಅರುಹಿದ. ಈ ಮಾತನ್ನು ಕೇಳಿದೊಡನೆಯೇ ಖುಸ್ರುಖಾನನು ಅತ್ಯಂತ ಚಾಣಾಕ್ಷತೆಯಿಂದ ವರ್ತಿಸಿದ. ಅವನು ಮೊಸಳೆ ಕಣ್ಣೀರನ್ನು ಹರಿಸತೊಡಗಿದ ಮತ್ತು ನುಡಿದ "ಹುಜೂರ್‌ರವರ ಕೃಪೆಯು ನನ್ನ ಮೇಲೆ ತುಂಬಾ ಹೆಚ್ಚಿನದಾಗಿದೆ. ಅದ್ದರಿಂದ ಎಲ್ಲರೂ ಕರುಬಲಾರಂಭಿಸಿದ್ದಾರೆ. ಈ ಕಾರಣದಿಂದ

ಅವರುಗಳೆಲ್ಲಾ ನನ್ನ ಆಜೀವ ಶತ್ರುಗಳಾಗಿ ಪರಿಣಮಿಸಿದ್ದಾರೆ. ಈ ಬಗ್ಗೆ ಅವರುಗಳು ನನ್ನ ಪ್ರಾಣ ಹತ್ಯೆಯನ್ನು ಮಾಡಬಹುದು ಎಂಬುದು ಖಚಿತವಾದ ಸತ್ಯವಾಗಿದೆ. ಅಲ್ಲಿಯವರೆಗೂ ಅವರುಗಳಿಗೆ ನೆಮ್ಮದಿ ದೊರಕುವುದಿಲ್ಲ" ಖುಸ್ರುಖಾನನ್ನು ನೋಡಿ ಬಾದಶಹನ ಕಣ್ಣಲ್ಲೂ ಕೂಡ ನೀರು ತುಂಬಿತು. ಬಾದಶಹನು ಖುಸ್ರುಖಾನ್‌ನನ್ನು ಅಲಂಗಿಸುತ್ತಾ ನುಡಿದ "ನೀನು ಯಾವುದೇ ರೀತಿಯಲ್ಲಿ ಚಿಂತೆ ಮಾಡಬೇಡ. ನಿನ್ನ ಜಾಗದಲ್ಲಿ ನೀನು ನೆಮ್ಮದಿಯಿಂದ ಇರು. ನಾನು ನನ್ನ ಎಲ್ಲಾ ವೈಭೋಗ ನನ್ನ ಸಂಪತ್ತು ಧನ ಕನಕ ರಾಜ್ಯದ ಸಕಲವನ್ನು ನಿನ್ನ ದೇಹದ ಒಂದೊಂದು ಅಂಗದ ಮೇಲೆ ನಿವಾಳಿಸಿ ಎಸೆಯಲು ತಯಾರಿದ್ದೇನೆ. ನಾನು ಈ ಚಾಡಿಕೋರ ಸರ್ದಾರರ ದುಷ್ಟ ಮಾತುಗಳಿಗೆ ಯಾವುದೇ ರೀತಿಯಲ್ಲಿ ಬಲಿಯಾಗುವುದಿಲ್ಲ". ಈ ಸಂಭಾಷಣೆಯ ನಂತರ ಮುಬಾರಕ್ ಶಾಹನು ಖುಸ್ರುಖಾನ್‌ನನ್ನು ಬೀಳ್ಕೊಟ್ಟ ಮತ್ತು ಸ್ವತಃ ತಾನು ಅಂತಃಪುರದೊಳಗೆ ಪ್ರವೇಶಿಸಿದ.

ಖಾಜಿ ಖಾನನ ಕೊಲೆ:

ಈ ಘಟನೆ ನಡೆದ ಮರು ರಾತ್ರಿ ಖುಸ್ರುಖಾನನ ದ್ರೋಹಿ ಸಂಗಡಿಗರು ಬಾದಶಹನ ದರ್ಬಾರಿನ ಸುವ್ಯವಸ್ಥೆಯ ನೆಪದಲ್ಲಿ ಸಾವಿರ ಕಂಬಗಳ ಬಳಿ ಬಂದು ಸೇರಿದರು ಮತ್ತು ಆ ಅರಮನೆಯ ಮುಖ್ಯ ದ್ವಾರದ ಬಳಿ ಅಡಗಿ ಕುಳಿತರು. ಇರುಳು ಕ್ರಮಿಸುತ್ತ ಹೋದಂತೆ ಎಲ್ಲೆಡೆಯಲ್ಲಿಯೂ ಗಾಢ ಮೌನ ಮತ್ತು ಅಂಧಕಾರವು ಆವರಿಸತೊಡಗಿತು. ಮತ್ತು ಎಲ್ಲರೂ ಕೂಡ ನಿದ್ರಾದೇವಿಯ ಆಲಿಂಗನದಲ್ಲಿ ಮೈಮರೆತರು. ಸಾವಿರ ಕಂಬಗಳ ಅರಮನೆಯ ರಕ್ಷಕರ ವಿನಹ ಬೇರೆ ಯಾವ ಸರ್ದಾರರು ಕೂಡ ಅಲ್ಲಿರಲಿಲ್ಲ. ಆಗ ಖಾಜಿಖಾನನು ರಕ್ಷಕ ಭಟರ ಹಾಜರಾತಿಯನ್ನು ತೆಗೆದುಕೊಳ್ಳಲು ಬಂದರು. ಖುಸ್ರುಖಾನನ ಚಿಕ್ಕಪ್ಪನಾಗಿದ್ದ ಸಂದಲ್ ಎಂಬ ಹೆಸರಿನ ವ್ಯಕ್ತಿಯು ಖಾಜಿ ಸಾಹೇಬರನ್ನು ಮಾತಿನಲ್ಲಿ ತೊಡಗಿಸಿಕೊಂಡ. ಹಾಗೂ ಅವರೊಡನೆ ಸಂಭಾಷಿಸುತ್ತಾ ಆತನು ಖಾಜಿ ಸಾಹೇಬರಿಗೆ ತನ್ನ ಕೈಯಾರೆ ವೀಳ್ಯದೆಲೆಯ ಬೀಡಾ ಒಂದನ್ನು ನೀಡಿದ. ಖಾಜಿ ಸಾಹೇಬರ ಅಂತ್ಯ ಸಮೀಪಿಸಿದ್ದು, ಅವರು ಆ ಮೋಸಗಾರ ವ್ಯಕ್ತಿಯ ಮಾತಿನಲ್ಲಿ ತಲ್ಲೀನರಾದರು ಮತ್ತು ಯಾವುದೇ ಅಪಾಯದ ಮುನ್ಸೂಚನೆಯ ಅರಿವಿಲ್ಲದೆ ಅವನೊಡನೆ ಸಂಭಾಷಣೆಯಲ್ಲಿ ತೊಡಗಿದರು. ಖಾಜಿ ಸಾಹೇಬರ ಕಗ್ಗೊಲೆಯನ್ನು ಮಾಡಬೇಕೆಂಬ ಯೋಜನೆಯು ಈಗಾಗಲೇ ವ್ಯವಸ್ಥಿತವಾಗಿ ರೂಪುಗೊಂಡಿತ್ತು. ಜಾಹರ್ ಎಂಬ ಹೆಸರಿನ ಒಬ್ಬ ರಾಜ ಪರಿವಾರದ ವ್ಯಕ್ತಿಯನ್ನು ಈ ಕೃತ್ಯಕ್ಕಾಗಿ ನಿಯೋಜನೆ ಮಾಡಲಾಗಿತ್ತು. ಅವನು ಈಗಾಗಲೇ ಆ ಉಪ್ಪರಿಗೆಯಲ್ಲಿ ಅಡಗಿ ಕುಳಿತಿದ್ದ. ಸೂಕ್ತ ಅವಕಾಶವನ್ನು ಕಂಡ ಕೂಡಲೇ ಅವನು ಉಪ್ಪರಿಗೆಯಿಂದ ಹೊರ ಬಂದ ಮತ್ತು ಹಿಂಭಾಗದಿಂದ ಅವನು ಖಾಜಿ ಸಾಹೇಬರ ಮೇಲೆ ದುರಾಕ್ರಮಣವನ್ನು ಮಾಡಿದ. ಅವನು ತನ್ನ ಕತ್ತಿಯಿಂದ ಬಲವಾದ ಏಟೊಂದನ್ನು

ಕೊಟ್ಟಿದ್ದರ ಪರಿಣಾಮವಾಗಿ ಖಾಜಿ ಸಾಹೇಬರ ದೇಹವು ಎರಡು ತುಂಡಾಯಿತು. ಖಾಜಿ ಸಾಹೇಬರು ಒಮ್ಮೆಲೆ ಕುಸಿದು ಬಿದ್ದರು ಅವರ ಬಾಯಿಂದ ಈ ಶಬ್ದಗಳು ಹೊರಬಂದವು "ಮೋಸವು ಪ್ರಕಟವಾಯಿತು". ಖಾಜಿ ಸಾಹೇಬರ ಜೊತೆಯಲ್ಲಿದ್ದ ಇಬ್ಬರು ಮೂವರು ವ್ಯಕ್ತಿಗಳು ಈ ದೃಶ್ಯವನ್ನು ನೋಡುತ್ತಲೇ ಅಲ್ಲಿಂದ ಓಡಿ ಪರಾರಿಯಾದರು ಮತ್ತು ಅವರು ಕೂಗಾಡತೊಡಗಿದರು "ಪರಿವಾರದವರೇ ಖಾಜಿ ಸಾಹೇಬರ ಕೊಲೆ ಮಾಡಿದರು". ಈ ಗಲಭೆಯನ್ನು ಕೇಳುತ್ತಲೇ ಉಳಿದ ಪಹರೆದಾರರು ತನಿಖೆ ಮಾಡಲು ತಮ್ಮ ಸ್ಥಳದಿಂದ ಎದ್ದು ಬಂದರು. ಖುಸ್ರುಖಾನನ ಕಡೆಯವರು ಈ ಗಲಭೆಯ ಅವಕಾಶವನ್ನು ಬಳಸಿಕೊಂಡು ತಮ್ಮ ಪೂರ್ವ ನಿಶ್ಚಿತ ಯೋಜನೆಯ ಮೇರೆಗೆ ತಮ್ಮ ಖಡ್ಗಗಳನ್ನು ಝಳಪಿಸುತ್ತ ಕತ್ತಿಗಳನ್ನು ಹಿರಿದು ಉಪ್ಪರಿಗೆಯಿಂದ ಹೊರಬಿದ್ದರು. ಮತ್ತು ಸಾವಿರ ಕಂಬಗಳ ಅರಮನೆಯೊಳಗೆ ಪ್ರವೇಶಿಸಿದರು ಹಾಗೂ ಅತ್ಯಂತ ಅಮಾನವೀಯ ವಿನಾಶಕಾರೀ ಕೃತ್ಯದಲ್ಲಿ ತೊಡಗಿದರು.

ಗಲಭೆಗಳು:

ಇಷ್ಟೆಲ್ಲಾ ಗಲಭೆಯು ನಡೆಯುತ್ತಿರುವ ಸಂದರ್ಭದಲ್ಲಿ ಖುತ್ಬುದ್ದೀನ್ ಮುಬಾರಕ್ ಶಾಹನು ತನ್ನ ಶಯಾಗೃಹದಲ್ಲಿ ಖುಸ್ರುಖಾನ್‌ನೊಡನೆ ಏಕಾಂತದಲ್ಲಿದ್ದು, ಸುಖಲೋಲುಪತೆಯಲ್ಲಿ ಮಗ್ನನಾಗಿದ್ದ. ಅವನು ಆ ಗಲಭೆಯಿಂದ ಉಂಟಾದ ಗದ್ದಲವನ್ನು ಆಲಿಸಿದ ಮತ್ತು ಈ ಬಗ್ಗೆ ಖುಸ್ರುಖಾನ್‌ನನ್ನು ವಿಚಾರಿಸಿದ. ಖುಸ್ರುಖಾನನು ಬಾದಶಹನ ಬಳಿಯಿಂದ ಎದ್ದು ಹೊರಗಡೆ ಬಂದ ಹಾಗೂ ಕೆಲವು ಕ್ಷಣಗಳ ಕಾಲ ಹೊರಗೆ ನಿಂತಿದ್ದು, ತದ ನಂತರ ಕೋಣೆಯೊಳಗೆ ಪ್ರವೇಶಿಸಿದ ಮತ್ತು ಬಾದಶಹನೊಂದಿಗೆ ನುಡಿದ, "ಯಾವುದೇ ವಿಶೇಷ ಸುದ್ದಿ ಇಲ್ಲ. ಅಶ್ವದಳದ ಕುದುರೆಗಳು ತಪ್ಪಿಸಿಕೊಂಡು ಸಾವಿರ ಕಂಬಗಳ ಬಳಿಗೆ ಬಂದಿದ್ದವು. ರಾಜಭಟರ ನಿಯಂತ್ರಣ ತಪ್ಪಿ ಅವು ಓಡುತ್ತಿವೆ. ಜನರು ಆ ಕುದುರೆಗಳನ್ನು ಹಿಡಿಯುವ ಸಲುವಾಗಿ ಓಡಾಡುತ್ತಿದ್ದಾರೆ. ಆ ಕುದುರೆಗಳನ್ನು ಹಿಡಿಯುವಲ್ಲಿ ನಡೆಯುತ್ತಿರುವ ಗದ್ದಲ ತಮಗೆ ಕೇಳಿ ಬರುತ್ತಿದೆ". ಅಷ್ಟರಲ್ಲಿಯೇ ಜಾಹರ್ ಮತ್ತು ಅವನ ಬೆಂಬಲಿಗರು ಸಾವಿರ ಕಂಬಗಳ ಬಾಗಿಲಿನಿಂದ ಅರಮನೆಯ ಬಾಗಿಲಲ್ಲಿ ತಲುಪಿದರು ಮತ್ತು ಅಲ್ಲಿದ್ದ ವಿಶೇಷ ರಕ್ಷಕ ಭಟರನ್ನು ತಮ್ಮ ಕತ್ತಿಗಳಿಂದ ಚೆಂಡಾಡಿದರು. ಅರಮನೆಯ ವಿಶೇಷ ಪಹರೆದಳದ ಇಬ್ರಾಹಿಂ ಮತ್ತು ಇಸ್‌ಹಾಕ್ ಸಾವನ್ನಪ್ಪಿದ ನಂತರ ಈ ಗಲಭೆ ಇನ್ನೂ ಜೋರಾಯಿತು.

ಮುಬಾರಕ್ ಶಾಹನ ಕೊಲೆ:

ಈ ಗಲಭೆ ಗೋಜು, ಗದ್ದಲವು ರಾಜನ ಶಯ್ಯಾಗೃಹದ ಸಮೀಪದವರೆಗೂ ತಲುಪಿತು. ಹೀಗಾಗಿ ಬಾದಶಹನು ಗಾಬರಿಯಿಂದ ಕೂಡಿ ತನ್ನ ಸ್ಥಳದಿಂದ ಕೂಡಲೇ

ಎದ್ದ ಮತ್ತು ಸಂದರ್ಭವು ತನಗೆ ಪ್ರತಿಕೂಲವಾಗಿದೆ ಎಂಬುದನ್ನು ಅರಿತ. ಹೀಗಾಗಿ ತನ್ನ ಪ್ರಾಣವನ್ನು ಉಳಿಸಿಕೊಳ್ಳುವ ಸಲುವಾಗಿ ಅವನು ಅಂತಃಪುರದ ಕಡೆ ಓಡಲು ಉದ್ಯುಕ್ತನಾದ. ಬಾದಶಹನ ಈ ವರ್ತನೆಯನ್ನು ಕಂಡ ಖುಸ್ರುಖಾನನು ಒಮ್ಮೆಲೇ ಜಾಗೃತನಾದ ಮತ್ತು ಒಂದು ವೇಳೆ ಬಾದಶಹನು ಅಂತಃಪುರದೊಳಗೆ ಪ್ರವೇಶಿಸಿದಲ್ಲಿ, ಅವನ ಕೊಲೆ ಮಾಡುವುದು ಕಷ್ಟದ ವಿಷಯ ಎಂಬುದು ಅವನಿಗೆ ಅರಿವಾಯಿತು. ಈ ಆಲೋಚನೆಯು ಅವನ ಮನಸ್ಸನ್ನು ಹೊಕ್ಕಿದ ಕೂಡಲೇ ಸ್ವಾಮಿದ್ರೋಹಿಯಾದ ಖುಸ್ರುಖಾನನು ಬಾದಶಹನತ್ತ ಕೈಚಾಚಿದ ಮತ್ತು ಅತ್ಯಂತ ಧೈರ್ಯದಿಂದ ಅವನು ಬಾದಶಹನ ತಲೆಗೂದಲನ್ನು ಬಲವಾಗಿ ಹಿಡಿದು ಹಿಂದಕ್ಕೆ ಎಳೆದ. ಬಾದಶಹನು ಖುಸ್ರುಖಾನನ ಈ ನಡವಳಿಕೆಯನ್ನು ಕಂಡ ಕೂಡಲೇ ಅವನು ಖುಸ್ರುಖಾನ್‌ನನ್ನು ತನ್ನ ಕಂಕುಳಲ್ಲಿ ಭದ್ರವಾಗಿ ಹಿಡಿದ. ಆದರೆ ಆ ದ್ರೋಹಿಯು ಬಾದಶಹನ ತಲೆಗೂದಲನ್ನು ತನ್ನ ಹಿಡಿತದಿಂದ ಸಡಿಲಗೊಳ್ಳಲು ಅವಕಾಶವನ್ನೇ ನೀಡಲಿಲ್ಲ. ಅಷ್ಟರಲ್ಲಿಯೇ ಖುಸ್ರುಖಾನನ ವಿದ್ರೋಹೀ ಸಂಗಡಿಗರು ಕೂಡ ಶಯ್ಯಾಗೃಹವನ್ನು ಪ್ರವೇಶಿಸಿದರು. ತನ್ನ ಸಂಚುಕೋರ ಸಂಗಾತಿಗಳ ಆಗಮನವನ್ನು ಕಂಡ ಖುಸ್ರುಖಾನನು ಕೂಡಲೇ ನುಡಿದ, "ಬೇಗ ಬನ್ನಿ ಮತ್ತು ನನ್ನನ್ನು ಇವನಿಂದ ಬಿಡಿಸಿ" ದುಷ್ಟ ಜಾಹರನು ಬಾದಶಹನ ಸಮೀಪ ತಲುಪಿದವನೇ ತನ್ನ ಖಡ್ಗದಿಂದ ಬಾದಶಹನ ಮೇಲೆ ಆಕ್ರಮಣವನ್ನು ಮಾಡಿದ. ಮತ್ತು ಒಂದೇ ಏಟಿಗೆ ಬಾದಶಹನ ಕಥೆ ಸಮಾಪ್ತಿಯಾಯಿತು. ಜಾಹರನು ಖುಸ್ರುಖಾನನ್ನು ಬಾದಶಹನ ಬಿಗಿ ಹಿಡಿತದಿಂದ ಬಿಡಿಸಬೇಕಾದಲ್ಲಿ, ಬಾದಶಹನ ಶವದ ತಲೆಗೂದಲನ್ನು ಹಿಡಿದೆಳೆದು ಅವರಿಬ್ಬರನ್ನು ಬೇರ್ಪಡಿಸಿದ. ಮತ್ತು ನೆಲದ ಮೇಲೆ ಅವನ ಶವವನ್ನು ಎಸೆದ. ಆ ಧರ್ಮಲಂಡ ಬಾದಶಹನ ತಲೆಯನ್ನು ದೇಹದಿಂದ ಬೇರ್ಪಡಿಸಿ ಸಾವಿರ ಕಂಬಗಳ ಕೆಳಗೆ ಎಸೆಯಲಾಯಿತು.

ಬಾದಶಹನ ಪುತ್ರರ ಕೊಲೆ:

ಚೌಕಿದಾರರು ಮತ್ತು ಪಹರೆ ದಳದವರು ಮುಂತಾದವರು ಬಾದಶಹನ ಕಡಿದ ತಲೆಯನ್ನು ಕಂಡು ಭಯಗ್ರಸ್ತರಾದರು ಮತ್ತು ಅತ್ತ ಇತ್ತ ಓಡ ತೊಡಗಿದರು. ಹಿಸಾಮುದ್ದೀನ್ ಮತ್ತು ಜಾಹರ್ ಇಬ್ಬರು ಸೇರಿ ಅಂತಃಪುರದೊಳಗೆ ಪ್ರವೇಶ ಮಾಡಿದರು. ಮತ್ತು ಅಲ್ಲಿ ಅವರುಗಳು ಬಾದಶಹನ ಪುತ್ರರಾದ ಫರೀದ್‌ಖಾನ್, ಉಮರ್‌ಖಾನ್ ಮತ್ತು ಅಲೀಖಾನ್ ಜೊತೆಯಲ್ಲಿ ಇನ್ನು ಅನೇಕ ಯುವಕರನ್ನು ಕೊಲೆ ಮಾಡಿ ಎಸೆದರು. ಫರೀದ್‌ಖಾನ್ ತಾಯಿಯನ್ನು ಕೂಡ ನಿರ್ದಯವಾಗಿ ಕೊಲೆ ಮಾಡಲಾಯಿತು. ಆ ದುಷ್ಟರು ಅಂತಃಪುರದ ರಾಣಿವಾಸದವರ ಮರ್ಯಾದೆಯನ್ನು ಕಳೆದು ಅಶ್ಲೀಲವಾಗಿ ಮತ್ತು ಅತ್ಯಂತ ಕೀಳು ರೀತಿಯಲ್ಲಿ ನಡೆದುಕೊಂಡರು.

ಸರದಾರುಗಳ ಬಂಧನ:

ಖುಸ್ರುಖಾನನು ತತ್‌ಕ್ಷಣ ಇಡೀ ಮಹಲಿನಲ್ಲಿ ದೀಪವನ್ನು ಬೆಳಗಿಸುವ ವ್ಯವಸ್ಥೆಯನ್ನು ಮಾಡಿದ. ದೀಪ ಮತ್ತು ಮಶಾಲುಗಳಿಂದ ಅರಮನೆ ಬೆಳಗಲಾರಂಭಿಸಿತು ಹಾಗೂ ಸರ್ದಾರರುಗಳನ್ನು ಬಂಧಿಸುವ ಸಲುವಾಗಿ ಅವನು ತನ್ನ ಸಹಚರರನ್ನು ರವಾನೆ ಮಾಡಿದ. ಐನುಲ್‌ಮುಲ್ಕ್ ಮುಲ್ತಾನಿಯು ಆ ಹೊತ್ತಿನಲ್ಲಿ ದೇವಗಡದಿಂದ ಬಂದು ದೆಹಲಿಯಲ್ಲಿ ಉಳಿದಿದ್ದ. ಮುಲ್ಕ್ ಜೋನ ಮುಂದಿನ ಇತಿಹಾಸದಲ್ಲಿ ಮೊಘಲ ಶಾಹ ತುಗಲಕ್ ಎಂಬ ಹೆಸರಿನಿಂದ ಖ್ಯಾತಿಯನ್ನು ಹೊಂದಿದ ವಜೀಹುದ್ದೀನ್ ಖುರೇಷಿ ಮತ್ತು ಖಿರಾಬೇಗ್‌ನ ಪುತ್ರರು ಮೊದಲಾದ ಖ್ಯಾತ ನಾಮ ಸರ್ದಾರರುಗಳು ಈ ಯಾವುದೇ ಗಲಭೆಗಳಿಂದ ಸುದ್ದಿಯು ಇಲ್ಲದೆ ಸ್ಥಬ್ಧವಾಗಿ ತಮ್ಮ ಮನೆಗಳಲ್ಲಿ ನಿದ್ರಿಸುತ್ತಿದ್ದರು. ಅವರೆಲ್ಲರನ್ನು ಕೂಡ ಬಂಧಿಸಿ ಸಾವಿರ ಕಂಬಗಳ ಅರಮನೆಯ ಬಳಿ ತರಲಾಯಿತು. ಖುಸ್ರುಖಾನನು ಈ ಸರ್ದಾರರನ್ನು ಬಹಳ ಎಚ್ಚರಿಕೆಯಿಂದ ತನ್ನ ಬಳಿ ಗೃಹಬಂಧನದಲ್ಲಿ ಇರಿಸಿದ. ಅಂತೂ ಇತಿಹಾಸ ಮರುಕಳಿಸಿತು ಹಾಗೂ ಜಲಾಲುದ್ದೀನ್ ಫೈರೋಜ್ ಶಾಹ ಖಿಲ್ಜಿಯನ್ನು ಅಲ್ಲಾವುದ್ದೀನ್ ಖಿಲ್ಜಿಯು ಯಾವ ರೀತಿಯಲ್ಲಿ ನಿರ್ದಯವಾಗಿ ಕೊಲೆ ಮಾಡಿದ್ದನೋ ಅದೇ ರೀತಿಯ ಸ್ವಾಮಿ ದ್ರೋಹದ ಪುನರಾವರ್ತನೆಯಾಯಿತು. ಆ ಹಿಂದಿನ ಪ್ರಸಂಗದ ರಕ್ತದ ಹನಿಗಳು ಇಂದಿನವರೆಗೂ ಸಿಡಿದು ಅಲ್ಲಾವುದ್ದೀನ್ ಖಿಲ್ಜಿಯ ವಂಶದ ಮೇಲೆ ಕೃತಘ್ನತೆಯ ಪ್ರಭಾವವು ಪರಿಣಾಮವನ್ನು ಬೀರಿತು. ಆ ವಂಶದ ನಾಮಾವಶೇಷವಾಯಿತು. ಖುತ್ಬುದ್ದೀನ್ ಮುಬಾರಕ್ ಶಾಹನ ಕೊಲೆಯು ಘಟನೆಯು ೭೨೧ನೇಯ ಇಸವಿಯ ರಬಿಉಲ್‌ಅವಲ್ ತಿಂಗಳ ೫ನೇ ತಾರೀಕಿನಂದು ಘಟಿಸಿತು.

ಖುಸ್ರುಖಾನ್‌ನ ಪಟ್ಟಾಭಿಷೇಕ:

ಖುತ್ಬುದ್ದೀನನ ಕೊಲೆಯ ಮಾರನೆಯ ದಿನ ಖುಸ್ರುಖಾನನ ಬೆಂಬಲಿಗರು ಮತ್ತು ರಾಜ ಪರಿವಾರದ ಬಹುತೇಕ ಜನರು ಅಪಾರ ಸಂಖ್ಯೆಯಲ್ಲಿ ಖುಸ್ರುಖಾನನ ಸುತ್ತ ನೆರೆದರು. ಆ ಸಂದರ್ಭದಲ್ಲಿ ಖುಸ್ರುಖಾನನು ಗೃಹಬಂಧನದಲ್ಲಿ ಇರಿಸಿದ್ದ ಸರ್ದಾರರನ್ನು ಕೂಡ ಕರೆಸಿದ ಮತ್ತು ಅವರೆಲ್ಲರ ಸಮ್ಮುಖದಲ್ಲಿ ಸುಲ್ತಾನ್ ನಾಸಿರುದ್ದೀನ ಎಂಬ ಬಿರುದನ್ನು ಧರಿಸಿ ಅವನು ರಾಜ ಸಿಂಹಾಸನದ ಮೇಲೆ ಆಸೀನನಾದ. ಆ ಅಯೋಗ್ಯ ಮತ್ತು ರಾಜ ಪರಿವಾರದ ಕೀಳು ಕ್ರಿಮಿಯು ಅತ್ಯಂತ ಯೋಗ್ಯ ಮತ್ತು ಗಣ್ಯರಾದ ಸರ್ದಾರರು ಅದರಲ್ಲಿಯೂ ಕೂಡ ಐನುಲ್ ಮುಲ್ಕ್, ಮುಲ್ಕ್ ಜೋನ ನಂತಹ ಅತ್ಯಂತ ವರ್ಚಸ್ಸಿನ ನಾಯಕರನ್ನು ತನ್ನ ಎದುರಿಗೆ ಕೈಕಟ್ಟಿ ನಿಲ್ಲುವಂತೆ ಮಾಡಿದ. ಆಡಳಿತದ ಎಲ್ಲಾ ಸೂತ್ರಗಳನ್ನು ತನ್ನ ಕೈಯಲ್ಲಿ ಹಿಡಿತಕ್ಕೆ ತೆಗೆದುಕೊಂಡ ಖುಸ್ರುಖಾನನು ತನಗಿಂತ ಹಿಂದೆ ರಾಜ್ಯವನ್ನಾಳಿದ ಇಬ್ಬರು ಬಾದಶಹರಾದ ಅಲ್ಲಾವುದ್ದೀನ್ ಖಿಲ್ಜಿ ಮತ್ತು ಖುತ್ಬುದ್ದೀನ್ ಮುಬಾರಕ್ ಶಾಹನ ಬೆಂಬಲಿಗರ

ಮತ್ತು ನಂಬಿಗಸ್ಥ ಮುಖಂಡರುಗಳ ಕಗ್ಗೊಲೆಯನ್ನು ಮಾಡಿದ. ಮತ್ತು ಅವರ ಕುಟುಂಬದ ಸ್ತ್ರೀಯರನ್ನು ಹಾಗೂ ಮಕ್ಕಳನ್ನು ಗುಜರಾತ್‌ನ ಹಿಂದೂಗಳ ಸ್ವಾಧೀನಕ್ಕೆ ನೀಡಿದ.

ಖುಸ್ರುಖಾನನು ತನ್ನ ಸಹೋದರನಿಗೆ ಖಾನೆಖಾನ್ ಎಂಬ ಬಿರುದನ್ನು ನೀಡಿದ ಮತ್ತು ಅಲ್ಲಾವುದ್ದೀನ್ ಖಿಲ್ಜಿಯ ಪುತ್ರಿಯನ್ನು ಅವನ ತೆಕ್ಕೆಗೆ ನೀಡಿದ. ಹಾಗೂ ಖುತ್ಬುದ್ದೀನ್ ಮುಬಾರಕ್ ಶಾಹನ ಪತ್ನಿಯನ್ನು ತನ್ನ ಅಂತಃಪುರಕ್ಕೆ ಸೇರಿಸಿಕೊಂಡ. ಅಲ್ಲಾವುದ್ದೀನ್ ಖಿಲ್ಜಿ ಮತ್ತು ಮುಬಾರಕ್ ಶಾಹನ ಅನೇಕ ಪತ್ನಿಯರನ್ನು ಮತ್ತು ಅವರ ಸಂಬಂಧಿ ಮಹಿಳೆಯರನ್ನು ಖುಸ್ರುಖಾನ್ ಮತ್ತು ಅವನ ಸೈನ್ಯದವರು ತಮ್ಮ ನಡುವೆ ಹಂಚಿಕೊಂಡರು. ಖಾಜಿಖಾನ್ ಮತ್ತು ಮುಬಾರಕ್ ಶಾಹನ ಕೊಲೆಗಾರನಾದ ಜಾಹರ್‌ಗೆ ಖುಸ್ರುಖಾನ್ ಎಲ್ಲಾ ಶ್ರೀಮಂತಿಕೆಯನ್ನು ಕೂಡ ನೀಡಿ ಅವನನ್ನು ಅತ್ಯಂತ ಸಿರಿವಂತ ವ್ಯಕ್ತಿಯನ್ನಾಗಿ ಮಾಡಿದ. ಮಂದಲ್‌ಗೆ "ರಾಯೆ ರಾಯಾನ್" ಎಂಬ ಬಿರುದನ್ನು ನೀಡಿ ಖಾಜಿಖಾನನ ಎಲ್ಲಾ ಜಹಗೀರು ಅವನ ಒಡವೆ ವಸ್ತು ಮತ್ತು ಸಕಲವನ್ನು ಕೂಡ ಆತನಿಗೆ ನೀಡಲಾಯಿತು.

ಮುಲ್ಕ್ ಮುಸರತ್‌ನ ಕೊಲೆ:

ಖುಸ್ರುಖಾನನು ಸಿಂಹಾಸನವನ್ನು ಏರಿದ ನಂತರ ಅಲ್ಲಾವುದ್ದೀನ್ ಖಿಲ್ಜಿ ಮತ್ತು ಖುತ್ಬುದ್ದೀನ್ ಮುಬಾರಕ್ ಶಾಹನ ಸಂಪೂರ್ಣ ಖಜಾನೆಯನ್ನು ಯಾವುದೇ ಹಿಡಿತವಿಲ್ಲದಂತೆ ಖರ್ಚು ಮಾಡತೊಡಗಿದ. ಅವನು ತನ್ನ ಎಲ್ಲಾ ಸೇವಕರು ಮತ್ತು ಪರಿವಾರದವರಿಗೆ ಆರು ತಿಂಗಳ ವೇತನವನ್ನು ಇನಾಮಿನ ರೂಪದಲ್ಲಿ ನೀಡಿದ. ಕೇವಲ ಹಣದಾಸೆಗಾಗಿ ತನಗೆ ಬೆಂಬಲ ನೀಡಿ ಈ ಸಂಚಿನಲ್ಲಿ ಭಾಗಿಯಾದ ಬಹುತೇಕ ಜನರನ್ನು ಕೂಡ ಅವನು ಕೊಲ್ಲಿಸಿದ. ಅಲ್ಲಾವುದ್ದೀನ್‌ನ ತಂಗಿಯ ಮಗ ಮುಲ್ಕ್ ಮುಸರತ್‌ನನ್ನು ಕುರುಡನನ್ನಾಗಿ ಮಾಡಲಾಗಿತ್ತು. ಅವನು ಕತ್ತಲ ಕೂಪದಲ್ಲಿ ತನ್ನ ಬದುಕನ್ನು ಸವೆಸುತ್ತಿದ್ದ. ಖುಸ್ರುಖಾನ್ ಅವನನ್ನು ಕೂಡ ಹುಡುಕಿಸಿ ಅವನನ್ನು ಕೂಡ ಕೊಲೆ ಮಾಡುವುದರ ಮೂಲಕ ಖಿಲ್ಜಿ ವಂಶದ ಕೊನೆಯ ದೀಪವನ್ನು ಕೂಡ ನಂದಿಸಿದ.

ಧಾರ್ಮಿಕ ಪರಿಸರ:

ಆ ಕಾಲದಲ್ಲಿ ಧರ್ಮದ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿತ್ತು. ಮುಸ್ಲಿಮೇತರರ ಸಾಮರ್ಥ್ಯವು ಎಷ್ಟು ತೀವ್ರವಾಗಿ ವೃದ್ಧಿಸಿತ್ತು ಎಂದರೆ ಅವರುಗಳು ಪವಿತ್ರ ಗ್ರಂಥವಾದ ಕುರಾನನ್ನು ಕುರ್ಚಿಯ ರೂಪದಲ್ಲಿ ಬಳಸುತ್ತಿದ್ದರು ಅವರು ಆ ಪವಿತ್ರ ಗ್ರಂಥವನ್ನು ನೆಲದ ಮೇಲೆ ಇಟ್ಟು ಅದರ ಮೇಲೆ ಆಸೀನರಾಗುತ್ತಿದ್ದರು. ಅಲ್ಲಾವುದ್ದೀನನ ಕಾಲಾವಧಿಯ ಸರ್ದಾರರ ಪೈಕಿ ಪಸರ್‌ಖುಮ್ರಾಗೆ "ಖುಮಾರೆ

ಆಜಂ ಅಲ್‌ಮುಲ್ಕ್ ಶಾಯಿಸ್ತಖಾನ್" ಎಂಬ ಬಿರುದನ್ನು ನೀಡಲಾಗಿತ್ತು. ಮತ್ತು ಹಣಕಾಸು ಸಚಿವನ ಹುದ್ದೆಗೆ ನೇಮಕ ಮಾಡಲಾಗಿತ್ತು. ಐನುಲ್ ಮುಲ್ಕ್ ಮುಲ್ತಾನಿಗೆ "ಆಲಮ್‌ಖಾನ್" ಎಂಬ ಹೆಸರನ್ನು ನೀಡಲಾಯಿತು ಮತ್ತು ಆತನನ್ನು ಸರ್ದಾರರ ಮುಖಂಡನ ಹುದ್ದೆಗೆ ನಿಯೋಜನೆ ಮಾಡಲಾಯಿತು ಮುಲ್ಕ್ ವಜೀಹುದ್ದೀನ್‌ಗೆ ತಾಜುಲ್ ಮುಲ್ಕ್‌ನ ಬಿರುದನ್ನು ನೀಡಲಾಯಿತು ಮತ್ತು ಆತನನ್ನು ಮಂತ್ರಿಯನ್ನಾಗಿ ಮಾಡಲಾಯಿತು. ಅವನ ಪುತ್ರರಿಗೂ ಕೂಡ ವಿವಿಧ ಉನ್ನತ ಹುದ್ದೆಗಳನ್ನು ನೀಡಲಾಯಿತು. ಆ ಸಂದರ್ಭದಲ್ಲಿ ಖುಸ್ರುಖಾನನು ಮುಲ್ಕ್ ಜೋನಾನ ಬಗ್ಗೆ ಅತೀವ ಕಾಳಜಿಯನ್ನು ವಹಿಸಿದ. ಮತ್ತು ಆತನಿಗೆ ಆಶ್ವಾರೋಹಿ ದಳದ ಮುಖ್ಯಸ್ಥನಾಗಿ ಹುದ್ದೆಯನ್ನು ನೀಡಿದ. ಮತ್ತು ಅಪಾರವಾದ ಧನಕನಕ ಮತ್ತು ಐಶ್ವರ್ಯವನ್ನು ನೀಡಿ ವಿಶೇಷ ಅದರವನ್ನು ತೋರ್ಪಡಿಸಿದ. ಮುಲ್ಕ್ ಜೋನಾಗೆ ಈ ರೀತಿಯ ವಿಶೇಷ ಗೌರವಾದರಗಳನ್ನು ಸಲ್ಲಿಸುವಲ್ಲಿ ಖುಸ್ರುಖಾನ್‌ಗೆ ತನ್ನದೇ ಆದ ಒಂದು ಸ್ವಾರ್ಥದ ಉದ್ದೇಶವಿತ್ತು. ಆತನ ತಂದೆಯಾದ ಗಾಜಿ ಮುಲ್ಕನು ಲಾಹೋರ್ ಮತ್ತು ದೇಪಾಲ್ ಪುರದ ರಾಜನಾಗಿದ್ದ ಹೀಗಾಗಿ ಆತನ ಮಗನಾದ ಮುಲ್ಕ್ ಜೋನಾಗೆ ವಿಶೇಷ ಗೌರವಾದರಗಳನ್ನು ಸಲ್ಲಿಸಿದಲ್ಲಿ ಆತನು ತನ್ನ ಅಧೀನತೆಯನ್ನು ಒಪ್ಪಿಕೊಳ್ಳುತ್ತಾನೆಂಬ ಉದ್ದೇಶ ಖುಸ್ರುಖಾನ್‌ಗೆ ಇತ್ತು.

ಮುಲ್ಕ್ ಫಕ್ರುದ್ದೀನ್ ಜೋನಾನ ಪರಾರಿ:

ಮುಲ್ಕ್ ಫಕ್ರುದ್ದೀನ್ ಜೋನಾನು ಬಹಿರಂಗವಾಗಿ ತುಂಬಾ ಮೌನದಿಂದಿದ್ದ. ಆದರೆ ಅಂತರಂಗದಲ್ಲಿ ಅವನು ಖುಸ್ರುಖಾನನ ಸ್ವಾಮಿದ್ರೋಹವನ್ನು ನೆನೆಸುತ್ತ ಮನಸ್ಸಿನಲ್ಲಿ ತೀವ್ರ ದುಃಖಿತನಾಗಿದ್ದ. ಆತನ ತಂದೆ ಗಾಜಿ ಮುಲ್ಕ್ ಕೂಡ ಒಬ್ಬ ನಂಬಿಕಸ್ಥ ಮತ್ತು ದೂರ ದೃಷ್ಟಿಯುಳ್ಳ ಸರ್ದಾರನಾಗಿದ್ದ. ಅವನು ಕೂಡ ಖುಸ್ರುಖಾನನ ಅಸಭ್ಯ ಮತ್ತು ಅನಾಗರಿಕ ವರ್ತನೆಗಳನ್ನು ಕಂಡು ಖುಸ್ರುಖಾನನ ಮೇಲೆ ಖುತ್ಬುದ್ದೀನ್ ಮುಬಾರಕ್ ಶಾಹನ ರಕ್ತದ ಪ್ರತೀಕಾರದ ಸೇಡನ್ನು ತೀರಿಸಬೇಕೆಂದು ನಿಶ್ಚಯಿಸಿದ್ದ. ಖುಸ್ರುಖಾನನು ಎಲ್ಲಾ ಅಧಿಕಾರವನ್ನು ಕೇಂದ್ರೀಕರಿಸಿಕೊಂಡು ಎರಡು ಮೂರು ತಿಂಗಳ ಕಾಲಾವಧಿಯು ಮುಗಿದಿತ್ತು. ಆಗ ಮುಲ್ಕ್ ಜೋನಾನು ಒಂದು ಅವಕಾಶವನ್ನು ಹೊಂಚಿಕೊಂಡು ಅರ್ಧರಾತ್ರಿಯ ಸಮಯದಲ್ಲಿ ದೆಹಲಿಯಿಂದ ಪರಾರಿಯಾದ ಮತ್ತು ತನ್ನ ಕೆಲವು ನಂಬಿಕಸ್ಥ ಸೇವಕರು ಮತ್ತು ಪರಿವಾರದವರನ್ನು ಜೊತೆಯಲ್ಲಿ ಕರೆದುಕೊಂಡು ಅವನು ದೇಪಾಲ ಪುರವನ್ನು ತಲುಪಿದ. ಮುಲ್ಕ್ ಜೋನಾನ ಪರಾರಿಯಿಂದ ಖುಸ್ರುಖಾನನಿಗೆ ಮುಖ ಭಂಗವಾಗಿ ಅದು ಅವನಿಗೆ ಅತ್ಯಂತ ದೊಡ್ಡ ಸವಾಲಿನ ವಿಷಯವಾಗಿತ್ತು. ಆತನು ಇದರಿಂದ ತೀರಾ ಗಾಬರಿಗೊಳಗಾದ ಮತ್ತು ಅವನಿಗೆ ತನ್ನ ಎಲ್ಲಾ ಅಧಃಪತನದ ಲಕ್ಷಣಗಳು ಕೂಡ ಕಂಡುಬರತೊಡಗಿದವು. ಅವನು ಖಮ್ರಾಖುಮಾರ್ ಮತ್ತು ತನ್ನ ಇನ್ನಿತರೆ ಸರ್ದಾರರುಗಳನ್ನು ಕರೆದು

ಮುಲ್ಕ್ ಜೋನಾನನ್ನು ಹಿಂಬಾಲಿಸುವಂತೆ ಆದೇಶವನ್ನು ನೀಡಿದ. ಆದರೆ ಈ ಅಸಮರ್ಥ ಮತ್ತು ಹೇಡಿ ಸರ್ದಾರರರು ಮುಲ್ಕ್ ಜೋನಾನ ಸುತ್ತ ಸುಳಿಯಲು ಕೂಡ ಸಾಧ್ಯವಾಗಲಿಲ್ಲ. ಮತ್ತು ಸರಸ್ವತಿಯ ಗ್ರಾಮದ ಬಳಿ ಹೋಗಿ ನಂತರ ವಿಫಲರಾಗಿ ಮರಳಿದರು.

ಮುಲ್ಕ್ ಜೋನಾ ಮತ್ತು ಗಾಜಿ ಮುಲ್ಕ್‌ನ ಭೇಟಿ:

ಗಾಜಿ ಮುಲ್ಕ್ ಅತ್ಯಂತ ದೂರದೃಷ್ಟಿಯುಳ್ಳ ಮತ್ತು ವಿವೇಕಶಾಲಿಯಾದ ವ್ಯಕ್ತಿಯಾಗಿದ್ದ. ಅವನು ಈ ಘಟನೆ ನಡೆಯುವುದಕ್ಕಿಂತ ಎರಡು ದಿನ ಮುಂಚಿತವಾಗಿ ತನ್ನ ಇನ್ನೂರು ಕುದುರೆ ಸವಾರರನ್ನು ಸರಸ್ವತಿಯ ಕೋಟೆಯ ಬಳಿ ನೇಮಕ ಮಾಡಿದ್ದ. ಮುಲ್ಕ್ ಜೋನಾ ಈ ಕುದುರೆ ಸವಾರರ ಪೈಕಿ ಕೆಲವು ಯುವಕರನ್ನು ತನ್ನೊಡನೆ ಕರೆದುಕೊಂಡು, ಅವನು ದೇಪಾಲ ಪುರದತ್ತ ಪ್ರಯಾಣ ಮುಂದುವರೆಸಿದ. ದೇಪಾಲಪುರವನ್ನು ತಲುಪಿದ ನಂತರ ಮುಲ್ಕ್ ಜೋನಾ ತನ್ನ ತಂದೆಯೊಂದಿಗೆ ಭೇಟಿಯಾದ. ಗಾಜಿ ಮುಲ್ಕ್‌ನು ತನ್ನ ಪುತ್ರನ ಆಗಮನದಿಂದ ತುಂಬಾ ಸಂತೋಷ ಪಟ್ಟ. ಗಾಜಿ ಮುಲ್ಕ್‌ನಿಗೆ ತನ್ನ ಪುತ್ರನು ಮರಳಿ ಬಂದಿದ್ದರಿಂದ ಅತ್ಯಂತ ನೆಮ್ಮದಿ ಉಂಟಾಯಿತು. ಮತ್ತು ಅವನು ಖುತ್ಬುದ್ದೀನ್ ಮುಬಾರಕ್ ಶಾಹನ ಕೊಲೆಯ ಪ್ರತೀಕಾರದ ಸೇಡನ್ನು ಖುಸ್ರುಖಾನ್‌ನ ಮೇಲೆ ತೀರಿಸುವ ಬಗ್ಗೆ ಸಿದ್ಧತೆಯನ್ನು ನಡೆಸತೊಡಗಿದ. ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸರ್ದಾರರರು ಮತ್ತು ಸುಬೇದಾರರುಗಳಿಗೆ ಅವನು ಪತ್ರಗಳನ್ನು ಬರೆದ, ಹಾಗೂ ಆ ಪತ್ರದಲ್ಲಿ ಅವರುಗಳಿಗೆ ಅಲ್ಲಾವುದ್ದೀನ್ ಖಿಲ್ಜಿಯ ವಂಶಸ್ಥರ ಕೊಡುಗೆಗಳನ್ನು ನೆನಪಿಸಿದ. ಹಾಗೂ ಅವರನ್ನು ತನ್ನ ಉದ್ದೇಶದ ಸಫಲತೆಯ ಸಲುವಾಗಿ ತೀವ್ರ.ರೀತಿಯಲ್ಲಿ ಭಾವನಾತ್ಮಕವಾಗಿ ಉದ್ರೇಕಿಸಿದ. ಹೆಚ್ಚೂ ಕಡಿಮೆ ಎಲ್ಲಾ ಸರ್ದಾರರುಗಳು ಕೂಡ ಈ ಕರ್ತವ್ಯದಲ್ಲಿ ಗಾಜಿ ಮುಲ್ಕ್‌ನ ನೆರವಿಗೆ ಸನ್ನದ್ದರಾಗಿ ನಿಂತರು ಹಾಗೂ ಅವನಿಗೆ ನೆರವನ್ನು ನೀಡಲು ಎಲ್ಲಾ ರೀತಿಯಲ್ಲಿಯೂ ಸಿದ್ದರಾದರು.

ಮುಲ್ತಾನ್‌ನ ರಾಜನ ಕೊಲೆ:

ಮುಲ್ತಾನಿನ ರಾಜನ ಹೆಸರು ಮೊಗಲತಿ ಎಂದಾಗಿತ್ತು. ಆತನು ಗಾಜಿ ಮುಲ್ಕ್‌ನ ಬೆಂಬಲಕ್ಕೆ ಬರಲಿಲ್ಲ ಮತ್ತು ಅವನು ಗಾಜಿ ಮುಲ್ಕ್‌ನ ಪತ್ರಕ್ಕೆ ಪ್ರತ್ಯುತ್ತರವನ್ನು ಬರೆದು ಅದರಲ್ಲಿ ಹೀಗೆಂದು ತಿಳಿಸಿದ "ನೀನು ದೇಪಾಲಪುರದ ಸರ್ದಾರನಾಗಿದ್ದೀಯ ಮತ್ತು ನಾನು ಮುಲ್ತಾನಿನ ರಾಜನಾಗಿದ್ದೇನೆ. ನಮ್ಮಿಬ್ಬರಿಗೂ ನಮ್ಮ ಸಾಮರ್ಥ್ಯ ಹಾಗೂ ಮಿತಿಗಳಿವೆ. ನಮ್ಮ ಯೋಗ್ಯತೆಯನ್ನು ಮೀರಿ ಮುಂದುವರೆಯಬಾರದು. ದೆಹಲಿಯ ಬಾದಶಹನಾದ ಖುಸ್ರುಖಾನನ ವಿರೋಧವನ್ನು ಮಾಡುವಂತಹದು ನಮಗೆ ಸೂಕ್ತವಲ್ಲ". ಗಾಜಿ ಮುಲ್ಕ್‌ನಿಗೆ ಮುಲ್ತಾನಿನ ರಾಜನ ಈ ಉತ್ತರವು

ತಲುಪಿದಾಗ ಅವನು ತನ್ನ ಒಬ್ಬ ಸಮರ್ಥನಾದ ಸ್ನೇಹಿತನಾದ ಬೆಹ್ರಾಮ್‌ನನ್ನು ಕರೆಸಿ ಆತನಿಗೆ ಒಂದು ಪತ್ರವನ್ನು ಬರೆದು "ನೀನು ಮೊಗಲತಿಯನ್ನು ಕೊಲೆ ಮಾಡಿ ಮುಲ್ತಾನಿ ಸೈನ್ಯವನ್ನು ನಿನ್ನ ವಶದಲ್ಲಿ ಪಡೆದುಕೋ. ಹಾಗೂ ಆ ಸೈನ್ಯವನ್ನು ಜೊತೆಯಲ್ಲಿ ತೆಗೆದುಕೊಂಡು ನನ್ನ ನೆರವಿಗೆ ಕೂಡಲೇ ದೇಪಾಲಪುರವನ್ನು ಬಂದು ಸೇರು" ಎಂದು ತಿಳಿಸಿದ. ಬೆಹ್ರಾಮ್ ಅವನ ಆದೇಶದ ರೀತ್ಯಾ ನಡೆದುಕೊಂಡ ಮತ್ತು ಮುಲ್ತಾನಿನ ರಾಜನನ್ನು ಕೊಲೆ ಮಾಡಿ ಅವನ ಸೈನ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿಂದ ಅವನು ಪ್ರಯಾಣದ ಸಿದ್ದತೆಯಲ್ಲಿ ತೊಡಗಿದ.

ಮುಲ್ಕ್‌ಬೇಗ್‌ಮಖಿಯ ಪರಿಸ್ಥಿತಿ:

ಮುಲ್ಕ್ ಬೇಗ್‌ಲಿಖಿ ಕೂಡ ಗಾಜಿ ಮುಲ್ಕ್‌ಗೆ ಬೆಂಬಲವನ್ನು ನೀಡಲಿಲ್ಲ ಮತ್ತು ಅವನಿಗೂ ಖುತ್ಬುದ್ದೀನ್ ಮುಬಾರಕ್ ಶಾಹನ ಮೇಲೆ ಸಾಕಷ್ಟು ದ್ವೇಷವಿತ್ತು. ಮುಬಾರಕ್ ಶಾಹನು ತನ್ನ ಆಳ್ವಿಕೆಯ ಅವಧಿಯಲ್ಲಿ ಖುಸ್ರುಖಾನನ ಆದೇಶದ ಮೇರೆಗೆ ಅವನ ಮೂಗು ಮತ್ತು ಕಿವಿಗಳನ್ನು ಕತ್ತರಿಸುವಂತೆ ಆಜ್ಞೆಯನ್ನು ಮಾಡಿದ್ದ. ಆದರೂ ಕೂಡ ಅವನು ಗಾಜಿ ಮುಲ್ಕ್‌ನ ಪತ್ರವನ್ನು ಖುಸ್ರುಖಾನ್‌ಗೆ ಕಳಿಸಿಕೊಟ್ಟ ಮತ್ತು ಖುದ್ದು ಆತನು ತನ್ನ ಸೈನ್ಯದೊಡನೆ ಖಾಜಿ ಮುಲ್ಕ್‌ನ ಮೇಲೆ ಯುದ್ಧವನ್ನು ಸಾರಿದ. ಗಾಜಿ ಮುಲ್ಕ್ ಸತ್ಯದ ಪರವಾಗಿ ಹೋರಾಟ ಮಾಡುತ್ತಿದ್ದ. ಆದ್ದರಿಂದ ಮುಲ್ಕ್‌ಬೇಗ್‌ಲಿಖಿಗೆ ಸೋಲುಂಟಾಯಿತು. ಮತ್ತು ಆತನು ಯುದ್ಧರಂಗದಿಂದ ಓಡಿಹೋದ ಹಾಗೂ ಸಮಾನಾದಲ್ಲಿ ಹೋಗಿ ಅವನು ರಕ್ಷಣೆಯನ್ನು ಪಡೆದ. ಹಾಗೂ ಮುಲ್ಕ್‌ಬೇಗ್‌ಲಿಖಿಯು ಆದಷ್ಟು ಬೇಗ ಖುಸ್ರುಖಾನನ ಬಳಿ ತಲುಪಿದರೆ ಸಾಕೆಂದು ಸರ್ವ ವಿಧದಲ್ಲಿ ಪ್ರಯತ್ನವನ್ನು ಕೂಡ ಮಾಡಲಾರಂಭಿಸಿದ. ಆದರೆ ಸಮಾನಾದ ಜಮೀನ್ದಾರರುಗಳು ಅವನ ಅಭಿಲಾಷೆಗೆ ತಣ್ಣೀರನ್ನು ಎರಚಿದರು ಮತ್ತು ಅವನನ್ನು ಕೊಲೆ ಮಾಡಿ ಅವನ ದೇಹವನ್ನು ಚೂರು ಚೂರಾಗಿ ಮಾಡಿ ಎಸೆದರು.

ಖುಸ್ರುಖಾನನ ಸೈನ್ಯ ಮತ್ತು ಗಾಜಿ ಮುಲ್ಕ್ ನಡುವಿನ ಯುದ್ಧ:

ಖುಸ್ರುಖಾನನು ತನ್ನ ಸಹೋದರನಾದ ಖಾನೆಖಾನ್‌ಗೆ ರಾಜ ಲಾಂಛನಗಳಾದ ಛತ್ರಿ ಮತ್ತು ಚಾಮರಗಳನ್ನು ನೀಡಿದ ಮತ್ತು ಯೂಸೂಫ್ ಸೂಫಿ ಖಾನ್ ಎಂಬ ಬಿರುದನ್ನು ನೀಡಿದ. ಅವರಿಬ್ಬರನ್ನು ಕೂಡ ಅವನು ತನ್ನ ಅತ್ಯಂತ ನಂಬಿಕಸ್ಥ ಮತ್ತು ಪ್ರಾಣದ ಹಂಗು ತೊರೆದು ಹೋರಾಡುವ ಒಂದು ತಂಡದೊಡನೆ ಗಾಜಿ ಮುಲ್ಕ್‌ನ ವಿರುದ್ದ ಯುದ್ಧ ಮಾಡಲು ಕಳಿಸಿಕೊಟ್ಟ. ಆ ದಿನಗಳಲ್ಲಿ ಮುಲ್ಕ್ ಬೆಹ್ರಾಂ ಒಂದು ಬಲಾಢ್ಯ ಸೈನ್ಯದೊಂದಿಗೆ ಅಛ್ ಮತ್ತು ಮುಲ್ತಾನಿನ ಪ್ರದೇಶಗಳಿಂದ ಪ್ರಯಾಣವನ್ನು ಬೆಳೆಸುತ್ತಾ ಗಾಜಿ ಮುಲ್ಕ್‌ನೊಡನೆ ಸೇರಿ, ಕೈಜೋಡಿಸಿದರು ಸರಸ್ವತಿಯ ಮೈದಾನದಲ್ಲಿ ಉಭಯ ಸೈನ್ಯಗಳ ನಡುವೆ ಯುದ್ಧ ಆರಂಭವಾಯಿತು. ಗಾಜಿ ಮುಲ್ಕ್ ಮತ್ತು

ಅವನ ಎಲ್ಲಾ ಸಂಗಡಿಗರು ಕೂಡ ಯುದ್ಧದ ತಂತ್ರಗಾರಿಕೆಯಲ್ಲಿ ಅನುಭವಿಗಳಾಗಿದ್ದು, ಪ್ರಾವೀಣ್ಯತೆಯನ್ನು ಹೊಂದಿದ್ದರು, ಹಾಗೂ ಅವರಿಗೆ ಯುದ್ಧ ಕಲೆಯ ಬಗ್ಗೆ ಸಂಪೂರ್ಣವಾದ ಪರಿಜ್ಞಾನವಿತ್ತು. ಇದಕ್ಕೆ ತದ್ವಿರುದ್ಧವಾಗಿ ಖುಸ್ರುಖಾನನ ಊಳಿಗದವರು ಸಂಪೂರ್ಣವಾಗಿ ಅನನುಭವಿಗಳಾಗಿದ್ದರು. ಈ ಕಾರಣದಿಂದ ಗಾಜಿ ಮುಲ್ಕ್‌ನ ಮೊದಲ ಆಕ್ರಮಣದಲ್ಲಿಯೇ ಅವನಿಗೆ ಗೆಲುವು ಉಂಟಾಯಿತು. ಮತ್ತು ಖುಸ್ರುವಿನ ಸಂಚುಕೋರ ಬೆಂಬಲಿಗರು ಧಾಳಿಯನ್ನು ತಡೆಯಲಾರದೆ ಹಿಮ್ಮೆಟ್ಟತೊಡಗಿದರು. ಕೊನೆಗೂ ಅವರು ಅಪಜಯವನ್ನು ಅನುಭವಿಸಿ ಯುದ್ಧರಂಗದಿಂದ ತೀರ ಅವಮಾನಿತರಾಗಿ ಪರಾರಿಯಾದರು. ಆ ಸೋತ ಸೈನ್ಯವು ತಮ್ಮ ಎಲ್ಲಾ ಖಜಾನೆಯನ್ನು ಮತ್ತು ಆನೆ ಕುದುರೆಗಳನ್ನು ಯುದ್ಧರಂಗದಲ್ಲಿಯೇ ತೊರೆದು ಪ್ರಾಣ ಉಳಿಸಿಕೊಳ್ಳುವ ಸಲುವಾಗಿ ಪರಾರಿಯಾದರು. ಗಾಜಿ ಮುಲ್ಕ್‌ನು ಈ ಗೆಲುವನ್ನು ತನಗೆ ಕರುಣಿಸಿದಕ್ಕಾಗಿ ಅಲ್ಲಾಹನಿಗೆ ಪ್ರಣಾಮಗಳನ್ನು ಸಲ್ಲಿಸಿದ ಮತ್ತು ಯುದ್ಧದಲ್ಲಿ ತನ್ನ ಕೈಸೇರಿದ ಯುದ್ಧ ಸಂಪತ್ತನ್ನು ತನ್ನ ಸಿಪಾಯಿಗಳ ನಡುವೆ ಹಂಚಿ, ಅತ್ಯಂತ ವೈಭವ ಮತ್ತು ಘನತೆಯಿಂದ ತನ್ನ ಪ್ರಯಾಣವನ್ನು ಮುಂದುವರೆಸುತ್ತ ಅವನು ದೆಹಲಿಯತ್ತ ಮುನ್ನಡೆಯ ತೊಡಗಿದ.

ಗಾಜಿ ಮುಲ್ಕ್‌ನ ದೆಹಲಿಗೆ ಆಗಮನ:

ಗಾಜಿ ಮುಲ್ಕ್‌ನು ದೆಹಲಿಯತ್ತ ಆಗಮಿಸುತ್ತಿರುವ ಸುದ್ದಿಯನ್ನು ಕೇಳಿದ ಖುಸ್ರುಖಾನನು ಅತ್ಯಂತ ಗಾಬರಿಗೆ ಒಳಗಾದ. ಆಗ ಅವನು ದೆಹಲಿಯಿಂದ ಹೊರ ಹೊರಟು ಅವನನ್ನು ಎದುರಿಸಬೇಕೆಂಬ ಇರಾದೆಯನ್ನು ಮಾಡಿದ. ಆದರೆ ಅವನ ಶಕ್ತಿ ಸಾಮರ್ಥ್ಯಗಳು ಕುಸಿದಿದ್ದವು ಹಾಗೂ ಅವನು ಅಲ್ಲಾವುದ್ದೀನನ ಇಲಾಯಿ ಕೊಳದ ಬಳಿ ಬಿಡಾರವನ್ನು ಹೂಡಿದ. ಅವನ ಹಿಂಭಾಗದಲ್ಲಿ ಕೋಟೆ ಇತ್ತು ಮತ್ತು ಮುಂಭಾಗದಲ್ಲಿ ತೋಟಗಳಿದ್ದವು. ಆ ಸ್ಥಳದಲ್ಲಿ ಅವನು ಅತ್ಯಂತ ಬಿಗಿಯಾದ ಭದ್ರತಾ ವ್ಯವಸ್ಥೆಯನ್ನು ಮಾಡಿ, ಅಲ್ಲಿ ಅವನು ಗಾಜಿ ಮುಲ್ಕ್‌ನ ಆಗಮನವನ್ನು ನಿರೀಕ್ಷೆ ಮಾಡತೊಡಗಿದ ಗಾಜಿ ಮುಲ್ಕ್‌ನು ಅತ್ಯಂತ ವೈಭವೋಪೇತವಾಗಿ ದೆಹಲಿಯ ಕಡೆ ತನ್ನ ಪ್ರಯಾಣವನ್ನು ಮುಂದುವರೆಸಿದ. ಖುಸ್ರುಖಾನನು ಗಾಜಿ ಮುಲ್ಕ್‌ನ ಆಗಮನದ ಸುದ್ದಿಯನ್ನು ಕೇಳಿ ಕೂಡಲೇ ತನ್ನ ಸಿಪಾಯಿಗಳಿಗೆ ಮುಂಗಡ ವೇತನವನ್ನು ನೀಡಿದ ಹಾಗೂ ಕೆಲವರಿಗೆ ನಾಲ್ಕು ವರ್ಷದ ಮುಂಗಡ ವೇತನವನ್ನು ನೀಡಿದರೆ ಇನ್ನೂ ಕೆಲವರಿಗೆ ಮೂರು ವರ್ಷದ ಅಥವಾ ಎರಡೂವರೆ ವರ್ಷದ ಮುಂಗಡ ವೇತನ ಹೀಗೆ ಮನಬಂದಂತೆ ಅವನು ಎಲ್ಲರಿಗೂ ಕೂಡ ಹಂಚಿದ. ಸೈನಿಕರಿಗೆ ಅಪಾರ ಹಣವನ್ನು ನೀಡಿದ ನಂತರ ಅವನು ಫಕೀರರು ಮತ್ತು ಧಾರ್ಮಿಕ ವ್ಯಕ್ತಿಗಳಿಗೂ ಕೂಡ ಅಪಾರ ಕೊಡುಗೆಗಳನ್ನು ನೀಡಿದ. ಒಟ್ಟಾರೆ ಖುಸ್ರುಖಾನನು ಅತ್ಯಂತ ಹೃದಯ ವೈಶಾಲ್ಯವನ್ನು ಮೆರೆದು ರಾಜ ಖಜಾನೆಯಲ್ಲಿ ಒಂದು ಬಿಡಿಗಾಸನ್ನು ಕೂಡ

ಬಿಡದಂತಂಹ ರೀತಿಯಲ್ಲಿ ಎಲ್ಲವನ್ನೂ ಹಂಚಿದ. ಹಾಗೂ ಮುತ್ತು ರತ್ನಗಳನ್ನು ಕೂಡ ಸಿಪಾಯಿಗಳ ನಡುವೆ ಅವನು ಹಂಚಿದ.

ಗಾಜಿ ಮುಲ್ಕ್ ಮತ್ತು ಖುಸ್ರುಖಾನ್ ನಡುವೆ ಯುದ್ಧ:

ಯುದ್ಧ ನಡೆಯಬೇಕಾಗಿದ್ದ ಹಿಂದಿನ ರಾತ್ರಿಯಂದು ಮೊದಲು ಐನುಲ್‌ಮುಲ್ಕ್ ಮುಲ್ತಾನಿಯು ಖುಸ್ರುಖಾನ್‌ಗೆ ಅಂತಿಮ ವಿದಾಯವನ್ನು ನುಡಿದು ಮಂದೋನತ್ತ ಪ್ರಯಾಣ ಬೆಳೆಸಿದ. ಐನುಲ್ ಮುಲ್ಕ್‌ನ ನಿರ್ಗಮನದಿಂದ ಖುಸ್ರುಖಾನನ ಹೃದಯವು ಚೂರು ಚೂರಾಯಿತು. ಮತ್ತು ಅವನ ಚಿಂತೆಯು ಮಿತಿಮೀರಿತು. ಆದರೆ ಈ ಎಲ್ಲಾ ಪ್ರಸಂಗವನ್ನು ಕೂಡ ಅವನು ನಿಭಾಯಿಸಿಕೊಂಡು ಇಂದ್ರಪ್ರಸ್ಥದ ಮೈದಾನದಲ್ಲಿ ಗಾಜಿಮುಲ್ಕ್‌ನೊಡನೆ ಯುದ್ಧ ಮಾಡಿದ. ಖುಸ್ರುಖಾನನ ಸೈನ್ಯದ ಪ್ರದಾನ ಭೂಮಿಕೆಯಲ್ಲಿದ್ದ ತಲೀಗ ನಾಗೋರಿ ಮತ್ತು ಶಾಯಿಸ್ತಖಾನ್ ಇಬ್ಬರೂ ಸೇರಿ ಅತ್ಯಂತ ಪರಾಕ್ರಮ ಮತ್ತು ಧೈರ್ಯದಿಂದ ಹೋರಾಡಿದರೂ ಕೂಡ ಅವರು ವೀರ ಮರಣವನ್ನು ಅಪ್ಪಿದರು. ಈ ಘಟನೆಯು ಅತ್ಯಂತ ದುಃಖಿತವಾಗಿದ್ದರೂ ಕೂಡ ಖುಸ್ರುಖಾನನು ತಾಳ್ಮೆಯಿಂದ ಆ ಪ್ರಸಂಗವನ್ನು ನಿರ್ವಹಿಸಿದ ಮತ್ತು ಸಂಜೆಯ ಹೊತ್ತಿನವರೆಗೂ ಕೂಡ ಈ ಯುದ್ಧವನ್ನು ಜಾರಿಯಲ್ಲಿಟ್ಟ. ಆದರೆ ಎಲ್ಲಿಯವರೆಗೆ? ಅಂತೂ ಕೊನೆಗೆ ಸೋತು ತನ್ನ ಪರಿವಾರದ ಒಂದು ತಂಡದೊಂದಿಗೆ ಅವನು ಯುದ್ಧರಂಗವನ್ನು ತೊರೆದು ತಲಪತ್‌ನತ್ತ ಓಡ ತೊಡಗಿದ. ಆದರೆ ಅವನ ಸಂಗಡಿಗರು ಮಾರ್ಗಮದ್ಯದಲ್ಲಿಯೇ ಅವನನ್ನು ಒಂಟಿಯಾಗಿ ಬಿಟ್ಟರು. ಈ ಕಾರಣದಿಂದ ಖುಸ್ರುಖಾನನು ಗಾಜಿ ಮುಲ್ಕ್‌ನ ಕೈಗೆ ಸೆರೆ ಸಿಕ್ಕ. ಅದೇನಾಯಿತೆಂದರೆ ತನ್ನ ಸಂಗಡಿಗರಿಂದ ಬೇರ್ಪಟ್ಟ ನಂತರ ತಲೆಮರೆಸಿಕೊಳ್ಳಲು ಎಲ್ಲಾದರೂ ಸೂಕ್ತ ಜಾಗ ಸಿಗಬಹುದೆಂದು ಅವನು ಇಡೀ ರಾತ್ರಿ ಏಕಾಂಗಿಯಾಗಿ ತಲಾಷು ಮಾಡುತ್ತ ಸುತ್ತಾಡುತ್ತಿದ್ದ. ಕೊನೆಗೂ ಅವನು ತನ್ನ ಹಿಂದಿನ ಒಡೆಯನಾದ ಮುಲ್ಕ್ ಶಾದಿಯ ಬಳಿ ಶರಣಾದ. ಮಾರನೆಯ ದಿನ ಅಲ್ಲಿನ ಜನರು ಅವನನ್ನು ಬಂಧಿಸಿ ಅವನನ್ನು ಗಾಜಿ ಮುಲ್ಕ್‌ನ ವಶಕ್ಕೆ ಒಪ್ಪಿಸಿದರು. ಗಾಜಿ ಮುಲ್ಕ್ ಅವನನ್ನು ಕೊಲ್ಲಿಸಿದ. ತೋಟದಲ್ಲಿ ತಲೆಮರೆಸಿಕೊಂಡಿದ್ದ ಖುಸ್ರುಖಾನನ ಸಹೋದರನಾದ ಖಾನೆಖಾನ್‌ನನ್ನು ಕೂಡ ಗಾಜಿ ಮುಲ್ಕ್‌ನು ನಿರ್ದಯವಾಗಿ ಕೊಲ್ಲಿಸಿದ.

ಗಾಜಿ ಮುಲ್ಕ್‌ನ ವಿಜಯ ಮತ್ತು ಸಿಂಹಾಸನರೋಹಣ:

ಈ ಘಟನೆಯ ಮಾರನೆಯ ದಿನ ಅಂದರೆ ೭೨೧ ನೇ ಇಸವಿಯ ಶಾಬಾನ್ ತಿಂಗಳ ೧ ನೇ ತಾರೀಕಿನಂದು ದೆಹಲಿ ಪಟ್ಟಣದ ಎಲ್ಲಾ ಸರ್ದಾರರು ಗಣ್ಯರು ಮತ್ತು ಮುಖಂಡರು ಗಾಜಿ ಮುಲ್ಕ್‌ನ ಸನ್ನಿಧಿಯಲ್ಲಿ ಹಾಜರಾದರು. ಮತ್ತು ಎಲ್ಲರೂ ಅವನಿಗೆ ಅವನ ವಿಜಯ ಮತ್ತು ಸಫಲತೆಯ ಬಗ್ಗೆ ಅವನಿಗೆ ಶುಭಾಶಯಗಳನ್ನು

ಅರ್ಪಿಸಿದರು. ಹಾಗೂ ಪಟ್ಟಣದ ಎಲ್ಲಾ ಬಾಗಿಲುಗಳ ಬೀಗದ ಕೈಗಳನ್ನು ಅವನ ಸುಪರ್ದಿಗೆ ಒಪ್ಪಿಸಿದರು. ಗಾಜಿ ಮುಲ್ಕ್ ಸವಾರಿಯನ್ನೇರಿ ಪಟ್ಟಣದ ಒಳಗೆ ಪ್ರವೇಶ ಮಾಡಿದ ಮತ್ತು ಸಾವಿರ ಕಂಬಗಳ ಅರಮನೆಯ ಬಳಿ ಅವನು ತಲುಪಿದಾಗ ಅವನ ಕಣ್ಣಲ್ಲಿ ಅಶ್ರುಬಿಂದುಗಳು ಮೂಡಿದವು. ಗಾಜಿ ಮುಲ್ಕ್‌ನು ಸುಲ್ತಾನ್ ಖುತ್ಬುದ್ದೀನನ ಪುತ್ರರ ಶೋಕ ಸಂತಾಪವನ್ನು ಸೂಚಿಸಿದ ಬಳಿಕ, ಅಲ್ಲಿ ನೆರೆದಿದ್ದವರನ್ನು ಕುರಿತು ಎತ್ತರದ ಧ್ವನಿಯಲ್ಲಿ ನುಡಿದ "ನಾನು ಕೂಡ ನಿಮ್ಮಂತೆಯೇ ಒಬ್ಬ ಸರ್ದಾರನಾಗಿದ್ದೇನೆ. ನಾನು ನನ್ನ ಒಡೆಯನನ್ನು ಕೊಲೆ ಮಾಡಿದ ಸ್ವಾಮಿದ್ರೋಹಿಗಳ ಮೇಲೆ ಸೇಡನ್ನು ತೀರಿಸಿಕೊಂಡಿದ್ದೇನೆ. ಮತ್ತು ಅದಕ್ಕಾಗಿ ನಾನು ಅಲ್ಲಾಹನಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಈಗ ನಮ್ಮ ಒಡೆಯರ ಸಂತತಿಯಲ್ಲಿ ಯಾವನೇ ಒಬ್ಬ ವ್ಯಕ್ತಿಯೂ ಜೀವಂತವಾಗಿದ್ದಲ್ಲಿ ಯಾವುದೇ ತಕರಾರು ಇಲ್ಲದೆ ಅವನನ್ನು ನಾವು ಸಿಂಹಾಸನಾಧೀಶನನ್ನಾಗಿ ಮಾಡೋಣ. ನಾವೆಲ್ಲರೂ ಕೂಡ ಅವನ ಅಧೀನತೆಯನ್ನು ಒಪ್ಪಿಕೊಂಡು ವಿಶ್ವಾಸಪೂರ್ವಕವಾಗಿ ಅವನಿಗೆ ಸೇವೆ ಸಲ್ಲಿಸೋಣ. ಆದರೆ ಆ ಇಲಾಯಿ ವಂಶಸ್ಥರು ಒಬ್ಬರೂ ಕೂಡ ಈಗ ಉಳಿದಿಲ್ಲ ಮತ್ತು ಎಲ್ಲರೂ ನಾಶವಾಗಿದ್ದಾರೆ ಎನ್ನುವುದಾದಲ್ಲಿ ನೀವೆಲ್ಲರೂ ನಿಮ್ಮ ಆಯ್ಕೆಯ ವ್ಯಕ್ತಿಯನ್ನು ನಿಮ್ಮ ಬಾದಶಹ ಎಂದು ಒಪ್ಪಿಕೊಳ್ಳಿ. ನಾನೂ ಕೂಡ ನನ್ನ ಆತ್ಮ ಸಂತೋಷದಿಂದ ಅವನ ಅಧೀನತೆಯನ್ನು ಒಪ್ಪಿಕೊಳ್ಳುತ್ತೇನೆ. ಈ ಮಾತನ್ನು ಕೇಳಿ ಅಲ್ಲಿ ನೆರೆದಿದ್ದವರೆಲ್ಲರೂ ಕೂಡ ಒಕ್ಕೊರಳಿನಿಂದ ನುಡಿದರು "ಬಾದಶಹನ ವಂಶಸ್ಥರು ಈಗ ಯಾರು ಉಳಿದಿಲ್ಲ, ಎಲ್ಲರೂ ನಾಶವಾಗಿದ್ದಾರೆ. ನೀನು ಬಹುಕಾಲದಿಂದ ಮೊಗಲರ ವಂಶಸ್ಥನಾಗಿ ಉಳಿದುಬಂದಿದ್ದೀಯಾ. ಮತ್ತು ಈ ಮೊದಲು ಕೂಡ ನೀನು ಅನೇಕ ಸಂದರ್ಭಗಳಲ್ಲಿ ಹಿಂದೂಸ್ತಾನದ ಆಡಳಿತಗಾರರ ಮೇಲೆ ಅನೇಕ ಉಪಕಾರಗಳನ್ನು ಮಾಡಿದ್ದೀಯಾ ಈಗ ನೀನಂತೂ ನಮ್ಮ ಬಾದಶಹನ ಕೊಲೆಯ ಪ್ರತೀಕಾರವನ್ನು ಕೈಗೊಂಡಿರುವುದರಿಂದ ಇನ್ನೂ ಹೆಚ್ಚು ಕೃತಜ್ಞತೆಗೆ ಅರ್ಹನಾಗಿದ್ದೀಯಾ. ಈ ಸಂದರ್ಭದಲ್ಲಿ ನಿನಗಿಂತ ಹೆಚ್ಚು ಬಾದಶಹನ ಸ್ಥಾನಕ್ಕೆ ಅರ್ಹನಾದ ವ್ಯಕ್ತಿಯೊಬ್ಬನಿಲ್ಲ" ಈ ಮಾತನ್ನು ನುಡಿದ ನಂತರ ಸರ್ದಾರರುಗಳು ಗಾಜಿ ಮುಲ್ಕ್‌ನ ಕೈಯನ್ನು ಹಿಡಿದು ಅವನನ್ನು ರಾಜ ಸಿಂಹಾಸನದ ಮೇಲೆ ಕೂರಿಸಿ ಪಟ್ಟಾಭಿಷೇಕವನ್ನು ಮಾಡಿದರು. ಮತ್ತು ಸುಲ್ತಾನ್ ಗಯಾಸುದ್ದೀನನ ಹೆಸರಿನಿಂದ ಅವನನ್ನು ತಮ್ಮ ಬಾದಶಹನೆಂದು ಎಲ್ಲರೂ ಒಮ್ಮನಸ್ಸಿನಿಂದ ಒಪ್ಪಿಕೊಂಡರು.

ಖುತ್ಬುದ್ದೀನ್ ಮುಬಾರಕ್ ಶಾಹನು ನಾಲ್ಕು ವರ್ಷ ನಾಲ್ಕು ತಿಂಗಳವರೆಗೆ ಆಡಳಿತವನ್ನು ನಡೆಸಿದ. ಖುಸ್ರುಖಾನನ ಆಡಳಿತಾವಧಿಯು ಐದು ತಿಂಗಳಿಗಿಂತ ಇನ್ನೂ ತುಸು ಕಡಿಮೆ ಅವಧಿಯಿಂದ ಕೂಡಿತ್ತು.

■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ಬಿಜಾಪುರ

ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359